REGD. NO. M. 3618

LICENCE NO. 31
Licensed to Post without Prepayment.

# ನವಯುಗ

ಸಂಪುಟ ೩೬
VOL. 36

4—4—1957

ಸಂಚಿಕೆ ೩೦
NO. 30

## ಮತದಾರರ ತೀರ್ಪು

### ಪಕ್ಷ—ಪ್ರತಿಪಕ್ಷಗಳು ತತ್ವನಿಷ್ಠನಾಗಿ ಇನ್ನೂ ವರ್ತಿಸುತ್ತಿಲ್ಲ—ಕ್ಷಣಿಕ ಲಾಭದ ಮೇಲೆಯೇ ಕಣ್ಣು

ನಮ್ಮ ಭಾರತ ದೇಶದ ಚುನಾವಣೆಯು ಮುಗಿದು ಅದರ ಫಲಿತಾಂಶವು ಇಷ್ಟರೊಳಗೆ ಹೆಚ್ಚಿನಾಂಶ ತಿಳಿದು ಬಂದಿದೆ. ಜಯಾಪಜಯಗಳು ಹೇಗೂ ಇರಲಿ ಕಳದ ಮಹಾ ಚುನಾವಣೆಯಲ್ಲಿ ಕೆಲವು ಸಾರಗಳನ್ನು ಕಲಿತಂತೆ ಈ ಚುನಾವಣೆಯಲ್ಲೂ ಕೆಲವು ವಿಷಯಂಗಳು ಕಲಿಯುವರೆ ಇರುವವು. ಅವುಗಳಲ್ಲಿ ಕೆಲವಂಶವನ್ನು ಇಲ್ಲಿ ಎತ್ತಿ ಹೇಳಬೇಕಾಗಿದೆ

ಕಳದಸಾರಿ ಚುನಾವಣೆಯಲ್ಲಿ ಭಾಗವಹಿಸಿದಷ್ಟು ರಾಜಕೀಯ ಪಕ್ಷಗಳು ಈ ಸಲ ಭಾಗವಹಿಸದಿದ್ದರೂ ಎಷ್ಟೋ ಪಕ್ಷಗಳು ಜೊತಕಾಗಿ ಜನನಕ್ಕೆ ಬಂದಿವೆ ಮತ್ತು ಹಿಂದಿನ ಚುನಾವಣೆಯಲ್ಲಿದ್ದ ಕೆಲವು ಪಕ್ಷಗಳು ಕಣ್ಮರೆಯಾಗಿವೆ ಅನೇಕ ಕಡೆಗಳಲ್ಲಿ ಹಲವು ಪಕ್ಷಗಳ ಸ್ಪರ್ಧೆ ಒಂದೇ ಸ್ಥಾನಕ್ಕೆ ಇದ್ದುದಾದರೂ ಅಲ್ಲಲ್ಲಿ ನೇರಾದ ದ್ವಿ ಪಕ್ಷೀಯ ಸ್ಪರ್ಧೆ ಕಂಡು ಬಂದಿರುವುದರಿಂದ ಪಾರ್ಟಿಯ ಬಲಾಬಲಗಳನ್ನು ತಿಳಿಯಲು ಹೆಚ್ಚಿನ ಅವಕಾಶವಾಗಿದೆ ಎಂದು ಹೇಳಲು ಸಾಧ್ಯವಿಲ್ಲ.

ಈ ಚುನಾವಣೆಯಲ್ಲಿ ಇತರ ಎಲ್ಲಾ ಪಾರ್ಟಿಗಳೂ, ಕೋಂಗ್ರೆಸ್ಸಿನ ವಿರೋಧಿ ಪಾರ್ಟಿಗಳೇ ಹೊರತು ಅನುಕೂಲವಾಗಿ ಸಹಕರಿಸುವ ಪಾರ್ಟಿ ಒಂದೇ ಕಂಡು ಬರಲಿಲ್ಲ ಇತರ ಯಾವ ಪಾರ್ಟಿ ಪಕ್ಷಗಳಾದ್ರೂ, ಅವುಗಳೊಳಗೆ ಎಷ್ಟು ಭೇದವಿದ್ದರೂ, ಕಾಂಗ್ರೆಸ್ಸಿನ ವಿರೋಧದ ಸೊಲ್ಲು ಒಂದನ್ನೇ ಬಾಯಿ ಪಾಠ ಮಾಡಿದಂತೆ ಕಾಣುವವು ಈ ಪಕ್ಷಗಳ ಮುಖ್ಯ ಧ್ಯೇಯು ಧೋಣಿಗಳು ಕೋಂಗ್ರೆಸ್ಸನ್ನು ಸೋಲಿಸಿ ಅವರು ಸರಕಾರವನ್ನು ಸ್ಥಾಪಿಸದಂತೆ ಮಾಡುವುದೊಂದೇ ಹೊರತು ತಾವು ಪ್ರತಿಪಕ್ಷವಾಗಿ ಮುಂದೆ ಬಂದು ಲೋಕದ ಇತರ ಪ್ರಜಾಪ್ರಭುತ್ವದ ರಾಷ್ಟ್ರಗಳಲ್ಲಿರುವ ಪಕ್ಷಗಳಂತೆ ಸರಕಾರ ಸ್ಥಾಪಿಸುವ ಯೋಚನೆಯಲ್ಲಿಯೇ ಇಲ್ಲ ವೆಂಬಂತೆ ಕಂಡು ಒಂದು ಎಡಪಕ್ಷಗಳ ಮುಂದಾಳುಗಳು "ಪ್ರತಿಪಕ್ಷ" ಅಗತ್ಯವಿದೆಯೆಂದು ಲೋಕಾಭಿರಾಮಕ್ಕಾಗಿ ರಾಜಧರ್ಮ ಹೇಳುವುದೇ ಹೊರತು ತಾವು ಸರಕಾರ ನಡಿಸುವಷ್ಟು ಉಮೇದ್ವಾರರನ್ನು ನಿಲ್ಲಿಸಿದ್ದೇವೆ ತಮ್ಮನ್ನು ಚುನಾಯಿಸಿದಲ್ಲಿ ತಮ್ಮ ಪಕ್ಷದ ಸರಕಾರ ಸ್ಥಾಪಿಸಿ ಯಾವ ಸುಧಾರಣೆಯನ್ನು ತರಲಿಕ್ಕಿದ್ದೇವೆಂದು ಹೇಳುವ ಬದಲು ಕೋಂಗ್ರೆಸ್ಸನ್ನು ಮಾಡಿದ ಜನಪ್ರಿಯ ಕಾರ್ಯಗಳು ತಮ್ಮ ಪ್ರಯತ್ನ ಮತ್ತು ಒತ್ತಾಯದಿಂದ ಆದವುಗಳೆಂತಲೂ, ಇನ್ನು ಕೆಲವು ಆರೆಮನಸ್ಸಿನಲ್ಲದ್ದೆಂತಲೂ, ಮಾಡದೆಯಿರುವಂಥದ್ದನ್ನು ಮಾಡಲಿಲ್ಲವೇಕೆಂತಲೂ, ಮಾಡಿದ್ದನ್ನು ಮಾಡಿದ್ದೇ ಸರಿಯಲ್ಲವೆಂತಲೂ, ಕಲವು ಅತ್ತಿಗಳು ತಮ್ಮ ಸೊಸೆಯಂದಿರ ಮೇಲೆ ತಪ್ಪು ಹೊರಿಸಿದಂತೆ ಆರೋಪ ಮಾಡಿರುವುದೇ ಹೊರತು ಬೇರೇನೂ ಕಂಡು ಬರಲಿಲ್ಲ.

ಬಲವಾದ ಇದಿರು ಪಕ್ಷ ಒಂದು ಬೇಕೆ ಬೇಕು ಎಂದು ಹೇಳುವರೇ ಹೊರತು, ತಮ್ಮ ತನ್ನ ಧ್ಯೇಯ, ಮತ್ತು ಉದ್ದೇಶಗಳನ್ನೇ ಮುಂದೊಕ್ಕುವುದೇ ಶಿವಾ ನಿಜವಾದ ಇದಿರು ಪಕ್ಷವನ್ನು ತತ್ವ ಧ್ಯೇಯಗಳ ಮೇಲೆ ಯಾರೂ ಕಟ್ಟಿದ್ದಿಲ್ಲ ಕೆಲವು ಪಕ್ಷಗಳು ತತ್ವದ ಮೇಲೆ ಕಟ್ಟಲ್ಪಟ್ಟವಾದರೂ ಕ್ಷಣಿಕ ವಿಜಯ ಕ್ಕಾಗಿ ಚುನಾವಣೆಯಲ್ಲಿ ಕೋಂಗ್ರೆಸ್ಸನ್ನು ಮೂಲೆಗೊತ್ತುವ ಗುರಿಯಿಂದ ತಮ್ಮ ತತ್ವಗಳನ್ನು ಬದಿಗೊತ್ತಿ ತಮಗೆ ಕಟು ವಿರೋಧಿಗಳಾದ ಪಂಗಡ ಮತ್ತು ಗುಂಪುಗಳೊಳಗೆ ಚುನಾವಣಾ ಮೈತ್ರಿಯವನ್ನು ಬೆಸೆಸಿರುವವು ಇದರಿಂದ ಪಕ್ಷಗಳ ಮೇಲೆ ಜನರಿಗಿರುವ ಅಭಿಮಾನ ಗೌರವಕ್ಕೆ ಕುಂದು ತಂದವು

ಪಾ್ರನ್ಸು ಒಂದನ್ನು ಬಿಟ್ಟು ಇತರ ಪ್ರಜಾಸರಕಾರವಿರುವಲ್ಲೆಲ್ಲಾ ಎರಡು, ಅಥವಾ ಮೂರು ಪಕ್ಷಗಳು ಕಾಡುಬರುವವು ನನ್ನ ದೇಶದಲ್ಲಿ ಪ್ರತಿಪಕ್ಷವು ಬೇಕೆಂಬ ಸೊಲ್ಲನ್ನು ಕೇಳುವಾಗ, ಜನರಿಂದಲ, ಆದವಾ ನುತದಾರರಿಂದಲೇ, ಪ್ರತಿಪಕ್ಷ ಕಟ್ಟಬೇಕಾದ್ದ ಎಂಬ ಘಾವನೆಯು ಇವರ ಹೇಳಿಕೆಯಿಂದ ಮೂಡಿ ಬರುತ್ತದೆ ಯೋಗ್ಯ ಮುಂದಾಳುಗಳಿಂದ ಒಹುಜನರ ಕೂಡುವಿಕೆಯಿಂದ ನಿಜವಾದ ತತ್ವಗಳ ಆಡಿಗಲ್ಲಿನ ಮೇಲೆ ಕಟ್ಟಲ್ಪಟ್ಟ ಪಕ್ಷವು ಪಾತ್ರ ಪ್ರತಿಪಕ್ಷವಾಗುವದು ಇಂಥಾ ಪ್ರತಿಪಕ್ಷವು ಯಾವ ಸಮಯದಲ್ಲಾ, ಸರಕಾರ ನಡೆಸುವ ಯೋಗ್ಯತೆ ಉಳ್ಳದ್ದಾಗಿರಬೇಕು ತಳುವ ಪಕ್ಷ ವತ್ತು ಇದಿರಾಡುವ ಪಕ್ಷಗಳೆಂದರೆ ಒಂಗಿನವರು ಮತ್ತು ಹೊರಗಿನವರು ಮಾಡುವ ಯುದ್ಧವನ್ನುವರು (The batles of the ins and outs) ಇವುಗಳ ಜಗಳವು ಸತ್ವ ವತ್ತು ಬಲಾಬಲ ಪರೀಕ್ಷೆ ಯಾಗುವ ಬಳೆದಾಟವೆನ್ನುವರು (Tug of war) ಒಳಗಿನವರನ್ನು ಹೊರಗೆ ಎಳೆದೊಡನೆಯೇ, ಅವರ ಸ್ಥಾನದಲ್ಲಿ ಹೊರಗಿನವರು ಹೋಗಿ ಕೂಡ್ರುವದಾಗಿದೆ ಇಂಥಾ ಪಕ್ಷವು ನಮ್ಮಲ್ಲಿ ಯಾವುದೂ ಇಲ್ಲ ಈ ತರದೆ ಒಂದೆರಡು ಪಕ್ಷಗಳು ಒಂದೆರಡು ಚುನಾವಣೆಗಳೊಳಗೆ ಅಗತಕ್ಕನ್ದಲ್ಲ. ವಾದ ವಿವಾದದಿಂದ ಅಥವಾ ವಾಗ್ಯುದ್ಧದಿಂದಲೇ ಹೊರತು ಬೈಗಳ ಮತ್ತು ಆಪ್ಷಿಲ್ಲದ ಆರೋಪದಿಂದ ಯಾವ ಪಕ್ಷವೂ ಮೇಲೆ ಬರಲಿಕ್ಕಿಲ್ಲ

ಇದು ಕೀಳು ವರ್ಗದ ಜನರನ್ನು ಉದ್ರೇಕಿಸಲಿಕ್ಕೆ ಮಾತ್ರ ಪ್ರಯೋಜಕವಾದೀತು ಪ್ರತಿಪಕ್ಷವೇಕೆಂದು. ನಮ್ಮಲ್ಲಿರುವ ರಾಜಕಾರಣಗಳ ಪೈಕಿ ಮುಖ್ಯವಾಗಿ ಪಂಡಿತ್ ನೆಹರು, ವತ್ತು ರಾಜಾಜಿಯವರು ಒಪ್ಪಿರುವರು. ಇತರ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿರುವಂತೆ ಇಂಥಾ ಪಕ್ಷದ ಪ್ರಯೋಜನವು ಕಂಡು ಬಂದವು ಮತ್ತು ಆಲ್ಲಿಯ ರಾಜಕಾರಣಿಗಳು ಸಹಿ ಒಪ್ಪವನು ಆದರೆ ನಮ್ಮಲ್ಲಿ ಪ್ರತಿಪಕ್ಷ ಕಟ್ಟುವುದು ಕೇಗೆ? ಆಂಧ್ರಾ ಪ್ರತಿಪಕ್ಷವನ್ನು ಹೇಗೆ ವರ್ತಿಸಬೇಕು ಎಂಬ ಅಂಶವೇ ನಮ್ಮ ಜನರಿಗಿಲ್ಲವೆಂತ ಕಾಣ್ತದೆ.

ಪಕ್ಷಗಳಿಂದಲೆ ಮತದಾರಾಂಗಿ ರಾಜಕೀಯ ವಿಚಾರ ದೇಶದ ಮುಂದಿರುವ ಸಮಸ್ಯೆಗಳ ಪರಿಜ್ಞಾನವಾಗುವುದಾಗಿದೆ. ಚುನಾವಣಾ ಕ್ಷೇತ್ರವು ಅತಿ ದೊಡ್ಡದಾದುದರಿಂದ ಮತದಾರರಿಗೆ ರಾಜಕೀಯ ವಿಚಾರಗಳನ್ನು ತಿಳಿಸುವರೆ ಪಕ್ಷಗಳು ಬೇಕೇ ಬೇಕು ಚುನಾವಣೆಗೆ ನಿಂತ ಉಮೇದ್ವಾರರು ಅಲ್ಲಲ್ಲಿ ಸಭೆ ಜರಗಿಸಿ ಭೋದಪ ಭಾಷಣಮಾಡಿ ರಾಜಕೀಯ ಸಮಸ್ಯೆಯ ವಿಚಾರಗಳನ್ನು ವಿವರಿಸಿ ಮತದಾರರ ಮನಸ್ಸನ್ನು ಪ್ರಜ್ಞೋದಿಸುವರು ಟೊಳ್ಳು ಭರವಸೆ ಕೊಡುವವರನ್ನು ಬಯಲಿಗೆ ಎಳೆದು ಸತ್ಯ ಸಂಗತಿಗಳನ್ನೆ ಹೊರಗೆಡಹುವರು ಸಾರ್ಯನು ತನ್ನ ಕಿರಣಗಳಿಂದ ಹೇಗೆ ಕತ್ತಲೆಯನ್ನು ಓಡಿಸುವನೋ ಹಾಗೆಯೇ ಪಕ್ಷಗಳು ಮತದಾರನ್ನು ಮುಸುಕಿರುವ ರಾಜಕೀಯ ಅಂಧಕಾರದಿಂದ ದೂರಮಾಡಿ ಅವರ ಮನ ಜೆಗಿಸುವರ.

ಎಂದು ಚುನಾವಣೆಗಳು ನಡೆವಾಗ್ಯೂ ಮತದಾರರಾಗಲಿ ಪಕ್ಷಗಳ ಗುಂಪುಗಳಾಗಲೀ, ಸುಧಾರಿಸಿ ಬದಲ ದಂತೆ ಕಾಣುವುದಿಲ್ಲ ತನ್ನು ಪ್ಪಿಗನನ್ನು ಅಂಗಿ ಬದಲಾಯಿಸಿದಂತೆ ಒದಲಾಯಿಸುವುದ ದೆ, ಅನುಕೂಲವಿದ್ದಂತೆ ಜಾತೀಯತೆಯಿಂದಾಗ್ಲೀ ಸ್ವಾರ್ಥ ದೃಷ್ಟಿಯಿಂದಲೋ ಅಥವಾ ದ್ವೇಷಸಂತೆವಾಗಿಯೋ ತಮಗಿರುವ ತಗೆಳೆರತರಲ್ಲಿ ಲೋಕಪಥೆಯ ಸ್ಥಾನದ ವಿರೋಧ ಪಕ್ಷಕ್ಕೆಒಂದು ಮತವನ್ನಾರಾಷ್ಟ್ರವ ವಿಧಾನ ಸಭೆಗ ಇನ್ನೊಂದು ಮತವನ್ನೂ ಕೊಟ್ಟು ಒವಂತಲೂ ಊಹಿಸಬೇಕಾಗಿದೆ ಕೆಲವು ಕಡೆಗಳಲ್ಲಿ ಪ್ರವಾಸುರು ತಮ್ಮ ಹಿಂದಿನ ಜೀವನಾನದಲ್ಲಿ ಒಂದೇ ಸಂಘಕ್ಕೆ ಸಹಾಯ ಮಾಡಿದ್ದರು ಆ ಸಲ ಸದಿಯವರು ಅದೇ ಸಂಸ್ಥೆಯವರೆಂದು ನಟಿಸಿ

(೧೨ನೇ ಸುಟನೋದಿರಿ)

**SEASON DEPOSITS**

**ಸೀಸನ್ ಠೇವಣಾತಿಗಳು**

ಸೇ. 4% ದರ ಬಡ್ಡಿಯಲ್ಲಿ ಸೀಸನ್ ಠೇವಣಾತಿಗಳನ್ನು ಈಗ ಸ್ವೀಕರಿಸಲಾಗುವುದು.

ದೊಡ್ಡ ಡಿಪೊಜಿಟು ಮೊಬಲಗುಗಳಿಗೆ ಸ್ಪೆಶಲ್ ಬಡ್ಡಿ ದರಗಳು.

ಹೆಚ್ಚಿನ ವಿವರಗಳಿಗೆ ನಮ್ಮನ್ನು ವಿಚಾರಿಸಿರಿ

**ದಿ ವಿಜಯ ಬೇಂಕ್ ಲಿಮಿಟೆಡ್**

ಪ್ರಧಾನ ಕಛೇರಿ ಮತ್ತು ಶಾಖೆಗಳು.

ಜುಮ್ಲಾ ಸಂಪತ್ತು (31—12—1956) | ರೂಪ್ಯಾ 1 ಕೋಟಿಗೂ ಮಿಕ್ಕಿದೆ.

# ಚುನಾವಣೆಯ ಫಲ

## ಕಾಂಗ್ರೆಸಿನ ಶಕ್ತಿಯು ಇಷ್ಟು ಕುಗ್ಗಿದ್ದೇಕೆ?

### ಪ್ರಜೆಗಳ ಕಷ್ಟಕಾರ್ಪಣ್ಯಕ್ಕೆ ಕ್ಷಿಪ್ರ ವಿಮೋಚನೆ ಸಿಗಲಿಲ್ಲ

ಈ ಬಾರಿ ನಡೆದ ಸಾರ್ವತ್ರಿಕ ಚುನಾವಣೆಯು ಭಾರತದ ಇತಿಹಾಸದಲ್ಲಿ ಹೊಸ ವಿಭಾಗವು ಮೂಡುವಂತೆ ಮಾಡಿತು. ಎಲ್ಲ ರಾಜಕೀಯ ಪಕ್ಷಗಳು, ತಾವೇನು, ತಮ್ಮ ನೆಲೆಯೇನು ಎಂಬುದನ್ನು ತಿಳಿದುಕೊಂಡವು. ಕೇರಳ ಮತ್ತು ಒರಿಸ್ಸಾವನ್ನು ಬಿಟ್ಟು ಇತರ ಎಲ್ಲಾ ಪ್ರಾಂತ್ಯಗಳಲ್ಲಿ ಕಾಂಗ್ರೆಸು ಬಹುಮತ ಪಡೆದು, ಅಧಿಕಾರಕ್ಕೆ ಬರುವಂತಾಯಿತು. ಆದರೆ ಈ ಬಾರಿಯ ಗೆಲುವು ಕಾಂಗ್ರೆಸಿನ ಗೆಲ್ಲಲ್ಲ, ಸೋಲು. ಕಾಂಗ್ರೆಸು ಜನ ಮತವನ್ನು ಕಳೆದುಕೊಳ್ಳುತ್ತಿದೆ ಎನ್ನುವುದನ್ನು ಸ್ಪಷ್ಟವಾಗಿ ಮತದಾರರು ತೋರಿಸಿ ಕೊಟ್ಟರು. ಕೇರಳದಲ್ಲಿ ಕಮ್ಯುನಿಸ್ಟರು ಬಹುಮತ ಪಡೆದರು. ಒರಿಸ್ಸಾದಲ್ಲಿ ಕಾಂಗ್ರೆಸಿಗೆ ಬಹುಮತ ದೊರೆಯಲಿಲ್ಲ. ಮಹಾರಾಷ್ಟ್ರದಲ್ಲಿ ಕಾಂಗ್ರೆಸು ಸೋಲನ್ನು ಇದಿರಿಸಿತು. ಕಳೆದ ಬಾರಿ ೪೧೧ ಕಾಂಗ್ರೆಸು ಸದಸ್ಯರಿದ್ದ ಉತ್ತರ ಪ್ರದೇಶದ ವಿಧಾನ ಸಭೆಗೆ ಈ ಬಾರಿ ಬರೇ ೨೮೬ ಕಾಂಗ್ರೆಸು ಸದಸ್ಯರು ಆಯ್ಕೆಗೊಂಡಿದ್ದಾರೆ. ಬಿಹಾರದಲ್ಲಿ ಕಳೆದ ಸಲಕ್ಕಿಂತ, ಈ ಬಾರಿ ಮೂನತ್ತು ಜನ ಕಡಿಮೆಯಾಗಿದ್ದಾರೆ. ಕಾಂಗ್ರೆಸಿನ ಒಳಗಿರುವ ಒಡಕೇ, ಈ ಸೋಲಿಗೆ ಮುಖ್ಯ ಕಾರಣ. ಕೇರಳದಲ್ಲಂತೂ, ಪನಂಪಳ್ಳಿಯವರ ಮಂತ್ರಿಮಂಡಲದ ದುರಾಡಳಿತೆಯು, ಕಾಂಗ್ರೆಸಿನ್ನು ಕೆಳಕ್ಕೆ ತಂದಿತು. ಕಾಂಗ್ರೆಸು ಸರಕಾರ ಸಾಧಿಸಿದ ಕಾರ್ಯಗಳನ್ನು ಎಲ್ಲರೂ ಮೆಚ್ಚಬೇಕಾದುದೇ. ಸ್ವತಂತ್ರ್ಯ ಸಿಕ್ಕಿದ ಬರೇ ಹತ್ತು ವರುಷದಲ್ಲಿ, ಅದು ಅಪ್ರತಿಮ ಕೆಲಸ ಮಾಡಿದೆ. ದೇಶವನ್ನು ಎಳ್ಳಿಗೆ ತಂದಿದೆ. ಆದರೆ ಇಂತಹ ಒಂದು ಘನವಾದ ಪಕ್ಷ ಇಷ್ಟು ಬೇಗನೆ ಜನಮತವನ್ನು ಕಳೆದುಕೊಳ್ಳುತ್ತಿರುವುದು ತುಂಬಾ ವಿಷಾದಕರ.

ಕೇರಳದಲ್ಲಾದ ರಾಜಕೀಯ ಬದಲಾವಣೆಯಿಂದಾಗಿ, ದೇಶದ ಆರ್ಥಿಕ ಪರಿಸ್ಥಿತಿಗೆ ಕೂಡಾ ಪೆಟ್ಟು ಬಂದಿದೆ. ಕೇರಳದಲ್ಲಿ ಕಮ್ಯುನಿಸ್ಟ್ ಸರಕಾರ ಬರುತ್ತಿರುವುದನ್ನು ನೋಡಿ, ಅಮೇರಿಕ, ಇಂಗ್ಲೆಂಡುಗಳಂತಹ ರಾಷ್ಟ್ರಗಳು, ಭಾರತದಲ್ಲಿ ತಮ್ಮ ಭಂಡವಾಳವನ್ನು ಹಾಕಿ ಯಾವೊಂದು ಕೈಗಾರಿಕೆಯನ್ನು ತಯಾರಿಸಲು ಹಿಂದಿರಿಯುತ್ತಿವೆ. ಅಮೇರಿಕನ್ ವ್ಯಾಪಾರ ಶಿಷ್ಟಮಂಡಳದ ಮುಖಂಡ ಮಿ. ಪ್ರೆಸ್ಟನ್ ಫೋರ್ಬಸ್ (Mr. Preston Forbes) ರವರು, ಈಗಾಗಲೇ ಈ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನಿತ್ತಾಯಿತು. "ಭಾರತದಲ್ಲಿ ನಮ್ಮ ಭಂಡವಾಳವನ್ನು ಹಾಕುವ ಮುಂಚೆ, ಕಮ್ಯುನಿಸ್ಟರು ಕೇರಳ ಮುಂತಾದ ಕಡೆಗಳಲ್ಲಿ ಬಲಗೊಳ್ಳುತ್ತಿರುವ ಬಗ್ಗೆ ನಾವು ಯೋಚಿಸಬೇಕಾಗಿದೆ" ಯೆಂದು ಮಿಸ್ಟರ್ ಪ್ರೆಸ್ಟನ್ ಫೋರ್ಬಸರು ಈಗಾಗಲೇ ಹೇಳಿಯಾಯಿತು. ಭಾರತದಲ್ಲೇ ಅತಿ ಚಿಕ್ಕ ಪ್ರಾಂತ್ಯವಾದ ಕೇರಳಕ್ಕೆ, ಈ ಬಾರಿಯ ಚುನಾವಣೆಯಲ್ಲಿ ಜನತೆ ಕೆಂಪು ಬಣ್ಣವನ್ನು ತಾಗಿಸಿಬಿಟ್ಟರು. ಗಾತ್ರದಲ್ಲಿ ಚಿಕ್ಕ ದಾದರೂ ಕೂಡಾ ಕೇರಳದಲ್ಲಿರುವನ್ನು ಜನ ಸಾಂದ್ರತೆ ಬೇರಾವ ಪ್ರಾಂತ್ಯ ದಲ್ಲಿ ಇಷ್ಟ ಚದರ ಮೈಲಿಗೆ ೧೦೮ ಜನರು ಇರುವ ಈ ಪ್ರಾಂತ್ಯದಲ್ಲಿ ನೂರಕ್ಕೆ ಎಂಭತ್ತು ಜನರಿಗಿಂತಲೂ ಹೆಚ್ಚು ವಿದ್ಯಾವಂತರಿದ್ದಾರೆ. ಇವರ ಪೈಕಿ ಮೂರನೇ ಒಂದಂಶ ಜನರು ನಿರುದ್ಯೋಗಿಗಳು. ಸಮೂರು ಐದು ಲಕ್ಷ ಜನರು, ಉದ್ಯೋಗಕ್ಕಾಗಿ ಬೇರೆ ಬೇರೆ ಪ್ರಾಂತ್ಯಗಳಿಗೆ ಹೋಗಿ ನೆಲಸಿದ್ದಾರೆ. ಆದರು ಕೂಡಾ ನಿರುದ್ಯೋಗವು ತಾಂಡವವಾಡುತ್ತಿದೆ. ಕೇರಳದಲ್ಲಿ ಕಮ್ಯೂನಿಸ್ಟ್ ಪಕ್ಷ ಬಲಗೊಳ್ಳಲು, ಮುಖ್ಯವಾಗಿ ಈ ನಿರುದ್ಯೋಗವೇ ಕಾರಣ ಕೇರಳದಲ್ಲಿ ಕೈಗಾರಿಕೆ ಅಭಿವೃದ್ಧಿಯಾಗಲಿಲ್ಲ. ಅತೀ ಬೆಲೆಯುಳ್ಳ ಖನಿಜಗಳು ಇಲ್ಲಿ ದೊರೆತರು ಕೂಡಾ, ಕೈಗಾರಿಕೆ ಅಭಿವೃದ್ಧಿಯಾಗಲಿಲ್ಲ. ಮೊನೋಜೈಟ್ (Monozite) ಇಲ್ಮಿನೈಟ್ (Ilmenite) ರುಟೈಲ್ (Rutile) ಮುಂತಾದ ಬೆಲೆಯುಳ್ಳ ಅದುರುಗಳು ಇಲ್ಲಿ ದೊರೆತರು ಕೂಡಾ, ಸರಕಾರವು ಈ ಬಗ್ಗೆ ಉತ್ಸಾಹವನ್ನು ತೋರಿಸದಿದ್ದುದ ಮಹಾ ಅಪರಾಧ. ಅಣುಶಕ್ತಿ ಉತ್ಪಾದನೆಗೆ ಬೇಕಾದ ಎಲ್ಲಾ ವಸ್ತುಗಳು ಕೇರಳದಲ್ಲಿ — ಬೇಕಾದಷ್ಟು ದೊರೆಯುತ್ತಿರುವಾಗ, ಸರಕಾರವು ಅಣು ಶಕ್ತಿ ಕೇಂದ್ರವನ್ನು ಇಲ್ಲಿ ಸ್ಥಾಪಿಸುವುದನ್ನು ಬಿಟ್ಟು ಮುಂಬಯಿಯಂತಹ ಬರಡು ನಗರದಲ್ಲಿ ಯಾಕೆ ಸ್ಥಾಪಿಸಿತು? ಕೇರಳದಲ್ಲಿಯೇ ಇದನ್ನು ಸ್ಥಾಪಿಸುತ್ತಿದ್ದರೆ, ಹಲವು ಸಾವಿರ ಜನರಿಗೆ ಉದ್ಯೋಗ ದೊರಕುತಿತ್ತು. ೧೯೪೧ರಿಂದ ೧೯೫೧ರ ಒಳಗೆ, ಕೇರಳದಲ್ಲಿ ಜನಸಂಖ್ಯೆ ಸೇಕಡಾ ೨೫.೭ ರಷ್ಟು ಏರಿದೆ. ಆದರೆ ಆರ್ಥಿಕ ಪರಿಸ್ಥಿತಿಯು ಉತ್ತಮಗೊಳ್ಳಲಿಲ್ಲ. ಕೈಗಾರಿಕಾ ಅಭಿವೃದ್ಧಿಯಾಗಲಿಲ್ಲ. ನಿರುದ್ಯೋಗ ಸಮಸ್ಯೆಯ ಪರಿಹಾರವಾಗಲಿಲ್ಲ.

ಕೇರಳದಲ್ಲಿ ಇಂದು ಕಮ್ಯುನಿಸ್ಟರು ಅಧಿಕಾರಕ್ಕೆ ಬಂದದ್ದಿದ್ದರೆ, ಅದು ಅವರ ಯೋಗ್ಯತೆಯಿಂದ ಬಂದದ್ದಲ್ಲ. ಕಮ್ಯುನಿಸ್ಟ್ ತತ್ವದ ಮೇಲಿನ ಮಮತೆಯಿಂದ, ಕೇರಳದ ಜನತೆ ಕಮ್ಯುನಿಸ್ಟರಿಗೆ ಮತವನ್ನು ಕೊಟ್ಟದ್ದಲ್ಲ. ಕಾಂಗ್ರೆಸಿನ ಮೇಲಿನ ಜುಗುಪ್ಸೆಯಿಂದ, ಬೇರೆ ಉಪಾಯವಿಲ್ಲದೆ, ಜನತೆ ಕಮ್ಯುನಿಸ್ಟ್‌ರನ್ನು ಚುನಾಯಿಸಿತು. ಈ ವಿಷಯವನ್ನು ಕೇರಳದ ಕಮ್ಯುನಿಸ್ಟ್ ಧುರೀಣ ಶ್ರೀ ಶಂಕರನ್ ನಂಬೂದರಿ ಪಾಡರವರೇ ಒಪ್ಪುತ್ತಾರೆ. 'ಜನತೆ ಕಾಂಗ್ರೆಸಿನ ಮೇಲಿನ ಜುಗುಪ್ಸೆಯಿಂದ ಕಮ್ಯುನಿಸ್ಟ್‌ರನ್ನು ಚುನಾಯಿಸಿತು." ಎಂದು ಶ್ರೀ ನಂಬೂದರಿ ಪಾಡರವರೇ, ಕಮ್ಯುನಿಸ್ಟ್ ಪಕ್ಷದ ಪತ್ರಿಕೆಯಾದ 'ನ್ಯೂ ಏಜ್" (New Age)ನ ಮಾರ್ಚ್ ೩ಳರ ಸಂಚಿಕೆಯಲ್ಲಿ ಹೇಳಿದ್ದಾರೆ. ತಮ್ಮ ಕೈಗೆ ಅಧಿಕಾರ ಬಂದರೆ, ಸ್ವರ್ಗವನ್ನು ಭೂಮಿಗೆ ಇಳಿಸುತ್ತೇವೆ ಎಂಬಂತೆ ಸಾರುತ್ತಿದ್ದ ಕಮ್ಯುನಿಸ್ಟರು ಏನೇನು ಮಾಡಬಲ್ಲರು ಎಂಬುದನ್ನು ಮಾತ್ರ ಇಡೀ ಭಾರತವೇ ಕುತೂಹಲದಿಂದ ನೋಡಬೇಕಾಗಿದೆ.

ಕೈಗೆ ಬಂದ ಅಧಿಕಾರವನ್ನು ಉಳಿಸಿಕೊಂಡು, ಶ್ರಮಪಟ್ಟು ದುಡಿದು, ಭಾರತದ ಇತರ ಪ್ರಾಂತ್ಯಗಳಲ್ಲಿಯೂ ಬೆಂಬಲ ಪಡೆಯಲು ಕಮ್ಯುನಿಸ್ಟರು ಖಂಡಿತವಾಗಿಯೂ ಹೋರಾಡಬಹುದು. ಮುಂಚಿನ ಮಂತ್ರಿಗಳು ಸಾವಿರಗಟ್ಟಲೆ ಸಂಬಳ ತಿಂದರೆ, ಕೇರಳದ ಕಮ್ಯೂನಿಸ್ಟ್ ಮಂತ್ರಿಗಳು ಬರೇ ೩೫೦ ರೂಪ್ಯೆ ಸಂಬಳ ಪಡೆದು, ತಾವು ಜನ ನಾಯಕರೆಂದು ತೋರಿಸಿಕೊಳ್ಳಬಹುದು. ಆದರೆ ಕೇರಳದ ಕಮ್ಯುನಿಸ್ಟರು ಸ್ವರ್ಗವನ್ನು ಭೂಮಿಗೆ ತರಲಾರರು. ಪ್ರಾಂತ್ಯದ ಸಂಪತ್ತು ಅಭಿವೃದ್ಧಿಯಾಗದೆ ಯಾವ ಸರಕಾರವೂ ಪರಿಸ್ಥಿತಿಯನ್ನು ಸುಧಾರಿಸಲಾರದು. ನಿಜವಾದ ಕಮ್ಯುನಿಸ್ಟ್ ಮಾದರಿಯ ಸರಕಾರವನ್ನು, ಇಂದು ಕೇರಳದ ಕಮ್ಯುನಿಸ್ಟರು ಸ್ಥಾಪಿಸಲಾರರು. ರಾಷ್ಟ್ರದ ಘಟನೆಯ ಪ್ರಕಾರ ಪ್ರಾಂತೀಯ ಸರಕಾರಕ್ಕೆ ಎಷ್ಟು ಅಧಿಕಾರವಿದೆಯೋ ಅಷ್ಟನ್ನೇ ಈ ಕಮ್ಯುನಿಸ್ಟರು ಚಲಾಯಿಸಬಹುದೇ ಹೊರತು, ಕಮ್ಯುನಿಸ್ಟ್ ಮಾದರಿಯ ಸರಕಾರವನ್ನು ಕೇರಳದ ಕಮ್ಯುನಿಸ್ಟರು ಸ್ಥಾಪಿಸಲಾರರು. ಆದುದರಿಂದಲೇ ಅಖಿಲ ಭಾರತ ಕಮ್ಯುನಿಸ್ಟ್ ಪಕ್ಷದ ಧುರೀಣ ಅಜಯ ಘೋಷರು, 'ಕೇರಳದಲ್ಲಿ ನಾವು ಕಮ್ಯುನಿಸ್ಟ್ ಮಾದರಿಯ ಸರಕಾರವನ್ನು ಘಟನೆಗೆ ಅನುಗುಣವಾಗುವಂತೆ ಸ್ಥಾಪಿಸುತ್ತೇವೆ ಎಂದು ಸಾರಿದರು. ಆದರೆ ಅಧಿಕಾರಕ್ಕೆ ಬರುವ ಮುಂಚೆಯೇ, ಪಕ್ಷದ ನಾಯಕ ಗೋಪಾಲನ "ಕೇರಳದಲ್ಲಿ ವಿದೇಶಿಯರ ಕೈಕೆಳಗಿರುವ ರಬ್ಬರು, ಮತ್ತು ಚಾ ತೋಟಗಳನ್ನು ರಾಷ್ಟ್ರೀಕರಣ ಮಾಡುತ್ತೇವೆ" ಎಂದು ಹೇಳಿ ತಮ್ಮ ಆಜ್ಞಾನದ ಪರಮಾವಧಿಯನ್ನು ದೇಶಕ್ಕೆ ತೋರಿಸಿಕೊಂಡರು. ರಾಷ್ಟ್ರೀಕರಣ ಕೇಂದ್ರ ಸರಕಾರಕ್ಕೆ ಸೇರಿದ್ದು ಎಂದು ಪಾರ್ಲಿಮೆಂಟಿನ ಸದಸ್ಯ, ಪಕ್ಷದ ನಾಯಕ ಗೋಪಾಲನರಿಗೆ ತಿಳಿಯದಿರುವುದು ತುಂಬಾ ವಿಷಾದಕರ. ಗೋಪಾಲನರ ಹೇಳಿಕೆಯನ್ನು, ಪಕ್ಷದ ಇನ್ನೊಬ್ಬ ಧುರೀಣ, ಸರ್‌ದಾರ್ ಪಣ್ಣೀಕರರ ಅಳಿಯ ಗೋವಿಂದನ್ ನಾಯರರು ತಿದ್ದಿದರು. ಇದಕ್ಕೆ ಕೇಂದ್ರ ಸರಕಾರದ ಸಹಾಯ ಬೇಕು ಎಂದು ತಿದ್ದಿಕೊಂಡರು. ಘಟನೆಯು ಮೂವತ್ತೊಂದನೇ ಸೂತ್ರದ ಪ್ರಕಾರ, ರಾಷ್ಟ್ರೀಕರಣ ಮಾಡುವಾಗ ಪರಿಹಾರ ದ್ರವ್ಯವನ್ನು ಕೊಡಬೇಕು. ಪರಿಹಾರ ಕೊಡುವ ಯೋಗ್ಯತೆ ಕೇರಳದ ಸಂಸ್ಥಾನಕ್ಕಿಲ್ಲ. ಕೇಂದ್ರ ಸರಕಾರವಂತೂ, ಎ ಷ್ಟ ಕ್ಕೂ ಕೊಡಲಿಕ್ಕಿಲ್ಲ. ಶ್ರೀ ಮುರಾರ್ಜಿ ದೇಸಾಯಿಯವರು, ಈಗಾಗಲೇ, ಸರಕಾರದ ಅಸಮರ್ಥತೆಯನ್ನು ಪಾರ್ಲಿಮೆಂಟಿನಲ್ಲಿ ಹೇಳಿಯಾಗಿದೆ. ಮಹತ್ತರ

(೧೧ನೇ ಸುಟನೋಡಿರಿ)


# ಝಂಡುರವರ 'ಕೇಸರಿ ಜೀವನ'

**(KESARI JEEVANA)**

ಇದನ್ನೇ ಉಪಯೋಗಿಸಿರಿ.

**ಅಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.**

ಕೆಮ್ಮು, ಶೀತ, ಆಸ್ತ್ಮ ಗೊರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ. 6/8; ½ ರಾತಲಿಗೆ ರೂ. 1/13

ದ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.

1. ಶಾ ಕಂಪೆನಿ, ಮಂಗಳೂರು.
2. ವಿ. ವಿ. ಶೆಣೈ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್‌ಟಿಟ್ಯೂಟ್, ಉಡುಪಿ,

ವಿವರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU ದಾಮೋದರ & ಕೊ,
ಮದ್ರಾಸ್—3.

# ರಾಮತೀರ್ಥ ಬ್ರಾಹ್ಮೀ ತೈಲ



ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕೆ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

**ಸ್ಥಾನಿಕ ಕ್ರಯ:** ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

**ಶ್ರೀ ರಾಮತೀರ್ಥ ಔಷೋಗಾಶ್ರಮ,**
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

# ಭಾರತೀಯ ಪಂಚಾಂಗ

## ಹಲವು ವರ್ಷಗಳ ಸಮಾಲೋಚನೆಯ ಬಳಿಕ ಹೊಸ ರೀತಿಯ ಅಂಗೀಕಾರವಾಗಿದೆ—ಆದರೆ ಅದಕ್ಕಿನ್ನೂ ಸಾರ್ವತ್ರಿಕ ಮನ್ನಣೆ ಸಿಕ್ಕಿಲ್ಲ

ನಾಗರಿಕ ವರ್ಷದ ಆರಂಭ, ಅವಧಿ ಹಾಗೂ ಇದರ ವಿಭಾಗಗಳನ್ನು ನಿರ್ದಿಷ್ಟಗೊಳಿಸುವ ಪದ್ಧತಿಗೆ ಪಂಚಾಂಗವೆಂಬ ಹೆಸರು. ಸರ್ವರೂ ತಮ್ಮ ಉಪಯೋಗಕ್ಕಾಗಿ ಗೊತ್ತುಪಡಿಸಿಕೊಂಡಿರುವ ವರ್ಷವೇ ನಾಗರಿಕ ವರ್ಷ. ಪ್ರಪಂಚದ ಪ್ರತಿ ರಾಷ್ಟ್ರದಲ್ಲಿಯೂ ನಾಗರಿಕ ವರ್ಷದ ಸ್ಥಿತಿಯ ದಿನಗಳ ಸಂಖ್ಯೆಯು ಪೂರ್ಣಾಂಕವಾಗಿರುತ್ತದೆ. ಹಾಗು ನಾಗರಿಕ ವರ್ಷವು ಋತುಗಳ ಚಲನೆಯಲ್ಲಿ ಪ್ರಕೃತಿಸಿದ್ಧ ವರ್ಷಕ್ಕೆ ಸರಿಸಮವಾಗುವ ರೀತಿಯಲ್ಲಿ ನಾಗರಿಕ ವರ್ಷದಲ್ಲಿಯ ದಿನಗಳ ಸಂಖ್ಯೆಯನ್ನು ಸರ್ವ ಸಾಮಾನ್ಯವಾಗಿ ನಿರ್ಧರಿಸಲಾಗಿದೆ. ಋತುಗಳ ಒಂದು ಚಕ್ರದ ಅವಧಿಯೇ ಪ್ರಕೃತಿ ಸಿದ್ಧವಾದ ವರ್ಷ; ಎಂದರೆ ಒಂದು ಋತುವು ಮರಳಿ ಬರುವ ದಿನಗಳ ಸರಾಸರಿ ಅವಧಿಗೆ ಪ್ರಕೃತಿಸಿದ್ಧವಾದ ವರ್ಷವೆನ್ನುತ್ತಾರೆ. ಈ ಕಾರಣದಿಂದಲೇ ಒಂದು ವರ್ಷವನ್ನು ಸೂಚ್ಯವಾಗಿ ಯಾವುದೊಂದು ಋತುವಿನ ಹೆಸರಿನಿಂದ ಕರೆಯುವ ಪದ್ಧತಿಯಿದೆ. ಉದಾಹರಣೆಗಾಗಿ ಆಂಗ್ಲ ಭಾಷೆಯಲ್ಲಿ ೧೬ ವರ್ಷದ ತರುವಾಯವನ್ನು, ೧೬ ವಸಂತ ಋತುವಿನವಳು ಎಂದು ಸಹ ಕರೆಯುವರು. ಭಾರತದಲ್ಲಿ "ನೀನು ನೂರು ಬೆಳಗಾಲ ಬಾಳು" ಎಂಬ ವೈದಿಕ ಆಶೀರ್ವಾದವು ಸರ್ವಸಾಮಾನ್ಯವಾಗಿದೆ.

ವರ್ಷದ ಅವಧಿಯನ್ನು ನಿರ್ಧರಿಸಲು ಬಳಸಿದ ಪ್ರತಿ ರಾಷ್ಟ್ರವೂ ಕಷ್ಟಪಟ್ಟಿದೆ. ಒಂದು ಸಹ ಮುಸ್ಲಿಮರಿಗೆ ಧಾರ್ಮಿಕ ಉದ್ದೇಶದಿಂದ ೧೨ ಚಾಂದ್ರಮಾನ ಮಾಸಗಳುಳ್ಳ ವರ್ಷವಿದೆ. ಈ ವರ್ಷಕ್ಕೆ ಸಹ ಒಂದು ವರ್ಷಕ್ಕಿಂತ ಸುಮಾರು ೧೧ ದಿನಗಳು ಕಡಿಮೆ ಇವೆ. ಮೇಲೆಯೇ ಕಾಣುವಂತೆ ಇಂತಹ ವರ್ಷವು ಹೊಲದ ತೆರಿಗೆಯನ್ನು ವಸೂಲು ಮಾಡಲು ಅಯೋಗ್ಯವಾಗಿದೆ. ಏಕೆಂದರೆ ಇದರ ಪ್ರಕಾರ ಸುಮಾರು ೩೪ ವರ್ಷಗಳ ಹೊತ್ತಿಗೆ, ಬೆಳೆಗಳು ಬರುವ ೨ ತಿಂಗಳ ಮೊದಲಿಗೇ ತೆರಿಗೆಯನ್ನು ವಸೂಲು ಮಾಡಬೇಕಾಗುತ್ತದೆ. ಈ ಕಾರಣದ ನಿಮಿತ್ತವಾಗಿಯೇ ಮುಸ್ಲಿಂ ಅರಸರು ಫಸಲಿ ವರ್ಷವೆಂಬ ಇನ್ನೊಂದು ವರ್ಷವನ್ನು ಅನುಸರಿಸುತ್ತಿದ್ದರು. ಫಸಲಿ ವರ್ಷವೆಂಬುದರ ಅರ್ಥವು ಬೆಳೆಯ ವರ್ಷ ಎಂದಾಗುತ್ತದೆ.

ಜ್ಯೂಲಿಯಸ್ ಸೀಝರ್ ಚಕ್ರವರ್ತಿಯು ಪಂಚಾಂಗ ಸುಧಾರಣೆಯನ್ನು ಕ್ರಿ. ಪೂ. ೪೫ರಲ್ಲಿ ಮಾಡಿದನು. ಆದಕ್ಕೂ ಮೊದಲು ಐರೋಪ್ಯ ರಾಷ್ಟ್ರಗಳಲ್ಲಿ ನಿಶ್ಚಿತವಾದ ವರ್ಷವಿರಲಿಲ್ಲ. ವರ್ಷವು ಪ್ರಾರಂಭವಾಯಿತೆಂಬುದನ್ನು ಸೂಚಿಸಲು ರೋಂ ನಗರದಲ್ಲಿ ಕಾಳಯನ್ನು ಊದಲಾಗುತ್ತಿತ್ತು. "ಕ್ಯಾಲಿಂಡರ್" ಎಂಬ ಶಬ್ದವು "ಟ್ರಂಪೆಟ್ ಕಾಲ್" (ಕಾಳಿಯ ಧ್ವನಿ) ಎಂಬುದರಲ್ಲಿಯು "ಕಾಲ್" ಎಂಬ ಶಬ್ದದಿಂದ ಜನಿಸಿದೆ. ವರ್ಷದ ಪ್ರಾರಂಭವನ್ನು ಎಣಿಸುವ ಕಾರ್ಯಕ್ಕೆ ನೇಮಿಸಲಾದ ಅಧಿಕಾರಿಗಳ ಅಲಕ್ಷ್ಯ ಹಾಗು ಅಪ್ರಾಮಾಣಿಕತೆ ಇವುಗಳ ಫಲವಾಗಿ ಅಂದಿನ ಪಂಚಾಂಗದ ಪರಿಸ್ಥಿತಿಯು ಶೋಚನೀಯವಾಗಿತ್ತು. ಇದನ್ನು ಸರಿಪಡಿಸಲು ಜ್ಯೂಲಿಯಸ್ ಸೀಝರನು ೬೭ ಹೆಚ್ಚಿನ ದಿನಗಳನ್ನು ಒಂದು ನಿರ್ದಿಷ್ಟ ವರ್ಷದಲ್ಲಿ ಸೇರಿಸಬೇಕಾಯಿತು.

ಪ್ರತಿ ನಾಲ್ಕನೆಯ ವರ್ಷಕ್ಕೆ (ಲೀಪ್ ಇಯರ್) ೩೬೬ ದಿನಗಳಿರಬೇಕೆಂದೂ, ನೆಡುವಿನ ವರ್ಷಗಳಿಗೆ ೧ ದಿನ ಕಡಿಮೆ ಯಿರಬೇಕೆಂದೂ ಅವನು ವಿಧಿಸಿದನು. ಜ್ಯೂಲಿಯನ್ ಕ್ಯಾಲೆಂಡರ್ ಎಂದು ಇಂದು ಕರೆಯಲಾಗುವ ಈ ವ್ಯವಸ್ಥೆಯ ಪ್ರಕಾರ ನಾಗರಿಕ ವರ್ಷವು ಸಹಜ ವರ್ಷಕ್ಕಿಂತ ಸ್ವಲ್ಪ ದೀರ್ಘವಾಗುತ್ತದೆ.

ವರ್ಷಗಳು ಉರುಳಿ ಹೋದ ನಂತರ, ಜ್ಯೂಲಿಯನ್ ವರ್ಷದ ಅವಧಿಯಲ್ಲಿಯು ತಪ್ಪು ಬೆಳೆಯುತ್ತ ಹೋಯಿತು. ಇದರ ಫಲವಾಗಿ ಕ್ರೈಸ್ತಯಾಜ್ಕರ ಹಬ್ಬಗಳು ಮೊದಲಿನ ಋತುವಿನಿಂತ ಭಿನ್ನವಾದ ಬೇರೊಂದು ಋತುವಿನಲ್ಲಿ ಬರತೊಡಗಿದವು. ಇದನ್ನು ಸರಿಪಡಿಸಲು ಕ್ರಿ. ಶ. ೧೫೮೨ರಲ್ಲಿ ಕ್ರೈಸ್ತಿಯನ್ ಧರ್ಮ ಗುರುವಾದ ೧೩ನೇ ಗ್ರೆಗೊರಿಯು ೧೫೦೦, ೧೬೦೦, ೧೭೦೦ ಗಳಿಂತಹ ಶತಮಾನ ವರ್ಷಗಳನ್ನು ೪೦೦ ರಿಂದ ನಿಶ್ಶೇಷವಾಗಿ ಭಾಗಿಸಲು ಬಂದಾಗ ಮಾತ್ರ ಅಧಿಕಗಳನ್ನು "ಲೀಪ್ ಇಯರ್" ಎಂದು ಕರೆಯಬೇಕೆಂದು ವಿಧಿಸಿದನು. ಇದರ ಪರಿಣಾಮವಾಗಿ ೪೦೦ ವರ್ಷಗಳ ಅವಧಿಯಲ್ಲಿ ೧೦೦ ಲೀಪ್ ವರ್ಷಗಳ ಬದಲಾಗಿ ೯೭ ಲೀಪ ವರ್ಷಗಳು ಬಂದವು. ಹೀಗೆ ಲೀಪ್ ವರ್ಷಗಳ ಸಂಖ್ಯೆಯು ಕಡಿಮೆಯಾಯಿತು.

ಗ್ರೆಗೋರಿಯನ್ ವರ್ಷದ ಅವಧಿಯು ಪ್ರಕೃತಿ ಸಿದ್ಧ ವರ್ಷದ ಅವಧಿಗೆ ತೀರ ಸಮೀಪವಾಗಿದೆ. ಇದೆಷ್ಟು ಸಮೀಪವಿದೆಯೆಂದರೆ ಸುಮಾರು ೩೦೦೦ ವರ್ಷಗಳಲ್ಲಿ ಇವೆರಡರ ನಡುವಿನ ಅಂತರವು ಬರೇ ಒಂದು ದಿನವಾಗುತ್ತದೆ. ಯುರೋಪ ಖಂಡ ಹಾಗೂ ಭಾರತ ದೇಶಗಳು ಗ್ರೆಗೋರಿಯನ್ ಪಂಚಾಂಗವನ್ನು ಅನುಸರಿಸುತ್ತವೆ. ಕ್ರಿ. ಶ. ೧೯೫೨ರಲ್ಲಿ ಈ ಪಂಚಾಂಗವು ಇಂಗ್ಲಂಡಿನಲ್ಲಿ ಜಾರಿಯಲ್ಲಿ ಬಂದಾಗ, ಇದರಲ್ಲಿ ಒಟ್ಟುಗೂಡಿದ್ದ ದೋಷವನ್ನು ನಿವಾರಿಸಲು, ಅಲ್ಲಿಯ ಜನರು ಗ್ರೆಗೋರಿಯನ್ ಪಂಚಾಂಗದಲ್ಲಿಯ ೩ ದಿನಗಳನ್ನು ಬಿಟ್ಟು ಕೊಡಬೇಕಾಯಿತು; ೩—೯—೧೭೫೨ರ ಮರುದಿನವನ್ನು ೧೪ ರು ೧೫—೯—೧೭೫೩ ಎಂದು ಕರೆದರು.

ಸರಕಾರೀ ಕಾರ್ಯಗಳಿಗಾಗಿ ಭಾರತವು ಗ್ರೆಗೋರಿಯನ್ ಪಂಚಾಂಗವನ್ನು ಉಪಯೋಗಿಸುತ್ತಿದ್ದರೂ ಇಲ್ಲಿಯ ಜನತೆಯ ದೇಶೀಯ ಪಂಚಾಂಗವನ್ನು ಕೊರೆದಿಲ್ಲ. ಅತಿ ಪೂರ್ವ ಕಾಲದಿಂದಲೂ ಈ ವಿಶಾಲವಾದ ದೇಶದ ತುಂಬ ಜಿಂದೂ ಪಂಚಾಂಗವು ಧಾರ್ಮಿಕ ಹಾಗೂ ವಾಣಿಜ್ಯ ರಂಗಗಳಲ್ಲಿ ಪ್ರಚಲಿತವಿದೆ. ಆದರೆ ದುರ್ದೈವದ ಮಾತೆಂದರೆ ಭಾರತದ ಬೇರೆ ಬೇರೆ ಭಾಗಗಳಲ್ಲಿ ಸ್ವಲ್ಪಮಟ್ಟಿಗೆ ಭಿನ್ನವಾದ ಪದ್ಧತಿಯ ಪಂಚಾಂಗಗಳು ಬಳಕೆಯಲ್ಲಿವೆ.

ಉತ್ತರ ಪ್ರದೇಶದಲ್ಲಿ ಹಿಂದೂ ಚಾಂದ್ರಮಾನ ಮಾಸವು ಹುಣ್ಣಿಮೆಯಿಂದ ಪ್ರಾರಂಭವಾಗಿ ಹುಣ್ಣಿಮೆಗೆ ಮುಗಿಯುತ್ತದೆ. ದಕ್ಷಿಣದಲ್ಲಿ ತದ್ವಿರುದ್ಧವಾಗಿ ಚಾಂದ್ರಮಾನ ಮಾಸವು ಅಮಾವಾಸ್ಯೆಯಿಂದ ಪ್ರಾರಂಭವಾಗಿ ಅಮಾವಾಸ್ಯೆಗೆ ಮುಗಿಯುತ್ತದೆ. ಬಂಗಾಳದಲ್ಲಿಯಾದರೋ ಸೌರಮಾನ ತಿಂಗಳುಗಳು ಬಳಕೆಯಲ್ಲಿವೆ ಹಾಗೂ ಚಂದ್ರನ ಕಲೆಗಳಿಗೂ ಇವಕ್ಕೂ ಸಂಬಂಧವಿಲ್ಲ. ಇವಲ್ಲದೆ ಕೆಲವರು ಒಂದು ಪ್ರಾಚೀನ ಗ್ರಂಥವನ್ನು ಆಧಾರವಾಗಿ ಹಿಡಿದರೆ, ಇನ್ನು ಕೆಲವರು ಇನ್ನೊಂದನ್ನು ಆಧಾರವೆಂದು ಬಗೆಯುತ್ತಾರೆ. ಇದರ ಫಲವಾಗಿ ಬೇರೆ ಬೇರೆ ಪಂಚಾಂಗಗಳಲ್ಲಿ ಒಂದು ದಿನ ಅಥವಾ ಒಂದು ತಿಂಗಳ ವರೆಗಿನ ಅಂತರವು ತಿಥಿಗಳಲ್ಲಿ ಹಾಗೂ ನಡೆಯುವ ತಿಂಗಳಿನ ಹೆಸರುಗಳಲ್ಲಿ ಕಂಡುಬರುತ್ತದೆ.

ಇಂತಹ ಪರಿಸ್ಥಿತಿಯನ್ನು ಸರಿಪಡಿಸುವ ಉದ್ದೇಶದಿಂದ ಭಾರತ ಸರಕಾರವು ೧೯೫೨ರಲ್ಲಿ ಪ್ರಚಲಿತವಿರುವ ವಿವಿಧ ಹಿಂದೂ ಪಂಚಾಂಗಗಳನ್ನು ಪರೀಕ್ಷಿಸಲು ಹಾಗೂ ಅವುಗಳಲ್ಲಿ ಏಕರೂಪತೆಯನ್ನು ಸಾಧಿಸುವುದಕ್ಕಾಗಿ ಕೆಲವು ಸೂಚನೆಗಳನ್ನು ಸೂಚಿಸಲು ಒಂದು ಸಮಿತಿಯನ್ನು ನೇಮಿಸಿತು. ದಿವಂಗತ ಡಾ. ಎಂ. ಎಸ್. ಶಕ ಇವರು ಅದರ ಅಧ್ಯಕ್ಷರಾಗಿದ್ದರು ಹಾಗೂ ಪ್ರಸ್ತುತ ಲೇಖಕರು ಅದರ ಸದಸ್ಯರಲ್ಲಿ ಒಬ್ಬರಾಗಿದ್ದರು.

ವರ್ಷದ ಅವಧಿಯು ಸ್ವಲ್ಪಮಟ್ಟಿಗೆ ತಪ್ಪಿರುವುದೇ ಹಿಂದೂ ಪಂಚಾಂಗದಲ್ಲಿಯ ಮಹತ್ವದ ದೋಷವಾಗಿದೆ. ನಿಜ ಸ್ಥಿತಿಯಲ್ಲಿ ಈ ತಪ್ಪು ಅತ್ಯಲ್ಪವಾಗಿದೆ. ಆದರೂ ಕೂಡಿ ಬೀಳುತ್ತದೆ ಸಾಗಿದೆ ಇದರ ಪರಿಣಾಮವಾಗಿ ಆಯಾ ಋತು ಮಾಸಗಳ ಮೇಲಿಂದ ನೋಡಲಾಗಿ, ನಮ್ಮ ಹಬ್ಬಗಳು ೨೨ ದಿವಸಗಳಷ್ಟು ತಡವಾಗುತ್ತವೆ. ಆದೇ ಸಂಖ್ಯೆಯ ದಿನಗಳುಳ್ಳ ತಿಂಗಳುಗಳು ಸಹ ತಡವಾಗಿ ಬರುತ್ತವೆ. ಒಂದೇ ಉದಾಹರಣೆಯು ಇವನ್ನು ಸ್ಪಷ್ಟಪಡಿಸಲು ಸಾಕು. ವರ್ಷದಲ್ಲಿಯು ೪೦ ದಿನಗಳು ಬಹುಬೇಗ ಬರುವೆಂದು ಉತ್ತರ ದೇಶದಲ್ಲಿ ಹೇಳಲಾಗುತ್ತದೆ. ಇದರ ಪ್ರಕಾರ ಧನುವಿನ ೧೫ ದಿನಗಳೂ ಮಕರದ ೩೫ ದಿನಗಳೂ ಸೇರಿ ಚಳಿಗಾಲದ ೪೦ ದಿನಗಳಾಗುತ್ತವೆ. ಜನವರಿ ೧೪ನೇ ತಾರೀಕಿನ ದಿನ ಮಕರವಾಗುತ್ತದೆ. ಆದ್ದರಿಂದ ಮೇಲಿನ ಮಾತಿನ ಪ್ರಕಾರ ಚಳಿಯು ಋತ್ವಿಕ್ ವಸ್ಥೆಯನ್ನು ಮುಟ್ಟಿದ ಕಾಲವು ಡಿಸೆಂಬರ್ ೩೧ರಿಂದ ಫೆಬ್ರುವರಿ ೮ರ ವರೆಗೆ ಆಗುತ್ತದೆ. ಡಿಸೆಂಬರ ೩೧ನೇ ದಿನ ಇರುವುದು ಚಳಿಯು ಫೆಬ್ರುವರಿ ೯ನೇ ದಿನ ಇರುವುದಿಲ್ಲ ವೆಂಬುದಂತೂ ನಿರ್ವಿವಾದ.

ಒಂದು ವೇಳೆ ನಾವು ಇಂದಿನ ವರ್ಷದ ತಪ್ಪಾದ ಅವಧಿಯನ್ನು ಮುಂದೆ ಸಹ ಕೆಲವು ಸಾವಿರ ವರ್ಷಗಳ ವರೆಗೆ ನಾಗಗೊಟ್ಟರೆ, ವಿಪರೀತ ಮಳೆಯು ದಿನಗಳಿಂದ ಕೂಡಿದುದೆಂದು ಹೆಸರಾಗಿರುವ ಶ್ರಾವಣ ಭಾದ್ರಪದ ಮಾಸಗಳು ನಡು ಚಳಿಗಾಲದಲ್ಲಿ ಬರುತ್ತವೆ.

೧೯೫೨ರಲ್ಲಿ ಭಾರತ ಸರಕಾರದ ಮುಂದೆ ಪಂಚಾಂಗ ಸುಧಾರಣಾ ಸಮಿತಿಯು ತನ್ನ ಸೂಚನೆಗಳನ್ನು ಇಟ್ಟಿತು. ವರ್ಷದ ಅವಧಿಯನ್ನು ಅತ್ಯಲ್ಪ ಬದಲಿಸಿ ಅದು ಪ್ರಕೃತಿ ಸಿದ್ಧ ವರ್ಷದ ಅತಿ ಸಮೀಪಕ್ಕೆ

(ಇಂತೀ ಮುಂದುವರಿದಿದೆ)

THE
CANARA INDUSTRIAL & BANKING SYNDICATE LTD.
Estd.: 1925, H. O.: UDIPI, S. India.

GROWING RESOURCES as on
31-12-1926 - Rs. 17,355
31-12-1936 - Rs. 35,45,544
31-12-1946 - Rs. 4,26,07,093
31-12-1956 - Rs. 10,64,10,312

THANKS
to
our thousands of customers all over the country for their confidence and good-will.

T. A. PAI, B. Com. (Bom.), A.I.I.B., F.R.E.S. (Lond)
General Manager.

DR. T. M. A. PAI, M. B., B. S.,
Managing Director.

ಇದೀಗ ಪ್ರಕಟವಾಗಿದೆ
ಶ್ರೀ ವಿ. ಜಿ. ಕೃಷ್ಣಮೂರ್ತಿ, ಬಿ.ಎ.
ಅವರ ರಹಸ್ಯಮಯ ರೋಮಾಂಚಕ
ಕಾದಂಬರಿ
ಸಮಾಧಿಯ ಸುರಂಗ
ಬೆಲೆ 1 ರೂ.] [ದ್ವಿವರ್ಣ ರಕ್ಷಾಪತ್ರ
ವಿವರಗಳಿಗೆ
ಗಾಯತ್ರಿ ಪ್ರಕಾಶನ
ಚಾಮುಂಡಿಪುರಂ, ಮೈಸೂರು.
ಕೆಲವೇ ಪ್ರತಿಗಳಿವೆ
"ಮಂಗಳ" ಎಸ್. ಕಮಲಮ್ಮ

# ಇತಿಹಾಸ

## ನನ್ನು ನಾಣ್ಯಪದ್ಧತಿ ಆಗಿಂದಾಗ್ಗೆ ಬದಲಾಗುತ್ತಾ ಬಂದಿದ್ದು ಅದಕ್ಕೆ ಅದ್ಭುತ ಚರಿತ್ರೆಯುಂಟು!

ಭಾರತವು ಪ್ರಥಮತಃ ತನ್ನ ನಾಣ್ಯಗಳನ್ನು ತಯಾರಿಸಿ ಚಲಾವಣೆಗಿಟ್ಟ ದಿನವಾವುದೆಂಬುದು ಕರಾರುವಾಕ್ಕಾಗಿ ಗೊತ್ತಿಲ್ಲ. ಆದಾಗ್ಯೂ, ಸುಪ್ರಸಿದ್ಧ ಇತಿಹಾಸಜ್ಞನಾದ ಎಡ್ವರ್ಡ್ ಥಾಮಸ್‌ನ ಪ್ರಕಾರ, ಭಾರತದಲ್ಲಿ ಋಗ್ವೇದಗಳ ಕಾಲದಲ್ಲಿ ಅಂದರೆ, ಕ್ರಿ. ಪೂ. ೫೦೦—೧೦೦೦ ವರೆಗೆ, ಲೋಹದ ನಾಣ್ಯಗಳು ಚಲಾವಣೆಯಲ್ಲಿದ್ದವು—ಎಂದು ತಿಳಿದುಬರುತ್ತದೆ. ಕ್ರಿ. ಪೂ. ೬ನೆಯ ಶತಮಾನದಲ್ಲಿ, ಭಾರತದಲ್ಲಿ ನಾಣ್ಯ ಪದ್ಧತಿಯು ಆಚರಣೆಯಲ್ಲಿತ್ತು ಎಂಬ ಅಂಶವನ್ನು ಜಾತಕ ಕಥೆಗಳಿಂದ ತಿಳಿಯಬಹುದು.

ಪ್ರೊಫೆಸರ್ ವ್ಯಾಪ್‌ಸನ್‌ರವರ ಪ್ರಕಾರ ಪ್ರಾಚೀನ ಭಾರತದ ನಾಣ್ಯಗಳು ಯಾವ ವಿದೇಶೀ ಪ್ರಭಾವಕ್ಕೂ ಒಳಗಾಗದೆ ರಚಿಸಲಾಗಿದ್ದವು. 'ಕರ್ಷಪಾಣ' ಗಳು, ಆ ಕಾಲದ ಭಾರತೀಯ ನಾಣ್ಯಗಳಲ್ಲಿ ಉತ್ತಮ ಮಾದರಿಗಳೆನ್ನಬಹುದು. 'ಕರ್ಷ' ಎಂಬ ಶಬ್ದವು 'ಕ್ರಿಶ್' ಎಂಬುದರಿಂದ ಬಂದಿತು. 'ಕ್ರಿಶ್' ಎಂದರೆ ಉಳುಮೆ ಗುರುತು. 'ಪಾಣಿ' ಎಂದರೆ ರೂಢಿ ಅಥವಾ ಬಳಕೆ ಎಂದರ್ಥ. ಹಿಂದೂ ಶಾಸ್ತ್ರಗಳು ಈ ನಾಣ್ಯಗಳನ್ನು 'ಪುರಾಣ ಗಳು' (ಹಳೆಯವು) ಎಂದು ಕರೆದವು. "ಮನು" ಮತ್ತು "ಪಾಣಿನಿ" ಇಬ್ಬರೂ ಈ ವಿಷಯವನ್ನು ಪ್ರಸ್ತಾಪಿಸಿರುವರು. ಆವರಿಬ್ಬರೂ ಅಲೆಕ್ಸಾಂಡರನಿಗಿಂತ ಹಿಂದಿನವರು. ಈ ನಾಣ್ಯಗಳ ಪ್ರಸ್ತಾಪ ಭಾಂಡ್ಡರ ಸೂತ್ರಗಳಲ್ಲಿಯೂ ಬರುತ್ತದೆ. "ವಾಸವದತ್ತೆ" ಎಂಬ ವಾರಾಂಗನೆಯು, ತನ್ನ ಒಲವಿನ ಕಾಣಿಕೆಯಾಗಿ ೫೦೦ "ಪುರಾಣ"ಗಳನ್ನು ಬೇಡುತ್ತಿದ್ದಳಂತೆ.

ಚಾಣಕ್ಯನ ಅರ್ಥಶಾಸ್ತ್ರದ ಪ್ರಕಾರ, ಚಂದ್ರಗುಪ್ತ ಮೌರ್ಯ ತನ್ನ ಅಳ್ವಿಕೆಯಲ್ಲಿ ನಾಣ್ಯ ಪದ್ಧತಿಯನ್ನು ಆಧುನಿಕ ಗೊಳಿಸಿದನು. ಮಗಧ (ಬಿಹಾರ್) ದೇಶದಲ್ಲಿ ಗುಪ್ತ ಸಂತತಿಯು (ಕ್ರಿ. ಶ. ೩೨೦ ರಲ್ಲಿ) ಅಧಿಕಾರಕ್ಕೆ ಬಂದಿತು. ಗುಪ್ತರ ಅಳ್ವಿಕೆಗೊಳಗಾಗಿದ್ದ ಪ್ರದೇಶಗಳಲ್ಲಿ ಶ್ರೇಯೋಭಿವೃದ್ಧಿ ಹಾಗೂ ಶಾಂತಿ ಪರಿಸ್ಥಿತಿಯು ನೆಲೆಗೊಂಡಿದ್ದು ನಾಣ್ಯಪದ್ಧತಿಯು ಸುವ್ಯವಸ್ಥೆಗೊಂಡಿತು. ಒಂದನೆಯ ಚಂದ್ರಗುಪ್ತನ ಹಾಗೂ ಆವನ ಲಿಚ್ಚಾವಿ ರಾಣಿ ಹೆಸರನ್ನುಳ್ಳ ನಾಣ್ಯಗಳು ಬಳಕೆಯಲ್ಲಿದ್ದವು.

ಇದರ ಜೊತೆಗೆ, 'ಕೃತಾಂತ'ದ ಕೊಡಲಿಯನ್ನು ಹಿಡಿದಿದ್ದ ದೊರೆಯ ಚಿತ್ರವನ್ನುಳ್ಳ ಚಿನ್ನದ ನಾಣ್ಯಗಳೂ ಚಲಾವಣೆಯಲ್ಲಿದ್ದವು. ಅವುಗಳನ್ನು ಹೋಲುವ ಚಿಕ್ಕ ಬೆಳ್ಳಿಯ ನಾಣ್ಯಗಳು ಪಶ್ಚಿಮ ಸತ್ರಾಪ್‌ಗಳಲ್ಲಿ ಚಲಾವಣೆಯಲ್ಲಿದ್ದವು. ಗುಜರಾತ್ ಮತ್ತು ಪೌರಾಷ್ಟ್ರಗಳನ್ನು ಗೆದ್ದ ಎರಡನೆಯ ಚಂದ್ರಗುಪ್ತನ ನಂತರವೂ ಈ ನಾಣ್ಯಗಳು ಆಚರಣೆಯಲ್ಲಿದ್ದವು. ಚಿನ್ನದ ಹಾಗೂ ಬೆಳ್ಳಿಯ ನಾಣ್ಯಗಳಲ್ಲದೆ, ತಾಮ್ರದ ನಾಣ್ಯಗಳೂ ಚಲಾವಣೆಯಲ್ಲಿದ್ದವು. ಅವು ಉತ್ತರ ಮತ್ತು ಪೂರ್ವ ಪ್ರಾಂತಗಳಲ್ಲಿ ಚಲಾವಣೆಯಲ್ಲಿದ್ದವು. ವಿವಿಧ ನಾಣ್ಯಗಳ ಮೇಲೆ ಹಲವು ಸಂಕೇತಗಳಿರುವುದೂ ಕಂಡುಬಂದಿದೆ.

ಗುಪ್ತರ ಕಾಲದಲ್ಲಿ ವ್ಯವಸ್ಥಿತ ಪದ್ಧತಿಯಲ್ಲಿನ ನಾಣ್ಯಗಳಾದ ಚಿನ್ನದ 'ದೀನಾರ್' ಹಾಗೂ ಬೆಳ್ಳಿಯ 'ಅರ್ಧಕರ್ಷ' ನಾಣ್ಯಗಳ ಚಲಾವಣೆಯು ಕ್ರಿ. ಶ. ೬ನೇ ಶತಮಾನದ ಆರಂಭದಲ್ಲಿ ಬಿಳಿಯ ಹೂಣರು ಉತ್ತರ ಭಾರತವನ್ನು ಆಕ್ರಮಿಸಿದ ನಂತರ, ಕ್ಷೀಣಗೊಂಡವು. ಕ್ರಿ. ಶ. ೬೦೦—೧೦೦೦ ವರೆಗೆ ಭಾರತದ ನಾನಾ ಭಾಗಗಳಲ್ಲಿ ವಿಭಿನ್ನ ರೀತಿಯ ನಾಣ್ಯಗಳು ಚಲಾವಣೆಯಲ್ಲಿದ್ದವು.

ಅಲ್ತಮಷ್‌ನ ಕಾಲದಲ್ಲಿ ಮಹಮ್ಮದೀಯರು ೧೭೫ ಗ್ರೇನ್‌ಗಳ ತೂಕದ ಬೆಳ್ಳಿಯ 'ಟಂಕ" ಎಂಬ ತಮ್ಮ ಪ್ರಥಮ ದೇಶೀಯ ನಾಣ್ಯವನ್ನು ಭಾರತದಲ್ಲಿ ಚಲಾವಣೆಗೆ ತಂದರು. ಮಹಮದ್ ಬಿನ್ ತುಗ್ಲಕ್‌ನು ಆಗ್ಗದ ಹಿತ್ತಾಳೆ, ತಾಮ್ರ ಹಾಗೂ ತೊಗಲಲ್ಲಿ ನಾಣ್ಯಗಳನ್ನು ತಯಾರಿಸಿ ಚಲಾವಣೆಗಿಟ್ಟನು. ಆದು ವರೆಗೂ ನಾಣ್ಯಗಳ ತಯಾರಿಕೆಗೆ ದೆಲೆಬಾಳುವ ಲೋಹಗಳನ್ನು ಉಪಯೋಗಿಸಲಾಗುತ್ತಿತ್ತು. ಷೇರ್‌ಷಾನು ಬೆಳ್ಳಿಯ 'ಟಂಕ"ದ ತೂಕವನ್ನು ೧೭೫ರಿಂದ ೧೭ ಗ್ರೇನ್‌ಗಳಿಗೇರಿಸಿದನು. ಉಳಿದ ನಾಣ್ಯಗಳಿಗೆ ಶುದ್ಧ ತಾಮ್ರವನ್ನು ಉಪಯೋಗಿಸಿದನು.

ಮೊಗಲ್ ಚಕ್ರವರ್ತಿಗಳ ನಾಣ್ಯಗಳ ಹೆಸರು ಅಗಣಿತವಾಗಿದೆ. ಚಿನ್ನದ ನಾಣ್ಯಕ್ಕೆ ಸಾಮಾನ್ಯವಾಗಿ "ಮೊಹರು" ಎಂದು ಕರೆಯುತ್ತಿದ್ದರು. ಬೆಳ್ಳಿಯ ನಾಣ್ಯಕ್ಕೆ 'ರೂಪಾಯಿ" ಎಂದೂ, ತಾಮ್ರದ ನಾಣ್ಯಕ್ಕೆ "ದಾಂ" ಎಂದೂ ಕರೆಯುತ್ತಿದ್ದರು. ಮೊಗಲ್ ನಾಣ್ಯಗಳ ಬೆಲೆಯು, ಅದರ ತೂಕಕ್ಕೆಂತ, ಆ ನಾಣ್ಯಗಳಲ್ಲಿ ಉಪಯೋಗಿಸಿರುವ ಲೋಹದ ಶುದ್ಧತೆಯನ್ನು ಅವಲಂಬಿಸಿರುವುದು. ಬಾಬರನ ಕಾಲದ ಬೆಳ್ಳಿಯ ನಾಣ್ಯದ ತೂಕ ೬೪ ರಿಂದ ೬೩ ಗ್ರೇನ್‌ಗಳದ್ದವು. ಹುಮಾಯೂನನ ಕಾಲದ ಚಿನ್ನದ ನಾಣ್ಯದ ತೂಕ ೧೫೫ರಿಂದ ೧೬೬ ಗ್ರೇನ್‌ಗಳದ್ದುವು. ಆವನ ಕಾಲದ ಬೆಳ್ಳಿಯ ನಾಣ್ಯಗಳ ತೂಕ ೬೭ರಿಂದ ೧೮೦ ಗ್ರೇನ್‌ಗಳ ವರೆಗೆ ಇದ್ದಿತು. ಮೊಗಲರ ಕಾಲದಲ್ಲಿ ತಾಮ್ರದ ನಾಣ್ಯಗಳು ಅಪರೂಪವಾಗಿದ್ದವು. ದೇಶದ ಕೆಲವು ಭಾಗಗಳಲ್ಲಿ ಕವಡೆಗಳನ್ನು ಸಣ್ಣ ನಾಣ್ಯಗಳಂತೆ ಉಪಯೋಗಿಸುತ್ತಿದ್ದರೂ, ನುತ್ತೆ ಕೆಲವು ಭಾಗಗಳಲ್ಲಿ ಬಾದಾಮಿ ಬೀಜಗಳನ್ನು ಉಪಯೋಗಿಸುತ್ತಿದ್ದರು.

೧೭೧೭ರಲ್ಲಿ ಫರೂಕ್-ಸಿಯಾರ್ ಚಕ್ರವರ್ತಿಯ ಅನುಜ್ಞಾಪತ್ರ ಹಾಗೂ ಇತರ ಕಾರಣಗಳಿಂದಾಗಿ, ಬ್ರಿಟಿಷ್ ವರ್ತಕರು, ಮುಂಬೈಯಲ್ಲಿ "ಮೊಗಲ್ ಚಕ್ರಾಧಿಪತ್ಯದ ನಾಣ್ಯಗಳ ಚಲಾವಣೆಗೆ ಅವಕಾಶವಿತ್ತರು. ಆದರಂತೆ, ಮದರಾಸಿನ ಅರ್ಕಾಟಿನಲ್ಲಿ, ಇಂಪೀರಿಯಲ್ ಗವರ್ನರರು, ೧೭೬೨ರಲ್ಲಿ ರೂಪಾಯಿ ನಾಣ್ಯಗಳನ್ನು ಕಂಪೆನಿಯವರು ಮುದ್ರಿಸುವ ದಕ್ಕೆ ಅನುಮತಿಯಿತ್ತರು. ಆದರಂತೆ ಫ್ರೆಂಚರೂ ಸಹ ಪಾಂಡಿಚೆರಿಯಲ್ಲಿ "ಆರ್ಕಾಟ್" ರೂಪಾಯಿಗಳನ್ನು ಚಲಾವಣೆಗೆ ತಂದರು. ಬಂಗಾಳದಲ್ಲಿ ಬ್ರಿಟಿಷ್ ವರ್ತಕರು ತಮ್ಮ ನಾಣ್ಯಗಳನ್ನು, ಢಾಕ್ಕಾ, ಪಾಟ್ನ ಮತ್ತು ಮುರ್ಷಿದಾಬಾದ್‌ಗಳಲ್ಲಿದ್ದ ನವಾಬರ ಟಂಕಸಾಲೆಗಳಲ್ಲಿ ಮುದ್ರಿಸುತ್ತಿದ್ದರು. ಬಂಗಾಳದಲ್ಲಿ ಈಸ್ಟ್ ಇಂಡಿಯಾ ಕಂಪೆನಿಯವರು ಆಡಳಿತ ಸೂತ್ರವನ್ನು ವಹಿಸಿಕೊಟ್ಟ ನೇಲೆ, ಬ್ರಿಟಿಷರು ಬಂಗಾಳದಲ್ಲಿ ನಾಣ್ಯಗಳ ಚಲಾವಣೆಯ ಹಕ್ಕನ್ನು ಸ್ವಾಧೀನಕ್ಕೆ ತೆಗೆದುಕೊಂಡರು. ಕಾಲಕ್ರಮೇಣ, ಢಾಕ್ಕಾ, ಪಾಟ್ನಾ ಮತ್ತು ಮುರ್ಷಿದಾಬಾದ್‌ಗಳಲ್ಲಿದ್ದ ಟಂಕಸಾಲೆಗಳನ್ನು ತೆಗೆದು ಹಾಕಲಾಯಿತು. ಅದೇ ವೇಳೆಗೆ ಮುರ್ಷಿದಾಬಾದಿನ ಆಸ್ಪಫಿ ಮತ್ತು ರೂಪಾಯಿ ನಾಣ್ಯಗಳಿಗೆ ಸಮನಾದ ಚಿನ್ನದ ಮತ್ತು ಬೆಳ್ಳಿಯ ನಾಣ್ಯಗಳನ್ನು ಅಲ್ಲಿ ತಯಾರಿಸಲೋಸುಗ ೧೭೫೯-೬೦ ರಲ್ಲಿ ಕಲ್ಕತ್ತೆಯಲ್ಲಿ ಟಂಕಸಾಲೆಯೊಂದನ್ನು ಸ್ಥಾಪಿಸಲಾಯಿತು. ನಮೂನೆ ಮತ್ತು ರಚನೆಯಲ್ಲಿ ಕರಾರುವಾಕ್ಕಾಗಿದ್ದ "ಸಿಕ್ಕಾ" ರೂಪಾಯಿ ನಾಣ್ಯವು ಕೆಳಬಂಗಾಳದಲ್ಲಿ ಪ್ರಮಾಣೀಕೃತ ನಾಣ್ಯವೆಂದು ಪರಿಗಣಿಸಲ್ಪಟ್ಟಿತು. ಬಂಗಾಳದ ಉಳಿದ ಭಾಗದಲ್ಲಿ ಬೆಂಧನ ನವಾಬರ ನಾಣ್ಯ ಚಲಾವಣೆಯಲ್ಲಿತ್ತು. ಆ ನಾಣ್ಯಗಳನ್ನು ಫರ್ಮುರಾ ಚಾರ್ ಮತ್ತು ಕಾತಿಯ ಟಂಕಸಾಲೆಯಲ್ಲಿ ಈ ನಾಣ್ಯಗಳು ತಯಾರಾಗುತ್ತಿದ್ದವು.

ಮುಂಬೈನಲ್ಲಿ ಕ್ರಿ. ಶ. ೧೮೦೪ರಲ್ಲಿ ಒಂದೇ ರೀತಿಯ ನಿರ್ದಿಷ್ಟ ನಾಣ್ಯಗಳು ಚಲಾವಣೆಗೆ ಬಂದವು. ಸ್ವಲ್ಪ ಕಾಲದ ವರೆಗೆ ಕಂಪೆನಿಯದಾದ ಸೂರತ್ತಿನ ಟಂಕಸಾಲೆಯನ್ನು, ನಾಣ್ಯಗಳ ತಯಾರಿಕೆಗಾಗಿ ಉಪಯೋಗಿಸಿದರು. ಮಿರತ್ತಿನ "ಳಟ ಸಾಸ್" ರೂಪಾಯಿಯು, ೧೮೩೫ ರ ವರೆಗೆ ಬ್ರಿಟಿಷ್ ನಾಣ್ಯಗಳು ಚಲಾವಣೆಗೆ ಬರುವ ವರೆಗೂ ಇದ್ದವು. ಮದರಾಸ್, ಕಲ್ಕತ್ತ ಮತ್ತು ಪಾಂಡುಚೆರಿಗಳಲ್ಲಿ ೩ ಟಂಕಸಾಲೆಗಳ ನಾಣ್ಯಗಳು ತ್ರಿಶೂಲ, ಗುಲಾಬಿ, ಬಾಲಚಂದ್ರ ಈ ಸಂಕೇತವನ್ನು ಹೊಂದಿರುತ್ತಿದ್ದವು. ಕಾತಿಯ ಟಂಕಸಾಲೆಯ ನಾಣ್ಯಗಳು, ನಾಲ್ಕು ದಳಗಳುಳ್ಳ ದೊಡ್ಡ ಹೂವಿನ ಮಾದರಿಯಲ್ಲಿದ್ದವು. ೧೮೧೮ರಿಂದ ೧೮೩೫ರ ವರೆಗೆ ಮದರಾಸ್ ಮತ್ತು ಕಲ್ಕತ್ತ ಟಂಕ ಸಾಲೆಗಳ "ತ್ರಿಶೂಲ" ಮತ್ತು "ಗುಲಾಬಿ" ಸಂಕೇತಗಳುಳ್ಳ ನಾಣ್ಯಗಳನ್ನು ತಯಾರಿಸುತ್ತಿದ್ದವು.

ಕಾಲಕ್ರಮದಲ್ಲಿ, ಬ್ರಿಟಿಷ್ ಇಂಡಿಯಾದ ಆದ್ಯಂತ ಏಕರೀತಿಯ ನಾಣ್ಯಗಳ ಚಲಾವಣೆಯು ಆಗತ್ಯವೆನಿಸಿತು. ಅದಕ್ಕಾಗಿ ಅನೇಕ ಸಮಿತಿಗಳು ಆಗಿಂದಾಗ್ಗೆ ನೇಮಕವಾಗಿದ್ದವು. ಆ ಸಮಿತಿಗಳ ಶಿಫಾರಸುಗಳ ಫಲವಾಗಿ, ೧೮೩೫ನೇ ಇಸವಿಯ ಕಾಸ್ತಾನಾದ ಪ್ರಥಮ ನಾಣ್ಯ ಶಾಸನವು ಆಚರಣೆಗೆ ಬಂದಿತು. ಅದು ಬೆಳ್ಳಿಯ ರೂಪಾಯಿ ತೂಕವನ್ನು ೧೮೦ ಗ್ರೇನ್‌ಗಳೆಂದೂ, ಅದರಲ್ಲಿ ೧೭೫/೧೭೬ ಭಾಗ ಶುದ್ಧ ಬೆಳ್ಳಿ ಮತ್ತು ಉಳಿದ ಭಾಗ ಮಿಶ್ರ ಲೋಹವಿರಬೇಕೆಂದೂ ನಿರ್ಧರಿಸಿತು.

(ಇನ್ನೂ ಇದೆ ನೋಡಿರಿ)

ಹೊರನಾಡಿನವರಿಗೆ ಮಾತ್ರ



FILM WIG



ರಂಗಭೂಮಿಯಲ್ಲಿ ಅಭಿನಯಿಸ
ನಟನಟಿಯರಿಗೆ ಬೇಕಾಗುವ ಇ
ರುಮಾಲುಗಳು, ಕ್ರಾಪ್ ಕೂದಲು, ಕೆ
ಬೆಂಡೋಲೆ ಜತೆಗಳು, ತುಟಿಗೆ ಹಚ್ಚು
ಅಂಟು, ಮೇಕ್ ಅಪ್ ಚಾರಿ, ತಲೆಸೂ
ಸುತ್ತುವ ಬಲೆ, ಇತ್ಯಾದಿ ವೇಷಭೂಷ
ಗಳಿಗೆ ಬೇಕಾಗುವ ಯಾವತ್ತೂ ಸಾಮ
ನುಗಳು ದೊರೆಯುತ್ತವೆ. ಸವಿವ
ಕ್ರಯಪಟ್ಟಿಗೆ ಬರೆಯಿರಿ.

**DHARAMSHI MULJI**
**DRESSWALA,**
132—G, Bhagatwadi,
Bhuleshwar Road, BOMBAY—2

# ಇತಿಹಾಸ

(೪ನೇ ಪುಟದಿಂದ)

೧೮೭೦ರಲ್ಲಿ ಇನ್ನೊಂದು ಶಾಸನವು ಚಿನ್ನದ ನಾಣ್ಯ ಅಂದರೆ 'ಡಬ್ಬಲ್' ಚಿನ್ನದ ಮೊಹರುಗಳನ್ನು ರೂಪಾಯಿ ನಾಣ್ಯ ಮತ್ತು ೧/೮ ರೂಪಾಯಿ ನಾಣ್ಯ ನಾಣ್ಯಗಳನ್ನು, ತಾಮ್ರದ, ಅರ್ಧಾಣೆ, ಕಾಲಾಣೆ ಮತ್ತು ಕಾಸುಗಳನ್ನು ಮುದ್ರಿಸಲು ಅಧಿಕಾರಕೊಟ್ಟಿತು. ಚಿನ್ನ ಬೆಳ್ಳಿ, ಮತ್ತು ತಾಮ್ರದನಾಣ್ಯಗಳ ತೂಕವನ್ನು ಶಾಸನದಲ್ಲಿ ನಿರ್ದಿಷ್ಟಗೊಳಿಸಲಾಯಿತು.

೧೯೦೬ರಲ್ಲಿ ಭಾರತೀಯ ನಾಣ್ಯ ಪದ್ಧತಿಗಳಿಗೆ ಸಂಬಂಧಪಟ್ಟ ಕಾನೂನುಗಳನ್ನು ತಿದ್ದುಪಡಿ ಮಾಡಿ ಸಮಸ್ತವನ್ನು ಗೊಳಿಸಲಾಯಿತು. ಈ ಕಾನೂನನ್ನು ಆಗಿಂದಾಗ್ಗೆ ತಿದ್ದುಪಡಿ ಮಾಡಲಾಗುತ್ತಿದೆ. ಆದರ ಪ್ರಕಾರ ಈ ನಾಣ್ಯಗಳನ್ನು ಮುದ್ರಿಸಲಾಗುತ್ತಿದೆ

(೧) ಬೆಳ್ಳಿ—ರೂಪಾಯಿ, ಅರ್ಧ ರೂಪಾಯಿ, ಪಾವಲಿ ಮತ್ತು ೧/೮ ರೂಪಾಯಿ.

(೨) **ಚಾತುರ್ಥಿಕ ಮಿಶ್ರ ಲೋಹ**- ದ್ವಿತೀಯ ಪ್ರಪಂಚ ಯುದ್ಧದ ಸಮಯದಲ್ಲಿ ಬೆಳ್ಳಿಯ ಕೊರತೆ ಕಂಡು ಬಂದಿತು. ನಾಣ್ಯಗಳ ಬೇಡಿಕೆ ವಿಪರೀತ ಹೆಚ್ಚಾಗಿದ್ದುದರಿಂದ ಚಾತುರ್ಥಿಕ ಮಿಶ್ರಲೋಹದ (ಕ್ವಾರ್ಟರ್ನರಿ ಅಲಾಯ್)ವನ್ನು ರೂಪಾಯಿ, ಅರ್ಧ ರೂಪಾಯಿ, ಮತ್ತು ಪಾವಲಿ ನಾಣ್ಯಗಳ ತಯಾರಿಕೆಯಲ್ಲಿ ಉಪಯೋಗಿಸಲಾಯಿತು.

(೩) **ಆಪುಟ ನಿಕ್ಕಲ್**— ೧೯೫೨ರ ಭಾರತೀಯ ನಾಣ್ಯಪದ್ಧತಿ (ತಿದ್ದುಪಡಿ) ಕಾನೂನಿನ ಪ್ರಕಾರ ಆಪುಟ ನಿಕ್ಕಲ್, ಲೋಹದ ರೂಪಾಯಿಗಳನ್ನು ಚಲಿಕೆಗೆ ತರಲಾಯಿತು.

(೪) **ತಾಮ್ರ ನಿಕ್ಕಲ್ ಮಿಶ್ರ ಲೋಹ**— ಎಂಟಾಣೆ, ನಾಲ್ಕಾಣೆ, ಎರಡಾಣೆ, ಒಂದಾಣೆ ಮತ್ತು ಅರ್ಧ ಆಣೆ ನಾಣ್ಯಗಳ ತೂಕಗಳು ಕ್ರಮಶಃ ೧೩೦ ೧೦೫, ೯೦, ೬೦, ಮತ್ತು ೪೫ ಗ್ರೈನ್‌ಗಳು

**ನಿಕ್ಕಲ್-ಹಿತ್ತಾಳೆ**- [ತಾಮ್ರ, ಸತುವು (ಜಿಂಕ್) ಮತ್ತು ನಿಕ್ಕಲ್ ಮಿಶ್ರ ಲೋಹ] ಈ ಮಿಶ್ರಲೋಹದ ನಾಣ್ಯಗಳನ್ನು ದ್ವಿತೀಯ ಪ್ರಪಂಚ ಯುದ್ಧದ ಸಮಯದಲ್ಲಿ ಅನುಷ್ಠಾನಕ್ಕೆ ತರಲಾಯಿತು. ಎರಡು ಆಣೆ, ಒಂದಾಣೆ ಮತ್ತು ಅರ್ಧ ಆಣೆ ನಾಣ್ಯಗಳ ತೂಕಗಳು ಕ್ರಮಶಃ ೯೦, ೬೦, ಮತ್ತು ೪೫ ಗ್ರೈನ್‌ಗಳು:

(೬) **ಕಂಚು**- [ತಾಮ್ರ, ಸತುವು (ಜಿಂಕ್) ಮತ್ತು ತವರ (ಟಿನ್)]- ಕಾಲಾಣೆ, ೧/೮ ಆಣೆ ಮತ್ತು ಕಾಸು ಗಳು.

ಭಾರತದ ಮೂರನೆಯ ಸ್ವಾತಂತ್ರ್ಯ ದಿನಾಚರಣೆಯ ಸಮಯದಲ್ಲಿ ೧೯೫೦ರ ಆಗಸ್ಟ್ ೧೫ರಂದು ಭಾರತೀಯ 'ನಾಣ್ಯಗಳ ದಿ ಸೈನ್' ಗಳನ್ನು ಅಮೂಲಾಗ್ರವಾಗಿ ಸುಧಾರಿಸಲಾಯಿತು. ರೂಪಾಯಿ ನಾಣ್ಯಗಳಿಂದ ಹಿಡಿದು ಕಾಲಾಣೆ ನಾಣ್ಯದ ವರೆಗೆ ಎಲ್ಲ ನಾಣ್ಯಗಳ ಮೇಲ್ಮುಖದಲ್ಲಿದ್ದ ಚಕ್ರವರ್ತಿಗಳ ಭಾವಚಿತ್ರದ ಪ್ರತಿಯಾಗಿ ಅಶೋಕ ಸ್ತಂಭದ ಪ್ರತಿರೂಪವನ್ನು ಮುದ್ರಿಸಲಾಯಿತು. ಈ ಪ್ರತಿರೂಪದ ಸುತ್ತಲೂ ಇಂಗ್ಲೀಷ್ ಭಾಷೆಯಲ್ಲಿ 'ಭಾರತ ಸರ್ಕಾರ' ಎಂಬ ಪದಗಳನ್ನು ಮುದ್ರಿಸಲಾಯಿತು. ರೂಪಾಯಿ, ಎಂಟಾಣೆ ಮತ್ತು ನಾಲ್ಕಾಣೆ ಅಪುಟ ನಿಕ್ಕಲ್ ನಾಣ್ಯಗಳ ಹಿಂಭಾಗದಲ್ಲಿ ಭಾನ್ಯದ ತೆನೆಗಳ ನಕ್ಷೆಯನ್ನೂ ಈ ನಾಣ್ಯಗಳನ್ನು ಹೊರಡಿಸುವ ವರ್ಷ, ಹಿಂದೀ (ದೇವನಾಗರಿ ಲಿಪಿಯಲ್ಲಿ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ನಾಣ್ಯದ ಮೌಲ್ಯವನ್ನೂ ಮುದ್ರಿಸಲಾಯಿತು. ಎರಡಾಣೆ, ಒಂದಾಣೆ ಮತ್ತು ಅರ್ಧ ಆಣೆ ನಾಣ್ಯಗಳಲ್ಲಿ ಅಶೋಕ ಸ್ತಂಭದ ಪ್ರತಿರೂಪದ ಕೆಳಗಡೆ ಕಾಣುವ 'ವೃಷಭ'ದ ಪ್ರತಿರೂಪವನ್ನೂ ಈ ನಾಣ್ಯಗಳನ್ನು ಹೊರಡಿಸುವ ವರ್ಷವನ್ನೂ ಇಂಗ್ಲೀಷ್ ಮತ್ತು ಹಿಂದೀ (ದೇವನಾಗರಿ ಲಿಪಿಯಲ್ಲಿ) ಭಾಷೆಗಳಲ್ಲಿ ನಾಣ್ಯದ ಮೌಲ್ಯವನ್ನೂ ಮುದ್ರಿಸಲಾಗಿದೆ. ಕಂಚಿನ ನಾಣ್ಯದ ಹಿಂಭಾಗದಲ್ಲಿ ಅಶ್ವದ ಚಿತ್ರವನ್ನೂ ನಾಣ್ಯವನ್ನು ಹೊರಡಿಸುವ ವರ್ಷವನ್ನೂ ಇಂಗ್ಲೀಷ್ ಮತ್ತು ಹಿಂದೀ (ದೇವನಾಗರಿ ಲಿಪಿಯಲ್ಲಿ) ಭಾಷೆಗಳಲ್ಲಿ ನಾಣ್ಯದ ಮೌಲ್ಯವನ್ನೂ ಮುದ್ರಿಸಲಾಗಿದೆ.

ವೃಷಭ ಹಾಗೂ ಅಶ್ವ ಚಿಹ್ನೆಗಳು ವ್ಯಾಪಿನ ಭಾರತದ ಕೆಲವು ನಾಣ್ಯಗಳಲ್ಲಿ ಕಂಡುಬಂದಿವೆ. ಈ ಪರಂಪರಾನುಗತ ವ್ಯಾಪಿ ಚಿಹ್ನೆಗಳು ಭಾರತವು ಸ್ವಾತಂತ್ರ್ಯ ಗಳಿಸಿದ ನಂತರ ಹೊರಡಿಸಿದ ಕೆಲವು ನಾಣ್ಯಗಳಲ್ಲಿ ಸ್ಥಾನಗಳಿಸಿವೆ.

೧೯೫೨ರ ಭಾರತೀಯ ನಾಣ್ಯಪದ್ಧತಿ (ತಿದ್ದುಪಡಿ) ಕಾನೂನಿಗೆ ಅನುಸಾರವಾಗಿ ಪ್ರಪ್ರಥಮವಾಗಿ ಭಾರತವಲ್ಲಿ ಇದೇ ೧೯೫೨ರ ಏಪ್ರಿಲ್ ಒಂದರಿಂದ ದಶಮಾನ ರೀತಿಯ ಹೊಸ ನಾಣ್ಯಗಳನ್ನು ಚಲಾವಣೆಗೆ ತರಲಾಗಿದೆ. ಭಾರತದ ನಾಣ್ಯ ಪದ್ಧತಿಯ ಇತಿಹಾಸದಲ್ಲಿ ಇದೊಂದು ಹೊಸ ಶಕೆ ಎನ್ನಬಹುದಾಗಿದೆ.

ಇಲ್ಲಿಯವರೆಗೆ ಒಂದು ರೂಪಾಯಿಯನ್ನು ೧೯೨ ಅಂಶಗಳನ್ನಾಗಿ ವಿಂಗಡಿಸಲಾಗುತ್ತಿತ್ತು. ಈ ಹೊಸ ಪದ್ಧತಿಯ ಪ್ರಕಾರ ಒಂದು ರೂಪಾಯಿಯು ೧೦೦ ಅಂಶಗಳನ್ನು ಮಾತ್ರ ಹೊಂದಿರುವುದು. ಒಂದು ರೂಪಾಯಿಗೆ ೧೦೦ ನಯೆ ಪೈಸೆ ಗಳಿರುವುವು.

ಈಗಿರುವ ನಾಣ್ಯಗಳ ಜೊತೆಗೆ ಹೊಸ

# ನಾಣ್ಯ ಪದ್ಧತಿಯಲ್ಲಿ ಸುಧಾರಣೆ ಏಕೆ?

ದೇಶದಲ್ಲಿ ಹೊಸ ನಾಣ್ಯಗಳನ್ನು ಚಲಾವಣೆಗೆ ತರುವ ಸಮಯದಲ್ಲಿ ಪ್ರಧಾನ ಮಂತ್ರಿ, ಶ್ರೀ. ಜವಾಹರಲಾಲ್ ನೆಹರೂರವರು ಸಂದೇಶವೊಂದನ್ನು ಇತ್ತಿರುವರು. ಸಂದೇಶದ ಪೂರ್ಣಪಾಠ ಈ ರೀತಿ ಇರುವುದು:—

"ಈ ವರ್ಷ ೧೯೫೨ರ ಏಪ್ರಿಲ್ ೧ರಿಂದ ಭಾರತದಲ್ಲಿ ಸದ್ದಿಲ್ಲದ, ಆದರೂ ಹೆಚ್ಚು ವ್ಯಾಪಕ ಕ್ರಾಂತಿಯೊಂದು ಆರಂಭವಾಗಲಿದೆ. ನಮ್ಮ ನಾಣ್ಯ ಪದ್ಧತಿಯಲ್ಲಿ ದಶಮಾನ ಹಾಗೂ ದಶನಾಂಶ (ಮೆಟ್ರಿಕ್) ಪದ್ಧತಿಯನ್ನು ಆ ಚರಣೆಗೆ ತರುವುದೇ ಈ ಕ್ರಾಂತಿಯಾಗಿರುವುದು. ಮುಂದೆ ತೂಕ ಮತ್ತು ಅಳತೆಗಳಲ್ಲಿಯೂ ಈ ಪದ್ಧತಿಯನ್ನು ಆಚರಣೆಗೆ ತರಲಾಗುವುದು. ನಮ್ಮಲ್ಲಿ ನಾವು ಈ ದಶಮಾನ ನಾಣ್ಯ ಪದ್ಧತಿಯನ್ನು ಮಾತ್ರ ಜಾರಿಗೆ ತರುತ್ತಿದ್ದೇವೆ.

ಎಲ್ಲ ವರ್ಗದ ಜನರ ನಿತ್ಯ ಜೀವನದಲ್ಲಿ ತೊಡಕನ್ನುಂಟು ಮಾಡುವಂತಹ ಈ ಬದಲಾವಣೆಯನ್ನು ಸುಸ್ಥಾಪಿತ ನಾಣ್ಯ ಪದ್ಧತಿಯಲ್ಲಿ ಏಕೆ ತರಬೇಕು? ಎಂಬುದಾಗಿ ಅನೇಕರು ಪ್ರಶ್ನಿಸಬಹುದು. ಈ ಪ್ರಶ್ನೆಯು ಸಮಂಜಸವಾಗಿದ್ದು ಪೂರ್ಣ ಉತ್ತರಕ್ಕೆ ಅರ್ಹವಾಗಿದೆ. ರಾಷ್ಟ್ರಕ್ಕೆ ಮತ್ತು ಜನತೆಗೆ ಅನುಕೂಲಕರವಾಗಿಲ್ಲದಿದ್ದಲ್ಲಿ ಇಂತಹ ಬದಲಾವಣೆಯನ್ನು ತರಬಾರದು.

ಈ ಬದಲಾವಣೆಯು ಅವಶ್ಯಕವೂ ಅಗತ್ಯವೂ ಆಗಿದೆ ಎಂಬ ವಿಚಾರ ನನಗೆ ಮನದಟ್ಟಾಗಿದೆ. ನಾಣ್ಯ ಪದ್ಧತಿಯಲ್ಲಿ ಬದಲಾವಣೆ ತರುವ ವಿಚಾರದಲ್ಲಿ ನಿಧಾನವೇನೇನಾದರೂ ಆದಲ್ಲಿ ನಮ್ಮ ಭವಿಷ್ಯವು ಪ್ರಗತಿಗೆ ಅಡಚಣೆ ಬರುತ್ತಿತ್ತು. ಎಂದಾದರೊಂದು ಕಾಲದಲ್ಲಿ ಈ ಬದಲಾವಣೆಯು ಅನಿವಾರ್ಯವಾಗುವುದೆಂಬ ವಿಚಾರದಲ್ಲಿ ನನಗೆ ಸಂದೇಹವೇ ಇಲ್ಲ. ಬದಲಾವಣೆಯನ್ನು ತಡವಾಗಿ ತಂದಿದ್ದಲ್ಲಿ ನಮಗೆ ಕಷ್ಟಕರವಾಗುತ್ತಿತ್ತು.

ಹಿಂದಿನದೆಲ್ಲವೂ ಕೆಟ್ಟದೆಂದು ಹೇಳುವಂತಿಲ್ಲ. ಅದೇ ರೀತಿ ಹೊಸದೆಲ್ಲವನ್ನೂ ಒಳ್ಳೆಯದೆಂದೂ ಹೇಳುವಂತಿಲ್ಲ. ಆದರೆ ಬದಲಾಯಿಸುತ್ತಿರುವ ಈ ಪಂಚದಲ್ಲಿ ಹಿಂದೆ ಒಳ್ಳೆಯದೆಂದು ಸಾರಲ್ಪಟ್ಟದ್ದು ಪ್ರಸ್ತುತ ಸ್ಥಿತಿಗತಿಗಳಿಗೆ ಸರಿ ಹೋಗದೇ ಇರಬಹುದು. ಆದ್ದರಿಂದ ನಾವು ಬದಲಾಯಿಸುತ್ತಿರುವ ಈ ಜಗತ್ತಿಗೆ ಅರಿಹೊಂದಿಸಿಕೊಳ್ಳಬೇಕು. ಇಂದಿನ ಜಗತ್ತು ವಿಜ್ಞಾನ, ಯಂತ್ರಕಲಾ ವಿಜ್ಞಾನ, ಮತ್ತು ಕೈಗಾರಿಕೆಗಳ ಅಸಂಖ್ಯಾತ ದೃಷ್ಟಿಕೋನಗಳಿಗೆ ಸಂಬಂಧಿಸಿದೆ. ಹೊಡಕನ ನಾಣ್ಯ ಇಂಗೂ ಅಳತೆ ತೂಕ ಪದ್ಧತಿಗಳಿಂದ ಕಾಲಹರಣವಾಗುತ್ತದೆ. ಆಲ್ಪದೆ ಕೆಲಸವೂ ವಿಳಂಬವಾಗುವುದು. ನಮ್ಮ ಸಾಮಾಜಿಕ ಜೀವನವು ಹೆಚ್ಚು ಹೆಚ್ಚಾಗಿ ಮುಂದುವರಿದಂತೆ ಈ ಚಿಕ್ಕ ಪುಟ್ಟ ವಿಳಂಬ ಮತ್ತು ವ್ಯರ್ಥ ಬೃಹದಾಕಾರವಾಗಿ ಪರಿಣಮಿಸುವುವು. ಆದ್ದರಿಂದ ಈ ಪರಿವರ್ತನೆಯನ್ನು ಮುಂದೆ ತರುವುದಕ್ಕಿಂತ ಈಗಲೇ ತರುವುದು ಅವಶ್ಯಕವಾಗಿ ಪರಿಣಮಿಸುವುದು.

ನಾವು ಅನುಷ್ಠಾನಕ್ಕೆ ತರುವ ದಶಮಾನ ಹಾಗೂ ದಶನಾಂಶ ಪದ್ಧತಿಯು ಭಾರತಕ್ಕೆ ಹೊಸದೇನೂ ಅಲ್ಲವೆಂಬುದು ನನ್ನನೇವೈ ವಿಚಾರವಾಗಿದೆ ಎಂದು ನಾನು ಭಾವಿಸುತ್ತೇವೆ. ಭಾರತೀಯ ಪ್ರತಿಭಾನ್ವಿತರ ಕಲ್ಪನೆಯಾದ ಈ ಪದ್ಧತಿಯನ್ನು ನಾವೇ ಪುನಃ ಅನುಸರಿಸುತ್ತಿದ್ದೇನೆ ಅಷ್ಟೆ. ಭಾರತವು ಬಹುಕಾಲದ ಹಿಂದೆಯೇ ಜಗತ್ತಿಗೆ ಶೂನ್ಯ (ಜೀರೋ) ಮತ್ತು ಅಂಕೆಗಳ ಉಪಯೋಗದ ಬಗೆಗೆ ತಿಳಿವಳಿಕೆಯನ್ನು ನೀಡಿತು. ಭಾರತೀಯ ಪ್ರತಿಭೆಯ ದ್ವಾರವೇ ದಶಮಾಂಶ (ಮೆಟ್ರಿಕ್) ಪದ್ಧತಿಯು ಬೆಳಕು ಕಂಡಿತು. ಆ

(೨ನೇ ಪುಟ ನೋಡಿರಿ)

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ
ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?
ಮನೆ-ಮದ್ದು
HOME REMEDIES
ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ.ಎಮ್
ಸುಕ್ಕುಗಳು, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.
ಬೆಲೆ. ರೂ. ೨—೦—೦ (ಟಪಾ ಖರ್ಚು ಬೇರೆ).
ನವಭಾರತ ಪುಸ್ತಕ ಭಂಡಾರ, ಉಡುಪಿ.

**NAVAYUGA**
Popular Kannada Weekly
*Founder:—*
**A. B. SHETTY,** *M. L. A.*
Former Minister for Public Health, Govt. of Madras.
*At Present Minister for Health*
Govt of Mysore

# ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

| ಸಂಪುಟ | ಉಡುಪಿ | ಸಂಚಿಕೆ |
|---|---|---|
| ೩೬ | ೪-೪-೧೯೬೭ | ೩೦ |

## ಕಾಂಗ್ರೆಸಿನ ಶುದ್ಧೀಕರಣ

ದೊರದ ರಾಜಧಾನಿ ಹೊಸದೆಹಲಿಯಲ್ಲಿ ಈ ವಾರ ಕಾಂಗ್ರೆಸಿನ ಪರಿಷತ್ತರು ಚುನಾವಣೆಗಳಲ್ಲಿ ಕಾಂಗ್ರೆಸಿನ ಬಗ್ಗೆ ಜನತೆಯು ದೇಶಾದ್ಯಂತ ವ್ಯಕ್ತಪಡಿಸಿದ ಅಭಿಪ್ರಾಯದ ಮೇಲೆ ವಿಚಾರ ವಿನಿಮಯವನ್ನು ನಡೆಸಿದರೆಂದು ತಿಳಿದುಬರುತ್ತದೆ. ಸಂಸತ್ಸದಸ್ಯರೂ ಪ್ರದೇಶ ಕಾಂಗ್ರೆಸಿನ ಅಧ್ಯಕ್ಷರೂ ಇತರ ಧುರೀಣರೂ ಭಾಗವಹಿಸಿದ್ದ ಈ ಸಭೆಯಲ್ಲಿ ಕಾಂಗ್ರೆಸಿನ ಲೋಪದೋಷಗಳ ಬಗ್ಗೆ ಕಟುವಾದ ಟೀಕೆ ನಡೆಯಿತೆಂದು ಸುದ್ದಿಗಳು ತಿಳಿಸುತ್ತವೆ. ಕಾಂಗ್ರೆಸು ಕಳೆದ ಹತ್ತು ವರ್ಷಗಳಲ್ಲಿ ಸರಕಾರಿ ಸ್ಥಾನದಲ್ಲಿದ್ದುಕೊಂಡು ನಿರ್ವಹಿಸಿದ ಪಾತ್ರದ ಪರಿಣಾಮಕಾರಿತ್ವವು ಜನತೆಯ ಪ್ರೀತಿಯನ್ನು ಸಂಪಾದಿಸುವ ರೀತಿಯಲ್ಲಿರದೆ, ಅಪ್ರೀತಿಯನ್ನೆ ಹೆಚ್ಚಿಸಿದ ಬಗೆಯಲ್ಲಿದ್ದುದೇಕೆಂದು ಎಲ್ಲರೂ ವಿಮರ್ಶಿಸಿದರಂತೆ ಹೇಳಲ್ಪಟ್ಟಿದೆ. ಹೊರ ದೇಶಗಳಿಂದ ಬಂದನರು ಭಾರತದ ಮೂಲೆ ಮೂಲೆಯಲ್ಲೂ ನಡೆದಿರುವ ಅಭಿವೃದ್ಧಿ ಪ್ರಯತ್ನಗಳ ಅದ್ಭುತ ಪ್ರಗತಿಯನ್ನು ಕಂಡು ಮೆಚ್ಚಿಕೆಯನ್ನು ವ್ಯಕ್ತಪಡಿಸಿರುವುದು ನಿಜ: ಆದರೆ ಅದು ಹೊರಗಿನವರ ವಿನಯ ಪ್ರದರ್ಶನ ಮಾತ್ರವೇಹೊರತು ತಿರುಳುಳ್ಳ ಅಭಿಪ್ರಾಯವಲ್ಲವೆಂದೇ ಭಾರತೀಯರು ತಿಳಿದುಕೊಂಡಿದೆ ಎಂದು ಕಾಂಗ್ರೆಸು ಸದಸ್ಯರು ನುಡಿದರೆಂದು ನಂಬಲಾರ್ಹ ವೃತ್ತಗಳಿಂದ ತಿಳಿಯುತ್ತೇವೆ ಭಾರತೀಯರ ಕಣ್ಣು ಈ ಅಭಿವೃದ್ಧಿ ಪ್ರಯತ್ನಗಳ ಫಲ ಮತ್ತೊಬ್ಬರಿಗಿಂತ ಅಗುವ ಲಾಭದ ಕಡೆಗೆ ಬಿದ್ದಿಲ್ಲ-ಅಭಿವೃದ್ಧಿ ಯೋಜನೆಯ ಕಾರ್ಯಾಚರಣೆಯಲ್ಲಿ ಆಗುತ್ತಿರುವ ಅನಿವಾರ್ಯ ವಿಳಂಬ, ಅಲ್ಲಿ ನಡೆಯುತ್ತಿರುವ ಅನಾವ್ಯಯ ಇತ್ಯಾದಿ ಹುಳುಕುಗಳ ಮೇಲೆಯೇ ಹರಿಯುತ್ತದೆ ಎಂಬ ಮಾತು ವರಿಷ್ಠರ ಬಾಯಿಯಿಂದಲೂ ಬಂತೆಂದು ಕೇಳಿದ್ದೇನೆ. ಜನರ ಅಸಮಾಧಾನವನ್ನು ತೀವ್ರ ಗೊಳಿಸಲಿಕ್ಕೆ ಪ್ರತಿಪಕ್ಷಗಳು ಯಾವ ಪ್ರಸಂಗವನ್ನು ವ್ಯರ್ಥ ಹೋಗ ಗೊಳಿಸದಿರುವಾಗ ಸ್ವತಃ ಕಾಂಗ್ರೆಸು ಪಕ್ಷವು ಜನತೆಯ ದೃಷ್ಟಿಯಲ್ಲಿ ಸಂಭಾವನೀಯವಾಗಿರುವ ಮಾರ್ಗವನ್ನು ಬಿಟ್ಟು ಕೂಟ ನೀತಿಯಲ್ಲಿ ಆಸಕ್ತವಾಗಿ ಒಳ ಜಗಳದಲ್ಲಿ ಮೈಮರೆತಿರುವುದಕ್ಕೆ ಅನೇಕರು ವಿಷಾದವನ್ನು ವ್ಯಕ್ತಪಡಿಸಿದರು. ಪ್ರಧಾನ ಮಂತ್ರಿ ಶ್ರೀ. ನೆಹರೂರವರು ಕಾಂಗ್ರೆಸಿಗರ ವರ್ತನೆಯ ಕಟು ವಿಮರ್ಶಕರಾಗಿದ್ದರೆಂದು ವರದಿಗಳಿಂದ ಊಹಿಸಲಹುದು. ಜನತೆಯ ಸಂಪರ್ಕವನ್ನು ಕಾಂಗ್ರೆಸಿಗರು ಕಳೆದುಕೊಂಡು ದೊಡ್ಡ ಕಪ್ಪನ್ನೆಸಗಿದ್ದಾರೆಂದು ಅವರು ಒತ್ತಿ ಒತ್ತಿ ಹೇಳಿದರು. ೧೯೬೨, ಅಥವಾ ೧೯೬೦ನೇ ವರ್ಷಗಳಲ್ಲಿ ಕಾಂಗ್ರೆಸಿನ ಸದಸ್ಯ ಸಂಖ್ಯೆಯು ಈಗಿಗಿಂತ ಎಷ್ಟೋ ಕಡಿಮೆಯಾಗಿದ್ದರೂ ಅದೊಂದು ಜೀವಂತ ಸಂಸ್ಥೆಯಾಗಿ ಮಹತ್ವದ ಪಾತ್ರವನ್ನು ಜನಜೀವದಲ್ಲಿ ಪ್ರತಿನಿತ್ಯ ವಹಿಸುತ್ತಿದ್ದಿತು. ಇಂದು ಸದಸ್ಯರ ಸಂಖ್ಯೆಯೇನೊ ಹಿಂದಿಗಿಂತ ಹೆಚ್ಚಾಗಿದೆ—ಆದರೆ ರಚನಾತ್ಮಕ ಕ್ಷೇತ್ರದಲ್ಲಿ ಕಾಂಗ್ರೆಸಿನ ಚಟುವಟಿಕೆಯು ಅದರ ಇಮ್ಮಡಿಯಷ್ಟು ಕಡಿಮೆಯಾಗಿದೆ. ಕಾಂಗ್ರೆಸು ಪಕ್ಷವು ಸಂಸ್ಥೆಯಲ್ಲಿ ಶಿಸ್ತನ್ನೂ ಸಮರ್ಥತೆಯನ್ನೂ ವಿಧಾಯಕ ಕಾರ್ಯಾಚರಣೆಯನ್ನೂ ನೆಲೆಗೊಳಿಸಲು ತಪ್ಪಿ, ಸರಕಾರಿ ಅಡಳಿತದ ಬಗ್ಗೆ ಬರಬಹುದಾದ ಹೊಗಳಿಕೆಯಲ್ಲಿಯೇ ಸಹಭಾಗಿಯಾಗುವ ದೊಡ್ಡ ತಪ್ಪನ್ನು ಮಾಡಿದೆ. ಸರಕಾರವಲ್ಲ-ಪಕ್ಷವು ಏನು ಮಾಡಿದೆ ಎಂಬ ಪ್ರಶ್ನೆ ಬಂದಾಗ ತೋರಿಕಲಿಕ್ಕೆ ಇಂದು ಏನೂ ಉಳಿದಿಲ್ಲವೆಂಬಂತೆ ಕಾಂಗ್ರೆಸಿಗರ ವರ್ತನೆ ಇದೆ. ಸರಕಾರಿ ಪಕ್ಷ ವೆಂಬ ನೆಲೆಯಿಂದ ಕಾಂಗ್ರೆಸು ಸರಕಾರದ ಧೋರಣೆಗಳ ಮೇಲೆ ತನ್ನ ಪ್ರಭಾವವನ್ನು ಬೀರುವುದೇನೋ ನಿಜ. ಆದರೆ ಸಾಮಾನ್ಯ ಜನರು ಸರಕಾರವೇ ಬೇರೆ, ಪಕ್ಷವೇ ಬೇರೆ ಎಂಬಂತಹ ದ್ವೈತ ಮನೋಭಾವವನ್ನು ಹೊಂದಿರುವ ವರೆಗೆ, ಪಕ್ಷದ ಚಟುವಟಿಕೆಯು ತೃಪ್ತಿಕರವಾಗಿ ಎಂಬ ಅಭಿಪ್ರಾಯಕ್ಕೆ ಎಂದೂ ಬರುವಂತಿಲ್ಲ. ಜನರ ಅಭಿಪ್ರಾಯವನ್ನು ಪರಿಣಾಮಕಾರಿಯಾಗಿ ತಿದ್ದುವ ಪ್ರಯತ್ನ ಸಹ ನಡೆಯದಿರುವುದನ್ನು ನ್ಯಾಯೋಚಿತವಾದ ವಿಚಾರ. ಕಾಂಗ್ರೆಸಿಗರಿಂದ ಚರಖ ಮತ್ತು ತಕಲಿ ತೆಗೆದುಕೊಂಡು ನೂಲುವ, ನೇಂದಿ ಕಯಾರಕರಮನೆಯ ಮುಂದೆ ಸತ್ಯಾಗ್ರಹ ಮಾಡುವ ಕೆಲಸವಾಗದಿದ್ದರೂ ಚಿಂತೆಯಿಲ್ಲ- ಕಾಂಗ್ರೆಸಿನ ಸರಕಾರಿ ವಿಭಾಗ ಕೂಡಾ ಏನೇನೂ ಜೆನ್ನಾಗಿ ಕೆಲಸ ನಡೆಸುತ್ತಿಲ್ಲವೆಂಬ ಆಪಾದನೆಯ ನಿವಾರಣೆಗೆ ತಕ್ಕ ಪ್ರಚಾರ ಕಾರ್ಯವನ್ನಾದರೂ ಮಾಡಬಹುದಲ್ಲ! ಈಗ ಅದೂ ನಡೆಯುತ್ತಿಲ್ಲ! ಇಂಥ ಪ್ರಚಾರವು ಅಗತ್ಯವಾಗಿ ನಡೆಯಬೇಕಾಗಿದೆ—ಇಲ್ಲದಿದ್ದರೆ ಕಾಂಗ್ರೆಸಿನ ಮೇಲೆ ಯಾವ ಜನರಲ್ಲೂ ನಿರಭಿಪ್ರಾಯವು ಕೊನೆಯನಕಿಗೆ ಉಳಿಯಲಾರದು. ತಮ್ಮ ಸ್ವಾರ್ಥಕ್ಕಾಗಿಯೋ, ಅಧಿಕಾರ ಲಾಲಸೆಯಿಂದಲೋ ಜಾತಿ ಮತ್ತಿತರ ವೈಯಕ್ತಿಕ ಪ್ರೀತಿ ಭಾವದಿಂದಲೋ ಚುನಾವಣೆಯಿಂದ ಚುನಾವಣೆಗೆ ನಿಂತ ಅಭ್ಯರ್ಥಿಗಳನ್ನು ಅನುಸರಿಸಿ ಪಕ್ಷವನ್ನು ಬದಲಾಯಿಸಿಕೊಳ್ಳುತ್ತಿರುವ ಗುಂಪೊಂದು ನಮ್ಮಲ್ಲಿರುವುದು ನಿಜ. ಅಂಥವರನ್ನು ಅವರ ಪಾಡಿಗೆ ಬಿಡೋಣ! (ದೇವರು ಅವರ ಮೇಲೆ ದಯೆ ಇಡಲಿ!) ಆದರೆ ಉಳಿದವರಲ್ಲಿ ಕಾಂಗ್ರೆಸಿನ ಮೇಲೆ ತೀವ್ರ ಜಿಗುಪ್ಸೆಪಟ್ಟುಕೊಂಡು ಇತರ ಪಕ್ಷಗಳ ಮೇಲಿನ ಪ್ರೀತಿಯನ್ನು ಹುಟ್ಟಿಸಿಕೊಂಡವರು ಹೆಚ್ಚಾಗಿದ್ದಾರೆ.ಅವರವರ ಅಸಮಾಧಾನದ ಕಾರಣ ತಿಳಿದು, ತಕ್ಕ ಪರಿಹಾರ ಮಾರ್ಗಗಳನ್ನು ಕೈಗೊಳ್ಳುವುದು "ನಿಷ್ಠಾವಂತ" ಕಾಂಗ್ರೆಸಿಗರ ಆದ್ಯ ಕರ್ತವ್ಯ ಈ ಕೆಲಸವನ್ನು ದೆಹಲಿಯಿಂದ ಆಗೊಮ್ಮೆ ಈಗೊಮ್ಮೆ ಬರುವ ಪ್ರಧಾನ ನೆಹರು ಮಾಡಲಾರರು; ಸತತ ಜೋಧನೆ, ನಿರಂತರ [illegible]ಸಂಪರ್ಕದಂತಹ [illegible]ಮಾರ್ಗದಿಂದ ಮಾತ್ರವೇ ವ್ಯಕ್ತಿಯ ಮನಸ್ಸನ್ನು ತಿದ್ದಬಹುದು. ಕಾಂಗ್ರೆಸು ಪಕ್ಷದ ರಚನಾತ್ಮಕ ರಂಗಪಲ್ಲಿ ಇಂಥ ಶಿಕ್ಷಣಕ್ಕೆ ಉಚ್ಚ ಸ್ಥಾನವನ್ನು ಕೊಡಬೇಕಲ್ಲದೆ ತಕ್ಕ ಸಿಬ್ಬಂದಿಗಳನ್ನು ಇದಕ್ಕಾಗಿ ನೇಮಿಸುವುದಕ್ಕು ಹಿಂಜರಿಯಬಾರದು. ಆದರೆ ಒಂದು ಮಾತು: ಇದೇ ಇಂದಿನ ಸಮಸ್ಯೆಯ ಏಕಮೇವ ದಿವ್ಯೌಷಧವೆನಿಸಲಾರದು. ಏಕೆಂದರ ಇಂದಿನ ಅಸಮಾಧಾನ ಮತ್ತು ಜುಗುಪ್ಸೆಯ ಮೂಲದಲ್ಲಿ ಕಾಂಗ್ರೆಸು ಅಧಿಕಾರಕ್ಕೆ ಬರುವ ಮೊದಲು ನೀಡಿದ ವಾಗ್ದಾನಗಳಿಂತೆ ನಡೆಯುತ್ತಿಲ್ಲ ಎಂಬ ಮನೋಭಾವವೇ ಕುದುಗಿದೆ. ಇದನ್ನು ಪ್ರಚಾರ ವೈಖರಿಯಲ್ಲಿ ಸಂಪೂರ್ಣ ಮರೆಯಾಗಿಡಲು ಸಾಧ್ಯವಿಲ್ಲ. ನೆಹರೂ ಹೇಳಿದಂತೆ ರಾಜ್ಯ ಸರಕಾರದ ಮಟ್ಟದಲ್ಲಿ ಕಾಂಗ್ರೆಸು ಪಕ್ಷವು ತನ್ನ ಧ್ಯೇಯ ಧೋರಣೆಗಳನ್ನು ಕಾರ್ಯಗತಗೊಳಿಸುವ ಮಟ್ಟಿಗೆ ವಿಷಾದನೀಯವೆನಿಸುವಷ್ಟು ಸೆಲುನಡೆಯಿಂದ ನಡೆದುಕೊಂಡಿರುವುದೇ ಜನರಲ್ಲಿ ಅಸಂತೃಪ್ತಿ ಹುಟ್ಟಿಕೊಂಡಿರುವುದರ ಒಳಗುಟ್ಟು. ಈ ವಿಳಂಬ ಎತ್ತಿಂದತ್ತಾಯಿತು, ಅದೇಕೆ ಅನಿವಾರ್ಯವಾಯಿತು ಎಂದೇನೋ ಕಾಂಗ್ರೆಸಿನ ಅಭಿಮಾನಿಗಳು ತಕ್ಕ ಸಬೂಬನ್ನಿತ್ತು ಪ್ರಚಾರ ಮಾಡಬಹುದು (ಹಾಗೆ ಮಾಡಲು ಬೇಕು ಎಂದೇ ನನ್ನ ಅಭಿಪ್ರಾಯ). ಅಷ್ಟರಿಂದಲೇ ಸಮಸ್ಯೆಗೆ ಶಾಶ್ವತ ಪರಿಹಾರವನ್ನು ಯೋಚಿಸಿದ ಹಾಗಾಗಲಿಲ್ಲ ಎಂಬುದನ್ನು ಸರಕಾರಿ ರಂಗದಲ್ಲಿ ದುಡಿಯುವ ಕಾಂಗ್ರೆಸಿಗರು ಮರೆಯಬಾರದು. ಉದಾಹರಣೆಗೆ ಭೂ ಸುಧಾರಣೆ ಎಂಬ ಒಂದು ವಿಷಯವನ್ನು ತೆಗೆದು ಕೊಂಡರೆ—ನಮಗೆ "ಶೂನ್ಯ"ವೇ ಗೋಚರಿಸುವುದಲ್ಲದೆ ಬೇರೆಯಲ್ಲ; ಸಮಿತಿಯ ಮೇಲೆ ಸಮಿತಿಗಳ ನೇಮಕವಾಗಿ ಇಂದು ಬರುತ್ತದೆ, ನಾಳೆ ಬರಲಿದೆ ಎಂಬಂತಹ ಮಾತುಗಳಿಂದಲೇ ಹತ್ತು ವರ್ಷಗಳನ್ನು ದೂಡಿಸಿದ ಕಾಂಗ್ರೆಸು ಸರಕಾರ ಕರ್ತವ್ಯ ಮೂಢವಾನಿದೆ ಎಂದೇ ಕೃಷಿಕ ವರ್ಗ ಭಾವಿಸಿತು; ಮತ್ತು ಈ ಭಾವನೆಯು ದುರುಪಯೋಗವನ್ನು ಪಡೆದುಕೊಂಡು ಪ್ರತಿಪಕ್ಷಗಳು ಬೆಳೆದವು. ಇದೇ ರೀತಿ ಅಡಳಿತದ ತಗಾವಣೆಗಳೂ ಜನರನ್ನು ಅಸಂತುಷ್ಟರನ್ನಾಗಿ ಮಾಡಿರುತ್ತವೆ. ಹಳ್ಳಿಯ ಪಶೇಲ, ಶಾನೆ-ಭೋಗರಂದಿ ಹಿಡಿದು ತಾಲೂಕು ಕಛೇರಿ, ಕಲೆಕ್ಟರರ ಕಚೇರಿಯವರೆಗೆ ಜನಸಾಧಾರಣರೊಡನೆ ವ್ಯವಹರಿಸುವಾಗ ಬ್ರಿಟಿಷರ ಕಾಲದಲ್ಲಿದ್ದ ದರ್ಪದ ವರ್ತನೆಯೇ ನಡೆದಿದೆಯಲ್ಲದೆ, ಅದರ ಸ್ವರೂಪದಲ್ಲಿ ಸುಧಾರಣೆಯಾಯಿದಿಲ್ಲ. ಬಡ ಜನರನ್ನು ಸತಾನುಭೂತಿಯಿಂದ ಕಾಣುವ ಬುದ್ಧಿ ಬೆಳೆದಿಲ್ಲ. ಇನ್ನು ನಮ್ಮ ಮಂತ್ರಿಗಳ ಅಟ್ಟಹಾಸ ಮತ್ತು ಉತ್ಸವ ವೈಭವಗಳು ಇವರು ನಮ್ಮವರಲ್ಲ ಎಂಬ ಪ್ರತಿಕೂಲ ಭಾವನೆಯನ್ನೆ ಜನರಲ್ಲಿ ಪುಷ್ಟೀಕರಿಸುವಂತಿವೆ. ಕೇರಳದಲ್ಲಿ ಅಧಿಕಾರಕ್ಕೆ ಬರಲಿರುವ ಕಮ್ಯುನಿಸ್ಟ ಮಂತ್ರಿಗಳ ತಿಂಗಳಿಗೆ ಕೇವಲ ೩೫೦ ರೂಪಾಯಿಗಳ ಸಂಬಳವನ್ನು ಮಾತ್ರ ತೆಗೆದುಕೊಳ್ಳುತ್ತಾರಂತೆ: ಎಂಟೊಂಬತ್ತು ಮಂತ್ರಿಗಳು ಈ ರೀತಿ ಕಡಿಮೆ ಸಂಬಳವನ್ನು ತೆಗೆದು ಕೊಂಡುದರಲ್ಲಿ ಸರಕಾರಕ್ಕೇನು ಕೋಟ್ಯಂತರ ರೂಪಾಯಿಗಳ ಅಭಿವೃದ್ಧಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ಕೈಗೊಡಿಸಿಕೊಟ್ಟರೂ ಅದಕ್ಕೆ ಸಿಗದು. ಜನರ ಒಳ್ಳೆಯದಕ್ಕಾಗಿ ಮದ್ಯಪಾನ ನಿಷೇಧ ಶಾಸನವನ್ನು ಅತ್ಯಂತ ಕ್ಷಿಪ್ರವಧಿಯಲ್ಲಿ ತರಲು ಹಿಂದೆ ಮುಂದೆ ನೋಡದ ಸರಕಾರವು ಜನರ ಜೀವನಾಡಿಯಾದ ಭೂಸುಧಾರಣೆಯಂತಹ ಪ್ರಶ್ನೆಯಲ್ಲಿ ಇಷ್ಟು ಉತ್ಸಾಹವನ್ನೇನೂ ತೋರಿಸದೆ ಕಾಲವಿಳಂಬನದಲ್ಲೆ ಮಗ್ನವಾಗಿರುವುದು — ಆಶ್ಚರ್ಯವೆಂದರೆ ಅತಿಶಯೋಕ್ತಿಯಲ್ಲ. ಯಾವ ವಿಷಯ ಮೊದಲು ಮಾಡಬೇಕು, ಯಾವದು ಬಳಿಕ ಮಾಡಿದರೂ ನಡೆದೀತು, ಯಾವುದರಿಂದ ಜನತೆಗೆ ಸಂತೃಪ್ತಿಯ ಮೇಲೆ ಪ್ರೀ

ಕೇರಳಾಯಂತ್ರಣ ವಿಷಯವಲ್ಲಿ ಹೆಚ್ಚಿನ ಜ್ಞಾನಸಂಪಾದನೆಗಾಗಿ ಅಮೇರಿಕೆಗೆ ಹೋಗಿರುವ ಭಾರತದ ಶ್ರೀ ಕೆ. ವಿ. ಕೃಷ್ಣ ಸೂರ್ತಿಯವರು ಅಮೇರಿಕದ ಅಧಿಕಾರಿಗಳೊಡನೆ ಸಮಾಲೋಚಿಸುತ್ತಿರುವ ದೃಶ್ಯ.

# ರಾಷ್ಟ್ರಕ್ಕೆ ಮರಳಿ ನೆಹರು ಧುರೀಣತ್ವ

## ಕೇರಳದಲ್ಲಿ ಕಮ್ಯುನಿಸ್ಟರ ಸರಕಾರ

ಸಂಕಷ್ಟಿನ ಕಾಂಗ್ರೆಸು ಸದಸ್ಯರು ಈಗ ಪ್ರಧಾನಿಯಾಗಿ, ಮರಳಿ ಲೋಕ ಸಭೆಗೆ ಪ್ರಚಂಡ ಬಹುಮತದಿಂದ ಆರಿಸಿ ಬಂದಿರುವ ಶ್ರೀ ಜವಾಹರಲಾಲ ನೆಹರುರವರಿ ಮುಂದೆಯೂ ಲೋಕಸಭೆಯು ಕಾಂಗ್ರೆಸು ಪಕ್ಷದ ಧುರೀಣನಾಗಿರಬೇಕೆಂದು ಸರ್ವಾನುಮತದ ನಿರ್ಧಾರಕ್ಕೆ ಬಂದಿದ್ದಾರೆ. ಹೀಗೆ ಪದೇ ಪದೇ ಒಬ್ಬ ವ್ಯಕ್ತಿಯನ್ನೆ ಈ ಜವಾಬ್ದಾರ ಹುದ್ದೆಗೆ ಆರಿಸುವ ಅಭ್ಯಾಸವನ್ನು ನೆಹರು ಟೀಕಿಸಿದರೂ ರಾಷ್ಟ್ರದ ಈಗಿನ ಸ್ಥಿತಿಯಲ್ಲಿ ಅವರ್ಷದೆ (ಅದೂ ಅವರು ನಮ್ಮ ನಡುವೆ ಇದ್ದಾರೆಂದ ಮೇಲೆ) ಬೇರೆ ಯಾರ ಕೈಗೆ ರಾಜ್ಯ ಸೂತ್ರವನ್ನು ಒಪ್ಪಿಸಿಕೊಡುವುದೂ ಚೀದವಲ್ಲ ಎಂದು ಕಾಂಗ್ರೆಸು ಭಾವಿಸಿರುವುದರಿಂದ ನೆಹರು ಈ ಹೊಸ ಹುದ್ದೆಯನ್ನು ಒಪ್ಪಿಕೊಂಡಿದ್ದಾರೆ.

ರಾಷ್ಟ್ರಾಧ್ಯಕ್ಷ ಸ್ಥಾನಕ್ಕೆ ಡಾ. ರಾಜೇಂದ್ರ ಪ್ರಸಾದರನ್ನೆ ಪುನಃ ನಿಲ್ಲಿಸಲು ಕಾಂಗ್ರೆಸು ನಿರ್ಧರಿಸಿದೆ; ಆದರೆ ಹಿಂದು ಮಹಾಸಭೆಯ ಧುರೀಣ ಶ್ರೀ ಖರೆಯವರು ರಾಷ್ಟ್ರಾಧ್ಯಕ್ಷ ಸ್ಥಾನಕ್ಕೆ ಬಹುಮತವುಳ್ಳ ಪಕ್ಷದ ಕೈಗೊಂಬೆಯಾಗುವುದು ತಪ್ಪಬೇಕಾದರೆ ಆ ಪಕ್ಷದವನಾಗಿರದೆ ಸ್ವತಂತ್ರನಾಗಿರುವುದೇ ವಿಹಿತವೆಂದು ಹೇಳಿ, ತಾನು ರಾಷ್ಟ್ರಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವುದಾಗಿ ತಿಳಿಸಿದ್ದಾರೆ. ಕಮ್ಯೂನಿಸ್ಟರ ನಾಯಕ ಶ್ರೀ ಅಜಯಘೋಷರು ತಮ್ಮ ಪಕ್ಷದ ಪರವಾಗಿ ಯಾರನ್ನೂ ರಾಷ್ಟ್ರಾಧ್ಯಕ್ಷ ಸ್ಥಾನದ ಸ್ಪರ್ಧೆಗೆ ನಿಲ್ಲಿಸುವುದಿಲ್ಲವಾದರೂ ಬಹುಮತವುಳ್ಳ (ಕಾಂಗ್ರೆಸು) ಪಕ್ಷವು ರಾಷ್ಟ್ರಾಧ್ಯಕ್ಷರ ಆಯ್ಕೆಯಲ್ಲಿ ಸ್ಪರ್ಧೆಯನ್ನು ತಪ್ಪಿಸುವುದಕ್ಕಾಗಿ ಇತರ ಪಕ್ಷಗಳೊಡನೆ ಸಮಾಲೋಚನೆ ನಡೆಸಿ ನಿರ್ಣಯವೊಂದಕ್ಕೆ ಬರುವುದನ್ನೂ ಅಸೇಕ್ಷಣೀಯವೆಂದಿದ್ದಾರೆ.

ಕೇರಳದಲ್ಲಿ ಕಮ್ಯುನಿಸ್ಟರ ಸರಕಾರವು ಇದೇ ಏಪ್ರಿಲ್ ೯ನೇ ದಿನಾಂಕ ಅಧಿಕಾರಕ್ಕೆ ಬರಲಿದೆ. ಸುಮಾರು ೯ ಮಂದಿ ಮಂತ್ರಿಗಳ ರಚನೆಯಾದೆಂದು ಹೇಳಲಾಗಿದೆ. ಅಲ್ಲಿ ಕಮ್ಯುನಿಸ್ಟರು ವರ್ಚಸ್ಸನ್ನು ಹೆಚ್ಚಿಸಿಕೊಂಡಿರುವುದರಿಂದ ಭಾರತದಲ್ಲಿ ಕಮ್ಯುನಿಸಂ ಜನಪ್ರಿಯವಾಗುತ್ತಿದೆ ಎಂದು ಭಾವಿಸುವುದು ಸರಿಯಲ್ಲವೆಂದು ನೆಹರು ಹೇಳಿದ್ದಾರೆ. ಸ್ಥಳೀಯ ಸಮಸ್ಯೆಗಳು ಕೇರಳದಲ್ಲಿ ಕಮ್ಯುನಿಸ್ಟರನ್ನು ಅಧಿಕಾರಕ್ಕೆ ಏರಿಸಿದುವು; ಸ್ಥಳೀಯ ಸಮಸ್ಯೆಗಳ ನಿವಾರಣೆಯಲ್ಲಿ ಕಾಂಗ್ರೆಸು ಯಶಸ್ಸನ್ನು ಪಡೆಯದೆ ಹೋಯಿತು ಎಂಬುದು ಸ್ಪಷ್ಟ. ಆದರೆ ಈ ಸ್ಥಳೀಯ ಸಮಸ್ಯೆಗಳ ನಿವಾರಣೆಯು ಕಮ್ಯುನಿಸ್ಟರಿಂದ ಎಸ್ಟರ ಮಟ್ಟಿಗೆ ಸಾಧ್ಯವೋ ನನಗೆ ತಿಳಿಯದು. ಕೇಂದ್ರ ಸರಕಾರವು ಕೇರಳದೊಡನೆ ಭಿನ್ನಭಾವದಿಂದ ವರ್ತಿಸುವುದಿಲ್ಲವೆಂಬ ಆಶ್ವಾಸನೆಯನ್ನೆ ಪ್ರಧಾನಿಯವರೂ ಕೊಟ್ಟಿದ್ದರೂ, ಕಮ್ಯುನಿಸ್ಟರು ತಮ್ಮ ಕುಂದುಕೊರತೆಗಳಿಗೂ ಲೋಪದೋಷಗಳಿಗೂ ಕೇಂದ್ರ ಸರಕಾರವನ್ನೂ ಕಾಂಗ್ರೆಸು ಪಕ್ಷವನ್ನೂ ಹೊಣೆಗಾರರನ್ನಾಗಿ ಮಾಡದೆ ಉಳಿಯದೆಂದು ನಂಬುವುದು ಕಷ್ಟ.

ಒರಿಸ್ಸದಲ್ಲಿ ಕಾಂಗ್ರೆಸಿನ ನಾಯಕ ಶ್ರೀ ಹರೆಕೃಷ್ಣ ಮೆಹತಾಬರಿಗೆ ಮಂತ್ರಿ ಮಂಡಲವನ್ನು ರಚಿಸುವಂತೆ ರಾಜ್ಯಪಾಲರು ಆಮಂತ್ರಿಸಿದ್ದಾರೆ ಕೆಲವು ಸ್ವತಂತ್ರರ ಬೆಂಬಲವು ಕಾಂಗ್ರೆಸು ಪಕ್ಷಕ್ಕೆ ಸಿಕ್ಕಿರುವುದರಿಂದ ಅಲ್ಲಿ ಭದ್ರವಾದ ಸರಕಾರವನ್ನು ರಚಿಸುವ ಭರವಸೆ ಶ್ರೀ ಮೆಹತಬರಿಗೆ ಉಂಟಾಗಿದೆ.

ಮೈಸೂರಿನಲ್ಲಿ ಕಾಂಗ್ರೆಸಿನ ನಾಯಕ ಚೆನ್ನಾವಣಿಯ ಒಳಗೇ ತಕರೀರು ನಡೆಸುಲಿನ್ನು ಶ್ರೀ ನಿಜಲಿಂಗಪ್ಪನವರ ಹೆಸರನೊಡನೆ ಶ್ರೀ ಕಡಿದಾಳ್ ಮಂಜಪ್ಪನವರೂ ಸ್ಪರ್ಧಿಸುವರೆಂಬ ಸುದ್ದಿಯಿಂಟು.



ಬ್ರಿಟನಿನ ವಿಮಾನ ಕಾರ್ಖಾನೆ ಯೊಂದರಲ್ಲಿ ಅಧುನಿಕ ವಿಮಾನ ರಚನೆಯಾಗುತ್ತಿರುವ ದೃಶ್ಯವಿದು.

## ಉಡುಪಿ

**ಶಾಲಾ ವಾರ್ಷಿಕೋತ್ಸವ**— ಸ್ಥಳೀಯ ಮುನಿಸಿಪಲ್ ಮಹಾತ್ಮಾಗಾಂಧಿ ಎಲಿಮೆಂಟರಿ ಶಾಲೆಯ ವಾರ್ಷಿಕೋತ್ಸವವು ಕಳೆದ ತಾ. 29 ರಂದು ಜಿಲ್ಲಾ ಕಲೆಕ್ಟರ್ ಶ್ರೀ ಎಚ್. ನರಸಿಂಹನವರ ಅಧ್ಯಕ್ಷತೆಯಲ್ಲಿ ಜರಗಿತು. ಮುನಿಸಿಪಲ್ ಚೆರ್‌ಮನ್ ಶ್ರೀ ಕೆ. ಕೆ. ಪೈಗಳು ಸ್ವಾಗತ ಭಾಷಣಮಾಡಿದರು. ದಿವಾನ್ ಬಹದ್ದೂರ್ ಶ್ರೀ ಕೆ. ಕೆ. ಕುಡ್ವರು ವರದಿಯನ್ನೋದಿದರು. ಶ್ರೀ ಟಿ. ರಮೇಶ್ ಪೈ ಸ್ವಾಗತವಾಚನವಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಈ ಶಾಲೆಗೆ ಖುನಾದಿ ಶಿಕ್ಷಣದ ಔಕಾರ್ಯಗಳನ್ನು ತಿಳಿಸಿ ಕೊಡಬೇಕಾಗಿದೆ ಎಂದೂ ವಾರ್ಷಿಕೋತ್ಸವವು ವರ್ಷಂಪ್ರತಿ ಜರಗುವಂತಾಗಬೇಕೆಂದೂ ತಿಳಿಸಿದರು. ವಿವಿಧ ವಿನೋದಾವಳಿ ಕಾರ್ಯಕ್ರಮಗಳಾಗಿ ಸಮಾರಂಭ ಕೊನೆಗೊಂಡಿತು.

**ನಗರಸಭೆಯು**— ಕಳೆದ ತಾ. 28 ರಲ್ಲು ಸಭಾಪತಿ ಶ್ರೀ ಕೆ. ಕೆ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಮುನಿಸಿಪಲ್ ಬಸ್ ಸ್ಟೇಂಡಿನ ಕೋಡಿಯೊಂದನ್ನು ಹಿಗ್ಗಿನ್ ಬೋತಮ್ಸ್ ಡಿಸ್ಪೆನ್ಸರಿಗೆ ಮೇ ತಿಂಗಳ ತನಕ ಬಾಡಿಗೆಗೆ ಕೊಡಬಹುದೆಂದೂ ನಂತರದ ಅವಧಿಗೆ ಕೋಡಿಯನ್ನು ಸಾರ್ವಜನಿಕವಾಗಿ ಏಲಂ ಮಾಡಬೇಕೆಂದೂ ನಿರ್ಣಯವಾಯಿತು. ಕೆಲವೊಂದು ಕಾಮಗಾರಿಕೆಗಳ ತಿದ್ದಿದ ಅಂದಾಜು ಪಟ್ಟಿಯನ್ನು ನುಂಜಾರುಬೂಡಲಾಯಿತು.

**ಸತ್ಕಾರ ಕೂಟ**— ಹನುಮಾನ್ ಟ್ರಾನ್ಸ್‌ಪೋರ್ಟು ಕಂಪೆನಿಯು ಅಡಕಿತ ಮಂಡಳಿಯ ಸದಸ್ಯರೂ ನಾಕರೂ ಸೇರಿತಮ್ಮ ಕಂಪೆನಿಯ ಮೆನೇಜಿಂಗ್ ಡ್ರೈರೆಕ್ಟರ್ ಶ್ರೀ ಯು. ಎಸ್. ನಾಯ್ಕರು ಮೈಸೂರು ವಿಧಾನಸಭಾ ಸದಸ್ಯರಾಗಿ ಆರಿಸಲ್ಪಟ್ಟುದಕ್ಕೆ ಸತ್ಕಾರಕೂಟವನ್ನೇರ್ಪಡಿಸಿದರು. ಶ್ರೀ ಬೇಳಂಜೆ ಕೃಷ್ಣಯ್ಯ ಹೆಗ್ಡೆಯವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಎಮ್. ಆರ್. ಭಟ್, ಯು ಕೃಷ್ಣಪ್ಪ ನೊಡೆಲಾನವರು ಮಾತನಾಡಿದರು.

**ಹಣೆಯಾಡಿ ಗ್ರಾಮ ಸೇವಾಸಮಿತಿಯು**— ಕಳೆದ 31ರಲ್ಲು ಶ್ರೀ ಯು. ವಾಸುದೇವ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಸಮಿತಿಯ ಉದ್ದೇಶವನ್ನು ಕಾರ್ಯಗತ ಗೊಳಿಸುವರೆ ಹತ್ತು ಜನರಿರುವ ಕಾರ್ಯ ನಿರ್ವಾಹಕ ಮಂಡಳಿ ರಚಿಸಲಾಯಿತು. ಶ್ರೀಗಳಾದ ವಾಸುದೇವ ಭಟ್, ಸಂಜೀವ ಸೇರಿಗಾರ್ಕೆ ಯು ಎಸ್. ಕಾಂಚನ್, ಗೋಪಾಲ ಮರಕಾಲ, ಅಣ್ಣಯ್ಯ ಸೇರಿಗಾರರು ಅನುಕ್ರಮವಾಗಿ ಅಧ್ಯಕ್ಷ, ಉಪಾಧ್ಯಕ್ಷೆ, ಕಾರ್ಯದರ್ಶಿ, ಜತೆಕಾರ್ಯದರ್ಶಿ ಮತ್ತು ಕೋಶಾಧಿಕಾರಿಗಳಾಗಿ ಆರಿಸಲ್ಪಟ್ಟರು. ಉಡುಪಿ ಮುನಿಸಿಪಲ್ ಕ್ಷೇತ್ರದಲ್ಲಿ ಅಗ್ಗ ವರ್ತ ಐದು ಅಕ್ಕಿ ಅಂಗಡಿಗಳನ್ನು ತೆರೆಯುವಂತೆಯೂ ಅವುಗಳಲ್ಲಿ ಕುಚ್ಚಿಗೆ ಅಕ್ಕಿ ಸರ ಪೊರೆಯುವ ವರ್ಷದ ಮೂಡುವಂತೆಯೂ ಸರಕಾರವನ್ನು ವಿನಂತಿಸುವ ನಿರ್ಣಯವಾಯಿತು.


# ಹರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ಎಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ.

ಬೆಲೆ: ೦—೨—೦

# ಮಕ್ಕಳ ಮಗ್ಗಿಪುಸ್ತಕ

ಬೆಲೆ: ೦ ೦—೦

ನವಯುಗ ಪ್ರೆಸ್, ಉಡುಪಿ.


**"ನಯಾ ಪೈಸೆಯ ಉಪಯೋಗಕ್ಕಾಗಿ ಬಳಸಬಹುದಾದ ಪರಿವರ್ತನ ಕೋಷ್ಟಕ**

| ಆಣೆ | ಪೈ | ನಯೆ ಪೈಸೆ | ಆಣೆ | ಪೈ | ನಯೆ ಪೈಸೆ | ಆಣೆ | ಪೈ | ನಯೆ ಪೈಸೆ | ಆಣೆ | ಪೈ | ನಯೆ ಪೈಸೆ |
|---|---|---|---|---|---|---|---|---|---|---|---|
| 0 | 3 | 2 | 4 | 3 | 27 | 8 | 3 | 52 | 12 | 3 | 77 |
| 0 | 6 | 3 | 4 | 6 | 28 | 8 | 6 | 53 | 12 | 6 | 78 |
| 0 | 9 | 5 | 4 | 9 | 30 | 8 | 9 | 55 | 12 | 9 | 80 |
| 1 | 0 | 6 | 5 | 0 | 31 | 9 | 0 | 56 | 13 | 0 | 81 |
| 1 | 3 | 8 | 5 | 3 | 33 | 9 | 3 | 58 | 13 | 3 | 83 |
| 1 | 6 | 9 | 5 | 6 | 34 | 9 | 6 | 59 | 13 | 6 | 84 |
| 1 | 9 | 11 | 5 | 9 | 36 | 9 | 9 | 61 | 13 | 9 | 86 |
| 2 | 0 | 12 | 6 | 0 | 37 | 10 | 0 | 62 | 14 | 0 | 87 |
| 2 | 3 | 14 | 6 | 3 | 39 | 10 | 3 | 64 | 14 | 3 | 89 |
| 2 | 6 | 16 | 6 | 6 | 41 | 10 | 6 | 66 | 14 | 6 | 91 |
| 2 | 9 | 17 | 6 | 9 | 42 | 10 | 9 | 67 | 14 | 9 | 92 |
| 3 | 0 | 19 | 7 | 0 | 44 | 11 | 0 | 69 | 15 | 0 | 94 |
| 3 | 3 | 20 | 7 | 3 | 45 | 11 | 3 | 70 | 15 | 3 | 95 |
| 3 | 6 | 22 | 7 | 6 | 47 | 11 | 6 | 72 | 15 | 6 | 97 |
| 3 | 9 | 23 | 7 | 9 | 48 | 11 | 9 | 73 | 15 | 9 | 98 |
| 4 | 0 | 25 | 8 | 0 | 50 | 12 | 0 | 75 | 16 | 0 | 100 |

ಇದೇ ಎಪ್ರಿಲಿನಿಂದ ಜಲಾವಣೆಗೆ ಬರುತ್ತಿರುವ ಹೊಸ ನಾಣ್ಯಗಳಿಗೂ ಹಳೆ ನಾಣ್ಯಗಳಿಗೂ ಇರುವ ಸಂಬಂಧವನ್ನು ಇಲ್ಲಿ ಹೇಳಿದೆ. ನಮಗಿದು ಉಪಯೋಗವಾದೀತು.

---

ತೆ ಉಳ್ಳೋರೀತು, ಯಾವುದರಿಂದ ಹಾಳಾದೀತು, ಯಾವುದರಿಂದ ರಾಷ್ಟ್ರ ಹಿತವು ಕ್ಷೀಣಿಸಲ್ಪಟ್ಟೀತು, ಯಾವುದರಿಂದ ಅದಾಗಲಾರದು — ಎಂಬಂತಹ ತಾರತಮ್ಯ ಬುದ್ಧಿ ಇಲ್ಲದಿದ್ದಲ್ಲಿ ಈಗಿನಂತಹ ತೊಂದರೆ, ಕೆರುಕುಳ, ಅಸಂತುಷ್ಟಿ ಮತ್ತು ಜಿಗುಪ್ಸೆಗಳನ್ನು ಎದುರಿಸುವುದು ತಪ್ಪದು. ಕಾಂಗ್ರೆಸು ಸಂಸ್ಥೆಯ ಶ್ರೇಯೋಭಿವೃದ್ಧಿಯನ್ನು ಬಯಸುವ ನಾವು ಆ ಸಂಸ್ಥೆಯಲ್ಲಿ ನವಚೈತನ್ಯವು ಮೂಡಿ ಬರಬೇಕೆನ್ನುತ್ತೇವೆ. ಇದಕ್ಕಾಗಿ ಕ್ಷಿಪ್ರದಲ್ಲಿ ಸುಸಂಘಟಕ ಕಾರ್ಯಗಳನ್ನು ಪ್ರತಿ ತಾಲೂಕಿನ ಕಾಂಗ್ರೆಸು ಕಾರ್ಯಾಲಯ ಮುಂದೊತ್ತಲಿ!

## ನಾಣ್ಯ ಪದ್ಧತಿಯಲ್ಲಿ ಸುಧಾರಣೆ ಏಕೆ?

(ಹಿನೇ ಪುಟದಿಂದ)

ದ್ದರಿಂದ ನಾವು ನಮ್ಮ ದೇಶದ ಪದ್ಧತಿಗೆ ಹಿಂದಿರುಗುತ್ತಿದ್ದೇವೆ.

ನನ್ನ ಸಹೋದ್ಯೋಗಿಗಳಲ್ಲಿ ಕೆಲವರು ಭಾಷಣಗಳ ಮತ್ತು ಲೇಖನಗಳ ಮೂಲಕ ಈ ಬದಲಾವಣೆಯನ್ನು ಹಾಗೂ ಈ ಬದಲಾವಣೆಯನ್ನು ಯಾವ ರೀತಿಯಲ್ಲಿ ತರಲಾಗುತ್ತದೆ ಎಂಬುದನ್ನೂ ಪೂರ್ಣವಾಗಿ ವಿವರಿಸಿರುವರು. ಪ್ರಾರಂಭದಲ್ಲಿ ಕೆಲವು ಅನಾನುಕೂಲಗಳು ಆನಿವಾರ್ಯವಾಗಬಹುದು. ಏಕೆಂದರೆ ಬಹಳ ದಿನಗಳಿಂದ ಬಂದಿರುವ ಅಭ್ಯಾಸಗಳು ಈ ಬದಲಾವಣೆಗೆ ಅಡ್ಡಿಯಾಗಿ ಬರುವುವು. ಈ ಅನಾನುಕೂಲವನ್ನು ನಿವಾರಿಸುವ ಬಗ್ಗೆ ಸರ್ವ ಪ್ರಯತ್ನವನ್ನೂ ಕೂಡ ಮಾಡಲಾಗಿದೆ. ಮೂರು ವರ್ಷಗಳ ಕಾಲವವರೆಗೂ ಈಗಿನ ಹಾಗೂ ಹೊಸ ನಾಣ್ಯಗಳು ಕಾನೂನುಬದ್ಧವಾಗಿ ಚಲಾವಣೆಯಲ್ಲಿರುವುವು ಈ ರೀತಿಯಾಗಿ ಅನಾನುಕೂಲಗಳನ್ನು ನಿವಾರಿಸಲಾಗುವುದು. ಶೀಘ್ರದಲ್ಲಿಯೇ ಭಾರತವಾದ್ಯಂತವೂ ಈ ಹೊಸ ನಾಣ್ಯಪದ್ಧತಿಯು ಮೆಚ್ಚುಗೆಗೆ ಪಾತ್ರವಾಗುವುದೆಂದು ನನಗೆ ನಿಸ್ಸಂಶಯವಿದೆ. ಈ ಹೊಸ ನಾಣ್ಯ ಪದ್ಧತಿಯು ಯಶಸ್ವಿಯಾಗುವ ವಿಚಾರದಲ್ಲಿ ನಾನು ಜನತೆಯ ಸಹಕಾರವನ್ನು ಕೋರುತ್ತೇನೆ. ಜನತೆಯ ಸಹಕಾರ ದೊರೆಯುವುದೆಂದು ನನಗೆ ಪೂರ್ಣ ವಿಶ್ವಾಸವಿದೆ.

ಈ ಬದಲಾವಣೆಯಿಂದ ಜೂರಿಗೂ ನಷ್ಟವುಂಟಾಗುವುದಿಲ್ಲವೆಂಬುದನ್ನು ಈಗಾಗಲೇ ವಿವರಿಸಲಾಗಿದೆ. ಅದಲ್ಲದೆ, ಈ ಬದಲಾವಣೆಯಿಂದ ಅನೇಕ ಪ್ರಯೋಜನಗಳೂ ದೊರೆಯುವುವು.

ಆದ್ದರಿಂದ ನಮ್ಮ ಜನರು ದಶಮಾನ ಹಾಗೂ ದಶಮಾಂಶ ಪದ್ಧತಿಯನ್ನು ಅವಲಂಬಿಸಿರುವ ಈ ಹೊಸ ನಾಣ್ಯಪದ್ಧತಿಯನ್ನು ಸ್ವಾಗತಿಸುವರೆಂದು ನಾನು ಆಶಿಸುತ್ತೇನೆ."


## ಗೋ ವಿಜಯ

(ಗೋವಿನ ಕಥೆ)

ಶ್ರೀ ಮುಳ್ಳಿಸ್ವಾಣ ಉಪಾಧ್ಯಾಯರಿಂದ ರಚಿತವಾದ, ಮಕ್ಕಳಿಗೂ, ವಯಸ್ಕರಿಗೆ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ.

ತಮ್ಮಪ್ಪಕ್ಕೆ ತಾವೇ ಕತೆ, ಹಾಡು, ಅರ್ಥ ಸಂಭಾಷಣೆ, ವಿಷಯ ಜ್ಞಾನ, ಹಾಗು ಶಾರೀರಿಕ ಶಿಕ್ಷಣ ಮೊದಲಾದುವನ್ನು ಏಕ ಕಾಲದಲ್ಲಿ ಕಲಿತು ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಿದ್ದರೆ ಈ ಪುಸ್ತಕವನ್ನು ಅವಶ್ಯ ಆವರ ಕೈಗೆ ಕೊಡಿರಿ

**೬೦ ಪುಟಗಳು: ಬೆಲೆ ೦—೮—೦.**

ನವಯುಗ ಪ್ರೆಸ್, ಉಡುಪಿ.



**ಸೂಚನೆ**

'ನವಯುಗ'ದ ಚಂದಾ ಹಣ ಮತ್ತು ಜಾಹೀರಾತಿನ ಹಣವನ್ನು ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಇದರ ಯಾವುದೇ ಶಾಖೆಯಲ್ಲಿ ಯಾವದೊಂದು ತರಹದ ಖರ್ಚೂ ಇಲ್ಲದೆ (ನವಯುಗ ವಾರಪತ್ರಿಕೆಯ ಖಾತೆಗೆ) ಸಾಲತ ಸಂದಾಯ ಮಾಡಬಹುದು.

ಮ್ಯಾನೇಜರ್.


## ಎಲ್ಲೆಲ್ಲಿ ಏನೇನು?

**ಕಾರ್ಕಳ**— ಮೈಸೂರು ವಿಧಾನ ಸಭೆಗೆ ಕಾರ್ಕಳ ಕ್ಷೇತ್ರದಿಂದ ಆರಿಸಿ ಬಂದ ಡಾ. ಕೆ. ಕೆ. ಹೆಗ್ಡೆಯವರನ್ನು ಆಭಿನಂದಿಸಲು ತಾ. 20 ರಲ್ಲು ಶ್ರೀ ಎಮ್. ಜೆ. ಆರ್. ಸಂಪಗೆತ್ತಾಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರುಗಿತು. ಸರ್ಕಲ್ ಕಾಂಗ್ರೆಸ್ ಕಮಿಟಿ ಆಶ್ರಯದಲ್ಲಿ ಜರಗಿದ ಈ ಸಭೆಯಲ್ಲಿ ಶ್ರೀಗಳಾದ ಭಜಲಿ ಅತಿಕಾರಿ ಕೆ. ಪಿ. ಮುಕುಂದ ಪ್ರಭು, ಎಮ್. ಕೃಷ್ಣಯ್ಯ ಶೆಟ್ಟಿ, ಎಫ್. ಎ. ಶುಕೂರ್, ಎನ್. ಎಸ್. ಅಡ್ಯಂತಾಯ ಮೊದಲಾದವರು ಸುದರ್ಭೋಚಿತ ಸೂತ್ರಗಳನ್ನಾಡಿದರು. ಡಾ. ಹೆಗ್ಡೆಯವರು ತನ್ನ ಕೃತಜ್ಞತೆಯನ್ನು ನ್ಯಕ್ತಪಡಿಸಿದರು.

**ಮೂಲ್ಕಿ**— ಸ್ಥಳೀಯ ಸರ್ಕಲ್ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಡಾ. ಎಮ್. ಆರ್. ಕಾಮತ್, ಪಂಚಾಯತ ಅಧ್ಯಕ್ಷ ಶ್ರೀ ವಿ. ಭೋಜರಾವ್, ಪಂಚಾಯತ ಎಕ್ಸಿಕ್ಯೂಟಿವ್ ಆಫೀಸರ್ ಶ್ರೀ ಕೆ ಎಸ್. ಅಬ್ದುಲ್ ಖಾದರ್, ಶ್ರೀಗಳಾದ ವಿ. ಸುಂದರಕೃಷ್ಣ ಕಾಮತ್, ಜಾಲ್ಸ್ ಪಿ. ಅರಾಂಜ್, ಕೆ. ನಾಗಣ್ಣ ಶೆಟ್ಟಿ ಮೊದಲಾದವರು ತಾ. 26 ರಲ್ಲು ಮೂಲ್ಕಿಗೆ ಬಂದಿದ್ದ ಜಿಲ್ಲಾ ಮೆಡಿಕಲ್ ಆಫೀಸರರನ್ನು ಭೇಟಿಯಾಗಿ, ಸ್ಥಳೀಯ ಲೋಕಲ್ ಫಂಡ್ ಆಸ್ಪತ್ರೆಯನ್ನು ಸರಕಾರವು ವಹಿಸಿಕೊಳ್ಳುವುದಾದರೆ ಸುರಜನರಿಂದ ಯೋಗ್ಯ ಧನ ಸಹಾಯ ಒದಗಿಸುವ ಆಶ್ವಾಸನೆಯೆತ್ತರು. ತಾನು ಆ ಬಗ್ಗೆ ವರದಿಯೊಪ್ಪಿಸುವ ಆಶ್ವಾಸನೆಯನ್ನು ಜಿಲ್ಲಾ ಮೆಡಿಕಲ್ ಆಫೀಸರರು ಇತ್ತರು. ಒಂದು ಗೌರವ ಸತ್ಕಾರ ಕೂಟವೂ ಜರಗಿತು.

**ನಂಜಾರು**— ಸ್ಥಳೀಯ ಶ್ರೀ ವಿವೇಕಾನಂದ ಸೇವಾ ಸಂಘದ ಮಹಾ ಸಭೆಯು ಕಳದ ತಾ. 24ರಲ್ಲು ಬೈಲೂರು ವಿಲೇಜ್ ಗ್ರಾಂಡ್ ಶ್ರೀ ರಾಘವೇಂದ್ರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಹೊಸ ವರ್ಷದ ಆಧಿಕಾರಿಗಳ ಚುನಾವಣೆ ನಡೆದು ಶ್ರೀಗಳಾದ ಎನ್. ಶ್ರೀನಿವಾಸ ಆಚಾರ್ಯ, ಅಧ್ಯಕ್ಷರು; ಎನ್. ಸಂಜೀವ ಶೆಟ್ಟಿ ಮತ್ತು ಎನ್. ಮಹಾಬಲ ಶೆಟ್ಟಿ ಉಪಾಧ್ಯಕ್ಷರು; ಎನ್. ಹರಿಯಣ್ಣ ಶೆಟ್ಟಿ, ಕಾರ್ಯದರ್ಶಿ; ಎನ್. ಕರುಣಾಕರ ಹೆಗ್ಡೆ, ಉಪಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು. ಕಾರ್ಯಕಾರೀ ಸಮಿತಿಗೆ ಶ್ರೀಗಳಾದ ಎನ್. ಏಕೆಲ ಶೆಟ್ಟಿ, ಎನ್. ಮುದ್ದಣ್ಣ ಶೆಟ್ಟಿ, ಪಿ. ಸೂರು ಶೆಟ್ಟಿ, ಎನ್. ಲಕ್ಷ್ಮೀರಾಮ ಹೆಗ್ಡೆ, ಪಿ. ಶ್ರೀಮಾನಂದ ಹೆಗ್ಡೆ, ಎನ್. ವಾಸುದೇವ ಪೈ ಮೊದಲಾದವರು ಆರಿಸಲ್ಪಟ್ಟರು.

**ಬೆಳ್ಳೆ**— ಕುಂದಾಪುರ ಕ್ಷೇತ್ರದಿಂದ ಮೈಸೂರು ಎಸೆಂಬ್ಲಿಗೆ ಸದಸ್ಯರಾಗಿ ಆರಿಸಲ್ಪಟ್ಟ ಶ್ರೀ ವಿ. ಶ್ರೀನಿವಾಸ ಶೆಟ್ಟರಿಗೆ ಕಳದ ತಾ. 27ರಲ್ಲು ಡಾ. ಎನ್. ಎಸ್. ಭಟ್ಟರ ಅಧ್ಯಕ್ಷತೆಯಲ್ಲಿ ಮಹಾಜನರ ಸತ್ಕಾರಕೂಟವೊಂದು ಜರಗಿ ಸನ್ಮಾನವೀಯಲಾಯಿತು. ಶ್ರೀಗಳಾದ ರಾಮರಾಯ ಹಾಲಂಬಿ ಮತ್ತು ಕೃಷ್ಣರಾಯ ಪೈಗಳು ಕಾರ್ಯೋಚಿತ ಮಾತುಗಳನ್ನಾಡಿದರು. ತನ್ನ ಮತದಾರ ಪ್ರೇತ್ರಕ್ಕೆ ಕೈಲಾಜೆ ಸೇವೆ ಸಲ್ಲಿಸುವುದಾಗಿ ಶ್ರೀ ಶೆಟ್ಟರು ಅಭಯ ವಚನವಿತ್ತರು.

**ನೋಟಾರು ವಾಹನಗಳ ಇಲಾಖಾ ಪುನರ್ವ್ಯವಸ್ಥೆ**— 1956ನೆ ಇಸವಿ ನವಂಬರ ತಿಂಗಳಿಂದ ನೂತನ ಮೈಸೂರು ರಾಜ್ಯದಲ್ಲಿ ಏಮು ಪ್ರತಿಗಳುಳ್ಳ ಮೋಟಾರು ವಾಹನಗಳ ಆಡಳಿತೆಗಳು ಸೇರಿಕೊಂಡಿವೆ. ಈ ಬಗ್ಗೆ ಸರಕಾರವು ಇಡೀ ರಾಜ್ಯವನ್ನು ನಾಲ್ಕು ಪ್ರದೇಶಗಳಾಗಿ ವಿಭಾಗಿಸಬೇಕೆಂದು ನಿರ್ಧರಿಸಿಯಿದೆ. ಕೊಡಗು ಮತ್ತು ದಕ್ಷಿಣ ಕನ್ನಡ ಇಂತಹ ಒಂದು ಪ್ರದೇಶವಾಗಿ ಇವುಗಳ ಮುಖ್ಯ ಕಚೇರಿ ಮಂಗಳೂರಲ್ಲಿರುವುದು ಸಾರ್ವಜನಿಕರಿಗೆ ತೊಂದರೆಯೂಗದಿರುವಂತೆ ಪ್ರಾದೇಶಿಕ ಪ್ರಾಪನ ಸಂಚಾರ ಅಧಿಕಾರಿಗಳ ಪ್ರತಿನಿಧಿಗಳು ತಿಂಗಳಿಗೊಂದುಸಲವಾದರೂ ಮೊದಲೇ ಗೊತ್ತಾದ ಕಾರ್ಯಕ್ರಮದಂತೆ ಪ್ರತಿ ಜಿಲ್ಲೆಯ ಮುಖ್ಯ ಸ್ಥಳಗಳಲ್ಲಿ ಸಂಜರಿಸಿ ಅಲ್ಲಿ ಲೈಸೆನ್ಸುಗಳನ್ನು ಹೊಸದುಮಾಡುವ ಮತ್ತು ಅರ್ಹತೆಯ ಸರ್ಟಿಫಿಕೇಟುಗಳನ್ನು ಕೊಡುವ ಕಾರ್ಯ ನಡೆಸುತ್ತಾರೆ.

### ಮದರಾಸು

**ಶ್ರೀ ಸುಬ್ರಹ್ಮಣ್ಯ ಮಹಾಧೀಕರಿಗಳ ದ**- ಶ್ರೀ ವಿಶ್ವಜ್ಞ ತೀರ್ಥ ಶ್ರೀ ಪಾದಂಗಳವರು ಬದರಿ ಮೊದಲಾದ ಪುಣ್ಯ ತೀರ್ಥ ಕ್ಷೇತ್ರಗಳಿಗೆ ಯಾತ್ರೆಯನ್ನು ಮುಗಿಸಿಕೊಂಡು ಕಳದ ತಾ. 21ರಲ್ಲು ಗೂಡೂರಿನಿಂದ ಮದ್ರಾಸಿಗೆ

(ಹಿನೇ ಕಲಂ ನೋಡಿರಿ)


ಕನ್ನಡದಲ್ಲಿ ಮೊದಲನೆಯದೆಂದೇ ಹೇಳಬಹುದಾದ
ಅಣು ಶಕ್ತಿಯ ಸಚಿತ್ರ ವಿವೇಚನಾ ಗ್ರಂಥ

## ಹಿರೋಶಿಮಾದಿಂದ ಜಿನೇವ

ಬರೆದವರು:

**ಶ್ರೀ. ಯು. ರಾಘವೇಂದ್ರ ಆಚಾರ್ಯ, ಎಂ. ಎ., ನವದೆಹಲಿ.**

ಮುನ್ನುಡಿಕಾರರು: **ಶ್ರೀ. ಶಿವರಾಮ ಕಾರಂತರು.**

**ಪ್ರತಿಯೊಬ್ಬರೂ ಓದಲೇಬೇಕಾದ ನವೀನ ಪುಸ್ತಕ.**

ಉತ್ತಮ ಕಾಗದ. ಬೆಲೆ ರೂ. ೧—೮—೦.

ನವಯುಗ ಪ್ರೆಸ್, ಉಡುಪಿ.



**ಮಹಿಳಾ ಸಾಹಿತ್ಯ! ನವೀನ ಪುಸ್ತಕ!**

ಕುಮಾರಿ ಪಿ. ಯಶೋದಾ ಅವರು ಬರೆದ

## ಬಾಳಿನ ಬೆಳಕು

ಬಾಳಿನ ನೈಜ ಚಿತ್ರಗಳನ್ನು ಹೃದಯಂಗಮವಾಗಿ ಚಿತ್ರಿಸುವ ಎಮೆ ನೂತನ ಕತೆಗಳ ಸಂಗ್ರಹ. ಶ್ರೀ ಪುರುಷರೆಲ್ಲರೂ ಅವಶ್ಯ ಓದಲೇ ಬೇಕಾದ ಬಾಳ್ನೋಟಗಳು!

ಬೆಲೆ ೦—12—0. (೦—14—೦ ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟು ಮಾಡಬಹುದು.)

ನವಭಾರತ ಪುಸ್ತಕ ಭಂಡಾರ, ಉಡುಪಿ.


## ಬೆಂಗಳೂರು

**ಮಂತ್ರಿ ಶ್ರೀ ಎ. ಬಿ. ಶೆಟ್ಟರಿಗೆ ಸತ್ಕಾರ**— ಮೈಸೂರು ರಾಜ್ಯದ ಆರೋಗ್ಯ ಮಂತ್ರಿ ಪದವಿಂದ ನಿವೃತ್ತರಾಗಲಿರುವ ಶ್ರೀ ಎ. ಬಿ. ಶೆಟ್ಟರಿಗೆ ಕಳದ ತಾ ೨೮ರಲ್ಲು ಸಂಜೆ ಮುಖ್ಯ ಮಂತ್ರಿಗಳು ತಮ್ಮ ನಿವಾಸದಲ್ಲಿ ಸತ್ಕಾರಕೂಟ ಏತ್ತು ಗೌರವಿಸಿದರು. ಈ ಸಮಾರಂಭಕ್ಕೆ ಶಾಸನಸಭಾ ಸದಸ್ಯರು, ಮಂತ್ರಿಗಳು, ಆಧಿಕಾರಿಗಳು ಮತ್ತು ಇತರ ಪ್ರಮುಖರು ಉಪಸ್ಥಿತರಿದ್ದರು. ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು ಮುಖ್ಯ ಅತಿಥಿಗಳನ್ನು ಸ್ವಾಗತಿಸುತ್ತಾ 'ನಾವಿಂದು ಏರ್ಪಡಿಸಿರುವ ಈ ಸಮಾರಂಭದ ಈ ದಿನ ನಮ್ಮ ನೆಚ್ಚಿನ ಆರೋಗ್ಯಮಂತ್ರಿ ಶ್ರೀ ಎ. ಬಿ ಶೆಟ್ಟರು ಮಂತ್ರಿಯಾಗಿ ಅಧಿಕಾರ ಏರಿನ 10ನೆ ವಾರ್ಷಿಕ ದಿನದಂದೇ ಕೂಡಿಬಂದಿರುವುದು ಸಂತೋಷದ ವಿಷಯವೆಂದೆನು. ಶ್ರೀ ಶೆಟ್ಟರು ಅಧಾರಣ ಸೂಚಿಸುತ್ತಾ ಇಲ್ಲಿಯ ಹೆಚ್ಚಿನ ಪ್ರಮಾಣ ತಮಗಿರುವಂತೆ ಇಲ್ಲಿಯ ಜನರೂ ಪಾಂಡಿತ್ಯ ಸ್ವಭಾವದವರೆನ್ನುವುದನ್ನು ನಾನು ಕಂಡುಕೊಂಡಿದೆ. ಇಲ್ಲಿಯ ಶಾಸನ ಸಭೆಯಲ್ಲಿ ವಿರೋಧಿ ಪಕ್ಷದ ನಾಯಕರ ಭಾಷಣಗಳು ತೀರಾ ಉಚ್ಚಮಟ್ಟದಲ್ಲಿವೆ. ಇನರೆಲ್ಲರ ಭಾಷಣಗಳು ನಾನು ಪಾಲ್ಗೊಂಡಿರುವ ಕೇರಳತ್ತಿದ್ದ ವಿರೋಧಿ ಪಕ್ಷದ ಪದರ ಭಾಷಣಗಳಿಗಿಂತ ತೀರ ಭಿನ್ನವಾದವು ಗಳಿಂದರು.

ಮೈಸೂರು ರಾಜ್ಯದ ಹೋ ಆರೋಗ್ಯ ಮಂತ್ರಿಯಾಗಿದವರು ಮೈಸೂರಿನಲ್ಲಿರುವ ಆಯುರ್ವೇದ ಕಾಲೇಜನ್ನು ಒಂದು ಸರ್ವಾಂಗ ಶಿಕ್ಷಣ ಸಂಸ್ಥೆಯನ್ನಾಗಿ ಮಾಡುವ ಕನಸಿನ ಮತ್ತು ರೋಗಕ್ಕೆ ಚಿಕಿತ್ಸೆ ಕೊಡುವುದಕ್ಕಿಂತ ಮುಖ್ಯವಾಗಿ ರೋಗವನ್ನು ತಡೆಗಟ್ಟುವ ವಿಧಾನಗಳತ್ತಲೂ ವಿಶೇಷ ಗಮನವೀಯುವ ಬೇಕಾಗಿ ಸಲಹೆಗಳನ್ನಿತ್ತರು

(ಹಿನೇ ಕಲಂನಿಂದ

ಆಗವಿಸಿದರು. ಮಾಧ್ವ ಸಂಘದ ಕಾರ್ಯದರ್ಶಿ ಶ್ರೀ ಪಿ. ರಾಘವೇಂದ್ರರಾವ್ ನೂತನ ಅತಿಥಿಗಳು ಸುಸ್ವಾಗತವಿತ್ತರು ತಾ. 24ರಲ್ಲು 'ಧರ್ಮಭಾಷಣ' ಕೆ. ಸೀತಾರಾಮ ರಾಯರ ದಾಸಸ್ಯ ಕಾರ್ಯವಲ್ಲಿ ಶ್ರೀ ಪಾದಂಗಳವರಿಗೆ ಭಿಕ್ಷಾದಿ ಗೌರವಗಳುಜರುಪ. ಹಲವು ಅಧ್ಯಾತ್ಮ ಮಹಿಳೆಯರು ಈ ಸಮಾರಂಭಕ್ಕೆ ಬಂದಿದ್ದು ಶ್ರೀಗಳವರಿಗೆ ಅರ್ಚನೆಯನ್ನು ನಡೆಸಿದರು. ಶ್ರೀ ಸೀತಾರಾಮ ರಾಯರಿಗೂ ಅವರ ಕುಟುಂಬಕ್ಕೂ ಶ್ರೀಯಸ್ಸನ್ನು ಬಯಸಿ ಮಂತ್ರಾಕ್ಷತೆಯಿತ್ತರು.

## ಕವತ್ತಾರು ಜಿಲ್ಲೆ

ಪ್ರತಿ ವರ್ಷದಂತೆ ಕವತ್ತಾರು ಮಹಾ ಉತ್ಸವವು ಇದೇ ಬರುವ ಮೇ ತಿಂಗಳ ತಾ. 13ನೇ ಸೋಮವಾರ ನೆರವೇರುವುದು.

ಕವತ್ತಾರು ತಾ. 80.

## ಮಂಗಳೂರು

### ಜಿಲ್ಲಾ ಕಲೆಕ್ಟರವರ ಪತ್ರಿಕಾ ಸಮ್ಮೇಳನ—

ಶಾ. 25ರಲ್ಲು ಜಿಲ್ಲಾ ಕಲೆಕ್ಟರ್ ಶ್ರೀ ಎಚ್. ನರಸಿಂಹಸವರು ತಮ್ಮ ಚೇಂಬರ್ಸ್ ಹಾಲಿನಲ್ಲಿ ಕರೆದ ಪತ್ರಿಕಾ ಸಮ್ಮೇಳನದಲ್ಲಿ, ದ. ಕ. ಜಿಲ್ಲೆಯಲ್ಲಿನ ವಿವಿಧ ಕ್ಷೇತ್ರಗಳಲ್ಲಿ, ಸರಕಾರದ ಸ್ಥಳೀಯೋಭಿವೃದ್ಧಿ, ಪಂಚಾಯತಿಯ ವಿಸ್ತರಣಾ ಯೋಜನೆ ಇತ್ಯಾದಿ ಸೇವಾಜನೆಗಳನ್ನು ಯೆ ನಡೆಸುತ್ತಿರುವ ಅಭಿವೃದ್ಧಿ ಕಾರ್ಯಗಳ ಪ್ರಗತಿಯನ್ನು ವಿವರಿಸಿದರು. ಮಂಗಳೂರಿನ ಮತ್ತು ನಗರದ ಹೊರ ವಲಯಗಳಲ್ಲಿ ವಾಸಿಸುತ್ತಿರುವ ಮಜೂರರಿಗೆ ಶಾಜನಾಲಯ, ಕ್ರೀಡಾ, ಸಂಗೀತ, ಭಜನೆ ಇತ್ಯಾದಿ ವಿಹಾರ ಸೌಕರ್ಯಗಳನ್ನೊದಗಿಸುವ ಬಗ್ಗೆ ಸಮೀಪದಲ್ಲೇ ಮಂಗಳೂರಲ್ಲೊಂದು ಮಜೂರರ ಹಿತಚಿಂತನಾ ಕೇಂದ್ರವನ್ನು ತೆರೆಯುವ ಯೋಜನೆಯಿದೆ ಎಂದೂ, ಅದರ ಪರಿಣಾಮಿಕ ಕಾರ್ಯಗಳನ್ನು ಕೈಗೊಳ್ಳಬಾಗಿದೆ ಎಂದೂ ತಿಳಿಸಿದರು. ದ್ವಿತೀಯ ಪಂಚವಾರ್ಷಿಕ ಯೋಜನೆಯನ್ವಯ ದ. ಕ. ಜಿಲ್ಲೆಯಲ್ಲಿ ಮುಂದಿನ ವರ್ಷ ಕೈಗೊಳ್ಳಲಿರುವ ಅಭಿವೃದ್ಧಿ ಕಾರ್ಯಕ್ರಮಗಳನ್ನೂ ಕೂಡಾ ವಿವರಿಸಿದರು.

### ವಿಧಾನಸಭಾ ಸದಸ್ಯರಿಗೆ ಸತ್ಕಾರ—

ನೆಸ್ನರ್ ಇಂಡಿಯಾ ಟ್ರಾವಲ್ ಮೆನ್ಸ್ಫೆಕ್ಚರರ್ಸ್ ಎಸೋಸಿಯೇಶನ ಸದಸ್ಯರಾದ ಶ್ರೀ ಎಫ್. ಎಕ್ಸ್. ಡಿ ಪಿಂಟೊ ಮತ್ತು ಜಲಜಿತ ಗಣಾನನರಾವ್ ಹಾಗೂ ಬ್ರಹ್ಮಾವರ ಹಂಚು ಕಾರ್ಖಾನೆಗೆ ಮ್ಹಾಲಕರಾದ ಶ್ರೀ ಬಿ. ಜಗ್ಗೆ ಅವರನ್ನು ದಾಸ್ ಸೆಟ್ಟರು ಮೈಸೂರು ವಿಧಾನಸಭಾ ಸದಸ್ಯರಾಗಿ ಆರಿಸಲ್ಪಟ್ಟ ಬಗ್ಗೆ ಅವರನ್ನು ಅಭಿನಂದಿಸಿ ಗೌರವಿಸಲು ತಾ. 25 ರಲ್ಲು ರಾತ್ರಿ ರುಜಾರಿಯೋ ಹ್ಯಾಸ್ಕುಲಿನಲ್ಲಿ ಭೋಜನ ಸಮಾರಂಭ ಜರಗಿತು. ಎಸೋಸಿಯೇಶನಿನ ಅಧ್ಯಕ್ಷ ಶ್ರೀ ಜೆ. ಪಿ. ರೇಗೋರವರು ಮುಖ್ಯ ಅತಿಥಿಗಳನ್ನು ಸ್ವಾಗತಿಸಿ ಆದರಿಂದ ಜಿಲ್ಲೆಗೆ, ರಾಷ್ಟ್ರಾಂತ್ಯಕ್ಕೆ ಹಾಗೂ ದೇಶಕ್ಕೆ ಹೆಚ್ಚಿನ ಸೇವೆ ಸಲ್ಲುವಂತಾಗಲೆಂದು ಹಾರೈಸಿದರು ನಂತರ ರುಜಾರಿಯೋ ಇಗರ್ಜಿಯ ಗುರುಗಳಾದ ಎಸ್. ಎಫ್. ಜೆ. ಎಸ್. ಪಿಂಟೊ ಮತ್ತು ಜೆ. ಎಸ್. ಜೆ. ಲೆಬೆಲ್ಲೋ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು. ಮುಖ್ಯ ಅತಿಥಿಗಳೆಲ್ಲರೂ ತಮಗಿತ್ತ ಗೌರವಕ್ಕಾಗಿ ಆಭಾರಸೂಚಿಸಿದರು. ಶ್ರೀ ಎ. ವಿ. ಅಯ್ಯರರು ಧನ್ಯವಾದಗಳನ್ನಿತ್ತರು.

### ಜಿಲ್ಲಾ ಯೋಜನಾ ಮಂಡಳಿ ಸಭೆಯು—

ತಾ. 25ರಲ್ಲು ಜಿಲ್ಲಾ ಕಲೆಕ್ಟರ್ ಶ್ರೀ ಎಚ್. ನರಸಿಂಹಸವರ ಅಧ್ಯಕ್ಷತೆಯಲ್ಲಿ ಅವರ ಕಚೇರಿಯಲ್ಲಿ ಜರಗಿತು. ಈ ಸಭೆಯಲ್ಲಿ ಪ್ರಥಮ ಮತ್ತು ದ್ವಿತೀಯ ಪಂಚವಾರ್ಷಿಕ ಯೋಜನೆಗಳನ್ವಯ ತಾ. 31-12-56 ರ ತನಕ ಕೈಗೊಂಡ ವಿವಿಧ ಕಾರ್ಯಗಳ ಪ್ರಗತಿಯನ್ನು ಸಂಬಂಧಪಟ್ಟ ಇಲಾಖಾ ಅಧಿಕಾರಿಗಳು ವಿವರಿಸಿದರು. ಕಾರ್ಕಳದ ಕೆ. ಪಿ. ಮುಕುಂದ ಪ್ರಭುಗಳು ಕೆಲವೊಂದು ಪ್ರಶ್ನೆಗಳನ್ನು ಕೇಳಿದುದಕ್ಕೆ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳು ಸೂಕ್ತ ಉತ್ತರವನಿತ್ತರು. ಜಿಲ್ಲಾ ವೈದ್ಯಾಧಿಕಾರಿಗಳು ಉಡುಪಿಯ ಆಸ್ಪತ್ರೆಗೆ ಒಂದು ಎಕ್ಸ್‌ರೇ ವಿಭಾಗ ತೆರೆಯಲು ಶಿಫಾರಸು ಆಗಿದೆಯೆಂದೂ ಇತರ ತಾಲೂಕು ಕೇಂದ್ರದ ಆಸ್ಪತ್ರೆಗಳ ಅಭಿವೃದ್ಧಿಗೂ ಯೋಜನೆಯಿದೆಯೆಂದೂ ತಿಳಿಸಿದರು. ಸಮೂಹಜಿಕಾಸ ಯೋಜನೆಯನ್ವಯ ಉಳಿದಿರುವ ಕಾಮಗಾರಿಗಳನ್ನು ಸಂಪೂರ್ಣಗೊಳಿಸಲು ತಾ. 30-6-57ರ ಒಳಗೆ ಅವಧಿ ವಿಸ್ತರಿಸಬೇಕೆಂದು ಸರಕಾರಕ್ಕೆ ವಿನಂತಿಸಿದ್ದುವಾಗಿ ಜಿಲ್ಲಾ ಕಲೆಕ್ಟರರು ತಿಳಿಸಿದರು.

ಗ್ರಾಮಾಂತರಗಳಲ್ಲಿನ ಬಡ ನಿವಾಸಿಗಳಿಗೆ ವಸತಿ ಕಟ್ಟಲು ಸಹಾಯ ಮೊದಲಾದ ಬಗ್ಗೆ ಪ್ರತಿ ವಸತಿಗೆ ರೂಪಾಯಿ 750/- ರಷ್ಟು ದೀರ್ಘಾವಧಿ ಕಂತಿನ ಸಾಲಗಳನ್ನು ಒದಗಿಸುವ ಬಗ್ಗೆ ಸರಕಾರವವರು ಮುಂದಿನ ಆರ್ಥಿಕ ವರ್ಷಕ್ಕೆ ಐದು ಲಕ್ಷ ರೂಪಾಯಿಯನ್ನಾದರೂ ಒದಗಿಸಬೇಕೆಂದೂ ಈ ಸಾಲವನ್ನು ತಾಲೂಕುವಾರಾಗಿ ದೊರಕಿಸುವ ವ್ಯವಸ್ಥೆ ಮೂಲಕ ಒದಗಿಸುವ ವ್ಯವಸ್ಥೆ ಮಾಡಬಹುದೆಂದೂ ಸರಕಾರವನ್ನು ಪಿನಂತಿಸುವ ನಿರ್ಣಯವೊಂದು ಸಭೆಯಲ್ಲಿ ಸ್ವೀಕರಿಸಲ್ಪಟ್ಟಿತು.

### ಅಭಿನಂದನ ಸಭೆ—

ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಯಿಂದ ಮೈಸೂರು ವಿಧಾನ ಸಭೆ ಮತ್ತು ಲೋಕಸಭೆಗಳಿಗೆ ಆರಿಸಲ್ಪಟ್ಟ ಕಾಂಗ್ರೆಸ್ ಸದಸ್ಯರುಗಳನ್ನು ಅಭಿನಂದಿಸಲೋಸುಗ ತಾ. 28 ರಲ್ಲು ಸಂಜೆ ಶರವು ಶ್ರೀ ಎಚ್. ನರಸಿಂಹಸವರ ಅಧ್ಯಕ್ಷತೆಯಲ್ಲಿ ಅವರ ಕಚೇರಿಯಲ್ಲಿ ಜರಗಿತು. ಈ ಸಭೆಯಲ್ಲಿ ಪ್ರಥಮ ಮತ್ತು ದ್ವಿತೀಯ ಪಂಚವಾರ್ಷಿಕ ಯೋಜನೆಗಳನ್ವಯ ತಾ. 31-12-56 ರ ತನಕ ಕೈಗೊಂಡ ವಿವಿಧ ಕಾರ್ಯಗಳ ಪ್ರಗತಿಯನ್ನು ಸಂಬಂಧಪಟ್ಟ ಇಲಾಖಾ ಅಧಿಕಾರಿಗಳು ವಿವರಿಸಿದರು. ಕಾರ್ಕಳದ ಕೆ. ಪಿ. ಮುಕುಂದ ಪ್ರಭುಗಳು ಕೆಲವೊಂದು ಪ್ರಶ್ನೆಗಳನ್ನು ಕೇಳಿದುದಕ್ಕೆ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳು ಸೂಕ್ತ ಉತ್ತರವನಿತ್ತರು. ಜಿಲ್ಲಾ ವೈದ್ಯಾಧಿಕಾರಿಗಳು ಉಡುಪಿಯ ಆಸ್ಪತ್ರೆಗೆ ಒಂದು ಎಕ್ಸ್‌ರೇ ವಿಭಾಗ ತೆರೆಯಲು ಶಿಫಾರಸು ಆಗಿದೆಯೆಂದೂ ಇತರ ತಾಲೂಕು ಕೇಂದ್ರದ ಆಸ್ಪತ್ರೆಗಳ ಅಭಿವೃದ್ಧಿಗೂ ಯೋಜನೆಯಿದೆಯೆಂದೂ ತಿಳಿಸಿದರು. ಸಮೂಹಜಿಕಾಸ ಯೋಜನೆಯನ್ವಯ ಉಳಿದಿರುವ ಕಾಮಗಾರಿಗಳನ್ನು ಸಂಪೂರ್ಣಗೊಳಿಸಲು ತಾ. 30-6-57ರ ಒಳಗೆ ಅವಧಿ ವಿಸ್ತರಿಸಬೇಕೆಂದು ಸರಕಾರಕ್ಕೆ ವಿನಂತಿಸಿದ್ದುವಾಗಿ ಜಿಲ್ಲಾ ಕಲೆಕ್ಟರರು ತಿಳಿಸಿದರು.

ಸಾಹಾರತೆದಿಂದ ಆಗ್ರಹಪೂರ್ವಕವಾಗಿ ಅಭಿನಂದಿಸಿದರು. ಶ್ರೀ ಕುಪ್ಪಿ ಶ್ರೀನಿವಾಸ ಶೆಟ್ಟಿಯವರು ಸಭಾಧ್ಯಕ್ಷತೆ ವಹಿಸಿದ್ದರು.

ರೋಕ ಸಭೆಗೆ ಆರಿಸಲ್ಪಟ್ಟ ಶ್ರೀ. ಕೆ. ಆಪ್ಪಾರ್, ಶಾಸನ ಸಭೆಗೆ ಆರಿಸಲ್ಪಟ್ಟ ಶ್ರೀಗಳಾವ ಸಿ. ಎಸ್. ಸೋಣಜ್ಜೆ (ಮೈಸೂರು ಕೈಗಾರಿಕಾ ಮಂತ್ರಿ) ಕೆ. ಮಲ್ಲಪ್ಪ, ಎಸ್. ಎಲ್. ಎ. ಬಿ. ವೈಕುಂಠ ಬಾಳಿಗ, ಎಸ್. ಎಲ್. ಎ. ಡಾ। ಕೆ. ಕೆ. ಹೆಗ್ಡೆ, ಬಿ. ಆರ್. ಕರ್ಕೇರ, ಗಜಾನನ ರಾವ್ ಪಂಡಿತ್, ಎಫ್. ಎಕ್ಸ್. ಡಿ. ಪಿಂಟೊ ಮತ್ತು ಎ. ಸುಬ್ಬಯ್ಯ ನಾಯಕರನ್ನು ಯಕ್ಷಗಾನ ಸಭೆಯ ಅಧ್ಯಕ್ಷೆ ಶ್ರೀ ಕೆ. ಬಾಲಕೃಷ್ಣರಾಯರು ಸ್ವಾಗತಿಸಿ, ಹಾರವನ್ನರ್ಪಿಸಿದರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷೆ ಡಾ। ಯು. ಪಿ. ಮುಲ್ಕ ಮತ್ತು ಕೊಡಗಿನ ಎಮ್. ಎಲ್. ಸಿ. ಗಳಾದ ಶ್ರೀ ನಾರಾಯಣ ಮೂರ್ತಿಗಳೂ ಉಪಸ್ಥಿತರಿದ್ದರು.

ಸಾಹಾರತೆದಿಂದ ಆಗ್ರಹಪೂರ್ವಕವಾಗಿ ಅಭಿನಂದಿಸಿದರು. ಶ್ರೀ ಕುಪ್ಪಿ ಶ್ರೀನಿವಾಸ ಶೆಟ್ಟಿಯವರು ಸಭಾಧ್ಯಕ್ಷತೆ ವಹಿಸಿದ್ದರು.

### ಟೀಚರ್ಸ್ ಗಿಲ್ಡಿನ ಸಭೆ—

ದ. ಕ. ಜಿಲ್ಲಾ ಟೀಚರ್ಸ್ ಗಿಲ್ಡಿನ ಕಾರ್ಯಕಾರೀ ಸಮಿತಿ ಸಭೆಯು ಕಳೆದ ತಾ. 24ರಲ್ಲು ಬಿ. ಇ. ಎಮ್. ಹೈಸ್ಕೂಲಲ್ಲಿ ರೆ. ಫಾ ಜೇಮ್ಸ್ ಕೊಯಿಲೊ ಎಸ್. ಜೆ. ಅವರ ಅಧ್ಯಕ್ಷತೆಯಲ್ಲಿ ಜರಗಿತು ನವಪ್ರಯೋಗಿನ ವಿದ್ಯಾ ಪುನರ್ಸಜನಾ ಸಮಿತಿ ಸದಸ್ಯ ಶ್ರೀ ಸಿ. ವಿ. ಜೋಬೋರವರು ಹಾಜರಿದ್ದರು. ಈ ಜಿಲ್ಲೆಯ ವಿದ್ಯಾಕ್ಷೇತ್ರದ ಸಮಸ್ಯೆಗಳ ಕುರಿತು ಪಿಚಾರವಿನಿಮಯ ನಡೆದು ಪ್ರಸಾದ ನಿರ್ಣಯವೊಂದರ ಸರಕಾರವನ್ನೂ ಬಿಟಸಿಗಿ ಅಭಿವೃದ್ಧಿಯವರನ್ನೂ ಗಿಲ್ಡಿನ ನವ್ಯತೆಯಿಂದ ಕೇಳಿಕೊಂಡರೂ ಕೂಡ ಮಾನಸಿ ಅಭಿವೃದ್ಧಿಯವರು ತಿದ್ದಿಪಸಂಬಳವರಗಳನ್ನು ಇನ್ನು ಜ್ಯಾರಿಗೆತರಲಿಲ್ಲ. ಅಂತೆಯೇ ಹೊಸವರವಲ್ಲಿ ಸಂಬಳವನ್ನು ಕೊಡುವ ವ್ಯವಸ್ಥೆಯಿರುವ ಜಿಲ್ಲಾ ಬೋರ್ಡಿನ ಬಜೆಟ್ ಸರಕಾರದಿಂದ ಇನ್ನು ಮಂಜೂರಾಗಿಲ್ಲಿ ನಿಂಬುದು ನಿಷ್ಠಾದಕರವಿದೆ. ಇದೀ ಜಿಲ್ಲೆಯ ಅಧ್ಯಾಪಕ ವೃಂದವು ಆಸಮಾಧಾನದಿಂದ ತಾಳ್ಮೆಗೆಟ್ಟಿರುವುದು ಸುಕ್ತು ಸರಕಾರವು ಹೊಸ ಸಂಬಳವನ್ನು ಶಾಲೆಗಳು ಪುನಸ ತೆರೆಯುವಷ್ಟರೊಳಗೆ ಜ್ಯಾರಿಗೆ ತರಲು ಬೇಕಾದ ಕಾರ್ಯಕ್ರಮವನ್ನು ಕೈಗೊಳ್ಳದಿದ್ದರೆ ಉಪಾಧ್ಯಾಯರು ತಮ್ಮ ನ್ಯಾಯವಾದ ಕೇಳಿಕೆಗಳನ್ನು ಪಡೆಯಲು ಜಳವಳವನ್ನು ಕೈಗೊಳ್ಳುವಂತೆ ಸೂಚಿಸಲು ಗಿಲ್ಡು ಅಸಮರ್ಥವಾಗಬಹುದೆಂ ಎಲ್ಲಿದೆ ಈ ಚಟುವಟಿಕೆಗಳು ಮುಂದಿನ ಜನಾಂಗದ ವಿದ್ಯಾಭ್ಯಾಸದ ಮೇಲೆ ಪ್ರತಿಕೂಲ ಪರಿಣಾಮವನ್ನುಂಟು ಮಾಡುವುದು ಎಂಬುದನ್ನು ಸರಕಾರದವರು ಮತ್ತು ಜಿಲ್ಲೆಯ ಜನಪ್ರತಿನಿಧಿಗಳಿಗೆ ಗಮನಕ್ಕೆ ತರಲಾಗಿದೆ. ಶ್ರೀಗಳಾವ ಎಸ್. ಮುಕುಂದರಾವ್, ಪಿ. ಎಸ್. ವೆಂಕಟೇಶ್ವರ ರಾವ್, ಉಮಾನಾಥ ನಾಯಕ್, ಮತ್ತು ಬಿ. ವೆಂಕಟ್ರಾವ್ ಇವರನ್ನೊಳಗೊಂಡ ಶಿಷ್ಟ ಮಂಡಳಿಯೆ ಹೊಸ ಮಂತ್ರಿಮಂಡಲ ರಚನೆಯಾಗುವಾಗ ಮುಖ್ಯ ಮಂತ್ರಿ ಸಾಗೂ ವಿದ್ಯಾ ಮಂತ್ರಿಗಳನ್ನು ಕಂಡು ಉಪಾಧ್ಯಾಯರ ಕೇಳಿಕೆಗಳನ್ನು ಅವರ ಮುಂದೆ ಇಡಬೇಕೆಂದೂ ಜಿಲ್ಲೆಯ ವಿಧಾನ ಸಭಾ ಸದಸ್ಯರೆನ್ನು ಕಂಡು ಆವರಿಗೂ ಉಪಾಧ್ಯಾಯರ ಕೇಳಿಕೆಗಳನ್ನು ವಿವರಿಸಬೇಕೆಂದೂ ನಿರ್ಣಯವಾಯಿತು.

### ದ. ಕ. ಜಿಲ್ಲಾ ಅಭಿವೃದ್ಧಿ ಮತ್ತು ಹಿತಚಿಂತಕ ಮಂಡಳಿಯ ಸಭೆಯು

ಶಾ. 23ರಲ್ಲು ಶ್ರೀ ವಿ. ಎಸ್. ಕಾಮತ್ ಅಧ್ಯಕ್ಷತೆಯಲ್ಲಿ ಜರಗಿ ಲೋಕಸಭಾ ಸದಸ್ಯ ಶ್ರೀ ಕೆ ಆರ್. ಆಚಾರ್ ಮತ್ತು ವಿಕಾಸ ಸಭಾಸದಸ್ಯರಾದ ಶ್ರೀಗಳಾವ ಬಿ. ವಿ. ಬಾಳಿಗ, ಡಾ। ಕೆ. ಕೆ. ಹೆಗ್ಡೆ, ಬಿ. ಆರ್. ಕರ್ಕೇರ, ಬಿ. ಜಗಜ್ಜೀವನದಾಸ್ ಸೆಟ್ಟಿ ಮತ್ತು ಸುಬ್ಬಯ್ಯ ನಾಯ್ಕರಿಗೆ ಸತ್ಕಾರ ಸಮಾರಂಭ ಜರಗಿತು. ಆರಂಭದಲ್ಲಿ ಸಭಾಧ್ಯಕ್ಷರು ಮುಖ್ಯ ಅತಿಥಿಗಳನ್ನು ಸ್ವಾಗತಿಸಿದರು. ಮುಂದಕ್ಕೆ ಕಾರ್ಯದರ್ಶಿ ಶ್ರೀ ಬಿ. ಬಿ ಸೆಟ್ಟರು, ಶಾಸನ ಸಭಾ ಪ್ರತಿನಿಧಿಗಳ ಪಾತ್ರ ಮತ್ತು ಹೊಣೆಗಳನ್ನು ವಿವರಿಸಿ, ಜಿಲ್ಲಾಭಿವೃದ್ಧಿಕಾರ್ಯ ಳಲ್ಲಿ ಅವರು ಸಾಧಿಸುವ ಕಾರ್ಯಗಳನ್ನು ವಿವರಿಸಿದರು. ಶ್ರೀಗಳಾವ ಕೆ ಆರ್. ಆಚಾರ್ ಮತ್ತು ಬಿ. ವಿ. ಬಾಳಿಗರು ಜಿಲ್ಲಾಭಿವೃದ್ಧಿ ಕಾರ್ಯಗಳ ಸಫಲತೆಗೆ ತಾವು ಶಕ್ತಿ ಮೀರಿ ದುಡಿಯುವುದಾಗಿ ತಿಳಿಸಿದರು. ಡಾ। ಯು. ಪಿ. ಮುಲ್ಕರು ವಂದನೆಗಳನ್ನರ್ಪಿಸಿದರು.

### ನಗರಸಭೆಯು—

ಕಳೆದ ತಾ. 29 ರಂದು ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ನಗರಸಭಾ ಸದಸ್ಯರಾದ ಶ್ರೀಮತಿ ಬ್ರಿಟೋ ಮತ್ತು ಶ್ರೀ ನೋನಪ್ಪ ಶೆಟ್ಟರ ಸದಸ್ಯತನವನ್ನು ಊರ್ಜಿತಗೊಳಿಸುವ ಕುರಿತು ಆಲೋಚಿಸಲಾಯಿತು. ಸಭಿಕರಲ್ಲಿ ಭಿನ್ನಾಭಿಪ್ರಾಯವಿದ್ದುದರಿಂದ ಶ್ರೀಮತಿ ಬ್ರಿಟೋರವರ ಪರ್ಯಾಯ ತೀರ್ಮಾನವನ್ನು ಮುಂದಿನ ಸಭೆಯಲ್ಲಿ ಮಂಡಿಸಲಾಯಿತು. ಶ್ರೀ ಮೋನಪ್ಪ ಶೆಟ್ಟರ ಸದಸ್ಯತನವನ್ನು ಊರ್ಜಿತಗೊಳಿಸಲಾಯಿತು. ಕುದ್ರೋಳಿ ಸೇತುವೆಯ ರಚನೆಗಾಗಿ ಸೈಲೂರು ಸರಕಾರದಿಂದ ರೂ. 37000 ಗ್ರಾಂಟು ಮತ್ತು ರೂ. 37000 ಸಾಲದೊರೆತು ವಾಸಿಯೂ ಆರು ರಸ್ತೆಗಳಿಗಾಗಿ ರೂ. 53167 ಅಭಿವೃದ್ಧಿ ಕಾರ್ಯಕ್ರಮಗಳಿಗೆನು ಸಾರವಾಗಿ ಬೊರಕಿವೆಯೆ ದೂ ಅಧ್ಯಕ್ಷರು ಸಭೆಯಲ್ಲಿ ತಿಳಿಸಿದರು ಮಂಗಳೂರು ಬಸ್ ನಿಲ್ದಾಣದ ವಸತಿಗೃಹವನ್ನು ನಗರ ಸಭೆಯೇ ನಡೆಸಿಕೊಂಡು ಬರಬೇಕೆಂಬ ಹೆಚ್ಚಿನ ಸದಸ್ಯರ ಸೂಚನೆ ದಂತೆ ನಿರ್ಣಯವಾಯಿತು.

### ಅಭಿನಂದನಾ ಕೂಟ—

ಕಾರ್ಕಳ ನು ತಡಾರ ಕ್ಷೇತ್ರದ ಕಾಡಿಟ್ಟ ಸ್ಥಾನದಿಂದ ಆರಿಸಿಬಂದ ವಿಧಾನಸಭಾ ಸದಸ್ಯ ಶ್ರೀಉಳ್ಳಾಲ ಮಂಜಪ್ಪನವರಿಗೆ ದೇರೆಬೈಲು ದಡಲಕಾಡು ವಿ. ಸಿ. ಎಮ್. ಸರಿಜನ ಕೊಲ್ಲನಿಯ ಸ್ವಾಮಿ ಈಶ್ವರಾನಂದ ಭಜನಾಮಂದಿರಯ ಪತಿಯಿಂದ ತಾ. 24ರಲ್ಲು ಸಂಜೆ ಜಿಲ್ಲಾ ಯೋಜನಾಧಿಕಾರಿ ಶ್ರೀ ಡಿ. ಕೃಷ್ಣನವರ ಅಧ್ಯಕ್ಷತೆಯಲ್ಲಿ ಅಭಿನಂದನಾ ಕೂಟ ಜರಗಿ ಹಲವರ ಕಾಲೋಚಿತ ಭಾಷಣಗಳಾಮವು


ಆಲ್ಫ್ರೆಡ್ ನಾರ್ಥ್ ವೈಟ್‌ಹೆಡ್ ಬರೆದ

# ಶಿಕ್ಷಣದ ಧ್ಯೇಯಗಳು

ಮತ್ತು ಇತರ ಪ್ರಬಂಧಗಳು

ಅನುವಾದಕರು:

ಕೆ. ಬಿ. ರಾಮಕೃಷ್ಣ ರಾವ್, ಬಿ. ಎ. (ಆನರ್ಸ್)

ಉ. ಲಕ್ಷ್ಮೀನಾರಾಯಣಾಚಾರ್ಯ, ಎಂ. ಎ; ಎಲ್. ಟಿ.

ಆಲ್ಫ್ರೆಡ್ ನಾರ್ಥ್ ವೈಟ್‌ಹೆಡ್ ಇವರು ಒಬ್ಬ ಪ್ರಖ್ಯಾತ ಗಣಿತಜ್ಞ, ದಾರ್ಶನಿಕ ಮತ್ತು ಶಿಕ್ಷಣ ಶಾಸ್ತ್ರ ಪ್ರವೀಣರು. ಲಂಡನಿನ ಇಂಪೀರಿಯಲ್ ಕಾಲೇಜು ಮತ್ತು ತದನಂತರ ಹಾರ್ವರ್ಡಿನಲ್ಲಿ ಇವರು ದರ್ಶನಶಾಸ್ತ್ರವನ್ನು ಕಲಿಸಿ ಪ್ರಪಂಚದ ನಾನಾ ದೇಶಗಳ ವಿದ್ಯಾರ್ಥಿ ವೃಂದವನ್ನು ಆನು ಗ್ರಹಿಸಿದ್ದಾರೆ. 'ಪ್ರಿನ್ಸಿಪಿಯ ಮೆಥಮೆಟಿಕಾ' (ಬರ್ಟ್ರಾಂಡ್ ರಸ್ಸೆಲರೊಡನೆ) 'ಸಾಯನ್ಸ್ ಎಂಡ್ ದಿ ಮೋಡರ್ನ್ ವರ್ಲ್ಡ್' 'ಎಡ್ವೆಂಚರ್ಸ್ ಆಫ್ ಐಡಿಯಾಸ್' ಮತ್ತು ಈಗ ನಿಮ್ಮ ಕೈಯಲ್ಲಿರುವ 'ಏಮ್ಸ್ ಆಫ್ ಎಜ್ಯುಕೇಶನ್' ಇವು ಶ್ರೇಯುತರ ಗ್ರಂಥಗಳಲ್ಲಿ ಮಹತ್ವಪೂರ್ಣ ವೆಂದು ವಿಶ್ವದ ವೈಚಾರಿಕರ ಮತವಾಗಿದೆ.

ಈ ಗ್ರಂಥದಲ್ಲಿ ಅಧ್ಯಯನ ಮತ್ತು ಅಧ್ಯಾಪನದ ಬೌದ್ಧಿಕ ನೆಲೆ ಯಾವುದು, ಹೇಗಿರಬೇಕು ಎಂಬುದರ ಕುರಿತಾಗ್ರ ವಿವೇಚನೆ ಇದೆ. ವಿದ್ಯಾರ್ಥಿಗಳು ಸೃಜೇತನ ವ್ಯಕ್ತಿಗಳೆಂಬು ದನ್ನು ಸಂಪೂರ್ಣವಾಗಿ ಪರಿಗ್ರಹಿಸಿದರೆ ಮಾತ್ರ ಶಿಕ್ಷಣವು ಪ್ರಗತಿಶೀಲವಾಗಿ ನಡೆಯುವುದು ಸಾಧ್ಯವೆಂದು ಇಲ್ಲಿ ಸಾಧಾರವಾಗಿ ಶ್ರೀ. ವೈಟ್‌ಹೆಡ್ ಪ್ರತಿಪಾದಿಸಿರುವರು.

ಬೆಲೆ: $\frac{2-4-0}{2\cdot 25}$ ರೂ.

ಪ್ರಕಾಶಕರು:

ನವಯುಗ ಎಂಟರ್‌ಪ್ರೈಸಸ್ ಲಿಮಿಟೆಡ್, ಉಡುಪಿ.


### ಹಿರ್ಗಾನ್ ಪಂಚಾಯತ್ ಬೋರ್ಡುಕೋರ್ಟಿನಲ್ಲಿ

ಸಿವಿಲ್ ನ್ಯಾಯ್ಯದ ನಂಬ್ರ 1/57.

ಶಂಕರ ಶೆಟ್ಟಿ, ಕೃಷ್ಣಯ್ಯ ಶೆಟ್ಟಿ ಆಳಿಯ ಎಲ್ಕಾಡಿ ಗ್ರಾಮದ ಚೆಂಡೆ ಬೈಲು ಎಂಬಲ್ಲಿರುವವ —ವಾದಿ

ಕೊರಗ ಶೆಟ್ಟಿ, ಚಂಪಪ್ಪ ಶೆಟ್ಟಿ ಆಳಿಯ ಎಲ್ಕಾಡಿ ಗ್ರಾಮದ ಕಾಂತರಗೋಳಿ ಎಂಬಲ್ಲಿರುವವ —ಪ್ರತಿವಾದಿ

ವಾದಿಗೆ ನೀವು ರೂಪಾಯಿ 35-0-0ಕ್ಕೆ ಬರಕೊಟ್ಟು ದಿ. ಪ್ರೋ. ನೋಟಿನ ಅಸಲು ಬಡ್ಡಿ ಏನೇಜು ರೂಪಾಯಿ 40-12-0ನ್ನು ಬರಕೊಡಿಕೊಳ್ಳುವರೆ, ವಾದಿಯು ಈ ಕೋರ್ಟಿನಲ್ಲಿ ವ್ಯಾಜ್ಯ ದಾಖಲುಮಾಡಿರುತ್ತಾರೆ. ಆದನ್ನು ನೆನಕೆ ಬಗ್ಗೆ ಇದೇ ಬರುವ ತಾ. 18-4-57ನೇ ದಿನ ಅಪರಾಹ್ನ 3 ಗಂಟೆಗೆ ಇಟ್ಟುಕೊಂಡಿರುತ್ತದೆ. ಆದುದರಿಂದ ನೀವು ಆ ದಿನಸ ಈ ಕೋರ್ಟಿನ ಮುಂದೆ ಸ್ವತಃ ಯಾ ಏಜಂಟರ ಮುಖಾಂತರ ಹಾಜರಾಗಿ ನಿಮ್ಮ ಅಕ್ಷೇಪಣೆಯನ್ನು ಹಾಜರುಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಎಕ್ಸಪಾರ್ಟಿ ತನ್ನ ನಡಿಸಿ ನ್ಯಾಯ್ಯವನ್ನು ತೀರ್ಮಾನಿಸಲಾಗುವುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

J. Diwakar Hegde.
President Hirgan Panchayat
Post Yerlapady.

Dated 24-3-1957.

## ಭಾರತೀಯ ಪಂಚಾಂಗ

(೩ನೇ ಪುಟದಿಂದ)

ಬರುವಂತೆ ಮಾಡಬೇಕೆಂಬುದೇ ಮೇಲ್ಕಂಡ ಸಮಿತಿಯ ಅತ್ಯಂತ ಮಹತ್ವದ ಶಿಫಾರಸ್ ಆಗಿದೆ. ಈ ಬದಲಾವಣೆಯು ಎಷ್ಟು ಅತ್ಯಲ್ಪವಾಗಿದೆಯೆಂದರೆ ತಜ್ಞನಾದ ಪಂಚಾಂಗ ಕರ್ತನ ಹೊರತು ಇತರರಿಗೆ ಇದರಿಂದ ಯಾವ ವ್ಯತ್ಯಾಸವೂ ಕೆಂಡು ಬರುವುದಿಲ್ಲ. ಆದರೆ ಈ ಬದಲಾವಣೆಯು ಪರಿಣಾಮವು ಮಾತ್ರ ಬಹು ಮಹತ್ವದ್ದಾಗುತ್ತದೆ. ಇನ್ನು ಮುಂದೆಯಾದ ದೋಷವೂ ಪಂಚಾಂಗನಲ್ಲಿ ತಲೆ ಹಾಕಲಾರದು ಹಾಗೂ ಭಾರತೀಯ ಹೆಬ್ಬಗಳು ಇಂದಿನಂತೆ ಇನ್ನು ಮುಂದೆ ಸಹ ಆಯಾಋತುಗಳಲ್ಲಿಯೇ ಬರುವುವು.

ಈಗಾಗಲೇ ಒಟ್ಟುಗೂಡಿರುವ ಮತ್ತು ಸುಮಾರು ೨೨ ದಿನಗಳಷ್ಟಾಗುವ ತಪ್ಪಿನ ಬಗ್ಗೆ ವಿಚಾರ ಮಾಡಿದ ನಂತರ, ಕೆಲವು ದಿನಗಳನ್ನು ಬಿಟ್ಟುಬಿಡಬೇಕೆಂದು ಸಿಫಾರಸು ಮಾಡುವುದು ಸರಿಯುಲ್ಲವೆಂದು ಸಮಿತಿಯು ಭಾವಿಸಿತು. ಜೂಲಿಯನ್ ಕೀರ್ಯುರನು ಒಂದು ವರ್ಷಕ್ಕೆ ೬೬ ಹೆಚ್ಚಿನ ದಿನಗಳನ್ನು ಕೂಡಿಸಿದರೂ, ಆಂಗ್ಲರು ಒಂದು ವರ್ಷದಲ್ಲಿ ೧೨ ದಿನಗಳನ್ನು ಬಿಟ್ಟುಕೊಟ್ಟರೂ, ಭಾರತವು ೨೨ ದಿನಗಳನ್ನು ಬಿಟ್ಟುಕೊಟ್ಟದ್ದೇ ಆದರೆ ಇಲ್ಲಿಯ ಪ್ರತಿಯೊಬ್ಬನೂ ಪ್ರತಿಭಟಿಸುತ್ತಿದ್ದನು. ಆದ್ದರಿಂದ ಹಿಂದೂ ಚಾಂದ್ರಮಾನ ಪಂಚಾಂಗವು ಹಿಂದಿನಂತೆಯೇ ಮುಂದೆ ಸಹ ಸಾಗುವುದು.

ಆದರೆ ಸೌರಮಾನ ತಿಂಗಳಗಳ ಹೆಸರುಗಳಲ್ಲಿ ಏಕ ರೂಪತೆಯನ್ನು ಸಾಧಿಸಲು ಈ ಮುಂದಿನ ಸಿಫಾರಸನ್ನು ಸಮಿತಿಯು ಮಾಡಿದೆ. ಬಂಗಾಲ, ಅಸ್ಸಾಮು, ಹಾಗೂ ಒರಿಸ್ಸಾಗಳಲ್ಲಿಯ ಸೌರಮಾನ ತಿಂಗಳುಗಳು ಇಂಪನಕ್ಕಿಂತಲೂ ಸುಮಾರು ೯೬ ದಿನ ತಡವಾಗಿ ಸುರುವಾಗತಕ್ಕದ್ದು ಹಾಗೂ ತಮಿಳ ನಾಡಿನಲ್ಲಿಯ ಸೌರಮಾನ ತಿಂಗಳುಗಳು ಇಂದಿನಕ್ಕಿಂತಲೂ ಸುಮಾರು ೩೩ ದಿನಗಳ ಮೊದಲು ಪ್ರಾರಂಭವಾಗತಕ್ಕದ್ದು ಏಕೆಂದರೆ ಈಗಿನ ಪದ್ಧತಿಯ ಪ್ರಕಾರ, ಬಂಗಾಲದಲ್ಲಿ ವೈಶಾಖವೆಂದು ಕರೆಯುವ ತಿಂಗಳನ್ನು ತಮಿಳ ನಾಡಿನಲ್ಲಿ ವೈತ್ರವೆಂದು ಕರೆಯಲಾಗುತ್ತದೆ.

ಪಂಚಾಂಗವ ಸುಧಾರಣಾ ಸಮಿತಿಯು ಇತರ ಬದಲಾವಣೆಗಳ ಬಗ್ಗೆ ಮಾಡಿದ ಸಿಫಾರಸುಗಳು ಅಂತಹ ಮಹತ್ವದ್ದಲ್ಲ; ಇವುಗಳ ಗುರಿಯು ಭಾರತದ ಸಕಲ ಪಂಚಾಂಗಗಳಲ್ಲಿ ಏಕರೂಪತೆಯಿರುವಂತೆ ಆಗಿದೆ. ಭಾರತದ ತುಂಬ ಶಕೆಯ ಪ್ರಕಾರ ಸಂವತ್ಸರಗಳನ್ನು ಎಣಿಸಬೇಕೆಂಬ ಒಂದು ಸಿಫಾರಸಿನ ಬಗ್ಗೆ ಸ್ವಲ್ಪ ವಾದವಿವಾದಗಳು ನಾಗಿವೆ. ಹೀಗೆ ಸಿಫಾರಸು ಮಾಡಲು ಕಾರಣವೇನೆಂದರೆ ಭಾರತದ ಬಹು ಪ್ರದೇಶದಲ್ಲಿ ಶಕೆಯು ಈಗಾಗಲೇ ಪ್ರಚಲಿತವಿದೆ; ಇನ್ನುಳಿದ ಪ್ರದೇಶಗಳಲ್ಲಿ ವಿಕ್ರಮ ಶಕೆಯ ಬದಲಾಗಿ ಮಾತ್ರ ಇದನ್ನು ಉಪಯೋಗಿಸಲಾಗುತ್ತದೆ.

ಹೀಗೆ ಅಕ್ಷೇಪಿಸುವವರು ಭಾವನಾವಶರಾಗಿದ್ದಾರೆ. ಅವರು ಕೊಡುವ ಮುಖ್ಯ ಕಾರಣವು ಇದು ವಿಕ್ರಮ ಶಕದಷ್ಟು ಹಳೆಯದಲ್ಲವೆಂಬುದು ಇನ್ನು ಕೆಲವರು ಇದಕ್ಕಿಂತ ಹಳೆಯದಾದ ಬುದ್ಧ ಶಕೆಯನ್ನು ಪ್ರಾರಂಭಿಸಬೇಕೆಂದು ಸಹ ಸೂಚಿಸಿದ್ದಾರೆ ಶಾಸ್ತ್ರೀಯ ದೃಷ್ಟಿಯಿಂದ ವಿಚಾರ ಮಾಡಿದರೆ, ಯಾವ ಶಕೆಯನ್ನು ಉಪಯೋಗಿಸಿಕೊಂಡರೂ ಬಾಧಕವಾಗಲಿ. ಆದರೆ ಅಖಿಲ ಭಾರತದಲ್ಲಿ ಏಕರೂಪತೆಯು ಮಾತ್ರ ಇರಲೇಬೇಕು.

ಇಂತಹ ಏಕರೂಪತೆಯು ಸಾಧಿಸುವಂತೆ ಕಾನಿಷ್ಕ ಬದಲಾವಣೆಗಳನ್ನು ಮಾಡುವ ಹಾಗು ಇನ್ನ ಮುಂದೆ ಸಹ ದೋಷಗಳು ಒಟ್ಟುಗೂಡದ ಹಾಗೆ ಮಾಡುವ ಧೋರಣೆಯನ್ನಿಟ್ಟುಕೊಂಡು ಪಂಚಾಂಗ ಸುಧಾರಣಾ ಸಮಿತಿಯು ಸಿಫಾರಸು ಮಾಡಿದೆ. ಈ ಸಿಫಾರಸಿಗನುಸಾರವಾಗಿ ರಚಿಸಿದ ಪಂಚ ವಾರ್ಷಿಕ ಪಂಚಾಂಗ ವೊಂದನ್ನು ಸರಕಾರವು ಈಗಾಗಲೇ ಪ್ರಸಿದ್ಧಿಪಡಿಸಿದೆ. ಇನ್ನು ಮುಂದೆ ಸಹ, ಹೊಸ ವರ್ಷವು ಬರುವ ಸಾಕಷ್ಟು ಮೊದಲೇ ಪಂಚಾಂಗವು ಪ್ರಸಿದ್ಧವಾಗುವುದು.

ಏರೋಪ್ಯರು ಪಂಚಾಂಗ ಸುಧಾರಣೆಯ ಬಗ್ಗೆ ಮಾತನಾಡುವಾಗ, ಬೇರೊಂದು ಅರ್ಥದಲ್ಲಿಯೇ ಮಾತಾಡುತ್ತಾರೆ, ಜನವರಿ ೧ನೆಯ ತಾರೀಖು ಪ್ರತಿ ವರ್ಷ ವಾರದ ಅದೇ ದಿನ ಬರುವಂತಹ ಪಂಚಾಂಗವು ಆವರಿಗೆ ಬೇಕಾಗಿದೆ ವಾರದ ಕೊನೆಯ ಎರಡು ದಿನಗಳನ್ನೂ ರವಿವಾರವೆಂದು ಕರೆಯುವದರಿಂದ, ಅಥವಾ ಒಂದನ್ನು ರವಿವಾರವೆಂದೂ ಹೆಸರಿಲ್ಲದ ಮರುದಿನವನ್ನು ಬ್ಯಾಂಕ್—ರಜಾ ದಿನವೆಂದೂ, ಅನಂತರದ ದಿನವನ್ನು ಸೋಮವಾರವೆಂದೂ ಕರೆಯುವದರಿಂದ ಮಾತ್ರ ಹೀಗೆ "ವೀಕ್" ವರ್ಷಗಳಲ್ಲಿ (೪ ವರ್ಷಕ್ಕೊಮ್ಮೆ) ಅಂತಹ ಹೆಸರಿಲ್ಲದ ಅಥವಾ ಬ್ಯಾಂಕ್ ರಜೆಯ ಎರಡು ದಿನಗಳು ಬರುತ್ತವೆ.

ಕ್ರಿಶ್ಚಿಯನ್ ಧರ್ಮದ ಸಬ್ಬಾತ್ ಹಬ್ಬದ ಆಚರಣೆಗೆ ಇದರಿಂದ ಆತಂಕವೂ ಬಾಗುವುದರಿಂದ, ಅನೇಕರು ಈ ಬದಲಾವಣೆಯನ್ನು ಆಕ್ಷೇಪಿಸುತ್ತಾರೆ. ಮೇಲಾಗಿ ವಿಶ್ವದ ಸಕಲ ಸರಕಾರಗಳು ಅಳವಾಗಿ ವಿಚಾರಿಸುವಷ್ಟು ಅನುಯಾಯಿಗಳ ಬೆಂಬಲವು ಈ ಯೋಜನೆಗೆ ಇನ್ನೂ ಸಿಕ್ಕಿಲ್ಲ.

— ಡಾ. ಗೋರಿಖ ಪ್ರಸಾದ.
(ಸಂಯುಕ್ತ ಕರ್ನಾಟಕ)

## ಪುಸ್ತಕ-ವಿಮರ್ಶೆ

(ವಿಮರ್ಶನಾರ್ಥವಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ನ.)

**ಕೈಲಾಸದಲ್ಲಿ ಕಮ್ಯುನಿಸ್ಟರು—**

(ನಾಟಕ) ಬರೆದವರು ಎಸ್ ವೆಂಕಟರಾಜ. ಪ್ರಕಾಶಕರು: ಶ್ರೀ ಕೃಷ್ಣ ಪ್ರಕಾಶನ ಉಡುಪಿ. ಬೆಲೆ: ಒಂದು ರೂಪ್ಯಾ. ಕ್ರೌನ್ ೪ ಆಕಾರದ ೧೨ ಪುಟಗಳು.

ಕವಿ ಹೃದಯ ಮತ್ತು ಕಲ್ಪನಾ ಸಾಮರ್ಥ್ಯವುಳ್ಳ ಪ್ರತಿಭಾಶಾಲಿ ವೆಂಕಟರಾಜರು (ಕೇರಳ ಉಡುಪಿಗಳಲ್ಲಿ ಮಾತ್ರವಲ್ಲ!) ಕೈಲಾಸದಲ್ಲಿಯೂ ಕಮ್ಯೂನಿಸ್ಟರ ಪ್ರಭಾವನನ್ನು ಕವಿ ಕಣ್ಣಿನಿಂದ ಕಂಡಿದ್ದಾರೆ.

ಬುದ್ಧನ ಅವತಾರವಾಗಿ ಎರಡು ಸಾವಿರ ವರುಷಗಳ ನಂತರ ನಾರದನು ಭೂಲೋಕದ ದರ್ಶನಕ್ಕೆ ಬಂದು ಇಲ್ಲಾದ ಪ್ರಗತಿಯನ್ನು ಕಂಡು ಅವುಗಳ ಪ್ರತೀಕವಾದ ಹೊಗೆಬತ್ತಿಯೊಂದನ್ನು ಸಂಗ್ರಹಿಸುವುದರ ಜೊತೆಗೆ ಮಹಾತ್ಮಗಾಂಧೀಜಿಯವರಿಂದ ಉಂಟುಮಾಡಿದ ಯುಗ ಪರಿವರ್ತನೆಯ ಅನುಭವವನ್ನೂ ಕೇರಳದ ಲ್ಲಾಂಟಾಗಿರುವ ಕಮ್ಯೂನಿಸಮಿನ ಪ್ರಭಾವವನ್ನೂ ತಿಳಿದುಕೊಳ್ಳುತ್ತಾನೆ ಮತ್ತೆನಲ್ಲಿ


ಒಂದು ಹೊಸ ಮಹಾ ಕಾದಂಬರಿ

# ನಡುಹಗಲಿನ ಕಗ್ಗತ್ತಲೆ

ಸಿಲ್ಕ್ ಪುಟಗಳು ಬೆಲೆ 2·50 ರೂಪಾಯಿ

- ಯುರೋಪಿನಲ್ಲಿ ಈಗ ನಲ್ವತ್ತು ವರ್ಷಗಳ ಹಿಂದೆ ನಡೆದು ಇಡೀ ಪ್ರಪಂಚವನ್ನೇ ತಲ್ಲಣಗೊಳಿಸುತ್ತಿರುವ ಒಂದು ರಾಜನೈತಿಕ ಪದ್ಧತಿಯಿಂದ ಮನುಷ್ಯನ ಆತ್ಮವು ಪತನವಾಗುತ್ತಿರುವ ದುರಂತದ ಒಂದು ಮಾರ್ಮಿಕ ಕಾದಂಬರಿ.
- ರತಿಯದ ರಕ್ತಮಯ ಕ್ರಾಂತಿಯು ವ್ಯಕ್ತಿಯ ಜೀವ ಮತ್ತು ತ್ಯರನ್ನು ನಿರ್ದಾಕ್ಷಿಣ್ಯವಾಗಿ ಹೀರುವ ಭೀಕರ ಚಿತ್ರಣ.
- ಇದರಲ್ಲಿ ಪ್ರಚಲಿತ ಪ್ರಪಂಚದ ರಾಜನೀತಿ, ಇತಿಹಾಸ, ಮತ್ತು ಅಂತರಾತ್ಮಾನ್ವೇಷಣೆಯ ಒಳನೋಟ ದೊರೆಯುತ್ತದೆ.
- ಪ್ರಖ್ಯಾತ ಲೇಖಕ ಆರ್ಥರ್ ಕೊಸ್ಲರ್ ಅವರ ಜರ್ಮನ್ ಕಾದಂಬರಿಯ ಮನೋಜ್ಞ ಕನ್ನಡವನ್ನು ಅನುವಾದಿಸಿದವರು **ಕು. ಶಿ. ಹರಿದಾಸ ಭಟ್ಟರು.**

ಪ್ರಕಾಶಕರು:

**ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ.**

(ಪ್ರತಿಗಳು ನವಭಾರತ ಪುಸ್ತಕ ಭಂಡಾರ, ಉಡುಪಿ, ಇಲ್ಲಿಯೂ ದೊರೆಯುತ್ತವೆ)







ಕೆಂಪು ಬಾವುಟ, ಕಮ್ಯೂನಿಸಮ್ ಸಾಮಗ್ರಿ ಇತ್ಯಾದಿ ವಿಡಿಗಳನ್ನು ಸಂಗ್ರಹಿಸಿ ಕೈಲಾಸಕ್ಕೆ ತಂದಿಟ್ಟರಿನ ಜೊತೆಯಲ್ಲಿ ತೆರಳಿ ಅಲ್ಲಿ ಕಮ್ಯೂನಿಸಮಿನ "ಹೆಬ್ಬುಪ ರೋಗ"ವನ್ನು ಹಬ್ಬಿಸಿ, ಅನೂಲಕ ಕ್ರಿಯಾಶೂರ್ತಿಗಳನ್ನು ಬೆರಗುಗೊಳಿಸುತ್ತಾನೆ. ಕೈಲಾಸದಲ್ಲಿ ದೇವ, ದೇವತೆ, ಭೂತಗಣಗಳೆಲ್ಲವೂ "ನಿಗಳೇ ಬೇಕು" ಲಾಲ್ ಝಂಡೇಕೀ ಜಿಂದಾಬಾದ್" ಘೋಷಣೆಗಳನ್ನು ಮಾಡುತ್ತಾ "ರಕ್ತ ಕ್ರಾಂತಿ" ಗಾಗಿ ಹಾತೊರೆಯುತ್ತಿರುವರು. ಕೈಲಾಸವು ಕಮ್ಯೂನಿಸಂನ ಹಾವಳಿಯಿಂದ ಬೆಂದುಹೋದ ಮೇಲೆ ನಾರದನೇ ಮುಂದಾಗಿ ನಂದಿಯೇ ಮೊದಲಾದ ಕಾವ್ಯೋದ್ಗಳಿಗೆ ಬುದ್ಧಿ ಹೇಳಬೇಕಾಗುತ್ತದೆ. 'ಇದು ಇವರ ತಪ್ಪಲ್ಲ; ಎವುದೋ ಶಂದ ಬುದ್ಧಿಬಿಂದಾಗಿ ನಡೆದ ತಪ್ಪೆಂದು' ಒಡಂಬಡಿಸುತ್ತಾನೆ. ಕಮ್ಯೂನಿಸಂನ ಪ್ರಭಾವವನ್ನು ತಡೆಯಬೇಕಾದರೆ ಗಾಂಧೀವಾದ ಉತ್ತಮವೂ ಶಾಂತಿಯುತವೂ ಸಮಾಜಕ್ಕೆ ಹಿತಕರವೂ ಆದ ಮಾರ್ಗವೆಂದು ಜೋಸಿಸುತ್ತಾನೆ.

ನಾಟಕವಿದು ಅತ್ಯಂತ ಪರಿಣಾಮಕಾರಿಯಾಗಬಹುದಾದ ವಿಡಂಬನಾತ್ಮಕ ಪ್ರಹಸನವೆಂದರೂ ಸಲ್ಲುವುದು. ರಂಗಭೂಮಿಯಲ್ಲಿ ದೃಶ್ಯಗಳನ್ನು ಅಳವಡಿಸಿಕೊಳ್ಳುವುದಕ್ಕೆ ಅತಂಕವಾಗದಂತೆ ಮಾಡಿದ ದೃಶ್ಯಗಳ ಜೋಡಣೆಯು, ಕವಿ ವೆಂಕಟರಾಜರ ರಿಗಿರುವ ರಂಗಭೂಮಿಯ ಅನುಭವವನ್ನೂ ಪ್ರದರ್ಶಿಸುತ್ತದೆ. ಲೋಕಕ್ಕೆ ಗಾಂಧೀವಾದವೊಂದೇ ಕಂಟಕ ಪರಿಹಾರವಾದ ಮಾರ್ಗವೆಂಬ ತತ್ವವನ್ನು ಯಕ್ಷಗಾನಕ್ಕೂ ಹಿಮಗರಲ್ಲಿಯೂ ನೋಟಿಕರಲ್ಲಿಯೂ ಒಡಕುಮಾಡಿಸುತ್ತದೆ. "ನೀನು ಯೇಕೆ ಕೆಲಸಮಾಡುತ್ತಿದ್ದೀಯಾ? ಯಾತಿಗಾಗಿ? ಅವನಿಗಾಗಿ ನೀನು ದುಡಿದು ಅವನ ಹೊಟ್ಟೆಯು ತುಂಬುವುದಾದರೆ ನೀನು ಏಕೆ ದುಡಿಯಬೇಕು?—ನೀನೂ ದುಡಿಯುವುದೂ ಬೇಡ, ನಾನೂ ದುಡಿಯುವುದಿಲ್ಲ. ಅತ್ತಿ ಅವನ ಹೊಟ್ಟೆ ಹೇಗೆ ತುಂಬುವುದು ನೋಡೋಣ" ಎಂದು ತುಂಬರನ ಉದಾಹರಿಸುವ ಕಾಮ್ರೇಡ್ ನಾಯಕರಿ ಮಾತುಗಳು ಕಮ್ಯೂನಿಸಮ್ಮಿನ ಪ್ರಭಾವಕ್ಕೆ ಮೂಲ ಮಂತ್ರಗಳೆಂಬುದು ಕಠೋರ ಸತ್ಯ. "ವಿಶ್ವಿಂಪಲೋ ಒಂದು ಕೆಂಪು ಬಾವುಟವನ್ನು ಎರವು ತಂದು ಹಿಡಿದು ಆಡ್ಡಾಡುತಿದ್ದಾರೆ. ಮತ್ತೆ ಕೆಲವೆಲವರು ಎತ್ತಲೋ ಹೋಗಿ ತಮ್ಮ ತಲೆಗಳನ್ನು ಇಂತಹ ಅಮೂಲ್ಯ ವಿಚಾರಗಳಿಂದ ತುಂಬಿಸಿ ಸಾಜೆ ಹಿಂತಿರಿಸಿಕೊಂಡು ಬರುತ್ತಾರೆಂ ತೆ. ಎಂಬುದಾಗಿ ತುಂಬರನು ವಿವರಿಸುತ್ತಾನೆ." ಅವರ ತಲೆಯಲ್ಲಿ ಮೂರು ತಿಂಗಳ ಬೋನಸ್ಸು-ಮಂಜೂರರಿಗೆ ಕಡಿಮೆ ಕೆಲಸ ಹೆಚ್ಚು ಸಂಬಳ—ಜನಸಾಮ್ಯ ಹೆಚ್ಚು ದಾರಿದ್ರ್ಯ ತುಂಬಿನದೇಶದಲ್ಲಿ ಇದುಕೇಳಲು ಎಷ್ಟು ಹಿತವಾಗಿದೆಯೊತ್ತೆ?" ಎಂಬುವಾಗಿಯೂ ಕಮ್ಯೂನಿಸಮಿನ ಕುರಿತು ತುಂಬರನು ವಿರ್ಣಿಸುತ್ತಾನೆ. ಹೀಗೆ ಈ ಪ್ರಹಸನದ ಪ್ರತಿ ವಾಕ್ಯವೂ ಬಹು ಮಾರ್ಮಿಕವಾಗಿ ಜಾಗ್ರತೆಯಿಂದ ಬರೆಯಲ್ಪಟ್ಟಿದೆಯೆನ್ನಬೇಕು.

ಶ್ರೀಸಾಂತರು ಧನಸುತ್ತತೆಯಿಂದ ಕಣ್ಣು ಕುರುಡುವಾದಾಕೊಂದಂತೆಯೇ ಬಡವರು ಅಜ್ಞಾನ ಅಕ್ಕೋಪ, ದ್ವೇಷಗಳಿಂದ ಕಣ್ಣುಕಾಣದಂತಾಗಿ ಈ ಎರಡು ಅತಿರೇಕ ಬಣಗಳ ನಡುವೆ ಘರ್ಷಣೆಯುಂಟಾಗುತ್ತದೆ. ಇದರಿಂದ ಇತ್ತಂಡದವರೂ ಸೇರಿ ಬೋತನನ್ನೇ ಪಾರತತ್ತ ಬಯ್ಯುತ್ತಾರೆ. ಎರಡನ್ನೂ ಬೋಳೆ ಕಣ್ಣಾಕ್ಕಾಗಿಯೊಂದಿಸಿಕೊಂಡು ಜಾಳಬೇಕೆಂದು ಮಾರ್ಗದರ್ಶನ ಮಾಡುವುದೇ ಗಾಂಧಿವಾದ. ಈ ಸಂಗತಿಯನ್ನು ಮನತ್ತಮಪೂ ಆದ ತತ್ವವನ್ನು ಕವಿ ವೆಂಕಟರಾಜರು ಸಾರಿ ಸಫಲರಾಗಿದ್ದಾರೆ. ಇಂತಹ ಉತ್ತಮ ಕೃತಿಗಳು ಇನ್ನೂ ಹಲವು ಶ್ರೀಯುತರ ಲೇಖನಿಯಿಂದ ಹರಿದು ಬಂದು ಜನತೆಗೆ ಮಾರ್ಗದರ್ಶನವನ್ನು ಮಾಡುವಂತಾಗಲಿ. ಕವಿ ವೆಂಕಟರಾಜರ ಈ ಕೃತಿ ಎಲ್ಲಾ ದೃಷ್ಟಿಯಿಂದಲೂ ಶ್ಲಾಘನೀಯವಾಗಿದೆ.

— ಶಾಂತಿ.
(೧೩ನೇ ಪುಟನೋಡಿರಿ)


**ಮುದ್ರಣ ಕಾರ್ಯಕ್ಕಗಿಗೆ—**

**ನವಯುಗ ಪ್ರೆಸ್,**

ಕಂತೆಕಟ್ಟೆ, .... ಉಡುಪಿ.

## ಚುನಾವಣೆಯ ಫಲ

(೨ನೇ ಪುಟದಿಂದ)

ದ ಭೂಸುಧಾರಣೆಯನ್ನು ಮಾಡಿ ತವರನ್ನು ಉದ್ಧಾರ ಮಾಡುತ್ತೇವೆ ಎಂದು ಸಾರಿದ ಕಮ್ಯೂನಿಸ್ಟರು, ತಮ್ಮ ಷ್ಟಜಂದಂತೆ ಭೂಸುಧಾರಣೆಯನ್ನು ಮಾಡಲಾರರು. ಭೂಸುಧಾರಣಾ ಮ ದೆ ಬರಲು, ರಾಷ್ಟ್ರಾಧ್ಯಕ್ಷರ ಅನು ತಿ ಬೇಕು. ರಾಷ್ಟ್ರಾಧ್ಯಕ್ಷರ ಅನು ತಿಯಿಲ್ಲದೇ ಭೂಸುಧಾರಣಾ ಮಸೂ ಯನ್ನು ಕೇರಳದ ಕಮ್ಯೂನಿಸ್ಟರು ತರ ರು. ಘಟನೆಯಲ್ಲಿ ತಿದ್ದುಪಡಿಯಾ ಸಿ, ಕಮ್ಯುನಿಸ್ಟರು ಬದುಕುವ ರೀತಿ ಲ್ಲಿ ಭೂಸುಧಾರಣೆಯನ್ನು ತರಲು ಾಧ್ಯ. ಇಂತಹ ಪರಿಸ್ಥಿತಿಯಲ್ಲಿ, ಶ್ರಂತ್ಯದ ಸಂಪತ್ತನ್ನು ಹೆಚ್ಚಿಗೆಗೊಳಿ ಸಿ, ಕಮ್ಯುನಿಸ್ಟರು ಮಹತ್ತರವಾದ ಧಾರಣೆಯನ್ನು ಮಾಡಲಾರರು ಕೇರ ಳ ಕಮ್ಯುನಿಸ್ಟರು ಸಂಪತ್ತನ್ನು ಹೇಗೆ ಚ್ಚಿಸುವರೆಂದು ನಾವು ನಿರೀಕ್ಷಿಸಬೇ ಾಗಿದೆ. ಕೋಲಾರದ ಚಿನ್ನದ ಗಣಿಯ ನ್ನಾಗಲೀ, ಕೈಗಾರಿಕಾ ಅಭಿವೃದ್ಧಿಗಾಗಿ ಮಶೆಡ್‌ಪುರವನ್ನಾಗಲೀ ಕೇರಳದ ಮ್ಯುನಿಸ್ಟರು, ತರಲಾರರು. ಪ್ರಾಂತ್ಯ ಒಳಗೇ ಅಭಿವೃದ್ಧಿ ಮಾಡಬೇಕಾಗಿದೆ. ನರು, ಅವರು ತಮ್ಮಿಂದ ಅಸಾಧ್ಯ ವಾಗುವ ಎಲ್ಲಾ ಕೆಲಸಕ್ಕೂ, ಕೇಂದ್ರ ಸರಕಾರವನ್ನು ಟೀಕಿಸತೊಡಗುವುದಂತೂ ಖಂಡಿತ. ಕೇಂದ್ರ ಸರಕಾರ ಸಹಾಯ ಕೊಡಲಿಲ್ಲ, ಅಡ್ಡಿ ತಂದೊಡ್ಡಿತೆಂದು ಸ್ವಚ್ಛಾರ ಮಾಡಿ ಜನರನ್ನು ಮರುಳು ಗೊಳಿಸಲೆತ್ನಿಸಬಹುದು. ಪಟ್ಟಂತಾನು ಪಿಳ್ಳೆಯವರ ಸರಕಾರ, ಪನಂಪಳ್ಳಿ ಗೋವಿಂದ ಮೆನನರ ಸರಕಾರ ಮಾಡಿ ದಷ್ಟೇ, ಅಭಿವೃದ್ಧಿಯನ್ನು ನಂಬೂದರಿ ಪಾಡರ ಕಮ್ಯೂನಿಸ್ಟ್ ಸರಕಾರ ಮಾಡ ಬಲ್ಲುದು. ಅವರಿಗಿಂತ ಹೆಚ್ಚು, ಕಮ್ಯೂನಿಸ್ಟರು ಕೇಂದ್ರ ಸರಕಾರವನ್ನು ಟೀಕಿಸಿ, ಅಪವಾದ ಹೊರಿಸಬಹುದು. ಆದರೆ ಕೈಗೆ ಬಂದ ಅಧಿಕಾರ ಉಳಿಸಿಕೊಳ್ಳ ಬೇಕು. ಇತರ ಕಡೆಗಳಲ್ಲಿಯೂ ಅಧಿಕಾರಕ್ಕೆ ಬರಬೇಕೆಂದು ಕಮ್ಯೂನಿಸ್ಟರು ಶ್ರಮಪಟ್ಟು ದುಡಿಯಬಹುದು. ಲಂಚ ಗುಳಿತನ ಖಂಡಿತವಾಗಿಯೂ ಕಡಿಮೆ ಯಾಗಬಹುದು.

ಕಾಂಗ್ರೆಸಿನ ಸೋಲಿಗೆ, ಕಾಂಗ್ರೆಸು ಪಕ್ಷದ ಒಳಗಿನ ಒಡಕು ಮತ್ತು ಲಂಚ ಗುಳಿತನವೇ ಕಾರಣ. ಇತ್ತೀಚೆಗೆ, ಕೇರಳದಲ್ಲಿ ನಡೆದ "ಕೋರ್ಟು ಚಳವಳಿ" ಇನ್ನೊಂದು ಕಾರಣ. ನಿರುದ್ಯೋಗ ಸಮಸ್ಯೆಯು ಪರಿಹಾರ ಮಾಡದಿದ್ದ ಅಪ ರಾಧ ಮತ್ತೊಂದು. ದಕ್ಷಿಣ ಭಾರತವನ್ನು ಕೇಂದ್ರ ಸರಕಾರವು ನಿರ್ಲಕ್ಷಿಸಿದುದು ಇನ್ನೊಂದು ಪ್ರಾಮುಖ್ಯ ಕಾರಣ. ಕೇಂದ್ರ ಸರಕಾರದಲ್ಲಿ ಯಾವೊಂದು ಮಂತ್ರಿ ಪದವಿ ಕಾಲಿ ಬಿದ್ದರೆ, ಉತ್ತರ ಪ್ರದೇಶದಿಂದಲೋ, ಅಥವಾ ಉತ್ತರದ ಇನ್ನೊಬ್ಬನು ಆ ಸ್ಥಾನಕ್ಕೆ ಬರುವುದು ವಾಡಿಕೆಯಾಗಿ ಹೋಗಿದೆ ಕೇಂದ್ರದ ಮಂತ್ರಿ ಮಂಡಲದಲ್ಲಿ ದಕ್ಷಿಣ ಭಾರತದ ಕೇಬಿನೇಟ್ ರ್ಯಾಂಕ್‌ನ ಮಂತ್ರಿಗಳು ಬರೇ ಇಬ್ಬರು. ಒಬ್ಬರು ಟಿ. ಟಿ. ಕೃಷ್ಣಮಾಚಾರಿ, ಇನ್ನೊಬ್ಬರು, ಕೃಷ್ಣ ಮೆನನರು. (ಕೆ. ಸಿ ರೆಡ್ಡಿಯವರು ಕೇಬಿನೇಟ ರ್ಯಾಂಕ್‌ನ ಮಂತ್ರಿಯಲ್ಲ). ದಕ್ಷಿಣ ಭಾರತದಲ್ಲಿ ಯೋಗ್ಯತೆಯುಳ್ಳ ವ್ಯಕ್ತಿಗಳಿರುವಾಗ, ಉತ್ತರದವರೇ, ಮಂತ್ರಿಗಳಾಗುತ್ತಿರುವುದು ತುಂಬಾ ವಿಷಾದಕರ. ಆದರೆ ಈ ಮಂತ್ರಿಗಳಿಗೆ ವಿಷಯಗಳನ್ನು ಸಂಗ್ರಹಿಸಿ, ಮಿದುಳಿನಲ್ಲಿ ತುಂಬುವ ಪಾರ್ಲಿಮೆಂಟರಿ ಕಾರ್ಯದರ್ಶಿಗಳಲ್ಲಿ ನೂರಕ್ಕೆ ತೊಂಬತ್ತು ಜನರು ದಕ್ಷಿಣ ಭಾರತೀಯರು ಎಂಬುದನ್ನು ಯಾರೂ ಮರೆಯಬಾರದು. ಸಂಜವಾರ್ಷಿಕ ಯೋಜನೆಯಲ್ಲಿ, ಉತ್ತರ ಹಿಂದೂದೇಶದಲ್ಲಿ ತಲಾ ಇಪ್ಪತ್ತೆಂಟು ರೂಪ್ಯಾ ಖರ್ಚು ಮಾಡುತ್ತಿರುವಾಗ, ದಕ್ಷಿಣ ಭಾರತದಲ್ಲಿ ತಲಾ ಹದಿನೆಂಟು ರೂಪ್ಯಾ ಖರ್ಚು ಮಾಡುತ್ತಿದ್ದಾರೆ. ಯಾವ ಪಾಪಕ್ಕಾಗಿ ಯಾರ ಶಾಪಕ್ಕಾಗಿ, ಈ ಭೇದ? ಇಂಗ್ಲೀಷಿನಷ್ಟೇ, ಹೊಸತಾಗಿ ತೋರುವ ಹಿಂದಿಯನ್ನು ಕಡ್ಡಾಯವಾಗಿ, ದಕ್ಷಿಣ ಭಾರತದ ಮೇಲೆ ಹೊಂಚಲಾಗಿದೆ, ದೇಶದ ಒಕ್ಕಟ್ಟಿಗೆ, ಒಂದು ರಾಷ್ಟ್ರ ಭಾಷೆ ಬೇಕು ನಿಜ. ಆದರೆ ಈ ರೀತಿಯ ಕಡ್ಡಾಯವೇಕೆ? ಭಾಷಾವಾರು ಪ್ರಾಂತ್ಯ ರಚಿಸುವಾಗ, ಎಲ್ಲಾ ಪ್ರಾಂತ್ಯಗಳನ್ನು ಪಾಲು ಮಾಡಿ ವಿಭಾಗಿಸಿ, ಉತ್ತರ ದೇಶವನ್ನು ಮಾತ್ರ ವಿಭಾಗ ಮಾಡದೇ ಇರಲು ಕಾರಣ ವೇನು? ಪ್ರಾಂತ್ಯ ಪುನರ್ಘಟನಾ ಸಮಿತಿಯ ಸದಸ್ಯರಲ್ಲೊಬ್ಬರಾದ ಸರದಾರ ಪಣ್ಣೀಕರರು ಈ ವಿಷಯದ ಮೇಲೆ ಆಡಿದ ಮಾತು ಅತೀ ಗಮನಾರ್ಹವಾಗಿದೆ. ೫೦೦ ಸದಸ್ಯರಿಂದ ಕೂಡಿದ ಪಾರ್ಲಿಮೆಂಟನಲ್ಲಿ, ಬರೇ ಈಒಂದು ಪ್ರಾಂತ್ಯಕ್ಕೆ ೭೧ ಸದಸ್ಯತ್ವವಿದೆ!

ಮೊದಲನೇಯದಾಗಿ ನಾನು ಭಾರತೀಯ; ಎರಡನೇಯದಾಗಿ ಕನ್ನಡಿಗ: ಪ್ರಾಂತೀಯ ಹಾಗೂ, ಜಾತೀಯ ಮನೋಭಾವನೆಯನ್ನು ನಾನು ಕೂಡ ಖಂಡಿಸುತ್ತೇನೆ. ಆದರೆ, ನನಗೆ ಆಗುತ್ತಿರುವ ಅನ್ಯಾಯವನ್ನು ನಾವು ಸಹಿಸಲಾರೆವು. ಇಷ್ಟೆಲ್ಲಾ ಅನ್ಯಾಯವಾದರು ಕೂಡಾ, ಪ್ರಾಂತೀಯ ಮನೋಭಾವನೆಯನ್ನು ತಳೆಯಬಾರದು. ರಾಷ್ಟ್ರೀಯ ವಿಶಾಲ ಮನೋಭಾವನೆ ನಮ್ಮಲ್ಲಿ ಬೆಳೆಯಬೇಕು. ರಾಷ್ಟ್ರದ ಉನ್ನತಿಗಾಗಿ, ಎಲ್ಲಾ ಕ್ಷುಲ್ಲಕ ವಿಷಯಗಳನ್ನು ಮರೆತು, ರಾಷ್ಟ್ರಕ್ಕಾಗಿ ದುಡಿಯಬೇಕಾದುದು ನಮ್ಮ ಪವಿತ್ರ ಕರ್ತವ್ಯ. ಆದರೆ ಸರಕಾರ ನಮ್ಮನ್ನು ನಿರ್ಲಕ್ಷಿಸಬಾರದೆಂದು ನಮ್ಮ ಬನ್ನಹ.

ಒರಿಸ್ಸಾದಲ್ಲಿ ಕಾಂಗ್ರೆಸು ಬಹುಮತ ಪಡೆಯಲಿಲ್ಲ. ಕಾಂಗ್ರೆಸಿನ ಸಮಪಾತಾವಾದ ಮಾದರಿಯನ್ನು ವಿರೋಧಿಸಿ, ಜಮೀನುದಾರರು, ಚಿಕ್ಕ ಪುಟ್ಟ ಮಹಾರಾಜರು ಗಣತಂತ್ರ ಪರಿಷತ್ತನ್ನು ರಚಿಸಿದರು. ಈ ಪಕ್ಷದ ಅಧ್ಯಕ್ಷರಾದ ಪಾಟ್ಣಾದ ಮಹಾರಾಜರು. ಇತರ ವಿರೋಧಿ ಪಕ್ಷದ ಸಹಾಯದಿಂದ ಸರಕಾರ ರಚಿಸಲು ಪ್ರಯತ್ನಿಸುತ್ತಿರುವಾಗ, ಮುಖ್ಯಮಂತ್ರಿ ಹರೇಕೃಷ್ಣ ಮೆಹತಾಬರು, ಈ ಗಣತಂತ್ರ ಪರಿಷತ್ತಿನೊಂದಿಗೆ ಸೇರಿ ಸರಕಾರ ರಚಿಸಬೇಕೆಂದು ಪ್ರಯತ್ನಿಸುತ್ತಿರುವುದು ತುಂಬಾ ಶೋಚನೀಯ. ಸಮಪಾತಾವಾದದ ಮಾದರಿಯನ್ನು ವಿರೋಧಿಸುವ ಈ ಗಣಂಡವಾಳ ಶಾಹಿಗಳೊಡನೆ ಸೇರಿ ಅಧಿಕಾರಕ್ಕೆ ಬರುವುದು ಕಾಂಗ್ರೆಸಿನ ಘನಸ್ಥಿಕೆಗೆ ಕಡಿಮೆ. ಕಾಂಗ್ರೆಸು ಅಧಿಕಾರ ಲಾಲಸೆಗೆ ಒಳಪಡಬಾರದು. ಜನತೆಗಾಗಿ. ದೇಶಕ್ಕಾಗಿ ದುಡಿದು, ಎಳಿಗೆ ಬಂದ ಪಕ್ಷ. ಈ ಕೆಳಮಟ್ಟಕ್ಕೆ ಹೋಗಬಾರದು. ದೇಶದ ಏಳ್ಗೆಗಾಗಿ ನುಡಿದ ಕಾಂಗ್ರೆಸುಪಕ್ಷ ಒಕ್ಕಟ್ಟಿನಿಂದ ಶ್ರಮಪಟ್ಟು ದುಡಿಯಬೇಕು. ಜನಮತವನ್ನು ಸಂಪೂರ್ಣ ಪಡೆಯಬೇಕು. ದೇಶದ ಹಿತಕ್ಕಾಗಿ ದುಡಿದಪಕ್ಷ: ಜನತೆಯ ಏಳಿಗೆಗೆ ದುಡಿದಪಕ್ಷ ಪ್ರವೀಣವಾಗಿಬಾರದು. ಕಕ್ಷದ ಸಂಘಟನೆಗೆ ಯೋಗಬೇಕು. ಕೈತಪ್ಪಿಹೋದ ಕೇರಳ, ಒರಿಸ್ಸಾವಲ್ಲಿ ಸಹ ಕಾಂಗ್ರೆಸು ಜನಬೆಂಬಲಪಡೆಯಬೇಕು.

—ಶ್ರೀ ಕೆ. ಧಾಸ್ಕರ ಶೆಟ್ಟಿ, ಬಿ. ಎ.

[ಶ್ರಸ್ತುತ ದೇಖಬಕರು ನಮಗೆ ಬರೆದ ಪತ್ರದಲ್ಲಿ ನಮ್ಮದು ನಿಷ್ಠಾವಂತ ಕಾಂಗ್ರೆಸು ಪತ್ರಿಕೆಯೆಂದೂದ ಈ ರೀತಿಯಲ್ಲಿ ಪ್ರಕಟನಾಗದೆ ಹೋಗಬಹುದು ಎಂಬ ಸಂಶಯವನ್ನು ವ್ಯಕ್ತಪಡಿಸಿದ್ದರು. ಆದರೆ, ಕಾಂಗ್ರೆಸು ದೋಷ ರಹಿತವಾದ ಅದರ್ಶ ರಾಜಕೀಯ ಸಂಸ್ಥೆಯಲ್ಲ. ಕಾಂಗ್ರೆಸಿಗೆ ದೊತಪ್ಪು ಮಾಡುತ್ತಾರೆ ಎಂದೇ ನಮ್ಮ ಅಭಿಪ್ರಾಯವಾಮುದರಿಂದ ನಾವು ಸಭ್ಯತೆಯ ಮಿತಿಗೊಳಪಟ್ಟು ಟೀಕಾತ್ಮಕ ಲೇಖನಗಳನ್ನು ಪ್ರಕಟಿಸಲು ನಾವೆಬೇಕೆಂದು ಭಾವಿಸುವುದಿಲ್ಲ. ಅವರ ಲೇಖನದಲ್ಲಿ ಉಕ್ತ ಪಡಿಸಲಾದ ಪ್ರತಿಯೊಂದೂ ವಾಕ್ಯಕ್ಕೆ ನಮ್ಮ ಅನುಮೋದನೆ ಇದೆ ಎಂದೇನು ತಿಳಿಯಬಾರದು. ಕಾಂಗ್ರೆಸಿಗರೂ ಜನರೂ ವಿಷಯದ ಒಳ ಹೊರಗಿಲ್ಲನ್ನೂ ತಿಳಿದಿರುವಂತೆ ಮಾಡಲಿಕ್ಕಾಗಿಯಷ್ಟೇ ನಾವು ಇಂತಹ ಲೇಖನಗಳನ್ನು ಪ್ರಕಟಿಸುವುದಲ್ಲದೆ, ನಮ್ಮ ಅಭಿಪ್ರಾಯವನ್ನು ಹೇರಲಿಕ್ಕೆಲ್ಲ. —ಸಂ. ನ.]


ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದು ಡೆಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೆಟುಗಳು 4½% ಬಡ್ಡಿ ಗಳಿಸುತ್ತವೆ.

**ನಮ್ಮ ಬಡ್ಡಿ ದರಗಳು.**

ನಿರಖು ಠೇವಣಾತಿ.

| | | |
|---|---|---|
| 24 | ತಿಂಗಳಿಗೆ | 4% |
| 12 | ,, | 3½% |
| 6 | ,, | 3½% |
| 3 | ,, | 3% |

ಸೇವಿಂಗ್ಸ್ ಬೇಂಕ್ ಲೆಕ್ಕ 2%
ಕರೆಂಟ್ ಎಕೌಂಟು ½%

THE MOOLKY BANK, LTD. MULKI

ಎಸ್. ಆರ್.
SR
QUALITY BEEDIES
ಅತ್ಯಂತ ಹೆಚ್ಚು ಪ್ರಸಾರವುಳ್ಳ
ಉತ್ತಮ ಬೀಡಿಗಳು
ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತವೆ
S. R. BEEDI WORKS
UDIPI, S. K.

98 ವರ್ಷಗಳ ಬ್ಯಾತಿಗಳಿಸಿದ ಪಂ|| ಅಂಬಳೆ ರಾಮಸ್ವಾಮಿ ಅಯ್ಯರ್‌ರವರ ರತ್ನಪ್ರಯೋಗಳು

ಟ್ರೇಡ್ ಮಾರ್ಕ್

ಪಂ|| A. R. ಅಯ್ಯರ್

**ಸಂತಾನ ಸಿಂಧೂರ** (ಸ್ತ್ರೀಯರಿಗೆ: ಪ್ಯಾಕೆಟ್)

**ಮದನ ವಿಲಾಸ** (ಪುರುಷರಿಗೆ: ಗುಳಿಗೆ)

ಈ ಔಷಧವು ಬಹಿಷ್ಠೆ ಸಂಬಂಧದ ಹೊಟ್ಟೆ ನೋವನ್ನು ನಿವಾರಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತದೆ.

"ಮದನ ವಿಲಾಸ" ಗುಳಿಗೆಗಳು ಆತ್ಮಹೆ ಶಕ್ತಿನವಾಡಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ತಡೆಗಟ್ಟಿ, ನರ್ಯಾಣುಗಳನ್ನು ವೃದ್ಧಿಸಿ, ನಪುಂಸಕತೆಯನ್ನು ಸಾಮಾನ್ಯತೆಗೆ ಮಾಡುತ್ತದೆ

ದಂಪತಿಗಳಾಗಿ 16-18 ವರ್ಷ ಸಂತಾನವಿಲ್ಲದವರೂ ತಾಯ್ತಂದೆಗಳಾಗಿದ್ದಾರೆ. ಹೊಸ ಕ್ಯಾಟಲಾಗು, ವಿಷಧದ ಬೆಲೆ ಇತ್ಯಾದಿಗಳಿಗೆ 3 ಆಣೆ ಸ್ಟಾಂಪು ಕಳಿಸಿ

ಎ. ರಾಮಸ್ವಾಮಿ ಅಯ್ಯರ್ ಸನ್ & ಕಂ, (ನ ಯು)
638 ಸಂತಾನ ಸಿಂಧೂರ ಸದನ (ಪೋಸ್ಟ್ ಬಾಕ್ಸ್ 9, ವೈಸಾರು S. I.



**ಕುಮಾರಿ ಬಿಲ್ಲೆಗಳು**

**Govt. Regd.**

ಹೆಂಗಸರ ಹಿತಮಿತವಾವ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ.ಪಿ.ಪ್ರತ್ಯೇಕ). ಎಲ್ಲೆಲ್ಲೂ ಸಾರಲ್ಪಡುತ್ತದೆ!!

**P. DEVEE & Co.** (N. J.) CALCUTTA—40.
ಸ್ಥಾಪಕರು: ಪಾ ಕಂಪೆನಿ, ಮಂಗಳೂರು—1.

## ಮತದಾರರ ತೀರ್ಪು

(೧ನೇ ಪುಟದಿಂದ)

ಇದಿರು ಪಾರ್ಟಿಯವರಿಗೆ ಪರೋಕ್ಷ ದಲ್ಲಿ ಸಹಾಯ ಮಾಡಿದ ದೃಶ್ಯಗಳು ಸಹಾ ಗೋಚರಕ್ಕೆ ಬಂದಿರುತ್ತದೆ.

ಮತದಾರರು ತಮ್ಮ ಮತದ ಮಹತ್ವವನ್ನು ಇನ್ನೂ ಸರಿಯಾಗಿ ತಿಳಿದುಕೊಂಡಂತೆ ಕಾಣುವುದಿಲ್ಲ. ಪ್ರಜಾಪ್ರಭುತ್ವದಲ್ಲಿ ಮುಂದುನರಿದ ಐರೋಪ್ಯ, ಅಮೇರಿಕ, ಏತ್ತಿಕರ ರಾಷ್ಟ್ರಗಳಲ್ಲಿ ಚುನಾವಣೆಯ ಸಮಯ ಮತಕೊಡುವುದು ತಮ್ಮ ಕರ್ತವ್ಯವೆಂದು ತಿಳಿದು ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿ ಬಂದು ಮತದಾನ ಮಾಡುವರು. ನಮ್ಮಲ್ಲಿ ಸಹ ಮೊನ್ನೆತಾನೆ ಭಟ್ಟಳದಲ್ಲಿ ನಡೆದ ಚುನಾವಣೆಯಲ್ಲಿ ಎಷ್ಟೋ ಜನರು, ಕೊಲಂಬೊ, ಬೊಂಬಾಯಿ, ಕಲ್ಕತ್ತಾ ಮತ್ತು ಮದ್ರಾಸ್ ಕಡೆಗಳಿಂದ ಬಂದು ಮತದಾನ ಮಾಡಿರುವರು. ಆದರೆ ಆನೇಕ ಕಡೆಗಳಲ್ಲಿ ಹೀಗೆ ಮಾಡುವುದರ ಬದಲಿಗೆ ಮನೆಯೊಳಗೆ ಇದ್ದುಕೊಂಡು ಮತ ಕಟ್ಟೆಗೆ ಬಾರದೆಯಿರುವವರ ಸಂಖ್ಯೆ ಬಹುತೇಕವಿದೆ. ಊರ ಹೊರಗೆ ಹೋದ ಅನೇಕ ಮತದಾರರು ಬರದಂತೆ ಕಾಣುವುದಿಲ್ಲ. ಸಮಾರಾಧನೆ ಊಟದ ಹೇಳಿಕೆಯನ್ನು ಸೂರೈಸಿದಂತೆ ಒಬ್ಬಿಬ್ಬರು ಮತ ಕಟ್ಟೆಗೆ ಮತದಾನ ಮಾಡಲು ಹೋಗಿರುವರು.

ಇನ್ನೊಂದು ವಿಷಯವೇನೆಂದರೆ, ಮತಪತ್ರಕ್ಕೆಪಡೆ ಹಾಕುವುದಕ್ಕಿಂತ ಪೆಟ್ಟಿಗೆಗೇ ಹಾಕಬೇಕೆಂತ ಮಾಡಿದ್ರಿಂದ ಹಾಳಾದ ಓಟುಗಳ ಸಂಖ್ಯೆಯು ಈ ಸಲ ಬಹಳ ಕಡಿಮೆ. ಚಿಕ್ಕ ಬಾಲಕರು, ವಿದ್ಯಾಲಾ ಹುಡುಗರನ್ನು ಪ್ರಚಾರಕ್ಕೂ ಮತ್ತು ಮತಯಾಚನೆಗಾಗಿ ಈ ಸಲ ಉಪಯೋಗಿಸಿದಷ್ಟು ಬೇರೆ ಯಾವ ಚುನಾವಣೆಯಲ್ಲೂ ಉಪಯೋಗಿಸಿಲಿಲ್ಲ. ಇದು ಉಪಾಧ್ಯಾಯರ ಅಜಾಗ್ರತೆಯಿಂದಲೋ, ಯಾ ಹಿರಿಯರ ಪ್ರೋತ್ಸಾಹದಿಂದಲೋ ಎಂಬುದನ್ನು ಕೇಳಲು ಅಸಾಧ್ಯ. ಆದು ಹೇಗೂ ಇರಲಿ. ಇಂಥ ಪ್ರಸಂಗವು ಇನ್ನು ಮುಂದಾದರೂ ಆಗದಂತೆ ಮುಂಜಾಗ್ರತೆ ಕೈಗೆದುಕೊಳ್ಳತಕ್ಕದ್ದು. ಸದ್ರಿ ಮಕ್ಕಳ ಪ್ರಚಾರವೆಂದರೆ ಆಪಪ್ರಚಾರವೇ ಕೊರತು ಬೇರೊಂದಿಲ್ಲ. ಈ ಹುಡುಗರಲ್ಲಿ, ತಿಳುವಳಿಕೆ, ವಿವೇಚನಶಕ್ತಿಯು ಬಹಳ ಕಡಿಮೆಯಿರುವುದರಿಂದ ವಾಗ್ಯುದ್ಧದಲ್ಲಿ ಜಯಸಿಗುವ ಹಾಗಿಲ್ಲ. ಹಾಗೆ ಜಯಸಿಕ್ಕುವುದಿಲ್ಲವೆಂತ ಅವರ ಮನಸ್ಸಿಗೆ ಸಮಾಧಾನವಾದೊಡನೆಯೇ, ಬೈಗಳ ಮತ್ತು ಮುಷ್ಠಿ ಕಾಳಗಕ್ಕೆ ಆರಂಭಿಸುವರು ಮಾತ್ರವಲ್ಲ ಇದಿರುಪಕ್ಷದವರು ಕೊಟ್ಟಿರುವ, ವ ಅಂಟಿಸಿರುವ ಭಿತ್ತಿ ಪತ್ರಗಳನ್ನು ಕರಿದು ಹಾಕುವುದು, ಗೋಡೆಗೆ ಅಂಟಿಸಿದ ಬೋರ್ಡಿಗೆ ಸೆಗಣಿ ಮುಂತಾದ್ದನ್ನು ಎರಚುವದು ಇಂದೊಂದು ಬಹಳ ಶೋಚನೀಯ ಕೆಲಸವಾಗಿರುತ್ತದೆ—

ಪಾನನಿರೋಧ ಕಾನೂನು ಜ್ಯಾರಿಯಲ್ಲಿ ಇರುವುದಾದರೂ, ಚುನಾವಣಾ ಸಮಯದಲ್ಲಿ ಖರ್ಚಾದಷ್ಟು ಕಳ್ಳ ಭಟ್ಟಿಯು ಶರಾಬು ಬೇರೆ ಯಾವ ಸಮಯದಲ್ಲೂ ಆಗಲಿಲ್ಲವೆಂದರೆ ಉತ್ಪ್ರೇಕ್ಷೆಯಾಗದು. ಇದ ವಿರೋಧವನ್ನು ಚುನಾವಣಾ ಸಮಯ ದಲ್ಲಿ ಗಂಟಿಕ್ಕಿಕೊಳ್ಳುವುದು ಸರಿಯಲ್ಲವೆಂದು ಸುಮ್ಮನೆ ಕುಳಿತರೆ ಅದರಿಂದ ಕೆಟ್ಟ ದ್ದಾದೀತೆಂದು ತಿಳಿಯಬೇಕು. ಹಿಂದಿನ ಕಾಲದಲ್ಲಿ ಯಜ್ಞಾದ ಸಮಯ ಪ್ರಸಾದ ರೂಪವಾಗಿ ಮಾಂಸ ತಿನ್ನಬಹುದೆಂದು ಇರುವ ಶಾಸ್ತ್ರೀಯ ವಿನಾಯತಿಯನ್ನು ಜನರು ದುರುಪಯೋಗ ಗೊಳಿಸಿ ಮಾಂಸ ತಿನ್ನಬೇಕೆಂತ ಆಶೆಯಾದಾಗಲೆಲ್ಲಾ ಯಜ್ಞಮಾಡಿದಂತೆಯೇ ಸರಿ. ಈ ಕುರಿತು ಏನೇ ಕಷ್ಟ ಬರಲಿ ಚುನಾವಣಾ ಸಮಯದಲ್ಲಿ ಆದಷ್ಟು ಬಂಧೋಬಸ್ತು ಮಾಡತಕ್ಕದ್ದಾಗಿದೆ. ಇನ್ನೊಂದು ವಿಶೇಷ ವಿಚಾರ ನಮ್ಮ ಗಮನಕ್ಕೆ ಬಂದಿರುವುದೇನೆಂದರೆ ಹಿಂದೆ ಚುನಾವಣೆಯಲ್ಲಿ ಹಣ ಹಿಡಿದು ಪಣತೊಟ್ಟ, ನ, ನಿಶ್ಚಿತವಾಗಿ ಇಂಥಾ ಪಕ್ಷಕ್ಕೇ ಸೇರಿದವರೆಂದೆನಿಸಿಕೊಂಡವರು ಈ ಬಾರಿ ನಿಸ್ಪೃಹರಂತೆ ಸುಮ್ಮನಿದ್ದು ತಾವು ಯಾವ ಪಕ್ಷಕ್ಕೂ ಇಲ್ಲವೆಂದು ಹೇಳಿಕೊಂಡು ಚುನಾವಣೆಯ ಮುಂಚಿನ ದಿನ ಉಮೇದ್ವಾರರು ಬಂದು ಅಂತರ್ಯದಲ್ಲಿ ಮಾತನಾಡಿ ಹೋದ ಕೂಡಲೆ ರಾತ್ರಿ ಸಮಯ ಲಾಟಾನು ಹಚ್ಚಿ ಮನೆ ಮನೆ ತಿರುಗಿ "ಳ ಟೋತ್ಕ ಜನ ಕಾಳಗ ಮಾಡಿದುದು ಬಹಳ ಸಂಶಯಾಸ್ಪದ ಚಟುವಟಿಕೆ ಎಂದರೆ ತಪ್ಪಾಗಲಾರದು.

ಪ್ರಚಾರರೆಕರು ಹೇಯ್ಯ ರೀತಿಯಿಂದ ವರ್ತಿಸಿ ಕೆಲವು ಮತದಾರರನ್ನು ತಮ್ಮ ಕೈಗೊಂಬೆಗಳನ್ನಾಗಿ ಮಾಡಿಕೊಂಡರೂ, ಸುಳ್ಳು ಆಶ್ವಾಸನೆ ಕೊಟ್ಟು ಮತದಾರರನ್ನು ವಂಚಿಸಿ ಮೋಸಗೊಳಿಸಿದರೂ, ಕೆಲವು ಕಡೆಗಳಲ್ಲಿ ಹುರಿಯ್ಯಾಳುಗಳು ಯೋಗ್ಯ ರೀತಿಯಿಂದಲೇ ವರ್ತಿಸಿ ಪ್ರಾಪ್ತ ಭುತ್ವದ ರೀತಿನೀತಿಗಳಿಗೆ ವಿರುದ್ಧವಾಗಿ ಹೋಗದಿರುವುದು ಸ್ತುತ್ಯ. ರಾಜಕೀಯ ವಿಷಯದಲ್ಲಿ ಮತದಾರರಲ್ಲಿ ಸ್ವಲ್ಪ ಮಟ್ಟಿಗಾದರೂ, ಎಚ್ಚರಿಕೆ ಹುಟ್ಟಿದುದು ಪಕ್ಷಗಳಿಂದಲೇ ಎಂದು ಒಪ್ಪಬೇಕು ಇದೇ ರೀತಿಯು ಕೆಲವು ಚುನಾವಣೆಗಳು ನಡೆದ ಮೇಲೆ ನಮ್ಮಲ್ಲಿಯ ಪಕ್ಷಗಳು ಮತ್ತು ಮತದಾರರು ಸಂಪೂರ್ಣ ಸುಧಾರಿಸುವರೆಂಬ ನಂಬಿಕೆ ನಮಗಿದೆ.

—ಶ್ರೀ ಸಿ. ಎಚ್. ಕೆಟ್ಟಿ.

## ಪುಸ್ತಕ ನಿಮರ್ಶೆ

(೧೦ನೇ ಪುಟದಿಂದ)

### ಗೆಲವು ನನ್ನ ಕೈಯಲ್ಲಿ—

ಲೇಖಕಿ: ಹೆಂಡ್ಲಾ ರಸೆಲ್ ಎಚ್. ಎನ್. ರಿವ್ ಬ್ರದರ್ಸ್, ಬೆಂಗಳೂರು. ಅನುವಾದ ಧಿಸ್ವಂತ ಪುಟ ೧೦೦ ಬೆಲೆ: ರೂ. ೧.೫೫.

ಸೈನ್ಯಕ್ಕೆ ಸೇರಿ ಎರಡು ಕೈಗಳನ್ನೂ ಕಳೆದು ಕೊಂಡು ಒಬ್ಬ ವ್ಯಕ್ತಿ ಕೈಗಳೆಲ್ಲದೆಯೆ ಬದುಕಿನಲ್ಲಿ ಗೆಲವನ್ನು ಸಂಪಾದಿಸುವ, ಸೋಲನ್ನು ಹಿನ್ನೂಕುವ, ಧೈರ್ಯದ ವೈಶಾಲ್ಯವನ್ನು ಬೆಳಸಿಕೊಳ್ಳುವ ಒಂದು ವಾಸ್ತವ ಕತೆ.

### ಭಕ್ತ ಶ್ರೀ ಗೋವಿಂದ ದಾಸರು—

ಲೇಖಕ: ಎನ್. ರಾಘವೇಂದ್ರ ಬಲ್ಲಾಳ ಪ್ರಕಾಶಕರು: ಕೆ. ಸೀತಾರಾಮ ರಾವ್, ದಾಸಸಾಹಿತ್ಯ ಕಾಶ, ಮದ್ರಾಸು. ಪುಟ ೪೮ ಬೆಲೆ: ಇಲ್ಲ.

ಭಕ್ತ ಗೋವಿಂದ ದಾಸರು ಕನ್ನಡದ ಭಕ್ತ ಪರಂಪರೆಗೆ ಸೇರಿದ ಒಂದು ಮಹಾ ಜೀವನವೆಂದು ತೋರಿಸಿಕೊಡುವ ಪ್ರಯತ್ನವನ್ನು ಕಂಡಿತ ಎನ್. ರಾಘವೇಂದ್ರ ಬಲ್ಲಾಳರು ಈ ಚಿಕ್ಕ ಹೊತ್ತಿಗೆಯಲ್ಲಿ ಮಾಡಿಸಿದ್ದಾರೆ. ಉದುಸಿಯಲ್ಲೇ ಬಹುಕಾಲ ವಾಸಿಸಿದ ಗೋವಿಂದ ದಾಸರು ತನ್ನ ಜೀವನವನ್ನು ಸಪ್ಪ ಕೃಷ್ಣನಾಗಿಯೂ ಕೃಷ್ಣನ ಪರಮಾರಾಧಕನಾಗಿಯೂ ಜೀವನಯೊಪನೆನಾಡಿ ಇತ್ತೀಚೆಗೆ—ಅಂದರೆ ೧೯೪೦ರಲ್ಲಿ ಕಾಲವಶರಾದರು. ಶ್ರೀ ವಿಶ್ವೇಶತೀರ್ಥರ ಅವರ ಮನ್ನುಡಿಯಲ್ಲಿ ಹೇಳಿರುವಂತೆ ಸರಳರೂ ಸದಾಚಾರಪರರೂ, ಶಾಂತ ಸ್ವಭಾವಿಗಳೂ ಆದ ಅವರು ಸುಖದಲ್ಲೂ, ದುಃಖದಲ್ಲೂ, ಸಂಪತ್ತಿನಲ್ಲೂ, ವಿಪತ್ತಿನಲ್ಲೂ ತಮ್ಮ ದೈವಪ್ರಸಾದ ಜೀವನವನ್ನು ನಡೆಸಿರುವರು ಅಂಥವರ ಜೀವನದಿಂದ ಎಂಥ ಅವರು ಮಕ್ಕಳಾದ ಶ್ರೀಮಂತ ಸೀತಾರಾಮ ರಾಯರ ವ್ಯಕ್ತಿತ್ವದ ಮೇಲೆ ಬಿದ್ದ ವರ್ಚಸ್ಸು ಅಪಾರವಾದುದು. ಆಧ್ಯಾತ್ಮದ ಶ್ರೀಮಂತಿಕೆಗಿಂತ ಮೇಲಿನದು ಬೇರಿಲ್ಲವೆಂದು ಭಕ್ತ ಗೋವಿಂದ ದಾಸರು ನಮಗೆ ಉಪದೇಶಿಸುವಂತೆ ಜೀವನ ನಡೆಸಿದ ಮಹಾತ್ಮರ ಈ ಭಕ್ತ ಜೀವನ ಚರಿತ್ರೆಯನ್ನು ಎಲ್ಲರೂ ಓದಬಹುದು.

### ಶ್ರೀ ಪ್ರಸನ್ನ ವೆಂಕಟದಾಸರು ಮತ್ತು ಅವರ ಕೃತಿಗಳು—

ಲೇಖಕ ಎ. ಟಿ. ಪಾಟೀಲ ಪಿಂಚಿನ ಬಳ್ಳಿ, ಧಾರವಾಡ ಪುಟ ೧೮೨+೧೪೦+XV. ಇದು ಕನ್ನಡದಲ್ಲಿ ಪ್ರಕಾಶಿತವಾಗುವ ಇನ್ನೊಂದು Ph. D. ಯ ಥೀಸಿಸ್. ಕೆ. ಎಂ. ಕೃಷ್ಣರಾಯರ ಜಗನ್ನಾಥ ದಾಸರಂತೆ ಇದೂ ಪ್ರಸನ್ನ ವೆಂಕಟ ದಾಸರ ಮತ್ತವರ ಕೃತಿಗಳ ಕೂಲಂಕಷ ಅಧ್ಯಯನದ ಬೃಹತ್ ಕಾಣಿಕೆ. ಆರ್. ಎಸ್. ಪಂಚಮುಖಿಯವರೇ ಮಾರ್ಗದರ್ಶಕರಾಗಿರಲಾಗಿ ಮೊದಲ ಪರಿಚ್ಛೇದದಲ್ಲಿ ಪತ್ಯ ಪುಸ್ತಕದ ವಿಷಯಗಳಂತೆ ವೈಷ್ಣವ ಭಕ್ತಿಯ ಬೆಳವಣಿಗೆ, ಮಹಾ ರಾಷ್ಟ್ರದಲ್ಲಿ ಹರಿಭಕ್ತಿ ಪಂಥ, ಕರ್ನಾಟಕದಲ್ಲಿ ಭಕ್ತ ದ್ವೈತ ಸಿದ್ಧಾಂತದ ಪ್ರಮೇಯಗಳು, ಕಾಲನಿರ್ಣಯ, ಜೀವನ ಚರಿತ್ರೆ, ಗ್ರಂಥ ವಿಮರ್ಶೆ—ಈ ರೀತಿ ಯಥಾ ಪ್ರಕಾರ ಸಾಗಿ, ತ್ತದೆ. ಒಬ್ಬ ದಾಸರ ಸಮಗ್ರ ಪರಿಚಯದ ಪ್ರಯತ್ನವು ಇಲ್ಲಿ ನಡೆದಿದ್ದು ಮನನೀಯವಾಗಿದೆ ಎನ್ನಲು ಯಾವ ಅಡ್ಡಿಯೂ ಇಲ್ಲ. ಆದರೆ ಇದನ್ನು ಥೀಸಿಸ್ ಎಂಬ ದೃಷ್ಟಿಯಿಂದ ನೋಡಿದರೆ ಇದರಲ್ಲಿ ಶೈಲಿಯ ನಾವೀನ್ಯವಾಗಲಿ, ವಿಷಯ ನಿರೂಪಣಾ ನಾವಿನ್ಯವಾಗಲಿ ಕಾಣಬರುವುದಿಲ್ಲ. ಇದಕ್ಕೆ ಶ್ರೀ ಪಾಟೀಲರನ್ನು ಏನನ್ನು ಕನ್ನಡಿಗನೆಂದು ಬೇಗನೇ ಆರುವರ ಕನ್ನಡಿಗರೇ ಹೊಣೆಗಾರರು. ಗ್ರಂಥದ ದ್ವಿತೀಯಾರ್ಧದಲ್ಲಿ ಪ್ರಸನ್ನ ವೆಂಕಟ ದಾಸರ ಕೀರ್ತನೆಗಳನ್ನು ಆಯ್ದು ಮೂಡಲಾಗಿದೆ. ಬುಲಿಗಿಂದು ಮೂಡಿವರ ಮಿಂಚಿನಬಳ್ಳಿಯಂದೆ ಈ ಪಟ್ಟಿಯ ಕೃತಿಗೆ ಹೊರಟಿವೆ. ಒಟ್ಟಿನಲ್ಲಿ ಸಂಗ್ರಹ ಜೀಯವಾದ ಕೃತಿ ಇದು.

### Our Second Five year Plan—

### Iron and Steel.—

### Foreign Aid for the Plan—

ಈ ಮೂರು ಇಂಡಿಯಾ ಸರಕಾರದ ಪಬ್ಲಿಕೇಶನ್ಸ್ ಡಿವಿಜನಿನ ಪ್ರಕಟಣೆಗಳು. ನಮ್ಮ ದ್ವಿತೀಯ ಪಂಚವಾರ್ಷಿಕ ಯೋಜನೆಯ ಕುರಿತು ಭಾರತದ ಜಾಕ್ತಿನ ಉದ್ಯಮದ ಕುರಿತು ಮತ್ತು ಯೋಜನೆಗೆ ವಿದೇಶೀಯ ಬಂಡವಳಿನ ನೆರವಿನ ಕುರಿತು ಈ ಚಿಕ್ಕ ಪ್ರಕಟಣೆಗಳಲ್ಲಿ ಪ್ರಚಾರವನ್ನು, ನಡೆಸಲಾಗಿದೆ. ಪ್ರಕಟಣೆಗಳು ಸಚಿತ್ರವಾಗಿದ್ದು ಎಲ್ಲರಿಗೂ ಮನಮುಟ್ಟುವ ಆಂಗ್ಲ ಶೈಲಿಯಲ್ಲಿ ಬರೆಯಲಾಗಿವೆ.

### True Facts on Hungary. Tass—

ಹಂಗೇರಿಯ ವಿಷಯದ ವಾಸ್ತವ ಕಥೆ ಏನೆಂಬುದನ್ನು ರಶಿಯದ ಸುದ್ದಿ ಏಜೆನ್ಸಿ Tass ನ ಭಾರತದಲ್ಲಿರುವ ಪ್ರತಿನಿಧಿಯು ರಶಿಯಕ್ಕೆ ಸಮಂಜಸವಾಗುವ ರೀತಿಯಲ್ಲಿ ಹಂಗೇರಿಯ ಗಮನವನ್ನು ಚಿತ್ರಿಸಿದ್ದಾರೆ. ಬೇರೆ ಯಾವ ಸುದ್ದಿಯೂ ಇಲ್ಲವಾದಲ್ಲಿ ಇದಿಷ್ಟನ್ನೇ ನಂಬಿ ಸುಖವಾಗಿರಬಹುದಾಗಿತ್ತು.

### ಮುಕ್ತ ಕಂಠ—

ಅಂಬಿಕಾ ತನಯದತ್ತ. ಸಮಾಜ ಪುಸ್ತಕಾಲಯ, ಧಾರವಾಡ. ಪುಟಲಳ. ಬೆಲೆ ರೂ. ೧—೫೦

### ಹೃದಯ ಸಮುದ್ರ—

ಅಂಬಿಕಾ ತನಯದತ್ತ. ಸಮಾಜ ಪುಸ್ತಕಾಲಯ, ಧಾರವಾಡ. ಪುಟ ೬೫ ಬೆಲೆ ರೂ. ೧—೫೦

ಕವಿ ಅಂಬಿಕಾ ತನಯ ದತ್ತರ ಇತ್ತೀಚೆಗಿನ ಎರಡು ಕವನ ಸಂಗ್ರಹಗಳಿವು. ಅರವತ್ತರ ಅರಳು ಮರಳನ್ನು ನಾವು ಇಲ್ಲೇನೂ ಕಾಣಲಾರೆವು. ಅರಿವಿಂದಯೋಗಿಯ ಪರಮ ಭಕ್ತರಾಗಿ ಅಧ್ಯಾತ್ಮದ ಗುಂಗಿನಲ್ಲಿಯೂ ಕವಿಸತ್ತಿನ ಜಗತ್ತನ್ನು ಪುರಿಯದೆ ಆವರಿಸಿರುವ ವಿಮಲ ನಿಯನ್ನೂ, ನೋಟವನ್ನೂ ತನ್ನ ಬನಿಯಲ್ಲಿ ಕಂಡು ಇತರರ ಬಗೆ ಹೊಗುವಂತೆ ಬರೆಯಬಲ್ಲರೆಂಬುದಕ್ಕೆ ಸಾಕ್ಷಿಯಾಗಿ ಮುಕ್ತಕಂಠದ ೪೨ ಗೀತಗಳು ನಿಲ್ಲುವುವು. ಭಕ್ತಿಯ ಸಮುದ್ರದಲ್ಲಿ ಕವಿಯು ಪಾಂಡಿಚೇರಿಯಿಂದ ಸ್ಫೂರ್ತಿ ಪಡೆದು ಬರೆದಿದ್ದಾರೆ. ಮನುಷ್ಯನ ಒಳಲುಮಿಕಿಗೂ, ಕವಿಯ ಒಳನೋಟಕ್ಕೂ ಸೇರಿದ ಈ ಕವಿತೆಗಳು ಹೃದಯ ಸಮುದ್ರದಿಂದೆದ್ದು ಬಂದ ಮುತ್ತಿಕ್ಕೆ ಫಲಗಳಂತೆ ಕಾವ್ಯಾಸ್ವಾದಕರ ಮನಸ್ಸನ್ನು ಸೆರೆಹಿಡಿಯುವುವು. ಭಕ್ತ ನಲ್ಲಿರುವ ಈ ಕವಿತಾನಪ ಪ್ರೇರಣೆ, ಅಭ್ಯಾಸ, ಸಾಧನೆ ಎಲ್ಲಕ್ಕೂ ಇಲ್ಲಿ ಎಡೆ ಇದೆ. ಗುರುಭಕ್ತಿಯಲ್ಲಿ ಜೀವಕರಗಿ ನಾವು ಸಯವಾದ ಪದ ಪುಂಜದಲ್ಲಿ ಎಳೆಕವಿತೆಯ ಕವಿತೆಯ ಮಣಿಗಳು ಇಲ್ಲಿವೆ.

ಕು. ಶಿ. ಹರಿದಾಸ ಭಟ್ಟ.


ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ವಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ

ಬೆಲೆ:— ಸಾಧಾರಣ ಪ್ರತಿ— ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವ ಸ್ಥಳ:—

ನವಭಾರತ ಪುಸ್ತಕ ಭಂಡಾರ, ಉಡುಪಿ.


Edited, Printed & Published by K. H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment.

# ನವಯುಗ

ಪುಟ ೩೭ | VOL. 36 | 11—4—1957 | ಸಂಚಿಕೆ ೩೧ | NO. 31

## ಏಟಕಗಳ ಮೂಲ

## ಪ್ರಾಚೀನ ಕನ್ನಡ ನಾಟಕವೇ ಯಕ್ಷಗಾನ, ಸೊತ್ತೇ?

ಾಟಕವೆಂಬುದು ಸಾಹಿತ್ಯದ ಒಂದು ರ. ಸಾಹಿತ್ಯವನ್ನು ಪದ್ಯ, ಗದ್ಯ ಮಿಶ್ರ ಆದವಾ ಚಂಪು ಎಂಬ ುಗಳಿಂದ ವಿಧಾನಿಸುವುದು ನಮ್ಮ ಪರಂಪರೆಯ ಪದ್ಧತಿ ಆಗ ಈ ಕಗಳು 'ಮಿಶ್ರ' ಜಾತಿಗೆ ಸೇರುತ್ತ ನಾಟಕವೆಂಬುದು ಅಭಿನಯಕ್ಕಾಗಿ ಒಂದು ರೂಪಕದ ಪ್ರಭೇದ. ರೂ ಾದರೂ ದೃಶ್ಯಕಾವ್ಯಗಳಲ್ಲಿ ಒಂದು

ಇನ್ನೊಂದು ಉಪರೂಪಕ ುದು.

ಾಟಕಗಳು ನಾಟಕ ಮತ್ತು ಮಹಾ ಕಗಳೆಂದು ಎರಡು ವಿಧವಾಗಿವೆ. ಗಳಲ್ಲಿ ಜನಪ್ರಿಯವಾದುವು ಮತ್ತು ಎಗೂ ಜನರ ಮೆಚ್ಚುಗೆಯನ್ನು ಪಡೆ ುಹುದಾದವು ನಾಟಕಗಳೇ ಮಹಾ ಕವು ಬಹಳ ದೀರ್ಘವಾಗಿದ್ದು ಅವ ಈಗಿನ ಕಾಲದಲ್ಲಿ ಅಭಿನಯಿಸುವ ತಾಳ್ಮೆಯಾಗಲೀ, ನೋಡುವಷ್ಟು ದತೆಯಾಗಲೀ ನಮ್ಮಲ್ಲಿ ಇರ ದು.

ಾರತದಲ್ಲಿ "ನಾಟ್ಯಶಾಸ್ತ್ರ"ದ ಂಭ ಕಾಲದಲ್ಲಿಯೆ ನಾಟ ಗಳು ಜನಪ್ರೀತವಾಗಿದ್ದು 'ಕಾಲಿದಾಸ'ನ ಕಾಲವಿವಕ್ಷೆಯ ನಿನ್ನಾಭಿಪ್ರಾಯವಿದ್ದರೂ ಆತನಿಗೂ ದಲು ನಾಟಕವು ಹೆಸರುವಾಸಿಯಾಗಿ ಮಿಶ್ರಕಾವ್ಯಗಳಲ್ಲಿ ಸಂಸ್ಕೃತ ಭಾಷೆ ಲ್ಲಿ ನಾಟಕಗಳೇ ಅಧಿಕವಾಗಿವೆ ಮ ಕವಿ ದಿಙ್ನಾಗ, ಕಾಲಿದಾಸ ಭಟ್ಟ ಾಯಣ, ಭವಭೂತಿ, ಶೂದ್ರಕ ದಲಾದವರ ನಾಟಕಗಳು ಇಂದಿಗೂ ವೆಚ್ಚುವಂತಾಗಿವೆ ಪ್ರಸಿದ್ಧವಾದ ಜನಿತವಾದ ವಸ್ತುಗಳನ್ನು ಆಧರಿಸಿ ನಾಟಕ ಬರೆಯಬೇಕೆಂದೆ ನಮ್ಮ ಂಕಾರಿಕರು ಹೇಳಿದ್ದಾರೆ. ಜನರಂಜ ೀ ಈ ನಾಟಕಗಳ ವಾಲ ಉದ್ದೇ ಾದುದರಿಂದ, ಈ ತೆರನಾದ ವಿಧಿ ಿಸಿರಲೂ ಬಹುದು. ಅದರಿಂದ, ಾರತೀಯ ನಾಟಕಗಳಲ್ಲಿ ಭಾರ ಾಮಾಯಣಗಳಿಂದ ಆರಿಸಿದ ಕಥಾ ುಗಳೇ ಹೆಚ್ಚಾಗಿ ಕಂಡುಬರುತ್ತವೆ.

ಹಾಗೆಂದ ಮಾತ್ರಕ್ಕೆ ಕವಿಯ ಸ್ವಾತಂತ್ರ್ಯವನ್ನು ಕಸಿದುಕೊಂಡಂತಾಗಲಿಲ್ಲ ನಾಟಕದಲ್ಲಿ ಪಾತ್ರಾನಿರೂಪಣೆಯನ್ನು ಮಾಡುವ, ತನ್ನ ಉದ್ದೇಶಕ್ಕನುಗುಣವಾಗಿ ಮೂಲ ಕಥೆಯಲ್ಲಿ ಅಲ್ಲಿಲ್ಲಿ ಬದಲಾವಣೆ ಯನ್ನು ಮಾಡುವ, ಕಥೆ ಮುಂದುವರಿಯಲು ತಕ್ಕ ಸನ್ನಿವೇಶಗಳನ್ನು ಕಲ್ಪಿಸುವ ಸರ್ವತಂತ್ರ ಅಧಿಕಾರಿಯು ಕವಿಯೇ. ಕವಿಯು ಯೋಗ್ಯನಾದರೆ, ಜಗತ್ತನ್ನು ಅರಿತವನಾದರೆ, ಜನರ ಮೆಚ್ಚುಗೆಗೆ ಅನುಗುಣವಾಗಿ ಕಥೆಯನ್ನು ಪರಿವರ್ತಿಸಿ, ತನ್ನ ಕಾವ್ಯದಿಂದ ಜಗನ್ಮಾನ್ಯನಾಗುತ್ತಾನೆ. ದಿಙ್ನಾಗ, ಕಾಲಿದಾಸರ ವಿಶ್ವಮಾನ್ಯತೆಗೆ ಇದೇ ಕಾರಣ

ಭಾರತದಲ್ಲಿ ನಾಟಕ ರಚನೆಗೆ ಒಂದು ನಿಯಮವಿದೆ. ಆ ನಿಯಮಗಳು ಜನರ ಮನೋರಂಜನೆಗೆ ನೆರವಾದುವುಗಳು. ಪ್ರಸ್ತಾವನೆ ಇಲ್ಲದೆ ನಾಟಕ ಪ್ರಾರಂಭವಾಗಬಾರದು. ಶೃಂಗಾರಾದಿನವರಸಗಳಲ್ಲಿ ಎಲ್ಲವೂ ಬರಬೇಕು. ಯುದ್ಧ ಸಾತ್ವಿಗಳನ್ನು ಪ್ರತ್ಯಕ್ಷವಾಗಿ ಕಾಣಿಸಬಾರದು. ಇವನ್ನು ವಿಷ್ಕಂಭ ಅಥವಾ ಪ್ರವೇಶಕಗಳಿಂದ ವ್ಯಕ್ತಪಡಿಸಬೇಕು ಇತ್ಯಾದಿ.

ಭಾರತದಲ್ಲಿ ಎಲ್ಲ ಭಾಷೆಗಳ ವೇಲೂ ಸ್ಪೃಶುತ್ವವನ್ನು ಸಂಪಾದಿಸಿ, ಒಂದು ಕಾಲದಲ್ಲಿ ಕನ್ನಡಕ್ಕು ನೂರಿಯಿಂದ ಕಾಶ್ಮೀರದ ವರೆಗೆ ಪ್ರಚಾರದಲ್ಲಿದ್ದ ಭಾಷೆಯು ಸಂಸ್ಕೃತ ಸಂಸ್ಕೃತಜ್ಞರು ಧಾರಣೀಯ ದೇಶೀಯ ಭಾಷೆಗಳನ್ನು ಗ್ರಾಂಥಿಕ ಭಾಷೆಯಾಗಿ ಬೆಳೆವಂತೆ ಮಾಡಿದರು ದೇಸಿನುಡಿಗಳನ್ನು ಸಂಸ್ಕರಿಸಿ, ಅವ್ಯಗಳನ್ನು ಶಾಸ್ತ್ರ ಪೋಧ್ಯವಾಗುವಂತೆ ನೂಡಿದರು. ಇದರಿಂದಾಗಿ ಕನ್ನಡಾದಿ ಭಾಷೆಗಳಲ್ಲಿಯೂ ಸಂಸ್ಕೃತ ಮಾರ್ಗವನ್ನನುಸರಿಸಿದ ಗ್ರಂಥಗಳು ಕಾವ್ಯನಾಟಕಗಳು ಕುಟ್ಟಿದುವು

ಕನ್ನಡದಲ್ಲಿ ಈಗ ಉಪಲಬ್ಧವಿರುವ ಗ್ರಂಥಗಳಲ್ಲಿ ಕವಿರಾಜಮಾರ್ಗವೇ ಪ್ರಾಚೀನತಮವಾದುದು ಇದರ ರಚನೆಯು ೯ನೆ ಶತಮಾನದಲ್ಲಾಗಿದ್ದರೂ, ಅದಕ್ಕೂ ಹಿಂದೆ ಕನ್ನಡದಲ್ಲಿ ಸಾಹಿತ್ಯರಚನೆಯಾಗಿತ್ತೆಂದು ತಿಳಿಯುತ್ತಾರೆ. ಇದಕ್ಕೆ ಆಧಾರವಿಲ್ಲದ ಇಲ್ಲ. ಆದರೂ ಕನ್ನಡವು ಬೆಳೆದು ಯೋಗ್ಯ ಉತ್ತಮ ಗ್ರಂಥಗಳಿಂದ ಅಲಂಕೃತವಾದುದು ಕ್ರಿ. ಶ. ೧೧ನೆ ಶತಮಾನದಾದಿಯಲ್ಲಿದ್ದ ಜಂಪನ ಕಾಲದಿಂದ. ಆ ಕಾಲದ ಸಮಾಜಕ್ಕೆ ಕನ್ನಡದಲ್ಲಿ ದೃಶ್ಯ ಕಾವ್ಯಗಳು ಪುಜಾರದಲ್ಲಿದ್ದುವೇ ಇಲ್ಲವೇ ಎಂಬುದಕ್ಕಾಗಲೀ ಆ ಮೇಲೆ ಇದ್ದುವ ಕ್ಕಾಗಲೀ ಬಲವಾದ ಆಧಾರವಿಲ್ಲ

ಕನ್ನಡದ ನಾಟಕಗಳು ಇದುವರೆಗೂ ಉಪಲಬ್ಧವಿಲ್ಲ. ೧೭ನೆ ಶತಮಾನದಲ್ಲಿ ಮೈಸೂರ ಚಿಕ್ಕ ದೇವರಾಯನ ಆಸ್ಥಾನ ಕವಿಯಾದ ಸಿಂಗರಾರ್ಯನ ಮಿತ್ರ ವಿಂದಾ ಗೋವಿಂದವೇ ಪ್ರಥಮ ದೃಶ್ಯ ಕಾವ್ಯ ಇದು ಉಪರೂಪಕಗಳಲ್ಲಿ ಒಂದಾದ ನಾಟಿಕೆಯಾದ ರತ್ನಾವಳಿಯ ರೂಪಾಂತರವು. ಆದನ್ನು ಬಿಟ್ಟರೆ, ದೃಶ್ಯ ಕಾವ್ಯವೊಂದೂ ಸಿಗುವುದಿಲ್ಲ ೧೭೦೦ ನೆ ಮಾರಿಗಿದ್ದ ಕೇಶಿರಾಜನು ಬರೆದೆನೆಂದು ಹೇಳಿದ ಸುಭದ್ರಾ ಹರಣ ಹಾಗೂ ಪ್ರಬೋಧ ಚಂದ್ರಗಳೂ, ಕರ್ಣಪಾರ್ಯನ (೧೮೦೦) ಮಾಳವೀ ಮಾಧವವು ನಾಟಕಗಳಾಗಿರಬೇಕೆಂದು ಊಹಿಸಿದೆ. ೧೬೦೪ರಲ್ಲಿ ಕರ್ಣಾಟಕ ಶಬ್ದಾನುಶಾಸನವನ್ನು ಬರೆದ ಭಟ್ಟಾಕಲಂಕನು ಕನ್ನಡ ಸಾಹಿತ್ಯದ ಹಿರಿಮೆಯನ್ನು ವರ್ಣಿಸುವಾಗ ಕನ್ನಡದಲ್ಲಿ ನಾಟಕಗಳೂ ಇದ್ದುವೆಂದು ಹೇಳುತ್ತಾನೆ ಅವಾವುವೂ ದೊರೆಯದಿದ್ದು ನಮ್ಮ ದುರ್ಭಾಗ್ಯ.

ಕನ್ನಡದಲ್ಲಿ ಕವಿರಾಜ ಮಾರ್ಗಕಾರನಿಗೆ ಹಿಂದೆಯೇ ಚತ್ತಾಣ, ಬೆದಂಡೆಗಳೆಂಬ ದೇಶೀಯ ಕಾವ್ಯ ಭೇದವಿದ್ದುವು. "ಪ್ರಕರಣ"ವೆಂಬುದು ನಾಟಕಕ್ಕೆ ಸಮೀಪವಾದ ಒಂದು ಕಾವ್ಯ ಭೇದವಾಗಿದ್ದಿರಬಹುದು. ಕನ್ನಡದ ಜನರು ನಾಟ್ಯ ಜನಾಂಗದವರೆಂದು ತಿಳಿದು ಬಂದಿದೆ. ಹಾಗಿರುವಾಗ ಕನ್ನಡದಲ್ಲಿ ನಾಟಕವೇ ಇಲ್ಲವೆಂದರೆ ಸೋಜಿಗದ ಮಾತಾಗಿದೆ.

ಇಂದು ನಮ್ಮಲ್ಲಿ "ಯಕ್ಷಗಾನ"ವೆಂಬ ಒಂದು ಕಾವ್ಯ ಭೇದವಿದೆ. ಇದನ್ನು ಹಾಡುತ್ತಾ ಅಭಿನಯಿಸಿ ಬಯಲಾಟಗಳನ್ನೋ, ಆರ್ಷ ವಿವರಣೆಯನ್ನು ಮಾತ್ರ ವಾಡುವ ತಾಳಮದ್ದಲೆಗಳನ್ನೋ ನಾವು ಎಂದೂ ಮರೆಯಂತಿಲ್ಲ ಅಮ ನಮ್ಮ ಜನರಲ್ಲಿ ಮೈಯ್ಗೂಡಿಬಂದ ಅಭಿರುಚಿ ಈ ಯಕ್ಷಗಾನ ಪ್ರಸಂಗಗಳು. "ನಾಟಕ"ಗಳಲ್ಲ, ಕಾವ್ಯಗಳೇ. ಪ್ರಸಿದ್ಧ ವಸ್ತುವನ್ನು ಧರಿಸಿ ಬರೆದ ಜನಸಾಮಾನ್ಯರಿಗೂ ತಿಳಿಯಬಹುದಾದ ಕಥಾ ಕಾವ್ಯ. ಇದು ಪದ್ಯಯಃ ಕವಿರಾಜ ಮಾರ್ಗದ ಹಿಂದಯೇ ಪ್ರಚಾರದಲ್ಲಿದ್ದಿರಬಹುದು. ನಾರಣಕಾರನು ಕನ್ನಡದ ಕಾವ್ಯ ಭೇದವನ್ನು ಹೇಳುತ್ತಾ

ನುಡಿಗೆಲ್ಲಂ ಸಲ್ಲದ ಕ
ನ್ನಡದೊಳ್ಚತ್ರಾಣಮುಂ ಬೆದಂಡೆಯುಮೆಂದೀ
ಗಡಿನನೆಗಲ ತ್ತಿಯ ಕಬ್ಬದೊ
ಳೊಡಂಬುತಂ ಮಾಡಿದಪ್ಪುರಾತನ
ಕವಿಗಳ್ |
೧-೩೨.

ಎಂದು ಹೇಳಿದ್ದಾನೆ ಇಲ್ಲಿ ಕನ್ನಡದ ವೇಸಿಯ ಕಾವ್ಯಗಳ ಸಂಸ್ಕೃತ ಮಾರ್ಗ ಕಾವ್ಯಗಳೊಂದಿಗೆ ಹೊಂದಿಕೊಂಡುದರ ಸೂಚನೆಯಿದೆ ಹಾಗೆಯೇ ಈ ದೇಶೀಯ ಕಾವ್ಯಗಳು ಯಕ್ಷಗಾನದ ರೂಪವೇ ಎಂದು ಹೇಳಿದರೆ, ನಮ್ಮ ಜನರು ೧೯ನೆ ಶತಮಾನದಿಂವರೂ ನಾಟಕಗಳನ್ನು ಪ್ರತ್ಯೇಕವಾಗಿ ಬರೆಯುತ್ತಿದ್ದಿಲ್ಲ; ಬದಲು ಕಾವ್ಯಗಳನ್ನೇ ನಾಟಕಗಳಾಗಿ ಉಪಯೋಗಿಸು

(ಮುಂದೆ ಪುಟ ನೋಡಿರಿ)

SEASON DEPOSITS
ಸೀಸನ್ ಠೇವಣಾತಿಗಳು

ನೇ. 4% ದರ ಬಡ್ಡಿಯಲ್ಲಿ ಸೀಸನ್ ಠೇವಣಾತಿಗಳನ್ನು ಈಗ ಸ್ವೀಕರಿಸಲಾಗುವುದು.

ಮೊಡ್ಡ ಡಿಪೊಜಿಟು ಮೊಬಲುಗುಗಳಿಗೆ ಸ್ಪೆಶಲ್ ಬಡ್ಡಿ ದರಗಳು.

ಹೆಚ್ಚಿನ ವಿವರಗಳಿಗೆ ನಮ್ಮನ್ನು ವಿಚಾರಿಸಿರಿ

ದಿ ವಿಜಯ ಬೇಂಕ್ ಲಿಮಿಟೆಡ್
ಪ್ರಧಾನ ಕಛೇರಿ ಮತ್ತು ಶಾಖೆಗಳು.

ಜುಮ್ಲಾ ಸಂಪತ್ತು (31—12—1956) | ರೂಪ್ಯಾ 1 ಕೋಟಿಗೂ ಮಿಕ್ಕಿದೆ

## ಗಾಯತ್ರಿ ಮಂತ್ರ

# ವಿಶ್ವ ಧರ್ಮವನ್ನು ಬೋಧಿಸುವ ಗುರು

ಯಾವುದಾದರೊಂದು ವಸ್ತುವಿನ ಪ್ರಯೋಜನವನ್ನು ಹೊಂದಬೇಕಾದರೆ, ಅದರ ವಿಷಯದ ಸಂಪೂರ್ಣ ತಿಳಿವಳಿಕೆ ಅಗತ್ಯ. ಒಂದು ಅಮೂಲ್ಯವಾದ ಖನಿಜವನ್ನು ಅದರ ಉಪಯೋಗ ತಿಳಿಯದವನ ಕೈಗಿತ್ತರೆ ಅವನು ಅದರಿಂದ ಯಾವ ಪ್ರಯೋಜನವನ್ನು ಹೊಂದಲು ಸಾಧ್ಯ? ಹಾಗೆಯೇ ಭಾರತೀಯ ತತ್ವಜ್ಞಾನದ ಪ್ರಯೋಜನವನ್ನು ಪಡೆಯಬೇಕಾದರೆ ಅದರ ಕಾರಣ, ವಿಜ್ಞಾನ ರಹಸ್ಯ, ವಿಧಾನ, ಮತ್ತು ಪ್ರಯೋಗಗಳನ್ನು ತಿಳಿದುಕೊಳ್ಳಬೇಕು. ಆದರೆ ಅವಶ್ಯಕವಾದ ಜ್ಞಾನವಿಲ್ಲದ್ದರಿಂದ ನಮ್ಮ ಬಹುಮೂಲ್ಯ ವಿಜ್ಞಾನವು ನಮಗಿಂದು ನಿರರ್ಥಕ, ನಿರುಪಯೋಗ, ಅಲ್ಲದೆ ಭಾರರೂಪಿಯಾಗಿ ಕಂಡುಬರುವುದು.

ಮಾನವನು ಸ್ವಾಭಾವಿಕವಾಗಿ ಸುಖಾಭಿಲಾಷಿ. ಅದಕ್ಕಾಗಿ ಅವನು ನವನವೀನ ವಿಚಾರಗಳನ್ನು ಕಾರ್ಯಗತಗೊಳಿಸುವನು. ಆ ಪ್ರಯತ್ನಗಳು ಮಾತ್ರ ನೀರಿನಲ್ಲಿ ಬರಹ ಮಾಡಿದ ಹೋಮದಂತೆ ನಿಷ್ಫಲವಾಗುವುವು. ಸುಖಪ್ರಾಪ್ತಿಗಾಗಿ ಮಾಡಿದ ಸಾಧನಗಳೆಲ್ಲವೂ ಅಭೀಷ್ಟ ಪರಿಣಾಮವನ್ನುಂಟುಮಾಡುವ ಬದಲು ದುಃಖದಾಯಕವಾಗುವುವು. ಇಂದಿನ ಮಾನವರಲ್ಲಿ ದುಃಖಿಗಳ ಸಂಖ್ಯೆ ಅಧಿಕವಾಗಿದೆ. ಅವರು ತಮ್ಮ ವರ್ತಮಾನ ಸ್ಥಿತಿಗೆ ಅಸಂತುಷ್ಟರಾಗಿರುವರು. ಇನ್ನೂ ಉತ್ತಮ ಸ್ಥಿತಿಯ ಪ್ರಾಪ್ತಿಗಾಗಿ ಹಾತೊರೆಯುವರು. ಈ ಅವಸ್ಥೆಯು ಅಲ್ಪ ವಿಕಸಿತ, ಅಲ್ಪ ತಿಳುವಳಿಕೆಯ ನಿಮ್ನ ವರ್ಗದವರಲ್ಲಿ ಮಾತ್ರವೇ ಅಲ್ಲ—ತನ್ನುನ್ನು ವಿದ್ಯಾವಂತರು, ಬುದ್ಧಿವಂತರು, ಸಾಧನ ಸಂಪನ್ನರೆಂದು ಕರೆಯಿಸಿಕೊಳ್ಳುವ ಉಚ್ಚ ವರ್ಗದ ಜನರಲ್ಲಿಯೂ ಇದೆ. ಎಲ್ಲರೂ ಸುಖಾಕಾಂಕ್ಷಿಗಳಾದರೂ ದಿನೇ ದಿನೇ ಅದರಿಂದ ದೂರಸರಿಯುತ್ತಿರುವರು. ಅವರ ಶೋಧನೆಗಳು ಅಭೀಷ್ಟಪೂರ್ತಿಗೆ ಸಹಾಯಕವಾಗುವ ಬದಲು ಬಾಧಕವಾಗುವುವು.

ಮಾನವಜೀವಿಯ ಈ ಕಠಿಣತೆಯನ್ನು ನಮ್ಮ ಪೂಜನೀಯ ಋಷಿಗಳು ಮೊದಲೇ ತಿಳಿದಿದ್ದರು. ಇದಕ್ಕಾಗಿ ಅವರು ಆನಂದದ ಅಕ್ಷಯ ಭಂಡಾರದ ವಾಸ್ತವಿಕ ಸ್ಥಾನವನ್ನು ಯುಗಯುಗಾಂತರಗಳ ಶೋಧನೆಯಿಂದ ಕಂಡುಹಿಡಿದು ಅದನ್ನು ಸಾಮಾನ್ಯ ಜನರ ಸಮ್ಮುಖದಲ್ಲಿ ಉಪಸ್ಥಿತಗೊಳಿಸಿದರು. ಈ ಶೋಧದ ಹೆಸರು "ಬ್ರಹ್ಮ ವಿದ್ಯೆ". ಇದರ ಇನ್ನೊಂದು ಹೆಸರು "ಭಾರತೀಯ ಸಂಸ್ಕೃತಿ" ಅಥವಾ ಭಾರತೀಯ ತತ್ವಜ್ಞಾನ.

ಈ ನಮ್ಮ ಸಂಸ್ಕೃತಿಯು ಮಾನವ ಜೀವನದ ಬಾಹ್ಯ ಹಾಗೂ ಆಂತರಿಕ ಆನಂದದ ಪರಿಪೂರ್ಣ ವಿಕಾಸಗೊಳಿಸುವ ಉದ್ದೇಶವುಳ್ಳ ವಿಶುದ್ಧ ವಿಜ್ಞಾನವಾಗಿದೆ: ನಾವಿದನ್ನು ತಿಳಿದಿದ್ದ ಆ ಒಂದು ಕಾಲವಿತ್ತು. ಅಂದು ಭಾರತವು "ಸ್ವರ್ಗಾದಪೀ ಗರೀಯಸೀ" ಆಗಿತ್ತು. ಅಂದು ನಾವು ಚಕ್ರವರ್ತಿಗಳು, ಶಾಂತಿರಕ್ಷಕರು, ಲೋಕದ ಆತ್ಮಪ್ರ ಆತ್ಮಗಳಿಗೆ ಅನ್ಯತ್ವವನ್ನುಣಿಸುವ ಜಗದ್ಗುರುಗಳಾಗಿದ್ದೆವು. ಇಂದು ಮಾತ್ರ ಅದನ್ನು ಉಪೇಕ್ಷಿಸಿದೀನರೂ, ಹೀನರೂ ಆಗಿದ್ದೇವೆ. ನಮ್ಮ ದೀನತೆಯ ಪರಿಹಾರಕ್ಕಾಗಿ ಪಾಶ್ಚಿಮಾತ್ಯರೆಡೆಗೆ ದೃಷ್ಟಿ ಬೀರುತ್ತೇವೆ ಆದರೆ ನಮ್ಮ ಅಂಗಳದಲ್ಲಿರುವ ಸುಧಾ ಸರೋವರದತ್ತ ಗಮನ ಕೊಡುವುದಿಲ್ಲ. ಇದು ಅತ್ಯಂತ ಖೇದದ ವಿಷಯವಾಗಿದೆ. ಯಾರನ್ನು ನೋಡಿದರೂ, ಅಶಾಂತ, ಆತಂಕಿತ, ಅಭಾವಗ್ರಸ್ಥರಾಗಿ ಕಾಣಲು ಇದೇ ಕಾರಣವಾಗಿದೆ. ಯಾರಿಗೂ ನೆಮ್ಮದಿ ಇಲ್ಲ. ಶಾಂತಿ ಇಲ್ಲ. ಪ್ರಸನ್ನತೆ ಇಲ್ಲ. ಉಲ್ಲಾಸವಿಲ್ಲ. ಶ್ರೀಮಂತರಿಂದ ಬಡವರ ವರೆಗೆ, ವಿದ್ವಾಂಸರಿಂದ ಮೂರ್ಖರ ವರೆಗೆ ಎಲ್ಲರೂ ಅಸಮಾಧಾನಿಗಳಾಗಿರುವುದನ್ನು ನಾವು ನೋಡಬಹುದು.

ಮಾನವನಿಗೆ ನೈಜ ಸುಖಕ್ಕೆ ಕಾರಣವಾಗುವ ಪ್ರತಿಯೊಂದು ವಿಷಯವೂ ಭಾರತೀಯ ಸಂಸ್ಕೃತಿಯಲ್ಲಿ ಪ್ರಸ್ಫುಟವಾಗಿದೆ. ಇಂದು ಭೌತಿಕ ವಿಜ್ಞಾನದ ಉನ್ನತಿಯಿಂದ ಮಾನವನ ಸುಖಾಭಿವೃದ್ಧಿಯಾಗಬಹುದೆಂಬ ವಿಶ್ವಾಸವಿದೆ. ಇದು ನಿರರ್ಥಕ. ಟ್ರೈನು, ತಂತಿ ಟಪ್ಪಾಲು, ಹಡಗು, ರೇಡಿಯೊ, ವಿಮಾನ, ನಿದ್ಯುತ್ತು ಇತ್ಯಾದಿಗಳ ಆವಿಷ್ಕರ್ತರು ಭೌತಿಕ ಸುಖಸಾಧನಗಳನ್ನು ಹೆಚ್ಚಿಸುವ ಪ್ರಯತ್ನವನ್ನೇನೋ ಮಾಡಿದರು. ಆದರೆ ಪರಿಣಾಮವು ವಿಪರೀತವಾಯಿತು. ಅನುಕೂಲತೆಗಳು ವೃದ್ಧಿಯಾದಂತೆ ಅವುಗಳಿಂದ ಉಳಿತಾಯವಾದ ಸಮಯದ ಸದುಪಯೋಗಗೊಳಿಸುವ ಸುಜ್ಞಾನದ ಅಭಾವದಿಂದ ಅವೆಲ್ಲವೂ ನಾಗಕತೆಯ ಅಭಿಶಾಪವಾದವು. ಧನಿಕರು ಇನ್ನೂ ಧನವನ್ನು ಸಂಗ್ರಹಿಸಿದರು, ಧನಹೀನರು ಇನ್ನೂ ದರಿದ್ರಾವಸ್ಥೆಗಿಳಿದರು. ಪರಿಶ್ರಮದ ಉಪೇಕ್ಷೆಯಾಯಿತು. ಆಲಸ್ಯ ಪ್ರವೃತ್ತಿಯು ಬೆಳೆದು ಸ್ವಾಸ್ಥ್ಯ, ಜಾಗರೂಕತೆಗಳ ಅಭಾವ ಪತನವಾಯಿತು. ಆಸ್ಪತ್ರೆ, ಔಷಧಾಲಯ, ಕಾರಾಗೃಹ ಹಾಗೂ ನ್ಯಾಯಾಲಯಗಳ ಬಾಗಿಲಿಗೆ ಆಲೆದಾಡುವ ಪ್ರಸಂಗ ಬಂತು. ಈ ಭೌತಿಕ ವಿಜ್ಞಾನವಿಂದು ಭಸ್ಮಾಸುರನಂತೆ ಪ್ರಲಯ ತಾಂಡವದ ತಯಾರಿ ನಡೆಸಿದೆ. ಅಣುಬಾಂಬು, ಜಲಜನಕ ಬಾಂಬು, ಮೃತ್ಯುಕಿರಣ, ವಿಷ ಅನಿಲ ಇತ್ಯಾದಿಗಳ ಆಶ್ರಯದಲ್ಲಿ ನಿಂತು ಹಿರಣ್ಯಾಕ್ಷ ದೈತ್ಯನು ಇಂದು ಪುನಃ ಅಟ್ಟಹಾಸ ಮಾಡುತ್ತಿದ್ದಾನೆ. ನಮಗೆ ಆ ಪುರಾಣಕಥೆಗಳೆಲ್ಲಾ ವಿಶ್ವಾಸವಿಲ್ಲದಿರಬಹುದು. ಆದರೆ ಪರಮಾಣು ಬಾಂಬು, ಜಲಜನಕ ಬಾಂಬುಗಳಿಂದ ಸೃಜಿಸಲ್ಪಟ್ಟ ಹಿರಣ್ಯಾಕ್ಷನು ಇಂದು ಇಡೀ ಪೃಥ್ವಿಯನ್ನೇ ಕಬಳಿಸಲು, ಚೂರ್ಣ ವಿಚೂರ್ಣಗೊಳಿಸಲು ವಿಕರಾಳ ರೂಪ ತಳೆದು ನಿಂತಿರುವುದನ್ನು ನಾವು ಸ್ವತಃ ನೋಡಬಹುದು. ಇನ್ನೊಮ್ಮೆ ಆ ಪೌರಾಣಿಕ ಕಥೆಯ ಪುನರಾವೃತ್ತಿಯಾಗುವ ಸಂಭವವು ಸ್ಪಷ್ಟವಾಗಿ ಗೋಚರಿಸುತ್ತದೆ. ಉನ್ನತಿಯ ಕ್ಷಿಜರಮಸೀಮೆಯನ್ನು ತಲಪಿರುವ ಈ ವಿಜ್ಞಾನವು ಸಮಸ್ತ ಮಾನವ ಜಾತಿಯನ್ನೆಷ್ಟೇ ಅಲ್ಲ, ಇಡೀ ಪ್ರಪಂಚವನ್ನೇ ಭಸ್ಮೀ ಭೂತವನ್ನಾಗಿ ಮಾಡುವುದೇನೂ ಅಸಂಭವವಲ್ಲ.

ಇದೊಂದು ಹೊಸ ವಿಷಯವಲ್ಲ. ಹಿಂದೆಯೂ ಭೌತಿಕ ವಿಜ್ಞಾನದ ವಿಕಾರದ ಪರಿಣಾಮಗಳ ಪರೀಕ್ಷೆಯಾಗಿದೆ. ಅದರಿಂದ ಅನೇಕಾನೇಕ ಅನುಕೂಲತೆಗಳು ದೊರಕಿದರೂ ಅಂತ್ಯದಲ್ಲಿ ಘೋತಕ ಪರಿಣಾಮಗಳೇ ಉಂಟಾಗಿವೆ. ರಾವಣನಂತಹ ಅನೇಕ ವೈಜ್ಞಾನಿಕರು ವಿಜ್ಞಾನದ ಆಧಾರದಿಂದ ಜೀವಮಾತ್ರಾಂಕಿತ ಶಕ್ತಿಗಳನ್ನು ಸಂಪಾದಿಸಿದ್ದರು. ಎಷ್ಟೋ ತಪಸ್ವಿಗಳೂ ಯೋಗ, ತಂತ್ರಶಕ್ತಿಗಳ ಆಧಾರದಿಂದ ಅನೇಕ ಋದ್ಧಿ-ಸಿದ್ಧಿಗಳನ್ನು ಪಡೆಯುವ ಮಾರ್ಗವನ್ನು ಹುಡುಕಿದ್ದರು. ಆದರೆ ಕೊನೆಗೆ ಎರಡೂ ಅಸುಪಯೋಗಿಗಳೆಂದು ನಿರ್ಧರಿಸಲ್ಪಟ್ಟವು. ಹಾಗೂ ಅವುಗಳ ಸಾರ್ವಜನಿಕ ಉಪಯೋಗವನ್ನು ನಿಲ್ಲಿಸಲು ಕಠೋರ ಪ್ರತಿಬಂಧಗಳು ಹಾಕಲ್ಪಟ್ಟವು. ಲಂಕೆಯ ಸಂಪೂರ್ಣ ವಿಜ್ಞಾನ ಸ್ಪರ್ಧೆ ರವು ಹನುಮಂತನಿಂದ ಸುಡಲ್ಪಟ್ಟಿತು. ಇದರಿಂದ ಅಲ್ಲಿಯ ಪ್ರಯೋಗಶಾಲೆಗಳೆಲ್ಲಾ ನಷ್ಟವಾದವು. ಇದೇರೀತಿಯಲ್ಲಿ ತಾಂತ್ರಿಕ ವಾಮಮಾರ್ಗವನ್ನು ಅನೈತಿಕವೆಂದು ಪರಿಗಣಿಸಿ ಅದರ ಸಾಧನೆಗಳಿಗೆ ಬಹಿಷ್ಕಾರ ಹಾಕಲ್ಪಟ್ಟಿತು. ಕಾಪಾಲಿಕ, ಆಘೋರ, ವೈತಾಳಿಕ ಸಂಪ್ರದಾಯಸ್ಥರು ಸಮಾಜದಿಂದ ದೂರವಿರಿಸಲ್ಪಟ್ಟರು. ಸಿದ್ಧಿಗಳ ದುರುಪಯೋಗವಾಗದಿರಬೇಕೆಂಬ ಕಠಿಣ ಪಥನನ್ನು ಪಡೆದೇ ಗುರುಗಳು ತಮ್ಮ ಶಿಷ್ಯರಿಗೆ ಯೋಗ ವಿದ್ಯೆಯನ್ನು ಕಲಿಸಿದರು. ಹೀಗೆ ಪ್ರತಿಯೊಂದು ರೀತಿಯ ಭೌತಿಕ ವಿಜ್ಞಾನದ ಅನಾವಶ್ಯಕ ಉನ್ನತಿಯು ತಡೆಯಲ್ಪಟ್ಟಿತು. ಮಾನವನ ಸಾಮೂಹಿಕ ಮನೋದೆಶೆಯು ಬಾಲಕರ ಮನಸ್ಸಿನಂತೆ ಇರುವುದನ್ನು ಋಷಿಗಳು ತಿಳಿದಿದ್ದರು ಮಕ್ಕಳ ಕೈಯಲ್ಲಿ ಸಿಡಿಮದ್ದನ್ನು ಕೊಟ್ಟರೆ ಸುಟ್ಟುಕೊಳ್ಳುವುದಲ್ಲದೆ ಬೇರೇನು ಸಾಧ್ಯ?

ಮಾನವನ ಸುಖಾಭಿಲಾಷೆಯು ಬರೇ ವಿಜ್ಞಾನದಿಂದ, ಬರೇ ಧನದಿಂದ, ಬರೇ ಬುದ್ಧಿ ಚಾತುರ್ಯದಿಂದ ಎಂದೂ ಪೂರ್ಣವಾಗಲು ಸಾಧ್ಯವಿಲ್ಲ. ಇವೆಲ್ಲವೂ ಅಗತ್ಯವಾಗಿವೆ ನಿಶ್ಚಿತ ಪುರಾಣದಲ್ಲಿ ಮಾತ್ರ. ಸಂಖದ ವಾಸ್ತವಿಕ ಸಂಭವವು ಯಾವ ಮಾರ್ಗದಲ್ಲಿದೆ ಎಂಬ ವಿಷಯದಲ್ಲಿ ಭಾರತೀಯ ತತ್ವವೇತ್ತರು ದೀರ್ಘ ಕಾಲೀನ ಆಸ್ಪೋಷಣೆಯನ್ನು ಮಾಡಿ, ಕೊನೆಗೆ ಮಾನವನು ಸೃಷ್ಟಿತರೂಪದಿಂದ ಸುಖ ಶಾಂತಿ, ಆಶಾ-ಉನ್ನತಿ, ಆನಂದ-ಉಲ್ಲಾಸಗಳ ಆವಶ್ಯವೇ ವಾ ಆಸ್ವಾದನೆಯನ್ನು ಮಾಡಬಹುದಾದ ಒಂದು ದಾರಿಯನ್ನು ಹುಡುಕಿದರು. ಈ ಸುಖ ಶಾಂತಿಗಳ ವೈಜ್ಞಾನಿಕ ಪದ್ಧತಿಯ ಹೆಸರೇ—ಭಾರತೀಯ ಸಂಸ್ಕೃತಿ. ದೌರ್ಭಾಗ್ಯದಿಂದ ಇಂದು ಅದನ್ನೂ ಮತಗಳ ಪಂಕ್ತಿಯಲ್ಲಿ ಬಿಸುಡಿದ್ದಾರೆ. ಆದರೆ ವಾಸ್ತವಿಕತೆಯು ತಿಳಿದಾಗ ಶುವರ್ಣ-ಹಿತತ್ವಾಳಿಗಳನ್ನು ಸುಲಭದಲ್ಲಿ ಬೇರ್ಪಡಿಸಬಹುದು.

ಭಾರತೀಯತೆಯು ವಸ್ತುತಃ ಮಾನವತೆಯ ಪ್ರತೀಕವಾಗಿದೆ. ಭಾರತೀಯ ಸಂಸ್ಕೃತಿಯು ವಾಸ್ತವಿಕ ಅಭಿಪ್ರಾಯವು ಸಂಸ್ಕೃತಿಯಾಗಿದೆ. ಇದು ಒಂದು ವಿಶುದ್ಧ ವಿಜ್ಞಾನವಾಗಿದೆ. ಇದರ ಆಧಾರವು ಪ್ರಕೃತಿಯಲ್ಲಿರುವ ಜಡಪರಮಾಣುಗಳಲ್ಲ—ಪ್ರಾಣಿಗಳ ಗಹನ ಅಂತರಾಳದಲ್ಲಿರುವ ಚೇತನವಾಗಿದೆ. ಇದು ಕರಿಯಾದ ಪಾರಿಯಲ್ಲಿ ವಿಕಸಿತವಾದರೆ ಆನಂದದ ಬುಗ್ಗೆಗಳು ಕಾರಂಜಿಯಂತೆ ಚಿಮ್ಮಬಹುದು. ನಾಲ್ಕು ದಿಕ್ಕುಗಳಲ್ಲಿಯೂ ಪವಿತ್ರತೆ, ಶಾಂತಿ, ಸ್ನೇಹ, ಸೌಂದರ್ಯಗಳು ಹರಡಬಹುದು. ಎತ್ತ ನೋಡಿದರೂ ಸುಖವೇ ಗೋಚರಿಸಬಹುದು. ಆದ್ದರಿಂದ ಈ ಸಂಸ್ಕೃತಿಯನ್ನು ಒಂದು ವ್ಯವಸ್ಥಿತ ಜೀವನ ಪದ್ಧತಿ ಎಂದೂ ಹೇಳಬಹುದು. ಇದರ ಅಂಗ ಪ್ರತ್ಯಂಗಗಳ ವರ್ಣನೆಗೆ ಅನೇಕ ಗ್ರಂಥಗಳೇ ಪ್ರಸ್ತುತವಾಗಿದೆ. ವೇದ, ಶಾಸ್ತ್ರ, ಉಪನಿಷದ್, ದರ್ಶನ ಪುರಾಣ, ಸ್ಮೃತಿಗಳ ಭಾರತೀಯ ಸಂಸ್ಕೃತಿಯಲ್ಲಿ ಒಂದೊಂದು ವಿಷಯವೂ ವಿಸ್ತಾರ ಪೂರ್ವಕ ವಿವೇಚಿಸಲ್ಪಟ್ಟಿದೆ ಯಾರಿಗೆ ಅವುಗಳನ್ನು ಓದಲೂ, ತಿಳಿಯಲೂ ಅವಕಾಶವಿಲ್ಲವೋ ಅವರಿಗೋಸ್ಕರ ಅನುಹಾನ್ ವಿಜ್ಞಾನದ ಸಮಸ್ತ ಸಾರವು ಬೀಜ ರೂಪದಲ್ಲಿ ಸ್ಥಿತವಾಗಿರುವ ತಿಳಿ ಅಕ್ಷರಗಳ ಮಂತ್ರ ರತ್ನವೊಂದು ಪ್ರಸ್ತುತವಾಗಿದೆ. ಅದು ಭಾರತೀಯ ಸಂಸ್ಕೃತಿಯ ಬೀಜ ಮಂತ್ರ. ಆ ಮಹಾ ಮಂತ್ರವೇ ವೇದ ಮಾತೆಯೊದ—"ಗಾಯತ್ರೀ".

ಗಾಯತ್ರಿಯ ಅನುಭವವಿಲ್ಲದವರು ಅದನ್ನು ಔಪಚಾರಿಕವಾಗಿಯೂ, ಧನ, ಸಂತಾನ, ಸ್ತ್ರೀ, ಲಾಭ, ವಿಜಯಗಳ

(೨೩ನೇ ಪುಟ ನೋಡಿರಿ)

THE
CANARA INDUSTRIAL & BANKING SYNDICATE LTD.
Estd.: 1925, H. O.: UDIPI, S. India.

GROWING RESOURCES as on
31-12-1926 - Rs. 17,355
31-12-1936 - Rs. 35,45,544
31-12-1946 - Rs. 4,26,07,093
31-12-1956 - Rs. 10,64,10,312

THANKS
to
our thousands of customers all over the country for their confidence and good-will.

T. A. PAI, B. Com. (Bom.), A.I.I.B., F.R.E.S. (Lond)
General Manager.

DR. T. M. A. PAI, M. B., B. S.,
Managing Director.

## ಬ್ರಹ್ಮಚರ್ಯ ವ್ರತ

# ಇಂದ್ರಿಯ ನಿಗ್ರಹವು ಆತ್ಮಶಕ್ತಿಯ ಹೆಗ್ಗುರುತು

ವಿದ್ಯಾರ್ಥಿ ಜೀವನವು ಇಡೀ ಜೀವನದ ಅಸ್ತಿಭಾರ. ಮುಂದಿನ ಜೀವನವು ಸುಖಮಯವಾಗಬೇಕಾದರೆ ಈ ಅಸ್ತಿಭಾರವು ದೃಢವಾಗಿರಬೇಕು ಆದ್ದರಿಂದ ನಮ್ಮ ಪೂರ್ವಜರು ಸುಂದರವಾದ ಒಂದು ಯೋಜನೆಯನ್ನು ಮಾಡಿದ್ದಾರೆ. ಆ ಯೋಜನೆಯನ್ನು ವಿದ್ಯಾರ್ಥಿಗಳು ತಿಳಿದುಕೊಂಡರೆ ಅವರು ಸುದೃಢಂಗುವರು. ದೇಹ ಪ್ರಧಾನರಾದ ಚಿಕ್ಕ ಮಕ್ಕಳಿಗೆ ಯೋಗ್ಯವಾದ ಪಾಲನೆಯೇ ಉತ್ತಮವಾದ ಆಹಾರ ಆಚಾದ ಮೇಲೆ ವಿದ್ಯಾರ್ಥಿ ದೆಶೆ ಪ್ರಾರಂಭವಾಗುವುದು. ಆಗ ಅವರಿಗೆ ಶಾರೀರಿಕ ಪೋಷಣದ ಜೊತೆಗೆ ಆತ್ಮಕ್ಕೂ ಯೋಗ್ಯ ಆಹಾರ ಅವಶ್ಯ. ವಿದ್ಯಾರ್ಥಿದೆಶೆಯಲ್ಲಿ ಆ ಉತ್ತಮವಾದ ಪೌಷ್ಟಿಕ ಆಹಾರ ಎಲ್ಲರಿಗೂ ಸಿಗುವಂತೆ ಯೋಜನೆಯನ್ನು ನಮ್ಮ ಹಿರಿಯರು ರೂಪಿಸಿದ್ದಾರೆ. ಬ್ರಹ್ಮಚರ್ಯವೇ ಆ ಪೌಷ್ಟಿಕ ಆಹಾರ. ಆತ್ಮನಿಗೆ ಬ್ರಹ್ಮಚರ್ಯಕ್ಕೆಂತ ಹೆಚ್ಚಿನ ಪೌಷ್ಟಿಕ ಆಹಾರ ಈ ಜಗತ್ತಿನಲ್ಲಿ ಇನ್ನೊಂದಿಲ್ಲ ವಿದ್ಯಾರ್ಥಿ ದೆಶೆಯ ಸಂತರವೂ ಇದು ಕಲ್ಯಾಣಕಾರಿಯಾದ ಆಹಾರವಾಗಿರುತ್ತದೆ. ಈ ದೆಶೆಯಲ್ಲಂತೂ ಇದುಅತ್ಯವಶ್ಯವಾದಆಹಾರ.

ತನ್ನ ಇಂದ್ರಿಯ, ಮನಸ್ಸು ಮತ್ತು ಬುದ್ಧಿಯ ಮೇಲೆ ತನ್ನ ಅಧಿಕಾರ ಮತ್ತು ಈ ಮೂರರ ಮೇಲೂ ಸ್ವಭುತ್ವ ಮಾಡುವುದರ ಜೊತೆಗೆ ಈ ಮೂರನ್ನೂ ಪೂರ್ಣವಾಗಿ ವಿಕಸಿಸುವುದರ ಜೊತೆಗೆ ಆತ್ಮದರ್ಶನದಲ್ಲಿ ಇದನ್ನು ತೊಡಗಿಸುವುದು. ಇದುವೇ ಬ್ರಹ್ಮಚರ್ಯ. ಇದು ಮೂರು ಬ್ರಹ್ಮಚರ್ಯದ ಅಂಗಗಳು.

ಭಗವಂತನು ನಮ್ಮ ಕೈಗೆ ಅಮೂಲ್ಯವಾದ ಒಂದು ಶಕ್ತಿಯನ್ನಿತ್ತಿದ್ದಾನೆ. ಅದುವೇ—ತನ್ನ ಮನಸ್ಸು ಮತ್ತು ಬುದ್ಧಿಯ ಮೇಲೆ ನಿಯಂತ್ರಿಸುವ ಶಕ್ತಿ. ಒಬ್ಬ ಕುದುರೆ ಸವಾರನು ಎಷ್ಟೇ ಬಲಿಷ್ಠವಾದ ಕುದುರೆಯನ್ನಾದರೂ ಕಡಿವಾಣವನ್ನು ತನ್ನ ಹತೋಟಿಯಲ್ಲಿಟ್ಟುಕೊಂಡು ಸುಗಮವಾಗಿ ನಿಶ್ಚಿತ ಗುರಿಯನ್ನು ಲಪಡಿಹುದು. ಆದರೆ ಅದಕ್ಕೆ ಬದಲಾಗಿ ತನು ಸ್ವತಃ ಕುದುರೆಗೆ ವಶವಾದನೆಂದರೆ ಆ ಪ್ರಯಾಣ ಸಾಗಲಾರದು. ಕುದುರೆಯೇ ಸವಾರನ ಮೇಲೆ ಸವಾರಿ ಮಾಡುವ ಪರಿಸ್ಥಿತಿ ಒದಗಬಹುದು. ಇದರಂತೆ ತನ್ನ ಬುದ್ಧಿ, ಮನಸ್ಸು, ಹಾಗೂ ಇಂದ್ರಿಯಗಳ ಮೇಲೆ ಅಧಿಕಾರವಿಲ್ಲದನ ಮನಸ್ಸು ಕೂಡಾ ಇರುತ್ತದೆ. ಸ್ವಾತಂತ್ರ್ಯವಾದಿ ಜನರು ತಮ್ಮ ಮನಸ್ಸಿನಂತೆ ಮಾಡುವೆವು ಎನ್ನುತ್ತಾರೆ. ಇದನ್ನೆ ಅವರು ಸ್ವಾತಂತ್ರ್ಯವೆನ್ನುತ್ತಾರೆ. ಆದರೆ ಇದನ್ನೆ ಗುಲಾಮತನ ಎನ್ನುವರು ವಿನೋಬರವರು.

ಮನಸ್ಸು ಮನುಷ್ಯನ ಸೇವಕ ಹೊರತು ಮನುಷ್ಯನು ಮನಸ್ಸಿನ ಸೇವಕನಾಗಿರಬಾರದು. ನಾವು ನಮ್ಮ ಮನಸ್ಸಿಗೆ ಅನುಸಾರವಾಗಿ ನಡೆಯುತ್ತೇನೆ ಎಂದರೆ ಯಜಮಾನನು ತನ್ನ ನೌಕರನ ಆದೇಶಕ್ಕನುಗುಣವಾಗಿ ಕೆಲಸ ಮಾಡುತ್ತಾನೆ ಎಂದಂತಾಯಿತು. ಅಂತಹ ಯಜಮಾನನು ಸ್ವತಂತ್ರನೇ? ಅವನು ತನ್ನ ನೌಕರನ ನೌಕರನಲ್ಲವೆ? ಮಾಲಕನು ತನ್ನ ಮಾಲಿಕತ್ವವನ್ನು ಗುರುತಿಸಲಿಲ್ಲ. ಆದ್ದರಿಂದ ತನ್ನ ಮನಸ್ಸಿಗೆ ವಶನಾಗಿ ಅದರ ಆದೇಶಾನುಸಾರ ನಡೆಯುವುದೇ ಸ್ವಾತಂತ್ರ್ಯ ಎಂದು ತಿಳಿಯುತ್ತಾನೆ.

ಯಾವ ಮನುಷ್ಯ ತನ್ನನ್ನು—ತನ್ನ ಮನಸ್ಸು, ಬುದ್ಧಿ ಹಾಗೂ ಇಂದ್ರಿಯಗಳಿಂದ ಬೇರೆಯಾಗಿ,—ಬೇರೆಯೆಂದು ಗುರುತಿಸುವುದಿಲ್ಲವೋ ಅವನು ತನ್ನ ಮನಸ್ಸು, ಬುದ್ಧಿ, ಇಂದ್ರಿಯಗಳನ್ನು ಅಧೀನದಲ್ಲಟ್ಟುಕೊಳ್ಳಲಾರ. ಅವು ಮೂರರ ಮೇಲೆ ತನ್ನ ಅಧಿಕಾರವನ್ನು ಉಪಯೋಗಿಸುವುದೇ ಬ್ರಹ್ಮಚರ್ಯ. ಈ ವಿಕ್ಷಣ ವಿದ್ಯಾರ್ಥಿದೆಶೆಯಲ್ಲಿ ಆಗ ಬೇಕಾದುದು ಅವಶ್ಯ

ಇಂದ್ರಿಯ, ಮನಸ್ಸು ಮತ್ತು ಬುದ್ಧಿಯನ್ನು ಹತೋಟಿಯಲ್ಲಿಟ್ಟುಕೊಳ್ಳುತ್ತದರ ಜೊತೆಗೆ ಅವುಗಳನ್ನು ಪೂರ್ಣವಾಗಿ ವಿಕಸಿತಗೊಳಿಸಬೇಕೆಂಬುದು ಹೇಳಿರುವ ಎರಡನೆ ಸಂಗತಿ. ತನ್ನನ್ನು ಇವುಗಳಿಂದ ಬೇರೆಯಾಗಿ ಗುರುತಿಸುವವ ಮಾತ್ರ ವಿಕಸಿತಗೊಳಿಸಲು ಸಮರ್ಥ. ಕೇಳು ದರ್ಶಿಯ ವಿಷಯಾಸಕ್ತಿಯಿಂದ ತುಂಬಿದ ಹಾಡುಗಳನ್ನು ಕೇಳಿದಾಗ, ಅಥವಾ ಅಂತಹ ಸಂದರ್ಭದ ಚಿತ್ರಗಳನ್ನು ನೋಡಿದಾಗ ಮನಸ್ಸು ಮತ್ತು ಸಂಬಂಧಪಟ್ಟ ಇಂದ್ರಿಯಗಳು ಅದನ್ನು ಬಯಸುತ್ತವೆ. ಇದರಿಂದ ದುರ್ಬಲಗೊಂಡ ಮನಸ್ಸು ಕಡಿವಾಣ ಇಲ್ಲದ ಕುದುರೆಯಂತೆ ಎತ್ತ ಸುಳಿಯುವುದೆಂದು ಹೇಳಲು ಸಾಧ್ಯವಿಲ್ಲ.

ಸಜ್ಜನರ ಸಮೆ, ಸದ್ಗ್ರಂಥಗಳ ಪಠಣ ಕೇಳು ಮುಸ್ತಕಗಳನ್ನು ಓದದಿರುವುದು, ಕೇಳು ಮಾತುಗಳನ್ನು ಕೇಳದಿರುವುದು, ಅಂತಹ ಹಾಳುಸಂದರ್ಭಬದಗದಂತೆ ಜಾಗ್ರತೆಯಿಂದ ಇರುವುದು, ತನ್ನ ಮನಸ್ಸಿನ ಶಕ್ತಿಯನ್ನು ವ್ಯರ್ಥವಾಗಿ ಖರ್ಚು ಮಾಡದಿರುವುದು,ವಿಷ್ಯಾಭಾಷಣವನ್ನು ಮಾಡದಿರುವುದು, ಪರರನ್ನು ದೂಷಿಸದಿರುವುದು ಇವೇ ಮೊದಲಾದುವುಗಳನ್ನು ಸರಿಯಾದ ರೀತಿಯಲ್ಲಿ ಪಾಲಿಸಿದಾಗಲೇ ಮನಸ್ಸು, ಇಂದ್ರಿಯ ಮತ್ತು ಬುದ್ಧಿಶಕ್ತಿ ವಿಕಸಿತ ನಾಗುವುದು.

ಈ ವಿಕಸಿತ ಸಾಧನಗಳ ಸಹಾಯದಿಂದ ತನ್ನ ಜೀವನವನ್ನು ಸಫಲಗೊಳಿಸಬಹುದು, "ಬ್ರಹ್ಮಚರ್ಯವೇ ಜೀವನವು ವೀರ್ಯ ನಾಶವೇ ಮೃತ್ಯುವು" ವಿದ್ಯಾರ್ಥಿ ಜೀವನದ ಪ್ರತಿಜ್ಞೆಯೇ ಇದು ಆಗಿರಬೇಕು. ಆಗ ಮಾತ್ರ ಜೀವನವು ಸುಗಮಗೊಂಡು ದೇಶದ ಉದ್ಧಾರವಾಗುವುದು.

—ಶ್ರೀ. ಪಿ. ಯಸ್. ರಾಮಚಂದ್ರ ರಾವ್, ಪಡುಬಿದ್ರೆ.

## ನಾಣ್ಯಗಳ ಮುದ್ರಣ

# ಟಂಕಸಾಲೆಯ ಕತೆ ಕೇಳಿರಿ- ಅದು ಕುತೂಹಲ ಕಾರಿಯಾಗಿದೆ

ನವಾಬ ಸಿರಾಜ್ ಉದ್ ದೌಲನೊಂದಿಗೆ ಮಾಡಿಕೊಂಡ ಒಪ್ಪಂದದ ಪ್ರಕಾರ ಈಸ್ಟ್ ಇಂಡಿಯಾ ಕಂಪನಿಯವರು ಕಲ್ಕತ್ತೆಯಲ್ಲಿ ಸ್ಥಾಪಿಸಿದ ಟಂಕಸಾಲೆಯಲ್ಲಿ 1827ರ ಆಗಸ್ಟ್ 27ರಂದು ಪ್ರಥಮ ಭಾರತೀಯ ರೂಪಾಯಿ ನಾಣ್ಯವನ್ನು ಟಂಕಿಸಲಾಯಿತು.

ಪ್ರಥಮ ಆಧುನಿಕ ಟಂಕಸಾಲೆಯ ಸಂಸ್ಥಾಪನೆಯು 1824ರಲ್ಲಿ ಕಲ್ಕತ್ತೆಯಲ್ಲಿ ನಡೆಯಿತು. 13 ಲಕ್ಷ ರೂಗಳ ಬೆಲೆಬಾಳುವ ಯಂತ್ರೋಪಕರಣಗಳನ್ನು ಈ ಟಂಕಸಾಲೆಯಲ್ಲಿ ಪ್ರತಿಷ್ಠಾಪಿಸಲಾಯಿತು. ಈ ಟಂಕ ಸಾಲೆಯನ್ನು 1829ರ ಆಗಸ್ಟ್ 1ರಂದು ಪ್ರಾರಂಭಿಸಲಾಯಿತು. ಆಗ ನಿತ್ಯವೂ 2 ಲಕ್ಷ ಬೆಳ್ಳಿ ನಾಣ್ಯಗಳನ್ನು ಟಂಕಿಸುವ ಸಾಮರ್ಥ್ಯವನ್ನು ಈ ಟಂಕಸಾಲೆಯು ಪಡೆದಿತ್ತು.

ಸ್ವತಂತ್ರ ಪ್ರಾಪ್ತಿಯಾದ ತರುಣದಲ್ಲಿಯೇ ನೂತನ ಅಲಿಪುರ ಟಂಕಸಾಲೆಯ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲಾಯಿತು. 1952ರ ಮಾರ್ಚಿ 19ರಂದು ಈ ನೂತನ ಟಂಕಸಾಲೆಯನ್ನು ಆಗ ಹಣಕಾಸಿನ ಮಂತ್ರಿಗಳಾಗಿದ್ದ ಶ್ರೀ ಸಿ. ಡಿ. ದೇಶಮುಖ್‌ರವರು ಪ್ರಾರಂಭಗೊಳಿಸಿದರು. ಈ ಟಂಕಸಾಲೆಯು ಪ್ರತಿನಿತ್ಯವೂ ಪ್ರತಿ ಸರದಿಗೂ 12½ಲಕ್ಷ ನಾಣ್ಯಗಳನ್ನು ಟಂಕಿಸುವ ಸಾಮರ್ಥ್ಯ ಪಡೆದಿರುವುದು ನೂತನ ಟಂಕಸಾಲೆಯನ್ನು ಪ್ರಾರಂಭಗೊಳಿಸುವ ಸಮಯದಲ್ಲಿ ಮಾಡಿದ ಭಾಷಣದಲ್ಲಿ ಶ್ರೀ ದೇಶಮುಖ್‌ರವರು "ಭಾರತವೇನಾದರೂ ದಶಮಾನ ಪದ್ಧತಿಯನ್ನು ಅನುಷ್ಠಾನಕ್ಕೆ ತರುವುದಾದರೆ, ನೂತನ ನಾಣ್ಯಗಳನ್ನು ಉತ್ಪಾದಿಸುವ ವಿಚಾರದಲ್ಲಿ ಈ ಟಂಕಸಾಲೆಯು ಅತ್ಯಂತ ಉಪಯುಕ್ತವಾಗುವುದು" ಎಂದು ನುಡಿದಿದ್ದರು.

1914ರಿಂದಲೂ ಭಾರತವು ಆಸ್ಟ್ರೇಲಿಯಾ, ಭೂತಾನ್, ಸಿಲೋನ್, ಈಜಿಪ್ಟ್, ಪಾಕಿಸ್ತಾನ, ಸೌದಿ ಅರೇಬಿಯಾ, ಮಲಯಾ, (ಸ್ಟ್ರೈಟ್ಸ್ ಸೆಟಲ್‌ಮೆಂಟ್) ಭಾರತ ಮತ್ತು ಬ್ರಿಟಿಷ್ ಪೂರ್ವ ಆಫ್ರಿಕಾಗಳಲ್ಲಿರುವ ಪೋರ್ಚುಗೀಸ್. ವಸಾಹತುಗಳು ಮುಂತಾದ ರಾಷ್ಟ್ರಗಳಿಗಾಗಿ ನಾಣ್ಯಗಳನ್ನು ಟಂಕಿಸಿದೆ. ದೇಶೀಯ ಸಂಸ್ಥಾನಗಳಿಗಾಗಿ ಕೂಡ ನಾಣ್ಯಗಳನ್ನು ಟಂಕಿಸಿದೆ.

. ಸದ್ಯಕ್ಕೆ ಭಾರತದಲ್ಲಿ — ಅಲಿಪುರ, ಮುಂಬೈ ಮತ್ತು ಹೈದರಾಬಾದ್‌ಗಳಲ್ಲಿ— ಮೂರು ಟಂಕಸಾಲೆಗಳಿವೆ. ವಾರಕ್ಕೆ 54 ಗಂಟೆಗಳಂತೆ ಕೆಲಸಮಾಡುತ್ತಿರುವ ಈ ಟಂಕಸಾಲೆಗಳು 1957ರ ಏಪ್ರಿಲ್ 1ರ ವೇಳೆಗೆ 61.00 ಕೋಟಿ ಹೊಸ ನಾಣ್ಯಗಳನ್ನು ಉತ್ಪಾದಿಸುವ ನಿರೀಕ್ಷೆಯಿದೆ. ಈ ಟಂಕಸಾಲೆಗಳು ಒಟ್ಟು ತಿಂಗಳಿಗೆ ಸುಮಾರು 800 ಲಕ್ಷ ನಾಣ್ಯಗಳನ್ನು ಉತ್ಪಾದಿಸುವುವು.

ಸಮರ ಕಾಲದಲ್ಲಿ 1944—45ರಲ್ಲಿ ಕಲ್ಕತ್ತ ಟಂಕ ಸಾಲೆಯು 104,727, 800 ನಾಣ್ಯಗಳನ್ನು ಉತ್ಪಾದಿಸಿ ಹೊಸ ದಾಖಲೆಯನ್ನೇ ಸ್ಥಾಪಿಸಿತು. ವಿಶ್ವ ದಾಖಲೆಗೆ ಈ ಉತ್ಪಾದನೆಯು ಅತಿ ಸಮೀಪದ್ದಾಗಿದೆ.

ಕಲ್ಕತ್ತದಲ್ಲಿರುವ ಟಂಕ ಸಾಲೆಯು ಪದಕಗಳನ್ನೂ ಪ್ರಶಸ್ತಿ ಪದಕಗಳನ್ನೂ ತಯಾರಿಸುವುದು. ಅಲ್ಲದೆ ಮಹಾ ಜನರ ಕೂಕಗಳನ್ನೂ ಮತ್ತು ಅಳತೆಗಳನ್ನೂ ಸೀಕ್ಷಿಸುವುದು.

ರೂಪಾಯಿ, ಅರ್ಧ ರೂಪಾಯಿ ಮತ್ತು ನಾಲಕ್ಕಾಣೆ ನಾಣ್ಯಗಳ ತಯಾರಿಕೆಯಲ್ಲಿ ಅಪ್ಪಟ ನಿಕ್ಕಲ್ ಲೋಹವನ್ನೂ, ಎರಡಾಣೆ, ಒಂದಾಣೆ ಮತ್ತು ಅರ್ಧಾಣೆ ನಾಣ್ಯಗಳ ತಯಾರಿಕೆಯಲ್ಲಿ ತಾಮ್ರ, ನಿಕ್ಕಲ್ ಮಿಶ್ರ ಲೋಹವನ್ನೂ ಮೂರು ಕಾಸು ನಾಣ್ಯಗಳ ತಯಾರಿಕೆಯಲ್ಲಿ ಕಂಚನ್ನೂ ಬಳಸಲಾಗುವುದು.

ನಿಕ್ಕಲ್ ಪೋಟೊ ನಾಣ್ಯಗಳನ್ನು ತಯಾರಿಸುವುದು ಅತಿ ಕಷ್ಟಕರ. ಏಕೆಂದರೆ ಈ ಲೋಹವನ್ನು ಕರಗಿಸಲು 1452 ಡಿಗ್ರಿ ಸೆಂಟಿ ಗ್ರೇಡ್ ಉಷ್ಣಾಂಶವು ಆಗತ್ಯ. ಅಲ್ಲದೆ ನಿಕ್ಕಲ್ ನಾಣ್ಯಗಳ ತಯಾರಿಕೆಯಲ್ಲಿ ವಿಶೇಷ ಉಪಕರಣಗಳನ್ನು ಉಪಯೋಗಿಸಬೇಕಾಗುವುದು.

"ಹಣದ ಲೋಭವು ಎಲ್ಲ ವಿನಾಶಕ್ಕೂ ಮೂಲ ಕಾರಣ"ವೆಂಬ ವಾಕ್ಯವನ್ನು ಕಲ್ಕತ್ತ ಟಂಕ ಸಾಲೆಯಲ್ಲಿಟ್ಟಿರುವ ಪ್ರದರ್ಶನ ಪೆಟ್ಟಿಗೆಯ ಮೇಲೆ ಕೆತ್ತಲಾಗಿದೆ. ಈ ಪ್ರದರ್ಶನ ಪೆಟ್ಟಿಗೆಯಲ್ಲಿ ಪೋಟೊ ನಾಣ್ಯಗಳನ್ನು ಪ್ರದರ್ಶಿಸಲಾಗಿದೆ.

### ಏಲಂ ಪ್ರಕಟಣೆ
### ಶಿರ್ವ ಪಂಚ್ಯಾತ್ ಬೋರ್ಡು
### ಪ್ರೆಸಿಡೆಂಟರಿಂದ

ಶಿರ್ವ ಪಂಚ್ಯಾತ್ ಬೋರ್ಡಿಗೊಳಪಟ್ಟ ಫಂಜೇನಾರು ಅಟ್ಟೆಂಜೆ ಕಡವಿನಲ್ಲಿ ತಾರೀಕು 1—4—1957ರಿಂದ 31—8—1958ರ ವರೆಗಿನ ಸಂಕ ಟೋಲು ವಸೂಲು ಮಾಡುವ ಹಕ್ಕನ್ನು ತಾರೀಕು 25-4-1957ನೇ ಗುರುವಾರ ಅಪರಾಹ್ನ ಘಂಟೆ 4ಕ್ಕೆ ಆಫೀಸಿನ ವಠಾರದಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಆಗತ್ಯವುಳ್ಳವರು ಏಲಂ ಶರ್ತಗಳನ್ನು ಆಫೀಸಿಗೆ ಬಂದು ತಿಳಿದುಕೊಳ್ಳಬಹುದು.

(Sd) ಯಸ್. ಅಣ್ಣಯ್ಯ ಹೆಗ್ಡೆ,
ಪ್ರೆಸಿಡೆಂಟ್ ಶಿರ್ವ ಪಂಚ್ಯಾತ್ ಬೋರ್ಡು.
ಶಿರ್ವ ತಾ. 4-4-57.


ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

**ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.**

**ನಿಮ್ಮ ತೇವಣಾತಿಗಳ ಮೇಲೆ ಹೆಚ್ಚು ಬಡ್ಡಿ ಬೇಕೇ?**

ಹಾಗಿದ್ದಲ್ಲಿ, ನಮಗೆ ಸಮೀಪವಿರುವ "ಕೊರ್ಪೊರೇಶನ್" ಬ್ಯಾಂಕಿನ ಶಾಖೆಯಲ್ಲಿ ವಿಚಾರಿಸಿರಿ. "ಕೊರ್ಪೊರೇಶನ್" ಬ್ಯಾಂಕು ಎಲ್ಲಾ ಕರದ ತೇವಣಾತಿಗಳ ಮೇಲೆ ಬಡ್ಡಿ ದರಗಳನ್ನು ಇತ್ತೀಚೆಗೆ ಏರಿಸಿಯದೆ. ಆಲ್ಲದೆ ತೇವಣಾತಿದಾರರಿಗೆ ಹೆಚ್ಚಿನ ಸವಲತ್ತುಗಳನ್ನು ನೀಡಲು, ಶರ್ತಗಳನ್ನೂ ಬದಲಾಯಿಸಿಯದೆ.

**51 ವರುಷಗಳ ಪರಿಪಕ್ವ ಬ್ಯಾಂಕಿಂಗ್ ಅನುಭವ**

**700,00,00,000 ರೂಪಾಯಿಗಳಿಗೂ ಮಿರಿದ ವ್ಯವಹಾರ**

**THE CANARA BANKING CORPORATION LTD.**




ಇಲ್ಲದೆ ...ರಪತ್ರಿ ...ಬಹುದು. ...ನೇಜರ್.

## ಜೈನರ ಜೈತ್ರಯಾತ್ರೆ

# ತೀರ್ಥಂಕರರೆಂದರೆ ಧರ್ಮಾವತಾರಿಗಳು!

ಭಾರತವು ಅನೇಕ ಮತಗಳ ಸ್ಥಾಪನೆಗೆ ಕಾರಣರಾದ ಮಹಾನ್ ವ್ಯಕ್ತಿಗಳಿಗೆ ಜನ್ಮವಿತ್ತು, ಪಾವನವೆನಿಸಿದ ದೇಶ. ಜಗತ್ತಿನ ಜನಸಂಖ್ಯೆಯಲ್ಲಿ ಗಣ್ಯಸ್ಥಾನವನ್ನು ಪಡೆದ ಬೌದ್ಧ ಮತ್ತು ಹಿಂದೂ ಧರ್ಮಗಳಲ್ಲದೆ ಜೈನಮತ ಸಂಸ್ಥಾಪನಾಚಾರ್ಯನಾದ ಮಹಾ ವೀರ ಜಿನನಿಗೂ ಜನ್ಮ ಭೂಮಿಯು ಭಾರತವೇ ಆಗಿದೆ. ನಮ್ಮ ದೇಶದಲ್ಲಿ ಬೌದ್ಧರ ಸಂಖ್ಯೆಯು ಅಲ್ಪ ಮಿತಿಯುಳ್ಳುದಾದರೂ ಟಿಬೇಟು, ಚೀನ, ಸಿಂಹಳಾದಿ ನೆರೆ ರಾಷ್ಟ್ರಗಳಲ್ಲಿ ಅದು ಪ್ರಚಾರವಲ್ಲಿದೆ. ಆದರೆ, ಜೈನಮತವು ಕೇವಲ ಭಾರತವಲ್ಲಿ ಮಾತ್ರ ಹರಡಿ ಕೊಂಡಿದೆ.

ಒಂದು ಕಾಲದಲ್ಲಿ ಜೈನ ಮತಾವಲಂಬಿಗಳ ಪ್ರಾಬಲ್ಯವಿದ್ದರೂ ಅದು ಅನ್ಯ ಮತಗಳಿಂದ ಎಟಿನ್ನು ತಿನ್ನಬೇಕಾಯಿತು. ದಕ್ಷಿಣ ಭಾರತದಲ್ಲಿ ಜೈನರನ್ನು ತುಳಿದವರೆಂದರೆ ವೀರ ಶೈವ ಹಾಗೂ ಮಧ್ವ ತ್ರಯಾಚಾರ್ಯರು. ಹೀಗಾಗಿ ಜೈನ ಮತಾವಲಂಬಿಗಳ ಸಂಖ್ಯೆಯು ಬಹಳ ಕಡಿಮೆಯಾಗಿದೆ. ಹೆಚ್ಚು ಕಡಿಮೆ ೧೫ ಲಕ್ಷ ಜನರು ಈ ಮತದವರಿರಬಹುದು.

ಜೈನ ತೀರ್ಥಂಕರನಾದ ಮಹಾವೀರನು ಕ್ರಿ. ಪೂ. ೬೯೯ರಲ್ಲಿ ವೈಶಾಲೀ ನಗರದ ರಾಜವಂಶದಲ್ಲಿ ಜನಿಸಿದನು. ಈತನ ಹುಟ್ಟು ಹಾಗೂ ಜೀವನದ ಕುರಿತಾಗಿ ಜೈನರಲ್ಲಿನ ದಿಗಂಬರ ಮತ್ತು ಶ್ವೇತಾಂಬರರೊಳಗೆ ಹಲವು ಭೇದಗಳಿವೆ. ಕ್ರಿ. ಪೂ. ೬೯೯ರಲ್ಲಿ ಜನಿಸಿ ಸಂಸಾರಿಯಾಗಿ ಬಾಳಿದ್ದನೆಂದು ಶ್ವೇತಾಂಬರರೂ, ೬೯೯ರಲ್ಲಿ ಜನಿಸಿ ಆಜನ್ಮ ಬ್ರಹ್ಮಚಾರಿಯಾಗಿ ತನ್ನ ತಿಲನೆಯ ವಯಸ್ಸಿನಲ್ಲಿ ದುಃಖಪೂರಿತವಾದ ಈ ಪ್ರಪಂಚವನ್ನು ದಾಟುವ ಸುಗಮ ಮಾರ್ಗವನ್ನು ಕಂಡುಹಿಡಿಯಲು ತಪಸ್ಸಿಗಾಗಿ ತೆರಳಿ ೧೫ ವರ್ಷ ತಪವನ್ನು ಗೈದು, ಜೈನ ಮತದ ತತ್ವಗಳನ್ನು ಮನಗಂಡನೆಂದು ದಿಗಂಬರರೂ ಹೇಳುತ್ತಾರೆ.

ವೈಶಾಲಿಯು ಈಗಿನ ವಾಟ್ನ ನಗರದಿಂದ ೨೭ ಮೈಲು ದೂರದಲ್ಲಿರುವ ಬೇಸಾರ್ಹವೆಂದು ಪಂಡಿತರು ಅಭಿಪ್ರಾಯಪಡುತ್ತಾರೆ. ಮಹಾವೀರನು ಕ್ರಿ. ಪೂ. ೫೨೭ (ಶಕ ೬೦೫)ರಲ್ಲಿ ಬಿಹಾರ ದೇಶದ ಪಾವಾಪುರಿಯಲ್ಲಿ ನಿರ್ವಾಣಹೊಂದಿದನು. ಈತನ ವರ್ಧಂತಿಯು ಇದೇ ದಿನಾಂಕ ೧೫ರಂದು ಆಚರಿಸಲ್ಪಡುವುದು.

ಜೈನರ ತತ್ವಗಳ ಪ್ರಕಾರ ಕಾಲವು ಅನಾದಿಯಾದುದು ಮತ್ತು ಅನಂತವಾದುದು. ಲೋಕವು ಅಧಃ, ಊರ್ಧ್ವ ಮತ್ತು ತಿರ್ಯಗ್ ಎಂದು ಮೂರು ತೆರನಾದುದು. ತಿರ್ಯಗ್ ಲೋಕವು ಮನುಷ್ಯವಾಸಕ್ಕೆ ಉಪಯುಕ್ತವಾದುದು. ಇಲ್ಲಿ ಕಲ್ಪನೆಗಳಲ್ಲಿ ಉತ್ಸರ್ಪಿಣೀ ಅವಸರ್ಪಿಣೀ ಎಂಬೆರಡು ಭಾಗಗಳಿವೆ. ಉತ್ಸರ್ಪಿಣಿಯಲ್ಲಿ ಜನರಲ್ಲಿ ಧರ್ಮವೃದ್ಧಿಯೂ, ಆಸರ್ಪಿಣಿಯಲ್ಲಿ ಅಧರ್ಮ ಪ್ರಾಬಲ್ಯವೂ ಹೆಚ್ಚುವುದು. ಸುಖ ದುಃಖಗಳಿಗನುಗುಣವಾಗಿ ಈ ಪ್ರತಿಯೊಂದು ಭಾಗದಲ್ಲಿಯೂ ಆರು ವಿಭಾಗಗಳಿವೆ. ಹದಿನಾಲ್ಕು ಮನುಗಳೂ ಅವತರಿಸಿ ಜನರಿಗೆ ಸುಜ್ಞಾನವನ್ನು ಬೋಧಿಸುತ್ತಾರೆ. ಅವರ್ಪಿಣಿಯ ಅಂತ್ಯಕಾಲದಲ್ಲಿ ತೀರ್ಥಂಕರರು ಅನಂತರಿಸಿ ಜೈನ ಧರ್ಮವನ್ನು ಪ್ರಚಾರ ಮಾಡುತ್ತಾರೆ. ಅವರಲ್ಲಿ ಕೊನೆಯ ತೀರ್ಥಂಕರನೆ ಮಹಾವೀರ ಜಿನನು.

ಜೈನರ ತೀರ್ಥಂಕರರಲ್ಲಿ ಮೊದಲನೆಯವನು ಆದಿ ತೀರ್ಥಂಕರನಾದ ಋಷಭದೇವ. ಹಿಂದೂ ಧರ್ಮದ ವೃಷಭ ಚಕ್ರವರ್ತಿಯೇನೇ ಇವನಾಗಿರಬಹುದು. ಅಂದಿನಿಂದ ಮಹಾವೀರನ ವರೆಗೆ ೨೪ ತೀರ್ಥಂಕರರು ಅವತರಿಸಿದ್ದಾರೆಂಬ ಕಲ್ಪನೆಯೂ ಇದ್ದು ಆಯಾತೀರ್ಥಂಕರರ ಪುರಾಣಗಳು ರಚಿತವಾಗಿವೆ.

ಜೈನರ ಮತದಂತೆ 'ಜೀವನು ಇದ್ದಾನೆ. ಅವನು ಕರ್ಮ ಬದ್ಧನು' ಮತ್ತು ಶರೀರದಿಂದ ವ್ಯತಿರಿಕ್ತನಾದವನು. ದೇಹ ಸಹಿತನಾಗಿಯೇ ಸರ್ವ ಕರ್ಮಗಳನ್ನೂ ಮಾಡತಕ್ಕವನು. ದೇಹಿಯು ಅಪೂರ್ಣನಾದುದರಿಂದ ಕರ್ಮ ಮನವನ್ನು ಕಿತ್ತು ಹಾಕಿ ಶುದ್ಧನಾದಲ್ಲಿ ಮಾತ್ರ ಸರ್ವಜ್ಞನೂ ಅನಂತ ಸುಖಿಯೂ ಆಗ ಬಲ್ಲನು. ಜೈನರಲ್ಲಿ ಮುಕ್ತಿಯನ್ನು ಪಡೆಯುವುದು ಮನುಷ್ಯನ ಅಧೀನವಾಗಿದ್ದು ದೇವನ ಅಥವಾ ಆತನ ಪ್ರತಿನಿಧಿಯ ಆಗತ್ಯವಿರುವುದಿಲ್ಲ.

ಜೀವರಲ್ಲಿ ಸ್ಥಾವರ ಮತ್ತು ಪ್ರಸವೆಂದು ಎರಡು ಭೇದಗಳಿವೆ. ಇವರಿಗೆ ಜೀವ ಉಪಯೋಗಮಯಿ, ಅಮೂರ್ತ, ಕರ್ತಾ, ಸ್ವದೇಹ, ಪರಿಮಾಣ, ಭೋಕ್ತಾ, ಸಂಸಾರಸ್ಥಾ, ಸಿದ್ಧ ಮತ್ತು ಊರ್ಧ್ವಗತಿಯೆಂಬ ಒಂಭತ್ತು ಗುಣಗಳಿವೆ.

ಜೀವನಿಗೆ ಜನ್ಮಾಂತರಗಳನ್ನು ಒದಗಿಸುವುದು ಆತನ ಕರ್ಮ. ಜೈನರಲ್ಲಿ ಕರ್ಮಕ್ಕೆ ಬಹಳ ಪ್ರಧಾನವಿದೆ. ಜೀವನು ತಾನು ಮಾಡಿದ ಕರ್ಮಕ್ಕೆ ತಕ್ಕ ಫಲವನ್ನು ಉಣಲೇಬೇಕು. ದೇವರ ಮರೆಹೊಕ್ಕು ಆತನ ಕರುಣಾಪ್ರಸಾದದಿಂದ ಕರ್ಮವು ಕಳಚಿ ಹೋಗುವುದೇ ಇಲ್ಲ, ಜೀವನೇ ಸ್ವಯಂ ಕಷ್ಟದಿಂದ ಕರ್ಮವನ್ನು ಕಳಚಿಬಿಟ್ಟರೆ ಮೋಕ್ಷ ಪ್ರಾಪ್ತಿಯಾಗುವುದು. ಸಪ್ತ ತತ್ವಗಳು, ನವ ಪದಾರ್ಥಗಳು, ಷಡ್ದ್ರವ್ಯಗಳು, ಪಂಚಾಸ್ತಿಕಾಯಗಳು ಪ್ರಧಾನವಾಗಿವೆ. ಇವೆಲ್ಲವುಗಳನ್ನೂ ತಿಳಿದುಕೊಂಡರೆ ರತ್ನತ್ರಯಗಳಾದ ಸಮ್ಯಗ್ ದರ್ಶನ, ಸಮ್ಯಗ್ ಜ್ಞಾನ, ಮತ್ತು ಸಮಗ್ ಚಾರಿತ್ರಗಳು ಜೀವನನ್ನು ಉದ್ಧರಿಸಿ ಮೋಕ್ಷ ಸಂಪಾದನೆ ಮಾಡುವುದರಲ್ಲಿ ನೆರವಾಗುತ್ತವೆ.

ಭಾರತದಲ್ಲಿ ಮಹಾವೀರನ ಕಾಲದಲ್ಲಿ ವೈದಿಕ ಧರ್ಮವು ಪ್ರಬಲವಾಗಿದ್ದು ಅದನ್ನು ಮೆಟ್ಟಿ ತುಳಿವಷ್ಟು ಸಂಘಶಕ್ತಿಯು ಈ ಮತದವರಲ್ಲಿ ಇದ್ದಿಲಿದಿರಬಹುದು. ಕೆಲವೇ ಕಾಲದಲ್ಲಿ ಬೌದ್ಧಮತವೂ ಉದ್ಭವಿಸಿ, ನವಮತವನ್ನು ಪ್ರಚಾರ ಮಾಡಿದುದರಿಂದಲೂ ಅವಕ್ಕೆ ರಾಜಮನ್ನಣೆಯು ದೊರೆತುದರಿಂದಲೂ ಜೈನ ಮತವು ತನ್ನ ಪ್ರಾಭಲ್ಯವನ್ನು ಕಳೆದುಕೊಂಡಿರಬಹುದು.

ಮೌರ್ಯ ಆರಸನಾದ ಚಂದ್ರಗುಪ್ತನು ತನ್ನ ಮುದಿ ಪ್ರಾಯದಲ್ಲಿ ಕರ್ನಾಟಕಕ್ಕೆ ಭದ್ರಬಾಹು ಮುನಿಗಳೊಡನೆ ಬಂದನೆಂದು ತಿಳಿದುಬರುತ್ತದೆ. ಪ್ರಾಯಃ ಅಂದಿನಿಂದ ಜೈನರು ದಕ್ಷಿಣ ಭಾರತದತ್ತ ಬಂದಿರಬೇಕು. ಕನ್ನಡದಲ್ಲಿ ವೈಷ್ಣವ ಮತಾಚಾರ್ಯರ ವರೆಗೆ ಜೈನರೇ ಪ್ರಬಲರಾಗಿದ್ದರು. ಗಂಗ, ಕದಂಬ, ರಾಷ್ಟ್ರಕೂಟ ಚಾಳುಕ್ಯಾದಿ ಅರಸು ಮನೆತನದವರು ಈ ಮತವನ್ನು ಅನುಸರಿಸಿದ್ದರು. ಮುಂದೆ ಕೆಳೆ ಜೈನ ಮತಕ್ಕೆ ಬೆಳೆಯುವ ಅವಕಾಶ ಕಡಿಮೆ ಯಾಗುತ್ತಾ ಬಂದು, ಬಸವೇಶ್ವರರ ಕಾಲಾನಂತರ, ಬಹಳ ಹೀನ ಮಟ್ಟಕ್ಕೆ ಬಂತು.

ಜೈನರ ಪ್ರಾಚೀನ ಗ್ರಂಥಗಳು ಪ್ರಾಕೃತ, ಪಾಳಿ, ಸಂಸ್ಕೃತ ಭಾಷೆಗಳಲ್ಲಿವೆ. ವೈದಿಕವಾದ ರಾಮಾಯಣ ಭಾರತಾದಿಗಳು ಜೈನ ಧರ್ಮ ತತ್ವಗಳಿಗನುಗುಣವಾಗಿ ಬದಲಾವಣೆ ಹೊಂದಿ ಬರೆಯಲ್ಪಟ್ಟುವು. ಇವುಗಳಲ್ಲಿ ಶಾಕಟಾಯನನ ಪದ್ಮ ಪುರಾಣ ಮತ್ತು ಜಿನ ಸೇನನ ಹರಿವಂಶ ಪುರಾಣಗಳು ಮುಖ್ಯವಾದುವು.

ಮತ ಪ್ರಚಾರದ ದೃಷ್ಟಿಯು ಪ್ರಾಯಃ ಭಾರತೀಯ ಸಾಹಿತ್ಯೋದ್ಭವಕ್ಕೆ ಕಾರಣವೆಂದು ಹೇಳಬಹುದು. ಕನ್ನಡ ಭಾಷಾ ದೃಷ್ಟಿಯಿಂದ ನೋಡಿದರೆ, ಕನ್ನಡದಲ್ಲಿ ಕಾವ್ಯ ರಚನೆಗೆ ಅಡಿಗಲ್ಲು ಹಾಕಿ ಕೊಟ್ಟವು, ಅದಕ್ಕೆ ಒಂದು ಸ್ಥಾನವನ್ನು ಕೊಟ್ಟವರು ಜೈನರು. ನಮ್ಮ ತೀರ್ಥಂಕರ ಜೀವತನ ಚರಿತ್ರೆಯನ್ನು ಅವರ ಭವಾವಳಿಯೊಂದಿಗೆ ವರ್ಣಿಸುವ ಜೊತೆಗೆ ಜೈನ ಮತದ ಶ್ರೇಷ್ಠತೆಯನ್ನು ವ್ಯಕ್ತಪಡಿಸುವ (ಕಾವ್ಯ) ಪುರಾಣಗಳು ದೇಶ್ಯ ಭಾಷೆಯಲ್ಲಿ ಜನಿಸಿದುವು. ಆಲ್ಲದೆ, ತಮ್ಮ ಆಶ್ರಯದಾತರನ್ನು ಪರೋಕ್ಷವಾಗಿ ವರ್ಣಿಸುವ ಲೌಕಿಕ ಕಾವ್ಯಗಳ ರಚನೆಯಾದುವು. ಕನ್ನಡ ಸಾಹಿತ್ಯದಲ್ಲಿ ಪ್ರೌಢ ಮಾರ್ಗ ಕಾವ್ಯಗಳನ್ನು ಬರೆದ ಕೀರ್ತಿ ಜೈನರಿಗೆ ಸಲ್ಲತಕ್ಕದ್ದು. ಮಹಾಕವಿಗಳಲ್ಲಿ ಕೆಲವರು ಒಂದೊಂದು ಧಾರ್ಮಿಕ ಕಾವ್ಯ (ಜೈನ ಪುರಾಣ) ಇನ್ನೊಂದು ಲೌಕಿಕ ಕಾವ್ಯವನ್ನು ಬರೆದರು. ಜೈನ ರಾಮಾಯಣ ಭಾರತಗಳು ಕನ್ನಡದಲ್ಲಿ ಪರಿವರ್ತನೆಗೊಂಡುವು. ಆದಿ ತೀರ್ಥಂಕರ, ಅಜಿತನಾಥ, ಚಂದ್ರಪ್ರಭ, ಅನಂತನಾಥ, ಶಾಂತಿನಾಥ, ಮಲ್ಲಿನಾಥ, ನೇಮಿನಾಥ, ಪಾರ್ಶ್ವನಾಥ ಮೊದಲಾದ ತೀರ್ಥಂಕರರ ಚರಿತ್ರೆಗಳು ಕಾವ್ಯಲಕ್ಷಣಕ್ಕನುಗುಣವಾಗಿ ಪ್ರೌಢ ರೀತಿಯಲ್ಲಿ ಉದ್ದಾಮ ಕವಿಗಳಿಂದ ಬರೆಯಲ್ಪಟ್ಟವು. ಸಾಹಿತ್ಯವು ಜನಸಾಮಾನ್ಯರ ಸೊತ್ತಾದ ತರುವಾಯವೂ ಈ ತೀರ್ಥಂಕರರ ಚರಿತ್ರೆಗಳು ಸಂಗತ್ಯದಲ್ಲಿ ಬರೆಯಲ್ಪಟ್ಟುವು. ಕನ್ನಡ ಸಾಹಿತ್ಯದಲ್ಲಿ ಛಂದಸ್, ವ್ಯಾಕರಣ, ಅಲಂಕಾರ, ಗಣಿತಾದಿ ಶಾಸ್ತ್ರಗಳಲ್ಲೂ ಜೈನರ ಕೈವಾಡವಿದೆ. ಕನ್ನಡವನ್ನು ಸಂಸ್ಕರಿಸಿ, ಗ್ರಾಂಥಿಕ ಭಾಷೆಯನ್ನಾಗಿಸಿದ ಕೀರ್ತಿ ಈ ಜೈನರಿಗೆ ಸಲ್ಲತಕ್ಕದ್ದು.

ಮಹಾ ವೀರನು ಇತಿಹಾಸಯುಕ್ತ ವ್ಯಕ್ತಿ. ಆದರೆ, ಆತನಿಗೆ ಪೂರ್ವದಲ್ಲಿದ್ದ ೨೩ ತೀರ್ಥಂಕರರ ಇತಿಹಾಸವನ್ನು ಕಂಡು ಹುಡುಕುವುದು ಅಷ್ಟು ಸುಲಭವಲ್ಲ. ಹಿಂದೂ ಮತದ 'ಅವತಾರ' ಗಳಂತೆಯೇ ಇವರ ಕಾಲವೂ ಅನಿಶ್ಚಿತ. ಅವರಲ್ಲಿ ನೇಮಿನಾಥನು ಯಾದವ ವಂಶದಲ್ಲಿ

(೧೫ನೇ ಪುಟ ನೋಡಿರಿ)

ಹೊರನಾಡಿನವರಿಗೆ ಮಾತ್ರ



ರಂಗಭೂಮಿಯಲ್ಲಿ ಅಭಿನಯಿಸಲು ನಟನಟಿಯರಿಗೆ ಬೇಕಾಗುವ ಜರಿಮಾಲುಗಳು, ಕ್ರಾಪ್ ಕೂದಲು, ಕೆಬೆಂಡೋಲೆ ಜತೆಗಳು, ತುಟಿಗೆ ಹಚ್ಚುವ ಅಂಟು, ಮೇಕ್ ಅಪ್ ಪೌಡರ್, ತಲೆಸೂಳುತ್ತುವ ಬಲೆ, ಇತ್ಯಾದಿ ವೇಷಭೂಷಣಗಳಿಗೆ ಬೇಕಾಗುವ ಯಾವತ್ತೂ ಸಾಮಾನುಗಳು ದೊರೆಯುತ್ತವೆ. ಸವಿವರ ಕ್ರಯಪಟ್ಟಿಗೆ ಬರೆಯಿರಿ.

**DHARAMSHI MULJI DRESSWALA,**
132—C, Bhagatwadi
Bhuleshwar Road, BOMBAY

# ಕೆಂಪು ಕೇರಳ

## ಪ್ರಜೆಗಳನ್ನು ನಿದುರಿಸುತ್ತಿರುವ ಕ್ರೂರ ಸಮಸ್ಯೆಗಳ ಚಿತ್ರ

ಭಾರತದ ರಾಜ್ಯಗಳಲ್ಲಿ ಅತ್ಯಧಿಕ ವಿದ್ಯಾವಂತ ಜನರಿರುವುದು ಯಾವುದು? ಅತಿ ಕಿರಿದಾದ ರಾಜ್ಯವಾವುದು? ವಿದ್ಯಾವಂತ ನಿರುದ್ಯೋಗಿಗಳು ಧಾರಾಳವಾಗಿರುವುದೆಲ್ಲಿ? ಈ ಮೂರು ಪ್ರಶ್ನೆಗಳಿಗೂ ನೂರಕ್ಕಾದ ಒಂದೇ ಪದವು ಉತ್ತರವೀಯುವುದು. ಅದೇ ಕೇರಳ!

ಭಾರತದ ರಾಜ್ಯಗಳಲ್ಲೆಲ್ಲ ಎಳೆಯರುದಾಗಿ, ಜನಸಾಂದ್ರತೆಯುಳ್ಳ ಹಿರಿದಾಗಿ, ಮಲೆಯಾಳ ಭಾಷೆಯು ಸರ್ವ ಸಾಮಾನ್ಯವಾಗಿ ಮತ್ತು ಸಾಮಾನ್ಯ ಸಂಸ್ಕೃತಿಯುಳ್ಳ ಕೇರಳವು ೧೯೫೬ ವರೆಗೆ ಪೂರು ರಾಜ್ಯಗಳಾಗಿ ವಿಭಾಗಿತವಾಗಿತ್ತು. ೧೯೫೬ ಜುಲೈ ಮಾಸದ ೧ನೆ ದಿನವನ್ನು ತಿರುಕೊಚ್ಚಿ ಎಂಬ ರಾಜ್ಯದ ಉದಯವಾಯಿತು. ೧೯೫೬ ನವಂಬರ ೧೭ರಂದು ಎಲ್ಲ ಮಲೆಯಾಳಿಗಳೂ ಒಂದು ರಾಜ್ಯದಲ್ಲಿ ಪ್ರಸ್ತುತವಾಗಿ ಒಂದುಗೂಡಿಸಲ್ಪಟ್ಟು, ಅದರ ಸರಿನಾಮವಾಗಿ ಮಾಲೆಯಾಳ ಮಾತೃ ಭಾಷೆಯಾಗಿರುವ ತಿರುಕೊಚ್ಚಿ ಹಾಗೂ ಮದ್ರಾಸದ ಮಲಬಾರು ಮತ್ತು ದಕ್ಷಿಣ ಕನ್ನಡದ ಒಂದು ಭಾಗವನ್ನೊಳಕೂಡಿ ಕೇರಳ ರಾಜ್ಯವು ಹುಟ್ಟಿಕೊಂಡಿತು.

ಸಸ್ಯಶ್ಯಾಮಲತೆಯಿಂದಾಗಿ ಕೇರಳವು ಜನರ ಹೃದಯಾಕರ್ಷಿಯಾಗಿದೆ. ಹಿನ್ನೀರು, ತೋಟಸಹಿತವಾದ ಮನೆಗಳು ಎಲ್ಲಿ ನೋಡಿದರೂ ದೃಷ್ಟಿಗೋಚರವಾಗುತ್ತವೆ. ಇದರಿಂದಾಗಿ 'ಕೇರಳ'ವು ಸಂದರ್ಶನೀಯವಾಗಿದೆ.

ಕೇರಳದ ಪ್ರಾಚೀನ ಇತಿಹಾಸವು ಸ್ಪಷ್ಟವಾಗಿ ತಿಳಿದು ಬರದಿದ್ದರೂ, ಜೇರರು ಇಲ್ಲಿ ರಾಜ್ಯವಾಳಿದ ದಾಖಲೆಗಳಿವೆ. ಅದು ಮುಂದಕ್ಕೆ ಹಲವಾರು ನಾಯಕರ ಅಂಕಿತಕ್ಕೆ ಒಳಪಟ್ಟಿತು. ಬ್ರಿಟಿಷರು ಭಾರತಕ್ಕೆ ಕಾಲಿರಿಸುವ ಸಂದರ್ಭದಲ್ಲಿ ಕಲ್ಲಿಕೋಟೆಯು ಜೊಮೋರಿನ್, ಕೊಚ್ಚಿ ಮತ್ತು ತಿರುವಾಂಕೂರುಗಳ ರಾಜರ ವಾಲಿಗೆ ಈ ಭಾಗವು ಸೇರಿಕೊಂಡಿತ್ತು. ಇವುಗಳಲ್ಲಿ ತಿರುವಾಂಕೂರು ಮತ್ತು ಕೊಚ್ಚಿಗಳು ಪ್ರತ್ಯಪ್ರತ್ಯೇಕವಾಗಿ ಬ್ರಿಟಿಷರ ಆಶ್ರಿತರಾಜ್ಯ ಹಸ್ತದಲ್ಲಿ ಉಳಿದರೂ ಕಲ್ಲಿಕೋಟೆಯ ಅಂಕವು ೧೮೦೧ರಲ್ಲಿ ಬ್ರಿಟಿಷರ ಅಂಕೆಗೊಳಪಟ್ಟಿತು.

ತಿರುವಾಂಕೂರು ಮತ್ತು ಕೊಚ್ಚಿಗಳು ಸಾಮಾಜಿಕ ಚಟುವಟಿಕೆಗಳಲ್ಲಿ, ಮುಖ್ಯವಾಗಿ ಆರೋಗ್ಯ ಮತ್ತು ವಿದ್ಯೆಗಳಲ್ಲಿ ಭಾರತದ ಇತರ ಭಾಗಗಳಿಂದ ಬಹು ಶೀಘ್ರ ಪ್ರಗತಿಯನ್ನು ಕೊಂದಿದುವು. ವಿದ್ಯುಚ್ಛಕ್ತಿ, ಮಾರ್ಗ ನಿರ್ಮಾಣ, ಸಾರಿಗೆ ಅಭಿವೃದ್ಧಿಗಳಲ್ಲಿ ತಿರುವಾಂಕೂರು ಮುಂದುವರಿಯಿತು. ಮಲಬಾರು ಮದ್ರಾಸು ರಾಜ್ಯಕ್ಕೆ ಸೇರಿದುದರಿಂದ ಅದು ನಿಯಂತ್ರಿತ ಆಡಳಿತಕ್ಕೆ ಒಳಪಟ್ಟಿತು. ಆರ್ಥಿಕ ದೃಷ್ಟಿಯಿಂದ ಮಲಬಾರು ತಿರುಕೊಚ್ಚಿಗಳಿಗಿಂತ ಸ್ವಲ್ಪ ಹೀನ ಸ್ಥಿತಿಯದ್ದಷ್ಟೆ.

ಹೆಚ್ಚುತ್ತಿರುವ ಜನ ಸಂಖ್ಯೆಯಿಂದಿಗೆ ಬಟ್ಟವಾದ ಜನಸಾಂದ್ರತೆಯುಳ್ಳ ಪ್ರದೇಶವು ಕೇರಳ. ಇದರಿಂದಾಗಿ ಸಮಾಜ ಸೇವೆಯ ವೆಚ್ಚವು ರಾಜ್ಯದ ವೆಚ್ಚದಲ್ಲಿ ಅಧಿಕ ಪ್ರಮಾಣವಾಳ್ಳದು. ದೊಡ್ಡ ಪ್ರಮಾಣದ ಕೈಗಾರಿಕೆಗಳು ಇಲ್ಲಿಲ್ಲ. ಮಧ್ಯಮ ಪ್ರಮಾಣದ ಕೈಗಾರಿಕೆಗಳು ರಾಜ್ಯ ಸರಕಾರದ ಸಹಾಯವಿಂದ ಹಿಂದಿನ ತಿರುಕೊಚ್ಚಿ ರಾಜ್ಯದಲ್ಲಿ ತಲೆಯೆತ್ತಿವೆ.

ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಸುಮಾರು ೩೦ ಕೋಟಿ ರೂಪಾಯಿಗಳನ್ನು ತಿರುಕೊಚ್ಚಿ ರಾಜ್ಯದಲ್ಲಿ ವ್ಯಯಿಸಲಾಗಿದೆ. ಇದಲ್ಲದೆ ಸುಮಾರು ಅರಿಂದ ೫ ಕೋಟಿಯಷ್ಟು ಕೇಂದ್ರಾಡಳಿತೆಯ ಸಮಯದಲ್ಲಿ ಉಪಯೋಗಿಸಲಾಗಿದೆ. ಪ್ರಥಮ ಯೋಜನಾವಧಿಯಲ್ಲಿ ಸುಮಾರು ೪೨,೦೦೦ ಎಕ್ರೆ ಭೂಮಿಯು ಕೃಷಿಯೋಗ್ಯವಾಗಿಯೂ ಸುಮಾರು ೨೬,೦೦೦ ಎಕ್ರೆಗಳಷ್ಟು ನೀರಾವರಿ ಯೋಗ್ಯವೂ ಆಗಿ ಪರಿವರ್ತಿತವಾಗಿವೆ. ಇದರಿಂದಾಗಿ ೧,೩೧,೦೦೦ ಟನ್ನುಗಳಷ್ಟು ಆಹಾರ ಧಾನ್ಯಗಳು ಅಧಿಕವಾಗಿ ದೊರೆಯಬಹುದೆಂದು ಅಂದಾಜು ಮಾಡಿದ್ದಾರೆ. ೬೫,೦೦೦ ಕಿಲೊವಾಟ್ಸ್‌ಗಳಷ್ಟು ವಿದ್ಯುಚ್ಛಕ್ತಿಯೂ ದೊರೆಯಬಹುದು. ಯೋಜನೆಯಲ್ಲಿ ಅವಕಾಶವೊದಗಿಸಿಮದಕ್ಕಿಂತ ಇಮ್ಮಡಿಯಷ್ಟು ಮಾರ್ಗ ನಿರ್ಮಾಣವಾಗಿದೆ.

ಮಲಬಾರು ಜಿಲ್ಲೆಯೂ ಪ್ರಥಮ ಯೋಜನೆಯಿಂದ ಸಾಕಷ್ಟು ಅಭಿವೃದ್ಧಿಯನ್ನು ಹೊಂದಿದೆ. ಸಮಾಜ ವಿಕಾಸದ ವಿಸ್ತರಣೆಯೊಂದಿಗೆ ಹೈಡ್ರೋ ಜನರೇಶನ್, ಆಳ ಸಮುದ್ರಗಳಲ್ಲಿ ಮೀನು ಹಿಡಿಯುವುದು, ಮೀನು ಗೊಬ್ಬರದ ಕಾರ್ಖಾನೆಯ ನಿರ್ಮಾಣಗಳಿಂದಾಗಿ ಪ್ರಗತಿಗೊಂಡಿದೆ. ಮಲಂಪುಜಾ ಆಣೆಕಟ್ಟಿನ ಯೋಜನೆಯಿಂದಾಗಿ ಪುಮೊರು, ಚಿತ್ರಲಕ್ಷ ರೂಗಳಲ್ಲಿ ೩೫,೦೦೦ ಎಕ್ರೆಗಳಷ್ಟು ಭೂಮಿಗೆ ಪ್ರಥಮ ಯೋಜನೆಯಲ್ಲಿ ನೀರಿನ ಸೌಕರ್ಯವು ದೊರೆಯುವಂತೆ ಆಗಿದೆ. ಈ ಯೋಜನೆಯು ಪೂರ್ಣಗೊಂಡಾಗ, ಇನ್ನೂ ೫,೦೦೦ ಎಕ್ರೆಗಳಿಗೂ ನೀರಾವರಿಯಾಗುವುದು ಸಾಧ್ಯ. ಉಳ ಸಣ್ಣ ನೀರಾವರಿ ಯೋಜನೆಗಳೂ ಪ್ರಥಮ ಯೋಜನಾವಧಿಯಲ್ಲಿ ಕೈಗೊಳ್ಳಲ್ಪಟ್ಟಿವೆ.

ದ್ವಿತೀಯ ಯೋಜನೆಯ ಮೇರೆಗೆ ಮೊನಲಿನ ತಿರುಕೊಚ್ಚಿಯಲ್ಲಿ ೭೧.೪೫ ಕೋಟಿ, ಮಲಬಾರು ಜಿಲ್ಲೆಯಲ್ಲಿ ೧೫.೪೫ ಕೋಟಿಗಳಷ್ಟು ವೆಚ್ಚವಾಗಲಿದೆ. ಒಟ್ಟು ೮೬.೪೫ ಕೋಟಿಗಳಲ್ಲಿ ಮದ್ರಾಸು ರಾಜ್ಯಕ್ಕೆ ಸೇರಿಹೋದ ತಮಿಳು ಮಾತಾಡುವ ಪ್ರದೇಶಗಳ ಪಾಲಿನ ೩೮ ಕೋಟಿಯನ್ನು ಕಳೆದರೆ, ಉಳಿದ ೪೮.೦೭ ಕೋಟಿ ರೂಪಾಯಿಗಳು ಈ ರಾಜ್ಯಕ್ಕೆ ದೊರೆಯುತ್ತದೆ. ಈ ಮೊತ್ತದಲ್ಲಿ ಕೃಷಿ ಮತ್ತು ಸ್ಥಾನಿಕ ಅಭಿವೃದ್ಧಿಗಳಿಗಾಗಿ ೧೪.೫೮, ನೀರಾವರಿ ಮತ್ತು ವಿದ್ಯುತ್‌ಗಳಿಗಾಗಿ ೩೩.೬೮, ಕೈಗಾರಿಕೆ ಮತ್ತು ಗಣಿ ಯೋಜನೆಗಳಿಗಾಗಿ ೪.೫೦ ಸಮಾಜ ಸೇವೆಗಳಿಗಾಗಿ ೨೨.೦೭ ಮತ್ತಿತರ ವಿಧಾನಗಳಲ್ಲಿ ೧.೪೪ ಕೋಟಿ ರೂಪಾಯಿಗಳು ವೆಚ್ಚವಾಗಲಿವೆ. ಮದ್ರಾಸು ಮತ್ತು ಕೇರಳ ಸರಕಾರಗಳೊಳಗಿನ ಮಾತುಕತೆಗಳ ಫಲವಾಗಿ ಈಗ ಕೇರಳಕ್ಕೆ ದ್ವಿತೀಯ ಪಂಚವಾರ್ಷಿಕ ಯೋಜನಾನ್ವಯ ಒಟ್ಟು ೬೭ ಕೋಟಿ ರೂಪಾಯಿಗಳು ದೊರೆಯಲಿವೆ

ಕೃಷಿ ಸುಧಾರಣೆಗಳಲ್ಲಿ ಈಗಿನ ಅಧಿಕ ಕೊರತೆಯನ್ನು ಕಡಿಮೆ ಮಾಡುವುದಲ್ಲದೆ ಕೃಷಿ ತರುವ ಬೆಳೆಗಳ ಕುರಿತು ಸಂಶೋಧನೆಗಳಿಗೆ ಅವಕಾಶ ಮಾಡಿಕೊಡಲಾಗಿದೆ. ಇವುಗಳಲ್ಲಿ ಗೇರು ಬೀಜದ ಉತ್ಪತ್ತಿಯನ್ನು ಹೆಚ್ಚಿಸಿ, ಈಗಿರುವ ಕಾರ್ಖಾನೆಗಳಿಗೆ ಸಾಕಷ್ಟು ಕೆಲಸ ದೊರೆವಂತೆ ಮಾಡಿ, ಪರದೇಶಗಳೊಳಗೆ ಹೊಂದಿಕೊಂಡಿರುವುದನ್ನು ತಪ್ಪಿಸಿ ಅಧಿಕ ವಿನಿಮಯ ನಾಣ್ಯಗಳಿಸುವ ಯೋಜನೆಯೂ ಇದೆ ಕೇರಳದ ಹೈಡ್ರೋ ಇಲೆಕ್ಟ್ರಿಕ್ ಉತ್ಪಾದನೆಯು ದೊಡ್ಡ ಆಸ್ತಿಯಾಗಿದೆ. ಪ್ರಥಮ ಯೋಜನೆಯಿಂತೆಯೇ ದ್ವಿತೀಯ ಯೋಜನೆಯಲ್ಲೂ ವಿದ್ಯುತ್ತಿನ ಹೆಚ್ಚಳಕ್ಕೆ ವಿಶೇಷ ಪ್ರಾಧ್ಯಾನ್ಯತೆಯನ್ನಿತ್ತಿದೆ. ಕೈಗಾರಿಕೆಗಳಲ್ಲಿ ಸಣ್ಣ ಪ್ರಮಾಣವನ್ನು ಮತ್ತು ಗುಡಿಕೈಗಾರಿಕೆಗೆ ಸ್ಥಾನವನ್ನಿತ್ತಿದೆ. ಕೊಚ್ಚಿಬಂದರದಅಭಿವೃದ್ಧಿ ಹಾಗೂ ಡಿ. ಡಿ. ಟಿ. ಕಾರ್ಖಾನೆಯ ಸ್ಥಾಪನೆಗಳಿಂದಾಗಿ ಕೇರಳದಲ್ಲಿ ಜಾಡ್ಯೋಗೀಕರಣವು ಬೆಳೆದು ಬಂದಿದೆ.

ಕೃಷಿಯನ್ನೇ ಅನಲಂಬಿಸಿರುವವರ ಹೆಚ್ಚಳ ಮತ್ತು ವಿದ್ಯಾವಂತ ನಿರುದ್ಯೋಗಿಗಳ ಪ್ರಾಬಲ್ಯಗಳು ಕೇರಳದ ದೊಡ್ಡ ಸಮಸ್ಯೆಗಳಾಗಿವೆ. ಹಿಂದಿನ ತಿರುಕೊಚ್ಚಿ ರಾಜ್ಯದಲ್ಲಿ ಸರಾಸರಿ ಚದರ ಮೈಲಿಗೆ ೧೪೧೦ ಜನರಷ್ಟು ಜನರು ವಾಸಿಸಿದ್ದರು. ಜನಸಂಖ್ಯೆಯು ಪ್ರತಿ ಹತ್ತು ವರ್ಷಗಳಲ್ಲಿ ೨೫.೭ ಸೇಕಡಾದಷ್ಟು ಹೆಚ್ಚುವುದು. ಇದು ವ್ಯಾವಸಾಯಿಕ ಹಾಗೂ ಆರ್ಥಿಕ ಬೆಳವಣಿಗೆಗೆ ತಡೆಯೊಗುವುದು ವಿಷ್ಯೆಯಲ್ಲಿ ಭಾರತದ ಇತರ ರಾಜ್ಯಗಳಿಗಿಂತ ಮುಂದುವರಿದ ರಾಜ್ಯ ಕೇರಳ. ಆದರೆ ಆರ್ಥಿಕ ಪರಿಸ್ಥಿತಿಯು ಸುಧಾರಿಸದೆ ಇರುವುದರಿಂದ ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಾಗುತ್ತಾ ಬರುತ್ತಿದೆ.

ಕೈಗಾರಿಕೆಗಳ ಮೂಲಕವಾಗಿ ಮಾತ್ರ ಈ ಸಮಸ್ಯೆಗಳನ್ನು ತೀರ್ಮಾನಿಸಬಹುದು. ಕಬ್ಬಿಣ, ಇದ್ದಲು ಮೊದಲಾದ ಮೂಲ ವಸ್ತುಗಳ ಕೊರತೆ ಕಂಡುಬಂದರೂ, ನೀರು ಖನಿಜಗಳು, ಕಾಡುಗಳು, ಮೀನು ವ್ಯವಸಾಯ ಇತ್ಯಾದಿಗಳು ಧಾರಾಳವಾಗಿ ಇವೆ. ಮಧ್ಯಮ ಮತ್ತು ಕಿರಿಯ ಮಟ್ಟದ ಕೈಗಾರಿಕೆಗಳಿಗೆ ರಾಜ್ಯ ಹಾಗೂ ಕೇಂದ್ರ ಸರಕಾರಗಳು ಹೆಚ್ಚಿನ ಪ್ರಾಶಸ್ತ್ಯವಿತ್ತಿವೆ. ಹಿಂದಿನ ತಿರುಕೊಚ್ಚಿ ರಾಜ್ಯದಲ್ಲಿ ಮೂರು ಔದ್ಯೋಗಿಕ ಕ್ಷೇತ್ರಗಳು ಸ್ಥಾಪನೆಗೊಂಡಿವೆ. ವಿದ್ಯಾವಂತರಿಗೆ ಉದ್ಯೋಗವನ್ನು ಒದಗಿಸಿಕೊಡುವ ಉದ್ದೇಶದಿಂದ ಕೇಂದ್ರ ಸರಕಾರವು ಕಳೆದ ವರ್ಷದಲ್ಲಿ ಎರಡು ದೊಡ್ಡ ವರ್ಕ್‌ಶೋಪ್‌ಗಳನ್ನು ತೆರೆಯಲು ತಮ್ಮ ಸಮ್ಮತಿಯನ್ನಿತ್ತಿದೆ. ಅವುಗಳಲ್ಲಿ ಒಂದು ವಿದ್ಯುತ್ ಮೋಟಾರುಗಳನ್ನೂ ಇನ್ನೊಂದು ಸಣ್ಣ ಪ್ರಮಾಣದ ಯಾಂತ್ರಿಕ ಭಾಗಗಳನ್ನೂ ಉತ್ಪಾದಿಸಲಿರುವುವು. ಪ್ರತಿಯೊಂದು ಕಾರ್ಖಾನೆಯೂ ಸುಮಾರು ೩೦೦ ಮಂದಿ ಮೆಟ್ರಿಕ್ಯುಲೇಟ್‌ಗಳಿಗೆ ಉದ್ಯೋಗಗಳನ್ನು ಒದಗಿಸುತ್ತದೆ. ಕೇರಳ ರಾಜ್ಯದ ಮಲಬಾರು ಕ್ಷೇತ್ರದಲ್ಲಿ ಮೂರನೆಯ ಕಾರ್ಖಾನೆಯೊಂದನ್ನು ಪ್ರಚಲಿತ ವರ್ಷದಲ್ಲಿ ತೆರೆಯಲು ಸೂಚಿತವಾಗಿದೆ.

ರಾಜ್ಯದ ಮಹತ್ ಸಮಸ್ಯೆಗಳನ್ನು ಕೇವಲ ಎರಡನೆಯ ಪಂಚವಾರ್ಷಿಕ ಯೋಜನೆಯು ಬಗೆಹರಿಸುವುದು ಅಸಾಧ್ಯ. ಈ ಮೊದಲಿಲ್ಲದ ರೀತಿಯಲ್ಲಿ ಅಧಿಕ ಪ್ರಮಾಣದಲ್ಲಿ ಎಲ್ಲಾ ಕ್ಷೇತ್ರಗಳಲ್ಲಿಯೂ ಹೊಸ ರೀತಿಯ ಕಾರ್ಯಕ್ರಮಗಳನ್ನು ಕೈಗೊಂಡರೆ ಏನಾದರೂ ಪರಿಣಾಮವಾಗಬಹುದು. ಆದರೆ, ಇದು ಕೇಂದ್ರ ಸರಕಾರದ ಸಹಾಯ ಹಾಗೂ ಕೇರಳದ ಜನತೆಯ ಸಹಕಾರಗಳಿಂದ ಮಾತ್ರ ಸಾಧ್ಯ. ಹಾಗಾದರೂ ನಿರುದ್ಯೋಗ ಸಮಸ್ಯೆಯು ಬಗೆ ಹರಿಯಲ್ಪಡುವುದೆಂದು ನಂಬುವುದು ಅಸಾಧ್ಯ. ಇದಕ್ಕೆ ದಿನೇ ದಿನೇ ಬೆಳೆಯುತ್ತಿರುವ ಜನ ಸಂಖ್ಯೆಯೇ ಮೂಲ ಕಾರಣ.

ಮಲೆಯಾಳವು ಮಾತೃ ಭಾಷೆಯಾಗಿರುವ ಎಲ್ಲ ಜನರೂ ಒಂದು ರಾಜ್ಯದಲ್ಲಿ ಒಟ್ಟುಗೂಡಿದ್ದು, ಅವರ ಸಾಂಸ್ಕೃತಿಕ ಹಾಗೂ ಹೃತ್ಪೂರ್ವಕವಾದ ಆಟುಮಟ್ಟಿಕೆಗಳಿಂದಾಗಿ, ಹೊಸ ಕೇರಳ ರಾಜ್ಯವು ತನ್ನ ಮುಂದಿರುವ ಸಮಸ್ಯೆಗಳನ್ನು ಜಾಗ್ರತೆಯಾಗಿ ಪರಿಹರಿಸಿಕೊಳ್ಳಲಿ.


ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?

ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

HOME REMEDIES

ಬರೆದವರು: ಡಾಕ್ಟರ್ ಕೊರಡ್ಡಳ್ ನೆಂಕಟ್ರಾವ್, ಎಲ್. ಐ.ಎಮ್

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆಂಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ ರೂ. ೩—೦—೦ (ಟಿ. ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.


**ಸೂಚನೆ**

'ನವಯುಗ'ದ ಚಂದಾ ಹಣ ಮತ್ತು ಜಾಹೀರಾತಿನ ಹಣವನ್ನು ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಇದರ ಯಾವುದೇ ಶಾಖೆಯಲ್ಲಿ ಯಾನಮೊಂಬು ತರದ ಖರ್ಚೂ ಇಲ್ಲದೆ (ನವಯುಗ ಮಾಲಪತ್ರಿಕೆಯ ಜಾತಿಗೆ) ಪಾವತಿ ಮಾಡಬಹುದು.

ಮೆನೇಜರ್.

# NAVAYUGA

Popular Kannada Weekly

*Founder:—*

**A. B. SHETTY**, *M. L. A.*

*Former Minister for Public Health, Govt. of Madras.*

*At Present Minister for Health Govt of Mysore*

# ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

| ಸಂಪುಟ | ಉಡುಪಿ | ಸಂಚಿಕೆ |
|---|---|---|
| ೩೬ | ೧೧-೪-೧೯೫೨ | ೩೦ |


## ಸರಳ ಆಡಳಿತ

ದೇಶದ ಆಡಳಿತವು ಸುಗಮವೂ ಸುಲಭ ರೀತಿಯದೂ ಆಗಿರಬೇಕೆಂದು ಬಯಸದವರು ಯಾರೂ ಇರಲಿಕ್ಕಿಲ್ಲ. ಆದರೆ ಈ ಬಯಕೆಯು ಕೇವಲ ಆದರ್ಶವಾಗಿಯೆಷ್ಟೇ ಉಳಿದಿದೆಯಲ್ಲದೆ ನಮ್ಮ ಸಾಧನೆಯು ಆದರ ಅಂಚನ್ನೂ ಇನ್ನೂ ಇವತ್ತಿನವರೆಗೆ ಮುಟ್ಟಿಲ್ಲ ಎಂಬುದು ಸತ್ಯ. ವಿಚಾರಕರು ನಾನಾ ಬಗೆಯಾಗಿ ಅಭಿಪ್ರಾಯವನ್ನು ಪ್ರಕಟಿಸುತ್ತಾ ಸುಲಭ ಹಾಗು ಸರಳ ಆಡಳಿತೆಯ ವಿಧಾನವೇನೆಂದು ಚರ್ಚಿಸಿದ್ದುಂಟು: ಆದರೆ ಆ ಚರ್ಚೆ ಒಣಚರ್ಚೆಯಾಗಿ ಪರಿಣಮಿಸಿದುದೇ ಹೆಚ್ಚಲ್ಲದೆ ಅದರಿಂದ ಆಡಳಿತೆಯ ಹೊಸ ಹೊತ್ತ ಸರಕಾರಿ ಯಂತ್ರವು ಪ್ರಭಾವಿತವಾದುದಿಲ್ಲ. ವಿಚಾರಕರ ಅಭಿಪ್ರಾಯಕ್ಕೆ ಮಹತ್ವವನ್ನು ಕೊಟ್ಟುದೂ ಇಲ್ಲ. ಇದೇ ಗತಿಯು ಕಳೆದವಾರ ಹೊಸದೆಹಲಿಯಲ್ಲಿ ನಡೆದ ಆಡಳಿತ ಸಂಘದ ವಿಚಾರ ಗೋಷ್ಠಿಗೂ ಬಂದಿದೆ ಎಂದರೆ ತಪ್ಪಾಗಲಾರದು. ಸರಕಾರಿ ನೌಕರ ವರ್ಗದವರೇ ಹೆಚ್ಚಿನ ಸದಸ್ಯರಾಗಿರುವ ಈ ಸಂಘದ ಸಭೆಯಲ್ಲಿ ಪ್ರಧಾನಿ ನೆಹರುಗಳಿಂದ ಹಿಡಿದು ಬೇರೆ ಅನೇಕ ಬುದ್ಧಿವಂತರು ಭಾಷಣವನ್ನಿತ್ತರು. ಸಾರ್ವಜನಿಕ ಅಧಿಕಾರಿಗಳೇ ಇಂದಿನ ಜನಸೇವಕರೆಂದು ಆವರು ಒತ್ತಿಒತ್ತಿ ಹೇಳಿದರು. ನಮ್ಮ ಆಡಳಿತ ವಿಧಾನವು ಜನಸಾಧಾರಣರ ಪಾಲಿಗೂ ಒಳ್ಳೆಯ ಆಡಳಿತೆ ನಡೆದಿದೆ ಎಂಬ ಅನುಭವವುಂಟಾಗುವಂತೆ ಪರಿಷ್ಕಾರವನ್ನು ಹೊಂದಬೇಕು ಎಂದರು ಪಂಚಾಯತುಗಳೇ ನಮ್ಮ ಆಡಳಿತೆಯ ಮೂಲ ಘಟಕ ಎಂಬುದಾಗಿ ಸಾರಿದರು. ಆದರೆ ಇದೆಲ್ಲದರಿಂದ ಏನು ತಾನೇ ಲಾಭ?—ಇಪ್ಪರ ವರೆಗಿನ ಅನುಭವವು ಆ ಭಾಷಣಗಳಿಂದ ಅಧಿಕಾರಿವರ್ಗದ ಮೇಲೆ ಸಪ್ಪರಿಣಾಮ ಆದಂತೆ ತೋರಿಸಿಕೊಟ್ಟಿಲ್ಲ. ಆಡಳಿತವು ದೀರ್ಘ ಸೂತ್ರತ್ವವಲಂಬಿಯಾದಷ್ಟೂ ಅಲ್ಲಿ ದೋಷಗಳು ಹೆಚ್ಚು; ಜನತೆಗೆ ನ್ಯಾಯ ದಾನವಾಗುವ ಸಂಭವ ವಿರಳ—ಮತ್ತು ಕಷ್ಟ ಪರಿಹಾರದ ಅಸೆ ಶೂನ್ಯ ಎಂಬಂತೆ ಈ ಸಾಮಾನ್ಯ ಸತ್ಯವನ್ನು ಗೌರವಿಸಿ ಆದಕ್ಕೆ ತಕ್ಕಂತೆ ಮನೋಭಾವವನ್ನು ಮಾರ್ಪಡಿಸಿಕೊಂಡ ಅಧಿಕಾರಿಗಳು ನಮ್ಮ ದೃಷ್ಟಿಗೆಲ್ಲೂ ಗೋಚರಿಸುವುದಿಲ್ಲ. ಸೂತ್ರಗಳ ಮತ್ತು ಶಾಸನಗಳ ಬಿಗಿಯಾದ ಜಾಲಟ್ಟನಲ್ಲಿ ತಮ್ಮ ಮೇಲೆ ವರ್ಚಸ್ಸುಳ್ಳವರ ಮೆಚ್ಚಿಗೆಗಾಗಿ ಪರಿಶ್ರಮಿಸ್ಯೆಯನ ಅಧಿಕಾರಿಗಳೇ ಇಂದು ಎಲ್ಲೆಡೆಯಲ್ಲೂ ತಾಣಿಸುವರಲ್ಲದೆ ಬೇರೆಯಲ್ಲ. ಜನತೆಯು ಹೆಸರಿನಲ್ಲಿ ನಡೆಯುವ ಈ ರಾಜ್ಯಭಾರ ಕ್ರಮವು ನಿಜವಾಗಿ ಜನರ ತಪ್ಪಗಳ ಕಡೆಗೆ ಗಮನವನ್ನು ಕೊಟ್ಟಿಲ್ಲ ಆಯಾ ಸ್ಥಳದ ದೇಶ ಭಾಷೆಯಲ್ಲಿ ಬರೆದ ಅರ್ಜಿಗಳನ್ನು ವಿಚಾರಿಸುವುದಕ್ಕೆ ಹಿಂದೆಗೆಯುವ ಮನಸ್ಸು ಅಧಿಕಾರಿಗಳಲ್ಲಿದ್ದಾದರೆ, ಹತ್ತಿಪ್ಪತ್ತು ಮೈಲು ನಡೆದು ಬಂದ ಹಳ್ಳಿಗರ ಹಾಲಹವಾಲಯನ್ನು ಕೇಳಿಕೊಂಡು ತಕ್ಷಣ ಕ್ರಮ ತೆಗೆದು ಕೊಳ್ಳುವುದಕ್ಕೆ ಅಡ್ಡಿ ಬರುವ ಆಡಳಿತ ಸೂತ್ರಗಳು ನಮ್ಮವಾದರೆ—ಜನ ಸಾಧಾರಣರ ಪಾಲಿಗೆ ಆಡಳಿತೆಯು ಸುಧಾರಿಸಿದೆ ಎಂದು ಎಂದಿಗೂ ತೋರಲಾರದು. ಲಂಚಗುಳಿತನವಂತೂ ಇಂದು ಸರಕಾರಿ ಆಡಳಿತ ಯಂತ್ರದ ಅವಿಭಾಜ್ಯ ಅಂಗವಾಗಿರುವಂತೆ ತೋರುತ್ತದೆ. ಸಾರ್ವಜನಿಕರೇ ಲಂಚ ಕೊಡುವುದನ್ನು ನಿಲ್ಲಿಸಬೇಕು; ಅನ್ಯಥಾ ಈ ದುರಭ್ಯಾಸದ ನಿಯಂತ್ರಣ ಸಾಧ್ಯವಾಗಲಾರದು ಎನ್ನುವವರಿಷ್ಟಮರು, ಲಂಚ ಕೊಡದೆನೇ ಸೂಕ್ತ ಸೇವೆಯನ್ನು ಕ್ಷಿಪ್ರ ಕಾಲದಲ್ಲಿ ದೊರಕಿಸಿಕೊಡುವ ಭರವಸೆಯನ್ನು ಜನರಿಗೆ ನೀಡಿದ್ದಿಲ್ಲ. ಅಂಥ ಸಮಯ ಒದಗುವವರೆಗೆ ಜನಸಾಧಾರಣರಲ್ಲಿ ಸಾಮರ್ಥ್ಯವಿದ್ದವರು ಲಂಚಕೊಟ್ಟಾದರೆ ಲಂಚ, ಕೆಲಸವಾಗಲಿ ಎಂದು ಭಾವಿಸುವುದೇನು ತಪ್ಪು? ಸರಕಾರಕ್ಕೆ ಹಿಡಿ ಶಾಪ ಹಾಕುವುದೇನು ತಪ್ಪು? ಬ್ರಿಟಿಷರ ಕಾಲದಲ್ಲಿ ಇದ್ದುದಕ್ಕಿಂತ ಈಗ ಲಂಚಗುಳಿತನವು ಅಧಿಕವಾಗಿದೆ; ವಿಳಂಬ ಹೆಚ್ಚಿ ದಕ್ಷತೆ ಕುಗ್ಗಿದೆ—ಎಂಬ ಸಾಮಾನ್ಯ ಸಾರ್ವಜನಿಕಾಭಿಪ್ರಾಯವು ಅಲಕ್ಷಿಸತಕ್ಕುದಲ್ಲ. ಆದು ನಮ್ಮ ಸರಕಾರಕ್ಕೆ ತೋಭೆ ತರುವ ವಿಷಯವೂ ಅಲ್ಲ. ಆಡಳಿತ ಯಂತ್ರದ ಕಾರ್ಯಾಚರಣೆಯ ಲಾಭವು ಜನರಿಗೆ ದೊರಕುವಲ್ಲಿ ಶಾಸನ ಸೂತ್ರಗಳು ತುಂಬ ಅಡ್ಡಿಬರುತ್ತವೆ ಎಂದು ಹಿಂದೆ ಹೇಳಿದೆವಷ್ಟೆ: ಸರಕಾರಿ ನೌಕರರ ತಪ್ಪುಗಳನ್ನು ಸುಲಭದಲ್ಲಿ ಗೊತ್ತುಹಚ್ಚಿ ಶಿಕ್ಷಿಸುವುದಕ್ಕೂ ಇದೇ ಸೂತ್ರಗಳ ಬಂಧನವು ಅಡ್ಡಿಯಾಗುತ್ತದೆ. ಯಾರಿಗೂ ಪೂರ್ಣ ಜವಾಬ್ದಾರಿಯಿಲ್ಲದ ಪ್ರಪಂಚದ ಪೂರ್ಣ ಪರಿಚಯವು ಯಾರಿಗೂ ಬೇಕಾಗಿಲ್ಲದ, ಲೋಪದೋಷಗಳನ್ನು ಇತರರ ಮೇಲೆಯೇ, ಆಪಾದಿಸುತ್ತಾ ಹೋಗಬಹುದಾದ ಇಂದಿನ ಆಡಳಿತ ವಿಧಾನವು ತುಂಬ ಕಿರುಕುಳದಾಯಕವಾಗಿದೆ. ಅದು ದಕ್ಷತೆಯನ್ನೂ ಕಾರ್ಯೋತ್ಸಾಹವನ್ನೂ ಕ್ರಿಯಾಶಕ್ತಿಯನ್ನೂ ಹಾಸಗೊಳಿಸುತ್ತದೆ. ಲಂಚಗುಳಿತನ ನಡೆದಿಲ್ಲ ಎಂಬ ನಂಬಿಕೆಯನ್ನು ಉಂಟು ಮಾಡುವುದಕ್ಕಾಗಿ ಸರಕಾರಿ ಅಧಿಕಾರಿಗಳು ಬಹಿರಂಗ ಸಭೆಯಲ್ಲಿ ಆಯಾ ಊರವರಿಗೆ ಮಂಜೂರಾದ ಸಾಲ ಸುತ್ತಿತರ ಸೌಕರ್ಯಗಳನ್ನು ಸಾರಿ, ಅಲ್ಲಿಯೇ ಅವುಗಳ ವಿತರಣೆಯನ್ನು ನಡೆಸಬಹುದು ಎಂದು ಪ್ರಧಾನಿ ನೆಹರು ಸೂಚಿಸಿದ್ದಾರೆ. ಆದರೆ ಹೀಗೆ ಮಾಡಲು ಮುಂದಾಗುವ ಅಧಿಕಾರಿಗಳೆಷ್ಟು ಎಂಬುದನ್ನು ಕಾದು ನೋಡಬೇಕಾಗಿದೆ. ಆಡಳಿತ ಯಂತ್ರವು ಇಂದು ತೀರ ಜಡವಾಗಿರುವಾಗ, ಅದು ಬೇಕಾದರೆ ಆ ಬಡವನೇ ಬಂದು ಅಂಗಲಾಚಿ ತನಗೆ ಮಂಜೂರಾದ ಹಣ ತೆಗೆದುಕೊಂಡು ಹೋಗಲಿ ಎಂದು ಅಧಿಕಾರಿಯ ಬಾಯಿಯಿಂದ ಹೇಳಿಸುತ್ತದಲ್ಲದೆ, ಆ ಬಡವನೆ ಪ.ನೆಬಾಗಿಲಿಗೆ ತಾನಾಗಿ ಹೋಗಿ ಹಣದ ಗಂಟನ್ನು ಕೊಟ್ಟುಬಿಡುವ ನಮ್ರತೆಯನ್ನು ಅಧಿಕಾರಿಯಲ್ಲಿ ಹುಟ್ಟಿಸಲಾರದು. ಒಂದು ಕಾಗದ ಬರೆದರೆ, ಮೂರು ತಿಂಗಳಾದರೂ ಉತ್ತರ ಬಾರದೆ ಹೋಗುವ ಕೆಲವು ಸರಕಾರಿ ಕಾರ್ಯಾಲಯಗಳಿವೆ—ಇವುಗಳನ್ನು ನಂಬಿಕೊಂಡು ಸಾರ್ವಜನಿಕರು ಯಾವ ಆಪತ್ತಿನಲ್ಲಿ ರಕ್ಷಣೆಯನ್ನು ಪಡೆಯಬಲ್ಲರು? ಸರಕಾರಿ ಆಡಳಿತೆಯಲ್ಲಿ ಆಂತರಿಕ ಪ್ರೇರಣೆ ಎಂಬುದಿಲ್ಲ—ಅಂತೆಯೇ ಅದರಲ್ಲಿ ಜೀವ ಸಂಚಾರದುರ್ಲಭ ಸ್ವಾತಂತ್ರ್ಯ ಪ್ರಾಪ್ತಿಯಾದ ಇಷ್ಟು ವರ್ಷಗಳ ಬಳಿಕವೂ ಪರಿಸ್ಥಿತಿ ಬದಲಾಯಿಸಿಲ್ಲ; ಬದಲಿಗೆ ದಿನೇ ದಿನೇ ಕೆಡುತ್ತಾ ಬಂದಿದೆ. ಹೊಸ ಹುರುಪು ನೆಹರುಗಳಂಥ ಕೆಲವು ಮಂದಿ ಧುರೀಣರಿಗೆ ಬಂದಿರಬಹುದು—ಆದರೆ ಸರಕಾರಿ ಅಧಿಕಾರಿಗಳಿಗೆ ಜನ ಸೇವಕರ ಪಾತ್ರವನ್ನು ಅಭಿನಯಿಸುವ ಇಚ್ಛೆ ವಿಲಾಸವೂ ಇದ್ದಂತಿಲ್ಲ. ಜನರೊಡನೆ ಬೆರೆಯಿರಿ; ಅವರ ನಾಡಿಬಡಿತ ಕಂಡುಕೊಂಡು ಸಮರಸರಾಗಿರಿ; ಸೇವೆಯೇ ಪರಮ ಆದರ್ಶವಾಗಿರಲಿ—ಎಂದು ಬೋಧಿಸುವ ಧುರೀಣರಿಗೆ ಈ ಅಧಿಕಾರಿ ವರ್ಗದ ಮೇಲೆ ಸಾಕಷ್ಟು ವರ್ಚಸ್ಸು ಇದ್ದಂತಿಲ್ಲ ಸಭೆ ನೆರೆಯಿಸುವುದೂ ಭಾಷಣ ಏರ್ಪಡಿಸುವುದೂ ಒಂದು ಸಂಪ್ರದಾಯ, ಕೇವಲ ಮೋಜು—ಎಂಬ ರೀತಿಯಲ್ಲಿ ಇವೆಲ್ಲ ಸವಾರಂಭಗಳು ನಡೆದಿರುತ್ತವೆ; ಹೊರತು ಅವುಗಳಿಂದ ಅಧಿಕಾರಿಗಳು ಶಿಕ್ಷಣವನ್ನು ಪಡೆದು, ಬುದ್ಧಿ ಪರಿವರ್ತನೆಗೊಳಗಾಗುವ ಸಂಭವವಿಲ್ಲವೆಯೆಂದಲ್ಲ! ಪರಿಸ್ಥಿತಿ ಹೀಗೆ ಮುಂದುವರಿದರೆ ಜನರಿಗೇನು ಸಮಾಧಾನ ಉಂಟಾದೀತು? ತಮ್ಮ ಸಹಾಯಕ್ಕೆ ಸರಕಾರವಿದೆ ಎಂಬ ವಿಶ್ವಾಸ ಅವರಿಗೆಂತು ಬಂದೀತು? ಗುಮಾಸ್ತನ ಬುದ್ಧಿವಂತಿಕೆಯನ್ನು ನಂಬಿ ಕಣ್ಣುಮುಚ್ಚಿ ಸಹಿಯನ್ನು ಹಾಕುವ ಅಧಿಕಾರಿಯಿಂದ ತನಗೆ ನ್ಯಾಯದಾನವಾದೀತೆಂದು ಜನಸಾಮಾನ್ಯನು ಭಾವಿಸುವುದೆಂತು? ಮುಂತ್ರಿಗಳ ಮುಂದೆ ದೂರನ್ನೊಯ್ದರೂ "ನೋಡುತ್ತೇವೆ; ವಿಚಾರಿಸುತ್ತೇವೆ ಎಂಬ ತೀರ ಅಸ್ಪಷ್ಟ ಉತ್ತರದಿಂದಲೇ ಜನರು ತೃಪ್ತರಾಗಬೇಕಾಗಿದ್ದಾರೆ ಆ ಆಡಳಿತೆಯು ಜನರ ಕ್ಷೇಮಾಭಿವೃದ್ಧಿಯ ಧ್ಯೇಯಗಳನ್ನೊಳಗೊಂಡಿದೆ ಎನ್ನುವ ವಿಚಾರ ಹೇಗೆ ಸುಸ್ಪಷ್ಟವಾದೀತು? ಇವೆಲ್ಲ ಪ್ರಶ್ನೆಗಳು ಜನರ ಮನಸ್ಸಿನಲ್ಲಿ ಮೂಡಿ ಮಾಯವಾಗುತ್ತಿರುತ್ತವೆ. ಈ ಪ್ರಶ್ನೆಗಳನ್ನು ಹಿನ್ನೆಲೆಯಲ್ಲಿ ಇಟ್ಟುಕೊಂಡು ತಕ್ಕ ಪರಿಹಾರೋಪಾಯಗಳನ್ನು ಕೈಗೊಳ್ಳುವುದು ಸರಕಾರದ ಸರ್ವನೆಗಳಿಗೆ ಜವಾಬ್ದಾರರಾಗಿರುವ ಮಂತ್ರಿಗಳ ಕರ್ತವ್ಯ ಮುಖ್ಯವಾಗಿ ಅವರು ಸರಕಾರಿ ನೌಕರರಿಂದ ಚೆನ್ನಾದ ಕೆಲಸವನ್ನು ತೆಗೆಸಿಕೊಳ್ಳಬೇಕು - ಅವರು ಅಲಸಿಗಳೂ ಸೋಮಾರಿಗಳೂ ಲಂಚಗುಳಿಗಳೂ ಕಾಲವಂಚಕರೂ ಆಗಿರದಂತೆ ಬಿಗಿಯಾದ ಮೇಲತನಿಖೆಯ ವ್ಯವಸ್ಥೆಮಾಡಬೇಕು. ಪಾಸಗಿ ಸಂಸ್ಥೆಗಳು ವ್ಯವಹಾರವನ್ನು ಸಾಗಿಸುವ ರೀತಿ ಸರಕಾರಕ್ಕೂ ಈ ಮಟ್ಟಿಗೆ ಅನುಕರಣೀಯವಾಗದೆ ಎಂದು ನಮಗೆನಿಸುತ್ತದೆ ಗಿರಾಕಿಯೊಬ್ಬನು ಬಂದಾಗ ಅಂಗಡಿಯ ಯಜಮಾನನೇ ಏನು ಬೇಕೆಂದು ಗೌರವದಿಂದ ವಿಚಾರಿಸಿ, ಕೂಡಲೇ ನೌಕರನಿಗೆ ಆಜ್ಞೆಯನ್ನಿತ್ತು ಗಿರಾಕಿಯ ಬೇಡಿಕೆಯನ್ನು ಪೂರೈಸಿಕೊಡುವಂತೆ ಹಾಲಹವಾಲೆಗಳನ್ನು ಕೇಳಿಕೊಳ್ಳುವ ಜನಾಬ್ದಾರಿಯನ್ನು ಹೊಣೆಗಾರ ಅಧಿಕಾರಿಯೇ ವಹಿಸಿಕೊಳ್ಳಬೇಕಲ್ಲದೆ ಸಾಮಾನ್ಯ ಗುಮಾಸ್ತನ ಕೃಪಾವೃಷ್ಟಿ ತನ್ನ ಮೇಲೆ ಎಂದಾದೀತೋ ಎಂಬ ಕಾತುರತೆಯಿಂದ ಕಾಯುತ್ತಿರುವ ಪರಿಸ್ಥಿತಿಯನ್ನು ಗ್ರಾಮ ಸ್ಥರಿಗೆ ತಂದೊಡ್ಡಬಾರದು. ರೈತನಿರಲಿ, ಅಧ್ಯಾಪಕನಿರಲಿ, ವ್ಯಾಪಾರಿಯಿರಲಿ—ತಾನು ಬಂದ ಕೆಲಸವಾಯಿತು ಎಂಬಂತೆ ಹಗುವಾದ ಭಾವನೆಯು ಸಂಜೆ ಆತನು ಮನೆಗೆ ಮರಳಿವಾಗ ಉಂಟಾಗುವಂತಿದ್ದರೇನೆ ಆಡಳಿತೆಗೆ ಶೋಭೆ: ಸರಕಾರಕ್ಕೂ ಭೂಷಣ!

---

## ಚಂದಾಹಣ ಬಾಕಿ ಇರುವ ಚಂದಾದಾರರಲ್ಲಿ ವಿನಂತಿ

ನಾವು ಕ್ರಮದಂತೆ ಪತ್ರಿಕೆಯನ್ನು ಕಳುಹಿಸುತ್ತಾ ಬಂದಿರುವುದು ನಿಮಗೆ ತಿಳಿದಿರದ ವಿಷಯವೇನಲ್ಲ. ಹಾಗೆಯೇ ಚಂದಾಹಣದ ವಾಯಿದೆಯಾಯಿತೆಂದೂ ಬಾಕಿ ಚಂದಾಹಣವನ್ನು ಬೇಗನೇ ಪಾವತಿಮಾಡಬೇಕೆಂದೂ ನಾಲ್ಕಾರು ಕಾರ್ಡುಗಳನ್ನು ಬರೆದು ತಿಳಿಸಿರುವುದೂ ನಿಮಗೆ ಗೊತ್ತಿರದ ಸಂಗತಿಯಲ್ಲ ಆದಾಗ್ಯೂ ಅನೇಕರು ಹಣವನ್ನು ಪಾವತಿ ಮಾಡದ ದೆಸೆಯಿಂದ, ಬೇರೆ ಉಪಾಯ ತೋರದೆ ನಾವು ಪತ್ರಿಕೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಬೇಕಾಗಿ ಬಂತು. ಆಗಲಾದರೂ ನಮ್ಮ ಪತ್ರಿಕೆಯ ಮೇಲಿನ ಅಭಿಮಾನ ಮತ್ತು ಪ್ರೀತಿಯಿಂದ ಚಂದಾಹಣ ಬಾಕಿಮಾಡಿಕೊಂಡ ಚಂದಾದಾರರು ವಿ. ಪಿ. ಪಿ. ಯ ಹಣ ಪಾವತಿಮಾಡಿ, ನಮ್ಮನ್ನು ಪ್ರೊತ್ಸಾಹಿಸಿಯಾರೆಂಬ ಭಾವನೆಯನ್ನು ಇಟ್ಟುಕೊಂಡಿದ್ದೆವು. ಆದರೆ ಅನುಭವವು ಈ ಅಸೆಯನ್ನು ಹುಸಿಗೊಳಿಸಿದೆ. ವಿ. ಪಿ. ಪಿ. ಯನ್ನು ಅಕ್ಕಧಿಕ ಚಂದಾದಾರರು ನಿರಾಕರಿಸಿ, ನಮ್ಮನ್ನು ಹೆಚ್ಚಿನ ನಷ್ಟಕ್ಕೆ ಗುರಿಮಾಡಿದ್ದಾರೆ. ಇವರೆಲ್ಲರಲ್ಲಿ ನಾವು ಪುನಃ ವಿನಂತಿಸಿಕೊಳ್ಳುವುದೇನೆಂದರೆ, ಈಗಲಾದರೂ ಬಾಕಿ ಚಂದಾಹಣವನ್ನು ಮನಿಯಾರ್ಡರು ಮೂಲಕ ಪಾವತಿಮಾಡಿ ನಮ್ಮನ್ನು ಅಸಹನೀಯ ನಷ್ಟದಿಂದ ಪಾರುಮಾಡಬೇಕು ಒಂದು ಪತ್ರಿಕೆಯನ್ನು ನಡೆಸಿಕೊಂಡು ಬರುವವನಿಗೆ ಚಂದಾಹಣವೇ ಬೆಂಗೋಲು; ಅದು ಕ್ಲಪ್ತ ಸಮಯದಲ್ಲಿ ಪಾವತಿಯಾಗದಿದ್ದರೆ ಪತ್ರಿಕೆ ನಡೆಸುವಾತನ ಕಷ್ಟ ನಷ್ಟಗಳನ್ನು ಹೇಳಿತೀರಲು. ಹೀಗಿರುವಾಗ ಇನ್ನಾದರೂ ಚಂದಾದಾರರು ನಮ್ಮ ಹೊಲೆ ದಯೆಯಿಟ್ಟು ನಮ್ಮ ವಿನಂತಿಯನ್ನು ಮನ್ನಿಸಬೇಕಾಗಿ ಪ್ರಾರ್ಥಿಸುತ್ತೇವೆ. ಒಂದು ವೇಳೆ ಇನ್ನು ಮುಂದೆ ಪತ್ರಿಕೆ ಬೇಡವೆಂದಾದರೆ, ದಯಮಾಡಿ ನಮಗೊಂದು ಕಾರ್ಡುಮೂಲಕ ಈ ವಿಷಯವನ್ನು ಬರೆದು ತಿಳಿಸಿ, ಹಿಂದಿನಬಾಕಿಯನ್ನು ರವಾನಿಸಿದರೆ, ಮಹೋಪಕಾರವಾಗುತ್ತದೆ. ಇಷ್ಟಾದರೂ ಒಳ್ಳೆಯ ಮನಸ್ಸು ನಿಮ್ಮವಾಗಲೆಂದು ಹಾರೈಸುತ್ತೇವೆ.

ಮೆನೇಜರ್,
"ನವಯುಗ"

# ಮೈಸೂರಿನ ಮುಖ್ಯಮಂತ್ರಿ ಸ್ಥಾನಕ್ಕೆ ಶ್ರೀ ನಿಜಲಿಂಗಪ್ಪನವರ ಪುನರಾಯ್ಕೆ.

ಮೈಸೂರು ರಾಜ್ಯದಲ್ಲಿ ಕಾಂಗ್ರೆಸು ಪ್ರಚಂಡ ಬಹುಮತದಿಂದ ಗೆದ್ದುಬಂದು ದರಿಂದ ಆ ಪಕ್ಷವೇ ಸರಕಾರವನ್ನು ರಚಿಸಬೇಕಾಗಿ ಬಂದುದು ಕ್ರಮಪ್ರಾಪ್ತ. ಇದಕ್ಕಾಗಿ ಪಕ್ಷದ ಧುರೀಣನನ್ನು ಆರಿಸುವ ಕೆಲಸ ಕಳೆದ ೬ನೇ ತಾರೀಕಿನಂದು ಬೆಂಗಳೂರಿನಲ್ಲಿ ನಡೆಯಿತು. ಧುರೀಣನನ್ನು ಆರಿಸುವ ವಿಷಯದಲ್ಲಿ ಮೊದಲಿಗೆ ಒಮ್ಮತದ ಅಭಿಪ್ರಾಯವಿರಲಿಲ್ಲ. ನಾಲ್ಕೈದು ಪಂಗಡಗಳಾಗಿ ಕಾಂಗ್ರೆಸಿಗರು ಒಡೆದು ಹೋಗಿದ್ದರಿಂದು ಹೇಳಲಾಗುತ್ತದೆ. ಮೈಸೂರು ಪ್ರದೇಶ ಕಾಂಗ್ರೆಸಿನ ಅಧ್ಯಕ್ಷರಾಗಿದ್ದ ಶ್ರೀ ಎಸ್. ನಿಜಲಿಂಗಪ್ಪನವರು ಮುಖ್ಯಮಂತ್ರಿ ಸ್ಥಾನದ ಮೇಲೆ ಕಣ್ಣಿಟ್ಟಿದ್ದಾರೆಂದೂ ಆದರೆ ಆ ವರೇ ಜನಾವಣೆಯಲ್ಲಿ ಸೋತುದರಿಂದ ತಮ್ಮ ಮಹತ್ವಾಕಾಂಕ್ಷೆಯನ್ನು ಮುಂದೊತ್ತಲಾಗದೆ ಹೋದರೆಂದೂ ಸುದ್ದಿ ಬಹಳ ಹಿಂದೆಯೇ ಎದ್ದಿದ್ದಿತು. ಆದರ ಬೆನ್ನಿಗೆ ಉತ್ತರ ಕರ್ನಾಟಕದ ಹಲವರು ಈಗ ವಿಧಾನಸಭೆಯ ಅಧ್ಯಕ್ಷರಾಗಿರುವ ಶ್ರೀ ಎಸ್. ಆರ್. ಕಂಠಿಯವರನ್ನು ಮುಖ್ಯಮಂತ್ರಿ ಸ್ಥಾನಕ್ಕೆ ಸ್ಪರ್ಧಿಸಲು ಪ್ರೋತ್ಸಾಹಿಸುತ್ತಿದ್ದಾರೆಂಬ ಸುದ್ದಿ ಸಹ ಬಂದಿದ್ದಿತು. ಹೊಸ ಮೈಸೂರಿನಲ್ಲಿ ಹಳೆ ಮೈಸೂರಿಗರ ಪ್ರಭಾವವೇ ಜಾಸ್ತಿಯಾಗಿದೆ ಎನ್ನುವ ದೂರು ಈ ಪ್ರೋತ್ಸಾಹದ ಮೂಲದಲ್ಲಿದೆ ಎಂದು ಸಹ ವರದಿಗಳಿಂದ ವ್ಯಕ್ತವಾಯಿತು.

ಚುನಾವಣೆಯು ಸನಿಹಪಿಸಿತು ಎನ್ನುವಾಗ ಮಾಜಿ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರ ಹೆಸರು ಜೋರಾಗಿ ಕೇಳಿಸಿತು. ಈಗಿನ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರೇ ಮುಂದೆ ಸಹ ಮುಖ್ಯ ಮಂತ್ರಿ ಸ್ಥಾನದಲ್ಲಿ ಉಳಿಯಲು ಅತ್ಯಂತ ಯೋಗ್ಯರೆಂಬ ಮಾತು ಜೊತೆಗೇ ಮುಂದೆ ಬಂತು. ಇದರೊತ್ತಿಗೆ ಶ್ರೀ ನಿಜಲಿಂಗಪ್ಪನವರನ್ನು ಕಳೆದ ನವಂಬರದಲ್ಲಿ ಮುಖ್ಯ ಮಂತ್ರಿ ಸ್ಥಾನಕ್ಕೆ ಸೂಚಿಸಿದ್ದಾಗ ಆವರಿದುರು ಸ್ಪರ್ಧಾಳುವಾಗಿದ್ದ ಶ್ರೀ ಕಡಿದಾಳ ಮಂಜಪ್ಪನವರು ಈ ಸಲ ಮುಖ್ಯ ಮಂತ್ರಿ ಸ್ಥಾನವ ಮೇಲೆ ಕಣ್ಣಿಟ್ಟಿರುವರೆಂಬ ಬಲವಾದ ಸದಂತಿ ಹಬ್ಬಿತು. ಕೊನೆಯ ಗಳಿಗೆಯಲ್ಲಿ ಮಂಜಪ್ಪನವರೋ ನಿಜಲಿಂಗಪ್ಪನವರೋ ಎಂಬುದೇ ಜಿಜ್ಞಾಸೆಯಾಗಿ ಉಳಿಯಿತು. ಆದರೆ ಆಯಾ ಗುಂಪಿನ ಬಲಾಬಲ ವೀಕ್ಷಣೆಯನ್ನು ತೆನೆಯ ಹಿಂದೆಯೇ ಕುಳಿತು ನಡೆಸಿದ ಬಳಿಕ ಅಖಿಲಭಾರತ ಕಾಂಗ್ರೆಸಿನ ಕಾರ್ಯದರ್ಶಿ ಶ್ರೀ .ಮಾಧವನ್ ನಾಯರ್ ಹೇಳಿಕೆಯಂತೆ ಬಹಿರಂಗ ಸ್ಪರ್ಧೆಯು ತಪ್ಪಿ ಶ್ರೀ ನಿಜಲಿಂಗಪ್ಪನವರನ್ನೆ ಪುನರಾಯ್ಕೆ ಮಾಡುವ ನಿರ್ಧಾರಕ್ಕೆ ಎಲ್ಲ ಸದಸ್ಯರೂ ಬಂದರು. ಹೀಗೆ ಶ್ರೀ ನಿಜಲಿಂಗಪ್ಪನವರ ಮೇಲೆ ಇನ್ನೈದುವರ್ಷಗಳ ವರೆಗೆ ಮೈಸೂರಿನ ರಾಜ್ಯ ಶಕಟನನ್ನು ಮುನ್ನಡೆಸುವ ಜವಾಬ್ದಾರಿ ಬಿದ್ದಿರುತ್ತದೆ.

ಏಕೀಕರಣದ ಮೊದಲಿನ ನಾಲ್ಕೈದು ತಿಂಗಳಲ್ಲಿ ಎಲ್ಲ ಪ್ರದೇಶಗಳ ಜನತೆಯ ಪ್ರೀತಿಯನ್ನೂ ಸೌಹಾರ್ದವನ್ನೂ ಉಳಿಸಿಕೊಂಡು ಕನ್ನಡಿಗರ ಮುಖ್ಯ ಮಂತ್ರಿಯಾಗಿ ಮೆರೆದ ಈ ಮಹಾತ್ಮರ ಭಾವರಿಗೆನೇ ಮುಖ್ಯ ಮಂತ್ರಿ ಸ್ಥಾನ ಮತ್ತೆ ಲಭಿಸಿದುದು ಕರ್ನಾಟಕದ ಪುಣ್ಯ.

ಶ್ರೀ ನಿಜಲಿಂಗಪ್ಪನವರು ಸಮಗ್ರ ಕರ್ನಾಟಕದ ಪ್ರತಿನಿಧಿ ಎಂದೆನಿಸುವ ಮಂತ್ರಿ ಮಂಡಳ ರಚಿಸುವುದಾಗಿ ಆಶ್ವಾಸನೆಯನ್ನು ಕೊಟ್ಟಿದ್ದಾರೆ; ಮತ್ತು ಇದೇ ೧೫ನೇ ತಾರೀಕಿಗೆ ಹೊಸ ದೆಹಲಿಗೆ ತೆರಳಿ ವಿಚಾರ ವಿನಿಮಯ ಮಾಡಿ, ನೂತನ ಸಚಿವ ಸಂಘಟವು ೧೫ನೇ ತಾರೀಕಿನ ಸುಮಾರಿಗೆ ಅಧಿಕಾರ ಸ್ವೀಕರಿಸುವಂತೆ ಪ್ರಯತ್ನಿಸುವುದಾಗಿ ಹೇಳಿದ್ದಾರೆ. ಹಿಂದಿನ ಮಂತ್ರಿ ಮಂಡಳದಲ್ಲಿ ಹೆಚ್ಚಿನವರು ಹಳೆ ಮೈಸೂರಿನವರೇ ಆಗಿದ್ದರೆಂಬ ಆರೋಪವಿತ್ತೆಂದೂ ಅದನ್ನು ನಿವಾರಿಸಲು ಈ ಸಲ ತಾನು ಪ್ರಯತ್ನಿಸುವುದಾಗಿಯೂ ಅವರು ಹೇಳಿದ್ದಾರೆ. ಕನ್ನಡ ನಾಡಿನ ಅಭಿವೃದ್ಧಿಯ ಕುರಿತು ಹೊಸ ಸರಕಾರದ ಧೋರಣೆಯ ವಿವರವಾಗಿ ಹೇಳಿಕೆಯನ್ನು ಶ್ರೀ ನಿಜಲಿಂಗಪ್ಪನವರು ಮಂಗಳೂರನ್ನು ಸರ್ವಪ್ರಥಮ ಬಂದರವಾಗಿಯೂ ಮಲ್ಪೆಯನ್ನು ಪ್ರಬುದ್ಧ ಬಂದರವಾಗಿಯೂ ಭದ್ರಾವತಿಯ ಕಬ್ಬಿಣವ ಪ್ರಯೋಜನವನ್ನು ಹೆಚ್ಚಿಸುವ ಕೇಂದ್ರವಾಗಿಯೂ ಕಾರವಾರವನ್ನು ನೌಕಾ ತಾಣವಾಗಿಯೂ ಬಳಸಿಕೊಳ್ಳಲು ಪ್ರಯತ್ನಿಸಲಾಗುವುದೆಂದು ಹೇಳಿದ್ದಾರೆ. ಕೆಲವು ರೈಲ್ವೆ ಮಾರ್ಗಗಳ ವಿಸ್ತರಣೆ ನಡೆಸುವುದೂ ಸೊಂಡೂರಿನ ಬಳಿಯಲ್ಲಿರುವ ಕಬ್ಬಿಣದ ಭಂಡಾರವನ್ನು ಉಪಯೋಗಿಸಿಕೊಳ್ಳುವುದೂ ಹೊಸ ರಾಜ್ಯಕ್ಕೆ ಅನ್ವಯವಾಗುವ ಭೂಸುಧಾರಣೆಯನ್ನು ತರುವುದೂ ಇತರ ಮುಖ್ಯ ವಿಷಯಗಳೇ ದು ಅವರು ತಿಳಿಸಿದ್ದಾರೆ. ತಿಳಿಸಿದಂತೆ ಮಾಡುವ ಚತುರರೂ ಅವರು ಹೌದು!

### ಕೆಂಪು ಕೇರಳ

ಕೇರಳದಲ್ಲಿ ಈಗ ೧೧ ಮಂದಿ ಮಂತ್ರಿಗಳುಳ್ಳ ಸರಕಾರವು ಶ್ರೀ. ಇ. ಎಂ. ಎಸ್ ನಂಬೂದ್ರಿಪಾದರ ಮುಖ್ಯ ಮಂತ್ರಿತ್ವದಲ್ಲಿ ಅಧಿಕಾರ ಗ್ರಹಣ ಮಾಡಿದೆ. ಇಷ್ಟು ಚಿಕ್ಕ ರಾಜ್ಯಕ್ಕೆ ಇಷ್ಟು ಹೆಚ್ಚು ಮಂತ್ರಿಗಳೇಕೆ? ಎಂಬ ಟೀಕೆಯೂ ಆಗಲೇ ಕೇಳಿಬಂದಿದೆ. ಅದರಂತೆ ಈ ಸರಕಾರವು ಎಂದಾದರೂ ಕೆಡವಲ್ಪಡದೆ ಕೆಲಸವನ್ನು ಮಾಡೀತೆ ಎಂಬ ಸಂಶಯವು ಉಂಟಾಗಿದೆ. ಘಟನೆಗೆ ತಿದ್ದುಪಡಿ ಮಾಡುವಂತೆ ಒತ್ತಾಯಿಸಲಾಗುವುದೆಂದೂ ಕೇಂದ್ರ ಸರಕಾರದ ಧೋರಣೆ ಅಸಮರ್ಪಕವಾಗಿದೆಯೆಂದೂ ಮಂತ್ರಿ ಮಂಡಳದ ಸ್ಥಾಪನೆಯಾದ ಹೊತ್ತಿನಲ್ಲೇ ಬಹಿರಂಗವಾಗಿ ಕಮ್ಯುನಿಸ್ಟರು ಹೇಳತೊಡಗಿದ್ದಾರೆ. ಅವರಸರಕಾರದ ಪರವಾಗಿ ಹೊಂಟ ಹೇಳಿಕೆಯೂ ತಮಗೆ ಕೆಲಸಮಾಡಲು ಈಗಿನ ಅವಕಾಶ ಸಾಲದೆಂಬ ಸೊಲ್ಲನ್ನು ಪುನರುಚ್ಚರಿಸುತ್ತಿವೆ. ರಾಜ್ಯಪಾಲರಿಗೆ ಕೆಲವು ವಿಷಯಗಳಲ್ಲಿ ಪ್ರತಿಘಟನೆಯನ್ನು ಸೂಚಿಸುವ ವಕ್ರ ಕ್ರಮವನ್ನು ದಿಂದಲೆ ಕೇರಳದಲ್ಲಿ ಕಮ್ಯುನಿಸ್ಟರ ರಾಜ್ಯಭಾರ ಪ್ರಾರಂಭಿಸಿದುದನ್ನು ಶುಭ ಚಿಹ್ನೆ ಎಂದು ಯಾರೂ ಭಾವಿಸಿಲ್ಲ. ತಾವು ಅಧಿಕಾರಕ್ಕೆ ಬಂದುದರ ಸಂತೋಷಾರ್ಥ ಮರಣದಂಡನೆಗೀಡಾದ ರಾಜ್ಯ ಕೈದಿಗಳ ಶಿಕ್ಷೆಯನ್ನು ರದ್ದುಪಡಿಸುವ ಕಮ್ಯುನಿಸ್ಟರ ನಿರ್ಣಯ ಘಾತಕ ವಾಯುದೆಂದೂ ಉತ್ತಮ ಆಡಳಿತೆಯ ಪ್ರಾರಂಭ ಅದಲ್ಲವೆಂದೂ ಕಾಂಗ್ರೆಸಿನ ಕಾರ್ಯದರ್ಶಿ ಶ್ರೀಮನ್ನಾರಾಯಣರು ಟೀಕಿಸಿದ್ದಾರೆ .ಕೇರಳದಲ್ಲಿ ಎಲ್ಲವೂ ಹೀಗೆಯೇ ನುಂದರವರೆ. ಅವೆಲ್ಲ ಮುಟ್ಟೆತೋ ತಿಳಿಯದು.

## ಉಡುಪಿ

**ಕ್ಷೀಲಚಿತ್ರಗಳ ಅನಾವರಣ ಸಮಾರಂಭ**— ಉಡುಪಿ ಬೋರ್ಡುಹೈಸ್ಕೂಲಿನಲ್ಲಿ ತಾ. ೨೮ಲ್ಲು ಕುಂದಾಪುರ ರೆವಿನ್ಯೂ ಡಿವಿಜನಲ್ ಅಧೀಕರ್ ಶ್ರೀ ಎಸ್. ಎಲ್. ಸೂರ್ಯನಾರಾಯಣರ್ ರವರ ಅಧ್ಯಕ್ಷತೆಯಲ್ಲಿ ತೈಲ ಚಿತ್ರಗಳ ಅನಾವರಣ ಸಮಾರಂಭ ಜರಗಿತು. ಮುಖ್ಯೋಪಾಧ್ಯಾಯ ಶ್ರೀ ಬೆಳ್ಳೆ ಆನಂತಕೃಷ್ಣ ಸಾಮಕರು ಸ್ವಾಗತ ಮಾತುಗಳನ್ನಾಡಿದರು ಮಂಗಳೂರು ಶ್ರೀ ರಾಮಕೃಷ್ಣ ಮಿಶನಿನ ಶ್ರೀ ಆದಿದೇವಾನಂದ ಸ್ವಾಮಿಜಿಯವರು ಸ್ವಾಮಿ ವಿವೇಕಾನಂದರ, ಶ್ರೀ ಸುರತ್ಕಲ್ ಸುಬ್ಬರಾವ್, ವಿದ್ವಾನರು ಮಹಾಕವಿ ಕುಮಾರವ್ಯಾಸ, ಕೆ.ಕೆ.ರೈಗಳು ಶ್ರೀಮಜ್ಜಗದ್ಗುರು ಶ್ರೀಮದ್ ಜೇಷ್ಠರ ಗೋವಿಂದ ಪೈಗಳ ತೈಲಚಿತ್ರಗಳನ್ನು ಅನುಕ್ರಮವಾಗಿ ಅನಾವರಣಮಾಡುತ್ತಾ ಕಾಲೋಚಿತವಾದ ವಿಚಾರಗಳನ್ನಾಡಿದರು. ಅಧ್ಯಕ್ಷರ ಭಾಷಣ, ಧನ್ಯವಾದಗಳೊಂದಿಗೆ ಸಮಾರಂಭ ಕೊನೆಗೊಂಡಿತು.

**ಸಂಗೀತ**— ತಾನಸೇನ್ ಸಂಗೀತ ಸಭೆಯ ನೇತೃತ್ವದಲ್ಲಿ ವರಜೇಂದ್ರ ಕಲಾಮಂದಿರದಲ್ಲಿ ನಾಗಮುದಿಪ ಶ್ರೀ ಮಂಗೇಶರಾವ್ ಸೋಪೇಕರ್ ಆವರ ಹಿಂದೂಸ್ತಾನಿ ಸಂಗೀತ ಮತ್ತು ಜಲತರಂಗ ಕಚೇರಿ ನಡೆಯಿತು. ಸಂಗೀತ ಸಭೆಯವರು ಸಂಗ್ರಹಿಸಿದ ಧನವನ್ನು ಶ್ರೀ ಟಿ. ಎ. ಪೈಗಳು ಸಂಗೀತಜ್ಞರಿಗೆ ಅರ್ಪಿಸಿದರು.

**ಇನ್ಸೂರೆನ್ಸ್ ಪರಿಷತ್ತು**— ಇದೇ ತಾ. ೬ ಮತ್ತು ೭ರಲ್ಲು ಲೈಫ್ ಇನ್ಸೂರೆನ್ಸ್ ಕೋರ್ಪರೇಶನಿನ ಉಡುಪಿ ಡಿವಿಜನಿನ ಬ್ರಾಂಚ್ ಮೆನೇಜರರು, ಅಸಿಸ್ಟಂಟ್ ಬ್ರಾಂಚ್ ಮೆನೇಜರರು ಮತ್ತು ಡೆವಲಪ್‌ಮೆಂಟ್ ಅಫೀಸರುಗಳ ಪರಿಷತ್ತು ಜರಗಿತು. ಉಡುಪಿ ಡಿವಿಜನಿನ ಮೆನೇಜರ್ ಶ್ರೀ ಕೆ. ಆರ್. ಭಟ್ಟರು ಪರಿಷತ್ತನ್ನು ಉದ್ಘಾಟಿಸುತ್ತಾ ಉಡುಪಿ ಡಿವಿಜನಿನ ಕಾರ್ಯಕಲಾಪಗಳು ಸುಗಮವಾಗಿ ನಡೆಸಲು ಕೈಗೊಳ್ಳಬೇಕಾದ ಕಾರ್ಯಕ್ರಮಗಳನ್ನು ವಿವರಿಸಿ ಸರ್ವರೂ ಆ ಬಗ್ಗೆ ಸುರು ಪಿನಿಂದ ಕಾರ್ಯಪ್ರವೃತ್ತರಾಗಬೇಕೆಂದರು.

1957ನೇ ವರ್ಷದಲ್ಲಿ ರೂಪಾಯಿ 6½ ಕೋಟಿಯ ಸ್ಟು ಹೊಸ ಇನ್ಸೂರೆನ್ಸ್ ಪೂರ್ಣಗೊಳಿಸುವ ಧ್ಯೇಯವನ್ನು ಸಾಧಿಸುವ ಕುರಿತು ಸಲಹೆ ಸೂಚನೆಗಳನ್ನು ನೀಡಲಾಯಿತು. 1957ನೇ ಸಾಲಿನ ಬಗ್ಗೆ ಶಾಖಾ ಕಾರ್ಯಾಲಯಗಳ ಬಜೆಟು ತಯಾರು ಮಾಡಲಾಯಿತು. ಉಡುಪಿ ಡಿವಿಜನಿನ ಗ್ರಾಮಗಳಲ್ಲಿಯೂ ಇನ್ಸೂರೆನ್ಸ್ ಜನಪ್ರಿಯವಾಗುವಂತೆ ಪ್ರಚಾರಕಾರ್ಯವೈಸಿಗಬೇಕೆಂದೂ ಸೊತ್ತು ಮಾಡಲಾಯಿತು ಶ್ರೀ ಕೆ. ಆರ್. ಕೆ. ಭಟ್ಟರು ಪರಿಷತ್ತಿನಲ್ಲಿ ಭಾಗವಹಿಸಿದವರಿಗೆ ಭೋಜನವಿತ್ತರು. ಉಡುಪಿ ಬ್ರಾಂಚ್ ಮೆನೇಜರ್ ಶ್ರೀ ಕೆ. ಜನಾರ್ಧನ ಪೈಗಳು ಧನ್ಯವಾದಗಳನ್ನಿತ್ತರು.

**ನಗರಸಭೆಯು** - ತಾ. ೮ರಲ್ಲಿ ಸಭಾಪತಿ ಶ್ರೀ ಕೆ. ಕೆ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಮೈಸೂರು ಎಸೆಂಬ್ಲಿಗೆ ಆರಿಸಲ್ಪಟ್ಟ ಶ್ರೀ ಯು. ಎಸ್. ನಾಯಕ್ ಮತ್ತು ಲೋಕಸಭೆಗೆ ಚುನಾಯಿಸಲ್ಪಟ್ಟ ಶ್ರೀ ಯು. ಶ್ರೀನಿವಾಸ ಮಲ್ಯರನ್ನು ಅಭಿನಂದಿಸುವ ನಿರ್ಣಯವು ಮಾಡಲಾಯಿತು.

**ಆನೆಕಾಲು ರೋಗದ ಚಿಹ್ನೆ ಪರಿಶೀಲನೆ**— ಅಖಿಲಭಾರತ ಆನೆಕಾಲು ನಿರೋಧಕ ಸಮಿತಿಯ ಕಳದ ಜನವರಿ ಕೊನೆಯ ವಾರದಲ್ಲಿ ಉಡುಪಿ ನಗರಸಭಾ ಕ್ಷೇತ್ರದಲ್ಲಿ ಆಲ್ಲಲ್ಲಿ ಪರೀಕ್ಷೆ ನಡೆಸಿದ 1994 ಜನರಲ್ಲಿ 87 ಮಂದಿಗೆ ಸೂತ್ರ ಆನೆಕಾಲು ರೋಗದ ಚಿಹ್ನೆಯಿರುವುದಾಗಿ ಅಭಿಪ್ರಾಯ ಸೂಚಿಸಿಯಂದೆ.

**ಲಾ ಕಾಲೇಜು ಸೌಕರ್ಯಗಳು**- ಮಣಿಪಾಲದ ಎಕೆಡೆಮಿ ಆಫ್. ಜನರಲ್ ಎಜ್ಯುಕೇಶನಿನ ಕಡೆಯಿಂದ ಉಡುಪಿಯಲ್ಲಿ ಮುಂದಿನ ಜೂನ್ ತಿಂಗಳಲ್ಲಿ ತೆರೆಯಬೇಕೆಂದಿರುವ ಲಾ ಕಾಲೇಜಿಗೆ ಸೇರಲು ಉಡುಪಿ ನುತ್ತು ಆಸುಪಾಸಿನ ವೇಂಕಿಂಗ್ ಇನ್ಸೂರೆನ್ಸ್ ಕಂಪೆನಿಗಳ ನೌಕರರಿಗೆ ಅನುಕೂಲವಾಗುವಂತೆ ಈ ಕೆಳಗಿನ ಸೌಕರ್ಯಗಳನ್ನು ಒದಗಿಸುವ ವಿಷಾದನ್ನು ಮಾಡಲು ಎಕೆಡೆಮಿ ವಿಜಿಸ್ಟ್ರಾರ್ ಡಾ. ಟಿ. ಎಮ್. ಎ. ಪೈಗಳು ಒಪ್ಪಿರುವರೆಂದು ತಿಳಿದುಬರುತ್ತದೆ. ೧ ಆತರ ಗತಿಗೆಗಳನ್ನು —ಪ್ರಿ- ಲೀಗಲ್ ಮತ್ತು ಡಿಗ್ರಿ ಎರಡನ್ನು ಬೆಳಿಗ್ಗೆ ಮತ್ತು ಸಂಜೆ ಕೆಚೇರಿಗಳಿಗೆ ವಿರಾಮವಿರುವ ವೇಳೆಯಲ್ಲಿ ನಡೆಸಲಾಗುವುದು. (೨) ಕಾಲೇಜು ಫೀಸು ರೂಪಾಯಿ 803/- ನ್ನು ಎರಡು ಯಾ ಮೂರು ಕಂತುಗಳಲ್ಲಿ ಪಾವತಿಸಬಹುದಾಗಿದೆ.


# ಪರಿಭಕ್ತಿನಾರ

'ಮುಕ್ತಿಗೆ ಭಕ್ತಿಯೇ ಕಾರಣ' ವೆಂದ ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ. ಬೆಲೆ: ೦—೨—೦

# ಮಕ್ಕಳ ಮಗ್ಗಿಪುಸ್ತಕ

ಬೆಲೆ: ೦ ೧—೦

ನವಯುಗ ಪ್ರೆಸ್, ಉಡುಪಿ.


### ತಿದ್ದುಪಡಿ

ತಾ. 11.3.57ನೆ ಸಂಚಿಕೆಯ ಅನೆ ಪುಟದಲ್ಲಿ ಪ್ರಕಟವಾದ ಶ್ರೀ ಅಲ್ಬರ್ಟ್ ಮೆಂಡೋನ್ಸರ ಪ್ರಕಟಣೆಯ ಕೊನೆಯಲ್ಲಿ 'ನನ್ನ ಹಕ್ಕಿಗೆ ವಿರೋಧವಾಗಿ ಭಾವಿಸತಕ್ಕದ್ದೂ ಕೂಡಾ ಅಲ್ಲ' ಎಂಬ ವಾಕ್ಯ ತಪ್ಪಾಗಿ ಪ್ರಕಟವಾಗಿದೆ ಅದನ್ನು 'ನನ್ನ ಹಕ್ಕಿಗೆ ವಿರೋಧವಾಗಿ ಭಾವಿಸತಕ್ಕದ್ದೂ ಅಲ್ಲ' ಎಂತ ತಿದ್ದಿ ಓದಬೇಕಾಗಿದೆ. ಸಂ. ನ.


ಮಹಿಳಾ ಸಾಹಿತ್ಯ! ನವೀನ ಪುಸ್ತಕ!

ಕುಮಾರಿ ಪಿ. ಯಶೋದಾ ಅವರು ಬರೆದ

# ಬಾಳಿನ ಬೆಳಕು

ಬಾಳಿನ ನೈಜ ಚಿತ್ರಗಳನ್ನು ಹೃದಯಂಗಮವಾಗಿ ಚಿತ್ರಿಸುವ ಐದು ನೂತನ ಕತೆಗಳ ಸಂಗ್ರಹ. ಶ್ರೀ ಪುರುಷರೆಲ್ಲರೂ ಅವಶ್ಯ ಓದಲೇ ಬೇಕಾದ ಬಾಳ್ನೋಟಗಳು!

ಬೆಲೆ ೦—12—0. (0—14—0 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮಾಡಬಹುದು.)

ನವಭಾರತ ಪುಸ್ತಕ ಭಂಡಾರ, ಉಡುಪಿ.

## ಎಲ್ಲೆಲ್ಲಿ ಏನೇನು?

**ಪುರಭ್ಯಲ್ಲ:**—ಸ್ಥಳೀಯ ವಿದ್ಯಾದಾಯಿನೀ ಶಾಲಾ ಅಡಳಿತ ಸಂಘದ ಅಧ್ಯಕ್ಷರೂ ಹ್ಯಾಸ್ಕೂಲಿನ ಸ್ಥಾಪನೆ ಪತ್ತು ವಿಸ್ತಾರ ಕರ್ತರೂ ನಿವೃತ್ತ ಆಸಿಸ್ಟಾಂಟ್ ಸರ್ಜನರೂ ಆದ ಡಾ| ಇಡ್ಯಾ ವೆಂಕಟ ರಾಯರು ಕಳೆದ ಕೆಲವು ತಿಂಗಳುಗಳಿಂದ ಆಸ್ವಸ್ಥತೆಯಿಂದಾಗಿ ಬೆಂಗಳೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದು ಕಳೆದ ತಾ. 30ರಂದು ನಿಧನರಾದರೆನ್ನಲು ವಿಷಾದವಾಗುತ್ತದೆ. ಅವರ ನಿಧನದ ವಾರ್ತೆ ತಿಳಿದೊಡನೆ ವಿದ್ಯಾದಾಯಿನಿ ಶಾಲಾ ಅಧ್ಯಾಪಕ ಮತ್ತು ವಿದ್ಯಾರ್ಥಿ ವೃಂದದವರು ಸಭೆ ಸೇರಿ ದಿವಂಗತರ ಆತ್ಮಕ್ಕೆ ಸದ್ಗತಿಯನ್ನು ದುಃಖಿತ ಕುಟುಂಬಕ್ಕೆ ಸಂತಾಪವನ್ನೂ ವ್ಯಕ್ತಪಡಿಸಿದರು ಅವರ ಸ್ಮಾರಕಾರ್ಥವಾಗಿ ತಾ 30ರಂದು ಶಾಲೆ ಮುಚ್ಚಲಾಯಿತು.

**ಉಜಿರೆ**— ಶ್ರೀ ಧರ್ಮಸ್ಥಳ ಕರ್ನಾಟಕ ವಿದ್ಯಾಲಯದ ಸಧರ್ಮೋತ್ಸವವು ಕಳೆದ ತಾ 30ರಂದು ಡಾ. ಬಿ. ಎಸ್. ಎ. ವೈಗಳ ಅಧ್ಯಕ್ಷತೆಯಲ್ಲಿ ಜರಗಿತು ಹ್ಯಾಸ್ಕೂಲಿನ ಅಡಳಿತೆದಾರರಾದ ಶ್ರೀ ಧರ್ಮಸ್ಥಳದ ರತ್ನವರ್ಮ ಹೆಗ್ಡೆಯವರು ಸ್ವಾಗತ ಭಾಷಣಮಾಡಿದರು. ಶಾಲಾ ವಿದ್ಯಾರ್ಥಿ ನಾಯಕ ಶ್ರೀ ಗುಣವರ್ಮ ಜೈನಿಯವರು ಶಾಲಾ ಅಡಳಿತೆದಾರರಿಗೆ ವಿದ್ಯಾರ್ಥಿಗಳ ಪರವಾಗಿ ಕೃತಜ್ಞತೆಯನ್ನು ಸಮರ್ಪಿಸಿದರು. ಹೆಡ್‌ಮಾಸ್ಟರ್ ಶ್ರೀ ಆರ್. ಎನ್. ಭಿಡೆಯವರು ವರದಿಯನ್ನೋದಿದರು. ಶ್ರೀಮತಿ ಟಿ. ಎಮ್. ಎ. ವೈಗಳು ವಾರಿತೋಷವಿತರಣೆಮಾಡಿದರು. ಅಧ್ಯಕ್ಷರ ಕಾಲೋಚಿತ ಭಾಷಣಾನಂತರ ವಿವಿಧ ಮನರಂಜನ ಕಾರ್ಯಕ್ರಮಗಳಾದುವು.

**ಬೈರಂಜೆ**— ಶ್ರೀ ಶಾರದಾ ಎಯಿಡೆಡ್ ಎಲಿಮೆಂಟರಿ ಶಾಲಾ ಸಧರ್ಮೋತ್ಸವವು ತಾ. 30-3-57ರಲ್ಲು ಉಡುಪಿ ಗಂಡಸರ ತರಬೇತಿ ಶಾಲಾ ಅಧ್ಯಾಪಕರಾದ ಶ್ರೀ ನರಸಿಂಹಯ್ಯ, M. A. B. T. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆ ಸ್ವಾಗತಭಾಷಣ, ವರದಿವಾಚನ, ಬಹುಮಾನ ವಿತರಣೆ ಮೊದಲಾದ ಕಾರ್ಯಕ್ರಮಗಳ ನಂತರ ಸಿಹಿಕರಲ್ಲಿ ಶ್ರೀಗಳಾದ ಯಮ್. ಗೋವಿಂದ ಶೆಟ್ಟಿ, ಕೆ. ಗಣಪತಿ ಭಟ್, ಇವರು ಸಂದರ್ಭೋಚಿತವಾಗಿ ಮಾತನಾಡಿದರು. ಅಧ್ಯಕ್ಷರು ಶಾಲಾ ಏಳಿಗೆಯನ್ನು ಹಾರೈಸಿ ಹಿತೋಪದೇಶಗಳನ್ನಿತ್ತರು. ಶಾಲಾ ವಿದ್ಯಾರ್ಥಿಗಳಿಂದ ಗುರುಭಕ್ತಿ ಎಂಬ ವಾರಾಣಿಕ ನಾಟಕವೂ. ಅಧ್ಯಾಪಕ ವೃಂದ ಮತ್ತು ಊರಿನ ಸುಹೃದಯರ ಸಹಿಯಿಂದ ವಿಷಗಳಿಗೆ ಎಂಬ ಕನ್ನಡ ನಾಟಕವೂ ಮತ್ತು ಇತರ ವಿನೋದಾವಳಿಗಳೂ ಏರ್ಪಟ್ಟು ರಾತ್ರಿ ೨ ಗಂಟೆಯವರೆಗೆ ಪ್ರದರ್ಶಿಸಲ್ಪಟ್ಟವು.

**ಗುಲ್ವಾಡಿ**—ತಾ. 30-3-57ರಲ್ಲು ಗುಲ್ವಾಡಿ ಸಾಕೂದು ಎಯ್ಡೆಡ್ ಶಾಲೆಯ ವಾರ್ಷಿಕೋತ್ಸವವು ಶ್ರೀ. ಎಸ್ ಎಸ್. ಕೊಳ್ಕೆ ಬೈಲು, B. Sc. B. L., M L. A. ಕುಂದಾಪುರ. ಇವರ ಸನ್ನಿಧ್ಯ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಬಾಲಕಿಯರಿಂದ ಪ್ರಾರ್ಥನೆಯಾದ ಬಳಿಕ ಶ್ರೀ ಟಿ. ರಾಜೀವ ಶೆಟ್ಟಿ ವರಿಂದ ಸ್ವಾಗತ ಭಾಷಣ ಜರಗಿದ ಮೇಲೆ ಶಾಲಾ ಮುಖ್ಯೋಪಾಧ್ಯಾಯ ಶ್ರೀ ಜಿ. ಸದಾಶಿವ ಭಿಡಾರ್ಕರ್‌ರಿಂದ ಶಾಲೆಯ ಪ್ರಗತಿಪರ ಸಂಕ್ಷಿಪ್ತ ವರದಿಯನ್ನೋದಲ್ಪಟ್ಟಿತು. ಅಟ ಪಾಟಗಳಲ್ಲಿ ಗೆದ್ದ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಬಹುಮಾನ ವಿತರಣೆ ಯಾದ ನಂತರ ಅಧ್ಯಕ್ಷರು ಶಾಲೆಯ ಚಟುವಟಿಕೆಗಳನ್ನು ಪ್ರಶಂಶಿಸಿ ಶಾಲೆಯ ರುಭಸವನ್ನು ಕೋರಿ ಮಾತನಾಡಿದರು. ಶಾಲಾ ಮುಕ್ಕಳಿಂದ 'ಭಕ್ತಬಂಧು' ಎಂಬ ಯಕ್ಷಗಾನ ನಾಟಕವು ಅಧ್ಯಾಪಕ ವೃಂದದವರಿಂದ 'ಕಾಂಚನೆ' ಎಂಬ ಸಾಮಾಜಿಕ ನಾಟಕವೂ ಅಭಿನಯಿಸಲ್ಪಟ್ಟಿತು. ಶ್ರೀ ಕೆ. ಕೆ. ಪೂಜಾರಿ. ಬೊಂಬೈ ಇವರ ಸಂಗೀತ ಕಚೇರಿಯು ಮನೋರಂಜಕವಾಗಿ ಜರಗಿತು. ಶಾಲಾ ಮೆನೇಜರ್, ಎಸ್. ಮಹಾಬಲ ಶೆಟ್ಟಿ ಧನ್ಯವಾದಗಳನ್ನಿತ್ತರು.

**ಬೆಳ್ಳಿಪ್ಪಾಡಿ**— ಕಾಶ್ರಗೋಡು ತಾಲೂಕು ದೇಲಂಪಾಡಿ ಗ್ರಾಮದ ಬೆಳ್ಳಿಪ್ಪಾಡಿಯಲ್ಲಿ ತಾ. 4-4-57ರಲ್ಲಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಂಘದ ಕಾರ್ಯನಿರ್ವಾಹಿಗಳಾದ ಶ್ರೀಯು. ವಿ. ಗೋವಿಂದ ಭಟ್ಟ ಮುಂಮಾಳುತನದಲ್ಲಿ ಶ್ರೀ ಗೋಪಾಲಕೃಷ್ಣ ರಾತ್ರಿ ಶಾಲೆಯ ಉದ್ಘಾಟನಾ ಸಪ್ತಾಹಾರಂಭವು ಶ್ರೀ ಪಿ. ಜತ್ತಪ್ಪ ರೈಗಳ ಅಧ್ಯಕ್ಷತೆಯಲ್ಲಿ ಜರಗಿತು.

ಶ್ರೀ ರಮಾನಂದ ಬನಾರಿ. ಇವರು ಭಾಷಣಮಾಡಿದ್ದರು. ರಾತ್ರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಂಘದ ಸದಸ್ಯರಿಂದ ಹಾಗೂ, ಪರಪ್ಪೂರ, ಪೂರ ಮಹನೀಯರಿಂದ ಪಂಜವ ಟಿ ವೀರನಾಲಿ ಎಂಬ ಕಥಾಭಾಗದ ಯಕ್ಷಗಾನ ಕಲಾಸೇವೆಯು ಯಶಸ್ವಿಯಾಗಿ ಜರಗಿತು.

**ಅದಮಾರು**— ಸ್ಥಳೀಯ ಜೋರ್ಡು ಹ್ಯಾಸ್ಕೂಲಿನ ವಾರ್ಷಿಕೋತ್ಸವವು ಕಳೆದ ತಾ 29ರಲ್ಲು ಡಾ. ಟಿ. ಮೂಧವ ವೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮೊಜ್ಕೋಪಾಧ್ಯಾಯಿನಿ ಶ್ರೀಮತಿ ಇಂದಿರಾ ಬಾಯಿ ಎಸ್. ರಾಯರು ವರದಿಯನ್ನೋದಿದರು. ಶ್ರೀ ಎಫ್. ಎಕ್ಸ್. ಡಿ. ಪಿಂಟೋ, ಎಸ್. ಎಲ್. ಎ, ಅವರು ಪಾರಿತೋಷವಿತರಣೆಮಾಡಿದರು ಡಾ. ವೈಗಳು ಶಾಲೆಯ ಕುಂದುಕೊರತೆಗಳನ್ನು ಪೋಗಲಾಡಿಸಲು ಮಕ್ಕಳ ರಕ್ಷಕರು ಮುಂದೆಬರಬೇಕೆಂದು ಸಲಹೆಯಿತ್ತರು. ಜನಮನರಂಜನ ಕಾರ್ಯಗಳಾಗಿ ಸರಣಿಂಭ ಕೊನೆಗೊಂಡಿತು.

**ಹೆಬ್ರಿ**—ಸ್ಥಳೀಯ ಜೋರ್ಡು ಹ್ಯಾಸ್ಕೂಲಿನ ವರ್ಧಂತಿ ಸಮಾರಂಭವು ತಾ. 6ರಲ್ಲು ಉಡುಪಿ ಜೋರ್ಡು ಹ್ಯಾಸ್ಕೂಲಿನ ಪೆಡ್ಮಾಸ್ಟರ್ ಶ್ರೀ ಬೆಳ್ಳೆ ಆನಂತ ಕೃಷ್ಣ ನಾಯಕರ ಅಧ್ಯಕ್ಷತೆಯಲ್ಲಿ ಜರಗಿತು. ಪೆಡ್ಮಾಸ್ಟರ್ ಶ್ರೀ ಗೋಪಾಲ ಕೃಷ್ಣ ಕೆದಿಲಾಯರು ವರದಿಯನ್ನೋದಿದರು. ಹೆಬ್ರಿ ಬಿ. ಡಿ. ಒ. ಶ್ರೀ ಎಚ್. ಎನ್. ಕಾಮತರು ಬಹುಮಾನ ವಿತರಣೆ ಮಾಡಿದರು. ಶ್ರೀ ಎಚ್. ಭುಜಂಗ ಬಲ್ಲಾಳರು ಧನ್ಯವಾದಗಳನ್ನಿತ್ತರು.

**ಬ್ರಹ್ಮಾವರ**—ಇಲ್ಲಿಯ ಮತದಾನ ಪೆಟ್ಟಿಗೆಯಿಂದ ಪ್ಲೆಸೂರು ಕಾಸನ ಸಭೆಗೆ ಆರಿಸಲ್ಪಟ್ಟ ಶ್ರೀ ಬಿ. ಜಗಜ್ಜೀವನದಾಸ ಶೆಟ್ಟರಿಗೆ ಕಳೆದ ತಾ. 30ರಲ್ಲಿ ಜೈಕರ್ನಾಟಕ ಸಂಘದ ಆವರಣದಲ್ಲಿ ಮಾನಪತ್ರವನ್ನರ್ಪಿಸಲಾಯಿತು. ರೆ| ಫಾ| ಕುರಿಯಾ ಕೋಸೆರಿ ಸಭಾಧ್ಯಕ್ಷತೆ ವಹಿಸಿದ್ದರು. ಬ್ರಹ್ಮಾವರ ಸರ್ಕಲ್ ಕಾಂಗ್ರೆಸ್ ಕಮಿಟಿಯವರು ಕೂಡಾ ಶ್ರೀ ಶೆಟ್ಟರಿಗೆ ಸತ್ಕಾರ ಕೂಟವಿತ್ತು ಗೌರವಿಸಿದರು. ಶ್ರೀ ವೈ ರಾಮಣ್ಣ ಗುರುಕಲ್ಲರವರು ಸ್ವಾಗತ ಭಾಷಣ ಮಾಡಿದರು. ಶ್ರೀಗಳಾದ ಬೈಕಾಡಿ ವೆಂಕಟ ಕೃಷ್ಣರಾವ್, ಡಾ| ಹಿರಿಯಣ್ಣ ಶೆಟ್ಟಿ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು. ಶ್ರೀ ಬಿ. ಗೋಕುಲದಾಸಯ್ಯಗಳು ಧನ್ಯವಾದಗಳನ್ನಿತ್ತರು.



ಆಣೆಕಟ್ಟುಗಳಿಂದ ನೀರಾವರಿಗೆ ಅನುಕೂಲತೆಗಳನ್ನೊದಗಿಸುವುದೆಷ್ಟು ಪ್ರಾಮುಖ್ಯವೋ ಅಷ್ಟೇ ಪ್ರಾಮುಖ್ಯವನ್ನು ಒಳನಾಡಿನಲ್ಲಿ ನೀರಮೂಲವನ್ನು ಹುಡುಕುವುದಕ್ಕೆ ಸರಕಾರವು ಕೊಟ್ಟಿತು. ಚಿತ್ರದಲ್ಲಿ ಕೊಳವೆ ಭಾನಿಯೊಂದನ್ನು ರಚಿಸಿ ಸಫಲವಾದ ಯೋಜನೆಯ ವಿವಿಧ ಹಂತಗಳನ್ನು ಕಾಣಬಹುದು.


**ಮೂಲ್ಕಿ ಬೇಂಕ್ ಲಿಮಿಟೆಡ್,**
**ಮುಲ್ಕಿ.**

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

**ನಮ್ಮ ಬಡ್ಡಿ ದರಗಳು.**

ಸರಾಸು ತೇವಣಾತಿ.

| | | |
|---|---|---|
| 24 | ತಿಂಗಳಿಗೆ | 4% |
| 12 | ,, | 3½% |
| 6 | ,, | 3½% |
| 3 | ,, | 3% |

ಸೇವಿಂಗ್ಸ್ ಬೇಂಕ್ ಲೆಕ್ಕ 2%
ಕರೆಂಟ್ ಎಕೌಂಟು ½%

THE MOOLKY BANK, LTD. MULK



ಕನ್ನಡದಲ್ಲಿ ಮೊದಲನೆಯದೆಂದೇ ಹೇಳಬಹುದಾದ
ಅಣು ಶಕ್ತಿಯ ಸಚಿತ್ರ ವಿವೇಚನಾ ಗ್ರಂಥ

**ಹಿರೋಶಿಮಾದಿಂದ ಜಿನೇವ**

ಬರೆದವರು:
ಶ್ರೀ. ಯು. ರಾಘವೇಂದ್ರ ಆಚಾರ್ಯ, ಎಂ. ಎ., ನವದೆಹಲಿ.
ಮುನ್ನುಡಿಕಾರರು: ಶ್ರೀ. ಶಿವರಾಮ ಕಾರಂತರು.

ಪ್ರತಿಯೊಬ್ಬರೂ ಓದಲೇಬೇಕಾದ ನವೀನ ಪುಸ್ತಕ.

ಉತ್ತಮ ಕಾಗದ. ಬೆಲೆ: ರೂ. ೧—೮—೦.

ನವಯುಗ ಪ್ರೆಸ್, ಉಡುಪಿ.


### ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S. C. 29/1957.

ರಿಸಿವರ್ H ಲಕ್ಷ್ಮೀನಾರಾಯಣಯ್ಯ. ವಾದಿ 1 ವೆಂಕಪ್ಪ ಸೆಟ್ಟಿ 2 ಆನಂದಸೆಟ್ಟಿ ನಾಗಮ್ಮ ಸೆಟ್ಟಿರ ಮಗ ಅನಸಳ್ಳಿಗ್ರಾಮ. ಪ್ರತಿವಾದಿರು

ಸದ್ರಿ 1ನೇ ಪ್ರತಿವಾದಿಗೆ ತಿಳಿಯಪಡಿಸುವುದೇನೆಂದ್ರೆ,

ನೀವು ಕೂಡಾ ಪ್ರತಿವಾದಿರಿಂದ ವಾದಿಗೆ ಬರತಕ್ಕ ಹುಟ್ಟುವಳ್ಳಿ ಜಣ ರೂ. 489-9-0 ಕ್ಕೆ ವಾದಿಯು ನಿಮ್ಮ ಮೇಲೆ ಮೂಡಿದ ಮೇಲಿನ ದಾವೆಯು ತಾ. 10-4-57ಕ್ಕೆ ತನ್ನಗೆ ಇಟ್ಟುಕೊತ್ತಿದೆ. ಆ ಕಾರಿಕು ನಿಮ್ಮದ್ದೇನಾದರೂ ಆಕ್ಷೇಪಣೆಯಿದ್ದರೆ ಆ ದಿವಸ ಹೇಗಲು ಘಂಟೆ 11ಕ್ಕೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ಜ್ಞಾಪೀರುಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಸಿಯಿದೆ.

(By order of the court)
Y. Tejappa Shetty,
Advocate for Plff.
Coondapoor 27—3—1957

## ೀವು ಮತ್ತು ಕಾನೂನು

### ಕೊಲೆ ಮಾಡುವಾಗ, ೊಲೆಗಡುಕರೊಂದಿಗೆ ಇದ್ದವನು ಎಷ್ಟರ ಮಟ್ಟಿಗೆ ಅಪರಾಧಿ?

ಕೊಲೆಮಾಡಿದಾಗ ಕೊಲೆಗಡುಕ ೊಂದಿಗಿದ್ದ ವ್ಯಕ್ತಿಯು ಎಷ್ಟರಮಟ್ಟಿಗೆ ಪರಾಧಿಯಾಗುತ್ತಾನೆ ಎನ್ನುವ ಸಮಸ್ಯೆ ು ಮೇಲೆ ಭಾರತದ ಸುಪ್ರೀಂ ಕೋರ್ಟು ತ್ತೀಚೆಗೆ ಇತ್ತ ತೀರ್ಪು ತುಂಬಾ ಬೆಳ ನ್ನು ಚೆಲ್ಲಿದೆ.

**ಕೇಸಿನ ಸಾರಾಂಶ:—** ರಾಜಕೀಯ ಂಗದ ಮುನಸ್ತಾಪದಿಂದಾಗಿ ಅಲೆದಾಡು ಕಮ್ಯುನಿಸ್ಟರ ಗುಂಪೊಂದು ಕಾಂಗ್ರೆ ಗರೊಬ್ಬರನ್ನು ಕೊಲೆಮಾಡಿತು. ನಂತ ಆತನ ಮೃತ ಶರೀರವನ್ನು ಹೊಳೆ ಟ್ಟರು. ಈ ಕರಾಳ ಕೃತ್ಯವು ಕೆಲವು ಮಯದ ಹಿಂದೆ ದಕ್ಷಿಣ ಭಾರತದ ಂದು ಹಳ್ಳಿಯಲ್ಲಿ ನಡೆಯಿತು. ಈ ಕೊ ಗಡುಕ ಕಮ್ಯುನಿಸ್ಟರೊಂದಿಗೆ ಅವರ ಾಮಾನುಗಳನ್ನು ಹೊತ್ತುಕೊಂಡು ಅವ ು ಅಲೆದಾಡುವಲ್ಲಿಗೆ ಅವರನ್ನು ಹಿಂಬಾ ುವ ಸೇವಕನಿದ್ದ. ಅವರ ಸಾಮಗ್ರಿಗ ನ್ನು ಒಯ್ಯುವುದು ಆತನ ಕರ್ತವ್ಯ. ಈ ಕೊಲೆಯಾದಾಗ ಕೂಡಾ ಆತ ಕಮ್ಯು ನಿಸ್ಟ್ರೊಂದಿಗೇನೇ ಇದ್ದ. ಕೊಲೆ ಮಾ ುವುದನ್ನು ಸಂಪೂರ್ಣವಾಗಿ ನೋಡಿದ ಈ ಸೇವಕನು ಆ ಕೊಲೆಗಡುಕತನದಲ್ಲಿ ಾಗವಹಿಸಿದ್ದಾನೆ ಎಂತ ಭಾವಿಸ ಬಹುದೇ.

ಹೇಗೋ, ಈ ಕೊಲೆ ನಡೆದ ರ್ತ ಮಾನ ಪೋಲೀಸರಿಗೆ ತಿಳಿಯಿತು. ಕೊಲೆ ಮಾಡಿದವರನ್ನು ಹಾಗೂ ಸೇವಕನನ್ನು ಸ್ತ್ರಗಿರಿಮಾಡಲಾಯ್ತು. ಸೇವಕನ ಮೇ ಲೆ ಅಪಾದನೆಯನ್ನು ಹೊರಿಸುತ್ತಾ ಕೋ ರ್ಟಿನಲ್ಲಿ ಈ ರೀತಿಯಾಗಿ ವಾದಿಸಿದರು.

'ಈ ಸೇವಕನು ಕೂಡಾ ಕೊಲೆಮಾಡು, ವ ಕಾರ್ಯದಲ್ಲಿ ಸಂಪೂರ್ಣವಾಗಿ ಭಾಗವ ಹಿಸಿದ್ದಾನೆ. ಆತನು ಕೊಲೆಮಾಡುವಾ ಗ ಕೊಲೆಗಡುಕರೊಂದಿಗೆ ಇದ್ದ. ಮಾನ ವನ ಯೋಗ್ಯತೆ, ಅಯೋಗ್ಯತೆಯನ್ನು, ಆತನ ಬಳಗದವರನ್ನು ನೋಡಿ ನಿರ್ಧರಿಸ ಬಹುದು. ಈತನು ಕೊಲೆಗಡುಕರ ಸಹ ವಾಸ, ಒಂದುವೇಳೆ ಆತನು ಈ ಕೊಲೆ ಯಲ್ಲಿ ಏನೂ ಮಾಡಲಿಲ್ಲವೆಂದು ಎಣಿಸು ವುದಾದರು ಕೂಡಾ ಹೇಗೆ. ಕೊಲೆಯಾಗ ದಂತೆ ಮಾಡಲು ಆತ ಯಾವನೀತಿಯಲ್ಲಿ ಯೂ ಯತ್ನಿಸಲಿಲ್ಲ. ಮಾಡುವವರನ್ನು ತಡೆಯುಲಿಲ್ಲ. ಆದಿರಲಿ, ಕೊಲೆಯ ವಿಚಾ ರವನ್ನು ಪೋಲೀಸರಿಗೆ ಕೂಡಾ ತಿಳಿಸ ಲಿಲ್ಲ. ಹೀಗಿರುವಾಗ, ಈತನು ಕೊಲೆ ಮಾಡುವ ಕಾರ್ಯದಲ್ಲಿ ಭಾಗವಹಿಸಿದ್ದಾ ನೆಂದು ಖಂಡಿತವಾಗಿ ಹೇಳಬಹುದು."

ಸೇವಕನು ಕೊಲೆಯ ಕೃತ್ಯದಲ್ಲಿ ಸಹ ಭಾಗಿಯೇ ಎನ್ನು ಪ್ರಶ್ನೆ ಕಟ್ಟಕಡೆಗೆ ಸುಪ್ರೀಮ್ ಕೋರ್ಟಿನಮುಂದೆ ಬಂತು.

**ತೀರ್ಪು:—** ಜಸ್ಟೀಸ್ ಚಂದ್ರಶೇಖ ರ ಅಯ್ಯಂರವರು ಈ ಮೊಕದ್ದಮೆಯ ತೀರ್ಪನ್ನು ಕೊಡುತ್ತಾ ಹೀಗೆಂದರು. "ಈತನು ಕಮ್ಯುನಿಸ್ಟರ ಸಾಮಗ್ರಿಗಳ ನ್ನು ಒಯ್ಯುವುದು ಆತನ ಕರ್ತವ್ಯ. ಈ ಕೊಲೆಯಾದಾಗ ಕೂಡಾ ಆತ ಕಮ್ಯು ನಿಸ್ಟ್ರೊಂದಿಗೇನೇ ಇದ್ದ. ಕೊಲೆ ಮಾ ುವುದನ್ನು ಸಂಪೂರ್ಣವಾಗಿ ನೋಡಿದ ಈ ಸೇವಕನು ಆ ಕೊಲೆಗಡುಕತನದಲ್ಲಿ ಾಗವಹಿಸಿದ್ದಾನೆ ಎಂತ ಭಾವಿಸ ಬಹುದೇ.

ಹೇಗೋ, ಈ ಕೊಲೆ ನಡೆದ ರ್ತ ಮಾನ ಪೋಲೀಸರಿಗೆ ತಿಳಿಯಿತು. ಕೊಲೆ ಮಾಡಿದವರನ್ನು ಹಾಗೂ ಸೇವಕನನ್ನು ಸ್ತ್ರಗಿರಿಮಾಡಲಾಯ್ತು. ಸೇವಕನ ಮೇ ಲೆ ಅಪಾದನೆಯನ್ನು ಹೊರಿಸುತ್ತಾ ಕೋ ರ್ಟಿನಲ್ಲಿ ಈ ರೀತಿಯಾಗಿ ವಾದಿಸಿದರು.

(ಉಳಿದ ಪುಟದಿಂದ)

ಜನಿಸಿ ಶ್ರೀಕೃಷ್ಣನ ನಿಕಟ ಬಂಧುವಾಗಿ ದ್ದರೆಂದು ತಿಳಿದುಬರುತ್ತದೆ. ಇನಿಸಿಗೂ ಮಹಾವೀರನಿಗೂ ಸು. ೫೦೦೦ಗಳಷ್ಟು ವರ್ಷಗಳ ಅಂತರವಿದೆಯೆಂದು ತಿಳಿಯು ತ್ತದೆ. ಪಾರ್ಶ್ವನಾಥನಿಗೂ ಮಹಾವೀರ ನಿಗೂ ಸು. ೨೫೦ ವರ್ಷಗಳ ಅಂತರವಿದೆ.

ಭಾರತದಲ್ಲಿ ಜೈನಮತವು ಅಲ್ಪ ಸಂ ಖ್ಯಾಕ ಮತವಾದರೂ ಉಳಿದ ಮತಗ ಳಂತೆಯೇ ಒಂದು ಪ್ರಮುಖ ಸ್ಥಾನವನ್ನು ಪಡೆದುದಾಗಿದೆ. ಸಂಸ್ಕೃತ ವ್ಯಾಕರಣಾದಿ ಭಾಷೆಗಳ ಲ್ಲಿ ತಮ್ಮ ಮತಾಚಾರಗಳನ್ನು ಬರೆದಿಟ್ಟಿ ದ್ದಾರೆ; ಆ ಮೂಲಕ ಸಾಹಿತ್ಯಕ್ಕೆ ಅನೂಘ ಲ್ಯ ಸೇವೆ ಸಲ್ಲಿಸಿದ್ದಾರೆ. ಅಲ್ಲಲ್ಲಿ ನಾನಾ ತರದ ಬನದಿಗಳನ್ನು ಕಟ್ಟಿಸಿದ್ದಾರೆ.

ಜೈನಮತವನ್ನು ಸ್ಥಾಪಿಸಿದವನು ಮ ಹಾವೀರನೆಂದು ಅಧುನಿಕ ಇತಿಹಾಸಜ್ಞರ ಮತ. ಆದರೆ ಜೈನರು ತಮ್ಮ ಮತವು ಅನಾದಿಕಾಲ ಹಿಂದಿರುವುದೆಂದು ತಿಳಿಯು ತ್ತಾರೆ ಮತಾಚಾರಗಳ ವ್ಯಾಜೀನತೆಗೆ ನಮ್ಮ ಧರ್ಮ ಗ್ರಂಥಗಳು ಹೆಚ್ಚಿನ ಪ್ರಾ ಶಸ್ತ್ಯವನ್ನು ಇತ್ತಿದೆ. ಅಹಿಂಸೆ, ಸತ್ಯ ಧರ್ಮಗಳಿಗೆ ಸರಿಯಾಗಿ ನೆಮ್ಮ ಕರ್ಮ ವನ್ನು ಮಾಡಿದರೆ, ಕರ್ಮದಿಂದ ಬಿಡು ಗಡೆ ಹೊಂದಿ, ಮೋಕ್ಷವನ್ನು ಪಡೆಯಬ ಹುದೆಂಬುದೇ ಈ ಮತದ ಸಾರ.

(ಮಾದಾಸ)

## ಮಂಗಳೂರು

**ಅಭಿನಂದನಾ ಸಮಾರಂಭ—** ಮಂ ಗಳೂರು ಕ್ಷೇತ್ರದಿಂದ ಲೋಕಸಭೆಗೆ ಜುನಾ ಯಿತರಾದ ಶ್ರೀ ಕೆ. ಆರ್. ಆಚಾರ್ಯರನ್ನು ಗೌರವಿಸಲು ಮೀಲಾಗ್ರಿಸ್ ಸ್ಯಾಸ್ಕೂಲಿನ ಯುತ್ ಒಡ್ಯಿಪೇಶನ್ ಸೆಂಟರಿನ ಸಾಮಾಜಿ ಕ ವ್ಯಾಸಂಗ ವಿಭಾಗದವರು ಫಾ. ೧೯ರಂದು ಸಂಜೆ ಮಿಲಾಗ್ರಿಸ್ ಹ್ಯಾಸ್ಕೂಲಿನಲ್ಲಿ ಸತ್ಕಾರ ಸಮಾರಂಭವೊಂದನ್ನು ಏರ್ಪಡಿಸಿದ್ದರು. ರೆ! ಫಾ! ಎ. ಆಂಜೆಲಿಟೋ ಎಸ್. ಜೆ. ಯವರು ಶ್ರೀ ಆಚಾರ್ಯರನ್ನು ಸ್ವಾಗತಿಸುತ್ತಾ, ಇವೇ ಮೇ ತಿಂಗಳಲ್ಲಿ ಈ ಕೇಂದ್ರದ ಅಶ್ರಯದಲ್ಲಿ ಮಜೂರರ ಸಮಸ್ಯೆಗಳ ಕುರಿತಾದ ವಿಚಾರ ಗೋಷ್ಠಿಯೊಂದನ್ನು ವ್ಯವಸ್ಥೆಗೊಳಿಸುವ ಯೋಜ ನೆಯಿದೆ ಎಂದು ತಿಳಿಸಿದರು. ಕಾರ್ಯದರ್ಶಿ ಕುಮಾರಿ ಓ. ವೀರೇಂದ್ರರವರು ವರದಿಯನ್ನೋ ದಿದರು. ಶ್ರೀಗಳಾದ ಎಮ್. ರಾಜೀವ, ಎಮ್. ಎಸ್. ಏಕಾಂಬರ ರಾವ್ ಮತ್ತು ಎಸ್. ಜನಾರ್ಧನ, ಆವರು ವಿವಿಧ ವಿಷಯ ಗಳಲ್ಲಿ ಭಾಷಣವಿತ್ತರು.

**ದ. ಕ. ಜಿಲ್ಲಾ ಬೋರ್ಡಿನ ಸಭೆಯು—** ತಾ. ೨೮ಲ್ಲು ಅಧ್ಯಕ್ಷ ಡಾ. ಕೆ. ಕೆ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ನಿಯ ಮಿತ ಸಭೆಗಳಿಗೆ ಪಾಜರಾಗದೆ ಸದಸ್ಯ ತನವ ನ್ನು ಕಳೆದುಕೊಂಡ ಶ್ರೀಗಳಾದ ಎಫ್. ಸಿ. ಡಿ. ಸೋಜ, ಕೆ. ಕೆ. ಶೆಟ್ಟಿ ಮತ್ತು ಎಮ್. ಸುರಿನೋತ್ತಮ ಕಾಮತರ ಪದಸ್ಥ ತನವನ್ನು ಊರ್ಜಿತಗೊಳಿಸಲಾಯಿತು.

ಮೈಸೂರು ವಿಧಾನ ಸಭೆಗೆ ಆರಿಸಲ್ಪಟ್ಟ ಈ ಬೋರ್ಡಿನ ಅಧ್ಯಕ್ಷ ಡಾ. ಕೆ. ಕೆ. ಹೆಗ್ಡೆ, ಉಪಾಧ್ಯಕ್ಷ ಶ್ರೀ ಬಿ. ಆರ್. ಕರ್ಕೇರ ಮತ್ತು ಸದಸ್ಯ ಡಾ. ಕೆ. ನಾಗಪ್ಪ ಅಳ್ವರನ್ನು ಅಭಿನಂದಿಸಿ ಶ್ರೀಗಳಾದ ಬಿ. ಎಸ್. ಭಾಸ್ಕರ ರೈ, ನೇಣಗೋಪಾಲ ನಾಯಕ್, ಬಿ. ಮಂ ಜುಷ್ಣ ಹೆಗ್ಡೆ, ಎ. ಕೃಷ್ಣ ಶೆಟ್ಟಿ ಮತ್ತು ಜಿಲ್ಲಾ ಆರೋಗ್ಯಾಧಿಕಾರಿ ಶ್ರೀ ಮುದೇಶಯ್ಯನವರು ಮುತ್ತಣಾಡಿದರು. ಡಾ. ಕೆ. ಕೆ. ಹೆಗ್ಡೆ ಮತ್ತು ಶ್ರೀ ಬಿ. ಆರ್. ಕರ್ಕೇರರು ಕಾಲೋಚಿತ ಮಾತುಗಳಿಂದ ಉತ್ತರವಿತ್ತರು.

ಉಪ್ಪಿನಂಗಡಿಯ ಬೋರ್ಡು ಮಿಡ್ಲ್ ಸ್ಕೂ ಲಿನ ವಿದ್ಯಾರ್ಥಿಗಳು ಕ್ಯೂಲಕ್ಕೆ ಪ್ರವಾಸಾರ್ಥ ವಾಗಿ ಹೋಗಿದ್ದಾಗ ಅಲ್ಲಿ ಅವರು ನಡೆಸಿದ ಚಟುವಟಿಕೆಗಳಲ್ಲಿ ತೋರಿಸಿದ ಶಿಸ್ತು ಇತ್ಯಾ ದಿಗಳಿಗೆ ಮೆಚ್ಚಿ ಕ್ಯೂಲ ಪಬ್ಲೀಕ್ ಶ್ರೀ ಎಮ್. ಸುಬ್ಬಣ್ಣ ರೈಗಳು ಶಾಲೆಗೆ ಪಾನವಿತ್ತ ಬೀರಿನ ಫಿಲ್ಟರೊಂದನ್ನು ಕೃತಜ್ಞತಾ ಪೂರ್ವಕ ಸ್ವೀ ಕರಿಸಲಾಯಿತು.

ಉಡುಪಿ ಬೋರ್ಡು ಹ್ಯಾಸ್ಕೂಲಿನ ಮಾಧ್ಯ ಮಿಕ ಶಾಲಾ ವಿಭಾಗ, ಬೆಳ್ತಂಗಡಿಯ ಬೋ ರ್ಡು ಮಾಧ್ಯಮಿಕ ಶಾಲೆಗಳನ್ನು ಹಿರಿಯ ಬು ನಾದಿ ಶಾಲೆಗಳನ್ನಾಗಿ ಪರಿವರ್ತಿಸುವ ಕುರಿತು ಜರ್ಜಿ ನಡೆಸಿ ಕೊನೆಗೆ ಬೋರ್ಡಿನ ಒಪ್ಪಿಗೆ ಯಿದೆಯಾಗಿ ಜಿಲ್ಲಾ ನಿರ್ವಾಹಿಕಾರಿಗಳ ಗಮ ನಕ್ಕೆ ತರಲಾಯಿತು.

ಹಿರಿಯಡಕ ಬೋರ್ಡು ಹಾ. ಎ. ಶಾಲೆಗೆ ಶ್ರೀ ಟಿ. ರಮಾನಾಥ ಪೈಗಳು ದಾನವಿತ್ತ ಮಹಾತ್ಮಾಗಾಂಧಿ ಮತ್ತು ಜಂಡಿತನೆಹರೂರವರ ಭಾವಚಿತ್ರಗಳನ್ನು ಕೃತಜ್ಞತಾ ಪೂರ್ವಕವಾ ಗಿ ಸ್ವೀಕರಿಸಲಾಯಿತು ಹಿಂದ್ ಕುಷ್ಠ ನಿವಾ ರಣಾ ಸಂಘದ ದಕ್ಷಿಣಕನ್ನಡ ಜಿಲ್ಲಾ ಶಾಖೆಗೆ ಸರಕಾರವು ಮಂಜೂರಾತಿಗೊಳಪಟ್ಟು ರೂ ಪಾಯಿ ೩೫೦/- ಸಹಾಯ ಧನವನ್ನು ಮಂಜೂ ರುಗೊಡಿಸಲಾಯಿತು. ಮೈಸೂರು ಸರಕಾರವು ಜಿಲ್ಲಾ ಬೋರ್ಡಿಗೆ ಸೇರಿದಾ ೩೧ ಸಲಿಯ ಬಡ್ತಿ ಯಲ್ಲಿ ರೂಪಾಯಿ ೧,೫೦,೦೦೦ ಸಾಲವನ್ನು ಮಂಜೂರುಗೊಡಿಸಿದೆಂದು ಸ್ವೀಕರಿಸಲಾ ಯಿತು.

ನು ಪ್ರಕಾರ ಅವರ ಕರ್ತವ್ಯವಾಗಿರು ತ್ತದೆ.

(1) Based on:—Vemireddy vs.The State of Hyderbad Supreme Court Reports, 1956(Part IV April 1956) PP. 247—255.

(2) Times of India, of 12-11-56 "To report or not to report"

—ಶ್ರೀ ಕೆ. ಜಯಪ್ಪ ಶೆಟ್ಟಿ, ಬಿ. ಎ

ಫಾ 1-1-57ರಿಂದ ಮೈಸೂರು ಸರಕಾರ ವು ನಿರ್ಣಯಿಸಿದ ನಾಕರರ ಹೊಸ್ತ್ರಮಾಣ ದ ಸಂಬಳಗಳನ್ನು ಜಿಲ್ಲಾ ಬೋರ್ಡಿನ ಎಲ್ಲಾ ನೌಕರರಿಗೂ ಅನ್ವಯಿಸಲು ಈ ಸಭೆಯು ನಿರ್ಧರಿಸುತ್ತದೆ ಎಂಬ ಶ್ರೀ ಬಿ. ಮಂಜಯ್ಯ ಹೆಗ್ಡೆಯವರ ನಿರ್ಣಯ ಮಂಜೂರಾಯಿತು. ಹೊಸ ಸಂಬಳದ ಪ್ರಮಾಣದ ಅಜ್ಞೆಯಲ್ಲಿ ಆ ದಕವಾಗಿರದ ವರ್ಗದ ನೌಕರರ ಸಂಬಳದ ಕು ರಿತು ಸರಕಾರದೊಡನೆ ಸೂಚನೆಗಳನ್ನಿತ್ತಲು ಅಧ್ಯಕ್ಷರಿಗೆ ಅಧಿಕಾರವೀಯಲಾಯಿತು.

**ಪುರಜನರ ಸಂಘದ—** ಕಾರ್ಯಕಾ ರೀ ಸಮಿತಿ ಸಭೆಯು ತಾ. ೧೮ಲ್ಲು ಶ್ರೀ ಜಿ. ಸೋಮಶೇಖರ ರಾಯರ ಅಧ್ಯಕ್ಷತೆಯಲ್ಲಿ ಜ ರಿಗಿ ದೋಕ ಸಭೆಗೆ ಆರಿಸಲ್ಪಟ್ಟ ಶ್ರೀ ಕೆ. ಆರ್. ಆಚಾರ್ಯರನ್ನು ಅಭಿನಂದಿಸಲಾಯಿ ತು ಅಕ್ಕಿಯ ಬೆಲೆ ನಿಯಂತ್ರಣದಿಂದಾಗಿ ಜನಸಾ ಮಾನ್ಯರಿಗೆ ಆಗಿರುವ ಸಂಕಷ್ಟಗಳನ್ನು ನಿವೇ ದಿಸುವುದಕ್ಕೆ ಜಿಲ್ಲಾ ಅಧಿಕಾರಿಗಳಿಗೆ ಮನವಿ ಯನ್ನು ಅರ್ಪಿಸಬೇಕೆನ್ನುವ, ಮಂಗಳೂರಿಗೆ ಎಕ್ಸ್‌ಪ್ರೆಸ್ ಬಂಡಿಯು ನಿಲ್ಲುವ ಈಗಿನ ಸಮಯ ಬದಲಾಯಿಸಿದಂದ ಸಾರ್ವಜನಿಕರಿ ಗಾಗುವ ಸಂಕಷ್ಟಗಳನ್ನು ಸಂಬಂಧಪಟ್ಟ ರೈಲ್ವೆ ಅಧಿಕಾರಿಗಳ ಗಮನಕ್ಕೆ ತರಬೇಕೆನ್ನು ವ, ಮಂಗಳೂರು ಹಾಸನ ರೈಲ್ವೆ ಯೋಜನೆ ಯು ಮುಂದೂಡಲ್ಪಡಬಾರದೆನ್ನು ವ ಇತ್ಯಾದಿ ನಿರ್ಣಯಗಳಾಗಿದುವು.

**ರೋಟರಿ ಕ್ಲಬ್ಬಿನ ಸಭೆಯು—** ತಾ. 4ರಲ್ಲು ಶ್ರೀ ವಿ. ಎಸ್. ಕುಡ್ವರ ಅಧ್ಯ ಕ್ಷತೆಯಲ್ಲಿ ಜರಗಿತು. ಶ್ರೀ ಕೆ. ವಿಶ್ವನಾಥ ಕಾಮತರು ಗತ ಸಭೆಯ ವರದಿಯನ್ನೋದಿ ದರು. ಶ್ರೀ ಎಸ್. ಜನಾರ್ಧನರು ಸ್ವತಂ ತ್ರ ಪತ್ರಿಕೋದ್ಯಮದಲ್ಲಿ ಓದುಗರ ಹೊಣೆಗಾ ರಿಕೆ ಎಂಬ ವಿಚಾರದ ಮೇಲೆ ಭಾಷಣವಿತ್ತ ರು ನಂತರ ನಡೆದ ಚರ್ಚೆಯಲ್ಲಿ ಶ್ರೀಗಳಾದ ಎಸ್. ಆರ್. ಕಾಮತ್, ಡಾ! ಕೆ. ಬಾಳ ಪ್ಪ ಶೆಟ್ಟಿ ಮೊದಲಾದವರು ಭಾಗವಹಿಸಿದರು. ಅಧ್ಯಕ್ಷರು ನೆಮ್ಮ ಭಾಷಣದಲ್ಲಿ, ಪತ್ರಿಕಾ ವ್ಯವಸಾಯದಲ್ಲಿ ಎಮೆರಿಸಬೇಕಾಗಿರುವ ಸಮ ಸ್ಯೆಗಳನ್ನು ತಿಳಿಸಿದರಲ್ಲದೆ, ಪತ್ರಿಕೆಗಳನ್ನು ನ ಡೆಸುತ್ತಿರುವವರು ಸರಕಾರ ಹಾಗೂ ಓಗರ ರಿಂದಾಗಿ ಪತ್ರಿಕೆಯ ಧ್ಯೇಯ ಧೋರಣೆಗಳು ಕೆಳಗೆ ರೂಪಿಸಲ್ಪಡುತ್ತವೆ ಎಂಬುದನ್ನು ವಿವ ರಿಸಿದರು.

**ಕೇರಳ ದಿನಾಚರಣೆ—** ತಾ. ೨೮ಲ್ಲು ಕೇರಳದಲ್ಲಿ ಕಮ್ಯೂನಿಸ್ಟ್ ಮಂತ್ರಿ ಮಂಡಳ ವು ಅಧಿಕಾರ ಸ್ವೀಕರಿಸಿದುದರಿಂದ ಅವರನ್ನು ಅಭಿನಂದಿಸಲು ಸಿಂಪ್ಸನ್ ಸೋನ್ಸರ ಅಧ್ಯ ಕ್ಷತೆಯಲ್ಲಿ ಜ. ಕ. ಜಿಲ್ಲಾ ಕಮ್ಯೂನಿಸ್ಟ್ ಪಾ ರ್ಟಿಯವರು ಕೇಂದ್ರ ಮೈದಾನದಲ್ಲಿ ಸಭೆಯ ನ್ನು ಜರಗಿಸಿದರು. ಆ ಸಭೆಯಲ್ಲಿ ಶ್ರೀಗಳಾದ ಬಿ. ವಿ. ಕಕ್ಕಿಲ್ಲಾಯ, ಎ. ಶಾಂತಾರಾಮ ಪೈ, ವಾಮನ ಕೊಡಿಯಾಲ್‌ಬೈಲ್‌ರವರು ಕೇರಳರವರನ್ನು ಪ್ರಶಂಸಿಸಿದರಲ್ಲದೆ ಅಲ್ಲಿಯ ಸರಕಾರವು ನಹಿಸಲಿರುವ ಧೋರಣೆಯನ್ನು ವಿವರಿಸಿದರು. ಅಧ್ಯಕ್ಷರ ಭಾಷಣವಾಗಿ ಸಭೆ ಮುಕ್ತಾಯವಾಯಿತು.

ಶ್ರೀ ಎ. ಕೃಷ್ಣ ಶೆಟ್ಟರ ಅಧ್ಯಕ್ಷತೆಯಲ್ಲಿ ಉಡುಪಿಯಲ್ಲಿ ಡಾ. ಎಂ. ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಪಾಣಿಮಂಗಳೂರಿನಲ್ಲಿ, ಶ್ರೀ ಎಂ. ಎಚ್. ಕೃಷ್ಣ ಪ್ಪನವರ ಅಧ್ಯಕ್ಷತೆಯಲ್ಲಿ ಪುತ್ತೂರಲ್ಲಿ ಕೇರಳದಿನವನ್ನಾಚರಿಸಲಾಯಿತು.

**ಶಾಲಾ ವರ್ಧಂತಿ—** ಬಸ್ರಿಗಾರ್ಡನ್ ಮುನ್ಸಿಪಲ್ ಎಲಿಮೆಂಟರಿ ಶಾಲಾ ವಾರ್ಷಿ ಕೋತ್ಸವವು ತಾ. ೧೮ರಂದು ಶ್ರೀ ವಿ. ಎಸ್. ಕುಡ್ವರ ಅಧ್ಯಕ್ಷತೆಯಲ್ಲಿ ಜರಗಿತು ಆರಂಭ ದಲ್ಲಿ ಶ್ರೀ. ಕೆ. ವಿಶ್ವನಾಥ ಕಾಮತರು ಸ್ವಾಗ ತ ಭಾಷಣ ಮಾಡಿದರು. ಶಾಲಾ ಮುಖ್ಯೋ ಪಾಧ್ಯಾಯ ಶ್ರೀ ಎಸ್. ನಲ್ಲಪ್ಪನವರು ವರ ದಿಯನ್ನೋದಿದರು. ಅಧ್ಯಕ್ಷರು ಬಹುಮಾನ ವಿತರಣೆಯ ನಂತರ ತಮ್ಮ ಭಾಷಣದಲ್ಲಿ ಈ ಶಾಲೆಯನ್ನು ಹಾಯರ್ ಎಲಿಮೆಂಟರಿಯನ್ನಾ ಗಿ ಮಾಡುವುದು ಅವಶ್ಯ ಎಂದು ಮುಂತಾಗಿ ಹೇಳಿದರು. ಶ್ರೀ ಕೆ. ವಿ. ಕಾಮತರ ಧನ್ಯ ವಾದದೊಂದಿಗೆ ಸಭಾ ನುಕ್ತಾಯವಾಯಿತು.


## ಕವತ್ತಾರು ಜಾತ್ರೆ

**ಪ್ರತಿ ವರ್ಷದಂತೆ ಕವತ್ತಾರು ಮಹಾ ಉತ್ಸವವು ಇದೇ ಬರುವ ಮೇ ತಿಂಗಳ ತಾ. 13ನೇ ಸೋಮ ವಾರ ನೆರವೇರುವುದು.**

ಕವತ್ತಾರು ತಾ. 30.

## ಶ್ರೀರಾಮ ಜಯಂತ್ಯುತ್ಸವ

ನಾಡಿನ ಪರನಾರಿಯರನೇಲೆ ಕಾಲನ ಕತ್ತಲೆ ಕವಿದು, ನಾಡು ಕಾಡಾಗಿ – ನರರು ಅಸುರರಾಗಿ, ಗುಣವು ಅವಗುಣವಾಗಿ – ಹೆಣಕ್ಕೆ ಹೆಣ ಬ್ಯಾದೆರೆವ, ಭೋಗಕ್ಕೆ ಯೋಗಿಯೂ ಮಣಿವ ದುರ್ದಿನ-ದಶಮುಖನ ಯಾಜಮಾನ್ಯ. ಸುರರಿಗೆ ಸೆರೆವಾಸ; ಪರಪೀಡಕರಿಗೆ ಮೆರೆವಾಟ.

ಅತ್ಯಾರಾಮರ ಅಂತರ್ಮೊ ರೆಗೊಲಿದು ದಶರಥ ರಾಮನಾಗಿ ಜನಿಸಿದ ದಿನವೇ, ನಾವು ಕಾಲಂಪ್ರತಿ ಜರಗಿಸುವ "ಶ್ರೀರಾಮಜಯಂತಿ." ಶ್ರೀರಾಮನೆಂದರೆ ಯಾವುದೋ ದೇಶ, ಕಾಲದ, ಮಾನವ ಮಾತ್ರನೆಂದು ತಿಳಿಯುವುದೇ ಅವಿವೇಕ. ರಾಮನು ನಿತ್ಯ; ಶ್ರೀರಾಮನೇ ನಿರಂಜನ.

ಶ್ರೀರಾಮನು ಒಂದಲ್ಲ, ಹಲವು ಶೀಲದ ಬಲನಾಗಿ,ನಿಯ ತಿಯ ಯುವಕನಾಗಿ, ಧರ್ಮದ ಪತಿಯಾಗಿ, ರಾಜ್ಯದ ರಾಜನಾಗಿ, ಪ್ರೌಢತೆಯಲ್ಲಿ ಪ್ರೌಢನಾಗಿ,ಮೂರ್ಖರ ಮುಖಭಂಗನಾಗಿ, ಮುನಿ ಮನೋಹರನಾಗಿ, ಶಿಷ್ಯನಾಗಿ, ಗುರುವಾಗಿ, ಪ್ರಜೆಯಾಗಿ, ರಾಜನಾಗಿ ಕಾಣಿಸಿಕೊಂಡವನು ಒಂದೆಡೆಯಲ್ಲಿ ಸತಿ ವಿರಹದಿಂದ ತೊಳಲುತ್ತಿದ್ದರೆ, ಬೇರೊಂದೆಡೆ ಜಿತೇಂದ್ರಿಯನಾಗಿ ಶಂಕರನನ್ನು ಕುರಿತು ತಪವನ್ನಾಚರಿಸುವ, ಮಗುವೊಂದೆಡೆ ಪರಶಿವೆಯ ಸಂಶಯ ನಿವಾರಣೆಮಾಡಿ ಆದಿನಾರಾಯಣ ನೆನೆಸಿಕೊಳ್ಳುತ್ತಿರುವ ಲೀಲೆಯೇ ವಿಚಿತ್ರವಲ್ಲವೆ.

ಮಾನವನು ಅನುಕರಣ ಶೀಲ. ಶ್ರೀರಾಮನೆನ್ನು ಯಾವನೂ ಯಾವ ಸಮಯದಲ್ಲೂ, ಅನುಕರಿಸಬಹುದು. ಅನುಕರಿಸಿದ್ದಾರೆ; ಅನುಕರಿಸುತ್ತಿದ್ದಾರೆ- ಒಂದಿಲ್ಲೊಂದು ಬಗೆ; ಒಬ್ಬನಿಂದೊಬ್ಬ.

ರಾಮನೆಂತೋ ರಾಮಾಯಣವೂ ಅಂತೆಯೇ. ಆದಿಕವಿಯಿಂದ ಇಂದಿನ ತನಕ ಅದೆಷ್ಟು ಜನ ರಾಮಾಯಣ ಬರೆದಿಲ್ಲ, ಯಾವ ಮುಖದಿಂದ ರಾಮನನ್ನು ಕಾಣುವರೋ ಆಯಾಯ ಮುಖದಿಂದಲೇ ರಾಮಾಯಣವು ಅವತರಿಸಿದೆ. ರಾಮನು 'ವಿಶ್ವತೋಮುಖ; ರಾಮಾಯಣವೂ.

ಶ್ರೀರಾಮನೊಬ್ಬನೇ ಗುಣವಶಾತ್ಕ ಸಕ್ತನಲ್ಲಿ ಗುಣವಂತನಾಗಿ, ರೂಪಾಸಕ್ತನಲ್ಲಿ ರೂಪವಂತನಾಗಿ, ಪೂಜಾಸಕ್ತನ ಪೂಜ್ಯನಾಗಿ, ಸ್ಮರಣಾಸಕ್ತನ ಪರಮಪದನಾಗಿ, ದಾಸ್ಯಾರ್ಕ್ತನ ದಾಸನಾಗಿ , ಸಖ್ಯಾಸಕ್ತನ ಸಖನಾಗಿ, ಕಾಂಬಾಸಕ್ತನ ಕಾಂತನಾಗಿ, ಆ ತ್ಮಲ್ಯಾಸಕ್ತನಮಗುವಾಗಿ, ಆತ್ಮನಿವೇದನಾಸಕ್ತನ ಸರ್ವೇಶ್ವರನಾಗಿ, ತನ್ಮಯತಾಸಕ್ತನ ಮನೋಹರನಾಗಿ, ಪರನು ವಿರಹಾಸಕ್ತನ ಸರ್ವಸ್ವನಾಗಿ, ಸ್ವಾತ್ಮರತ್ಯಾಸಕ್ತನಲ್ಲಿ ಆತ್ಮಾರಾಮನಾಗಿ, ನಿರ್ಗುಣಿಗೆ ನಿರ್ಗುಣನಾಗಿ, ಸಗುಣಿಗೆ ಸಗುಣನಾಗಿ, ಹಲವು ವಿಧದಿಂದ ಹಲವರೆದೆಯಲ್ಲಿ ಜನಿಸಿದ ಶ್ರೀರಾಮನು ದಶರಥನೊಬ್ಬನ ಮಗುವೆ? ದಶಮುಖನ ಮನವ ಜಯಿಸಬಲ್ಲರಿಗೆ ಜಯಿಸಲೆಳಸುವರಿಗೆ ಎಲ್ಲರ ಮಗು.

ಯಾರು ಹೇಳಬಹುದು. ಮಹಾತ್ಮಾ ಜೀಯವರ ರಾಮ, ಕಬೀರರ ರಾಮ, ತುಲಸಿಯ ರಾಮ, ತ್ಯಾಗರಾಜರ ರಾಮ ಇನ್ನು ಹಲವರ ರಾಮ; ಇವರೆಲ್ಲ ಯಾವ ಯಾವ ಮುಖವನರೆಂದು ದಿವಂಗತ ಕಾಳಿಂಗ ಉಡುಪರು ಲಿಖಿತ ಜಪ ಬರೆಯುವಾಗ, ಸ್ವಲ್ಪಶ್ಚೇ ಓರೆಯಾದರೆ ಸಾಕ- "ಹಾ! ಅನ್ಯಾಯವಾಗಿ ರಾಮನನ್ನು ಅಂದಗೆಡಿಸಿದೆನಲ್ಲಾ" ಎನ್ನುತ್ತಿದ್ದರು. ಯಾರೂ ತಪ್ಪು ಕಾಣಲಿಲ್ಲ, ಎಲ್ಲಾ ಸರಿ.

ಶ್ರೀರಾಮ ಜಯಂತಿಯನ್ನು ಆಚರಿಸದ ನಾಡಿಲ್ಲ ನಮ್ಮ ದೇಶದಲ್ಲಿ. ಒಬ್ಬೊಬ್ಬರೊಂದು ಬಗೆಯಲ್ಲಿ ರಾಮಾಯಣ ಪಾರಾಯಣ, ರಾಮಭಜನೆ, ಶ್ರೀರಾಮ ಪೂಜೆ, ಅಭಿಷೇಕ, ಶ್ರೀರಾಮ ಪಟ್ಟಾಭಿಷೇಕ, ಯಾಗ, ನೃತ್ಯ, ಮೆರವಣಿಗೆ, ಹಲವು ವಿಧ. ರಾಮನಸ್ಪೈವಿಧ; ರಾಮ ಭಕ್ತಿಯಷ್ಟೇ ಬಗೆ.

ರಾಮನಾನುವ ಕೇಳಿದ ಕವಿಹಾವುಹೆಗ್ಗಣಗಳ ಬಿಲ. ಹಾಡದ ಬಾಯಿ ಹೆಬ್ಬಾವಿನ ಬಾಯಿ . ರಾಮ ಮೂರ್ತಿಯ ಕಾಣದ ಗಣ್ಣು ಪೀಲಿಗಣ್ಣು. ಕಂಡಾನಂದಿಸದ ಮನಸ್ಯೆ ಹುಲಿಕರಡಿಗಳ ಹೆಗ್ಗಾಡು.

ರಾಮದರ್ಶನವು ರಾಮಾಯಣದಿಂದ ಕನ್ನಡಿಯ ರಾಮಾಯಣವು ಸಿರಿವಂತರ ಮನೆಗಾದರಾಗಲಿ; ಬಡವರ ಬಂಧುವು ಹಿಂದೀಭಾಷೆಯಲ್ಲಿದೆ. ಬಡವನಿಗೆ ರುವಿಯೊಂದು ರೂಪಾಯಿ; ಒಂದು ರೂಪಾಯಿಯೇ ನೂರತೊಂಭತ್ತಿರಡು ರೂಪಾಯಿ.

ಹಿಂದೂ ದೇಶದ ಪ್ರಜೆ ಹಿಂದೀ ಕಲಿತಿರುವುದು ಚೆನ್ನ. ಹಿಂದೀಕವಿಯಿವಾಗ ಹಿಂದೀ ಭಾಷೆಯಲ್ಲಿರುವ ತುಲಸೀದಾಸರ "ರಾಮಚರಿತ ಮಾನಸ" ಓದಿದರೆ ಕೋಲೊಂದು ಹೆಣ್ಣೆರಡು ಆಗುತ್ತದೆ. ಭಾಷೆ ಸ್ವಲ್ಪ ಬಿಗಿ. ಸುಲಭ ಟೀಕೆಯಿದ್ದು ಖಂಡಶಃ ಬೇಕಾದರೂ ಸಿಗುತ್ತದೆ. ಗೀತಾಪ್ರೆಸ್ ಗೋರಖಪುರದಲ್ಲಿ ವಿಚಾರಿಸಿ. ಬರೆ ಹದಿನಾಲ್ಕಾಣೆಗೆ ಮಾನಸ ಸಿಗುತ್ತದೆ. ಮಾನಸ ಓದಿ. ರಾಮನನ್ನು ಹಾಡಿ. ರಾಮದರ್ಶನ ಮಾಡಿ.

ಅನೀತಿಯ, ಅಧರ್ಮದ, ಅಶಾಂತಿಯ, ಅಕ್ಷಾಂತಿಯ, ಕಾಮದ ಕ್ರಾರ್ಯದ ಕಗ್ಗತ್ತಲುಕಾಲ್ತುಳಿತಕ್ಕೆ ಸಿಲುಕಿ ಬಸವಳಿದ ಬಂಧುಗಳೇ, ರಾಮಾಯಣವನ್ನೋದಿ, ರಾಮನ ಗುಣಗಾನವನ್ನು ಪ್ರೇಮ ಭರದಿಂದ ಹಾಡಿ, ನಾಡಿನಾಡಿಗಳಲ್ಲಿ ರಾಮನಾಮ ತುಂಬಿಸಿರಿ. ಪ್ರೇಮ ಕಾಮಗಳಲ್ಲಿ ಅಭೇದ ಕಾಣುವವರಿಗೆ ರಾಮನು ಸದ್ಬುದ್ಧಿಯನ್ನು ದಯಪಾಲಿಸಲಿ. ಪ್ರೇಮ ಪ್ರಕಾಶದ ಅರಿವಾಗಲಿ. ರಾಮಪ್ರೇಮದ ರಮಣೀಯತೆಯಲ್ಲಿ ರಮಿಸುವ ಭಾಗ್ಯ ಬರಲಿ. ರಾಮನೇ ನಲವು, ರಾಮನೇ ಗೆಲವು, ರಾಮ ಸರ್ವಸ್ವ.

"ಆತ್ಮ ಸುಖ ಪ್ರೀತಿ ಇಚ್ಛಾಚಾರ ನಾಮಕಾಮ್| ಕೃಷ್ಣ ಸುಖ ಪ್ರೀತಿ ಇಚ್ಛಾಧರೇ ಪ್ರೇಮನಾಮ್!!"

ಕತ್ತಲೆಯು ದೂರಾಗುತ್ತಿದೆ;ಮುಂಬೆಳಗು ಹರಿವುತ್ತಿದೆ! ಅಲ್ಲೊಂದು ಇಲ್ಲೊಂದು ಹಕ್ಕಿಗಳ ಉದಯ ಗೀತವೂ ಕೇಳಿ ಬರುತ್ತಿದೆ ಬಂಧುಗಳೇ! ಭಗಿನಿಯರೇ! ಗೂಡಿನಿಂದ ಹೊರಬನ್ನಿ. ವಿಧಿವಿಲಾಸಕ್ಕೆ ಎದೆಗುಂದಬೇಡಿ. ರವಿಕುಲದೀಪಕನಾದ ರಾಮನ ಜನ್ಮೋತ್ಸವ ರವಿಯುದಯಕ್ಕೆ ಸ್ವಾಗತ ಹಾಡುವ! ನುಡಿವಕ್ಕಿಗಳ, ಹಾಡುವಕ್ಕಿಗಳ ಹಾಡಿಗೆ ದನಿಗೂಡಿಸುವ! ನಾಡೆಲ್ಲ ರಾಮನಾಗಲಿ! ನರರೆಲ್ಲ ರಾಮನಾಗಲಿ! ತನುವೆಲ್ಲ ರಾಮನಾಗಲಿ! ಮನವೆಲ್ಲ ರಾಮನಾಗಲಿ! ರಾಮನಿಗೆ ಜಯವಾಗಲಿ!

"ಜಹಾಂ ರಾಮ ತಹಾಂ ರಾಮನ
ಹೀಂ ಚಹಾಂ ರಾಮ ನಹೀಂ ರಾಮ"

"ಜಯ ಸೀತಾರಾಮ"

ಶ್ರೀ ಕೆ. ಎಸ್, ಮುಧ್ಯಸ್ಥ,
ಕೊಲ್ಲೂರು.

## ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯವಾಗಿ ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ನ.)

### ಗೀತ ಗೋವಿಂದ—

ಕವಿ ಜಯದೇವ. ಕನ್ನಡ ಗದ್ಯಾನುವಾದ ಕುಲಮಿರ್ವ ಬಾಲಕೃಷ್ಣ ಇವರಿಂದ ಪ್ರತಿಭಾ ಗ್ರಂಥಮಾಲೆ, ಧಾರವಾಡ ರೂ. ೧.೫೦.

ಸಂಸ್ಕೃತವಲ್ಲಿ ಅನುವಾದಿಸಲು ಮೂರ್ತಿ ಅಸಾಧ್ಯವೆನಿಸುವಂಥ ಒಂದು ಕಾವ್ಯ ಯಾವ ಮಾದರೂ ಇರುವಲ್ಲಿ ಅದು ಗೀತ ಗೋವಿಂದ ಎನ್ನಬಹುದು. ಅದನ್ನು ಹಿದಿ ರಸಾಸ್ವಾದನೆ ಮಾಡಬೇಕಾದರೆ ಸಂಸ್ಕೃತದಲ್ಲಿ ಪ್ರಗಲ್ಭ ಪಾಂಡಿತ್ಯವೇನೂ ಅಗತ್ಯವಿಲ್ಲ. ಸಾಮಾನ್ಯವಾಗಿ ಒಂದು ಭಾರತೀಯ ಭಾಷೆಯ ಸಾಹಿತ್ಯದ ಪರಿಚಯವುಳ್ಳವರಿಗೆ ಅವರಲ್ಲಿ ಬರುವ ಪದ ಸಮುಚ್ಚಯಗಳು ಸಂಪೂರ್ಣ ಅರ್ಥವಾಗದಿದ್ದರೂ ಮನಕಾಗಿಯಾದರೂ ಸಾರಕೆಲ್ಪನೆಯಾಗಲು ಶಕ್ಯವುಂಟು. ಅಂಥಲ್ಲಿ ಅನುವಾದಿಸಲೇ ಬೇಕೆಂಬಹಟ ಇರುವುವಾದರೆ ಜಯದೇವನನ್ನು ಬೇಂದ್ರೆ ಅಂಥ ಪರಕವಿ ವ್ಯಂವಸ್ಸಿನಲ್ಲಿ ಸೆರೆಹಿಡಿಯಲು ಪ್ರಯತ್ನಿಸಬಹುದೋ ಏನೋ, ಅದೆಲ್ಲವನ್ನೂ ಬಿಟ್ಟು ಜಯದೇವನ ಗದ್ಯಾನುವಾದದಿಂದ ಜಯದೇವನ ಸ್ಫೂರ್ತಿ ಮಧುರಗೀತಿಯದ ರಸವನ್ನು ಹೀರಲು ಯಾವ ಉಪಕಾರವಾಗಿವುದೋ ಸಾವರಿಯಿವು ಗೀತ ಗೋವಿಂದವನ್ನು ಓದಬೇಕು - ಸಂಸ್ಕೃತದಲ್ಲೇ; ಆದೂ ಗಟ್ಟಿಯಾಗಿ; ಒಳ್ಳೆಯ ಕಲಿತವಿರುವರು ಸಾಡಬೇಕು, ಏಸಿಕರು ಕೂತು ಕೇಳಬೇಕು - ಇದು ಸಾಧುಮಾರ್ಗವೆಂದು ನಮ್ಮ ನಾನೆ.

ಕುಲಮಿರ್ವರ ಪರಿಶ್ರಮದಿಂದ ಗದ್ಯದಲ್ಲಿ ಅನುವಾದವೇನೂ ಪ್ರಮಾಣಕವಾಗಿಯೇ ಬಂದಿದೆ ಎಂದು ನಾವೆನ್ನಬೇಕಾದರೂ, ಈ ಪರಿಶ್ರಮವು ಸ್ವಭಾವ ಪರಿಶ್ರಮವಾಯಿತಲ್ಲ ಎಂದು ವ್ಯಥೆಪಡಬೇಕಾಗಿದೆ. ಒಂದೇ ಮಾತಿನಲ್ಲಿ, ಗೀತಗೋವಿಂದ ಗದ್ಯಾನುವಾದ ಎಂಬ ಯೋಚನೆಯೇ ಒಂದು ವಿಧದ ರಸಾಭಾಸ!

### ನಗೆಬಾಂಬು —

ಹೆಚ್. ಆರ್. ನಾಗೇಶರಾವ್ ಚಾತಕ ಪ್ರಕಾಶನ ಬೆಂಗಳೂರು, ಕಸೆಹೊತ್ತಗೆ; ಬೆಲೆ: ೮ ಆಣೆ.

'ನಗೆಬಾಂಬು' ಚಿತ್ರನುಪ್ತದಲ್ಲಿ ಪ್ರಕಟವಾದ ಹಾಸ್ಯ ಪ್ರಬಂಧಗಳ ಸಂಗ್ರಹ. ಲೇಖಕರಲ್ಲಿ ವಿದಂಬಿಸಿ ವೈಪ್ಪಿ ಇರುವುದಕ್ಕೆ ಇಲ್ಲಿನ ಕೃತಿಗಳು ಸಾಕ್ಷಿಯಾದರೂ ಕಿದ್ದಿಕೆಗೆ ಅವಕಾಶವಿಲ್ಲದಿಲ್ಲ;

ಕು. ಶಿ. ಹರಿದಾಸ ಭಟ್ಟ.


ಪ್ರಕಟಣೆ

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. P. No. 11/1957.

M. ವಾರಿಜಾಕ್ಷಿ, ವಕೀಲ್ ಕೆ. ಮಹಾಬಲ ಹೆಗ್ಡೇರ ವಿಧವೆ ಕಾರ್ಕಳ ತಾಲೂಕು ಕಾರ್ಕಳ ಕಸಬೆಯಲ್ಲಿರುವವರು

—ಅರ್ಜಿದಾರಳು

ಮತ್ತು

ಆಬ್ಬಕ್ಕ ಹೆಗ್ಡ್ತಿ ಕೂಡಾ ೬ ಜನರು

—ಎದ್ರಿದಾರರು

ಇವರೊಳಗೆ

ಈ ಮೂಲಕ ಸರ್ವರಿಗೂ ತಿಳಿಸುವದೇನಂದ್ರೆ,

ಅರ್ಜಿದಾರಳು ಮೃತ ವಕೀಲ್ K. ಮಹಾಬಲ ಹೆಗ್ಡೇರಿಗೆ ಬರ್ಬಾ ಸೊತ್ತುಗಳ ವಸೂಲಿಗೆತನಗೆ ವಾರಿಸು ಸರ್ಟಿಫಿಕೇಟು ಕೊಡಬೇಕೆಂದು ದಾಕ್ಲುನಾಮಿದ ಮೇಲ್ಕಂಡ ಅರ್ಜಿ ತಾರೀಕು 25-4-1957ಕ್ಕೆ ಇಟ್ಟಿದೆ. ಅಕ್ಷೇಪಪುಳ್ಳವರು ಸದ್ರಿ ದಿನ ಬೆಳಿಗ್ಗೆ 10 ಗಂಟ್ರಗೆ ಮೇಲ್ಕಂಡ ಕೋರ್ಟುಮುಂದೆ ಸ್ವತಹಾ ಯಾ ವಕೀಲ್ ದ್ವಾರಾ ಹಾಜ್ರಾಗಿ ಉಸಪರಿಸತಕ್ಕದ್ದು. ತಪ್ಪಿದಿಲ್ಲ ಸದ್ರಿಅರ್ಜಿ ಏಕಪಕ್ಷೀಯವಾಗಿ ತೀರ್ಮಾನಿಸಲಾದೀತು.

*(By order of the court)*

N. Mohandas Adyanthaya
Advocate for Petitioner.

Karkala 2—4—1957.



ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ




# ಬಾಲ ಸುಧ

ಇದು ಸಣ್ಣ ಬಾಲಕರಿಗೆ ಅಜೀರ್ಣ, ಜ್ವರ, ಕೆಮ್ಮು, ಶೀತ,ಮಲಬದ್ಧತೆ, ಹೆಚ್ಚಾಗಿ ಭೇದಿ ಆಗುವಿಕೆ, ಮಕ್ಕಳು ಕ್ಷೀಣವಾಗಿ ಕೈಕಾಲು ಸಣ್ಣವಾಗುವಿಕೆ, ಅಲರ್ ಬೆಳೆಯುವುವದು, ಈ ಎಲ್ಲಾ ವ್ಯಾಧಿಗಳಿಗೆ ವಜ್ರಾಯುಧವಾಗಿದೆ. ಹೀಗಿರುವ ಔಷಧಿ ಇನ್ನೊಂದು ಇಲ್ಲವೆಂದು ಹೇಳಬಹುದು. ಈ ಔಷಧಕ್ಕೆ ಮಿತಿ ಇಲ್ಲದ ಯೋಗ್ಯತಾ ಪತ್ರಗಳನ್ನು ಪಡೆದಿರುವದಲ್ಲದೆ ದೇಶದಲ್ಲಿ ಅನೇಕ ವಿಧದಲ್ಲಿ ಅಭಿವೃದ್ಧಿಯಾಗಿರುತ್ತದೆ. ಸುಮಾರು ೧ ತಿಂಗಳಿಗೆ ಸರಿ ಹೋಗುವ ೫೦ ಮಾತ್ರೆಗಳ ಸೀಸಿ ೧ ಕ್ಕೆ ರೂ. ೧—೦—೦.

ನಮ್ಮ ಏಜೆಂಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲ—ಬೆಂಗಳೂರು-2.
(2) ಷಾ ಕಂಪನಿ—ಮಂಗಳೂರು-1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ.





## ಸಹಕಾರ ಜೀವನ

# ಪರಹಿತ ಚಿಂತನೆಯೇ ಇದರ ಜೀವಾಳ

ಜಗತ್ತಿನ ಜೀವಿಗಳ ಬಾಳ್ವಿಕೆಯಲ್ಲಿ ಒಬ್ಬರಿಗೊಬ್ಬರ ಹೊಂದಿಕೆ, ಸಹಾಯ ಸಹಕಾರತ್ವ ಅವಶ್ಯವಾಗಿದೆ. ಸಂಘಜೀವಿಯಾದ ಮಾನವನು ತನ್ನ ಜೀವನದಲ್ಲಿ ಜನತೆಯ ಪ್ರೀತಿ ವಿಶ್ವಾಸವನ್ನು ಗಳಿಸಿಕೊಂಡು ಜನಪ್ರೀತನಾಗಿದ್ದರೆ ಮಾತ್ರ ಬಾಳ್ವೆಯಲ್ಲಿ ಪ್ರಗತಿಪರ ಆಶಾವಾದಿಯಾಗಿ ಉಳಿಯಬಹುದು. ಲಕ್ಷಾಧಿಪತಿಯೂ ಒಂದೊಮ್ಮೆ ಪರಕೀಯರ ಆಶ್ರಿತನಾಗಿ ಇರಬೇಕಾಗುವುದು. ತನ್ನ ಸಂಪತ್ತೇ ತನಗೆ ಸಾಕು; ಅನ್ಯರ ಸಹಾಯ ನನಗೇಕೆ ಬೇಕು? ಎಂಬ ಮನೋಭಾವವುಳ್ಳವನು, ಎಂದೂ ಯಾರಿಗೂ ಬೇಷವಾದ ಬರಡು ಬಂಡೆಯಂತಿರುವನು. ನಿಸರ್ಗದ ನಿಯಮದಲ್ಲೂ ಈ ಬಗೆಯ ಕೊಂದಿಕೆಗಳು ಇದ್ದೇ ಇವೆ. ಗ್ರೀಷ್ಮಕಾಲದಲ್ಲಿ ಮಳೆನೀರಿಗೆ ಗಾಳ ಹೇಗೆ ಅನುಕೂಲವೋ ಅಂತೆಯೇ ವೈಶಾಖದಲ್ಲಿ ಸೂರ್ಯನ ತೀಕ್ಷ್ಣವಾದ ಕಿರಣದಿಂದ ಸಮುದ್ರದ ನೀರು ಆವಿಯಾಗಿ ಘನರೂಪದಿಂದ ಆಗಸದಲ್ಲಿ ಮುಂದಾಗಿಯೇ ವೋಡವು ಈ ಮಳೆ ನೀರಿಗೆ ಸಿದ್ಧವಾಗಿದೆಯಷ್ಟೆ! ಹೀಗೆಯೇ ಮರಬಳ್ಳಿಗಳೂ ಕಾಲಕಾಲಕ್ಕೆ ಫಲ, ಪುಷ್ಪವನ್ನಿತ್ತು ಇತರ ಪ್ರಾಣಿಪಕ್ಷಿಗಳ ಜೀವನದಲ್ಲಿ ಸಹಕರಿಸುವುದಿಲ್ಲವೆ? ಹೆಚ್ಚೇಕೆ ಸೂರ್ಯನು ಅಸ್ತನಾಗಿ ಕತ್ತಲಾದಾಗಲ್ಲವೇ ಚಂದ್ರಮನ ಬೆಳಗಿನ ಶೋಭೆಗೆ ಎಲ್ಲೆ? ಹೀಗಿರಲು ಒಂದಕ್ಕೊಂದು, ಒಬ್ಬರಿಗೊಬ್ಬರು ಅನುಕೂಲವಾದರೆನೇ ಬಾಳ್ವೆಯು ಬೆಳಗಬಹುದು. ಜೀವಿಸಿರುವ ಆಥವಾ ಯಾವುದೇ ನಿರ್ಜೀವ ವಸ್ತುವಿನಿಂದಲೂ ಕೆಲವೊಮ್ಮೆ ನಮಗೆ ತುಂಬಾ ಪ್ರಯೋಜನ ಸಿಗುವುದು. ಎಷ್ಟೇ ಅಲ್ಪಬೆಲೆಯ ಹುಲ್ಲು ಕಡ್ಡಿಯಾದರೂ ಆಗತ್ಯ ಬಿರುವಲ್ಲಿ ಅದರ ಮಹತ್ವ ಪರ್ವತ ಗಾತ್ರವೆಂದೆನಿಸುವುದು. ಯಾವ ವಸ್ತುವಿನ ಬೆಲೆಯಾದರೂ ಉಪಯೋಗವಾದರೂ ಆದು ನಮ್ಮ ಕೈಯಲ್ಲಿಲ್ಲದಾಗಲೇ ತಿಳಿಯುವುದು. ಬಸವೇಶ್ವರರು ಸೋಮೇಶ್ವರ ಶತಕದಲ್ಲಿ, "ಕಾಲೋಚಿತ ಕೈದಿದರ್ ತೃಣವೇ ಪರ್ವತವಲ್ಲವೇ?" ಎಂದು ವಸ್ತು ಸ್ಥಿತಿಯ ಮಹತ್ತಿಕೆಯನ್ನು ಎತ್ತಿ ತೋರಿದ್ದಾರೆ. ಎಂತಹ ನಿಷ್ಪ್ರಯೋಜಕ ಜೀವಿಯೂ ನಮಗೆ ಕೆಲವೊಮ್ಮೆ ಅತ್ಯಗತ್ಯನೆನಿಸುತ್ತಾನೆ. ನಮ್ಮಿಂದ ಸಾಧಿಸಲಸಾಧ್ಯವಾದ ಕಾರ್ಯವನ್ನು ಅವನ ಸಹಕಾರದಿಂದ ಸಾಧಿಸಿಕೊಳ್ಳುತ್ತೇವೆ. ಹೀಗಿರುವಾಗ ನಾವು ಯಾರೊಬ್ಬರನ್ನೂ ಕೀಳುಭಾವದಿಂದ ನಿರ್ಲಕ್ಷಿಸಿ ನಡೆಯಬಾರದು. ತಿರಸ್ಕರಿಸಲಾಗದು. ಜಗತ್ತಿನ ಜೀವ ಕೋಟಿಗಳಲ್ಲಿ ಮಾನವನು ಬುದ್ಧ ಜೀವಿ. ಆತನಲ್ಲಿ ಜೀವನದ ಧ್ಯೇಯೋದರ್ಶಗಳನ್ನೂ ತಿಳಿಯುವ ವಿವೇಕವಿದೆ. ಪೂರ್ವಾರ್ಜಿತ ಪುಣ್ಯದಿಂದ ಪಡೆದ ಈ ನರಜನ್ಮದ ಸಫಲತೆಯ ಕೊನೆಳಂಡು ಸರಮಾತ್ಮನ ಭಕ್ತವೆಂಬುಗಳ ನಾಲ್ಕಲ್ಲಿ ಮಣಿಇಟ್ಟು ಕುಳ್ಳಿರುವ ಇಚ್ಛೆಇರುವಲ್ಲಿ, ನಮ್ಮಿಂದ ಸಾಧ್ಯವಿದ್ದಷ್ಟು ಧರ್ಮ ದಾರಿಯಲ್ಲೇ ಮುನ್ನಡೆಯಬೇಕು. ನಮ್ಮ ನೆರೆ ಜನರಲ್ಲಿ ಪ್ರೀತಿ ವಿಶ್ವಾಸವನ್ನಿಟ್ಟುಕೊಂಡು ಕಷ್ಟ ಸುಖದಲ್ಲಿ ಒಬ್ಬರಿಗೊಬ್ಬರು ಕೂಡಿ ಬಾಳುವ ಬುದ್ಧಿಯನ್ನೂ ಬಲಪಡಿಸಬೇಕು. ನೆರೆ ಜನರ ಹೆಚ್ಚನ್ನು ಕಂಡು ತಾನು ಮೆಚ್ಚುತಿರಬೇಕಲ್ಲದೆ ಅಲ್ಲಿ ಕಿಚ್ಚನ್ನು ಕಾರುವುದಲ್ಲ. ನಮ್ಮ ಬಾಳಿನ ಭವಿತವ್ಯವು ಬೆಳಗಬೇಕಾದರೆ ಎಳವೆಯಲ್ಲೇ ಸೇರಿ ಬಾಳುವ ಸಹಜೀವನವನ್ನು ಅಧ್ಯಯನಿಸಬೇಕು. ಪ್ರಕೃತಿಯ ಪ್ರತಿಜೀವಿಗಳೂ ಅವುಗಳ ಜೀವನಾವಧಿಯಲ್ಲಿ ಸಂಘಜೀವನದ ಆದರ್ಶವನ್ನು ತೋರುತ್ತಿವೆ. ಕ್ರಿಮಿಕೀಟಗಳ ಬಳಗದಲ್ಲಿರುವ ಇರುವೆ, ಜೇನುನೊಣಗಳೇ ನಮಗೆ ಪ್ರತ್ಯಕ್ಷ ಸಾಕ್ಷಿಯಾಗಿವೆ. ಸ್ವಯಂ ಸುಖ ಸಾಧನೆಗಾಗಿ ಅನ್ಯರನ್ನು ಪೀಡಿಸುವುದು ಸರ್ವಥಾ ಸಲ್ಲದು. ಅತಿ ಆಶಾತುರರಾದಾಗ ನಮ್ಮ ಮನಸ್ಸು ತನ್ನಲ್ಲಿ ಇಲ್ಲದುದನ್ನು ಪಡೆಯಲು ಹೊಂಚುತ್ತಿರುವುದು. ತಾನು ತನ್ನದೆಂಬ ಮಮಕಾರಭಾವವು ನಮ್ಮ ಮನಸ್ಸಿನ್ನು ಸ್ವತ್ತುವಂದು ಬಂಧಿಸಿದಾಗ ಅನ್ಯಾಯವು ಅನಿವಾರ್ಯವಾಗಿಯೇ ಆಗುವುದು. ಆಗ ಇನ್ನೊಬ್ಬರಿಗೆ ನೆರವಾಗುವ ಬುದ್ಧಿ ನಮ್ಮಲ್ಲಿ ಎಂದೂ ಬರದು. ಜನ್ಮದಾತನು ನಮ್ಮ ಜೀವನದ ಪಡಿಯನ್ನು ಹುಟ್ಟಿಸಿದಾಗಲೇ ಮುಂಗಡವಾಗಿ ಕೊಟ್ಟಿರುವನು. ದೀನ ದುಃಖಿತರ ಮೇಲಿನ ಕರುಣೆಯಿಂದ ಮಾಡಿದ ದಾನಧರ್ಮದಿಂದಾಗಿ ಕೂಡಿಟ್ಟ ಸಂಪತ್ತು ಬರಿದಾಗಬಹುದೆಂಬ ಭಯವು ನಮಗಿರಬಾರದು. ಪರರ ಕಷ್ಟಸುಖವನ್ನು ತನ್ನದೆಂದೇ ಕಂಡು ಕನಿಕರದಿಂದ ಅವರಿಗೆ ಸಹಾಯವೀಯಬೇಕೇಬು ಉದಾರ ಭಾವವು ಮನಃಪೂರ್ವಕವಾಗಿ ಉಂಟಾಗಲು ಅನ್ಯರಿಗೆ ಸಹಾಯವೀಯಲು ಸಾಕಷ್ಟು ಸಾಮರ್ಥ್ಯವು ಪರಮಾತ್ಮನಿಂದ ಪರೋಕ್ಷವಾಗಿ ನಮಗೆ ದೊರೆಯುತ್ತದೆ. ನಾವು ದಾನಮಾಡಿದ ವಸ್ತುವಿನ ಮೌಲ್ಯವು ಮುಂದೆ ನಮ್ಮ ಬಾಳಿನ ಬೆಳಗಿನುವ ಕೈದೀವಿಗೆಯಾಗಿ ಉಪಯೋಗ ಬೀಳು ನೈದು. ಇದನ್ನು ಸರ್ವಜ್ಞನು ಜೆನ್ನಾಗಿ ಸಮರ್ಥಿಸಿದ್ದಾನೆ. "ಕೊಟ್ಟೆದ್ದ ತನಗೆ ಬೈಚಿಟ್ಟದ್ದು ಪರರಿಂಗೆ, ಕೊಟ್ಟು ತಾ ಕೆಟ್ಟೆನೆನಬೇಡ—ಉದು ಮುಂದೆ ಕಟ್ಟಿಪುದು ಬುತ್ತಿ" ಈ ಭೂತಿನ ಸಹಜಾರ್ಥವನ್ನು ಸುಧಿಸಿ ಮನದಟ್ಟುಮಾಡಿಕೊಂಡು ನಮ್ಮ ಜೀವನವನ್ನು ಪರಿವರ್ತಿಸಿಕೊಂಡರೆ ನೋಕ್ಷ ಕಾಂಕ್ಷೆಗೆಳಾಗಿ ನಡೆಯುವ ನಮ್ಮ ಬಾಳದಾರಿಯಲ್ಲಿ ಯಾವ ಅಡೆತಡೆಯೂ ಇರಲಾರದು. ಜೀವನದಲ್ಲಿ ಕ್ಷಣಿಕ ಸುಖದ ಸವಿಯನ್ನಪೇಕ್ಷಿಸಿ ನಾವು ತಪ್ಪು ದಾರಿಯನ್ನುತಾನಾಗಿ ತುಳಿಯುತ್ತೇವೆ. ಅನ್ಯಾಯ ಅತ್ಯಾಚಾರಿಗಳಾಗಿ ಮುನ್ನುಗ್ಗುತ್ತೇವೆ. ದಾನಧರ್ಮದಿಂದಾಗಿ ನಮ್ಮಲ್ಲಿರುವ ಐಸಿರಿಯು ಬರಿದಾಗಿ ಮುಂದೆ ನಾವು ಕಷ್ಟಪಡಬೇಕಾಗುವುದೇನೋ ಎಂಬ ಅಜ್ಞಾನ ಮನೋಭಾವದಿಂದ ದೀನ ದುಃಖಿತರ ಕಷ್ಟಗಳನ್ನು ಕಣ್ಣಾರೆ ಕಂಡೂ ನಾವು ಕಲುಕಿನಿರಾಗುತ್ತೇವೆ. ಇಂತಹ ಬುದ್ಧಿ ನಮ್ಮ ಮುಂದಿನ ಜೀವನದಲ್ಲಿ ನಾವು ನರಕ ಯಾತನೆಯನ್ನನುಭವಿಸಬೇಕಾದು ದಕ್ಕೊಂದು ಮುನ್ನುಡಿ. ಈ ರೀತಿಯು ಜೀವನ ನಿರ್ವಹಣೆಯಿಂದ ನಾವು ಬರೀ ಆಲ್ಪಾವಧಿಯ ಇಹಸುಖವನ್ನಷ್ಟೇ ಪಡೆಯಬಹುದಲ್ಲದೆ ಶಾಶ್ವತವಾದ ಪರಸುಖವನ್ನನುಭವಿಸುವಂತಿಲ್ಲ. ಜೀವನದಲ್ಲಿ ಕೈಲಾದಷ್ಟು ಸರ್ವಜನ ಸೇವೆ ಮಾಡುವುದು ಬುದ್ಧಿ ಜೀವಿಯ ಆದ್ಯ ಕರ್ತವ್ಯ ಕೆಲವರು ಸಹಾಯಕ್ಕಾಗಿಯೇ ಜೀವನ ಎಸೆದಿರಬೇಕು. ಇದರಿಂದ ಅಮಿತವಾದ ಕೀರ್ತಿಯನ್ನು ಗಳಿಸಬಹುದು. ಬರೀ ತೋರುವಿಕೆಗಾಗಿ ನಾವು ಭಕ್ತಿಯ ಸೋಗಿನಿಂದ ಕಲ್ಲಿನ ಲಿಂಗಕ್ಕೆ ಹರಕೆ, ಪಣ್ಣಾಕಾಯಿಯನ್ನು ಒಪ್ಪಿಸಿ ಪರಮಾತ್ಮನನ್ನು ಮೆಚ್ಚಿಸಬೇಕೆಂಬ ಹುಚ್ಚಿನಿಂದ ಎಷ್ಟೋ ಹಣ ವ್ಯಯವಾಪುತ್ತೇವೆ. ಇಂತಹ ಅಂಧ ಭಕ್ತರನ್ನು ಶ್ರೀ ಬಸವೇಶ್ವರರು ಜೆನ್ನಾಗಿ ಟೀಕಿಸಿದ್ದಾರೆ: "ಕಲ್ಲನಾಗರ ಕಂಡು ಹಾಲೆರೆವರಯ್ಯಾ, ದಿಟ್ಟಿದ ನಾಗರ ಕಂಡರೆ ಹೊಡೆ ಎಂಬರು; ಉಂಬಜಂಗಮ ಬಂದರೆ ನಡೆ ಎಂಬರು, ಉಣದ ಲಿಂಗಕೆ ಭೋಜನವ ಈವರು...." ಈ ಮಾತು ಎಷ್ಟೊಂದು ಮಾರ್ಮಿಕವೂ, ಅರ್ಥ ಪೂರ್ಣವೂ, ಅನರ್ಥನೀಯವೂ ಆಗಿದೆ! ಆದಿ ಮಧ್ಯಾಂತ ರಹಿತನಾದ ಜಗನ್ನಿಯಾಮಕನ ಸೃಷ್ಟಿಯೊಳಗಿರುವ ನಾವು ಅವನಿಗಾಗಿ ಹರಕೆ ಹಂಚುವುದೆಂದರೆ ಎಷ್ಟರ ಪರಿಗಿನ ತಿಳಿಗೇಡಿತನ ತುಂಬಿದ ಸಮುದ್ರವು ಮಳೆನೀರಿಗೆ ಉಕ್ಕೇರುವುದುಂಟೆ? ನಮಲ್ಲಿ ಸಂಪತ್ತು ಸಮೃದ್ಧಿಯಾಗಿದ್ದರೆ ಅದನ್ನು ದೇವರಿಗೆ ಕೊಡಬೇಕಾಗಿಲ್ಲ. ನಮಗಾ ಸಂಪತ್ತು ಎಲ್ಲಿಂದ ಬಂತು? ಅದನ್ನು ಒದಗಿಸಿ ಕೊಟ್ಟವರಾರು? ದೇವನಿತ್ತುದನೆ ಮರಳಿ ಅವನಿಗೀಯುವುದೆಂದರೆ ಜ್ಞಾನಾಂಧತೆಯಲ್ಲದೆನೇ? ದೇವರು ನಮಗಿತ್ತ ಧನಕನಕದಿಂದ ತನ್ನ ಮೂರ್ತಿಯನಿಲಿಸಿ ಗುಡಿಕಟ್ಟೆ ಹರಕೆ ಪಡೆಯಬೇಕೆಂದು ನಮ್ಮಿಂದ ಅಪೇಕ್ಷಿಸುತ್ತಿಲ್ಲ. ಸರ್ವಾಂತರ್ಯಾಮಿ ಯಾದವನನ್ನು ಹಿಡಿತಂದು ಒಂದು ಗುಡಿಯೊಳಗೆ ಬಂಧಿಸಿ ತಾನಿತ್ತ ಹರಕೆ ಹಣ್ಣುಕಾಯಿಗೆ ಒಲಿದು ತನ್ನ ಇಷ್ಟಾರ್ಥವನ್ನು ಕೈಗೂಡಿಸಬೇಕೆಂದು ಬೇಡುವ ಜನ ಮೂರ್ಖರೆಂದರೆ ಮುನಿಯಲಾರರಿಷ್ಟೆ? ನಮ್ಮ ಬಾಳಿಗೊದಗಿರುವ ಸಂಪತ್ತು ಆಪಾದಕ ಸ್ಥಿತಿಯಲ್ಲಿರುವ ಬಡ ಜನತೆಯ ಪೋಷಣೆಗಾಗಿದೆಯಲ್ಲದೆ ದೇವರ ಹೊಟ್ಟೆ ತಣಿಸಲಿಕ್ಕಲ್ಲ! ದೇವನು ಬಡವನೆಂದು ನಂಬಿ ಅವನ ಹೊಟ್ಟೆ ತುಂಬಿಸುವ ಯತ್ನ ನಮ್ಮ ಬಾಳಿಗೆ ಬರದಿರಲಿ! ದೇವರಿಗೆ ದಾನ ಧರ್ಮವಾಗಿ ವಿನಿಯೋಗಿಸುವ ನಿಧಿಯನ್ನು ಬಡ ಜನತೆಯ ಕಷ್ಟ ನಿವಾರಣೆಗಾಗಿ ಬಿಚ್ಚುವ ಮನಸ್ಸಿನಿಂದ ಕೈ ಎತ್ತಿ ದಾನನೀಡಿದರೆ ಅದರಿಂದ ಮಹತ್ತಾದ ಪುಣ್ಯಾರ್ಜನೆಯು ನಮ್ಮ ಬಾಳಿಗೊದಗಬಹುದು. ಈ ಮೌಲ್ಯವು ನೋಕ್ಷ ಸುಖವನ್ನನುಭವಿಸುವಲ್ಲಿ ಸಹಾಯ ನಿಧಿಯಾಗಿ ನೆರವಾಗಬಹುದು. ಇದರಿಂದ ದೀನದಯಾಪರನಾದ ಭಕ್ತಾದೀನನನ್ನು ಮೆಚ್ಚಿಸಲು ಸುಲಭಸಾಧ್ಯ. ಇದು ನಿತ್ಯ ಸತ್ಯವೆಂಬುದನ್ನು ಸ್ವಾಮಿ ವಿವೇಕಾನಂದರು ಹೇಳಿದ ಮುತ್ತಿನಂಥಾ ಮಾತಿನಿಂದ ಒಪ್ಪಿಕೊಳ್ಳಬಹುದು. "ಮಾತೃದೇವೋಭವ! ಪಿತೃದೇವೋಭವ! ಎನ್ನುವ ಜನರು ಮರುಳರು ಇದು ಸರ್ವಥಾ ಸತ್ಯವಲ್ಲ! ದೀನ ದೇವೋ ಭವ! ದರಿದ್ರ ದೇವೋ ಭ! ವ ಪಾಪಿ ದೇವೋ ಭವ!;—ದುಃಖಗಳೆನ್ನ ದೇವರು, ದಂದ್ರರೆನ್ನ ದೇವರು. ಪಾಪಿಗಳೆನ್ನ ದೇವರು ನಾನವರ ಸೇವೆಗಾಗಿ ನನ್ನಾತ್ಮವನ್ನು ಧಾರೆಯೆರೆಯುವೆನು. ಭರತ ಖಂಡದ ಉದ್ಧಾರಕ್ಕಾಗಿ ಕೋಟಿಜನ್ಮಗಳೆನ್ನೆತ್ತಿ ಬರುವೆನು. ದರಿದ್ರರ ಸೇವೆಗಾಗಿ ತನ್ನ ಸ್ವಂತ ಆತ್ಮಮುಕ್ತಿಯನ್ನೂ ಈಡಾಡುವೆನು. ಜಗತ್ತಿನಲ್ಲಿ ಕ್ರಿಮಿಯೊಂದು ಕಷ್ಟದಲ್ಲಿರುವ ತನಕ ನಾನು ಸುಖವನ್ನು ಬಯಸೆನು. ಕೀಟವೊಂದು ಬಂಧನದಲ್ಲಿರುವವರೆಗೆ ನನಗೆ ಮುಕ್ತಿ ಬೇಡ!" ಎಂದು ದೇಶ ಭಕ್ತರೂ, ಮಹಾ ಯೋಗಿಯೂ, ಜ್ಞಾನಿ ಸಂಪನ್ನರೂ ಆದ ವಿವೇಕಾನಂದರು ಹೊಟ್ಟಿಬಟ್ಟೆಗಿಲ್ಲದೆ ಕಂಗೆಟ್ಟಿರುವ ಬಡ ಜನತೆಯು ನರಕಯಾತನೆಯನ್ನು ಕಂಡು ಮರುಗಿದ್ದಾರೆ. ಸರ್ವ ಸಾಕ್ಷಿ ಸತ್ಯವಾಗಿಯೂ ಬಡವರ ಗುಡಿಯಲ್ಲೆ ಜನದೊಡೆಯನ ವಾಸಸ್ಥಾನವಾಗಿದೆ. ಜನತಾ ಸೇವೆಯೇ ಜನಾರ್ಧನನನ್ನು ಮೆಚ್ಚಿಸುವ ಮೂಲ. ನಮ್ಮ ಜೀವನಕ್ಕಾಗಿ ನಾವು ಏನನ್ನೂ ಗಳಿಸಬೇಕಾಗಿಲ್ಲ. "ನಾಳೆಗಾಗಿ ನೀನು ಏನನ್ನೂ ಚಿಂತಿಸಬೇಡ; ಆಯಾಯ ದಿನದ ತಾಪತ್ರಯಗಳೇ ನಿನ ದಿನಕ್ಕೆ ಸಾಕಷ್ಟಿವೆ! ನಿನಗೆ ಏನೆಲ್ಲ ಬೇಕು ಎಂಬುದು ಪರಮಾತ್ಮನಿಗೆಲ್ಲ ಗೊತ್ತಿದೆ" ಎಂದು ಮಹಾ ಪುರುಷನಾದ ಏಸುಕ್ರಿಸ್ತನೇ ಹೇಳಿರುವನು. ಭಕ್ತನಿಧಿ ಪುರಂದರ ದಾಸರೆಂದಂತೆ, "ಹುಟ್ಟಿಸಿದ ಸ್ವಾಮಿತಾ ಹೊಣೆಗಾರನಾಗಿರಲು —" ನಾವೇಕೆ ಧರ್ಮದಾರಿಯನ್ನು ಬಿಟ್ಟು ಅನ್ಯಾಯ, ಮೋಸ ವಂಚಕರಾಗಿ ಹಣಗಳಿಸುವ ಚಿಂತನೆಯಿಂದ ಪಾಪವನ್ನೂ ಸಂಪಾದಿಸಿಕೊಳ್ಳಬೇಕು? ಪ್ರಕೃತಿಯ ಪ್ರತಿವಸ್ತುವೂ ನಮಗೆ ಸಹಕಾರ ತತ್ವವನ್ನು ಬೋಧಿಸುತ್ತಿರುವಾಗ ನಾವೂ ಜೀವನದ ಸಫಲತೆ, ಸಾರ್ಥಕತೆಯ ಸುವಿಚಾರಿಗಳಾಗಿ ಬಾಳಿ ಬೇಳ್ಕೆಗಾಮಿಕರಾಗಿ ಉಳಿಯಬೇಕಾಗಿ ನಿಸ್ವಾರ್ಥ ಬುದ್ಧಿಯಿಂದ ಜೀವನದಲ್ಲಿ ಪರಹಿತಸಾಧಕರಾಗಿ ದೀನದಲಿತರ ಸೇವೆಗಾಗಿ, ಬಾಳನ್ನು ವಿನಿಸಲಿರಿಸಿದ್ದು ಪರಹಿತವೇ ತನ್ನ ಹಿತವೆಂದು ತಿಳಿದ ಮಹಾತ್ಮರನೇಕರ ಜೀವನವೇ ನಮಗೊಂದು ಆದರ್ಶವಾಗಿರಲಿ! ದೀನ ಸೇವೆಯೇ ಈಶ ಸೇವೆಯೆಂದು ತಿಳಿದ ಮಹಾತ್ಮರ ಬಾಳು ನಮ್ಮ ಜೀವನದ ಮುನ್ನಡೆಗೊಂದು ಕೈದೀವಿಗೆ ಯಾಗಿರಲಿ. ಜನ ಸೇವಾ ಬುದ್ಧಿಯಿಂದಲೇ ನಮ್ಮ ಬಾಳು ಬೆಳಗಲಿ!

—ಶ್ರೀ ಕಡಂದಲೆ, ಜಯರಾಮ ಶೆಟ್ಟಿ.

ಕುಮಾರಿ ಬಿಲ್ಲಿಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಆವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ.ಪಿ.ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40.

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

## ನಾಟಕಗಳ ಮೂಲ

(೨ನೇ ಪುಟದಿಂದ)

ತಿದ್ದರೆಂದು ಊಹಿಸಬಹುದು. ಇದಕ್ಕೆ, ಕನ್ನಡ ಕಾವ್ಯಗಳಲ್ಲಿ ಕಂಡು ಬರುವ ನಾಟಕೀಯತೆಯೂ ಒಂದು ಸಾಧನವಾಗ ಬಹುದು. ೧೧೦೦ರಲ್ಲಿದ್ದ ನಾಗಚಂದ್ರಮ ತನ್ನ ಕಾವ್ಯಗಳಲ್ಲಿ ನೃತ್ಯ, ನಾಟಕಗಳ ರಂಗಭೂಮಿಗಳ ಉತ್ಪ್ರೇಕ್ಷೆಗಳನ್ನು ಬಳ ಸಿದ್ದಾನೆ. ನೇಮಿಚಂದ್ರ (೧೧೭೦) ಇಂದ್ರ ಲೋಕದಲ್ಲಿ ತಿಮಿರ ಜವನಿಕೆ ಓಸರಿಸಿ ನರ್ತನ ಮಾಡಿದ್ದನ್ನು ವಿವರವಾಗಿ, ಕಣ್ಣಿಗೆ ಕಟ್ಟುವಂತೆ ವರ್ಣಿಸಿದ್ದಾನೆ. ರನ್ನನ ಗದಾ ಯುದ್ಧ (೯೯೩) ರಾಘವಾಂಕನ ಹರಿಶ್ಚಂದ್ರ ಕಾವ್ಯ (೧೧೬೫)ಗಳು ನಾಟಕಗಳಂತೆಯೇ ಇವೆ. ರತ್ನಾಕರ ವರ್ಣಯು ಭರತೇಶ ವೈಭವದಲ್ಲಿ ನಾಟಕರಂಗ ಗಳನ್ನು ಸುಂದರವಾಗಿ ವರ್ಣಿಸಿದ್ದಾನೆ. (೧೭೫೭) ಗೋವಿಂದ ಪೈದ್ಯ (೧೬೪೪)ನು ಕಂಠೀರವನರಸರಾಜ ವಿಜಯದಲ್ಲಿ ನಾಟ್ಯರಂಗವನ್ನು ವರ್ಣಿಸಿದ್ದಾನೆ.

ಇವುಗಳಿಂದ ಕನ್ನಡಿಗರಿಗೆ ನಾಟಕದ ಪರಿಚಯವಿಲ್ಲವೆಂದರೆ, ಅದು ನಂಬಲಾ ಗದ ಮಾತು. ಆದರೂ ಶಾಸ್ತ್ರೀಯ ದೃಷ್ಟಿಯ ನಾಟಕಗಳು ಮಾತ್ರ ಇರಲಿಲ್ಲ ವೆನ್ನಬಹುದೋ ಏನೋ ಆಥವಾ ಇದ್ದರೂ ಕಾಲಗರ್ಭದಲ್ಲಿ ಅಡಗಿರಲೂ ಬಹುದು.

ಮೈಸೂರ ಅರಸರ ಉದಾರಾಶ್ರಯ ದಿಂದ ರಚಿತವಾದ ಸಂಸ್ಕೃತ ನಾಟಕ ಗಳ ಭಾಷಾಂತರಗಳನ್ನು ಬಿಟ್ಟರೆ ಕನ್ನಡ ದಲ್ಲಿ ಶಾಸ್ತ್ರೀಯ ನಾಟಕಗಳು ಇಲ್ಲವೇ ಇಲ್ಲವೆನ್ನಬಹುದು. ಇಂದು ಪ್ರಚಾರದಲ್ಲಿ ರುವ ನಾಟಕಗಳೆಂಬ ಕೃತಿಗಳು ಅಂಗ್ಲ ಸಾಹಿತ್ಯದ ಪ್ರಭಾವದಿಂದ ಬಂದುವೆಂದು ಹೇಳಬಹುದು. ಇವುಗಳಲ್ಲಿ ದೃಶ್ಯ ಕಾವ್ಯ ಗಳಲ್ಲಿರಬೇಕೆಂದು ಸಂಸ್ಕೃತ ಅಲಂಕಾರ ಗ್ರಂಥಗಳಲ್ಲಿ ಹೇಳಿದ ಯಾವ ಲಕ್ಷಣವೂ ಸರಿಯಾಗಿ ಹೊಂದಿಕೊಳ್ಳುವುದಿಲ್ಲವೆನ್ನ ಬಹುದು, ಕನ್ನಡದಲ್ಲಿ ನಾನಾ ವಿಧದ ಅಲಂಕಾರ ಗ್ರಂಥಗಳು ಹುಟ್ಟಿದರೂ, ನಾಟ್ಯದಲ್ಲಿ ಮುಖ್ಯವಾದ ರಸಸಂಬಂಧಿ ಗ್ರಂಥಗಳಿದ್ದರೂ, ನಾಟಕದ ಲಕ್ಷಣಾವಿ

ನೆರೆಯ ನಿಯಂತ್ರಣಕ್ಕಾಗಿ ಸರಕಾರವು ಉತ್ತರ ಭಾರತದಲ್ಲಿ ಅನೇಕ ಕ್ರಮಗಳನ್ನು ಕೈಗೊಂಡಿತು. ಚಿತ್ರದಲ್ಲಿ ಅದರ ಅನೇಕ ಮುಖಗಳನ್ನು ಕಾಣಬಹುದು.

ಗಳನ್ನು ವಿವರಿಸುವ ಗ್ರಂಥ ವಿದುವರೆಗೂ ಹುಟ್ಟಿಲ್ಲ. ಆಧುನಿಕ ನಾಟಕಗಳ ಬೆಳೆ ಯೂ ಕಾದಂಬರಿಗಳಂತೆ ಹೇರಳವಾಗಿರ ದೆ ಮಿತವಾಗಿವೆ. ಆದರೆ, ಇಂದಿನ ನಾಟ ಕಗಳಲ್ಲಿ ಎಲ್ಲವನ್ನೂ ಇದ್ದಕ್ಕೆ ಇದ್ದಂತೆ ಅಭಿನಯಿಸುವುದು ಸಾಧ್ಯವಿಲ್ಲ. ರಂಗಭೂ ಮಿಗಳಿಗಾಗಿ ರಂಗಭೂಮಿಗಳಲ್ಲಿ ಅನುಭ ವವಿರುವವರೇ ನಾಟಕ ಬರೆಯುವುದರಿಂ ದ, ನಾಟಕಗಳು ಪ್ರದರ್ಶನ ಯೋಗ್ಯವಾ ಗುತ್ತವೆ. ನಾಟಕಗಳಲ್ಲಿ ಪ್ರತಿಯೊಂದು ಸನ್ನಿವೇಶವೂ ಮುಂದಿನ ಕಥೆಯನ್ನು ಕು ತೂಹಲದಿಂದ ನಿರೀಕ್ಷಿಸುವಂತೆ ರಚಿತ ವಾದರೆ, ಅದು ಜನಪ್ರಿಯವಾಗುವುದು.

ನಮ್ಮಲ್ಲಿ ನಾಟಕ ಕಂಪೆನಿಗಳು ನಾಟ ಕವನ್ನು ಪ್ರದರ್ಶಿಸುತ್ತಿವೆ. ಬಯಲಾಟದ ಮೇಳಗಳು ಬಯಲಾಟಗಳನ್ನು ಆಡುತ್ತ ವೆ. ವಿಜ್ಞಾನದ ಪ್ರಾದುರ್ಭಾವದಿಂದ ಚಲಚಿತ್ರಗಳೂ ಇವೆ. ಇನ್ನೆಲ್ಲವುಗಳ ಮೂ ಲವೂ 'ನಾಟಕ'ವೇ ನಾಟಕೀಯತೆ ಯಿಂದ ಕೂಡಿದ ಕಥಾ ವಸ್ತು. ಈ ತೂಹಲ ಕೆರಳಿಸುವಂತೆ ಜೋ ಡಿಸಿದ ಸನ್ನಿವೇಶಗಳು, ಉತ್ತಮ ಮಟ್ಟದ ಅಭಿನಯ; ಶಮ್ಮ ಮಾತುಗಳನ್ನು ನಿಗ ರ್ಗಳವಾಗಿ ಹರಿಯಿಸಬಲ್ಲ ನಟರು ಇವ ರಿಂದ ಕೂಡಿದುದು ಜನ ಮೆಚ್ಚಬಹುದಾ ದ ನಾಟಕವಾಗಬಲ್ಲುದು. ಕಥೆಬರೆಯುವ ಕವಿ ರಂಗಭೂಮಿಯಲ್ಲಿ ನುರಿತವನಿದ್ದು, ಯೋಗ್ಯನಾಗಿದ್ದ, ಶಬ್ದ ಶಾಸ್ತ್ರ ನಾಟಕ ಶಾಸ್ತ್ರಗಳನ್ನು ಅರಿತನನಾಗಿದ್ದರೆ, ಜನ ರ ಮೆಚ್ಚುಗೆಯನ್ನು ಹೇಗೆ ಪಡೆಯಬಹು ದೆಂದು ಸೂಕ್ಷ್ಮ ದೃಷ್ಟಿಯುಳ್ಳವನಾದರೆ ಅಂತಹ ನಾಟಕಗಳು ರಮಣೀಯವಾಗು ವುವು. ಕೇವಲ ಕಾಸಿಗಾಗಿ ನಾಟಕ ಬರೆ ದು ಅಭಿನಯಿಸಿ, ಕಂಪೆನಿಗಳು ಹಾಳಾ ದುವು ಎಂದು ಮರುಗಿದರೆ ಅದಕ್ಕೆ ಜನರೇಕೆ ಹೊಣೆಯಾಗ ಬೇಕು?

—ಎಸ್. ಗೋಪೀಚಂದರಾವ್,
ಉಡುಪಿ.

## ಗಾಯತ್ರಿ ಮಂತ್ರ

(೨ನೇ ಪುಟದಿಂದ)

ಪ್ರಾಪ್ತಿಗಾಗಿಯೂ ಉಪಯೋಗಿಸುವ ಮಂತ್ರವೆಂದು ತಿಳಿದಿರುವರು. ಈ ತೆರ ಬಳಕೆಯು ಅಪೂರ್ಣವೂ, ಏಕಾಂಗಿಯೂ ಆಗಿದೆ. ಇದರಿಂದ ಈ ರೀತಿಯ ವಿಶೇಷ ಶಕ್ತಿಗಳು ಪ್ರಾಪ್ತವಾಗುವುದಿಲ್ಲವೆಂಬ ಅಭಿ ಪ್ರಾಯವಲ್ಲ. ಈ ರೀತಿಯ ವಿಶೇಷ ಲಾ ಭಗಳು, ವಿಶಿಷ್ಟ ವ್ಯಕ್ತಿಗಳಿಗೆ, ವಿಶೇಷ ತಪದಿಂದ ವಿಶಿಷ್ಟ ಪರಿಸ್ಥಿತಿಗಳಲ್ಲಿ ಮಾತ್ರ ದೊರಕುವುದೆಂಬುದನ್ನು ತಿಳಿದಿರಬೇಕು. ನಾನವ ಜಾತಿಯ ಶಾರೀರಿಕ, ಮಾನಸಿ ಕ, ಆರ್ಥಿಕ, ಸಾಮಾಜಿಕ, ರಾಷ್ಟ್ರೀಯ, ಅಂತರ್ರಾಷ್ಟ್ರೀಯ ಸಮಸ್ಯೆಗಳನ್ನು ಪರಿ ಹರಿಸುವ ಶಿಕ್ಷಣ, ಆದರ್ಶ, ಸಿದ್ಧಾಂತಗ ಳನ್ನು ಅವರ ಪ್ರತಿಯೆಂದೂ ಪದವೂ ಪ್ರ ಕಾಶ ಪಡಿಸುವುದು. ಗಾಯತ್ರಿಯು ವಿಶ್ವ ಧರ್ಮವಾಗಿದೆ. ಗಾಯತ್ರಿಯೊಡನೆ ಜಗ ತ್ತಿನ ಸಮಸ್ತ ಗ್ರಂಥಗಳನ್ನು ತೂಗಿ ನೋ ಡಿದರೆ ಗಾಯತ್ರಿಯೇ ಒಂದು ತೂಕ ಹೆ ಚ್ಚಾಗುವುದು. ಮಾನವನು ಅನ್ಯ ಶಿಕ್ಷಣ ಗಳ ದೃಷ್ಟಿಯಿಂದ ಅಜ್ಞನಿದ್ದರೂ, ಗಾಯ ತ್ರಿಯ ಅಂತರ್ಗತವಾಗಿರುವ ಶಿಕ್ಷಣವ ನ್ನು ಪಡೆದಿರುವನಾದರೆ ಅವನು ಪೂರ್ಣ ವಿದ್ವಾಂಸನೆಂದೇ ಹೇಳಬಹುದು. ಇತರ ಶಿಕ್ಷಣಗಳು ಸಾಧನ, ಅನುಕೂಲತೆಗಳನ್ನು ಹೆಚ್ಚಿಸಬಹುದು. ಗಾಯತ್ರಿಯಾದರೋ ಜೀವನದಲ್ಲಿ ಜಯಿಸುವ ಕಲೆಯನ್ನೇ ಕಲಿ ಸುವುದು.

ನಾವು ನಮ್ಮ ಮಾನವ ಜನ್ಮದ ನಿಜ ವಾದ ಲಾಭ ಪಡೆಯಬೇಕಾದರೆ ಜೀವನ ವಿದ್ಯೆಯನ್ನು ತಿಳಿದಿರಬೇಕು. ಸುಖಿಗಳಾ ಗಬೇಕಾದರೆ ಸುಖ ಸಾಧನಗಳನ್ನು ಪ ಯೋಗಿಸುವ ಕಲೆಯನ್ನರಿಯಬೇಕು. ಈ ಜೀವನ ವಿದ್ಯೆಯಾದ ಗಾಯತ್ರಿಯಲ್ಲಿ ಬೀಜರೂಪದಲ್ಲಿರುವ ಸನ್ನಿಹಿತವಾಗಿರುವ ಸಿ ದ್ಧಾಂತಗಳನ್ನು ಗಾಯತ್ರೀ ಗೀತಾ, ಗಾ ಯತ್ರೀ ಸ್ಮೃತಿಗಳ ಆಧಾರದಿಂದ ಹೃದ ಯಂಗಮಗೊಳಿಸಿದೆ, ಆ ವ್ಯಕ್ತಿಯು ಸಾವಾನ್ಯ ಪರಿಸ್ಥಿತಿಗಳಲ್ಲಿದ್ದರೂ ಸ್ವರ್ಗೀ ಯ ಸುಖ ಶಾಂತಿಗಳನ್ನನುಭವಿಸಿ ತನ್ನ ಜ ನ್ಮವನ್ನು ಸಾರ್ಥಕಗೊಳಿಸುವನೆಂಬುದರಲ್ಲಿ ಎಳ್ಳಿನಷ್ಟೂ ಸಂದೇಹವಿಲ್ಲ.

—ಶ್ರೀ ಕೆ. ಪುರುಷೋತ್ತಮ ಮಲ್ಯ.

---

ಕುಂದಾಪುರ ಡಿ. ಮು. ಕೋರ್ಟಿನಲ್ಲಿ
O.S. 147/53 R.E.P. 1208/56

ವಾದಿಯು ಮೂಕನ್ನು ಸೆಡ್ತಿ ಅರ್ಜಿದಾರಳು. ಪ್ರತಿವಾದಿರು ಮುತ್ತಕ್ಕೆ ಸೆಡ್ತಿ ಕೂಡಾ 4 6 7 ನೆ ಪ್ರತಿವಾದಿರಿಗೆ ತಿಳಿಯಪಡಿಸುವುದೇನಂದರೆ,

4 ನೇ ಶಿನ್ನ ಸೆಟ್ಟಿ, ಮಂಜಮ್ಮ ಸೆಡ್ತಿ ಮಗ 6 ರಾಮಯ್ಯ ಸೆಟ್ಟಿ, 7 ಅನಂತ ಸೆಟ್ಟಿ ಇವರ ಪ್ರತಿವಾದಿ ತಂದೆ ಸೆಡ್ತಿ ಮಕ್ಕಳು ಇವರು ಪಾಪುರಿ ತಾಲೂಕು ಕೇದೂರು ಗ್ರಾಮವಲ್ಲಿ ರುವವರು.

ಮೇಲೆ ಹೇಳಿರುವಾದ ದಾವೆಯಲ್ಲಿ ಡಿಕ್ರಿ ಹೊಂದಿದವಳಾದ ವಾದಿಯು ಸ್ವಿರಾಸ್ತಿ ವಿಕ್ರಿ ಯದ ಬಗ್ಗೆ ಅರ್ಜಿ ದಾಕ್ಲು ಮಾಡಿದ್ದಾಳೆ ಅದ್ದ ರಿಂದ ವಿಕ್ರಿಯದ ಇಸ್ತಿಹಾರಿನ ಶರ್ತಗಳನ್ನು ಫಿರ್ಣಯಿಸಲಿಕ್ಕೆ ತಾರೀಕು 13—4—57 ಕ್ಕೆ ನಿಕ್ಷಯಿಸೋಣಾಗಿಯದೆಂತಾ ನಮಗೆ ಇದ ರಿಂದ ತಿಳಿಸೋಣಾಗುತ್ತದೆ.

ಕೋರ್ಟ ಹುಕುಂ ಪ್ರಕಾರ

ನೈ. ತೇಜಪ್ಪ ಸೆಟ್ಟಿ,
ಯಜ್ಞೋಕೇಟ್ ವಾದಿಳ ಕಡೆ.

ಕುಂದಾಪುರ, 1-4-57.


ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಅಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ

ಬೆಲೆ:— ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವ ಸ್ಥಳ:—

ನವಭಾರತ ಪುಸ್ತಕ ಭಂಡಾರ, ಉಡುಪಿ.


Edited, Printed & Published by K. H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post Without Prepayment.

# ನವಯುಗ

ಸಂಪುಟ ೩೬ VOL. 36

18—4—1957

ಸಂಚಿಕೆ ೩೨ NO. 38

## ಸರಕಾರಿ ಆಡಳಿತ

### ಕಾಂಗ್ರೆಸಿನ ವ್ಯವಹಾರ ದಾಖಲೆ ಹಾಗೂ ನೀತಿಯು ಅತ್ಯುತ್ತಮವಾಗಿದೆ

ಭಾರತದ ಸಾರ್ವತ್ರಿಕ ಚುನಾವಣೆ ಈಗಾಗಲೇ ಕೊನೆಗೊಂಡು, ಅಭೂತಪೂರ್ವ ವಿಜಯಿಯಾಗಿ, ಭಾರತದ ಸ್ವಾತಂತ್ರ್ಯಕ್ಕಾಗಿ ಹೆಣಗಾಡಿದ ಜನತೆಯು ನೆಚ್ಚಿನ ಪಕ್ಷ ಭಾರತ ರಾಷ್ಟ್ರೀಯ ಕಾಂಗ್ರೆಸ್ಸೇ ಕದಿನೆರಡು ಪ್ರಾಂತ್ಯಗಳಲ್ಲಿ ಸರಕಾರ ರಚಿಸುವಷ್ಟು ಸಬಲವಾಗಿದೆ. ಸ್ವಾತಂತ್ರ್ಯಕ್ಕಾಗಿ ಸುಮಾರು ೬೨ ವರ್ಷಗಳ ತನಕ ಎಂತಹ ಎಡರು ತೊಡರುಗಳನ್ನಾದರೂ ಸಹಿಸಿಕೊಂಡು ಅವ್ಯಾಹತವಾಗಿ ಹೋರಾಟ ನಡೆಸಿ, ತನ್ನ ಧ್ಯೇಯ ಸಾಧನೆಯಲ್ಲಿ ಜಯಶಾಲಿಯಾದ ರಾಷ್ಟ್ರೀಯ ಕಾಂಗ್ರೆಸ್ಸನ್ನೇ ತನ್ನೆ ಆಳುವ ಪಕ್ಷವಾಗಿ ಚುನಾಯಿಸಿ, ಜನತೆ ಕೃತಜ್ಞತೆಯನ್ನು ತೋರ್ಪಡಿಸಿದೆ ಕೇರಳದ ಜನತೆ ಮಾತ್ರ ಕಾಂಗ್ರೆಸ್ಸನ್ನು ನಂಬಲಿಲ್ಲ! ಅದು ಸಮತಾವಾದಿ (Communist) ಪಕ್ಷವನ್ನೇ ತನ್ನ ಆಳುವ ಪಕ್ಷವಾಗಿ ಚುನಾಯಿಸಿದೆ ಒಂಭತ್ತದಲ್ಲಿ ಅನಿಶ್ಚಿತ ಪರಿಸ್ಥಿತಿ ಬಂದೊದಗಿತ್ತು. ೧೪೦ ಸ್ಥಾನಗಳಲ್ಲಿ ೫೧, ಪಲ್ಲಿನ ೨೨೬ ಮಹಾರಾಜರುಗಳ ಪಕ್ಷವಾದ ಗಣತಂತ್ರ ಪರಿಷತ್ತಿಗೂ, ೫೬ ಸ್ಥಾನಗಳು ಕಾಂಗ್ರೆಸ್ಸಿಗೂ ದೊರೆತುವು. ಗಣತಂತ್ರ ಪರಿಷತ್ತು ಪ್ರಜಾ ಸಮಾಜವಾದಿಗಳ ಹಾಗೂ ಇತರರ ಬೆಂಬಲ ಪಡೆದು, ಸರಕಾರ ರಚಿಸಿದ್ದರ ಆಶಾದೃಷ್ಟಿಯಿಂದ ನೋಡುತ್ತಿತ್ತು. "ಸಮಾಜವಾದಿ ಮಾದರಿಯ ಸಮಾಜ ರಚನೆ" ಧ್ಯೇಯ ಸಾಧಕರಾದ ಅನ್ಯಪಕ್ಷದವರಾದರೂತಮ್ಮ ಧ್ಯೇಯಗಳೆಡೆಗೆ ದೃಷ್ಟಿ ಹರಿಸದೇ ಮಾಜಿ "ದೊರೆ"ಗಳ ಪಕ್ಷಕ್ಕೆ ಬೆಂಬಲವಿತ್ತುದು ಶೋಚನೀಯ. ಆದರೆ, ಪ್ರಜಾಪ್ರಭುತ್ವದಲ್ಲಿ ದೃಢ ನಂಬುಗೆಯನ್ನಿಟ್ಟ ಇತರರು ಕಾಂಗ್ರೆಸ್ಸನ್ನು ಬೆಂಬಲಿಸಿ ಸರಕಾರ ರಚನೆಯಲ್ಲಿ ಕಾಂಗ್ರೆಸ್ಸಿನೊಂದಿಗೆ ಸಹಕಾರಿಯಾದುದರಿಂದ—ಒದಗಿದ್ದ ಬಿಕ್ಕಟ್ಟು ಕೊನೆಗೊಂಡಿತು. ತತ್ಪರಿಣಾಮವಾಗಿ ಒರಿಸ್ಸಾವು ಕಾಂಗ್ರೆಸ್ ಆಡಳಿತಕ್ಕೊಳಪಟ್ಟಿದೆ

ತನ್ನ ಹತ್ತು ವರ್ಷಗಳ ಆಳ್ವಿಕೆಯ ಕಾಲದಲ್ಲಿ ಅನೇಕ ಸಾರ್ವಜನಿಕ ಕಾರ್ಯಕ್ರಮಗಳನ್ನು ಕೈಗೊಂಡು ರಾಷ್ಟ್ರವನ್ನು ಪ್ರಗತಿ ಪಥದಲ್ಲಿ ಮುನ್ನಡೆಸಿಕೊಂಡು ಬಂದಿದೆ, ಕಾಂಗ್ರೆಸ್ ಅದರ ಜನಪ್ರಿಯತೆಯೇ, ಈಗಿನ ಅದರ ಸರಕಾರ ರಚನೆಯ ನಿದರ್ಶನ. ಪ್ರಥಮ ಪಂಚವರ್ಷೀಯ ಯೋಜನೆಯು ಯಶಸ್ವೀ ಮುಕ್ತಾಯವಾಗಿ ಇದೀಗ ೧೯೫೬ರಲ್ಲಿ ದ್ವಿತೀಯ ಯೋಜನೆ ಆರಂಭವಾಗಿದೆ ಈ ಯೋಜನೆಯ ಮೂಲಕ ರಾಷ್ಟ್ರದಲ್ಲಿ ರಾಜಕೀಯ, ಸಾಮಾಜಿಕ, ಕೃಷಿ, ವಿದ್ಯಾ ಸಂಬಂಧದ ಅಭಿವೃದ್ಧಿಗಳನ್ನುಂಟು ಮಾಡಬಹುದೆಂದು ಮನಗಂಡ ಕಾಂಗ್ರೆಸ್ ಸರಕಾರ ಈ ಕಾರ್ಯದಲ್ಲಿ ಪ್ರವರ್ಧಮಾನಿಯಾಯಿತು ಕಾಂಗ್ರೆಸ್ ಸರಕಾರವು ಕೈಕೊಂಡ ಈ ರಾಷ್ಟ್ರಾಭಿವೃದ್ಧಿಯ ಕಾರ್ಯಕ್ರಮಗಳಿಂದ ದೇಶದಲ್ಲುಂಟಾದ ನವ್ಯತೆಯ ಕೊನೆಲಿನ ಕುರಿತಾಗಿ ಬ್ರಿಟನಿನ ಕೂಲಿ ಕಾರ ಪಕ್ಷದ ಮುಂದಾಳು ಮಿ| ಎನ್ಯೂರಿನ್ ಬೇವಾನರು ಮುಕ್ತ ಕಂಠದಿಂದ ಪ್ರಶಂಸಿಸಿದ್ದಾರೆ ಅಲ್ಲದೇ ಅನೇಕ ವಿದೇಶೀ ನೇತೃಗಳು ತಮ್ಮ ಭಾರತ ಸಂದರ್ಶನ ಕಾಲದಲ್ಲಿ—ಭಾರತವು ಸ್ವತಂತ್ರೋತ್ತರ ಕಾಲದಲ್ಲಿ ಹೊಂದಿದ ಪ್ರಗತಿಯನ್ನು ಕಂಡು ಚಕಿತರಾಗಿದ್ದಾರೆ ರಶ್ಯವು ೧೯೧೭ರ ನಂತರ ಇದು ವರೆಗೆ ಸಾಧಿಸಿದ ಪ್ರಗತಿಯನ್ನು ಭಾರತ ೧೯೬೭ರಿಂದ ಈಗಿನ ಕಾಲದೊಳಗೆ ಸಾಧಿಸಿದೆಯೆಂದು ಹೇಳಲಾಗುತ್ತಿದೆ ಲಂಡನಿನ "ಮೆಂಚೆಸ್ಟರ್ ಗಾರ್ಡಿಯನ್" ಮುಕ್ತ ಪತ್ರಿಕೆಯು ಕಾಂಗ್ರೆಸ್ ಪಕ್ಷಕ್ಕೆ ಮತದಾತ್ತರವನ್ನು ತುಂಬಾ ಪ್ರಶಂಸಿಸಿ ಬರೆದಿದೆ.

ಭಾರತದ ವಿದೇಶ ನೀತಿಯು ಶಾಂತಿ, ಸೌಹಾರ್ದ, ಸಹ—ಅಸ್ತಿತ್ವಗಳ ತಳಹದಿಯಲ್ಲಿ ರಚಿತವಾಗಿದೆ ಅನೇಕ ವಿದೇಶೀ ಪ್ರಭೃತಿಗಳೂ ಭಾರತದ ವಿದೇಶ ಧೋರಣೆಗೆ ಮೆಚ್ಚುಗೆ ವ್ಯಕ್ತಪಡಿಸಿ, ತಾವೂ ಅದೇ ಆದರ್ಶವನ್ನಿಟ್ಟುಕೊಳ್ಳಲೆತ್ನಿಸಿದ್ದಾರೆ ಹೀಗಾಗಿ ಜಗತ್ತಿಗೆ, ಭಾರತ ಸರಕಾರದ—ಅರ್ಥಾತ್—ಕಾಂಗ್ರೆಸ್ ಸರಕಾರದ ವಿದೇಶ ನೀತಿ ಉಜ್ವಲ ಆದರ್ಶವಾಗಿದೆ. ಅಂತರ್ರಾಷ್ಟ್ರೀಯ ಸಮಸ್ಯೆಗಳ ಪರಿಹಾರದಲ್ಲಿ ಭಾರತವೂ ಭಾಗವಹಿಸಿ, ತನ್ನಿಂದಾದಷ್ಟು ಶ್ರಮಪಡುತ್ತಿದೆ ಕಳೆದ ೧೯೫೫ರ ಆವಡಿ ಅಧಿವೇಶನದಲ್ಲಿ ಕಾಂಗ್ರೆಸು ಸಮಾಜವಾದೀ ಮಾದರಿಯ ಸಮಾಜ Socialistic Pattern of Society) ರಚನೆಯನ್ನು ತನ್ನ ಮುಖ್ಯೋದ್ದೇಶಗಳಲ್ಲೊಂದಾಗಿ ಸ್ವೀಕರಿಸಿದೆ. ಅಹಿಂಸಾತ್ಮಕ, ಶಾಂತಿಯುತ ಧ್ಯೇಯ ಧೋರಣೆಗಳನ್ನಿಟ್ಟುಕೊಂಡು ಭಾರತ ರಾಷ್ಟ್ರದ ಏಳ್ಗೆಗಾಗಿ ತನ್ನ ಶಕ್ತಿಯಿಂದಾಗಿ ಶ್ರಮಿಸುತ್ತಿರುವ ಕಾಂಗ್ರೆಸ್ಸನ್ನು ಹೊಗಳಲಿಕ್ಕಷ್ಟು ಸಾಲದು ಅದಗ ಜನಪ್ರಿಯತೆ ಈ ಚುನಾವಣೆಯಲ್ಲೂ ವ್ಯಕ್ತವಾಗಿದೆ

ಸ್ವಾತಂತ್ರ್ಯಪೂರ್ವದ ಕಾಂಗ್ರೆಸ್ಸಿನ ಹೋರಾಟದ ಇತಿಹಾಸವನ್ನು—ಅರ್ಥಾತ್—ನಮ್ಮ ಸ್ವಾತಂತ್ರ್ಯದ ಹೋರಾಟದ ಇತಿಹಾಸವನ್ನು ಜನತೆ ಅರಿತಿರುವುದರ ವಶ್ಯ ಪರವಾಸ್ಯ ಬಂಧನದಲ್ಲಿ ಭಾರತೀಯರು ನರಳುತ್ತಿದ್ದಾಗ ಕಂಗೆಟ್ಟ ಜನತೆಗೆ ಯೋಗ್ಯ ಮಾರ್ಗದರ್ಶನ ಮಾಡಿ, ಸ್ವಾತಂತ್ರ್ಯದೆಡೆಗೆ ಕೊಂಡೊಯ್ದುದು ಕಾಂಗ್ರೆಸ್ಸು. ವಿದೇಶೀ ಆಡಳಿತೆಯಿಂದ ಭಾರತ ಭೂಮಿಯನ್ನು ಸ್ವತಂತ್ರಗೊಳಿಸುವ ಉದ್ದೇಶದಿಂದ ೧೮೮೫ರಲ್ಲಿ ಆಂಗ್ಲವ ಹಿರೀಯರೊಬ್ಬರ ಮುಂದಾಳ್ತನದಲ್ಲಿ ಸ್ಥಾಪಿತವಾದ ಮೊ-ಕಾಂಗ್ರೆಸ್. ನೊದಲು ಮಂದಗಾಮಿಗಳ ಹಾಗೂ ನಂತರ ಉಗ್ರವಾದಿಗಳ ಮುಂದಾಳ್ತನದಲ್ಲಿ ಅನುಕ್ರಮವಾಗಿ ಸ್ವದೇಶೀ ಚಳವಳಿ, ಹೋಮ್‌ರೂಲ್ ಚಳವಳಿಯನ್ನಾದು ನಡೆಸಿತು ಆ ಮೇಲೆ ಪಂಜಾಬಿನ ಹೆತ್ಮಾಕಾಂಡವನ್ನೂ, ವಿದೇಶೀಯರ ದಬ್ಬಾಳಿಕೆಯನ್ನೂ ವಿರೋಧಿಸಿ, ೧೯೨೦ರಲ್ಲಿ ಮಹಾತ್ಮಾಗಾಂಧೀಜಿಯವರು ಕಾಂಗ್ರೆಸ್ಸಿನ ಸೂತ್ರಧಾರಿಯಾಗಿ ಸ್ವಾತಂತ್ರ್ಯ ದೊರೆಯುವತನಕ, ಶಾಂತಿ, ಅಹಿಂಸೆಗಳ ಧ್ಯೇಯವನ್ನಿಟ್ಟುಕೊಂಡು ಅದನ್ನು ಮುನ್ನಡೆಸಿಕೊಂಡು ಹೋದರು ಕಾಂಗ್ರೆಸ್ಸಿನ ರಾಷ್ಟ್ರೀಯ ಚಳವಳಿಗೆ ರಾಷ್ಟ್ರವೂ ಬೆಂಬಲ ನೀಡಿ ವಿದೇಶೀ ಆಡಳಿತೆಯನ್ನು ವಿರೋಧಿಸಲು ಸಿದ್ಧವಾಯಿತು. ೧೯೩೭ರಲ್ಲಿ ರಾಷ್ಟ್ರಕ್ಕೆ ಹೊಸ 'ಸುಧಾರಣೆ'ಗಳನ್ನು ತಂದೊಡಂಬಡಿಸಿದ ಸೈಮನ್ ಸಮಿತಿಯನ್ನು ರಾಷ್ಟ್ರದ ಬೆಂಬಲದಿಂದ ಕಾಂಗ್ರೆಸ್ಸು ಬಹಿಷ್ಕರಿಸಿದ ದಲ್ಲದೆ, ೧೯೪೦ರಲ್ಲಿ ಸಂಪೂರ್ಣ ಸ್ವಾತಂತ್ರ್ಯ ಘೋಷಣೆಯನ್ನು ಮಾಡಿ ಉಪ್ಪಿನ ಕರನಿರಾಕರಣಾ ಕಾರ್ಯಾಚರಣೆಯನ್ನಾರಂಭಿಸಿತು ಚೇತನ ಜೀವನವಾಗಿ ನಿದ್ದೆಯಲ್ಲಿದ್ದ ಭಾರತೀಯ ಜನತೆಯನ್ನು ಚೈತನ್ಯಪೂರ್ಣವಾಗಿ ಮಾಡಿ, ದಶಕಗಳ ಅನವಸ್ಥೋತ್ಕರ್ಷಿಯನ್ನಿತ್ತು, ರಾಷ್ಟ್ರದ ಬಂಧನದ ಬಿಡುಗಡೆಯ ಹೆಣಾಟಕ್ಕೆ ಅಣಿ ಮಾಡಿಸಿದುದು ಕಾಂಗ್ರೆಸ್ಸು ಹೆರಿಜನೋದ್ಧಾರವ ಮೂಲಕ ರಾಷ್ಟ್ರದಲ್ಲಿ ಸಮಾನತೆಯ ಬೀಜವನ್ನು ಬಿತ್ತುವುದು ಕಾಂಗ್ರೆಸ್ಸಿನ ಮುಖ್ಯೋದ್ದೇಶಗಳಲ್ಲೊಂದು, ಹರಿಜನರ ಸಮಸ್ಯೆಗಳ ಪರಿಹಾರಾರ್ಥವಾಗಿ ಗಾಂಧೀಜಿ ಕಾಂಗ್ರೆಸ್ಸಿನ ಪ್ರತಿನಿಧಿಯಾಗಿ ಚಕ್ರವರ್ತಿಗೋಷ್ಮಿಯಲ್ಲಿ ಭಾಗಿಯಾದರು ಮೊದಲು ಅವರಿಗೆ ಜಯದೊರೆಯಾದಿದ್ದರೂ, ಕೊನೆಗೆ ಅವರೇ ವಿಜಯಿಯಾದರು ೧೯೩೭ರಲ್ಲಿ ಭಾರತದ ಎಂಟು ಪ್ರಾಂತಗಳಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರಕಾರಗಳು ಅಲ್ಪಕಾಲದಲ್ಲೇ ಜನಸ್ತೋಮವಾದ ಸಂಗತಿ, ನಮ್ಮಲ್ಲಿ ಹೆಚ್ಚಿನವರಿಗೆ ತಿಳಿದೇ ಇದೆ ದ್ವಿತೀಯ ಮಹಾಯುದ್ಧಕಾಲದಲ್ಲಿ ಆಂಗ್ಲರು ಯುದ್ಧ ನೀತಿಯನ್ನು ಖಂಡಿಸಿ ಪ್ರಾಂತೀಯ ಸರಕಾರಗಳು ರಾಜೀನಾಮೆ ಯಿತ್ತುವು ೧೯೪೦ರಲ್ಲಿ "ವೈಯಕ್ತಿಕ ಸತ್ಯಾಗ್ರಹ" ಚಳವಳಿಯನ್ನು ನಡೆಸಿ,

(ಉಳಿದಭಾಗ ಸಂಪುಟ ೩೭ರಲ್ಲಿ)

**SEASON DEPOSITS**

**ಸೀಸನ್ ಠೇವಣಾತಿಗಳು**

ಶೇ. 4% ದರ ಬಡ್ಡಿಯಲ್ಲಿ ಸೀಸನ್ ಠೇವಣಾತಿಗಳನ್ನು ಈಗ ಸ್ವೀಕರಿಸಲಾಗುವುದು.

ದೊಡ್ಡ ಡಿಪೊಜಿಟು ನೊಬಲಗುಗಳಿಗೆ ಸ್ಪೆಶಲ್ ಬಡ್ಡಿ ದರಗಳು.

ಹೆಚ್ಚಿನ ವಿವರಗಳಿಗೆ ನಮ್ಮನ್ನು ವಿಚಾರಿಸಿರಿ

**ದಿ ವಿಜಯ ಬೇಂಕ್ ಲಿಮಿಟೆಡ್**

ಪ್ರಧಾನ ಕಛೇರಿ ಮತ್ತು ಶಾಖೆಗಳು.

ಜುಮ್ಲಾ ಸಂಪತ್ತು (31—12—1956) | ರೂಪಾಯಿ 1 ಕೋಟಿಗೂ ಮಿಕ್ಕಿದೆ

## ನಗರ ನಿರ್ಮಾಣ

# ನಾಗರಿಕತೆಯ ಇತಿಹಾಸದೊಡನೆ ಬೆಳೆದು ಬಂದಿರುವ ಅಮೋಘ ಕಲೆ

ನಾಗರಿಕತೆಯು ಬೆಳೆದು ಬಂದಂತೆ, ಜನಜೀವನದ ಸ್ಥಿತಿಗತಿಗಳು ಬದಲಾಗುತ್ತ ಹೋದಂತೆ, ಜನಸಂಖ್ಯೆಯು ಅಧಿಕವಾಗುತ್ತ ಬಂದಂತೆ ಸಾಂಸ್ಕೃತಿಕ ಬೆಳವಣಿಗೆಯು ವಿಪುಲವಾದಂತೆ ದೇಶದ ಪ್ರಜಾಜನರ ಜೀವನ ಕ್ರಮಗಳೂ ಹಲವಾರು ವಿಧಗಳಲ್ಲಿ ಮಾರ್ಪಾಡು ಹೊಂದುತ್ತವೆ. ವಾಸಿಸುವ ಮನೆ, ಅಭ್ಯಾಸ, ಶಿಕ್ಷಣ, ನಡೆವಳಿಕೆ, ಆಚಾರ ವಿಚಾರಗಳು, ವಿನೋದ ಮತ್ತು ಉದ್ಯೋಗ ಮೊದಲಾದುವುಗಳಿಂದ ಇವು ವ್ಯಕ್ತಗೊಳ್ಳುತ್ತವೆ. ಬದಲಾಗುತ್ತಿರುವ ಪರಿಸ್ಥಿತಿಗೆ ಹೊಂದಿಕೊಂಡು ಪ್ರತಿಯೊಬ್ಬ ನಾಗರಿಕನೂ ಬಾಳಬೇಕಾಗುತ್ತದೆ. ಹಾಗೆ ಮಾಡಿಲ್ಲವಾದರೆ, ಆತನಿಗೆ ಯೋಗ್ಯ ಸ್ಥಾನವು ಸಿಗಲಾರದು. ಈ ರೀತಿಯಾಗಿ ಜನಜೀವನದ ಸ್ಥಿತಿಗತಿಗಳನ್ನು ಕಾಣುವಾಗ ನಮ್ಮ ದೃಷ್ಟಿಗೆ ಗೋಚರಿಸುವ ಬಹು ವಿಧಾನಗಳಲ್ಲಿ 'ಮನೆ'ಯೂ ಒಂದಾಗಿದೆ.

"ಅವನ ಮನೆಯನ್ನು ಕಂಡರೆ ಯಾರೂ ನೀರು ಮುಟ್ಟಲಿಕ್ಕಿಲ್ಲ"; "ಅಯ್ಯೋ ಆ ಮನೆಯಲ್ಲಿ ಹೇಗೆ ವಾಸಮಾಡುತ್ತಿದ್ದಾರೋ"; "ಆ ಮನೆಗಿಂತ ನಮ್ಮ ಹಟ್ಟಿಯೇ ಚಲೋದಾಗಿದೆ" ಎಂಬ ಮಾತುಗಳನ್ನು ನಾವು ಕೇಳುತ್ತೇವೆ. ಹಾಗೆಯೇ ಮನೆಯ ಅಚ್ಚುಕಟ್ಟಿನ ಕುರಿತಾಗಿಯೂ ಕೆಲಮಾತುಗಳು ನಮ್ಮ ಕಿವಿಗೆ ಬೀಳುತ್ತವೆ. ಶುಚಿಯಾದ ಮನೆ, ರುಚಿಯಾದ ಆಹಾರಗಳು ಮನುಷ್ಯನ ಆರೋಗ್ಯದ ಮೇಲೆ ಹೆಚ್ಚಿನ ಪರಿಣಾಮವನ್ನು ಮಾಡುತ್ತವೆ. ಆದುದರಿಂದ "ಗೃಹ ನಿರ್ಮಾಣ"ವೂ ಒಂದು ಸಂಸ್ಕೃತಿಯ ಪ್ರತೀಕ. ನಗರಗಳ ಆಕರ್ಷಣೆಗಳಿಗೆ ಅಲ್ಲಿನ ಗೃಹಗಳ ವೈವಿಧ್ಯವೂ ಒಂದು ಕಾರಣವಾಗಿದೆ. ಈ ಗೃಹಗಳ ನಿರ್ಮಾಣಕ್ಕೆ ಜನಸಂಖ್ಯೆಯ ಬಾಹುಲ್ಯವೂ, ಜನರ ಆವಶ್ಯಕತೆಗಳೂ ಕಾರಣವಾಗುತ್ತವೆ.

ಹೆಚ್ಚಿನ ಜನರ ವಾಸಕ್ಕಾಗಿ, ನಾಗರಿಕತೆಯ ರೂಪಗಳಾದ ಆಚಾರ ವಿಚಾರ ಆಹಾರಗಳಿಗಾಗಿ, ವಿನೋದ ಕೇಳಿಗಳಿಗಾಗಿ, ತಿಂಡಿತಿನಿಸುಗಳ ವಿತರಣೆಗಳಿಗಾಗಿ, ವಿದ್ಯಾಭ್ಯಾಸಕ್ಕಾಗಿ ಹೊಸ ಹೊಸ ಮಾದರಿಯ ಗೃಹಗಳು ಕಟ್ಟಲ್ಪಡುತ್ತವೆ. ದೇಶವು ಪ್ರಗತಿ ಪಥದಲ್ಲಿ ನಡೆಯುವಾಗ, ಕೈಗೊಳ್ಳುವ ರಾಜ್ಯಾಭಿವೃದ್ಧಿಯ ಯೋಜನೆಗಳಿಗಾಗಿಯೂ ಇಂತಹ ಗೃಹಗಳು ನಿರ್ಮಿಸಲ್ಪಡುತ್ತವೆ. ವ್ಯಾಪಾರಾಭಿವೃದ್ಧಿಯೂ ಇದಕ್ಕೆ ಸಹಕಾರಿಯಾಗಿದೆ. ಇವೆಲ್ಲ ಕಾರಣಗಳಿಂದಾಗಿ ಹಳ್ಳಿಗಳು ಪಟ್ಟಣಗಳಾಗಿ, ಪಟ್ಟಣಗಳು ನಗರಗಳಾಗಿ ರೂಪಾಂತರ ಹೊಂದುತ್ತವೆ.

ಒಂದು ಊರಲ್ಲಿ ಜನ ಸಂಖ್ಯೆಯು ಬೆಳೆದು ಬಂದರೆ, ಆ ಊರಲ್ಲಿ ಕಾನೆಗಳ ಆಭಾವವು ಕಂಡು ಬರುವುದು. ಆಗ ಹೆಚ್ಚಿನವರನ್ನು ಊರ ಹೊರಗೆ ಕಳುಹಿಸುವುದಕ್ಕಿಂತ ಅವರ ವಾಸ್ತವ್ಯಕ್ಕಾಗಿ ಅಲ್ಲಿಯೇ ಹೊಸ ಮನೆಗಳನ್ನು ಕಟ್ಟಿಸುವುದು ಅಥವಾ ಹಾಳಾದ ಮನೆಗಳನ್ನು ಸುಧಾರಿಸುವುದು ವಿಹಿತವೆಂದು ಕೌಟಿಲ್ಯನ ಅಭಿಪ್ರಾಯವಿದೆ. ಹೀಗಾದಲ್ಲಿ ನಗರಗಳು ಬೆಳೆದು ಬರುತ್ತವೆ.

'ನವನಗರ ನಿರ್ಮಾಣ'ವು ಅನೇಕರಿಗೆ ಉದ್ಯೋಗವನ್ನು ಒದಗಿಸಕೊಡುವುದಲ್ಲದೆ, ಸೈಗಾರಿಕೆಗಳಿಗೂ ಪ್ರೋತ್ಸಾಹವನ್ನೀಯುವುದು. ಗೃಹ ನಿರ್ಮಾಣೋಪಯೋಗಿ ವಸ್ತುಗಳ ಉತ್ಪಾದನೆಗೆ ಬೆಂಬಲ ನೀಡುವುದು. ಕಟ್ಟಡಗಳ ರೂಪ, ಶೈಲಿಗಳಲ್ಲಿ, ಕಲೆಗಳಲ್ಲಿ ಅಭಿವೃದ್ಧಿಗೆ ಕಾರಣವಾಗುವುದು.

ಭಾರತದಲ್ಲಿ ಏನಾದಿಕಾಲದಿಂದಲೂ ಈ 'ನಗರಗಳ ನಿರ್ಮಾಣ' ಕಾರ್ಯವು ನಡೆಯುತ್ತಿತ್ತೆಂದು ಕೇಳಬಹುದು. ಅದರೆ, ಪ್ರಾಯಶಃ ಪ್ರಾಚೀನಕಾಲದ ನಗರಗಳೆಲ್ಲವೂ ನದೀತೀರಗಳಲ್ಲಿಯೋ ಸಮುದ್ರ ಕಿನಾರೆಗಳಲ್ಲಿಯೋ ಇದ್ದಿರಬೇಕು. ಇದಕ್ಕೆ ಬಲವಾದ ಕಾರಣ, ವ್ಯಾಪಾರಾಭಿವೃದ್ಧಿಯೆಂದು ಹೇಳಬಹುದು. ಅದರೂ ಮುಂದಕ್ಕೆ ಒಳ ಪ್ರದೇಶಗಳಲ್ಲೂ ಒಂದಲ್ಲ ಒಂದು ಕಾರಣದಿಂದಾಗಿ ಕೊಸನಗರಗಳು ನಿರ್ಮಾಣಗೊಂಡುವು. ಆ ಪರಂಪರೆ ಇಂದಿನತನಕವೂ ನಡೆದುಬಂದಿದೆ.

ಮಹಾಭಾರತದ ಕಾಲದಲ್ಲಿ ಜರಾಸಂಧನು ಯಾದವರ ರಾಜಧಾನಿಯಾದ ಮಥುರೆಯನ್ನು ಆಕ್ರಮಿಸಿದ ಕಾರಣದಿಂದಾಗಿ ಶ್ರೀಕೃಷ್ಣನಿಗೂ ತನ್ನ ಶತ್ರುವಿನಿಂದ ತನ್ನವರನ್ನೂ ತನ್ನವರನ್ನೂ ಕ್ಷೇಮವಾಗಿರಿಸಲು ಇನ್ನೊಂದು ರಾಜಧಾನಿಯನ್ನು ಕಟ್ಟುವ ಆವಶ್ಯಕತೆ ಬಿತ್ತು. ಇದರ ಪರಿಣಾಮವಾಗಿ, ದ್ವಾರಕಾನಗರದ ನಿರ್ಮಾಣವಾಯಿತು. ಅದೇ ಕಾಲದಲ್ಲಿ ಪಾಂಡವ ಕೌರವರಲ್ಲಿ ಬೆಳೆದು ಬಂದ ದ್ವೇಷಾಗ್ನಿಯಿಂದಾಗಿ ರಾಜ್ಯವನ್ನು ಶಂಚಿಕೊಳ್ಳಬೇಕಾದ ಸಂದರ್ಭದಲ್ಲಿ "ಇಂದ್ರಪ್ರಸ್ಥ"ನೆಂಬ ಹೊಸ ರಾಜಧಾನಿಯನ್ನು ಕಟ್ಟಿಸಬೇಕಾಗಿ ಬಂತು. ಈ ಇಂದ್ರಪ್ರಸ್ಥನೇ ಮುಂದಕ್ಕೆ ದಿಲ್ಲಿಯೆಂಬ ಹೆಸರಿನಿಂದ ಕರೆಯಲ್ಪಟ್ಟಿತು. ಇಂದ್ರಪ್ರಸ್ಥವು ರಾಜಧಾನಿಯಾದಾಗ, "ಮಯ"ನೆಂಬ ಗಂಧರ್ವ ಶಿಲ್ಪಿಯು ಒಂದು ಸಭಾಮಂಟಪವನ್ನು ತಂದು ಧರ್ಮರಾಯನಿಗೆ ಒಪ್ಪಿಸಿದ ಸಂಗತಿ ಜನಜನಿತವಾಗಿದೆ. ಹೀಗೆಯೇ ಪ್ರಾರಂಭ ಕಾಲದಲ್ಲಿ ಕೇವಲ ರಾಜಕೀಯ ಕಾರಣಗಳಿಂದ ಬೆಳೆದು ಬಂದ ನಗರಗಳು ಕಾಲ ಕ್ರಮೇಣ ವ್ಯಾಪಾರ ದೃಷ್ಟಿಯಿಂದ ಬೆಳೆದುವು ದ್ವಾರಕೆಯು ಸಮುದ್ರತೀರದಲ್ಲಿದ್ದುದು ದೊಡ್ಡ ವ್ಯಾಪಾರ ಕೇಂದ್ರವಾಗಿ ಬೆಳೆದು ಈಜಿಪ್ಟ್ ಮತ್ತಿತರ ಪಶ್ಚಿಮ ದೇಶಗಳೊಂದಿಗೆ ವಾಣಿಜ್ಯ ವ್ಯವಹಾರಗಳನ್ನು ಮಾಡುತಿತ್ತೆಂದು ತಿಳಿಯುತ್ತವೆ.

ಆ ಕಾಲದಿಂದ ಈ ಕಾಲದ ವರೆಗೆ ಅನೇಕ ರಾಜ ಮನೆತನದವರು ಅಧಿಕಾರ ಪಡೆದರು, ಅಧಿಕಾರ ಚ್ಯುತರಾದರು. ಒಂದೊಂದು ರಾಜವಂಶದ ಅಧಿಕಾರಾವಧಿಯಲ್ಲಿ ಒಂದೊಂದು ನಗರವು ಖ್ಯಾತಿಯನ್ನು ಪಡೆಯಿತು. ಗುಪ್ತರ ಕಾಲದಲ್ಲಿ ಉಜ್ಜಯಿನಿ, ಹರ್ಷವರ್ಧನನ ಕಾಲದಲ್ಲಿ ಥಾನೇಶ್ವರ, ವಿಜಯನಗರದರಸರ ಆಳಿಕೆಯಲ್ಲಿ ವಿಜಯನಗರಗಳು ಕಟ್ಟಲ್ಪಟ್ಟುವು. ಮುಸ್ಲಿಮರ ಅಧಿಕಾರಾವಧಿಯಲ್ಲಿ ಹೈದರಾಬಾದು, ಜಾನ್‌ಪುರಗಳು ಆ ಕಾಲದ ನಾಗರಿಕತೆಗೆ ತಕ್ಕಂತೆ ನಿರ್ಮಾಣವಾದುವು. ಅಕ್ಬರನು ಫಾತೇಪುರ ಸಿಕ್ರಿಯನ್ನು ನಿರ್ಮಿಸಿದನು ರಾಣಾ ಪ್ರತಾಪಸಿಂಹನು ತನ್ನ ಚಿತ್ತೂರ ಕೋಟೆಯನ್ನು ಕಳೆದುಕೊಂಡ ನಂತರ, ತನ್ನ ತಂದೆಯ ಜ್ಞಾಪಕಾರ್ಥವಾಗಿ ಉದಯಪುರವನ್ನು ಕಟ್ಟಿಸಿದನು. ಮುಂದಕ್ಕೆ ಇದು ಸುಂದರ ನಗರೋವರಗಳಿಂದಲೂ ದಿವ್ಯ ದೇವಾಲಯಗಳಿಂದಲೂ ಕೂಡಿ, ದೊಡ್ಡ ನಗರವಾಗಿ ಬೆಳೆಯಿತು. ಅಂಬರಕೋಟೆಯಿಂದ ರಾಜಾ ಮಾನಸಿಂಗನು ತನ್ನ ರಾಜಧಾನಿಯನ್ನು ಜೈಪುರಕ್ಕೆ ಸ್ಥಾನಾಂತರೀಕರಿಸಿದಾಗ, ಅದರ ಕೀರ್ತಿ ದಶದಿಶೆಗಳಲ್ಲಿ ಹಬ್ಬಿತು. ಇಂದಿಗೂ ಈ ಎಲ್ಲ ನಗರಗಳು ಪ್ರಖ್ಯಾತವಿವೆ.

ಕನ್ನಡ ನಾಡಿನಲ್ಲಿಯೂ ರಾಷ್ಟ್ರಕೂಟರು ಮಾನ್ಯ ಖೇಡಕ್ಕೆ ರಾಜಧಾನಿಯನ್ನು ವರ್ಗಾಯಿಸಿದುದರಿಂದ, ಆ ಪಟ್ಟಣವು ಬೆಳೆಯಿತು. ವಿಜಯನಗರ ಸಾಮ್ರಾಜ್ಯದ ಬುಕ್ಕರಾಯನು ತನ್ನ ರಾಜ್ಯಕ್ಕೆ ತಕ್ಕ ದಿವ್ಯ ರಾಜಧಾನಿಯೆನಿಸಿದ ವಿಜಯ ನಗರವನ್ನು ಕಟ್ಟಿಸಿದನು. ಅಲ್ಲದೆ ತಾಳಿಕೋಟೆಯ ಕದನಾನಂತರ ವಿಜಯ ನಗರ ರಾಜ್ಯವು ಪತನ ಹೊಂದಿದ ಮೇಲೆ ಆ ವಂಶದ ಅರಸರು ರಾಜಧಾನಿಯನ್ನು ಬದಲಾಯಿಸುತ್ತಿದ್ದಾಗ ಆಯಾ ಪಟ್ಟಣಗಳು ಅಲ್ಪ ಸ್ವಲ್ಪ ನುಟ್ಟಿಗೆ ಬೆಳೆಯಿತು. ಮೈಸೂರರಸರ ಕಾಲದಲ್ಲಿ ಮೈಸೂರು ಪ್ರವರ್ಧಮಾನವಾಯಿತು.

ಸಿಕ್ಖರ ಯಾತ್ರಾಸ್ಥಳವಾದ ಅಮೃತಸರ, ಹಿಂದೂ ಕ್ಷೇತ್ರವೆನಿಸಿದ ಕಾಶಿ ಧಾರ್ಮಿಕ ದೃಷ್ಟಿಯಿಂದ ಬೆಳೆದುವು. ಮುಂಬಯಿ, ಕಲ್ಕತ್ತ ನಗರಗಳು ವ್ಯಾಪಾರೀ ದೃಷ್ಟಿಯಿಂದ ವರ್ಧಿಸಿದುವು.

ಬ್ರಿಟಿಷರ ಕಾಲದಲ್ಲಿ ಸಂಸ್ಥಾನಗಳ ರಾಜಧಾನಿಗಳಾದ ಮದ್ರಾಸು, ಕಲ್ಕತ್ತ ಮತ್ತು ಬೊಂಬಾಯಿಗಳು ಅಭಿವೃದ್ಧಿಯನ್ನು ಹೊಂದಿದುವು. ಇವರಿಂದಾಗಿ ಕಲ್ಕತ್ತದಲ್ಲಿ ಸ್ಪೋರ್ಟ್ ವಿಲ್ಲಿಯಂ ಮದ್ರಾಸದಲ್ಲಿ ಫೋರ್ಟ್ ಸೈಂಟ್ ಜಾರ್ಜ್ ಮತ್ತು ಬೊಂಬಾಯಿಯಲ್ಲಿ ಫೋರ್ಟ್‌ಗಳು ರಾಜಕೀಯವಾಗಿ ಪ್ರಾಧಾನ್ಯವನ್ನು ಪಡೆದುವು. ಆರಂಭ ಕಾಲದಲ್ಲಿ ಕಲ್ಕತ್ತವು 'ಬ್ರಿಟಿಷ್ ಇಂಡಿಯಾ'ದ ರಾಜಧಾನಿಯಾಗುವ ಪುಣ್ಯವನ್ನೂ ಪಡೆಯಿತು. ಆದರೆ ಮುಂದಕ್ಕೆ ರಾಜಧಾನಿಯು ದಿಲ್ಲಿಗೆ ಸ್ಥಾನಾಂತರಗೊಂಡಾಗ, ಕಲ್ಕತ್ತವು ಬಂಗಾಳದ ರಾಜಧಾನಿಯಾಗಿ ಉಳಿದು ದಿಲ್ಲಿ ನಗರದ ಅಭಿವೃದ್ಧಿಗೆ ಸಹಕಾರಿಯಾಯಿತು.

ಭಾರತವು ಸ್ವಾತಂತ್ರ್ಯವನ್ನು ಪಡೆದ ನಂತರ ಒರಿಸ್ಸದ ರಾಜಧಾನಿ ಭುವನೇಶ್ವರವು ಪ್ರಾಚೀನ ಹಿಂದೂ ಶಿಲ್ಪದ ಮಾದರಿಯಲ್ಲಿ ಆಧುನಿಕ ರೀತಿಯಲ್ಲಿ ಕಟ್ಟಲ್ಪಟ್ಟಿತು. ಪಂಜಾಬಿನ ಬಂಡೀಪುರವೂ ಬೆಳೆಯಲು ಅವಕಾಶವೊದಗಿತು. ಕರ್ನೂಲು ಆಂಧ್ರದ ರಾಜಧಾನಿಯಾಗಿದ್ದಾಗ ಅದೂ ಕೆಲಮಟ್ಟಿಗೆ ಬೆಳೆಯಿತು

ರಾಜಧಾನಿಯೆನಿಸಿದ ನಗರಗಳಲ್ಲಿ ಸರಕಾರದ ಕೆಲಸಗಾರರಿಗೆ ತಕ್ಕಷ್ಟು ಎಡೆ

(೧೦ನೇ ಪುಟ ನೋಡಿರಿ)


**ಕುಂದಾಪುರ ಡಿ. ಮುಂ. ಕೋರ್ಟಿನಲ್ಲಿ**

R. E. P. 676/1956
S. C. 237/1946

ಸುಬ್ಬಿ ಸೆಡ್ತಿ. ಅರ್ಜಿದಾರಳು.
ಮತ್ತು
ನಾಗಮ್ಮ ಸೆಡ್ತಿ ಕೊಡಾ. ಎದ್ರಿರು.

ಕುಂದಾಪುರ ತಾಲ್ಲೂ ದೇವಲ್ಕುಂದ ಗ್ರಾಮದ ಕಲ್ಕುಡ್ಕಿ ಕೆಳಮನೆಯಲ್ಲಿರುವ ಸದ್ರಿ ಅಮ್ಮಣ್ಣಾರಿಯ 4ನೇ ಎದ್ರಿ ಮೃತಜಂದಮ್ಮ ಸೆಡ್ತಿಯ ಮಗಳು 7ನೇ ಎದ್ರಿಯು ಸಾಧಮ್ಮ ಸೆಡ್ತಿಯಿಗೆ ತಿಳಿಯಪಡಿಸಿದ್ದು.

ಮೇಲ್ಕಂಡ ಅಮ್ಮಣ್ಣಾರಿಯಲ್ಲಿ ನೀವು ಕೊಡಾ ಪ್ರತಿವಾದಿರಿ ಇಕ್ಕಿನ ಸ್ಥಿರಾಸ್ತಿಯನ್ನು ಜಪ್ತು ಯೇಲಂಗೆ ಅಪೇಕ್ಷಿಸಿದ ಬಾಬಿನಲ್ಲಿ ಯೇಲಂಮ್ಮಿನ ಕರ್ತಗಳನ್ನು ನಿರ್ಣಯಿಸುವ ಬಗ್ಗೆ ತಾರೀಕು 25-4-1957ಕ್ಕೆ ಯಿಡೋಣಾಗಿದೆ ಆ ಕುರಿತು ಅಕ್ಷೇಪಣೆಯಿದ್ದಲ್ಲಿ ಸದ್ರಿ ದಿವ್ಸ 11. A.M. ಗೆ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳಬಹುದು.

A. V. N. Hebbar
Pleader for Petitioner.

ಕುಂದಾಪುರ. 7-4-1957.

THE
**CANARA INDUSTRIAL & BANKING SYNDICATE LTD.**
Estd.: 1925. H. O.: **UDIPI**, S. India.

GROWING

RESOURCES
as on
31-12-1926 - Rs. 17,355
31-12-1936 - Rs. 35,45,544
31-12-1946 - Rs. 4,26,07,093
31-12-1956 - Rs. 10,64,10,312

THANKS
to
our thousands of customers all over the country for their confidence and good-will.

T. A. PAI, B. Com. (Bom.), A.I.I.B., F.R.E.S. (Lond)
*General Manager.*

DR. T. M. A. PAI, M. B., B. S.,
*Managing Director.*

## ಸಮಾಜ ಜನ ಜೀವನ

# ಸ್ತ್ರೀಯರಿಗಾಗಿ ಅಲ್ಲಿ ಪ್ರತ್ಯೇಕ ವ್ಯವಹಾರ ಶಾಸ್ತ್ರವಿಲ್ಲ!

ಒಂದು ದೇಶನಿವಾಸಿಗಳ ಚರ್ಯೆಯಿಂದ ಆ ದೇಶವು ಸುಖಿಯಾಗಿದೆಯೇ ಇಲ್ಲ ಸುಃಖಿಯಾಗಿದೆಯೇ ಎಂಬುದನ್ನು ಊಹಿಸಿಕೊಳ್ಳಬಹುದು. ಅವರ ಭಾಷೆಯನ್ನು ನಾವು ಅರಿತರೂ, ಅರಿಯದಿದ್ದರೂ, ಅವರೊಡನೆ ನಾಲ್ಕು ಮಾತುಗಳನ್ನು ಆಡಿದರೂ ಆಡದಿದ್ದರೂ ಆ ದೇಶದ ಸ್ಥಿತಿಗತಿಗಳನ್ನು ಕ್ಷಣಮಾತ್ರದಲ್ಲಿ ತಿಳಿದುಕೊಳ್ಳುವುದಕ್ಕೆ ದೇಶವಾಸಿಗಳ ಮುಖಚರ್ಯೆಯು ಸಾಧನವಾಗಿದೆ.

ಸಯಾಮು ದೇಶವು ಭಾರತಕ್ಕೆ ಸಮೀಪದಲ್ಲಿರುವುದು. ಯಾರಾದರೊಬ್ಬ ಪರದೇಶೀಯನು ಸಯಾಮಿನಲ್ಲಿ ಬಂದಿಳಿದರೆ, ಸರಿ, ಅಲ್ಲಿ ಅವನು ಸಿಹಿಯಾದ ಮಾತುಗಳಿಂದ ಸ್ವಾಗತಿಸಲ್ಪಡುತ್ತಾನೆ. ಪ್ರಯಾಣಿಕನ 'ಪಾಸ್‌ಪೋರ್ಟ್' ಪರೀಕ್ಷಿಸಲ್ಪಟ್ಟು ಅವನಿಗೆ ಅಲ್ಲಿಂದ ತೆರಳಲು ಅನುಮತಿ ದೊರೆಯುವವರೆಗೂ ಸಯಾಮಿಮಹಿಳೆಯರ ಸಹಾಯವು ದೊರೆಯುವುದು.

ಸಯಾಮು ದೇಶದಲ್ಲಿ ಸರಕಾರೀ, ಅಥವಾ ಸರಕಾರೇತರ ವ್ಯವಹಾರಗಳೆಲ್ಲವುಗಳ ಮೇಲೆ ಆಂಗ್ಲ ಭಾಷೆಯ ಪ್ರಾಬಲ್ಯವಿಲ್ಲದೆ, ಅವುಥಾಯಿ ಅಥವಾ ಸಯಾಮಿ ಭಾಷಾಮೂಲಕವಾಗಿಯೇ ನಡೆಯುವುವು ಥಾಯಿ ಭಾಷೆಯರಿಯದ ಯಾತ್ರಿಕರಿಗೆ ಸರಕಾರೀ ಕಛೇರಿಗಳಲ್ಲಿ ದುಭಾಷಿಗಳ ವ್ಯವಸ್ಥೆಯು ಮಾಡಲ್ಪಟ್ಟಿದೆ.

ಸಯಾಮಿನ ನಾರಿಯರ ಜೀವನವು ಅಲ್ಲಿ ಕಾಲಿರಿಸಿದ ಪ್ರತಿಯೊಬ್ಬನ ಮನಸ್ಸನ್ನೂ ಆಕರ್ಷಿಸಬಲ್ಲುದು. ಸಂಕೋಚ ಶೂನ್ಯವ್ಯವಹಾರ, ಪ್ರಸನ್ನ ಮುಖಚರ್ಯೆ ನಮ್ರ ಹಾಗೂ ಸ್ವೀಯವಾದ ಮಾತುಗಳು, ಸ್ಫೂರ್ತಿ ಮತ್ತು ತತ್ಪರತೆಗಳು ಅಲ್ಲಿನ ಜನರ ಮುಖ್ಯವಾಗಿ ನಾರಿಯರ ಜೀವನ ನಾರವಾಗಿವೆಯೆಂದು ಹೇಳಬಹುದು.

ಭಾರತದಿಂದ ಅಷ್ಟು ದೂರವಿಲ್ಲದಿದ್ದರೂ, ಇಲ್ಲಿನ ಹಾಗೂ ಸಯಾಮಿ ಸ್ತ್ರೀ ಜೀವನದ ನಡುವೆ ಅಜಗಜಾಂತರವಿದೆ. ಭಾರತೀಯ ಮಹಿಳೆ ಪರಾವಲಂಬಿಯಾಗಿದ್ದು, ನಿರ್ಜೀವಿಯಾಗಿದ್ದರೆ ಸಯಾಮಿ ಸ್ತ್ರೀಯು ಸಂವಾದನೆ ಮಾಡಿಕೊಂಡು ಸ್ವಾವಲಂಬನ ಶಕ್ತಿಯುಕ್ತಳಾಗಿದ್ದಾಳೆ. ನಿಶ್ಚಿಂತ ಸ್ವಭಾವ, ಪ್ರಸನ್ನ ಹೃದಯಗಳಿಂದ ಕೂಡಿರುವ ಈ ಮಹಿಳೆಯರು ಕೇವಲ ಮಾತನಾಡುವುದರಲ್ಲಿ ಸಮಯವನ್ನು ವ್ಯಯಿಸುವುದರಲ್ಲಿ, ತಮ್ಮ ಜೀವನವನ್ನು ಸುಖಮಯವಾಗಿ ಮಾಡುವುದಕ್ಕೆ ದುಡಿಯುವುದರಲ್ಲಿ ಪುರುಷರಿಗಿಂತ ಯಾವ ಕಾಲದಲ್ಲಿಯೂ ಹೀನ ಸ್ಥಿತಿಯಲ್ಲಿಲ್ಲ. ನಗುಕಾಣದೆ ಇರುವ ಮೂತಿಯೂ ಇಲ್ಲಿ ಸಿಗಲಾರದು. ದೊಡ್ಡ ಸಂತೆಯಾಗಿರಲಿ, ಸಣ್ಣ ಅಂಗಡಿಯೇ ಇರಲಿ ವ್ಯಾಪಾರಕ್ಕಾಗಿ ಒಬ್ಬ ಗ್ರಾಹಕನು ಹೋದರೆ, ವ್ಯಾಪಾರಿಗಳ ಸ್ವಾಭಾವಿಕ ಪ್ರಸನ್ನತೆಯು ಆತನಿಗೆ ಒಂದುಕ್ಷಣ ತನ್ನನ್ನೇ ತಾನು ಮರೆತು ಬಿಡುವಂತೆ ಮಾಡುತ್ತದೆ. ಹೋಟೇಲುಗಳಲ್ಲಿ, ವಿಶ್ರಾಮ ಗೃಹಗಳಲ್ಲಿ, ಕಾಲ್ತಾರಿಗಳಲ್ಲಿ ಒಂದಲ್ಲ ಒಂದು ವಸ್ತುವನ್ನು ಮಾರಿಕೊಂಡು, ಕಂಜೂಸು ಹೊತ್ತಿನ ವರೆಗೂ ತನ್ನ ಜನ್ಮ ಸಂವಾದನೆ ಮಾಡುತ್ತಿರುವ ಹಲವಾರು ಸಯಾಮಿ ಸ್ತ್ರೀಯರು ಕಂಡು ಬರುತ್ತಾರೆ. ಅವರು ಸ್ವಾತಂತ್ರ್ಯದಿಂದ ಹಾಗೂ ನಿರ್ಭಯರಾಗಿ ತಮ್ಮ ವ್ಯವಹಾರಗಳನ್ನು ಪೂರೈಸುತ್ತಿರುತ್ತಾರೆ. ಬಾಹ್ಯ ಪ್ರದೇಶದಲ್ಲಿ ಕೆಲಸಮಾಡುವುದರಿಂದ, ಅವರಿಗೆ ತಮ್ಮ ಗೃಹಸಂಬಂಧದಲ್ಲಿನ ವ್ಯವಸ್ಥೆಗಳಿಗೆ ಕೊರತೆಯುಂಟಾಗುವುದಿಲ್ಲ. ಜೀವನೋಪಾಯಕ್ಕಾಗಿ ದುಡಿಯುವುದರಿಂದ, ಅವರ ಪತ್ನಿತ್ವ ಮತ್ತು ಮಾತೃತ್ವಗಳಿಗೆ ಯಾವ ಕುಂದೂ ಉಂಟುವುದಿಲ್ಲ. ಸಯಾಮ ದೇಶದ ವಿಶೇಷತೆಯೇನು ಎಂದು ಯಾರಾದರೂ ಪ್ರಶ್ನಿಸಿದರೆ ಅಲ್ಲಿನ ಮಹಿಳೆಯರೆಂದು ಸಂತೋಷದಿಂದ ಉತ್ತರಿಸಬಹುದು.

ಇಂದಿನವರೆಗೂ ತನ್ನ ಸ್ವಾತಂತ್ರ್ಯವನ್ನು ಶಾಶ್ವತವಾಗಿ ರಕ್ಷಿಸಿಕೊಂಡು ಬಂದ ದೇಶವು ಸಯಾಮ್ ಪುರುಷನಿರಲಿ, ಸ್ತ್ರೀಯರಲಿ, ಹುಡುಗನಿರಲಿ, ಹುಡುಗಿಯರಲಿ, ಅವರು ತಮ್ಮನ್ನು ಕೆಳವುಟ್ಟದವರೆಂದು ತಿಳಿದುಕೊಳ್ಳಬೇಕಾದ ಪರಿಸ್ಥಿತಿಯಿಲ್ಲ ಪುರುಷ ಮತ್ತು ಸ್ತ್ರೀಯರ ಸಾಮಾಜಿಕ ಜೀವನದ ನಡುವೆ ನಮ್ಮ ಭಾರತದಲ್ಲಿ ಕಂಡುಬರುವಷ್ಟು ವಿಶಾಲವಾದ ಕಂದಕವು ಇರುವುದಿಲ್ಲ. ಪುರುಷರು ಮಾಡಬಹುದಾದ ಕೆಲಸಗಳಿಲ್ಲವೂ ಸ್ತ್ರೀಯರಿಗೂ ಕರಗತೀಯವಾಗಿವೆ. ಸ್ತ್ರೀ ಪುರುಷರನ್ನು ಒಂದೇ ಅಚ್ಚಿನಿಂದ ಕರುವಿಟ್ಟಂತೆ ಅವರ ನೈತಿಕತೆಯು ಬೆಳೆದುಬಂದಿದೆ. ತಾಯ್ತಂದೆಯರುಗಳಿಗೂ ಪುತ್ರ ಜನನದಿಂದ ಅಧಿಕ ಪುತ್ರಿ ಜನನದಿಂದ ಅಲ್ಪ ಸಂತೋಷವಾಗುವ ಪರಿಸ್ಥಿತಿಯಿಲ್ಲ. ಸಯಾಮು ದೇಶದಲ್ಲಿ ಭಾರತೀಯ ಮನುಸ್ಮೃತಿಶಾಸ್ತ್ರ ಸ್ತ್ರೀಯರಿಗಾಗಿ ಪ್ರತ್ಯೇಕ ಆಚಾರ ಶಾಸ್ತ್ರವನ್ನು ರಚಿಸಿದ ಪಂಡಿತನು ಉದ್ಭವಿಸಲಿಲ್ಲ.

ಬಾಲ್ಯಕಾಲದಿಂದಲೂ ಸಯಾಮಿನ ಮಕ್ಕಳು ಒಂದಾಗಿ ಆಡುತ್ತಾರೆ, ಒಂದಾಗಿ ಓದುತ್ತಾರೆ ಮತ್ತು ಒಂದಾಗಿ ಕಾರ್ಯ ಶೀಲರಾಗುತ್ತಾರೆ. ಶಿಕ್ಷಣ, ವಿವಾಹ, ಸೇನೆ, ವ್ಯಾಪಾರ ಎಲ್ಲಾ ಕ್ಷೇತ್ರಗಳಲ್ಲಿಯೂ ಸ್ತ್ರೀಯರಿಗೆ ಕೇವಲ ನುಡಿಗಳಲ್ಲಿ ಮಾತ್ರವಲ್ಲ, ವ್ಯವಹಾರ ಮತ್ತು ಆಚಾರಗಳಲ್ಲಿ ಸಮಾನ ಅಧಿಕಾರವಿದೆ. ಯಾವ ಬೀದಿಗೆ ಇಳಿದರೂ, ಆಲಸ್ಯ ಮನೋಭಾವ ದೃಷ್ಟಿಗೋಚರವಾಗುವುದಿಲ್ಲ. ಸಯಾಮಿನ ಜನತೆಯಲ್ಲಿ ಸಾಮಾಜಿಕ ಅಂತರವಿಲ್ಲದಿರುವುದರಿಂದ ಮಾತ್ರವಲ್ಲ, ಆರ್ಥಿಕ ಭೇದಗಳು ಕೂಡಾ ಅವರ ಉಲ್ಲಾಸವನ್ನು ಕಡಿಮೆ ಮಾಡುವುದಿಲ್ಲ. ಅನ್ನನೀರುಗಳನ್ನು ಮಾರಿ ಕೊಟ್ಟು ಸಂಪಾದಿಸುವ ಸ್ತ್ರೀಯರಲಿ, ತರಕಾರಿ ಧಾನ್ಯಗಳನ್ನು ಸಿನಿಮಯಿಸುವ ಗ್ರಾಮೀಣ ಸ್ತ್ರೀಯರಲಿ, ಎಲ್ಲರ ಮುಖದಲ್ಲಿಯೂ ಒಂದು ಅಸಾಧಾರಣ ಉಲ್ಲಾಸ ಹಾಗೂ ಸ್ವಾತಂತ್ರ್ಯದ ಪ್ರಕಾಶವು ಕಂಡು ಬರುವುದು.

ಇಷ್ಟರಿಂದ ಸಯಾಮಿನಲ್ಲಿ ಸ್ತ್ರೀಯರು ಮಾತ್ರ ಸಂತೋಷಿಗಳಾಗಿರುವರೆಂದು ತಿಳಿಯಬಾರದು. ಅಲ್ಲಿನ ಮಕ್ಕಳು ಹಾಗೂ ಪುರುಷರು ಕಡಿಮೆ ಸಂತೋಷಿಗರಲ್ಲ. ಚಿಂತಾಜಡರು ಈ ದೇಶದಲ್ಲಿ ದೊರೆಯುವುದು ದುರ್ಲಭವೆಂದು ಒಂದು ಲೋಟಾ ಮಧ್ಯದೊಡನೆ ತಮ್ಮ ಸಮಸ್ತ ದುಃಖಗಳನ್ನೂ ಕುದಿದು ಬಿಡುತ್ತಾರೆ. ಶಾಲೆಯಿಂದ ಹೊರ ಬರುವ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಕಂಡರೆ. ಅವರ ಶಿಕ್ಷಕವರ್ಗ ಸಿರಿತನ ಅಥವಾ ಬಡತನಗಳಿಗೆ ಅತೀತವಾಗಿರುವುದು. ನಿರ್ಮಲವಾದ ಶುಭ್ರವಾದ ಬಟ್ಟೆಗಳು ಅವರ ಸ್ವಾಭಾವಿಕ ಪ್ರಸನ್ನತೆಯನ್ನು ಹೆಚ್ಚಿಸುತ್ತವೆ. ಸುಗಂಧಪೂರಿತಕೊಳಕು ವಸ್ತ್ರಗಳನ್ನು ಧರಿಸಿದ ಜನರು ಗೋಚರಿಸಲಾರರು. ಬಟ್ಟೆಗಳನ್ನು ವೈಲಿಗೆಮಾಡುವ ಕಾರ್ಯಗಳ ಕರ್ತರು ತಮ್ಮ ಅಕೆಲಸ ಪೂರ್ತಿಗೊಂಡೊಡನೆ, ಕೊಳಕು ಉಡಿಗೆಗಳನ್ನು ತೆಗೆದುಹಾಕಿ, ಶುಭ್ರ ವಸ್ತ್ರಧಾರಿಗಳಾಗಿಯೇ ಬೀದಿಗಿಳಿಯುವರು. ಅಲ್ಲಿನ ಸ್ತ್ರೀಯರು ಭೋಗ ಮತ್ತು ಶೃಂಗಾರದ ಪ್ರತಿಮೆಗಳಾಗಿಯೇ ಉಳಿದಿಲ್ಲ.

ನಮ್ಮ ದೇಶದಲ್ಲಿ 'ಉಚ್ಚವುಟ್ಟಿ'ದವರಿಂದು ಕರೆಸುಲ್ಪಡುವ ಜನ ವಿಧಾನಗಳನ್ನು ಸಯಾಮಿನಲ್ಲಿ ಇಲ್ಲವೇ ಇಲ್ಲವೆನ್ನಬಹುದು. ಒಂದು ಪೈಸೆ ಇದ್ದರೂ ಅದು ರಾಜ ಪರಿವಾರದವರಲ್ಲಿ ಮಾತ್ರ. ಈ ದೇಶದ ವ್ಯಾಪಾರೋದ್ಯಮ ಹಾಗೂ ವ್ಯವಸಾಯಗಳು ಭಾರತೀಯ ಮತ್ತು ಚೀನೀಯರ ಕೈಯಲ್ಲಿವೆ. ವ್ಯವಸಾಯದ ಮುಖಾಂತರವಾಗಿ, ಧನಿಕರಾಗುವ ಯಾವ ಮಾರ್ಗವೂ ಸಯಾಮಿ ಪ್ರಜೆಗಳಿಗೆ ತೆರೆದಿಲ್ಲ. ಆದುದರಿಂದ ಸಯಾಮಿನಲ್ಲಿ ಮಧ್ಯಮ ಮತ್ತು ನಿಮ್ನವೆಂಬ ಎರಡು ವರ್ಗಗಳು ಮಾತ್ರವಿವೆ. ಈ ವರ್ಗಗಳು ಕೇವಲ ಆರ್ಥಿಕ ದೃಷ್ಟಿಯಿಂದ ಮಾತ್ರ ವಿಭಾಗಿಸಲಾಗಿವುದು. ಇದರಿಂದಾಗಿ ಒಂದು ಕುಟುಂಬದ ಸ್ತ್ರೀ ಪುರುಷರಿಬ್ಬರೂ ದುಡಿದು ತಮ್ಮ ಸಂಸಾರವನ್ನು ಕಾಪಾಡಿಕೊಳ್ಳಬೇಕಾದ ಪರಿಸ್ಥಿತಿಯು ಅಲ್ಲಿದೆ. ಆದುದರಿಂದ ಒಂದಲ್ಲ ಒಂದು ಚಿಕ್ಕ ದಂಧೆಯನ್ನು ಸ್ತ್ರೀಯು ಮಾಡುತ್ತಾಳೆ.

ಪ್ರಾಥಮಿಕ ಶಿಕ್ಷಣವು ಸಯಾಮು ದೇಶದಲ್ಲಿ ಖಡ್ಡಾಯವಾದುದರಿಂದ, ಅನಕ್ಷರಸ್ಥರ ಸಂಖ್ಯೆಯು ತೀರಾ ಅಲ್ಪವಾಗಿದೆ. ಶಾಲೆ ಮತ್ತು ಕಾಲೇಜುಗಳಲ್ಲಿ ಸ್ತ್ರೀಯರ ಸಂಖ್ಯೆಯು ಪುರುಷರಿಗಿಂತ ಅಧಿಕವಾಗಿದೆ. ಒಬ್ಬ ಸಯಾಮಿ ಮಹಿಳೆಯು ಯಾವನಾದರೂ ಒಬ್ಬ ವಿದೇಶೀಯನನ್ನು ವಿವಾಹವಾಗಲಿ, ಮೈತ್ರಿ ಮಾಡಿಕೊಂಡಾಗಲಿ, ಪುರುಷರಾಗಲೀ ಸಮಾಜವಾಗಲೀ ಆತ್ಯಕಡೆ ದೃಷ್ಟಿ ಹರಿಸಬೇಕಾದ ಅವಶ್ಯಕತೆಯಿಲ್ಲ. ಏಕೆಂದರೆ, ಅಂತಹ ವ್ಯವಹಾರವು ಹೇಯವೆಂದು ಪರಿಗಣಿಸಲ್ಪಡುವುದಿಲ್ಲ.

ಶೀರ ರಚನಾ ದೃಷ್ಟಿಯಲ್ಲಿ ಸಯಾಮಿ ಜನರು 'ಮಂಗೋಲಿಯನ್' ಮೂಲ ವಂಶಕ್ಕೆ ಸೇರಿದವರು. ಆದುದರಿಂದ, ಅವರ ಮೂಗು ಸರ್ವ ಸಾಮಾನ್ಯವಾಗಿ ಚಪ್ಪಟೆಯಾಗಿದೆ. ಕಣ್ಣುಗಳು ಕಿರಿದಾಗಿರುತ್ತವೆ. ಆದರೂ ಇದರಿಂದ ಸೌಂದರ್ಯಕ್ಕೆ ಯಾವ ಹಾನಿಯೂ ತಟ್ಟುವುದಿಲ್ಲ.

ಸಯಾಮಿ ಪುರುಷರಿಗಿಂತ ಮಹಿಳೆಯರು ಅಧಿಕ ಕಾರ್ಯಶೀಲರಾಗಿರುವರು. ಮನೆಯ ಸೇವನೆಯಲ್ಲಿಯೂ ಸ್ತ್ರೀಯರು ಪುರುಷರಿಗೇನೂ ಕಡಿಮೆಯಿಲ್ಲವಾಗಿಲ್ಲ. ಈ ಕಾರಣದಿಂದಾಗಿಯೇ ಪತಿಪತ್ನಿಯರಿಬ್ಬರೂ ಮೈಮುರಿದು ದುಡಿದು ಸಂಪಾದಿಸಿದರೂಕಿಂಗಳಾಂತ್ಯದಲ್ಲಿ ಏನಾದರೂ ಉಳಿಸುವ ಬದಲು ಸ್ವಲ್ಪವಷ್ಟನ್ನ ಸಾಲವೇ ಆಗುತ್ತದೆ.

ಈ ದೇಶದಲ್ಲಿ ವಿವಾಹದ ನಿಯಮಗಳು ಬಹಳ ಸರಳವಾಗಿವೆ. ಸ್ತ್ರೀ ಪುರುಷರಿಬ್ಬರು ಪತಿಪತ್ನಿಯರಂತೆ ಬಾಳಲು ಸಮರ್ಥರಾದರೆ ಅವರ ಸಂತಾನವನ್ನು ಸಮಾಜ ಅಥವಾ ರಾಜ್ಯವು ಅನುಚಿತವೆಂದು ಪರಿಗಣಿಸುವುದಿಲ್ಲ. ವಿವಾಹಕ್ಕಾಗಿ ವಿಶೇಷತರದ ಉತ್ಸವ ಇಲ್ಲವೆ ಉಡುಗೊರೆಗಳೂ ಅಗತ್ಯವಿಲ್ಲ. ಮಾತಾಪಿತೃಗಳ ಆಶೀರ್ವಾದವೇ ಒಂದು ದೊಡ್ಡ ಪ್ರಶಸ್ತಿ ಪತ್ರವಾಗಿದ್ದು, ಒಂದುವೇಳೆ ಇದು ಅಲಭ್ಯವಾದರೂ ನವದಂಪತಿಗಳು ಚಿಂತಿಸಬೇಕಾಗಿಲ್ಲ. ಏಪ್ರಿಲ್ ತಿಂಗಳ ಹೊಸ ದಿನ ನಮ್ಮ ಹೊಳೆಹಬ್ಬಕ್ಕೆ ಸಮಾನವಾದ 'ನೀರೆರೆಚುವ ಹಬ್ಬ' ವೊಂದನ್ನು ಸಯಾಮಿ ಜನರು ಆಚರಿಸುತ್ತಾರೆ. ಆ ದಿನ ಮಾರ್ಗಗಳಲ್ಲಿ ಓಡಾಡುಗಳಲ್ಲಿ ಮನೆಗಳಲ್ಲಿ ಒಬ್ಬರು ಇನ್ನೊಬ್ಬರ ಮೈಮೇಲೆ ನೀರನ್ನೆರೆಚುತ್ತ ತಮ್ಮ ರಸಿಕತೆಯನ್ನು ಸ್ವೀಕರಿಸುವರು.

ಜೀವನದ ಈ ಆನಂದವು ಕೇವಲ ಮಾನವರ ಮುಟ್ಟಿಗೆ ಮಾತ್ರ ಸೀಮಿತವಾ

(ಇನ್ನೇ ಸುರುವೋದಿಂ)


ಝುಂಡುರವರ 'ಕೇಸರಿ ಜೀವನ'

(KESARI JEEVANA)

ಇದನ್ನೇ ಉಪಯೋಗಿಸಿರಿ.

ಅಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಶೀತ, ಅಸ್ತ್ಮ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಜೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ. 6/8; ½ ರಾತಲಿಗೆ ರೂ. 1/13

ವ. ಕೆನರಾದ ಕೆಳಗಿನ ಏಜಂಟರಲ್ಲಿ ಸಿಗುವುದು.

1. ಶಾ ಕಂಪೆನಿ, ಮಂಗಳೂರು.
2. ವಿ. ವಿ. ಶೆಣೈ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್‌ಟಿಟ್ಯೂಟ್, ಉಡುಪಿ,

ವಿವರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU ದಾಮೋದರ & ಕೊ,
ಮದ್ರಾಸ್—3.

## ಭಾಷಾ ಪ್ರೇಮ

# ಪರಭಾಷೆಗೆ ಕೊಡುತ್ತಿರುವ ಪ್ರಾಧಾನ್ಯತೆಯು ತಪ್ಪಲಿ!

ಇಂದು ಕನ್ನಡ ನುಡಿಯನ್ನಾಡುವ ನಾಡು, ನಾಡಜನ ಸಾಮಾನ್ಯವಾಗಿ ಒಂದುಗೂಡಿದ್ದಾರೆ. ಒಕ್ಕೂಟಕ್ಕೆ ಮೊದಲಿಷ್ಟ ಅಭಿಮಾನ ಪ್ರಾಯಃ ನಮ್ಮಲ್ಲಿ ಆದ ಮೇಲೆ ಉಳಿಯಲಿಲ್ಲ. ಉಳಿದಿದ್ದರೂ ನಾಡಿನ ಮೇಲಿರುವಷ್ಟು ಮನಃಪೂರ್ವಕ ನಮ್ಮ ನಾಡನುಡಿಯ ಬಗೆಗಿರುವುದು ಕಂಡು ಬರುವುದಿಲ್ಲ. ಮಕ್ಕಳಿಂದ ಮುದುಕರವರೆಗೆ ಅವಿದ್ಯಾವಂತರಿಂದ ಅತಿವಿದ್ಯಾವಂತರವರೆಗೆ ಎಲ್ಲರೂ ಒಂದಲ್ಲವೊಂದು ತೆರದಿಂದ ಕನ್ನಡಕ್ಕೆ ಕತ್ತಿ ಮಸೆಯುವವರೇ ಆಗಿದ್ದಾರೆ. ಇಂತಹ ದ್ರೋಹವು ಅಸಹನೀಯವಾದುದು. ಅನ್ಯಭಾಷಾ ಪದಗಳನ್ನು ಕನ್ನಡದಲ್ಲಿ ಬಳಸುವುದೆಂದರೆ, ಕನ್ನಡವ ಚಿತ್ರಹಿಂಸೆ ಮಾಡಿದಂತೆ.

ಕನ್ನಡವನ್ನು ಒಂದು ಭಾಷೆಯೆಂದು ಮೆರೆಸಲು ಸಂಸ್ಕೃತವು ನೆರವಾಯಿತು. ಕನ್ನಡವು ಗ್ರಾಂಥಿಕ ಭಾಷೆಯಾಯಿತಲ್ಲದೆ, ಅದು ಸಂಸ್ಕೃತದಿಂದ ಅನೇಕ ಪದಗಳನ್ನು ತನ್ನೆಡೆಗೆ ಸೆಳೆದುಕೊಂಡು ತನ್ನ ಕೋಶವನ್ನು ಬೆಳೆಸಿಕೊಂಡಿತು. ಕನ್ನಡದ ಉದ್ಧಾಮ ಕವಿಗಳೆನಿಸಿಕೊಂಡವರು ಸಂಸ್ಕೃತದ ಪ್ರಭಾವಕ್ಕೆ ಒಳಗಾಗಿ 'ಶ್ರೀರಾಮಾನಟಕಾಸ್ತು ಭವ್ಯತಿಕರಕ್ಷು ಷ್ವಾಂಜಲಿಕ್ಷೇವ ವಕ್ಷ್ಮೀರಂಗ ಸ್ಥಿತೆಯಾವ' ಎಂಬ ವಿಷ್ಣುವನ್ನು ಪರ್ಣಿಸುವಷ್ಟು ಮುನ್ನಡೆಯಿಟ್ಟವರೂ ಇದ್ದಾರೆ. ಕನ್ನಡ ವಿಭಕ್ತಿ ಪ್ರತ್ಯಯಗಳನ್ನು ಮಾತ್ರ ಸೇರಿಸಿ, ಸಂಸ್ಕೃತ ಪದಗಳಿಂದಲೇ ಒಂದು 'ಶ್ಲೋಕ'ವನ್ನು ಬರೆವ ಮಹಾ ಕವಿಗಳೂ 'ಕನ್ನಡ'ದಲ್ಲಿಯೇ ಬರೆದರು.

ಇಂತಹ ಪರಿಸ್ಥಿತಿಯಲ್ಲಿ 'ಕಾವ್ಯ'ವು ಪಂಡಿತ ಮಾನ್ಯ ಮಾತ್ರವಾಯಿತು. ಪಂಡಿತರಿನಿಸಿಕೊಳ್ಳಬೇಕಾದರೆ, ಅಂದಿನ ಕಾಲದಲ್ಲಿ ಅರಮನೆ ಗುರುಮನೆಗಳೆರಡರಲ್ಲೂ ಹೊಕ್ಕು ಮನ್ನಣೆಪಡೆದು, ದೇವ ಭಾಷೆಯೆಂದು ಬಿರುನಾಂಕಿತವಾದ ಸಂಸ್ಕೃತವನ್ನು ಕಲಿಯಲೇ ಬೇಕಾಗಿತ್ತು. ಜನ ಸಾಮಾನ್ಯರಲ್ಲಿ ಮತ ಪ್ರಚಾರ ದೃಷ್ಟಿಯಿಂದ ಬರೆಯಲ್ಪಟ್ಟ ಪ್ರೌಢ ಕಾವ್ಯಗಳು ಸಂಸ್ಕೃತ ಭೂಯಿಷ್ಠವಾಗಿದ್ದುದರಿಂದ, ನಿಷ್ಪರಿಣಾಮ ಕೊಂಡಿದಿವು, ಹಾಗಾಗಿ ಅಲ್ಲಲ್ಲಿ ಕೆಲ ವಿರೋಧಗಳೂ ಕಂಡು ಬಂದುವು.

ಈಗಿನ ಶತಕದ ಕವಿರಾಜ ಮಾರ್ಗಕಾರನು ಸಂಸ್ಕೃತಾವ್ಯಯಗಳನ್ನು ಅಸಮಸ್ತ ಪದಗಳನ್ನಾಗಿಯೂ, ಕನ್ನಡ ಸಂಸ್ಕೃತ ಪದಗಳನ್ನು ಬೆರಸಿ ಸಮಸ್ತ ಪದಗಳನ್ನಾಗಿಯೂ ಉಪಯೋಗಿಸಬಾರದೆಂದು ಹೇಳಿ, ಒಂಬತ್ತೇಳೆ ಹಾಗೆ ಮಾಡಿದರೆ, ಆಗ 'ಒತ್ತುಂಗರಡೆಯ ಮದ್ದಳೆಯ ಜರುಗು ರಥ್ವನಿಗಳ ಪೋಲ್' ಮತ್ತು 'ಮರುಗುವ ಪಾಲ್ಗೆ ಒಳೆಯಂ ಬೀಸಿದವೋಲ್' ಆಗುವುದೆಂದು ಸುಂದರ ಉಪಮೆಯನ್ನಿತ್ತು ನಿಷೇಧಿಸಿದ್ದಾನೆ.

ಆದರೂ ಅಂಟಿಕೊಂಡ ಅಭ್ಯಾಸ ಬೆಳೆದುಬಂದಿತು. ಮನೆಗೆ ಬಂದ ಕೆಲಸದಾಕೆ ಮನೆಯೊಡತಿಯೇ ಆದಳು. ಇದನ್ನು ಅಲ್ಲಲ್ಲಿ ನಮ್ಮ ಕವಿಗಳು ನಿಷೇಧಿಸುತ್ತಾ ಬಂದರು. ವ್ಯಾಕರಣ ಶಾಸ್ತ್ರಗಳು ವಿರೋಧಿಸಿದರೂ, ಅವುಗಳ ಮಾತಿಗೆ ಯಾರೂ ಬೆಲೆಕೊಡಲಿಲ್ಲ. ಸಂಸ್ಕೃತ—ಕನ್ನಡ ಸಮಸ್ತ ಪದಗಳು "ಆರಿಸವಾಕಜೋಸ" ವಾದರೂ ಅಂತಹ ಕೆಲವು ಪದಗಳಿಗೆ ಕೆಲವೊಂದು ಸಂದರ್ಭದಲ್ಲಿ ಸಾಧುತ್ವವನ್ನು ಶಿಷ್ಟಕಬ್ದಾನುಶಿದರ್ಶನದ ಕೇಶಿರಾಜನೇ ಕೊಡಬೇಕಾಯಿತು. ಎಂದರೆ, ಅವು ಅಷ್ಟು ದೊಡ್ಡ ಸ್ಥಾನವನ್ನು ಪಡೆದಿದ್ದುವು. ಹಾಗೆಯೇ ತದ್ಭವ ತತ್ಸಮಗಳು ಸಮಸ್ತ ಪದವಾಗಬಹುದೆಂದೂ ಸೂತ್ರವನ್ನು ಮಾಡಬೇಕಾಯಿತು.

ಪಳಗನ್ನಡಂ ಪುದುಂಗೊಳೆ
ಕೊಳೆ ಸಕ್ಕದಮಂ ತಗುಳ್ದಿ ಜಾಣ್
ಕೆಡೆ ಮುತ್ತಂ
ಪೊಳಸಂಪೋದಂತಿರೆ ಪೇ
ಳ್ದಳಗವಿಗಳಕವಿತೆಬುಧರನೆರ್ದೆಗೊಳ್ಳಿ
ಸುಗುಮೇ ।
ಜಾನೆ ಪದ್ಯ.

ಎಂಬ ಪದ್ಯವು ನಾಗವರ್ಮನ ಕಾವ್ಯಾವಲೋಕನದಲ್ಲಿ ದೊರೆಯುತ್ತದೆ. ಇಲ್ಲಿ ಸಂಸ್ಕೃತ ಕನ್ನಡ ಪದಗಳನ್ನು ಮಿಶ್ರಮಾಡುವುದು ಮುತ್ತು ಮುತ್ತಿನ ಪೋಣಿಸುಗಳನ್ನು ನೂಲಿನಿಂದನೇಯ್ದಂತೆ ಎಂದು ನಿರೂಪಿಸಿ ಅದು ವಿದ್ವಜ್ಜನರ ಹೃದಯಾಕರ್ಷಿಯಾಗಲಾರದೆಂದು ಹೇಳಿದೆ. ಧರ್ಮಾಮೃತವನ್ನು ಬರೆದ ನಯಸೇನನು.

ಪೊಸಗನ್ನಡ ದಿಂ ವ್ಯಾಪ
ರ್ಜಿಸುವೆಂ ಸಕ್ಕತಿಯನೆಂದು ಕನ್ನಡ ಮಂ ಜಿಂ
ತಿಸಿ ಕೂಡಲಾರದಕ್ಕಟ
ನಿಸುಕದ ಸಕ್ಕದ ಮನಿಕ್ಕುನವನುಂ ಕವಿಯೇ !

ಎಂದು ಪ್ರಶ್ನಿಸಿ,

ಸಕ್ಕದಮಂ ಸೇಯ್ದೊಡೆನೆರೆ
ಸಕ್ಕದಮಂ ಪೇಳ್ದೆ ಸುದ್ದಗನ್ನಡ ದೊಳ್ತಂ
ದಿಕ್ಕುವುದೇ ಸಕ್ಕದಮಂ
ತಕ್ಕುದೆ ಬೆರಸಲ್ಕೆ ಪೈತಮುಮಂ
ತೈಲಮುಸುಂ ।
೧-೪೧, ೪೨.

ಎಂದು ಕನ್ನಡ ಸಂಸ್ಕೃತಗಳ ಸಂಯೋಗವು ತುಪ್ಪ ಹಾಗೂ ಎಣ್ಣೆಗಳನ್ನು ಬೆರಸುವುದಕ್ಕೆ ಸಮಾನವೆಂದು ತೆಗಳಿದನು. ಆದರೂ ಕವಿಗಳು ತಮಗೆ ಹತ್ತಿದ ಜಾಡನ್ನು ಬಿಡಲು ಸಿದ್ಧವಾಗಲಿಲ್ಲ ಅಮಂದರಿಂದಲೆ ಆಡಯ್ಯನ ಕಾಲ (ಸು. ೧೩೪೫) ದಲ್ಲಿ 'ಸೊಗಯಿಪ ಸಕ್ಕದಂ ಬೆರಸಿದಲ್ಲದೆ ಕನ್ನಡವಲ್ಲಿ ಕಬ್ಬನುಂ ಬಗೆಗೊಳೆ ಪೇಳಲಾರ್" ಎಂಬ ಬಲವಾದ ಅಭಿಪ್ರಾಯ ಗಟ್ಟಿಯಾಗಿತ್ತು. ಈ ಅಸಮತೋಲನವನ್ನು ಕಳೆಯಲು ಕೇವಲ ಶಬ್ದನ ಮತ್ತು ದೇಸಿ ನುಡಿಗಳಿಂದ ಕೂಡಿದ "ಕಬ್ಬಿಗರಕಾವ" ಅಥವಾ "ಕಾವನ್ನೆಲ್ಲ"ದ ರಚನೆಯಾಯಿತು.

ನುಂದೆ ಸಾಹಿತ್ಯಾಕಾಶದಲ್ಲಿ ವಜನ, ಷಟ್ಪದಿಗಳು, ಸಾಂಗತ್ಯವು ಕಾಲಿರಿಸಿದುವು. ನವ್ಯಕವಿಗಳು ಕನ್ನಡಿಗರಿಗೆ ಕನ್ನಡತನದಲ್ಲಿರುವ ಅಭಿರುಚಿಯನ್ನು ಕಂಡು ಕೊಂಡರು. ಅದಕ್ಕಾಗಿ ಕನ್ನಡವನ್ನು ಸುಧಾರಿಸಿಕೊಂಡು ದೇಸಿನುಡಿಗಳಿಗೆ ಪ್ರಮುಖಸ್ಥಾನವನ್ನು ಕೊಟ್ಟರು ಆದರೂ ಪಡಕ್ಸೆರಿಯುಂತಹ ಒಬ್ಬಿಬ್ಬರು ನಡುವೆ ಕಾಣಿಸಿಕೊಂಡು ಪುನಃ ಸಂಸ್ಕೃತಮಯ ಕನ್ನಡ ಕಾವ್ಯವನ್ನು ರಚಿಸಿದರೂ ಜನರು ಅವನ್ನು ಸ್ವೀಕರಿಸಲು ಸಿದ್ಧರಾಗದೆ ಇದ್ದುದರಿಂದ ಷಟ್ಪದಿ, ತ್ರಿಪದಿ ಸಾಂಗತ್ಯ ಮೊದಲಾದ ಆಚ್ಚಗನ್ನಡದ ಛಂದಸ್ಸಿನಲ್ಲಿ ಕನ್ನಡಿಗರಿಗಾಗಿ ಕನ್ನಡದಲ್ಲಿ ಸಾಹಿತ್ಯ ರಚನೆಮಾತ್ರ ತೊಡಗಿದರು.

ನುಡಿಯುವ ಮತ್ತು ಬರೆಯುವ ಭಾಷೆಯಲ್ಲಿ ವ್ಯತ್ಯಾಸವಿದೆ. ಕನ್ನಡಿಗರು ಇಷ್ಟು ಹೊತ್ತಿಗಾಗಲೇ ಕೆಲವೊಂದು ಸಂಸ್ಕೃತ ಪದಗಳನ್ನು ತಮ್ಮದಾಗಿಸಿಕೊಂಡಿದ್ದರು. ಆದುದರಿಂದ ಅವು ಕನ್ನಡೆಂಬ ಭ್ರಮೆಯೇ ಈಗಲೂ ನೆಲೆಮಾಡಿದೆ. ಬಲ, ಮುಖ, ನಕ್ಷತ್ರ, ಪೂರ್ವ, ನದಿ, ಮೊದಲಾದ ಶಬ್ದಗಳು ಕನ್ನಡವೆಂದೇ ನಂಬುವ ಜನರು ಅನೇಕರಿರುತ್ತಾರೆ. ಆದರೆ ಇಂತಹಕೆಲವು ಪದಗಳು ಬಳಕೆಯಾಗಿ ಭಾಷೆಯಲ್ಲಿ ಮೈಯ್ಗೂಡಿ ಹೋದುದರಿಂದ ಅವುಗಳ ಅವಶ್ಯಕತೆಯನ್ನು ಕಡೆಗಣಿಸುವುದು ಅಸಾಧ್ಯವಾಯಿತು.

ಮುಂದಕ್ಕೆ ನೆರೆರಾಜ್ಯವಾದ ತಮಿಳರಿಗರು, ವ್ಯಾಪಾರಿಗಳಾಗಿ ನಮ್ಮ ನಾಡಿಗೆ ಕಾಲಿರಿಸಿದ ಪೋರ್ಚುಗೀಸ್ ಫ್ರೆಂಚ್‌ರಿಂದಲೂ, ಸಾಮ್ರಾಜ್ಯಾಭಿಲಾಷೆಯಿಂದ ಧಾಳಿಯಿಟ್ಟ ಮುಸಲ್ಮಾನರಿಂದಲೂ ಅನೇಕ ಪದಗಳು ನಮಗೆ ದೊರಕಿವೆ. ಕುರ್ಚಿ, ಮೇಜುಗಳಿಲ್ಲದೆ ಇಂದು ನಮ್ಮ ಯಾವ ಕೆಲಸವೂ ನಡೆಯಲಾರದು. ಬಟವಾಟು, ತೋತಾಪುರಿಗಳನ್ನು ನಾವು ಉಪಯೋಗಿಸುತ್ತೀವೆ. ಆದರೂ ಇಂಗ್ಲಿಷರು ಹುಟ್ಟೇ ತಿಸಿದ ದಲ್ಲದೆ ಬಲವಾದ ಬುನಾದಿಯಿಂದ ಆಧಿಸತ್ಯವನ್ನು ಸಂಸ್ಥಾಪಿಸಿ, ಮುಂದೆ ಆಂಗ್ಲ ಭಾಷೆಯ ಪ್ರಚಾರ ಕಾರ್ಯವನ್ನು ಭರದಲ್ಲಿ ಮಾಡಿದುದರಿಂದ, ನಮ್ಮ ಭಾಷೆಯಲ್ಲಿ ಈ ಭಾಷೆಯ ಶಬ್ದಗಳು ಕೆಲವು ಈಗ ಹೇರಳವಾಗಿ ತೊಡಗಿವೆ.

ಇದಕ್ಕೆ ನಾವು ಕನ್ನಡವನ್ನು ಮರೆತು ಬಿಡಲಾರಂಭಿಸಿದುದೂ ಒಂದು ಕಾರಣ. ಹಿಂದೊಮ್ಮೆ ಸಂಸ್ಕೃತದ ಪ್ರಭಾವವು ನಮ್ಮ ನುಡಿಯ ಮೇಲೆ ಬಿದ್ದು ಹೇ ನಾರು ದೇಸಿ ನುಡಿಗಳು ಆ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋದುವು. ಆದರೂ ಭಾರತದ ಸಕಲ ಭಾಷೆಗಳಲ್ಲಿಯೂ ಸಂಸ್ಕೃತದಿಂದ ನುಡಿಗಳನ್ನು ಎರವಲು ತರುವ ಹವ್ಯಾಸ ಇದ್ದೇ ಇದೆ. ಆದ ಆನಿವಾರ್ಯ. ಹಾಗಿರುವಾಗ, ನಮ್ಮ ದೇಶೀಯ ಭಾಷೆಗಳಲ್ಲಿಯೇ ಸಾಕಷ್ಟು ಪ್ರಗಲ್ಭ ಸ್ಥಿತಿಯಲ್ಲಿರುವ ಸಂಸ್ಕೃತದ ಸ್ಥಾನದಲ್ಲಿ ಇಂದು ಆನ್ಯದೇಶ್ಯ ಆಂಗ್ಲಭಾಷೆಯು ವ್ಯಾಪಿಸಿದೆ. ಕೆಲವೊಮ್ಮೆ ಆನ್ಯದೇಶ್ಯ ಪದಗಳನ್ನು ಬಳಸುವುದು, ಅನಿವಾರ್ಯವೆಂದು ಒಪ್ಪಿಕೊಂಡರೂ ಆಂಗ್ಲ ನುಡಿಗಳನ್ನು ಧಾರಾಳವಾಗಿ ಉಪಯೋಗಿಸುವುದು ಮೂರ್ಖತನವನ್ನು ನಾವೆ ಮಾಡುವುದರಲ್ಲಿ ಸಂಶಯವಿಲ್ಲ.

"ಡಾಕ್ಟರ್" ಎಂಬ ಆಂಗ್ಲಪದವು "ಪಂಡಿತ" ಶಬ್ದದ ಅರ್ಥವನ್ನು ಸಂಕೋಚಗೊಳಿಸಿತು. ನಿಮ್ಮ ಬ್ಲಡ್ ಟೆಸ್ಟ್ ಆಗಬೇಕು; ನಾನು ಮಿಡ್ಲ್‌ಸ್ಕೂಲಿನಲ್ಲಿ ಟೀಚರಾಗಿದ್ದೇನೆ, ಸ್ವಲ್ಪ ಅರ್ಜೆಂಟ್ ವರ್ಕಿನ ನಿಮಿತ್ತ ಡ್ಯೂಟಿಗೆ ಅಟೆಂಡ್ ಆಗುವುದು ಕಷ್ಟವಾಗಿದೆ". ಇತ್ಯಾದಿ ಮಾತುಗಳು ದಿನನಿತ್ಯ ನಮ್ಮ ಕಿವಿದೆರೆಗಳಿಗೆ ಬಡಿಯುತ್ತಿವೆ. ಶ್ರೀ ಡಿ. ವಿ ಜಿ ಯವರು ಈ ವಿಷಯದಲ್ಲಿ ಒಂದು ಸ್ವಾರಸ್ಯವಾದ ಉಲ್ಲೇಖನವನ್ನು ಮಾಡಿದ್ದಾರೆ. ಒಮ್ಮೆ ಒಬ್ಬನು ಊರ ಡಾಕ್ಟರರ ಹತ್ತಿರ ಬಂದು, ಸರ್, ನನ್ನ ವೈಫ್‌ಗೆ ಫಿವರ್ ಬಂದಿದೆ. ಎಗ್ಸಾಮಿನ್ ಮಾಡಿ ಮೆಸಿನ್ ಕೊಡಿ, ಎಂದನಂತೆ. ಆಗ ಡಾಕ್ಟರು ನಿಮ್ಮ ವೈಫ್ ಕಂ ಆಗಿದ್ದರೆ ಸಿಟ್ ಮಾಡಿಸಿ, ಎಂದರಂತೆ! ಇಂತಹ ಸಂಭ್ರಮಗಳು ಆನೇಕವಿವೆ! ಅಪ್ಲೋಂಟ್‌ಮೆಂಟ್, ಅಪ್ಲಿಕೇಶನ್, ಹೋಪ್‌ಲೆಸ್ ಮೆದಲಾದ ಸಾವಿರಾರು ಶಬ್ದಗಳು ನಮ್ಮ ನಾಲಗೆಯಲ್ಲಿ ಕುಣಿದಾಡುತ್ತಿವೆ. ಇಂಹ ಶಬ್ದಗಳಲ್ಲಿ ಕೆಲವು ಪದಗಳಿಗೆ ನವ ಕನ್ನಡದಲ್ಲಿ ಪ್ರತಿಶಬ್ದಗಳಿಲ್ಲದಿರಬಹುದು ಅವನ್ನು ಸಿದ್ಧಮಾಡಿಕೊಳ್ಳುವುದೂ ಸುಲಭಸಾಧ್ಯವಲ್ಲದಿರಬಹುದು. ಆದರೂ ಸಿದ್ಧವಿದ್ದು ಪ್ರಚಾರದಲ್ಲಿದ್ದ ಪದಕೆಯನ್ನು 'ಷೇವರ್' ಎಂದು ಕರೆಯಬೇಕೆ?

ಈ ತರದ ಭಾಷೆಯ ಮೇಲಣ ತಿಸ್ಕಾರ ಸರಿಯಾದುದಲ್ಲ ಪ್ರತಿಯೊಂದು ಭಾಷೆಗೂ ತನ್ನತನವಿವೆ. ಆ ತನ್ನತನವನ್ನು ಆ ನುಡಿಯನ್ನು ನುಡಿಯುತ್ತಿರುವ ಜನರು ಉಳಿಸಿಕೊಳ್ಳಬೇಕು ಅಷ್ಟೆ. ಜನರೇ ತಮ್ಮ ಮಾತೃಭಾಷೆಯನ್ನು ಮರೆತು ಅನ್ಯಭಾಷಾ ವ್ಯಾಮೋಹದಿಂದ ಕೂಡಿ ಬೇಲಿಯೇ ಹೊಲವನ್ನು ಮೆನ್ದಂತಾದರೆ ಭಾಷೆಯು, ದೇಶದ, ಜನರ ಉದ್ಧಾರವು ಹೇಗಾಗಬೇಕು?

ಕನ್ನಡನಾಡುಜನ ಒಂದಾಗಿದೆ. ನುಡಿಯೂ ಒಂದಾಗಬೇಕು. ನುಡಿಯು ಅ

(ಇನೇ ಪುಟನೋಡಿರಿ)




# ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

**ಸ್ಥಾನಿಕ ಕ್ರಯ:** ದೊಡ್ಡ ಬಾಟ್ಲಿಗೆ ರೂ. ೩—೪—೦
ಸಣ್ಣ ಬಾಟ್ಲಿಗೆ ರೂ. ೨—೦—೦

**ಶ್ರೀ ರಾಮತೀರ್ಥ ಯೋಗಾಶ್ರಮ,**
**ವಾದರ್** (ಸೆಂಟ್ರಲ್ ರೈಲ್ವೆ) **ಮುಂಬಯಿ, ೧೪**

## ಪ್ರಾಮಾಣಿಕ ವ್ಯವಹಾರ

# ಆಡಳಿತೆಯಲ್ಲಿ ಭ್ರಷ್ಟಾಚಾರಕ್ಕೆ ಸ್ಥಾನ ಸಲ್ಲದು

ಒಂದು ರಾಜ್ಯದ ಆಡಳಿತ ವಿಧಾನವು ಸರ್ವಾಧಿಕಾರಿಯಿರಲಿ, ಸಾಮ್ಯವಾದಿಯಿರಲಿ, ಕೂಲಿಗಾರಪರವಿರಲಿ ಅಥವಾ ಇನ್ನಾವುದೇ ಪ್ರಕಾರದ್ದಾಗಿರಲಿ, ಪ್ರಶಾಸನವು ಪ್ರಾಮಾಣಿಕವಾಗಿರಬೇಕಾದುದು ಅವಶ್ಯಕ. ಪ್ರಾಮಾಣಿಕತನವಿಲ್ಲವಾದರೆ, ರಾಜ್ಯದ ಯಾವುದೊಂದು ಕಾರ್ಯಕಲಾಪವಾದರೂ ಸರಕಾರದ ಅಧಿಕಾರಿಗಳ ಆಪೇಕ್ಷೆಯ ಪ್ರಕಾರ ನಡೆಯಲಾರದು. ಸಮಾಜವಾದದ ಧ್ಯೇಯವನ್ನಿರಿಸಿಕೊಂಡ ನಮ್ಮ ಕಲ್ಯಾಣಕಾರೀ ರಾಷ್ಟ್ರದಲ್ಲಿ ಶಾಸಕನು ಪ್ರಾಮಾಣಿಕ, ವಿವೇಕಶೀಲ, ಮತ್ತು ಸಾಹಸಿಯಾಗಿರುವುದು ಅಗತ್ಯವಾಗಿದೆ. ಶಾಸಕನು ಪ್ರಾಮಾಣಿಕನಾಗಿಲ್ಲದೆ ಹೋದರೆ, ಜನತೆಯಲ್ಲಿ ಆತನ ವಿಶ್ವಾಸವನ್ನು ಕಳೆದುಕೊಳ್ಳುತ್ತಾನೆ. ಹೀಗಾಗಿ ಶಾಸನವು ಎಂದೂ ಸಫಲವಾಗಲಾರದು. ಅಲ್ಲದೆ ಪ್ರಜೆ ಮತ್ತು ಸರಕಾರಗಳೊಳಗಿರಬೇಕಾದ ನಿಕಟ ಸಂಬಂಧವೂ ಕೆಡಬಹುದು. ಆಗ, ಜನತೆಯಿಂದ ದೂರ ಹೋಗುತ್ತಿರುವ ಜನತೆಯ ಹೆಸರಿನ ಪಟ್ಟಿಯನ್ನು ಹಚ್ಚಿಕೊಂಡ ಸರಕಾರದ ಉತ್ಪತ್ತಿಯಾಗುವುದು. ಜನತೆಯ ನಾಮದಿಂದಲೇ ಜನತೆಯ ಹತ್ಯೆಯಾಗುವುದು.

ಈ ಕಾರಣದಿಂದಾಗಿಯೇ ಭಾರತೀಯ ಪಂಚವಾರ್ಷಿಕ ಯೋಜನೆಗಳಲ್ಲಿ ಅಧಿಕಾರಿಗಳು ವಿಶ್ವಾಸಾರ್ಹರಾಗಿರಬೇಕೆಂದು ನಿಯಮಿಸಿದೆ. ಭ್ರಷ್ಟಾಚಾರದಿಂದಾಗಿ ಜನತೆಗೆ ಅನ್ಯಾಯವಾಗುವುದೆಂದೂ, ಆ ಅನ್ಯಾಯದ ಪ್ರತಿಕಾರವು ಭಯಂಕರವಾದುದೆಂದೂ, ಇದರಿಂದ ಜನತೆಯು ಸರಕಾರದ ವೇಲಿಟ್ಟಿರುವ ವಿಶ್ವಾಸವು ಹಾರಿ ಹೋಗುವುದೆಂದೂ ಹೇಳಲಾಗಿದೆ. ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಈ ವಿಚಾರವನ್ನು ಸ್ಪಷ್ಟವಾಗಿ ತಿಳಿಸಲಾಗಿದೆ. ವರ್ತಮಾನ ಸಮಯದಲ್ಲಿ ಜನತೆಯಿಂದ ಸರಕಾರಿ ಅಧಿಕಾರಿಗಳು ಅಪ್ರಾಮಾಣಿಕರಾಗಿರುವರೆಂಬ ದೂರು ಕೇಳಿಬರುತ್ತಿದೆ. ಇಂತಹ ಕೊರತೆಯನ್ನು ಬೇರುಸಹಿತ ಕಿತ್ತೊಗೆಯಬೇಕೆಂದೂ ಸರಕಾರೀ ಕೆಲಸಗಾರರಿಗೆ ಆದೇಶವೀಯಲಾಗಿದೆ. ಕೆಲ ರಾಜ್ಯ ಸರಕಾರಗಳು ಇದಕ್ಕೆ ಬೇಕಾದ ಶಾಖೆಗಳನ್ನೂ ತೆರೆದಿವೆ. ತನ್ನ ನೌಕರರಿಂದ ಆಗಾಗ ತನ್ನ ಸ್ಥಿರ ಹಾಗೂ ಚರ ಸಂಪತ್ತುಗಳ ವಿವರವನ್ನು ಒಪ್ಪಿಸಬೇಕೆಂದು ನಿಯಮಮಾಡಿದೆ. ಯಾವ ಅಧಿಕಾರಿಯಾದರೂ ಲಂಚವನ್ನು ಸ್ವೀಕರಿಸಿದನೆಂದು ಸಂದೇಹ ಹುಟ್ಟಿದರೆ ಅಂತಹ ನನ್ನು ನಿಶ್ಚಿತ ಅವಧಿಗಿಂತ ಮೊದಲೇ ಅಧಿಕಾರದಿಂದ ನಿವೃತ್ತಗೊಳಿಸುವ, ಜವಾಬ್ದಾರಿಯುಕ್ತ ಅಧಿಕಾರದಿಂದ ತೆಗೆದು ಹಾಕುವ ಶಿಕ್ಷೆಯನ್ನೂ ಸರಕಾರವು ಈಯುತ್ತಿದೆ. ರೈಲ್ವೇ ಸಂಬಂಧದಲ್ಲಿ ಸಲಹೆಗಾರ ಮಂಡಲವು ಸಹ ಇಂತಹ ಸಲಹೆಯನ್ನು ಮಾಡಿರುತ್ತದೆ.

ಆಡಳಿತೆಯಲ್ಲಿ ಪ್ರಾಮಾಣಿಕತೆಯಿಂದ ರೇನು ಎಂಬುದೇ ದೊಡ್ಡ ಸಮಸ್ಯೆಯಾಗಿದೆ ಅಧಿಕಾರಿಗಳು ಲಂಚ ಸ್ವೀಕರಿಸದಿರುವುದೇ, ಒಂದು ಪ್ರಾಮಾಣಿಕತೆಯೇ? ಸರ್ವಥಾ ಇಲ್ಲ. ಉತ್ತರ ಪ್ರದೇಶದ ಪ್ರಧಾನ ಮಂತ್ರಿಗಳಾದ ಶ್ರೀ ಸಂಪೂರ್ಣಾನಂದರು 'ಪ್ರಾಮಾಣಿಕತೆ'ಯ ವ್ಯಾಖ್ಯೆಯನ್ನು ವಿಸ್ತಾರವಾಗಿ ಮಾಡಿರುತ್ತಾರೆ. ಯಾವನೊಬ್ಬ ವ್ಯಕ್ತಿಯಾದರೂ ತನ್ನ ಕರ್ತವ್ಯವನ್ನು ನಿರ್ವಹಿಸುವುದಕ್ಕೆ ಯಾವ ಪ್ರಕಾರದ ಲಂಚವನ್ನಾದರೂ ಸ್ವೀಕರಿಸಿದರೆ, ಲಂಚದ ಆಧಾರದಿಂದ ಯಾವ ವಿಷಯದ ಪರವಾಗಿಯಾದರೂ ತನ್ನ ಅಭಿಪ್ರಾಯವನ್ನು ನಿಶ್ಚಯಿಸಿದರೆ, ಅಂತ ಹವು ವಸ್ತುತಃ ಪ್ರಾಮಾಣಿಕತೆಯಾಗಿದ್ದಾನೆ, ಮತ್ತು ಈ ತೆರದ ವ್ಯಕ್ತಿಯನ್ನು ಒಮ್ಮಿಂದೊಮ್ಮೆಲೇ ಅಧಿಕಾರದಿಂದ ನಿವೃತ್ತಿಗೊಳಿಸುವುದು ಶ್ರೇಯಸ್ಕರ. ಯಾವ ವಿಘೆವಲ್ಲಾದರೂ ಪ್ರಲೋಭನೆಯನ್ನು ತಡೆದುಕೊಳ್ಳುವುದು ಅಧಿಕಾರಿಯ ಅವಶ್ಯಕವಾದ ಕರ್ತವ್ಯವಾಗಿದೆ. ಯಾವತೇ ಮಿತ್ರ ಅಥವಾ ಆತ್ಮೀಯನ ಹಿತ ಅಥವಾ ಅಹಿತವು ಈ ಪ್ರಲೋಭನದಿಂದಾಗಬಾರದು. ಪ್ರಾಮಾಣಿಕತೆಯೇ ತನ್ನ ಕರ್ತವ್ಯ ನಿರ್ವಹಣಾ ಮಾರ್ಗವನ್ನು ಬೆಳಗುವ ಜ್ಯೋತಿಯಾಗಿರಬೇಕು.

ಪರಂಪರಾಗತ ರಾಜ್ಯತಂತ್ರವನ್ನು ಬಿಟ್ಟು ಉಳಿದ ವಿಧಾನದ ಶಾಸನ ಪದ್ಧತಿಯಲ್ಲಿ ಅಧಿಕಾರಿ ಮತ್ತು ಕರ್ಮಚಾರಿಗಳಿಗೆ ಪ್ರತಿಯೊಂದು ಕ್ಷಣದಲ್ಲಿಯೂ ಕಠಿಣ ಪರಿಸ್ಥಿತಿಯನ್ನು ಎದುರಿಸಬೇಕಾದ ಪ್ರಸಂಗಗಳು ಬರುತ್ತವೆ. ತನ್ನನ್ನು ಅಧಿಕಾರದಲ್ಲಿ ನಿಯುಕ್ತನನ್ನಾಗಿ ಮಾಡಿದ ಜನತೆಯ ಮೇಲೆ ತನ್ನ ವಿಶೇಷ ಅಧಿಕಾರವನ್ನು ಚಲಾಯಿಸಿ, ರಾಜ್ಯದ ಸಮಸ್ತ ಸಾಧನಗಳ ಉಪಯೋಗವು ತನ್ನ ವ್ಯಕ್ತಿಗತ, ದಳಗತ ಅಥವಾ ಜಾತಿಗತ ಸ್ವಾರ್ಥ ಸಿದ್ಧಿಗಾಗಿರಲು ಅವನು ಬಯಸುತ್ತಾನೆ. ಶಾಸನ ಸಂಬಂಧಿ ನೀತಿಗಳ ನಿರ್ಧಾರದಲ್ಲಿ ದಳಗತ ಸ್ವಾರ್ಥದಿಂದ ಸ್ವಭಾವಿತವಾಗುವುದು ಶಾಸನಗಳ ಆದರ್ಶ ಪರಂಪರೆ ಮತ್ತು ಆಯುಗಳಲ್ಲಿ ನೆಟ್ಟಿರುವ ವಿಶ್ವಾಸಗಳ ಎಡರಲ್ಲಿ ಮುಖ ತಿರುಗಿಸದಂತಾಗುವುದು. ಪ್ರಜಾರ್ಭುತ್ವದಲ್ಲಿ ಸರಕಾರದ ಸದಸ್ಯರು ಸಾಮಾನ್ಯ ಜನತೆಗೆ ಜವಾಬ್ದಾರರಾಗಿರುವುದರಿಂದ, ಮತ್ತು ಆಗಾಗ ಜನತೆಯ ವಿಶ್ವಾಸವನ್ನು ಪಡೆಯಬೇಕಾಗಿ ಬರುವುದರಿಂದ, ಸರಕಾರದ ಸ್ಥಿತಿಯು ಜಟಿಲವಾಗಿದೆ. ನಿಜವಾಗಿ ವಿಚಾರ ಮಾಡಿದರೆ, ಪ್ರಾಮಾಣಿಕ ಮತ್ತು ಸಚ್ಚಾರಿತ್ರ ವ್ಯಕ್ತಿಯೇ ಪ್ರಜಾಪ್ರಭುತ್ವ ಆಡಳಿತೆಯು ಯಶಸ್ವಿಯಾಗಲು ಸಹಾಯಕನಾಗಬಲ್ಲನು.

ಪ್ರಾಮಾಣಿಕತೆಯ ಅರ್ಥವನ್ನು ವ್ಯಾಖ್ಯಕರೂಪದಿಂದ ಗ್ರಹಿಸಿದಂತಾಯಿತು. ಆಡಳಿತೆಯಲ್ಲಿ ಭಾಷೆ, ರಾಜ್ಯಗಳ ಪಕ್ಷಪಾತವನ್ನೂ ಪಡೆಯಗೊಡಲಾರದು. ಇಂತಹ ರೀತಿಯ ಸಂಕುಚಿತ ಮನೋವೃತ್ತಿಯು ಹೇಡಿತನದ ಮೂಲವಾಗಿದೆ. ಈ ಪ್ರಕಾರದ ಹೇಡಿತನದಿಂದ ಶಾಸನವು ಎಂದೂ ಸಫಲಕಾರಿಯಾಗಿಲಾರದು. ಸತ್ಯವನ್ನು ವ್ಯವಹಾರದಲ್ಲಿ ತರಲು ಶಾಸಕನಲ್ಲಿ ಸಾಹಸ ಮತ್ತು ಚಾರಿತ್ರಬಲದ ಆವಶ್ಯಕತೆಯಿದೆ. ಅಲ್ಲದೆ, ಶಾಸನದ ಸಫಲತೆಯು ವಿಧಿನ್ನ ವಿಷಯಗಳ ವಿಶೇಷಜ್ಞರನ್ನೂ ರಾಜ್ಯದ ನಾಯಂಡಾರಲ್ಲಿಯೂ ಇರುವ ಸಹಯೋಗವನ್ನೂ ಹೊಂದಿಕೊಂಡಿದೆ. ಒಂದು ಶಾಸನವು ಮಾಡುವ ಕಾರ್ಯವನ್ನು ಮತ್ತು ಆ ಕಾರ್ಯಗಳ ಬಗೆಗಿರುವ ಜನತೆಯ ಆಜ್ಞೆಗಳ ಅವರ ಒರೆಗಲ್ಲೆಂದು ಬೇಕಬಹುದು. ಆ ಶಾಸನವು ವಿಶ್ವಾಸಾರ್ಹವಾಗಿದ್ದು ಪ್ರಾಮಾಣಿಕವಾಗಿದ್ದರೆ, ಉತ್ಪ್ರೇಕ್ಷವು ಸ್ವಚ್ಛವಾಗಿದ್ದರೆ ಜನತೆಯು ಅದನ್ನು ಆದರಿಸುತ್ತಾರೆ. ಶಾಸನ ಕಾರ್ಯಗಳನ್ನು ಪರಾಮರ್ಶಿಸುವ ಸರಕಾರೀ ಸದಸ್ಯರ ಜವಾಬ್ದಾರಿಯೂ ಕಡಿಮೆಯದಲ್ಲ. ಒಂದು ವಿಷಯದ ಸಮರ್ಥನೆಯನ್ನು ಪಡೆಯುವುದು, ಎಲ್ಲರನ್ನೂ ಪ್ರಸನ್ನಗೊಳಿಸುವ ಅಭಿಪ್ರಾಯದಿಂದ ಸಲಹೆಗಳನ್ನು ಕೊಡುವುದು ವಾಸ್ತವಿಕವಾಗಿ ಒಂದು ನೈತಿಕ ಅಪರಾಧವಾಗಿದೆ. ಕೆಲಪೊಮ್ಮೆ ದೇಶದ್ರೋಹವೂ ಆಗಿದೆ ಅದುದರಿಂದ ಶಾಸನ ಕಾರ್ಯವನ್ನು ಪರಾಮರ್ಶಿಸುವ ಜನರು ತಮ್ಮ ಸಲಹೆಗಳಿಂದ ಕೋಟ್ಯಂತರ ಜನರು ಪ್ರಭಾವಿತರಾಗುವ ಮಾತನ್ನು ಅನಶ್ಯಕವಾಗಿ ಧ್ಯಾನದಲ್ಲಿಟ್ಟುಕೊಳ್ಳಬೇಕಾಗಿದೆ.

ಇಂದು ಅಧಿಕಾರಸ್ಥಾನದಲ್ಲಿರುವ ವ್ಯಕ್ತಿಯ ಇಚ್ಛೆಗನುಗುಣವಾಗಿ ಸಲಹೆಗಳ ನ್ನೀಯುವುದು ಬಹಳ ಹೆಚ್ಚಾಗಿ ಕಂಡು ಬರುತ್ತದೆ. ಸರ್ವಾಧಿಕಾರೀ ಆಡಳಿತೆಯಲ್ಲಿ ತಪ್ಪು ಸಲಹೆಯಿತ್ತ ಜನರನ್ನು ಕೂಡಲೇ ದಂಡನೆಗೆ ಗುರಿ ಮಾಡಿದ ಹಲವಾರು ಉದಾಹರಣೆಗಳು ಕಂಡುಬರುತ್ತವೆ. ವಾಸ್ತವಿಕವಾಗಿ ಸ್ವತಂತ್ರ ಮಕವನ್ನಾಗಲೀ ಸಾಮಾನ್ಯ ಜ್ಞಾನ ಸಂಪಾದನೆಗಾಗಲೀ ಸಲಹೆಗಳನ್ನು ಪಡೆದುಕೊಳ್ಳದೆ, ಮೊದಲು ನಿರ್ಧಾರಿತವಾದ ನೀತಿ ಅಥವಾ ಅಭಿಪ್ರಾಯಗಳ ನೈತಿಕ ಸಮರ್ಥನೆಗಳಿಗಾಗಿ ಮಾತ್ರ ಪಡೆದುಕೊಳ್ಳಲಾಗುತ್ತದೆ. ಇಂತಹ ಪರಾಮರ್ಶೆಯು ನಿರುಪಯೋಗಿಯೆಂದು ತಿಳಿದಿದ್ದರೂ, ಇದಕ್ಕೆ ವಿಜ್ಞಾನ, ಧರ್ಮ ಮತ್ತು ನೈತಿಕತೆಯ ಅಂಗಿಯನ್ನು ಧರಿಸಿಕೊಂಡೇ ಕಾರ್ಯಕ್ರಮವೈತ್ತರಾಗುವುದರಿಂದ ನಿರ್ವಾಧಿಕಾರಿಗಳು ಸಂತೋಷಗೊಳ್ಳುತ್ತಾರೆ. ಪ್ರಜಾಪ್ರಭುತ್ವದಲ್ಲಿಯೂ ಈ ಪದ್ಧತಿಯನ್ನು ತ್ಯಜಿಸಿಬಿಡಲಾಗುವುದಿಲ್ಲ, ಪ್ರಜಾಪ್ರಭುತ್ವದಲ್ಲಿ ಅಧಿಕಾರೀ ವ್ಯಕ್ತಿಗಳ ಪಾಲಿಗೆ ತನ್ನ ಅಭಿನಿವೇಶದಲ್ಲಿರುವ ಕರ್ಮಚಾರಿಗಳಲ್ಲಿ ತಮ್ಮ ಸ್ವತಂತ್ರ ವಿಚಾರಗಳಿಗಾಗಿ ಕಲ್ಪದಲ್ಲಿ ಭಾಗಿಯಾಗದೆ ಇದ್ದು, ನಿರ್ವಯತಾಪೂರ್ವಕವಾಗಿ, ಪ್ರಾಮಾಣಿಕರಾಗಿ, ತಮ್ಮ ಸ್ವತಂತ್ರ ವಿಚಾರಗಳನ್ನು ವ್ಯಕ್ತಮಾಡುವ ವ್ಯಕ್ತಿ ಸಮಾಜದಲ್ಲಿ ಸನ್ಮಾನಿಸಲ್ಪಡುತ್ತಾನೆ ಎಂಬ ವಿಷಯದಲ್ಲಿ ವಿಶ್ವಾಸವನ್ನು ಹುಟ್ಟಿಸುವುದು ಗುರುತರವಾದ ಕರ್ತವ್ಯವಾಗಿದೆ.

(ಅನೇ ಪುಟ ನೋಡಿರಿ)


ಸಾತ್ರಿ ಮ್ಹಾಲು! ಅತ್ಯಾಕರ್ಷಕ ನಾಟಕ ಸಾಮಾನುಗಳು ಕಡಿಮೆ ಬೆಲ!



ಕುಣಿತ, ನರ್ತನ, ನಾಟಕಾದಿಗಳಲ್ಲಿ ನಟನಟಿಯರು ಉಪಯೋಗಿಸುವ ಯಾವತ್ತೂ ಕೊಡಲು, FILM WIG
ತೋಷನ್, ಗಡ್ಡ, ಮೀಡಾಳು, ಕಿರೀಟ, ಜರಿ ಜಲ್ಲರಿ, ಜರಿ ರವಣೆ, ಕವಿ ಬೆಂಡೋಲೆ, ತಾಟಿಗೆ ಹಚ್ಚುವ ನುರುಗಿನ ಅಂಟು, ತಲೆಕೂಡಿ ಸುತ್ತುವ ಬಲೆ ಇತ್ಯಾದಿ ಸಾಮಾನುಗಳು ಅತ್ಯಂತ ಸುಲಭ ಬೆಲೆಗೆ ಧಾರಾಳವಾಗಿ ದೊರೆಯುತ್ತವೆ. ಪತ್ರವ್ಯವಹಾರ ಇಂಗ್ಲೀಷ ಅಥವಾ ಮರಾಠಿಯಲ್ಲಿ. ನಿಮಿತರ ಕ್ಯಾಟಲಾಗಿಗೆ ಬರೆಯಿರಿ:

**DHARAMSHI MULJI, DRESSWALA,** 132—C, Bhagatwadi, Bhulleshwar Roap, BOMBAY-2.

# NAVAYUGA

Popular Kannada Weekly

*Founder:—*

**A. B. SHETTY,** *M. L. A.*
Former Minister for Public Health, Govt. of Madras.
At Present Minister for Health Govt of Mysore

# ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

| ಸಂಪುಟ | ಉಡುಪಿ | ಸಂಚಿಕೆ |
|---|---|---|
| ೩೬ | ೧೪-೪-'೫೭ | ೩೨ |


## ರೈಲ್ವೆ ಸಪ್ತಾಹ

ನಮ್ಮ ರೈಲ್ವೆಯವರು ಸಾಧಿಸಿದ ಪ್ರಗತಿಯನ್ನು ಜನರಿಗೆ ಮಂದಟ್ಟುಪಡಿಸುವ ಸಲುವಾಗಿಯೂ ಜನರು ರೈಲ್ವೆಗಳ ಬಗ್ಗೆ ಏನು ಭಾವಿಸುವರೆಂಬುದನ್ನು ತಿಳಿದುಕೊಳ್ಳುವ ಸಲುವಾಗಿಯೂ ಈ ವಾದವನ್ನು ರೈಲ್ವೆ ಸಪ್ತಾಹದ ರೂಪದಲ್ಲಿ ಆಚರಿಸುತ್ತಿದ್ದಾರೆ. ಸ್ವಾತಂತ್ರ್ಯ ಪ್ರಾಪ್ತಿಯ ಬಳಿಕದ ಹತ್ತು ವರ್ಷಗಳಲ್ಲಿ ನಮ್ಮ ರಾಷ್ಟ್ರದ ಅಭಿವೃದ್ಧಿಕೆ ರೈಲ್ವೆಗಳು ಸಲ್ಲಿಸಿದ ಸೇವೆಯನ್ನು ಇಷ್ಟೇ ಅಷ್ಟೇ ಎಂದು ನಾವೇನೂ ಕೇಳುವಂತಿಲ್ಲ. ನಮ್ಮ ದೇಶವು ಯೋಜನಾಬದ್ಧ ಪ್ರಗತಿಯ ಪಥದಲ್ಲಿ ನುನ್ನಡೆಯಲು ದೃಢ ಸಂಕಲ್ಪವನ್ನು ಕೈಗೊಂಡಿರುವಾಗ, ಅದರ ಕಾರ್ಯಕ್ರಮವಲ್ಲಿ ಏನೇನೂ ನ್ಯೂನತೆ ಉಳಿಯದಂತೆ ನೋಡಿಕೊಳ್ಳುವ ಜವಾಬ್ದಾರಿ ತಾನಾಗಿಯೇ ಬರುತ್ತದೆ. ಯೋಜನೆಯ ಕಾರ್ಯಾಚರಣೆಗೆ ಅವಶ್ಯವೆನಿಸಿದ ಪ್ರತಿಯೊಂದೂ ವಸ್ತುವನ್ನು ಆದು ಬೇಕೆನಿಸಿದ ಸ್ಥಳಕ್ಕೆ ಅವಶ್ಯವೆನಿಸಿದ ಹೊತ್ತಿಗೆ ತಪ್ಪದೆ ಮುಟ್ಟಿಸುವ ಈ ಹೊಣೆಯನ್ನು ನಮ್ಮ ರೈಲ್ವೆಗಳು ಸಾಕಷ್ಟು ಉತ್ತಮ ರೀತಿಯಲ್ಲಿಯೇ ನಿರ್ವಹಿಸಿವೆ ಎಂಬುದು ನಮ್ಮೆಲ್ಲರ ಅನುಭವಕ್ಕೆ ಬಂದಿರುವಂಥ ವಿಷಯ. ಎರಡನೇ ಯೋಜನೆಯ ವಿಷಯದಲ್ಲಿ ಕೂಡ ಮೊದಲನೇ ಯೋಜನೆಯ ಅನುಭವದಷ್ಟೇ ಸಮಿಯಾದ ಕೆಲಸ ನಡೆದೀತೆಂದು ನಂಬಲು ಆಧಾರಗಳಿವೆ. ನಮ್ಮ ಕೈಗಾರಿಕೆಗಳ ಅಭಿವೃದ್ಧಿಯಲ್ಲಿ ರೈಲ್ವೆಯು ಎಷ್ಟು ಮಹತ್ವದ ಪಾತ್ರ ವಹಿಸುತ್ತ ಪ್ರಧಾನವಾದ ಪಾತ್ರವನ್ನು ವಹಿಸುವುದೆಂಬುದರ ಸ್ವಲ್ಪಮಟ್ಟಿನ ಕಲ್ಪನೆಯನ್ನು ಮಾಡಿಕೊಳ್ಳಬೇಕಾದರೆ, ನಾವು ಉಕ್ಕು ಮತ್ತು ಕಬ್ಬಿಣದ ಉತ್ಪಾದನೆಯನ್ನು ಮಾಡುವ ಕಾರ್ಯಕಲಾಪಗಳನ್ನು ನೋಡಬಹುದು. ಅಲ್ಲಿನ ಪ್ರತಿಯೊಂದೂ ಕೆಲಸಕ್ಕೂ ರೈಲಿನ ಸಹಾಯವಿಲ್ಲದೆ ನಡೆಯದು. ಇದೇ ಮಾತು ವ್ಯಾಪಾರ ವ್ಯವಹಾರಕ್ಕೂ ಅನ್ವಯಿಸುತ್ತದೆ. ನಮ್ಮ ಸಾಮಾನ್ಯ ಸರಂಜಾಮುಗಳ ಸಾಗಾಟಕ್ಕೆ ರೈಲ್ವೆಯಷ್ಟು ಉತ್ತಮ ಸರಳವೂ ಸುಲಭ ಖರ್ಚಿನದೂ ಆದ ಬೇರೊಂದು ದಾರಿ ತೆರೆದಿಲ್ಲ. ದೇಶದ ಒಳಗೆ ವ್ಯಾಪಾರ ಹಾಗೂ ಕೈಗಾರಿಕೆಗಳ ಕ್ಷೇತ್ರದಲ್ಲಿ ಎಷ್ಟು ಮಟ್ಟಿಗೆ ಚಟುವಟಿಕೆ ಹೆಚ್ಚಿದೆಯೆಂದರೆ, ನಮ್ಮ ರೈಲ್ವೆಗಳ ದಕ್ಷತೆಯ ಪ್ರಶಂಸಗಿಂತಲೂ ಅವುಗಳ ನ್ಯೂನತೆಯ ಕುರಿತಾಗಿಯೇ ಜನರು ಈಗ ಜೋರಿನಿಂದ ಆಡುವಂತಾಗಿದೆ. ಉದಾಹರಣೆಗೆ, ಸರಕು ಸಾಗಾಟದ ಸಲುವಾಗಿ ಹಬ್ಬಗಳು ಸಾಕಷ್ಟು ಪ್ರಮಾಣದಲ್ಲಿ ಸಿಗದೆ ಹೋಗುತ್ತವೆ; ಈ ಸರಕುಗಳು ತಮ್ಮ ಗುರಿಯನ್ನು ಮುಟ್ಟುವಾಗ ಬಹಳ ವಿಳಂಬವಾಗುತ್ತದೆ; ರೈಲ್ವೆಗಳು ಸ್ಥಾನವಾಗಿ ನಡೆಯುತ್ತವೆ ಅವಕ್ಕೆ ಪೆಟ್ಟಿನ ಭಾರವನ್ನು ಹೆಚ್ಚಿಸಿ ವೇಗದಲ್ಲಿ ಒಯ್ಯುವ ಕಾರ್ಯಕ್ಷಮತೆ ಇಲ್ಲ— ಎಂದು ಮುಂತಾದವುಗಳು ಸಾಮಾನ್ಯ ದೂರೆಂದು ಹೇಳಬಹುದು. ಎರಡನೇ ಯೋಜನೆಯಲ್ಲಿ ಈ ದೂರಿನ ಕಡೆಗೆ ತುಸು ಗಮನವನ್ನು ಹರಿಸಿದ್ದಾರೆ— ಉದಾಹರಣೆಗೆ ರೈಲ್ವೆಗಳಲ್ಲಿ ಪೆಟ್ಟಿನ ಒತ್ತಡವಿರುವ ಕಡೆ ಇನ್ನೊಂದು ಸಾಲು ಮಾರ್ಗದ ರಚನೆಗೆ ಹಣ ತೆಗೆದಿರಿಸಲಾಗಿದೆ; ಅಲ್ಲದೆ ಮೀಟರ್ ಗೇಜ್ ರಸ್ತೆಗಳನ್ನು ಬ್ರಾಡ್ ಗೇಜ್ ರಸ್ತೆಗಳಾಗಿ ಪರಿವರ್ತಿಸಲಿಕ್ಕೂ ವಿದ್ಯುಚ್ಛಕ್ತಿಯ ಬಲದಿಂದ ನಡೆಯುವ ಯಂತ್ರಗಳನ್ನು ಬಳಸಲಿಕ್ಕೂ ವ್ಯವಸ್ಥೆ ಏರ್ಪಟ್ಟಿದೆ. ಇವೆಲ್ಲವುಗಳಿಂದ ವ್ಯಾಪಾರ ವ್ಯವಹಾರಕ್ಕೆ ಹಿಂದಿಗಿಂತ ಹೆಚ್ಚಿನ ಅನುಕೂಲತೆಯೊದಗುವುದರಲ್ಲಿ ಸಂದೇಹವಿಲ್ಲ. ಅದೇ ಹೊತ್ತಿಗೆ ರೈಲ್ವೆಗಳು ಪ್ರಯಾಣಿಕರಿಗೆ ಸಲ್ಲಿಸುವ ಸೇವೆಯೂ ಹಿಂದಿಗಿಂತ ಹೆಚ್ಚು ಮೆಚ್ಚುಗೆಯದಾಗುವುದೆಂದು ಭಾವಿಸಬಹುದು. ಏಕೆಂದರೆ, ರೈಲ್ವೆಗಳು ಸರಕು ಸಾಗಾಟದ ಸಲುವಾಗಿಯೇ ಬಳಸಲ್ಪಡುತ್ತಿಲ್ಲ—ನಮ್ಮ ದೇಶದಲ್ಲಿ ಅತಿ ಹೆಚ್ಚಿನ ಜನರು ಉಪಯೋಗಿಸುವ ಅತಿ ಕಡಿಮೆ ಖರ್ಚಿನ ಪ್ರವಾಸ ವಿಧಾನವೆಂದರೆ ರೈಲ್ವೆ ಪ್ರಯಾಣ. ಎಲ್ಲೆಲ್ಲಿ ರೈಲ್ವೆ ಪ್ರಯಾಣ ಸಾಧ್ಯವೊ ಅಲ್ಲೆಲ್ಲ ಜನರು ಸಂತೋಷದಿಂದ ರಾತ್ರಿಹಗಲೆನ್ನದೆ ರೈಲ್ವೆಗಳ ಬರವನ್ನು ನಿರೀಕ್ಷಿಸುತ್ತಾ ಕುಳಿತಿರುತ್ತಾರೆ. ಅದರೆ ಈಜಿನ ರೈಲ್ವೆಗಳಲ್ಲಿ ಕೆಲವು "ದುರಂತ" ಘಟನೆಗಳು ಉಂಟಾಗಿವೆ—ನೂರಾರು ಮಂದಿಯ ಪ್ರಾಣಾಹುತಿಯನ್ನು ತೆಗೆದುಕೊಂತ ಅವಘಡಗಳ ದೆಸೆಯಿಂದ ಸಾರ್ವಜನಿಕರು ರೈಲ್ವೆಯು ದಕ್ಷತೆಯ ಬಗ್ಗೆ ಸಂದೇಹಿಸುವಂತಾಗಿದೆ. ರೈಲ್ವೆಯವರು ಇದನ್ನು ಗಮನಿಸಿದ್ದಾರೆಂದೂ ಸಂಕಗಳ ಹಾಗು ಮಾರ್ಗಗಳ ದುರಸ್ತಿಗೆ ವಿಶೇಷ ಲಕ್ಷ್ಯವನ್ನು ಹೂರ್ವಿಸುತ್ತಿದ್ದಾರೆಂದೂ ಈಗ ತಿಳಿದುಬರುತ್ತದೆ ಸುಮಾರು ಎಂಟುಸಾವಿರ ಮೈಲುಗಳಷ್ಟು ರೈಲ್ವೆ ಮಾರ್ಗಗಳ ಪುನಾರಚನೆಯ ಸಲುವಾಗಿ ಎರಡನೇ ಯೋಜನೆಯಲ್ಲಿ ಅವಕಾಶ ಮಾಡಿಕೊಡಲಾಗಿದೆ. ಈ ಮಾರ್ಗವು ಸಾಕಷ್ಟು ದೀರ್ಘವಾಗಿದೆ ಇನರ ಮುಂದೆ ಹೊಸತಾಗಿ ನಿರ್ಮಾಣವಾಗಲಿರುವ, ಅಂದರೆ, ಹೊಸ ಕೇಂದ್ರಗಳನ್ನು ಸ್ಪರ್ಶಿಸಿ ಸಾಗುವ ರೈಲ್ವೆ ಸಾರ್ಗದ ಉದ್ದಳತೆ ಬಹಳ ಸ್ವಲ್ಪವೆನಿಸುತ್ತದೆ. ಹಳೆಯ ರಸ್ತೆಗಳ ಮರಸ್ತಿ ಅಥವಾ ಪುನಾರಚನೆಯನ್ನು ಕೆಲವು ವರ್ಷಗಳ ವರೆಗೆ ತಡೆದು ಹಿಡಿಯಬಹುದಾಗಿದ್ದರೆ, ಅನೇಕ ಹೊಸ ಊರುಗಳಿಗೆ ರೈಲ್ವೆಯ ಸಂಪರ್ಕ ಸಾಧ್ಯವಾಗಿ ಬರುತ್ತಿತ್ತೆನ್ನಬಹುದು. ಆದರೆ ಪ್ರಯಾಣಿಕರ ಕ್ಷೇಮಚಿಂತನೆಯು ಪ್ರಧಾನವಾದ ವಿಷಯವಾದುದರಿಂದ ಅವರಿಗೆ ಅವಘಡವಾಗುವ "ಛಾನ್ಸು" ಸಾವಿರದಲ್ಲಿ ಒಂದೇ ಇರಲಿ—ಅದನ್ನು ನಿವಾರಿಸಲು ಮಾನವ ಮಿತಿಯೊಳಗಿನ ಸಕಲ ಪ್ರಯತ್ನಗಳನ್ನು ಕೈಗೊಳ್ಳುವುದು ರೈಲ್ವೆಯವರ ಅಪೇಕ್ಷೆಯಾಗಿರುವ ಪ್ರಯುಕ್ತ ರೈಲ್ವೆಗಳ ಪರಿಚಯ ದೇಶದ ಹೊಸ ಮೂಲೆಗಳಿಗೆ ಆಗುವಲ್ಲಿ ವಿಳಂಬ ಉಂಟಾಗಿದೆ ಈ ಪರಿಸ್ಥಿತಿಯನ್ನು ತೃಪ್ತಿಕರವೆಂದು ನಾವುಭಾವಿಸುವಂತಿಲ್ಲ. ಆದರೆಲ್ಲೂ ಆಗುವ ಕೆಲವು ಹೊಸ ಮಾರ್ಗಗಳಾದರೂ ದಕ್ಷಿಣಕ್ಕಿಂತ ಹೆಚ್ಚಾಗಿ ದೇಶದ ಉತ್ತರ ಭಾಗದಲ್ಲಿ ರಚನೆಯಾಗುತ್ತವೆ ಎಂಬುದನ್ನೆರಿತು ಖೇದವಾಗುವುದೇ ನಿಜ. ನಮ್ಮ ದೇಶ ವಿಶಾಲವಾಗಿದೆ—ಅಭಿವೃದ್ಧಿ ಪ್ರಯತ್ನಗಳು ಅವಶ್ಯಕತೆಯ ಪ್ರಮಾಣವನ್ನು ಅವಲಂಬಿಸಿವೆ—ಎಲ್ಲ ನಿಜ. ಆದರೆ ಮುಂಬಯಿಯಿಂದ ಕನ್ಯಾಕುಮಾರಿಗೆ ಹೋಗಬೇಕೆಂದು ಬಯಸುವಾತನಿಗೆ ಅನುಕೂಲವಾದ ಒಂದೇ ಒಂದು ರೈಲು ಮಾರ್ಗದ ರಚನೆ ಆಗಲಿಲ್ಲ! ಉತ್ತರ ಹಾಗು ದಕ್ಷಿಣ ಕನ್ನಡ ಜಿಲ್ಲೆಗಳನ್ನು ಒಂದುಗೂಡಿಸುವ ಮತ್ತು ಈ ಪ್ರದೇಶಗಳನ್ನು ಕರ್ನಾಟಕದ ಇತರ ಪ್ರಮುಖ ಕೇಂದ್ರಗಳಿಗೆ ಜೋಡಿಸುವ ರೈಲ್ವೆಯ ರಚನೆ ಈ ಭಾಗದ ಅಭಿವೃದ್ಧಿಗೆ ಅತ್ಯಗತ್ಯವಾಗಿದೆ ಎಂದು ಕಳೆದ ಹತ್ತೈವತ್ತು ವರ್ಷಗಳಿಂದ ಒತ್ತಿ ಒತ್ತಿ ಹೇಳುತ್ತಾ ಬಂದಿದ್ದರೂ ಈ ರೀತಿಯಾಗಿದೆ. ಇನ್ನಿ ಪ್ರಾದೇಶಿಕ ಭಾವನೆಯು ಅಮಲಿಗೇರಲಿಗಾಗಿ ನಾವು ಜರಿಯುತ್ತಿದ್ದೇವೆಂದು ಯಾರೂ ತಿಳಿದು ಉಳಾಗದು. ದೇಶದ ಹಿತಕ್ಕೆ ಈ ರೈಲ್ವೆಗಳ ರಚನೆಯು ತುಂಬ ಪೋಷಕವಾಗಿದೆ; ಮತ್ತು ಪ್ರಗತಿಯ ವೇಗವನ್ನು ಇದು ದ್ರುತಗೆಳಿಸುತ್ತದೆ ಎಂಬ ಸಾಮಾನ್ಯ ಜ್ಞಾನವೇ ಈ ಒತ್ತಾಯದ ತಳಗಟ್ಟು. ನಮ್ಮ ರೈಲ್ವೆಯ ಅಧಿಕಾರಿಗಳೂ ಸರಕಾರಿ ಮುಖಂಡರೂ ಇದನ್ನು ಎಷ್ಟು ಬೇಗ ಕೇಳಿಕೊಂಡರೂ ಅಷ್ಟು ಬೇಗ ದೇಶದ ಈ ಭಾಗದ ಅಭಿವೃದ್ಧಿ ಕೈಗೂಡೀತು. ಈ ನಡುವೆ ರೈಲ್ವೆಯವರು ನಡೆಸಿಕೊಡಬೇಕಾದ ಬೇರೆ ಕೆಲಸಗಳಲ್ಲಿ ಪ್ರಯಾಣಿಕರಿಗೆ ಹೆಚ್ಚಿನ ಸೌಕರ್ಯಗಳನ್ನು ಒದಗಿಸುವುದು ಪ್ರಾಮುಖ್ಯವಾಗಿದೆ—ವಿದ್ಯುತ್ತಿನಿಂದ ನಡೆಯುವ ಯಂತ್ರಗಳ ಬಳಕೆಯಿಂದ ಶೀಘ್ರ ಪ್ರಯಾಣವು ಸಾಧ್ಯವಾಗುತ್ತದೆ. ಈ ಸೌಲಭ್ಯವನ್ನು ಸಾಧ್ಯವಿದ್ದಷ್ಟು ತ್ವರಿತಿಯಾಗಿ ವಿಸ್ತರಿಸುತ್ತಾ ಹೋಗುವುದು ಇಷ್ಟವಾಗಿದೆ. ಹಾಗೆಯೇ ವಿದ್ಯುತ್ತಿನ ಬೀಸಣಿಗೆ, ಮಲಗಲು ಅನುಕೂಲತೆ ಇತ್ಯಾದಿಗಳನ್ನು ಒದಗಿಸಿಕೊಡುವುದು ಸುಖ ಪ್ರಯಾಣದ ದೃಷ್ಟಿಯಿಂದ ಅಪೇಕ್ಷಣೀಯವಾಗಿವೆ. ಈ ದಿಸೆಯಲ್ಲಿ ಸ್ವಾಗತಾರ್ಹವಾದ ಹೆಜ್ಜೆಗಳನ್ನು ರೈಲ್ವೆಯವರು ಮುಂದಿಟ್ಟಿದ್ದರೂ ಪ್ರಯಾಣಿಕರಲ್ಲಿ ನೂರಕ್ಕೆ ಎದು ಮಂದಿಗೂ ಈ ಪ್ರಯೋಜನಗಳು ತಲುಪಿಲ್ಲವೆಂದರೆ ಅತ್ಯುಕ್ತಿಯಾಗಲಾರದು. ಈಗಿರುವ ಸ್ಥಿತಿಗತಿಯನ್ನು ಅವಲೋಕಿಸುವುದಾದರೆ, ಮೂರನೇ ದರ್ಜೆಯ ಪ್ರಯಾಣಿಕನಿಗೆ ಮಲಗುವುದಿರಲಿ, ಸರಿಯಾಗಿ ಕುಳಿತಿರಲು ಸ್ಥಾನ ಸಿಗುವುದೇ ವಿರಳ: ಸಹ ಪ್ರಯಾಣಿಕರ ಬಟ್ಟೆಕೆ ಅಷ್ಟು ಹೆಚ್ಚಾಗಿರುತ್ತದೆ. ರೈಲ್ವೆ ಡಬ್ಬಿಗಳಲ್ಲಿ ನೈರ್ಮಲ್ಯ ದಕ್ಷತೆ, ಭಿಕ್ಷುಕರಿಂದ ಪ್ರಯಾಣಿಕರಿಗೆ ತೊಂದರೆಯಾಗದಂತೆನೋಡಿಕೊಳ್ಳುವಿಕೆ ಪ್ರಯಾಣಿಕರೊಡನೆ ಸಭ್ಯ ವ್ಯವಹಾರ—ಇವು ರೈಲ್ವೆಯವರು ಗಮನಿಸಬೇಕಾದ ಇತರ ಮುಖ್ಯ ವಿಷಯಗಳೆಂದು ಹೂಡಿ ಸಬಹುದು. ರೈಲ್ವೆ ಅಧಿಕಾರಿಗಳು ಸಭ್ಯತಾ ಸಪ್ತಾಹಕಾಲದಲ್ಲಿ ಮಾತ್ರ ಸಭ್ಯರಾಗಿರುತ್ತಾರೆಂದೂ ಆಗ ವ್ಯಕ್ತಪಡಿಸಿದ ಸಭ್ಯತೆಯ ಮಟ್ಟವು ಮುಂದಿನ ಸಪ್ತಾಹದಿಂದಲೇ ಕುಸಿಯುತೊಡಗುತ್ತದೆಂದೂ ವ್ಯಂಗ್ಯವಾಗಿ ಜನರು ಹೇಳುವುದುಂಟು. ಇದು ಅತಿಶಯೋಕ್ತಿ. ಪ್ರಧಾನ ವ್ಯಂಗ್ಯವಾಗಿದ್ದರೂ ಸಹ, ರೈಲ್ವೆ ಅಧಿಕಾರಿಗಳು ಪ್ರಯಾಣಿಕರನ್ನು ಸ್ನೇಹ ಗೌರವಗಳಿಂದ ಯಾವಾಗಲೂ ನಡೆಸಿಕೊಳ್ಳುತ್ತಿಲ್ಲವೆಂದೂ ಅವರ ಸಿಡುಕು ಹಾಗು ದರ್ಪಗಳು ಮುಗ್ಧ ಪ್ರಯಾಣಿಕರನ್ನು ಕ್ಲೇಶಭೀತಿಗೊಳಿಸುತ್ತವೆಂದೂ ಸಾಮಾನ್ಯವಾಗಿ ಅಭಿಪ್ರಾಯಪಡಬಹುದು. ಈ ಅಭಿಪ್ರಾಯ ಬದಲಾವಣೆಗೆ ರೈಲ್ವೆ ಅಧಿಕಾರಿಗಳು ಶ್ರಮಿಸಿದ ಪಕ್ಷದಲ್ಲಿ ಅವರಿಗೆ ಪ್ರಯಾಣಿಕರಿಂದ ಹೆಚ್ಚಿನ ಸಹಕಾರ ಸಿಗುವುದರಲ್ಲಿ ಸಂಶಯವಿಲ್ಲ.

---

## ಮೈಸೂರಿನ ಹೊಸ ಮಂತ್ರಿ ಸಂಪುಟ

### ಇಷ್ಟರಲ್ಲೆ ಪ್ರತಿಜ್ಞಾವಿಧಿ

ನಮ್ಮ ಈ ಸಂಚಿಕೆಯು ಮುದ್ರಣಕ್ಕೆ ಹೋಗುವ ವರೆಗೆ (ಬುಧವಾರ ಮಧ್ಯಾಹ್ನ-ತಾ. 17) ಮೈಸೂರಿನ ಹೊಸ ಮಂತ್ರಿ ಮಂಡಳದಲ್ಲಿ ಯಾರ್ಯಾರಿರುವರೆಂಬ ಸುದ್ದಿ ಕೈಸೇರಿಲ್ಲ. ಶಾಸನಸಭೆಯಲ್ಲಿ ಕಾಂಗ್ರೆಸು ಪಕ್ಷದ ಧುರೀಣನಾಗಿ ಆಯ್ಕೆಗೊಂಡಿರುವ ಶ್ರೀ ನಿಜಲಿಂಗಪ್ಪನವರು ೧೬ನೇ ಮಂಗಳವಾರ ಸಂಜೆ ತಮ್ಮ ಮಂತ್ರಿ ಸಂಪುಟದ ಸದಸ್ಯರ ಹೆಸರನ್ನು ಹೇಳುವೆನೆಂದು ನೆಹರು ತಿಳಿಯಪಡಿಸಿದ್ದರೂ ಕೊನೆಗೆ ಆ ಸಲುವಾಗಿ ಏರ್ಪಡಿಸಿದ್ದ ಕಾರ್ಯಕ್ರಮವನ್ನು ರದ್ದುಗೊಳಿಸಿದರು. ಮಂತ್ರಿಗಳ ನೇಮಕಸಂಬಂಧದಲ್ಲಿ ಕೆಲವು "ವಿರೋಧ"ಗಳು ಬಂದಿರುವ ದೆಸೆಯಿಂದ ಹೀಗೆಮಾಡಲಾಯಿತೆಂದು ತಿಳಿದುಬರುತ್ತದೆ. ಶ್ರೀ ನಿಜಲಿಂಗಪ್ಪನವರು ತಯಾರಿಸಿದ ಯಾದಿಯಲ್ಲಿ ಸ್ವಲ್ಪ ಮಟ್ಟಿನ ಬದಲಾವಣೆಯನ್ನು ಈ ವಿರೋಧವು ಅವಶ್ಯವಾಗಿ ಮಾಡಿರಬಹುದೆಂದು ಪದಂತಿ ಹಬ್ಬರುತ್ತದೆ.

### ನಾಯಕರೊಡನೆ ಸಮಾಲೋಚನೆ

ಹೊಸ ದೆಹಲಿಯಲ್ಲಿ ಕಾಂಗ್ರೆಸಿನ ವರಿಷ್ಠರೊಡನೆ ಸಮಾಲೋಚನೆಯೆನ್ನು ನಡೆಸಿಬಂದ ಶ್ರೀ ನಿಜಲಿಂಗಪ್ಪನವರು ತಮ್ಮ ಮಂತ್ರಿಮಂಡಳದಲ್ಲಿ ೧೫ ಮಂದಿ ಸದಸ್ಯರಿರುವರೆಂದೂ ಅವರಲ್ಲದೆ ಬೇರೆ ಐದಾರು ಉಪಮಂತ್ರಿಗಳಿರುವರೆಂದೂ ಅವರಲ್ಲಿ ಇಬ್ಬರನ್ನು ಈ ಕೂಟವೇ ನೇಮಿಸುವುದಾಗಿಯೂ ಮಹಿಳಾ ಮಂತ್ರಿ ಇರುವುದಿಲ್ಲವೆಂದೂ ಆದರೂ ಒಬ್ಬಿಬ್ಬರು ಮಹಿಳೆಯರನ್ನು ಉಪಮಂತ್ರಿಗಳಾಗಿ ನೇಮಿಸುವ ವಿಚಾರವಿರಬಹುದೆಂದೂ ಹೇಳಿದ್ದರು. ಹಳೆ ಮೈಸೂರಿನಿಂದ ಐವರು ಮಂತ್ರಿಗಳನ್ನು ಆರಿಸಿ, ಉಳಿದವರನ್ನು ಹೊಸ ಮೈಸೂರಿನ ಇತರ ಪ್ರದೇಶದಿಂದ ಆರಿಸುವುದು ಅವರ ಅಭಿಲಾಷೆಯೆಂದೂ ಸ್ಪಷ್ಟವಾಗಿದ್ದಿತು. ಅಂತೂ ನಜೀವ ಸಂಪುಟದ ಯಾದಿಯು ಪತ್ರಿಕೆ ಮರ್ತೆಯು ಹೆಚ್ಚು ಸಮಯವನ್ನು ತೆಗೆದುಕೊಳ್ಳಲಿಕ್ಕಿಲ್ಲ. ಇಂದು ನಾಳೆಯಲ್ಲಿ ಎಲ್ಲವೂ ಸ್ಪಷ್ಟವಾಗಿ ಇಷ್ಟರಲ್ಲೆ ಹೊಸ ಮಂತ್ರಿ ಮಂಡಳದ ಪ್ರತಿಜ್ಞಾವಿಧಿ

ವಿಧಿ ಜರಗುವುದು ಸಂಭವನೀಯ.

**ಕೇಂದ್ರ ಮಂತ್ರಿ ಮಂಡಲ**

ಭಾರತ ಸರಕಾರದ ಸಚಿವ ಸಂಪುಟದ ರಚನೆ ನಾಮೆಯನ್ನು ಪ್ರಧಾನಿ ನೆಹರು ಡಿಪಚಾರಿಕವಾಗಿ ರಾಷ್ಟ್ರಾಧ್ಯಕ್ಷರಿಗೆ ಇದೇ ೧೫ನೇ ತಾರೀಕಿನಂದು ಸಲ್ಲಿಸಿದರು. ನೆಹರುರವರು ಲೋಕಸಭೆಯಲ್ಲಿ ಬಹು ಮತ ಪಡೆದ ಕಾಂಗ್ರೆಸು ಪಕ್ಷದ ಧುರೀಣ ನಾಗಿ ಆರಿಸಲ್ಪಟ್ಟರುವ ಪ್ರಯುಕ್ತ ಅವ ರನ್ನೇ ರಾಷ್ಟ್ರಾಧ್ಯಕ್ಷರು ಪುನಃ ಪ್ರಧಾ ನಿಯಾಗಿ ನೇಮಿಸಿ, ಮಂತ್ರಿಮಂಡಳ ರಚಿಸಲು ಕೇಳಿಕೊಂಡಿದ್ದಾರೆ. ಹೊಸ ಲೋಕಸಭೆಯ ಅಧಿವೇಶನವು ಮೇ ತಿಂ ಗಳ ೧೧ನೇ ತಾರೀಕಿಗೆ ನಡೆಯಲಿನ್ನು ಅದಕ್ಕೆ ಕೆಲವು ದಿನ ಮುಂಚೆ ರಾಷ್ಟ್ರಾ ಧ್ಯಕ್ಷ ಹಾಗು ಉಪರಾಷ್ಟ್ರಾಧ್ಯಕ್ಷ ಸ್ಥಾನಗಳನ್ನು ಅಲಂಕರಿಸುವ ವ್ಯಕ್ತಿಗಳ ಹೆಸರು ಗೊತ್ತಾಗುತ್ತದೆ. ಈಗಿನ ತಿಳಿವಳಿಕೆಯಂತೆ ಡಾ. ಪ್ರಸಾದರೇ ರಾಷ್ಟ್ರಾ ಧ್ಯಕ್ಷರಾಗಿ ಹಾಗು ಶ್ರೀ ರಾಧಾಕೃಷ್ಣನ್ನೇ ಉಪರಾಷ್ಟ್ರಾಧ್ಯಕ್ಷರಾಗಿ ಮುಂದರಿ ಯುವುದು ನಿಶ್ಚಯ. ಆವರಿಬ್ಬರ ನಾಮ ಪತ್ರಗಳನ್ನೂ ನಿಯಮದಂತೆ ಚುನಾವ ಣಾಧಿಕಾರಿಗಳಿಗೆ ಸಲ್ಲಿಸಲಾಗಿದೆ. ಈ ಸ್ಪ ರ್ಧೆಯಲ್ಲಿ ಭಾಗವಹಿಸುವ ಇತರರು "ನಾಮ್ — ಕೇ — ವಾಸ್ತೇ" ಪಣ ತೊಟ್ಟರುವಂತೆ ತೋರುತ್ತದೆ. ಏಕೆಂದರೆ ಅವರು ಗೆಲ್ಲುವ ಆಸೆಯು ನೂರರಲ್ಲಿ ಒಂದರಷ್ಟೂ ಇಲ್ಲ!

**ಕಾಶ್ಮೀರ**

ಪ್ರಧಾನಿ ನೆಹರುಗಳ ಆಮಂತ್ರಣದಂ ತೆ ಭಾರತಕ್ಕೆ ಬಂದು ಇಲ್ಲಿ ಸಂಚಾರ ಕೈ ಗೊಂಡು ಆ ಕಾಲದಲ್ಲಿ ಕಾಶ್ಮೀರ ಪ್ರವಾ ಸವನ್ನೂ ಮಾಡಿ ಈಗ ಸ್ವದೇಶಕ್ಕೆ ಮರ ಳುವ ದಾರಿಯಲ್ಲಿ ಕರಾಚಿಗೆ ಹೋಗಿರುವ ಬ್ರಿಟನಿನ ಕೂಲಿಕಾರರ ಎಡಪಕ್ಷದ ನಾ ಯಕ ಶ್ರೀ ಬೇವಾನರು ಕಾಶ್ಮೀರದ ಸಮ ಸ್ಯೆಯಲ್ಲಿ ಭಾರತವು ವಹಿಸಿದ ನಿಲುಮೆಯು ನ್ಯಾಯಪೂರ್ಣವಾದುದೆಂದು ಭಾರತದ ಲ್ಲಿ ಮಾತ್ರವಲ್ಲ—ಪಾಕಿಸ್ತಾನದಲ್ಲೂ ಹೇ ಳಿದ್ದಾರೆ. ಇದರಿಂದ ಪಾಕಿಸ್ತಾನದ ಸರ ಕಾರವೂ ಅಲ್ಲಿಯ ಪತ್ರಿಕೆಗಳೂ ರೇಗಿ ಬಿದ್ದಿವೆ ಮತ್ತು ಸರಕಾರಿ ಅಧಿಕಾರಿ ಗಳು ಹೇಳಲಾರದ ಮಾತುಗಳಿಂದ ಪತ್ರಿಕೆಗಳು ಬೇವಾನರನ್ನು ಜರೆ ದಾಡಿರುತ್ತವೆ. ಕಾಶ್ಮೀರ ಪ್ರಶ್ನೆ ಪ್ರಶ್ನೆಯಲ್ಲಿ ಪಾಕಿಸ್ತಾನ ಹಾಗು ಭಾರತ ಸರಕಾರಗಳ ಅಭಿಪ್ರಾಯವನ್ನು ತಿಳಿದು ಕೊಂಡು ಸಮಾಲೋಚನೆ ನಡೆಸಿದ ಸ್ವೀ ಡನಿನ ಪ್ರತಿನಿಧಿ ಶ್ರೀ ಯಾರಿಂಗರು ಇದೇ ೧೫ನೇ ತಾರೀಕಿಗೆ ಒಪ್ಪಿಸಬೇಕಾಗಿದ್ದ ವ ರದಿಗೆ ಒಂದು ವಾರದ ಮುದಸೊತ್ತನ್ನು ಕೇಳಿದ್ದಾರೆ. ಆದರೆ ಬರುವ ವಾದಲ್ಲಿ ಅವರ ವರದಿ ಸಂಯುಕ್ತ ರಾಷ್ಟ್ರ ಸಂಘ ದ ಭದ್ರತಾ ಸಮಿತಿಗೆ ಒಪ್ಪಿಸಲ್ಪಡುತ್ತದೆ. ಅದರ ವಿಷಯಗಳು ಕೂಡಲೇ ಪ್ರಕಟ ವಾಗಲಿಕ್ಕಿಲ್ಲ-ಆದಾಗ್ಯೂ ಯಾರಿಂಗರ ಸಂಧಾನ ವಿಫಲವಾಯಿತು ಎಂಬ ಸುದ್ದಿ ಬರುವುದೇ ಖಂಡಿತವೆಂದು ನಿರೀಕ್ಷಕರ ಅಭಿಪ್ರಾಯ.


**ಸೂಚನೆ**

ನವಯುಗದ ಚಂದಾ ಹಣ ಮತ್ತು ಜಾಹೀರಾತಿನ ಹಣವನ್ನು ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಇಂಡಿಕೇಟ್ ಲಿಮಿಟೆಡ್ ಇದರ ಯಾವುದೇ ಶಾಖೆಯಲ್ಲಿ ಯಾವಾಗಲಾದರೂ ತರಿಸಿ ಕೊಳ್ಳಿರಿ ಇಲ್ಲವೆ (ನವಯುಗ ವಾರಪತ್ರಿಕೆಯ ಖಾತೆಗೆ) ಪಾವತಿ ಮಾಡಬಹುದು.

ಮೆನೇಜರ್.


## ಉಡುಪಿ

**ಅಕಾಡೆಮಿ ಆಫ್ ಜನರಲ್ ಎಡ್ಯುಕೇಶನಿನ್**— ಆಡಳಿತ ಮಂಡಳಿಯ ಸಭೆಯು ಈಚೆಗೆ ಆದರ ರಿಜಿಸ್ಟ್ರಾರ್ ಡಾ. ಟಿ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಅಧಿಕಾರ ವರ್ಗಕ್ಕೆ ಶ್ರೀಗಳಾದ ಬಿ. ವಿ. ಬಾಳಿಗ, ಎಸ್. ಎಲ್. ಎ. ಅವರು ಅಧ್ಯಕ್ಷರಾಗಿಯೂ ಶ್ರೀ ಬಿ. ಎಸ್. ಎನ್. ರೈಗಳು ಉಪಾಧ್ಯಕ್ಷರಾಗಿಯೂ, ಶ್ರೀಗಳಾದ ಯು. ಸುಂದರಯ್ಯ ಶೆಣ್ಯೈ, ಆರ್. ಫೆರ್ನಾಂಡಿಸ್, ಜೆ. ಸಿ. ರೇಗೋ, ಪಿ. ಪದ್ಮನಾಭ ರಾವ್, ಪಿ. ಶ್ರೀಪತಿ ಆಚಾರ್ಯ, ಕೆ. ಪ್ರಭಾಕರ ಪೈ, ಟಿ. ರಮೇಶ ಪೈ, ಡಾ. ಯು. ಸುಂದರರಾವ ಪೈ ಮತ್ತು ಡಾ. ಕೆ. ಎಲ್. ಏತಾಳರು ಇತರ ಸದಸ್ಯರಾಗಿ ಆರಿಸಲ್ಪಟ್ಟರು.

ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿನ ಟ್ರಸ್ಟ್ ಸಮಿತಿಗೆ ಶ್ರೀಗಳಾದ ಕೆ. ಪದ್ಮನಾಭ ಪೈ, ಎ. ಲಕ್ಷ್ಮೀನಾರಾಯಣ ರಾವ್, ಟಿ. ಎ. ಪೈ ಮತ್ತು ಪೈ. ಮಂಜಯ್ಯ ಶೆಟ್ಟಿ, ಎಸ್. ಎಲ್. ಎ ಅವರು ಆರಿಸಲ್ಪಟ್ಟರು. ಕಾಲೇಜಿನ ಕರೆಸ್ಪೋಂಡೆಂಟರಾಗಿ ಶ್ರೀ ಟಿ. ಎ ಪೈಗಳು ಚುನಾಯಿತರಾಗಿರುವರು. ಸಭಾ ರಂಭದಲ್ಲಿ ಸಮಿತಿ ಸದಸ್ಯರಾಗಿದ್ದ ದಿವಂಗತ ಶ್ರೀಗಳಾದ ಕೆ. ಜಿ. ಬಲ್ಲಾಳ್ ಮತ್ತು ಯು. ಎ. ಪೈಗಳ ನಿಧನದ ಬಗ್ಗೆ ಸಂತಾಪಸೂಚಕ ನಿರ್ಣಯವಾದುದಲ್ಲದೆ ಅವರ ಆತ್ಮಕ್ಕೆ ಚಿರ ಶಾಂತಿಯನ್ನು ಕೋರಲಾಯಿತು.

**ಸರ್ವೋದಯ ಸಮ್ಮೇಳನ, ಕಾಲಡಿ**— ಮೇ ತಿಂಗಳ ತಾ. 9 ನುತ್ತು 10 ರಲ್ಲು ಆಲಿಪ ಭಾರತ ಸರ್ವೋದಯ ಸಮ್ಮೇಳನವು ಕೇರಳದ ಕಾಲಡಿಯಲ್ಲಿ ಜರಗಲಿರುವುದು. ಸಮ್ಮೇಳನಕ್ಕೆ ಹೋಗಬಯಸುವವರು ಇದೇ ಎಪ್ರಿಲ್ ತಾ. 22ರೊಳಗೆ ರೂಪಾಯಿ 3/- ನ್ನು ನಿವಾಸ ಶುಲ್ಕವಾಗಿ ಶ್ರೀ ಎಸ್. ಯು. ರಂಗಮಂಪ್ರ ರಾವ್, ಸನ್ಯಾಸಿಗುಡ್ಡೆ, ಮಂಗಳೂರು ಅಥವಾ ಶ್ರೀ ಕೆ. ಶ್ರೀನಿವಾಸ ಪೈ, ಸರ್ವೋದಯ (ಕರಾವಳಿ) ಮಂದಿರ, ಉಡುಪಿ, ಆವರಿಗೆ ಕಳುಹಿಸಿಕೊಟ್ಟಲ್ಲಿ, ತಮ್ಮ ಸ್ಥಳದಿಂದ ಕಾಲಡಿಗೆ (ಶೆರ್ನೈ ಸ್ಪೇಶನ್ ಆರಂಗಾಮುಲಿ ಪೋರನೂರ್-ಕೊಚ್ಚಿಲ್ಯಾನ್) ಒಂದೇ ಪೂರ್ಣವಾ ಚಾರ್ಜಿನಲ್ಲಿ ಹೋಗಿ ಬರಲು ರೈಲ್ವೆ ರಿಯಾಯಿತಿ ಪ್ರಯಾಣ ಪತ್ರ ವನ್ನು ತರಿಸಿಕೊಡಲಾಗುವುದು.

ಕಾಲಡಿ ಸಮ್ಮೇಳನಕ್ಕೆ ಕಾಲ್ನಡಿಗೆಯಿಂದ ಯೇ ಹೋಗಲು ಪಾವತಿಯಾತ್ರಾ, ಪಕ್ಷವು ಈ ತಿಂಗಳ ಮೂರನೆ ವಾರದಲ್ಲಿ ಪ. ಕ. ಜಿಲ್ಲೆಗೆ ಬರಲಿರುವುದು ಬಂದು ತಂಡವು ಭಟ್ಕಳ, ಕುಂದಾಪುರ, ಉಡುಪಿ, ಮೂಲ್ಕಿ ಮಾರ್ಗವಾಗಿಯೂ ಇನ್ನೊಂದು ತಂಡವು ಆಗುಂಬೆ, ಕಾರ್ಕಳ, ಮೂಡಬಿದ್ರೆ ಮಾರ್ಗವಾಗಿಯೂ ಮಂಗಳೂರಿಗೆ ಆಗಮಿಸುವುದು. ಆಯಾಯ ಊರಿನ ಜನರು ಭೋವಾನವಾದ ಯಾತ್ರಾರ್ಥಿಗಳಿಗೆ ಊಟ, ವಸತಿ ವ್ಯವಸ್ಥೆ ಮಾಡಬೇಕೆಂದು ಶ್ರೀ ಕೆ. ಶ್ರೀನಿವಾಸ ಪೈ, ಸರ್ವೋದಯ ಸೇವಕ, ಉಡುಪಿ, ನಿವೇದಿಸಿಕೊಳ್ಳಿರಿ.

**ಭಾಷಣ ಕಾರ್ಯಕ್ರಮ**— ಬೆಂಗಳೂರಿನ ಥಿಯೋ ಸೋಫಿಕಲ್ ಲೆಕ್ಚರರಾದ ಶ್ರೀ ಎಸ್. ಕೃಷ್ಣಮೂರ್ತಿಯವರು ಇದೇ ತಾ 18ನೇ ಗುರುವಾರ ಮೊನಲ್ಗೊಂಡು 22 ನೆ ತೋದುವಾರ ತನಕ ದಿನಾಲೂ ಸಂಜೆ 5 ಗಂಟೆಗೆ ಸ್ಥಳೀಯ ಶ್ರೀ ವೆಂಕಟ್ರಮಣಸ್ವಾಮಿ ದೇವಾಲಯದ ಶ್ರೀ ವರದೇಂದ್ರ ಕಲಾಮಂದಿರದಲ್ಲಿ ಗೀತಾ ಸಂದೇಶ ಮೊದಲಾದ ಧಾರ್ಮಿಕ ವಿಷಯಗಳಲ್ಲಿ ಉಪನ್ಯಾಸ ಮಾಡಲಿರುವರು. ಆಸ್ತಿಕ ಜನತೆಯು ಈ ಸಂದರ್ಭದ ಲಾಭವಪಡೆಯಬೇಕೆಂದು ಆಪೇಕ್ಷಿಸಲಾಗಿದೆ.

**ಹಿಂದೀ ಪ್ರವೇಶ ಪತ್ರ ವಿತರೋತ್ಸವ**— ಉಡುಪಿ ತಾಲೂಕು ಹಿಂದೀ ಪ್ರಚಾರ ಸಮಿತಿಯ ವಿಳಕ್ಕಿಯ ಪ್ರವೇಶ ಪತ್ರ ವಿತರಣೋತ್ಸವವು ತಾ. 16ರಂದು ಸೈಂಟ್ ಇನ್ನೇಸಿಸ್ ಕಾರ್ಪೋರೇಶನ್ ಆಫ್ ಇಂಡಿಯದ ಉಡುಪಿ ವಿಭಾಗದ ಡಿವಿಜನಲ್ ಸೇನೇ ಜರಾದ ಶ್ರೀ ಕೆ. ಆರ್. ಕೆ. ಭಟ್ಟರ ಸ ನ್ನಿಧ್ಯ ಅಧ್ಯಕ್ಷತೆಯಲ್ಲಿ ಸ್ಥಳೀಯ ಸರಸ್ವತೀಮಂಟ್ರ ಕಲಾವಂದಿರಲ್ಲಿ ಸಾಂಗವಾಗಿ ನೆರವೇರಿತು. ಸಮಿತಿಯ ಉಪಾಧ್ಯಕ್ಷರಾದ ಶ್ರೀ ಪಿ. ಮುಖ್ಯಪ್ರಾಣ ತಂತ್ರಿಗಳು ಪೂಮಾಲೆಯನ್ನರ್ಪಿಸಿದ ತರುವಾಯ ಸಮಿಯ ಅಧ್ಯಕ್ಷ ಶ್ರೀ ಟಿ. ಎ ಪೈಯವರು ಸ್ವಾಗತ ಭಾಷಣವನ್ನು ಮಾ ಡಿದರು. ಕಾರ್ಯದರ್ಶಿ ಶ್ರೀ ಸಿ. ಮಹಾಬಲ ನಾಯಕರು ಸಮಿತಿಯ ಕಾರ್ಯಕಲಾಪಗಳ ವಿ ವರವನ್ನೊಳಗೊಂಡ ವರದಿಯನ್ನು ಓದಿದರು ಹಿಂದೀ ಶಿಕ್ಷಣಶಿಬಿರದ ಪ್ರಧಾನಾಧ್ಯಾಪಕ ಶ್ರೀ ಎ. ಲಕ್ಷ್ಮೀನಾರಾಯಣ ಕಿಣಿಯವರು ಊರ ಪರಪೂರ ಸಂಘ ಸಂಸ್ಥೆಗಳಿಂದಲೂ ಹಿಂದೀ ಪ್ರೇಮಿಗಳಿಂದಲೂ ಬಂದ ಸಂದೇಶಗಳನ್ನು ಓದಿದರು. ತರುವಾಯ ಶ್ರೀಮತಿ ಆಶಾ ಭಟ್ಟರು ಹಿಂದೀ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂ ದಿದವರಿಗೆ ಪ್ರಮಾಣ ಪತ್ರಗಳನ್ನೂ, ವಿಶೇಷ ಯೋಗ್ಯತೆಗಳನ್ನು ಪ್ರದರ್ಶಿಸಿದವರಿಗೆ ಬಹುಮಾನಗಳನ್ನೂ ಹಂಚಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಹಿಂದೀ ಭಾಷೆಯನ್ನು ಕಲಿಯಬೇಕಾದದ್ದು ಭಾರತೀಯರಾದ ನಮ್ಮೆಲ್ಲರ ಕರ್ತವ್ಯವೆಂದು ಸೂಚಿಸಿ ನಮ್ಮ ನಾಡಿನ ಈ ಭಾಗದಲ್ಲಿ ಸ್ಥಳೀಯ ಉತ್ಸಾಹಿಗಳು ಈ ಬಗ್ಗೆ ಕೈಗೊಂಡಿರುವ ಪರಿಶ್ರಮಕ್ಕೆ ಮೆಚ್ಚಿ ಗೆಯನ್ನು ಸೂಚಿಸಿದರು. ಹಿಂದೀ ವಿವ್ಯಾ ಧ್ಯಾನಿಯರಿಂದ ಹಿಂದಿ ಪ್ರಚಸನವೂ ಸಮಿ ತಿಯ ಅಭಿವೃದ್ಧಿಗೆ ಸಹಕರ ಮನೋ ರಂಜನೆಯೂ ಯಿತು. ಸಮಿತಿಯ ಸದಸ್ಯ ಶ್ರೀ ಎ. ಜೆ. ಆಳ್ವೆಯವರು ಧನ್ಯವಾದ ಗೈದ್ದರು.

**ನಗರ ಭಟ್ಕಳ**— ಆವಸರದ ಸಭೆಯು ತಾ. 11ರಲ್ಲು ಸಭಾಪತಿ ಶ್ರೀ ಕೆ. ಕೆ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಸ್ಥಳೀಯ ಲ್ಯಾಟ್ರಿ ನಿ ಮತ್ತು ವಾಚನಾಲಯ ಕಟ್ಟಡದ ಜಾಡಿಗೆ ತಿಂಗಳಾಂದರೆ ಎಂಟು ರೂಪಾಯಿ ಹೆಚ್ಚಿಗೆ ಕೊಡುವ ಸದ್ಭಭ್ಯರಿಬ್ಬಲ್ಲಿ ವಿದ್ಯುತ್ ದೀಪಗಳಿಗೆ ಯನ್ನು ಹಾಕಲಿಹ ವೆಂದು ನಿರ್ಣಯವಾಯಿತು ಮುನಿಸಿಪಲ್ ಆಫೀಸಿಗೂ ಫೋನಿನಗಳನ್ನು ಹಾಕುವ ಬಗ್ಗೆ ನಿರ್ಣಯವಾಯಿತು.

---

**ನಿಂಜೂರು**— ಶ್ರೀ ವಿವೇಕಾನಂದ ಯುವಕ ಸಂಘದಲ್ಲಿ ಇದೇ ತಾ. 12ರಲ್ಲು ಭಜನಾ ಸಮಾರಂಭವು ತಾ. 19ರಲ್ಲು ಸುತೆ ಆರ್ಥಿಕಾಭಿಗಳ ಉದಾರತೆಯಿಂದ "ಕೈಸ್ಟ ಸಂಧಾನ" ತಾಳ ಮದ್ದಳೆಯೂ ಯಶಸ್ವಿಯಾಗಿ ಜರಗಿದವು.

**ಬಜಪೆ ವಾರ್ತೆ**—ಸ್ಥಳೀಯ ಎಸ್. ವಿಸ್. ಎಸ್. ಬೆಂಲಪ್ ಹೈಸ್ಕೂಲಿನ ರಜತಮಹೋತ್ಸವದ ಶ್ರೀ. ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಇತ್ತೀಚೆಗೆ ವಿಜೃಂಭಣೆಯಿಂದ ನೆರವೇರಿತು.


## ಚಂದಾ ಹಣ ಬಾಕಿ ಇರುವ ಚಂದಾದಾರರಲ್ಲಿ ವಿನಂತಿ

ನಾವು ಕ್ರಮದಂತೆ ಪತ್ರಿಕೆಯನ್ನು ಕಳುಹಿಸುತ್ತಾ ಬಂದಿರುವುದು ನಿಮಗೆ ತಿಳಿದಿರದ ವಿಷಯವೇನಲ್ಲ. ಹಾಗೆಯೇ ಚಂದಾಹಣ ವಾರ್ಷಿಕವಾಗಿ ಮುಂಗಡವಾಗಿ ತೆಂದೂ ಬಾಕಿ ಚಂದಾಹಣವನ್ನು ಬೇಗನೇ ಪಾವತಿಮಾಡಬೇಕೆಂದೂ ನಾಲ್ಕಾರು ಕಾರ್ಡುಗಳನ್ನು ಬರೆದು ತಿಳಿಸಿರುತ್ತದೂ ನಿಮಗೆ ಗೊತ್ತಿರಬಹುದು. ಆದಾಗ್ಯೂ ಅನೇಕರು ಹಣವನ್ನು ಪಾವತಿ ಮಾಡದೆ ದಿನೆಯೆಂದ, ಬೇರೆ ಉಪಾಯ ತೋರದೆ ನಾವು ಪತ್ರಿಕೆಯನ್ನು ವಿ. ಪಿ. ಪಿ ಮೂಲಕ ಕಳುಹಿಸಬೇಕಾಗಿ ಬಂತು. ಆಲಾದರೂ ನಮ್ಮ ಪತ್ರಿಕೆಯ ಮೇಲಿನ ಅಭಿಮಾನ ಮತ್ತು ಪ್ರೀತಿಯಿಂದ ಚಂದಾ ಹಣವಾಕಿಮಾಡಿಕೊಂಡ ಚಂದಾದಾರರು ವಿ. ಪಿ. ಪಿ. ಯ ಹಣ ಪಾವತಿ ಮಾಡಿ ನಮ್ಮನ್ನು ಪ್ರೋತ್ಸಾಹಿಸಿಬರೆಂಬ ಭಾವನೆಯನ್ನು ಇಟ್ಟುಕೊಂಡಿದ್ದೆವು. ಆದರೆ ಅನುಭವವು ಈ ಆಸೆಯನ್ನು ಹುಸಿಗೊಳಿಸಿದೆ. ವಿ. ಪಿ. ಪಿ ಯನ್ನು ಅತ್ಯಧಿಕ ಚಂದಾದಾರರು ನಿರಾಕರಿಸಿ, ನಮ್ಮನ್ನು ಹೆಚ್ಚಿನ ನಷ್ಟಕ್ಕೆ ಗುರಿಮಾಡಿದ್ದಾರೆ. ಇವರೆಲ್ಲರಲ್ಲಿ ನಾವು ಕುನಃ ವಿನಂತಿಸಿಕೊಳ್ಳುವುದೇನೆಂದರೆ, ಈಗಲಾದರೂ ಬಾಕಿ ಚಂದಾ ಹಣವನ್ನು ಮನಿಯಾರ್ಡರು ಮೂಲಕ ಪಾವತಿಮಾಡಿ ನಮ್ಮನ್ನು ಆಂಥ ಸೀಯ ನಷ್ಟದಿಂದ ಪಾರುಮಾಡಬೇಕು. ಒಂದು ಪತ್ರಿಕೆಯನ್ನು ನಡೆಸಿಕೊಂಡು ಬರುವವನಿಗೆ ಚಂದಾಹಣವೇ ಬೆಂಗೋಲು; ಅದು ಕ್ಲಪ್ತ ಸಮಯದಲ್ಲಿ ಪಾವತಿಯಾಗದಿದ್ದರೆ ಪತ್ರಿಕೆ ನಡೆಸುವಾಗಿನ ಕಷ್ಟ ನಷ್ಟಗಳನ್ನು ಹೇಳತೀರದು. ಹೀಗಿರುವಾಗ ಇನ್ನಾದರೂ ಚಂದಾದಾರರು ನಮ್ಮ ನೋಲೆ ದಯೆಯಿಟ್ಟು ನಮ್ಮ ವಿನಂತಿಯನ್ನು ಮನ್ನಿಸಬೇಕಾಗಿ ಪ್ರಾರ್ಥಿಸುತ್ತೇವೆ ಒಂದು ವೇಳೆ ಇನ್ನು ಮುಂದೆ ಪತ್ರಿಕೆ ಬೇಡವೆಂದಾದರೆ, ದಯವಾಡಿ ನಮಗೊಂದು ಕಾರ್ಡುಮೂಲಕ ಈ ವಿಷಯವನ್ನು ಬರೆದು ತಿಳಿಸಿ, ಹಿಂದಿನ ಬಾಕಿಯನ್ನು ರವಾನಿಸಿದರೆ, ನಮಗೂ ಉಪಕಾರ ವಾಗುತ್ತದೆ. ಇಷ್ಟಾದರೂ ಒಳ್ಳೆಯ ಮನಸ್ಸು ನಿಮ್ಮದಾಗಲೆಂದು ಹಾರೈಸುತ್ತೇವೆ.

ಮೆನೇಜರ್,
"ನವಯುಗ"



## ಕವತ್ತಾರು ಜಾತ್ರೆ

ಪ್ರತಿ ವರ್ಷದಂತೆ ಕವತ್ತಾರು ಮಹಾ ಉತ್ಸವವು ಇದೇ ಬರುವ ಮೇ ತಿಂಗಳ ತಾ. 13ನೇ ಸೋಮವಾರ ನೆರವೇರುವುದು.

ಕವತ್ತಾರು ತಾ. ೫೦.



ಕನ್ನಡದಲ್ಲಿ ಮೊದಲನೆಯದೆಂದೇ ಹೇಳಬಹುದಾದ
ಅಣು ಶಕ್ತಿಯ ಸಚಿತ್ರ ವಿವೇಚನಾ ಗ್ರಂಥ

# ಹಿರೋಶಿಮಾದಿಂದ ಜಿನೇವ

ಬರೆದವರು:

ಶ್ರೀ. ಯು. ರಾಘವೇಂದ್ರ ಆಚಾರ್ಯ, ಎಂ. ಎ., ನವದೆಹಲಿ.

ಮುನ್ನುಡಿಕಾರರು: ಶ್ರೀ. ಶಿವರಾಮ ಕಾರಂತರು.

ಪ್ರತಿಯೊಬ್ಬರೂ ಓದಲೇಬೇಕಾದ ನನೀನ ಪುಸ್ತಕ.

ಉತ್ತಮ ಕಾಗದ. ಬೆಲೆ: ರೂ. ೧—೮—೦.

ನವಯುಗ ಪ್ರೆಸ್, ಉಡುಪಿ.



## ಮಕ್ಕಳ ಮಗ್ಗಿಪುಸ್ತಕ

ಬೆಲೆ: ೦ ೧—೦

ನವಯುಗ ಪ್ರೆಸ್, ಉಡುಪಿ.

## ಪ್ರಾಮಾಣಿಕ ವ್ಯವಹಾರ

(ಜನೇ ಸುಟದಿಂದ)

ಇದರಿಂದ ಪ್ರಾಮಾಣಿಕತೆಯೆಂಬುದು ಲಂಚ ಸಂಬಂಧಿ ಮಾತ್ರವಾದುದಲ್ಲವೆಂದು ತಿಳಿಯಬಹುದು. ಪ್ರಜಾಸ್ವಭುತ್ವದಲ್ಲಿ ಸತ್ಯಾಗ್ರಹ ಹಾಗೂ ಸ್ವತಂತ್ರ ವಿಚಾರಗಳಿಗೂ ಸ್ಥಾನವಿದೆ. ಪ್ರತಿ ವಿಷಯಗಳಲ್ಲಿಯೂ ತಮ್ಮ ಮೇಲಿನ ಅಧಿಕಾರಿಗಳನ್ನು ಸಂತುಷ್ಟಗೊಳಿಸಲೆಳಸುವುದೂ (ಒಂದು ಭ್ರಷ್ಟಾಚಾರವಾಗಿದೆ. ಏಕೆಂದರೆ, ಹೀಗೆ ಸಂತುಷ್ಟಗೊಳಿಸುವುದರಿಂದ, ಉತ್ಪನ್ನ ವ್ಯಕ್ತಿಗಳ ಸಂಪೂರ್ಣ ಸಹಯೋಗ ಮತ್ತು ಬುದ್ಧಿ ಚಾತುರ್ಯಗಳು ದೊರೆಯುವುದಿಲ್ಲ. ಹೀಗೆಂದ ಮಾತ್ರಕ್ಕೆ ಭ್ರಷ್ಟಾಚಾರದಿಂದ ದೂರವಿರಲು ಕೇವಲ ನೈತಿಕ ಉಪದೇಶವನ್ನು ಮಾಡುವುದೇ ಮುಖ್ಯ ಕರ್ತವ್ಯವೆಂದು ತಿಳಿಯಬಾರದು. ಭಾರತ ಸರಕಾರದ ಅಭಿಪ್ರಾಯವೂ ಇದಾಗಿಲ್ಲವೆಂಬುದು ದ್ವಿತೀಯ ಪಂಚವಾರ್ಷಿಕ ಯೋಜನೆಯ ಅಂಶಗಳಿಂದ ಸ್ಪಷ್ಟವಾಗುತ್ತದೆ.

ಈಗ ಕೆಲವು ರಾಜ್ಯ ಸರಕಾರಗಳು, ರೇಲ್ವೆ ವಿಭಾಗಗಳು ಮತ್ತು ಕೇಂದ್ರ ಸರಕಾರದವರೂ ಭ್ರಷ್ಟಾಚಾರವನ್ನು ನಾಶಗೊಡುವುದಕ್ಕಾಗಿ 'ಅದರ ಸುಳಿವು ಹತ್ತಿದೊಡನೆ ಅದನ್ನು ಕಂಡುಹಿಡಿದು, ವಿಚಾರಿಸಿ, ಭ್ರಷ್ಟಾಚಾರದ ಮಾರ್ಗವನು ಮುಚ್ಚಿಬಿಡಲು ಸಮಿತಿಗಳನ್ನು ಏರ್ಪಡಿಸಿವೆ. ಅಧಿಕಾರಿ ಮತ್ತು ಸಾಮಾನ್ಯ ಜನತೆಯ ಸಂಬಂಧವು ಗಾಢವಾಗುವುದಕ್ಕೆ ಈ ವಿಧಾನವು ಸಹಕಾರಿಯಾಗಬಲ್ಲುದು.

ರೇಲ್ವೇ ಭ್ರಷ್ಟಾಚಾರವನ್ನು ಪತ್ತೆ ಮಾಡುವ ಸಮಿತಿಯು ಈ ತೆರದ ಭ್ರಷ್ಟಾಚಾರವನ್ನು ನಾಶಮಾಡಲು ಕೆಲವೊಂದು ವಿಧಾನಗಳನ್ನು ತಿಳಿಸಿದೆ. ಭ್ರಷ್ಟಾಚಾರವನ್ನು ಮಾಡಿದರೆಂಬ ಸತ್ಯ ಸಂಗತಿಗಳನ್ನು ಪ್ರಕಾಶಪಡಿಸಲು ಅದನ್ನು ತಿಳಿದ ವ್ಯಕ್ತಿಗಳಿಗೆ ತಮಗೆ ಭವಿಷ್ಯದಲ್ಲಿ ಬರಬಹುದಾದ ಕೀಟಲೆಗಳ, ಅತ್ಯಾಚಾರಗಳ ಭಯವಿರುವುದು. ಇದರಿಂದಾಗಿ ಸಾಮಾನ್ಯ ಜನರು ಈ ವಿಚಾರವಾಗಿ ಹೆಚ್ಚಿನ ಆಸಕ್ತಿಯನ್ನೀಯುವುದಿಲ್ಲ. ಆದರೆ ಈ ಭ್ರಷ್ಟಾಚಾರದಿಂದ ಪಂಚವಾರ್ಷಿಕ ಯೋಜನೆಗೆ, ಸರಕಾರದ ಜನಪ್ರಿಯತೆಗೆ ಬಹಳ ದೊಡ್ಡ ಹಾನಿ ಯಾ ಆತಂಕವೂ ಒದಗಿ ಬರುವುದು. ಆದುದರಿಂದಲೇ ದ್ವಿತೀಯ ಯೋಜನೆಯಲ್ಲಿ ಇಂತಹ ಆಚಾರಗಳನ್ನು ಬಲವಾಗಿ ಖಂಡಿಸಿ, ತಪ್ಪಿತಸ್ಥರಿಗೆ ಯೋಗ್ಯ ದಂಡನೆಯು ಬೆದರಿಕೆಯು ಹಾಕಲ್ಪಟ್ಟಿದೆ.

ಪ್ರತಿಯೊಬ್ಬ ನಾಗರಿಕನೂ ಆಡಳಿತೆಯಲ್ಲಿ ಪ್ರಾಮಾಣಿಕತೆಯಿರಬೇಕೆಂದು ಬಯಸುತ್ತಾನೆ. ಅವನಲ್ಲಿ ಸುಪ್ತವಾಗಿರುವ ಜೀವನವನ್ನು ಸಮಾಜವಾದದ ತಳಹದಿಯಲ್ಲಿ ನಡೆಸುತ್ತಿರುವ ಸಮಾಜ ಸುಧಾರಣಾ ಯೋಜನೆಗಳಿಗೆ ಸಕಾರಿಯಾಗಿ ಪಡೆಯಬೇಕಾಗಿದೆ. ಭ್ರಷ್ಟಾಚಾರ ಯುಕ್ತ ಅಧಿಕಾರಿಯು ತನ್ನ ವೈಯಕ್ತಿಕ ಶತ್ರುವೆಂದು ತಿಳಿಯುವ ಭಾವನೆಯನ್ನು ನಾಗರಿಕನಲ್ಲಿ ಪ್ರತಿಬಿಂಬಿಸುವುದು ಅಗತ್ಯ. ಆಗ ಮಾತ್ರ ದೇಶವಿಘಾತುಕವಾದ ಈ ಭ್ರಷ್ಟಾಚಾರ ಸಂಬಂಧದ ವಿಚಾರಗಳು ಬೆಳಕಿಗೆ ಬರುವುದು ಸಾಧ್ಯ. ಭ್ರಷ್ಟನಾದ ಅಧಿಕಾರಿಯ ಸಮಾಜ ಮತ್ತು ದೇಶದ ದುಷ್ಟ ಶತ್ರುವಾಗಿದ್ದಾನೆ ಎಂಬುದನ್ನು ಪ್ರತ್ಯೇಕ ಪ್ರಜೆಯೂ ತಿಳಿದುಕೊಳ್ಳುವುದು ಆತ್ಯಗತ್ಯ.

## ಜನಮತ

**ನ್ಯಾಯವಾದ ಜನಾಭಿಪ್ರಾಯಕ್ಕೆ ಸೂಕ್ತ ಪ್ರಸಿದ್ಧಿಯನ್ನು ಕೊಡಲು ಈ ವಿಭಾಗವನ್ನು ಉಪಯೋಗಿಸಲಾಗುತ್ತದೆ. ಸಾರ್ವಜನಿಕರು ಪತ್ರವನುಹೇಸ ನಮ್ಮೊಡನೆ ಸಹಕರಿಸಬೇಕಾಗಿ ಬಿನ್ನಹ.**

**ಸಂ. ನ.**

---

**ದ. ಕ. ಜಿಲ್ಲಾ ಸಬೋರ್ಡಿನೇಟ್ ಜಡ್ಜರ ಕೋರ್ಟಿನಲ್ಲಿ**

**O. S. No. 23/1957.**

ನೀಲಮ್ಮ ಕೂಡಾ —ವಾದಿರು

ಮತ್ತು

ಕಾಮಕ್ಕೆ ಕೂಡಾ —ಪ್ರತಿವಾದಿರು.

**ನೋಟೀಸು**

೨ನೇ ಪ್ರತಿವಾದಿ ಸಂಜೀವ ನೈ. ನರ್ಸ ಹೆಂಗ್ಸಿನ ಮಗ, ಮದಿಕೇರಿ ತಾಲ್ಲೂ ಮೂನಾಡು ಎಂಬಲ್ಲಿರುವವರು

ಮೇಲಿನ ವಾದಿರು ಮತ್ತು ಪ್ರತಿವಾದಿರ ಕುಟುಂಬದ ವಾಟ್ಟು ಯೋಜನೆಗಳನ್ನು ಅನ್ಯಾಸ ಆಳಿಯ ಸಂತಾನ ಆಕ್ಟ್ ಪ್ರಕಾರ ಜಿಲ್ಲೆ ಸಿಗಬೇಕೆಂದು ವಗೈರೆ ನಿವೃತ್ತಿ ಕೇಳಿ ವಾದಿರು ದಾಖ್ಲುಮಾಡಿದ ದಾವೆಯು ತನ್ನಗೆ ತಾ. 13-6-1957ಕ್ಕೆ ಮೇಲಿನ ಕೋರ್ಟಿನಲ್ಲಿ ಇತ್ಪರಿಯತ್ತದೆ. ಆ ಕ್ರಿಯಿ ನಿಮಗೆ ಏನಾದರೂ ಆಕ್ಷೇಪಗಳಿದ್ದರೆ ಆ ದಿನ ಮೇಲಿನ ಕೋರ್ಟಿನಲ್ಲಿ ಹಗಲು ೧೦ ಗಂಟೆ 11ಕ್ಕೆ ನೀವು ಮುದ್ದಾಗಲೇ ಯಾ ವಕೀಲರ ಮುಖಾಂತ್ರವಾಗಲೇ ಹಾಜರಾಗಿ ಜವಾಬು ಕೊಡುವುದಕ್ಕಾಗಿ ಇದರ ಮೂಲಕ ಆಜ್ಞೆ ಮಾಡಿದೆ.

(ಕೋರ್ಟಿನ ಹುಕುಂ ಪ್ರಕಾರ).

B. M. Hegde

ವಾದಿರ ಕಡೆ ವಕೀಲರು.

ಬಂಗಳೂರು, 11-4-1957.

---

ಮೂಲ್ಕಿಗಾಲ ಸಮಿತಿಸಲೂ ಇನ್ನೂ 2 ತಿಂಗಳೂ ಇರುವಾಗ ಈಗಾಗಲೇ ಆಕ್ಕಿಯ ಬೆಲೆಯು ದಿನದಿಂದ ದಿನಕ್ಕೆ ಏರುತ್ತಿರುವುದು ಸಾಮಾನ್ಯ ಸುತ್ತು ಬಡ ಜನತೆಯು ಜೀವನವನ್ನು ಸುಗಮವಾಗಿ ನಡಿಸಲು ಕಷ್ಟವಾದ ವಿಷಯವಾಗಿದೆ. ಆಕ್ಕಿಯ ದರವು ರೂ. 180ಂದ ರೂ. 22ಕ್ಕೆ ಈಗಲೇ ಏರಿಬಿದೆ. ಹೀಗೆ ಆಕ್ಕಿಯ ಬೆಲೆಯು ಏರುತ್ತಾ ಹೋದಲ್ಲಿ ಮುಳಿಗಾಲದ ಸಮಯದಲ್ಲಿ ಬೆಲೆಯು ಎಲ್ಲಿಯವರೆಗೆ ತಲ್ಲುವುದೆಂಬ ಹೇಳಲಸಾಧ್ಯ. ಇದರಿಂದ ಮುಳಿಗಾಲದಲ್ಲಿ ಬಡ ಜನತೆ ಕಷ್ಟಪಡಬೇಕಾಗಿ ಬರಬಹುದು. ಆದ್ದರಿಂದ ನಿರಿದ ಬೆಲೆಯನ್ನು ಕಡಿಮೆಮಾಡಲು ಸರಕಾರ ಕೂಡಲೆ ಅಂತರ ಪ್ರಾಂತ್ಯದ ಆಕ್ಕಿಯ ಸಾಗಾಟ ಮೇಲಿನ ನಿರ್ಬಂಧವನ್ನು ಹೇರಬೇಕು ಮತ್ತು ಸಾಕಷ್ಟು ನ್ಯಾಯಬೆಲೆಯ ಅಂಗಡಿಗಳನ್ನು ಏರಿಸಬೇಕು.

ಉಡುಪಿನಲ್ಲಿ ಈಗ ನ್ಯಾಯ ಬೆಲೆಯ ಅಂಗಡಿಯು ಒಂದೇ ಇರುವುದು. ಪ್ರತಿನಿತ್ಯ ಬಂದು ಆಕ್ಕಿಯನ್ನು ಪಡಕೊಳ್ಳುವುದು ದೂರದೂರದಲ್ಲಿದ್ದ ಬಡವರಿಗೇ ಬಹಳ ಕಷ್ಟವಾಗಿದೆ. ಕಾರಣ ತಮ್ಮ ದಿನದ ಜೀವನಕ್ಕಾಗಿ ಸಾಕಷ್ಟು ದುಡಿದು ಮೊದಲೇ ತುಂಬಾ ಪಡೆದ ಬಡಜನತೆಗೆ ಇವ್ವ ಒಂದೇ ಒಂದು ನ್ಯಾಯ ಬೆಲೆಯ ಅಂಗಡಿಯಿಂದ ಆಕ್ಕಿಯನ್ನು ಪಡಕೊಳ್ಳುವುದು ಬಸಳ ತ್ರಾಸ ಹಾಗೂ ಕಷ್ಟವಾಗಿದೆ. ಆಕ್ಕಿಯ ಬೆಲೆಯು ಏರಿದೆ ಈ ಸಮಯದಲ್ಲಿ ನ್ಯಾಯ ದರದ ಆಕ್ಕಿಯ ಅವಶ್ಯಕತೆ ಬಡಜನರಿಗೇ ಹೆಂಬಾ ಇವೆ. ಆದ್ದರಿಂದ ಜನರ ಸೌಕರ್ಯಾರ್ಥವೂ ಎಲ್ಲರೂ ಆಕ್ಕಿಯನ್ನು ಪಡಕೊಳ್ಳುವ ದೃಷ್ಟಿಯಿಂದ ಈಸಿಪ್ಪು ಉಡುಪಿ ನುನ್ಸಿಪಾಲಿಟಿಯೆಳಗೆ 3 ನ್ಯಾಯ ಬೆಲೆಯ ಅಂಗಡಿಯನ್ನು ಊರಿನ ಬೇರೆ ಬೇರೆ ಮೂಲೆಯಲ್ಲಿ ತೆಗೆಯಬೇಕಾಗಿ ಸಂಬಂಧಪಟ್ಟ ಅಧಿಕಾರಿಗಳೊಡನೆ ನಮ್ರ ವಿನಂತಿ.

ನು. ಪಿಟ್ಟಲ ಕಿಣಿ,
ಕಾರ್ಯದರ್ಶಿ.
ಭಾರತೀಯ ಜನಸಂಘ ಉಡುಪಿ.

## ಎಲ್ಲೆಲ್ಲಿ ಏನೇನು?

**ಮಣಿಪಾಲ:-** ಸ್ಥಳೀಯ ಹ್ಯಾಸ್ಕೂಲಿನ ವಾರ್ಷಿಕೋತ್ಸವವು ದಿ. ಕೆ. ಕೃಷ್ಣಸ್ವಾಮಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಟಿ. ಎ. ಪೈಗಳು ಶಾಲಾ ಧ್ವಜವನ್ನು ಆರೋಹಿಸಿದರು. ಶಾಲಾ ಮುಖ್ಯೋಪಾಧ್ಯಾಯ ಶ್ರೀ. ಬಿ. ಶ್ಯಾಮರಾಯ ಕಟ್ಟರು ಪ್ರಾಸ್ತಾವಿಕ ಭಾಷಣ ಮಾಡಿದರು. ಶ್ರೀ. ಬಿ. ಆರ್. ಹೆಗ್ಡೆಯವರು ಅಧ್ಯಕ್ಷರ ಪರಿಚಯ ಮಾಡಿದರು. ಡಾ। ಟಿ. ಮಾಧವ ಪೈಗಳು ಸ್ವಾಗತ ಮಾತುಗಳನ್ನಾಡಿದರು ಎ. ಸಿ. ಸಿ. ದಳದ ನಾಯಕ ಶ್ರೀ ಕೆ. ಗೋವಿಂದ ರಾಯರು ವರದಿಯನ್ನೋದಿದರು. ಉಸನಾಯಕ ಶ್ರೀ ಎಚ್. ಕೃಷ್ಣಮೂರ್ತಿ ತಂತ್ರಿಗಳು ಧನ್ಯವಾದಗಳನ್ನಿತ್ತರು.

**ಬೆಳ್ತಂಗಡಿ:-** ಕಳೆದ ತಾ. 30ರಲ್ಲು ಇಲ್ಲಿಯ ಬೋರ್ಡು ಮಿಡ್ಲ್ ಸ್ಕೂಲಿನ ವಾರ್ಷಿಕೋತ್ಸವವು ದ. ಕ. ಜಿಲ್ಲಾ ಬೋರ್ಡು ಅಧ್ಯಕ್ಷ ಡಾ. ಕೆ. ಕೆ. ಹೆಗ್ಡೆ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ರಾಮಕೃಷ್ಣ ರಾಯರು ಸ್ವಾಗತ ಭಾಷಣವನ್ನಿತ್ತರು. ಹೆಡ್ಮಾಸ್ಟರ್ ಶ್ರೀ ಐ. ದಿನೇಶ ರಾಯರು ವರದಿಯನ್ನೋದಿದರು. ಶ್ರೀಗಳಾದ ರಮೇಶ ರಾವ್, ಎನ್. ಭಿಡೆ, ಬಿ. ಎನ್. ಭಟ್, ಎಮ್. ದೆಮಾನಂದ ರಾವ್, ಡಾ. ಬಿ. ನಾರಾಯಣ ರಾಯರು ಸಂದರ್ಭೋಚಿತ ಮಾತುಗಳನ್ನಾಡಿದರು.

**ಫರಂಗಿಪೇಟೆ-** ಸ್ಥಳೀಯ ಶ್ರೀ ರಾಮಾ ಹಾ। ಎ। ಶಾಲೆಯ ವರ್ಷಂತಿಯುತ್ಸವವು ತಾ. 8ರಲ್ಲು ಜಿಲ್ಲಾ ಕಲೆಕ್ಟರ್ ಶ್ರೀ ಎಚ್. ನರಸಿಂಹರವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ನರ್ಸು ಸೆಟ್ಟರು ಸ್ವಾಗತ ವಾಚನ ಮಾಡಿದರು. ಜಿಲ್ಲಾ ಕಲೆಕ್ಟರರ ಪತ್ನಿಯವರು ಬಹುಮಾನ ವಿತರಣೆ ಮಾಡಿದರು. ಸಭಿಕರ ಮತ್ತು ಅಧ್ಯಕ್ಷರ ಭಾಷಣಗಳಾದವು.

**ಕುಂದಾಪುರ -** ಸ್ಥಳೀಯ ಬೋರ್ಡು ಹ್ಯಾಸ್ಕೂಲಿನ ಹಳೆ ವಿದ್ಯಾರ್ಥಿ ಸಂಘದ ಪಬ್ಬವು ಇದೇ ಎಪ್ರಿಲ್ ತಾ.26, 27 ಮತ್ತು 28ರಲ್ಲು ಜರಗುವುದು. ಈ ಸಂದರ್ಭದಲ್ಲಿ ತಾ. 27ರ ರಾತ್ರಿ 9 ಗಂಟೆಯಿಂದ ವಿದ್ಯಾವಂತರಿಂದ ಯಕ್ಷಗಾನ ಜೋಡಾಟವಿದೆ. ಅಲ್ಲದೆ ನೂರು ದಿವಸಗಳಲ್ಲೂ ಹಳೆ ವಿದ್ಯಾರ್ಥಿಗಳಿಂದ ನಾಟಕ, ಕಲೆ, ವೈಜ್ಞಾನಿಕ ಪ್ರದರ್ಶನ ನರ್ತನಗಳು ಸಂಗೀತ ಕೂಟಗಳು, ಬೈಸಿಕಲ್ ಸರ್ಕಸ್, ಚಾಕುಯರ್ ದಾಟಗಳು ಇತ್ಯಾದಿ ಜನಮನರಂಜನ ಕಾರ್ಯಕ್ರಮಗಳಿವೆಯೆಂದು ಸಂಘದ ಜತೆ ಕಾರ್ಯದರ್ಶಿ ಶ್ರೀ ಎಸ್. ಎಮ್. ಹೆಗ್ಡೇರು ತಿಳಿಸುತ್ತಾರೆ.

**ಕುಂಜಿಬೆಟ್ಟು ಕಡಿಯಾಳಿ-** ಇಲ್ಲಿಯ ಹಾ. ಎ. ಶಾಲೆಯ ವಾರ್ಷಿಕೋತ್ಸವವು ತಾ. 6ರಲ್ಲು ಶ್ರೀ ದೇಜು ಉಚ್ಚಿಲ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ವಿ ಮಾಸುದೇವ ಭಟ್ಟರ ಪ್ರಗತಿಪರ ವರದಿಯನ್ನೋದಿದರು. ಶ್ರೀ ಗೋಪಿಚಂದ ರಾಯರು ಶಾಲಾ ಸ್ವಸ್ತಿವಾಚಸಮಾಡಿದರು. ಶ್ರೀ ಯು. ತೀನ ಕೋಟ್ಯಾನರು ದಾನವಿತ್ತ ಶ್ರೀ ಪಾಕೂರರ ತೈಲ ಚಿತ್ರವನ್ನು ಶ್ರೀ ಕೆ ತ್ರೀಪತಿ ಆಚಾರ್ಯರು ಆನಾವರಣಗಾಡಿದರು. ಆಂದು ಬೆಳಿಗ್ಗೆ ಈ ಶಾಲೆಯ ಹಳೆವಿದ್ಯಾರ್ಥಿಯೂಗಿದ್ದ ಶ್ರೀ ಆದಮೂರು ಸ್ವಾಮಿಗಳವರ ಲೆಪ್ಪಿಂದಿಂದ ಸಹಿತಿಂಡಿ ಮಕ್ಕಳಿಗೆ ಹಂಚಲಾಯಿತು. ಮರು ದಿವಸ ಹಳೆವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಕೆ. ಪೈಗಳು ಸ್ವಾಗತ ಭಾಷಣಮಾಡಿದರು. ಶ್ರೀ ಕೂರಾಸ್ವಾಮಿ ಮೊದಲಾದವರು ಶುಭೋಚಿತ ಮಾತುಗಳನ್ನಾಡಿದರು. ಈ ಶಾಲೆಯ ಅಧ್ಯಾಪಕ ಶ್ರೀ ರಾಮಚಂದ್ರ ಭಟ್ಟರಿಂದ ಬರೆಯಲ್ಪಟ್ಟ 'ಉಮೇಶನ ಸೋದ್ರಿ' ನಾಟಕ ಇತ್ಯಾದಿ ಮನರಂಜನ ಕಾರ್ಯಕ್ರಮಗಳು ಆದುವು.

**ರಥೋತ್ಸವ-** ಶ್ರೀ ಕಡಿಯೊಳಿ ಮಹಿಷಮರ್ದಿನೀ ದೇವಾಲಯದಲ್ಲಿ ತಾ. 15ರಲ್ಲು ಕಾಲಾವಧಿ ರಥೋತ್ಸವ ಸಮಾರಂಭವು ಮಹಾ ವೈಭವದಿಂದ ಶ್ರೀ ಕೆ. ರಾಮ ಉಪಾಧ್ಯಾಯ ಮೊದಲಾದವರ ನೇತೃತ್ವದಲ್ಲಿ ಸಾಂಗ ವಾಯಿತು.

**ಪೆರ್ಡೂರು:-** ಸ್ಥಳೀಯ ಬಿ. ಇ. ಎಮ್. ಹಾ. ಎ. ಶಾಲೆಯ ಅಧ್ಯಾಪಕ ವೃಂದ ಮತ್ತು ವಿದ್ಯಾರ್ಥಿಗಳು ಇದೇ ಜ 7ರಿಂದ 10ರ ತನಕ ಶ್ರೀ ಎ. ಪಿ. ಕಲ್ಯಾಣಿಗರ ಮಂಟಪ ಳುತನದಲ್ಲಿ ಬೆಳ್ಳಿ, ಶಂಕರನಾರಾಯಣ ಸ್ಥಳಗಳಲ್ಲಿ ಶೈಕ್ಷಣಿಕ ಪ್ರವಾಸ ಕೈಕೊಂಡಿದ್ದು ಅಲ್ಲಲ್ಲಿಯ ಶ್ರೀಗಳಾವ ಎಸ್. ರಾಮರಾಯ ಹಾಲಂಬಿ, ಡಾ। ಆನ್ಸಿ ಹೋಕ್ರಿ ಮತ್ತು ಎನ್. ಮಂಜಯ್ಯ ಉಡುಪರಿಂದ ಸತ್ಕಾರಗಳನ್ನು ಸ್ವೀಕರಿಸಿದರು ಶಿವಮೊಗ್ಗದಲ್ಲಿ ನೆಲ್ಲಿ ಪ್ರಕಾಶ ಹೋಟೆಲಿನ ಒಡೆಯರಾದ ಶ್ರೀ ಎ. ಕೆ. ಜನಾರ್ಧನ ನೆಲ್ಲಿಯವರು ಊಟಿ ಉಸಚಾರಗಳನ್ನಿತ್ತು ಸತ್ಕರಿಸಿದರು. ಪ್ರವಾಸ ಕಾಲದಲ್ಲಿ ಡಾ। ಎಸ್ ಆರ್. ಹೆಗ್ಡೆ ಮೊದಲಾದವರು ಸಹಕಾರವಿತ್ತಿದ್ದರು.

**ಬಜ್ಪೆ-** ಸ್ಥಳೀಯ ಪ್ರಾಥಮಿಕ ಆರೋಗ್ಯ ಕೇಂದ್ರದ ಪ್ರಸೂತಿಕಾ ಗೃಹವನ್ನು ಜಿಲ್ಲಾ ಕಲೆಕ್ಟರ್ ಶ್ರೀ ಎಚ್ ನರಸಿಂಗಪ್ಪನವರು ಈ ಚಿಗೆ ಉದ್ಘಾಟಿಸಿದರು ಪ್ರಜೋಕ್ತ ಎಸ್ಸೆ ಕ್ಯೂಟಿವ್ ಆಫೀಸರ್ ಶ್ರೀ ಡಿ. ಕೃಷ್ಣಪ್ಪನವರು ಸ್ವಾಗತಿಸಿದರು. ಬಜ್ಪೆ ಪಂಚಾಯತ ಅಧ್ಯಕ್ಷೆ ಶ್ರೀ ಬಿ. ವಿಠಲ ಸೆಟ್ಟರು ಸಭಾಧ್ಯಕ್ಷತೆವಹಿಸಿದ್ದರು ಶ್ರೀಗಳಾವ ಬಿ. ಕೃಷ್ಣ ರಾವ್, ಜಿಲ್ಲಾ ಆರೋಗ್ಯಾಧಿಕಾರಿ ಡಾ। ನಾಡೇಶಯ್ಯ, ಜಿಲ್ಲಾ ಪಂಚಾಯತ ಅಫೀಸರ್ ಶ್ರೀ ಕೆ. ಸೀನ ಸೆಟ್ಟರು ಕಾರ್ಯೋಚಿತ ಭಾಷಣ ಮಾಡಿದರು. ಡಾ। ಬಿ. ಭಾಸ್ಕರ ರಾಯರು ಧನ್ಯವಾದಗಳನ್ನಿತ್ತರು.

**ಚೇರ್ಕಾಡಿ-** ಶ್ರೀ ಆರ್. ಕೆ. ಪಾಟ್ಟು ರ್ ಶಾಲಾ ಹಾ. ಎ. ಶಾಲೆಯ ಸಮೀಪ ಅಂಬರ ಚರಕ ಪರಿಶ್ರಮಾಲಯವೊಂದು ತಾ. 8ರಲ್ಲಿ ಶ್ರೀ ಎನ್. ಟಿ. ಉಡುಪರಿಂದ ಉದ್ಘಾಟಿಸಲ್ಪಟ್ಟಿತು. ಇಂತಹ ಪರಿಶ್ರಮಾಲಯಗಳಿಗೆ ಗ್ರಾಮಗಳಿಗೆ ಜೀವನ ದೀಕ್ಷೆಯ ಪ್ರಯೋಜನವಿದೆ ಎಂಬುದನ್ನು ವಿವರಿಸಿ ಭಾಷಣಗಳಾದುವು.

**ಬೇಲಂತಾಡಿ —** ಬನಾರಿ ಶ್ರೀ ಗೋಪಾಲಕೃಷ್ಣ ಮಂದಿರದಲ್ಲಿ ತಾ. 6ರಲ್ಲಿ 'ಕೃಷ್ಣ ಸಂಧಾನ ಮತ್ತು ಭೀಷ್ಮ ನಿರ್ಯಾಣ' ಎಂಬ ನ್ರಸಂಗದ ಯಕ್ಷಗಾನ ನಮಸ್ಕಾರಂಭವು ನುರಿತ ಯಕ್ಷಗಾನ ಕಲಾವಿದರ ಕೂಡುವಿಕೆಯಿಂದ ಜರಗಿತು. ಶ್ರೀ ರಮಾನಂದ ಬನಾರಿಯವರು ಸ್ವಾಗತಭಾಷಣಗಾಡಿದರು;

---

**ಮೂಲ್ಕಿ ಬೇಂಕ್ ಲಿಮಿಟೆಡ್, ಮುಲ್ಕಿ.**

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂಬೆ ವರೆಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

**ನಮ್ಮ ಬಡ್ಡಿ ದರಗಳು.**

ನಿರಖು ಠೇವಣಾತಿ.

| | | |
|---|---|---|
| 24 | ತಿಂಗಳಿಗೆ | 4% |
| 12 | ,, | 3½% |
| 6 | ,, | 3½% |
| 3 | ,, | 3% |
| ಸೇವಿಂಗ್ಸ್ ಬೇಂಕ್ ಲೆಕ್ಕ | | 2% |
| ಕರೆಂಟ್ ಎಕೌಂಟು | | ½% |

THE MOOLKY BANK, LTD. MULK

---

## ಮಂಗಳೂರು

**ಉದ್ಘಾಟನಾ ಸಮಾರಂಭ**— ಪೆಂಟ್ಲೆಂಡ್ ಪೇಟೆ ಮುನಿಸಿಪಲ್ ಎಲಿಮೆಂಟರಿ ಶಾಲೆಯ ಹೊಸ ಕಟ್ಟಡವನ್ನು ತಾ. 10ರಲ್ಲು ಮುನಿಸಿಪಲ್ ಚೇರ್‌ಮೆನ್ ಶ್ರೀ ಕೆ. ಸೂರ್ಯನಾರಾಯಣ ರಾಯರು ಉದ್ಘಾಟಿಸಿದರು.

ಗಳಾದ ಯು. ಕೇಶವ ರಾವ್ ಮತ್ತು ಪೋಪರ ಕಣಿಲರು ಶಾಲಾಭಿವೃದ್ಧಿಗಾಗಿ ಪು ಹಿತಸೂಚನೆಗಳನ್ನಿತ್ತರು. ಶ್ರೀ ಮುಲ್ ಶ್ರೀನಿವಾಸ ನಾಯಕರು ಧನ್ಯವಾದಗ ತ್ತರು.

**ಸತ್ಕಾರ ಸಮಾರಂಭ**— ಲೋಕಸಭೆ ಅರಿಸಲ್ಪಟ್ಟ ಮಂಗಳೂರು ಪತ್ರಿಕೋದ್ಯ ಸಂಘದ ಅಧ್ಯಕ್ಷ ಶ್ರೀ ಕೆ ಆರ್. ಆಚಾರಿಗೆ ಸದ್ರಿ ಸಂಘದವರು ತಾ. 10ರಂದು ಜೆ ಸ್ಥಳೀಯ ಶ್ರೀಕೃಷ್ಣಭವನದ ರೆಸ್ಟೋರೆಂಟ್ ಟೂಳಿಗೆಯಲ್ಲಿ ಜರಿದ ಸತ್ಕಾರ ಸಮಾರಂಭವನ್ನು ಏರ್ಪಡಿಸಿದರು. ಶ್ರೀ ವಿ. ್. ಕುಡ್ವರು ಸಮಾರಂಭದ ಅಧ್ಯಕ್ಷತೆ ಂಸಿದ್ದರು. ಸಂಘದ ಕಾರ್ಯದರ್ಶಿ ಶ್ರೀ ಎಸ್. ಉಪಾಧ್ಯಾಯರು ಸ್ವಾಗತಮಾತು ನ್ನಾಡಿದರು. ಶ್ರೀನಿವಾಸ ಎಸ್. ಭೀಮ ವ್ ದಿ. ಕುಟ್ಟಿಸ್ವಾಮಿ, ಬಿ. ಎಮ್. ಇದಿ ್ರಿ, ಬಿ. ವಿ. ಬಾಳಿಗ, ಕೆ. ಎಮ್. ಆಳ್ವ ಾದಿಯವರು ಶುಭೋಚಿತ ಮಾತುಗಳ ದಿ ಮುಖ್ಯ ಅತಿಥಿಗಳನ್ನು ಅಭಿನಂದಿಸಿ ಶ್ರೀ ಆಚಾರ್ಯರು ತಮಗಿತ್ತ ಸತ್ಕಾರಕ್ಕೆ ಧಾರವೊಡಿಸಿ, ತನ್ನ ಸೇವೆಯನ್ನು ಪಕ್ಷವಿ ಸ್ಪು ಸಲ್ಲಿಸುವುದಾಗಿ ಆಶ್ವಾಸನೆಯಿತ್ತರು.

**ಜಿಲ್ಲಾ ಕಲೆಕ್ಟರರ ಪ್ರಕಟಣೆ**— 1957ನೆ ಇಸವಿ ಏಪ್ರಿಲ್ ತಾ. 20ರಲ್ಲು ಶ್ಯಾನುಭಾಗರ ಸರ್ವೆ ತರಬೇತಿ ಶಾಲೆಯು ಕಾರ್ಕಳ ತಾಲೂಕಿನ ನೂೂರಿನಿದ್ದೆಯಲ್ಲಿ, ತೆರಿಯೋಗಾಗುವುದು ರಾಲೆಗೆ ಸೇರಲು ಇಚ್ಛಿ ಸುವವರು ತಾ. 20.4.57 ರಲ್ಲು ಬೆಳಿಗ್ಗೆ 8 ಗಂಟೆಗೆ ಸರಿಯಾಗಿ ಮೂಡಬಿದ್ರೆ ಗ್ರಾಮಾ ಚಾವಡಿಯಲ್ಲಿ ಅವರ ಎಲ್ಲಾ ಸರ್ಟಿಫಿಕೇಟು ಸಹಿತ ಜಿಲ್ಲಾ ಸರ್ವೇಯರ ಮುಂದೆ ಹಾಜರಾ ಗಬೇಕಾಗಿದೆ. ದಾಖಲುಮಾಡಲಪೇಕ್ಷಿತ ಪಾಸಿ ಆಬೇರ್ವಾದರಿಂದ ಹತ್ತು ರೂಪಾಯಿ ಪ್ರವೇಶಫೀಸು ವಸೂಲುಮಾಡಲಾಗುವುದು.

**ದ. ಕ. ಜಿಲ್ಲಾ ವಾಣಿಜ್ಯ ನೌಕರರ ಸಂಘದ**— ಕಾರ್ಯಕಾರೀ ಸಮಿತಿಯು ತಾ. 7ರಲ್ಲು ಜರಿಗಿ ಜಿಲ್ಲೆಯ ವಾಣಿಜ್ಯ ನೌಕರರ ದ್ವಿತೀಯ ಸಮ್ಮೇಳನವನ್ನು ತಾ. 9—6—57ನೆ ಆದಿತ್ಯವಾರ ಸಂಜೆ 3—30 ಗಂಟೆಗೆ ಕೊಡಿಯಾಲ್ ಬೈಲಿನಲ್ಲಿರುವ ಸೆಂಟ್ರಲ್ ಕೋಪರೇಟಿವ್ ಬೇಂಕಿನಕಟ್ಟಡದಲ್ಲಿ ಜರಿಗಿಸಬೇಕೆಂದೂ, ಅಂದಿನಅಧ್ಯಕ್ಷತೆ ವಹಿಸಲು ಶ್ರೀ ಬಿ. ವೈಕುಂಠ ಬಾಳಿಗ, ಎಮ್. ಎಲ್. ಎ. ಅವರನ್ನು ಕೇಳಿಕೊಳ್ಳಬೇಕೆಂದೂ ನಿರ್ಧರಿಸಲಾಯಿತು. ಸದ್ರಿ ಸಮ್ಮೇಳನದಲ್ಲಿ ಭಾಗವಹಿಸಿ, ಸಲಹೆ ನೀಡಲು ಶ್ರೀಗಳಾದ ಕೆ. ಆರ್. ಆಚಾರ್, ಎಮ್. ಪಿ. ನಿ ಶ್ರೀನಿವಾಸ ಶೆಟ್ಟಿ, ಎಸ್. ಎಲ್. ಎ. ಬಿ. ಕೆ. ಕೃಷ್ಣಯ್ಯ ಮತ್ತು ಡಿ. ಪೋಹನ ರಾಯರನ್ನೂ ಆಮಂತ್ರಿಸಬೇಕೆಂದೂ ನಿರ್ಣಯವಾಯಿತು. ಸಂಘದಸಮಾಪ ಸಭೆಯನ್ನು ಕೂಡಾ ತಾ. 9-6-57ರಲ್ಲಿ ಬೆಳಿಗ್ಗೆ 9½ ಗಂಟೆಗೆ ಜರಿಗಿಸಬೇಕೆಂದು ನಿರ್ಣಯವಾಯಿತು.

**ಸರಕಾರಿ ಕೆಳತರಗತಿಯ ನೌಕರರ** ಹಿತಸಾಧನೆಗಾಗಿ ಸಂಘವೊಂದು ಕಳೆದ ತಾ 31ರಲ್ಲು ಮಂಗಳೂರಲ್ಲಿ ಸ್ಥಾಪಿಸಲಾಯಿತು. ಶ್ರೀಗಳಾದ ವಿ. ಜನಾರ್ಧನ, ಎ. ಗೃಂಥ್ಯ ಎಸ್. ಸಾಲನ್ನ ಎ. ವೇಣಪ್ಪಸಪರು ಅನು ಕ್ರಮವಾಗಿ ಅಧ್ಯಕ್ಷ ಉಪಾಧ್ಯಕ್ಷ ಕಾರ್ಯದ ರ್ಶಿ ಮತ್ತು ಕೋಶಾಧಿಕಾರಿಗಳಾಗಿ ಆರಿಸಲ್ಪಟ್ಟರು.

**ಜಿಲ್ಲಾ ಕೃಷಿ ಅಧಿಕಾರಿ** ಶ್ರೀ ಕೆ. ಸಂಜೀವ ಸೆಟ್ಟಿರ ಅಧ್ಯಕ್ಷತೆಯಲ್ಲಿ ತಾ. 7ರಲ್ಲು ಜಿಲ್ಲೆಯ ಕೃಷಿ ಇಲಾಖೆಯ ವಿವಿಧ ಅಧಿಕಾರಿಗಳು, ಕೃಷಿ ವಿಸ್ತರಣಾನಿಕಾರಿಗಳು, ಪರಿಶೋಧನಾಲಯಗಳ ಸಾಮ್ಯಾಧಿಕಾರಿಗಳು ಮತ್ತಿತರ ಸಭೆಯು ಜರಿಗಿ ಕೃಷಿಗೆ ಸಂಬಂಧ ಪಟ್ಟ ಸಮಸ್ಯೆಗಳನ್ನು ಚರ್ಚಿಸಲಾಯಿತು. ಜಿಲ್ಲೆಯಲ್ಲಿ ಕೃಷಿ ಸಮಸ್ಯೆಗಳನ್ನು ಜರ್ಜರಿಸಲು ಅನುಕೂಲವಾಗುವಂತೆ ಕೃಷಿ ಇಲಾಖೆಯ ತೆನೊನ್ ಸ್ಪೈಟೆರು ಮತ್ತು ಕೃಷಿ ವಿಸ್ತರ ಣಾಧಿಕಾರಿಗಳು ತಾಲೂಕು ಮತ್ತು ಫಿರ್ಕಾ ವಲಯಗಳಲ್ಲಿ ರೈತರ ಜೆಚ್ಚಾ ಗೋಷ್ಠಿಗಳನ್ನು ಏರ್ಪಡಿಸಬೆ. ಕೆಂದೂ ನಿರ್ಣಯಿಸಲಾಯಿತು.

**ವಸಂತೋತ್ಸವ**— ಸ್ಥಳೀಯ ಜೆಸಿಂತ್ ಬಾಲಿಕಾ ಪಾಠಶಾಲೆಯಲ್ಲಿ ತಾ. 6 ಮತ್ತು 7ರಲ್ಲು ವಸಂತೋತ್ಸವ ಜರಿಗಿತು. ಶಾಲೆಯ ಸರ್ವ ಪ್ರಥಮ ವಿದ್ಯಾರ್ಥಿನಿಯಾದ ಕುಮಾರಿ ಸಿ. ನಾರಾಯಣಿ ಅವರ ಪುತ್ರಿ ಕುಮಾರಿ ಸಂತಾ ಡಾಲಿಯಾಗೆ ಈ ಬಾರಿ ಸಂತಾ ಡಾಲಿಯಾ ಅರಿಸಲಾಗಿತ್ತು. ಕುಮಾರಿ ಹೇಮಾವತಿಯವರು ಸ್ವಾಗತ ಭಾಷಣ ಮಾಡಿದರು. ವಸಂತ ರಾಣಿಯಿಂದ ಲಕ್ಕೀ ಡಿಪ್ ಮತ್ತು ಪ್ರದರ್ಶನದ ಉದ್ಘಾಟನೆ ನಡೆಯಿತು. ಶ್ರೀಮತಿ ಎಸ್. ಸುಬ್ಬಯ್ಯನವರು ವಸಂತೋತ್ಸವದ ಕುರಿತು ಭಾಷಣವಿತ್ತರು. ಶ್ರೀ ಶ್ರೀನಿವಾಸ ಉಡುಪರು ಧನ್ಯವಾದಗಳನ್ನಿತ್ತರು.

**ಮಾರಾಟಿಕರ ವಸೂಲಿ**— ಕೆನರಾ ಚೇಂಬರ್ ಆಫ್ ಕಾಮರ್ಸ್‌ನವರು ಒಂದು ರೂಪಾಯಿಗೆ ಎರಡು ನಯೇ ಪೈಸೆಗಳಂತೆ ಕಮರ್ಶಿಯಲ್ ಟೇಕ್ಸ್ ಅಫೀಸರರು ಮಾರಾಟಿಕರ ತೆರಬೇಕೆನ್ನುವುದು ಸರಿಯಲ್ಲವೆಂದೂ, ಇದರಿಂದಾಗಿ ಮಾರಾಟಿಕರದ ಮಿತಿಯನ್ನೇ ಕುರಿಸಿದಂತಾಗುವುದೆಂತಲೂ, ಮ್ಯಾ ಪಾರಿಗಳ ಪ್ಲೂ, ಗಿರಾಕಿಗಳಲ್ಲೂ ಈ ಕಾರ್ಯಕ್ರಮವಿರುವುದಾಗಿ ತುಂಬಾ ಗಲಿಬಿಲಿಯುಂಟಾಗಿದೆಯೆಂದೂ ಹಿಂದಿನ ರೀತಿಯಲ್ಲೇ ಒಂದು ನೂರು ರೂಪಾಯಿಗಳ ಮೇಲೆ ಒಂದು ರೂಪಾಯಿ ಸುತ್ತ ಒಂ ಭತ್ತಾತ್ತಿಯ ದರವಲ್ಲೇ ಸೂಚಾರಿಕರ ವಸೂ ಲುಮಾಡುವಂತೆ ತಂತಿ ಸೂಲಕ ಸಂಬಂಧ ಪಟ್ಟವರಿಗೆ ನಿರ್ದೇಶನವಿಯಬೇಕೆಂದೂ ಮೈ ಸೂರು ಮುಖ್ಯಮಂತ್ರಿಯವರಿಗೂ ಮುಖ್ಯ ಕಾರ್ಯದರ್ಶಿಯವರಿಗೂ ತಾ. 11ರಲ್ಲು ತಂ ತೀ ಮೂಲಕ ವಿನಂತಿಸಿರುತ್ತಾರೆ

**ಭಾಷಣ**— ಸ್ಥಳೀಯ ರೋಟರಿ ಕ್ಲಬ್ಬಿ ನಲ್ಲಿ ತಾ. 11ರಲ್ಲು ಶ್ರೀ ಎಸ್. ಕೃಷ್ಣಮೂರ್ತಿಯವರು 'ಸ್ವಾತಂತ್ರ್ಯ ಮತ್ತು ಸೇವೆ' ಎಂಬ ವಿಷಯದಲ್ಲಿ ಭಾಷಣಮಾಡಿದರು. ಶ್ರೀ ವಿ ಎಸ್. ಕುಡ್ವರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀ ಕೆ. ವಿಶ್ವನಾಥ ಕಾಮತರು ಧನ್ಯವಾದಗಳನ್ನಿತ್ತರು.

**ಪದ್ಮನಿಭೂಷಣೆ** ಶ್ರೀಮತಿ ಎಮ್. ಎಸ್. ಸುಬ್ಬಲಕ್ಷ್ಮಿಯವರಿಗೆ ಸಿಂಧ್ಯಾನ್ಯ ಗಾಯಕ ಸಮ್ರಾಜ್ಞಿ ಪದವಿಯನ್ನು ಪ್ರದಾನ ಮಾಡಿದ ಸಂದರ್ಭದಲ್ಲಿ ತಾ. 7ರಲ್ಲು ಡಾನ್ ಬೋಸ್ಕೊ ರಂಗ ಮಂದಿರದಲ್ಲಿ ಜರಿಗಿತು. ಶ್ರೀ. ಕೆ. ಆರ್. ಆಚಾರ್ ಎಮ್. ಪಿ. ಅವರು ಧನ್ಯವಾದಗಳನ್ನಿತ್ತರು.

**ಮಿತಧಾರಣೆಯ ಅಕ್ಕಿ ಅಂಗಡಿ** ಗಳು ಬಂದರು, ಹಂಪ್ಪನಕಟ್ಟೆ, ಮಾರ್ಕೆಟ್ ರೋಡ್, ಜಪ್ಪು ಮೊದಲಾದ ಮುಖ್ಯ ಕೇಂ ದ್ರಗಳಲ್ಲಿ ಸದ್ಯದೇ ತೆರೆಯಲ್ಪಡಲಿರುವುದು.

**ಶ್ರೀ ಅರಿಬೈಲ್ ಭೋಜರಾಯರು** ಕೆಲವಿನಗಳ ಅಸೌಖ್ಯದಿಂದ ಇತ್ತೀಚೆಗೆ ನಿಧನ ಹೊಂದಿದರು. ದಿವಂಗತರು ಹಿರಿಯ ರಾಷ್ಟ್ರೀಯ ಕೆಲಸಗಾರರಾಗಿದ್ದರು.

**ನಗರ ಸಭೆಯು**— ತಾ. 12ರಲ್ಲು ಸಂತೆ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಿಗಿತು. ರಾಮಕೃಷ್ಣ ಶೆಣೈ ಧರ್ಮ ಆಸ್ಪತ್ರೆಗೆ ನಗರಸಭೆಯ 1957-58ನೆ ಸಾಲಿಗಾಗಿ ರೂ. 1930/- ನ್ನೂ, ರಾಮಕೃಷ್ಣ ಬಾಲಾಶ್ರಮಕ್ಕೆ ರೂ. 950/- ನ್ನೂ ಮಂಜೂರುಮಾಡಲಾಯಿತ. ಶ್ರೀಮತಿ ಮೇರಿ ಬ್ರಿಟೋರವರ ಸಮಸ್ಕತನ ವನ್ನು ಮನಸ್ಸು ಸಾರ್ವಾನುಮತದಿಂದ ಊರ್ಜಿತ ಗೊಳಿಸಲಾಯಿತು. ಅದು ರಸ್ತೆಗಳ ಬಡಾವಣೆ ಮತ್ತು ಹೊಸ ರಸ್ತೆಗಳ ನಿರ್ಮಾಣಕ್ಕಾಗಿ ಸ್ಥಳಸ ಜೆಯಪ್ರದಕ್ಕಾಗಿ ಮೈಸೂರು ಸರಕಾರದಿಂದ ರೂ. 53,167/- ನ್ನು ಸಂಜಾಡುನೂಡುವ ಮುಳುವನ್ನು ವಿಕಾರ್ಡುಮಾಡಲಾಯಿತು.

## ಬೊಂಬಾಯಿ

**ರಾಜಾಪುರ ಸಾರಸ್ವತ ಸಂಘದ ಮಹಾಸಭೆಯು**— ತಾ. 5ರಲ್ಲು ಸಂಘದ ಅಧ್ಯಕ್ಷ ಶ್ರೀ ಬಿ. ಎ ನಾಯಕರ ಅಧ್ಯಕ್ಷತೆಯಲ್ಲಿ ಲೆಮಿಂಗ್ಟನ್ ಚೌಕಿಯ ಸಭಾ ಗೃಹದ ಮಲ್ಲಿ ಜರಿಗಿತ್ತು. ಕಾರ್ಯದರ್ಶಿ ಶ್ರೀ ವಿ. ಡಿ. ಪ್ರಭುಗಳು ವರದಿಯನ್ನು ಪಿಡಿದ ಬಳಿಕ ಕೋಶಾಧಿಕಾರಿ ಶ್ರೀ ಎಸ್. ಎಸ್. ನಾಯ್ಕರು ಲೆಕ್ಕಪತ್ರಗಳ ವರದಿಯನ್ನೊಪ್ಪಿಸಿದರು

ಸಮಾಜದಬಡವಿದ್ಯಾರ್ಥಿಗಳಿಗೆ ವೇತನ ಕೊಡುವ ಬಗ್ಗೆ ಜಡವಿದ್ಯಾರ್ಥಿಗಳು ತಮಗೆ ಪರೀಕ್ಷೆಯಲ್ಲಿ ಸಿಕ್ಕಿದ ಮೊರ್ಕು, ಮನೆ ಮತ್ತು ಶಾಲೆಗಳ ವಿಳಾಸಗಳನ್ನಿತ್ತಿನೊಂದಿಗೆ ಅರ್ಜಿಗಳನ್ನು ತಾ. 15—7—57ರೊಳಗೆ ಸಂಘಕ್ಕೆ ತಲ್ಪಿಸಬೇಕೆಂದು ನಿರ್ಣಯವಾಯಿತು.

ಅಲ್ಲದೆ ಗತವರ್ಷಗಳಂತೆಯೇ ಶಿಷ್ಟತರಗತಿಗಿಂತ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ ಧನೋರ್ಥ ವಿದ್ಯಾರ್ಥಿವೇತನ ಕೊಡುವುದೆಂದೂಯಿತು ಸಮಾಜದ ವಿದ್ಯಾರ್ಥಿಗಳಲ್ಲಿ ಎಸ್. ಎಸ್. ಎಲ್. ಸಿ. (ಮೆಟ್ರಿಕ್) ಪರ್ಟಿಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಪಾಸಾದವರು ತಮ್ಮ ಮಾರ್ಕುಗಳನ್ನು ಸಂಘಕ್ಕೆ ತಿಳಿಸಿದ್ದಲ್ಲಿ ಅಂತವರಿಗೆ ಬಹುಮಾನ ಕೊಡಬೇಕೆಂದೂಯಿತು. ನಂತರ ಮುಂದಿನ ಎರಡು ವರ್ಷಗಳಿಗೆ ಸಂಘದ ಹೊಸ ಕಾರ್ಯನಿರ್ವಾಹಕ ಸಮಿತಿ ಚುನಾವಣೆ ಮೊದಲಾದ ಕಾರ್ಯಕ್ರಮಗಳಾಯಿತು.

## ಬೆಂಗಳೂರು

**ಶ್ರೀ ಎ. ಬಿ. ಶೆಟ್ಟಿಗೆ ಸತ್ಕಾರ**— ಬೆಂಗಳೂರು ನಗರದಲ್ಲಿರುವ ಬಂಟ ಸಮಾಜ ಪರರು, ಮೈಸೂರು ಆರೋಗ್ಯ ಮಂತ್ರಿ ಖಾದಿಂದ ನಿಯುಕ್ತರಾಗಿರುವ ಶ್ರೀ ಎ. ಬಿ. ಶೆಟ್ಟಿಗೆ ಸ್ಥಳೀಯವಿಮಾನಹೋಟೆಲೊಂದರಲ್ಲಿ ಭೋಜನಸತ್ಕಾರವಿತ್ತು ಗೌರವಿಸಿದರು. ಕೇಂದ್ರ ಸರಕಾರದ ಉತ್ಪಾದನಾ ಖಾತಾಮಂತ್ರಿ ಶ್ರೀ ಕೆ. ಸಿ. ರೆಡ್ಡಿ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಶ್ರೀ ಮೊಧವನ್ ನಾಯರ್, ಮುಖ್ಯ ಮಂತ್ರಿ ಶ್ರೀ ಎಸ್. ನಿಜಲಿಂಗಪ್ಪ, ಶ್ರೀನಿವಾಸ ಮಲ್ಯ, ಎಮ್. ಪಿ. ಕೆ. ಪಸುಮಂತಯ್ಯ ಎಮ್. ಎಲ್. ಎ. ಮಾಗೂ ಇತರ ಮಂತ್ರಿಗಳೂ ಪ್ರಮುಖರೂ ಉಪಸ್ಥಿತರಿದ್ದರು. ಶ್ರೀ ಕೆ. ಪಜನಂದ ಹೆಗ್ಡೆ, ಎಮ್. ಪಿ. ಅವರು ಧನ್ಯವಾದಗಳನ್ನಿತ್ತರು.

**ಮೈಸೂರು ಸರಕಾರೀ ಪ್ರಕಟಣೆ** ಬೆಂಗಳೂರು ನಿಲ್ದಾಣ ಬಸ್ಸುಗಳ ಪ್ರಯಾಣ ಫೀಸನ್ನು ತಾ. 1—4—57ರಿಂದ ಪರಿಷ್ಕೃತಗೊಳಿಸಿದುದರಿ ಪರಿಣಾಮವಾಗಿ ಟೀಕೆ ವಿಸ್ಪಷ್ಟಗಳು ಪ್ರಕಟವಾಗಿರುವುದಲ್ಲದೆ ಕೆಲವು ಕತೆ ಬಸ್ಸುಗಳ ಪಿಡ್ಯಾದ ನಿಲ್ದಿಸಿದುದರ ಕುರಿ ತೂ ಪತ್ರಿಕೆಗಳಲ್ಲಿ ಉಲ್ಲೇಖವಿಸಲ್ಪಟ್ಟಿದೆ ಅವ ರ ಬಸ್ಸುಗಳ ಮತ್ತಿತರ ಉಪಕರಣಗಳಿಗೆ ಮಾ ರೂ ಇತರ ವಿಚ್ಛೆಗಳು ಜಾಸ್ತಿಯಾಗಿದ್ದರೂ ಕೂ ಡಾ, ಸರಕಾರವು ಆನಿಸಿಕೆ ಅಧಿಕ ಮಟ್ಟಿದ ಪಾಕರ್ಯಗಳನ್ನು ನೀಡಿದ ಸಲು ವಾಗಿ, ತಾತ್ಕಾಲಿಕವಾಗಿ ನಿಲ್ದಿಸಲಾದ ಸ್ಥಳಗ ಳಲ್ಲಿ ಪುನಃ ಹೊಸ ಬಸ್ಸುಗಳ ಓಡ್ಯಾಟವ ವ್ಯವಸ್ಥೆ ಮಾಡಿರುವುದು ಶೋರ್ಟರ್ ಭಾರ್ಜ ನ್ನು ಕೂಡಾ 1950ರಲ್ಲು ಇದ್ದುದನ್ನೇ ಈಗ ಮಾಲು ಮಾಡುತ್ತಿರಲಾಗಿದೆ. ಪ್ರಥ ಮದ ಮೈಲಿಗೆ ಒಂದಾಣೆ, ಎರಡನೆ ಮೈಲಿಗೆ ಒಂಭತ್ತು ಪೈ ಸೂರನೆ ಹಾಗು ಪೆಟ್ಟಿನ ನ್ಯೂಲುಗಳಿಗೆ ಆರು ಪೈ ಪ್ರಯಾಣಾರ್ಜನ್ನು ಗಣನೆ ಗೆ ತಂದುಕೊಂಡೇ ದರಗಳನ್ನು ಪರಿಷ್ಕೃತಗೊ ಳಿಸಲ್ಪಟ್ಟಿದೆ. ಮಕ್ಕಳಿಗೆ ವಿಶೇಷ ರಿಯಾಯತಿ ಯನ್ನು ತೋರಿಸಲಾಗಿದೆ. ಸರಕಾರವುಇಷ್ಟೊಂದು ಜನಹಿತಕ್ಕಾಗಿ ಕೈಸನ್ನೆ ನೂಡುತ್ತಿರುವಾ ಗ ಜನರು ಗಾಬರಿಗೊಳ್ಳಲು ಅವಕಾಶವಿಲ್ಲ ವೆನ್ನಲಾಗಿದೆ.

### ಸೂಚನೆ

"ನವಯುಗ" ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ ಇವು ಚಿಕ್ಕದಿರ ಬೇಕಲ್ಲದೆ, ಕಾಗದದ ಒಂದೇ ಮಗ್ಗುಲಿನಲ್ಲಿರ ಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿಜ್ಞಾಪಿ. —ಸಂ. ನ.





ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?

ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

# ಮನೆ-ಮದ್ದು

**HOME REMEDIES**

ಬರೆಯರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಎ. ಎಮ್

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರೆ ಎಲ್ಲಾ ಸಾಮಾನ್ಯ ಕಾಹಿಲೆ ಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ ರೂ. ೨—೦—೦ (ಟಿ. ಖರ್ಚು ಬೇರೆ).

ಸನಭಾರತ ಪುಸ್ತಕ ಭಂಡಾರ, ಉಡುಪಿ.

## ರಾಮಾಯಣ

# ಮಾನವ ಜೀವನದ ಕರ್ತವ್ಯ ಬೋಧನೆಗೆ ಹುಟ್ಟಿತು ಈ ಕಾವ್ಯ!

ಶ್ರೀರಾಮನ ಆವಶ್ಯಕತೆಯು ಹಿಂದಿನ ದಿನಗಳಿಗಿಂತ ಇಂದು ಅಧಿಕವಾಗಿದೆ. ರಾಮಾವತಾರದಂತಹ ಜನತಾರದಿಂದಾಗಿ ತಾವು ಹೆಚ್ಚು ಪ್ರಯೋಜನವನ್ನು ಪಡೆಯುವೆವೆಂದು ಜನರೆಲ್ಲರೂ ಇಂದು ತಿಳಿದುಕೊಂಡಿದ್ದಾರೆ. ಶ್ರೀರಾಮನವಮ್ಯುತ್ಸವದಲ್ಲಿ ಹೆಚ್ಚೆಚ್ಚು ಜನರು ಉತ್ಸಾಹದಿಂದ ಭಾಗವಹಿಸಿ ರಾಮನಲ್ಲಿ ತಮಗಿರುವ ಭಕ್ತಿ ಮತ್ತು ವಿಶ್ವಾಸಗಳನ್ನು ಪ್ರದರ್ಶಿಸುತಿದ್ದಾರೆ. ಭಾರತದ ಎಲ್ಲೆಡೆಗಳಲ್ಲೂ ಈ ರಾಮನವಮಿಯು ಅತ್ಯಂತ ವಿಜೃಂಭಣೆಯಿಂದ ಆಚರಿಸಲ್ಪಟ್ಟು ರಾಷ್ಟ್ರೀಯ ಉತ್ಸವವೆಂದು ಹೆಸರುಪಡೆದಿದೆ.

ಸಂಗೀತವು ನವಭಾರತದಲ್ಲಿ ಒಂದು ಮಹತ್ವದ ಸ್ಥಾನವನ್ನು ಪಡೆದಿದೆ. ಹಿಂದಿನ ಕಾಲದಲ್ಲಿ ಇದು ರಾಜವಂಶಗಳಿಂದ ಪ್ರೋತ್ಸಾಹಿಸಲ್ಪಡುತಿತ್ತು. ಇಂದು ಪ್ರಜಾಪ್ರಭುತ್ವವು ಅವುಗಳ ಸ್ಥಾನದಲ್ಲಿ ಸುವ್ಯವಸ್ಥಿತ ಸಂಘ ಸಂಸ್ಥೆಗಳನ್ನು ಏರ್ಪಡಿಸಿ, ಸಂಗೀತವನ್ನು ಬೆಳೆಸುತ್ತಿರುವುದು. ಇದರಿಂದಾಗಿ ಪ್ರಾಚೀನಕಾಲಕ್ಕಿಂತ ಹೆಚ್ಚಿನ ಜನರಲ್ಲಿ ಸಂಗೀತದ ಗಾಳಿಯು ಸೋಂಕುವಂತಾಗಿದೆ.

ದೇಶದ ಎಲ್ಲ ಜನರೂ ಶ್ರೀರಾಮನವಮಿದಿನ ಉತ್ಸವವನ್ನು ಆಚರಿಸುತ್ತಾರೆ. ಆದುದರಿಂದ, ಶ್ರೀರಾಮನು ಏನು ಮಾಡಿದನೆಂದು ತಿಳಿಯುವುದಕ್ಕೆ ಕುತೂಹಲ ಹುಟ್ಟುವುದು ಸಹಜ. ರಾಮಾಯಣ ದಷ್ಟು ಜನಜನಿತವಾಗಿ ಹರಡಿದ ಅಥವಾ ಓದಲ್ಪಟ್ಟ ಕಥೆ ಭಾರತದಲ್ಲಿ ಬೇರೊಂದಿಲ್ಲ. ನವೀನ ಪ್ರಗತಿಶೀಲ ಸಾಹಿತ್ಯವಾದರೂ ರಾಮಾಯಣದ ಮಹತ್ವವನ್ನು ತೊಡೆದು ಹಾಕಲು ಶಕ್ತವಾಗಿಲ್ಲ. ಪ್ರದರ್ಶನ ಮಂದಿರಗಳಲ್ಲಿ ಜನರನ್ನು ಆಕರ್ಷಿಸಿ, ತಮ್ಮ ವ್ಯಾಪಾರವನ್ನು ನಿರಾತಂಕವಾಗಿ ನಡಿಸಲು, ಸಿನೆಮಾ ತಯಾರಕರು ಸಹ ರಾಮಾಯಣ ಅಥವಾ ಮಹಾ ಭಾರತವನ್ನು ಹೊಂದಿಕೊಂಡಿರಬೇಕಾಗಿದೆ. ಶ್ರೀರಾಮನೇನು ಮಾಡಿದ? ಆತನು ತಾನು ಕಷ್ಟಪಡುವುದಕ್ಕಾಗಿಯೇ ಬಂದನು. ತಮ್ಮ ದಿನ ನಿತ್ಯದ ಜೀವನದಲ್ಲಿ ತಮ್ಮ ಪಾಲಿನ ಕರ್ತವ್ಯಗಳನ್ನು ಜನರಿಗೆ ಮನವರಿಕೆ ಮಾಡಿಕೊಡಲು ಜನಿಸಿದನು. ತಂದೆ ಯಾದವನು ಏನು ಮಾಡಬೇಕು, ಮಗನ ಕರ್ತವ್ಯವೇನು, ಸಹೋದರ ಹೇಗೆ ನಡೆದುಕೊಳ್ಳಬೇಕು? ಮಡದಿಯ ಕರ್ತವ್ಯವೇನು ಎಂಬಿವುಗಳನ್ನು ಜನರಿಗೆ ಪ್ರತ್ಯಕ್ಷವಾಗಿ ತಿಳಿಸಿಕೊಡಲು ರಾಮನು ಅವತರಿಸಿದನು.

ರಾಮಾಯಣದಲ್ಲಿ ಯಾವುದೊಂದು ಶೂನ್ಯ ವಿಷಯವೂ ಇನ್ನು ಹೇಳಲು ಉಳಿದಿಲ್ಲ. ಆದರೂ ರಾಮ ಕಥೆಯನ್ನು ಎಷ್ಟುಬಾರಿ ಕೇಳಿದರೂ ಜನರಿಗೆ ಬೇಸರ ಬರುವುದಿಲ್ಲ. ಇದರ ಗುಟ್ಟೇನು? ರಾಮಾಯಣದಲ್ಲಿ ಪ್ರತಿಯೊಬ್ಬನ ಜೀವನವೂ ಪ್ರತಿಬಿಂಬಿತವಾಗಿರುವುದೇ ಈ ಶಕ್ತಿಯ ಆಸಕ್ತಿಗೆ ಕಾರಣ. ಮಾನವನ ಸತ್ವಪರೀಕ್ಷೆ, ಸುಖಸಂತೋಷ, ದುಃಖ ಎಲ್ಲವೂ ರಾಮಕಥೆಯಲ್ಲಿ ಚಿತ್ರಿತವಾಗಿವೆ. ಆದುದರಿಂದಲೇ ಜನರು ರಾಮಾಯಣವನ್ನು ಅದೆಷ್ಟೋ ಬಾರಿ ಓದಿದರೂ, ಕೇಳಿದರೂ ಬೇಸರ ತಾಳುವುದಿಲ್ಲ. ರಾಮ ಮತ್ತು ಸೀತೆಯರ ಕಥೆಯು ಪರಿಶ್ರಮ ಅಥವಾ ಶ್ರವಣವನ್ನು ಯಾರೂ ಎಂದೂ ತೊರೆಯುವುದಿಲ್ಲವಾರರು.

ನಾವೆಲ್ಲರೂ ಅಭಿವೃದ್ಧಿಯನ್ನು ಬಯಸುತ್ತೇವೆ ನಮ್ಮ ದೇಶದ ಬಾಹ್ಯ ಪ್ರದೇಶದ ಹಲವಾರು ದೇಶಗಳು ನಾವು ಯಾವ ವಿಧಾನದಲ್ಲಿ ಅಭಿವೃದ್ಧಿಯನ್ನು ಹೊಂದುತಿದ್ದೇವೆ ಎಂದು ಆತೊಹಲದಿಂದ ನೋಡುತ್ತಿದ್ದಾರೆ. ಒಂದು ಹಳೆಯ ಸತ್ಯವನ್ನು ನೀವು ತಿಳಿಯಿರಿ. ನಮ್ಮ ಪ್ರಜೆಗಳೆಲ್ಲರೂ ಉತ್ತಮ ನಡತೆಯುಳ್ಳವರಾಗುವವರೆಗೆ ನಮ್ಮದೇಶವು ಸುಧಾರಿಸದು. ಯಾಂತ್ರಿಕ ಅಥವಾ ತಾಂತ್ರಿಕ ವಿಧಾನಗಳಿಂದ ರಾಷ್ಟ್ರದ ಪುನರುದ್ಧಾರವಾಗಲಾರದು. ದೇಶದ ಪ್ರತಿಯೊಬ್ಬ ಪ್ರಜೆಯೂ ಮಾನಸಿಕವಾಗಿ ತನ್ನನ್ನು ತಾನೇ ಸುಧಾರಿಸಿಕೊಂಡರೆ ಮಾತ್ರ ರಾಷ್ಟ್ರವು ಉನ್ನತವಾಗುವುದು ಸಾಧ್ಯ. ಸತ್ಯ ಮತ್ತು ಪರಸ್ಪರ ಸಹಕಾರ—ಈ ತತ್ವಗಳನ್ನು ಅರಿತು ತನ್ನ ಮನಸ್ಸನ್ನು ಇವುಗಳಿಂದ ಪರಿಣತ ಗೊಳಿಸಬೇಕು. ದೇವಾಲಯದ ರಥದ ಹಗ್ಗವನ್ನು, ನೆರೆದ ಭಕ್ತಸ್ತೋಮವೆಲ್ಲವೂ ಸುದೃಢ ಮನಸ್ಕರಾಗಿ ಒಂದೇ ಗುರಿಯತ್ತ ಒಟ್ಟಿಗೆ ಎಳೆಯುವಾಗ, ಅದು ಸ್ತಬ್ಧನಾಗಬೇಕಾದ ದಾರಿಯಲ್ಲಿ ಹೋಗಬಲ್ಲುದು ಅಂತೆಯೇ ರಾಷ್ಟ್ರದ ಅಭಿವೃದ್ಧಿಯ ವಿಷಯವೂ ಆಗಿದೆ. ತಮ್ಮ ಶಕ್ತಿಯನ್ನು ಏಕತ್ರ ಉಪಯೋಗಿಸದಿದ್ದರೆ, ಆ ಶಕ್ತಿಯು ನಷ್ಟವೊಂದುವುದು ಅವರೆಲ್ಲರೂ ಹೇಗೆ ಒಂದಾಗಿ ಎಳೆಯಬಲ್ಲರು? ಬಹಳ ಪ್ರಾಚೀನ ಕಾಲದಲ್ಲಯೇ ಯೋಗ್ಯರೀತಿಯಿಂದ ನಡೆದುಕೊಂಡರೆ, ಒಬ್ಬರೊಡನೊಬ್ಬರು ಹೊಂದಿಕೊಂಡು ಸಹಕಾರದಿಂದ ಬಾಳಿದರೆ, ಸತ್ಯವಂತರಾಗಿ ಜೀವಿಸಿದರೆ, ತಾವೆಲ್ಲರೂ ಒಟ್ಟಿಗೆ ರಥವನ್ನು ಎಳೆದಂತಾಗುವುದೆಂದು ನಮ್ಮ ಜನರು ತಿಳಿದುಕೊಂಡಿದ್ದರು. ಸ್ವಾರ್ಥಗಳಾಗಿ, ಅವರು ಬಾಳಿದ್ದರೆ, ಬಹು ಮುಖವಾಗಿ ಎಳೆದಂತಾಗಿತ್ತು.

ಮಾನವ ಸಮೂಹವನ್ನು ಯಾವುದು ಉತ್ತಮವಾಗಿ ಮಾಡಬಹುದು? ಇವರ ಪಂಪರಾ ಪ್ರಾಪ್ತ ಇತಿಹಾಸವೇ ಅವರನ್ನು ಸರಿದಾರಿಯಲ್ಲಿ ನಡೆಸಬಲ್ಲುದು. ಈ ಇತಿಹಾಸವುಪವಿತ್ರವಾದುದು, ಪರಮಾತ್ಮನಲ್ಲಿ ವಿಶ್ವಾಸ ಪ್ರದರ್ಶಕವಾದುದು ಮತ್ತು ಪ್ರಾಮಾಣಿಕತೆಯ ಅಭ್ಯಾಸಯುಕ್ತವಾದುದು. ತನ್ನು ದಿನನಿತ್ಯದ ವ್ಯವಹಾರದಲ್ಲಿ ಸರಮಾತ್ಮನನ್ನು ತಮ್ಮೆದುರು ಇರಿಸಿಕೊಂಡಲ್ಲಿ ಶಾಲೆಯ ಬಿತ್ತಿಗಳಲ್ಲಿಯೋ ಅಥವಾ ಇನ್ನೆಲ್ಲಿಯೇ ಬಿಗಲಿ ನುಡಿಯು




# ಕುಮಾರಿ ಬಿಲ್ಲಿಗಳು

**Govt. Regd.**

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ.ಪಿ.ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

**P. DEVEE & Co. (N. J.) CALCUTTA—40**

ಸ್ಥಾನಿಕರು: ಸಾ ಕಂಪೆನಿ, ಮಂಗಳೂರು—1.


ಡವ ಪೈರುಪಚ್ಚೆಗಳಿಂದ ಕೂಡಿದ ಗದ್ದೆಗಳು, ಓಲಾಡುವ ಮರಗಳು, ಇವುಗಳಿಂದ ಅವರಿಲ್ಲಿಟ್ಟ ಮನೆಗಳು ಮಾನವರ ಪ್ರಭುಲ್ಲತೆಯನ್ನು ಹೆಚ್ಚಿಸುತ್ತವೆ. ಈ ದೇಶದವರಿಗೆ ಶಿತಿರ ಋತುವಿನ ಅನುಭವವೇ ಅಪರೂಪವಾಗಿದೆ. ಒಂದು ಸಣ್ಣ ಉದ್ಯಾನವಿಲ್ಲದ ಒಂದೇ ಒಂದು ಮನೆಯೂ ಸಯಾಮಿನಲ್ಲಿ ಗೋಚರಿಸಲಾರದು. ಮಾರ್ಗಗಳ ಇಕ್ಕೆಡೆಗಳಲ್ಲಿಯೂ ಆಕರ್ಷಕ ಪೊದಲಾದ ವೈಕ್ಷಗಳು ನೆಡಲ್ಪಟ್ಟಿವೆ. ಎಲ್ಲ ಪ್ರದೇಶದಲ್ಲಿಯೂ ಹೆಲವಾರು ಜಾತಿಯ ಮರಗಳು ಕಂಡು ಬರುತ್ತವೆ. ಭೂಮಿಯಲ್ಲಿ ಯಾವುದೊಂದು ಬೀಜವು ಬಿದ್ದುಬಿಟ್ಟಲೆ ಆದು ಮಳೆಯ ಸಂಯೋಗವಾದೊಡನೆ ವಿರಿಗಿಡಗಳ ರೂಪವನ್ನು ಪಡೆಯುತ್ತವೆ.

ಜೀವನವನ್ನು ಆನಂದದಿಂದ ಕಳೆಯುತ್ತಿರುವ ಸಯಾಮಿ ಜನರೊಂದಿಗೆ ಪ್ರಕೃತಿಯೂ ತನ್ನ ಲಾಸ್ಯವನ್ನಾಡಿ ಅವರನ್ನು ಆತುಲ ಸಂತೋಷಿಗಳನ್ನಾಗಿ ಪರಿವರ್ತಿಸುತ್ತದೆ. ಆದುದರಿಂದಲೇ ಸಯಾಮ್ ಒಂದು "ನಕ್ಕು ನಲಿಯುವ ನಾಡು" ಎಂದು ಹೇಳಬಹುದು.

## ಪುಸ್ತಕ-ವಿಮರ್ಶೆ

(ವಿನುರ್ತನಾಗಿ ಪುಸ್ತಕಗಳನ್ನು ಕಳಿಸುವಷ್ಟು ದಯಮಾಡಿ ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ನ.)

### HANDS OFF KASHMIR:

ಬರೆದವರು: ಕೆ. ಕೃಷ್ಣರಾವ್ ಬಿ. ಎ. ಪ್ರಧಾನ ಸಹ ಸಂಪಾದಕ "ಸಮಧಾರತಾ" ಬೋಳೂರು, ಮಂಗಳೂರು—3. ಕ್ರೌನ್ ೪ ಪುಟ 24 ಬೆಲೆ 0-4-0

ಭಾರತದ ವಿದೇಶಾಂಗ ನೀತಿಯಲ್ಲಿ ಒಂದು ದೊಡ್ಡ ಬಿರುಗಾಳಿಯಂತೆ ಪ್ರಸಲಾರಂಭಿಸಿದ ಕಾಶ್ಮೀರ-ಸಮಸ್ಯೆ ಇನ್ನೂ ಪ್ರಾಕಾರವಾಗದೆಯೇ ಉಳಿದಿದೆ. ರಾಜಕಾರಣಿಗಳು, ಮುತ್ಸದ್ದಿಗಳ ದೃಷ್ಟಿ ಕಾಶ್ಮೀರದತ್ತ ಹರಿಯತೊಡಗಿರುವುದು; ಪ್ರತಿಕ್ರಿಯೆಯಾಗಿ ಲೇಖನ, ಪುಸ್ತಕಗಳು ಪ್ರಕಟವಾಗುತ್ತಿರುವುದು ಎಲ್ಲಾ ದೃಷ್ಟಿಯಿಂದಲೂ ಒಳ್ಳೆಯದೇ.

ರಾಜಕೀಯ ಮತ್ತು ಪತ್ರಿಕಾ ವ್ಯವಸಾಯದಲ್ಲಿ ಆಳವಾಗಿ ಆಭ್ಯಾಸಮಾಡುತ್ತಿರುವ ಶ್ರೀ ಕೃಷ್ಣರಾಯರು "ಕೇಂದ್ರ ಆಫ್ ಕಾಶ್ಮೀರ" ಎಂಬ ಕರು ಹೊತ್ತಗೆಯನ್ನು ಪ್ರಕಟಿಸಿ ನೂಡಬೇಕಾದ ಕೆಲಸವನ್ನೇ ಮಾಡಿದ್ದಾರೆ.

ಪುಸ್ತಕವಿದು ಚಿಕ್ಕದಾದರೂ A call to the Nation, Pak demand for Plebiscite in Kashmir Examined; Pakistan - The aggressor; Prime Minister Nehrus offer; Betrayal of friends; Let not history repeat itself ಎಂಬ ಆರು ಅಧ್ಯಾಯಗಳೂ, A word to America & Britain, A word to our ex Rulers- ಎಂಬ ಎರಡು ವಿಭಾಗಗಳೂ ಇವೆ.

ನಮ್ಮ ಜನ ರಾಜಕೀಯವೆಂದೊಡನೆ ಎಲ್ಲವನ್ನೂ ಬಲ್ಲೆನೆಂಬ ರೀತಿಯಲ್ಲಿ ಮಾತನಾಡತೊಡಗುತ್ತಾರೆ. ಇಂದು ಹಳ್ಳಿಗರ ಜನರಲ್ಲಿ ರಾಜಕೀಯವನ್ನು ತಿಳಿದ ಕೊಳ್ಳಬೇಕೆಂಬ ಕುತೂಹಲವೇನೋ ಬಹಳವಿದೆ. ಅವರ ಕುತೂಹಲಕ್ಕೆ ಬೇಕಾದ ಆಹಾರ ಸಿಕ್ಕದಾಗಿ ಅವು ಎಲ್ಲೆಲ್ಲೋ ವಿಹರಿಸಿ ಏನೇನೋ ತಪ್ಪು ಕಲ್ಪನೆ ಮಾಡಿಕೊಳ್ಳುತ್ತದೆ. ಬೇಕಾದಾ 95 ಜನರಿಗೆ ಭಾರತ ಮತ್ತು ಪಾಕಿಸ್ತಾನಗಳ ಸ್ಥಾನ, ಸಂಬಂಧಗಳು ತಿಳಿದಿಲ್ಲವೆಂದರೆ ಆತಿಶಯವಲ್ಲ ಆದರೂ ಸ್ಫೂರ್ತಿಯಿಲ್ಲವೆಂದು ಅವರು ಸುಮ್ಮನಿರಲು ಸಿದ್ಧರಾಗದೆ ಪಲ್ಲಿ ಹೋಟೇಲುಗಳಲ್ಲಿ ತಮ್ಮ ಕಲ್ಪನೆಗೆ ಸಿಕ್ಕಿದಂತೆ ಮಾತನಾ

(೧೨ನೇ ಪುಟನೋಡಿರಿ)

## ಸಮಾಜ ಜನ ಜೀವನ

(೩ನೇ ಪುಟದಿಂದ)

ಗಿಲ್ಲ. ದೇಶದ ಪ್ರಕೃತಿ ಸೌಂದರ್ಯವು ಮಾನವ ಜೀವನದ ಸಂತೋಷವನ್ನು ಬೆಳೆಸುತ್ತಿದೆ. ನಾಲ್ಕೂ ಕಡೆಗಳಲ್ಲಿ ಹರಿಯುತ್ತಿರುವ ಜಲಧಾರೆಗಳು, ಕುಣಿದಾ

## ನಗರ ನಿರ್ಮಾಣ

(೩ನೇ ಪುಟದಿಂದ)

ಮಾಡಿಕೊಡುವ ಸಮಸ್ಯೆ ಬರುತ್ತದೆ. ಇದರಿಂದಾಗಿ, ವಾಸ್ತವ್ಯದ ಮನೆಗಳ ನಿರ್ಮಾಣವಾಗುತ್ತದೆ. ಸಾರಿಗೆ ಸೌಕರ್ಯಗಳೂ ಹೆಚ್ಚಾಗುತ್ತವೆ. ರೈಲ್ವೆಗಳು, ಬಸ್ಸು ಮಾರ್ಗಗಳು ತತ್ಕಾಲೀನವಾಗಿ ನಿರ್ಮಾಣಗೊಳ್ಳುತ್ತವೆ ಹೀಗಾಗಿ ರಾಜಕೀಯ ಕಾರಣಗಳಿಂದ ಸಾಮಾನ್ಯ ಪಟ್ಟಣಗಳು ದೊಡ್ಡ ನಗರಗಳಾಗಿ ಪರಿವರ್ತನಗೊಳ್ಳುತ್ತವೆ.

ಔದ್ಯೋಗಿಕ ಕಾರಣದಿಂದ ಬೆಳೆದು ಬರುವ ನಗರಗಳು ಇದಕ್ಕೆ ವಿಪರೀತ ರೀತಿಯಲ್ಲಿ ಬೆಳೆಯುತ್ತವೆ. ಅವನ್ನು ಬೇಕೆಂದಲ್ಲಿ ತಾಣಂದರಸಲಾಗುವುದಿಲ್ಲ. ಕಚ್ಚಾ ವಸ್ತುಗಳು ಧಾರಾಳ ದೊರೆವ, ಸಾರಿಗೆ ಸೌಕರ್ಯಗಳಿಗೆ ಅವಕಾಶವಿರುವ ಸ್ಥಳಗಳಲ್ಲಿ ಮಾತ್ರ ಇವು ಬೆಳೆಯುವುದು ಸಾಧ್ಯ. ಕಾರ್ಖಾನೆಗಳಿಗಾಗಿ, ನೌಕರರ ವಾಸಸ್ಥಳಗಳಿಗಾಗಿ ಹೊಸ ಹೊಸ ಕಟ್ಟಡಗಳು ಅತ್ಯಾಧುನಿಕ ರೀತಿಯಲ್ಲಿ ಕಟ್ಟಲ್ಪಡುತ್ತವೆ. ಕೆಲ ದಶಕಗಳ ಹಿಂದೆ ತೀರಾ ಹಳ್ಳಿಯಾಗಿದ್ದ ಜಮ್ಷೆಡ್‌ ಪುರವು ಇಂದು ದೊಡ್ಡ ನಗರವಾದುದು ಈ ನೆಲೆಯಿಂದ. ಅದೇ ರೀತಿಯಲ್ಲಿ ಭಿಲಾಯಿ, ಮಿಥಪುರಗಳೂ ಬೆಳೆದಿವೆ.

ಜನರ ಅವಶ್ಯಕತೆಗಳನ್ನು ಪೂರೈಸಲು ಯಾಂತ್ರಿಕೋದ್ಯಮವು ಪ್ರಾಂಭಿಸಲ್ಪಡುತ್ತದೆ. ಇದರಿಂದಲೂ ನಗರಗಳು ಬೆಳೆಯುತ್ತವೆ. ಮುಂಬಯಿಯು ಹತ್ತಿಯ ಗಿರಣಿಗಳು, ಕಲ್ಕತ್ತದ ಸೆಣಬಿನ ಗಿರಣಿಗಳು, ವಿಶಾಖ ಪಟ್ಟಣದ ಹಡಗು ಕಟ್ಟುವ ಕೈಗಾರಿಕೆಗಳು ಮೊದಲಾದುವು ಆ ನಗರಗಳ ಅಭಿವೃದ್ಧಿಗೆ ಕಾರಣವಾಗಿವೆ. ಮೋದಿ ನಗರ, ಡಾಲ್ಮಿಯಾ ನಗರ, ದಾಲ್ಮಿಯಪುರಂ, ಡಾಲ್ಮಿಯಾ ಧಡ್ರಿ, ಬಿರ್ಲಾ ನಗರ, ಸ್ವೈಹತಿ, ಕಮರಹಡ್ರಿ ಮೊದಲಾದುವು ಸೆಣಬು, ಕಬ್ಬಿಣ ಮತ್ತು ಉಕ್ಕುಗಳ ಕಾರ್ಖಾನೆಗಳಿಗಾಗಿ ಹೆಸರು ವಾಸಿಯಾದ ನಗರಗಳಾಗಿವೆ. ಈ ಕೈಗಾರಿಕೆಗಳ ಬೆಳವಣಿಗೆಯೇ ನಗರದಲ್ಲಿ ನವೀನ ಕಟ್ಟಡಗಳ ನಿರ್ಮಾಣಕ್ಕೆ ಮತ್ತು ನಗರವು ಬೆಳೆಯುವುದಕ್ಕೆ ಮೂಲ ಕಾರಣವಾಗುತ್ತವೆ.

ದೊಡ್ಡ ದೊಡ್ಡ ರಾಷ್ಟ್ರಾಭಿವರ್ಧಕ ಯೋಜನೆಗಳಿಂದಲೂ ನಗರಗಳು ಹುಟ್ಟಿ ಕೊಳ್ಳುವುದಿದೆ. ದಾಮೋದರ ನದೀ ಕಣಿವೆಯ ಯೋಜನೆಯಿಂದಾಗಿ, ಅಲ್ಲಿ ಕೆಲಸ ಮಾಡುವವರಿಗೆ ವಾಸ ಸ್ಥಳಗಳನ್ನು ಒದಗಿಸಲು ಕಟ್ಟಡಗಳ ರಚನೆಯಾಯಿತು. ಮುಂದಕ್ಕೆ ಉತ್ತಮ ರಸ್ತೆಗಳು, ಆಸ್ಪತ್ರೆಗಳು, ವಾಣಿಜ್ಯ ಕಟ್ಟಡಗಳು, ನೀರಿನ ವಿತರಣೆಯ ಯೋಜನೆಗಳು ಶಾಲೆಗಳು ಉದ್ಯಾನಗಳು ಇಲ್ಲಿ ಕಟ್ಟಲ್ಪಟ್ಟವು. ಬಾಕ್ರಾನಂಗಲ್‌ ಯೋಜನೆ ತುಂಗಭದ್ರಾ ಯೋಜನೆಗಳಿಂದಲೂ ಆಯಾ ಸ್ಥಳಗಳಲ್ಲಿ ಪಟ್ಟಣಗಳು ಬೆಳೆದುವು. ನಿರಾಶ್ರಿತರ ಪುನರ್ನಿವೇಶನಗಳಿಂದಾಗಿಯೂ ಕೆಲವೊಂದು ಸ್ಥಳಗಳು ಜೆಳೆದುಬಂದಿವೆ.

ಈ ನದೀ ಯೋಜನೆಗಳ ಪೀಠಾನರಿ ಮತ್ತು ವಿದ್ಯುದುತ್ಪಾದನೆಗಳಿಗೆ ಅವಕಾಶವನ್ನು ಕಲ್ಪಿಸಿಕೊಡುತ್ತವೆ. ಇದರಿಂದಾಗಿ ಯಾಂತ್ರಿಕ ಅಥವಾ ವ್ಯಾವಸಾಯಿಕ ಉತ್ಪಾದನೆಗಳು ಅಧಿಕವಾಗುವುದರಿಂದ, ಅವುಗಳಿಗೆ ತಕ್ಕ ಮಾರುಕಟ್ಟೆಗಳನ್ನು ಒದಗಿಸುವ ವ್ಯವಸ್ಥೆಯಾಗಬೇಕಾಗುತ್ತದೆ. ಹೀಗಾಗಿ, ಮಾರುಕಟ್ಟೆಗಳ ರಚನೆ, ಕಾಲುವೆಗಳ ರಚನೆ, ಸಾರಿಗೆ ಸೌಕರ್ಯಗಳು ನಿರ್ಮಾಣಗೊಳ್ಳುವುದರಿಂದ, ಮೂಲನಗರವೂ ಬೆಳೆದುಬರುವುದು. ನೀರಾವರಿ ಯೋಜನೆಗಳು ರಾಷ್ಟ್ರದ ಅಭಿವೃದ್ಧಿಯಲ್ಲಿ ಬಹುಮುಖವಾಗಿ ನೆರವಾಗುವುವು.

ಬ್ರಿಟಿಷರ ಆಳಿಕೆಯ ಕಾಲದಲ್ಲಿ ಸೆಮಿ ಗಾಲದಲ್ಲಿ ಗವರ್ನರರ ವಿಹಾರಗಳಿಗಾಗಿ ಆರಿಸಿದ ಕೆಲವು ನಗರಗಳು ಹುಟ್ಟಿವೆ. ಈ ನಗರಗಳು ಕೆಲವೊಮ್ಮೆ ಸೆಮಿಗಾಲದ ರಾಜಧಾನಿಯಾಗಿ ಪರಿವರ್ತನೆಗೊಂಡುದೂ ಇವೆ. ಸಿಮ್ಲಾ, ಡಾಲ್‌ಹೌಸಿ, ದಾರ್ಜಲಿಂಗ್‌, ಧರ್ಮಶಾಲಾ, ಮನಾಲಿಗಳು ಪಂಜಾಬಿನಲ್ಲಿಯೂ, ಮುಸ್ಸೂರಿ, ರಾನಿಕೆಟ್‌, ಮತ್ತು ನೈನಿತಾಲ್‌ಗಳು ಉತ್ತರ ಪ್ರದೇಶದಲ್ಲಿಯೂ, ರಾಂಚಿಯು ಬಿಹಾರಿನಲ್ಲಿಯೂ, ಪಶ್ಚಿಮ ಬಂಗಾಳದಲ್ಲಿ ಡಾರ್ಜಲಿಂಗ್‌, ಆಸ್ಸಾಮಿನಲ್ಲಿ ಶಿಲೊಂಗ್‌, ರಾಜಸ್ತಾನದಲ್ಲಿ ಅಬೂ, ಬೊಂಬಾಯಿಯಲ್ಲಿ ಮಹಾಬಲೇಶ್ವರ, ಮದ್ರಾಸಿನಲ್ಲಿ ಊಟಿ, ಕೂನೂರ್‌ಗಳು ಇದ್ದು ಈ ಕಾರಣದಿಂದ ಬೆಳೆದ.ಬಂದ ನಗರಗಳು. ಇವಲ್ಲದೆ ಇನ್ನೂ ಕೆಲವು ಬೆಟ್ಟದ ನಗರಗಳ ಅಭಿವೃದ್ಧಿಗೆ ಅವಕಾಶವಿದೆ. ಕಾಶ್ಮೀರ ದೇಶವಿಡೀ ಇಂತಹ ಮನೋರಂಜಕ ಬೆಟ್ಟದೂರುಗಳಿಂದ ನೆಯನ ಮನೋಹರವಾಗಿ ಸಾವಿರಾರು ಸಂದರ್ಶಕರನ್ನು ಆಕರ್ಷಿಸುತ್ತಿದೆ.

ವಿದ್ಯಾಕೇಂದ್ರಗಳಾಗಿಯೂ ಕೆಲವೊಂದು ನಿರ್ಜನ ಪ್ರದೇಶಗಳು ದೊಡ್ಡ ನಗರಗಳಾದುದು ಕಂಡುಬರುತ್ತದೆ ಕಾಶಿಯು ಭಾರತದ ಪ್ರಾಚೀನ ಇತಿಹಾಸಗಳಲ್ಲಿ ವಿದ್ಯಾಕೇಂದ್ರವಾಗಿ ವರ್ಣಿತವಾಗಿದೆ. ಸುಸಂಸ್ಕೃತ ಸಾಹಿತ್ಯದ ಉನ್ನತಿಗೆ ಈ ಕಾತಿಯು ಅನವರತ ಮಡಿದಿದೆ, ಮಡಿಯುತ್ತಿದೆ. ಅಲಿಘರ್‌ ಮುಸ್ಲಿಮರ ಶಾಲೆಯೊಂದರಿಂದಾಗಿ ಹುಟ್ಟಿಕೊಂಡುದು. ಇಂದು ಅದೊಂದು ವೇಶವಾದ್ಯಂತ ದಿಂದಲೂ ವಿದ್ಯಾರ್ಥಿಗಳನ್ನು ಆಕರ್ಷಿಸುವ ವಿಶ್ವವಿದ್ಯಾನಿಲಯದಿಂದ ಕೂಡಿ ಬೆಳೆದು ಬಂದಿದೆ. ಉತ್ತರ ಪ್ರದೇಶದ ರೂರ್ಕಿಯಲ್ಲಿ ಅದು ತಾಂತ್ರಿಕ ವಿದ್ಯಾ ತರಬೇತಿ ಕೇಂದ್ರವಾಗಿ ಆಯ್ಕೆಗೊಂಡ ಕೆಲ ಸಮಯದಲ್ಲೇ ಒಂದು ತಾಂತ್ರಿಕ ವಿದ್ಯಾಲಯವು ಸ್ಥಾಪನೆಗೊಂಡಿತು. ಈಗ ಅಲ್ಲೊಂದು ವಿಶ್ವವಿದ್ಯಾನಿಲಯವೂ ಇದೆ. ಇಂತಹ ವಿಶ್ವವಿದ್ಯಾನಿಲಯವು ಭಾರತವಲ್ಲೆಲ್ಲಿಯೂ ಇಲ್ಲ. ಸ್ವಾಮಿ ಶಾರದಾನಂದರಿಂದ ಸ್ಥಾಪಿಸಲ್ಪಟ್ಟಿರುವ ಗುರುಕುಲವಿಶ್ವವಿದ್ಯಾಲಯದ ಪಂಚಾಂಗ ಹಾಕಲ್ಪಟ್ಟಿಕು. ವಿಶ್ವಕವಿರವೀಂದ್ರನಾಥ ಟಾಗೋರರವರು 'ಶಾಂತಿ ನಿಕೇತನ'ವನ್ನು ಸ್ಥಾಪಿಸಿ ವಿಶ್ವ ಭಾರತಿ ವಿಶ್ವವಿದ್ಯಾನಿಲಯವನ್ನು ಸ್ಥಾಪನೆಗೆ ಕಾರಣರಾದರು.

ಇಂದು ಹಳ್ಳಿಯಾಗಿದ್ದುದು ಮುಂದೆ ಒಂದಲ್ಲ ಒಂದು ಕಾರಣದಿಂದ ನಗರವಾಗಬಲ್ಲುದು. ಕೊಲಾರವು ತನ್ನಲ್ಲಿದ್ದ ಚಿನ್ನದ ಆದುರಿನಿಂದಾಗಿ ಮುಖ್ಯ ಸ್ಥಾನವನ್ನು ಪಡೆಯಿತು. ಈಗ ಅದೊಂದು ದೊಡ್ಡ ನಗರವಾಗಿದೆ.

ಅದೇರೀತಿಯೇ ನಗರಗಳು ಹಾಳುಬೀಳುವುದೂ ಅಪರೂಪವಲ್ಲ ನಮ್ಮ ಪ್ರಾಚೀನ ಇತಿಹಾಸಗಳಲ್ಲಿ ಕಾಣಬರುವ ನಗರಗಳಲ್ಲಿ ಇಂದು ಉಳಿದಿರುವುದೇ ಕೆಲವು ಅವುಗಳಲ್ಲಿಯೂ ಹಿಂದೆ ಪೂರ್ಣತೆವಾದ ಸ್ಥಿತಿಯು ಕಂಡುಬರುವುದಿಲ್ಲ. ಶತ್ರುಗಳ ಉಪಟಳದಿಂದಾಗಿ, ನಮ್ಮ ಹಲವಾರು ಪ್ರಸಿದ್ಧ ಹಾಗೂ ಉತ್ತಮ ನಗರಗಳು ಹೇಳ ಹೆಸರಲ್ಲದೆ ಹೋದವು. ಅದರೂ ಅವುಗಳ ಕುರುಹುಗಳು ಮಾತ್ರ ನಮ್ಮ ಗಮನಕ್ಕೆ ಬರುತ್ತವೆ.

ವ್ಯವಸಾಯ ಅಥವಾ ಇನ್ನಿತರ ಉದ್ದೇಶಗಳಿಗಾಗಿ ಅರಣ್ಯಗಳನ್ನು ಕಡಿದಾಗ, ಹೊಸ ನಗರಗಳು ಹುಟ್ಟಿಕೊಳ್ಳಬಹುದು. ಮೊಗಲರ ಕಾಲದಲ್ಲಿ ಬಂಗಾಳದ ಸುಂದರ ವನದ ಕಾಡುಗಳನ್ನು ರಾಜ ಪ್ರತಾಪಾದಿತ್ಯನು ಕಡಿದು ಜೆಸ್ಸೋರ್‌ ಎಂಬ ನಗರವನ್ನು ಕಟ್ಟಿಸಿದನೆಂದು ಇತಿಹಾಸವಿದೆ. ಉತ್ತರ ಪ್ರದೇಶ ಸರಕಾರವು ಅರಣ್ಯಗಳನ್ನು ಕಡಿದು ತರೈ ಪ್ರದೇಶದಲ್ಲಿ ಹೊಸ ಊರುಗಳನ್ನೆನ್ನು ಕಟ್ಟುವುದರಲ್ಲಿ ವಿಶೇಷ ಆಸಕ್ತಿಯನ್ನು ಕೊಡುತ್ತಿದೆ.

ಇನ್ನು ಮುಂದಕ್ಕೂ ನಗರ ರಚನಾ ಕಾರ್ಯಕ್ಕೆ ಸಾಕಷ್ಟು ಅವಕಾಶವಿದೆ. ಭಾರತವನ್ನು ಪುನರ್‌ರಚಿಸುವುದೆಂಬ ಸರಕಾರದ ಧ್ಯೇಯ ನಿಧಾನವಾಗಿ ಯಾದರೂ ಖಂಡಿತವಾಗಿ ಈಡೇರುವುದು. ಜನಸಂಖ್ಯೆಯ ಒತ್ತಡವು ಹೆಚ್ಚಾದಾಗ ಎಲ್ಲ ವ್ಯಜೆಗಳಿಗೂ ಉತ್ತಮವಾದ, ಆರೋಗ್ಯಕರವಾದ ಮನೆಗಳು ದೊರಕುವಾಗ, ಇನ್ನೂ ಅದೆಷ್ಟು ನಗರಗಳು ಜನಿಸಲಿರುವೆಯೋ!

ಹೀಗೆ ಒಂದಲ್ಲ ಅನೇಕ ವಿಧಗಳಿಂದ ಭಾರತದಲ್ಲಿ ನಗರಗಳು ಹುಟ್ಟಿ ಬೆಳೆದು ಬಂದಿವೆ. ಇನ್ನು ಮುಂದಕ್ಕೂ ಬೆಳೆಯುತ್ತವೆ. ಒಂದು ನಗರ ಬೆಳವಣಿಗೆಯ ಕಾರಣಗಳಲ್ಲಿ ಹಲವಾರುಬಹುದು. ಬೊಂಬಾಯಿ ನಗರದ ಬೆಳವಣಿಗೆಗೆ ಸರ್ವತೋಮುಖವಾದ ಪ್ರಗತಿಯೇ ಕಾರಣ. ಕಾರ್ಖಾನೆಗಳು ವ್ಯಾಪಾರವಹಿವಾಟು, ಕೊಟೀಲು ಅಂಗಡಿ, ಮಾರಕಟ್ಟೆ ಸಿನೆಮಾ ಮಂದಿರ ಎಲ್ಲವೂ ನಗರಗಳುಬೆಳೆಯಲು ನೆರವಾಗುತ್ತವೆ. ಹೀಗಾಗಿ ಒಂದು ನಗರ ಬೆಳೆದು, ವ್ಯಾಪಾರಕೇಂದ್ರಗಳಾಗಿ ಪರಿವರ್ತನೆಗೊಂಡು, ಲಕ್ಷಗಟ್ಟಲೆ ಜನರು ಜೀವಿಸುವುದಕ್ಕೆ ಆಧಾರವಾಗಿ ಪರಿಣಮಿಸುತ್ತದೆ.

## ನೋಟಿಸು

ಉಡುಪಿ ತಾಲ್ಲು ಸಂಬ್ರ 45ನೇ ಕುಕ್ಕೆ ಹಳ್ಳಿ ಗ್ರಾಮದಲ್ಲಿರುವ ಅಕ್ಕಮ್ಮ ಶೆಡ್ತಿರವರ ಮಗಳು ನಾಗವ್ವ ಶೆಡ್ತಿಯು ಈ ಮೂಲಕ ತಿಳಿಯ ಪಡಿಸುವುದೇನೆಂದರೆ

ನಾನು ಓದು ಬರಹವಿಲ್ಲದ 60 ವರ್ಷದ ಮುದುಕಿ ಆಗಿರುತ್ತೇನೆ. ನಮ್ಮ ಕುಟುಂಬದ ಹಿಸೆಯ ದಾವಾಗೋಸ್ಕರ ನನ್ನ ಕಡೆಯಿಂದ ನನ್ನ ಬಗ್ಗೆ ಸಾಧನಗಳ ಗೋಸ್ಕರ ನನ್ನ ಅಕ್ಕನ ಮಗ ಮುದ್ದಣ ಸೆಟ್ಟಿ ಎಂಬವನು ಕಾಲಿಕಾಗದಗಳ ಮೇಲೆ ಆಗಾಗ್ಗೆ ಎಡಸೈಯ್ಯ ಹೆಬ್ಬೆಟ್ಟು ಪಡೆದಿರುವನು.

ಇತ್ತೀಚೆಗೆ ನಾನು ತಿಳಿದ ವರ್ತಮಾನದಂತೆ ಸದ್ರಿ ಮುದ್ದಣ ಸೆಟ್ಟಿಯು ನನ್ನಿಂದ ಅಕ್ರಮ ಲಾಭ ಪಡೆಯುವ ದುರುದ್ದೇಶದಿಂದ ಪ್ರತಿಫಲವಿಲ್ಲದ ಕಲ್ಪನೆಯ ವಿನಾಮೆಯ ಡಿ. ನೋಟು ವಗೈರೆ ರಿಕಾರ್ಡನ್ನು ಮಾಡ್ಸಿಟ್ಟಿರುತ್ತಾನಾಗಿ ತಿಳಿಯುತ್ತೇನೆ.

ನಾನು ಈ ವರೇಗೆ ಯಾರಿಂದಲೂ ಎಷ್ಟನ್ನಾದರೂ ಸಾಲ ಪಡೆದ್ದಾಗಲೀ ವ. ವಿ. ನೋಟು ವಗೈರೆ ರಿಕಾರ್ಡ್‌ನ್ನು ಬರಕೊಟ್ಟು ಸಾಲಪಡೆದ್ದಾಗಲೀ, ಇರುವುದಿಲ್ಲ. ನನಗೆ ಹಿಸೆ ಹಕ್ಕಿನ ಆಸ್ತಿಗಳಲ್ಲದೆ ಸ್ವಂತ ಕ್ರಯಹಕ್ಕಿನ ಆಸ್ತಿಗಳು ಕೂಡಾ ಇವೆ

ಆದ್ದರಿಂದ ಸದ್ರಿ ಮುದ್ದಣ ಸೆಟ್ಟಿಯು ಮೋಸದಿಂದ ಪಡೆದ ಹೆಬ್ಬೆಟ್ಟಿನ ಕಾಗದಗಳಿಂದ ಸ್ವತಹಾ ರಿಕಾರ್ಡು ಮಾಡಿಕೊಂಡ ಪಕ್ಷದಲ್ಲಿ, ಪ ಬೀರೆಯವರ ಹೆಸರಲ್ಲಿ ಡಿ. ನೋಟು ವಗೈರೆ ರಿಕಾರ್ಡನ್ನು ಮಾಡಿದ ಪಕ್ಷದಲ್ಲಿ ಅಂಥಾ ರಿಕಾರ್ಡು ಸಿಂಧುವಾಗತಕ್ಕವುಗಳಲ್ಲ ಎಂತ ಈ ಮೂಲಕ ಸರ್ವ ಜನರಿಗೆ ತಿಳಿಯವ ಡಿಸಿದ್ದಾಗಿರುತ್ತದೆ.

○ ಈ ಎಡಗೈ ಹೆಬ್ಬೆಟ್ಟಿನ ಗುರ್ತು ಸದ್ರಿ

ನಾಗವ್ವ ಶೆಡ್ತಿದ್ದಾಗಿರುತ್ತದೆ.

ತಾ. 9.4.67.







## ಪರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ವೆಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ. ಬೆಲೆ: ೦—೨—೦

## ಮಕ್ಕಳ ಮಗ್ಗಿಪುಸ್ತಕ

ಬೆಲೆ: ೦—೧—೦

ನವಯುಗ ಪ್ರೆಸ್‌, ಉಡುಪಿ.

## ಪುಸ್ತಕ—ವಿಮರ್ಶೆ

(೧೦ನೇ ಪುಟದಿಂದ)

ಡುತ್ತಾರೆ. ಇನ್ನು 10 ವರುಷಗಳ ನಂತರ ಪುನಃ ಬ್ರಿಟಿಷರೇ ಇಲ್ಲಿಗೆ ಬರುವ ಶರ್ತ ಹಾಕಿಯೇ ಹೋಗಿದ್ದಾರೆ ಎಂಬ ರಾಜಕೀಯ ಬಾಯಿ ಬಡಕರು ನಮ್ಮ ನಡುವೆ ಇಲ್ಲದಿಲ್ಲ.

ಈ ಪರಿಸ್ಥಿತಿಯಲ್ಲಿ ಶ್ರೀ ಕೃಷ್ಣರಾಯರ ಕೃತಿ ಜನರಿಗೂ ಜನಾಂಗಕ್ಕೂ ಅತ್ಯಾವಶ್ಯಕವಾದುದು. ಇದು ಮಾತೃಭಾಷೆಯಲ್ಲೂ ಪ್ರಕಟಗೊಳ್ಳಬೇಕು. ಇಂತಹ ಕಿರು ಹೊತ್ತಗೆಗಳು ಹಳ್ಳಿ ಹಳ್ಳಿಗೂ ಹೋಗಬೇಕು.

ಪರಿಸ್ಥಿತಿಯನ್ನು ಜಿನ್ನಾಗಿ ತಿಳಿದುಕೊಂಡು ನ್ಯಾಯವಾದ ಮಾರ್ಗವನ್ನು ಶಾಂತ ವಿಧಾನಗಳಿಂದ ಅನುಸರಿಸಿ, ದೇಶಕ್ಕೆ ದೇಶವೇ ನ್ಯಾಯಕ್ಕಾಗಿ ಹಾತೊರೆಯುತ್ತದೆ ಎಂಬುದನ್ನು ಜಗತ್ತಿಗೇ ತೋರಿಸಿಕೊಡುವ ಬುದ್ಧಿ ವಿವೇಕಗಳು ಭಾರತೀಯ ಪ್ರಜೆಗಳಿಲ್ಲಿರಿಗೂ ಉಂಟಾಗಬೇಕು.

ರಾಜಕೀಯ ಜ್ಞಾನವರ್ಧನೆಯ ಇಂತಹ ಕಿರು ಹೊತ್ತಗೆಗೆ ಪ್ರೋತ್ಸಾಹ ಕೊಡಬೇಕಾದುದು ಕರ್ತವ್ಯ.

**ನಾರಿನ ಕೈಗಾರಿಕೆ—** ಬರೆದವರು: ಎಸ್. ಕೆ. ಕಲ್ಲಾಪುರಿ ಬಿ. ಎ. ಎಲ್. ಎಲ್. ಬಿ. ಜೀನು ವ್ಯವಸಾಯ ಸಂಘಟಕರು: ಅಖಿಲ ಭಾರತ ಬಾಡಿ ಮತ್ತು ಗ್ರಾಮೋದ್ಯೋಗಮಂಡಳಿ ದಾರವಾಡ. ಪ್ರಕಾಶಕರು. ಗ್ರಾಮಜೀವನ ಕಾರ್ಯಾಲಯ ಕುಮಟ (ಉ. ಕನ್ನಡ) ಕ್ರಾನ್ಸ್‌ಆಕಾರದ 82 ಪುಟಗಳು. ಬೆಲೆ ಎಂಬಾಣೆ.

ಗುಡಿಕೈಗಾರಿಕೆಗೆ ಪ್ರೋತ್ಸಾಹ ಕೊಡಬೇಕೆಂಬ ಉದ್ದೇಶದಿಂದ ಸರಕಾರವು ಲವಾರು ಯೋಜನೆಗಳನ್ನೂ ತರಬೇತಿ ಕೇಂದ್ರಗಳನ್ನೂ ಕೈಗೊಂಡಿದೆ. ಯಾಂತ್ರಿಕಯುಗದತ್ತ ಅತಿವೇಗದಿಂದ ಧಾವಿಸುತ್ತಾ ಮಾನವ ಬಲವನ್ನು ಕಡೆಗಣಿಸುತ್ತಿರುವ ಪ್ರವೃತ್ತಿ ಜಗತ್ತಿಗೇ ಎದುರಾದ ಒಂದು ಜಟಿಲ ಸಮಸ್ಯೆ. ಭಾರತದಂತಹ ಕೃಷಿಪ್ರಧಾನವಾದ ನಾಡಿನಲ್ಲಿ ವಿಶಾಲಕಾಲದಲ್ಲಿ ಗುಡಿಕೈಗಾರಿಕೆಗಳನ್ನು ಕೈಗೊಂಡರೆ ದೇಶದ ಆರ್ಥಿಕಪ್ರಗತಿಯೂ ದೊಂದು ಆಶಾವಾದ. ನಾರಿನ ಕೈಗಾರಿಕೆ ಈ ದಿಸೆಯಲ್ಲಿ ಉಪಯೋಗಕ್ಕೆ ಬರಬಹುದು. ಹವಾರು ಚಿಕ್ಕ ಪುಟ್ಟ ಬೆಲೆಯ ಯಂತ್ರಗಳು ಇತ್ತೀಚೆಗೆ ನಿರ್ಮಾಣವಾಗಿವೆ. ಕರಾವಳಿಯಲ್ಲಿ ಕತ್ತಾ ನಾರಿನ ಕೈಗಾರಿಕೆಯಲ್ಲೂ ಈ ಚಿಕ್ಕ ಯಂತ್ರಗಳನ್ನು ಪಯೋಗಿಸಿದರೆ ಫಲಬರಬಹುದು.

ಈ ಪುಸ್ತಕದಲ್ಲಿ ನಾರುಗಳ ಗುಣಧರ್ಮಗಳು, ನಾರುಗಳನ್ನು ಕೊಳಸುವಿಕೆ, ಹಿಂಡುವಿಕೆ, ಕರಸುವಿಕೆ ಇತ್ಯಾದಿ ವಿಧಾನಗಳನ್ನು ವಿವರಿಸಲಾಗಿದೆ. ಅಲ್ಲದೆ ಕಲ್ಲನಾರು, ಅನಾನಸದ ನಾರು, ಕೇತಕೇ ನಾರು, ಇತರೇಎಲೆಯ ನಾರು, ಸಣಬು ಬಂಗೀ ನಾರು, ಅಗಸೀ ನಾರು, ಬಾಳೇ ನಾರು ಇತ್ಯಾದಿಗಳ ಕುರಿತಾದ, ಮಾಹಿತಿಯನ್ನೊದಗಿಸಲಾಗಿದೆ. ವಿವರವನ್ನು ಸಚಿತ್ರವಾಗಿ ಕೊಟ್ಟಿದ್ದರಿಂದ ಅನುಕೂಲ.

ಈ ಗುಡಿಕೈಗಾರಿಕೆಯಲ್ಲಿ ತರಬೇತಿ ಪಡೆಯುವವರಿಗೆ ಈ ಪುಸ್ತಕವು ಸಹಕಾರಿಯಾಗಬಹುದು.

ಗುಡಿಕೈಗಾರಿಕೆಯಿಂದ ಆರ್ಥಿಕ ಪ್ರಗತಿಯಾಗುವುದಕ್ಕೆ ಅನುಕೂಲವಿರುವುದೆಂಬುದು ತಾತ್ವಿಕವಾತ್ರವಲ್ಲ ಕೃತಿಯಲ್ಲೂ ನಿಜವೆಂದಾದರೆ ಇಂತಹ ಪುಸ್ತಕಗಳಿಂದ ಜ್ಞಾನಭಿವೃದ್ಧಿ ಮಾತ್ರವಲ್ಲ ದೇಶದ ಬಡದೊಡ್ಡ ಸಮುದಾಯಕ್ಕೆ ಸಹಕಾರವೂ ಆಗುತ್ತದೆ. ವಿಷಯದ ಮೇಲೆ ತುಂಬಾ ತಿಳುವಳಿಕೆ ಮತ್ತು ಅನುಭವವುಳ್ಳ ಶ್ರೀ ಕಲ್ಲಾಪುರಿಯವರು ಸುಲಭ ಶೈಲಿಯಲ್ಲಿ ವಿಷಯಗಳನ್ನು ಪ್ರತಿಪಾದಿಸಿದಾರೆ. ಇಂತಹ ಉತ್ತಾಹೀ ಅಧಿಕಾರಿಗಳಿಂದ ನಾಡುಸುದಿಗಳಿಗೆ ತುಂಬಾ ಹಿತವಾಗಬಹುದು.

**ಕನ್ನಡ ನುಡಿ-** (ಸಾಮ್ಯೋತ್ಸವ ವಿಶೇಷ ಸಂಚಿಕೆ) ಸಂಪಾದಕರು ಆಸ್ಥಾನ ವಿದ್ವಾನ್ ಪಂಡಿತ ರತ್ನಂ ಬಿ. ಶಿವಮೂರ್ತಿ ಶಾಸ್ತ್ರೀ ಸಹ ಸಂಪಾದಕರು ಆಸ್ಥಾನ ವಿದ್ವಾನ್ ಮೋ. ಶಂ. ಸುಬ್ರಹ್ಮಣ್ಯ ಶಾಸ್ತ್ರೀ ಸಂಚಾಲಕರು. ಜಿ. ವೆಂಕಟೆ ಸುಬ್ಬಯ್ಯ ಎಂ. ಎ. ಬಿ. ಟಿ.- ಪ್ರಕಾಶಕರು: ಕನ್ನಡ ಸಾಹಿತ್ಯ ಪರಿಷತ್ತು—ಬೆಂ: ಊರು ೩.

ಕನ್ನಡ ನಾಡಿನ ಶುಭೋದಯದ ಸುಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಮತ್ತು ಸಮ್ಮೇಳನಗಳ ಅಧ್ಯಕ್ಷರಿಗೆ ಸನ್ಮಾನೋತ್ಸವವನ್ನು ಜರಗಿಸಿ ಆರ್ಪಿಸಿದ ಸನ್ಮಾನಪತ್ರಗಳು ಸಮ್ಮೇಳನಾಧ್ಯಕ್ಷರ ಭಾಷಣಗಳಿಂದ ಆಯ್ದುಕೊಂಡ ಭಾಗಗಳು, ಕನ್ನಡ ಸಾಹಿತ್ಯ ಪರಿಷತ್ತಿನ ಚರಿತ್ರೆ, ಮತ್ತು ವಿಶೇಷ ಲೇಖನಗಳಿಂದೊಡಗೂಡಿದ ಸಂಚಿಕೆಯು ಸುಂದರವೂ ಸಂಗ್ರಾಹ್ಯವೂ ಆಗಿದೆ.

ಮೈಸೂರಿನ ರಾಜ್ಯಪಾಲರು, ಶ್ರೀಗಳಾದ ರಂಗನಾಥ ದಿವಾಕರರು, ನಿಜಲಿಂಗಪ್ಪನವರೇ ಮೊದಲಾದ ಪ್ರಮುಖರನ್ನೂ ಕನ್ನಡದ ಇತರ ಅಭಿಮಾನಿ ಹಿರಿಯರನ್ನೂ ಗೌರವಿಸಿದ ಅಭಿನಂದನ ಪತ್ರಿಕೆಗಳು ಕನ್ನಡದ ಕುಲದ ಹಿರಿಯ ನಾಯಕರಿಗೆ ನ್ಯಾಯವಾಗಿ ಸಲ್ಲಬೇಕಾಗಿದ್ದ ಕಾಣಿಕೆಗಳೇ.

ಸಮ್ಮೇಳನ ಅಧ್ಯಕ್ಷರು ನುತ್ತಿಕರ ಪ್ರಮುಖ ವ್ಯಕ್ತಿಗಳ ಚಿತ್ರಗಳು ಸಂಚಿಕೆಗೆ ಕಳೆಯನ್ನು ತಂದಿವೆ. ಬೇರೆ ಬೇರೆ ಸಮ್ಮೇಳನಗಳ ಅಧ್ಯಕ್ಷರ ಭಾಷಣಗಳ ಸಂಗ್ರಹವು ಕನ್ನಡದ ಅಭಿಮಾನಿಗಳಿದೆಯಲ್ಲಿ ಪೋತ್ಸಾಹವನ್ನು ಕುಂಬುವ ತಿದಿಗಳಂತಿವೆ. ಶ್ರೀ ವೆಂಕಟಸುಬ್ಬಯ್ಯನವರು ಕನ್ನಡ ಸಾಹಿತ್ಯಪರಿಷತ್ತಿನ ಚರಿತ್ರೆ ಅವಶ್ಯವಾಗಿ ಪ್ರತಿ ಕನ್ನಡಿಗನೇ ಓದಬೇಕಾದ ವಿಷಯವಾಗಿದೆ.

ಶ್ರೀಗಳಾದ ಹಳಕಟ್ಟಿ, ಚಂದ್ರ ಶೇಖರ ಶಾಸ್ತ್ರಿ, ಕೆ. ವೆಂಕೋಬರಾಯರು, ದೇವುಡು, ರಾಮಯ್ಯ ಮೊದಲಾದವರ ವಿಶೇಷ ಲೇಖನಗಳು ಮನನೀಯವಾಗಿವೆ.

ಕನ್ನಡ ನಾಡಿನ ಹಿರಿಯರೆಲ್ಲರೂ (ಕಿರಿಯರೂ ಸಹ) ಕನ್ನಡ ನುಡಿಯ ಅಭಿವೃದ್ಧಿಯೇ ಗಮನದ್ದೇಶದ ಸಾಧನೆಯ ಸಫಲತೆಗಾಗಿ ಸದಾ ಸ್ವಾರ್ಥವಿಲ್ಲದೆ ಶ್ರಮಿಸಿ, ಇನ್ನೂ ಅನೇಕ ಇಂತಹ ಕನ್ನಡದ ಅಭಿಮಾನವನ್ನು ಒಡಕೂಡಿಸುವ ಕೃತಿಗಳನ್ನು ಕರುಣಿಸಲೆಂದೇ ಪ್ರಾರ್ಥಿಕ.

—ದಾಂತಿ.

**ಮಂಗಳಾ—**

ಬರೆದವರು: ಶ್ರೀಮತಿ ಎಸ್. ಕಮಲಮ್ಮ ಬಿ. ಎಸ್. ಸಿ. ಪ್ರಕಾಶಕರು: ಗಾಯತ್ರಿ ಸಾಹಿತ್ಯಮಾಲೆ, ಚಾಮುಂಡಿಪುರಂ, ಸ್ಯೂಸೂರು, ಕ್ರಾನ್ಸ್‌ನ 166 ಪುಟಗಳು. ಬೆಲೆ ರೂ. ೧.

'ಬಾಲ ವಿವಾಹ'ದ ದುಷ್ಪರಿಣಾಮವನ್ನು ಚಿತ್ರಿಸುವ ಸ್ವತಂತ್ರ ಕಾದಂಬರಿಯಿದು. ಹೆಣ್ಣು ಮಗಳೊಬ್ಬಳ ಕರುಣ ಕಥೆ. ಆಕೆಯೇ ಕಥಾನಾಯಕಿ. ಮಂಗಳ; ರೂಪ, ಯೌವನ, ಸದ್ಗುಣಭರಿತೆಯಾದ ಬಾಲವಿಧವೆ. ಸಮಾಜವು ಆಕೆಯನ್ನು ಹಿರೆಕಣ್ಣಿನಿಂದ ನೋಡುತ್ತಿದ್ದರೂ ಆಕೆಯ ತಾರುಣ್ಯಕಾಲದಲ್ಲಿ ಸ್ವಾಭಾವಿಕವಾಗಿಯೇ ಬಾಳ ಆರಾಧನೆ ನಡೆಸಲು ತವಕ ಪಡುತ್ತಾಳೆ. ಆದರೆ ಸುಧಾರಕನಂತೆ ನಟಿಸಿ ಸಂದರ್ಭ ಬಂದಿರೆ ವಿಧವಾ ವಿವಾಹ ಮಾಡಿಕೊಳ್ಳುವೆನೆಂದು ಜಂಭಕೊಚ್ಚಿದ ಕಥಾನಾಯಕ ಅಶ್ವತ್ಥ ಆಕೆ ತೋರಿಸಿ ಘಾಸಿಮಾಡುತ್ತಾನೆ. ಮಂಗಳ ಜೀವನವೆಂದರೇನೆಂದು ತಿಳಿಯಬುದಿನ್ನು ಪಕ್ವರಲ್ಲಿ ಅಶ್ವತ್ಥ ಅವಳನ್ನು ನಡುನೀರಿನಲ್ಲಿ ಕೈಬಿಡುತ್ತಾನೆ. ಅಧೀರಳಾದ ಮಂಗಳ ತ್ಯಾಗ, ದಯೆ, ಕರುಣೆಯಿಂದ ತನಗೆ ಅಶ್ರಯಕೊಡಿದ ಸಮಾಜಕ್ಕೆಯ ಅಶ್ರಯದಾತಳಾಗಿ ಮೆರೆಯುತ್ತಾಳೆ. ಇದಿಷ್ಟು ಕಥಾಸಾರ. ಕಾದಂಬರಿಯು ಸಾಮಾನ್ಯರಿಗೂ ಅರ್ಥವಾಗುವ ಸರಳ ಸುಂದರ ಭಾಷೆಯಲ್ಲಿ ಬರೆಯಲ್ಪಟ್ಟಿದೆ. ಈ ಲೇಖಕಿಯರು ಇನ್ನೂ ಕೃತಿಗಳನ್ನು ರಚಿಸಿಯರೆಂದು ನಂಬಬಹುದು. ಮುಖಚಿತ್ರವೂ ಆಕರ್ಷಕವಾಗಿದೆ.

**ನವಮಾಧಿಯ ಸುರಂಗ-**

ಬರೆದವರು. ವಿ. ಜಿ. ಕೃಷ್ಣಮೂರ್ತಿ ಬಿ. ಎ. ಪ್ರಕಾಶಕರು: ಗಾಯತ್ರಿ ಪ್ರಕಾಶನ, ಚಾಮುಂಡಿ ಪುರಂ ಸ್ಯೂಸೂರು ಕ್ರಾನ್ಸ್‌ನ 155 ಪುಟಗಳು ಬೆಲೆ ರೂ. ೧.

ಶ್ರೀ ಕೃಷ್ಣಮೂರ್ತಿಯವರದು ಸಮಸ್ಯೆಯೊಪವದಲ್ಲಿ ಪೋಲೀಸು ಸಾಪಸದ ಪತ್ತೇದಾರಿ ಕತೆಗಳನ್ನು ಬರೆದು ಪಳಗಿದ ಕೈ. ಅವರು ಬರೆದ ಕೆಲವು ಕಾದಂಬರಿಗಳು ಇಪ್ಪರಲ್ಲೇ ವಾಚಕರ ಮನ ಸೆಳೆದಿದೆ.

'ನವಮಾಧಿಯ ಸುರಂಗ'ವೆ ಇಂಗ್ಲಿಷ್‌ಮೂಲವೊಂದರ ಆಧಾರದ ಮೇಲೆ ಬರೆಯಲ್ಪಟ್ಟ ರಹಸ್ಯಮಯ ಕಾದಂಬರಿ. ವಿಮಾನದಲ್ಲಿ ಪ್ರಯಾಣ ಮಾಡುವಾಗ ಇಂತಹ ಕಾದಂಬರಿ ಕೈಯಲ್ಲಿದ್ದರೆ ಉತ್ತಮ ಜತೆಗಾರನಿದ್ದಂತೆ ಎನ್ನಬಹುದು. ಪತ್ತೇದಾರಿ ಕಾದಂಬರಿಯು 'ಸುಳ್ಳು' ಹೆಚ್ಚಾಗಿರುವ ಈ ಕಾಲದಲ್ಲಿ ಜನ ಸಾಮಾನ್ಯರೂ ಓದಿ ಸೊಚ್ಚಬಹುದಾದ ಕೃತಿ.

—ಎಚ್. ಎಸ್. ಕೆ.



ಬ್ರಿಟಿಷ್ ಕೂಲಿಗಾರ ಪಕ್ಷದ ನಾಯಕರಾದ ಶ್ರೀ ಆನ್ಯೂರಿನ್ ಬೆವಾನ್ ಭಾರತವನ್ನು ಮೊನ್ನೆ ಸಂದರ್ಶಿಸಿದಾಗ ಅವರನ್ನು ಪ್ರಧಾನಿ ನೆಹರೂರವರ ಪಾಸಿಗೆ ಕಾರ್ಯದರ್ಶಿ ಶ್ರೀ ಎಂ. ಓ. ಮಥಾಯರವರು ಸ್ವಾಗತಿಸುತ್ತಿರುವುದು.

## ಸರಕಾರಿ ಆಡಳಿತ

(೧ನೇ ಪುಟದಿಂದ)

ಅಳರಸರ ಎದೆಝಲ್ಲೆನಿಸುವಂತೆ ಮಾಡಿ, ಕಾಂಗ್ರೆಸ್ಸು ತನ್ನ ಹೋರಾಟದ ಕೊನೆಯಂಕವನ್ನು ಮುಗಿಸಿತು. ತನ್ನ ಅಹಿಂಸಾತ್ಮಕ ಯುದ್ಧದಿಂದ ಕಾಂಗ್ರೆಸ್ಸಿನ ಮುಂದಾಳಾದ ಗಾಂಧೀಜಿಯವರು ಜಗತ್ತಿಗೆ ಅಹಿಂಸೆಯ ಹಿರಿಮೆಯನ್ನು ಸಾರಿದರು. ಕಾಂಗ್ರೆಸ್ಸಿನ ಮುಂದಾಳ್ತನದಲ್ಲಿ ನಡೆಸಿದ ಹೋರಾಟದಲ್ಲಿ ರಾಷ್ಟ್ರವು ಜಯಶಾಲಿಯಾಯಿತು. ಭಾರತವು ಸ್ವತಂತ್ರವಾದ ನಂತರ ಕಾಂಗ್ರೆಸ್ಸು ಸರಕಾರ ಸ್ಥಾಪಿಸಿ, ಇಂದಿನ ತನಕ ಜನಪ್ರಿಯ ಪ್ರಜಾಸರಕಾರವೆಂದು ಹೇಳಿಸಿಕೊಳ್ಳುತ್ತ ನಮ್ಮನ್ನು ಏಳಿಯ ಹಾದಿಯಲ್ಲಿ ಕೊಂಡೊಯ್ಯುತ್ತಿದೆ. ಇನ್ನೂ ಏದು ವರ್ಷಗಳ ತನಕ ತನ್ನ ಆಡಳಿತ ನಡೆಸುವ ಸುಯೋಗ ಕಾಂಗ್ರೆಸ್ಸಿಗೆ ಬಂದೊದಗಿದೆ. ಇದನ್ನು ಸಾಧಿಸಿ ಕಾಂಗ್ರೆಸ್ಸು ತನ್ನ ಶಕ್ತಿಮಿರಿ ಸೇವಾಸೇವೆ ಗೈದು ಭಾರತವನ್ನು ಜಗತ್ತಿನ ಪ್ರಮುಖ ರಾಷ್ಟ್ರಗಳ ಸಾಲಿನಲ್ಲಿ ತಂದು ನಿಲ್ಲಿಸಲೆಂಬುದೇ ಭಾರತೀಯರ ಹಾರೈಕೆ ಅನೇಕ ಜಾತೀಯ ವಾದಿ ಪಕ್ಷಗಳು ಕಾಂಗ್ರೆಸ್ಸಿನ ಪ್ರಭಾವೀ ವರ್ಚಸ್ಸಿನೆದುರು ಪ್ರಬಲ ಪರಾಭವಗೊಂಡಿವೆ. "ತಾವು ಬಡವರ ಪಕ್ಷದವರು; ತಮಗೇ ಬೆಂಬಲ ನೀಡಿರೆ"ಂದು ತಮ್ಮ ಕುತಂತ್ರದ ಬಲೆಯೊಡ್ಡಿದ ಅನೇಕ ಪಕ್ಷದವರ ಮಾತಿಗೆ ಕಿವಿಗೊಡದೇ, ಅವರ ಕುತಂತ್ರ ಜಾಲದಲ್ಲಿ ಸಿಕ್ಕಿಬೀಳದೇ ಕಾಂಗ್ರೆಸ್ಸಿಗೇ ತನ್ಮೂಲಕ ಭಾರತದ ಅಭಿವೃದ್ಧಿಗೇ ಮತದಾತೃ ಮತದಾರರು ತಮ್ಮ ಬುದ್ಧಿಮತ್ತೆಯನ್ನು ಪಯೋಗಿಸಿದ್ದಾರೆ. ಬಡವರ ಪಕ್ಷವೆಂಬುದೊಂದಿದ್ದು ದಾದರೆ, ಅದು ಕಾಂಗ್ರೆಸ್ಸೇ ಅದೇ ಭಾರತೀಯ ಜನತೆಗೆ ಯೋಗ್ಯ ಮಾರ್ಗದರ್ಶನ ಮಾಡಬಲ್ಲುದು. ಜಾತೀಯತೆಯನ್ನು ತೊಡೆದು, ಏಕರಾಷ್ಟ್ರೀಯತೆಯನ್ನೂ, ವಿಶ್ವ ಬಂಧುತ್ವವನ್ನೂ ನೆಲೆಗೊಳಿಸುವ ಕಾಂಗ್ರೆಸ್ಸಿಗೆ ಹಾರ್ದಿಕ ಶುಭಾಶಯಗಳನ್ನೆಂದು ಭಾರತೀಯರು ಅರ್ಪಿಸಬೇಕಲ್ಲದೇ, ಆ ಸಂಸ್ಥೆಯೊಂದಿಗೆ ಸಹಕರಿಸಿ, ರಾಷ್ಟ್ರ ನಿರ್ಮಾಣದ ಮಹಾಕಾರ್ಯದಲ್ಲಿ ಭಾಗಿಯಾಗಬೇಕು.

—ಎಮ್. ರಘುನಂದನ ರಾವ್,
ತಲ್ಲೂರು.

## ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

## ಕುಂದಾಪುರ ದಿವಿಜನಿನ ರೆವಿನ್ಯೂ ದಿವಿಜನಲ್ಲಿ ಆಫೀಸರರ ಕೋರ್ಟಿನಲ್ಲಿ Eviction; Petn. No 103/57.

ಬೈಲೂರು ವಾಸುದೇವ ರಾವ್.

—ಅರ್ಜಿದಾರ

ಮತ್ತು

ಮಾರ್ಸೆಲ್ ಫೆರ್ನಾಂಡಿಸ್ ಕೊಹಾ

—ಎದ್ರಿರು

ಇವರೊಳಗೆ

ಉಡುಪಿ ತಾಲೂಕು ಉದಿಯಾವರ ಗ್ರಾಮದಲ್ಲಿರುವ ಕೃತಿನ ಫೆರ್ನಾಂಡಿಸರ ಪಗ 1ನೇ ಎದ್ರಿ ನೂರ್ಸೆಲ್ ಫೆರ್ನಾಂಡಿಸರಿಗೆ ತಿಳಿಯಪಡಿಸುವುದು,

ಅರ್ಜಿಯಲ್ಲಿ ಕಾಣಿಸಿದ ಸ್ಥಿರಾಸ್ತಿಗಳ ಬಾಬ್ತು ಅರ್ಜಿಯಲ್ಲಿ ಕಾಣಿಸಿದಂತೆ ನಿಮ್ಮಿಂದ ಬಾಡಾ ಗೇಣಿ ಬಾಕಿಯನ್ನು ನೀವು ಕೊಡದೆ ಇದ್ದು ದರಿಂದ ನಿಮ್ಮನ್ನು ಎ, ಎರಡನೆ ಎದ್ರಿಯನ್ನು ಸಸಾ Sec.3 (2) of Madras Act XXV of 1955 and Rule 5 of Madras Cultivating Tenants Protection Rules1955 ರ ಪ್ರಕಾರ Eviction ಬಗ್ಗೆ ಅರ್ಜಿದಾರರು ದಾಕ್ಲು ಮಾಡಿದ ನೋಲಿನ ಅರ್ಜಿಯನ್ನು ನಿಮ್ಮ ಹಾಜ್ರಾತಿಯ ಬಗ್ಗೆ ತಾರೀಕು 26.4.1957 ಕ್ಕೆ ಸದ್ರಿ ಕೋರ್ಟಿನ ಉದ್ರಿ ಮೊಕ್ಕಾಂನಲ್ಲಿ ಬೆಳಿಗ್ಗೆ ಗಂಟೆ 11ಕ್ಕೆ ಇಹೋನಾಗಿಯಿದೆ ಸದ್ರಿ ದಿವಸ ನೀವು ಸದ್ರಿ ಕೋರ್ಟುಮುಂದೆ ಹಾಜ್ರಾಗಿ ನಿಮ್ಮ ಆಕ್ಷೇಪವನ್ನು ದಾಕ್ಲು ಪಡಿಸದಿದ್ರೆ ಮೇಲಿನ ಅರ್ಜಿಯು ಏಕಪಕ್ಷೀಯವಾಗಿ ತೀರ್ಮಾನಿಸಲ್ಪಡುವುದು.

(ಕೋರ್ಟು ಮೆಹರು ಪ್ರಕಾರ)

B. Vasudeva Rao,
Petitioner.

Camp Udipi D. 15–4–57.

Edited, Printed & Published by K. H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment.

# ನವಯುಗ

ಸಂಪುಟ ೩೬
VOL. 36

25—4—1957

ಸಂಚಿಕೆ ೩೩
NO. 33

## ಕಾಂಗ್ರೆಸ್ಸಿಗರ ಕರ್ತವ್ಯ

# ಕಳೆದುಕೊಂಡ ಕೇರಳವನ್ನು ಮರಳಿ ಪಡೆಯಿರಿ

ಸ್ವತಂತ್ರ ಭಾರತದ ಪ್ರಜಾಪ್ರಭುತ್ವದ ಎಳೆಯ ವೃಕ್ಷಕ್ಕೆ ಅತ್ಯಂತ ಹೆಚ್ಚು ವಿದ್ಯಾವಂತರಿರುವ ಕೇರಳವು ಕೊಟ್ಟ ಕೊಡಲಿಯೇಟು ವೃಕ್ಷದ ಶಾಖೆ ಶಾಖೆ —ನಾಡಿ ನಾಡಿಯಲ್ಲೆಲ್ಲಾ ಪರಿಣಾಮವನ್ನುಂಟುಮಾಡಿದೆ— ಪ್ರಜಾಶಕ್ತಿಯ ಆರಂಧಕರನ್ನೆಲ್ಲ ಅಸಮಾಧಾನ, ಬೇಸರ ಕ್ಕೀಡು ಮಾಡಿದೆ; ಹತ್ತಿದರೆ ಅತಿ ಶೀಘ್ರವಾಗಿ ಹಬ್ಬುವ ಗುಣವುಳ್ಳ ಈ ಕಮ್ಯುನಿಸಮಿನ ಕೆಟ್ಟನ್ನು ಹಬ್ಬುಗೊಡದೆ ಇಲ್ಲಿನೇ ನಂದಿಸುವುದೆಂತೆಂಬ ಯೋಜನೆಗೀಡು ಮಾಡಿದೆ.

ಕೇರಳದಲ್ಲಿ ಕಾಂಗ್ರೆಸಿನ ಪರಾಭವಕ್ಕೆ ಕಾರಣವೇನೆಂದು ತಿಳಿದು ಪುನಃ ಕಾಂಗ್ರೆಸು ಅಲ್ಲಿಯ ಜನರ ಪ್ರೀತಿಗೆ ಪಾತ್ರವಾಗುವಂತೆ ಮಾಡಲು ಕಾಂಗ್ರೆಸ್ ವರಿಷ್ಠರು ಯತ್ನ ನಡೆಸುತ್ತಲಿದ್ದಾರೆ. ಈ ಪ್ರಯತ್ನವು ಯಶಸ್ವಿಯಾಗಲೆಂದು ಪ್ರತಿಯೋರ್ವ ಪ್ರಜಾಶಕ್ತಿಯಲ್ಲಿ ಪ್ರೇಮವುಳ್ಳವನೂ ಹಾರೈಸಬೇಕಾಗಿದೆ.

ಇದೇ ಕಾರ್ಯದ ಸಲುವಾಗಿ ಕೇರಳ ಕ್ಕಾಗಮಿಸಿದ ಅ. ಭಾ. ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಶ್ರೀ ಶ್ರೀಮನ್ನಾರಾಯಣರು 'ನಮ್ಮ ಪರಾಭವಕ್ಕೆ ಜನರನ್ನು ದೂರಿ ಪ್ರಯೋಜನವಿಲ್ಲ' ಎಂದಿದ್ದಾರೆ. ಸರಿ, ದೂರಬೇಕಾದ ಅಂಶವಿದ್ದರೂ ಕೂಡ ಈಗ ದೂರಿದ್ದರಿಂದ ಪ್ರಯೋಜನ ದೊರೆಯಲಾರದು. ನಮ್ಮ ದೋಷಗಳನ್ನೇ ತಿಳಿದುತಿದ್ದಿಕೊಳ್ಳುವುದು ನಮ್ಮ ಇಂದಿನ ಮೊದಲನೇ ಕರ್ತವ್ಯವಾಗಬೇಕು. ಅದೇ ನಮಗೆ ಸರಳವೂ ಶ್ರೇಯಸ್ಕರವೂ ಆದ ಮಾರ್ಗವೆನ್ನುವುದರಲ್ಲಿ ಸಂದೇಹವಿಲ್ಲ. ಕೇರಳದ ಜನರು ವಿದ್ಯಾವಂತರಾದರೂ ಆವರು ಕ್ರಾಂತಿಕಾರಿ ಮನೋಭಾವದವರೆಂಬ ಅಪವಾದವನ್ನು ಅವರ ಮೇಲೆ ಕೊಂಪಬಹುದಾದರೆ, ಪ್ರಜಾಪ್ರಭುತ್ವದ ತತ್ವದ ಮೂಲ ಮಂತ್ರವಾದ ಸ್ವಾತಂತ್ರ್ಯ, ಸಮಾನತೆ, ಸೋದರತೆಯ ತತ್ವದ ಸ್ಥೈರ್ಯ ಸ್ವಾತಂತ್ರ್ಯಾನಂತರ ಅವಶ್ಯವಾಗಿ ನಡೆಯಬೇಕಾಗಿದ್ದ ನ್ಯಾಯವಾದ, ಮಿತವಾದ ಅಹಿಂಸಾತ್ಮಕ ಕ್ರಾಂತಿ-ಸಾಮಾಜಿಕ-ಆರ್ಥಿಕ ಸುಧಾರಣೆಗಳನ್ನು ಸಾಧಿಸಲ್ಲಿ ವ್ಯರ್ಥ ವಿಳಂಬವನ್ನು ತೋರಿಸಿದ ಅಪವಾದವನ್ನು ಕಾಂಗ್ರೆಸಿನ ಮೇಲೆ ಹೊರಿಸಲಾಗುತ್ತದೆ ಇವನ್ನು ಕೂರ್ಣ ಅಲ್ಲಗಳೆಯುವುದಸಾಧ್ಯ.

ನಮ್ಮ ದೇಶದ ಪರಿಸ್ಥಿತಿಯಂತೆ ಸಮಾಜವಾದದಲ್ಲಿ ನಂಬಿಗೆಯಿಲ್ಲದ ಯಾವುದಾದರೊಂದು ರಾಜಕೀಯ ಪಕ್ಷವು ಹೆಚ್ಚು ಕಾಲ ಬದುಕಿ ಉಳಿಯಲಾರದೆಂಬುದು ಸ್ಪಷ್ಟ. ಅಂದರೆ ಸಮಾಜ ಜೀವನದಲ್ಲಿ ಸಮಾಜವಾದವು ಆಚರಣೆಗೆ ಬರುವಂತೆ ಮಾಡುವುದು ಅತೀ ಅವಶ್ಯವೆಂದು ತಿಳಿಯಬೇಕಾಗುತ್ತದೆ.

ನಿಜವಾದ ಸಮಾಜವಾದಕ್ಕಿಂತ ಸಮತಾವಾದದಲ್ಲಿರುವ ಹೆಚ್ಚಿನ ವಿಷಯಗಳಾವುವು? ಕಮ್ಯೂನಿಸಮಿನಿಂದ ಹಿಂಸೆ, ಅಧಿಕಾರದ ಕೇಂದ್ರೀಕರಣ, ರಕ್ಷಪ ಅನುಕರಣೆ-ಇವನ್ನು ಕಳೆದು ಪ್ರಜಾಶಕ್ತಿಯನ್ನು ಸೇರಿಸಿದರೆ ಸೋಶಲಿಸಂ ಆಗುತ್ತದೆ ಎಂದು ಧುರೀಣರೊಬ್ಬರು ಒಮ್ಮೆ ನುಡಿದಿದ್ದರು. ಕಾಂಗ್ರೆಸು ತನ್ನ 60ನೆಯ ಅವಧಿ ಅಧಿವೇಶನದಲ್ಲಿ ಸ್ವೀಕರಿಸಿದ ಸಮಾಜವಾದವು ಇದೇ ಹೊರತು ಬೇರೆಯಾಗಿರಲಿಕ್ಕಿಲ್ಲ ಎನ್ನುವಾಗ ಅದೇ ಕಾಂಗ್ರೆಸಿನ ಮೇಲೆ ವಿದ್ಯಾವಂತರಾದ ಕೇರಳದ ಜನತೆ ವಿಶ್ವಾಸವಿಡಲಿಲ್ಲವೆಂದರೆ, ಅವರಿಗೆ ಇನ್ನುಳಿದ ಹಿಂಸೆ ಅಧಿಕಾರದ ಕೇಂದ್ರೀಕರಣ, ರಕ್ಷಪಅನುಕರಣೆಯೇ ಹೆಚ್ಚು ಇಷ್ಟವೋ? ಅದೂ ಇರಬಹುದು. ಆದರೆ ಕಾಂಗ್ರೆಸಿನ ಈಗಿನ ಜವಾದದಲ್ಲಿ ಜನರಿಗೆ ಸಂದೇಹಕ್ಕೆಡೆಯುಂಟಾಗಿದೆ-ಸಮಾಜವಾದಕ್ಕೆ ವಿರೋಧವುಳ್ಳವರ ವರ್ಚಸ್ಸು ಕಾಂಗ್ರೆಸ್ ಸರಕಾರದ ಮೇಲೆ ಬೀಳುತ್ತದೆಯೆನ್ನುವ ಅಪವಾದವಿಲ್ಲದಿಲ್ಲ. ಅನೇಕರು ಇದೇ ಸಂಶಯ ಕ್ಕೊಳಗಾಗಿ ಉಪಾಯವಿಲ್ಲದೆ ಕಮ್ಯುನಿಸ್ಟರಿಗೆ ಮತಕೊಟ್ಟು ಅವಾಯವನ್ನು ಆಹ್ವಾನಿಸಿದರೆಂದು ಹೇಳಲಿಕ್ಕೆಡೆಯಿದೆ. ಹೇಗಿದ್ದರೂ ಕಮ್ಯುನಿಸ್ಟರ ವಿಜಯಕ್ಕೆ ಕಾಂಗ್ರೆಸಿನ ದೋಷಗಳೂ ಕಾರಣವಾಗಿವೆಯೆನ್ನುವುದನ್ನು ಒಪ್ಪಲೇಬೇಕು; ದೋಷಗಳ ನಿವಾರಣೆಯೂ ಶೀಘ್ರವಾಗಿ ನಡೆಯಬೇಕು.

ಕೇರಳದ ಜನತೆಯನ್ನು ಕಾಂಗ್ರೆಸಿನತ್ತ ಒಲಿಸಿಕೊಳ್ಳಲು ಯತ್ನ ನಡೆಯಬೇಕಷ್ಟೆ. ಇದಕ್ಕೆ ಹೆಚ್ಚು ಪರಿಣಾಮಕಾರಿಯಾದ ಮಾರ್ಗವಾವುದು? ಬಲೀ ಉಪದೇಶದ ಬಾಯ್ಬಲದಿಂದಲೇ ನಾವು ಯಶಸ್ವಿಯಾಗಲಾರೆವುದು ಮತ್ತು ಇದ್ದುದನ್ನು ಉಳಿಸಿಕೊಳ್ಳುವುದಕ್ಕಿಂತ ಕಳೆದುಕೊಂಡುದ್ದನ್ನು ಗಳಿಸುವು ಕಷ್ಟವೆಂಬುದನ್ನು ಮರೆಯಬಾರದು. ಆದ ಕಾರಣ ಕೇರಳದಲ್ಲಿ ಗಳಿಸಿಕೊಳ್ಳುವ ಕಾರ್ಯಕ್ಕೆ ಸಂದಷ್ಟೇ ಮಹತ್ವವು ಇತರ ಕಡೆಗಳಲ್ಲಿ ಇದ್ದುದನ್ನು ಉಳಿಸಿಕೊಳ್ಳುವ ಕಾರ್ಯಕ್ಕೂ ಸಲ್ಲಬೇಕಾಗುತ್ತದೆ. ಅಂಧ್ರ, ಪಶ್ಚಿಮ ಬಂಗಾಳಗಳಲ್ಲಿ ಕಮ್ಯುನಿಸ್ಟರು ಸೋತರೆಂದಾಗಲ್ಲಿ, ಇತರ ಕಡೆಗಳಲ್ಲಿ ಅವರ ಭಯವಿಲ್ಲವೆಂದಾಗಲಿ, ನಿಶ್ಚಿಂತೆಯಿಂದಿರುವುದರಿಂದ ಅಪಾಯ ತಪ್ಪಲಿಕ್ಕಿಲ್ಲ.

ಅದಕಾರಣ ಕೇರಳವನ್ನು ನಾವಿಂದು ಹೇಳತೀರಿಸುವುದಕ್ಕಿಂತಲೂ ಬೇರೆ ಕಡೆಗಳಲ್ಲಿ ತೂಡಿ ತೋರಿಸುವುದೇ ಹೆಚ್ಚು ಪರಿಣಾಮಕಾರಿಯಾಗಬಲ್ಲುದು. ಕಮ್ಯುನಿಸ್ಟರು ಅಧಿಕಾರಕ್ಕೆ ಬಂದರೆ ಅವರು ಮಾಡುವ ಕೆಲಸಗಳಲ್ಲಿ ಒಳಿತಿನ ಅಂಶ-ಪ್ರಜಾಶತ್ತಾತ್ಮಕವಾಗಿ ನಡೆಯಬೇಕಾದ ಕಾರ್ಯಗಳೇನೇನಿವೆಯೋ ಅವನ್ನೆಲ್ಲ ಶೀಘ್ರವಾಗಿ ಮಾಡಿದರೇನೆ ನಾವು ಯಶಸ್ವಿಯಾದೆವು.

ಕಮ್ಯುನಿಸಮಿನ ಕೆಟ್ಟಿಗೆ ಅವಕಾಶ ಕಡಿಮೆಯಾಗಿಸುವ, ದುಃಖ ದಾರಿದ್ರ್ಯ, ದರ್ಪ ಮತ್ಸರಗಳನ್ನು ತೊಡೆದುಹಾಕುವ, ಶಾಂತಿ ಸುವ್ಯವಸ್ಥೆಯನ್ನು ಸ್ಥಾಪಿಸುವ ಈ ಕಾರ್ಯಗಳನ್ನು ನಾವು ಇನ್ನಾದರೂ ತಡೆಯಿಲ್ಲದೆ ಸಾಧಿಸುವುದು ಸಾಧ್ಯವಾಗದೇ? ಸಾಧಿಸಿವಿದ್ದರೆ ಉಪಾಯವಿದೆಯೇ? ಸೇವಕರ ಸೋಗು ಧರಿಸಿಕೊಳ್ಳುವ ಅನೇಕ ಪ್ರತಿನಿಧಿಗಳೂ ಅವರ ಮೇಲೆ ನೇರಾದ ಪರಿಣಾಮ ಬೀರುವ ಭೂಮಾಲಕ, ಭಂಡವಾಳಶಾಹಿಗಳೂ ಇಂದಿನ ತಮ್ಮ ಸ್ವಾರ್ಥಸಾಧನೆಯ ಹಂಬಲನೇ ಕಮ್ಯುನಿಸ್ಟರಿಗೆ ಬೆಂಬಲವಾಗಿ ಪರಿಣಮಿಸುತ್ತಿದೆಯೆಂಬುದನ್ನು ಇನ್ನಾದರೂ ಮನಗಾಣಲಾರರೇ? ಜನತೆಯು ಅಜ್ಞಾನವನ್ನು ಸದುಪಯೋಗಿಸಿಕೊಂಡು, ಅವರ ಹಕ್ಕು ಭಾವ್ಯತೆಯನ್ನು ಲೆಕ್ಕಿಸದ ಸ್ವಾರ್ಥಿ ನೀತಿಯನ್ನನುಸರಿಸುವುದರಿಂದ, ಜನತೆಯು ಜ್ಞಾನವು ವೃದ್ಧಿಗೊಂಡಾಗ, ಹತ್ತಿಕ್ಕಲ್ಪಟ್ಟ "ಕಿಚ್ಚು" ಹೇಗೆ ಸ್ಫೋಟಗೊಳ್ಳುವುದೆಂಬುದನ್ನು ಈಗ ಕಂಡಾಯಿತಲ್ಲ! ಇನ್ನಾದರೂ ಇವರು ತಮ್ಮನ್ನೂ ದೇಶವನ್ನೂ ಅಪಾಯಕ್ಕೆ ಗುರಿಪಡಿಸದೆ ಈ ಹವ್ಯಸವನ್ನು ಬಿಟ್ಟು ಕೊಟ್ಟು ಕಲ್ಯಾಣರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಮಹತ್ವದ ಪಾತ್ರವಹಿಸಬಹುದಲ್ಲ!

ಈಗಾಗಲೇ ಭಾರತದ "ಎ : ನಿಸ್ತೇಜ ಹೊಸ ಹುರುಪು ತಲೆದೋರಿದಂತಿದೆ. ಕೇರಳದಲ್ಲಿ ಅವರ ಕೆಲವು ವರ್ತನೆಗಳು ಜನತೆಗೆ ಅವರ ನಿಜಸ್ವರೂಪದ ಪರಿಚಯ ಮಾಡಿಕೊಡುತ್ತಿವೆಯಾದರೂ, ಕೆಲವು ಪ್ರಗತಿಕರ ಯೋಜನೆಗಳನ್ನು ಕಾರ್ಯಗತಗೊಳಿಸುವುದರಲ್ಲಿ ಯಶಸ್ವಿಯಾದರೆ, ಕಾಂಗ್ರೆಸ್ ಹಿಂದಿನ ಮಂದ ಧೋರಣೆಯನ್ನೇ ತಳಿಸಿದರೆ ನಮ್ಮ ಪರೀಕ್ಷಾ ಪ್ರಜಾಶತ್ತೆಗೆ ಗಂಡಾಂತರ ಸೃಷ್ಟಿಸಿದಂತೆಯೇ ಸರಿ. ನಮ್ಮನ್ನು ಎಚ್ಚರಗೊಳಿಸುವ ಇದಕ್ಕಿಂತಲೂ ಹೆಚ್ಚಿನ ವಿಷಯವಾವುದು? ಕಮ್ಯುನಿಸ್ಟರನ್ನು ಸೋಲಿಸಲು ನಮಗಿರು

(ಬಂಸೇ ಸುಟಿ ನೋಡಿರಿ)

**SEASON DEPOSITS**

**ಸೀಸನ್ ಠೇವಣಾತಿಗಳು**

ಸೇ. 4% ದರ ಬಡ್ಡಿಯಲ್ಲಿ ಸೀಸನ್ ಠೇವಣಾತಿಗಳನ್ನು ಈಗ ಸ್ವೀಕರಿಸಲಾಗುವುದು.

ದೊಡ್ಡ ಡಿಪೊಜಿಟು ಮೊಬಲಗುಗಳಿಗೆ ಸ್ಪೆಶಲ್ ಬಡ್ಡಿ ದರಗಳು.

ಹೆಚ್ಚಿನ ವಿವರಗಳಿಗೆ ನಮ್ಮನ್ನು ವಿಚಾರಿಸಿರಿ.

**ದಿ ವಿಜಯ ಬೇಂಕ್ ಲಿಮಿಟೆಡ್**

ಪ್ರಧಾನ ಕಛೇರಿ ಮತ್ತು ಶಾಖೆಗಳು.

ಜುಮ್ಲಾ ಸಂಪತ್ತು (13-12-1956) | ರೂಪಾಯಿ 1 ಕೋಟಿಗೂ ಮಿಕ್ಕಿದೆ.

ವಾರ್ಷಿಕ ಚಂದಾ: NAVAYUGA WEEKLY, UDIPI. ವಿಳಾಸಂಚಿಕೆ

## ಜ್ಞಾಪಕಶಕ್ತಿ

# ನಿಮ್ಮ ಸ್ಮರಣ ಶಕ್ತಿಯನ್ನು ಹೆಚ್ಚಿಸಿಕೊಳ್ಳಿರಿ

ಕೆಲವೊಮ್ಮೆ ನಿಮಗೆ ನಿಮ್ಮ ದೈನಿಕ ಕಾರ್ಯ ಕ್ರಮಗಳ ಸೂಕ್ಷ್ಮವಾದ ಮಾತುಗಳು, ಮಿತ್ರರ ಹೆಸರುಗಳು ಅಥವಾ ಇನ್ನಾವುದೋ ಕೆಲವು ವಿಚಾರಗಳು ಸಮಯಕ್ಕೆ ಬೇಕಾದಾಗ ಜ್ಞಾಪಕಕ್ಕೆ ಬರುವುದಿಲ್ಲ. ಇದು ಸ್ಮರಣಶಕ್ತಿಯು ಕಡಿಮೆಯಾಗಿರುವುದರ ದ್ಯೋತಕವೆಂದು ನೀವು ತಿಳಿದಿರಬಹುದು. ಆದರೆ ಸತ್ಯ ಸ್ಥಿತಿಯು ಇದಕ್ಕೆ ವಿಪರೀತವಾಗಿದೆಯೆಂದರೆ ನಿಮಗೆ ಆಶ್ಚರ್ಯವಾಗಬಹುದು. ವೈಜ್ಞಾನಿಕ ಪ್ರಮಾಣಗಳಿಂದ ನಿಮ್ಮ ಸ್ಮರಣಶಕ್ತಿಯು ಒಂದು ಕ್ಷಣದಲ್ಲಿ ಸುಮಾರು ೬೦೦ ಮಾತುಗಳನ್ನು ಉತ್ತಮ ರೀತಿಯಲ್ಲಿ ಸ್ಮರಣೆಯಲ್ಲಿಡಬಲ್ಲುದೆಂದೂ, ಸು. ೬೦-೬೫ ವರ್ಷ ಪ್ರಾಯದವರೆಗೂ ಇಷ್ಟು ಶಕ್ತಿಯು ಇರುವುದೆಂದೂ ತಿಳಿಸಬಂದಿದೆ. ಪರಮಾತ್ಮನು ನಿಮ್ಮ ಮೇಲೆ ಇಷ್ಟೊಂದು ಆಲೌಕಿಕ ಕೃಪಾಕಟಾಕ್ಷವನ್ನು ಬೀರಿರುವಾಗ, ನಿಮಗೆ ಸ್ಮರಣಮಾಡುವುದರಲ್ಲಿ ಸಫಲತೆ ದೊರೆಯುವುದಿಲ್ಲವಾದರೆ, ಅದಕ್ಕೆ ವ್ಯಕ್ತಿಗತ ಉದಾಸೀನತೆಯೇ ಕಾರಣ. ಸಾಧಾರಣವಾಗಿ ಸ್ಮರಣಶಕ್ತಿಯನ್ನು ನಾವು ದಿನನಿತ್ಯವೂ ಅಭ್ಯಾಸಮಾಡುವುದರಿಂದ ಪಡೆಯಬಹುದು. ಈ ಶಕ್ತಿಯನ್ನು ಇತರ ಕ್ರಿಯೆಗಳಂತೆಯೇ ಪರಿಶ್ರಮ ಪೂರ್ವಕವಾಗಿ ಬೆಳೆಸಿಕೊಳ್ಳುವುದು ಸಾಧ್ಯ.

ನೀವು ಒಂದು ಉತ್ಸವದಲ್ಲಿ ಕಂಡ ಸುಮಾರು ೫೦ ಮಂದಿಯ ಹೆಸರುಗಳನ್ನು ನೆನಪಿನಲ್ಲಿಟ್ಟುಕೊಳ್ಳಲು ಬಯಸಬಹುದು. ಇದೇನು ವಿಲಕ್ಷಣ ಬುದ್ಧಿಯ ಚಮತ್ಕಾರವೆಂದು ತಿಳಿಯಬೇಕಾಗಿಲ್ಲ. ಏಕೆಂದರೆ, ಅಮೇರಿಕದಲ್ಲೊಬ್ಬರು ಹತ್ತು ಪಾಠಗಳನ್ನು ಓದಿದ ಕಾರಣದಿಂದಲೇ ಇಂತಹ ಅಮೋಘ ಶಕ್ತಿಯನ್ನು ಪಡೆದಿದ್ದಾರೆ. ನ್ಯೂಯಾರ್ಕ್‌ನ ಸ್ಮರಣಶಕ್ತಿ ಶಾಲೆಯಲ್ಲಿ ಪ್ರತ್ಯೇಕ ವಿದ್ಯಾರ್ಥಿಯು ಈ ರೀತಿಯಲ್ಲಿ ಅಭ್ಯಾಸಮಾಡಿ ಸಫಲರಾಗುತ್ತಿದ್ದಾರೆ. ನೀವೂ ಇಂತಹ ಶಕ್ತಿಯನ್ನು ಸಂಪಾದಿಸಿಕೊಳ್ಳಬಹುದು. ಈ ಶಕ್ತಿಯಿಂದ ಒಬ್ಬನು ದೊಡ್ಡ ಅಂಗಡಿಗಾರನಾದಾಗ ಸಾಮಾನು ಪಟ್ಟಿಯ ಕ್ರಮ ಸಂಖ್ಯೆ, ಕ್ರಯ ಹಾಗೂ ಸಾಮಾನಿನ ವಿವರಣೆಗಳೊಂದಿಗೆ ಸು. ೫೦,೦೦೦ ವಿಭಿನ್ನ ವಸ್ತುಗಳ ಸಂಪೂರ್ಣ ವಿವರವನ್ನು ತುದಿ ನಾಲಗೆಯಲ್ಲಿ ಇಟ್ಟುಕೊಂಡಿದ್ದನಂತೆ!

ಹೀಗೆ ಸ್ಮರಣಶಕ್ತಿಯನ್ನು ವೃದ್ಧಿಪಡಿಸುವುದು ಸಾಧ್ಯವೇ ಎಂದು ನೀವು ಅನುಮಾನಿಸುವ ಕಾರಣವಿಲ್ಲ. ಯಾವುದೋ ಒಂದು ವಿಧಾನದಿಂದ ಆ ವ್ಯಕ್ತಿಯು ಆ ಶಕ್ತಿಯನ್ನು ಸಂಪಾದಿಸಿದ. ಆದರೆ, ಕೇವಲ ವಿಧಾನವನ್ನರಿತ ಮಾತ್ರಕ್ಕೇ ಮುಗಿಯುಲಿಲ್ಲ, ಸ್ಮರಣಶಕ್ತಿಯು ತನ್ನ ಪೂರ್ವಾವಸ್ಥೆಯ ನಾಲ್ಮಡಿಯಷ್ಟು ಸಂಪತಾಪೂರ್ವಕವಾಗಿ ವಿಕಾಸವಾಗುವುದೆಂಬ ವಿಶೇಷಜ್ಞರು ಹೇಳುತ್ತಾರೆ. ಇದೇನೂ ಇಂದ್ರಜಾಲದ ಮೂಲಕವಾಗಿಲ್ಲ. ಸತತ ಪರಿಶ್ರಮದ್ವಾರದಿಂದಲೇ ಹೀಗೆ ಬೆಳೆಸುವುದು ಸಂಭವನೀಯ.

ಒಂದು ಮಾತನ್ನು ಆಲೋಚಿಸಿ ಸ್ಮರಣೆಗೆ ತಂದುಕೊಳ್ಳುವುದು ಸಾಮಾನ್ಯವಾಗಿದೆ. ಇದಕ್ಕೆ ಕಾರಣವೇನು? ನೀವು ನಿಮ್ಮ ಕನ್ನಡಕ ಅಥವಾ ಜೋಡಿನ್ನು ಎಲ್ಲಿ ಟ್ಟರುವಿರಿ ಎಂಬುದನ್ನು ಮರೆತುಬಿಟ್ಟರೆಂದು ತಿಳಿಯಿರಿ. ಹೀಗೆ ಮರೆತುಬಿಡಲು ನೀವು ಅವನ್ನು ತೆಗೆದಿಟ್ಟ ಕೂಡಲೇ ನಿಮ್ಮ ಸ್ಮರಣಶಕ್ತಿಯನ್ನು ಯಾರೋ ಅಪಹರಿಸಿದರೆಂದು ಭಾವಿಸಬಾರದು. ವಾಸ್ತವಿಕವಾಗಿ ನೀವು ಅವನ್ನು ಇಡುವಾಗಲೇ ಇತರ ಮಾತುಗಳೆ ನಡುವೆ ಮುಳುಗಿದ್ದುದರಿತು ಬಿಟ್ಟಿರಿ ಅನ್ಯಮನಸ್ಕರಾಗಿದ್ದುದರಿಂದ ಮನಸ್ಸಿಗೆ ಇಂತಹ ಸ್ಥಳದಲ್ಲಿಟ್ಟೆನೆಂಬ ಸೂಚನೆಯನ್ನೂ ನೀವು ಕೊಡಲಿಲ್ಲ. ಹಾಗೆ ಸೂಚನೆ ಪಡೆಯದೆ ಸ್ಮರಣಶಕ್ತಿ ಪುನಃನಿಮಗೆ ಹೇಗೆ ಜ್ಞಾಪಿಸೀತು?

ಪ್ರತಿಯೊಂದು ವಿಷಯವನ್ನೂ ಉತ್ತಮ ರೀತಿಯಿಂದ ಮಸ್ತಿಷ್ಕದಲ್ಲಿ ಬರೆದಿಡಿರಿ ಆಗ ಉತ್ತಮ ರೂಪದಲ್ಲಿ ಆ ವಿಷಯವನ್ನು ಸ್ಮರಣೆಗೆ ತರಲು ಮಸ್ತಿಷ್ಕವು ಸನ್ನದ್ಧವಾಗಿರುವುದು. ಇದನ್ನು ನೀವೊಂದು ಅಭ್ಯಾಸವನ್ನಾಗಿರಿಸಿಕೊಂಡರೆ, ನಿಮ್ಮ ಸ್ಮರಣಶಕ್ತಿ ಬೆಳೆಯುವುದು ನಿಶ್ಚಯ. ಸ್ಮರಣಶಕ್ತಿ ವೃದ್ಧಿಗಾಗಿ ಕಳೆದ ೪೦೦ ವರ್ಷಗಳಲ್ಲಿ ಅನೇಕ ವಿಶಿಷ್ಟಾಕರಗಳಾದುವು. ಆವಾವುವನ್ನೂ ಅಧ್ಯಯನ ಮಾಡದೇನೇ ನೀವು ಕೆಲವೊಂದು ವಿಧಿಗಳನ್ನು ಸುಸರಿಸಿದರೆ, ನಿಮ್ಮ ಸ್ಮರಣಶಕ್ತಿಯನ್ನು ಬೆಳೆಸಿಕೊಳ್ಳಬಹುದು.

ಜಾಗೃತಾವಸ್ಥೆಯಲ್ಲಿ ಕ್ಷಣಕ್ಷಣದಲ್ಲೂ ನವ್ಯ ಮಸ್ತಿಷ್ಕವು ತಿಳಿದೋ ತಿಳಿಯದೆಯೋ ಇಂದ್ರಿಯದ್ವಾರಾ ಬಾಹ್ಯಜಗತ್ತಿನ ಅನುಭವಗಳನ್ನು ಮಾಡಿಕೊಳ್ಳುತ್ತದೆ. ಇವುಗಳಲ್ಲಿ ಕಡಿಮೆಪಕ್ಷ ನೇಕಡಾ ೯೦ರಷ್ಟನ್ನು ನಾವು ವಿಚಾರಿಸದೆ ಅಲ್ಲಿಗೇ ಮರೆತುಬಿಡುತ್ತೇವೆ. ಉದಾಹರಣೆಗಾಗಿ, ಅರ್ಧಘಂಟೆ ಹಿಂದೆ ನಿಮ್ಮೆದುರಿನ ರಸ್ತೆಯಲ್ಲಿ ಯಾವ ಬಣ್ಣದ ಮೋಟಾರುಕೋಯಿತು, ಅಲ್ಲಿ ಹೋಗಿದ್ದ ವ್ಯಕ್ತಿಯ ಬಟ್ಟೆಯ ಬಣ್ಣ ಯಾವುದು; ಅಥವಾ ನಿಮ್ಮ ಸಹವಾಸಿಯು ಓದುವ ಮನೆಯಲ್ಲಿ ಅದೆಷ್ಟು ಕಿಟಕಿಗಳಿವೆ, ಗೋಡೆಯ ಬಣ್ಣ ಯಾವುದು– ಇವೆಲ್ಲವನ್ನೂ ನೀವು ನೋಡಿದ್ದೀರಿ; ಆದರೆ ಈಗ ಅವನ್ನು ಹೇಳುವುದು ಅಸಾಧ್ಯವಾಗಿದೆ. ಏಕೆಂದರೆ, ಈಗ ಅವನ್ನು ನೀವು ನೋಡಿಯೂ ನೋಡಿಲ್ಲ!

ನಿಮಗೆ ಯಾವ ವಿಷಯವನ್ನು ಸ್ಮರಣದಲ್ಲಿಡುವುದು ಆಗತ್ಯವೋ ಅವನ್ನು ಆರಿಸಿ ಆದರ ಅಭ್ಯಯನ ಅಥವಾ ಸೂಕ್ಷ್ಮ ನಿರೀಕ್ಷಣ ಮಾಡುವುದು ಅವಶ್ಯಕ. ನೀವು ಯಾರಾದರೊಬ್ಬರೊಡನೆ ಭೇಟಿ ಆಗಿದ್ದರೆ, ಅವರ ಪರಿಚಯವನ್ನು ನೀವು ನೆನಪಿಸಿಕೊಳ್ಳಬೇಕಾದರೆ, ಅವರ ಚರ್ಯೆಗಳನ್ನು ಜೀನ್ಸಾಗಿ ನೀರಿಕ್ಷಿಸಿ, ಅವನ ಹೆಸರನ್ನು ಎರಡು ಬಾರಿಕೇಳಿಕೊಳ್ಳಿರಿ. ಹೀಗೆ ಮಾಡುವುದು ಶಿಷ್ಟಾಚಾರ ಬಾಹ್ಯವಾದುದಲ್ಲ. ಆದರೆ, ಅದೇ ವ್ಯಕ್ತಿಯನ್ನು ಇನ್ನೊಮ್ಮೆ ಎದುರ್ಗೊಂಡಾಗ ಮರೆತು ಬಿಡುವುದು ಮಾತ್ರ ಅಧಿಕ ಅಪಮಾನ ಜನಕವಾಗಿದೆ.

ನಿಮ್ಮ ಸಂಪರ್ಕದಲ್ಲಿ ಗಣಿತ ಪಾಠದಲ್ಲಿ ಕಡಮೆ ಅಂಕಗಳನ್ನು ಸಂಪಾದಿಸಿದ ಹಲವಾರು ಹುಡುಗರಿರಬಹುದು. ಆದರೆ, ಆವರು ಸಾಮಿರಾರು ಆಟದ ಸ್ಪರ್ಧೆಗಳಲ್ಲಿ ಯಾರು ಎಷ್ಟು ಓಟಗಳನ್ನು ಸಂಪಾದಿಸಿದರು, ಯಾರು ಚೆಂಡೆಸೆದರು, ಯಾರು ಸೋತರು ಯಾರು ಆಟದಿಂದ ಹೊರಗಾದರು ಇತ್ಯಾದಿ ವಿಷಯಗಳನ್ನು ಪಟಪಟನೆ ಹೇಳಬಲ್ಲರು. ಆದರೆ, ಶರಗತಿಯ ಸರಳ ಮಾತುಗಳನ್ನು ಮಾತ್ರ ಕಠಿಣವೆಂದು ತಿಳಿದುಕೊಳ್ಳುವರು. ಇದೇಕೆ ಹೀಗೆ?

ಅವರ ಅಭಿರುಚಿಯು ಶರಗತಿಯಿಂದ ಹೊರಗಿರುವುದೇ ಇವಕ್ಕೆ ಕಾರಣ. ಆದುದರಿಂದ, ಅವರಿಗೆ 'ಗಣಿತ'ದ ಬಗ್ಗೆ ರುಚಿ ಹಿಡಿಸಿಕೊಡಬೇಕು. ನಿಮ್ಮ ಪರವಾಗಿಯೂ ನೀವು ಸ್ವಲ್ಪ ಧ್ಯಾನಕೊಡಬೇಕು. ಯಾವ ಸಮಯಕ್ಕೆ ಯಾರನ್ನು ಎಲ್ಲಿ ಭೇಟಿಯಾಗಬೇಕು, ಅವನೊಡನೆ ಯಾವ ಕೆಲಸವಿದೆ ಇತ್ಯಾದಿಗಳನ್ನು ಧ್ಯಾನಿಸಿರಬೇಕು. ಹೀಗೆ ಮಾಡಿಕೊಳ್ಳುವುದರಿಂದ ಮಂಡೆ, ಆತನನ್ನು ಭೇಟಿಯಾಗಲು ಮರೆಯಲಾರದು.

ಮೇಲೆ ನಿರೂಪಿತವಾದೆರಡು ವಿಧಿಗಳು ಸ್ಮರಿಸಿಕೊಳ್ಳುವ ಕಲೆಯ ಭಾಗಗಳಾಗಿವೆ. ಈಗ ಸ್ಮರಣಕಾರ್ಯ ವಸ್ತುಗಳನ್ನು ಚಿರ ಸ್ಥಾಯಿಯಾಗಿರಿಸುವ ವಿಧಾನವನ್ನು ತಿಳಿಯೋಣ

ಆಡುವ ಸಮಯದ ಪ್ರತಿಯೊಂದು ನುಡಿಯನ್ನು ಅನೇಕಾವರ್ತಿ ಉಚ್ಚರಿಸುವುದರಿಂದ, ಆಡುವ ಮಕ್ಕಳಿಗೆ ಅವು ಸ್ಮರಣೆಯಲ್ಲಿರುವುವು. ಹಾಗೆ ಅವಿದ ಆಟಗಳನ್ನೂ ಮನಸ್ಸಿನಲ್ಲಿ ಆಲೋಚಿಸುವುದರಿಂದ ಸ್ಮರಣಶಕ್ತಿಯು ವರ್ಧಿಸುವುದು. ಆ ಮಾತುಗಳನ್ನು ಆವರ್ತಿಸುವುದರಿಂದ ಸ್ಮರಣೆ ಶಕ್ತಿಯು ಬೆಳೆಯುತ್ತಾ ಹೋಗುತ್ತದು. ಹೆಚ್ಚಿನ ಜನರಿಗೆ ತಮ್ಮ ಟೆಲಿಫೋನ್ ನಂಬ್ರ ಸಾಯಿಕಲ್ ನಂಬ್ರ ಮೊದಲಾದುವು ಸಹ ನೆನಪಿನಲ್ಲಿರುವುದಿಲ್ಲ ಏಕೆಂದರೆ, ಅವನ್ನು ಇವುಗಳ ಉಪಯೋಗವನ್ನು ಕಚ್ಚಾಗಿ ಮಾಡಿಕೊಳುವುದಿಲ್ಲ.

ಒಬ್ಬ ವ್ಯಕ್ತಿಯ ಪ್ರಥಮ ಪರಿಚಯವಾದ ಮೇಲೆ ಆನೊಪನೆ ಮಾತುಕತೆಗಳನ್ನು ಮಾಡುವುದಕ್ಕೆ ಮೊದಲು ಹೆಸರಿನಿಂದ ಸಂಭೋದಿಸುವುದು ಒಂದು ಶಿಷ್ಟಾಚಾರವಾಗಿದೆ. ಚಾಕುಡಿದಪ್ಪಂತರ ನೀವು ನಿಮ್ಮ ಸ್ನೇಹಿತನೊಡನೆ ಹೇಳಬಹುದು. ರಾಮೂ, ಇನ್ನೊಂದು ಲೋಟಾ ಚಾ ತರಿಸಲೆ?" ಇತ್ಯಾದಿ. ಹೀಗೆ ಆವರ್ತನದಿಂದ ಹೆಸರುಗಳು ಸ್ಮರಣೆಗೆ ಬರುತ್ತವೆ. ಒಬ್ಬ ವ್ಯಕ್ತಿಯನ್ನು ಇಂತಹ ದಿನ ಇಷ್ಟು ಹೊತ್ತಿಗೆ ಈ ಸ್ಥಳದಲ್ಲಿ ಭೇಟಿಯಾಗಬೇಕು ಎಂದು ನೆನಪಿಸಿದ್ದರೆ, ಆ ವ್ಯಕ್ತಿ, ದಿನ, ಹೊತ್ತು, ಸ್ಥಳಗಳನ್ನು ಪದೇ ಪದೇ ನೆನಪಿಸಿಕೊಂಡಿರಬೇಕು ಈ ರೀತಿಯ ಅಭ್ಯಾಸ ನಾಡುವುದರಿಂದ, ಮಸ್ತಿಷ್ಕದಲ್ಲಿ ಅವು

(ಇನೇ ಪುಟ ನೋಡಿರಿ)

ಪಾತ್ರ ಮ್ಹಾಲು! ಅತ್ಯಾಕರ್ಷಕ ನಾಟಕ ಸಾಮಾನುಗಳು ಕಡಿಮೆ ಬೆಲೆ!



FILM WIG

ಕಿರೀಟ, ನರ್ತನ, ನಾಟಕಾದಿಗಳಲ್ಲಿ ನಟನಟಿಯರು ಉಪಯೋಗಿಸುವ ಯಾವತ್ತೂ ಕೂದಲು, ಕೋಷ್ಣ್, ಗಡ್ಡ, ಮುಂಡಾಸು, ಕಿರೀಟ, ಬರಿ ಜಲ್ಲರಿ, ಜರಿ ರವಕೆ, ಕೆವಿ ಬೆಂಡೋಲೆ, ತುಟಿಗೆ ಹಚ್ಚುವ ನಿಪುಣಿಸ ಆಂಟು, ತಲೆಸೂಡಿ ಸುತ್ತುವ ಬಲೆ ಇತ್ಯಾದಿ ಸಾಮಾನುಗಳು ಅತ್ಯಂತ ಸುಲಭ ಬೆಲೆಗೆ ಧಾರಾಳವಾಗಿ ದೊರೆಯುತ್ತವೆ. ಪತ್ರವ್ಯವಹಾರ ಇಂಗ್ಲೀಷ ಅಥವಾ ಮರಾಠಿಯಲ್ಲಿ. ಸವಿವರ ಕ್ಯಾಟಲಾಗಿಗೆ ಬರೆಯಿರಿ:

**DHARAMSHI MULJI, DRESSWALA,** 132–C, Bhagatwadi, Bhulleshwar Road, BOMBAY-2.

## ಆದರ್ಶ ಚರಿತೆ

# ನಮ್ಮ ಉಪರಾಷ್ಟ್ರಪತಿಯ ನಿರಾಡಂಬರ ಸಫಲ ಜೀವನ

ತೆಳ್ಳಗಿನ ಶೀರ, ದೋತ್ರ ಕುಪ್ಪಿಗೆ ಮುಚ್ಚುವ ಕೋಟು ತಲೆಯಲ್ಲಿ ಮದ್ರಾಸೀ ಪಂಡಿತರ ರುಮಾಲು, ಕಣ್ಣುಗಳಲ್ಲಿ ಚಿನ್ನ ಬಣ್ಣದ ಚೌಕಟ್ಟಿನ ಕನ್ನಡಕ, ಬೋಳು ವಿಶಾಲ, ಕ್ಷೀಣವಾದ ಕೈಕಾಲುಗಳು, ಮಾತಿನಲ್ಲಿ ನಮ್ರತೆ ಮತ್ತು ಗಂಭೀರ ವಿನೋದ—ಇವುಗಳಿಂದ ಕೂಡಿರುವ ಮಹಾನ್ ವ್ಯಕ್ತಿ. ಡಾ. ಸರ್ವಪಲ್ಲಿ ರಾಧಾಕೃಷ್ಣನರನ್ನು ಕಂಡಾಗ, ಪ್ರತಿಯೊಬ್ಬರ ಶಿರವೂ ಶ್ರದ್ಧಾವನತವಾಗದಿರದು. ಅಂತಹವರನ್ನು ಉಪರಾಷ್ಟ್ರಪತಿಗಳಾಗಿ ಪಡೆದು ನಾವು ಹಾಗೂ ನಮ್ಮ ದೇಶ ಧನ್ಯವಾಗಿದೆ.

ಡಾ. ರಾಧಾಕೃಷ್ಣನರು ದಕ್ಷಿಣ ಭಾರತದ ತಿರುತ್ತಣ್ಣಿ ಗ್ರಾಮದಲ್ಲಿ ೧೮೮೮ನೆ ಸಂವತ್ಸರ ಆರಂದು ಒಂದು ಮಧ್ಯಮ ವರ್ಗದ ಬ್ರಾಹ್ಮಣ ಪರಿವಾರದಲ್ಲಿ ಜನ್ಮಿಸಿದರು. ಅವರ ತಂದೆ ತಾಯಿಗಳ ದ್ವಿತೀಯ ಪುತ್ರರಿವರು. ತಿರುತ್ತಣ್ಣಿಯು ಒಂದು ಹಿಂದೂ ಜನರ ತೀರ್ಥಯಾತ್ರಾ ಸ್ಥಳವಾಗಿದ್ದು, ಹೆಸರಾಂತ ತೀರ್ಥಕ್ಷೇತ್ರವಾದ ತಿರುಪತಿಯ ಸಮೀಪದಲ್ಲಿದೆ. ಡಾ. ರಾಧಾಕೃಷ್ಣನರು ಬಾಲ್ಯಕಾಲವನ್ನು ಈ ಎರಡು ತೀರ್ಥಕ್ಷೇತ್ರಗಳಲ್ಲಿ ಕಳೆದುದರಿಂದ ಅವರಲ್ಲಿ ಹಿಂದೂ ಧಾರ್ಮಿಕ ಭಾವನೆಗಳ ಪ್ರಭಾವವು ಅಧಿಕ ಪ್ರಮಾಣದಲ್ಲಿ ಬಿತ್ತು. ಅವರಲ್ಲಿ ಹಿಂದೂ ದರ್ಶನ ಶಾಸ್ತ್ರದ ಅಧ್ಯಯನದ ಬಗ್ಗೆ ಉತ್ಸಂತತೆಯನ್ನುಂಟು ಮಾಡಿದ ಕಾರಣಗಳಲ್ಲಿ ಇದೂ ಒಂದಾಗಿತ್ತು.

ಶ್ರೀ ರಾಧಾಕೃಷ್ಣನರು ಮದ್ರಾಸಿನ ಕ್ರೈಸ್ತಿಯನ್ ಕಾಲೇಜಿನಲ್ಲಿ ಉಚ್ಚ ಶಿಕ್ಷಣವನ್ನು ಪಡೆದರು. ಅಧ್ಯಯನ ಕಾಲದಲ್ಲಿ ಏಕಾಂತಪ್ರಿಯರಾಗಿದ್ದರು. ವಾಚಾಲರಾಗಲೂ ಹರಟೆಗಾರ ಮಿತ್ರರೊಡನೆ ವಾಸಿಸುವುದು ಅವರಿಗೆಂದೂ ಸರಿಬರುತ್ತಿರಲಿಲ್ಲ. ಇಂತಹ ಮಿತ್ರರು ವ್ಯರ್ಥವಾಗಿ ತಮ್ಮ ಅಮೂಲ್ಯ ಸಮಯವನ್ನು ಕೊಲ್ಲುತ್ತಾರೆಂದು ಅವರು ತಿಳಿಯುತ್ತಿದ್ದರು. ಆಟದಲ್ಲಿ ಇವರಿಗೇನೂ ಆಸಕ್ತಿಯಿರಲಿಲ್ಲ ಸದಾಕಾಲವೂ ಪುಸ್ತಕದತ್ತ ದೃಷ್ಟಿ ಹಾಯಿಸುವುದೇ ಅವರ ಕೆಲಸವಾಗಿತ್ತು. ತಾವು ಏಕಾಂತಪ್ರಿಯರಾದುದರಿಂದ ಮನನ ಚಿಂತನ ಮಾಡಲು ಅವರಿಗೆ ಸಾಕಷ್ಟು ಸಮಯ ಸಿಗುತ್ತಿತ್ತು. ವಿಲಕ್ಷಣ ಪ್ರತಿಭೆ ಮತ್ತು ಕಠಿಣ ಪರಿಶ್ರಮಗಳ ಸಂಯೋಗದಿಂದ ಅವರ ವಿದ್ಯಾರ್ಥಿ ಜೀವನವು ಬಹಳ ಸಫಲತಾ ಪೂರ್ಣವಾಯಿತು. ೧೯೦೫ರಲ್ಲಿ ಅವರು ಬಹುಮಾನ ದೊಡನೆ ಮೆಟ್ರಿಕ್ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಆ ಮೇಲೆ ಎಂ. ಎ. ಯ ವರೆಗೆ ಎಲ್ಲ ಪರೀಕ್ಷೆಗಳಲ್ಲಿಯೂ ಸರ್ವ ಪ್ರಥಮ ಸ್ಥಾನವನ್ನು ಪಡೆಯುತ್ತ ಬಂದರು.

ಮದ್ರಾಸಿನ ಕೆಲ ಕ್ರೈಸ್ತಿಯನ್ ವಿದ್ಯಾರ್ಥಿ ಹಾಗೂ ಶಿಕ್ಷಕರು ಹಿಂದೂ ಧರ್ಮವನ್ನು ಕಟುವಾಗಿ ಟೀಕಿಸುತ್ತಿದ್ದರು. ಇದನ್ನು ಭಾರತೀಯರಾದ ಶ್ರೀ ರಾಧಾಕೃಷ್ಣನ್ನರಿಗೆ ಸಹಿಸಲಸಾಧ್ಯವಾಯಿತು. "ಈ ಕ್ರೈಸ್ತಿಯನ್ನರ ಆಕ್ಷೇಪನೆಗೆ ನನ್ನಲ್ಲಿ ಹಿಂದೂ ಧರ್ಮಶಾಸ್ತ್ರದ ಅಧ್ಯಯನದ ಬಗ್ಗೆ ಕುತೂಹಲವನ್ನು ಉದ್ದೀಪಿಸಿತು. ಈ ಧರ್ಮದಲ್ಲಿ ಯಾವುದು ಜೀವಂತವಾಗಿದೆ. ಯಾವುದು ಮೃತವಾಗಿದೆಯೆಂಬುದನ್ನೂ ಶೋಧಿಸುವ ಕಾರ್ಯದಲ್ಲಿ ಆಸಕ್ತಿ ಹುಟ್ಟಿಸಿತು" ಎಂದವರೊಂದೆಡೆಯಲ್ಲಿ ಬರೆದಿದ್ದಾರೆ. ಸ್ವಾಮಿ ವಿವೇಕಾನಂದರ ಭಾಷಣಗಳನ್ನು ಕೇಳಿದಂತೆ ಹಿಂದೂಪರ್ಮದ ಕಡೆಗೆ ಅವರ ಆಸ್ಥೆಯು ಬೆಳೆಯುತ್ತ ಹೋಯಿತು. ಮನೋಯೋಗ ಪೂರ್ವಕವಾಗಿ ಹಿಂದೂದರ್ಶನಶಾಸ್ತ್ರಗಳನ್ನು ಅಧ್ಯಯನ ಮಾಡುವಷ್ಟು ಪರಿಣಾಮವನ್ನು ಅದು ಹೊಂದಿತು. ಹಾಗೂ ಇಂದು ಹಿಂದೂ ಧರ್ಮಶಾಸ್ತ್ರದಲ್ಲಿ ದೊಡ್ಡ ವಿದ್ವಾಂಸರೆಂದು ಕೊಂಡಿದ್ದಾರೆ.

ಬಾಲ್ಯಾವಸ್ಥೆಯಲ್ಲಿಯೇ ಶ್ರೀ ರಾಧಾಕೃಷ್ಣನರ ವಿವಾಹವು ನೆರವೇರಿತ್ತು. ಬಾಲವಿವಾಹವು ಬಹಳ ಹೀನಾವಸ್ಥೆಗೆ ದಂಪತಿಗಳನ್ನು ತಳ್ಳುತ್ತದೆ ಎಂದು ಕೆಲವರು ಅಭಿಪ್ರಾಯಪಡುತ್ತಾರೆ. ವಾಸ್ತವಿಕವಾಗಿ ಕೆಲವೊಮ್ಮೆ ಇದು ಸತ್ಯವಾಗುವುದೂ ಇದೆ. ಆದರೆ, ರಾಧಾಕೃಷ್ಣನರ ವಿಷಯದಲ್ಲಿ ಮಾತ್ರ ಹೀಗಾಗಲಿಲ್ಲ. ಪತಿಯು ಧ್ಯೇಯ ಪಥದಲ್ಲಿ ಸತಿಯೂ ಸಹಭಾಗಿಯಾಗಿದ್ದಳು.

ತನ್ನ ಅಭ್ಯಾಸ ಪೂರ್ತಿಗೊಂಡ ಮೇಲೆ ರಾಧಾಕೃಷ್ಣನರು ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿನ ದರ್ಶನ ವಿಭಾಗದ ಸಹಾಯಕ ಪ್ರೊಫೆಸರರಾಗಿ ನೇಮಿಸಲ್ಪಟ್ಟರು. ದರ್ಶನವು ಸಾಮಾನ್ಯವಾಗಿ ನೀರಸ ವಿಷಯವೆಂದು ಪರಿಗಣಿಸಲ್ಪಟ್ಟರೂ, ಶ್ರೀಯುತರು ಅದನ್ನು ಕಾವ್ಯಸಮನಾಗಿ ಬೋಧಿಸುತ್ತಿದ್ದರು. ಅವರ ಆಂಗ್ಲ ಭಾಷೆಯಿಂದ ಎಲ್ಲರೂ ಮಂತ್ರಮುಗ್ಧರಾಗುತ್ತಿದ್ದರು. ೧೯೨೬ರಲ್ಲಿ ಮೈಸೂರು ವಿಶ್ವವಿದ್ಯಾಲಯಕ್ಕೆ ಹೋಗಬೇಕಾಗಿ ಬಂತು. ಅದೇ ವರ್ಷ ಕಲಕತ್ತೆ ವಿಶ್ವವಿದ್ಯಾಲಯದಲ್ಲಿ ಸರ್ ವ್ಯಜೇಂದ್ರನಾಥ ತೀಲರ ತೆರವಾದ ಸ್ಥಾನಕ್ಕೆ ಶ್ರೀ ರಾಧಾಕೃಷ್ಣನರ ನೇಮಕವಾಯಿತು. ಕೆಲಸಮಯ ಆಂಧ್ರ ವಿಶ್ವವಿದ್ಯಾನಿಲಯದ ಉಪ ಕುಲಪತಿಯೊಗಿದ್ದರು. ೧೯೩೯ರಲ್ಲಿ ಬೆನಾರಿಸ್ ಹಿಂದೂ ವಿಶ್ವವಿದ್ಯಾನಿಲಯದಲ್ಲಿ ಉಪ ಕುಲಪತಿಯೆಗಿ ಆರಿಸಲ್ಪಟ್ಟರು. ೧೯೪೬ರ ವರೆಗೆ ತನ್ನ ಮಹಾನ್ ಯೋಗ್ಯತೆಯಿಂದ ಆ ಗೌರವಶಾಲಿ ಪದವಿಯನ್ನು ಸಂಯಾಗಿ ನೋಡಿಕೊಂಡರು. ಈ ಮೊದಲೇ ಆಕ್ಸ್‌ಫರ್ಡಿನ ಮೆಂಚೆಸ್ಟರ್ ಕಾಲೇಜ್ ಮತ್ತು ಚಿಕಾಗೊ ವಿಶ್ವವಿದ್ಯಾನಿಲಯಗಳಲ್ಲಿ ಅಲ್ಪಕಾಲ ಅಧ್ಯಾಪನ ಕಾರ್ಯವನ್ನು ನಡಾಯಿಸಿದ್ದರು.

೧೯೩೨ರಲ್ಲಿ ಆಮಿಲ ಭಾರತೀಯ ದರ್ಶನ ಪರಿಷತ್ತಿನ ಅಧ್ಯಕ್ಷರಾಗಿದ್ದರು. ೧೯೩೬ರಲ್ಲಿ ಆಕ್ಸ್‌ಫರ್ಡಿನಲ್ಲಿ ಪ್ರಾಚ್ಯ ಧರ್ಮ ಮತ್ತು ನೀತಿಶಾಸ್ತ್ರದ ಪ್ರೊಫೆಸರಂತಾಗಿ ಹೋದರು. ರಾಷ್ಟ್ರ ಸಂಘದ ಸದಸ್ಯ, ಭಾರತೀಯ ವಿಶ್ವವಿದ್ಯಾಲಯ ಕಮಿಶನಿನ ಅಧ್ಯಕ್ಷ ಮತ್ತು ಬಂಗಾಳಶಾಯಲ್ ಸೀನೂ ಸೊಸಾಯಿಟಿಯ ಸದಸ್ಯರಾಗಿದ್ದು ಪ್ರಶಂಸನೀಯ ರೀತಿಯಲ್ಲಿ ವಿದ್ಯಾಸಂಬಂಧಿ ಕಾರ್ಯಗಳನ್ನು ಮಾಡಿದರು. ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿ ಹಿಂದೂ ದರ್ಶನ ಕುರಿತು ಮಾಡಿದ ಉಪನ್ಯಾಸವೇ ಅನೇಕ ದಿನಗಳವರೆಗೆ ಜನರ ಚರ್ಚಾವಸ್ತುವಾಗಿ ಪರಿಣಮಿಸಿತ್ತು. ಆಂಧ್ರನ ವಿಶ್ವವಿದ್ಯಾಲಯವು ತನ್ನ ದ್ವಿತೀಯ ಪದವಿಪ್ರಾನ ಸಮಾರಂಭದಲ್ಲಿ ಇವರಿಗೆ ಡಿ. ಲಿಟ್. ಪದವಿಯನ್ನು ವಯಸಾಲಿಸಿತು

೧೯೨೯ರಲ್ಲಿ ಭಾರತೀಯ ರಾಜನೀತಿಜ್ಞರಾಗಿ ದುಡಿದರು. ೧೯೩೫ ಮತ್ತು ಭಾರತಗಳಲ್ಲಿ ನಿಕಟಸಂಬಂಧವು ಡಾ ರಾಧಾಕೃಷ್ಣನರಿಂದಾಯಿತು. ಸ್ಟಾಲಿನ್ ಈ ಎರಡುಬಾರಿ ಇವರನ್ನು ಕಾಣಲು ಬಂದಿದ್ದರು. ಆಗ ಅವರಿಗೆ ಗೀತೆಯನ್ನೋದುವ ಪಲಹೆಯನ್ನಿತ್ತಿದ್ದರಂತೆ!

ಡಾ. ರಾಧಾಕೃಷ್ಣನರು ದೊಡ್ಡ ಗ್ರಂಥಕಾರರಾಗಿದ್ದಾರೆ. ಅವರ ಕೆಲವೊಂದು ಪುಸ್ತಕಗಳು ವಿಶ್ವಸಾಹಿತ್ಯದಲ್ಲಿ ಸೇರಿ ಹೋಗಿವೆ ಜೀವನದ ಆದರ್ಶವಾದೀ ದೃಷ್ಟಿಕೋಣ, ಹಿಂದೂ ಜೀವನದರ್ಶನ ಕಲ್ಕೀ ಅಥವಾ ಭಾವಿ ಸಭ್ಯತಾ, ಸ್ವಾತಂತ್ರ್ಯ ಮತ್ತು ಸಂಸ್ಕೃತಿ ಮತ್ತು ಭಾರತೀಯ ದರ್ಶನ ಮೊದಲಾದುವು ಪ್ರಮುಖವಾದುವು. ಗಾಂಧೀ ಅಭಿನಂದನ ಗ್ರಂಥದ ಸಂಪಾದನ ಕಾರ್ಯವನ್ನೂ ಇವರೇ ಮಾಡಿದ್ದಾರೆ

ಡಾ. ರಾಧಾಕೃಷ್ಣನರ ಮಾನವತೆಯು ಅವರ ಪಾಂಡಿತ್ಯ, ದಾರ್ಶನಿಕತೆ ಹಾಗೂ ವಕ್ತೃತೆಗಳಿಗಾಗಿ ಉಲ್ಲೇಖ್ಯವಾಗಿದೆ. ತಾವು ಓದಿದುದನ್ನು, ಚಿಂತನೆಗೈದುದನ್ನು ಅವರು ತಮ್ಮ ಜೀವನದಲ್ಲಿ ಅನುಸರಿಸುತ್ತಿದ್ದಾರೆ. ಭಾರತದ ಪ್ರಾಚೀನ ಋಷಿಗಳ ರೀತಿಯಲ್ಲವರು ಜೀವಿಸುತಿದ್ದಾರೆಂದರೆ ಅತ್ಯರ್ಯಪಡಬಹುದು. ಕೆಲ ಮುಂದಾಳುಗಳಂತೆ ಇವರಲ್ಲಿರುವುದು ಪರೋಪದೇಶ ಪಾಂಡಿತ್ಯವಲ್ಲ; ತಾವು ಮಾಡಿ ಅನುಭವಿಸಿದುದನ್ನೇ ಇತರರಿಗೆ ಮಾತಡಲೇಳುತ್ತಾರೆ.

ಕೆಲವು ದಾರ್ಶನಿಕರಂತೆ ಇವರು ಸಂಸಾರ ಮೋಹ, ಮಾಯಾಜಾಲವೆಂದು ನಡಿದು ಬಿಟ್ಟು ಅವುಗಳನ್ನು ತೊರೆದು ಬಿಡಬೇಕೆಂಬ ಉಪದೇಶವನ್ನು ಕೊಡುವುದಿಲ್ಲ. ಸಂಸಾರದಲ್ಲಿ ಬಾಳಿ, ಜೀವನದ ಕ್ಷಣಕ್ಷಣದಲ್ಲಿ ಬರಬಲ್ಲುದಾದ ಎಡರುತೊಡರುಗಳನ್ನು, ಆದಿವ್ಯಾಧಿಗಳನ್ನು, ಆಪತ್ತು ವಿಪತ್ತುಗಳನ್ನು ಮತ್ತು ಅಭಾವ ಅಭಯೋಗಗಳನ್ನು ವೀರತಾ ಪೂರ್ವಕವಾಗಿ ಎದುರಿಸಿ, ಅವುಗಳೆಲ್ಲಿ ಸಫಲತೆಯನ್ನು ಪಡೆಯಬೇಕು ಎಂಬುದೇ ಅವರ ಉಪದೇಶವಾಗಿದೆ.

ಡಾ. ರಾಧಾಕೃಷ್ಣನರನ್ನು ವಿದ್ವಾಂಸ, ದಾರ್ಶನಿಕ, ಶಿಕ್ಷಣ ವಿಚಕ್ಷಣ, ರಾಜನೀತಿಜ್ಞ ಇತ್ಯಾದಿ ಯಾವ ರೂಪದಿಂದ ನೋಡಿದರೂ ಪ್ರತಿಯೊಂದರಲ್ಲಿಯೂ ಅವರದೇ ಆದ ವೈಶಿಷ್ಟ್ಯ ಮತ್ತು ವೈಲಕ್ಷಣ್ಯಗಳಿವೆ. ಆಂಗ್ಲ ಮತ್ತು ಸಂಸ್ಕೃತ ಸಾಹಿತ್ಯಗಳಲ್ಲಿ ಅವರ ಅಸಾಧಾರಣ ಪ್ರಭಾವವು ಬಿದ್ದಿದೆ.

ಡಾ. ರಾಧಾಕೃಷ್ಣನರ ಬಹುಮುಖ ದೇಶ ಸೇವೆಯನ್ನು ಮನಗಂಡು ಭಾರತೀಯರು ಅವರನ್ನು ತಮ್ಮ ರಾಷ್ಟ್ರದ 'ಉಪರಾಷ್ಟ್ರಪತಿ' ಸ್ಥಾನಕ್ಕೆ ಆರಿಸಿಕೊಂಡು ಸನ್ಮಾನಿಸಿದರು, ಈ ಸ್ಥಾನದಲ್ಲಿರುವಾಗಲೂ ಭಾರತೀಯ ಹಿಂದೂ ದರ್ಶನದ ಅನಂತತೆಯನ್ನು ದೇಶ ವಿದೇಶಗಳಲ್ಲಿ ಪ್ರಕಾಶಿಸುತ್ತಾ ಬಂದರು. ಭಾರತದ ಘನತೆಗೆ ಮಕ್ಕುಟಪ್ರಾಯರಾದ ಕೆಲವೇ ವ್ಯಕ್ತಿಗಳಲ್ಲಿ ಡಾ. ರಾಧಾಕೃಷ್ಣನರೂ ಒಬ್ಬರು. ಈ ಬಾರಿಯೂ ಅವರು ಅವಿರೋಧವಾಗಿ ಪುನಃ ಉಪರಾಷ್ಟ್ರಪತಿ ಸ್ಥಾನಕ್ಕೆ ಆರಿಸಲ್ಪಟ್ಟಿದ್ದಾರೆ. ಅವರ ನೇತೃತ್ವದಲ್ಲಿ ಭಾರತವು ಕೀರ್ತಿ ದಶ ದಿಶೆಗಳಲ್ಲಿಯೂ ಹರಡಿ ವಿಂಧ್ಯಹಿಮಗಿರಿಗಳನ್ನೂ ತಿಯನ್ನೂ ಮೀರಲಿ!

(ವಿವಿಧ ಮೂಲಗಳಿಂದ)

—ಎಸ್. ಗೋಪಿಚಂದ ರಾವ್,
ಉಡುಪಿ.

THE
CANARA INDUSTRIAL & BANKING SYNDICATE LTD.
Estd.: 1925. H. O.: UDIPI, S. India.

GROWING
RESOURCES
as on
31-12-1926 - Rs. 17,355
31-12-1936 - Rs. 35,45,544
31-12-1946 - Rs. 4,26,07,093
31-12-1956 - Rs. 10,64,10,312

THANKS
to
our thousands of customers all over the country for their confidence and good-will.

T. A. PAI, B. Com. (Bom.), All.B., F.R.E.S. (Lond)
General Manager.

DR. T. M. A. PAI, M. B., B. S.,
Managing Director.

## ಕಾಂಗ್ರೆಸಿಗರಿಗೆ ಹಿತೋಕ್ತಿ

### ಜನತೆಯಿಂದ ದೂರ ಸರಿಯಬಾರದು. ಕರ್ತವ್ಯ ದಕ್ಷತೆಯೇ ಪ್ರಾಮುಖ್ಯ.

ಇದೇ ತಿಂಗಳ ಪ್ರಥಮ ದಿನಾಂಕದಂದು ಅಖಿಲ ಭಾರತೀಯ ಕಾಂಗ್ರೆಸ್ ಅಧ್ಯಕ್ಷರು ಸಕಲ ಪ್ರದೇಶ ಕಾಂಗ್ರೆಸ್ ಸಮಿತಿಗಳ ಅಧ್ಯಕ್ಷ ಮತ್ತು ಕಾರ್ಯದರ್ಶಿಗಳ ಸಮ್ಮೇಳನವೊಂದನ್ನು ಕರೆದಿದ್ದರು. ಈ ಸಮ್ಮೇಳನದಲ್ಲಿ ಭಾರತೀಯ ಕಾಂಗ್ರೆಸ್ ಅಧ್ಯಕ್ಷ ಶ್ರೀ ಯು. ಎನ್. ದೇಭಾರರು ಕಾಂಗ್ರೆಸನ್ನು ಬಲಪಡಿಸುವ ಕುರಿತಾಗಿ ವಿಚಾರವಿನಿಮಯ ಮಾಡಿ, ಕಾಂಗ್ರೆಸ್ಸಿಗರು ಅಧಿಕಾರ ಲಾಲಸಿಗಳಾಗಿ ಆಧೋಗತಿಯ ಮಾರ್ಗವನ್ನು ಹಿಡಿದಿರುವ ವಿಚಾರವನ್ನು ಸ್ಪಷ್ಟೀಕರಿಸಿದರು. ಇವರ ಉಪದೇಶ ಭಾಷಣವು ಗುಪ್ತವಾಗಿ ಜರಗಿದ್ದು ಮೊನ್ನೆ ಮೊನ್ನೆ ಅದರ ಸಾರವು ಅಖಿಲ ಭಾರತ ಕಾಂಗ್ರೆಸ್ ಸಮಿತಿಯಿಂದ ಪ್ರಕಟವಾಗುವ 'ಇಕನಾಮಿಕ್ ರಿವ್ಯೂ' ಪತ್ರಿಕೆಯಲ್ಲಿ ಪ್ರಸಿದ್ಧವಾಗಿದೆ. ಶ್ರೀಮಾನ್ ದೇಭಾರರ ಸಮಯೋಚಿತ ಹಾಗೂ ಮನನೀಯವಾದ ಭಾಷಣವು ಕಾಂಗ್ರೆಸ್ಸಿಗರಲ್ಲಿ ಯೋಗ್ಯ ರೀತಿಯಲ್ಲಿ ಪರಿಣಾಮವನ್ನು ಮಾಡಿದರೆ, ದೇಶದಲ್ಲಿ ಈ ಮೊದಲಿನಂತೆಯೇ ಕಾಂಗ್ರೆಸ್ ತನ್ನ ಘನತೆಯನ್ನು ಇರಿಸಿಕೊಳ್ಳಬಹುದು. ಇಲ್ಲವಾದರೆ, ಇಂದಿನಂತೆ ಸ್ವಾರ್ಥ ಮನೋವೃತ್ತಿಯನ್ನೇ ಮೂಲವಾಗಿಟ್ಟುಕೊಂಡು ಮುನ್ನಡೆದರೆ ಕಾಂಗ್ರೆಸ್ ಇಳಿಮುಖವಾಗುವುದರಲ್ಲಿ ಸಂಶಯವಿಲ್ಲ.

ಗೌರವ, ಸಮಾಧಾನ ಮತ್ತು ಸುಖಗಳನ್ನು ಗೌಣವೆಂದು ತಿಳಿದುಕೊಳ್ಳಲಾರದ ಯಾವುದಾದರೊಂದು ಪಕ್ಷವು ನಿರ್ಮೂಲಗೊಳ್ಳಲು ಸನ್ನದ್ಧವಾಗಬೇಕು. ಚಲನೆ, ಅಥವಾ ಶಕ್ತಿ, ಮತ್ತು ಸಮಾಧಾನ ಅಥವಾ ಸುಖಗಳು ಒಂದು ಪಕ್ಷವನ್ನು ಆನಾರೋಗ್ಯಕ್ಕೆ ಗುರಿ ಮಾಡುತ್ತವೆ. ಭಾರತೀಯ ರಾಷ್ಟ್ರೀಯ ಕಾಂಗ್ರೆಸಿಗೆ, ಸ್ವಾತಂತ್ರ್ಯ ಪ್ರಾಪ್ತಿಯಾದ ಮೇಲೆ ಏನೋ ಸ್ವಲ್ಪ ರೋಗ ಬಂದಂತಾಗಿದೆ. ನಾವು ನಮ್ಮ ಕರ್ತವ್ಯಗಳಿಂದ ಹಿಂದುರಿಯುತ್ತಿದ್ದೇವೆ ಎಂಬ ಭಾವನೆಯು ನಿಧಾನವಾಗಿಯಾದರೂ ಅವ್ಯಕ್ತವಾಗಿ ಜನರ ಮನಸ್ಸಿನಲ್ಲಿ ನೆಲೆಮಾಡುತ್ತಾ ಇದೆ. ಜನರು ನಮ್ಮಿಂದ ದೂರ ಹೋಗುವುದರಲ್ಲಿ ಯಾವ ಆಶ್ಚರ್ಯವಿಲ್ಲ. ಕಾಂಗ್ರೆಸಿಗರು ನಮ್ಮ ಕರ್ಮಚಾರಿಗಳಿಗೆ ಆ ಕರ್ತವ್ಯಗಳನ್ನು ಹೊರುವಂತೆ ತರಬೇತಿಯನ್ನು ಬೇಕಾಗಿದೆ. ಕಮ್ಯೂನಿಸ್ಟ್ ಮತ್ತು ಜನಸಂಘದವರನ್ನು ಮಾತ್ರ ನಾವು ಎದುರಿಸಬೇಕೆಂದು ತಿಳಿದರೆ ಅಲ್ಲಿಗೇನೇ ನಮ್ಮ ಕರ್ತವ್ಯ ಮುಗಿಯಲಿಲ್ಲ. ನಮ್ಮ ನಡೆವಳಿಕೆ ಮತ್ತು ಸಂಘಟನಾ ಕಾರ್ಯಗಳಲ್ಲಿ ತಲೆಹಾಕುವ ಪೈಗಳು ತನಕ್ಕೆದುರಾಗಿ ಯುದ್ಧ ಹೂಡಬೇಕಾಗಿದೆ. ನಾನಾ ರಾಜ್ಯಗಳ ವಿಧಾನ ಸಭೆಯ ಮುಖಂಡನನ್ನು ಉರಿಸುವುದಕ್ಕೆ ಪೊಲೀಸಾಗಿಯೇ ಮಂತ್ರಿ ಹುದ್ದೆಗಳನ್ನು ಹುಡುಕುತ್ತಾ ಅನೇಕ ವಿಧಾನ ಸಭಾಸದ್ಯರು ತಿರುಗುತಿದ್ದಾರೆ. ಪಂಡಿತ ನೆಹರೂರವರು ಹಿಂದೊಮ್ಮೆ ನುಡಿದಂತೆ ತಮ್ಮ ಸಂಘಟನಾ ಶಕ್ತಿಗೆ ಮುಂದಿನೆರಡು ವರ್ಷಗಳು ಸಂಕಟಮಯವಾಗಿದೆ ಎನ್ನದೆ ಗತ್ಯಂತರವಿಲ್ಲ." ಎಂದು ಸಂಘಟನೆ ಮತ್ತು ಕಾರ್ಯತೀಲರಾಗುವಂತೆ ಕಾಂಗ್ರೆಸಿಗರಿಗೆ ತಿಳಿಸಿದರು.

ಜಾತೀಯತೆ ಮತ್ತು ಮತೀಯತೆಯು ಎದುರಾಗಿ ಹೋರಾಡುವಂತೆ ಕಾಂಗ್ರೆಸ್ಸಿಗರಿಗೆ ಕರೆಗೊಡುತ್ತಾ ಶ್ರೀ ದೇಭಾರರು ಕಮ್ಯೂನಿಸಮಿನ ಎದುರಾಡುವಂತೆ ಕೇಳಿಕೊಂಡರು "ಸಮಾಜಗಳಿಂದ ಕೂಡಿದ ಜೀವನವನ್ನೇ ಕಾಂಗ್ರೆಸ್ ಇದುವರೆಗೆಬಾಳಿದೆ. ನಾವು ಪ್ರಾಪಂಚಿಕ ಅಥವಾ ಕೇಂದ್ರ ಕಾರ್ಯಾಲಯಗಳಿಗೆ ಯೋಗ್ಯ ವ್ಯವಸ್ಥೆಯನ್ನು ಮಾಡದಿದ್ದಿರಬಹುದು. ಕಾರ್ಯಾಲಯಗಳನ್ನು ಸ್ಥಾಪಿಸಿಕೊಳ್ಳುವುದು ಒಳ್ಳೆಯದೇ. ಕಾಂಗ್ರೆಸ್ಸು ಬಂಡೆ ಕಲ್ಲಿನಿಂದಾಗಲಿ, ಅಮೃತ್ತಶಿಲೆಯಿಂದಾಗಲೀ ಕಟ್ಟಿದ ಸಂಸ್ಥೆಯಲ್ಲ. ಕೆಲವು ತಲೆಮಾರುಗಳ ತ್ಯಾಗಗಳಿಂದಲೇ ಅದು ನಿರ್ಮಾಣವಾಗಿದೆ. ಮತ್ತು ಅಂತಹ ತ್ಯಾಗಶೀಲ ಕಾಂಗ್ರೆಸ್ಸನ್ನೇ ನಾವೂ ಇಂದು ಪಡೆದಿದ್ದೇವೆ. ಜೊತೆಗೆ ನಮಗೆ ಜವಾಬ್ದಾರಿಯೂ ದೊರೆಯಿತು. ಕಷ್ಟಕಾರ್ಯವನ್ನು ಮಾಡುವುದಕ್ಕೆ ನಾವು ಅಂಜುವ ಕಾರಣವಿಲ್ಲ. ಒಬ್ಬ ಕಾಂಗ್ರೆಸ್ಸಿಗನು ಕಾಂಗ್ರೆಸ್ಸಿಗನಾಗದೆ ಇದ್ದಾಗ ಮಾತ್ರದಿಷ್ಟಾಡಂಬರಾಗಬೇಕಾಗಿದೆ. ನಾವು ಸದಾಕಾಲವೂ ಕಾರ್ಯಶೀಲರಾಗಿದ್ದೇವೆ. ಆದರೆ, ನಮ್ಮ ಕಾರ್ಯಕಲಾಪಗಳು ಕೇವಲ ಜನತೆಯ ಹೃದಯ ಮತ್ತು ಮನಸ್ಸನ್ನು ಒಲಿಸಿಕೊಳ್ಳುವಷ್ಟರ ಮಟ್ಟಿಗೆ ನೂತ್ರ ಇದ್ದು ಯಾಂತ್ರಿಕವಾಗಿದೆ. ನಮ್ಮ ಸಮರದ ಸಾರವು ಜನತೆಯ ನಂಬುಗೆ ಮತ್ತು ವಿಶ್ವಾಸಗಳು. ಕ್ರಾಂತಿಯು ಅದರ ಬೀಜವನ್ನು ಬಿತ್ತಿದವರ ಕೈತಪ್ಪಿ ಇವರನ್ನೇ ನಾಶಮಾಡಬಹುದು. ನಾವು ನಮ್ಮ ಕೈಯಿಂದಲೇ ಈ ಕ್ರಾಂತಿಯು ಜಾರಿಬೀಳಬಹುದಾದ ಸ್ಥಿತಿಯಲ್ಲಿ ಬದ.ಕಿದ್ದೇವೆ. ನಮ್ಮ ಸಂಸ್ಥೆಯು ಮೇಲೆ ಜನತೆ ಇಟ್ಟಿರುವ ವಿಶ್ವಾಸವನ್ನು ಅಥವಾ ಸಂಸ್ಥೆಯು ತನ್ನ ಧ್ಯೇಯವನ್ನು ಕಳೆದುಕೊಳ್ಳಬಹುದೆಂದು ನಾನು ಹೆದರುತ್ತೇನೆ; ಇದು ನಮ್ಮೆಲ್ಲರಿಗೂ ನಿಮಗೆ ಕೂಡಾ ದುಃಖದಾಯಕವಾದ ಸಂಗತಿಯೆಂದು ತಿಳಿಯುತ್ತೇನೆ."

"ನಾವು ಹಿಂದಿನಂತೆಯೇ ಸಮರ ಶೀಲರಾಗಿ, ಕಾರ್ಯ ಪ್ರವೃತ್ತರಾಗಬೇಕು. ನಮ್ಮ ಚೇತನವನ್ನು ಒಡಿದೆಬ್ಬಿಸಿ ಉಲ್ಲಸಿತರಾಗಬೇಕು. ನಮ್ಮ ಸಮಾಜದ ಪ್ರತಿಯೊಬ್ಬನನ್ನೂ ಪ್ರತಿಯೊಂದು ರಾಜ್ಯವನ್ನೂ ನಾವು ಮುಟ್ಟಬೇಕಾಗಿದೆ. ನಾವು ಅವರನ್ನು ವಿವಿಧವಿಧಾನಗಳಿಂದ ಸಮೀಪಿಸಬೇಕಾಗಿದೆ. ಮಾನವಜೀವಿಯು ನಾನಾ ವಿಧವಾಗಿ, ಸಾಂಸ್ಕೃತಿಕ ಜಟುವಟಿಕೆಗಳಿಂದ, ಆಟಗಳಿಂದ, ಸಂಗೀತದಿಂದ, ಕಾಯಕಷ್ಟದಿಂದ, ಕೃಷಿಕಾರ್ಯದಿಂದ ಕಾರ್ಖಾನೆಗಳಿಂದ ತನ್ನನ್ನು ಪ್ರಕಾಶಪಡಿಸಿಕೊಳ್ಳುತ್ತಾನೆ ಕಾಂಗ್ರೆಸಿನ ಶಿಥಿಲವಾದ ಗಂಟಿಗಳನ್ನು ನಾವು ಜನರ ಪ್ರೇರಣೆಗಳಿಂದಾಗಿ ಬಂಧಿಸಬೇಕಾಗಿದೆ. ಎಲ್ಲಾ ವಿಧದ ತಪ್ಪು ತಿಳುವಳಿಕೆ ವಿಶ್ವಾಸ ಕ್ಷೋಭಾ ಸಹಿತವಾದ ಸುನೋಯಿಕಾರಗಳನ್ನು ತೆಡೆದು ನಿಲ್ಲಿಸುವಷ್ಟು ಬಲಶಾಲಿಯಾಗಬೇಕಾಗಿದೆ. ಕಳೆದ ಒಂದು ಶತಮಾನದ ಹಿನ್ನೆಲೆಯಿಂದ ನಾವು ಕೆಲಸ ಮಾಡುತಿದ್ದೇವೆ. ಜನತೆಗೆ ಅದನ್ನು ಬದಲಾಯಿಸುವುದು ಅಷ್ಟು ಸುಲಭ ಸಾಧ್ಯವಲ್ಲ. ನಾವು ಯಾವ ಹಿನ್ನೆಲೆಯಲ್ಲಿ ನಡೆಯುತಿದ್ದೇವೆಯೋ ಆ ಕಡೆಗೆ ಜನತೆಯ ಪ್ರತಿಕ್ರಿಯೆಗಳನ್ನು ನಾವು ಲಕ್ಷಿಸುತ್ತಿರಬೇಕು. ಕೆಲ ಕ್ಷಣಗಳಿಗಾಗಿ, ಅವರು ನಮ್ಮಿಂದ ದೂರ ಹೋಗಬಹುದು. ಸಂಸ್ಥೆಯ ಜೀವಂತ ಗೊಣಸುಗಳು ಶ್ರೀಯುತ ಹಾಗೂ ಯುವಕರಲ್ಲದೆ ಕಾಗದದ ತುಂಡುಗಳಲ್ಲ ಎಂದು ಶ್ರೀ ದೇಭಾರರು ಸ್ಪಷ್ಟಪಡಿಸಿದರು.

ಕೇರಳ ಮತ್ತು ಮಹಾರಾಷ್ಟ್ರಗಳಲ್ಲಿ ಕಾಂಗ್ರೆಸ್ಸಿಗರಂಟಾದ ಸೋಲನ್ನು ಪುನಾತ್ಪಾಪಿಸುತ್ತಾ ಶ್ರೀ ದೇಭಾರರು ಕೇರಳವು ಪೇಚ ಮರೆಯಿಸಿ ಕಾಂಗ್ರೆಸಿಗರಿಗೆ ಒಲಿಯುತ್ತದೆ ಎಂಬ ಆಭಿಪ್ರಾಯಕ್ಕೆ ತಮ್ಮ ಒಪ್ಪಿಗೆಯನ್ನಿತ್ತರು ಜನತೆಗೆ ನಮ್ಮ ಕಾರ್ಯಕಲಾಪಗಳು ಸ್ವೀಕರಣೀಯವಲ್ಲ ನಾದರೆ, ತಾವು ಅಧಿಕಾರದಿಂದ ಕೆಳಗಿಳಿಯುತ್ತೇವೆ ಎಂದು ಅವರಿಗೆ ತಿಳಿಯಬೇಕು ಎಂದು ಅಭಿಪ್ರಾಯಪಟ್ಟರು.

ಬೊಂಬಾಯಿಯ ಸಮಸ್ಯೆಯನ್ನು ಉದಾಹರಿಸುತ್ತಾ ಅಲ್ಲಿನ ಹಿಂಸಾಚರಣೆಯೇ ತನ್ನ ಮನಸ್ಸನ್ನು ನೋಯಿಸಿತೆಂದರು. "ಅಲ್ಲಿ ಕಾಂಗ್ರೆಸ್ಸಿಗರುಂಟಾದ ಸೋಲಿಗಾಗಿ ಯಾರೂ ವ್ಯಥೆಪಡುವುದಿಲ್ಲ; ಅಲ್ಲಿ ನಡೆದ ಹಿಂಸಾಚರಣೆಯೇ ಎಲ್ಲರ ಹೃದಯವನ್ನು ಆಳುವಂತೆ ಮಾಡುತ್ತದೆ. ಸ್ವಾತಂತ್ರ್ಯ ಹೋರಾಟದ ವೇಳೆಯಲ್ಲೂ ಅನೇಕ ಬಾರಿ ಕಾಂಗ್ರೆಸ್ ಸೋತಿದೆ. ಇನ್ನು ಮುಂದಕ್ಕೂ ನಮ್ಮ ಆಡಳಿತೆಯು ಸ್ವೀಕಾರಾರ್ಹವಲ್ಲವಾದರೆ, ನಾವು ಅಧಿಕಾರತ್ಯಾಗ ಮಾಡಲೇ ಬೇಕಾಗಿದೆ. ಅವಮಾನೆ ಮತ್ತು ಘನತೆಗಳಿಂದ ಏಳುವುದಾಗಲಿ, ಬೀಳುವುದಾಗಲೀ ಆಗದೆ ಒಂದು ಪಕ್ಷವು ಅದನ್ನು ಹಿಂಬಾಲಿಸುವುದು ಸೂಕ್ತವಲ್ಲ" ಎಂದು ಛೇಬಾರರು ಅಭಿಪ್ರಾಯಪಟ್ಟರು.

ಸುಖ, ಲೋಲುಪತೆಗಳಿಂದ ಸಮಾಧಾನ ಪಟ್ಟುಕೊಂಡ. ಕಾರ್ಯ ವಿಮುಖರಾಗದೆ, ಜನತೆಯ ನಾನಾ ವರ್ಗದವರೊಡನೆಯೂ ನಿಕಟ ಸಂಪರ್ಕವನ್ನಿಟ್ಟುಕೊಂಡು, ಸ್ವಾರ್ಥತ್ಯಾಗ, ಸೇವೆಗಳನ್ನೇ ಮುಖ್ಯ ಧ್ಯೇಯವಾಗಿಟ್ಟುಕೊಂಡರೆ, ಕಾಂಗ್ರೆಸ್ ಮುಂದೆಯೂ ಯೋಗ್ಯ ಬಲವಂತ ಪಕ್ಷವಾಗಿ ಬಾಳಿಬಾಳಬಲ್ಲುದು. ಸಮಸ್ತ ಕಾಂಗ್ರೆಸ್ ಕಾರ್ಯಕರ್ತರು ಶ್ರೀ ದೇಭಾರರವರ ಹಿತೋಕ್ತಿಯತ್ತ ಗಮನ ವೀಯುವುದು ಮಾತ್ರವಲ್ಲದೆ, ಕಾರ್ಯ ಪ್ರವೃತ್ತರಾಗಲಿ.

---

## ಹಾರುತಿದೆ ನೋಡಲ್ಲಿ, ಕಂನಾಡ ಬಾವುಟ!

ಹಾಡಿ ಹರಿವುದು ನೋಡು
ನಾಡ ದೇವಿಯ ಕೂಡು
ಕೀರ್ತಿ ಭಾಗ್ಯದ ಬೀಡು
ಹಾರುತಿದೆ ನೋಡು!

ನೀಲ ಗಗನದ ಕಿರಣ ವಿಶ್ವಮಾತೆಯು ಚರಣ
ಕೀರ್ತಿ ಶಿಖರಿಯು ಅರುಣ ಬಹುಭಾಗ್ಯ ಧರಣ
ಶಾಂತಿ ಐಕ್ಯದ ಸದನ ಭರತ ಮಾತೆಯು ವದನ
ನಾಡ ಮುಡಿಪಿನ ಗಣನೆ ವರ ಪ್ರೇಮ ನಲಿನ
ಶಾಂತಿ ಸೌಖ್ಯ ಪ್ರಭಾತ ದಿವ್ಯಶಕ್ತಿ ಪ್ರಥಾತ
ವೀರ ಧರ್ಮ ಪ್ರತೀಕ ನಿತ್ಯ ಶುಭ ಗೀತ
ವಿಶ್ವ ವಿದಿತ ವಿಜೇತ ಪ್ರೇಮ ಸಲಿಲ ಪುನೀತ
ದೇವ ಜನ್ಮ ಪ್ರಸೂತ ವರಶಾಂತಿ ದೂತ.
ಜನಗಣದ ಹರಿಕಾರ ಮಾತೆಯ ಮಡಿಗಳ ಪಾರ
ವಿಜಯ ವೈಭವ ಪೂರ ಹರಿಯುತಿದೆ ನೂರ!
ನಾಡ ನಾಕದ ದಾರ ದೇವ ಗಂಗೆಯ ತೀರ
ಚಾರು ಮಾಣಿಕ ಹಾಸ ಇದಕೆಲ್ಲಿ ಪಾರ?
ಭವ್ಯ ಧರ್ಮದ ಬಿಂಬ ವಿಜಯ ಕಲಶದ ರಂಭ
ಹೊಳೆವ ಚೆಲುವಿನ ಕಂಭೆ ಕೀರ್ತಿ ಕಾವಂಬ
ಪೀತ ಕಾಂತಿಯ ಕುಂಭ ಕೋಟಿ ಹೀರಕ ಸ್ತಂಭ
ನಾಡಗುಡಿ ಸೌರಂಭ ನೋಡು ಹೊನ್ನಂಬ!

**ಕೆ. ತಿಮ್ಮಪ್ಪ ಗಟ್ಟಿ, ಪೆರಡಾಲ**


ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ

ಆನಂದ ಸುಧ




ನಮ್ಮ "ಆನಂದ ಸುಧ" ಸಮಸ್ತ ಜನಗಳಿಗೆ ಬಲವನ್ನು ಖಂಡ ಪುಷ್ಟಿಯನ್ನು ಹೆಚ್ಚಿಸುವುದು. ಅನೇಕ ವ್ಯಾಧಿಗಳನ್ನು ನಾಶಪಾಡುತ್ತೆ. ೧೫ ದಿನಗಳಿಗೆ ಸರಿಹೋಗುವ ಲ ಔನ್ಸ್ ಸೀಸೆ ೧ಕ್ಕೆ ರೂ. ೩—೦—೦.

**ನಮ್ಮ ಸ್ವಾಕಿಸ್ಟರು:**

(1) ಸುದರ್ಶನ ಆಯುರ್ವೇದ ವೈದ್ಯಶಾಲಾ— ಬೆಂಗಳೂರು 2.
(2) ಷಾ ಕಂಪೆನಿ—ಮಂಗಳೂರು 1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ್— ಚಿಂತಾಮಣಿ.

## ರಾಷ್ಟ್ರೀಯ ಸಾಹಿತ್ಯ

# ೧೮೫೭ರ ಸ್ವಾತಂತ್ರ್ಯ ಹೋರಾಟದ ಕಥೆ

ಒಂದು ನೂರು ವರ್ಷಗಳಿಗೆ ಮೊದಲು ಭಾರತದಲ್ಲಿ ಬ್ರಿಟಿಷರ ವಿರುದ್ಧವಾಗಿ ನಡೆಯೆದ್ದ ಭಾರತೀಯರ ಪ್ರಥಮ ಸ್ವಾತಂತ್ರ್ಯ ಯುದ್ಧವನ್ನು "ಸಿಪಾಯಿ ದಂಗೆ" ಎಂದು ಕರೆಯುವುದು ಸಂಪ್ರದಾಯವಾಗಿದೆ. ಈ ಬಂಡಾಯಕ್ಕೆ ಜನ ಬೆಂಬಲವಿರಲಿಲ್ಲವೆಂದೂ ಕೇವಲ ಕೆಲವೊಂದು ಸಿಪಾಯಿಗಳ ಮಷಲತ್ತಾಗಿತ್ತೆಂದೂ, ಭಾರತದಲ್ಲಿ ಸಾಮಂತವಾದೀ ರಾಜರ ಅಡಳಿತವನ್ನು ಸುನಃ ಸಂಸ್ಥಾಪಿಸುವುದಕ್ಕೆ ಆ ರಾಜರು ಮಾಡಿದ ಪ್ರಯತ್ನವೇ ಅದಾಗಿತ್ತೆಂದೂ ಬ್ರಿಟಿಷ ಇತಿಹಾಸಕಾರರು ನಿರೂಪಿಸಿದ್ದಾರೆ. ನಮ್ಮ ಶಾಲಾ ಕಾಲೇಜುಗಳಲ್ಲಿಯೂ ಈ ಭಾವನೆಯನ್ನೇ ನಮ್ಮ ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ.

ಆದರೆ, ನಿಜವಾಗಿ ಆದೊಂದು ಕೇವಲ ತಿರುಗುಪ್ಪಲ್ಲ. ಬ್ರಿಟಿಷ್ ಆಡಳಿತದ ಬಗ್ಗೆ ಭಾರತೀಯ ಜನತೆಯಲ್ಲಿ ಹುಟ್ಟಿಕೊಂಡ ಅಸಂತೃಪ್ತಿಯ ಜ್ವಾಲೆಯಾಗಿಯೇ ಅದು ಹುಟ್ಟಿಕೊಂಡಿತ್ತು. ಬ್ರಿಟಿಷರನ್ನು ಭಾರತದಿಂದ ಹೊಂಗೋಡಿಸುವುದೇ ಆ 'ಬಂಡಾಯಗಾರರ' ಉದ್ದೇಶವಾಗಿತ್ತು ಎಂಬ ಸತ್ಯಸ್ಥಿತಿಯನ್ನ ತಿಳಿದುಕೊಂಡು, ಈ 'ಬಂಡಾಯ'ವನ್ನೇ ಮೂಲವಸ್ತುವಾಗಿ ಒಂದು ದೊಡ್ಡ ಕಾದಂಬರಿಯನ್ನು ಬರೆದು, ಜಗತ್ತಿಗೆ ಸತ್ಯದರ್ಶನ ಮಾಡಿದ ಕೀರ್ತಿ ಶ್ರೀಮತಿ ಎಮ್ಮಾ ಮೈಗೋದ್ ಸಾಧ್ವಿಯಾ ಇವರಿಗೆ ಸೇರಬೇಕು. ಈಕೆ ೧೮೫೭-೫೯ರ ವರೆಗಿನ 'ರಾಷ್ಟ್ರೀಯ ವಿನೋಚನಾ ಚಳವಳಿ'ಯನ್ನು ಇತಿಹಾಸ ಮತ್ತು ಸಾಹಿತ್ಯದ ಅಗಾಧ ಅನುಭವಗಳಿಂದ ಈ ಕಾದಂಬರಿಯನ್ನು ಬರೆದಿದ್ದಾರೆ. ಜನತೆಯಿಂದ ಅಭೂತಪೂರ್ವ ಸ್ವಾಗತವು ಈ ಹೊತ್ತಗೆಗೆ [illegible]ದೊರೆಯಿತು. ೧೯೫೫ರಲ್ಲಿ ನಡೆದ ಮಕ್ಕಳ ಸಾಹಿತ್ಯ ಸ್ಪರ್ಧೆಯಲ್ಲಿ ಇದು ಬಹುಮಾನವನ್ನೂ ಪಡೆಯಿತು. ಈ ಕಾದಂಬರಿಯೇ 'ಅವಾಯಕಾರೀ ಪಲಾಯಿತ' ಎಂಬುದು.

ಈ ಭಾರತೀಯ ಐತಿಹಾಸಿಕ ಕಾದಂಬರಿಯನ್ನು ಶ್ರೀಮತಿಯವರು ೧೯೫೫ರಲ್ಲಿಯೇ ಬರೆಯಲು ಪ್ರಾರಂಭಿಸಿಯೆದ್ದರು. ಆದಕ್ಕಾಗಿ ಬೇಕಾಗುವ, ಆಧಾರ, ಇತಿಹಾಸ ಹಾಗೂ ಇನ್ನಿತರ ವಿಷಯಗಳನ್ನು ಕೂಡ ಹಾಕಿದ್ದರು. ಆದರೆ, ದ್ವಿತೀಯ ಲೋಕ ಯುದ್ಧದ ದೆಸೆಯಿಂದ, ಅವರು ಈ ಕಾದಂಬರಿಯನ್ನು ಮುಂದುವರಿಸಲು ಅಸಾಧ್ಯೆಯಾದರು. ಆವರಲ್ಲಿ ತುಂಬಿದ್ದ ಮಹಾ ದೇಶಾಭಿಮಾನವೇ ಇದಕ್ಕೆ ಕಾರಣವಾಗಿತ್ತು.

ಯುದ್ಧ ಮುಗಿದು, ವಾತಾವರಣ ತಿಳಿಗೊಳ್ಳುತಿದ್ದಾಗ, ಅಂದು ಕಟ್ಟಿಟ್ಟ ಗಂಟನ್ನು ಬಿಚ್ಚಿದರು. ಅವಿರತ ಶ್ರಮದಿಂದ, ೧೯೪೭ರಲ್ಲಿ, ಭಾರತವು ತನ್ನ ೯೦ ವರ್ಷಗಳ ಸ್ವಾತಂತ್ರ್ಯ ಸಮರದಲ್ಲಿ ಜಯಪ್ರಾಪ್ತಿಯನ್ನು ಪಡೆದ ವರ್ಷದಲ್ಲಿ, ಈ ಕಾದಂಬರಿಯನ್ನು ಬರೆದು ಮುಗಿಸಿದರು. ೧೯೫೭—ಈ ಬಂಡಾಯಕ್ಕೆ ಕಂಬಂಧಿಸಿದ ಸಕಲ ಸಂಗತಿಗಳನ್ನು ಆಭ್ಯಸಿಸಿ, ಪ್ರಾರಂಭದ, ದಿಲ್ಲಿಯ ಪತನದೊಂದಿಗೆ ಕೊನೆಗಾಣುವ ಬಂಡಾಯವನ್ನು ಸತ್ಯ ಪೂರ್ಣವಾಗಿ ತಮ್ಮ ಈ ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ.

ಬ್ರಿಟಿಷರು ತಮ್ಮ ವಿರುದ್ಧ ದಂಗೆಯೆದ್ದುದು, ಅಸಂತೃಪ್ತಿಯಿಂದಲ್ಲ, ಕೇವಲ ಆ ಕಾಲದಲ್ಲಪ್ಪೇ ಪ್ರಚಾರಕ್ಕೆ ಬಂದ "ತೋಟಿ" ಸಂಬಂಧದಲ್ಲಿ. ಹಂದಿಯ ಮಾಂಸವನ್ನು ಉಪಯೋಗಿಸುವುದು, ಮತ್ತು ಅದನ್ನು ಕಚ್ಚಿ ಎಳೆಯಬೇಕಾದುದು ಇವು ತಮ್ಮ ಧರ್ಮಕ್ಕೆ ವಿರುದ್ಧವಾದುದರಿಂದ ದಂಗೆಯೆದ್ದರು ಎಂದು ಅಧಿಕೃತವಾಗಿ ದಾಖಲೆಗೊಳಿಸಿದ್ದಾರೆ. ಆದರೆ, ಇದು ಕೇವಲ ತೋರಿಕೆಯ ಕಾರಣವಾಗಿತ್ತು ಮಾತ್ರ. ಆದರೆ, ಕೆಲವು ಭಾರತೀಯರಲ್ಲಿ ಬ್ರಿಟಿಷರ ಬಗೆಗೆ ಬೆಳೆದು ಬಂದ ಜಿಗುಪ್ಸೆ, ತಾತ್ಸಾರ ಹಾಗೂ ಸ್ವದೇಶಾಭಿಮಾನಗಳೇ ಮೂರ್ತಿವೆತ್ತಂತೆ ಆ 'ದಂಗೆ'ಯು ಹುಟ್ಟಿತು, ಬೆಳೆಯಿತು. ಕೊನೆಗೆ ಬ್ರಿಟಿಷರ ಬಲದೊಡನೆ ಸೆಣಸಲಾರದೆ ಮುರಿಯಿತು.

"ಅವಾಯಕಾರೀ ಪಲಾಯಿತ" ಕಾದಂಬರಿಯು ಬಂಡಾಯದ ನಾಯಕರಲ್ಲೊಬ್ಬರಾಗಿದ್ದ ಸಿಪಾಯಿ ಈಶ್ವರ ಪಾಂಡೇ ಮತ್ತು ಆತನ ಪುತ್ರಿ ಲೀಲಾ ಇವರ ವಿಧಿಯ ಸುತ್ತಲೂ ಹೆಣೆಯಲ್ಪಟ್ಟಿದೆ. ಬ್ರಿಟಿಷರಿಂದ ನಡೆಯುತ್ತಿದ್ದ ಕ್ರೂರ ವಸಾಹತುವಾದೀ ಶೋಷಣೆಯ ಪರಿಣಾಮವಾಗಿ ದೇಶದಲ್ಲಿ ಸಾರ್ವತ್ರಿಕ ಪರಿಸ್ಥಿತಿಯು ತೀಕ್ಷ್ಣವಾಗಿ ಹದಗೆಟ್ಟ ಕಾರಣದಿಂದ ಈ ಬಂಡಾಯವು ಉದ್ಭವಿಸಿತೆಂದು ಈಕೆ ತನ್ನ ಕಾದಂಬರಿಯಲ್ಲಿ ಹೇಳಿದ್ದಾರೆ. ಆ ಕಾಲದ ದೇಶೀಯ ಪರಿಸ್ಥಿತಿಯನ್ನು ಲೇಖಕಿಯವರು ಜೀವನ್ತವಾಗಿ ವರ್ಣಿಸಿದ್ದಾರೆ.

ಭಾರತದ ಬೆನ್ನೆಲುಬಾದ ಕೃಷಿಕರ ಅಸಂತೋಷದಿಂದ ಹೊಮ್ಮಲಾದ ಈ ಕಾದಂಬರಿಯಲ್ಲಿ ವಿಸ್ತಾರವಾಗಿ ಬಂಡಾಯವನ್ನು ವರ್ಣಿಸಲಾಗಿದೆ. ಅಲ್ಲಿಂದ ನಾನಾ ತರದ ಯುದ್ಧಗಳನ್ನು, ಸಲಾಯನ ಹಾಗೂ ಪುನರ್ಯುದ್ಧಗಳನ್ನು, ಕೋಟೆಕಾಳಗಗಳನ್ನು ಹೃದಯಂಗಮವಾಗಿ ವರ್ಣಿಸಿ, ಅಲ್ಲಲ್ಲಿ ದೇಶೀಯರ ದೇಶಾಭಿಮಾನವನ್ನೂ, ಬ್ರಿಟಿಷ ಸೇನಾಧಿಕಾರಿಗಳ ಬಲಪ್ರಯೋಗವನ್ನೂ ನಿರೂಪಿಸುತ್ತಾರೆ. ದಿಲ್ಲಿ ಕೋಟೆಗಾಳಗದಲ್ಲಿ ದಿಲ್ಲಿಯ ರಕ್ಷಕರು ವೀರೋಚಿತ ಹೋರಾಟವನ್ನು ನಡೆಸಿದುದರೊಡನೆ ಈ ಕಾದಂಬರಿಯು ಮುಕ್ತಾಯಗೊಳ್ಳುತ್ತದೆ. ಬ್ರಿಟಿಷರಿಗೆ ದಿಲ್ಲಿ ನಗರವು ಕೈವಶವಾದ ತರುವಾಯ ಜೀವಂತರಾಗಿದ್ದ ಬಂಡಾಯಗಾರರು ಯಮುನಾ ನದಿಯನ್ನು ದೋಣಿಯ ಮೂಲಕ ಪ್ರವಾಹಾಭಿಮುಖವಾಗಿ ಪ್ರಯಾಣಿಸಿ ತಪ್ಪಿಸಿಕೊಂಡರು. ಮುಂದೆ ಆಗ್ರಾ ನಗರದಲ್ಲಿ ಯುದ್ಧ ಮುಂದುವರಿಸುವ ಸೂಚನೆಯೊಂದು ಭಾರತದ ಮುಂದಿನ ಸ್ವಾತಂತ್ರ್ಯ ಸಮರಗಳಿಗೆ ನಾಂದಿಯಾಗಿ ಬಂದು ಕಾದಂಬರಿಯು ಕೊನೆಗೊಳ್ಳುತ್ತದೆ.

ಈ ಕಾದಂಬರಿಯಲ್ಲಿ ಬರುವ ವೀರರು ಭಾರತದ ಸಾಮಾನ್ಯ ಜನತೆಯೇ ಆಗಿದೆ. ಭಾರತೀಯ ಸಾಮಾನ್ಯ ಜನತೆಯೆರೋಷ ಹಾಗೂ ಅವರ ಸ್ಫೂರ್ತಿಯುಕ್ತ ಹೋರಾಟಗಳು ಸಿಪಾಯಿಗಳ ದಂಗೆಗೆ ಅಭೂತಪೂರ್ವವಾದ ವ್ಯಾಪ್ತಿಯನ್ನು ಒದಗಿಸಿ ರಾಷ್ಟ್ರೀಯ ವಿಮೋಚನಾ ಚಳುವಳಿಗೆ ರಾಷ್ಟ್ರೀಯ ಸ್ವರೂಪವನ್ನಿತ್ತು. ಈಶ್ವರ ಪಾಂಡೆ ಮತ್ತು ಚಂದ್ರಸಿಂಗ್ ಎಂಬಿಬ್ಬರು ಸಿಪಾಯಿಗಳ, ಈಶ್ವರ ಪಾಂಡೆಯ ಪುತ್ರಿ ಲೀಲಾಳ ಜೊತೆಗೂ ಆ ಸಮರದಲ್ಲಿ ದೇಶಕ್ಕಾಗಿ ತಮ್ಮ ಪ್ರಾಣವನ್ನರ್ಪಿಸಿದ ಸಹಸ್ರ ಸಂಖ್ಯೆಯ ಅನಾಮಧೇಯ ದೇಶಪ್ರೇಮಿಗಳ ಸುಂದರ ಮೂರ್ತಿಗಳು ನಮ್ಮೆದುರು ನಿಲ್ಲುವಂತೆ ಈ ಕಾದಂಬರಿಯಲ್ಲಿ ಚಿತ್ರಿತವಾಗಿವೆ. ಬ್ರಿಟಿಷರ ವಸಾಹತು ಧೋರಣೆಯ ಚಿತ್ರವನ್ನೂ ಇಲ್ಲಿ ಬಿಡಿಸಲಾಗಿದೆ. ಭಾರತೀಯ ಸಾಮಂತ ರಾಜರನ್ನು, ಶ್ರೀಮಂತರನ್ನು ಬಂಡಾಯವನ್ನು ಅಡಗಿಸುವುದಕ್ಕೆ ಉಪಯೋಗಿಸುವ ರೀತಿಯನ್ನೂ ಕೆಲ ಭಾರತೀಯ ಅರಸರು ಅದ್ಯಂತದವರೆಗೆ ಬ್ರಿಟಿಷರಿಗೆ ನೆರವಾದುದನ್ನೂ, ವಸಾಹತುವಾದಿಗಳು ಹಿಂದೂ ಮುಸ್ಲಿಮ ಭೇದವನ್ನು ಬಿತ್ತಿದುದನ್ನೂ ಈ ಕಾದಂಬರಿಯು ವರ್ಣಿಸಿದೆ.

ಲೇಖಕಿಯವರ ತಿಳಿ ಹಾಸ್ಯ ಯುಕ್ತ ಶೈಲಿಯಲ್ಲಿ ವ್ಯಂಗ್ಯ ಅಡಗಿದೆ. ತಿರಸ್ಕಾರ, ಕೋಪಗಳ ಭಾವು ಮೂಡಬೇಕಾದಾಗ ಆದಕ್ಕೆ ತಕ್ಕ ಭಾವೋದ್ರೇಕ ಮಾಡುವ ಪದ ಪುಂಜಗಳನ್ನು ಬಳಸಿಕೊಂಡಿದ್ದಾರೆ. ಬಂಡಾಯವನ್ನು ಮುಗಿಸಲು ಪ್ರಯತ್ನಿಸಿದ ಬ್ರಿಟಿಷ ಅಧಿಕಾರಿ ಮೇಜರ್ ಹಡ್ಸನ್. ಅವನನ್ನು 'ಒಕ್ಕಣ್ಣ ಒಂಟಿಯ ಮೇಲಿನ ಬಡಕಲು ಸಾಹೇಬ'ನೆಂದು, ಆತನ ಸ್ವಾರ್ಥ ಸಾಧನೆಯ ಪ್ರಯತ್ನ, ಹಿಂಸಾತ್ಮಕ ಆಚರಣೆಗಳನ್ನು ವರ್ಣಿಸಿದೆ. ಜನತೆಯ ಪೂರ್ಣ ತಿರಸ್ಕಾರಕ್ಕೆ ಆತನೂ ಅವನ ಸಂಗಡಿಗರೂ ಗುರಿಯಾದುದನ್ನು ನಾವೀ ಕಾದಂಬರಿಯಲ್ಲಿ ಕಾಣಬಹುದು.

ಇಂತಹ ಭಾರತೀಯ ಐತಿಹಾಸಿಕ ಘಟನೆಯ ವಿಷಯವಾಗಿರುವ 'ಅವಾಯಕಾರೀ ಪಲಾಯಿತ' ಕಾದಂಬರಿಯು ಅನೇಕ ಸಂಸ್ಕರಣಗಳನ್ನು ಹೊಂದಿತು. ೧೯೫೭ರಲ್ಲಿ ಅಚ್ಚಾದ ಸಂಸ್ಕರಣದಲ್ಲಿ ೭೫,೦೦೦ ಪ್ರತಿಗಳು ತಯಾರಾಗಿವೆ.

ವಿದ್ಯಾರ್ಥಿಗಳು ಈ ಕಾದಂಬರಿಯನ್ನು ಸ್ವಾಗತಿಸಿ ಅದು ತಮ್ಮನ್ನು ಕೆರಳಿಸಿತೆಂದೂ, ಅಗಾಧ ಆಸಕ್ತಿಯನ್ನೆಂಟು ಮಾಡಿತೆಂದೂ, ಅವರ ಹೃದಯಗಳಲ್ಲಿ ಪ್ರೀತಿಯ ಮತ್ತು ದ್ವೇಷದ ಭಾವನೆಗಳನ್ನೆದ್ದವಿಸಿತೆಂದೂ ಲಿಖಿತ ಮತ್ತು ಮೌಖಿಕ ಅಭಿಪ್ರಾಯಗಳಲ್ಲಿ ತಿಳಿಸಿದ್ದಾರೆ. ಪೆನ್ನಾ ನಗರದ ವಿದ್ಯೆನೆಯ ತರಗತಿಯ ವಿದ್ಯಾರ್ಥಿನಿ ತಾನು ಈ ಕಾದಂಬರಿಯ ವೀರರನ್ನು ಎಂದು ಮರೆಯಲಾರೆನೆಂದೂ, ತಾನು ಅದು ವರೆಗಿನ ೧೨ ವರ್ಷಗಳಲ್ಲಿ ಈ ತರಹ ಕಾದಂಬರಿಯನ್ನು ಓದಿರಲಿಲ್ಲವೆಂದೂ ಬರೆದಿದ್ದಾಳೆ.

ಇಂತಹ ಕೃತಿ ಭಾರತೀಯ ಭಾಷೆಗಳಲ್ಲಿ ಎಂದು ಹುಟ್ಟುವುವೆಂದು ಕಾಯಬೇಕಾಗಿದೆ.


## ಸುವರ್ಣ ಮಹೋತ್ಸವದ ವರ್ಷದಲ್ಲಿ ಶೀಘ್ರವಾದ ಪ್ರಗತಿ

| | 1956 | 1955 |
|---|---|---|
| ಅಧಿಕೃತ ಬಂಡವಾಳ .... | 50,00,000 | 50,00,000 |
| ಇಷ್ಟೂ ಆಪ, ಚಂದಾ ಆದ ಮತ್ತು ಪಾವತಿಯಾದ ಬಂಡವಾಳ ... | 29,00,000 | 29,00,000 |
| ಕ್ಷೇಮ ನಿಧಿಗಳು .... | 32,00,000 | 29,00,000 |
| ಡಿಪಾಸಿಟ್ಟುಗಳು ... | 14,82,06,000 | 11,95,67,000 |

ಒಟ್ಟು ಸಾಧನ ಸಂಪತ್ತು 20 ಕೋಟಿ ರೂ.ಗಳಿಗೂ ಮೀರಿದೆ.

* * * *

**ವಿದೇಶದ ವಿನಿಮಯ ವ್ಯವಹಾರ ನಡೆಯಿಸಲಾಗುವುದು**

* * * *

ವಿಶ್ವದಾದ್ಯಂತ ಕರೆಸ್ಪಾಂಡೆಂಟರುಗಳು

* * * *

**ನಿಮ್ಮ ಸೇವೆಗಾಗಿ 52 ಶಾಖೆಗಳು**

| | |
|---|---|
| ಮೈಸೂರು ರಾಜ್ಯ | 23 |
| ಆಂಧ್ರ ಪ್ರದೇಶ | 3 |
| ಬೊಂಬಾಯಿ ರಾಜ್ಯ | 11 |
| ಕೇರಳ ರಾಜ್ಯ | 7 |
| ಮದರಾಸು ರಾಜ್ಯ | 7 |
| ಪಾಕಿಸ್ತಾನ | 1 |

ಅಡಳಿತ ಕಚೇರಿ: ಬೆಂಗಳೂರು

ಜನರಲ್ ಮ್ಯಾನೇಜರ್‌ರವರ ಕಚೇರಿ: ಬೊಂಬಾಯಿ

ವಿದೇಶದ ಇಲಾಖೆಗಳು: ಬೊಂಬಾಯಿ ಮತ್ತು ಮದರಾಸು

# ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ: 1906)

— ಸರ್ವ ಜನತೆಯ ಬ್ಯಾಂಕ್ —



**ಸೂಚನೆ**

'ನವಯುಗ'ದ ಚಂದಾ ಹಣ ಮತ್ತು ಜಾಹೀರಾತಿನ ಹಣವನ್ನು ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಇದರ ಯಾವುದೇ ಶಾಖೆಯಲ್ಲಿ ಯಾವನೊಂದು ತರದ ಮಿಚೋ ಇಲ್ಲದೆ (ನವಯುಗ ವಾರಪತ್ರಿಕೆಯ ಖಾತೆಗೆ) ಪಾವತಿ ಮಾಡಬಹುದು.

ಮೆನೇಜರ್.

**NAVAYUGA**
Popular Kannada Weekly
*Founder:—*
**A. B. SHETTY,**
Former Minister for Public Health, Govt. of Madras & Govt of Mysore

# ನವಯುಗ
ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

| ಸಂಪುಟ | ಉಡುಪಿ | ಸಂಚಿಕೆ |
|---|---|---|
| ೩೩ | ೩೦–೪–೧೯೫೩ | ೩೩ |

## ನೂತನ ಮಂತ್ರಿಮಂಡಳ

ಹೊಸ ಮೈಸೂರಿನ (ಹೌದು, ಅದಿನ್ನೂ ಕೆಲಸಮಯದ ವರೆಗೆ ನಮ್ಮ ಪಾಲಿಗೆ ಹೊಸತೇ!) ಹೊಸ ಮಂತ್ರಿಮಂಡಳವು ಈಗ ತಾನೇ ರಚನೆಯಾಗಿದೆ; ಮತ್ತು ನೂತನ ಸಚಿವರು ತಮ್ಮ ಅಧಿಕಾರವನ್ನು ಈಗಾಗಲೇ ಸ್ವೀಕರಿಸಿದ್ದಾರೆ. ಮಂತ್ರಿ ಮಂಡಳದ ರಚನೆಯಲ್ಲಿ ತುಂಬ ತೊಡಕುಗಳು ಕಾಣಿಸಿಕೊಂಡವೆಂಬುದು ಸ್ಪಷ್ಟವಾಗಿದೆ– ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಯೋಗ್ಯರು ಮಂತ್ರಿ ಸ್ಥಾನದ ಜವಾಬ್ದಾರಿಯನ್ನು ಹೊತ್ತುಕೊಳ್ಳುವುದಕ್ಕೆ ಧಾವಿಸಿಬರಲಿಲ್ಲ; ಒತ್ತಾಯ ಮತ್ತು ಮನವೊಲಿಸುವಿಕೆಗಳು ಆಗತ್ಯವಾದ ದೆಸೆಯಿಂದ ಹೀಗೆ ವಿಳಂಬ ನಡೆಯಿತು ಎಂದು ಹೇಳಿದ್ದಾರೆ. ಇದೂ ಒಂದು ಕಾರಣವಿರಬಹುದು, ನಿಜ. ಆದರೆ ಇದಕ್ಕೂ ಮುಖ್ಯ ಕಾರಣವು ಪಕ್ಷ ದೊಳಗಿನ ಗುಂಪು ಭೇದ ಎಂದು ಭಾವಿಸಬೇಕಾಗುತ್ತದೆ. ಹಳೆ ಮೈಸೂರು–ಹೊಸ ಮೈಸೂರುಗಳ ಹಿತಾಸಕ್ತಿಗಳೆಲ್ಲಿ ತಿಕ್ಕಾಟ ಇನ್ನೂ ಉಳಿದಿದೆ; ಸ್ಥಾನಮಾನಕ್ಕೆ ಯೋಗ್ಯರಾದವರು ವಿರಳವಾಗಿಯೇ ದೊರಕುತ್ತಿದ್ದರೂ ಸಹ ತಮ್ಮಲ್ಲಿ ಯೋಗ್ಯತೆಯಿದೆಯೆಂದು ಸ್ವಯಂ ನಿರ್ಣಯವನ್ನು ಕೈಗೊಂಡು ಮಂತ್ರಿಸ್ಥಾನ ಲಭ್ಯವಾಗಲಿ ಎಂದು, ಓಡಾಡುವವರೇನು ಕೊರತೆ ಇರಲಿಲ್ಲವೆಂದು ಕಾಣುತ್ತದೆ. ರಾಜ್ಯದಲ್ಲಿ ಬಹುಮತಗಳಿಸಿರುವ ಕಾಂಗ್ರೆಸು ಪಕ್ಷವು ಹೀಗೆ ಒಳಜಗಳದಿಂದ ಶಕ್ತಿಹೀನವಾಗುತ್ತಿರುವುದನ್ನು ಕಂಡು ನಮಗೆ ತುಂಬ ವ್ಯಸನವಾಗುತ್ತದೆ. ಈ ಮಂತ್ರಿಮಂಡಳವು ದೀರ್ಘ ಕಾಲ ಬಾಳಲಾರದೆಂದೂ ಇನ್ನಾರು ತಿಂಗಳ ಅವಧಿಯಲ್ಲಿ ಸರಕಾರದ ಮೇಲೆ ಅವಿಶ್ವಾಸವನ್ನು ವ್ಯಕ್ತಪಡಿಸುವ ಪ್ರಿಗೊತ್ತುವಳಿಯನ್ನು ಸದ್ಯದ ವ್ಯವಸ್ಥೆಯಿಂದ ಅತ್ಯಪ್ಪವಾದ ಗುಂಪು ಮಂಡಿಸಲು ಪ್ರಯತ್ನಿಸಬಹುದೆಂದೂ ಹೇಳುವ ರಾಜಕೀಯ ಜ್ಞೋಯಿಸರೂ ಅನೇಕ. ಮಂತ್ರಿಮಂಡಳ ರಚನೆಯಾದ ಬಳಕ ಖಾತೆಗಳ ಹಂಚುವಿಕೆಯು ಸಮಾಧಾನಕರವಾದ ರೀತಿಯಲ್ಲಿ ನಡೆಯಲಿಲ್ಲವೆನ್ನುವ ಅಭಿಪ್ರಾಯವೂ ಹಲವು ಪ್ರಮುಖರಲ್ಲಿದೆ; ಮಂತ್ರಿಗಳಲ್ಲಿ ಕೆಲವರಿಗೆ ಸ್ವಾಮುಖ್ಯವಾದ ಅನೇಕ ಖಾತೆಗಳ ಜೊರೆ ಬಿದ್ದಿದ್ದರೆ, ಬೇರೆ ಕೆಲವರಿಗೆ ಜಿಲ್ಲರಿ ಖಾತೆಗಳು ಮಾತ್ರ ಬಂದಿವೆ. ಖಾತೆಗಳ ಹಂಚುವಿಕೆಯಲ್ಲಿ ಸಮತೋಲವಿಲ್ಲದೆ ಭೇದಭಾವನೆ ಎದ್ದು ಕಾಣಿಸುತ್ತಿದೆ ಎಂಬ ಟೀಕೆಯಲ್ಲಿ ಸ್ವಲ್ಪ ಮಟ್ಟಿನ ಸತ್ಯಾಂಶವಿದೆ ಎನ್ನಬಹುದು. ಅದೇನೇ ಇರಲಿ–ಪ್ರಕೃತಕ್ಕೆ ನಾವು ಇದಕ್ಕಿಂತ ಹೆಚ್ಚಿಗೇನೂ ಳಳ ಹೋಗುವುದಿಲ್ಲ; ಕುಂದು ಕೊರತೆಗಳನ್ನು ಮುಖ್ಯ ಮಂತ್ರಿಗಳು ಸರಿಪಡಿಸಲು ಹಿಂಜರಿಯರೆಂಬ ನಂಬಿಕೆಯನ್ನಿಟ್ಟು ಕೊಂಡವರು ನಾವು ಆದೇ ರೀತಿ, ನೈಸೂರಿನ ರಾಜಕೀಯ ರಂಗದಲ್ಲಿರುವ ಸ್ಪರ್ಧೆ ಮತ್ತು ಈರ್ಷ್ಯೆಯ ಮನೋಭಾವವು ಮಾಯವಾಗಿ ಸೌಹಾರ್ದತೆಯೂ ಸ್ನೇಹಶೀಲತೆಯೂ ನಾಡಿನ ಎಲ್ಲ ಭಾಗಗಳ ಕಾಂಗ್ರೆಸಿಗರಲ್ಲೂ ಉಂಟಾಗಲೆಂದು ಆಶಿಸುವವರಲ್ಲಿಯೇ ನಾವೂ ಸೇರಿದ್ದೇವೆ. ಆದುದರಿಂದ ಈಗ ನಾವು ಹೊಸ ಸರಕಾರವು ಆಗತ್ಯವಾಗಿ ಗಮನಿಸಬೇಕಾದ ಕೆಲವು ವಿಷಯಗಳ ಕಡೆಗೆ ಅದರ ಲಕ್ಷ್ಯವನ್ನು ಸೆಳೆಯುವ ಪ್ರಯತ್ನವನ್ನಷ್ಟೆ ಮಾಡುತ್ತ್ತಾನೆ; ಅದರೆ ಧನಿಯು ಕೆಟ್ಟವನಾಗಿದ್ದರೆ ಅವಕ್ಕೆ ರಕ್ಷಿತಿ ಕೊಡದೆನೇ ದಿನ ಗಳೆಯುತ್ತಾನೆ; ಸಾವಿರ ಇಲ ಬಂದು ಕೇಳಿದರೂ "ನನ್ನ ನಂಬಿಕೆ ಇಲ್ಲನೆ, ನಿನಗೆ?" ಎಂಬ ಉಪಚಾರದ ಮಾತುಗಳಿಂದ ಕೊರಳು ಕೊಯ್ಯುತ್ತಾನೆ. ನಂಬಿಕೆಯುವ ಪ್ರಸಂಗವೇ ತಪ್ಪಬೇಕಾದರೆ ನ್ಯಾಯ ಸ್ಥಾನದ ಮುಂದೆಯೇ ಕಟ್ಟೆ ರಚಿಸಿದ ಪಡೆಯುವ ಕ್ರಮ ಆವಶ್ಯ. ಎರಡನೆಯ ಮುಖ್ಯ ವಿಷಯವೆಂದರೆ ಬಂದರಗಳ ಅಭಿವೃದ್ಧಿ ಮತ್ತು ರಸ್ತೆಗಳ ವಿಸ್ತರಣೆ. ನಮ್ಮ ರಾಜ್ಯದ ಕರಾವಳಿಯಲ್ಲಿರುವ ನಾಲ್ಕೂ ಮುಖ್ಯ ಬಂದರಗಳನ್ನು ಯಶೋಚಿತವಾದ ರೀತಿಯಲ್ಲಿ ಅಭಿವೃದ್ಧಿಗೊಳಿಸಲು ಮುಂದಿನ ಐದು ವರ್ಷಗಳಲ್ಲಿ ಸಾಧ್ಯವಾಗಲೇಬೇಕು. ಕೇಂದ್ರ ಸರಕಾರದ ಮನವೊಲಿಸುವಿಕೆ ಅವಶ್ಯವಾದರೆ, ಆ ಬಗ್ಗೆ ಪ್ರಯತ್ನಗಳನ್ನು ಕೂಡಲೇ ಕೈಗೊಳ್ಳಬೇಕು. ಬಂದರಗಳ ಅಭಿವೃದ್ಧಿಗೆ ಪೂರಕವಾಗಿ ವಿಾನುಗಾರಿಕೆಗೆ ಪ್ರೋತ್ಸಾಹ ಸಿಕ್ಕಿ ವಿಾನಿನ ವ್ಯಾಪಾರದ ಬೆಳವಣಿಗೆಗೆ ಅಗತ್ಯವಿರುವ ಶೀತಾಲಯಗಳೂ ಶೀತ ಕೊಟಡಿಗಳಿರುವ ವಾಹನಗಳ ಓಡಾಟಕ್ಕಾಗಿ ಉತ್ತಮ ರಸ್ತೆಗಳೂ ನಿರ್ಮಾಣವಾಗಬೇಕು. ಮತ್ಸ್ಯ ಸಂಪತ್ತು ನಮ್ಮ ನಾಡಿನ ಸಂಪತ್ತಿನಲ್ಲೆಲ್ಲ ಅತ್ಯಮೂಲ್ಯವಾದುದೆಂಬುದನ್ನು ಮರೆಯಬಾರದು. ಮಂಗಳೂರಿನಲ್ಲಿ ನಿಂತಿರುವ ಟೈಲನ್ನು ಉತ್ತರಾಭಿಮುಖವಾಗಿ ವಿಸ್ತರಿಸಿ, ಕಾರವಾರ, ಮಲ್ಪೆ, ಭಟ್ಕಳ ಮತ್ತು ಮಂಗಳೂರುಗಳನ್ನು ಪಶ್ಚಿಮ ಘಟ್ಟದ ಆಚೆಗೆ ಹರಿದು ಹೋಗಿರುವ ರೈಲು ಮಾರ್ಗದೊಡನೆ ಅಡ್ಡಲಾಗಿ ಜೋಡಿಸುವುದು ನಮ್ಮ ಹೆಗ್ಗುರಿಯಾಗಿರಬೇಕು. ಮುಂದಿನ ಐದು ವರ್ಷಗಳಲ್ಲಿ ಈ ಬಗ್ಗೆ ನಿಶ್ಚಿತವಾದ ಕಾರ್ಯಕ್ರಮವನ್ನಾದರೂ ಗೊತ್ತುಪಡಿಸಲು ಸಾಧ್ಯವಾಗದಿದ್ದರೆ, ನಮ್ಮ ನಾಡಿನ ಅಭಿವೃದ್ಧಿಯು ಎಣಿಸಿದ ರೀತಿಯಲ್ಲಿ ನಡೆಯುತ್ತಿದೆ ಎನ್ನುವುದು ಕಷ್ಟ. ಮೂರನೆಯ ವಿಷಯವೆಂದರೆ ಕೈಗಾರಿಕೆಗಳ ಅಭಿವೃದ್ಧಿ–ಈಚೆಗೆ ರಶ್ಯದ ತಜ್ಞರು ಸೊಂಡೂರಿನಲ್ಲಿರುವ ಕಬ್ಬಿಣದ ಅದುರು ಉತ್ಕೃಷ್ಟವಾದ ನೈಸರ್ಗಿಕ ಭಂಡಾರವೆಂದೂ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯೊಂದನ್ನು ಮಿತವ್ಯಯದಿಂದ ನಡೆಸಬಹುದಾದಷ್ಟು ಈ ನಿಧಿಯು ವಿಪುಲವಾಗಿದೆಯೆಂದೂ ಅಭಿಪ್ರಾಯಪಟ್ಟಿದ್ದಾರೆ. ದಕ್ಷಿಣ ಭಾರತದ ಏಕ ಮಾತ್ರ ಉಕ್ಕಿನ ಕಾರ್ಖಾನೆಯನ್ನು ತನ್ನ ರಾಜ್ಯದ ಭದ್ರಾವತಿಯಲ್ಲಿ ಪಡೆದಿರುವ ಮೈಸೂರು ಇನ್ನೊಂದು ಉಕ್ಕಿನ ಕಾರ್ಖಾನೆ ತೆರೆಯಲು ಸಂತೋಷವನ್ನೂ ಅಭಿಮಾನವನ್ನೂ ಹೊಂದಲೆಂಬುದು ನಮ್ಮ ಅಶಯ. ಕೇಂದ್ರ ಸರಕಾರಕ್ಕೆ ಸೊಂಡೂರಿನಲ್ಲಿ ಕಾರ್ಖಾನೆ ತೆರೆಯುವ ಸಾಧ್ಯತೆಯನ್ನು ವಿವರಿಸಿ ಬೇಗನೇ ಸುಸಜ್ಜಿತ ಕಾರ್ಖಾನೆಯು ಆ ಪ್ರದೇಶದಲ್ಲಿ ಸ್ಥಾಪಿಸಲ್ಪಡುವಂತೆ ನೋಡಿಕೊಳ್ಳುವ ಜವಾಬ್ದಾರಿ ಹೊಸ ಸರಕಾರದ ಮೇಲಿದೆ. ಇದೇ ರೀತಿ ವಿದ್ಯುದುತ್ಪಾದನೆಯ ಪ್ರಯೋಜನಾಂಶಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿರುವ ಜನಸಮುದಾಯವೂ ತಿಳಿದುಕೊಂಡು ಬೆಳೆ ಹೆಚ್ಚಿಸುವುದಕ್ಕೂ ಚಿಕ್ಕ ಕೈಗಾರಿಕೆಗಳನ್ನು ಸ್ಥಾಪಿಸಿ ನಡೆಸುವುದಕ್ಕೂ ಮುಂದಾಗುವಂತೆ ಮಾಡುವ ಹೊಣೆಯೂ ಸರಕಾರದ್ದು– ಈಗ ಪಂಪು ಸೆಟ್ಟುಗಳನ್ನು ಕೊಂಡುಕೊಳ್ಳಲು ಹಣದ ಅನುಕೂಲ ರೈತರಲ್ಲಿಲ್ಲ— ಅದೂ ಅಲ್ಲದೆ ಸಾಲವಾಗಿ ಕೊಂಡುಕೊಳ್ಳುವಾಗ ಅನುಸರಿಸಬೇಕಾದ ಕ್ರಮವು ಬಹಳ ದೀರ್ಘವೂ ತ್ರಾಸದಾಯಕವೂ ಆಗಿರುತ್ತದೆ. ಸೂರ್ಯಶಕ್ತಿಯನ್ನು ಪಂಪುಗಳ ಯೋಗ್ಯತೆಯೂ ಬಹಳ ಕೆಳಮಟ್ಟದಲ್ಲಿದೆ ಎಂದು ಕೇಳಿದ್ದೇವೆ ಈ ಕೊರತೆಗಳ ನಿವಾರಣೆ ಆಗಬೇಕಾಗಿದೆ. ಅಲ್ಲದೆ, ಮಲೆನಾಡಿನ ಉತ್ಪತ್ತಿಗಳ ಪದಪಸಯೋಗಕ್ಕಾಗಿ ಚಿಕ್ಕ ಕೈಗಾರಿಕೆಗಳ ಕೇಂದ್ರಗಳನ್ನು ಅಲ್ಲಲ್ಲಿ ಸ್ಥಾಪಿಸುವುದು ಇಷ್ಟವಾಗಿದೆ. ಇನ್ನೂ ಎರಡು–ಮೂರು ಕಾಗದ ಕಾರ್ಖಾನೆಗಳು, ಬೆತ್ತ ಮತ್ತು ಬೀಳಲು ಗಳಿಂದ ಗೃಹ ಸಜ್ಜಿಕೆಯ ವಿವಿಧ ಪದಾರ್ಥಗಳನ್ನು ನಿರ್ಮಿಸುವ ಕೈಗಾರಿಕಾ ಕೇಂದ್ರಗಳು, ಮೀನಿನ ವ್ಯಾಪಾರ ಮತ್ತು ಆ ಕಾರ್ಯಾಗಿ ತಕ್ಕ ಕಾರ್ಖಾನೆ, ಕಡಿಗು ಕಟ್ಟಿಗೆ ಇನ್ನೂ ನೂರಾರು ಬಗೆಯ ಮಲೆನಾಡಿನ ಸಂಪತ್ತನ್ನು ಲಾಭಕರವಾಗಿ ನಾವು ಬಳಸಿಕೊಳ್ಳಬಹುದು. ಇದೇ ರೀತಿ ಉತ್ತರ ಕರ್ನಾಟಕದಲ್ಲಿ ಸಿಮೆಂಟು ಮತ್ತಿತರ ಖನಿಜ ಸಂಪತ್ತುಗಳ ಉಪಯೋಗವನ್ನು ಮಾಡಿಕೊಳ್ಳಲಾಗಿಯಿಲ್ಲ. ಹತ್ತಿ ನಿಗಣಿಗಳನ್ನೂ ಅಭಿವೃದ್ಧಿಪಡಿಸಬಹುದು ಇನ್ನು ಕೊನೆಯದಾಗಿ ಹೊಸ ಸರಕಾರವು ಹಿಂದೆ, ಅಂದರೆ ಕರ್ನಾಟಕವು ಐದಾರು ರಾಜ್ಯಗಳಲ್ಲಿ ಹೋಹೋಗಿದ್ದಾಗ, ಆಯಾ ಪ್ರದೇಶಗಳಲ್ಲಿ ನಡೆದಿರುವ ಅಭಿವೃದ್ಧಿ ಪ್ರಯತ್ನಗಳ ಈಗ ಪಾಳುಬೀಳುವುದಕ್ಕೆ ಬಿಡಕೂಡದು ಉದಾಹರಣೆಗೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶಿಕ್ಷಣ ನೌಕರ್ಯವು ತುಂಬ ಹೆಚ್ಚಿಗಿದೆ ಎಂಬ ಕಾರಣಕ್ಕಾಗಿ ಈ ಜಿಲ್ಲೆಗೆ ವಿದ್ಯಾಭ್ಯಾತೆಯರು ಹಿಂಜೆ ಕೊಡತ್ತಿದ್ದ ಸವಲತ್ತುಗಳನ್ನು ನಿರಾಕರಿಸುವ ದಾಗಲೀ ನಮ್ಮ ಜಿಲ್ಲೆಯ ಲ್ಲಿ ಅನೇಕ ರಸ್ತೆಗಳಿಗೆ ದುಮರು ಹಾಕಿದ್ದು, ಅವು ಕೆಡವ ಕಾಲದಲ್ಲಿ ಅವುಗಳ ದುರಸ್ತಿಯನ್ನು ಅಪಡೆಯಿಂದ ಕಾಣುವುದಾಗಲೀ ಸಲ್ಲದು ನಮ್ಮ ಮೈಸೂರಿನಲ್ಲಿ (ಅದು ಹಳೆಯ ಮೈಸೂರು, ತಿಳಿದಿರಲಿ) ಅದಿಲ್ಲ–ಇದಿಲ್ಲ ಅತ್ತ ಧಾರವಾಡ ಮತ್ತು ರಾಯಚೂರು ಕಡೆಯಲ್ಲೂ ನಿಮ್ಮಲ್ಲಿದ್ದುದು ಇಲ್ಲ–ನಿತ್ತೆ ನಿಮಗೇಕೆ ಇವೆಲ್ಲ?" ಎನ್ನುವ ಧಾಟಿಯಲ್ಲಿ ಮೈಸೂರಿನ ಸರಕಾರಿ ವರ್ತುಲಗಳಿಂದ ಪ್ರಶ್ನೆಗಳು ಬರುತ್ತಿವೆ ಎಂಬ ದೂರು ಹಬ್ಬಿದೆ ಇಂಥದಕ್ಕೆ ಅವಕಾಶ ಕೊಡಬಾರದು. ಇರುವ ಅನುಕೂಲತೆಗಳನ್ನು ಯಾವುದೂ ಕಡಿಮೆಯಾಗದಂತೆ, ಕೆಡದಂತೆ ನೋಡಿಕೊಂಡು ಮುಂದಿನ ಅಭಿವೃದ್ಧಿಯನ್ನು ಕೈಗೂಡಿಸುವ ಜಾಣ್ಮೆಯು ಹೊಸ ಮಂತ್ರಿ ಮಂಡಳಿಕ್ಕೆ ಕೈಗೂಡಲಿ

## ಸಹೃದಯರಾದ ನಮ್ಮ ಚಂದಾದಾರರಲ್ಲಿ ಅರಿಕೆ

ನಮ್ಮ ವಿನಂತಿಯನ್ನು ಮನ್ನಿಸಿ ಕೆಲವು ಚಂದಾದಾರರು ತಮ್ಮ ಬಾಕಿಯನ್ನು ಕಳಿಸಿಕೊಟ್ಟಿದ್ದಾರೆ; ಇನ್ನು ಕೆಲವರು ಇಂತಿಷ್ಟು ಸಮಯದೊಳಗೆ ವಾವತಿ ಮಾಡುವುದಾಗಿ ತಿಳಿಸಿದ್ದಾರೆ; ಮತ್ತೆ ಕೆಲವರು ಬಾಕಿ ಚಂದಾಹಣಕ್ಕೆ ಪತ್ರಿಕೆಯನ್ನು ವಿ. ಪಿ. ಮಾಡಿರೆಂದು ಸೂಚಿಸಿದ್ದಾರೆ. ಅವರೆಲ್ಲರಿಗೂ ವಂದನೆಗಳನ್ನು ಅರ್ಪಿಸುತ್ತೇವೆ.

ಉಳಿದ ಮಹನೀಯರೂ ಸ್ವಲ್ಪ ಉದಾರಬುದ್ಧಿಯಿಂದ ಬಾಕಿ ಚಂದಾಹಣವನ್ನು ಕಳಿಸಿಕೊಡುವಂತೆ ನಿವೇದಿಸಿಕೊಳ್ಳುತ್ತೇವೆ.

ಈಗ ವೃತ್ತ ಪತ್ರಿಕೆಗಳಿಗೆ ಉಪಯೋಗಿಸುವ ಕಾಗದದ ಬೆಲೆ ಸುಮಾರು ಕಾಲಂಶ ಹೆಚ್ಚಿದೆ; 'ನಯಾಪೈಸೆಯ' ದೆಸೆಯಿಂದ ಅಂಚೆ ದರವೂ ಏರಿದೆ. ಇದನ್ನೆಲ್ಲಾ ನಮ್ಮ ಚಂದಾದಾರರು ಮನಗಂಡು ನಮಗೊಂದು ಸಹಾಯ, ಪ್ರೋತ್ಸಾಹವೆಂದಾದರೂ ತಮ್ಮ ತಮ್ಮ ಬಾಕಿಯನ್ನು ಸಾಧ್ಯವಾದಷ್ಟು ಬೇಗನೆ ಕಳಿಸಿಕೊಡುವ ದೊಡ್ಡ ಮನಸ್ಸು ಮಾಡಿದರೆ ನಮ್ಮ ಹೊಸ ಸುಮಾರು ಕಡಿಮೆಯಾಗುವುದು.

ಪತ್ರಿಕೆಯನ್ನು ವಿ. ಪಿ. ಮೂಲಕ ಕಳಿಸಿದರೆ ಸುಮಾರು ಹನ್ನೆರಡಾಣೆ ಹೆಚ್ಚಿಗೆ ಬೀಳುತ್ತದೆ. ಚಂದಾಹಣವನ್ನು ಮನಿಯಾರ್ಡರುಮಾಡುವುದರಿಂದ ಈ ಖರ್ಚನ್ನು ಉಳಿಸಬಹುದು.

ಅಂತೂ ಮೇ 2ಯಾ 3ನೇ ತಾರೀಕಿನೊಳಗಾದರೂ ನಮಗೆ ಚಂದಾ ವಾವತಿಯಾಗದಿದ್ದರೆ ವಿ. ಪಿ. ಮಾಡಲಿಕ್ಕೆ ತಮ್ಮ ಒಪ್ಪಿಗೆಯೆಂದು ಭಾವಿಸಿ ಮುಂದಿನ ಸಂಚಿಕೆಯನ್ನು ವಿ. ಪಿ.ಯಿಂದ ಕಳಿಸುತ್ತೇನೆ. ಅದನ್ನು ದಯಮಾಡಿ ಪಡಕೊಂಡು ಸಹಕರಿಸಬೇಕಾಗಿ ಬಿನ್ನವಿಸುತ್ತೇವೆ.

ನವಯುಗವು ನಿಮ್ಮದೇ ಪತ್ರಿಕೆ—ಅದಕ್ಕೆ ನಿಮ್ಮ ಪ್ರೋತ್ಸಾಹವಿರಲಿ.

ಮೆನೇಜರ್.

# ನೂತನ ಮೈಸೂರು ಮಂತ್ರಿ ಮಂಡಲ

## ದ. ಕ. ಜಿಲ್ಲೆಯಿಂದ ಶ್ರೀ ಬಾಳಿಗರ ಆಯ್ಕೆ

**ಶ್ರೀ ಎಸ್. ನಿಜಲಿಂಗಪ್ಪ**— (ಸಾಮಾನ್ಯ ಆಡಳಿತ ನರ್ವಹಣ) ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ಚಿತ್ರದುರ್ಗ ಜಿಲ್ಲೆಯ ಮೋಳಕಾಲ್ಮೂರು ಮತದಾರ ಕ್ಷೇತ್ರದಿಂದ ಎಸೆಂಬ್ಲಿಗೆ ಚುನಾಯಿತರಾದವರು. 57 ವರ್ಷ ಪ್ರಾಯದ ಶ್ರೀ ಎಸ್. ನಿಜಲಿಂಗಪ್ಪನವರು ಇದೇ ತಾ. 6 ರಲ್ಲು ಸರ್ವಾನುಮತದಿಂದ ಮೈಸೂರು ಕಾಂಗ್ರೆಸ್ ಶಾಸನ ಸಭಾಪಕ್ಷದ ನಾಯಕನಾಗಿ ಆರಿಸಲ್ಪಟ್ಟಿದ್ದರು. ದಾವಣಗೆರೆ, ಚಿತ್ರದುರ್ಗ, ಬೆಂಗಳೂರು ಮತ್ತು ಕೂನೆಯಲ್ಲಿ ಶಿಕ್ಷಣ ಪಡೆದು 1926ರಲ್ಲು ಮೈಸೂರು ಹೈಕೋರ್ಟಿನ ಎಡ್ವೋಕೇಟ್ ಆಗಿದ್ದರು. 1942 ಮತ್ತು 1947 ರಲ್ಲು ನಡೆದ ಸ್ವಾತಂತ್ರ್ಯ ಚಳವಳಿಗಳಲ್ಲೂ ಅವರು ಜೈಲುವಾಸ ಅನುಭವಿಸಿದ್ದರು. 1939ರಿಂದ 1954ರ ವರೆಗೆ ಮೈಸೂರು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸದಸ್ಯರಾಗಿದ್ದರು. ಅಲ್ಲದೆ 1946 ರಿಂದ 1954ರ ವರೆಗೆ ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿ ಅಧ್ಯಕ್ಷರಾಗಿಯೂ 1948-58ರಲ್ಲು ಅಖಿಲಭಾರತ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸದಸ್ಯರಾಗಿಯೂ ಇದ್ದರು. ಅವರು ಘಟನಾ ಸಮಿತಿ ಸದಸ್ಯರಿದ್ದಾಗಲ್ಲದೆ 1952ರಿಂದ 1956ರ ತನಕ ಎಮ್. ಪಿ. ಆಗಿದ್ದರು.

**ಶ್ರೀ ಎಮ್. ಪಿ. ಪಾಟೀಲ್**— (ಕಂದಾಯ ಮಂತ್ರಿ) ಶ್ರೀ ಪಾಟೀಲರು ಬೆಳಗಾಂ ಜಿಲ್ಲೆಯ ಯಕ್ಕೇರಿಯಲ್ಲಿ ವಕೀಲರಾಗಿದ್ದರು. ಪ್ರಾಯ 59. ತಾಲೂಕು ಬೋರ್ಡ್, ಜಿಲ್ಲಾ ಬೋರ್ಡುಗಳ ಸದಸ್ಯರಾಗಿದ್ದರು. ಹಲವು ಬಾರಿ ಕಾಂಗ್ರೆಸ್ ಚಳವಳಿಯಿತ್ತ ಕಾರಾಗೃಹಕ್ಕೆ ಹೋಗಿದ್ದರು. ಮುಂಬಯಿ ಕಾಂಗ್ರೆಸ್ ಮಂತ್ರಿಮಂಡಲದಲ್ಲಿ ಸಹಕಾರಿ ಮಂತ್ರಿಯಾಗಿದ್ದರು.

**ಶ್ರೀ ಸಿ. ಎಮ್. ಪೂಣಚ್ಚ**— (ಗೃಹಮಂತ್ರಿ) 47 ವರ್ಷ ಪ್ರಾಯದ ಶ್ರೀ ಸಿ. ಎಮ್. ಪೂಣಚ್ಚರು ಕೊಡಗಿನ ಮಂತ್ರಿ ಮಂತ್ರಿಯಾಗಿದ್ದರು. ಪುನರ್ರಚಿತ ಮೈಸೂರಿನ ಪ್ರಥಮ ಮಂತ್ರಿಮಂಡಲದಲ್ಲಿ ಉದ್ದಿಮೆ ಮಂತ್ರಿಗಳಾಗಿದ್ದರು.

**ಶ್ರೀ ಎಚ್. ಎಸ್. ರುದ್ರಪ್ಪ**— (ವ್ಯವಸಾಯ ಮಂತ್ರಿ) 48 ವರ್ಷ ಪ್ರಾಯದ ಶ್ರೀ ರುದ್ರಪ್ಪನವರು ಶಿವಮೊಗ್ಗಾ ಜಿಲ್ಲೆಯಲ್ಲಿ ಎಡ್ವೋಕೇಟ್ ಆಗಿದ್ದರು. ಸೈಸೂರು ಎಸೆಂಬ್ಲಿಯ ಅಧ್ಯಕ್ಷರಾಗಿಯೂ ಇದ್ದರು.

**ಶ್ರೀ ಟಿ. ಮರಿಯಪ್ಪ**— (ಆರ್ಥಿಕ ಮತ್ತು ನ್ಯಾಯಾಂಗ ಮಂತ್ರಿ) 52 ವರ್ಷ ಪ್ರಾಯದ ಶ್ರೀ ಟಿ. ಮರಿಯಪ್ಪನವರು ಶ್ರೀ ನಿಜಲಿಂಗಪ್ಪನವರ ಪ್ರಥಮ ಮಂತ್ರಿ ಮಂಡಲದಲ್ಲಿ ಆರ್ಥಮಂತ್ರಿಯಾಗಿದ್ದರು. ಹಳೆಯ ಮೈಸೂರಿನ ಕಾಂಗ್ರೆಸ್ ಮಂತ್ರಿ ಮಂಡಲದಲ್ಲೂ ಮಂತ್ರಿಗಳಾಗಿದ್ದರು.

**ಶ್ರೀ ಆರ್. ಚೆನ್ನಿಗ ರಾಮಯ್ಯ**— (ಸ್ವಯಂ ಸರಕಾರಮಂತ್ರಿ) ಸ್ಥಳೀಯ ಆಡಳಿತ ಪ್ರಾಯದ ಹರಿಜನ ಮಂತ್ರಿ ಶ್ರೀ ಚೆನ್ನಿಗರಾಮಯ್ಯನವರು ಮೈಸೂರಿನ ಪ್ರಥಮ ಜನ ಪ್ರತಿನಿಧಿ ಸರಕಾರದಲ್ಲೂ ಶಿಕ್ಷಣ ಮತ್ತು ಸ್ಥಳೀಯ ಆಡಳಿತ ಖಾತೆಯ ಮಂತ್ರಿಯಾಗಿದ್ದರು ಪುನರ್ರಚಿತ ಮೈಸೂರಿನ ಪ್ರಥಮ ಮಂಡಲಿಯಲ್ಲೂ ಅವರು ಮಂತ್ರಿಗಳಾಗಿದ್ದರು.

**ಶ್ರೀ ಎಚ್. ಕೆ. ವೀರಣ್ಣ ಗೌಡ**— (ಕಾಮಗಾರಿ ಮಂತ್ರಿ) 56 ವರ್ಷ ಪ್ರಾಯದ ಶ್ರೀ ಎಚ್. ಕೆ. ವೀರಣ್ಣ ಗೌಡರು 1953 ರಿಂದ 1955ರ ತನಕ ಮೈಸೂರು ಪ್ರದೇಶ ಕಾಂಗ್ರೆಸಿನ ಅಧ್ಯಕ್ಷರಾಗಿದ್ದರು. ನವ ಮೈಸೂರಿನ ಪ್ರಥಮ ಮಂತ್ರಿಮಂಡಲದಲ್ಲೂ ಮಂತ್ರಿಗಳಾಗಿದ್ದರು. ಪತ್ರಿಕೋದ್ಯಮಿಗಳೂ ಆಗಿದ್ದರು.

**ಮಿ| ಮಹಮ್ಮದ್ ಖಾಲಿ**— (ಅಕ್ಬ್ಯಾಜ್ ಮತ್ತು ಗ್ರಾಮ ಕೈಗಾರಿಕಾ ಮಂತ್ರಿ) 37 ವರ್ಷ ಪ್ರಾಯದ ಮಿ| ಮಹಮ್ಮದ್ ಖಾಲಿಯವರು ಗುಲ್ಬರ್ಗ ಜಿಲ್ಲೆಯಲ್ಲಿ ಎಡ್ವೋಕೇಟರಾಗಿದ್ದರು. ಹೈದರಾಬಾದು ಕರ್ನಾಟಕ ಪೀಪ್ಲ್ಸ್ ಕಾಂಗ್ರೆಸ್ ಸಮಿತಿಯ ಪ್ರಮುಖ ಕಾರ್ಯದರ್ಶಿಗಳಾಗಿದ್ದರು. ಹೈದರಾಬಾದಿನಲ್ಲಿ ರಝಾಕಾರ್ ಆಂದೋಲನ ಕಾಲದಲ್ಲಿ ರಝಾಕಾರಿನಿಂದ ಪೀಡಿಗೆಳಸ್ಪ ಅನುಭವಿಸುತ್ತಿದ್ದರು.

**ಶ್ರೀ ಆರ್. ಎಮ್. ಪಾಟೀಲ್**— (ಆರೋಗ್ಯ ಮಂತ್ರಿ) 47 ವರ್ಷ ಪ್ರಾಯದ ಶ್ರೀ ಆರ್. ಎಮ್. ಪಾಟೀಲರು ಕಾಂಗ್ರೆಸ್ ಚಳವಳಿಯಲ್ಲಿ ಭಾಗವಹಿಸಿ ಜೈಲುವಾಸ ಅನುಭವಿಸಿದ್ದರು. 1938ರಲ್ಲು ಮುಂಬಯಿ ಹೈಕೋರ್ಟ್ ಎಡ್ವೋಕೇಟ್ ಆಗಿದ್ದರು. ಮಹಾ ಜುನಾವಣೆ ಕಾಲದ ವರೆಗೆ ದಾರವಾಡ ಜಿಲ್ಲೆಯಲ್ಲಿ ಪಬ್ಲಿಕ್ ಪ್ರಾಸಿಕ್ಯೂಟರಾಗಿದ್ದರು

**ಶ್ರೀ ವಿ. ವೆಂಕಟಪ್ಪ**— (ವಿದ್ಯಾ ಮಂತ್ರಿ) 57 ವರ್ಷ ಪ್ರಾಯದ ಶ್ರೀ ವಿ. ವೆಂಕಟಪ್ಪನವರು ಕಳೆದ ವರ್ಷ ಜುನರ್ರಚನಾ ನವ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದರು. ಮೈಸೂರು ಎಸೆಂಬ್ಲಿಯ ಅಧ್ಯಕ್ಷರಾಗಿಯೂ ಇದ್ದರು.

**ಶ್ರೀ ಬಿ. ವೈಕುಂಠ ಬಾಳಿಗ**— (ಮಜೂರಿ ಮಂತ್ರಿ) 62 ವರ್ಷ ಪ್ರಾಯದ ಶ್ರೀ ಬಿ. ವೈಕುಂಠ ಬಾಳಿಗರು ಮಂಗಳೂರಿನ ಪ್ರಸಿದ್ಧ ವಕೀಲರು. ಮದ್ರಾಸು ಎಸೆಂಬ್ಲಿಯ ಸದಸ್ಯರಾಗಿದ್ದರು. ಕನ್ನಡಿಗ ನುಡಿಕಲ್ ಕಾಲೇಜ್, ಎಮ್. ಟಿ. ಎಸ್. ಕಾಲೇಜ್, ಬೀಂಕು ಮೊದಲಾದ ಹಲವಾರು ಸಂಘ ಸಂಸ್ಥೆಗಳ ಸ್ಥಾಪನಾ ಕಾರ್ಯದಲ್ಲಿ ತುಂಬಾ ಶ್ರಮಿಸಿದ್ದರು. ಪಾಸ್ಕ್ಯ ವ್ಯವಸಾಯ ಮತ್ತು ಕೃಷಿ ಅಭಿವೃದ್ಧಿ, ಗೇರು ಕೃಷಿ ವಿಸ್ತರಣೆ ಮೊದಲಾದ ವಿಷಯಗಳನ್ನು ಆಳವಾಗಿ ಅಭ್ಯಾಸ ಮಾಡಿರುತ್ತಾರೆ.

### ಉಪಮಂತ್ರಿಗಳು

1. ಶ್ರೀಮತಿ ಗ್ರೇಸ್ ಟಕ್ಕರ್(ಉಪನಿರ್ವಾಹಕಿ)—ವಿದ್ಯಾಖಾತೆಗೆ ನೇರಿಕೊಂಡುಮು.
2. ಶ್ರೀ ರಾಮಕೃಷ್ಣಹೆಗ್ಡೆ:.(ಉಪಯೋಜನಾ ಮಂತ್ರಿ) ಮುಖ್ಯ ಮಂತ್ರಿಯವರ ಕೈಕೆಳಗೆ.
3. ಶ್ರೀ ವೀರೇಂದ್ರ ಪಾಟೀಲ್ (ಉಪಯೋಜನಾ ಮಂತ್ರಿ)—ಗೃಹ ಮತ್ತು ಕೈಗಾರಿಕಾ ಖಾತೆಗಳಿಗೆ ಸಂಯೋಜನವಾದುದು.

.. ಮಂತ್ರಿ ಮಂಡಲಿಗೆ ಇನ್ನೊರ್ವರನ್ನು, ಉಪಮಂತ್ರಿ ಸ್ಥಾನಕ್ಕೆ ಇನ್ನು ಮೂರು ನಾಲ್ಕು ಮಂದಿಯನ್ನೂ ಸೇರಿಸಿಕೊಳ್ಳುವ ಸಂಭವವಿದೆ.

# ಚುಟುಕು ಸುದ್ದಿಗಳು

**ಭಾರತದ ಉಪರಾಷ್ಟ್ರಪತಿಗಳಾಗಿ** ಡಾ. ಎಸ್. ರಾಧಾಕೃಷ್ಣನ್ನರು ಆರಿ ಸಲ್ಪಟ್ಟರುವರೆಂದು ಅಧಿಕೃತವಾಗಿ ಸಾರಲಾಗಿದೆ. ಡಾ. ರಾಧಾಕೃಷ್ಣನ್ನರು ಕಳೆದ ಬಾರಿಯೂ ಉಪರಾಷ್ಟ್ರಪತಿಗಳಾಗಿದ್ದರು. ಈ ಸಲ ಅವರ ಸ್ಥಾನಕ್ಕೆ ಅವರೊಬ್ಬರ ನಾಮಪತ್ರ ಮಾತ್ರವೇ ಬಂದಿದ್ದು, ಅವಿರೋಧವಾಗಿ ಆರಿಸಲ್ಪಟ್ಟರೆಂದು ರಿಟರ್ನಿಂಗ್ ಆಫೀಸರ್ ಶ್ರೀ ಎಂ. ಎನ್. ಕೌಲರು ತಾ. ೨೫ರಂದು ಸಾರಿದರು.

**ಪ್ರಧಾನಿ ಶ್ರೀ ನೆಹರೂರವರು**— ಮೇ ತಿಂಗಳ ಪ್ರಥಮ ವಾರದಲ್ಲಿ ಸಿಂಹಳದಲ್ಲಿ ಜರಗಲಿರುವ ಬುದ್ಧ ಪರಿನಿರ್ವಾಣೋತ್ಸವದಲ್ಲಿ ಭಾಗವಹಿಸಲು ಅಲ್ಲಿಗೆ ತೆರಳಲಿರುವರು. ಆಗ ಸಿಂಹಳದ ಪ್ರಧಾನಿ ಭಂಡಾರ ನಾಯಕೆಯವರೊಡನೆ ಸಿಹಳದಲ್ಲಿನ ಭಾರತೀಯರ ಹಿತಕಾಪಾಡುವ ಕುರಿತು ಚರ್ಚಿಸುವ ಸಂದರ್ಭವಿದೆ. ಅಲ್ಲದೆ ಜೂನ್ ತಿಂಗಳಲ್ಲಿ ನೆರವೇರಲಿರುವ ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನಕ್ಕೆ ಈ ಭೇಟಿಯು ಪರಿಣಾಮಕಾರಿಯಾಗಬಲ್ಲುದೆಂದು ನಿರೀಕ್ಷಿಸಲಾಗಿದೆ.

**ಭಾರತ ಸರಕಾರವು** ಅನೇಕಾಂಕಡೊಡನೆ ದ್ವಿತೀಯ ಲೋಕ ಯುದ್ಧದ ಸಮಯದಲ್ಲಿ ಪಡೆದುಕೊಂಡ ಬೆಳ್ಳಿಯ ಸಾಲದಲ್ಲಿ ಭಾರತದ ವಿಭಜನಾ ಕಾಲದಲ್ಲಿ ಪಾಕಿಸ್ತಾನದ ಪಾಲಿಗೆ ಹೋಗಿ ಉಳಿದ ೧೬೨೦ ಲಕ್ಷ ಔನ್ಸ್ ಬೆಳ್ಳಿಯನ್ನು ಸಂದಾಯ ಮಾಡಿಲಿದೆಯೆಂದೂ, ಅದನ್ನು ಬೆಳ್ಳಿಯ ಗಟ್ಟಿ ಹಾಗೂ ಹಳೆಯ ನಾಲ್ಕಾಣೆಯ ನಾಣ್ಯಗಳ ಮೂಲಕ ಸಲಾಯಿಸುವುದೆಂದೂ ತಿಳಿದು ಬಂದಿದೆ ಹಳೆಯ ನಾಲ್ಕಾಣೆಯ ನಾಣ್ಯಗಳಲ್ಲಿ ಸೇಕಡಾ ೫೦ ರಷ್ಟು ಬೆಳ್ಳಿಯಿದೆ.

**ಮೈಸೂರು ಸರಕಾರದ**—ಮಂತ್ರಿಗಳ ಶಾಖಾ ವಿತರಣೆಯು ಕೃಪ್ತಿಕರವಾಗಿಲ್ಲ ಎಂಬ ದೂರು ಕೇಳಿ ಬರುತ್ತಿದೆ. ಹಳೆಯ ಮೈಸೂರು ಪ್ರದೇಶದ ಮಂತ್ರಿಗಳಿಗೆ ಅಧಿಕ ಹಾಗೂ ಪ್ರಮುಖ ಖಾತೆಗಳೂ, ಶಿಕ್ಷಣ ತಜ್ಞರಾದ ಶ್ರೀ ವೈ. ಕುಂಠ ಬಾಳಿಗರಿಗೆ ಮಜೂರಿ ಖಾತೆಯೂ ಮಜೂರ ಸಂಸರ್ಕವುಳ್ಳ ಶ್ರೀ ವೆಂಕಟಪ್ಪನವರಿಗೆ ಶಿಕ್ಷಣಶಾಖೆಯೂ ಕೊಡಲ್ಪಟ್ಟುದು ಆಶ್ಚರ್ಯಹಾಗೂ ಅತೃಪ್ತಿಕರವಾತಾವರಣಗಳನ್ನು ಹುಟ್ಟಿಸಿದೆ. ಹನ್ನೆರಡನೆಯ ಮಂತ್ರಿಯಾಗಿತೆಗೆದುಕೊಳ್ಳುವವರ ಹೆಸರು ಇಂದು ನಾಳೆಯೊಳಗೆ ಪ್ರಸಿದ್ಧಿಯಾಗುವ ನಿರೀಕ್ಷೆಯಿದೆ.

**ಬ್ರಿಟನ್ನಿನಿಂದ**—ಭಾರತ ಸರಕಾರವು ಪಡೆದುಕೊಂಡ ನಾಲ್ಕು ಯುದ್ಧ ನೌಕೆಗಳು ಸಯೇಜ್ ಕಾಲುವೆಯನ್ನು ದಾಟಿ ಕೆಂಪು ಸಮುದ್ರವನ್ನು ಸೇರಿದುವು. ಎ. ಎನ್. ಎಸ್. ಕಾರವಾರದ ಕಪ್ತಾನರಾವ್ ಶ್ರೀ ಚಟರ್ಜಿಯವರು ಸುಯೇಜ್ ಕೆಲಸಗಾರರನ್ನೂ, ಅವರ ಕಾರ್ಯದರ್ಶಿತೆಯನ್ನೂ ಪ್ರಶಂಸಿಸಿದರು. ಭಾರತದ ನೌಕಾ ಸಡೆಯನ್ನು ಅಭಿವೃದ್ಧಿಪಡಿಸಲು ಕೊಂಡುಕೊಂಡ ನೌಕೆಗಳವು.

ಬೆರ್ಮುಡಾದಲ್ಲಿ ಈಚೆಗೆ ಬ್ರಿಟಿಷ್ ಪ್ರಧಾನಿ ಮ್ಯಾಕ್ ಮಿಲನ್ ಅಮೇರಿಕದ ಅಧ್ಯಕ್ಷ ಐಸನ್‌ಹೋವರ್ ಕೂಡೆ ಸಮಾಲೋಚನೆ ನಡೆಸಿ, ಸುಯೇಜ್ ಸಂಬಂಧದಲ್ಲಿ ಹದಗೆಟ್ಟಿದ್ದ ತಮ್ಮೊಳಗಿನ ಸಂಬಂಧವನ್ನು ತೃಪ್ತಿದಾಯಕವಾದರೀತಿಯಲ್ಲಿ ಸುನರುಜ್ಜೀವಿಸಿದರು. ಚಿತ್ರದಲ್ಲಿ ಐಕರು ಸರಿವತ್ತಿಗೆ ಹೊರಟು ನಿಂತಿರುವುದನ್ನು ಕಾಣಬಹುದು.

# ಉಡುಪಿ

**ಡಾ. ಮಾಧವ ಪೈಗಳಿಗೆ ಸತ್ಕಾರ**— ಇತ್ತೀಚೆಗೆ ಕಾರ್ಯನಿಮಿತ್ತ ಪ್ರವಾಸ ಕೈಗೊಂಡಿದ್ದ 'ಸಿಂಡಿಕೇಟ್'ನ ಮೆನೇಜಿಂಗ್ ಡೈರೆಕ್ಟರರೂ 'ಎಕೆಡೆಮಿ'ಯ ರಿಜಿಸ್ಟ್ರಾರರೂ ಆದ ಡಾ. ಟಿ. ಎಮ್. ಎ. ಪೈಗಳಿಗೆ ಧಾರವಾಡ, ರಬಕವಿ, ರತ್ನಾಗಿರಿ ಮೊದಲಾದ ಕಡೆಗಳಲ್ಲಿ ವಿಶೇಷ ಸ್ವಾಗತ ಸತ್ಕಾರಗಳು ನಡೆದಿರುವುದು ಜಿಲ್ಲೆಯ ಹೊರಗಿನ ಜನರಿಗೂ ಅವರೆಲ್ಲರುವ ಪ್ರೀತಿ ವಿಶ್ವಾಸಗಳನ್ನೂ ಅವರ ಜನೋಪಯೋಗಿ ಕಾರ್ಯಗಳಲ್ಲಿ ಜನತೆಯು ವಹಿಸುವ ಆಸಕ್ತಿಯನ್ನೂ ಪ್ರದರ್ಶಿಸುತ್ತವೆನ್ನಬಹುದು. ರಬಕವಿ-ಬನಹಟ್ಟಿ ನಗರಸಭೆಯ ಕಡೆಯಿಂದ ತಾ. 13ರಲ್ಲು ನಡೆದ ಸತ್ಕಾರ ಸಮಾರಂಭದ ಅಧ್ಯಕ್ಷತೆಯನ್ನು ಜಮಖಂಡಿಭಾಗದ ಪ್ರಾಂತ ಅಫೀಸರ್ ಶ್ರೀ ಪಿ. ಆರ್. ನಾಯಕರು ವಹಿಸಿದ್ದರು. ನಗರ ಸಭಾಧ್ಯಕ್ಷರಾದ ಶ್ರೀ ಎಸ್. ಬಿ ದುರದುಂಡಿಯವರು ಡಾ. ಪೈಗಳಿಗೆ ಮಾನಪತ್ರವನ್ನು ಓದಿ ಅರ್ಪಿಸಿದರು. ಡಾ. ಪೈಗಳು ನಗರಸಭೆಯ ನೀರಿನ ಯೋಜನೆಯನ್ನು ಶ್ಲಾಘಿಸಿ ಮಾತನಾಡಿದರು.

**ಕರ್ನಾಟಕ ಸಂಘದ ಕಾರ್ಯಕಾರೀ ಸಮಿತಿ ಸಭೆಯು** - ತಾ. 18 ರಲ್ಲು 'ಪರಿವಾರ'ದಲ್ಲಿ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಕಡೆಯಿಂದ ವರ್ಷಂಪ್ರತಿಯೂ ನಾಲ್ಕಕ್ಕೆ ಕಡಿಮೆಯಿಲ್ಲದಂತೆ ಆಧುನಿಕ ವಿಜ್ಞಾನ ಗ್ರಂಥಗಳನ್ನು ಪ್ರಕಟಿಸುವ ಕುರಿತು ವಿಚಾರವಿನಿಮಯ ನಡೆಯಿತು. ಆ ಬಗ್ಗೆ ಕಾರ್ಯದರ್ಶಿಗಳು ಶ್ರೀಗಳಾವ ಯ, ಪುಂಡಲೀಕ ಶೆಣೈ, ಕು. ಶಿ. ಹರಿದಾಸ ಭಟ್ ಮತ್ತು ಎಸ್ ಕೆ. ಶ್ರೀಪತಿ ಆಚಾರ್ಯರು ಸದಸ್ಯರಾಗಿರುವ ಒಂದು ಉಪ ಸಮಿತಿಯನ್ನು ನೇಮಿಸಲಾಯಿತು.

# ಎಲ್ಲೆಲ್ಲಿ ಏನೇನು

**ಅಂಬರನಾಥದಲ್ಲಿಯ ದಕ್ಷಿಣ ಕನ್ನಡ ಜಿಲ್ಲಾ ಸಂಘದ** — ತೃತೀಯ ವಾರ್ಷಿಕೋತ್ಸವವು ಇದೇ ತಾ. 28ರಲ್ಲು ವಿಸ್ಕೋಸ್ಟೊರ್ಟ್ ಕ್ಲಬ್ಬಿನಲ್ಲಿ ಶ್ರೀ ಯು. ಜಿ. ಪುತ್ತಿ, ಅವರ ಅಧ್ಯಕ್ಷತೆಯಲ್ಲಿ ಜರಗುವುದು. ಮುಂಬಯಿ ನ್ಯಾಯವಿಧಾಯಕ ಸಭೆಯ ಅಧ್ಯಕ್ಷ ಶ್ರೀ ಎಸ್. ಎಫ್. ಸಿಲ್ವಾ, ಅವರು ಮುಖ್ಯ ಅತಿಥಿಗಳಾಗಿ ಆಗಮಿಸುವರು.

ದಕ್ಷಿಣಕನ್ನಡಿಗರು ಅಂಬರನಾಥದಲ್ಲಿ ಬಿಡಾರವಮಾಡಿಕೊಂಡು ತಮ್ಮದೇ ಆದ ಸಂಘವನ್ನು ಸ್ಥಾಪಿಸಿ ತನ್ಮೂಲಕ ವಾಚನಾಲಯ, ಲೈಬ್ರೆರಿಯನ್ನು ತೆರೆದಿರುವರು. ಅಲ್ಲದೆ ಸತ್ಯೆಯಲ್ಲೇ ರಾತ್ರಿ ಶಾಲೆ ತೆರೆಯುವ ಕಾರ್ಯಕ್ರಮವನ್ನು ಕೂಡಾ ಇಟ್ಟುಕೊಂಡಿರುವುದು ಸ್ತುತ್ಯವಿದೆ. ಶ್ರೀಗಳಾವ ಟಿ. ಎಲ್. ಸುಬ್ರಹ್ಮಣ್ಯ ಮತ್ತು ಎಸ್. ಕೆ. ಸಲಿವಾರ್ ಸಂಘದ ಅಧ್ಯಕ್ಷ ಕಾರ್ಯದರ್ಶಿಗಳಾಗಿರುವರು.

**ಉಜ್ಜಿಲ**— ಸ್ಥಳೀಯ ಯುವಕ ಸಂಘದ ವಾರ್ಷಿಕೋತ್ಸವವು ತಾ. 17ರಲ್ಲು ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ನರಡಿವಾಚ್ಛನವಾದ ನಂತರ ಶ್ರೀಗಳಾದ ಗೋವಿಂದ ಭಟ್ ಮತ್ತು ಎನ್. ಸೀತಾರಾಮ ರಾಯರು ಕಾರ್ಯೋಚಿತಮಾತುಗಳನ್ನಾಡಿದರು. ಶ್ರೀ ಎ. ಜಿ. ಆಳ್ವರವರು ಪಂದ್ಯಾಟದಲ್ಲಿ ಗೆದ್ದವರಿಗೆ ಬಹುಮಾನ ವಿತರಣೆಮಾಡಿದರು. ಅಧ್ಯಕ್ಷರ ಭಾಷಣ, ವಂದನಾರ್ಪಣೆ, ವಿವಿಧ ವಿನೋದಾವಳಿ ಕಾರ್ಯಕ್ರಮಗಳಾಗಿ ಸಮಾರಂಭ ಕೊನೆಗೊಂಡಿತು.

**ಮಣಿಪಾಲ**— ಇಲ್ಲಿಯ ಹರಿಜನ ವಿದ್ಯಾರ್ಥಿ ಭವನದ ಆಡಳಿತ ಮಂಡಳಿಯ ಸಭೆಯು ತಾ. 16ರಲ್ಲು ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು ಮುಂದಿನ ಶಾಲಾ ವರ್ಷದಲ್ಲಿ 40 ಹರಿಜನ ವಿದ್ಯಾರ್ಥಿಗಳಿಗೆ ಪ್ರವೇಶಕೊಡಬೇಕೆಂದೂ, ವಿದ್ಯಾರ್ಥಿಭವನದ ನೂತನ ಕಟ್ಟಡಕ್ಕೆ ವಿದ್ಯುದ್ದೀಪಗಳನ್ನು ಹಾಕಿಸಬೇಕೆಂದೂ ನಿರ್ಣಯವಾಯಿತು. ಶ್ರೀ ಟಿ. ರಮೇಶ ಪೈಗಳು ಭವನದ ಸುತ್ತಲೂ ಬೇಲಿಯಿಂಟಿಸಿದರು. ಆಗಿದ್ದುಕೊಂಡು ಕೆಲಸ ನಡೆಸುವುದೆಂದು ತೀರ್ಮಾನವಾಯಿತು.

**ಕುರ್ಕಾಲು**— ಇಲ್ಲಿಯ ಪಂಚಾಯತ್ ಬೋರ್ಡಿನ ಆಫೀಸು, ವಾಚನಾಲಯ ಬಗ್ಗೆ ಹೊಸದಾಗಿ ಕಟ್ಟಿಸಲಾದ ಸಭಾಭವನ ಉದ್ಘಾಟನೆಯನ್ನು ತಾ. 17ರಲ್ಲು ಶ್ರೀಯುತ ಎಸ್. ನಾಯಕ್, ಎಮ್. ಎಲ್. ಎ. ಅವರು ನೆರವೇರಿಸಿದರು. ಜಿಲ್ಲಾ ಕೆಲೆಕ್ಟರ್ ಶ್ರೀ ಎಚ್. ನರಸಿಂಹನೆಯರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಉಡುಪಿಯ ಎಡ್ವೊಕೇಟ್ ಶ್ರೀ ಬಿ. ಶೀನಪ್ಪ ಹೆಗ್ಡೆಯವರು ಮಹಾತ್ಮಾಗಾಂಧಿಜೀಯವರ ಭಾವಚಿತ್ರವನ್ನು ಆನಾವರಣಗೊಳಿಸಿದರು. ಆರಂಭದಲ್ಲಿ ಪಂಚಾಯತಬೋರ್ಡು ಅಧ್ಯಕ್ಷ ಶ್ರೀ ಕೆ. ವಿ. ನರಸಿಂಹಾಚಾರ್ಯರು ಸ್ವಾಗತಭಾಷಣಮಾಡಿದರು.

**ಕಾರ್ಕಳ**- ಸ್ಥಳೀಯ ಬೋರ್ಡು ಹೈಸ್ಕೂಲಿನ ಅಧ್ಯಾಪಕ ವೃಂದದವರು ತಾ 15 ರಲ್ಲು, ಮೈಸೂರು ವಿಧಾನ ಸಭೆಗೆ ಆರಿಸಲ್ಪಟ್ಟ ಡಾ. ಕೆ. ಕೆ. ಹೆಗ್ಡೆಯವರಿಗೆ ಸತ್ಕಾರಕೂಟವಿತ್ತು ಗೌರವಿಸಿದರು. ಶಾಲಾ ಹೆಡ್ಮಾಸ್ಟರ್ ಶ್ರೀ ಎಸ್. ಆರ್. ಆಚಾರ್ಯರು ಮುಖ್ಯ ಅತಿಥಿಗಳನ್ನು ಸ್ವಾಗತಿಸಿದರು. ಡಾ. ಹೆಗ್ಡೆಯವರು ಮಾತನಾಡುತ್ತಾ, ಭಿಧ್ಯಾಪಕರ ಸ್ಥಿತಿಗತಿಗಳನ್ನು ಸುಧಾರಿಸಲಿಕ್ಕೆ ತನ್ನಿಂದಾಗುವ ಸರ್ವ ಪ್ರಯತ್ನಗಳನ್ನು ಕಾಲಕಾಲಕ್ಕೆ ಮಾಡುತ್ತಿರುವುದಾಗಿ ಆಶ್ವಾಸನೆಯಿತ್ತರು.

**ವಾರ್ಷಿಕೋತ್ಸವ**- ಸ್ಥಳೀಯ ವನಿತಾ ಸಮಾಜದ ವಾರ್ಷಿಕೋತ್ಸವವು ತಾ. 17ರಲ್ಲು ಶ್ರೀಮತಿ ಸ್ವೇಮಾ ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಸಮಾಜದ ಅಧ್ಯಕ್ಷೆ ಶ್ರೀಮತಿ ಯಾಸ್ ಜೋಸಾವಿರು ಶ್ರೀಮತಿ ಪೈಗಳ ಪರಿಚಯ ಮಾಡಿದರು. ಶ್ರೀಪತಿ ಸಿ. ತಂತ್ರಿ ಶೆಟ್ಟಿಯವರು ಸ್ವಾಗತ ಭಾಷಣ ಮಾಡಿದರು. ಶ್ರೀಮತಿ ಕೆ. ಎಸ್. ರತ್ನಾಬಾಯಿಯವರು ಸಂದೇಶ ವಾಚನಮಾಡಿದರು. ಶ್ರೀಮತಿ ಕೆ. ರಮಾಬಾಯಿಯವರು ವರದಿಯನ್ನೋದಿದರು. ಅಧ್ಯಕ್ಷೆಯರ ಸಮಯೋಚಿತ ಭಾಷಣ, ವಂದನಾರ್ಪಣೆ, ವಿನೋದ ಕಾಲಕ್ಷೇಪ ಕಾರ್ಯಕ್ರಮಗಳಾಗಿ ಉತ್ಸವವು ಕೊನೆಗೊಂಡಿತು.

**ಶಿವರ**—ಸ್ಥಳೀಯ ಹಿಂದೂ ಹಾ. ಎ. ಶಾಲೆಯ ವಾರ್ಷಿಕೋತ್ಸವವು ತಾ. 15ರಲ್ಲು ಜಿಲ್ಲಾ ಕೆಲೆಕ್ಟರ್ ಶ್ರೀ ಎಚ್. ನರಸಿಂಹನ ವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಕರೆಸ್ಪೋಂಡೆಂಟ್ ಶ್ರೀ ಎಸ್.ಅಣ್ಣಯ್ಯ ಹೆಗ್ಡೇರು ಹಿಂದೂ ಹ್ಯಾಸ್ಕೂಲು ಹಿಂದೂ ಹಾ. ಎ. ಶಾಲೆಗಳ ಬಗ್ಗೆ ಕಟ್ಟಿಸಲಾದ ಕಟ್ಟೋಣಗಳಿಗೆ ಸಹಾಯವನ್ನು ಮಹನೀಯರನ್ನು ಪ್ರಶಂಸಿದರು. ಶಾಲೆಗಳ ಸರ್ವತೋಮುಖ ಅಭಿವೃದ್ಧಿಬಗ್ಗೆ ಎಲ್ಲರೂ ನೆರವಾಗಬೇಕಾಗಿ ಕೇಳಿಕೊಂಡರು. ಶಾಲಾ ಮುಖ್ಯೋಪಾಧ್ಯಾಯಕ ಶ್ರೀ ಕೆ. ಜಗನ್ನಾಥ ಶೆಟ್ಟರು ವರದಿವಾಚನಮಾಡಿದರು. ಅಧ್ಯಕ್ಷರು ನಿರಕ್ಷರತೆಯನ್ನು ಹೋಗಲಾಡಿಸಲು ಸೂಚನೆಗಳನ್ನಿತ್ತರು. ಬಳಿಕ್ಕೆ ಡಾಕ್ಟರ್ ಮೋಹಿನಿ ರಾವ್, ಇವರಿಂದ ಧ್ವನಿಚಿತ್ರೋಪನ್ಯಾಸವಾಯಿತು. ರಾತ್ರಿ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಂದ ನಾಟಕ ಇತ್ಯಾದಿ ಕಾರ್ಯಕ್ರಮಗಳಾದುವು.

**ಕಣ್ಣಂತೂರು**—ಸ್ಥಳೀಯ ಶ್ರೀ ತೋಡಕುಕ್ಕೆನಾರು ದೈವದ ಸನ್ನಿಧಿಯಲ್ಲಿ ನಡೆಯುವ ವಾರ್ಷಿಕ ಪಳಸುಳಿ ಉತ್ಸವವು ತಾ 14ರಲ್ಲು ವಿಜೃಂಭಣೆಯಿಂದ ಜರಗಿತು. ಈ ಸಂದರ್ಭದಲ್ಲಿ ಹಿಂದೂ ರಿಲೀಜಿಯಸ್ ಎಂಡೋಮೆಂಟ್ ಬೋರ್ಡಿನ ಆ! ಕಮಿಶನರ್, ಶ್ರೀ ಪಿ. ಎನ್. ಮಾಧವರಾಯರ ಅಧ್ಯಕ್ಷತೆಯಲ್ಲಿ ಸಾಹಿತ್ಯ ಮತ್ತು ಧಾರ್ಮಿಕ ಉಪನ್ಯಾಸಗಳಾದುವು. ಶ್ರೀಗಳಾದ ಡಿ ಕೃಷ್ಣರಾವ್, ಪಿ. ಗೋಪಾಲಕೃಷ್ಣ, ಬಾಡೂರು ಜಗನ್ನಾಥರೈ, ಎ. ಕೃಷ್ಣ ಶೆಟ್ಟಿ, ಕೆ. ಕಾಂತ ರೈ, ಮೊದಲಾದವರು ಪ್ರಮುಖ ಭಾಷಣಕಾರರಿದ್ದರು. ಆರಂಭದಲ್ಲಿ ಶ್ರೀ ಆಡೆಕ್ಕಳ ಬಾಲಕೃಷ್ಣ ಸ್ವಾಮ್ಯರು ಸ್ವಾಗತ ಪೂರ್ತುಗೆಳನ್ನಾಡಿದರು. ಶ್ರೀ ಡಿ. ಲಕ್ಷ್ಮಿನಾರಾಯಣರಾಯರು ಧನ್ಯವಾದಗಳನ್ನಿತ್ತರು.

**ಎಡನೀರು**— 'ಶಾಸರಗೋಡು ತಾಲೂಕಿನ ಶ್ರೀ ಎಡನೀರು ಮಠದಲ್ಲಿ ಆಲ್ಲಿಯ ಮಠಾಧೀಶ ಶ್ರೀ ಮಾಧವೇಶ್ವರಾನಂದ ಭಾರತೀ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಶ್ರೀ ಶಂಕರ ಜಯಂತಿ ಮಹೋತ್ಸವವು ಮೇ ತಿಂಗಳ ೩,೪ ಮತ್ತು 4 ರಲ್ಲು ವಿವಿಧ ಕಾರ್ಯಕ್ರಮಗಳೆಂದ ಜರಗಲಿರುವುದು. ಹಂಗಾರ ಕಟ್ಟಿ ಶ್ರೀ ಬಾಲೇಕಾಯರು ಮಠದ ಶ್ರೀ ಆನಂದಾಶ್ರಮ ಸ್ವಾಮಿಗಳವರು ಈ ಉತ್ಸವಕ್ಕೆ ಚಿತ್ತೈಸಿ ತಾವು ಸಂಸ್ಥಾಪಿಸಿರುವ ಶ್ರೀ ಶಂಕರಜಯಂತೀ ಸಭೆಯ ವಾರ್ಷಿಕ ಮಹಾಧಿವೇಶನವನ್ನು ಆಲ್ಲಿಯೇ ನಡೆಸಲಿರುವರು.

**ಮಲ್ಪೆ**.— ಮಹಾ ಮೈಸೂರು ಮೀನುಗಾರರ ಪರಿಷತ್ತು ಮೇ ತಿಂಗಳ್ 4, 5, 6 ರಲ್ಲು ಸ್ಥಳೀಯ ಸರಕಾರೀ ಫಿಶರೀಸ್ ಶಾಲೆಯ ವಠಾರದಲ್ಲಿ ಜರಗಲಿರುವುದು. ಕೇಂದ್ರ ಮತ್ತು ಪ್ರಾಂತೀಯ ಮತ್ತು ಇಲಾಖಾಮಂತ್ರಿ ಮತ್ತಿತರ ಅಧಿಕಾರಿಗಳನ್ನು ಆಮಂತ್ರಿಸಲು ಪರಿಷತ್ತು ಸಮಿತಿ ನಿರ್ಧರಿಸಿಯಿದೆ. ನಿಧಿ ಸಂಗ್ರಹಿಸಲು ಮತ್ತು ಪ್ರಚಾರಕಾರ್ಯ ನೈಯಲ್ಲು, ಕುಂದಾಪುರ್ಕ ಕಾರವಾರ ಜಿಲ್ಲೆಗಳಲ್ಲಿ ಪ್ರವಾಸನಮಾಡಲು ನಾಲ್ಕು ಉಪಸಮಿತಿಗಳನ್ನು ಸ್ವಾಗತಸಮಿತಿಯು ನೇಮಿಸಿಯುವುದೆಂದು ತಿಳಿದುಬರುತ್ತದೆ.

## ಕೇಂದ್ರದ ಮಂತ್ರಿ ಮಂಡಳ

ಎಪ್ರಿಲ್ ದಿನಾಂಕ ೧೭ರಂದು ಕೇಂದ್ರ ಮಂತ್ರಿ ಮಂಡಳದ ಸದಸ್ಯರ ಹೆಸರು ಹಾಗೂ ಅವರ ಶಾಖೆಗಳು ಪ್ರಸಿದ್ಧವಾದುವು. ಈ ಮಂತ್ರಿಮಂಡಲದಲ್ಲಿ ೧೩ ಮಂದಿ ಕ್ಯಾಬಿನೆಟ್ ಮಟ್ಟದವರು, ೧೪ ಮಂದಿ ರಾಜ್ಯ ಮಟ್ಟದ ಮಂತ್ರಿಗಳು ಮತ್ತು ೧೩ ಮಂದಿ ಉಪಮಂತ್ರಿಗಳಿದ್ದು ಒಟ್ಟು ೩೯ ಸಚಿವರಿದ್ದಾರೆ. ಅವರ ವಿವರಗಳು ಈ ರೀತಿಯಾಗಿವೆ.

**ಕ್ಯಾಬಿನೆಟ್ ದರ್ಜೆಯ ಮಂತ್ರಿಗಳು**

೧ ಶ್ರೀ. ಜವಾಹರಲಾಲ್ ನೆಹರು (ಪ್ರಧಾನ ಮಂತ್ರಿಗಳು—ವಿದೇಶಾಂಗ ವಿಷಯಗಳ ಶಾಖೆ ಅಣುಶಕ್ತಿ ಇಲಾಖೆ.

೨. ಮೌಲಾನ ಅಬುಲ್ ಕಲಂ ಆಜಾದ್—ಶಿಕ್ಷಣ ಮತ್ತು ವೈಜ್ಞಾನಿಕ ಸಂಶೋಧನೆ.

೩. ಶ್ರೀ ಜಿ. ಬಿ. ಪಂತ್—ಒಳಾಡಳಿತ ಶಾಖೆ.

೪. ಶ್ರೀ ಮೊರಾರ್ಜಿ ಆರ್. ದೇಸಾಯ್—ವಾಣಿಜ್ಯ ಮತ್ತು ಕೈಗಾರಿಕೆ.

೫ ಶ್ರೀ ಜಗಜ್ಜೀವನ ರಾಂ—ರೈಲ್ವೆ.

೬. ಶ್ರೀ ಗುಲ್ಜಾರಿ ಲಾಲ್ ನಂದಾ—ಕಾರ್ಮಿಕ, ಉದ್ಯೋಗ ಮತ್ತು ಯೋಜನೆ.

೭. ಶ್ರೀ ಟಿ ಟಿ. ಕೃಷ್ಣಮಾಚಾರಿ—ಹಣ ಕಾಸು.

೮. ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿ—ವಾಣಿಜ್ಯ ಮತ್ತು ಸಂಸರ್ಗ.

೯. ಶ್ರೀ ಸರ್ದಾರ್ ಸ್ವರ್ಣ ಸಿಂಗ್—ಉಕ್ಕು, ಗಣಿಗಳು ಮತ್ತು ಇಂಧನ ವಸ್ತುಗಳು.

೧೦. ಶ್ರೀ ಕೆ. ಸಿ. ರೆಡ್ಡಿ—ಕಾಮಗಾರಿ ವಸತಿ ಮತ್ತು ಸೂರೈಕೆ.

೧೧. ಶ್ರೀ ಅಜಿತ್ ಪ್ರಸಾದ್ ಜೈನ್—ಆಹಾರ ಮತ್ತು ವ್ಯವಸಾಯ.

೧೨. ವಿ ಕೆ. ಕೃಷ್ಣಮೆನನ್—ರಕ್ಷಣಾ

೧೩. ಶ್ರೀ ಎಸ್. ಕೆ. ಪಾಟೀಲ್—ವ್ಯವಸಾಯ ಮತ್ತು ವಿದ್ಯುಚ್ಛಕ್ತಿ.

**ರಾಜ್ಯ ಮಟ್ಟದ ಮಂತ್ರಿಗಳು:**

೧. ಶ್ರೀ ಸತ್ಯನಾರಾಯಣ ಸಿನ್ಹ—ಪಾರ್ಲಿಮೆಂಟರಿ ವಿಷಯಗಳು.

೨. ಡಾ। ಬಿ. ವಿ. ಕೇಸ್ಕರ್—ವಾರ್ತಾ ಮತ್ತು ಪ್ರಸಾರ ಶಾಖೆ.

೩. ಶ್ರೀ ಡಿ. ಪಿ. ಕರಮಲೆಕರ್—ಆರೋಗ್ಯ.

೪. ಡಾ। ಪಂಜಾಬರಾವ್ ಎಸ್. ದೇಶಮುಖ್—ಆಹಾರ ಮತ್ತು ಪೌಷ್ಠಿಕಾಹಾರ ಮಂತ್ರಿಗಳ ಶಾಖೆಯಲ್ಲಿ ಮಂತ್ರಿಗಳು.

೫ ಶ್ರೀ ಕೆ. ಡಿ. ಮಾಳವೀಯ—ಉಕ್ಕು, ಗಣಿಗಳು ಮತ್ತು ಇಂಧನ ಮಂತ್ರಿ ಶಾಖೆಯಲ್ಲಿ ಮಂತ್ರಿಗಳು.

೬. ಶ್ರೀ ಮೆಹರ್‌ಚಂದ್ ಖನ್ನಾ—ಪುನರ್ವಸತಿ.

೭. ಶ್ರೀ ನಿತ್ಯಾನಂದ ಕನುಂಗೋ—ವಾಣಿಜ್ಯ ಮತ್ತು ಕೈಗಾರಿಕಾ ಮಂತ್ರಿ ಶಾಖೆಯಲ್ಲಿ ಮಂತ್ರಿಗಳು.

೮. ಶ್ರೀ ರಾಜ್‌ಬಹದ್ದೂರ್—ವಾಣಿಜ್ಯ ಮತ್ತು ಸಂಸರ್ಗ ಮಂತ್ರಿ ಶಾಖೆಯಲ್ಲಿ ಮಂತ್ರಿಗಳು.

೯. ಶ್ರೀ ಬಿ. ಎನ್. ದಾತಾರ್—ರಕ್ಷಣಾ ಮಂತ್ರಿ ಶಾಖೆಯಲ್ಲಿ ಮಂತ್ರಿಗಳು.

೧೦. ಶ್ರೀ ಎಂ. ಎಂ ಷಾ—ವಾಣಿಜ್ಯ ಮತ್ತು ಕೈಗಾರಿಕಾ ಮಂತ್ರಿಗಳು.

೧೧. ಶ್ರೀ ಎಸ್.ಕೆ.ಡೇ—ಸಾಮುದಾಯಿಕ ಅಭಿವೃದ್ಧಿ.

೧೨. ಶ್ರೀ ಅಶೋಕ್ ಕುಮಾರ್‌ಸೆನ್—ಕಾನೂನು ಇಲಾಖೆ.

೧೩ ಶ್ರೀ ಕೆ. ಎಲ್. ಶ್ರೀಮಾಲಿ—ಶಿಕ್ಷಣ ಮತ್ತು ವೈಜ್ಞಾನಿಕ ಸಂಶೋಧನಾ ಮಂತ್ರಿ ಶಾಖೆಯಲ್ಲಿ ಮಂತ್ರಿಗಳು.

೧೪. ಶ್ರೀ ಹುಮಾಯೂನ್ ಕಬೀರ್—ವಾಣಿಜ್ಯ ಮತ್ತು ಸಂಸರ್ಗ ಮಂತ್ರಿ ಶಾಖೆಯಲ್ಲಿ ಮಂತ್ರಿಗಳು.

**ಉಪಮಂತ್ರಿಗಳು:**

೧. ಸರ್ದಾರ್ ಸೂರಜಿತ್ ಸಿಂಗ್ ಮಜೀಥಿಯಾ—ರಕ್ಷಣಾ ಶಾಖೆ.

೨. ಶ್ರೀ ಅಬೀದ್ ಅಲಿ—ಕಾರ್ಮಿಕ ಶಾಖೆ.

೩ ಶ್ರೀ ಅನಿಲ್ ಕುಮಾರ್ ಚಂದ—ವಿದೇಶಾಂಗ ವಿಷಯಗಳ ಶಾಖೆ.

೪. ಶ್ರೀ ಎಂ. ವಿ. ಕೃಷ್ಣಪ್ಪ—ಆಹಾರ ಮತ್ತು ಬೇಸಾಯ ಶಾಖೆ.

೫. ಶ್ರೀ ಜೈ ಶುಖಲಾಲ್ ಹಾಥಿ—ನೀರಾವರಿ ಮತ್ತು ವಿದ್ಯುಚ್ಛಕ್ತಿ.

೬. ಶ್ರೀ ಸತೀಶ ಚಂದ್ರ—ವಾಣಿಜ್ಯ ಮತ್ತು ಕೈಗಾರಿಕೆ.

೭. ಶ್ರೀ ಎಸ್. ಎನ್. ಮಿಶ್ರ—ಯೋಜನೆ.

೮. ಶ್ರೀ ಬಿ. ಆರ್. ಭಗತ್—ಹಣ ಕಾಸು.

೯. ಡಾ|| ಎಮ್. ಎಮ್. ದಾಸ್—ಶಿಕ್ಷಣ ಮತ್ತು ವೈಜ್ಞಾನಿಕ ಸಂಶೋಧನೆ

೧೦. ಶ್ರೀ ಷಾ ನವಾಜ್ ಖಾನ್—ರೈಲ್ವೆಗಳು.

೧೧. ಶ್ರೀಮತಿ ಲಕ್ಷ್ಮಿ ಎನ್. ಮೆನನ್—ವಿದೇಶಾಂಗ ವಿಷಯಗಳ ಶಾಖೆ.

೧೨. ಶ್ರೀಮತಿ ವಯಲೆಟ್ ಆಲ್ವ—(ನಾಳೆಂದೆ ಪ್ರಕಟಿಸಲಾಗುವುದು)


ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

**ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.**

**ನಿಮ್ಮ ಠೇವಣಾತಿಗಳ ಮೇಲೆ ಹೆಚ್ಚು ಬಡ್ಡಿ ಬೇಕೇ?**

ಹಾಗಿದ್ದಲ್ಲಿ, ನಿಮಗೆ ಸಮೀಪವಿರುವ "ಕೊರ್ಪೊರೇಶನ್" ಬೇಂಕಿನಲ್ಲಿ ವಿಚಾರಿಸಿರಿ. "ಕೊರ್ಪೊರೇಶನ್" ಬೇಂಕು ಎಲ್ಲಾ ತರದ ಠೇವಣಾತಿಗಳ ಮೇಲೆ ಬಡ್ಡಿ ದರಗಳನ್ನು ಇತ್ತೀಚೆಗೆ ಏರಿಸಿಯದೆ. ಆಲ್ಲದೆ ಠೇವಣಾತಿದಾರರಿಗೆ ಹೆಚ್ಚಿನ ಸವಲತ್ತುಗಳನ್ನು ನೀಡಲು, ಶರ್ತಗಳನ್ನೂ ಬದಲಾಯಿಸಿಯದೆ.

**51 ವರುಷಗಳ ಪರಿಪಕ್ವ ಬೇಂಕಿಂಗ್ ಅನುಭವ!**

**7:00,00,000 ರೂಪಾಯಿಗಳಿಗೂ ಮಿಗಿರಿದ ಒಟ್ಟು ವಹಿವಾಟು!**

**THE CANARA BANKING CORPORATION LIMITED**


**ಸೆಕೆಂಡರಿ ಶಾಲೆಗಳು**

ತಮ್ಮ ಉಪಯೋಗಾರ್ಥವಾಗಿ 'ನವಯುಗ' ವಾರಪತ್ರಿಕೆಯನ್ನು ತರಿಸಿಕೊಳ್ಳಬಯಸಿದಲ್ಲಿ Roc. No- 466-N /50 ತಾ. 13-12-50ನೇ ಪ್ರೊವಿಡಿಂಗ್ಸಿನಂತೆ ಮದ್ರಾಸು ಸರಕಾರದ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ನವರು ಮಂಜೂರು ಮಾಡಿದ್ದಾರೆ.

ಈ ವರೆಗೆ ಚಂದಾದಾರರಾಗದ ಯಾವ ತ್ತೂ ಸೆಕೆಂಡರಿಶಾಲೆಗಳವರು (ನವಯುಗ ಕ್ಕೆ ಚಂದಾದಾರರಾಗಿ ತರಿಸಿಕೊಂಡು ಸ್ಫೂರ್ತಿಪ್ರಸುವಂತೆ ಈಮೂಲಕ ವಿನಂತಿಸಿಕೊಳ್ಳಲಾಗಿದೆ.

**ಮೆನೇಜರ್.**

## ಜನಮತ

ನ್ಯಾಯವಾದ ಜನಾಭಿಪ್ರಾಯಕ್ಕೆ ಸೂಕ್ತ ಪ್ರಸಿದ್ಧಿಯನ್ನು ಕೊಡಲು ಈ ನಿಭಾಗವನ್ನು ಉಪಯೋಗಿಸಲಾಗುತ್ತದೆ. ಸಾರ್ವಜನಿಕರು ಪತ್ರಮುಖೇನ ನಮ್ಮೊಡನೆ ಸಹಕರಿಸಬೇಕಾಗಿ ಬಿನ್ನಹ.
ಸಂ. ನ.

## ನಯೇ ಪೈಸೆ

"ನಯೆ ಪೈಸೆ" ಭಾರತದಲ್ಲಿಂದು ಪ್ರಚಾರಕ್ಕೆ ಬಂದಿದೆ. ಸದ್ಯಕ್ಕೆ ನ್ಯವಹಾರದ ಅನುಕೂಲತೆಗಾಗಿ ಈಗಿನ ನಾಣ್ಯಕ್ಕೂ ಹಿಂದಿನ ನಾಣ್ಯಕ್ಕೂ ಕೋಲಿಕೆಯನ್ನು ಕೊಡಲಾಗಿದೆ. ಈ ರೀತಿಯಲ್ಲಿ--ಬಿಲ್ಲರೆ ನ್ಯವಹಾರಗಳಲ್ಲಿ ಅಲ್ಪ ಸ್ವಲ್ಪ ನಷ್ಟವೂ ಬರಬಹುದು--ಲಾಭವೂ ಬರಬಹುದು. ಹಾಗಿದ್ದರೂ ಮೂರು ನರ್ಷಗಳ ತನಕ ಸಾಧಾರಿಸಬೇಕು. ಆ ಮೇಲೆ ಸಂಪೂರ್ಣ ನಯೇ ಪೈಸೆಯೇ ಬರುತ್ತದೆ

ಮೂರು ವರ್ಷದ ನಂತರದ ಮಾತಿರಲಿ. ಸದ್ಯದ ಪರಿಸ್ಥಿತಿಯನ್ನು ನಾವಿಲ್ಲಿ ಸ್ವಲ್ಪ ಆಲೋಚಿಸಬೇಕು. ಬಿಲ್ಲರೆ ನ್ಯವಹಾರಗಳಲ್ಲಿ ಯಾರಿಗಾದರೊಬ್ಬರಿಗೆ ನಷ್ಟ, ಲಾಭ ಬಂದೇ ಬರುತ್ತದೆ ಎಂಬಾಗ ಲಾಭ ಯಾರಿಗೆ? ನಷ್ಟ ಯಾರಿಗೆ? ಎಂದು ತುಸು ಆಲೋಚಿಸಿರಿ. ಈಗಾಗಲೇ ನಮಗೆ ತಿಳಿಯತೊಡಗಿದೆ--ಆಗತಾನೆಗಳಲ್ಲಿ ಎಲ್ಲಾ ಸಾಮಾನುಗಳಿಗೂ ಎರಡಿಷ್ಟು ದರಗಳಲ್ಲಿ ನ್ಯತ್ಯಾಸಗಳಾಗಿವೆ. ಒಂದೊಂದು ನಯೇ ಪೈಸೆಯೇರಿಸಿದ್ದಾರೆ. ಇದರಿಂದ ಬಿಲ್ಲರೆ ವ್ಯಾಪಾರಗಳಲ್ಲಿ ಸೋಲುವವರು ಗಿರಾಕಿಗಳೇ. ಹೊರತು ವ್ಯಾಪಾರಿಗಳಲ್ಲ.

ಟಪ್ಪಾಲು ದರಗಳಲ್ಲಿಯೂ ತುಂಬಾ ನ್ಯತ್ಯಾಸವಾಗಿದೆ. ಇತ್ತಿಯೂ ಜನರಿಗೆ ನಷ್ಟ, ವ್ಯವಸ್ಥಾಪಕರಿಗೆ ನಯೇ ಪೈಸೆಯಿಂದ ವಿಶೇಷ ನಷ್ಟವೊದಗಿದೆ. ಮೊದಲು ಒಂದು ರೂಪಾಯಿಯ 64 ಪಾವಾಣಿ ನ್ಯಾಣ್ಯಗಳಿಂದ ಅವರು 64 ಪ್ರತಿಗಳನ್ನು ಕಳುಹಿಸಬಹುದಾಗಿತ್ತು. ಈಗ ಪಾವಾಣಿಗೆ ಎರಡು ನಯೆ ಪೈಸೆಯಾದ್ದರಿಂದ ರೂಪಾಯಿಗೆ 50 ಪತ್ರಿಕೆಗಳನ್ನು ಮಾತ್ರ ಕಳುಹಿಸಬಹುದು.

ಸಪ್ಪದ ಹೆಚ್ಚಿನ ಖಾಲು ಬಡ ಕುಟುಂಬಗಳ ಮೇಲೆಯೇ ಬೀಳುತ್ತವೆ. ಶ್ರೀಮಂತ ಹಾಗೂ ಸುದ್ಯನು ಕುಟುಂಬಗಳು ಸಾಮಾನ್ಯಿಗಳನ್ನು ಒಮ್ಮೆಯೇ ಖರೀದಿಸಿಡುತ್ತಾರೆ. ಆದರೆ ಬಡಕುಟುಂಬಗಳು ಇಂದಿನ ದಿನ ಸಂಬಳದಿಂದ ನಾಳೆಗೆ ಸಾಮಾನು ತರುವ, ಇಂದಿಗೆ ಇಂದೇ ತರುವ ಕುಟುಂಬಗಳು ನಮ್ಮಲ್ಲಿ ಕಡಿಮೆಯಿಲ್ಲ. ಭಾರತ ಕೃಷಿಪ್ರಧಾನವಾದ ದೇಶ. ಎಂತಲೇ ಕೃಷಿಕರು, ರೈತರು, ಕಾರ್ಮಿಕರು ಆರ್ಥಾರ್ಥ ಬಡವರು ಇಲ್ಲಿ ಹೆಚ್ಚಿದ್ದಾರೆ. ಹೊದಲೇ ಹಳ್ಳಿಯಲ್ಲಿ ಬಡವರನ್ನು ಸೋಲಿಸುವವರೇ ಹೆಚ್ಚು ಇನ್ನು ಹೇಳುವುದೇ ಬೇಡ. ಒಟ್ಟಾಗೆಗೆ ಆರು ನಯೇ ಪೈಸೆಯೆಂದೊಡನೆ ಕಾಲು ನಯಾಪೈಸೆಯಲ್ಲಿ ನಾವು ಸೋತೆವೆಂದು ಏಳು ನಯೇಪೈಸೆ ದರ ಹಿಟ್ಟಿದ್ದಾರೆ--ಈಗಾಗಲೇ ಕೆಲವರು. ಅರ್ಥಾಹ್ಯ ಕಾಲಾಹಣೆಯ ವ್ಯಾಪಾರದಲ್ಲಿ ಎಂತೂ ಆವರಿಗೆ ಲಾಭಾಂಶ ಹೋಗುತ್ತದೆ. ಹೀಗಿರುವಲ್ಲಿ ಏಳು ನಯೇಪೈಸೆ ಇಡುವುದು ತಪ್ಪು ಅದರಿಂದ ವಿಶೇಷ ಬೇರೆಡೆ ಸಿಕ್ಕಿಯೇ ಸಿಕ್ಕುತ್ತದೆ. ಆದರೆ ಆಂತಹ ಸಮೃದ್ಧಿ ಅವರಿಗೆ ಬೇಕಲ್ಲ! ಆಂತೂ ಈ ಪರಿನರ್ವಸನೆಯಿಂದ ಬಡವರು ಕೊಂಡು ಕೊಳ್ಳುವ-- ಕೊಡುವುದರಲ್ಲಿ ಮತ್ತೂ ಬಡವರಾದಂತಾಯಿತು.

ಈಗ ಜಿಲಾನಗೆಗೆ ಬಂದಿಮದು ಒಂದು, ಎರಡು, ಆ್ಯದು, ಹತ್ತು ನಯೇ ಪೈಸೆಯ ನಾಣ್ಯಗಳು ರೂಪಾಯಿ, ಅನ್ನತ್ತು, ಇಸ್ಪತ್ತೈದು, ನಯೇ ಪೈಸೆಗಳು ನಾಣ್ಯಗಳು ಬರಬೇಕಷ್ಟೆ. ಆವುಗಳ ಅಳತೆಯನ್ನು (ಚಿತ್ರಪಟ್ಟಿ) ನೋಡುವಾಗ, ರೂಪವಲ್ಲಿ ಐದೇ ರೀತಿಯಾಗಿವೆ ಬರೆದ ಅಂಕೆಗಳಲ್ಲಿ ಮಾತ್ರ ನ್ಯತ್ಯಾಸ ಎಂಬಾಗ ನಿರಕ್ಷ್ಯರಿಗೆ ಅವರ ಪರಿಚಯವಾಗಿದು.

ನಾಣ್ಯವೆಂದ ಮೇಲೆ ಕುರುಡನಿಗೂ ಸ್ಪರ್ಶದಿಂದ ಅದರ ನೌಲ್ಯದ ಪರಿಚಯವಾಗಬೇಕು. ಹೀಗಿರುವಲ್ಲಿ ಇದೇಕೆ ಹೀಗಾಯಿತೋ ತಿಳಿಯುವುದಿಲ್ಲ

ಹತ್ತು 'ನಯೇಪೈಸೆ' ಗೊಂದು ಬೇರೆ ಹೆಸರಿತ್ತಿದ್ದರೆ ಉತ್ತಮವಿತ್ತು. ಇದೀಗ ಇಸ್ಪತ್ತೈದು, ಅನ್ನತ್ತು ನಯೇ ಪೈಸೆಯೆಂದೇ ಕರೆಯಬೇಕಾಗಿದೆ.

ಹೊಸತೊಂದನ್ನು ಹೊಸೆಯುವಾಗ ಯಾರಿಗೂ, ಎಲ್ಲವನ್ನೂ ಸರಿಮಾಡಿ ಸರ್ವರಿಂದಲೂ 'ಸೈಷ್' ಅನ್ನಿಸಿಕೊಳ್ಳಲು ಹೇಗೂ ಸಾಧ್ಯವಿಲ್ಲ. 'ನಯೆ ಪೈಸೆ' ವಿಧಾನ--ದಶಮಾಂಶ ಸದ್ಯತೆ ಭಾರತಕ್ಕೂ ಒಳ್ಳೆಯದೇ. ಆದರೆ ದೇಶದಲ್ಲಿ ವ್ಯವಹಾರಿಕ ಜ್ಞಾನವು ಜನತೆಯಲ್ಲಿ ಇನ್ನಷ್ಟು ವೃದ್ಧಿಸಿದ ಮೇಲೆ ಈ ಪದ್ಧತಿಯನ್ನು ರೂಪಿಸುತ್ತಿದ್ದರೆ ಇನ್ನು ಹೆಚ್ಚಿನ ಜನಮತ ದೊರೆಯುತ್ತಿತ್ತು.

— ಕೀ. ವ. ಕೇಶವ.

## ಕವಿತ್ತಾರು ಜಾತ್ರೆ

ಪ್ರತಿ ವರ್ಷದಂತೆ ಕವಿತ್ತಾರು ಮಹಾ ಉತ್ಸವವು ಇದೇ ಬರುವ ಮೇ ತಿಂಗಳ ತಾ. 13ನೇ ಸೋಮವಾರ ನೆರವೇರುವುದು.

ಕವಿತ್ತಾರು ತಾ. ೩೦.

## ಮಂಗಳೂರು

**ಶ್ರೀ ಶ್ರೀಶೂಲೇಶ್ವರ ದೇವಸ್ಥಾನ ಜೀರ್ಣೋದ್ಧಾರ**— ತಾ. 15ರಲ್ಲು ಹಿಂದೂ ರಿಲೀಜಿಯಸ್ ಎಂಡೋಮೆಂಟ್ ಬೋರ್ಡಿನ ಅಸಿಸ್ಟಾಂಟ್ ಕಮಿಶನರ್ ಶ್ರೀ ಪಿ. ಎಸ್. ಮಾಧವ ರಾಯರ ನೇತೃತ್ವದಲ್ಲಿ ಶ್ರೀಶೂಲೇಶ್ವರ ದೇವಸ್ಥಾನ ಜೀರ್ಣೋದ್ಧಾರವ ಕುರಿತು ಊರಿನರ ಮಹಾಸಭೆಯೊಂದು ಜರಿಗಿತು. ಶ್ರೀ ಕೆ. ಆರ್. ಆಚಾರ್, ಎಮ್. ಪಿ. ಅವರು ಅಧ್ಯಕ್ಷತೆ ವಹಿಸಿದ್ದರು. ದೇವಸ್ಥಾನ ಜೀರ್ಣೋದ್ಧಾರವ ಕೆಲಸಕ್ಕಾಗಿ ಹಣ ಸಂಗ್ರಹಿಸಲು ಮತ್ತು ಕಾರ್ಯವನ್ನು ಮುಂದೊತ್ತಲು ಶ್ರೀಗಳಾದ ಕೆ. ಆರ್. ಆಚಾರ್, ಅಧ್ಯಕ್ಷ; ಪೇಜಾವರ ಶ್ರೀಧರರಾವ್, ಉಪಾಧ್ಯಕ್ಷ; ಡಿ ಮೋಹನ್‌ರಾಜ್, ಕಾರ್ಯದರ್ಶಿ ಮತ್ತು ಜಿಜ್ಞಾಸ್ಯರಾಗಿಯೂ ಶ್ರೀನಿವಾಸ ಎಮ್. ವಿ. ರಾಜ, ಅನಂತ ಉಪಾಧ್ಯಾಯ, ಪೆಂಕಟ್ರಮಣಾಚಾರ್ಯ, ಎಮ್. ಕೆ. ವಿಠ್ಠನಾಥಯ್ಯ ನವರು ಸದಸ್ಯರಾಗಿರುವ ಜೀರ್ಣೋದ್ಧಾರ ಸಮಿತಿ ರಚಿಸಲಾಯಿತು.

**ವಿಮಾನಯಾನಿಕ ತಜ್ಞರು** — ಜಪಾನ್ ಪ್ರೀಡಮ್ ವಿಮಾನಯಾನಿಕೆಯ ತಜ್ಞರಾದ ಡಾ. ಮುಯಾಮೋಟೋ ಮತ್ತು ಮುಂಬಯಿಯ ಕೇಂದ್ರ ಅಳ ಕಡಲ ವಿಮಾನಯಾನಿಕೆ ಕೇಂದ್ರ ದಮಿ. ಜಾರ್ಜ್ ಮೆಕೆನಿಯವರು ತಾ. 15ರಲ್ಲು ಮಂಗಳೂರಿಗೆ ಆಗಮಿಸಿ, ಇಲ್ಲಿಯ ಮಿನುಗಾರಿಕೆಯನ್ನು ಪರಿಶೀಲಿಸಿದರು. ಇವರು ಕೊಚ್ಚಿಯಲ್ಲಿ ಹೊಸತಾಗಿ ಆರಂಭಿಸಿರುವ ಮತ್ಸ್ಯ ತಾಂತ್ರಿಕ ಕೇಂದ್ರದ ಪರವಾಗಿ ಈ ಸರಕೀಲನೆ ಕೈಗೊಂಡಿದಾಗಿದೆ.

**ಸಣ್ಣಾರಕೂಟ**- ಮೈಸೂರು ಸರಕಾರದ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯ ಕಾರ್ಯದರ್ಶಿ ಶ್ರೀ ಎಸ್. ವಾಸುದೇವರಾಯರ ಗೌರವಾರ್ಥವಾಗಿ ತಾ. 17ರಲ್ಲು ಸಂಜೆ ದ. ಕ. ಜಿಲ್ಲಾನ್ಯಧ್ಯ ಮತ್ತು ಹಿತ ಚಿಂತನಾ ಬೋರ್ಡಿನವರು ಸತ್ಕಾರಕೂಟವನ್ನೇರ್ಪಡಿಸಿದರು. ಶ್ರೀ ವಿ. ಎಸ್. ಕುಡ್ವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲೆಯ ತಾಲೂಕು ಆಫಾವಾ ಪ್ರಮುಖ ಕೇಂದ್ರಗಳಲ್ಲಿ ತಾಂತ್ರಿಕ ಶಿಕ್ಷಣದ ಪ್ರಾತ್ಯಕ್ಷಿಕೆಗಳನ್ನು ತೆರೆದು ವಿದ್ಯಾವಂತ ನಿರುದ್ಯೋಗಿಗಳಿಗೆ ತರಬೇತಿಕೊಟ್ಟು ಅವರಿಗೆ ಯೋಗ್ಯವೃತ್ತಿ ಕೈಕೆಸಳ್ಳುವಂತೆ ಮಾಡುವ ಸಾಧ್ಯಾಸಾಧ್ಯತೆಯ ಕುರಿತು ಚರ್ಚೆಯಾಯಿತು. ಮುಂಗಳೂರಿನಂದು ಕೈಗಾರಿಕಾ ಸಹಾಯ ಕ್ಷೇತ್ರವು ಮುಂಜೂರಾಗಿದ್ದು, ಅದಕ್ಕಾಗಿ ಎರಡು ಲಕ್ಷ ರೂಪಾಯಿ ಇರಿಸಲಾಗಿದೆ ಎಂದು ಶ್ರೀ ವಾಸುದೇವ ರಾಯರು ಹೇಳಿದರು.

**ಶ್ರೀ ಕೆ. ಸದಾನಂದ ಹೆಗ್ಡೆ** — ಸೈಸೂರು ಹೈಕೋರ್ಟಿಗೆ ಮೂವರು ಹೊಸ ನ್ಯಾಯಾಧೀಶರ ನೇಮಕಕವಾಗಲಿದ್ದು ಅವರಲ್ಲಿ ಶ್ರೀ ಕೆ. ಸದಾನಂದ ಹೆಗ್ಡೆಯವರ ಹೆಸರೂ ಇರುವುದಾಗಿ ವಿಶ್ವಸನೀಯವಾಗಿ ಗೊತ್ತಾಗಿದೆ.

**ದ. ಕ. ವಿಕ್ಷಿಪ್ತ ಕರ ಸಂಘದ ಕರಸ್ಪಿಲು ಸಭೆಯು**— ತಾ. 17ರಲ್ಲು ರೆ. ಫಾ. ಜೇಮ್ಸ್ ಕೊಯಿಲೊ ರವರ ಅಧ್ಯಕ್ಷತೆಯಲ್ಲಿ ಜರಿಗಿತು. ಪ್ರಧಾನ ಕಾರ್ಯದರ್ಶಿ ಶ್ರೀ ಪಿ. ಎಸ್. ಪೆಂಕಟಕೃಷ್ಣರಾಯರು ವರದಿಯನ್ನೋದಿದರು. ರೆ. ಫಾ ಜೇಮ್ಸ್ ಕೊಯಿಲೊರವರು ಬೆಂಗಳೂರಿಗೆ ವರ್ಗಾಯಿಸಲ್ಪಟ್ಟಿದ್ದರಿಂದ ಶ್ರೀ ಎಸ್. ಮುಕುಂದ ರಾಯರನ್ನು ಅಧ್ಯಕ್ಷರನ್ನಾಗಿಯೂ ಶ್ರೀ ಬಿ. ಭಾಸ್ಕರ ರಾಯರನ್ನು ಉಪಾಧ್ಯಕ್ಷರನ್ನಾಗಿಯೂ ಆರಿಸಲಾಯಿತು.

**ಮುನಿಸಿಪಲ್ ಮಜೂರರ ಮುಷ್ಕರ**- ಮುಂಗಳೂರಿನ ಮುನಿಸಿಪಲ್ ಮಜೂರರ ಸಭೆಯು ತಾ. 14ರಂದು ಜರಗಿ ಮುಸ್ಸಂರಿಹೂಡುವ ಕುರಿತು ಮತ ತೆಗೆಯಲಾಗಿ 396 ಮಂದಿ ಅನುಕೂಲವಾಗಿಯೂ 6ಮಂದಿ ಮುಷ್ಕರಕ್ಕೆ ವಿರೋಧವಾಗಿಯೂ ಮತವಿತ್ತರು. ಕೆಲಸಗಾರರಿಗೆ ಮಾಸಿಕ ವೇತನ ರೂ. 30 ಮತ್ತು ತುಟ್ಟಿ ಭತ್ತೆ ರೂ ೨೬ಾಣಾಗೂ ಮನೆ ಬಾಡಿಗೆ ರೂ. 5 ನಿಗದಿಯೆಂಬ ಕೋಕೆಯ ಸಫಲತೆಗಾಗಿ ಮುಷ್ಕರ ಮಾಡುವ ನಿರ್ಣಯವಾಗಿದೆ.

**ಮೂರು ವರ್ಷದ ಡಿಗ್ರಿ ಕೋರ್ಸು**

ದಕ್ಷಿಣ ಕನ್ನಡ ಮತ್ತು ಕೊಡಗುಗಳಲ್ಲಿರುವ ಕಾಲೇಜುಗಳಲ್ಲಿ ಈಗಾಗಲೇ ವಿಶ್ವವಿದ್ಯಾಲಯ ಪೂರ್ವ(ಪ್ರಿಯುನಿವರ್ಸಿಟಿ)ತರಗತಿಯನ್ನು ಪ್ರಾರಂಭಿಸಿರುವ ಬಗ್ಗೆ ವಿವರವಾಗಿ ಮುಂದಿನ 1957--58 ರ ಶಿಕ್ಷಣ ವರ್ಷದ ಪ್ರಾರಂಭದಲ್ಲೇ ಮೂರು ನರ್ಷದ ಡಿಗ್ರಿ ಕೋರ್ಸನ್ನು ಮೈಸೂರು ವಿಶ್ವವಿದ್ಯಾಲಯದವರು ಪ್ರಾರಂಭಿಸುವ ಸಂಭವವಿರುವುದಾಗಿಯೂ ಇದೇ ರೀತಿಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯದವರೂ ಮಾಡುವುದಾಗಿ ತಿಳಿಯಬರುತ್ತದೆ.

**ಜಿಲ್ಲೆಗೊಂದು ಕಲಾಸಂಘಗಳ**

ಒಕ್ಕೂಟ- ದ. ಕ. ಜಿಲ್ಲೆಯ ನಾಟ್ಯ ನಾಟಕ, ಸಂಗೀತ, ಯಕ್ಷಗಾನ ಮೊದಲಾದ ಕಲಾ ಮತ್ತು ಸಾಂಸ್ಕೃತಿಕ ಸಂಘಗಳ ಪ್ರತಿನಿಧಿಕ ಸಭೆಯೊಂದು ತಾ. 16ರಲ್ಲು ಬಿಲ್ಲಾ ಕಲೆಕ್ಟರ್ ಶ್ರೀ. ಎಚ್. ನರಸಿಂಹರವರ ಅಧ್ಯಕ್ಷತೆಯಲ್ಲಿ ಜರಿಗತು. ಜಿಲ್ಲೆಗೊಂದು ಕಲಾ ಸಂಘಗಳ ಒಕ್ಕೂಟವನ್ನು ರಚಿಸಿ ಆ ಮೂಲಕ ಜಿಲ್ಲೆಯ ಕಲಾಭಿವೃದ್ಧಿಯನ್ನು ಪರಿಣಾಮಕಾರಿಯಾಗಿ ಕೈಗೊಳ್ಳಲು ಒಮ್ಮತದ ನಿರ್ಣಯವಾಯಿತು. ಈ ಒಕ್ಕೂಟಕ್ಕೆ ಕಾರ್ಯಾನುಕೂಲತೆಗಳನ್ನು ತಯಾರಿಸಿ ಮೇ ತಿಂಗಳ ತಾ. 8ರಲ್ಲು ಜರಗಲಿರುವ ಇನ್ನೊಂದು ಸಭೆಯ ಮುಂದಿರಿಸಬೇಕೆಂದು ತೀರ್ಮಾನವಾಯಿತು. ಆ ಬಗ್ಗೆ ಜಿಲ್ಲಾ ಕಲೆಕ್ಟರ್, ನಗರ ಸಭಾಪತಿ ಮೊದಲಾದವರಿಂದ ಸಮಿತಿ ರಚಿಸಲಾಯಿತು.

**ರೈಲ್ವೆ ಸಮಯದ ಬದಲಾವಣೆ ಏಕೆ?**— ಮುಂಗಳೂರಿನಿಂದ ರೈಲ್ವೆ ಬಂಡಿ ಬಿಡುವ ಮತ್ತು ಬರುವ ಸಮಯವನ್ನು ಸಾಮಾನ್ಯವಾಗಿ ಮೂರುತಿಂಗಳಿಗೊಮ್ಮೆ ಬದಲಿಸುವುದರಿಂದ ಪ್ರಯಾಣಿಕರಿಗೆ ತುಂಬಾ ತೊಂದರೆಯಾಗುತ್ತದೆಂದೂ ಜಿಲ್ಲಾ ರೈಲ್ವೆ ಸಲಹಾ ಸಮಿತಿ ಸದಸ್ಯರು ಈ ಕುರಿತು ಆಕ್ಷೇಪಿಸಬೇಕೆಂದೂ ಬಾತ್ಮಿದಾರರೊಬ್ಬರು ಬರೆಯುತ್ತಾರೆ.

# ಕುಮಾರಿ ಬಿಲ್ಲೆಗಳು

**Govt. Regd.**

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ತವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ನಿ.ಸಿ.ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

**P. DEVEE & Co. (N. J.)** CALCUTTA--40.

ಸ್ವಾಕಿಸ್ವರು: ಷಾ ಕೆಂಪೆನಿ, ಮಂಗಳೂರು--1.



# ಘಂಟಾಮಾರಾ

ಇಗ್ನೇಸಿಯೋ ಸಿಲೋನೆಯೆ ಇಟಾಲಿಯನ್ ಕಾದಂಬರಿಯ ಅನುವಾದ

ಅನುವಾದಕರು:— **ಕು. ಶಿ. ಹರಿದಾಸ ಭಟ್ಟ**, ಎಂ. ಎ.

—ಕೆಲವು ಅಭಿಪ್ರಾಯಗಳು—

"ಈ ಶತಮಾನದ ಅತ್ಯಂತ ಮನೋಜ್ಞವಿರ್ಶ ಕಾದಂಬರಿಗಳಲ್ಲೊಂದು" —ಕರ್ನಾಟಕ ವೀರ.

"ಮೂಲಗ್ರಂಥದ ವೈಶಿಷ್ಟ್ಯಗಳೆಲ್ಲ ಸಮರ್ಪಕವಾಗಿ ಕನ್ನಡಿಸಲ್ಪಟ್ಟಿರುವುದನ್ನು ನೋಡುವಾಗ ಅನುವಾದವು ಸಫೋರ್ತ್ತ ಮನೆಯೆಂಬ ಹೇಳಲು ಆಡ್ಡಿ ಇಲ್ಲ. ಅನುವಾದ ಮಾಡಿದ ಶ್ರೀ ಭಟ್ಟರೂ ನಾಡಿಸಿದ ಪ್ರಕಾಶಕರೂ ಅಭಿನಂದನೀಯರು." —ಇಂಡಿಯನ್ ಎಕ್ಸ್‌ಪ್ರೆಸ್.

200 ಪುಟಗಳ ಈ ಕಾದಂಬರಿಯ ಬೆಲೆ ರೂ.2—0—0

# ಏಶಿಯದ ಸಂಪತ್ತು

(ಏಶಿಯದ ಆರ್ಥಿಕ ಸ್ಥಿತಿಯ ಚಿತ್ರ)

ಬರೆದವರು: **ಕು. ಶಿ. ಹರಿದಾಸ ಭಟ್ಟ**, ಎಂ. ಎ.

ಇಂದಿನ ರಾಜಕೀಯದಲ್ಲಿ ಚರ್ಚಾಸ್ಪದ ಭೂಖಂಡವಾದ ಏಶಿಯದ ರಾಜಕೀಯ ಮತ್ತು ಆರ್ಥಿಕ ಸ್ಥಿತಿಚಿತ್ರವನ್ನು ಸರಳವಾಗಿಯೂ,ವಿಶದವಾಗಿಯೂ, ಸಚಿತ್ರವಾಗಿಯೂ ವಿವರಿಸುವ ಏಕಮಾತ್ರ ಗ್ರಂಥ

**ಏಶಿಯದ ಎಲ್ಲ ವಿದ್ಯಾರ್ಥಿಗಳೂ, ರಾಜಕೀಯಜ್ಞರೂ, ಓದಬೇಕಾದ ಪುಸ್ತಕ. ಬೆಲೆ: ಎರಡು ರೂಪಾಯಿ.**

ಪ್ರತಿಗಳಿಗೆನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ವಿಚಾರಿಸಿರಿ.

## ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯವಿಟ್ಟು ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ನ.)

**ಧರ್ಮಶಾಲೆ**-(ಸಾಮಾಜಿಕ ಕಾದಂಬರಿ) ಬರೆದವರು: ಎಸ್. ವೆಂಕಟರಾಜರು. ಶ್ರೀ ಕೃಷ್ಣಪ್ರಕಾಶನ ಉಡುಪಿ. ಬೆಲೆ ಹದಿನಾಲ್ಕಾಣೆ. ಕ್ರೌನ್ ೪ಆಕಾರದ 93 ಪುಟಗಳು—

ಧರ್ಮಶಾಲೆಯು ಕತಾವಸ್ತು ಧರ್ಮದ ಹೆಸರಲ್ಲಿ ನಡೆಯುವ ಅತ್ಯಾಚಾರಗಳನ್ನೂ ಹೆಳ್ಳಿಯಲ್ಲಿ ಯಾಪರೀತಿಯ ಜನರು ಕಾಣಸಿಗುತ್ತಾರೆಂಬುದನ್ನೂ ವಿವರಿಸುವ ಕಿರು ಕಾದಂಬರಿ. ಒಳ್ಳೆಯ ಜೀವನವನ್ನು ನಡೆಸಬೇಕೆಂದು ಕಲ್ಪಿಸಿಕೊಂಡು ಬಡವ ಫೆನ್ನಸ್‌ದಾರ ಕೇಶವಯ್ಯ ತನ್ನ ಏಕವಾತ್ರ ಮಗಳು ಶಾರದೆಯೊಂದಿಗೆ ಹೆಳ್ಳಿಯೊಂದರಲ್ಲಿ ತನಗೆ ದೊರಕುವ ಕೇವಲ ಮೂವತ್ತು ರೂಪಾಯಿಗಳ ಪೆನ್ಶನ್‌ನಿಂದ ಶಾಂತ ರೀತಿಯಲ್ಲಿ ಜೀವನ ನಡೆಸುತ್ತಾ ಇರುತ್ತಾನೆ. ಆತನ ಆದರ್ಶಜೀವನ ಅತನಿಗೆ ಗಾಂಧೀಜನ ಎಂಬ ಹೆಸರನ್ನು ತರುತ್ತಿದೆ. ಗದಂಗುಗಳ ಮುಂದೆ "ಗಾಂಧೀಜನ" ಬಿಕೆಟಿಂಗ್ ನಡೆಯುತಂತೆ ಯತ್ನಿಸುವ ತಂದೆಯ ಎದುರು ನಿಲ್ಲಲಾಗದೆ ಕೃಷ್ಣ ಸ್ವಾಮಿ ಹೊರಟು ಹೋಗುತಾನೆ. ಅಲ್ಲಿಯೂ ಸತ್ಯಾಗ್ರಹ ಮಾಡಿ ಜೈಲು ಸೇರುತ್ತಾನೆ.

ಚಾತುರ್ಮಾಸ ಕಳೆಯಲು ಬಂದಿದ್ದ ಶ್ರೀ ಪಾದಂಗಳವರು ವಿಶಲಾಚಾರ್ಯರ ಪಾರಮಾರ್ಥ ಸುಖಾತಾರದ್ದನ್ನು ಕಂಡು ಗಿಂಡಿ ನಾಣಿ ಗುಂಡಾಚಾರ್ಯನನ್ನ ಸಾಧುಪಕ್ಕಕ್ಕೆ ನೇಮಿಸಿ ಶಾರದೆಯನ್ನು ಒಲಿಸಲು ಯತ್ನಿಸುತ್ತಾನೆ. ವಿಶಲಾಚಾರ್ಯರ ಶಾಪದಿಂದ ಸನ್ಯಾಸಿಯ ಉಪಾಯ ಅಪಾಯವಾಗಿ ಕೃಷ್ಣಸ್ವಾಮಿಗೂ ಶಾರದೆಗೂ ಶಾರದಾ ಪೂಜೆಯಂದೇ ವಿವಾಹ ನಿರ್ಧಾರವಾಗುತ್ತದೆ.

ಬಿಗುವಿಲ್ಲದ ಕಥಾವಸ್ತು ಕವಿ ವೆಂಕಟರಾಜರ ಲೇಖನಿಯ ಸಾವಧಾನ್ಯದಿಂದಲೇ ಮೆರೆಗು ಪಡೆದಿದೆ. ಕಾದಂಬರಿಯಲ್ಲಿ ಉಪಯೋಗಿಸಿದ ರಸ ಭರಿತವಾದ, ಭಾವ ಪೂರ್ಣವಾದ ಭಾಷೆವಾದ ಸೂತುಗಳು ಲೇಖಕರ ಪ್ರೌಢಿಮೆಯನ್ನು ಪ್ರದರ್ಶಿಸುತ್ತವೆ ಅಲ್ಲಲ್ಲಿ ಬಳಸಿದ "ಶ್ರೀಮಂತರು ಬಡವರಿಗೆ ನೀಡುವ ಸಹಾಯವೆಂದರೆ ಉಪ್ಪರಿಗೆಯಲ್ಲಿ ಮೇಲೆ ಬಾಎಂದು ಇಳಿಯ ಬಿಡುವ ನೂಲೇಣಿಮಾತ್ರ. ಬಿದ್ದರೆ ಬಡವನೇ ಬೀಳುತ್ತಾನೆ. ಶ್ರೀಮಂತ ಮೇಲೆಯೇ ಸುಖವಾಗಿರುತ್ತಾನೆ." ಎಂಬ ಮಾತುಗಳು ನೂರ್ಮಿಕವಾದವುಗಳೆಂದು ಪ್ರತ್ಯೇಕ ಹೇಳಬೇಕಿಲ್ಲ.

—ದಾಂತಿ.

**ಪ್ರೇಮದ ದಾರಿಯಲ್ಲಿ**—ಕ್ರೌನ್ ೪ ಆಕಾರದ 168 ಪುಟಗಳು, ಬೆಲೆ ರೂ೧-೪-೦

**ಅಂತಃಕರಣ**—ಕ್ರೌನ್ ೪ನ 53ಪುಟಗಳು, ಬೆಲೆ ರೂ 1-೦-೦

**ಅಮೃತ** ಕ್ರೌನ್ ೪ ಪುಟಗಳು 186; ಬೆಲೆ ರೂ 2-೮-೦.

ಈ ಮೂರೂ ಪುಸ್ತಕಗಳ ಲೇಖಕರು ಶ್ರೀ. ಬಿ. ಡಿ. ಗಣಪತಿ, ಮಿತ್ರ ಕುಟೀರ, ಮಡಿಕೇರಿ. ಪ್ರಕಾಶಕರು- ಕೊಡಗು ಕಂಪನಿ, ಮಡಿಕೇರಿ.

ಶ್ರೀ. ಬಿ. ಡಿ. ಗಣಪತಿಯವರು ಉತ್ತಮ ಲೇಖಕರು; ಕತೆಗಾರರು. ಇವರು ಪ್ರಯತ್ನಿಸಿದರೆ ಕಾದಂಬರಿಯನ್ನೂ ಬರೆಯ ಬಲ್ಲರು ಎಂಬುದಕ್ಕೆ 'ಪ್ರೇಮದ ದಾರಿಯಲ್ಲಿ' ಎಂಬ ದೊಂದು ಸಾಕ್ಷಿ. ಇವು ಅವರ ಪ್ರಥಮ ಕಾದಂಬರಿ-ಪ್ರೌಢ ದಾರಿಯಲ್ಲಿ ಬಂದೊದಗುವ ತೊಡಕು ತೊಂದರೆಗಳನ್ನು ಚಿತ್ರಿಸುವ ಸ್ವತಂತ್ರ ಕಾದಂಬರಿ. ಆರಂಭವು ತುಸು ನೀರಸವಾಗಿತೋರಿದರೂ ಉತ್ತರಾರ್ಧವು ಉತ್ತಮವಾಗಿದೆ. ಶೈಲಿ ಸುಲಲಿತವಿದೆ. ಕನ್ನಡಿಗರು ತಕ್ಕ ಪ್ರೋತ್ಸಾಹವಿತ್ತರೆ ಮುಂದಕ್ಕೆ ಉತ್ತಮ ಕಾದಂಬರಿಗಳನ್ನು ಪಾಡಿಕರಿಗೆ-ನೀಡಿಯೂರೆಂಬ ಭರವಸೆಯನ್ನು ಪ್ರಥಮ ಕಾದಂಬರಿಯಲ್ಲೇ ತೋರಿಸಿದ್ದಾರೆ.

'ಅಂತಃಕರಣ'ವು ಜೀವನದಲ್ಲಿ ಒಮ್ಮೊಮ್ಮೆ ಮಿಂಚಿಹೋಗುವ ಕವಿತ್ವ ಕಿನ ಘಟನೆಗಳ ಸಂಗ್ರಹ. ಇದರಲ್ಲಿ ಒಟ್ಟು ಐದುಸುಧುಮುಯ ಘಟನೆಗಳಿವೆ ಅರ್ಥಾರ್ತ ರಸ ನಿಮಿಷಗಳಿವೆ ಯೆಂದೂಹಿಡಿಇದಂದಿಸಬಹುದು

'ಅಮೃತ'ವು ಕನ್ನಡದಲ್ಲಿ ಹೊಸರೀತಿಯ ಅಪರೂಪ ಪ್ರಕಟಣೆ. ಕೆಲವರಿಗೆ ತಾವು ಓದಿದ ಪುಸ್ತಕಗಳಿಂದ ಉತ್ತಮ ಅಂಶಗಳನ್ನು ಬರೆದಿಡವ ಅಭ್ಯಾಸವಿದೆಯಷ್ಟೆ! ಅಂತೆಯೇ ಲೇಖಕರು ವರ್ಷದಲ್ಲಿ ದಿನವೂ ಬರೆದಿಟ್ಟ 'ನುಡಿಮುತ್ತು'ಗಳ ಸಂಗ್ರಹವಿದು. ಮಧುಸಂಚಯ ಎಂದರೂ' ಸಲ್ಲುವುದು. ಓದಿ ಶಾಂತಿ, ತೃಪ್ತಿ, ಆನಂದಸಡೆಯಬಯಾದಾದ ಪೊತ್ತಗೆ.

—'ಪುಸ್ತಕ ಪ್ರಿಯ'

**ಆತ್ತೆ**— ಕಿರುಕಾದಂಬರಿ. ಮೂಲ ಲೇಖಕರು ಶ್ರೀ ರವೀಂದ್ರನಾಥ ಠಾಕೂರರು. ಅನುವಾದಕರು: ಪಿ. ವೆಂಕೋಬ ಆರ್ಯ ಬಿ ಎ ಬಿ. ಟಿ.

ಸಂಪಾದಕ ಮತ್ತು ಪ್ರಕಾಶಕ: ಕೆ. ಕೆ. ಪೂಜಾರಿ. ನೇತ್ರಾವತಿ ಪ್ರಕಾಶನ ಬೆಂಗಳೂರು ಬೆಲೆ 0-12-0.

ಆತ್ತೆ ಕಿರುಕಾದಂಬರಿಯು ನೇತ್ರಾವತಿ ಪ್ರಕಾಶನದ ೧೩ನೆಯ ಪ್ರಕಟಣೆ ನೇತ್ರಾವತಿ ಪ್ರಕಾಶನದ ಸಲಹೆಗಾರರಾಗಿ ಶ್ರೀಗಳಾದ ನಿಜಲಿಂಗಪ್ಪ, ಟಿ. ಎ. ಪೈ, ಪಾಟೀಲ, ಪುಟ್ಟಸ್ವಾಮಿ, ರಾಷ್ಟ್ರಕವಿ ಗೋವಿಂದಪೈ, ಬೇಂದ್ರೆ, ಸಿದ್ದವನಹಳ್ಳಿ ಮೊದಲಾದವರು ಇರುವುದು ಆಭಿಮಾನದ ಸಂಗತಿ.

ವಿಶ್ವಕವಿ ಟಾಕೂರರ ಎಲ್ಲಾ ಕೃತಿಗಳನ್ನು ಕನ್ನಡಕ್ಕೆ ತಾನುವಾದಗೊಳಿಸಬೇಕೆಂಬ ಸದುದ್ದೇಶವನ್ನಿಟ್ಟುಕೊಂಡಿರುವ ನೇತ್ರಾವತಿ ಪ್ರಕಾಶನದ ಕಾರ್ಯಕರ್ತರಿ ಕಾರ್ಯ ಸ್ತುತ್ಯವಾದುದು.

ಪ್ರಕೃತದ ಪ್ರಕಟಣೆಯಲ್ಲಿ ಆತ್ತೆ, ರಾಜಾರಾಣಿ, ಸುಭಾ ಹಿಂಗೆ ಠಾಕೂರರ ವಿರಚಿತ ಮೂರು ಕಿರುಕಾದಂಬರಿಗಳ ಅನುವಾದಗಳು ಕೂಡಿಕೊಂಡಿವೆ.

ಠಾಗೂರರೆ ಎಲ್ಲಾ ಕೃತಿಗಳೂ ಉದಾತ್ತ ನಾದ ಧ್ಯೇಯ ಮತ್ತು ನೈಜವಾದ ಪುನೋವಿನ ಶ್ಲೇಷಣೆಯ ಸಂಗಮವಾಗಿರುತ್ತವೆ. ಈ ಪ್ರಕಟಣೆಯ ಕಿರುಕಾದಂಬರಿಗಳೂ ಠಾಗೂರರ ಪ್ರತಿಭೆ ಪ್ರೌಢಿಮೆಗಳ ಪ್ರತೀಕವಾಗಿವೆ.

ಕಾಯಿಲೆಯಿಂದ ನರಳುತ್ತಿರುವ ಜ್ಯೋತಿನ್ ತನ್ನ ನೂತನ ವಧುಮಣಿಯ ಕುರಿತು ಪಡುತ್ತಿರುವ ಅನುತಾಪ, ಕಾಣುತ್ತಿರುವ ಕಲ್ಪನೆ; ಇಲ್ಲದ ಗೂಢಾಗಳನ್ನು ಮಾಡಿಯೆಲ್ಲಿ ಕಲ್ಪಿಸಿಕೊಂಡು ಜ್ಯೋತಿನನು ಮನೆಯ ಕುರಿತು ಸದ್ಭಾವನೆಯನ್ನು ತಾಳುವಂತೆ. ಶಾಂತಿಯಿಂದ ಉಳಿದ ಅಯುಷ್ಯವನ್ನೇ ಕಳೆಯುವಂತೆ ನಿಸ್ವಾರ್ಥವಾಗಿ ಶ್ರಮಿಸುವ 'ಆತ್ತೆ'—ತನ್ನ ತಂಗಿಯ ಆನ್ನಸ್ಕಾರನ ಸಮಾರಂಭಕ್ಕೆ ಗಂಡ ಜ್ಯೋತಿನನ ಸುಖ ದುಃಖವನ್ನು ಮರೆತು ತಾರುಮನೆಗೆ ಹೊರಟ ಮಣಿ, ಕೊನೆಗೆ ಮಣಿಯ ಬಿದ್ಧತ್ಯವನ್ನು ಕಂಡು ಕಂಗಾಲಾದ ಜ್ಯೋತಿನ್—ಅಂತ್ಯಕಾಲದಲ್ಲಿ ಮಣಿಯನ್ನು ಕಂಡೂ ಕಾಣದೆ, ಸ್ಪರ್ಶಿಸಿಯೂ ಸ್ಪರ್ಶಿಸದಂತಹ ಜಿಗುಪ್ಸೆಯ, ಅಂತಿಮ ಸಂಕಟವನ್ನು ಅನುಭವಿಸಿ ಇಹಲೋಕವ ಯಾತ್ರೆಯನ್ನು ಮುಗಿಸುವ ಕಥಾನಕವು ಸ್ತ್ರಿ ಪುರುಷವರ್ಗದ ಮನೋವಿಶ್ಲೇಷಣೆಯನ್ನು ಪ್ರಶಕ್ಕಿರಿಸುವ ಅತ್ಯುತ್ತಮ ವಸ್ತು.

ರಾಜರಾಣಿಯೆಂಬ ಎರಡನೆಯ ಕತೆ ಬಿಸಿನೆಂಬ ಸಂಗೀತಗಾರನನ್ನು ರಾಜ—ರಾಣಿಯರು ಬೇರೆ ಬೇರೆ ಸನ್ನಿವೇಶದಲ್ಲಿ ಪ್ರೀತಿಸಿ-ದ್ವೇಷಿಸುವ ಘಟನೆಯಮೇಲೆ ಹೆಣೆಯಲ್ಪಟ್ಟಿದೆ. ತನ್ನ ಗಂಡ ರಾಜನು ಆತನ ಆತ್ಮಸಖ ಬಿಸಿನನ್ನು ಅತ್ಯಂತ ಆದರದಿಂದ ಕಾಣುವುದನ್ನು ಸಹಿಸಲಾರದ ರಾಣಿ ಬಿಸಿನನ್ನು ಪೊದಲು ದ್ವೇಷಿಸುತ್ತಾಳೆ. ಸುಧದ್ರಾಹರಣನಾಟಕದಲ್ಲಿ ರಾಜನು ಕೃಷ್ಣನ ಪಾತ್ರವನ್ನೂ ಬಿಸಿನನು ಅರ್ಜುನನ ಪಾತ್ರವನ್ನು ವಹಿಸುತ್ತಾರೆ ರಾಣಿ ಬಿಸಿನನ ನಟನೆ ಸಂಗೀತಗಳನ್ನು ನಿರ್ಮಲ ಹೃದಯದಿಂದ ಮೆಚ್ಚಿಹೊಗಳುತ್ತಾಳೆ ಅಂದಿನಿಂದ ಕಥೆ ತಿರುಗುತ್ತದೆ. ರಾಜ ಬಿಸಿನನ್ನು ಶಿರಸ್ಕಾರದಿಂದ ಕಾಣುತ್ತಾನೆ. ರಾಣಿ ಪ್ರೀತಿಸುತ್ತಾಳೆ ಪರಿಣಾಮವಾಗಿ ಬಿಸಿನನು ಅರಮನೆಯಿಂದ ಹೊರಡಬೇಕಾಗುತ್ತದೆ.

ಮೂರನೆಯ ಸುಭಾ ಮೂಕ ಹುಡುಗಿಯೋರ್ವಳನ್ನು ವಂಚನೆಯಿಂದ ಮದುವೆಯಾಡುವ ಘಟನೆ ಈ ಕತೆ ಆಂಗ್ಲ ಪಬ್ಲಿಷ್ಡ್ ದಲ್ಲಿಬರುತ್ತಿದ್ದೂ ಹೆಚ್ಚಿನವರಿಗೆ ಪರಿಚಿತವೇ ಆಗಿದೆ.

ಶ್ರೀ. ಕೆ. ಕೆ. ಪೂಜಾರಿಯವರ ಉತ್ತಮ ಮಟ್ಟದ ಸಾಹಿತ್ಯಸೇವೆ ಅಭಿನಂಧನಾರ್ಹವಾಗಿದೆ.

—ದಾಂತಿ.

**ವರದಿಗಳು-**

**ಶ್ರೀ ಶಂಕರಜಯಂತೀ ಸಭಾ ವರದಿ**—ಪಂಗಾರಕಟ್ಟೆ, ಬಾಳೇಕುದುರು ಶ್ರೀ ಮಠದ ಶ್ರೀ ಆನಂದಾಶ್ರಮ ಸ್ವಾಮಿಗಳವರಿಂದ ಸ್ಥಾಪಿತವಾದ ಶ್ರೀ ಶಂಕರ ಜಯಂತೀ ಸಭೆಯ ದಶಮಾಭಿವೇಶನದ ಸಂಕ್ಷಿಪ್ತ ವರದಿಯು ನಮ್ಮ ಹಸ್ತಗತವಾಗಿದೆ. ಶ್ರೀ ದ್ವಾರಕಾ ಸಂಸ್ಥಾನ ಜಗದ್ಗುರು ಶ್ರೀ ಶಂಕರಾಚಾರ್ಯ ಶ್ರೀ ಅಭಿನವ ಸಚ್ಚಿದಾನಂದ ತೀರ್ಥ ಸ್ವಾಮಿ ಮಹಾರಾಜರು ಮತ್ತು ಹರಿಹರಪುರಿ ಶ್ರೀ ಮಠದ ಶ್ರೀ ಸ್ವಯಂ ಪ್ರಕಾಶ ಅಭಿನವ ರಾಮಾನಂದ ಸರಸ್ವತಿ ಸ್ವಾಮಿಗಳವರು ಮೋಷಕರಾಗಿರುವ ಈ ಸಭೆಯು ವರ್ಷಂಪ್ರತಿಯಂ ಶ್ರೀ ಶಂಕರ ಜಯಂತ್ಯುತ್ಸವವನ್ನು ವಿಧಿವತ್ತಾಗಿ ಆಚರಿಸುತ್ತ ಬರುತ್ತಿದೆ. ಅಲ್ಲದೆ ವೇದಾಂತ ತತ್ತ್ವ ಪ್ರಚಾರ, ವರ್ಣಾಶ್ರಮ ಧರ್ಮ ಪರಿಪಾಲನ, ಶಂಕರ ಪುಸ್ತಕಭಂಡಾರದ ಅಭಿವೃದ್ಧಿ, ಆಧ್ಯೆತವಿದ್ಯಾವಿತ್ತರಣಕ್ಕೆ ಪ್ರೋತ್ಸಾಹ, ಆಧ್ಯೆತ ಹಾಗೂ ಧಾರ್ಮಿಕ ವಿಷಯ ವಿಚಾರ ಕೂಟಗಳ ವ್ಯವಸ್ಥೆ ಮೊದಲಾದ ಸದುದ್ದೇಶಗಳನ್ನು ಮುಂದೊತ್ತುವ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸುತ್ತಿರುವ ಈ ಸಭಾ ಸಂಸ್ಥಾಪಕ ಶ್ರೀ ಶ್ರೀ ಆನಂದಾಶ್ರಮ ಸ್ವಾಮಿಗಳವರು ಅಭಿನಂದನೀಯರು.

**ಸುರತ್ಕಲ್ ಕುಲಾಲ ಪರಸ್ಪರ ಸಹಾಯಕ ಸಭಾ, ಮುಂಬಯಿ**— ಇದರ 1956ನೆ ಸಪ್ತಮ ವಾರ್ಷಿಕ ವರದಿ ಹಸ್ತಗತವಾಗಿದೆ. ಸಭೆಯ ಉದ್ದೇಶವು ಬಹುಮುಖವಿದ್ದು, ಸುರತ್ಕಲ್ ಕುಲಾಲ ಧರ್ಮಾರ್ಥ ಔತ್ರಿ ಶಾಲೆ ಧರ್ಮಾರ್ಥ ವಾಚನಾಲಯ, ಪುಸ್ತಕ ಭಂಡಾರ, ಶ್ರೀ ಶಾರದಾ ಭಜನ ಮಂಡಳಿಯನ್ನು ಸುವ್ಯವಸ್ಥಿತ ರೀತಿಯಲ್ಲಿ ನಡೆಸಿಕೊಂಡು ಬರುತ್ತಿರುವ ಸಭಾ ಸಂಚಾಲಕರು ಅಭಿನಂದನೀಯರು.

## ಕಾಂಗ್ರೆಸ್ಸಿಗರ ಕರ್ತವ್ಯ

(೧ನೇ ಪುಟದಿಂದ)

ವುದು ಒಂದೇ ಸಾದಿ. ಇದೇ ನಮ್ಮೆಲ್ಲರ ಕಲ್ಯಾಣದ ಹಾದಿಯೂ ಹೌದು.

ಆಂಧ್ರ ಪ್ರದೇಶದ ಮುಖ್ಯ ಮಂತ್ರಿ ಸ್ಥಾನಕ್ಕೆ ಪುನರಾಯ್ಕೆಹೊಂದಿದ ಶ್ರೀ ಸಂಜೀವ ರೆಡ್ಡಿಯವರು ಕೇರಳದಲ್ಲಿ ಪುನಃ ಕಾಂಗ್ರೆಸ್ಸನ್ನು ಅಧಿಕಾರಕ್ಕೆ ತರುವ ಆತುರ ಕೆರಳಿಸ.ವೆನೆಂದು ಘೋಷಿಸಿದ್ದಾರೆ. ಮೈಸೂರು ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರೂ ಇದೀಗ ನಮ್ಮ "ಪರೀಕ್ಷೆಯ ಕಾಲ" ಎಂದು ಸಾರಿದ್ದಾರೆ. ಆಡಿದಂತೆ ಮಾಡುವುದನ್ನು ನೋಡಬೇಕಷ್ಟೆ.

—ವಿ ಬಿ. ಅರ್ಯಾಡಿ.





ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ರಚಿತವಾದ—

**ಸುಲಭದಲ್ಲಿ ಇಂಗ್ಲಿಷ್**

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.

ನಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ ಅನುಕೂಲವಾದ ಸ್ವಯಂಬೋಧಿನಿ

ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವ ಸ್ಥಳ:—

ನವಭಾರತ ಪುಸ್ತಕ ಭಂಡಾರ, ಉಡುಪಿ.


## ಗೋ ವಿಜಯ

(ಗೋವಿನ ಕಥೆ)

ಶ್ರೀ ಮುಳಿಯ ಕೃಷ್ಣಾಣಿ ಉಪಾಧ್ಯಾಯರಿಂದ ರಚಿತವಾದ್ದ ಮಕ್ಕಳಿಗೂ, ವಯಸ್ಕರ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ.

ತಮ್ಮಷ್ಟಕ್ಕೆ ತಾವೇ ಕತೆ, ಹಾಡು, ಅರ್ಥ ಸಂಭಾಷಣೆ, ವಿಷಯ ಜ್ಞಾನ, ಹಾಗೂ ಶಾರೀರಿಕ ಶಿಕ್ಷಣ ಮೊದಲಾದುವನ್ನು ಏಕ ಕಾಲದಲ್ಲಿ ಕಲಿತು ನಿಮ್ಮ ಮಕ್ಕಳು ಚಾಣಾಕ್ಷರಾಗಬೇಕೇ? ಹಾಗಾದ್ದರೆ ಈ ಪುಸ್ತಕವನ್ನು ಅವಶ್ಯ ಆವರ ಕೈಗೆ ಕೊಡಿರಿ.

**60 ಪುಟಗಳು: ಬೆಲೆ 0—8—0.**

ನವಯುಗ ಪ್ರೆಸ್, ಉಡುಪಿ.

## ಜ್ಞಾಪಕಶಕ್ತಿ

(ತನೇ ಪುಟದಿಂದ)

ಳ ಸ್ಮರಣೆಯು ಅಧಿಕ ದಿನ ಪರ್ಯಂತ ಬಲ್ಲುದು.

ಒಂದು ವಿಷಯವನ್ನು ಜ್ಞಾಪಕದಲ್ಲಿ ುವ ಸಲುವಾಗಿ ಅವುಗಳನ್ನು ಬರೆದಿಡು ದು ಮರೆತು ಬಿಡುವುದರ ನೊದಲ ಟ್ಟಲೆಂದು ಹೇಳದೆ ನಿರ್ವಾಹವಿಲ್ಲ. ುಸ್ತಿಷ್ಕವು ಒಬ್ಬ ಆಟಿಗಾರನಂತೆ ಇದೆ. ಭ್ಯಾಸದಿಂದ ಮಾತ್ರ ಅದರ ವಿಕಾಸ ಾಗುತ್ತದೆ. ಕಿಸೆಯಲ್ಲಿ ಪ್ರಾಮುಖ್ಯ ವಿ ಷಯಗಳನ್ನು ಬರೆದಿಡುವ ಪದ್ಧತಿಯನ್ನು ಬಿಟ್ಟುಬಿಡಿರಿ. ದೈನಿಕ ಕಾರ್ಯಗಳನ್ನು ಆಲೋಚಿಸಿ, ಸ್ಮರಿಸಿ, ಜ್ಞಾಪಕದಲ್ಲಿರಿಸಿ ವುಗಳನ್ನು ಅನುಕರಣೆ ಮಾಡಿರಿ. ಟಿಪ್ಪ ಣಿ ಮಾಡಿಕೊಂಡೊಡನೆಯೇ ತಮ್ಮ ಮ ಸ್ಸಿನಲ್ಲಿ" "ವಿಷಯವು ಸುರಕ್ಷಿತವಾಗಿದೆ. ಅವಶ್ಯ ಬಿದ್ದಾಗ ಗ್ರಂಥವಿದಿ ನೋಡಿದರೆ ಸಾಕು ಂಕೆ ಗಟ್ಟಿಮಾಡಿಕೊಳ್ಳಬೇಕು?" ಎಂಬ ಬಹುದೊಡ್ಡ ಶಿಥಿಲತೆಯು ಮನೆ ಮಾಡು ತ್ತದೆ. ಇದರ ಪರಿಣಾಮವೆಲ್ಲಿಯವರೆಗೆ ಆ ಗುವುದೆಂದರೆ, ಆವಶ್ಯಕ ವಿಷಯಗಳನ್ನು ಮಸ್ತಕದಲ್ಲಿಯೋ ಕಾಗದದಲ್ಲಿಯೋ ಬ ರೆದುಕೊಂಡುದನ್ನು ನೋಡುವಷ್ಟು ಎ ಚ್ಚರವೂ ಇರುವುದಿಲ್ಲ.

ಮೇಲೆ ಸೂಚಿತವಾದ ಎರಡು ವಿಧಾ ನಗಳಿಂದ ಮಸ್ತಿಷ್ಕದಲ್ಲಿ ವಿಷಯಗಳು ಹೇಗೆ ಅಚ್ಚೊತ್ತಲ್ಪಡುವುವೆಂದು ತಿಳಿಯು ದು. ಈಗ, ಹೀಗೆ ಅಚ್ಚೊತ್ತಿದ ವಿಷಯ ಗಳನ್ನು ಬೇಕಾದ ವೇಳೆಯಲ್ಲಿ ಹೇಗೆ ಸ್ಮರಿಸಿಕೊಳ್ಳಬಹುದೆಂದು ತಿಳಿದುಕೊ ಳ್ಳೋಣ.

ಮಸ್ತಿಷ್ಕದಲ್ಲಿ ಸಾವಿರಾರು ವಿಷಯಗ ಳು ನೆಲೆಯಾಗಿರುತ್ತವೆ. ಹಾಗಿರುವಾಗ, ಬೇಕಾದ ಸಮಯದಲ್ಲಿ ಒಂದೊಂದೇ ಹೇ ಗೆ ಸ್ಮರಿಸುತ್ತದೆ? ಯಾವನೊಬ್ಬ ವ್ಯಕ್ತಿ ಯು ಹೆಸರನ್ನೂ ಆತನ ರೂಪವನ್ನೂ ಕೊಂಡಿಸಿಕೊಂಡು ನೆನಪಿಗೆ ತರುವುದು ಅಗತ್ಯ. ರಾಮಕೃಷ್ಣನು ಬಗ್ಗಿ ನಡೆಯು ತಿರುವನಾದರೆ, ಆವನು ವಿನೀತ ಮುದ್ರೆಯ ರಾಮಕೃಷ್ಣನೆಂದು ನಿಮಗೆ ಸ್ಮರಣೆಗೆ ಬರುವುದು. ಕೆಲವೊಂದು ಹೆಸರು ಗಳೊಂದಿಗೆ ಬಹಳ ನಿಕಟವಾದ ಸಂಬಂಧಗಳನ್ನುಳಿಸಿಕೊಂಡರೆ, ಅವುಗಳ ಸ್ಮರಣೆಯು ತೀಕ್ಷ್ಣದಲ್ಲಿ ಬರುವುದು ಆನಂದ ಕರವಾದ ಯಾವಾಗಲೂ ಜೋ


**ಮೂಲ್ಕಿ ಬೇಂಕ್ ಲಿಮಿಟೆಡ್,**
**ಮುಲ್ಕಿ.**

ಕಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರೆಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

**ನಮ್ಮ ಬಡ್ಡಿ ದರಗಳು.**

| ನಿರಖು ಠೇವಣಾತಿ. | |
|---|---|
| 24 ತಿಂಗಳಿಗೆ | 4% |
| 12 ,, | 3½% |
| 6 ,, | 3½% |
| 3 ,, | 3% |
| ಸೇವಿಂಗ್ಸ್ ಬೇಂಕ್ ಲೆಕ್ಕ | 2% |
| ಕರೆಂಟ್ ಎಕೌಂಟು | ½% |

THE MOOLKY BANK, LTD: MULKI

ಶ್ರೀ ಸಿ. ಡಿ. ದೇಶಮುಖರ ನಂತರ ಅರ್ಥಮಂತ್ರಿಯಾಗಿದ್ದು. ಈಗ ಮುಂದಿನ ಐದು ವರ್ಷಗಳವರೆಗೆ ಪುನಃ ಆ ಸ್ಥಾನವನ್ನು ಗಳಿಸಿದ ಶ್ರೀ ಟಿ. ಟಿ. ಕೃಷ್ಣ ಮಾಚಾರಿಯವರು.

ಲು ನೋಡಿಯವನು; ಆತನಲ್ಲಿ ಆನಂದ ವೆಂಬುದೊಂದೂ ಲಾಸ್ಯವಾಡುವುದಿಲ್ಲ; ರವೀಂದ್ರನಾಥನ ಮೈಬಣ್ಣ ಕಪ್ಪು; ರವಿ(ಸೂರ್ಯ) ಯು ಪ್ರಕಾಶದ ಪುಂಜವಾಗಿದ್ದಾನೆ. ಆದುದರಿಂದ ಹೆಸರಿಗೂ ವ್ಯಕ್ತಿಗೂ ಗುಣದಲ್ಲಿ ಸಂಬಂಧವಿಲ್ಲ. ಇಷ್ಟನ್ನು ನೀವು ತಿಳಿದುಕೊಂಡರೆ ಅವರಬ್ಬರ ಹೆಸರುಗಳು ಫಕ್ಕನೆ ಜ್ಞಾಪಕದಲ್ಲಿರುವುದು.

ಒಂದು ತರಗತಿಯಲ್ಲಿ ಒಂದೇ ಸೆಸರಿನ ಇಬ್ಬರು ವಿದ್ಯಾರ್ಥಿಗಳಿದ್ದರು. ಆವರ ಊರ ಹೆಸರಿನಲ್ಲಿ ಮಾತ್ರ ಒಬ್ಬನದು ''ಕೆ'' ಇನ್ನೊಬ್ಬನದು ''ಯು'' ಆಗಿತ್ತು. ಉಪಾಧ್ಯಾಯರು ಸ್ಪಷ್ಟ ಕೇಳುವಾಗ ಆವರಲ್ಲಿ ಯಾರನ್ನು ಉದ್ದೇಶಿಸಿ ಕೇಳಿದರೋ ಆವನು ಕೇಳದೆ ಇನ್ನೊಬ್ಬನು ಹೇಳಲೇ ಳುತ್ತಿದ್ದನು. ''ಕೆ'' ಯು ''ಯು''ಗಿಂತ ಬುದ್ಧಿವಂತ ''ಕೆ'' ಯನ್ನುದ್ದೇಶಿಸಿರುವುದಕ್ಕೆ ''ಯು''ವೇ ಉತ್ತರಿಸುತಿದ್ದ. ಉಪಾಧ್ಯಾಯರಿಗೆ ''ಕೆ'' ಯಾರು ''ಯು'' ಯಾರು ಎಂದು ಸಂಯೋಗಿ ಸ್ಮರಣೆಗೆ ಬರುತಿದ್ದಿಲ್ಲ. ಈ ಪಿಕಲಾಟದಿಂದ ತಪ್ಪಿಸಿಕೊಳ್ಳಲು ಆವರೊಂದು ಉಪಾಯವನ್ನು ಹುಡುಕಿದರು. ''ಕೆ'' ರು ಕುಳ್ಳನಲ್ಲ, ಉದ್ದ, ''ಯು''ವು ಉದ್ದನೆಲ್ಲ ಕುಳ್ಳ ಎಂದು ಅಂದಿನಿಂದ, ಆವರು ತಪ್ಪಿಹೋಗದೆ ಅಪೇಕ್ಷಿತನನ್ನು ಗರುತಿಸುತ್ತಿದ್ದರು; ಇವೆಲ್ಲ ರೂಪ, ಗುಣದೊಡನೆ ಮಾಡುವ ಕಲ್ಪನೆಗಳು ಕೇವಲ ಸತ್ಯವಾಗಿರುವ ಆವಶ್ಯಕತೆಯಿಲ್ಲ; ನಿಮಗೆ ಸುಲಭವೆನ್ನಿಸಿ ಜ್ಞಾಪಿಸಿಕೊಂಡುವಂತಹುದಾದರೆ, ಮುಗಿಯಿತು ನಿಮ್ಮಕೆಲಸ ಪೂರೈಸಿತು.

ಮೇಲೆ ಹೇಳಿದ ಜಲ್ಲಿಪೆ ಇನ್ನೊಂದು ವಿಧಾನವೂ ನಿಮ್ಮ ಸ್ಮರಣಶಕ್ತಿ ವರ್ಧನೆಗೆ ನೆರವಾಗಬಲ್ಲುದು. ನಿಮಗೆ ಪೇಟೆಗೆ ಹೋಗಿ ಕೆಲವೊಂದು ಸಾಮಾನುಗಳನ್ನು ತರಬೇಕಾಗಿದೆಯೆಂದು ತಿಳಿಯೋಣ. ಪತ್ರ, ಪುಸ್ತಕ, ಬೀಸಣಿಗೆ, ದಂತಚೂರ್ಣ, ಬಾಳೆಹಣ್ಣು, ಮಾವಿನಕಾಯಿ ಇತ್ಯಾದಿಗಳನ್ನು ತರಬೇಕಾಗಿದೆ ಇವುಗಳ ಮೊದಲಕ್ಷರಗಳನ್ನು ಒಟ್ಟು ಸೇರಿಸಿ, ಆಗ ''ಪಪಬದಿಂಬವಾ'' ಎಂಬುದೊಂಬ ಹೊಸ ಶಬ್ದದ ನಿರ್ಮಾಣವಾಯಿತು. ಇವನ್ನು ತಾಲ್ಕಾರಿನರ್ತಿ ಕಂಠಪಾಠ ಮಾಡಿರಿ, ಸರಿ, ನಿಮಗೆ ತರಬೇಕಾದ ವಸ್ತುಗಳ ಸ್ಮರಣೆ ಕೂಡಲೇ ಆಗುವುದು. ಈ ಒಂದು ಶಬ್ದದಿಂದ ಮುಖ್ಯವಾದ ೬ ವಸ್ತುಗಳ ಹೆಸರು ತಾಲಿಗೆ ತುದಿಯಲ್ಲಿ ಕುಣಿದಾಡುವುವು ಈ ವಿಧಾನವು ಬಹಳ ಮನೋರಂಜಕವಾದುದು. ಇದರಿಂದ ನಿಮ್ಮ ದೈನಿಕ ವ್ಯವಹಾರದಲ್ಲಿ ಯಾವ ಕೊರತೆಯೂ ಇಲ್ಲದೆ ಮುಂದುವರಿಯಬಹುದು ಆದರೆ, ಉತ್ಪನ್ನ ಶಬ್ದವು ಮರೆತುಹೋದರೆ, ಅಥವಾ ಸ್ವಲ್ಪ ಅದಲು ಬದಲಾದರೆ ಮಾತ್ರ ಎಲ್ಲಾ ಕೆಲಸ ನೀರು ಪಾಲಾಯಿತು. ಆದುದರಿಂದ ಉತ್ಪನ್ನ ಶಬ್ದವನ್ನು ಸರಿಯಾಗಿ ಜಾಜೂ ಕಪ್ಪದೆ ಜ್ಞಾಪಕದಲ್ಲಿರಿಸಿಕೊಳ್ಳಬೇಕಾದುದು ಅತ್ಯಗತ್ಯ.

ಇವೆಲ್ಲ ವಿಧಾನಗಳಲ್ಲಿ ಕೆಲವು ಸುಲಭ ಅಥವಾ ಕಠಿಣವಾಗಿರಬಹುದು. ಇದೇ ವಿಧಾನದಲ್ಲಿ ಮುನ್ನಡೆದರೆ, ನಿಮಗೆ ಈ ನಿಧಾನಗಳಾವುದರ ಆವಶ್ಯಕತೆಯೂ ಇರುವುದಿಲ್ಲ. ನಿಮ್ಮ ಮಸ್ತಿಷ್ಕವು ಬೆಳೆಯುವುದು. ವಸ್ತು ಯಾ ವಿಷಯಗಳನ್ನು ಗ್ರಹಿಸಿ, ಜ್ಞಾಪಕದಲ್ಲಡಿಯಷ್ಟು ಸ್ಮರಣಶಕ್ತಿಯು ಬೆಳೆಯುವುದು. ಕ್ರಮೇಣ ನೀವೂ ಅಸಾಧಾರಣ ಸ್ಮರಣ ಶಕ್ತಿವಂತರಾಗಬಹುದು.

ಮೇಲೆ ವಿವರಿಸಿದವು ಕೇವಲ ಸಾಮಾನ್ಯ ವಿಧಾನಗಳು. ಇನ್ನೂ ಕೆಲವು ವಿಶೇಷ ಕ್ರಿಯೆಗಳಿರುತ್ತವೆ. ಇವುಗಳು ಸ್ಮರಣ ಶಕ್ತಿ ವರ್ಧಕ ಶಾಲೆಗಳಲ್ಲಿ ಕಲಿಸಲಾಗುತ್ತವೆ. ಸಾಮಾನ್ಯ ಮನುಷ್ಯರಿಗೆ ಸ್ಮರಣಶಕ್ತಿ ವರ್ಧಕ ಉಪಾಯವು ಆವ ವಸ್ತು ಅಥವಾ ವಿಷಯವನ್ನು ಮಸ್ತಿಷ್ಕದಲ್ಲಿ ಬರೆದಿಡುವುದು. ಕಾಗದ ಪುಸ್ತಕಗಳಲ್ಲಿಯಲ್ಲ. ಇದಕ್ಕಾಗಿ, ಸೂಕ್ಷ್ಮ ನಿರೀಕ್ಷಣ ಮತ್ತು ಆವರ್ತನ ಕ್ರಮವನ್ನು ಅನುಸರಿಸುವುದು. ಒಮ್ಮೆ ಆ ವಸ್ತು ಅಥವಾ ವಿಷಯವು ಮಸ್ತಿಷ್ಕದಲ್ಲಿ ಅಚ್ಚು ಹೊಯ್ದಿತೆಂದರೆ, ಮುಂದೆ ಅದು ಅಷ್ಟು ಸುಲಭದಲ್ಲಿ ಮಾಯವಾಗಲಾರದು.


ಒಂದು ಹೊಸ ಮಹಾ ಕಾದಂಬರಿ

# ನಡುಹಗಲಿನ ಕಗತ್ತಲೆ

ಷಿಲ್ ಪುಟಗಳು ಬೆಲೆ 2·50 ರೂಪಾಯಿ

- ಯುರೋಪಿನಲ್ಲಿ ಈಗ ನಲ್ವತ್ತು ವರ್ಷಗಳ ಹಿಂದೆ ನಡೆದು ಇಡೀ ಪ್ರಪಂಚವನ್ನೇ ತಲ್ಲಣಗೊಳಿಸುತ್ತಿರುವ ಒಂದು ರಾಜನೈತಿಕ ಪದ್ಧತಿಯಿಂದ ಮನುಷ್ಯನ ಆತ್ಮವು ಪತನವಾಗುತ್ತಿರುವ ದುರಂತದ ಒಂದು ಮಾರ್ಮಿಕ ಕಾದಂಬರಿ.
- ರಕ್ತಮಯ ಕ್ರಾಂತಿಯು ವ್ಯಕ್ತಿಯ ಜೀವ ಮತ್ತು ತ್ತರನ್ನು ನಿರ್ವಾಹ್ಯವಾಗಿ ಹೀರುವ ಭೀಕರ ಚಿತ್ರಣ.
- ಇದರಲ್ಲಿ ಪ್ರಚಲಿತ ಪ್ರಪಂಚದ ರಾಜನೀತಿ, ಇತಿಹಾಸ, ಮತ್ತು ಅಂತರಾಷ್ಟ್ರೀಯ ರೀತಿ ನೀತಿಯ ಒಳನೋಟ ದೊರೆಯುತ್ತದೆ.
- ಪ್ರಖ್ಯಾತ ಲೇಖಕ ಆರ್ಥರ್ ಕೊಸ್ಲರ್ ಅವರ ಜರ್ಮನ್ ಕಾದಂಬರಿಯ ಮನೋಜ್ಞ ಕನ್ನಡವನ್ನು ಅನುವಾದಿಸಿದವರು ಕು. ಶಿ. ಹರಿದಾಸ ಭಟ್ಟರು.

ಪ್ರಕಾಶಕರು:

**ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ.**

(ಪ್ರತಿಗಳು ನವಭಾರತ ಪುಸ್ತಕ ಭಂಡಾರ, ಉಡುಪಿ, ಇಲ್ಲಿಯೂ ದೊರೆಯುತ್ತವೆ)


**ನೋಟೀಸು.**
**ಕುಂದಾಪುರ ರೆವಿನ್ಯೂ ಡಿವಿಜನಲ್ ಆಫೀಸರ್.**

S. No. 11/1957.

ಮುತ್ತಕ್ಕ ಶೆಡ್ತಿ. ಪುಂಜಮ್ಮ ಶೆಡ್ತಿ ಮಗಳು ತಲ್ಲೂರುಗ್ರಾಮ —ಅರ್ಜಿದಾರರು.

ಮತ್ತು

1 ನಾಗ, 2 ಅಂತ್ಕ್ಷಪರದ ಕಾನೇರಿ ಮಕ್ಕಳು. ಕುಂದಾಪುರ ತಾಲೂಕು ಕನ್ಯಾನ ಗ್ರಾಮದ ಮೂಡತೋಟ.

—ಎದ್ರಿ ಅರ್ಜಿದಾರರು.

2ನೇ ಎದ್ರಿ ಅರ್ಜಿದಾರರಿಗೆ ತಿಳಿಯಪಡಿಸುವುದೇನೆಂದ್ರೆ;

ಅರ್ಜಿದಾರರಿಗೆ ಎದ್ರಿ ಅರ್ಜಿದಾರರಿಂದ ಬರಬೇಕಾದ ಕಳವ ಮುನ್ಸ್ಥ ಸಂಬಂಧ ಜಾಲಗೇಣಿ ಪಂ. ಕು. ಆಕ್ಕಕ್ಕಾ. ಮಾ. 1. ಸೇ. 6 ನುತ್ತು ಜಾಲ್ಲಿ ದುರ್ಮಾಖಿ ಸಾ॥ರೆದ ಗೇಣಿ ಕೂಡಿ 2 ನೂ. 19 ಸೇರು ಅಕ್ಕಿ ಈಗ ಎದ್ರಿಯರೆ ಮೇಲೆ ದಾಕಿಯಿತ್ತಿದೆ.

ಆದ್ರಿಂದ ಮದ್ರಾಸ್ ಕ. ಟೆನೆಂಟ್ಸ್ 3 (ಸ) ಸೆಕ್ಷನ್ ಪ್ರಕಾರ ಎದ್ರಿಯರ ಸ್ವಾಧೀನ ಇರುವ ಆಸ್ತಿಯನ್ನು ಅರ್ಜಿದಾರರ ಸ್ವಾಧೀನಕ್ಕೆ ಕೊಡಿಸುವರೆ ಅರ್ಜಿದಾರರು ತಾರೀಕು 9.11.1956ರಲ್ಲು ಅರ್ಜಿಮಾಡಿರುತ್ತಾಳೆ.

ಆ ಅರ್ಜಿ ತನ್ನಿಯನ್ನು ಈ ಆಫೀಸಿನಲ್ಲಿ ಮೇ ತಾ. 1—57ನೇ ಪೂ. ಘಂ. 11ಕ್ಕೆ ತನ್ನಿಗೆ ಇಟ್ಟಿರುತ್ತಿದೆ. ಆ ಸಮಯ ನಿನ್ನು ಆಕ್ಷೇಪಣೆಗೆದ್ದರೆ ಸ್ವತಃ ಯಾ ವಕೀಲರ ಮುಕಾಂತರ ಹೇಳಬೇಕು. ತಪ್ಪಿದರೆ ನಿಮ್ಮ ಗೈರುಹಾಜರಿಯಿಂದ ತೀರ್ಮಾನಿಸಲಿಸಲಾಗುವುದು.

ಇದನ್ನು ಸ್ವಾಧೀನದ ಹುಕ್ಕುಂಪ್ರಕಾರ ಅರ್ಜಿದಾರರು ಪ್ರಕಟಿಸುತ್ತಾಳೆ.

ಎ. ಈ ಎಡ ಹೆಬ್ಬೆಟ್ಟಿನ ಗುರ್ತು ಮುತ್ತಕ್ಕ ಶೆಡ್ತಿ ರುಜು.

ತಾ. 17 . 4 . 1957.

## ಭಾಷೆಯ ಮೂಲಕ ಸಂಪರ್ಕ

# ಆದ್ಯ ರಂಗಾಚಾರ್ಯರ ಅಭಿಪ್ರಾಯ

ಪ್ರಗತಿಪರ ಸಮಾಜದಲ್ಲಿ ಜೀವಂತ ವಾಗಿರುವ ಭಾಷೆಯು, ಸಾಮಾನ್ಯವಾಗಿ ತನ್ನ ಸ್ವಂತ ಆವಶ್ಯಕತೆಗಳನ್ನು ಪೂರೈ ಸುತ್ತದೆ. ಆದಾಗ್ಯೂ, ಒಂದುಕಡೆ ಆಕಾಶ ವಾಣಿ ಪ್ರಸಾರ, ಮತ್ತೊಂದುಕಡೆ, ಭಾ ರತೀಯ ಭಾಷೆಗಳಲ್ಲಿರುವ ವಿಶಿಷ್ಟ ಪರಿ ಸ್ಥಿತಿ, ಈ ಸಂದರ್ಭದಲ್ಲಿ, ಭಾಷೆಯ ಆವ ಶ್ಯಕತೆಗಳ ಪ್ರಶ್ನೆಯು ತೀಕ್ಷ್ಣವಾದ ಪರಿ ಶೀಲನೆಗೆ ಆರ್ಹವಾಗುವುದು. ಭಾರತದ ಲ್ಲಿ ಈ ಪ್ರಶ್ನೆಯು, ಕೊಂಚ ಮಟ್ಟಿಗೆ ಭಾ ಷೆಯಿಂದ ಭಾಷೆಗೆ, ಬದಲಾಯಿಸಬ ಹುದು.

ಇಂದು ರೇಡಿಯೊ ಹೆಚ್ಚು ಜನರಿಗೆ ವ್ಯಾಪಕವಾಗಿದೆ. ಅನಕ್ಷರಸ್ಥರಿಬ್ಬರೂ ಸೇರಿರುವರೆ., ಅಲ್ಲ ದೆ, ರೇಡಿಯೋವಿನಲ್ಲಿ ಭಾಷಣಗಳಾಗ.ವು ವು, ಚರ್ಚೆಗಳು ನಡೆಯುವುವು. ಜಾನ ಪದ ಸಂಗೀತದಿಂದ ಹಿಡಿದು ದಶಮಾಂಶ ನಾಣ್ಯದ ವರೆಗೆ, ಸರಳ ಸಂಗೀತದಿಂದ ಹಿಡಿದು ಆರ್ಥಿಕ ಯೋಜನೆಯ ವರೆಗೆ, ರೇಡಿಯೋದಲ್ಲಿ ವಿಷಯಗಳನ್ನು ವಿವರಿಸಿ ದೃಷ್ಟಾಂತಗಳನ್ನು ನೀಡಲಾಗುವುದು. ಮೂಲತಃ ಇಂಗ್ಲೀಷಿನಲ್ಲಿ ಅಧ್ಯಯನ ಮಾಡಿ ಬರವಣಿಗೆಯ ಮೂಲಕ ನಿರ್ಧರಿಸಿರಲಾದ ಈ ವಿಷಯಗಳು ಜನಸಾ ಮಾನ್ಯರಿಗೆ, ಅವರ ಗಮನವನ್ನು ಸೆಳೆ ಯುವ ರೀತಿಯಲ್ಲೂ ಅವರು ಅವುಗಳ ಅರ್ಥವನ್ನು ಗ್ರಹಿಸುವ ರೀತಿಯಲ್ಲೂ ತಲುಪಬೇಕು.

ಭಾರತೀಯ ಭಾಷೆಗಳಲ್ಲಿ ಹಲವು ಭಾ ಷೆಗಳು ತಮ್ಮ ಕಲ್ಪನಾ ಸಾಹಿತ್ಯವನ್ನು ತ್ವರಿತ ಗತಿಯಲ್ಲಿ ಅಭಿವೃದ್ಧಿಪಡಿಸಿಕೊಳ್ಳು ತ್ತಿದ್ದರೂ, ವೈಜ್ಞಾನಿಕ ಅಥವಾ ತಾರಿ ಭಾಷಿಕ ವಿಷಯಗಳಲ್ಲಿ ಸಾಕಷ್ಟು ಅಭಿ ವೃದ್ಧಿ ಸಂಪತ್ತನ್ನು ಹೊಂದಿಲ್ಲ. ಆದೂ ಅಲ್ಲದೆ, ನಗರ ಪ್ರದೇಶದಲ್ಲಿನ ವಿದ್ಯಾವಂ ತರಲ್ಲಿ ಮಾತ್ರ ಆಧುನಿಕ ಲೇಖಕರು ದೊರೆಯುವರು. ಪರಿಣಾಮವಾಗಿ ನಮ್ಮ ಸಾಹಿತ್ಯ ಶೈಲಿಯು, ಎಷ್ಟೇ ಉತ್ತಮವಾ ಗಿದ್ದರೂ ಸಾಮಾನ್ಯ ಓದುಗನನ್ನು, ವಿಚ ಲಿತಗೊಳಿಸುವುದಿಲ್ಲ.

ರೇಡಿಯೊ ಶ್ರೋತೃಗಳ ಸಂಖ್ಯೆ ಕ್ರಮೇ ಣ ವೃದ್ಧಿಗೊಳ್ಳುತ್ತಿರುವುದರಿಂದ, ಆ ಶ್ರೋತೃಗಳಲ್ಲಿ ಅಧಿಕ ಸಂಖ್ಯಾತರಿಗೆ, ನಮ್ಮ ಪರಿಸ್ಥಿತಿಯಲ್ಲಿ, ಶಿಕ್ಷಣ ಅಥವಾ ಸೂ ಚ ನೆ ಯ ನ್ನು ಕೊ ಡು ವು ದ ರ ಜ ಗ ತ್ಯ ವಿ ರು ವು ದ ರಿಂ ದ, ರೇಡಿಯೋವಿನಿಂಗಿ, ನಮ್ಮ ಭಾಷೆಯನ್ನು ಅಭಿವೃದ್ಧಿಪಡಿಸಿಕೊಳ್ಳುವ ಪ್ರಶ್ನೆ ಯು ಪ್ರಾಮುಖ್ಯಗಳಿಸಿದೆ. ಮೊದಲನೆಯದಾ ಗಿ, ನಾವು ಶ್ರೋತೃಗಳೊಂದಿಗೆ ಸಾಮಿಪ್ಯ ಭಾವನೆಯನ್ನು ಬೆಳೆಸಿಕೊಳ್ಳುವಂತಹ ಶೈಲಿ ಯನ್ನು ರೂಪಿಸಿಕೊಳ್ಳಬೇಕು. ನಾಸ್ತವ ವಾಗಿ ಶೈಲಿಯಷ್ಟೇಪ ಅಲ್ಲದೆ ಸಂಪತ್ತೂ ಸಹ ಶ್ರೋತೃಗಳಲ್ಲಿ ಬೃಹತ್ ವಿಶ್ವಾಸವನ್ನು ಮೂಡಿಸುವಂತಿರಬೇಕು. ಯಾರೋ ಒ ಬ್ಬರು ವಿದ್ವಾಂಸರು, ಏನನ್ನೋ ಹೇಳುತ್ತಿರುವರು ಎನ್ನುವ ಭಾವನೆ ಶ್ರೋತೃಗಳಲ್ಲಿ ಬರುವಂತಹ ಪದಸಂಪತ್ತು ಇರಕೂಡದು. ಆದರೆ, ಮಹತ್ತರ ವಿಚಾರಗಳನ್ನು ಮಾತ್ರ ಪಾಂಡಿತ್ಯಪೂರ್ಣ ಶೈಲಿಯಲ್ಲಿಯೇ ವಿವರಿಸಬಹುದು.

ಮಹಾಭಾರತ ಮತ್ತು ರಾಮಾಯಣ ಗಳಂತಹ ಸರಳ ಪದ್ಯ ಕಾವ್ಯಗಳು, ಸಾ ಮಾನ್ಯ ಮಾನವನಿಗೂ ಧರ್ಮ ಹಾಗೂ ದರ್ಶನದ ಮಹತ್ತರ ತತ್ವಗಳನ್ನು ಅರ್ಥ ಮಾಡಿಸಿರುವಂತಹ ಪರಂಪರೆಯುಳ್ಳ, ನಮಗೆ ಸರಳ ಶೈಲಿ ಹಾಗೂ ಪದಸಂಪ ತ್ತನ್ನು ಬೆಳೆಸಿಕೊಳ್ಳುವ ಪ್ರಶ್ನೆಯು ಕಷ್ಟ ವೆನಿಸುವುದಿಲ್ಲ. ಸಾಮಾನ್ಯ ಮಾನವನಿಗೆ ಹಲವಾರು ಸಾವಿರ ಶಬ್ದಗಳ ಪದಸಂಪ ತ್ತು ಇದ್ದರೂ ವಾಸ್ತವವಾಗಿ, ಆತ 500 ರಿಂದ 600 ಶಬ್ದಗಳಿಗಿಂತ ಹೆಚ್ಚು ಶಬ್ದ ಗಳನ್ನು ತಾನೇ ಬಳಸುವುದಿಲ್ಲ.

ತಾನೇ ಬಳಸುವ ಶಬ್ದಗಳು ಆತನಿಗೆ ಜೀವಂತ ಶಬ್ದಗಳೆನಿಸುತ್ತವೆ. ಶ್ರೋತೃಗ ಳ ಕಣ್ಣಿನ ಮುಂದೆ ಸ್ಪಷ್ಟ ಚಿತ್ರಣವು ರೂಪುಗೊಂಡು ನಿಲ್ಲುವಂತೆ, ವಸ್ತು ವಿಷ ಯದ ಇತಿ–ಮಿತಿಯನ್ನು ನೋಡಿಕೊಂ ಡು, ಸಾಧ್ಯವಾದಷ್ಟೂ ಜೀವಂತ ಶಬ್ದಗ ಳನ್ನು ಬಳಸಲು ನಾವು ಪ್ರಯತ್ನಿಸಬೇ ಕು. ಪಾರಿಭಾಷಿಕ ವಿಷಯಗಳಿಗೆ ಉನ್ನ ತ ಮಟ್ಟದ ಶಿಸ್ತಿಗೊಳಗಾದ ಪದಸಂಪ ತ್ತು ಅಗತ್ಯವೆನಿಸುವುದು ನಿಜ; ಆದರೆ, ಸಾಮಾನ್ಯ ಶ್ರೋತೃಗಳಿಗೆ, ಅವರ ಸ್ವಂತ ಭಾಷೆಯಲ್ಲಿಯೇ, ಮೊದಲು ಸಾಕಷ್ಟು ಆಸಕ್ತಿಯನ್ನು ಕೆರಳಿಸಿ, ತದನಂತರ ಗ್ರಹಿ ಸುವಂತೆ ಮಾಡಲಾಗದ ಯಾವ ವಸ್ತು ವಿಷಯವೂ ಇಲ್ಲವೆನ್ನಬಹುದು.

ಭಾಷಾಂತರದ ಪ್ರಶ್ನೆಯು, ಭಾಷೆಯ ಈ ದೃಷ್ಟಿಕೋಣವನ್ನು ಮತ್ತಷ್ಟು ವಿಶದ ಗೊಳಿಸುವುದು. ಒಂದು ವಿಷಯವನ್ನು ಒಂದು ಭಾಷೆಯಿಂದ ಮತ್ತೊಂದು ಭಾಷೆ ಗೆ, ಪದಕ್ಕೆ ಪದ ಹಾಗೂ ವಾಕ್ಯಕ್ಕೆ ವಾಕ್ಯ ವಿಟ್ಟು ಅನುವಾದ ಮಾಡುವುದು ಸೂಕ್ತ ವಾದುದು. ಆದರೆ ಅನೇಕವೇಳೆ, ಕರಾರು ವಾಕ್ಯಾದ ಭಾಷಾಂತರವು ಶ್ರೋತೃಗಳ ನ್ನು ನಿಶ್ಚಲಿತಗೊಳಿಸದಿರುವುದಷ್ಟೇ ಅಲ್ಲ, ಅವರನ್ನು ನಿರುತ್ಸಾಹಗೊಳಿಸುವುದು. ಇ ದಕ್ಕೆ ಕಾರಣ: ಭಾಷೆಯು, ವ್ಯಾಕರಣ ಹಾಗೂ ಅಲಂಕಾರ ಶಾಸ್ತ್ರಗಳಿಂದ ನಿರ್ಧಗೊಂಡ ವಸ್ತುವಲ್ಲ. ಭಾಷೆಯು ಜನರು ಪರಸ್ಪರ ಅಭಿವ್ಯಾಯನವನ್ನು ವ್ಯ ಕ್ತಪಡಿಸುವ ಸಾಧನವಾಗಿದೆ. ಪ್ರತಿಸಲ ವೂ ಒಬ್ಬ ಮಾನವ ಇನ್ನೊಬ್ಬ ಮಾನವ ನೊಡನೆ ಮಾತನಾಡುವಾಗ ಭಾಷೆಯು ವೃದ್ಧಿಗೊಳ್ಳುತ್ತ ಹೋಗುವುದು.

ನಮ್ಮ ದೇಶದಲ್ಲಿ ಪರಸ್ಪರ ಭಾಷಾಂತ ರ ಮಾಡಬೇಕಾದ ಪ್ರಸಂಗಗಳು ವಿಪುಲ ವಾಗಿವೆ; ಅವು ಅಗತ್ಯವೂ ಎನಿಸಿವೆ. ಭಾ ಷಾಂತರವು, ಮೂಲದೊಂದಿಗೆ ಹೆಚ್ಚು ಕರಾರುವಾಕ್ಕಾಗಿರುವುದಕ್ಕಿಂತ, ಶ್ರೋತೃಗ ಳಿಗೆ ಅದು ಸಹಜವಾಗಿ ಆ ಭಾಷೆಯ ಲ್ಲೇ ಬರೆದಂತಿರಬೇಕು-ಎಂಬುದನ್ನು ಗನು ದಲ್ಲಿಟ್ಟುಕೊಂಡಿರುವುದು ಮುಖ್ಯ. ಪುನಃ ಇಲ್ಲಿ ಉದ್ಭವಿಸುವ ಪ್ರಶ್ನೆ ಸರಳವಾಗಿದೆ. ಭಾಷಾಂತರವಾಗಿರಲಿ, ಅಥವಾ ಮೂಲ ಕೃತಿಯಾಗಿರಲಿ, ಅದನ್ನು ಆಲಿಸುವ ಶ್ರೋ ತೃವಿನಲ್ಲಿ – ಆಕೃತಿಯು, ಮುಖ್ಯವಾಗಿ, ತನ್ನನ್ನು ಮಾತ್ರ ಉದ್ದೇಶಿಸುತ್ತಿದೆ-ಇದೆ ಎಂಬ ಭಾವನೆ ಮೂಡುವಂತಿರಬೇಕು.

ಹಲವು ಭಾರತೀಯ ಭಾಷೆಗಳಿಗೆ ವಿಶಿ ಷ್ಟವೆನಿಸಿದ ಒಂದು ಅಂಶವನ್ನು ಇಲ್ಲಿ ಸೂಚಿಸಬಹುದು. ಈ ಭಾಷೆಗಳು ಬಹು ಕಾಲದಿಂದ, ಸಹಸ್ರಾರ ಸತ್ಯ ಅಥವಾ ಪರಮ ತತ್ವಗಳನ್ನು ನಿರೂಪಿಸುವ ಆ ಕ ಗಾದೆಗಳು ಅಥವಾ ನಾಣ್ಣುಡಿಗಳ ನ್ನು ಹೊಂದಿರುವುವು. ನಮ್ಮ ರೇಡಿಯೋ ಭಾ ಷೆಯು ಈ ನಾಣ್ಣುಡಿಗಳು, ಪದಸಮೂ ಹಗಳು ಮತ್ತಿತರ ಸಂಕೇತಗಳನ್ನು ಅಳವ ಡಿಸಿಕೊಂಡು, ಹೊಸದಾದ ಅಥವಾ ಆ ಧುನಿಕ ಭಾವನೆಗಳಿಗೆ ಅಭಿವ್ಯಕ್ತಿಯನ್ನು ನೀಡಬೇಕು.

ಶ್ರೋತೃಗಳನ್ನು ದಿಗ್ಭ್ರಾಂತಿಗೊಳಿ ದಂತಹ ಸರಳ ಶೈಲಿ, ಸ್ವಭಾಷಾ ಪದ ಪುಂಜ, ಜನಸ್ವೀಯ ನಾಣ್ಣುಡಿಗಳು ಮತ್ತು ಪದಸಂಪತ್ತು ರೇಡಿಯೋಗೆ ಬ ಸಿಸುವ ಭಾಷೆಯ ಮುಖ್ಯಾಂಶವಾದೆ ಮೂ ಲಗತ್ಯಗಳೆನ್ನಬಹುದು. ರೇಡಿಯೋ ತ ವೇ ಆದ ರೀತಿಯಲ್ಲಿ, ಭಾಷೆಗೆ ಬೆಂಬ ಹಾಗೂ ಅರ್ಥವ್ಯಾಪ್ತಿಯನ್ನು ಒದಗಿ ವುದೂ ದಿಟ.

ಆಕಾಶವಾಣಿ ಸಾವಿರಾರು ಮ ಶ್ರೋತೃಗಳು ಕೇಳುವ ಭಾಷೆ, ಹೊ ದಾದ, ಜೀವಂತವೆನಿಸಿದ, ಸಂಪ ಮಾಧ್ಯಮವನ್ನು ರೂಪುಗೊಳಿಸುವ ಸಹಜ. ಈ ಕಾರಣದಿಂದಾಗಿಯಾದರೆ. ನಿಸ್ಸಂಶಯತೆ ಹಾಗೂ ಅಭಿವ್ಯಕ್ತಿಗೆ ಕು ಮುಂಟುಮಾಡದೆ, ರೇಡಿಯೋ ಭಾ ಯು, ಸಾಮಾನ್ಯ ಶ್ರೋತೃವಿನ ಅ ದಿನ ಬಳಸುವ ಭಾಷೆಗೆ ಸಾಧ್ಯವಾದಷ ಸನ್ನಿಹಿತವಲ್ಲಿದ್ದು, ಶ್ರೋತೃವಿನಲ್ಲಿ ಅ ತನ್ನದೇ ಭಾಷೆಯೆಂಬ ಭಾವನೆಯನ್ನ ಒಡಮೂಡಿಸುವಂತಿರಬೇಕು.

ಸರಕಾರದ ಅತ್ಯಂತ ದೊಡ್ಡ ಉದ್ದಿಮೆಯಾದ ರೈಲು ವಿಭಾಗವಲ್ಲಿ ಸು. ೧೦ ಲಕ್ಷಕ್ಕೂ ಮಿಕ್ಕಿದ ಕೆಲಸಗಾರರಿದ್ದಾರೆ. ಚಿತ್ರದಲ್ಲಿ ಈ ವಿಭಾಗದ ಕೆಲವೊಂದು ದೃಶ್ಯಗಳನ್ನು ಕಾಣಬಹುದು.

ಚಿತ್ರ ೧. ಪೆರಂಬೂರಿನ ರೈಲು ಕಾರ್ಖಾನೆಯ ದೃಶ್ಯ.
ಚಿತ್ರ ೨. ಆಂಧ್ರ ಪ್ರಯಾಣಿಕನೊಬ್ಬನಿಗೆ ರೈಲ್ವೆ ಅಧಿಕಾರಿಯು ನೆರವೀಯುವುದು.
ಚಿತ್ರ ೩. ರೈಲ್ವೇ ಮಾರ್ಗವನ್ನು ಮರಸ್ತು ಮಾಡುವ ಜನಸಮೂಹ.
ಚಿತ್ರ ೪. ರೈಲ್ವೆ ಕೆಲಸಗಾರರ ನಿವಾಸದಲ್ಲಿ ಡಾಲಕ್ತೀಡಾ ಸ್ಥಳ.

### ಸೂಚನೆ

"ನವಯುಗ" ದಲ್ಲಿ ಪ್ರಕಟಣೆ ಗಿ ಲೇಖನಗಳನ್ನು ಆಮಂತ್ರಿಸ ಗಿದೆ. ಇವು ಚಿಕ್ಕದಿರ ಬೇಕೆಲ್ಲ ಕಾಗದವ ಒಂದೇ ಮಗ್ಗುಲಿನಲ್ಲಿ ಬೇಕು. ಲೇಖಕ ಬಂಧುಗಳು ಸ ಕರಿಸಬೇಕಾಗಿ ವಿನಂತಿ. — ಸಂ.

Edited, Printed & Published by K. H. Shetty, at the Navayuga press, Udipi S. India

LICENCE NO. 31
Licensed to Post without Prepayment.

# ಸಮಯ

ಪುಟ ೪೬ — ಸಂಚಿಕೆ ೪೪

VOL.36 — 2—5—1957 — NO. 34

## ಅಂಧಾನುಕರಣೆ

### ಸದುದ್ದೇಶರಹಿತ ಅನುಕರಣೆಯು ಲಾಂಛನಾಸ್ಪದ!

ನಮ್ಮ ಭಾರತ ಭೂಮಿಯನ್ನು ಬ್ರಿಟಿ ಬಹುಕಾಲ- ಸುಮಾರು ನೂರೈವ ವರ್ಷಗಳ ದೀರ್ಘ ಕಾಲ- ವೈಭವ ನ ಆಳಿದರು! ಇಲ್ಲಿನ ಸಂಪತ್ತು ಸೌ ಗಳನ್ನು ಸೂರೆಗೊಂಡು ಸ್ವದೇಶ ಸ್ವರ್ಗ ಸದೃಶವಾಗಿ ಸುಖವಿಂದ ಬಾಳಿದರು. ತೀಯರಲ್ಲಿ ದಾಸ್ಯವೃತ್ತಿಯ ಪ್ರವೃ ು ಹೆಚ್ಚಾಗುವ, ಆಂಗ್ಲೇಯರನ್ನು ಸುವ ಮನೋ ವೃತ್ತಿಯು ಅಭಿವೃ ಾಗುವ ವಿದ್ಯಾಭ್ಯಾಸ ಪದ್ಧತಿಯ ಅವರಿಲ್ಲಿ ಪ್ರಾರಂಭಿಸಿದ ು. ಮಾತ್ರ ಸಿ ಅವರ ಅಳ್ವಿಕೆಯ ಅಸ್ಥಿತ್ವವನ್ನು ಗೊಳಿಸುವುದಕ್ಕಾಗಿ, ನಮ್ಮ ಜ ತೆಗೆ ಾ ಯುರೀತಿ ನೀತಿ ಕ್ರಮ ನಿಯಮ ಾ ಅಭಿಮಾನ ಹುಟ್ಟಿಸಲಿಂತಿ ಅವರದೇ ನಾಗರಿಕತೆಯನ್ನು ಇಲ್ಲಿ ಪ್ರಚಾರ ಿಸಿದರು. ಅವರ ಭಾಷೆ, ಸಂಸ್ಕೃತಿ, ತ್ಯ ಎಲ್ಲವನ್ನೂ ಇಲ್ಲಿ ಪಸರಿಸುವಂ ಾಡಿದರು. ದೇಶೀಯ ಕಲೆ, ಸಾಹಿ ಸಂಸ್ಕೃತಿ, ಉದ್ಯಮ, ಭಾಷೆ- ಇ ಿದಕ್ಕೂ ಪ್ರೋತ್ಸಾಹವನ್ನೀಯಲಿ ಇದರ ಪರಿಣಾಮ.....?

ರಿಣಾಮ ಭೀಕರವಾಯಿತು! ನಮ್ಮ ದ ಪ್ರಾಚೀನ ಪರಂಪರೆಯುಳ್ಳ ದಿ ಸಂಸ್ಕೃತಿಯನ್ನು ಬದಿಗಿರಿಸಿ, ಭಾರ ರು ಆಧುನಿಕ ಆಂಗ್ಲ ನಾಗರಿಕತೆ ಗುಲಾಮರಾಗಲಾರಂಭಿಸಿದರು. ವುದರಲ್ಲಿ, ನೋಡುವುದರಲ್ಲಿ, ಉಡು ಮಾಡುವುದರಲ್ಲಿ— ಅದರಲ್ಲಿ ಇದ ಎನ್ನದೆ ಪ್ರತಿಯೊಂದ ಯೂ- ಇಂಗ್ಲಿಷನ್ನು ಅನು ುವುದಕ್ಕೆ ತೊಡಗಿದರು. ತರುಣರೇ ೃ ಹೆಚ್ಚಾಗಿ ಆ ನಾಗರಿಕತೆಯ ಮೆರ ಮಾರು ಹೋಗಿ ಆದನ್ನು ತ್ರಿಕರಣ ರ್ವಕ (!)ವಾದ ಶ್ರದ್ಧೆಯಿಂದ ಆಚ ಿ ತಂದರು. ಇಂಗ್ಲಿಷರು ಅಡಿದ್ದೇ ಮಾಡಿದ್ದೇ ಯೆ ೇಗ್ಯ ಎಂಬ ಭಾ ನಮ್ಮಲ್ಲಿ ವ್ಯಾಪಿಸಲಾರಂಭಿಸಿತು. ಕೆ ಂಗಂತೂ ಅವರ 'ವಚನ'ವೆಂದರೆ ತ ಉವಾಚ' ಎಂಬಂತೆ ಪವಿತ್ರವಾಗಿ ಾಗಿಸಿತು. ಆಂಗ್ಲ ನಾಗರಿಕತೆ ಇಷ್ಟ ಗಿ ಬೇರೂರಿತು! ಪುಣ್ಯ ಪುರೀತ ಾದ ಭಾರತ ಮಾತೆಯ ಉಜ್ವಲವಾದ ಸಂಸ್ಕೃತಿ ಸಲಿಲವನ್ನು ಪಾನ ಮಾಡಿದ ಭಾರತೀಯರ ಧಮನಿ ಮನಿಗಳಲ್ಲೂ ಪರಕೀಯರ ನಾಗರಿಕತೆ ರಕ್ತಸೂಪವಾಗಿ ಹರಿಯತೊಡಗಿತು.

ಭಾರತಾಂಬೆಯು ಹಲ ಕೆಲವು ಪುತ್ರ ರತ್ನರ ಅಸ್ಖಲಿತ ಶ್ರುತುದಾನದ ಪರಿಣಾ ಮವಾಗಿ ಸ್ವಾತಂತ್ರ್ಯ ತರುಣಾರುಣಕಾಂ ತಿ ದೇಶದ ಎಲ್ಲೆಡೆಗಳಲ್ಲೂ ಪಸರಿಸಿತು. ದೇಶದಾಸ್ಯವನ್ನು ನಾವು ಕಡಿದೊಗೆದರೂ ನಮ್ಮ ಭಾವನಾ ದಾಸ್ಯವನ್ನು ಮುರಿಯಲು ಸಾಧ್ಯವಾಗಲಿಲ್ಲ. ಪಾಶ್ಚಾತ್ಯರ ನಡ ವಳಿಕೆಯ ಕುರಿತು ನಮಗಿನ್ನೂ ಅಭಿರುಚಿ ಅಭಿಮಾನಗಳು ಇನ್ನೂ ಹಾಗೆಯೇ ಉಳಿ ದಿವೆ. ಇಂದು ಹೆಚ್ಚಿನ ವಿಷಯಗಳಲ್ಲೆ ಲ್ಲಾ ನಾವು ಪಾಶ್ಚಾತ್ಯರನ್ನೇ ಅನುಕರಿ ಸುತ್ತಿದ್ದೇವೆ!

ನಮ್ಮ ಉಡುಪು, ತೊಡುಸುಗತ್ತ ದೃಷ್ಟಿಹರಿಸೋಣ. ನಮ್ಮಲ್ಲಿಂದು ಒಬ್ಬನ ವೇಷ ಭೂಷಣಗಳನ್ನು ಕಂಡೇ ಅವನ ಯೋಗ್ಯತೆಯನ್ನಳೆಯುವ ಪದ್ಧತಿ ಜನರಲ್ಲಿದೆ ಟಿರ್ವಾಣ ಸೋಂಟು ಕೋಟು, ಹೇ ಟ್, ಬೂಟ್‌ಗಳನ್ನ ಧರಿಸಿಕೊಂಡು 'ಯಸ್ಸ್' 'ನೋ' ಎಂದು ಬಾಯಿಯಲ್ಲಿ ಎಡು ಇಂಗ್ಲಿಷ್ ಶಬ್ದಗಳನ್ನು ಹಾರಿಸಿ ದರೆ ಅವನೊಬ್ಬ ಶ್ರೇಷ್ಠ ವ್ಯಕ್ತಿಯೆಂ ದು ಹೆಚ್ಚಿನ ಜನರಿಂದು ಪರಿಗಣಿಸುತ್ತಾರೆ. ಸಾಮಾನ್ಯ ಹಳ್ಳಿಗರಲ್ಲಿ ಈ ರೀತಿಯ ಮ ನೋಭಾವನೆಯಿರುತಿದ್ದರೆ ಅದನ್ನು ಅಜ್ಞಾ ನದ ಪರಾಮಾವಧಿಯೆಂದು ಕಡೆಗಣಿಸಿ ಬಿಡಬಹುದಾಗಿತ್ತು. ಆದರೆ ಯಾರಿಂದು ತಾವು ಕಲಿತವ (?), ರೆಂದು ಹೆಮ್ಮೆಪಡು ತ್ತಿರುವರೋ, ಅಂತಹ ವಿದ್ಯಾವಂತರಲ್ಲೇ ಈ ಭಾವನೆ ಮನೆಮಾಡಿಕೊಂಡಿದೆ. ಈ ಗೀಗ ಪದವೀಧರರಾಗಿ ಹೊರಬರುತ್ತಿರುವ ತರುಣವೃಂದದಲ್ಲಂತೂ ಇದು ಪರಿಪೂ ರ್ಣವಾದ ಪ್ರಭಾವವನ್ನೇ ಬೀರಿಬಿಟ್ಟಿದೆ. ಅವರಿಗೆ ಆಂಗ್ಲರ ಅನುಕರಣೆಯು ಅಂಗಳ ಲ್ಲಿಂದಾದ ಈ ನವೀನ ರೀತಿಯ ಉಡು ಪುಗಳನ್ನು ತೊಟ್ಟುಕೊಳ್ಳದೆ ಅತ್ಮಿತ್ಮ ಸು ತ್ತುವುದೇ ಸಾಧ್ಯವಾಗುವುದಿಲ್ಲ. ಈ ವಿ ಚಾರದಲ್ಲಿ ತರುಣಿಯರಿಗೂ ಹಿಂದುಳಿದ ವರಲ್ಲ. ಅವರೂ ಚಲಚಿತ್ರಗಳನ್ನು ನೋ ಡಿಕೊಂಡು, ದಿನದಿಂದ ದಿನಕ್ಕೆ ಹೊಸ ಸಂಶೋಧನೆಗಳನ್ನು ಮಾಡಿಕೊಂಡು (ಉಡುಪು ತೊಡುವುದರಲ್ಲಿ!) ಪಾಶ್ಚಾತ್ಯ ರನ್ನನುಕರಿಸುವುದರಲ್ಲಿ ಅಗ್ರಗಣ್ಯರೆಂದನಿ ಸುತಿದ್ದಾರೆ. ರಾಷ್ಟ್ರೀಯವಾದ—ಸರಳ ವಾದ ಉಡುಪನ್ನು ತೊಡದೆ ಪಾಶ್ಚಾತ್ಯ ರದೇ ಶ್ರೇಷ್ಠವೆಂದು ಬಗೆದು ಅದಕ್ಕೆ ಶರ ಣಾಗುತ್ತಿರುವ ನವಿದ್ಯಾಯುವ ಜನಾಂಗ ದ ಮನೋಭಾವನೆಯನ್ನೇನೆನ್ನಲಿ?

ನಮ್ಮಲ್ಲಿಂದ ಹೊಗೆಬತ್ತಿ ಸೇದುವ ಮಾದಕ ಪದಾರ್ಥಗಳನ್ನು ಸೇವಿಸುವ (ಗುಟ್ಟಿನಲ್ಲಿ ಪುರುಷರುಏಕೆ ಸ್ತ್ರೀಯರೂ -ದಿನದಿಂದ ದಿನಕ್ಕೆ ಹೆಚ್ಚಾಗುತಿದ್ದಾರೆ. ನಿಜವಾಗಿ ಯೋಚಿಸಿದರೆ ಈ ಅಭ್ಯಾಸಗ ಳಿಂದ ತಿಲಮಾತ್ರವಾದರೂ ಉಪಕಾರ ವಿಲ್ಲ; ಬಲವಾಗಿ ಅಪಾಯವಾದ ಉಪದ್ರ ವೇ ಇದೆ. ಆದರೆ ಮಾತಲೇನು? ಪಾಶ್ಚಾ ತ್ಯರನ್ನು ಅನುಕರಿಸುವುದನ್ನೇ ಉದ್ದೇಶ ವಾಗಿಟ್ಟುಕೊಂಡ, ಅಂಧ ಮನಸ್ಕರಾದ ವಿದ್ಯಾವಂತರನ್ನೇ ಹೊಗೆಬತ್ತಿ ಸೇದುವ ಕ್ರಮ- ಕೊಗೆಯನ್ನು ಬಿಡುವ ರೀತಿ-ಇವುಗಳಲ್ಲೇ ನಾಗರಿಕತೆ (?) ಯ ಡಗಿದೆಯೆಂದು ಗ್ರಹಿಸಿ ಅದಕ್ಕೆ ಪ್ರೋತ್ಸಾ ಹವನ್ನೀಯುತಿದ್ದಾರೆ.

ನಮ್ಮ ವಿದ್ಯಾಭ್ಯಾಸನ ಪದ್ಧತಿಯೂ ಪಾಶ್ಚಾತ್ಯರದೇ ಒಂದು ಅನುಕರಣೆಯಾ ಗಿದೆ- ನಮ್ಮ ಜನತೆ ು ಮನೋ ಸಂಸ್ಕಾ ರಕ್ಕಾಗಲಿ, ದೇಶದ ಏಳಿಗೆಗಾಗಲಿ ಇದು ಯಾವುದೇ ರೀತಿಯಿಂದಲೂ ಪ್ರಯೋಜ ನಕಾರಿಯಾಗಿಲ್ಲ. ಜನರಲ್ಲಿ ನೋಡಾರಿ ತನವನ್ನೇ ಪ್ರಚೋದಿಸುತ್ತಿದೆ. ಆದರೂ ಆಂಗ್ಲೇಯರು ಪ್ರಾರಂಭಿಸಿದ್ದೇ ಶ್ರೇಷ್ಠ ವೆಂಬ ದೃಷ್ಟಿಯಿಂದ ನಾವಿದನ್ನು ಅನು ಸರಿಸಿ ತಿದ್ದಿವೆ.

ಪಾಶ್ಚಾತ್ಯರಂತೆ ಬೆಳಿಗ್ಗೆ ಎದ್ದೊಡನೆ "ಬೆಡ್ ಟೀ" ಕುಡಿಯುವುದೂ ನಮ್ಮಲ್ಲಿ ಹಲವು ನಾಗರಿಕರ ಹವ್ಯಾಸವಾಗಿದೆ. ಸ್ವಲ್ಪ ಯೋಚಿಸಿದರೆ ಹೆಚ್ಚಿನವ್ಯಜ್ಞದೆ ವಾ ನೀಯನನ್ನು ಸೇ ಸುವ ಈ ಸಿದ್ಧ ರಕ್ತವು ಅನಾಗರಿಕರಿಗಿಂತಲೂ ಕೇಳು ಮಟ್ಟದವ ರೆಂದು ಸ್ಪಷ್ಟವಾಗುತ್ತದೆ ಹೆಲ್ಲನ್ನು ಸ್ವಚ್ಛ ವಾಗಿಡಬೇಕೆಂದು ಉಪದೇಶಿಸ ವ ಈ ವಿದ್ಯಾವಂತರಿಗೆ ಎದ್ದೊಡನೆ 'ಟೀ' ಕುಡಿ ಯಲಿಕ್ಕೆ ಹೇಗೆ ಒಗ್ಗುತ್ತದೆಯೋ ತಿಳಿಯು ವುದಿಲ್ಲ. ಒಟ್ಟಿನಿಂದ ಪಾಶ್ಚಾತ್ಯರನ್ನ ಅ ನುಕರಿಸಬೇಕೆ—ಅಷ್ಟೇ ಸಾಸ್ತೇಕ.

ಎಪ್ರೀಲ್ ೧ನ್ನು 'ಸರ್ವ ಮೂರ್ಖರ ದಿನ"ವೆಂದು ಆಚರಿಸುವ ಪದ್ಧತಿ ಪಾಶ್ಚಿ ಮಾತ್ಯರಲ್ಲಿದೆ. ಆವರನ್ನೇ ಅನುಕರಿಸುತ್ತಿ ರುವ ಭಾರತದ ನಗರಗಳ ಕೆಲವು ನಾಗ ರಿಕ ಪ್ರಜೆಗಳೂ ಈ ದಿನವಲ್ಲಿ ಹಲವರು ನ್ನು ಕುಲುಲೀಲೆಯಿಂದ ಸಗೆಡುತಾ ಡುತಿದ್ದಾರೆ ಮೊನ್ನೆತಾನೇ ಬೆಂಗಳೂರಿ ನಲ್ಲಿ ಈ ನುಮಾದುನವರವು ಮೋಜಿಗೆ ಸಿಕ್ಕಿ ನಾನ್ನ ನಂತಿ ಗಳ ನಶ್ರೀನಿಜಲಿಂ ಗಪ್ಪ, ಶ್ರೀಟಿ. ಮಾರಿಯ ಪ್ಪ ಮೊದಲಾದವ ರೂ ಬನ್ನಪಟ್ಟರು. ಪತ್ರಿಕಾಲಯ ಸಾದರ ದಿಂದ ಸ್ವಾಗತಿಸಿದ ಪತ್ರಿಕೆಯ ಕಾರ್ಯಕರ್ತ ಅವರು ಸಾಗಿದಾಗ ಮನೆಯ ಬಜಾ ನರೇ ಅಲ್ಲೆಲ್ಲಮೆಯರಿಂದ ಹಿಂತಿರುಗಿ ಬರ ಬೇಕಾಯಿತು ಆಹಾ! ಇದೆಂತಹ ವಿನೋ ದಕರವಾದ ಪ್ರಸಂಗವೇ ಪದ! ಈ ರೀತಿ ಸ ನೋದನವನ್ನುಂಟುಮಾಡುವ ಪಧಾನ ವಿ ಷಯದಕ್ಕೆ ಕಾರಣವೇ ಸರಿ. ಕಾರ್ಯ ಮಗ್ನರಾಗಿರುವ ಪತ್ರಿಕೆಯರನ್ನೇ ಹೀಗೆ ವ್ಯರ್ಥವಾಗಿ ಕುಣಿಸುವುದೆಂದರೆ ಇದಕ್ಕೆ ಅರ್ಥವೇನು? ಸವಿಯುವ ಬೆಲೆ

(ಇನೇ ಪುಟ ನೋಡಿರಿ)

**SEASON DEPOSITS**

**ಸೀಸನ್ ಠೇವಣಾತಿಗಳು**

ಶೇ. 4% ದರ ಬಡ್ಡಿಯಲ್ಲಿ ಸೀಸನ್ ಠೇವಣಾತಿ ಗಳನ್ನು ಈಗ ಸ್ವೀಕರಿಸಲಾಗುವುದು.

ದೊಡ್ಡ ಡಿಪೊಜಿಟು ಮೊಬಲಗುಗಳಿಗೆ ಸ್ಪೆಶಲ್ ಬಡ್ಡಿ ದರಗಳು.

ಹೆಚ್ಚಿನ ವಿವರಗಳಿಗೆ ನಮ್ಮನ್ನು ವಿಚಾರಿಸಿರಿ.

**ದಿ ವಿಜಯ ಬೇಂಕ್ ಲಿಮಿಟೆಡ್**

ಪ್ರಧಾನ ಕಛೇರಿ ಮತ್ತು ಶಾಖೆಗಳು.

ಜುಮ್ಲಾ ಸಂಪತ್ತು (13—12—1956) | ರೂಪಾಯಿ 1 ಕೋಟಿಗೂ ಮಿಕ್ಕಿದೆ.

ಚಂದಾ: NAVAJIVA WEEKLY JUDIPI ಪ್ರತಿಸಂಚಿಕೆ

# ಅಖಂಡ ಭಾರತ

## ಸರ್ವ ವಿಧದಿಂದಲೂ ಭಾರತದ ಭಾಗಗಳು ಸಮ್ಮಿಲಿತವಾಗಿವೆ

ಅನಾದಿ ಕಾಲದಿಂದಲೂ ಭಾರತವು ಅಖಂಡವಾದುದು. ಸಾಂಸ್ಕೃತಿಕವಾಗಿ, ಮತ್ತು ಭೌಗೋಲಿಕವಾಗಿ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ, ಪೂರ್ವ ಸಮುದ್ರದಿಂದ ಪಶ್ಚಿಮ ಸಮುದ್ರದವರೆಗೆ ಹರಡಿಕೊಂಡಿರುವ ಭೂಭಾಗ ಒಂದೇ ಎಂಬ ಕಲ್ಪನೆಯು ಹುಟ್ಟಿ ಬೆಳೆದು ಬಂದಿದೆ. ತಮ್ಮ ಈ ಭಾವನೆಗಳಿಗೆ ಪುಷ್ಟಿಕರವಾದ ಆಧಾರಗಳನ್ನೂ ನಮ್ಮ ಪೂರ್ವಜರು ಕೊಡುತ್ತಾ ಬಂದು, ಭಾರತವು 'ಎಂದೆಂದಿಗೂ ಅಖಂಡ' ಎಂಬುದನ್ನು ಘೋಷಿಸಿದ್ದಾರೆ ವಾಕಿಸ್ತಾನವು ಪಾಲುಗೊಂಡು ಹೋಗಲಿ, ಕಾಶ್ಮೀರವನ್ನು ಅವರು ಆಪಹರಿಸಲಿ, ಇಡೀ ಭಾರತ ಹೌದು, ಪಾಕಿಸ್ತಾನ ಕಾಶ್ಮೀರಗಳು ಕೂಡಿದ ಭಾರತ ವೊಂದೇ ಸಂಸ್ಕೃತಿಯದ್ದು. ಆ ಭಾವನೆಗಳನ್ನು ನಮ್ಮ ವೈದಿಕ ಹಾಗೂ ಲೌಕಿಕ ಗ್ರಂಥಗಳಲ್ಲಿ ಇಟ್ಟು ಪ್ರಕಾಶಪಡಿಸಿದ್ದಾರೆ.

'ಭರತ ವರ್ಷ' ಎಂಬ ಒಂದೇ ಹೆಸರಿನಿಂದ ಅಖಂಡ ದೇಶವನ್ನೂ ಕರೆದು ತಮ್ಮ ಭಾವನೆಯನ್ನು ಜೊರಗೆಡಹಿದ್ದಾರೆ. ಅವನೆಲ್ಲಿಯೇ ವಾಸಿಸಿರಲಿ, ಮೈಸೂರಿರಲಿ, ಬಂಗಾಳವಿರಲಿ, ಆ ವ್ಯಕ್ತಿಗೆ 'ಭಾರತೀಯ' ಎಂದು ಕರೆದುಕೊಳ್ಳುವುದೊಂದು ಹೆಮ್ಮೆಯ ವಿಷಯ. ಇದೇ ಅಖಂಡ ಭಾರತವು ಇಂದು ಖಂಡವಾಗಿ ಹೋಗಿದ್ದರೂ ಉಳಿದ ದೊಡ್ಡ ಭಾಗಕ್ಕೆ ನಾವು 'ಭಾರತ' ಎಂಬ ಹೆಸರನ್ನೇ ಇಟ್ಟು ಆ ಹೆಮ್ಮೆಯನ್ನು ಸ್ವಲ್ಪ ಮಟ್ಟಿಗಾದರೂ ಉಳಿಸಿಕೊಂಡಿದ್ದೇವೆ.

ಜಗತ್ತಿನ ಪ್ರಾಚೀನ ತಮವಾದ ಕೆಲವೇ ಸಾಹಿತ್ಯ ಗ್ರಂಥಗಳಲ್ಲಿ ಋಗ್ವೇದವೂ ಒಂದು. ಈ ಗ್ರಂಥವು ಮಾನವತೆಯ ಒಂದು ಆಧಾರವಾಗಿದೆ. ಹಿಂದೂ ರಾಜ್ಯ, ಸಂಸ್ಕೃತಿಗಳ ಪಾಲಕರಾಗಿದ್ದು ಸಂಘಟಕರಾದ ಋಷಿಗಳ ಕಾಲದಲ್ಲಿ ಪ್ರಚಾರವಾದುದು. ಈ ವೇದಗಳು ಅಪೌರುಷೇಯವೆಂಬ ವಾದವನ್ನು ಒಪ್ಪುವುದೂ ಬಿಡುವುದೂ ಅವರವರ ಇಷ್ಟ. ಆಂತೂ ಋಗ್ವೇದದಲ್ಲಿ, ಅದರ ಕರ್ತೃ ಯಾರೇ ಆಗಿರಲಿ, ಅಖಂಡ ಭಾರತದ ಕಲ್ಪನೆಯಷ್ಟು ಮಾಡಿ ಕೊಟ್ಟಿದ್ದಾರೆ. ನದೀಮಂಡಲಗಳ ಒಂದು ಶ್ಲೋಕವು ಅದರಲ್ಲಿ ಬರುತ್ತದೆ. ವೈದಿಕ ಕಾಲದ ಭಾರತದ ಸಂಪೂರ್ಣ ಚಿತ್ರವು ನಮ್ಮ ಮನೋನಯನಕ್ಕೆ. ಆ ಶ್ಲೋಕವನ್ನು ಪರಿಶೀಲಿಸುವುದು. ದೇಶದ ಒಕ್ಕಟ್ಟನ್ನು ಮೂಲೋದ್ದೇಶವಾಗಿ ಆ ಕವಿ ಈ ಶ್ಲೋಕವನ್ನು ಬರೆದಿರಬಹುದು. ಈ ಉದ್ದೇಶದತ್ತ ನಮ್ಮನ್ನು ಜಾಗ್ರತಗೊಳಿಸುವಷ್ಟು ಆದು ಶಕ್ತಿಯುತವಾಗಿದೆ ಎಂದರೆ ಅತಿಶಯೋಕ್ತಿಯಲ್ಲ.

ಆಷ್ಟೇ ಅಲ್ಲ, ನಮ್ಮ 'ಕೂಪಮಂಡೂಕ ಮನೋವೃತ್ತಿ"ಯನ್ನು ಆದು ಕಳೆಯುವುದು. ದೇಶದ ವಿಶಾಂತಿಯ ಅನುಭವ, ಮತ್ತು ಸರ್ವಭೋಗ್ಯತ್ವಗಳ ಅರಿವಾಗುವುದು. ದೇಶವು ಉತ್ತಮವಾದುದೆಲ್ಲವನ್ನೂ ಕೊಡುವುದರಿಂದ ತಾಯಿಯಂತೆ ಪೂಜನೀಯ. ತಂದೆಯಂತೆ ಅಭಿನಂದನೀಯ. ಇಂತಹ ಭವ್ಯಕಲ್ಪನೆಯು ಬಹಳ ಹಿಂದಿನ ಕಾಲದಲ್ಲಿ–ಜಗತ್ತಿನ ಇತರ ರಾಷ್ಟ್ರಗಳ ಜನರು ಅಸಂಸ್ಕೃತಿಯ ಕೊಳೆಕೆಸರಿನಲ್ಲಿ ಮುಳುಗೇಳುತಿದ್ದಾಗ, ಸುಸಂಸ್ಕೃತವಾದ ಭಾರತದಲ್ಲಿ ಹುಟ್ಟಿ ಬೆಳೆಯಿತು. ಆದುದರಿಂದ ಋಗ್ವೇದದಲ್ಲಿ ಬರುವ ನದೀ ಮಂಡಲದ ಶ್ಲೋಕವೇ ಭಾರತೀಯ ಒಕ್ಕಟ್ಟನ್ನು ಸಾರಿ ಹೇಳುತ್ತದೆ.

ಸಂಧ್ಯಾವಂದನೆ ಮಾಡತಕ್ಕವರು ದಿನನಿತ್ಯ ಎರಡುಬಾರಿಯೋ ಮೂರು ಬಾರಿಯೋ ಈ ಶ್ಲೋಕದ ಸಂಕ್ಷಿಪ್ತ ರೂಪವನ್ನು ಉಚ್ಚರಿಸುತ್ತಾರೆ:

ಗಂಗೇಚ ಯಮುನೇ ಚೈವ ।
ಗೋದಾವರೀ ಸರಸ್ವತೀ
ನರ್ಮದೇ ಸಿಂಧು ಕಾವೇರೀ ।
ಜಲೇಸ್ಮಿನ್ ಸನ್ನಿಧಿಂಕುರು ॥

ಈ ಶ್ಲೋಕವು ಭೌಗೋಲಿಕ ಪರಿಸ್ಥಿತಿಯನ್ನು ವಿವರಿಸುತ್ತದೆ. ಇದರ ಅರ್ಥವನ್ನು ಹೀಗೆ ಸಂಕ್ಷೇಪಿಸಬಹುದು: ಓ, ಗಂಗಾ, ಯಮುನಾ, ಗೋದಾವರಿ, ಸರಸ್ವತಿ, ನರ್ಮದ, ಸಿಂಧು ಮತ್ತು ಕಾವೇರೀ ನದಿಗಳೇ, ನೀವೆಲ್ಲರೂ ಬಂದು ಈ ನೀರಿನಲ್ಲಿ ಒಂದುಗೂಡಿಕೊಂಡಿರಿ.

ಈ ಪವಿತ್ರವಾಕ್ಯವನ್ನು ಪ್ರತಿ ವೈದಿಕ ಕಾರ್ಯಗಳಲ್ಲಿಯೂ ಭಾರತದ ಲಕ್ಷ್ಯಗಟ್ಟಲೆಯ ಅರಾಧ್ಯ ಹಿಂದೂ ಜನರು ಜಪಿಸುತ್ತಾರೆ. ತಮ್ಮ ಲೌಕಿಕ ತಾತ್ಪರ್ಯಗಳು ನಡುವೆಯಾಗಲೀ, ಇತರ ತೊಂದರೆಗಳಲ್ಲಿಯಾಗಲೀ ಈ ಕಾರ್ಯವನ್ನು ಮಾಡಲು ಅವರು ಮರೆಯುವುದಿಲ್ಲ. ತಮ್ಮ ದಿನನಿತ್ಯದ ಕಾರ್ಯಕ್ರಮಗಳಲ್ಲಿಯೇ ಇದನ್ನೂ ಒಂದನ್ನಾಗಿ ಅವರು ಮಾಡಿಕೊಂಡಿದ್ದಾರೆ. ಇದರಿಂದಾಗಿ, ಭಾರತೀಯನು 'ಭಾರತ'ದ ಯಾವ ಮೂಲೆಯಲ್ಲಿದ್ದರೂ ಆತನು ಒಂದೇ ಮಾತೆಯ ಪುತ್ರ ಎಂಬ ಭಾವನೆಯು ಬೆಳೆದು ಬರದಿದ್ದೀತೆ?

ಭಾರತದ ಏಕತೆಯನ್ನು ಸ್ಥಾಪಿಸಲು ನಮ್ಮ ಪೂರ್ವಜರು ನಾನಾತರದ ಪ್ರಯತ್ನಗಳನ್ನು ಮಾಡಿದ್ದಾರೆ. ಅಖಂಡ ಭಾರತವೂ ಏಳು ಪರ್ವತಗಳ ಮೇರೆಯೊಳಗಿನ ದೇಶವೆಂಬುದನ್ನು ಚೆನ್ನಾಗಿ ಈ ಶ್ಲೋಕದಲ್ಲಿ ಸೂಚಿಸಲಾಗಿದೆ.

ಮಹೇಂದ್ರೋ ಮಲಯಃ ಸಹ್ಯ ।
ಶುಕ್ತಿ ಮಾನೃಕ್ಷ ಪರ್ವತಃ
ವಿಂಧ್ಯಶ್ಚ ವಾರಿಯಾತ್ರಶ್ಚ ।
ಸಪ್ತೈತೇ ಕುಲ ಪರ್ವತಃ ।

ಮಹೇಂದ್ರ, ಮಲಯ, ಸಹ್ಯ, ಶುಕ್ತಿಮಾನ್, ಋಕ್ಷ ಪರ್ವತ, ವಿಂಧ್ಯ ಮತ್ತು ಪಾರಿಯಾತ್ರಗಳು ಏಳು ಕುಲಪರ್ವತಗಳು. ಈ ಕುಲಪರ್ವತಗಳು ತೃಸ್ತಿ ಮತ್ತು ಶಾಂತಿಯ ನೆಲೆವೀಡಾಗಿವೆ ಈ ಪರ್ವತಗಳು ಭಾರತದ ದೇಶದಾದ್ಯಂತ ಹರಡಿಕೊಂಡಿವೆ. ಇವುಗಳಲ್ಲಿ ಎಲ್ಲವುಗಳ ಪರಿಚಯವನ್ನು ಈಗ ಮಾಡಿಕೊಡುವುದು ಅಸಾಧ್ಯ ಆಂತೂ ಅಖಂಡ ಭಾರತವನ್ನೇ ಇದು ಪ್ರತಿನಿಧೀಕರಿಸುತ್ತದೆ.

ನಮ್ಮಲ್ಲಿ ಇಂದು ಪ್ರಾಂತೀಯತೆಯ ಭಾವನೆ ಬೆಳೆಯತ್ತಿದೆ. ಭಾಷಾಪ್ರೇಮ ಬಲಿಯುತ್ತಿದೆ. ರಾಷ್ಟ್ರಾಧಿಕಾರಿಗಳು ಇದರಿಂದ ಭಾರತದ ರಾಷ್ಟ್ರೀಯ ಐಕ್ಯಕ್ಕೆ ದೋಷ ಬರುವುದೆಂದು ಉಪದೇಶಿಸುತ್ತಿದ್ದಾರೆ. ನಮ್ಮ ಪೂರ್ವಜರಂತಾದರೋ ಏಕತೆಯನ್ನು ಸಾರಿಸಾರಿ ಹೇಳುತ್ತಾರೆ. ಅವರು ಆಧ್ಯಾತ್ಮಿಕ ದೃಷ್ಟಿಯನ್ನು ಮಾತ್ರ ಇಟ್ಟುಕೊಂಡಿರಬಹುದು. ಆನಂತರ, ಸುಸಂಸ್ಕೃತರೆನಿಸಿಕೊಂಡ ನಮಗಿಂತ ಅವರು ಬುದ್ಧಿವಂತರೆನ್ನದೆ ಗತ್ಯಂತರವಿಲ್ಲ. ಕೆಲವೊಂದು ತೀರ್ಥಸ್ಥಳಗಳನ್ನು ಸಂದರ್ಶಿಸಿದರೆ, ಮೋಕ್ಷವಾಗುವುದೆಂದು ಈ ಶ್ಲೋಕದಲ್ಲಿ ನಿರೂಪಿಸಿದ್ದಾರೆ.

ಅಯೋಧ್ಯಾ ಮಧುರಾ ಮಾಯಾ
ಕಾಶೀ ಕಾಂಚೀ ಅವಂತಿಕಾ
ಪುರೀ ದ್ವಾರಾವತೀ ಚೈವ ಸಪ್ತೈತಾ
ಮೋಕ್ಷದಾಯಿ ಕಾಃ ।

ಈ ಏಳು ಸ್ಥಳಗಳು ದಕ್ಷಿಣ, ಉತ್ತರ, ಪೂರ್ವ, ಪಶ್ಚಿಮ ಭಾರತಗಳಲ್ಲಿ ಹರಡಿಕೊಂಡಿದೆ ಎಂಬುದು ದೃಷ್ಟಿಗೋಚರವಾಗುವುದು.

ಭಾರತವು ಏಳು ಪ್ರಮುಖ ತೀರ್ಥಕ್ಷೇತ್ರಗಳ ಪ್ರತಿನಿಧಿಯಂತಿದೆ. ಭಾರತದಲ್ಲಿ "ಆದ್ವೈತ" ತತ್ವವನ್ನು ಹರಡಿದ ಶ್ರೀ ಶಂಕರಾಚಾರ್ಯರು ತಮ್ಮ ಮತ ಪ್ರಚಾರಕ್ಕಾಗಿ ಭಾರತದ ನಾಲ್ಕು ಮೂಲೆಗಳಲ್ಲಿ ನಾಲ್ಕು ಮಠಗಳನ್ನು ಕಟ್ಟಿಸಿದರು. ಪಶ್ಚಿಮದಲ್ಲಿ ಶಾರದಾ ಮಠ, ಉತ್ತರದಲ್ಲಿ ಜ್ಯೋತೀರ ಮಠ, ಪೂರ್ವದಲ್ಲಿ ಗೋಪರ್ಧನ ಮಠ, ಶೃಂಗೇರಿ ಮಠ ದಕ್ಷಿಣದಲ್ಲಿ ಸ್ಥಾಪಿಸಲ್ಪಟ್ಟಿವೆ. ಹಾಗೆಯೇ ಪೂರ್ವದಲ್ಲಿ ಶ್ವೇತ ಗಂಗಾ, ದಕ್ಷಿಣದಲ್ಲಿ ಧನುಷ್ಕೋತೀರ್ಥ, ಪಶ್ಚಿಮದಲ್ಲಿ ಗೋಮಕುಂಡ, ಉತ್ತರದಲ್ಲಿ ತಪ್ತಕುಂಡಗಳೆಂಬ ನಾಲ್ಕು ತೀರ್ಥಗಳೂ ಭಾರತದಲ್ಲಿವೆ. ಪರಂಪರಾ ಪ್ರಸಿದ್ಧ ಪಂಪಾ, ಬಿಂದು, ನಾರಾಯಣ ಮತ್ತು ಮಾನಸಗಳೆಂಬ ನಾಲ್ಕು ಸರೋವರಗಳು ದಕ್ಷಿಣ, ಪೂರ್ವ, ಪಶ್ಚಿಮ ಮತ್ತು ಉತ್ತರ ದಿಕ್ಕುಗಳಲ್ಲಿವೆ. ಮುಕ್ತಿ ವರಾಹ, ಹರಿಹರ ಮತ್ತು ಕುರುಗಳೆಂಬ ನಾಲ್ಕು ಕ್ಷೇತ್ರಗಳೂ ಇವೆ. ಇವೆಲ್ಲವೂ ಭಾರತವು ಒಂದೇ ಸಂಸ್ಕೃತಿಯ ಏಕ ದೇಶವೆಂದು ತಿಳಿಸದಿರದು.

ಸೂರ್ಯನ ಪೂಜೆಗಾಗಿ ಒರಿಸ್ಸದ ಕೊನಾರಕ, ಮುಲ್ತಾನ ಮತ್ತು ಸೂರ್ಯಪುರ ಅಥವಾ ಸೂರತ್‌ಗಳಲ್ಲಿ ಮೂರು ದೇಗುಲಗಳು ಕಟ್ಟಲ್ಪಟ್ಟಿವೆ ಹಾಗೆಯೇ ಗಣಪತಿಯ ಆರಾಧನೆಗಾಗಿ ಎಂಟು ವಿನಾಯಕ ಕ್ಷೇತ್ರಗಳೂ ಇವೆ ಮೋರೇಶ್ವರ, ಬಲ್ಲಾಳ, ಲೇನಾದ್ರಿ, ಸಿದ್ಧಾಟೆಕ್, ಒಜಾರ, ಸ್ತೇವರ, ರಂಜನಗ್ರಾಮ ಮತ್ತು ಮಹದಗಳೇ ಈ ಕ್ಷೇತ್ರಗಳು.

ಸಂಸ್ಕೃತ ಸಾಹಿತ್ಯಾಕಾಶದಲ್ಲಿ ವಿಹರಿಸಿದರೆ, ಅಖಂಡ ಭಾರತದ ಕಲ್ಪನೆಯು ಅರಿವು ನಮಗಾಗುವುದು. ಇದರೊಂದಿಗೆ ನಾಡಿನ ಸಂಪದಭಿವೃದ್ಧಿಯ ಜ್ಞಾನವೂ ದೊರೆಯುವುದು. ಆರ್ಷ ವೇದದಲ್ಲಿ ಭಾರತವನ್ನು ವೀರ ಧೀರರ ನಾಡೆಂದು ವರ್ಣಿಸಿ ವ್ಯಾಪಾರೋದ್ಯಮ ಕಲೆಗಳಲ್ಲಿ ಮುಂದುವರಿದುದೆಂದು ಹೇಳಿದೆ ಅಸಂಖ್ಯಾತ ಔಷಧಿಯಲ್ಲರಿಗಳು, ಗಿಡ ಮೂಲಿಕೆಗಳು ನೆಲೆಯಾಗಿರುವ ನಾಡು, ನಮ್ಮ

(ಎರಡನೇ ಪುಟ ನೋಡಿರಿ)


**ಮೂಲ್ಕಿ ಬೇಂಕ್ ಲಿಮಿಟೆಡ್,**
**ಮುಲ್ಕಿ.**

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

**ನಮ್ಮ ಬಡ್ಡಿ ದರಗಳು.**

ಸ್ಥಿರಾಯ ಠೇವಣಾತಿ.

| | | |
|---|---|---|
| 24 | ತಿಂಗಳಿಗೆ | 4% |
| 12 | ,, | 3½% |
| 6 | ,, | 3½% |
| 3 | ,, | 3% |

ಸೇವಿಂಗ್ಸ್ ಬೇಂಕ್ ಲೆಕ್ಕ 2%
ಕರೆಂಟ್ ಎಕೌಂಟು ½%

THE MOOLKY BANK, LTD. MULKI



**ಝಂಡುರವರ 'ಕೇಸರಿ ಜೀವನ'**
**(KESARI JEEVANA)**
ಇದನ್ನೇ ಉಪಯೋಗಿಸಿರಿ.
**ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.**

ಕೆಮ್ಮು, ಶೀತ, ಆಸ್ತ್ಮ, ಗೊರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ 6/8; ½ ರಾತಲಿಗೆ ರೂ. 1/13

ಪ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.

1. ಶಾ ಕಂಪೆನಿ, ಮಂಗಳೂರು.
2. ಏ. ವಿ. ಶೆಣೈ, ಕಾರ್ಕಳ.
3. ಕೆನರಾಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್‌ಟಿಟ್ಯೂಟ್, ಉಡುಪಿ,

ವಿವರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

**ZANDU** ದಾವೋದರ & ಕೊ,
ಮದ್ರಾಸ್—3.



**ಅಮೃತಾಂಜನ**
ಎಲ್ಲಾ ನೋವುಗಳಿಗೆ ಸಿದ್ಧೌಷಧ
ಎಲ್ಲಾತರದ ನೋವುಗಳಿಗೆ
50 ವರ್ಷ ಉಪಯೋಗ
ಪಾಕೆಟ್ ಡಾಕ್ಟರ್

# ಅಣು ವಿಸರಣ

## ಜಾಗತಿಕ ಶಾಂತಿಗಾಗಿ ಅಣುವಿಸರಣವನ್ನು ಬಹಿಷ್ಕರಿಸಿರಿ

ಅಣುಪ್ರಯೋಗವು ಈಗ ಸಾಧಾರಣವಾದ ಮಾತಾಗಿ ಪರಿಣಮಿಸಿದೆ. ಅಣುವಿನಿಂದಾಗಬಹುದಾದ ಹಾನಿಯನ್ನು ಈಗ ಜಗತ್ತಿನ ಪ್ರತಿಯೊಬ್ಬನೂ ಸರ್ವ ಸಾಮಾನ್ಯವಾಗಿ ಮನನ ಮಾಡಿರುತ್ತಾನೆ. ದೊಡ್ಡ ರಾಜ್ಯಗಳು ಸಹ ಅಣುಪ್ರಯೋಗವನ್ನು ನಿಲ್ಲಿಸಬೇಕೆಂದು ಪರಂಗೆ ಉಪದೇಶಮಾಡುತ್ತಿವೆ ನೋಬೆಲ್ ಬಹುಮತಿಯ ಶುಲ್ಕವನ್ನು ಪಡೆದ ಪ್ರಸಿದ್ಧ ಜರ್ಮನ್ ತತ್ವಜ್ಞಾನಿ ಡಾ. ಆಲ್ಬರ್ಟ್ ಸ್ವೀಡರರು ತಾವು ಆಸೌಖ್ಯದಿಂದ ಆಫ್ರಿಕೆಯಲ್ಲಿ ನರಳುತಿದ್ದರೂ, ಅಲ್ಲಿಂದಲೇ ಒಂದು ಪ್ರಕಟಣೆಯನ್ನು ಹೊರಡಿಸಿ ಅಣುವಿಸರಣದಿಂದ ಮಾನವ ಜನಾಂಗದ ಆರೋಗ್ಯಕ್ಕೆ ಮಹಾ ಹಾನಿಯಾಗುವುದೆಂದು ಎಚ್ಚರಿಕೆ ಕೊಟ್ಟಿದ್ದಾರೆ. ಹಾಗೆಯೇ ಜಗತ್ತಿನ ಎಲ್ಲ ರಾಷ್ಟ್ರಗಳೂ ಈ ಅಣುವಿಸರಣದ ಪ್ರಕ್ರಿಯೆಯಲ್ಲಿ ಪಾಲುಗಾರರಾಗಬೇಕಾಗಿರುವುದರಿಂದ, ಎಲ್ಲರೂ ಇದನ್ನು ತಡೆಹಿಡಿಯುವ ಚಳುವಳಿಯನ್ನು ಪ್ರಾರಂಭಿಸಬೇಕೆಂದೂ ಕರೆಕೊಟ್ಟಿದ್ದಾರೆ.

ಅಮೇರಿಕೆಯ ಮಹಾ ವಿಜ್ಞಾನಿ ಡಾ. ಡಬ್ಲ್ಯು. ಎಲ್. ರನೆಲ್ಲರು ಅಣುವಿಸರಣದಿಂದ ಗಾಯಗೊಂಡವರು ಮಾತ್ರ ಆದರಿಂದ ದುಷ್ಪರಿಣಾಮವನ್ನು ಪಡೆಯುವುದಲ್ಲ; ಮುಂದೆ ಆವರಿಗೆ ಹುಟ್ಟಬಹುದಾದ ಸುಕ್ಕಳು ಮರಿಗಳಲ್ಲಿಯೂ ಕಟ್ಟುದನ್ನು ಮಾಡಿ, ಅವರು ಅಲ್ಪಾಯುಷಿಗಳಾಗುವಂತೆ ಮಾಡುತ್ತದೆ ಎಂದು ತಮ್ಮ ಪ್ರಯೋಗಾಧಾರಗಳಿಂದ ಹೇಳಿದ್ದಾರೆ. ಇದುವರೆಗೆ ಮನೆಮಾಡಿದ್ದ ನಮ್ಮ ಕಲ್ಪನೆ ಆ ಸುದ್ದಿಯನ್ನು ಕೇಳಿದಂದಿನಿಂದ ಬಿದ್ದುಹೋಯಿತು. ಬ್ರಿಟನಿನ ಕೂಲಿಗಾರ ಪಕ್ಷದ ಸದಸ್ಯರಾದ ಶ್ರೀಮತಿ ಮೋನಿಕಾ ಫೆಲ್ಟನರು "ಬ್ರಿಟನ್ ಮತ್ತು ಬಾಂಬು" ಎಂಬ ವಿಷಯದ ಮೇಲೆ ಮದ್ರಾಸದಲ್ಲಿ ಇತ್ತೀಚೆಗೆ ಉಪನ್ಯಾಸ ಮಾಡುತ್ತ ಅಣು ವಿಸರಣದಿಂದಾಗುವ ಕೆಡುಕುಗಳನ್ನು ವಿವರಿಸಿದರು. ಹೀಗೆ ಅಣುವಿನಿಂದಾಗಬಹುದಾದ ಅಪಾಯವನ್ನು ಮನಗಂಡಿದ್ದರೂ ಏನೋ ಒಂದು ವಿಧದ ಅಂಜಿಕೆಯಿಂದ ದೊಡ್ಡ ರಾಷ್ಟ್ರಗಳು ಪ್ರಯೋಗವನ್ನು ಮುಂದುವರಿಸುತ್ತಾ ಇರುವುದು ಶೋಚನೀಯ. ವಾತಾವರಣವನ್ನು ಕಲುಷಿತಗೊಳಿಸುವ ಅಧಿಕಾರವು ಪ್ರಪಂಚದ ಯಾವ ರಾಷ್ಟ್ರಕ್ಕೂ ಇಲ್ಲ ಎಂದು ನಮ್ಮ ಪ್ರಧಾನಿಯವರು ಎಚ್ಚರಿಸಿದರು. ಕ್ರಿಸ್‌ಮಸ್ ದ್ವೀಪದ ಸಮೂಹದಲ್ಲಿ ಬ್ರಿಟನ್ ಅಣುಪ್ರಯೋಗ ಮಾಡುವುದನ್ನು ಜಾಪಾನು ನಿಷೇಧಿಸಿತು. ರಶ್ಯಾವು ಇದಕ್ಕೆ ತನ್ನ ಒಪ್ಪಿಗೆಯಿತ್ತಿತು. ಆದರೆ, ಮೊನ್ನೆ ನೊನ್ನೆ ರಶ್ಯಾವೇ ಪ್ರಯೋಗ ಮಾಡುತ್ತಿದೆ ಎಂದು ಟೋಕಿಯೋದ ವಿಜ್ಞಾನಿಯೊಬ್ಬರು ದೂರಿದ್ದಾರೆ, ಅಮೇರಿಕವು ರಶ್ಯವನ್ನೊಳಗೊಂಡು ಸಾಮೂಹಿಕ ಒಪ್ಪಂದವಾದರೆ ಮಾತ್ರ ಅಣುಪ್ರಯೋಗಗಳನ್ನು ನಿಲ್ಲಿಸಬಹುದೆಂದು ಅಭಿಪ್ರಾಯಪಟ್ಟಿದೆ. ಅಲ್ಲಿನ ಅಣು ಪ್ರಯೋಗ ವಿರೋಧಿಗಳಾದ ಡಾ. ಮಾತ್ಸು ಶಿತಾರು ಅಣು ಪ್ರಯೋಗವನ್ನು ನಿರ್ಬಂಧಿಸಲು ಸಂಬಂಧಪಟ್ಟ ರಾಷ್ಟ್ರಗಳ ಮನವೊಲಿಸಲು ಜಾಗತಿಕ ಪ್ರವಾಸವನ್ನು ಕೈಗೊಂಡಿದ್ದಾರೆ. ಆದರೆ, ಅದರ ಫಲಾಫಲಗಳು ನುಮಿದೆ ತಿಳಿಯಬೇಕಷ್ಟೆ.

ಭಾರತದಲ್ಲಿ ಅಂಬಾಲಾದ ವೈಜ್ಞಾನಿಕ ಉಪಕರಣಗಳ ವ್ಯಾಪಾರಿಯಾದ ಶ್ರೀ ನೇಮಿಚಂದ ಜೈನರೆಂಬವರು ಜಾಪಾನಿನಲ್ಲಿ ನಡೆಯುವ ಅಣುಪ್ರಯೋಗ ವಿರುದ್ಧ ಸತ್ಯಾಗ್ರಹದಲ್ಲಿ ಭಾಗವಹಿಸಲು ನಿಶ್ಚಯಿಸಿದ್ದು ಅದಕ್ಕಾಗಿ ತನ್ನೊಂದಿಗೆ ಸೇರಿಕೊಳ್ಳಬೇಕಾಗಿ ಭಾರತೀಯರಿಗೆ ಕರೆಯಿತ್ತಿದ್ದಾರೆ. ಎಲ್ಲ ರಾಷ್ಟ್ರಗಳಿಗೂ ಈ ಅಣು ಪ್ರಯೋಗವು ತಲೆನಿಡಿತವನ್ನುಂಟುಮಾಡಿದೆ. ಸ್ವತಃ ಪ್ರಯೋಗನಡೆಸುವ ರಾಷ್ಟ್ರಗಳಿಗೂ ತಾವು ಅವಿಗೆಯೊಳಗಿರುವ ಅನುಭವವನ್ನು ನಾಡಿಕೊಡುತ್ತಿದೆ. ಶ್ರೀ ರಾಜಗೋಪಾಲಾಚಾರಿಯವರು ಅಣುವಿನಿಂದ ಉಂಟಾಗುವ ಅನರ್ಥ ಪರಂಪರೆಗಳನ್ನು ಮೊನ್ನೆ ಮೊನ್ನೆ ಒಂದು ಸಭೆಯಲ್ಲಿ ವಿವರಿಸಿದರು.

ತಾನು ವಿಜ್ಞಾನಿಯಲ್ಲವೆಂಬುದನ್ನು ಒಪ್ಪಿಕೊಂಡು, ಅಣುಪ್ರಯೋಗಿಸುವ ರಾಜ್ಯಗಳಿಗೆ 'ನಿಮ್ಮ ಜಗಳಗಳನ್ನು ನೀವೇ ಹೂರಯಿಸಿಕೊಳ್ಳಿರಿ. ನಿಮ್ಮೊಳಗೆ ವಿಶ್ವವನ್ನು ಬೆಳೆಸಿಕೊಳ್ಳುವುದು ಸಾಧ್ಯವಾದುದಕ್ಕಾಗಿ, ನೀವು ನಮ್ಮೆಲ್ಲರ ಆರೋಗ್ಯ, ಜೀವಗಳಿಗೆ ಅಪಾಯವನ್ನು ತಂದೊಡ್ಡಬೇಡಿರಿ" ಎಂದು ವಿನಂತಿಸಿದರು.

ಜಗತ್ತಿನ ಪ್ರಸಿದ್ಧ ವಿಜ್ಞಾನಿಗಳು ಅಣುಪ್ರಯೋಗದಿಂದುಂಟಾಗುವ ಶಾರೀರಿಕ ತೊಂದರೆಗಳನ್ನು ತಿಳಿಸಿದ್ದಾರೆ. ಅವರು ಅಣುವಿಸರಣದ ಸಮಸ್ತ ಜ್ಞಾನ ಹಾಗೂ ಪರಿಸ್ಥಿತಿಯ ತಿಳುವಳಿಕೆಗಳನ್ನು ಸಂಪಾದಿಸಿದ್ದಾರೆ. ಅವುಗಳಲ್ಲಿ ಕೆಲವೊಂದನ್ನು ನಮ್ಮ ಧ್ಯಾನದ ಪ್ರಕಟಪಡಿಸಿದ್ದಾರೆ. ಇದರಿಂದ ನಾವು ಅಣುವಿಸರಣದಿಂದ ಸರ್ವ ಪ್ರಕಾರದಲ್ಲಿಯೂ ಹಾನಿಯೇ ಸಂಭವಿಸುವುದೆಂದು ಕೇಳದೆ ಗತ್ಯಂತರವಿಲ್ಲ.

ಪ್ರಸಂಚದ ಹಿರೀ ರಾಷ್ಟ್ರಗಳಲ್ಲಿ ಪರಸ್ಪರ ಅಂತರ್ಮುಖವಾಗಿ ಬೆಳೆಯುತ್ತಿರುವ ವೈರವೇ ನಿಶ್ಯಸ್ತ್ರೀಕರಣ ಮತ್ತು ಅಣು ಪ್ರಯೋಗ ವಿರೋಧಕ್ಕೆ ದೊಡ್ಡ ಆತಂಕವಾಗಿದೆ. ಅವುಗಳ ನಡುವೆ ವಿಶ್ವಾಸ, ಸೌಹಾರ್ದಗಳು ಮೂಡಿಬಂದಾಗ ಮಾತ್ರ ಅಣುಪ್ರಯೋಗಗಳನ್ನು ನಿಲ್ಲಿಸಲು ಸಾಧ್ಯವಾಗಬಹುದು. ಆದರೆ, ಅಂತಹ ಸಮಯ ಬರುವುದು ಎಂದು ಎಂಬುದು ಯಾರಿಗೂ ತಿಳಿಯದು. ಅಲ್ಲಿಯವರೆಗೆ ಅಣುಪ್ರಯೋಗಗಳು ಮುಂದುವರಿಯುತ್ತಾ ಇರುವುದು ಶೋಚನೀಯ. ವಾತಾವರಣವನ್ನು ಕಲುಷಿತಗೊಳಿಸುವ ಅಧಿಕಾರವು ಪ್ರಪಂಚದ ಯಾವ ರಾಷ್ಟ್ರಕ್ಕೂ ಇಲ್ಲ ಎಂದು ನಮ್ಮ ಪ್ರಧಾನಿಯವರು ಎಚ್ಚರಿಸಿದರು. ಕ್ರಿಸ್‌ಮಸ್ ದ್ವೀಪದ ಸಮೂಹದಲ್ಲಿ ಬ್ರಿಟನ್ ಅಣುಪ್ರಯೋಗ ಮಾಡುವುದನ್ನು ಜಾಪಾನು ನಿಷೇಧಿಸಿತು. ರಶ್ಯಾವು ಇದಕ್ಕೆ ತನ್ನ ಒಪ್ಪಿಗೆಯಿತ್ತಿತು. ಆದರೆ, ಮೊನ್ನೆ ನೊನ್ನೆ ರಶ್ಯಾವೇ ಪ್ರಯೋಗ ಮಾಡುತ್ತಿದೆ ಎಂದು ಟೋಕಿಯೋದ ವಿಜ್ಞಾನಿಯೊಬ್ಬರು ದೂರಿದ್ದಾರೆ, ಅಮೇರಿಕವು ರಶ್ಯವನ್ನೊಳಗೊಂಡು ಸಾಮೂಹಿಕ ಒಪ್ಪಂದವಾದರೆ ಮಾತ್ರ ಅಣುಪ್ರಯೋಗಗಳನ್ನು ನಿಲ್ಲಿಸಬಹುದೆಂದು ಅಭಿಪ್ರಾಯಪಟ್ಟಿದೆ. ಅಲ್ಲಿನ ಅಣು ಪ್ರಯೋಗ ವಿರೋಧಿಗಳಾದ ಡಾ. ಮಾತ್ಸು ಶಿತಾರು ಅಣು ಪ್ರಯೋಗವನ್ನು ನಿರ್ಬಂಧಿಸಲು ಸಂಬಂಧಪಟ್ಟ ರಾಷ್ಟ್ರಗಳ ಮನವೊಲಿಸಲು ಜಾಗತಿಕ ಪ್ರವಾಸವನ್ನು ಕೈಗೊಂಡಿದ್ದಾರೆ. ಆದರೆ, ಅದರ ಫಲಾಫಲಗಳು ನುಮಿದೆ ತಿಳಿಯಬೇಕಷ್ಟೆ.

ಭಾರತದಲ್ಲಿ ಅಂಬಾಲಾದ ವೈಜ್ಞಾನಿಕ ಉಪಕರಣಗಳ ವ್ಯಾಪಾರಿಯಾದ ಶ್ರೀ ನೇಮಿಚಂದ ಜೈನರೆಂಬವರು ಜಾಪಾನಿನಲ್ಲಿ ನಡೆಯುವ ಅಣುಪ್ರಯೋಗ ವಿರುದ್ಧ ಸತ್ಯಾಗ್ರಹದಲ್ಲಿ ಭಾಗವಹಿಸಲು ನಿಶ್ಚಯಿಸಿದ್ದು ಅದಕ್ಕಾಗಿ ತನ್ನೊಂದಿಗೆ ಸೇರಿಕೊಳ್ಳಬೇಕಾಗಿ ಭಾರತೀಯರಿಗೆ ಕರೆಯಿತ್ತಿದ್ದಾರೆ. ಎಲ್ಲ ರಾಷ್ಟ್ರಗಳಿಗೂ ಈ ಅಣು ಪ್ರಯೋಗವು ತಲೆನಿಡಿತವನ್ನುಂಟುಮಾಡಿದೆ. ಸ್ವತಃ ಪ್ರಯೋಗನಡೆಸುವ ರಾಷ್ಟ್ರಗಳಿಗೂ ತಾವು ಅವಿಗೆಯೊಳಗಿರುವ ಅನುಭವವನ್ನು ನಾಡಿಕೊಡುತ್ತಿದೆ. ಶ್ರೀ ರಾಜಗೋಪಾಲಾಚಾರಿಯವರು ಅಣುವಿನಿಂದ ಉಂಟಾಗುವ ಅನರ್ಥ ಪರಂಪರೆಗಳನ್ನು ಮೊನ್ನೆ ಮೊನ್ನೆ ಒಂದು ಸಭೆಯಲ್ಲಿ ವಿವರಿಸಿದರು.

ತಾನು ವಿಜ್ಞಾನಿಯಲ್ಲವೆಂಬುದನ್ನು ಒಪ್ಪಿಕೊಂಡು, ಅಣುಪ್ರಯೋಗಿಸುವ ರಾಜ್ಯಗಳಿಗೆ 'ನಿಮ್ಮ ಜಗಳಗಳನ್ನು ನೀವೇ ಹೂರಯಿಸಿಕೊಳ್ಳಿರಿ. ನಿಮ್ಮೊಳಗೆ ವಿಶ್ವವನ್ನು ಬೆಳೆಸಿಕೊಳ್ಳುವುದು ಸಾಧ್ಯವಾದುದಕ್ಕಾಗಿ, ನೀವು ನಮ್ಮೆಲ್ಲರ ಆರೋಗ್ಯ, ಜೀವಗಳಿಗೆ ಅಪಾಯವನ್ನು ತಂದೊಡ್ಡಬೇಡಿರಿ" ಎಂದು ವಿನಂತಿಸಿದರು.

ಜಗತ್ತಿನ ಪ್ರಸಿದ್ಧ ವಿಜ್ಞಾನಿಗಳು ಅಣುಪ್ರಯೋಗದಿಂದುಂಟಾಗುವ ಶಾರೀರಿಕ ತೊಂದರೆಗಳನ್ನು ತಿಳಿಸಿದ್ದಾರೆ. ಅವರು ಅಣುವಿಸರಣದ ಸಮಸ್ತ ಜ್ಞಾನ ಹಾಗೂ ಪರಿಸ್ಥಿತಿಯ ತಿಳುವಳಿಕೆಗಳನ್ನು ಸಂಪಾದಿಸಿದ್ದಾರೆ. ಅವುಗಳಲ್ಲಿ ಕೆಲವೊಂದನ್ನು ನಮ್ಮ ಧ್ಯಾನದ ಪ್ರಕಟಪಡಿಸಿದ್ದಾರೆ. ಇದರಿಂದ ನಾವು ಅಣುವಿಸರಣದಿಂದ ಸರ್ವ ಪ್ರಕಾರದಲ್ಲಿಯೂ ಹಾನಿಯೇ ಸಂಭವಿಸುವುದೆಂದು ಕೇಳದೆ ಗತ್ಯಂತರವಿಲ್ಲ.

ಪ್ರಸಂಚದ ಹಿರೀ ರಾಷ್ಟ್ರಗಳಲ್ಲಿ ಪರಸ್ಪರ ಅಂತರ್ಮುಖವಾಗಿ ಬೆಳೆಯುತ್ತಿರುವ ವೈರವೇ ನಿಶ್ಯಸ್ತ್ರೀಕರಣ ಮತ್ತು ಅಣು ಪ್ರಯೋಗ ವಿರೋಧಕ್ಕೆ ದೊಡ್ಡ ಆತಂಕವಾಗಿದೆ. ಅವುಗಳ ನಡುವೆ ವಿಶ್ವಾಸ, ಸೌಹಾರ್ದಗಳು ಮೂಡಿಬಂದಾಗ ಮಾತ್ರ ಅಣುಪ್ರಯೋಗಗಳನ್ನು ನಿಲ್ಲಿಸಲು ಸಾಧ್ಯವಾಗಬಹುದು. ಆದರೆ, ಅಂತಹ ಸಮಯ ಬರುವುದು ಎಂದು ಎಂಬುದು ಯಾರಿಗೂ ತಿಳಿಯದು. ಅಲ್ಲಿಯವರೆಗೆ ಅಣುಪ್ರಯೋಗಗಳು ಮುಂದುವರಿಯುತ್ತಾ ಇರುವುದು ಶೋಚನೀಯ. ವಾತಾವರಣವನ್ನು ಕಲುಷಿತಗೊಳಿಸುವ ಅಧಿಕಾರವು ಪ್ರಪಂಚದ ಯಾವ ರಾಷ್ಟ್ರಕ್ಕೂ ಇಲ್ಲ ಎಂದು ನಮ್ಮ ಪ್ರಧಾನಿಯವರು ಎಚ್ಚರಿಸಿದರು. ಕ್ರಿಸ್‌ಮಸ್ ದ್ವೀಪದ ಸಮೂಹದಲ್ಲಿ ಬ್ರಿಟನ್ ಅಣುಪ್ರಯೋಗ ಮಾಡುವುದನ್ನು ಜಾಪಾನು ನಿಷೇಧಿಸಿತು. ರಶ್ಯಾವು ಇದಕ್ಕೆ ತನ್ನ ಒಪ್ಪಿಗೆಯಿತ್ತಿತು. ಆದರೆ, ಮೊನ್ನೆ ನೊನ್ನೆ ರಶ್ಯಾವೇ ಪ್ರಯೋಗ ಮಾಡುತ್ತಿದೆ ಎಂದು ಟೋಕಿಯೋದ ವಿಜ್ಞಾನಿಯೊಬ್ಬರು ದೂರಿದ್ದಾರೆ, ಅಮೇರಿಕವು ರಶ್ಯವನ್ನೊಳಗೊಂಡು ಸಾಮೂಹಿಕ ಒಪ್ಪಂದವಾದರೆ ಮಾತ್ರ ಅಣುಪ್ರಯೋಗಗಳನ್ನು ನಿಲ್ಲಿಸಲು ಬಹುದೆಂದು ಅಭಿಪ್ರಾಯಪಟ್ಟಿದೆ. ಅಲ್ಲಿನ ಅಣು ಪ್ರಯೋಗ ವಿರೋಧಿಗಳಾದ ಡಾ. ಮಾತ್ಸು ಶಿತಾರು ಅಣು ಪ್ರಯೋಗವನ್ನು ನಿರ್ಬಂಧಿಸಲು ಸಂಬಂಧಪಟ್ಟ ರಾಷ್ಟ್ರಗಳ ಮನವೊಲಿಸಲು ಜಾಗತಿಕ ಪ್ರವಾಸವನ್ನು ಕೈಗೊಂಡಿದ್ದಾರೆ. ಆದರೆ, ಅದರ ಫಲಾಫಲಗಳು ನುಮಿದೆ ತಿಳಿಯಬೇಕಷ್ಟೆ.

ಭಾರತದಲ್ಲಿ ಅಂಬಾಲಾದ ವೈಜ್ಞಾನಿಕ ಉಪಕರಣಗಳ ವ್ಯಾಪಾರಿಯಾದ ಶ್ರೀ ನೇಮಿಚಂದ ಜೈನರೆಂಬವರು ಜಾಪಾನಿನಲ್ಲಿ ನಡೆಯುವ ಅಣುಪ್ರಯೋಗ ವಿರುದ್ಧ ಸತ್ಯಾಗ್ರಹದಲ್ಲಿ ಭಾಗವಹಿಸಲು ನಿಶ್ಚಯಿಸಿದ್ದು ಅದಕ್ಕಾಗಿ ತನ್ನೊಂದಿಗೆ ಸೇರಿಕೊಳ್ಳಬೇಕಾಗಿ ಭಾರತೀಯರಿಗೆ ಕರೆಯಿತ್ತಿದ್ದಾರೆ. ಎಲ್ಲ ರಾಷ್ಟ್ರಗಳಿಗೂ ಈ ಅಣು ಪ್ರಯೋಗವು ತಲೆನಿಡಿತವನ್ನುಂಟುಮಾಡಿದೆ. ಸ್ವತಃ ಪ್ರಯೋಗನಡೆಸುವ ರಾಷ್ಟ್ರಗಳಿಗೂ ತಾವು ಅವಿಗೆಯೊಳಗಿರುವ ಅನುಭವವನ್ನು ನಾಡಿಕೊಡುತ್ತಿದೆ. ಶ್ರೀ ರಾಜಗೋಪಾಲಾಚಾರಿಯವರು ಅಣುವಿನಿಂದ ಉಂಟಾಗುವ ಅನರ್ಥ ಪರಂಪರೆಗಳನ್ನು ಮೊನ್ನೆ ಮೊನ್ನೆ ಒಂದು ಸಭೆಯಲ್ಲಿ ವಿವರಿಸಿದರು.

ತಾನು ವಿಜ್ಞಾನಿಯಲ್ಲವೆಂಬುದನ್ನು ಒಪ್ಪಿಕೊಂಡು, ಅಣುಪ್ರಯೋಗಿಸುವ ರಾಜ್ಯಗಳಿಗೆ 'ನಿಮ್ಮ ಜಗಳಗಳನ್ನು ನೀವೇ ಹೂರಯಿಸಿಕೊಳ್ಳಿರಿ. ನಿಮ್ಮೊಳಗೆ ವಿಶ್ವವನ್ನು ಬೆಳೆಸಿಕೊಳ್ಳುವುದು ಸಾಧ್ಯವಾದುದಕ್ಕಾಗಿ, ನೀವು ನಮ್ಮೆಲ್ಲರ ಆರೋಗ್ಯ, ಜೀವಗಳಿಗೆ ಅಪಾಯವನ್ನು ತಂದೊಡ್ಡಬೇಡಿರಿ" ಎಂದು ವಿನಂತಿಸಿದರು.

ಜಗತ್ತಿನ ಪ್ರಸಿದ್ಧ ವಿಜ್ಞಾನಿಗಳು ಅಣುಪ್ರಯೋಗದಿಂದುಂಟಾಗುವ ಶಾರೀರಿಕ ತೊಂದರೆಗಳನ್ನು ತಿಳಿಸಿದ್ದಾರೆ. ಅವರು ಅಣುವಿಸರಣದ ಸಮಸ್ತ ಜ್ಞಾನ ಹಾಗೂ ಪರಿಸ್ಥಿತಿಯ ತಿಳುವಳಿಕೆಗಳನ್ನು ಸಂಪಾದಿಸಿದ್ದಾರೆ. ಅವುಗಳಲ್ಲಿ ಕೆಲವೊಂದನ್ನು ನಮ್ಮ ಧ್ಯಾನದ ಪ್ರಕಟಪಡಿಸಿದ್ದಾರೆ. ಇದರಿಂದ ನಾವು ಅಣುವಿಸರಣದಿಂದ ಸರ್ವ ಪ್ರಕಾರದಲ್ಲಿಯೂ ಹಾನಿಯೇ ಸಂಭವಿಸುವುದೆಂದು ಕೇಳದೆ ಗತ್ಯಂತರವಿಲ್ಲ.

ಪ್ರಸಂಚದ ಹಿರೀ ರಾಷ್ಟ್ರಗಳಲ್ಲಿ ಪರಸ್ಪರ ಅಂತರ್ಮುಖವಾಗಿ ಬೆಳೆಯುತ್ತಿರುವ ವೈರವೇ ನಿಶ್ಯಸ್ತ್ರೀಕರಣ ಮತ್ತು ಅಣು ಪ್ರಯೋಗ ವಿರೋಧಕ್ಕೆ ದೊಡ್ಡ ಆತಂಕವಾಗಿದೆ. ಅವುಗಳ ನಡುವೆ ವಿಶ್ವಾಸ, ಸೌಹಾರ್ದಗಳು ಮೂಡಿಬಂದಾಗ ಮಾತ್ರ ಅಣುಪ್ರಯೋಗಗಳನ್ನು ನಿಲ್ಲಿಸಲು ಸಾಧ್ಯವಾಗಬಹುದು. ಆದರೆ, ಅಂತಹ ಸಮಯ ಬರುವುದು ಎಂದು ಎಂಬುದು ಯಾರಿಗೂ ತಿಳಿಯದು. ಅಲ್ಲಿಯವರೆಗೆ ಅಣುಪ್ರಯೋಗಗಳು ಮುಂದುವರಿಯುತ್ತಾ ಇರುವುದು ಶೋಚನೀಯ. ವಾತಾವರಣವನ್ನು ಕಲುಷಿತಗೊಳಿಸುವ ಅಧಿಕಾರವು ಪ್ರಪಂಚದ ಯಾವ ರಾಷ್ಟ್ರಕ್ಕೂ ಇಲ್ಲ ಎಂದು ನಮ್ಮ ಪ್ರಧಾನಿಯವರು ಎಚ್ಚರಿಸಿದರು. ಕ್ರಿಸ್‌ಮಸ್ ದ್ವೀಪದ ಸಮೂಹದಲ್ಲಿ ಬ್ರಿಟನ್ ಅಣುಪ್ರಯೋಗ ಮಾಡುವುದನ್ನು ಜಾಪಾನು ನಿಷೇಧಿಸಿತು. ರಶ್ಯಾವು ಇದಕ್ಕೆ ತನ್ನ ಒಪ್ಪಿಗೆಯಿತ್ತಿತು. ಆದರೆ, ಮೊನ್ನೆ ನೊನ್ನೆ ರಶ್ಯಾವೇ ಪ್ರಯೋಗ ಮಾಡುತ್ತಿದೆ ಎಂದು ಟೋಕಿಯೋದ ವಿಜ್ಞಾನಿಯೊಬ್ಬರು ದೂರಿದ್ದಾರೆ, ಅಮೇರಿಕವು ರಶ್ಯವನ್ನೊಳಗೊಂಡು ಸಾಮೂಹಿಕ ಒಪ್ಪಂದವಾದರೆ ಮಾತ್ರ ಅಣುಪ್ರಯೋಗಗಳನ್ನು ನಿಲ್ಲಿಸಲು ಬಹುದೆಂದು ಅಭಿಪ್ರಾಯಪಟ್ಟಿದೆ. ಅಲ್ಲಿನ ಅಣು ಪ್ರಯೋಗ ವಿರೋಧಿಗಳಾದ ಡಾ. ಮಾತ್ಸು ಶಿತಾರು ಅಣು ಪ್ರಯೋಗವನ್ನು ನಿರ್ಬಂಧಿಸಲು ಸಂಬಂಧಪಟ್ಟ ರಾಷ್ಟ್ರಗಳ ಮನವೊಲಿಸಲು ಜಾಗತಿಕ ಪ್ರವಾಸವನ್ನು ಕೈಗೊಂಡಿದ್ದಾರೆ. ಆದರೆ, ಅದರ ಫಲಾಫಲಗಳು ನುಮಿದೆ ತಿಳಿಯಬೇಕಷ್ಟೆ.

ಭಾರತದಲ್ಲಿ ಅಂಬಾಲಾದ ವೈಜ್ಞಾನಿಕ ಉಪಕರಣಗಳ ವ್ಯಾಪಾರಿಯಾದ ಶ್ರೀ ನೇಮಿಚಂದ ಜೈನರೆಂಬವರು ಜಾಪಾನಿನಲ್ಲಿ ನಡೆಯುವ ಅಣುಪ್ರಯೋಗ ವಿರುದ್ಧ ಸತ್ಯಾಗ್ರಹದಲ್ಲಿ ಭಾಗವಹಿಸಲು ನಿಶ್ಚಯಿಸಿದ್ದು ಅದಕ್ಕಾಗಿ ತನ್ನೊಂದಿಗೆ ಸೇರಿಕೊಳ್ಳಬೇಕಾಗಿ ಭಾರತೀಯರಿಗೆ ಕರೆಯಿತ್ತಿದ್ದಾರೆ. ಎಲ್ಲ ರಾಷ್ಟ್ರಗಳಿಗೂ ಈ ಅಣು ಪ್ರಯೋಗವು ತಲೆನಿಡಿತವನ್ನುಂಟುಮಾಡಿದೆ. ಸ್ವತಃ ಪ್ರಯೋಗನಡೆಸುವ ರಾಷ್ಟ್ರಗಳಿಗೂ ತಾವು ಅವಿಗೆಯೊಳಗಿರುವ ಅನುಭವವನ್ನು ನಾಡಿಕೊಡುತ್ತಿದೆ. ಶ್ರೀ ರಾಜಗೋಪಾಲಾಚಾರಿಯವರು ಅಣುವಿನಿಂದ ಉಂಟಾಗುವ ಅನರ್ಥ ಪರಂಪರೆಗಳನ್ನು ಮೊನ್ನೆ ಮೊನ್ನೆ ಒಂದು ಸಭೆಯಲ್ಲಿ ವಿವರಿಸಿದರು.

ತಾನು ವಿಜ್ಞಾನಿಯಲ್ಲವೆಂಬುದನ್ನು ಒಪ್ಪಿಕೊಂಡು, ಅಣುಪ್ರಯೋಗಿಸುವ ರಾಜ್ಯಗಳಿಗೆ 'ನಿಮ್ಮ ಜಗಳಗಳನ್ನು ನೀವೇ ಹೂರಯಿಸಿಕೊಳ್ಳಿರಿ. ನಿಮ್ಮೊಳಗೆ ವಿಶ್ವವನ್ನು ಬೆಳೆಸಿಕೊಳ್ಳುವುದು ಸಾಧ್ಯವಾದುದಕ್ಕಾಗಿ, ನೀವು ನಮ್ಮೆಲ್ಲರ ಆರೋಗ್ಯ, ಜೀವಗಳಿಗೆ ಅಪಾಯವನ್ನು ತಂದೊಡ್ಡಬೇಡಿರಿ" ಎಂದು ವಿನಂತಿಸಿದರು.

ಜಗತ್ತಿನ ಪ್ರಸಿದ್ಧ ವಿಜ್ಞಾನಿಗಳು ಅಣುಪ್ರಯೋಗದಿಂದುಂಟಾಗುವ ಶಾರೀರಿಕ ತೊಂದರೆಗಳನ್ನು ತಿಳಿಸಿದ್ದಾರೆ. ಅವರು ಅಣುವಿಸರಣದ ಸಮಸ್ತ ಜ್ಞಾನ ಹಾಗೂ ಪರಿಸ್ಥಿತಿಯ ತಿಳುವಳಿಕೆಗಳನ್ನು ಸಂಪಾದಿಸಿದ್ದಾರೆ. ಅವುಗಳಲ್ಲಿ ಕೆಲವೊಂದನ್ನು ನಮ್ಮ ಧ್ಯಾನದ ಪ್ರಕಟಪಡಿಸಿದ್ದಾರೆ. ಇದರಿಂದ ನಾವು ಅಣುವಿಸರಣದಿಂದ ಸರ್ವ ಪ್ರಕಾರದಲ್ಲಿಯೂ ಹಾನಿಯೇ ಸಂಭವಿಸುವುದೆಂದು ಕೇಳದೆ ಗತ್ಯಂತರವಿಲ್ಲ.

ಪ್ರಸಂಚದ ಹಿರೀ ರಾಷ್ಟ್ರಗಳಲ್ಲಿ ಪರಸ್ಪರ ಅಂತರ್ಮುಖವಾಗಿ ಬೆಳೆಯುತ್ತಿರುವ ವೈರವೇ ನಿಶ್ಯಸ್ತ್ರೀಕರಣ ಮತ್ತು ಅಣು ಪ್ರಯೋಗ ವಿರೋಧಕ್ಕೆ ದೊಡ್ಡ ಆತಂಕವಾಗಿದೆ. ಅವುಗಳ ನಡುವೆ ವಿಶ್ವಾಸ, ಸೌಹಾರ್ದಗಳು ಮೂಡಿಬಂದಾಗ ಮಾತ್ರ ಅಣುಪ್ರಯೋಗಗಳನ್ನು ನಿಲ್ಲಿಸಲು ಸಾಧ್ಯವಾಗಬಹುದು. ಆದರೆ, ಅಂತಹ ಸಮಯ ಬರುವುದು ಎಂದು ಎಂಬುದು ಯಾರಿಗೂ ತಿಳಿಯದು. ಅಲ್ಲಿಯವರೆಗೆ ಅಣುಪ್ರಯೋಗಗಳು ಮುಂದುವರಿಯುತ್ತಾ ಇರುವುದು ಶೋಚನೀಯ. ವಾತಾವರಣವನ್ನು ಕಲುಷಿತಗೊಳಿಸುವ ಅಧಿಕಾರವು ಪ್ರಪಂಚದ ಯಾವ ರಾಷ್ಟ್ರಕ್ಕೂ ಇಲ್ಲ ಎಂದು ನಮ್ಮ ಪ್ರಧಾನಿಯವರು ಎಚ್ಚರಿಸಿದರು. ಕ್ರಿಸ್‌ಮಸ್ ದ್ವೀಪದ ಸಮೂಹದಲ್ಲಿ ಬ್ರಿಟನ್ ಅಣುಪ್ರಯೋಗ ಮಾಡುವುದನ್ನು ಜಾಪಾನು ನಿಷೇಧಿಸಿತು. ರಶ್ಯಾವು ಇದಕ್ಕೆ ತನ್ನ ಒಪ್ಪಿಗೆಯಿತ್ತಿತು. ಆದರೆ, ಮೊನ್ನೆ ನೊನ್ನೆ ರಶ್ಯಾವೇ ಪ್ರಯೋಗ ಮಾಡುತ್ತಿದೆ ಎಂದು ಟೋಕಿಯೋದ ವಿಜ್ಞಾನಿಯೊಬ್ಬರು ದೂರಿದ

## ರಾಷ್ಟ್ರೀಯ ಯೋಜನೆ

# ಸಮೂಹಿಕ ಉಳಿತಾಯವೇ ಪ್ರಗತಿ ಸಾಧನೆಯ ಮಾರ್ಗ

ನಮ್ಮ ದಿನನಿತ್ಯದ ಜೀವನಕ್ರಮವನ್ನು ಅಭಿವೃದ್ಧಿಗೊಳಿಸಲು ಹಲವು ಯೋಜನೆಗಳು ಬೇಕಾಗುವುವು. ಯೋಜನೆಗಳು ಬೇಕೆನ್ನುವುದು ಸುಲಭ ಆದರೆ, ಅವುಗಳನ್ನು ಯಾವ ವಿಧಾನದಲ್ಲಿ ರೂಪಿಸಬೇಕು ಎನ್ನುವುದು ಅಷ್ಟು ಸರಳ ವಿಷಯವಲ್ಲ. ಇಂತಹ ಯೋಜನೆಯನ್ನು ರೂಪಿಸುವಾಗ ಅನೇಕ ಕಷ್ಟಗಳು ಎಡತಾಕುತ್ತವೆ.

ಒಂದು ವೈಯಕ್ತಿಕ ಯೋಜನೆಯನ್ನು ತೆಗೆದುಕೊಂಡರೆ, ಆಗ ಒದಗಿಬರುವ ಕಷ್ಟ ಪರಂಪರೆಗಳ ಅರಿವಾಗುವುದು. ಭಾರತ ದಾದ್ಯಂತ ಹರಡಿಕೊಂಡಿರುವ ರೈತರಲ್ಲಿ ಒಬ್ಬನ ಜೀವನಕ್ರಮವನ್ನು ಹೇಗೆ ಸುಧಾರಿಸಬಹುದು ಎಂದು ಆಲೋಚಿಸೋಣ. ಅವನು ಯಾವ ವಿಧಾನದಲ್ಲಿ ತನ್ನ ಯೋಜನೆಯನ್ನು ರೂಪಿಸಬಹುದು?

ತನಗೆ ಬೇಕಾಗಿರುವ ಅನೇಕ ವಸ್ತುಗಳನ್ನು ಆತನು ಅಪೇಕ್ಷಿಸಬಹುದು. ಆತನು ನಿಜವಾಗಿಯೂ ಉತ್ತಮ ಮಟ್ಟದ ಹೊಸ ಬೇಸಾಯ ಕ್ರಮವನ್ನು ಬಯಸುತ್ತಾನೆ. ಇದರಿಂದ ತನ್ನ ಭೂಮಿಯಲ್ಲಿ ಅಧಿಕ ಉತ್ಪತ್ತಿಯನ್ನು ಪಡೆಯಬಹುದೆಂದು ಬಯಕೆ ಆತನಿಗಿದೆ. ತನ್ನ ಸ್ಥಳಕ್ಕೆ ಯಾವಾಗಲೂ ನೀರಿನ ಒರತೆಯನ್ನು ಒದಗಿಸಲು ಒಂದು ಬಾವಿಯನ್ನು ತೋಡಿಸಬಹುದು. ಮಳೆಯು ಅನಿಶ್ಚಿತವಾದುದರಿಂದ ಆದನ್ನು ಆಗ ಅವಲಂಬಿಸಬೇಕಾದ ಅಗತ್ಯವಿಲ್ಲ. ಆ ಮೇಲೆ ಉತ್ತಮ ಮಟ್ಟದ ಗೊಬ್ಬರ ಮತ್ತು ಬೀಜಗಳು ಬೇಕು. ಇವೆಲ್ಲವುಗಳಿಂದ ಆತನ ಬೆಳೆಯು ಉತ್ತಮಗೊಂಡು, ಆತನ ಸಂಪಾದನೆಯು ಅಧಿಕವಾಗುವುದು ಸಾಧ್ಯ.

ಈಗ ಒಂದು ಅತಿ ಪ್ರಮುಖ ಪ್ರಶ್ನೆಯೊಂದು ಉಪ್ಪವಿಸುವುದು. ರೈತನಿಗೆ ಇವೆಲ್ಲವೂ ಆತನನ್ನು ಉತ್ತಮ ಸ್ಥಿತಿಗೆ ತರಬಲ್ಲುವೆಂಬ ದೃಢ ವಿಶ್ವಾಸವಿದ್ದಲ್ಲಿ, ಅವನು ಅವುಗಳನ್ನೇಕೆ ಕಾರ್ಯಗತಗೊಳಿಸಲೆತ್ನಿಸುವುದಿಲ್ಲ? ಇಲ್ಲಿಯೇ ದೊಡ್ಡ ಸಮಸ್ಯೆ ಕಾಣುವುದು. ಆತನಲ್ಲಿ ಹಣವಿಲ್ಲ ಎನ್ನುವುದೇ ಆ ಬೃಹದಾಕಾರದ ಸಮಸ್ಯೆ.

ಆತನು ಹಣವನ್ನೇಕೆ ಸಾಲರೂಪವಾಗಿ ಸಂಪಾದಿಸಬಾರದು? ಎಂದು ಯಾರಾದರೂ ಕೇಳಬಹುದು. ಆದರೆ, ಸಾಲವನ್ನು ಪಡೆವುದು ಸಮಸ್ಯಾ ಪರಿಹಾರಕ್ಕೆ ಔಷಧವಲ್ಲ ನಮ್ಮ ಭಾರತದ ಕೋಟಿಗಟ್ಟಲೆಯಲ್ಲಿರುವ ರೈತರಲ್ಲಿರೂ ಸಾಲವನ್ನು ಪಡೆಯುವ ಇರಾಧೆಯಿಂದ ಕೂಡಿದರೆ, ಅವರೆಲ್ಲರಿಗೂ ದೊರೆವಂತೆ ಮಾಡುವಷ್ಟು ಹಣವೇ ಇಲ್ಲವಾದೀತು! ಅಲ್ಲದೆ, ಕೆಲ ಶ್ರೀಮಂತರೂ ತಮ್ಮ ಯೋಜನೆಯನ್ನು ಕಾರ್ಯರೂಪಕ್ಕೆಳಿಸುವುದರಲ್ಲಿ ಬಗ್ನರಾಗಿರುವುದರಿಂದ, ಅವರು ಸಾಲವನ್ನೂ ಕೊಡಲಾರರು. ಸರಕಾರವಾದರೂ ಏಕೆ ಕೊಡಬಾರದು? ಎಂದು ಮುಂದೆ ಕೇಳುವುದು ಸಹಜ. ಆದು ಏನಾದರೂ ಸಹಾಯ ಮಾಡಬಾರದೆ? ಇದಕ್ಕೂ ಮೊದಲನೇ ಉತ್ತರ ನೇ—ಸರಕಾರದೊಡನೆ ಹಣವಿಲ್ಲ: ಸರಕಾರವು ಒಬ್ಬನಿಗೆ ಹಣವನ್ನು ಕೊಡುವಾಗ ಪ್ರಾಯಃ ಇನ್ನೊಬ್ಬನ ಹಣವನ್ನೇ ಉಪಯೋಗಿಸುತ್ತದೆ. ಕೆಲವೇ ವ್ಯಕ್ತಿಗಳಿಂದ ತೆಗೆದುಕೊಂಡು ಅದನ್ನು ಮಿಲಿಯಗಟ್ಟಲೆಯ ಜನರಿಗೆ ಹಂಚುವುದೆಂದರೆ, ಅದೂ ಸಾಧ್ಯವಾಗದು; ಮತ್ತು ಸಾಕಾಗದು.

ಇದಕ್ಕೆ ಪರಿಹಾರವೇನೂ ಇಲ್ಲವೆ? ರೈತನಾದವನು ತನ್ನ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಲು ಯೋಜಿಸುವ ಯೋಜನೆಗಳೆಲ್ಲವನ್ನೂ ಈ ಹಣದ ಸಮಸ್ಯೆಯಿಂದಾಗಿ—ತನಗೆ ಸಾಲ ಹುಟ್ಟುವುದಿಲ್ಲ ಎಂಬ ಕಾರಣದಿಂದಾಗಿ—ದೂರೀಕರಿಸಿ ಕೈಕಟ್ಟಿ ಕೂರಬೇಕೆ? ಅಥವಾ ಏನಾದರೂ ಪ್ರಯತ್ನವನ್ನು ಮಾಡಬೇಕೆ? ಪ್ರಶ್ನೆಗಳು ಜಟಿಲವಾಮವು. ಆದರೂ ಆತನೊಂದು ಕಾರ್ಯವನ್ನು ಮಾಡಬಹುದು: ತಾನೇ ಸ್ವಲ್ಪ ಉಳಿಸುವುದರ ಮೂಲಕ ಮಾತ್ರ ಆತನ ಜೀವನ ಮಟ್ಟವು ಉನ್ನತವಾಗಬಹುದು.

ತನ್ನ ಅತ್ಯಲ್ಪ ಆದಾಯದಲ್ಲಿಯೂ ಸ್ವಲ್ಪಾಂಶವನ್ನು ಉಳಿಸುವುದೆಂದರೆ, ಅದು ಅತ್ಯಂತ ಪ್ರಯಾಸಕರವಾದಸಂಗತಿ. ಕಷ್ಟ ಪಟ್ಟರೆಮಾತ್ರ ಇಷ್ಟಸಿಗಬಹುದು. ಯೋಜನೆಯ ಬೀಜ ಮಂತ್ರವೇ ಇದು. ಒಬ್ಬನು ತನ್ನಿಂದ ಅದೆಷ್ಟು ಸಾಧ್ಯವೋ ಅಷ್ಟು ತ್ಯಾಗಮಾಡಬೇಕು. ಅನಗತ್ಯ ವೆಚ್ಚಗಳನ್ನು ನಿಲ್ಲಿಸಿಬಿಡಬೇಕು. ಮಿತವ್ಯಯಾಸಕ್ತಿಯನ್ನು ಅಭ್ಯಾಸಮಾಡಿಕೊಳ್ಳಬೇಕು. ಹೆಚ್ಚು ದುಡಿದು, ಬಂದ ಸಂಪಾದನೆಯ ಅಧಿಕಾಂಶವನ್ನು ಉಳಿಸಬೇಕು. ಪ್ರಾರಂಭದ ಹಂತಗಳಲ್ಲಿ ಈ ಯೋಜನೆಯೆನ್ನುವುದು ಕಣ್ಣೀರನ್ನು ಸುರಿಸುವಂತೆ ಮಾಡಬಹುದು; ಪ್ರಯಾಸದ ಅನುಭವವನ್ನು ಒದಗಿಸಬಹುದು. ಆದರೆ, ಅದು ಮುಂದುವರಿದಂತೆ, ಯೋಜನೆಯಿಂದ ಉಂಟಾದ ಅನಂತ ಅಭಿವೃದ್ಧಿಗಳು ಸಂತೋಷವನ್ನುಂಟು ಮಾಡದೆ ಇರುವುದು ಅಸಾಧ್ಯ.

ಜಮಿಂಡ ಭಾರತಕ್ಕೊಂದು ಯೋಜನೆ ರೂಪಿಸುವಾಗಲೂ, ಭಾರತದ ಸಾಮಾನ್ಯ ರೈತನ ವಿಷಯದಲ್ಲಿಹುಟ್ಟುವ ಸಮಸ್ಯೆಯೇ ಎಮರು ಬರುತ್ತದೆ. ಭಾರತವೊಂದು ಬಡ ರಾಷ್ಟ್ರ. ನಮ್ಮ ಪ್ರಜೆಗಳ ಜೀವನ ಮಟ್ಟವನ್ನು ಏರಿಸಲು ಹಲವಾರು ಕಾರ್ಯಗಳನ್ನು ಮಾಡಬೇಕಾಗಿದೆ. ನಮ್ಮ ಕೃಷಿ ಪದ್ಧತಿಯು ಬಹಳ ಹೀನ ಸ್ಥಿತಿಯಲ್ಲಿದೆ. ನಾವು ಒಂದು ಮಣ ಭತ್ತ ಅಥವಾ ಗೋದಿಯನ್ನು ಪಡೆಯಲು ಉಪಯೋಗಿಸುವಷ್ಟೇ ಭೂಮಿಯಲ್ಲಿ ಇತರ ದೇಶಗಳಾ ನಾಲ್ಕು ಮಣಗಳಷ್ಟನ್ನು ಬೆಳೆಸುತ್ತವೆ. ನಮ್ಮ ಕೃಷಿ ಪದ್ಧತಿಯನ್ನು ಉತ್ತಮಗೊಳಿಸಲು ವೈಜ್ಞಾನಿಕ ರೀತಿಯ ರೀತಿಯ ವ್ಯವಸಾಯ ಕ್ರಮವನ್ನು ಅನುಸರಿಸಬೇಕು. ಇದಕ್ಕಾಗಿ ನಮಗೆ ನೀರಾವರಿ ಯೋಜನೆಗಳು, ಗೊಬ್ಬರ, ಉತ್ತಮ ಬೀಜ, ಒಳ್ಳೆ ರೀತಿಯ ವ್ಯವಸಾಯ ಸಾಧನಗಳು ಬೇಕಾಗಿವೆ. ನಮ್ಮ ದೇಶದಲ್ಲಿ ಹೆಸರಿಸುವಷ್ಟು ಕಾರ್ಖಾನೆಗಳಿಲ್ಲ. ನಮ್ಮ ದೇಶದಲ್ಲಿ ಕಲಾ ಒಂದರ ಗಾ ಗಜಗಳಂತೆ ಬಟ್ಟೆಯನ್ನು ಬಳಸುತ್ತೇವೆ. ಬಟ್ಟೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದಿಸಲು ಯಾಂತ್ರಿಕೋಪಕರಣಗಳು ಬೇಕಾಗುವುವು. ಆದರೆ, ಈ ಯಂತ್ರಗಳೆಲ್ಲಿಂದ ಬರಬೇಕು? ಯಂತ್ರಗಳನ್ನುತ್ಪಾದಿಸುಗುವ ಯಂತ್ರಗಳು ನಮ್ಮ ದೇಶದಲ್ಲಿಲ್ಲ. ನಮ್ಮ ಎಲ್ಲ ಯಂತ್ರಗಳೂ ಪರದೇಶದಿಂದ ಆಯಾತವಾಗಬೇಕು. ಒಂದಲ್ಲ ಒಂದು ದಿನ ನಾವು ಈ ತರದ ಯಂತ್ರಗಳುಳ್ಳ ಕಾರ್ಖಾನೆಗಳನ್ನು ತೆರೆಯಲೇಬೇಕು. ಇಷ್ಟರಲ್ಲಿಯೇ ಸಾಮಾನು ಸರಂಜಾಮುಗಳನ್ನು ಸಾಗಿಸಲು ಮಾರ್ಗಗಳ ಅವಶ್ಯಕತೆ ಎದ್ದು ನಿಲ್ಲುತ್ತದೆ. ಮಕ್ಕಳಿಗಾಗಿ ಶಾಲೆಗಳು, ಔಷಧಾಲಯಗಳು ಬೇಕಾಗುತ್ತವೆ. ಹೀಗೆ ನಮ್ಮ ಬೇಕುಗಳ ಪಟ್ಟಿಯು ಬೆಳೆಯುತ್ತಾ ಹೋಗುತ್ತದೆ.

ಅಭಿವೃದ್ಧಿಯ ಈ ಎಲ್ಲಾ ಯೋಜನೆಗಳನ್ನು ಕಾರ್ಯರೂಪಕ್ಕೆ ಇಳಿಸಬೇಕಾದರೆ, ನಮಗೆ ಹಣದ ಅವಶ್ಯಕತೆ ಬೇಳುತ್ತದೆ. ಇಷ್ಟೊಂದು ಬಂಡವಾಳವು ಎಲ್ಲಿಂದ ಬರಬೇಕು? ನಾವೇ ಇದಕ್ಕೆ ಬೇಕಾದಷ್ಟು ಬಂಡವಳವನ್ನು ಒದಗಿಸಬೇಕೆಂಬುದು ಸುಸ್ಪಷ್ಟ. ನಾವು ನಮ್ಮಲ್ಲಿನ ಎಲ್ಲ ಹಣವನ್ನೂ ನಮ್ಮ ವೆಚ್ಚಗಳಲ್ಲಿ ವಿನಿಯೋಗಿಸಿದಲ್ಲಿ, ನಮ್ಮ ಸ್ಥಿತಿಯನ್ನು ಉತ್ತಮವನ್ನಾಗಿಸುವ ಯೋಜನೆಗಳಿಗೆ ಮೊಬಲಗೆಲ್ಲಿಂದ ಬರಬೇಕು? ನಮ್ಮಿಂದ ಸಾಧ್ಯವಾದಷ್ಟನ್ನು ನಾವು ಉಳಿಸಿ ನಮ್ಮ ಯೋಜನೆಗಳಿಗೆ ಬಂಡವಳವನ್ನು ಒದಗಿಸಬೇಕು.

ಭಾರತದ ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ರಾಷ್ಟ್ರೀಯ ವಾರ್ಷಿಕ ಆದಾಯದ ಸೇಕಡಾ ೫ರಷ್ಟನ್ನು ರಾಷ್ಟ್ರೀಯ ಉಳಿತಾಯವಲ್ಲಿ ತೊಡಗಿಸಬೇಕೆಂದು ನಿಶ್ಚಯವಾಗಿತ್ತು. ಆ ಸಮಯದಲ್ಲಿ ಭಾರತದ ರಾಷ್ಟ್ರೀಯ ವಾರ್ಷಿಕ ಆದಾಯವು ೬,೦೦೦ ಕೋಟಿಗಳಷ್ಟಾಗಿತ್ತು. ಇದರನ್ವಯ ೫ ವರ್ಷಗಳಲ್ಲಿ ರೂ. ೩,೦೦೦ ಕೋಟಿಗಳಷ್ಟು ಮೊಬಲಗುಗಳನ್ನು ದೇಶದ ಅಭಿವೃದ್ಧಿ ಯೋಜನೆಗಳಲ್ಲಿ ತೊಡಗಿಸಲಾಗಿದೆ.

೧೯೫೬-೬೧ರ ದ್ವಿತೀಯ ಯೋಜನೆಯಲ್ಲಿ ಭಾರತದ ಉದ್ದೇಶವು ಇನ್ನೂ ಘನವಾಗಿದೆ. ಯೋಜನೆಗಾಗಿ ರಾಷ್ಟ್ರೀಯ ಆದಾಯದ ಸೇಕಡಾ ೧೦ರಷ್ಟನ್ನು ವ್ಯಯಿಸಲಿದ್ದೇವೆ. ಸಧ್ಯ, ನಮ್ಮ ರಾಷ್ಟ್ರೀಯ ವಾರ್ಷಿಕ ಆದಾಯವು ರೂ. ೧೦,೦೦೦ ಕೋಟಿಗಳು. ಇದರ ಸೇಕಡಾ ೧೦ ಎಂದರೆ ಐದು ವರ್ಷಗಳಲ್ಲಿ ೫,೦೦೦ ಕೋಟಿ ರೂಪಾಯಿಗಳು ದ್ವಿತೀಯ ಪಂಚವಾರ್ಷಿಕ ಯೋಜನೆಗೆ ವ್ಯಯವಾಗಲಿದೆ. (ದ್ವಿತೀಯ ಯೋಜನೆಯಲ್ಲಿ ವ್ಯಯಿಸಲು ನಿಶ್ಚಿತವಾದ ಮೊಬಲಗು ರೂ. ೬,೯೦೦ ಕೋಟಿ.) ಇದೇ ರೀತಿಯಲ್ಲಿ ತೃತೀಯ ಯೋಜನೆಯಲ್ಲಿ ಸೇಕಡಾ ೧೫ ಮತ್ತು ಚತುರ್ಥ ಯೋಜನೆಯಲ್ಲಿ ಸೇಕಡಾ ೨೦ರಷ್ಟು ರಾಷ್ಟ್ರೀಯ ಯೋಜನೆಗಳಲ್ಲಿ ತೊಡಗಿಸುವ ಕುರಿತು ಆಲೋಚನೆಯಿದೆ.

ಹಣವನ್ನು ಉಳಿಸಿದೊಡನೆ ನಮ್ಮ ಕಾರ್ಯವು ಮುಗಿಯಲಿಲ್ಲ. ಆ ಉಳಿತಾಯದ ಮೊಬಲಗನ್ನು ಯೋಗ್ಯರೀತಿಯಲ್ಲಿ ತೊಡಗಿಸುವುದು ಅಗತ್ಯ. ಎಂದರೆ, ಹಣವನ್ನು ಉತ್ಪತ್ತಿ ಅಧಿಕವಾಗಿ ದೊರೆಯುವ ಉದ್ಯಮಗಳಿಗೆ ಬಂಡವಳವನ್ನಾಗಿ ಒದಗಿಸಬೇಕು. ನಾವು ಅಧಿಕ ಸ್ವಯಾಣದಲ್ಲಿ ಉಳಿಸಿದರೆ, ಹೆಚ್ಚು ಹೆಚ್ಚು ಯೋಜನೆಗಳನ್ನು ಕೈಗೊಳ್ಳಬಹುದು. ಹಾಗೆಯೇ ನಮ್ಮ ಜೀವನ ಮಟ್ಟವನ್ನೂ ಸುಧಾರಿಸಿಕೊಳ್ಳಬಹುದು. ಅಲ್ಪ ಉಳಿತಾಯದಿಂದ ಸಣ್ಣ ಕಾಮಗಾರಿಗಳು ಮಾತ್ರ ಕಾರ್ಯರೂಪಕ್ಕೆ ಬರುವುದು ಸಾಧ್ಯವಾದುದರಿಂದ ನಮ್ಮ ಪ್ರಗತಿಯು ಕುಂಟುತ್ತಾ ಮುಂದೆ ನಡೆಯಬಹುದು. ಆದುದರಿಂದ, ಆರ್ಥಿಕ ಪ್ರಗತಿಯನ್ನು ಕ್ಷಿಪ್ರವೆಲ್ಲಿಯೇ ಸಾಧಿಸಲು ಅಧಿಕ ಉಳಿತಾಯ ಯೋಜನೆಯು ಅಗತ್ಯ.

ನಮ್ಮ ದೇಶವನ್ನು ಸ್ವರ್ಗಸದೃವಾಗಿ ಮಾಡುವುದಕ್ಕೆ ಅದೆಷ್ಟು ಬಂಡವಳವು ಬೇಕಾಗಬಹುದು! ಆದರೆ, ಭಾರತದಂತಹ ಆರ್ಥಿಕ ದೃಷ್ಟಿಯಿಂದ ದರಿದ್ರವಾದ ದೇಶವು ಅದೆಷ್ಟನ್ನು ಉಳಿಸೀತು? ಆದುದರಿಂದಲೇ ನಾವು ನಿಧಾನವಾಗಿ ಸಾಗಬೇಕಾಗಿದೆ. ತಾತ್ಪರ್ಯವಿಂದ. ಮೆಲ್ಲಮೆಲ್ಲನೆ ಹಂತ ಹಂತವಾಗಿ ನಾವು ಪ್ರಗತಿಯನ್ನು ಸಾಧಿಸುವುದು ಸಾಧ್ಯ. ನಾವು ಈಗ ಬಡವರಾಗಿದ್ದೇವೆ ಸಾಕಷ್ಟು ಪ್ರಮಾಣದಲ್ಲಿ ನಾವು ಉಳಿತಾಯವನ್ನು ಮಾಡದಷ್ಟು ಕಾಲ ಬಡವರಾಗಿಯೇ ಬದುಕುತ್ತೇವೆ.

ಆದುದರಿಂದ ಭಾರತದ ಪ್ರತ್ಯೇಕ ನಾಗರಿಕನೂ ತನ್ನಿಂದ ಸಾಧ್ಯವಾದಷ್ಟು ಅಧಿಕ ಪ್ರಮಾಣದಲ್ಲಿ ರಾಷ್ಟ್ರಾಭಿವೃದ್ಧಿಗಾಗಿ ಉಳಿತಾಯವನ್ನು ಮಾಡುವುದು ಅತ್ಯಗತ್ಯವಾಗಿದೆ.

—ಯೋಜನಾ.

### ಸೂಚನೆ

'ನವಯುಗ'ದ ಚಂದಾ ಹಣ ಮತ್ತು ಜಾಹೀರಾತಿನ ಹಣವನ್ನು ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಇವರ ಯಾವುದೇ ಶಾಖೆಯಲ್ಲಿ ಯಾವದೊಂದು ತರದ ಖಿರ್ಚೂ ಇಲ್ಲದೆ (ನವಯುಗ ವಾರಪತ್ರಿಕೆಯ ಖಾತೆಗೆ) ಪಾವತಿ ಮಾಡಬಹುದು.

ಮೆನೇಜರ್.




## ಕುಮಾರಿ ಬಿಲ್ಲೆಗಳು

**Govt. Regd.**

ಹೆಂಗಸರ ಹಿತಮಿತನಾದ ಆರೋಗ್ಯ ಸಾಧನೆಗೂ ಅವರನ್ನು ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ.ಪಿ.ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

**P. DEVEE & Co. (N. J.)** CALCUTTA—40.

ಸ್ವಾಧಿಕೃತರು: **ಸಾ ಕಂಪೆನಿ, ಮಂಗಳೂರು—1.**



# NAVAYUGA

Popular Kannada Weekly

*Founder:—*

**A. B. SHETTY,**

Former Minister for Public Health, Govt. of Madras & Govt of Mysore

# ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

| ಸಂಪುಟ | ಉಡುಪಿ | ಸಂಚಿಕೆ |
|---|---|---|
| ೩೩ | ೨-೫-೧೯೫೭ | ೩೪ |


## ಬೇಸಾಯದ ಸುಧಾರಣೆ

ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಯಲ್ಲಿ ಆಸಕ್ತರಾಗಿರುವ ಅಧಿಕಾರಿ ವರ್ಗದ ಪರಿಷತ್ತು ಕಳೆದ ವಾರ ಒರಗಿದಾಗ, ಬೇಸಾಯದ ಸುಧಾರಣೆಯ ಬಗ್ಗೆ ಹೆಚ್ಚಿನ ಚರ್ಚೆ ನಡೆಯಿತೆಂದು ವರದಿಗಳು ಹೇಳುತ್ತವೆ. ಬೇಸಾಯದ ಮೂಲಕ ಬರುವ ಉತ್ಪತ್ತಿಯನ್ನು ಗಣನೀಯವಾದ ಪ್ರಮಾಣದಲ್ಲಿ ಹೆಚ್ಚಿಸಬೇಕೆಂದೂನುಂದಿನ ದಿನ ಮೂರು ವರ್ಷಗಳಲ್ಲಿ ಈಗಿನದರ ಒಂದೂನೂರೆಪಾಲಿನಷ್ಟು ಹೆಚ್ಚು ಬೆಳೆಯನ್ನು ಕೊಯ್ಯುವ ಉದ್ದೇಶ ನಮ್ಮದಾಗಬೇಕೆಂದೂ ಪರಿಷತ್ತಿನಲ್ಲಿ ತೀರ್ಮಾನವಾಯಿತೆಂದು ತಿಳಿದು ಬರುತ್ತದೆ. ಪ್ರಧಾನಿ ನೆಹರು ರವರು ಈ ಸಂದರ್ಭದಲ್ಲಿ ಮಾತನಾಡುತ್ತಾ ಸಹಕಾರಿ ತತ್ವವನ್ನು ವ್ಯವಸಾಯ ಕ್ಷೇತ್ರದಲ್ಲಿ ಜಾರಿಗೆ ತಂದದ್ದೇ ಕ್ಷೇಮವಾದೀತು; ಅಭಿವೃದ್ಧಿಯ ವೇಗ ಹೆಚ್ಚಿಕೊಂಡೀತು—ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರೆಂದು ಸಮಾಚಾರ ಬಂದಿರುತ್ತದೆ. ಈ ಹಿನ್ನೆಲೆಯಲ್ಲಿ ನಾವು ಬೇಸಾಯದ ಸುಧಾರಣೆಯ ಪ್ರಶ್ನೆಯನ್ನು ಕೈಗೆತ್ತಿಕೊಂಡು ವಿಮರ್ಶಿಸುವುದಾದಲ್ಲಿ, ಇಂದಿನ ಸ್ಥಿತಿಗತಿಯ ಬಗ್ಗೆ ಏನೇನೂ ಸಮಾಧಾನ ಪಟ್ಟುಕೊಳ್ಳುವ ಹಾಗಿಲ್ಲವೆಂದೇ ಹೇಳಬೇಕಾಗುತ್ತದೆ. ಹಳ್ಳಿ ಪ್ರದೇಶಗಳಲ್ಲಿ ಸಮಾಜ ವಿಕಾಸ ಯೋಜನೆಯ ಅಧಿಕಾರಿಗಳು ಇಪ್ಪರವರೆಗೆ ಏನು ಚಟುವಟಿಕೆಗಳನ್ನು ತೋರಿಸಿದ್ದಾರೆಂದು ವಿವೇಚನೆಮಾಡಿದ ಪಕ್ಷದಲ್ಲಿ, ಸಂಕ, ಮಾರ್ಗ, ಕಟ್ಟಡ ರಚನೆಯಂಥ ಕೆಲಸಗಳಿಗೇ ಅವರ ಗಮನ ಹರಿದುದು ವ್ಯಕ್ತವಾಗುತ್ತದಲ್ಲದೆ, ಬೇಸಾಯದ ಕಡೆಗಲ್ಲ್ಲಿಹಳ್ಳಿಯ ಬಾವಿಗಳ ಜೀರ್ಣೋದ್ಧಾರ ನಡೆಸಿದುದಾಗಲೀ, ಹೊಸ ಬಾವಿಗಳನ್ನು ತೋಡಿಸಿದ್ದಾಗಲೀ, ಕೆರೆಗಳನ್ನು ಕಟ್ಟಿಸಿದ್ದಾಗಲೀ ತೋಡು ಅಥವಾ ಹೊಳೆಗಳಿಗೆ ಆಣೆಕಟ್ಟುಗಳನ್ನು ಹಾಕಿಸಿದ್ದಾಗಲೀ ತೋರಿ ಬರುವುದಿಲ್ಲ ಅಲ್ಲದೆ ಬೇಸಾಯದ ಸುಧಾರಣೆಯನ್ನು ಯಾವ ರೀತಿಯಲ್ಲಿ ಸಾಧಿಸಬಹುದೆಂಬ ಬಗ್ಗೆ ವಿಶೇಷ ಪ್ರಚಾರ ನಡೆದಂತೆಯೂ ತೋರಿಬರುತ್ತಿಲ್ಲ. ವ್ಯವಸಾಯ ಕ್ಷೇತ್ರದ ಅಭಿವೃದ್ಧಿಯಲ್ಲಿ ಸಜೀವವಾಗಿಯೂ ಆಸಕ್ತಿಯನ್ನು ತಳೆದಿರಬೇಕಾದ ಕೃಷಿ ಇಲಾಖೆಯವರು ಸಮಾಜ ವಿಕಾಸ ಯೋಜನಾಧಿಕಾರಿಗಳ ಮೂಲಕ ಎಷ್ಟು ಹಳ್ಳಿಗಳಿಗೆ ತಮ್ಮ ಸೇವೆಯನ್ನು ಸಲ್ಲಿಸಿರುವರೆಂದು ಹೇಳುವುದು ಕಷ್ಟ. ಉತ್ತಮ ಬೀಜ, ಗೊಬ್ಬರ ಮತ್ತು ಜಂತುನಾಶಕಗಳ ಪೂರೈಕೆ, ಹೊಸ ಸಾಧನಗಳಿಂದ ಗದ್ದೆ ಉಳುವಿಕೆ, ನೀರಾವರಿ ಸೌಲಭ್ಯಗಳನ್ನು ಬಳಸಿಕೊಂಡು ಹೆಚ್ಚಿನ ಬೆಳೆ ಬೆಳೆಸುವಿಕೆ- ಇತ್ಯಾದಿ ಪ್ರಾಮುಖ್ಯ ವಿಷಯಗಳ ಕುರಿತು ಸಮಾಜ ವಿಕಾಸ ಯೋಜನಾಧಿಕಾರಿಗಳು ಕೊಟ್ಟಿರುವ ಗಮನವು ಸಮಸ್ಯೆಯ ಮಹತ್ವದ ದೃಷ್ಟಿಯಿಂದ ತೀರ ಕಡಿಮೆಯಾಗಿ ತೋರುತ್ತದೆ. ಹಳ್ಳಿಯ ರೈತರ ಗಮನವು ಬೇಸಾಯದ ಸುಧಾರಣೆಯ ಕಡೆಗೆ ಆಕರ್ಷಿಸಲ್ಪಟ್ಟಿದೆ ಎಂದು ನವಗಂತೂ ಖಚಿತವಾಗಿಲ್ಲ. ಅದೂ ಅಲ್ಲದೆ ಸ್ವಾವಲಂಬನದ ತತ್ವಕ್ಕೆ ವಿಶೇಷ ಚಾಲನೆಯೊದಗಿದೆ ಎಂದು ಸಹ ನಾವು ಸಮಾಜ ವಿಕಾಸ ಯೋಜನೆಯ ಕಾರ್ಯಾಚರಣೆಯನ್ನು ಕಂಡು ಹೇಳಲಾರೆವು- ಆರಿವಾಸಿಯಷ್ಟು ವೆಚ್ಚವನ್ನು ಜನರೇ ಒದಗಿಸಿಕೊಡುವ ತಳಹದಿಯ ಮೇಲೆ ನಡೆದಿರುವ ಅಭಿವೃದ್ಧಿ ಪ್ರಯತ್ನಗಳಲ್ಲಿ ಜನರು ನಿಜವಾಗಿ ನೀಡಿವ ಸಹಕಾರದ ಮೊತ್ತವು ಅತ್ಯಲ್ಪವೆಂದೇ ಹೇಳಬೇಕಾಗುತ್ತದೆ. ಅದಕ್ಕಾಗ್ಯೂ ಕೆಲವು ಕಟ್ಟಡಗಳ ಮತ್ತಿತರ ರೀತಿಯ ಸೌಕರ್ಯಗಳ ರಚನೆಯಾದುದು ಕಾಣಿಸುತ್ತದಾದರೆ, ನಿಜವಾಗಿ ತಗಲಿದ ಖರ್ಚಿಗಿಂತ ಸರಕಾರದ ಕಡೆಯಿಂದ ಅಂದಾಜು ಮಾಡಲಾಗುವ ಖರ್ಚಿನ ಪ್ರಮಾಣವು ೫೦ ರಿಂದ ೧೦೦% ಸರಿಗೂ ಹೆಚ್ಚಾಗಿರುವುದು ಕಾರಣವೆಂದು ಜನರಲ್ಲಿ ಅಭಿಪ್ರಾಯವಿರುತ್ತದೆ. ಪರಿಣಾಮವೇನೆಂದರೆ, ಜನರಲ್ಲಿ ಕೆಲಸರು ಮುಂದಾಳು ತನವನ್ನು ಮಾತ್ರ ವಹಿಸಿ, ಸರಕಾರದ ವೆಚ್ಚದಲ್ಲಿ ಯೇ ಈ ಅಭಿವೃದ್ಧಿ ಪ್ರಯತ್ನಗಳನ್ನು ನಡೆಸಿದರು. ಬೇಸಾಯದ ರಂಗದಲ್ಲಿ ಈ ತಂತ್ರವನ್ನು ಬಳಸುವುದು ಸಾಧ್ಯವಿಲ್ಲ -- ಅಂದರೆ ಒಬ್ಬಬ್ಬರ ಮುಂದಾಳುತನದಿಂದ ಅಭಿವೃದ್ಧಿ ಕೈಗೂಡಿ ಬರುವ ರಂಗ ಬೇಸಾಯವಲ್ಲ. ಕೃಷಿಕರಲ್ಲಿಯೇ ಪ್ರತಿಯೊಬ್ಬ ವ್ಯಕ್ತಿಯೂ ಉತ್ಸಾಹವನ್ನು ಪ್ರದರ್ಶಿಸಬೇಕಾಗಿದೆ. ಹೆಚ್ಚು ಬೆಳೆಯನ್ನು ಬೆಳೆಸಿದರೆ ತನಗೆ ತುಂಬ ಲಾಭವಿದೆ ಎಂದು ರೈತನಿಗೆ ಮನವರಿಕೆ ಮಾಡಿ ಕೊಡುವುದೇ ಇಲ್ಲಿಯ ಮುಖ್ಯ ಸಮಸ್ಯೆ. ಕಾರ್ತಿಮತ್ತು ಸುಗ್ಗಿ ಮಾತ್ರ ಬೆಳೆಯಾಗುವ ಭೂಮಿಯಲ್ಲಿ ಕೊಳಕೆ ಬೆಳೆಯನ್ನೂ ಮಾಡು ಎಂದು ರೈತನಿಗೆ ಸಲಹೆ ಕೊಟ್ಟರೆ ಸಾಲದು -ಆ ಕೊಳಕೆ ಬೆಳೆಯ ಪ್ರಯೋಜನವೂ ಅವನಿಗೆ ಸಿಗುವಂತೆ ಭರವಸೆ ಇರಬೇಕಾಗಿದೆ. ಈಗಿನ ಪದ್ಧತಿಯಂತೆ, ರೈತನು ಸ್ವಂತ ಉತ್ಸಾಹದಿಂದ ಮತ್ತು ಪ್ರಯತ್ನದಿಂದ ಕೊಳಕೆ ಬೆಳೆಯನ್ನು ಬೆಳೆಸಿದರೂ ಧಣಿಯಾದವನು ಆ ಬೆಳೆಯ ಬಗ್ಗೆ ಸಹ ಗೇಣಿಯನ್ನು ಕೇಳುತ್ತಾನೆ! ಹೀಗೆ ತಾನು ಕಷ್ಟಪಟ್ಟದ್ದೇ ಬಂತು; ಬೆಳೆಯೆಲ್ಲ ಧನಿಗಳ ಕೈಗೆ ಹೋಯಿತು- ಎಂದು ರೈತನು ಭಾವಿಸುವ ಹಾಗಾಗುತ್ತದೆ! ಪಡೆದ ಗೇಣಿಗೆ ರಶೀದಿಯನ್ನು ಸಹ ಕೊಡುವ ಅಭ್ಯಾಸವಿಲ್ಲದ ಧನಿಗಳೇ ನಮ್ಮಲ್ಲಿ ಹೆಚ್ಚಾಗಿರುವಾಗ, ಯಾವ ರೈತನು ತಾನೇ ದೆ ಶೋದ್ಧಾರವಾಗಲಿ ಎಂಬ ಮಹತ್ವಾಕಾಂಕ್ಷೆಯಿಂದ ತನ್ನ ಕಷ್ಟ ಗಳನ್ನೂ ಜವಾಬ್ದಾರಿಯನ್ನೂ ಹೆಚ್ಚಿಸಿಕೊಂಡಾನು? ಇನ್ನು ನೆಹರುಗಳು ಹೇಳುವ ಸಹಕಾರಿ ತತ್ವ ಪ್ರಚಲಿತಗೊಳಿಯಂತೂ ನಮ್ಮ ಸಾಮಾಜಿಕ ಪರಂಪರೆಗೆ ಏನೇನೂ ಅನುಗುಣವಾಗಿಲ್ಲದ ವಿಷಯ—ಪಟ್ಟಣಪ್ರಭುತ್ವದಲ್ಲಿ ಕೇಳಿಬ್ಬರ್ತಿ, ಸಾಮಾಜಿಕ ತಂತ್ರಜ್ಞಕ್ಕೆ ಹೆಚ್ಚಿನ ಸ್ಥಾನವಿದೆಯೋ ಅದೇ ರೀತಿ ನವ್ಯನಿತ್ಯ ಜೀವನದಲ್ಲಿ ಸಹಕಾರಿತತ್ವಕ್ಕೆ ತನ್ನ ಜೀವನ ನಿರ್ವಹಣೆಯ ದೊಡ್ಡ ಸಮಸ್ಯೆಯಾಗಿದೆಯಲ್ಲದೆ, ನಾಲ್ಕು ಮಂದಿಯೊಟ್ಟಿಗೆ ಸಹಕರಿಸಿದರೆ ಫಲವೊಳ್ಳೆಯದಾಗುತೇತೆಂದು ಅವನಿಗೆ ನಂಬಿಕೆಯಿಲ್ಲ. ಹತ್ತು ಮಂದಿಯೊಡನೆ ಕೂಡಿಸಿದ್ದೆ ಆ ಹತ್ತು ಮಂದಿಯಲ್ಲಿ ಬುದ್ಧಿವಂತನಾದವನೇ ಲಾಭ ಹೊಡೆದಾನು ಎಂಬಂತಹ ಮನೋಭಾವ ನಮ್ಮ ರೈತರದು—ಮತ್ತಿದು ವಾಸ್ತವಿಕವಾಗಿಯೂ ಸತ್ಯವೆಂದು ನಮ್ಮ ಅನುಭವ. ಆದುದರಿಂದ ಸಹಕಾರಿ ತತ್ವದ ಪ್ರಚಾರಕ್ಕೆ ನಮ್ಮ ಅಧಿಕಾರಿಗಳೂ ಸರಕಾರವೂ ಹೆಚ್ಚಿನ ಗಮನವನ್ನು ಈಗ ಕೊಡಬೇಕಾದುದಿಲ್ಲವೆಂದು ನಾವು ನಮ್ರತೆಯಿಂದ ಸೂಚಿಸಬಯಸುತ್ತೇವೆ. ಇಂದು ಅಗತ್ಯವಾಗಿರುವುದು ಬೇಸಾಯಗಾರರಿಗೆ ಭದ್ರತೆಯನ್ನೊದಗಿಸುವ ಶಾಸನ; ಮತ್ತು ಎಲ್ಲ ವಿಧದ ಪ್ರೋತ್ಸಾಹ. ಸಾಲಸೋಲಗಳಲ್ಲಿ ಮುಳುಗಿಹೋಗಿರುವ ರೈತ ಕುಟುಂಬಗಳು ಸಾವಿರಾರು ರೂಪಾಯಿಗಳ ವೆಚ್ಚವನ್ನು ಮಾಡಿ ನೀರಿನ ಪಂಪುಗಳನ್ನು ಪಡೆದು ಕೊಳ್ಳುವ ಸ್ಥಿತಿಯಲ್ಲಿ ಈಗಂತೂ ಇಲ್ಲ—ಇನ್ನು ಐವತ್ತು ವರ್ಷ ಕಳೆದ ಬಳಿಕವೂ ಆ ಸ್ಥಿತಿ ಬರುವುದು ಸಂಶಯ. ನಿಜಸ್ಥಿತಿಯು ಹೀಗಿರುವಾಗ ಸಹಕಾರಿ ತತ್ವವೆಂಬ ಹೇಳುವುದಾಗಲೀ ಸಮಾಜ ವಿಕಾಸ ಯೋಜನಾಧಿಕಾರಿಗಳು ಬೇಸಾಯದ ಸುಧಾರಣೆಯಲ್ಲಿ ಪ್ರಗತಿಯನ್ನೇ ಸಾಧಿಸಿರುವರೆಂದು ಅತ್ಯಂತ ಸಂತೃಪ್ತಿಯನ್ನು ಹೊಂದುವುದಾಗಲೀ ವ್ಯರ್ಥ.

## ಚುಟುಕು ಸುದ್ದಿಗಳು

**ಕೇರಳದಲ್ಲಿರುವ ಕನ್ನಡಿಗರ —** ಸಮಸ್ಯೆಗಳ ಕುರಿತು ತನ್ನ ಸರಕಾರವು ಪರ್ಯಾಲೋಚಿಸಿ, ನೆರೆ ರಾಷ್ಟ್ರಗಳೊಂದಿಗೆ ವಿಚಾರ ವಿನಿಮಯಗಳನ್ನು ಮಾಡಿ ಯೋಗ್ಯ ನಿರ್ಧಾರಕ್ಕೆ ಬರುವುದಾಗಿ ಕೇರಳದ ರಾಜ್ಯಪಾಲರಾದ ಡಾ. ಬಿ. ರಾಮಕೃಷ್ಣರಾಯರು ಕೇರಳದ ಶಾಸನ ಸಭೆಯ ಪ್ರಥಮಾಧಿವೇಶನದಲ್ಲಿ ಪ್ರಾರಂಭ ಭಾಷಣ ಮಾಡುತ್ತಾ ಹೇಳಿದರು. ಇದರಿಂದ ಕಾಸರಗೋಡಿನ ಸಮಸ್ಯೆಯತ್ತ ಕರಾರದ ವಿಶೇಷ ದೃಷ್ಟಿ ಹರಿದಿದೆಯೆನ್ನಬಹುದು.

**ಭಾರತ ಸರಕಾರವು-** ತನ್ನ ನೋಟುಗಳಲ್ಲಿ ಅಶೋಕ ಸ್ತಂಭ ಮತ್ತು ನೀರ್ಕಲೆಗಳಿರದವುಗಳನ್ನು ಜಿಲ್ಲಾವಣಿಯಲ್ಲಿರಿಸಲು ಇದೇ ಎಪ್ರಿಲ್ ೨೭ ಕೊನೆಯ ದಿನವೆಂದು ಮೊದಲು ನಿರ್ಧರಿಸಿದ್ದರೂ, ಸದ್ಯದಲ್ಲಿ ಅಂತಹ ನೋಟುಗಳು ಇನ್ನೂ ಅಧಿಕ ಪ್ರಮಾಣದಲ್ಲಿ ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಚಾರದಲ್ಲಿರುವುದನ್ನು ತಿಳಿದು ಎಪ್ರಿಲ್ ತಿಂಗಳಿಂದ ಇನ್ನೂ ೬ ತಿಂಗಳುಗಳ ವರೆಗೆ ಜಲಾವಣೆಮಲ್ಲಿರಿಸಲು ನಿರ್ಧರಿಸಿದೆ. ಈ ಬಗ್ಗೆ ಇರ್ಥ ಶಾಖೆಯೊಂದು ಪ್ರಕಟಣೆಯನ್ನು ಹೊರಡಿಸಿ, ಅಂತಹ ನೋಟುಗಳಿರುವ ವ್ಯಕ್ತಿಗಳು ಈ ಮುಂದು-ವರಿದ ಅವಧಿಯೊಳಗೆ ತಮ್ಮ ನೋಟುಗಳನ್ನು ಬದಲಾಯಿಸಿಕೊಳ್ಳಬೇಕೆಂದು ಕೇಳಿಕೊಂಡಿದೆ.

**ರಾಷ್ಟ್ರಾಧ್ಯಕ್ಷರು-** ಒಂದು ಸಂಸ್ಕೃತ ವಾಜ್ಞೆಯನ್ನು ವಿಧಿಸಿ ಪ್ರಮಾಣಿಕ ರೀತಿಯಲ್ಲಿ ಒಂದು ಕಾರ್ಖಾನೆಯು ಮುಚ್ಚುವಾಗ ಅಥವಾ ಸ್ಥಾನಾಂತರಗೊಂಡಾಗ, ಅದರಲ್ಲಿ ದುಡಿಯುತಿದ್ದ ಮಜೂರರಿಗೆ ಪರಿಹಾರವನ್ನು ಕೇಳುವ ಹಕ್ಕನ್ನು ದಯಪಾಲಿಸಿದ್ದಾರೆ. ಈ ಕಾನೂನು ೧೯೫೬ನೆದಶೆಂಬರ ತಿಂಗಳಿಂದ ಮುಚ್ಚಿದ ಇಲ್ಲವೆ ಬದಲಾವಣೆಹೊಂದಿನ ಕಾರ್ಖಾನೆಗಳಿಗೂ ಅನ್ವಯಿಸುವುದು. ಆಹಮ್ಮದಾಬಾದು, ಕಾನ್ಪುರ ಮತ್ತು ಪಶ್ಚಿಮ ಬಂಗಾಳದ ಕೆಲವು ನಗರಗಳ ಕಾರ್ಖಾನೆಗಳ ಪರಿವರ್ತನೆಯೇ ಈ ಸುಗ್ರೀವಾಜ್ಞೆಗೆ ಕಾರಣವೆಂದು ಊಹಿಸಲಾಗಿದೆ. ಇದರಿಂದ ಸು. ೫೦,೦೦೦ ಮಜೂರರು ಪ್ರಯೋಜನ ಪಡೆಯಲಿರುವರು.

**ಮುಂಬಯಿ ಸರಕಾರವು—** ಕಳೆದ ವರ್ಷ ಭಾಷಾವಾರು ಪ್ರಾಂತಗಳ ವಿಷಯದಲ್ಲಿ ಆಪಮ್ಮದಾಬಾದು ಮತ್ತು ಮುಂಬಯಿ ನಗರಗಳಲ್ಲಿ ಉಂಟಾದ ಗೊಂದಲದಲ್ಲಿ ಮರಣಕ್ಕೀಡಾದ ವ್ಯಕ್ತಿಗಳ ಕುಟುಂಬದವರಿಗೆ ಪರಿಹಾರ ಧನವನ್ನೀಯುವ ಯೋಚನೆಯಲ್ಲಿದೆ. ಮುಖ್ಯ ಮಂತ್ರಿ ಶ್ರೀ ಮೈ. ಬಿ. ಚವನರು ಈ ಬಗ್ಗೆ ಹೆಚ್ಚು ಆಸಕ್ತರಾಗಿದ್ದಾರೆ. ಹಿಂದಿನ ಮುಖ್ಯ ಮಂತ್ರಿ ಶ್ರೀ ಮೊರಾರ್ಜಿ ಸರು ಗೊಂದಲವೆಂಬ ಲಾತ್ಯವಾದ ಅಂಗಡಿ ಮೊದಲಾದ ವನಕ್ಕೆ ಪರಿಹಾರ ದ್ರವ್ಯವನ್ನು ಈ ಮೊದಲೇ ಒದಗಿಸಿದ್ದು, ಮರಣಹೊಂದಿದವರ ಕುಟುಂಬಕ್ಕೆ ಒದಗಿಸಲು ನಿರಾಕರಿಸಿದ್ದರು.

### ಮದ್ರಾಸಿನಲ್ಲಿ

ದ್ರಾವಿಡ ಮುನ್ನೇತ್ರ ಕಜಗಂನ ನಾಯಕರಾದ ಶ್ರೀ ರಾಮಸ್ವಾಮಿ ನಾಯ್ಕರರು ವಿಗ್ರಹ, ಪುರಾಣಗಳು ಹಾಗೂ ದೇವನಾಮದ ವೈರದೊಂದಿಗೆ ಇದೀಗ "ಬ್ರಾಹ್ಮಣ" ಪದ ವಿರೋಧಿಗಳೂ ಆಗಿದ್ದಾರೆ ವ್ಯವಹಾರದಂಗಡಿಗಳಾದ ಹೋಟೇಲು ಮೊದಲಾದುವುಗಳ ಬೋರ್ಡಿನಲ್ಲಿ "ಬ್ರಾಹ್ಮಣರ" ಎಂಬ ಪದವಿದ್ದರೆ, ಆ ಬೋರ್ಡನ್ನು ಉಜ್ಜಿ ಕೆಡಿಯುವ ತಮ್ಮ ಹೊಸ ಕಾರ್ಯಕ್ರಮವನ್ನು ಮೇ ದಿನಾಂಕ ೫ ರಿಂದ ಮೊದಲು ಮಾಡಲಿದ್ದಾರೆ. ಜಾತ್ಯತೀತ ರಾಷ್ಟ್ರದಲ್ಲಿ ಜಾತಿವಾಚಕ "ಬ್ರಾಹ್ಮಣ" ಪದವು ಬೋರ್ಡುಗಳಲ್ಲಿರುವುದು ನಿಯಮ ಬಾಹ್ಯವೆಂದು ಇವರ ಸ್ಪಷ್ಟಾಭಿಪ್ರಾಯವಿದೆ.

**ಗುನ್ಮಾರ್ ಯಾರಿಂಗೆಳು-** ಭಾರತ ಮತ್ತು ಪಾಕಿಸ್ತಾನಗಳಾಳಗೆ ಕಾಶ್ಮೀರ ಸಂಬಂಧದಲ್ಲಿ ಸಂಧಿಯು ಮಾತುಕತೆಗಳನ್ನೆತ್ತಲು ಬಾವಿರುವನನು ಆ ಸಂಬಂಧದ ತನ್ನ ವರದಿಯನ್ನು ಇಷ್ಟರಲ್ಲಿಯೇ ಭದ್ರತಾ ಸಮಿತಿಗೆಪ್ಪಿಸಲಿದ್ದಾರೆ. ಅವರ ವರದಿಯು ಪ್ರಕಟವಾಗಿ ಇನಾನು ಒಂದು ತಿಂಗಳ ನಂತರ ಕಾಶ್ಮೀರ ಸಂಬಂಧದ ಚರ್ಚೆ ಪುನಃ ಮುಂದಕ್ಕೆ ಬರಬಹುದು.

**ಜೋರ್ಡಾನಿನಲ್ಲಿ-** ಕೆಲದಿನಗಳ ಅಶಾಂತ ವಾತಾವರಣದ ನಂತರ ಈಗ ಮಿಲಿಟರೀ ಸರಕಾರವು ಸ್ಥಾಪಿತಗೊಳ್ಳಬ್ಬಿದೆ. ಪಾರ್ಲಿಮೆಂಟನ್ನು ತಾನು ೬ ತಿಂಗಳು

(ಅನೇ ಪುಟ ನೋಡಿರಿ)

## BALANCE SHEET.

| CAPITAL & LIABILITIES | Rs. As. Ps. | Rs. |
|---|---|---|
| **1. Capital:** | | |
| AUTHORISED CAPITAL: | | |
| 24,000 shares of Rs. 50/- each ... ... ... ... | 12,00,000 0 0 | |
| 32,000 shares of Rs. 25/- each ... ... ... ... | 8,00,000 0 0 | 20,00,000 |
| ISSUED & SUBSCRIBED CAPITAL: | | |
| 24,000 shares of Rs. 50/- each ... ... ... ... | 12,00,000 0 0 | |
| 12,000 shares of Rs. 25/- each ... ... ... ... | 3,00,000 0 0 | 15,00,000 |
| AMOUNT CALLED UP: | | |
| On 24,000 shares of Rs. 50/- each at Rs. 25/- per share ... ... ... | 6,00,000 0 0 | |
| On 12,000 shares of Rs. 25/- each at Rs. 25/- per share ... ... ... | 3,00,000 0 0 | |
| | 9,00,000 0 0 | |
| *Less* allotment money due ... ... ... ... | 13,770 0 0 | |
| | 8,86,230 0 0 | |
| *Add* Calls in advance ... ... ... ... | 24,975 0 0 | 9,11,205 |
| **2. Reserve Fund and Other Reserves** ... ... ... | | 2,26,303 |
| **3. Deposits and Other Accounts:** | | |
| Fixed Deposits ... ... ... ... | 66,16,130 0 7 | |
| Savings Bank Deposits ... ... ... ... | 9,36,532 7 10 | |
| Current Accounts, Contingency Accounts, etc. ... ... ... | 9,83,221 6 5 | 85,35,883 |
| **4. Borrowing from other Banking Companies, Agents, etc:** | | |
| (i) In India ... ... ... ... | Nil | |
| (ii) Outside India ... ... ... ... | Nil | Nil |
| **5. Bills Payable** ... ... ... ... | | 7,374 |
| **6. Bills for Collection being Bills Receivable, as per contra:** | | |
| (i) Payable in India ... ... ... ... | 1,26,837 10 2 | |
| (ii) Payable outside India ... ... ... ... | 1,990 0 0 | 1,28,827 |
| **7. Other Liabilities** ... ... ... ... | | 1,64,910 |
| **8. Acceptances, Endorsements and Other Obligations, as per contra** ... ... | | Nil |
| **9. Profit & Loss:** | | |
| Profit as per last Balance Sheet ... ... ... ... | 37,118 14 5 | |
| *Less:* Appropriations— | | |
| To Investment Reserve ... ... ... Rs. 2,500 0 0 | | |
| „ Dividend at 3½% free of Income Tax ... ... Rs. 30,982 5 10 | | |
| „ Provision for income-tax ... ... Rs. 3,500 0 0 | 36,982 5 10 | |
| Balance Brought forward ... ... ... ... | 136 8 7 | |
| *Add:* Profit for the year brought from the Profit & Loss Account ... ... | 91,680 6 7 | |
| | 91,816 15 2 | |
| *Less:* Placed to:— | | |
| Statutory Reserve Fund under Section 17 of the Banking Companies Act ... | 20,000 0 0 | 71,316 |
| **10. Contingent Liabilities** ... ... ... ... | Nil | |
| **Total** ... | | 1,00,48,32 |

Office of The Vijaya Bank, Ltd., Mangalore. Date, 1—3—1957.

(Sd.) K. B SHETTY, „ B. M HEGDE, „ M. SUNDER RAMA SHETTY — (Sd.) K. T. ALVA, „ K. C. ALVA — (Sd.) M. G. GANESHNARAYANA RAI, „ K. P. B. SHETTY — Dl

## PROFIT AND LOSS ACCOUNT FOR

| EXPENDITURE | Rs. |
|---|---|
| 1. Interest paid on deposits, borrowing etc. ... ... ... ... ... | 2,36,463 |
| 2. Salaries & allowances and Provident Fund (Secretary's salary and allowances Rs. 2,940/-) ... ... | 1,12,034 |
| 3. Directors' and Local Committee Members' fees and allowances... ... ... ... | 1,992 |
| 4. Rent, Taxes, Insurance, Lighting etc. ... ... ... ... ... | 12,599 |
| 5. Law Charges ... ... ... ... ... ... | 187 |
| 6. Postage, Telegrams and Stamps ... ... ... ... ... | 3,243 |
| 7. Auditor's fees and Travelling expenses ... ... ... ... ... | 1,150 |
| 8. Depreciation on and repairs to Banking Company's Property ... ... ... ... | 9,585 |
| 9. Stationery, Printing Advertisement etc ... ... ... ... ... | 10,864 |
| 10. Less from the sale of or dealing with non-banking assets ... ... ... ... | Nil |
| 11. Other Expenditure ... ... ... ... ... | 7,942 |
| 12. Balance of Profit ... ... ... ... ... | 91,680 |
| **Total** ... | 4,87,744 |

Office of the Vijaya Bank, Ltd., Mangalore. Date, 1—3—1957.

(Sd.) K. B. SHETTY, „ B. M. HEGDE, „ M. SUNDER RAMA SHETTY — (Sd.) K. T ALVA, „ K. C. ALVA — (Sd.) M. G. GANESHNARAYANA RAI, „ K. P. B. SHETTY — Dl

### AUDITOR'S REPORT TO THE

I have audited the annexed Balance Sheet of the Vijaya Bank, Ltd., as at 31st December 1956 and also the annexed Profit and Loss Acco was conducted by me, on the dates of audits at the branch offices. In accordance with the provisions of Section 29 of the Banking Companies Act, Sheet and Profit & Loss Account are not required to be and are not drawn up in accordance with the Sixth Schedule of the Companies Act 1956

## ...K, LIMITED,
## ...st DECEMBER, 1956.

| PROPERTY & ASSETS | Rs. As. Ps. | Rs. As Ps. |
|---|---|---|
| ...sh: | | |
| In hand and with Reserve Bank and State Bank ... ... ... | | 10,17,696 6 3 |
| ...ances with other Banks: | | |
| (i) In India— On Current A/c. ... ... ... ... | 2,99,252 5 5 | |
| On Fixed Deposits ... ... ... ... ... | 7,12,700 0 0 | |
| (ii) Outside India ... ... ... ... ... | Nil | 10,11,952 5 5 |
| ...ney at Call and Short Notice ... ... ... ... | | Nil |
| ...estment at Cost: | | |
| ...ecurities of the Central and State Governments and other Trustee Securities of the face value of Rs. 21,69,300/-, ...f which securities of the face value of Rs. 3,10,000/- lodged with Bankers for loan and clearing facilities ... | 21,58,550 5 0 | |
| Shares (iii) Debentures or Bonds (iv) Other Investments (v) Gold ... ... | Nil | 21,58,550 5 0 |
| ...vances: | | 52,93,390 11 2 |
| (Other than Bad & Doubtful Debts for which provision has been made to the satisfaction of the auditor) | | |
| LOANS, CASH, CREDITS, OVERDRAFTS ETC | | |
| In India ... ... ... ... ... | 49,53,554 6 5 | |
| Outside India ... ... ... ... ... | Nil | |
| BILLS DISCOUNTED & PURCHASED (excluding treasury bills of Central & State Governments) | | |
| Payable in India ... ... ... ... ... | 3,28,282 14 3 | |
| Payable outside India ... ... ... ... | 11,553 6 6 | |
| Particulars: | | |
| Debts considered good in respect of which the Banking company is fully secured ... .. | 46,01,624 4 0 | |
| Debts considered good for which the Banking Company holds no other security than the Debtors' personal security | 5,51,846 5 8 | |
| Debts considered good secured by the personal liabilities of one or more parties in addition to the personal security of the Debtors ... ... ... ... | 1,39,920 1 6 | |
| Debts considered Doubtful or Bad, not provided for ... ... ... | Nil | |
| Debts due by Directors or Officers of the Banking Company or any of them either severally or jointly with any other persons ... ... ... ... ... | 4,340 13 6 | |
| Debts due by Companies or Firms in which the Directors of the Banking Company are interested as Directors, Partners or Managing Agents, or in the case of Private Companies as Members ... ... | 72,804 13 0 | |
| Maximum total amount of advances,including temporary advances made at any time during the year to Directors or Managers or Officers of the Banking Company or any of them either severally or jointly with any other persons | 9,629 14 0 | |
| Maximum total amount of advances including temporary advances, granted during the year to the Companies or Firms in which the Directors of the Banking Company are interested as Directors, Partners, Managing Agents, or in the case of Private Companies as Members ... ... ... | 1,23,885 1 7 | |
| Due from Banking Companies... ... ... ... | Nil | |
| ...ls Receivable being Bills for Collection, as per contra: | | |
| Payable in India ... ... ... ... | 1,26,837 10 2 | |
| Payable outside India ... ... ... .... | 1,990 0 0 | 1,28,827 10 2 |
| ...nstituents' Liabilities for Acceptances, Endorsements and other obligations, as per contra | | Nil |
| ...emises at Cost ... ... ... ... | 1,56,873 10 9 | |
| *Add* additions ... ... ... ... ... | 879 2 0 | |
| | 1,57,752 12 9 | |
| *Less* depreciation ... ... ... ... ... | 11,902 1 1 | 1,45,850 11 8 |
| ...rniture and Fixtures at Cost ... ... ... ... | 74,232 7 1 | |
| *Less* Sale ... .. ... ... ... | 260 11 8 | |
| | 73,971 11 5 | |
| *Less* Loss on sale ... ... ... ... ... | 53 9 3 | |
| | 73,918 2 2 | |
| *Add* Additions during the year ... ... ... ... | 3,650 0 3 | |
| | 77,568 2 5 | |
| *Less* depreciation ... ... ... ... ... | 29,184 15 4 | 48,383 3 1 |
| ...her Assets: | | |
| Interest Receivable on Loans and Investments ... ... ... | 47,414 4 9 | |
| Stock of Printing and Stationery, Books and Stamps ... ... ... | 16,703 5 6 | |
| Advance payment of Income-tax ... ... ... ... | 20,776 12 0 | |
| Income-tax deducted at source ... ... ... ... | 12,643 6 0 | |
| Sundry advances receivable ... ... ... ... | 3,038 14 9 | |
| Telephone, Electric & Rent deposit and Rent Receivable ... ... ... | 4,245 11 0 | |
| Income-tax refund due ... ... ... ... | 8,591 2 0 | 1,13,413 8 0 |
| ...on-Banking Assets acquired in satisfaction of claims: | | |
| Land and Building at Cost and / or estimated realisable value ... ... ... | | 1,30,256 6 7 |
| Total ... | | 1,00,48,321 3 4 |

(Sd.) P. J. Shetty, *Superintendent.* (Sd.) B. Mahabala Shetty, *Secretary.* (Sd.) K. Sunder Rama Shetty, *Chairman.*

## YEAR ENDED 31ST DECEMBER 1956.

| INCOME | Rs As. Ps |
|---|---|
| ...ess provision made during the year for bad and doubtful debts and other usual or necessary provisions). | |
| Interest and Discount ... ... ... ... ... | 4,41,471 6 7 |
| Commission, Exchange and Brokerage ... ... ... ... ... | 23,463 14 5 |
| Rents ... ... ... ... ... ... | 4,208 8 0 |
| Net Profit on sale of Investments, gold and silver, land, premises and other assets (not credited to reserves, or any particular fund or account) ... ... ... ... ... | 36 1 3 |
| Net Profit on revaluation of Investments, gold and silver, land-premises and other assets ... ... | Nil |
| Income from Non-banking assets, and profit from sale or dealing with such assets ... ... ... | 160 0 0 |
| Other Receipts ... ... ... ... ... | 18,404 1 9 |
| Total ... | 4,87,744 0 0 |

(Sd.) P. J. Shetty, *Superintendent.* (Sd.) B. Mahabala Shetty, *Secretary.* (Sd.) K. Sunder Rama Shetty, *Chairman.*

...RS OF THE VIJAYA BANK, LTD.

...ended on that date in which are incorporated the returns of all the Branches audited by me. The verification of cash and securities at the branches ...the provisions to sub-sections (1) and (2) of Section 211 and sub-section (5) of Section 211 and Section 227 (5) of the Companies Act, 1956. the Balance ...s, therefore, drawn up in conformity with Forms A and B of the Third Schedule to the Banking Companies Act, 1949. I report that: *(a)* I have

## ಚುಟುಕು ಸುದ್ದಿಗಳು

(೫ನೇ ಪುಟದಿಂದ)

ಗಳ ವರೆಗೆ ವಿಸರ್ಜಿಸಿರುವುದಾಗಿ ಅರಸ ಹುಸ್ನೇನ್ ಘೋಷಿಸಿದ್ದಾರೆ. ರಕ್ಷಣಾ ಅಮೆರಿಕದ ಒನೆ ಯುದ್ಧ ನೌಕೆಯ ಜಲ ನೆಗೂ ಜೋರ್ಡಾನ್ ಗಲಭೆಗೂ ಸಂಬಂಧವನ್ನು ಕಲ್ಪಿಸಿ ದೂರಿದೆ. ಆದರೆ, ಅಮೆರಿಕವು ತಾನು ಸಂಧಾವಿತನೆಂದೇ ತಿಳಿದು ಕೊಂಡಂತಿದೆ. ಜೋರ್ಡಾನಿನ ಈ ಬದಲಾವಣೆಯೇ ಕಾರಣವಾಗಿ ಸೌದಿ ಅರೇಬಿಯಾ, ಈಜಿಪ್ಟ್ ಮತ್ತು ಸಿರಿಯಾದ ರಾಷ್ಟ್ರಾಧಿಕಾರಿಗಳು ಪರಸ್ಪರ ವಿಚಾರ ವಿನಿಮಯವನ್ನು ಮಾಡಿ ಅರಸ ಹುಸ್ನೇನರಲ್ಲಿಗೆ ಒಂದು ಪ್ರತಿನಿಧಿ ಮಂಡಲವನ್ನು ಸಿರಿಯದ ಅಧ್ಯಕ್ಷ ಕ್ವಾಟ್ಲಿಯವರೊಂದಿಗೆ ಕಳಿಸಿರುತ್ತಾರೆ.

**ಬರ್ಮಾ ದೇಶದ**— ಭಾರತೀಯ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ. ಎನ್. ಆರ್. ಬರ್ಜೋರ್ಜಿಯವರು ಬರ್ಮಾದಲ್ಲಿರುವ ಭಾರತೀಯರ ಯೋಗ ಕ್ಷೇಮಗಳನ್ನು ಯೋಗ್ಯ ರೀತಿಯಲ್ಲಿ ಬರ್ಮಾ ಸರಕಾರವು ನೋಡಿಕೊಳ್ಳಬೇಕೆಂದು ಕೇಳಿ ಕೊಂಡಿರುವರು. ಇದಕ್ಕಾಗಿ ಸದರಿ ಸರಕಾರಿ ಧೋರಣೆಯಲ್ಲಿ ಸ್ವಲ್ಪ ವ್ಯತ್ಯಸ್ಥ ವಿಧಾನವನ್ನು ಅನುಸರಿಸಬೇಕಾಗಿದೆ ಎಂದು ತಿಳಿಸಿರುವರು.

**ಸುಯೇಜ್ ಕಾಲುವೆಯ**

ಉಪಯೋಗದ ಬಗ್ಗೆ ಈಜಿಪ್ಟ್‌ನ ಅಧ್ಯಕ್ಷ ನಸ್ಸೇರರು ಮುಂದಿಟ್ಟ ಶರ್ತಗಳನ್ನು ಪ್ರಭಲ ವಿರೋಧಿ ಫ್ರಾನ್ಸ್‌ಒಪ್ಪುವುದರಲ್ಲಿ ಯಾವ ನಿರ್ಧಾರವಾಗಿಲ್ಲವಾದರೂ, ವ್ಯಾಪಾರೀ ರಾಷ್ಟ್ರ ಬ್ರಿಟನ್ ಹಾಗೂ ಅಮೆರಿಕಾಗಳು ಸದ್ಯದಲ್ಲಯೇ ನಿಷೇಧ ಪೂರ್ವಕವಾಗಿ ಒಪ್ಪುವುದು ಸಾಧ್ಯವಿದೆ. ಅಂತೂ ಬಂಡವಳಗಾರರ ಆಟೋಪಗಳು ಕಾಲಕ್ರಮೇಣ ಮುಗಿಯುತ್ತಾ ಬರುತ್ತಿದೆಯೆನ್ನಬಹುದು.

**ಪಾಕಿಸ್ತಾನ** ಮತ್ತು ಭಾರತದೊಳಗಿರುವ ನದೀನೀರಿನ ಉಪಯೋಗದ ವಿಷಯದಲ್ಲಿ ನಡೆದ ಮಾತುಕತೆಗಳು ಅಸಫಲವಾಗುವನೀರೀಕ್ಷೆಯೇ ಹೆಚ್ಚು. ಭಾರತವು ನ್ಯಾಯವಾಗಿ ತನಗೆ ಕೊಂದರೆಯಾಗುವುದಾದರೂ, ಮಧ್ಯೂರು ನದಿಗಳ ನೀರನ್ನು ಪಾಕಿಸ್ತಾನಕ್ಕೆ ಒಯ್ಯಲು ಒಪ್ಪಿತು. ಆದರೆ,ಪಾಕಿಸ್ತಾನವು ಮತ್ತೂ ಹೆಚ್ಚಿನದನ್ನುಆಪೇಕ್ಷಿಸುತ್ತದೆ.

**ಭಾರತ ಪ್ರಥಮ ಸ್ವಾತಂತ್ರ್ಯ ಸಮರದ** ಶತಮಾನೋತ್ಸವವನ್ನು ವಿಜೃಂಭಣೆಯಿಂದ ನೆರವೇರಿಸುವುದಕ್ಕೆ ಭಾರತದಾದ್ಯಂತದಲ್ಲಿ ತಕ್ಕ ಏರ್ಪಾಡುಗಳಾಗುತ್ತಲಿವೆ. ೧೮೫೭ರಲ್ಲಿ ಭಾರತದಲ್ಲಿ ಪ್ರಪ್ರಥಮವಾಗಿ ಬ್ರಿಟಿಷ ಆಡಳಿತೆಯ ವಿರುದ್ಧವಾಗಿ ಜನತೆಯು ದಂಗೆಯೆದ್ದಿತು.

'NAVAYUGA' WEEKLY is in the list of periodicals and Newspapers approved for use in Secondary Schools as per proceedings Roc. No. 466 N/50 date 2-12-1950 of the Directors of public Instruction Madras.



ಅಣುಶಕ್ತಿಯನ್ನು ವಿಶ್ವವಿಘಾತಕ ಕಾರ್ಯಗಳಲ್ಲಿ ಬಳಸದೆ ಜಗತ್ತಿನ ಶಾಂತಿಗಾಗಿ ಉಪಯೋಗಿಸಬೇಕು. ಪ್ರೊ ಜೋಲಿರವರು ಈ ಉದ್ದೇಶಕ್ಕಾಗಿ ಮುದಿಮೆ ಶಾಂತಿಕಾರ್ಯಕ್ಕೆ ಅಣು ಶಕ್ತಿಯನ್ನು ಪಯೋಗಿಸಿ ಈ ವಿಷಯದ ನೋಬೆಲ್ ಎಂಬ ಬಹುಮತಿಯ ಬಹುಮಾನವನ್ನು ಪ್ರಸಿದ್ಧವಾಗಿ ಪಡೆದಿದ್ದಾರೆ. ಇವರು ಫ್ರೆಂಚಿನ ಜನಾಂಗಕ್ಕೆ ಸೇರಿದ್ದು, ಗಣಿತಶಾಸ್ತ್ರ ಭೌತ ಶಾಸ್ತ್ರದಲ್ಲಿಯೂ ಇಂತಹುದೇ ಬಹುಮಾನವನ್ನು ಪಡೆದಿರುವರು. ಜಗತ್ತಿನ ಇತರ ವಿಜ್ಞಾನಿಗಳೂ ಇವರ ಮಾರ್ಗದಲ್ಲಿ ಮುನ್ನ ಡೆಯುವರೆ?

## ಉಡುಪಿ

**ಎಮ್. ಜಿ. ಎಮ್. ಕಾಲೇಜ್ ಟ್ರಸ್ಟಿನ ಸಭೆಯು**- ಶ್ರೀ ಕೊಚ್ಚಿಕಾರ್ ಪದ್ಮನಾಭ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಮೂರು ವರ್ಷಗಳ ಬಿ. ಕಾಂ ಮತ್ತು ಬಿ. ಎಸ್. ಸಿ. ಡಿಗ್ರಿ ಕೋರ್ಸುಗಳನ್ನು ಮುಂದಿನ ಶಾಲಾ ವರ್ಷದಲ್ಲಿ ಆರಂಭಿಸುವ ಕುರಿತು ಆಲೋಚಿಸಲಾಯಿತು. ಶ್ರೀ ವೈ. ಸುಂಜಯ್ಯ ಸೆಟ್ಟಿ ಎಮ್. ಎಲ್. ಎ., ಕರೆಸ್ಪಾಂಡೆಂಟ್ ಶ್ರೀ ಟಿ. ಎ. ಪೈ ಮತ್ತು ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರರಾಯರು ತಂತಮ್ಮ ಅಭಿಪ್ರಾಯಗಳನ್ನಿತ್ತರು. ಮೈಸೂರು ಸರಕಾರವು ವಿದ್ಯಾಲಯದ ಆಂಗೀಕಾರದ ಪ್ರಕ್ರಿಯೆಯನ್ನು ನಿರ್ಣಯಿಸದೆ ಹೋದಲ್ಲಿ ಹೊಸ ದರ್ಜೆಗಳನ್ನು ನುಮ್ರಾಸು ಯೂನಿವರ್ಸಿಟಿಗೆನೇ ಸೇರಿಸುವುದೆಂದು ನಿರ್ಣಯವಾಯಿತು.

**ಮೈಸೂರು ಕೈಗಾರಿಕಾ ಕಾರ್ಯದರ್ಶಿ**- ಶ್ರೀ ವಾಸುದೇವರಾಯರು ಮತ್ತೆ ಹುರಿಹಗ್ಗ ಸಹಕಾರಿ ಸಂಘದ ಡೈರೆಕ್ಟರರ ಸಭೆಯಲ್ಲಿಹಾಜರಿದ್ದು ಸಂಘಕ್ಕೆ ಸರಕಾರದಿಂದ ಕಕ್ಕಿಸಿರುವ ಸಹಾಯ ನೀಡುವುದಾಗಿ ಆಶ್ವಾಸನೆಯಿತ್ತರು. ಶ್ರೀ. ಟಿ. ಎ. ಪೈಗಳು ಸಭಾಧ್ಯಕ್ಷತೆ ವಹಿಸಿದ್ದರು.

**ಉಪನ್ಯಾಸಗಳು**-ಬೆಂಗಳೂರು ಥಿಯೊಸಫಿ ಲೆಕ್ಚರರ್ ಶ್ರೀ ಎಸ್. ಕೃಷ್ಣಮೂರ್ತಿಯವರು ಶ್ರೀ ಕೃಷ್ಣ ಮತ್ತವ ವಸಂತ ಮಹಲಿಕ್ಷಿ, ಮಾನವ ಜೀವನದಲ್ಲಿ 'ಕರ್ಮ' ಎಂಬೀ ವಿಷಯದ ಮೇಲೆ ಭಾಷಣವಿತ್ತರು. ಶ್ರೀ ಭವಾನಿಶಂಕರ ರಾಯರು ಉಪನ್ಯಾಸಕರ ಪರಿಚಯವಿತ್ತಕ ಮಾತುಗಳನ್ನಾಡಿದರು. ಸಭಾಧ್ಯಕ್ಷತೆ ವಹಿಸಿದ ಅದಮಾರು ಮಠದ ಶ್ರೀ ವಿಬುಧೇಶ ತೀರ್ಥ ಸ್ವಾಮಿಗಳವರು ಉಪನ್ಯಾಸಕರಿಗೆ ಉಚಿತ ವಿಳ್ಯ ಪಾತ್ರೆಯನ್ನು ಸಂಭಾವನೆಯಿತ್ತು ಗೌರವಿಸಿದರು ಮುನಿಸಿಪಲ್ ಕೌನ್ಸಿಲರ್ ಶ್ರೀ ಸೀತಾರಾಮ ಕಾಮತರು ಧನ್ಯವಾದಗಳನ್ನಿತ್ತರು.

ಶ್ರೀ ನರಸೀಂಹ ಕಲಾಸಂದಿರದಲ್ಲಿ ಶ್ರೀ ಕೃಷ್ಣಮೂರ್ತಿಯವರು ಗೀತೆಯ ಸಂದೇಶದ ಕುರಿತು ಉಪನ್ಯಾಸವಿತ್ತರು. ಪ್ರಿನ್ಸಿ ಪಾಲ್ ಶ್ರೀ ಎಚ್. ಸುಂದರರಾಯರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀ ಕೊಚ್ಚಿಕಾರ್ ವರದರಾಯ ಪೈಗಳು ಸ್ವಾಗತ ಭಾಷಣ ಮಾಡುತ್ತಾ ಅತಿಥಿಗಳ ಪರಿಚಯಮಾಡಿಕೊಟ್ಟರು.

**ಮೈಸೂರು ಡಿವಿಜನಲ್ ಕಮಿಷನರ್**—ಶ್ರೀ ಕೆ. ಶೇಷಗಿರಿರಾಯರು ಕಳತಾ 24ರಲ್ಲು ಉಡುಪಿ ತಾಲೂಕು ಕಚೇ ಇನ್ಸ್‌ಪೆಕ್ಷನ್ ನಡೆಸಿದರು. ನಂತರ ಉಡು ನಗರಸಭೆಗೂ ಸಂದರ್ಶನವಿತ್ತರು.

**ಮುನಿಸಿಪಲ್ ಕೌನ್ಸಿಲು ಸಭೆಯ** ತಾ. 29ರಲ್ಲು ಸಂಜೆ ವೈಸ್ ಚೇರ್‌ಮನ್ ಶ್ರೀ ಪಿ. ವಿ. ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಸಂಬ್ರಲ್ ಮತ್ತು ಸ್ಟೇಟ್ ಸರಕಾರದಿಂದ ಸೇಕಡಾ 25ರಂತೆ ಧನ ಸಹಾಯಪಡು ಉಳಿದ ಸೇಕಡಾ 50ರಷ್ಟು ಸರಕಾರಿ ಸಾಲ ಪಡೆದು ನಗರದಲ್ಲಿ ಸ್ವೀವೆಂಜರ್ ಜನತೆಗಾಗಿ 80 ಮನೆಗಳನ್ನು ಕಟ್ಟಿಸುವ ಕಾರ್ಯಕ್ಕೆ ಕೌನ್ಸಿಲಿನ ಅಂಗೀಕಾರ ದೊರೆಯಿತು. ಮುನಿಸಿಪಲ್ ನೌಕರರಿಗೆ 1957.58ನೆ ವರ್ಷದಲ್ಲಿ ಮನೆ ಬಾಡಿಗೆ ಕೊಡಲು ಸಭೆಯು ಒಪ್ಪಿಗೆಕೊಟ್ಟಿತು. ಮುನಿಸಿಪಲ್ ನೌಕರರ ಪ್ರೊವಿಡೆಂಟ್ ಫಂಡಿನ ಮೇಲೆ ಸೇಡಾ 3ಷ್ಟರದಲ್ಲಿ ಬಡ್ಡಿಕೊಡಬಹುದೆಂದು ಯಿತು.

ಹೆರಿಗೆ ಮತ್ತು ಮಕ್ಕಳ ಆರೋಗ್ಯ ಕೇಂದ್ರವೊಂದನ್ನು ಉಡುಪಿಯಲ್ಲಿ ತೆರೆಯುವಂತೆ ಮೈಸೂರು ಸರಕಾರದ ಪಬ್ಲಿಕ್ ಹೆಲ್ತ್ ಡ್ಯಾಕ್ಟರರನ್ನು ವಿನಂತಿಸುವ ನಿರ್ಣಯವಾಯಿತು. ಮುನಿಸಿಪಲ್ ಸೆನಿಟರಿ ನೌಕರರಿಗೆ ಯೂನಿಫಾರ್ಮ್ ಡ್ರೆಸ್ಸಿಗಾಗಿ ರೂ. 250/- ಸೆಂಕ್ಷನ್ ಮಾಡಲಾಯಿತು. 'ದಿ. ವಿಠಲ ಕಾಮತ್ ಮೆಮೋರಿಯಲ್' ಕಟ್ಟಡದಲ್ಲಿ ಫೋಕಲ್ ಲಾಬ್ರೆರಿ ಅಥಾರಿಟಿಯ ಶಾಖೆಯೊಂದನ್ನು ಹಿರಿಯರ ಮತ್ತು ಮಕ್ಕಳ ಉಪಯೋಗಕ್ಕಾಗಿ ತೆರೆಯುವ ಕುರಿತು ಜೆ.ಎಲ್. ಎಲ್. ಎ. ಚೇರ್‌ಮೆನರೊಡನೆ ಪತ್ರವ್ಯವಹಾರ ನಡೆಸಲು ಕೌನ್ಸಿಲಿನ ಚೇರ್‌ಮೆನರಿಗೆ ಅಧಿಕಾರವೀಯಲಾಯಿತು. ರಥದಬೀದಿ ಜಗ್ಗಂಡಿ ದುರಸ್ತಿಗಾಗಿ ರೂ 1500/- ಸೆಂಕ್ಷನ್ ನೂಡಬೇಕೆನ್ನುವ ಡಾ ಪಿ ಜೆ. ಆಚಾರ್ಯರ ನಿರ್ಣಯವು ಪಾಸಾಯಿತು.

**ದೇಲಂಪಾಡಿ**— ಲನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ನಾಟಕ ಮಂದಿರದಲ್ಲಿ ಕಳದ ತಾ 25ರಲ್ಲು ರಾತ್ರೆ 'ಸಂಪೂರ್ಣ ರಾಮಾಯಣ' ಎಂಬ ಯಕ್ಷಗಾನ ನಾಟಕವು ಶ್ರೀ ಕೇರಿಕ್ಕಾಡು ಮಾಸ್ತರ್ ವಿಷ್ಣು ಭಟ್ಟರ ನಿರ್ದೇಶನದಿಂದ ಹಾಗೂ ನಟನಾ ಕುಶಲಿಗಳ ಕೂಪುವಿಕೆಯಿಂದ ಯಶಸ್ವಿಯಾಗಿ ಜರಗಿತು.

## ಸಹೃದಯರಾದ ನಮ್ಮ ಚಂದಾದಾರರಲ್ಲಿ ಅರಿಕೆ

ನಮ್ಮ ವಿನಂತಿಯನ್ನು ಮನ್ನಿಸಿ ಕೆಲವು ಚಂದಾದಾರರು ತಮ್ಮ ಬಾಕಿಯನ್ನು ಕಳಿಸಿಕೊಟ್ಟಿದ್ದಾರೆ; ಇನ್ನು ಕೆಲವರು ಇಂತಿಷ್ಟು ಸಮಯದೊಳಗೆ ಪಾವತಿ ಮಾಡುವುದಾಗಿ ತಿಳಿಸಿದ್ದಾರೆ; ಮತ್ತೆ ಕೆಲವರು ಬಾಕಿ ಚಂದಾಹಣಕ್ಕೆ ಪತ್ರಿಕೆಯನ್ನು ವಿ. ಪಿ. ಮಾಡಿರೆಂದು ಸೂಚಿಸಿದ್ದಾರೆ. ಅವರೆಲ್ಲರಿಗೂ ವಂದನೆಗಳನ್ನು ಅರ್ಪಿಸುತ್ತೇವೆ

ಉಳಿದ ಮಹನೀಯರೂ ಸ್ವಲ್ಪ ಉದಾರಬುದ್ಧಿಯಿಂದ ಬಾಕಿ ಚಂದಾಹಣವನ್ನು ಕಳಿಸಿಕೊಡುವಂತೆ ನಿನೇದಿಸಿಕೊಳ್ಳುತ್ತೇವೆ.

ಈಗ ವೃತ್ತ ಪತ್ರಿಕೆಗಳಿಗೆ ಉಸಯೋಗಿಸುವ ಕಾಗದದ ಬೆಲೆ ಸುಮಾರು ಕಾಲಂಶ ಹೆಚ್ಚಿದೆ; 'ನಯಾಪೈಸೆಯ' ದೆಸೆಯಿಂದ ಅಂಚೆ ದರವೂ ವಿರಿದೆ. ಇದನ್ನೆಲ್ಲಾ ನಮ್ಮ ಚಂದಾದಾರರು ಮನಗಂಡು ನಮಗೊಂದು ಸಹಾಯ, ಪ್ರೋತ್ಸಾಹವೆಂದಾದರೂ ತಮ್ಮ ತಮ್ಮ ಬಾಕಿಯನ್ನು ಸಾಧ್ಯನಾದಷ್ಟು ಬೇಗನೆ ಕಳಿಸಿಕೊಡುವ ದೊಡ್ಡ ಮನಸ್ಸು ಮಾಡಿದರೆ ನಮ್ಮ ಹೊಸೆ ಸುಮಾರು ಕಡಿಮೆಯಾಗುವುದು.

ಪತ್ರಿಕೆಯನ್ನು ವಿ. ಪಿ. ಮೂಲಕ ಕಳಿಸಿದರೆ ಸುಮಾರು ಹನ್ನೆರಡಾಣೆ ಹೆಚ್ಚಿಗೆ ಬೀಳುತ್ತದೆ. ಚಂದಾಹಣವನ್ನು ಮನಿಯಾರ್ಡರುಮಾಡುವುದರಿಂದ ಈ ಖರ್ಚನ್ನು ಉಳಿಸಬಹುದು.

ಅಂತೂ ಮೇ 7ರಾ8 ನೇ ತಾರೀಕಿನೋಗಾದರೂ ನಮಗೆ ಚಂದಾ ಪಾವತಿಯಾಗದಿದ್ದರೆ, ವಿ. ಪಿ. ಮಾಡಲಿಕ್ಕೆ ನಮ್ಮ ಒಪ್ಪಿಗೆಯೆಂದು ಭಾವಿಸಿ ಮುಂದಿನ ಸಂಚಿಕೆಯನ್ನು ವಿ. ಪಿ.ಯಿಂದ ಕಳಿಸುತ್ತೇವೆ. ಅನನ್ನು ದಯವಾಡಿ ಪಡಕೊಂಡು ಸಹಕರಿಸಬೇಕಾಗಿ ಬಿನ್ನವಿಸುತ್ತೇವೆ.

ನವಯುಗವು ನಿಮ್ಮದೇ ಪತ್ರಿಕೆ—ಅದಕ್ಕೆ ನಿಮ್ಮ ಪ್ರೋತ್ಸಾಹವಿರಲಿ.

**ಮೆನೇಜರ್.**

## ಮಂಗಳೂರು

**ವಾರ್ಷಿಕೋತ್ಸವ** — ಕೊಡಿಯಾಲ ಬು ಸರಕಾರೀ ಹರಿಜನ ವೆಲ್‌ಫೇರ್ ಶಾಲೆ ವಾರ್ಷಿಕೋತ್ಸವವು ಈಚೆಗೆ ತಾ. 23 ಶ್ರೀ ಕೆ. ಆರ್. ಆಚಾರ್, ಎಮ್. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮೈಕೋಣಾಧ್ಯಾಯಿನಿ ಕುಮಾರಿ ಎ. ಲಲಿ ಜಾರವರು ಸ್ವಾಗತಿಸಿ ವರದಿಯನ್ನೊಪ್ಪಿದರು. ಜಿಲ್ಲಾ ಹರಿಜನ ವೆಲ್‌ಫೇರ್ ಅಧಿಕಾರಿ ಶ್ರೀ ಕೆ. ದೇವೇಂದ್ರ, ಶ್ರೀ ಗಣೇಶ್ ಮುನಿಸಿಪಲ್ ಸದಸ್ಯ ಶ್ರೀ ಎಸ್. ಶಾಲ ಶಾಲೆನ್ನರು ಕಾರ್ಯೋಚಿತ ಭಾಷಣ ರು. ಅಧ್ಯಕ್ಷರ ಭಾಷಣವಾಗಿ ವಿವಿಧ ವಿ ದಾವಳಿಗಳಾದುವು.

**ಹೋಸ್ಟೆಲ್ ದಿನಾಚರಣೆ**— ಕೊಡಿ ಲ ಬೈಲು ಕನಕವಾಸ ಸರಕಾರಿ ಹುಡು ರ ಹೋಸ್ಟೆಲ್ ದಿನಾಚರಣೆಯು ಈಚೆಗೆ 34ರಂದು ಹರಿಜನ ಸೇವಾ ಸಂಘದ ಕ್ಷೆ ಡಾ| ಯು. ಪಿ. ಮಲ್ಯರ ಅಧ್ಯಕ್ಷತೆ ಲ್ಲಿ ಜರಗಿತು. ಮಹಿಳಾ ಶ್ರೀಯೋಭಿವೃ ಅಧಿಕಾರಿ ಶ್ರೀಮತಿ ಇಂದಿರಾ ರಾವ್, ಗಳಾದ ಯು. ಮಂಜಪ್ಪ, ಎಮ್. ಎಲ್. ಕೆ. ದೇವೇಂದ್ರ, ಕಮಲಾಕ್ಷ, ಎಸ್. ಶಾಲ ಶಾಲೆನ್ನ ಮೊದಲಾದವರು ಸಂದ ರ್ಭೋಚಿತ ಮಾತುಗಳನ್ನಾಡಿದರು.

**ಮಿನುಗಾರಿಕೆ ಬಂದರುಗಳ ತ** ರು— ಜಾಗತಿಕ ಆಹಾರ ಸಂಸ್ಥೆಯ ಬಂ ರುಗಳ ತಜ್ಞರಾದ ಮಿ| ಸಿ. ಆರ್. ಬ್ಯೂಕ್ ಈಚೆಗೆ ತಾ 20ರಲ್ಲು ಮಂಗಳೂರಿಗೆ ಆಗ ಮಂಗಳೂರು ಮತ್ತು ಮಲ್ಪೆ ಬಂದರು ಗಳ ಮಿನುಗಾರಿಕೆಗಾಗಿ ಮಾಡಬಬಹುದಾದ ಸ್ಥಳಗಳ ಕುರಿತು ಪರಿಶೀಲನೆ ನಡೆಸಿದರು. ಸೂರು ಸರಕಾರದ ಪರು ಸಂಗೋಪನಾ ಳು ಪಶುವೈದ್ಯ ಖಾತೆಯ ಮತ್ತು ಮಿನು ಕೆಯ ಡೈರೆಕ್ಟರ್ ಶ್ರೀ ಕೆ. ಎಸ್. ಟ್ಟಿಕೊಡನೆ ಮಿ| ಬ್ಯೂಕರು ಮಂಗಳೂರು ತ್ತು ಮಲ್ಪೆ ಬಂದರುಗಳ ಪರಿಶೀಲನೆಯ ಂತು ವಿಚಾರ ವಿನಿಮಯ ನಡೆಸಿದರು.

**ದ. ಕ. ಜಿಲ್ಲಾ ಅಭಿವೃದ್ಧಿ ಯೋ ನೆ ಮಹಾ ಸಭೆಯು** — ಕಳೆದ , 21ರಲ್ಲು ಶ್ರೀ ವಿ. ಎಸ್. ಕುಡ್ವರ ಅಧ್ಯ ತೆಯಲ್ಲಿ ಜರಗಿತು. ವಾರ್ಷಿಕ ವರದಿ ಮತ್ತು ೃತ್ರಗಳು ಮಂಜೂರಾದುವು. ಅಜೀವ ಸ್ಯತನಕ್ಕೆ ರೂಪಾಯಿ 100/-, ವಾರ್ಷಿಕ , 5/- ಸದಸ್ಯತನ ಫಾಸಲಾಗಿ ನಿರ್ಣಯಿ ಯಿತು. ಹೊಸ ವರ್ಷದ ಅಧಿಕಾರಿಗಳಾಗಿ ೇಗಾದ ವಿ. ಎಸ್. ಕುಡ್ವ ಅಧ್ಯಕ್ಷರು; ಮ್. ಕೆ. ದೇವರಾಜ್ ಮತ್ತು ಕೊಡಿಯಾ ುತ್ತು ಕೃಷ್ಣ ಹೆಗ್ಡೆ, ಉಪಾಧ್ಯಕ್ಷರುಗಳು; ಬಿ. ಸೆಟ್ಟಿ ಮತ್ತು ಎಮ್. ಎಸ್. ನಿಕಾಂ ರಾಮ್, ಪ್ರಧಾನ ಕಾರ್ಯದರ್ಶಿಗಳು; ಶ್ವನಾಥ ಕಾಮತ್, ಕೋಶಾಧಿಕಾರಿಗ ಗಿ ಆರಿಸಲ್ಪಟ್ಟರು. ಕಾರ್ಯಕಾರೀ ಸಮಿತಿ ಸದಸ್ಯರನ್ನು ನೇಮಿಸಲು ಅಧ್ಯಕ್ಷರಿಗೆ ಧಿಕಾರವೀಯಲಾಯಿತು.

**ಭಾಷಣ** — ಮಂಗಳೂರು ರೋಟರಿ ಬ್ಬಿನ ಸಭೆಯು ಈಚೆಗೆ ತಾ. 25ರಲ್ಲು ಡಾ. ಎ. ಬೈಲೂರರ ಅಧ್ಯಕ್ಷತೆಯಲ್ಲಿ ಜರಗಿತು. ಯರ್ದರ್ಶಿ ಶ್ರೀ ಕೆ. ವಿಶ್ವನಾಥ ಕಾಮತರು ರದಿಯನ್ನೊಪ್ಪಿದರು. ಮಂಗಳೂರು ನಗರ ಆರೋಗ್ಯಾಧಿಕಾರಿ ಡಾ. ಎಚ್ ಎಸ್. ನಾ ಯರು 'ಆರೋಗ್ಯ ಶಿಕ್ಷಣ' ಎಂಬ ವಿಷ ಯದಲ್ಲಿ ಭಾಷಣವಿತ್ತರು.

**ಮುಖ್ಯ ಮಂತ್ರಿ ಶ್ರೀ ನಿಜಲಿಂಗ ನವರು**— ಮಲ್ಪೆಯಲ್ಲಿ ತಾ. 11ಮತ್ತು ರೆಲ್ಲು ಜರಗಲಿರುವ ಮಹಾ ಮೈಸೂರು ನಾಗಾರರ ಸಮ್ಮೇಳನವನ್ನು ಉದ್ಘಾಟಿಸ ಗಮಿಸುವರೆಂದು, ಸಮ್ಮೇಳನವ ಆಂಗವಾ ಏರ್ಪಡಿಸಲಾದ ಪ್ರದರ್ಶನವನ್ನು ಮಂತ್ರಿ ವೈಕುಂಠ ಬಾಳಿಗರು ತೆರೆಯಲಿರುವರು

**ಮಂತ್ರಿ ಶ್ರೀ ವೈಕುಂಠ ಬಾಳಿಗರು** ರಿಂದ ಏಂದುವರೆದ ತನಕ ಜಿಲ್ಲಾ ಪ್ರ ನವನ್ನು ಕೈಕೊಳ್ಳಲಿರುವರೆಂದು ತಿಳಿಯುಬ ತ್ತದೆ.

## ಎಲ್ಲೆಲ್ಲಿ ಏನೇನು?

**ಪರ್ಕಳ** — ಸ್ಥಳೀಯ ಬಾಲಕ ಮಿಶ ನ್ ಹಾ. ಎ ಶಾಲೆಗೆ ಸ್ಥಳೀಯ ಅಭಿವೃದ್ಧಿ ಯೋಜನೆಯ ಮೇರೆಗೆ ಹೊಸತಾಗಿ ಕಟ್ಟಿಸಿದ ಕಟ್ಟಡದ ಉದ್ಘಾಟನೆಯನ್ನು ಈಚೆಗೆ ತಾ. 23ರಂದು ಮೈಸೂರು ಡಿವಿಜನಲ್ ಕಮಿಶ ನರ್ ಶ್ರೀ ಕೆ. ಶೇಷಗಿರಿಂಗಯರು ನೆರವೇರಿ ದರು. ಶ್ರೀ ಟಿ. ಎ. ಪೈಗಳು ಸನ್ಮಾನದ ಧ್ಯಕ್ಷತೆ ವಹಿಸಿದ್ದರು. ಶಾಲಾ ಕಟ್ಟಡ ಸಮಿತಿ ಕಾರ್ಯದರ್ಶಿ ಶ್ರೀ ಬಿ. ರಂಗನಾಥ ಹೆಗ್ಡೆಯವರು ಸ್ವಾಗತಮಾತುಗಳನ್ನಾಡಿದರು. ಶ್ರೀ ರಾಜೀವ ಕೋಟ್ಯಾನರು ನಂದಿಯನ್ನೋ ದಿದರು. ಜಿಲ್ಲಾ ಕಲೆಕ್ಟರ್ ಶ್ರೀ ಎಚ್. ನರಸಿಂಹಸವರು ಗಾಂಧೀಜಿಯವರ ಭಾವ ಚಿತ್ರ ಅನಾವರಣಮಾಡಿದರು. ಕುಂದಾಪುರ ಸಬ್ ಕಲೆಕ್ಟರರು ಶ್ರೀ ರಾಘವ ಹೆಗ್ಡೆಯವ ರಿಂದ ಕೊಡಲ್ಪಟ್ಟ ಪಂಡಿತ ನೆಪರೂರವರ ಭಾವಚಿತ್ರ ಅನಾವರಣಮಾಡಿದರು.

ಮಣಿಪಾಲ ಹೈಸ್ಕೂಲ್ ಹೆಡ್‌ಮಾಸ್ಟರ್ ಶ್ರೀ ಬಿ. ಶ್ಯಾಮರಾಯ ಸೆಟ್ಟರು ಸಭಿಕರ ಪರವಾಗಿ ಕಾರ್ಯೋಚಿತನುಡಿಗಳನ್ನಾಡಿದರು.

ಕರ್ಕಳ ಅವಲಕ್ಕಿ ಸಹಕಾರಿಸಂಘದ ಸಭೆ ಯು ಶ್ರೀ ಟಿ. ಎ ಪೈಗಳ ಅಧ್ಯಕ್ಷತೆಯಲ್ಲಿ ಜ ರಗಿತು. ಭತ್ತವನ್ನು ಸಾಲರೂಪದಲ್ಲಿ ಪಡ ಕೊಂಡು ಮಳೆಗಾಲದ ನಂತರ ಭತ್ತವನ್ನೆ ಹಿಂದ ಕೊಡುವ ರರ್ತಿದ್ದ ಅವಲಕ್ಕಿ ಉ ತ್ಪಾದನೆಯನ್ನು ಹೆಚ್ಚಿಸಬೇಕೆಂದು ತೀರ್ಮಾನಿ ಸಲಾಯಿತು.

**ಕುಂದಾಪುರ**— ಸ್ಥಳೀಯ ಬೋರ್ಡು ಹೈಸ್ಕೂಲಿನ ಜಳಿ ನಿರ್ವಾಧಿ ಸಂಘದ ವಾ ರ್ಷಿಕೋತ್ಸವವು ತಾ. 26ರಲ್ಲು ಕುಂದಾಪುರ ದಿ. ಮುನ್ಸಿಫ್ ಶ್ರೀ ಎಚ್. ಎಲ್. ಸಾಲಿ ಯಾನ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಅಧ್ಯಕ್ಷ ಶ್ರೀ ವೈ. ಮಂಜಯ್ಯ ಸೆ ಟ್ಟಿ, ಎಮ್. ಎಲ್. ಎ ಅವರು ಸ್ವಾಗತ ಭಾ ಷಣ ಮಾಡಿದರು. ಹೊನ್ನಾವರದ ಸಿವಿಲ್ ಜ ಡ್ಜ್ ಮತ್ತು ಜುಡಿಶಿಯಲ್ ಫಸ್ಟ್ ಕ್ಲಾಸ್ ಮೆಜಿಸ್ಟ್ರೇಟ್ ಶ್ರಿ ವಿ. ಕೆ ಸೆಟ್ಟರು ಸಂಘದ ಸ್ವಸ್ತಿವಾಚನ ಮಾಡಿದರು. ಕುಂದಾಪುರ ಸರ ಕಾರಿ ಆಸ್ಪತ್ರೆಯ ಡಾ| ಪಿ. ಎಸ್. ಭಟ್ಟರು ಕಜೆ, ವೃತ್ತಿ ಕೈಗಾರಿಕೆ ವಸ್ತು ಪ್ರದರ್ಶನವ ನ್ನು ಉದ್ಘಾಟಿಸಿದರು.

**ಮಣಿಪಾಲ**— ಸ್ಥಳೀಯ ವಿವೇಕಾನಂದ ಪುಸ್ತಕ ಭಂಡಾರ ನುತ್ತು ಧರ್ಮಾರ್ಥ ವಾಚ ನಾಲಯದ ವಾರ್ಷಿಕೋತ್ಸವವು ತಾ. 31ರಲ್ಲು ಶ್ರೀ ಎಸ್. ಕೃಷ್ಣಮೂರ್ತಿಯವರ ಅಧ್ಯಕ್ಷತೆ ಯಲ್ಲಿ ಜರಗಿತು. ಸಭಾರಂಭದಲ್ಲಿ ಪುಸ್ತಕ ಭಂಡಾರ ಸ್ಥಾಪಕ ಹಾಗೂ ಅಧ್ಯಕ್ಷರಾಗಿದ್ದ ಶ್ರೀ ಉಪೇಂದ್ರ ಅನಂತ ಪೈಗಳ ನಿಧನಕ್ಕಾಗಿ ಸಂತಾಪಸೂಚಕ ನಿರ್ಣಯವು ಮೌನ ಪ್ರಾ ರ್ಥನೆಯೊಡನೆ ಅಂಗೀಕರಿಸಲಾಯಿತು. ಡಾ. ಟಿ. ಮಾಧವ ಪೈಗಳು ಸ್ವಾಗತಭಾಷಣಮಾಡಿ ದರು. ಕಾರ್ಯದರ್ಶಿ ಶ್ರೀ ರಾಘವೇಂದ್ರ ಎಸ್. ಕಿಣಿಯರು ವರದಿಯನ್ನೋದಿದರು. ಕರ್ನಾರ್ಡ್ ಮೆಡಿಕಲ್ ಕಾಲೇಜಿನ ಡಾ. ಕೆ. ಪಿ. ಪ್ರಭುಗಳು ಸ್ವಾಮಿ ವಿವೇಕಾನಂದರ ಭಾವಚಿತ್ರ ಅನಾವರಣಮಾಡಿದರು. ಶ್ರೀ ಟಿ ಎ. ಪೈಗಳು ಸಂದರ್ಭೋಚಿತ ಮಾತುಗಳ ನ್ನಾಡಿದರು. ಅಧ್ಯಕ್ಷ ಭಾಷಣಾನಂತರ ಶ್ರೀ ರಾಮದಾಸಕಿಣಿಯರು ಧನ್ಯವಾದಗಳನ್ನಿತ್ತರು. ಮಣಿಪಾಲ ಕೋಪರೇಟಿವ್ ಹೌಸಿಂಗ್ ಸೊಸೈಟಿ ಸಭೆಯು ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಸರಕಾರವು ಸಂಘ ಕ್ಕೆ ಕೊಡುವ ಸ್ಥಳದಲ್ಲಿ 32 ಎಕ್ರೆ ಸ್ಥಳ ವನ್ನು 120 ಮನೆ ಕಟ್ಟಿಸಲು ಉಪಯೋಗಿಸ ಬೇಕೆಂದೂ ಪ್ರಥಮ ದರ್ಜೆಯ ಮನೆಗಳಿಗೆ 40 ಸೆಂಟ್ಸ್, ದ್ವಿತೀಯ ದರ್ಜೆಗೆ 30 ಸೆ ಂಟ್ಸು ತೃತೀಯ ದರ್ಜೆಗೆ 20 ಸೆಂಟ್ಸು ಜಾಗಗಳ ಬೆಲ್ಲೆ ರೂ. 1000, 600 ಮತ್ತು 400ನ್ನು ಅನುಕ್ರಮವಾಗಿ ಸಭಕ್ಕ ರಿಂದ ವಸೂಲು ಮಾಡಬೇಕೆಂದು ನಿರ್ಣಯ ವಾಯಿತು. ಪ್ರಥಮ, ದ್ವಿತೀಯ ಮತ್ತು ತೃತೀಯ ದರ್ಜೆಯ 30, 40, 50 ಮನೆಗಳ ಬಗ್ಗೆ ಅರ್ಜಿ ಸ್ವೀಕರಿಸುವುದೆಂದಾಯಿತು.

**ಬೆಳ್ಳಂ**— ಇಲ್ಲಿಯ ಎಯಿಡೆಡ್ ಎಲಿ ಮೆಂಟರಿ ಶಾಲೆಯ ವರ್ಧಂತಿ ಸಮಾರಂಭವು ಶ್ರೀ ಟಿ. ಎ ಪೈಗಳ ಅಧ್ಯಕ್ಷತೆಯಲ್ಲಿ ಜರ ಗಿತು. ಶ್ರೀ ಸಂಜೀವ ಸೆಟ್ಟರು ಸ್ವಾಗತ ಮಾತುಗಳನ್ನಾಡಿದರು ಹೆಡ್‌ಮಾಸ್ಟರರು ವರದಿ ವಾಚನ ಮಾಡಿದರು. ಶ್ರೀ ಶಂಕರ ಸೆಟ್ಟರು ಸಂದೇಶಗಳನ್ನೋದಿದರು. ಶ್ರೀ ವಾಸುದೇವ ರಾಯರು ಸ್ವಸ್ತಿವಾಚನ ಮಾಡಿದರು. ಶ್ರೀ ಸುಕ್ರಿ ಪ್ರೇಮಾ ಎ. ಪೈಗಳು ಪಾರಿತೋಷ ಕಿಕರಣೆ ಮಾಡಿದರು. ಅಧ್ಯಕ್ಷ ಭಾಷಣ ವಂದನಾರ್ಪಣೆ, ಜನಗಣಮನದಿಂದ ಕಾರ್ಯ ಕ್ರಮಗಳಂದ ಸಸ್ಮಾರಂಭ ಕೊನೆಗೊಂಡಿತು.

**ವಿಣಗುಡ್ಡೆ**— ಸ್ಥಳೀಯ ಶ್ರೀ ದುರ್ಗಾ ಪರಮೇಶ್ವರಿ ಎಲಿಮೆಂಟರಿ ಶಾಲೆಯ ವಾರ್ಷಿ ಕೋತ್ಸವವು ತಾ. 20ರಲ್ಲು ಶ್ರೀ ಪಿ. ಗುರು ರಾಜ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಹೆಡ್‌ಮಾಸ್ಟರ್ ಶ್ರೀ ನಾರಾಯಣ ಭಟ್ಟರು ವರ ದಿ ವಾಚನ ಮಾಡಿದರು. ಶ್ರೀ ಗಿರಿಯ ಮಡಿ ವಾಳರು ಸ್ವಸ್ತಿವಾಚನ ಮಾಡಿದರು. ಶಾಲಾ ವ್ಯವಸ್ಥಾಪಕ ವಂದ್ಯಪ್ಪ ಹೆಗ್ಡೇರು ಧನ್ಯವಾದ ಗಳನ್ನರ್ಪಿಸಿದರು.

**ಪಡುಬೆಟ್ಟು**— ಇಲ್ಲಿಯ ಶ್ರೀ ಸ್ವಾಮಿ ನಿತ್ಯಾನಂದ ಎಜುಡೆಡ್ ಎಲಿಮೆಂಟರಿ ಶಾಲಾ ಹೊಸ ಕಟ್ಟಡ ಪ್ರವೇಶ ಸಮಾರಂಭವನ್ನು ಶ್ರೀ ಟಿ. ಎ. ಪೈಗಳು ತಾ. 21ರಲ್ಲು ನೆರವೇ ರಿಸಿದರು. ಉಡುಪಿ ತಹಶೀಲ್ದಾರ್ ಶ್ರೀ ಮ ಹಮ್ಮದ್ ಬ್ಯಾರಿಗಳು ಸಭಾಧ್ಯಕ್ಷತೆ ವಹಿಸಿ ದ್ದರು ಶ್ರೀ ಎ ಜೆ. ಆಳ್ವೆಯವರು ಶ್ರೀ ಸ್ವಾ ಮಿ ನಿತ್ಯಾನಂದೇಯವರ ತೈಲಚಿತ್ರ ಅನಾ ವರಣಮಾಡಿದರು ಆರಂಭದಲ್ಲಿ ಶ್ರೀ ಪಿ. ಗೋವಿಂದ ನಾಯ್ಕರು ಸ್ವಾಗತಭಾಷಣಮಾಡಿ ದರು. ಪಶೇಲ್ ಶ್ರೀ ವಿ. ಗೋವಿಂದರಾಜ ಹೆಗ್ಡೆಯವರು ಶಾಲಾ ನಿಧಿಗೆ ಊರವರ ಸಹ ಕಾರವನ್ನು ಬಯಸಿ ಮಾತನಾಡಿದರು. ಆದೇ ದಿನದ ಶಾಲೆಯ ವರ್ಧಂತ್ಯುತ್ಸವವು ಹಿರಿಯ ಡಕ ಲೀಜಾಯತ ಬೋರ್ಡಿನ ಅಧ್ಯಕ್ಷ ಶ್ರೀ ಎ. ಜಗಜ್ಜೀವನ ಹೆಗ್ಡೆಯವರ ಅಧ್ಯಕ್ಷತೆಯ ಲ್ಲಿ ಜರಗಿ ವಿವಿಧ ಕಾರ್ಯಕ್ರಮಗಳಾದುವು.

**ಮಂಜೇಶ್ವರ**— ಸ್ಥಳೀಯ ರಿಕ್ರಿಯೇ ಶನ್ ಕ್ಲಬ್ಬಿನ ಆಶ್ರಯದಲ್ಲಿ ತಾ 25ರಲ್ಲಿ ಡಾ. ಎ. ಸುಬ್ಬರಾಯರ ಅಧ್ಯಕ್ಷತೆಯಲ್ಲಿ ಶ್ರೀ ಎಮ್. ನರಸಿಂಹ ಕಾಮತರಿಗೆ ಸತ್ಕಾರ ಕೂಟವಿತ್ತು. ಗಾರವಿಸಲಾಯಿತು. ಸಭಕರ ಭಾಷಣ ಇತ್ಯಾದಿಗಳಾಗಿ ಸಮ್ಮಾನಪತ್ರವು ಶ್ರೀ ಪಿ ರಾಮಚಂದ್ರರಾಯರ ಧನ್ಯವಾದಾರ್ಪಣೆ ಯೊಂದಿಗೆ ಕೊನೆಗೊಂಡಿತು.

**ಹಿಲಿಯಾಣ**— ಸ್ಥಳೀಯ ಬೋರ್ಡು ಎಲಿಮೆಂಟರಿ ಶಾಲಾ ವಾರ್ಷಿಕೋತ್ಸವವು ತಾ 20ರಲ್ಲು ಶ್ರೀ ಎಮ್. ಎಮ್. ಹೆಗ್ಡೆ ಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಚ್ ದಿವಾಕರ ಸೂಡರವರು ಸ್ವಾಗತ ಭಾ ಷಣ ನ್ಮಾಡಿದರು. ವರದಿ ಹಾ.ಜನ್ಮೆ, ಜನ ಮನೆರಂಜನ ಕಾರ್ಯಕ್ರಮಗಳಾಗಿ ಸಮಾ ರಂಭ ಮುಕ್ತಾಯವಾಯಿತು.

**ಕಕ್ಕುಂಜೆ**— ಸ್ಥಳೀಯ ಹಿಂದೂ ಎಲಿ ಮೆಂಟರಿ ಶಾಲೆಯು ಹೊಸ ಕಟ್ಟಿಡವ ಉದ್ಘಾ ಟನೆಯನ್ನು ತಾ. 26ರಲ್ಲು ಶ್ರೀ ಟಿ. ಎ. ಪೈ ಗಳು ನೆರವೇರಿಸಿದರು. ಸಬ್ ಕಲೆಕ್ಟರ್ ಶ್ರೀ ಕೆ. ಸೂರ್ಯನಾರಾಯಣರಾಯರು ಸಭಾಧ್ಯಾ ಕ್ಷತೆವಹಿಸಿದ್ದರು. ಶ್ರೀಮತಿ ಪ್ರೇಮಾ ಎ. ಪೈಗಳು ಕ್ರೀಡಾರಂಗನನ್ನು ಉದ್ಘಾಟಿಸಿದರು. ಶ್ರೀ ಸದಾಶಿವ ಸೆಟ್ಟರು ಸ್ವಾಗತನುಡಿಗಳಿಗ ನ್ನಾಡಿದರು. ಶ್ರೀ ಟಿ. ಶೀನಪ್ಪ ಹೆಗ್ಡೆರು ಗಾಂಧಿಜೀ ಭಾವಚಿತ್ರ ಅನಾವರಣಮಾಡಿದರು. ಶ್ರೀಗಳಾದ ಟಿ. ಎ. ಪೈ, ಜಗಜ್ಜೀವನದಾಸ ಸೆಟ್ಟಿ, ಎಮ್. ಎಲ್. ಎ. ಪುತ್ತು ಶಾಲಾ ಮೆನೇಜರ್ ಅಚ್ಚಣ್ಣ ಸೆಟ್ಟರ ಭಾವಚಿತ್ರಗಳ ನ್ನು ಶ್ರೀ ಎ. ಜೆ. ಆಳ್ವೆಯವರು ಅನಾವರಣ ಮಾಡಿದರು. ಶಾಲೆಗೆ ಶ್ರೀ ಪಿ. ರಾಮರಾಯರು ದಾನವಿತ್ತ ಗಡಿಯಾರವನ್ನು ಅಧ್ಯಕ್ಷರು ಚಾ ಲುಮಾಡಿದರು- ಶ್ರೀ ಪಿ. ಸದಾಶಿವ ಸೆಟ್ಟಿರು ಧನ್ಯವಾದಗಳನ್ನಿತ್ತರು- ರಾತ್ರೆ ಶ್ರೀ ಪಿ. ರಾ ಮಾಯರ ಅಧ್ಯಕ್ಷತೆಯಲ್ಲಿ "ಜನಸಾಮಾನ್ಯ ವಿಜಯ" ಯಕ್ಷಗಾನ ಕಾಲಕ್ಷೇಪವಾಯಿತು.

**ಕೋಣಂಗ್ರೆಪಾಡಿ**— ತಾ. 26-4-1957 ರಂದು ಸ್ಥಳೀಯ ಬೋರ್ಡು ಎಲಿಮೆಂಟರಿ ಶಾಲೆಯ ಮತ್ತು ಜಳಿ ವಿದ್ಯಾರ್ಥಿ ಸಂಘದ ವರ್ಧಂತಿಯು ಶೀಯುತ ಎಂ. ರಾಮಚಂದ್ರ ರಾವ್ ಬಿ. ಸಿ. ಬಿ. ಎಲ್. ಜ್ಯುಡಿಶಿಯಲ್ ಮೆಜಿಸ್ಟ್ರೇಟ್ ಉಡುಪಿ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಕ್ಷರ ಪತ್ನಿ ಶ್ರೀಮತಿ ಎಂ. ಇಂದಿರಾ ಬಾಯಿ, ಬಿ ಎ, ಬಿ ಟಿ. ವಿಮೆ ನ್ಸ್ ವೆಲ್‌ಫೇರ್ ಆಸಿಸ್ಟಾಂಟ್ ಆಫೀಸರ್ ವೆ. ಕ. ಇವರು ಹಿತಬೋಧೆಯನ್ನಿತ್ತು ಶಾಲಾ ಮಕ್ಕಳಿಗೆ ಇನಾಮು ಹಂಚಿದರು ಶ್ರೀಯುತರ ಕೆ. ರಾಮಕೃಷ್ಣ ಸೆಟ್ಟಿ, ಬಿ. ಎ. ಬಿ. ಟಿ. ಮಬ್ಯೋಪಾಧ್ಯಾಯ ಬುನಾದಿ ಪ್ರೈಮರಿ ಶಾಲೆ ನ್ಯಾಯವಾದಿ ಇವರೇ ಮೊದಲಾದ ಸಭಿ ಕರು ಭಾಷಣಗಳನ್ನಿತ್ತರು. ಅಧ್ಯಕ್ಷರು ಜಳಿ ವಿದ್ಯಾರ್ಥಿ ಸಂಘಕ್ಕೆ ರೂಪಾಯಿ ನೂರನ್ನು ದಾನವಾಗಿತ್ತು ಇದ ಬದ್ಧಿಯಿಂದಲೆ ಶಾಲಾ ಐದನೇ ತರಗತಿಯಲ್ಲಿ ಪ್ರಥಮ ಸ್ಥಾನವ ಪಡೆಯುವ ಸುಂದನಿಗೆ ತನ್ನ ಹೆಸರಿನ ಸ್ಮಾರ ಕಾರ್ಥವಾಗಿ ಶ್ರೀನಿವಾಸ ಇನಾಮು ಪಂಜು ಪಂತೆ ನಿರ್ಣಯಿಸಲಾಗಿರುವುದು ತಿಂಗಳ ಸ್ತೈ. ರಾತ್ರಿ ಶಾಲಾ ಸುಕ್ಷಳು "ಕರ್ನಾಟಕ ಸಾರ್ವಭೌಮ" ಎಂಬ ಚಾರಿತ್ರಿಕ ನಾಟಕ ವನ್ನೂ, ಜಳೆವಿದ್ಯಾರ್ಥಿಗಳು "ಪದ್ಮಿನಿ ಭೂಪ" ಎಂಬ ತುಳು ನಾಟಕವನ್ನು ಅಭಿನ ಯಿಸಿದರು.

**ಬೆಳ್ಳೆ** ಎಲ್. ಡಿ. ವಕ್ಸ್ ನೆರನಿಂದ ಕಟ್ಟಿಸಲಾದ ಸಮಾಜಮಂದಿರವನ್ನು ಸಂದಿಗ್ಧನನ್ನು ಕಳೆದ ತಾ. 29ರಂದು ಶ್ರೀ ಟಿ ಎ ಪೈಯರು ಉದ್ಘಾಟಿಸಿದರು. ಸಭಾಧ್ಯಕ್ಷತೆಯನ್ನು ಉಡುಪಿ ತಹಶೀಲ್ದಾರ್ ಶ್ರೀಮಮ್ಮದ್ ಬ್ಯಾರಿಗಳು ವಹಿಸಿದ್ದರು.


ಜನಸ್ತ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

# ಮನೆ-ಮದ್ದು

**HOME REMEDIES**

ಬರೆದವರು: ಡಾಕ್ಟರ್ ಕೊರಡ್ಡಿಲ್ ನೆಂಕಪ್ಪಾವ್, ಎಲ್. ಐ.ಎಮ್

ಮಕ್ಕಳಲ್ಲಿ, ಹೆಂಗಸರಲ್ಲಿ, ಗರ್ಭಿಣಿಯರಲ್ಲಿ, ಇತರೆ ಎಲ್ಲಾ ಸಾಮಾನ್ಯ ಕಾಹಿಲೆ ಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ

ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ ರೂ. ೨—೦—೦ (ಟಿ. ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.


ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

## ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಸುಸ್ತಕಗಳನ್ನು ಕಳಿಸುವವರು ದಯವಿಟ್ಟು ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ನ.)

**ವಿವಾಹ ವಿಚ್ಛೇದ:** (ಕಾದಂಬರಿ) ಬರೆದವರು: ಕೆ. ಶಂಕರ. ಪ್ರಕಾಶಕರು: ಕಾವ್ಯಾಲಯ ಮೈಸೂರು. ಪುಟ 228 ಬೆಲೆ ರೂ 1.8–0.

ಈ ಕಾದಂಬರಿ "ಪ್ರೇಮಪ್ರಕರಣ" ಕಾದಂಬರಿಯ ನುಂದಿನ ಭಾಗ. ಆದರೂ ಪ್ರೇಮ ಪ್ರಕರಣವನ್ನು ಓದದೆಯೇ ಓದಿಕೊಳ್ಳಬಹುದು.

ಪ್ರೇಮ ವಿವಾಹವು ವಿಸಕ್ಕಿಳಿದಲ್ಲಿ ಎಂತೆಪ ದಾರುಣಯಾತನೆಯನ್ನು ಅನುಭವಿಸಬೇಕಾಗುತ್ತದೆ ಎಂಬುದನ್ನು ಶ್ರೀ ಶಂಕರರು ಒಳ್ಳೆಯ ಮಾತುಗಾರಿಕೆಯಿಂದ ವಿವರಿಸಿದ್ದಾರೆ. ಸುಮಿತ್ರೆಗೋಸ್ಕರ ತೊಳಲಾಡುತ್ತಿರುವ ಶೇಖರನ ಚಿತ್ರ ಓದುಗರಿಗೆ ತುಂಬಾ ಮಃಬಿವನ್ನುಂಟು ಮಾಡುತ್ತದೆ. ಮಗಳು ಮಾ ಲಾ ಳಿ ನೋಸ್ತರ ಶೇಖರ ಪಡುವ ಯಾತನೆಯಂತೂ ಸಹೃದಯರನ್ನು ಮರುಗಿಸದೆ ಬಿಡುವುದಿಲ್ಲ. ಸುಮಿತ್ರಳಿಗಾಗಿ ಆಸ್ಥಯಾತನೆಯನ್ನು ಪಡುವ ಶೇಖರ ಸುಮಿತ್ರಳನ್ನು ಎಷ್ಟು ಪ್ರೀತಿಸುತ್ತಿದ್ದ ಎಂಬ ಕಲ್ಪನೆ ಬರುವಾಗಲಂತೂ ಸ್ತ್ರೀ ಜಾತಿಯ ಮೇಲೆಯೇ ಒಂದು ವಿಧವಾದ ತಾತ್ಸಾರ ಹುಟ್ಟಲು ಅವಕಾಶವಾಗುತ್ತದೆ. ಸುಮಿತ್ರಳ ಮಾನಸಿಕ ಹೊಯ್ದಾಟ, ಅಲ್ಲಲ್ಲಿ ವಿಧಿಯು ಕೆನುಳೆ, ನಾರಾಯಣರಾಯರ ನೂಲಕ ಹೂಡುವ ಆಟ ಕಾದಂಬರಿಯನ್ನು ಓದಿಯೇ ನುಗಿಸಬೇಕೆಂಮ ಬಲವಂತಮಾಡುತ್ತಿವೆ. ವಿವಾಹ ವಿಚ್ಛೇದ, ಸುಮಿತ್ರಳ ಕಣ್ಣೀರಗಳಿಂದ ಕಥೆಯು ಅಂತ್ಯವಾಗಾತ್ತಾ ವಿವಾಹದ ಮುಚ್ಚಿನಿಂದ, ಜೀವನದಲ್ಲಿ ಕ್ಷುಲ್ಲಕ ಕಾರಣವನ್ನೇ ಬೆಸಿಸಿ ಕಲಹಪಟ್ಟಿಸುವ ಪಟದಿಂದ. ಆಗುವ ಅನರ್ಥಗಳನ್ನು ಜೀವಂತವಾಗಿ ಕಣ್ಣಮುಂದೆ ತಂದು ನಿಲ್ಲಿಸುತ್ತದೆ. ಕಥಾವಸ್ತು ನವೀನವಾದುದು, ಉತ್ತಮವಾದುದು, ಸಮಾಜದಲ್ಲಿ ಅಲ್ಲಲ್ಲಿ ಕಾಣುವಂತಹದು, ಅಂತಹ ಜನ ಈ ಕಾದಂಬರಿಯ ಕಥೆಯಿಂದ ಸುಧಾರಿಸಲಿಕ್ಕೆ ಅವಕಾಶವಿದೆ; ಹಲವು ದಂಪತಿಗಳು ಈ ಕಾದಂಬರಿಯ ಸದುಪಯೋಗವನ್ನು ಮಾಡಿಕೊಂಡಾರೆಂಬ ಭರವಸೆಯಿದೆ.

ಶ್ರೀ ಕೆ. ಶಂಕರರ ಶೈಲಿಯು ಸುಲಭವೂ ಸುಲಲಿತವೂ ಆಗಿದೆ. ಮುಖಚಿತ್ರ ಮುದ್ರಣ ಮಾತ್ರವಲ್ಲ ನೂತುಗಾರಿಕೆ, ನುಡಿಗಟ್ಟು ತಕ್ಕ ಹಾಗೆ ಇವೆ.

**ಸಂಸ್ಕಾರದಲ್ಲಿ** ವಿರಸವುಂಟಾಗಬೇಕಾದರೆ ಬನಲ ಹೊತ್ತು ಬೇಕಾಗಿಲ್ಲ. ಅಲ್ಲಲ್ಲಿ ಹೊಂದಿಕೊಂಡು ನಡೆಯುವುದರಲ್ಲೇ ಜೀವನದ ಸಾರ್ಥಕತೆಯಿದೆ. ಆಗಾಗ ಅಲ್ಲಲ್ಲಿ "ಸಿಡಿಯುತ್ತಿರುವ ಕಿಡಿಯೇ ನುಂದೆ ದಾವಾನಲವಾಗದಂತೆ" ಈ ಕಾದಂಬರಿಗಳಿಗೆ ಸಹಾಯಮಾಡಿ ಪಲವು ಸಂಸಾರಕ್ಕೆ ಮಾರ್ಗದರ್ಶನಮಾಡಬಹುದು.

**ಪ್ರೇಮ ವಿವಾಹವೆಂದರೆ** ಹಾರಾಡುವ ಚಿಟವಕ್ಕಿಯಂತಹುಡುಗಿಯರು ಸಂಸಾರವಲ್ಲಿ ಕಂಚಿತ್ತನ್ನು ಸಹಿಸತ್ತು ಮಾಡಲೆಳಸಿ ತಂತಮ್ಮ ಆಹಂಭಾವ ಗಾರವಗಳನ್ನು ಕಾಯುವೆವು ಎಂಬ ಒಣ ಜಂಭದಿನಿಂದ, ಕಾಣಿಯುವ ಗಂಡ-ಹೆಂಡರು ಈ ಕಾದಂಬರಿಯನ್ನು ಅವಶ್ಯವಾಗಿ ಓದಿ ಪಾಠಕಲಿಯಬೇಕು.

ಶ್ರೀ ಕೆ. ಶಂಕರರಿಗೆ ಪ್ರಸಿದ್ಧ ಕಾದಂಬರಿಕಾರರೆಲ್ಲರಂತೆಯೇ ಎಲ್ಲಾ ಅವಶ್ಯಕತೆಗಳೂ. ಯೋಗ್ಯತೆಗಳೂ ಇವೆ. ಜನಜೀವನಕ್ಕೆ ಮಾರ್ಗದರ್ಶನಮಾಡಬಲ್ಲ ಇಂತಹ ನೂರಾರು ಕಾದಂಬರಿಗಳು ಶ್ರೀಯುತರ ಲೇಖನಿಯಿಂದ ಪಡಮೆ ಬರಲಿ.

## The Mahatma Gandhi Memorial College Magazine-UDIPI- Anual number 1957-Vol-No-VII.

ಸಂಪಾದಕರು. H. ಸುಂದರ ರಾವ್ ಯಂ ಎ. ಮತ್ತು ಕು. ಶಿ. ಹರಿದಾಸ ಭಟ್ಟ. ಯಂ. ಎ.

ಸಂಪಾದಕ ಮಂಡಳಿಯಲ್ಲಿ ಇತರ ಪ್ರಾಧ್ಯಾಕರೂ ವಿದ್ಯಾರ್ಥಿ ಪ್ರತಿನಿಧಿಗಳೂ ಇದ್ದಾರೆ.

ಈ ಸಂಚಿಕೆಯು ಶ್ರೀ ಸೋದೆ ವಾದಿರಾಜ ಮಠಾಧೀಶ ಶ್ರೀ ವಿಶ್ವೋತ್ತಮ ತೀರ್ಥ ಶ್ರೀ ಪಾದಂಗಳವರಿಗೆ ಅರ್ಪಿಸಲ್ಪಟ್ಟಿದೆ.

ಆಂಗ್ಲ ವಿಭಾಗದಲ್ಲಿ ಸಮಾಜವಾದದ ಮಾದರಿಗಳೆಂಬ ವಿಶೇಷ-ಪ್ರಬಂಧ ಮಾಲೆಗಳ ಜೊತೆಗೆ ಸುಮಾರು 19 ಲೇಖನಗಳೂ, ಕಾಲೇಜಿನ ಚಟುವಟಿಕೆಗಳ ವರದಿ ವಿವರಗಳೂ ಕೂಡಿ ಕೊಂಡಿವೆ. ಕನ್ನಡ ವಿಭಾಗದ 9 ಲೇಖನೆಗಳೂ ಹಾಗೆಯೇಸಂಸ್ಕೃತ ಮತ್ತು ಹಿಂದಿಗಳಲ್ಲಿ ಒಂದೊಂದು ಲೇಖನವೂ ಇವೆ. ಎಲ್ಲಾ ಲೇಖನವೂ ಲಕ್ಷ್ಯವಿಟ್ಟು ಬರೆದ ಅಮೂಲ್ಯ ಕೃತಿಗಳೇ. ಕಾಲೇಜಿನ ಹಾಗು ಜೋಗುಗಳಲ್ಲಿ ಸಹಭಾಗಿಯಾಗಿದ್ದ ದಿವಂಗತ ಶ್ರೀ ಉಪೇಂದ್ರ ಪೈಗಳವರ ನೆನಪು ಜಿತ್ಯಾಗಿದ್ದಾಗಿದೆ. ಪ್ರಿನ್ಸಿಪಾಲ್ ಸುಂದರ ರಾಯರ ಮತ್ತು ಕೆ. ಬಿ. ರಾಮಕೃಷ್ಣ ರಾಯರ ಎರಡು ಇಂಗ್ಲಿಷ್ ಲೇಖನಗಳು ಅತ್ಯಂತ ಅನೂಲ್ಯವಾದ ಪ್ರಬಂಧಗಳು.

## Symposium on Patterns of Socialism

ಎಂಬ ಲೇಖನ ಮಾಲೆಯಲ್ಲಿ ರಷ್ಯಾ, ಬ್ರಿಟನು, ಚೈನ, ಭಾರತದೇಶಗಳ ಸಮಾಜವಾದಗಳ ಮಾದರಿಗಳ ಕುರಿತು, ಕು. ಶಿ. ಹರಿದಾಸ, ನೇನ ಮೊದಲಾದವರ ಲೇಖನಗಳು ಮಹತ್ತನವುಗಳಾಗಿವೆ.

ಕನ್ನಡ ವಿಭಾಗದಲ್ಲಿ ಮಾತ್ರ ಪ್ರಾಧ್ಯಾಪಕ ವರ್ಗದವರಲೇಖನಗಳುಇಲ್ಲ. ಕು. ಶಿ. ಮತ್ತು ಶ್ರೀಮತಿ ಆಚಾರ್ಯರು ಕನ್ನಡದಲ್ಲೇನು ಬರೆದಿದ್ದಾರೆ ಎಂದು ಓಮಗರು ಪುಡುಕಿ ನಿರಾಶರಾಗಬೇಕಾಗುತ್ತದೆ.

ಚಿತ್ರಮಯವಾದ ಉತ್ತಮ ಮುದ್ರಣ ಕಾಗದಗಳಿಂದ ಕೂಡಿದ ನೂರಾರು ಪುಟಗಳ ಈ ಸಂಚಿಕೆಯು ಕಾಲೇಜಿನ ಪ್ರಗತಿಗೆ ನಿದರ್ಶನವಾಗಿದೆ. ಈ ವರ್ಷದ ಆತ್ಮೋತ್ಸವ ಕಾಲೇಜ್ ಮೆಗಜೀನುಗಳಲ್ಲಿ ಇದೊಂದು ಎಂದು ಧಾರಾಳವಾಗಿ ಹೇಳಬಹುದು.

ಶ್ರೀ ಸುಂದರ ರಾಯರೆ ಮಾರ್ಗದರ್ಶನ, ಕು. ಶಿ. ಮತ್ತಿತರ ಪ್ರಾಧ್ಯಾಪಕರು, ವಿದ್ಯಾರ್ಥಿಗಳ ಸಹಕಾರ ಪ್ರಶಂಸನೀಯ.

ಒತ್ತಕ್ಷರದಲ್ಲಿ ಈ ಸಂಚಿಕೆ ಮು. ಗಾಂಧೀ ಕಾಲೇಜಿನ ಘನತೆ ಗೌರವಗಳನ್ನು ವೃದ್ಧಿಸಿದೆ.

## ಅಂಬೆ ಮನೆ—

ಮೂಲ ಲೇಖಕರು: ಶ್ರೀ ರವೀಂದ್ರ ಠಾಕೂರ್, ಅನುವಾದಕ: ರಾ. ಗಣೇಶರ್ಮಾ, ಸುತ್ಕೂರು. ಸಂಪಾದಕ ಮತ್ತು ಪ್ರಕಾಶಕ: ಕೆ. ಕೆ. ಪೂಜಾರಿ. ಬೆಂ-ಳೂರು

ಇದು ನೇತ್ರಾವತಿ ಪ್ರಕಾಶನದ ೧೩ನೇ ಪ್ರಕರಣ.

ಮೈಸೂರಿನ ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು ಮುನ್ನುಡಿ ಬರೆದಿದ್ದಾರೆ. ಶ್ರೀಯುತರಾದ ನಿಜಲಿಂಗಪ್ಪನವರು ಠಾಕೂರರ ಕೃತಿಯೆನ್ನು ಮೆಚ್ಚಿದುವನ್ನು ಶ್ರೀ ಕೂಜಾಲರ ಎಂಬವರು ತೋಡಿಕೊಂಡಿದ್ದರಿಂದಲೇ ನ್ನು ಅನುವಾದ ಮಾಡುವ ಕಾರವನ್ನು ಕೈಕೊಂಡರೆಂದು ಮುನ್ನುಡಿಯಲಿ ತಿಳಿಯುತ್ತಿದೆ.

'ಅಂಬೆಮನೆ' ಯು ತಾಗೂರು ವರೆಯಿಂದೇ ಪ್ರಸಿದ್ಧವಾಗಿದೆ. ರಂಗಭೂಮಿಯಲ್ಲಿ ಈ ನಾಟಕವು ಯಶಸ್ಸನ್ನು ತಂದಿತ್ತಿರುವಸೆ ಹೇಳುವುದು ಕಷ್ಟವೇ ಆದರೆ ಎಳಬಾಲಕರ ಮನಸ್ಕಾಸ್ತ್ರವನ್ನು ಚೆನ್ನಾಗಿ ಸಾಸಿರಿಸಿಯೇ ಹೊರಬಂದ ಕೃತಿಯಿದು. ಕೂರರ ಬರಹಗಳ ಹಿಂದೆ ಒಂದು ಮಾನವಿಶ್ಲೇಷಣೆಯೂ ಒಂದು ನೈತಿಕ ವಾದವೂ ಇರುತ್ತದೆ. ಕತೆಗಿಂತಲೂ ಭಾವವೇ ಹೆಚ್ಚಿನ ಪ್ರಾಧಾನ್ಯತೆ ಕೊಟ್ಟಿವೆ ಎಂಬುದಕ್ಕೆ ಈ ಹೊತ್ತಗೆ ಸಾಕ್ಷಿಯಾಗಿದೆ.

ವಿಶ್ವಕವಿ ಠಾಕೂರರ ಕೃತಿಗಳನ್ನು ಕನ್ನಡಕ್ಕೆ ಆನುವಾದ ಮಾಡಿಸುವ ಸೇವೆಯನ್ನು ಕೈಕೊಂಡು, ಆ ಮಹಾ ಕವಿಯ ಕೃತಿಗಳನ್ನು ಕನ್ನಡಿಗರು ತಿಳಿಯುವಂತೆ ಮಾಡಿದ ಕೆ. ಪೂಜಾರಿಗಳು ಕನ್ನಡ ಕುಲಕ್ಕೆ ಉಪಕಾರಗಳೇ. ಅವರ ಸಾಹಸವು ಅಭಿನಂದನೀಯವು. ಇನ್ನೂ ಅನೇಕ ಉತ್ತಮ ಕೃತಿಗಳು ಕನ್ನಡಕ್ಕೆ ಅನುವಾದಿಸಲ್ಪಟ್ಟು, ಕನ್ನಡದ ಲೇಖಕರಿಗೆ ಪಥದರ್ಶನವಾಗಲಿ ಎಂಬ ಹಾರೈಕೆ.

– ದಾ೦


## NOTICE

In The Court Of The Principal Subordinate Judge Of South Kanara

O S No 14 of 1957.

Laxmi Hengsu and others —Plaintiffs

and

Muthakke and others —Defendants

To Defendants:

3 Aithappa Rai son of Sankamma

9 Marappa Pakala son of Korapolu both residing at Bailamegi namane in Kolambe village, Mangalore Taluk

13 Nagamma daughter of Pammakke also as guardian adlitem of her minor children 17th defendant Babi and 18th defendant Baba residing with her husband Rajiva Hegde, Hotel-keeper, Market Road Ambernath, Thana District, Bombay State

5 Thyampanna Alva son of Parameshwari, residing at Yetha mogru, Kandavara village, Mangalore Taluk

8 Chennamma daughter of Parameshwari, residing with her husband Marappa Alva at Rayi in Rayi village, Belthangady Taluk

14 Madhavi daughter of Pammakke, residing with her husband Sanjiva Shetty at Bijai, Mangalore Town

Please take notice that the above suit filed by Plaintiffs for partition and separation of their share in all their family properties and for accounts of the income of their family properties is posted to 21—6—1957 for your appearance On default to appear on that date at 11 a. m either in person or by pleader you will be declared ax parte.

(By order of the court)

(Sd) P. S. Shastry,
Advocate for Plaintiffs.

Mangalore, 25—4—57.



## ಟೆಂಡರು ನೋಟೀಸು

ಈ ಕೆಳಗೆ ನಮೂದಿಸಿದ ಪೆರ್ಡೂರು ಶ್ರೀ ಅನಂತಪದ್ಮನಾಭ ದೇವಸ್ಥಾನದ ಬಾಬ್ತು ಕಾಮಗಾರಿಯೆಯನ್ನು ಪೂರ್ಣವಲು ರಿಜಿಸ್ಟರ್ಡ್ ಕಂಟ್ರಾಕ್ಟುದಾರರಿಂದ ತಾರೀಕು 11—5—57 ನೇ ಸಂಜೆ 4 ಗಂಟೆಯ ತನಕ ಮೊಹರು ಮಾಡಲ್ಪಟ್ಟ ಟೆಂಡರುಗಳನ್ನು ಈ ಕೆಳಗೆ ಸಹಿಮಾಡಿದವರು ಪಡಕೊಳ್ಳಲಿರುವರು. ಕಾಮಗಾರಿಕೆಗೆ ಸಂಬಂಧಿಸಿದ ಶರ್ತಗಳು, ಕಾಮಗಾರಿಕೆಯ ಜಂದಾಜು, ವಿವರೆ ಇತ್ಯಾದಿ ಮಾಹಿತಿಯನ್ನು ಈ ಕೆಳಗೆ ಸಹಿಮಾಡಿದವರೆ ಲಭ್ಯಿಸಿನಲ್ಲಿ ಟೆಂಡರು ಹಾಕುವವರು ಪರಿಶೀಲಿಸಬಹುದು.

ವಿ. ಸೂ:- ಮುದ್ರಿತ ಕೆಲಸಗಳನ್ನು ಸೇರಿಸಿಲ್ಲ.

| | | |
|---|---|---|
| ಕಾಮಗಾರಿಕೆಯ ಹೆಸರು | ಅಂದಾಜು ಬೆಲೆ | ಸಂಚಿಕಾರ ಠೇವಣಿ |
| 1 ಹೊಸದಾಗಿ ಕಟ್ಟುತಕ್ಕ | ರೂಪಾಯಿ 2850/- | ರೂಪಾಯಿ 75/- |

ಎರಡು ಅಂಗಡಿ ಕಟ್ಟೋಣಗಳು.

K. B. Shetty,
Executive Officer.
Sri Ananthapadmanabha Temple Perdu

ಪೆರ್ಡೂರು, ತಾ. 24—4—57.



.... ಹೊಸ ಪುಸ್ತಕ ....

ಆಲ್ಫ್ರೆಡ್ ನಾರ್ಥ್ ವೈಟ್‌ಹೆಡ್ ಬರೆದ

# ಶಿಕ್ಷಣದ ಧ್ಯೇಯಗಳು

ಮತ್ತು ಇತರ ಪ್ರಬಂಧಗಳು

ಅನುವಾದಕರು:

ಕೆ. ಬಿ. ರಾಮಕೃಷ್ಣ ರಾವ್, ಬಿ. ಎ. (ಆನರ್ಸ್)

ಉ. ಲಕ್ಷ್ಮೀನಾರಾಯಣಾಚಾರ್ಯ, ಎ. ಎ; ಎಲ್. ಟಿ.

ಬೆಲೆ: 2—4—0 ರೂ.
2·25

ಪ್ರಕಾಶಕರು:

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ.

## ಅಖಂಡ ಭಾರತ

(೨೬ನೇ ಪುಟದಿಂದ)

ದಿಂದ ಹರಪ್ಪಾ ಪ್ರದೇಶ, ಪವಿತ್ರ ನದಿ
ಳಿಂದ ಫಲಭರಿತವಾದ ಭೂಮಿ, ನಮ್ಮ
ರ್ವಜರು ಬಾಳಿ ಬದುಕಿದ, ದೇವಶ
ಯಿಂದ ಅಸುರರೆಲ್ಲರೂ ಧ್ವಂಸ ಹೊಂ
ನಿಸ್ಸಂಟೆವಾದ ಅತ್ಯುನ್ನತವಾದ ಪ
ರ್ಗತ ಮತ್ತು ಸುಂದರವಾದ ಅರಣ್ಯಗ
ಂದ ಕೂಡಿಕೊಂಡ, ಯಜ್ಞಯಾಗಗಳು
ನವರತವೂ ನಡೆಯುತ್ತಿರುವ, ಸ್ವಾರ್ಥ
ತ್ಯಾಗ, ಮತ್ತು ವಿಶಾಲ ಮನೋವೃತ್ತಿ
ಯೆಯೇ ಧ್ಯೇಯವಾಗಿರುವ ಜನರ ಬೀ
ಂದು ಹೃದಯ ಸ್ಪರ್ಶಿಯಾಗಿ ವರ್ಣಿಸ
ಾಗಿದೆ.

ಜಗತ್ತಿನ ದೇಶಗಳಲ್ಲಿ ಭಾರತವು
ದೇವದತ್ತ" ಎಂಬುದನ್ನು ಸಮರ್ಥಿಸು
ಇತರ ಕೆಲವು ಉದಾಹರಣೆಗಳೂ
ವೆ.

ಗಾಯಂತಿ ದೇವಾಃ ಕಿಲ ಗೀತಕಾನಿ
ಧನ್ಯಾಸ್ತುತೇ ಭಾರತ ಭೂಮಿ ಭಾಗೇ
ಸ್ವರ್ಗಾಪವರ್ಗಾಸ್ಪದ ಮಾರ್ಗಭೂತೇ
ಭವಂತಿ ಭೂಯಃಪುರುಷಾಃ
ಸುರತ್ವಾತ್ ।
೨-೫೨೬

ಎಂದು ವಿಷ್ಣು ಪುರಾಣದಲ್ಲಿ ಹೇಳಿ, ದೇ
ವಲೋಕಕ್ಕಿಂತಲೂ ಭಾರತವು ಅದೃಷ್ಟ
ಶಾಲಿ ಎಂದೂ ಸ್ವರ್ಗ ಮತ್ತು ಮೋಕ್ಷ
ಮಾರ್ಗಗಳು ಈ ಭೂಮಿಯಲ್ಲಿ ಇವೆ
ಎಂದೂ ಕೀರ್ತಿಸಿದೆ. ಹಾಗೆಯೇ ಭಾಗ
ವತದಲ್ಲಿಯೂ

ಅಹೋವ ತೈಷಾಂಕಿಮಕಾರಿ
ಶೋಭನಂ
ಪ್ರಸನ್ನ ಏಷಾಂ ಪಿದುನ ಸ್ವಯಂ
ಹರಿಃ
ಯೈರ್ಜನ್ಮಲಬ್ಧಂ ನೃಷು ಭಾರತಾಜಿರೇ
ಮುಕುಂದ ಸೇವೋಪಯಿಕಂ
ಸ್ಪೃಹಾದಿನಃ ।
೫-೧೯-೨೦,೨೭

ಎಂದೇ ವರ್ಣಿತವಾಗಿದೆ.

ಪ್ರಪಂಚದ ಯಾವನೊಬ್ಬನಾದರೂ ಭಾರತವು ನೈಸರ್ಗಿಕ ಮೇರೆಗಳಿಂದಲೇ ಕೂಡಿದೆ ಎಂಬುದನ್ನು ಒಪ್ಪಿಕೊಳ್ಳಬೇಕು. ಸೇತು ಪರ್ವತದಿಂದ ಬಿಂದು ಪರ್ವತದವರೆಗೆ, ಹರಡಿದ ಭಾರತವು ಪ್ರಕೃತಿದತ್ತ ಪ್ರಾಕೃತಿಕ ಸೌಂದರ್ಯಯುಕ್ತವಾಗಿ, ರಮಣೀಯ ದೇಶವಾಗಿದೆ. ಅದು ಅನಾದಿ ಕಾಲದಿಂದಲೂ ಏಕಖಂಡವಾಗಿತ್ತು. ಅದುದರಿಂದಲೇ 'ಭರತಖಂಡ'ವೆಂಬ ಹೆಸರನ್ನು ಪಡೆಯಿತು.

ಭೌಗೋಲಿಕ ದೃಷ್ಟಿಯಿಂದ ಅವಲೋಕಿಸುವುದಾದರೂ, ಅಖಂಡ ಭಾರತವು ಏಕದೇಶವೆಂದು ತಿಳಿಯಬಹುದು. ಪ್ರಾಚೀನ ಶಿಲಾಯುಗದ ಕಾಲದಿಂದ ಇಂದಿನ ನವೀನ ವಿಜ್ಞಾನಯುಗದವರೆಗೂ ಭಾರತವು ಒಂದೇ ಆಗಿ ಉಳಿದಿದೆ.

ಭಾರತದಲ್ಲಿ ಕಲ್ಲಿದ್ದಲು ಬಂಗಾಳ, ಬಿಹಾರ ಮತ್ತು ಒರಿಸ್ಸಾ ಗಳಲ್ಲಿ ಹರಡಿದ್ದರೆ, ಕಬ್ಬಿಣ ಮ್ಯಾಂಗನೀಸ್ ಮತ್ತು ಕ್ರೋಮಿಯಂ ಲೋಹಗಳ ಆದುರುಗಳು ಮಧ್ಯ ಪ್ರದೇಶದಲ್ಲಿ ಅಧಿಕವಾಗಿ ಮದ್ರಾಸು, ಬೊಂಬಾಯಿ, ಬಿಹಾರ, ಒರಿಸ್ಸಾ ಮತ್ತು ಮೈಸೂರುಗಳಲ್ಲಿ ಹರಡಿದೆ.

ಮೈಸೂರಿನ ಕೋಲಾರದಲ್ಲಿ ಚಿನ್ನದ ಗಣಿಗಳು ತುಂಬಿವೆ. ಆನಂತಪುರ ಜಿಲ್ಲೆಯಲ್ಲಿಯೂ ಕೊಂಚ ಮಟ್ಟಿಗೆ ಇದೆ. ಅಲ್ಯೂಮಿನಿಯಂ ಮಧ್ಯ ಪ್ರದೇಶ ಬೊಂಬಾಯಿ ಮತ್ತು ಬಿಹಾರಗಳಲ್ಲಿಯೂ, ತಾಮ್ರವು ಬಿಹಾರದಲ್ಲಿಯೂ, ಉಪ್ಪು ಮದ್ರಾಸ, ಬೊಂಬಾಯಿಗಳಲ್ಲಿಯೂ ಧಾರಾಳವಾಗಿ ದೊರೆಯುತ್ತವೆ.

ಇವೆಲ್ಲವುಗಳಿಂದ ಭಾರತದ ಖನಿಜ ಸಂಪತ್ತು ಅದರ ನಾನಾ ಭಾಗಗಳಲ್ಲಿ ಹರಡಿಕೊಂಡಿದ್ದು ಭಾರತವು ಒಂದೇ ದೇಶವಾಗಿದ್ದು ಒಗ್ಗಟ್ಟಿನಿಂದಿರುವಂತೆ ಸೂಚನೆ ಕೊಟ್ಟಿದೆ. ಒಂದು ಭಾಗ ಇನ್ನೊಂದು ಭಾಗದೊಡನೆ ಸಂಬಂಧವನ್ನು ಬೆಳೆಸಿಕೊಂಡು ತನ್ಮೂಲಕ ಅಖಂಡ ಭಾರತದ ಆಭಿವೃದ್ಧಿಯನ್ನು ಒಂದಾಗಿ ಸಾಧಿಸಬೇಕು ಎಂದು ವಿಶ್ವಯಃ ಭೂಮಿತಾಯಿಯ ಆಶಯವಿದ್ದಿರಬಹುದು.

ಹಾಗಿರುವಾಗ ಭಾರತದಲ್ಲಿ ನಾನಾ ಭಾಷಾ ಭೇದಗಳು, ಜಾತಿ ಭೇದಗಳು ರಾಜ್ಯ ಭೇದಗಳು, ಆಚರಣ ವೈವಿಧ್ಯ, ಹವಾಮಾನ ವೈವಿಧ್ಯಗಳಿದ್ದರೂ, ಭರತ ವರ್ಷವು ಒಂದೇ ನಾವೆಲ್ಲರೂ ಭಾರತೀಯರು, ಭಾರತವೇ ನಮ್ಮ ತಾಯಿನಾಡು ಎಂಬ ರಾಷ್ಟ್ರೀಯ ಭಾವನೆಯು ನಮ್ಮಲ್ಲಿ ಮೂಡಿಬರುವುದು ಆಗತ್ಯ. ನಮ್ಮ ರಾಜಕಾರಣಿಗಳು ನುಡಿದಿರುವಂತೆ ಭಾರತದ ಯಾವುದೇ ಭಾಗವು ಹೀನಮಟ್ಟಕ್ಕೆ ಬಂದರೂ, ಭಾರತತ್ರ ಹೀನವಾದಂತೆ ಎಂಬ ಭಾವನೆಯು ಸ್ವಾಭಾವಿಕವಾಗಿ ಬೆಳೆದುಬರಬೇಕಾಗಿದೆ.

ಈ ಭಾವನೆಯು ನಮ್ಮಲ್ಲಿ ಹೆಚ್ಚು ಹೆಚ್ಚಾಗಿ ಬೆಳೆಯಲು ಬೇಕಾದ ಆದಕ್ಕೆ ನಮ್ಮ ಹಿಂದಿನ ಶತಮಾನದವರು ನಮಗೆ ತಕ್ಕ ಸಾಧನ ಸಂಪತ್ತನ್ನು ಒದಗಿಸಿಕೊಟ್ಟಿದ್ದಾರೆ. ಅವುಗಳ ಸಾಂಸ್ಕೃತಿಕ ಬಲದಿಂದ ನಮ್ಮಲ್ಲಿ ಈ ಭಾವನೆಯು ಸುಪ್ತವಾಗಿ ಬದುಕಿದೆ. ಅದನ್ನು ಜಾಗ್ರತಗೊಳಿಸುವುದೇ ನಮ್ಮ ಆದ್ಯ ಕರ್ತವ್ಯ. ಆದಕ್ಕಾಗಿ, ಉಪಲಬ್ಧವಾಗಿರುವ ಸಾಧನಗಳನ್ನು ಬಳಸಿಕೊಳ್ಳಬೇಕು. ಪ್ರಾಚೀನ ಭಾರತದ ಧಾರ್ಮಿಕ ಲೌಕಿಕ ಯಾವ ಗ್ರಂಥಗಳೇ ಇರಲಿ, ಅವುಗಳು ಅಖಂಡ ಭಾರತದ ನೆನಕೆಯನ್ನು ಮಾಡಿಕುತ್ತವೆ. ಭಾರತ ಮಾತೆಯ ವಿರಾಟ್ ದೇಹವನ್ನು ನಾವು ಆನುದಿನವೂ ನೆನಸಿಕೊಂಡರೆ, ಆಕೆಯು ನಮ್ಮೆಲ್ಲರನ್ನೂ ತನ್ನ ಒಂದೇ ಪಾಶದಿಂದ ಬಂಧಿಸಿರುವುದು ಜ್ಞಾಪಕಕ್ಕೆ ಬಾರದೆ ಎಂದಿಗೂ ಇರಲಾರದು. ಇವೆಲ್ಲವನ್ನೂ ಸಾಮೂಲಾಗ್ರವಾಗಿ ಪರೀಕ್ಷಿಸಿ ನಮ್ಮ ಪೂರ್ವಜರು ಭಾರತವ್ಯೋಂದೇ ಎಂಬ ಭಾವನೆಯನ್ನು ಬೆಳೆಸುವುದಕ್ಕಾಗಿ ಬೀಜ ಮಂತ್ರವನ್ನು ತಯಾರಿಸಿದ್ದಾರೆ:

ಗಂಗೇಚ ಯಮುನೇ ಚೈವ ।
ಗೋದಾವರೀ ಸರಸ್ವತೀ
ನರ್ಮದೇ ಸಿಂಧು ಕಾವೇರಿ ।
ಜಲೇಸ್ಮಿನ್ಸನ್ನಿಧಿಂಕುರು ।

ಈ ಮಂತ್ರವನ್ನು ಆಬಾಲ್ಯ ಪರ್ಯಂತ ಮರೆತು ಬಿಡಬಾರದೆಂದು ಮಂತ್ರಾಧಿಕಾರವಿರುವ ಬ್ರಾಹ್ಮಣರು ಆ ಕಾಲದಿಂದ ಈ ಕಾಲದವರೆಗೂ ಉಚ್ಚರಿಸುತ್ತಾ ಬಂದಿದ್ದಾರೆ. ಅಂದು ಅದರ ಅರ್ಥವನ್ನು ತಿಳಿದು, ಆ ಭಾವನೆಯ ಬೆಳೆಗಾಗಿ ಆ ಕಾರ್ಯಕ್ರಮವನ್ನು ಕೈಗೊಂಡಿದ್ದರೆ, ನಾವು ಇಂದು ಪರಂಪರಾ ಪ್ರಾಪ್ತವಾಗಿ ಬಂದ ಕಟ್ಟುಪಾಡಾಗಿ ಮಾತ್ರ ಹಾಗೆ ಮಾಡುತಿದ್ದೇವೆ! ನಮ್ಮ ಹಿಂದಿನವರು ತಮ್ಮ ಪದ್ಧತಿಯಂತೆ ಈ ಒಗ್ಗಟ್ಟಿಗೂ ಧಾರ್ಮಿಕ ಭಾವನೆಯನ್ನೇ ಕೊಟ್ಟರು. ಆ ಭಾವನೆಗಳ ಆರ್ಥವನ್ನು ನಾವು ಕಂಡುಕೊಂಡು ಕಾರ್ಯ ಪ್ರವೃತ್ತರಾಗುವಷ್ಟು ನಾವು ಇನ್ನೂ ಜಾಗ್ರತರಾಗಿಲ್ಲ!

ಸಮಸ್ತ ಭಾರತೀಯರಲ್ಲಿ ನಾವೆಲ್ಲರೂ ಒಂದು ಎಂಬ ಭಾವನೆಯು ಬಲಿತುಬರಬೇಕು ಮಾನಸಿಕವಾಗಿ, ಸಾಂಸ್ಕೃತಿಕವಾಗಿ ಭಾರತವು ಒಂದಾಗಿ ಬಾಳಿದರೆ ಮಾತ್ರ ರಾಜಕೀಯವಾಗಿ ಒಂದಾದುದಕ್ಕೆ ಸಾರ್ಥಕತೆ ಯಾದೀತು. ಹಾಗಾಗಲೆಂದು ಪ್ರತಿಯೊಬ್ಬ ಭಾರತೀಯನೂ ಕಾರ್ಯಶೀಲನಾಗಲಿ!

(ವಿವಿಧ ಮೂಲಗಳಿಂದ)

—ಎಸ್. ಗೋಪೀಚಂದರಾವ್,
ಉಡುಪಿ.

**ಉಡುಪಿ ಡಿ. ಮು. ಕೋರ್ಟಿನಲ್ಲಿ**
**O. S. 571/1955**

ಕಾಳಯೋಜಾರಿ ಕೂಡಾ ವಾದಿರು.
ಮತ್ತು
ಸಂತೇಕ-ಸೀತೆಕ್ಕು ಕೆಡ್ತೀರೆ ಮಗ ಉಡ್ಪಿ ತಾಲೂಕು ಶಿಸಳೈಗ್ರಾಮ ೭ನೇ ಪ್ರತಿವಾದಿ ಇವರೊಳಗೆ.

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನಂದರೆ:—

ಮೇಲ್ಕಂಡ ವ್ಯಾಜ್ಯದ 1ನೇವಾದಿಯಿಂದ 1ನೇ ಪ್ರತಿವಾದಿಯವರ ವಿರುದ್ಧ ಸ್ಪೆಸಿಟಿ ತಾರೀಕು 28-6-1949 ರಲ್ಲಿ ರಿಜಿಸ್ಟ್ರಿ ಏರಿಕ್ರಯ ನರಿಸಿಕೊಂಡ ಆಸ್ತಿಗಳ ಪ್ರಥಮ ಜವಾಬ್ದಾರಿಯಿಂದ ಸದ್ರಿ ಕ್ರಯದ ಪ್ರತಿಫಲದ ಬಾಬ್ತು ಬಾಕಿಯಿದನ್ನೆಡಿಸಿದ ರೂ ಪ್ಯಾ 4000|-(ನಾಲ್ಕುಸಾವಿರ)ನ್ನು ತತ್ತು ಆಪರಬಾಬ್ತು ಬಾಕಿಯಿರುವ ಪ್ರತಿವಾದಿಯಿಂದ ವಸೂಲಮಾಡಿಕೊಳ್ಳುವರೆ 1ನೇವಾದಿಯವರಿಗೆ ಸದ್ರಿ ಈಡಿನ ಹಕ್ಕನ್ನು ಈಡುಮಾಡಿಕೊಂಡ 2ನೇ ವಾದಿಯೂ ಸೇರಿ, ನಾಗತ್ತದ ಪಂಚಾಯತಿನ ಗಾರರಿಂದ ನೀವು ಕೂಡಾ ಪ್ರತಿವಾದಿರನ್ನು ಕೆಳಿಯಲ್ಲಿ ಸೇರಿಸಿ ಸದರಿ ಪಂಚಾಯಿತಿನದ ಉಜೂರುಮಾಡಿಸ್ಕೊಡಿಸ್ಕೊಳಿ ವಾದಿರು ವಾಕಲುಮಾಡಿದ ಮೇಲ್ಕಂಡ ದಾವೆಯು ತಾರೀಕು 3-5-1957ಕ್ಕೆ ಇಟ್ಟಿದೆ. ಉವಾಪರಿಸುವಂತೆ ಧಾರಾಳವಾಗಿ ಆದಿವ್ಸ ಪೂರ್ವಾಹ್ನ 10 ಘಂಟೆಗೆ ಸದ್ರಿ ಕೋರ್ಟಿಗೆಮುಂದೆ ಹಾಜ್ರಾಗಿ ಜ್ಞಾಪೀರುವಾದಿಕೊಳ್ಳಬಹುದು, ತಪ್ಪಿದ್ದೆ ಇನಮ ಸೈರಿಹಾಜರಿಯಿಂದ ಏಕಪಕ್ಷೀಯವಾಗಿ ತೀರ್ಪಾ ನಿಸಲ್ಪಡುವುದು.

K. RamaKrishna Rao.
Vakil for Plaintiffs.

Udipi. Dated 24-4-1957.

## ಕವತ್ತಾರು ಜಾತ್ರೆ

**ಪ್ರತಿ ವರ್ಷದಂತೆ ಕವತ್ತಾರು ಮಹಾ ಉತ್ಸವವು ಇದೇ ಬರುವ ಮೇ ತಿಂಗಳ ತಾ. 13ನೇ ಸೋಮವಾರ ನೆರವೇರುವುದು.**

ಕವತ್ತಾರು ತಾ. 30.

# ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

**ಸ್ಥಾನಿಕ ಕ್ರಯ:** ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

**ಶ್ರೀ ರಾಮತೀರ್ಥ ಯೋಗಾಶ್ರಮ,**
**ದಾದರ್** (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

## ವ್ಯವಹಾರ ರಂಗ

### ನಮ್ಮ ನಾಗರಿಕರನ್ನು ಸತ್ಪಥದಲ್ಲಿ ಮುನ್ನಡೆಸಿರಿ.

ಪರಿಸ್ಥಿತಿ ಬದಲಾವಣೆ ಹೊಂದಿಕೊಂಡು ಮುಂದೊರೆದಂತೆ, ಜನರ ವಾಸ್ತವಿಕ ಮೇಲೆಯೂ ಪಾಕಸ್ಪು ಪರಿಣಾಮವನ್ನುಂಟು ಮಾಡದಿರದು. ಜೀವನವನ್ನು ಹಸನಾಗಿಟ್ಟು, ತಾನೂ ಸುಖವಾಗಿದ್ದು, ಇತರರನ್ನೂ ಸುಖವಾಗಿರಿಸಬೇಕೆಂಬ ಮಹತ್ವವಾದ ಆಶೆ ಇಚ್ಛೆಗಳು ಮನುಷ್ಯನ ಆದರ್ಶದ ಉಚ್ಚ ಧ್ಯೇಯಗಳಾಗಿದ್ದುವು. ತನ್ನನ್ನು ತಾನು ತಿದ್ದಿಕೊಂಡು, ತನ್ನ ಮುಖವನ್ನು ಕನ್ನಡಿಯಲ್ಲಿ ನೋಡಲು ತಾನು ಕಂಡುಕೊಂಡು ಅನಂತರ ದಲ್ಲಿ ಇತರರ ತಪ್ಪುಗಳನ್ನು ಕಂಡು ಹಿಡಿಯಬೇಕೆಂಬ ಉಚ್ಚ ಧ್ಯೇಯವೇ ನಮ ನೆಗೆದ್ದು ಮಾರುಗೆದೆ' ಎಂಬ ಗಾದೆಯ ಮಾತಿನಲ್ಲಿ ಪರಿವರ್ತನೆ ಹೊಂದಿತು. ಮನುಷ್ಯನ ಪರಿಶುದ್ಧ ಜೀವನವನ್ನು ಸಾಗಿಸಿಕೊಂಡು ಹೋಗುವ ವೃಥಾ ನಿರ್ಧಾರವೇ ಆತನ ಬಾಳಿನ ಬೆಳಕಿನ ದಾರಿದೀಪವಾಗಿತ್ತು!

ಆದರೆ ಪರಿಸ್ಥಿತಿ ಬದಲಾವಣೆಯಿಂದ, ಕಾಲಮಾನದ ತಿರುವು ಮುರುವುಗಳಿಂದ ಸ್ವಾಭಾವಿಕ ಕ್ಷೇತ್ರದಲ್ಲಿ ಎಷ್ಟು ಬದಲಾವಣೆಗಳು ಎದ್ದು ಕಾಣುತ್ತಿದೆಯೋ ಅಷ್ಟೇ ಮಹತ್ವವಾದ ಬದಲಾವಣೆಗಳು ಮನುಷ್ಯಪ್ರಾಣಿಯ ಜೀವನ ಕ್ಷೇತ್ರದಲ್ಲೂ ರೂಪುಗೊಂಡಿವೆ; ರೂಪುಗೊಳ್ಳುತ್ತಲಿವೆ.

ಈಗೀಗ ವಿದ್ಯಾರ್ಥಿಗಳ ಜೀವನದಲ್ಲಿ ವಿಶೇಷ ಮಾರ್ಪಾಟುಗಳನ್ನು ನಾವು ಕಾಣಬಹುದಾಗಿದೆ. ಭಾರತದಲ್ಲಿ ವಿದೇಶಿಯರ ಆಗಮನ, ಆಡಳಿತೆ, ನಿರ್ಗಮನಗಳ ವರೆಗೂ ಒಂದಲ್ಲೊಂದು ತರಹದ ವಿಶೇಷ ಘಟನೆಗಳು ತಲೆಯೆತ್ತಿ ನಮ್ಮೀ ಪರಿಸ್ಥಿತಿಯ ಮಹತ್ವದ ಬದಲಾವಣೆಗೆ ಕಾರಣಗಳಾಗಿವೆ. ಗುರುಗಳಿದ್ದಲ್ಲಿ ಶಿಕ್ಷಣಕ್ಕೆ ಹೋಗುತ್ತಿದ್ದ ಪುರಾತನ ಪದ್ಧತಿ ಇಂದು ನಾಶನಾಮದೇ ಗುರುಗಳಿಗೆ ಜೊರೆಯುತ್ತಿದ್ದ ವಿಶೇಷ ಗೌರವ ಕೆಲವೊಂದನ್ನುಂಟು ತಂದಿದೆಯಲ್ಲದೆ, ಶಿಕ್ಷಣ ದಲ್ಲಿಯ ಹೆಚ್ಚಿನ ಅಭ್ಯಾಸಕ್ಕೂ ಅಡೆತಡೆಯನ್ನೊಡ್ಡಿದೆ. ಗುರುಗಳಿದ್ದಲ್ಲಿ ವಿದ್ಯಾರ್ಥಿಗಳು ಹೋಗುವುದಿಲ್ಲ; ವಿದ್ಯಾರ್ಥಿಗಳಿದ್ದಲ್ಲಿ ಗುರುಗಳು ಬರುವುದು ಸಾಧ್ಯವಿಲ್ಲ; ಈ ಕಾರಣದಿಂದಲೇ ಇಬ್ಬರನ್ನೂ ಸಮಾಧಾನ ಗೊಳಿಸಲು ಮಧ್ಯಂತರ ದಾರಿ ನಮ್ಮ ಸದ್ಯದ ಶೈಕ್ಷಣಿಕ ಕೇಂದ್ರಗಳಾಗಿವೆ. ಸ್ವಾಮಿ ವಿವೇಕಾನಂದರಂತಹ ಮಹಾನುಭಾವರೂ ಕೂಡ ಗುರುಗಳ ಆಶ್ರಮದಲ್ಲಿ ಶಿಕ್ಷಣ ಕೊಡುವ ಪದ್ಧತಿಯೇ ಶ್ರೇಷ್ಠ ಪದ್ಧತಿಯೆಂದು ವರ್ಣಿಸಿರುತ್ತಾರೆ. ಆದರೆ ಇಂದಿನ ಪರಿಸ್ಥಿತಿಯಲ್ಲಿ ಅದು ಎಷ್ಟರ ಮಟ್ಟಿಗೆ ಸಾಧ್ಯ ಎಂಬುದೇ ಒಂದು ಪ್ರಶ್ನೆಯಾಗಿದೆ.

ಸದ್ಯದ ಶಿಕ್ಷಣದಲ್ಲಿಯ ಕ್ರಮವಂತೂ ಪುರಾತನದಕ್ಕಿಂತ ವಿಶೇಷ ಬದಲಾವಣೆಯಾಗಿದ್ದರೂ, ಕಲಿಸಲಾಗುತ್ತಿರುವ ವಿಷಯದಲ್ಲೂ ಅಷ್ಟೇ; ಕಲಿಸುವ ಗುರುಗಳು ಕೆಲವೊಂದು ಕಟ್ಟು ನಿಟ್ಟುಗಳ ಮಧ್ಯದಲ್ಲಿ ಇದ್ದುದನ್ನೇ ಬೇಳುವ ಪ್ರವೃತ್ತಿ ಬೆಳೆದಿದೆಯಲ್ಲದೆ, ಕೇವಲ ಸಂಬಳಕ್ಕಾಗಿ ದುಡಿಯುವ ಯಂತ್ರಗಳಾಗಿಯೂ ವಾರ್ಪಡಿಸಲ್ಪಟ್ಟಿದ್ದಾರೆ. ಇದರಿಂದಾಗಿ ವಿದ್ಯಾರ್ಥಿ ಜೀವನದ ಮೇಲೆ ಧ್ಯೇಯರಹಿತವಾದ ದುಷ್ಪರಿಣಾಮವಾಗಿದೆ. ಮೇಲಾಗಿ ಕಳೆದ ಶತಕಾನುಶತಕಗಳಿಂದ ನಡೆದ ರಾಷ್ಟ್ರದಲ್ಲಿಯ ರಾಜಕೀಯ ಪರಿಸ್ಥಿತಿಯೂ ಜೀವನದಲ್ಲಿಯ ಮಹತ್ತರ ಬದಲಾವಣೆಗೆ ಪ್ರಮುಖವಾದ ಕಾರಣವಾಗಿದೆ.

ವಿದ್ಯಾರ್ಥಿಗಳ ಶಿಕ್ಷಣ ಇವೆಲ್ಲ ಕಾರಣಗಳಿಂದಾಗಿ ಬುಡಮೇಲಾಗಿ ನೈಜಶಿಕ್ಷಣದ ಬದಲು ಏನೇನೋ ಆರಂಭವಾಗಿದೆ. ವಂಶಪರಂಪರಾನುಗತವಾಗಿ ಬಂದ ಎಷ್ಟೋ ಉದ್ಯಮಗಳು ನಾಶವಾಗಿ, ಜನರು ಹೊಸ ಹೊಸ ಉಪಕುಬಿಗಳಿಗಿಂಟಿಕೊಂಡು, ಅದನ್ನು ಸಂಪೂರ್ಣತಃ ಅಳವಡಿಸಿಕೊಳ್ಳಲಾರದಂತಹ ಪ್ರಸಂಗದಲ್ಲಿ ಬದ್ದಿದ್ದಾರೆ. ಇದ್ದದ್ದೂ ಹೋಯಿತು; ಹೊಸದೂ ಇಲ್ಲ- ಜೀವನದಲ್ಲಿ ಧ್ಯೇಯವೆಂಬಗುರಿಯ ಇಚ್ಛೆಯೇ ಇಲ್ಲ. ಹೀಗಾಗಿ ನಾವು ರಾಷ್ಟ್ರವನ್ನು ಸ್ವತಂತ್ರ ವಶಪಡಿಸಿಕೊಂಡರೂ ನಮ್ಮ ಬದುಕಿನ ಮಟ್ಟವನ್ನು ಕುಗ್ಗಿಸುತ್ತಿದ್ದೇವೆಂದು ಅನ್ನಬಹುದಾದ ಪ್ರಸಂಗವೊದಗಿದೆ. ಯಾರಲ್ಲೂ ವಿಶೇಷ ಜ್ಞಾನದ ಕುಸುಹು ಇಲ್ಲ; ಅದನ್ನು ಗಳಿಸುವ ಇಚ್ಛೆಯೂ ಇಲ್ಲ. ಕುಳಿತಲ್ಲಿಯೇ 'ದೊಡ್ಡಿತನ' ದೊರೆಯಬೇಕೆಂಬಾಶೆ ಬಲವತ್ತರವಾಗಿದೆ.

ಪುರಾತನ ಕಾಲದಲ್ಲಿ ವಿದ್ಯಾರ್ಥಿಗಳ ಪರಿಪೂರ್ಣ ಶಿಕ್ಷಣದಿಂದ ಅವರ ದೇಹವು ಮನಸ್ಸೂ ಪರಿಶುದ್ಧವಾಗಿರುತ್ತಿದ್ದವಲ್ಲದೆ ಅದರಿಂದಾಗಿ ಅವರು ಇತರ ವಿಷಯಗಳ ಮೇಲೆಯೂ ಅಧಿಕಾರವಾಣಿಯಿಂದ ಮಾತನಾಡಬಹುದಾಗಿತ್ತು. ಆದರೆಇಂದಿನ ಪರಿಸ್ಥಿತಿ- ತೀರ ಬದಲಾಗಿದೆ. ಮೊದಲು 'ದೊಡ್ಡವ'ರೆನಿಸಿಕೊಳ್ಳುವ ಆಶೆ. ನಾನು ಪರೀಕ್ಷಿಸಿದ ನೂರಾರು ಸಂದರ್ಭಗಳಲ್ಲಿ ಬಹುಸಂಖ್ಯಾ ಜನರ ಪ್ರವೃತ್ತಿ ಇದೇ ಆಗಿದೆ. ಹೀಗೆ ಮಾಡುವ ಜನರ ಗುಣಗಳೂ ಕೂಡ ಉತ್ತಮವೆಂದ. ಹೇಳಲಿಕ್ಕಾಗದು. ಅಯೋಗ್ಯ ಗುಣಗಳು, ಕೆಟ್ಟ ಚಟಗಳ ವ್ಯಕ್ತಿಗಳೇ ಇಂತಹ ಕಣಕ್ಕಿಳಿಯುವುದು ಹೆಚ್ಚು. ಇದರಿಂದಲೇ ನಮ್ಮ ಬದಲಾವಣೆಯಲ್ಲಿ ವಿಶೇಷ ಅಂತರ ಕಂಡುಬರುತ್ತಿದೆ.

ಆದರೆ ವರ್ತಮಾನ ಪರಿಸ್ಥಿತಿಯಲ್ಲಿ ಇದನ್ನು ಸುಧಾರಿಸಿ, ಎಲ್ಲರನ್ನು ಉತ್ತಮ ದಾರಿಗೆ ಕಚ್ಚುವುದು ಭಾರತದಂತಹ ಬಹುಸಂಖ್ಯಾತ್ಮಕ ರಾಷ್ಟ್ರಕ್ಕೆ ಅಸಾಧ್ಯವಾದ ಮಾತು. ಆದರೆ ನಮ್ಮ ಪರೀಕ್ಷೆಯ ಪ್ರಕಾರ ಅಂತಹ ಜನರಿಗೆ ವಿಶೇಷ ಗೌರವವನ್ನೂ, ಪ್ರೋತ್ಸಾಹವನ್ನೂ ಕೊಡುವುದತ್ಯವಶ್ಯವೆಂದೂ, ಆದರಿಂದಲೇ ಅವರ ಗುಣಗಳೂ ಸುಧಾರಿಸಬಲ್ಲವೆಂದೂ ಅನುಭವಕ್ಕೆ ಬಂದಿದೆ. 'ಮಾರು ಗೆದ್ದು ಮನೆಗೆದೆಯುವದಕಶಕ್ಯವಲ್ಲವೆಂಬ ಅಭಿಪ್ರಾಯಕ್ಕೆ ಬರುವಂತಾಗಿದೆ.

ನಾವು ಕಂಡುಕೊಂಡ ಅನೇಕ ಉದಾಹರಣೆಗಳಲ್ಲಿ ಹೀಗೆ ಸಾರ್ವಜನಿಕ ಕ್ಷೇತ್ರದಲ್ಲಿ ಮುಂದೋಡಿಬಯಸುವ ವ್ಯಕ್ತಿಗಳ ಗುಣಗಳೂ ಚಟಗಳೂ ಆಪಹ್ಯಕರವಾಗಿದ್ದರೂ, ಅವರು ಸಾರ್ವಜನಿಕರಲ್ಲಿ

## ಅಂಧಾನುಕರಣೆ

(ಗತೇ ಪುಟದಿಂದ)

ಯನ್ನು ತಿಳಿದವರಾರೂ ಈ ರೀತಿ ಮಾಡಬಾರದು. ಒಬ್ಬಬ್ಬರ ಸಂತೋಷಕ್ಕಾಗಿ ಹೆಲವಾರು ಮಂದಿಗೆ ಸಂತಾಪವನ್ನುಂಟು ಮಾಡುವುದೆಂದರೆ ಅರಿಯದೆ ಹಳ್ಳಿಗದ್ದ ಶಿವರಾತ್ರಿಯ ದಿನ ದೇವರ ಪಲ್ಲಕ್ಕಿಸೇವೆಯಲ್ಲಿ ಇತರರ ತರಕಾರಿಗಳನ್ನು ಕದಿಯುವಷ್ಟೇ ಹೀನವಾದ ಕಾರ್ಯ. ಆದರೂ ಅರಿಗರೇ ಅನುಕರಣೆಯ (Imitation) ಆನಂದದಲ್ಲಿ ಇಂತಹ ಕೃತ್ಯಕ್ಕೆ ಕೈಯಿಕ್ಕುತ್ತಿರುವರಲ್ಲಾ! ಅದೇ ಶೋಚನೀಯ.

ನಾವು ಪಾಶ್ಚಾತ್ಯರನ್ನಲ್ಲದಿದ್ದರೆ ಗ್ರೀಕರನ್ನು ಅನುಕರಿಸಬಹುದೆ —ಪಿಡ್ಡಿಯಿಲ್ಲ. ಆದರೆ ಅಗಲೆಲ್ಲೊಂದು ಇದುದ್ದೇಕವಿರಬೇಕು. ಏಕೆ? ಏನು?—ಎಂಬ ವಿಮರ್ಶೆಯಿರಬೇಕು. ಅಗತ್ಯವಿರುವುದಾದರೆ— ಯೋಗ್ಯವಾದುದಾದರೆ— ಯಾವುದನ್ನು ಯಾವಾಗಲೂ ಯಾರಿಂದಲೂ ಪರಿಗ್ರಹಿಸುವುದಕ್ಕೆ ಸಿದ್ಧರಿರಬೇಕು. ಆದರೆ ಕೇವಲ ಅನುಕರಣೆಯದೇ ಉದ್ದೇಶ ಮಾತ್ರ ಇರಬಾರದು. ಉದಾಹರಣೆಗಾಗಿ ಸಮಶೀತವಲಯದಲ್ಲಿ ವಾಸಿಸುತ್ತಿರುವ ಪಾಶ್ಚಾತ್ಯರಿಗೆ ದಪ್ಪವಾದ ಸೇಂಟ್, ಕೋಟು ಧರಿಸುವ ಇಥವಾ ಕೊಗೆಬತ್ತಿ ಸೇದುವ ಅಗತ್ಯವಿರಬಹುದು ಆದರೆ ಉಷ್ಣವಲಯದಲ್ಲಿ ನೆಲೆಸಿರುವ ಭಾರತೀಯರಿಗೆ ಸೆಖೆಯಿಂದ ಮುಖ ಕೆಂಪುಮಾಡಿಕೊಂಡು ಸುಖವಿಲ್ಲದೆ ತಿರುಗಾಡುವ ನಾವು— ಆ ರೀತಿಯ ಉಡುಪನ್ನು ತೊಡುವ ಇಲ್ಲವೇ ಹೊಗೆಬತ್ತಿಯನ್ನು ಉಪಯೋಗಿಸುವ ಅವಶ್ಯವಾದರೂ ಏನಿದೆ? ಇದ. ಬರಿಯ ಅನುಕರಣೆಯಲ್ಲದಿರುವ ಅಸಕ್ತಿಯಲ್ಲವೆ?

ನಮ್ಮ ದುರ್ದೈವದಿಂದಲೋ ಏನೋ ನಮ್ಮ ಅನುಕರಣೆಯಲ್ಲಿಯೂ ಒಂದು ವೈಶಿಷ್ಟ್ಯವಿದೆ. ಆದಾವುದೆಂದರೆ ಪಾಶ್ಚಾತ್ಯರು ಮಾಡಬೇಕಾದ ಕೆಲಸಗಳನ್ನರಿತು ಮುಂದಡಿಯಿಡಬೇಕಾಗುತ್ತದೆ; ಸಾರ್ವಜನಿಕರಿಗೆ ತಿಳಿಹೇಳಬೇಕಾಗುತ್ತದೆ ಹೀಗೆ ತಿಳಿಹೇಳುವ ಪ್ರಸಂಗ ಬರುವ ಅಂತಹ ವ್ಯಕ್ತಿಗಳ ಮನಸ್ಸಿನ ಮೇಲೆ ತಾನೇ ತಾನಾಗಿ ಪರಿಣಾಮವಾಗುತ್ತದೆ. ಸಾರ್ವಜನಿಕರಿಗೆ ಅವರು ನಮ್ಮ ರೂ ಸುಸ್ಥಿತಾವದವರೂ ಆಗಿ ತೋರಬೇಕಾಗುತ್ತದೆ. ಇವೆಲ್ಲ ಕಾರಣ ಗಳಿಂದ ಅವರು ತಮ್ಮ ಅಯೋಗ್ಯವಾದ ಗುಣಗಳನ್ನೂ ಕೆಟ್ಟ ಚಟಗಳನ್ನೂ ಬಿಟ್ಟುಕೊಡುವ ಮನಃ ಪ್ರವೃತ್ತಿಯಾಗುತ್ತದೆ. ಅಲ್ಲದೆ ಮನಃ ಸಂಯಮವು ಅವರಲ್ಲಿ ಉರಿದೆದ್ದು, ಅವರಲ್ಲಿ ಮಹತ್ ಬದಲಾವಣೆ ಎದ್ದು ಕಾಣುವಂತಾಗುತ್ತದೆ.

ಈ ವಿಷಯವನ್ನು ಬದಲಾದ ಇಂದಿನ ಪರಿಸ್ಥಿತಿಯಲ್ಲಿ ಪ್ರತಿಯೊಬ್ಬನೂ ವಿಶೇಷವಾಗಿ ಗಮನಕೊಟ್ಟು, ನಮ್ಮ ನಾಗರಿಕರನ್ನು ಒಳ್ಳೆ ದಾರಿಯಲ್ಲಿ ಒಯ್ಯುವಲ್ಲಿ ನೆರವಾಗುವರೆಂದು ನಂಬುತ್ತೇವೆ. 'ಮನೆಗೆದ್ದು ಮಾರು ಗೆದ್ದೆ'ಯಬಹುದಾದರೂ ಇಂದಿನ ಕಾಲದಲ್ಲಿ 'ಮಾರು ಗೆದ್ದು ಮನೆಗೆದೆ'ಯಬಹುದಾದರೂ ಇಂದಿನ ಕಾಲದಲ್ಲಿ 'ಮಾರು ಗೆದ್ದು ಮನೆಗೆದೆ"ಯುವ ಸಾಹಸದಲ್ಲಿ ಯಶಸ್ವಿಯಾಗಲೇ ಬೇಕಾಗಿದೆ. ಇದರಲ್ಲಿ ವಿಳಂಬವಾಗುವುದೋ ಎಂಬುದನ್ನು ಭವಿಷ್ಯತ್ತು ತೀರ್ಮಾನದಲ್ಲೇ ನಿರ್ಣಯ ಕೊಡಲಿದೆ.

—ಶ್ರೀ ಮೋಹನ ಮುತಾಲಿಕ, ಕೋಂಡಾ.

ಶ್ಯರಲ್ಲದಿರುವ ಕೆಲವು ಒಳ್ಳೆಯ ಕ್ರಮಗಳನ್ನು ನಾವು ಅನುಕರಿಸುತ್ತಿಲ್ಲ. ಸಮಯಕ್ಕೆ ಸರಿಯಾಗಿ ಒಪ್ಪಿಕೊಂಡಲ್ಲಿಗೆ ಹೋಗುವುದು ಪಾಶ್ಚಾತ್ಯರ ಪದ್ಧತಿಯಾಗಿದೆ. ಆದರೆ ನಮ್ಮಲ್ಲಿ ಮಾತ್ರ ವೇಳೆಕಸ್ತಿ ಹಾಜರಾಗುವವರು ಯಾರೂ ಇಲ್ಲ. ಅದೇ ಮುಂಗುವದೆದವರೂ ಒಂದು 'ಗಜ್ಜ' ಯಾಗಿ ಹೋಗಿದೆ. ಈ ವಿಷಯದಲ್ಲಿ ಒದೇ ಕೋ ಪಾಶ್ಚಾತ್ಯರನ್ನು ನಾವು ಅನುಸರಿಸುವುದಿಲ್ಲ. ವಿದೇಶಿಯರು ಇವನ್ನೇ 'Indian Punctuality' ಎಂದು ವಿನೋದ ಗೈವುದೂ ಇದೆ. ಹೀಗಿರುವ ಉದಾಹರಣೆಗಳು ಹದೆಪ್ಪೋ ದೊರೆಯುತ್ತವೆ.

ಪಾಶ್ಚಾತ್ಯರನ್ನು ಅನುಕರಿಸುತ್ತಿರುವ ನಮ್ಮ ಹೆಣ್ಣಾಗಿ ಇಂದಿನ ತರುಣ ತರುಣಿಯರೇ. ಆದರಲ್ಲೂ ವಿದ್ಯಾವಂತರೇ ಅಧಿಕ. ವಿದ್ಯಾಸಂಪನ್ನರೇ ಇಂತಹ ಕಾರ್ಯಕ್ಕೆ ವಿನಮಾಡುವುದಾದರೆ ಅವರ ವಿದ್ಯೆಯ ಮಹತ್ವವಾಗಲರೂ ಎಲ್ಲುಳಿಯಿತ.? ನಮ್ಮ ಸಾಹಿತ್ಯ ಸಂಸ್ಕೃತಿಗಳನ್ನು ಹೋಷಿಸಬೇಕಾದವರೇ ಅದರ ಪತನಕ್ಕೆ ಕಾರಣರಾದರೆ ಅದನ್ನು ಉಳಿಸುವವರಾದರೂ ಯಾರು? ಜೇಲಿಯೇ ಹೊಲವನ್ನು ಮೇದರೆ ಕಾಯುವವರಾರು?—ಎಂಬ ಮಾತು ಇಲ್ಲಿಗೆ ಸರಿಹೋಲುತ್ತದೆ.

ಪಾಶ್ಚಾತ್ಯರನ್ನು ಅನುಕರಿಸುವ ವಿಷೇಕಹೀನವಾದ ರೀತಿ ಖಂಡಿತವಾಗಿಯೂ ಖಂಡನೀಯವೇನೋ ನಿಜ. ಆದರೂ ಫಕ್ಕನೇ ಈ ಭೂತದ ಬಾಯಿಯಿಂದ ಪಾರಾಗುವುದು ಸಾಧ್ಯವಿಲ್ಲ. ಕಾರಣ ಹತ್ತು ಜನರೆಡೆಯಲ್ಲಿ ಒಬ್ಬನು ಇಂತಹ ಸುಧಾರಣೆಗೆ ಕೈಯಿಕ್ಕಿದರೆ ಅವನು ನಗೆಗೀಡಾಗುವುದು ನಿಶ್ಚಿತ. ಮೇಲಾಗಿ ಕೆಲವು ಕಡೆಗಳಲ್ಲಿ ಈ ಅನುಕರಣೆಗೆ ಹೆಚ್ಚಿನ ಪ್ರೋತ್ಸಾಹ ದೊರೆಯುತ್ತದೆ ಉದಾಹರಣೆಗೆ ಲಾಕಾಲೇಜು'ಗಳಲ್ಲಿ 'ಗೋಟು' ಸೇಂಟ್'ಗಳನ್ನು ಧರಿಸಲೇಬೇಕೆಂಬ ಕಾನೂನು ಇದೆಯಂತೆ. ಹಾಗಿರುವಾಗ ಧೈರ್ಯವಾಗಿ ಮುಂದೆ ಬರುವ ಒಬ್ಬಿಬ್ಬ ವ್ಯಕ್ತಿಗಳಿಗೂ ಉತ್ತೇಜನವನ್ನು ಸಿದ್ಧಿಸುವುದು ಕರ್ತವ್ಯವಾಗಿ ಪರಿಣಮಿಸಿದೆ. ಸಮಸ್ತರೂ ಹಿಕವಾಗಿ ಜನರ ಮನೋಭಾವನೆಯಲ್ಲಿ ಬದಲಾವಣೆಯಾದರೆ ಮಾತ್ರ ಇದು ಸುಲಭ ಸಾಧ್ಯವಾಗುವುದು.

ಇತರರ ಅನುಕರಣೆಯಿಂದಲೇ ಭಾರತವು ಅಧೋಗತಿಗಿಳಿದಿದೆ—ಇನ್ನೂ ಇಳಿಯುವುದುಸಾಧ್ಯವಿದೆ--ಎಂದು ಪ್ರಾಜ್ಞರೇ ಅಭಿಪ್ರಾಯಪಡುತ್ತಾರೆ. ಅನುಕರಣೆಯಿಂದಿರುವ ಹಾನಿಯೆಷ್ಟೆಂಬುದನ್ನು ಗಾಂಧೀಜಿಯವರು ಇಂಗ್ಲೆಂಡಿನ ತಮ್ಮ ಸ್ವಂತ ಅನುಭವದಿಂದ ವೇದ್ಯಗೊಳಿಸಿದ್ದಾರೆ. ಆದುದರಿಂದ ಭಾರತೀಯರು — ಮುಖ್ಯವಾಗಿ ಯುವ ಜನತೆಗದವರು—ಪ್ರಯತ್ನಿಸಿ ಆದಷ್ಟು ಈ ಅನುಕರಣೆಯಿಂದ ದೂರವಿರುವುದು. ಅಗತ್ಯ. ಇಲ್ಲವಾದರೆ ಭಾರತೀಯ ಸಂಸ್ಕೃತಿ ನಾಶವಾಗಬಹುದು.

—ರಮಾನಂದ ಬನಾರಿ, ದೇಲಂಪಾಡಿ

### ಸೂಚನೆ

"ನವಯುಗ" ದಲ್ಲಿ ಪ್ರಕಟನೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ, ಕಾಗದದ ಒಂದೇ ಮುಗ್ಗುಲಿನಲ್ಲಿರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ. ನ.

Edited, Printed & Published by K. H. Shetty, at the Navayuga press, Udipi S. India

LICENCE NO. 31
Licensed to Post without Prepayment.

# ನವಯುಗ

ಸಂಪುಟ: 36 VOL. 36 | 9—5—1957 | ಸಂಚಿಕೆ 35 NO. 35

## ಕಾಂಗ್ರೆಸ್ಸಿನ ಶುದ್ಧೀಕರಣ

### ಪ್ರಾಮಾಣಿಕತೆ ಮತ್ತು ಸೇವಾಭಾವಗಳನ್ನು ಮರೆಯದೆ ಜನತೆಯ ವಿಶ್ವಾಸವನ್ನು ಸಂಪಾದಿಸಬೇಕು

ಕಳೆದ ತಿಂಗಳ ಪ್ರಥಮ ದಿನಾಂಕದಂದು ಎಲ್ಲ ಪ್ರಾದೇಶಿಕ ಕಾಂಗ್ರೆಸ್ ಸಮಿತಿಗಳ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರ ಸಮ್ಮೇಳನವೊಂದನ್ನು ಕರೆದು, ಕಾಂಗ್ರೆಸ್ ಜನತೆಯ ಬೆಂಬಲವನ್ನು ಸ್ವಲ್ಪ ಸ್ವಲ್ಪವಾಗಿಯೇ ಕಳೆದು ಕೊಳ್ಳುತ್ತಿರುವ ವರಿಷ್ಠಾಧಿಕಾರಿಗಳ ಗಮನಕ್ಕೆ ಬಂದಿರುವ ವಿಚಾರವನ್ನು ವಿಮರ್ಶಿಸಿ, ಕಾಂಗ್ರೆಸ್ ಮುಂದಾಳುಗಳು ಕಾಂಗ್ರೆಸ್ಸಿಗರಿಗೆ ಮಹತ್ವದ ಉಪದೇಶವನ್ನು ಇತ್ತಿರುವರು. ಈ ಸಮ್ಮೇಳನದ ಕಾರ್ಯಕ್ರಮಗಳು ಗುಪ್ತವಾಗಿ ಜರಗಿದ್ದುವು. ಆದರಲ್ಲಿ ಕಾಂಗ್ರೆಸ್ ಅಧ್ಯಕ್ಷ ಶ್ರೀಮಾನ್ ದೇಬಾರರ ಹಿತೋಕ್ತಿಗಳ ಸಾರವು ನಮ್ಮ ವರ-ಳ-ಒಬರ ಸಂಚಿಕೆಯಲ್ಲಿ ಪ್ರಕಟವಾಗಿದೆ. ಇದೀಗ ಭಾರತದ ಪ್ರಧಾನಿಗಳಾದ ಪಂಡಿತ ನೆಹರೂರವರ ಹಿತೋಪದೇಶದ ಸಾರವೂ ಇಷ್ಟೇ ಭಾರತ ಕಾಂಗ್ರೆಸ್ ಮುಖಪತ್ರನಾದ ಇಕನಾಮಿಕ್ ರಿವ್ಯೂ'ನಲ್ಲಿ ಪ್ರಥಮವಾಗಿ ಪ್ರಕಟವಾಗಿದೆ ಅದರ ಸಾರವನ್ನಿಲ್ಲಿ ಸಂಗ್ರಹಿಸಿಕೊಡಲಾಗಿದೆ

ಮೊನ್ನೆ ನಡೆದ ಭಾರತದ ದ್ವಿತೀಯ ಸಾರ್ವತ್ರಿಕ ಚುನಾವಣೆಗಳ ಫಲತಾಂಶವನ್ನು ನೋಡುವಾಗ ಕಾಂಗ್ರೆಸ್ಸು ತನ್ನ ಹಿಂದಿನ ವಿಶ್ವಾಸ ಮತ್ತು ಭಾವಶುದ್ಧತೆಗಳನ್ನು ಇಂದು ಉಳಿಸಿಕೊಂಡಿಲ್ಲವೆಂಬುದು ವೇದ್ಯವಾಗುತ್ತದೆ. ಸಾಮಾನ್ಯ ಕಾಂಗ್ರೆಸಿಗರ ಮೇಲೆ ಇಟ್ಟಿರುವ ತನ್ನ ವಿಶ್ವಾಸವನ್ನು ಜನತೆಯು ಇಂದು ಕಳೆದು ಕೊಂಡಿದ್ದಾರೆ. ಚುನಾವಣೆಯ ವೇಳೆಯಲ್ಲಿ ನಮ್ಮತ್ತ ಹಲವಾರು ದೂರುಗಳು ಬಂದಿದ್ದುವು. ಕಾಂಗ್ರೆಸ್ಸಿಗರಲ್ಲಿ ಪ್ರಾಮಾಣಿಕತೆಯಿಲ್ಲವೆನ್ನುವ ದೂರುಗಳು ಯಾವಾಗಲೂ ಬರುತ್ತಿವೆ. ನಾವು ಕಛೇರಿಕೆಗಳನ್ನೂ ವ್ಯಂಗ್ಯ ಚಿತ್ರಗಳನ್ನೂ ನೋಡುತ್ತೇವೆ ಕಾಂಗ್ರೆಸ್ಸಿನವರು ಅಧಿಕಾರಕ್ಕಾಗಿ ಆಂಟಿ ಕೊಳ್ಳುತ್ತಿರುವರೆ ಬುದನ್ನೂ ಇನ್ನೊಬ್ಬ ಕಾಂಗ್ರೆಸ್ಸಿಗನೊಡನೆ ಜಗಳ ಕಾಯುವರೆಂಬುದನ್ನೂ, ಕಾಂಗ್ರೆಸ್ಸಿನೊಳಗೆ ಒಳಪಂಗಡಗಳನ್ನು ಕಟ್ಟಿಕೊಳ್ಳಲು ಹವಣಿಸಿರುವುದನ್ನೂ ಕೇಳುತ್ತೇವೆ.

ಒಂದು ವಿಷಯದ ಮೇಲೆ ಯೋಗ್ಯ ರೀತಿಯಲ್ಲಿ ಚರ್ಚೆಯನ್ನು ಮಾಡುವುದಕ್ಕಾಗಿ ಮಾತ್ರ ಇಂತಹ ಒಳಪಂಗಡಗಳು ಹುಟ್ಟಿಕೊಂಡಿದೆ, ಅವರಿಂದ ದೋಷವಿಲ್ಲ. ವೈಯಕ್ತಿಕ ಪಂಚಾಂಗದ ಮೇಲೆ ಕಟ್ಟಲ್ಪಟ್ಟ ಈ ರೀತಿಯ ಗುಂಪುಗಳು ಜನತೆಯ ವಿಶ್ವಾಸವನ್ನು ಕಳೆದುಕೊಂಡು, ಮಲಿನವಾಗುತ್ತವೆ. ಕೆಲವೊಂದು ಕಾಂಗ್ರೆಸ್ಸಿಗರು ವೈಯಕ್ತಿಕವಾಗಿ ತನ್ನ ಘನತೆಯನ್ನು ಉಳಿಸಿಕೊಂಡಿರಬಹುದು. ಆದರೆ ಅನು ಒಬ್ಬ ವ್ಯಕ್ತಿಗೆ ಸಂಬಂಧಿಸಿದ ವಿಚಾರ. ಪಕ್ಷದ ದೃಷ್ಟಿಯಿಂದ ನೋಡಹೋದರೆ, ಇಂತಹ ಸಂಕುಚಿತ ಭಾವನೆಯಿಂದ ಕಾಂಗ್ರೆಸ್ ಜನವಿಶ್ವಾಸವನ್ನು ಕಳೆದುಕೊಳ್ಳುತ್ತದೆ ಎನ್ನುದೆ ಗತ್ಯಂತರವಿಲ್ಲ ಪ್ರತ್ಯೇಕ ಕಾಂಗ್ರೆಸ್ಸಿಗನೂ ಇಂದು ಅಧಿಕಾರವನ್ನು ಅಪೇಕ್ಷಿಸುತ್ತಾನೆ. ಈ ಧಾವನೆಯು ಒಮ್ಮೆ ಮನಸ್ಸಿನಲ್ಲಿ ಮೂಡಿತೆಂದರೆ, ಕಾಂಗ್ರೆಸಿಗೆ ಶಕ್ತಿಯನ್ನೀಯುವ ಮೂಲಭೂತ ಶಕ್ತಿಗಳು ಮಾಯವಾಗುತ್ತವೆ.

ಯಾವುದೇ ಒಂದು ಸಂಸ್ಥೆಯು ತನ್ನ ಹಿಂದಿನ ಚರಿತ್ರೆಯಿಂದಲೇ ಬದುಕುವುದು ಅಸಾಧ್ಯ. ಕಾಂಗ್ರೆಸ್ ಹುಟ್ಟಿದ ಸ್ವಾತಂತ್ರ್ಯಕ್ಕಾಗಿ ಪಡಿದ ಸಂಸ್ಥೆಯೆಂಬುದರ ಸ್ಮೃತಿಯನುಭವವಿರದ ಜನತೆಯು ನುಂದೆ ನಾವೀಗ ಇದ್ದೇವೆ. ನಮ್ಮ ಸಕ್ಷದ ವೈಭವಯುಕ್ತ ಸಾಹಸಗಳು ಈ ಕಾಲದ ಪ್ರಜೆಗಳಿಗೆ ಕೇವಲ ಇತಿಹಾಸ ಮಾತ್ರವಾಗಿ ಉಳಿದಿವೆ. ಒಂದು ವಿಧಾನವಿಂದ, ನಾವು ಪೂರ್ವ ಚರಿತ್ರೆಯನ್ನೇ ಮುಖವಾಗಿಟ್ಟುಕೊಂಡರೆ ಈ ಯುವ ಜನಾಂಗವ ಬೆಂಬಲವನ್ನೇ ಕಳೆದುಕೊಳ್ಳುತ್ತೇವೆ

ಹಿಂದಿನ ಕಾಲದಲ್ಲಿ ಕಾಂಗ್ರೆಸ್ ಜನಮನ್ನಣೆಗಾಗಿ ಪಡೆದುದು ತನ್ನ ಪ್ರಾಮಾಣಿಕತೆ, ತ್ಯಾಗ ಮತ್ತು ಸೇವೆಗಳಿಂದ ಪ್ರತ್ಯೇಕ ಕಾಂಗ್ರೆಸ್ಸಿಗನೂ ಹಾಗೆ ಮಾಡಿದ್ದನೆನ್ನಲಾಗದಿದ್ದರೂ ಸಾಮೂಹಿಕವಾಗಿ ಆಧ್ಯ ಕಾಂಗ್ರೆಸ್ಸಿನ ಧ್ಯೇಯವಾಗಿದ್ದವು ಅಂತಹ ಘನತೆಯಿನ್ನು ನಾವು ಇಂದು ಪಡೆದಿಲ್ಲ.

ಕಾಂಗ್ರೆಸ್ ಎಷ್ಟು ಮಟ್ಟಿಗೆ ಮುದುಕರ ಸಂಸ್ಥೆ? ತರುಣರಿಗೆ ಮತ್ತು ನವೀನ ವಿಚಾರಗಳಿಗೆ ಅದು ಎಷ್ಟುಮಟ್ಟಿಗೆ ಅವಕಾಶವನ್ನು ಕೊಡುತ್ತದೆ? ಹಳೆಯ ಮಾತುಗಳನ್ನೇ ಹಳೆಯ ದಾಟಿಯಲ್ಲಿಯೇ ನುಡಿಯುತ್ತ ಹೊಸ ವಿಚಾರಶಕ್ತಿಯನ್ನೇ ಕಳೆದುಕೊಂಡ ಜನರು ನಮ್ಮಲ್ಲಿಷ್ಟು ಜನರಿದ್ದಾರೆ! ಪೆತ್ತು ಯುವ ಜನತಾಂಗದೊಡನಿರುವ ನಮ್ಮ ಸಂಬಂಧವನ್ನು ಎಷ್ಟುಮಟ್ಟಿಗೆ ಕಳೆದುಕೊಂಡಿದ್ದೇವೆ? ನವ್ಯ ಸಂಸ್ಥೆಯಲ್ಲಿ ಸಾಕಷ್ಟು ಯುವಕರೂ ಇದ್ದಾರೆ. ಅವರು ಸಾಧಾರಣವಾಗಿ ತೃಪ್ತಿಕರವಾಗಿಯೇ ಕೆಲಸ ಮಾಡಿದಾರೆ. ಆದರೆ, ಅಲ್ಲಲ್ಲಿ ವಿಶ್ವಾರ್ಧಿಗಳು ಮಾತ್ರ ನವಗೆ ಪ್ರಬಲ ವಿರೋಧಿಗಳಾಗಿಯೇ ತೋರುತಿದ್ದಾರೆ. ಅವರ ಪ್ರಚಾರ, ವಿರೋಧಗಳನ್ನು ಹುತ್ತುಗಾಟಕೆಯೆಂದು ಕರೆಯಬಹುದು, ಆದರಲ್ಲಿ ಶಿಸ್ತಿನ ಅಭಾವವಾಗಿದೆಯೆನ್ನಬಹುದು ಆದು ಏನೇ ಇದ್ದರೂ ಕಾಂಗ್ರೆಸ್ ಸಂಸ್ಥೆ ಯಿಂದ ಜನಾಂಗದ ಬೆಂಬಲವನ್ನು ಕಳೆದ ಕೊಂಡಿದೆಯೆನ್ನಬೇಕು ಯಾವುದು ಸಂಸ್ಥೆಯನ್ನು ಪ್ರೀತಿಸಿದರೂ ಅದು ಸ್ಥಿನ ಕೆಲ ವ್ಯಕ್ತಿಗಳ ಆಚರಣೆಯಿಂದಾ ಅವರಪ್ಪ ಪಕ್ಷದ ಮೇಲೆ ಗಾಯವೆಂಬುದು ಉಳಿದಿಲ್ಲ.

ಕಾಂಗ್ರೆಸ್ ಉತ್ಸಾಹದಲ್ಲಿ ನಂಬುಗೆಯಿರುವ ಪಕ್ಷ. ಒಂದು ಕಾಲದಲ್ಲಿ ಕಾಂಗ್ರೆಸ್ಸಿಗನಿಗಿ ದುಡಿದು ಅವರ ಬೆನ್ನ ಮೂಳೆಯಾಂತಿದ್ದ ಪರಿಶ್ರಮಿ ವ್ಯಕ್ತಿಗಳು ಇಂದು ಕಾರ್ಯತೀಲರಾಗುತ್ತಿಲ್ಲ. ಹೀಗೆ ನಾವು ಕಾರ್ಯಗಳಲ್ಲಿ ಉತ್ಸಾಹತಂಗಾವೆ ಇದ್ದರೆ, ನಮ್ಮನ್ನು ಹಿಂದಟ್ಟುವ ಇತರ ಪಕ್ಷಗಳು ಪ್ರಬಲಿಸಬಹುದು. ಕ್ರಾಂತಿಯನ್ನುಂಟು ಮಾಡಿದವರನ್ನು ಕ್ರಾಂತಿಯೇ ಕಬಳಿಸುತ್ತವೆ ಎಂಬ ವಾಕ್ಯ ಫ್ರಾನ್ಸ್, ರಶ್ಯಾಗಳ ವಾಲಿಗೆ ನಿಲವಾಗಬಹುದು ನಮ್ಮ ಕ್ರಾಂತಿ ವಿಶೇಷ ರೂಪಿಯಾದುದು. ಆದುದರಿಂದ, ಆ ಮಾತು ನಮಗೆಂದಿಗೂ ಅನ್ವಯಿಸಲಾರದು ಕಾಂಗ್ರೆಸ್ ನಿರ್ಮಿಸಿದ್ದ ಶಕ್ತಿಯೇ ಕಾಂಗ್ರೆಸ್ಸಿಗರಿಂತ ಬಿಡುವುದು ವರಿದು ಕಾಂಗ್ರೆಸ್ ಹಿಡಿಯಬಹುದು. ಆದುದರಿಂದ, ಆಶಕ್ತಿಯನ್ನು ಉರ್ಜಿತ ಡಿಸಿಕೊಂಡ ಪರಿಶ್ರಮಿಗಳಾಗುವ ರುವ ಬೇಕು.

ನಾವು ಮೂವತ್ತು ನಾಲ್ವತ್ತು ವರ್ಷಗಳ ಹಿಂದಿನ ಚರಿತ್ರೆಯನ್ನು ಪ್ರಾರಂಭಿಸಿದ್ದೇವು. ಅವರಪ್ಪ ಜಯಶೀಲರಾದೆವು ಆ ಮೇಲೆ ನಮಗೆ ಇನ್ನೊಂದು ವಿಧಾನದ ಚರಿತ್ರೆಯನ್ನು ಕೈಗೆತ್ತಿಕೊಳ್ಳಬೇಕಾಗಿ ಬಂತು. ನಮ್ಮ ಜಯವು ಭಾರತದ ಲಕ್ಷಾಂತರ ರೈತ ಬಾಂಧವರ ಕೈಯ್ಯಲ್ಲಿದೆ ಎಂಬುದನ್ನು ವರಿಸಬಾರದು.

ಒಂದು ಸಮಸ್ಯೆಯ ಮೂಲವನ್ನು ತಿಳಿದೆ ಅದನ್ನು ಬಗೆಹರಿಸುವ ವಿಧಾನವನ್ನು ಚಿಂತಿಸುವುದು ಸರಿಯಲ್ಲ ಒಂದು ರಾಷ್ಟ್ರ, ಪಕ್ಷ ಅಥವಾ ವ್ಯಕ್ತಿಯ ಅಂತ್ಯ ಪರಾಜಯಕ್ಕೆ ಮದ್ದೆಂಬುದೇ ಇಲ್ಲ ವ್ಯಕ್ತಿಯು ಆಗ ಶಕ್ತಿಹೀನ ವ್ಯಕ್ತಿ ಸಾಗುತ್ತಾನೆ. ಇಂತಹ ಅಪಜಯಗಳು ಪಕ್ಷಗಳಿಗೂ ಒದಗಬಹುದುದುಂಟು. ಆದರೆ ಕಾಂಗ್ರೆಸ್ ಇಂದು ಆ ಸ್ಥಿತಿಗಳಿದೆಯೆನ್ನಬಹುದಿಲ್ಲ. ಆದರೆ, ಅದು ಅನೇಕ ಕಾಂಗ್ರೆಸ್ಸಿಗರಿಗೆ ಮಾತ್ರ ಒಗಾದೆಯಾವ ಸ್ಥಾನಂತರವನ್ನೇ ಇರಲಿ ಯಾವ ಜಾತಿಯವನೇ ಇರಲಿ ನಾವು ಜನರೊಂದಿಗೆ ತಕ್ಕಶುದ್ಧವಾಗಿ

(ಉಳಿದ ಪುಟ ನೋಡಿರಿ)

SEASON DEPOSITS
ಸೀಸನ್ ಠೇವಣಾತಿಗಳು

ಸೇ. 4% ದರ ಬಡ್ಡಿಯಲ್ಲಿ ಸೀಸನ್ ಠೇವಣಾತಿಗಳನ್ನು ಈಗ ಸ್ವೀಕರಿಸಲಾಗುವುದು.

ದೊಡ್ಡ ಡಿಪೊಜಿಟು ಮೊಬಲಗುಗಳಿಗೆ ಸ್ಪೆಶಲ್ ಬಡ್ಡಿ ದರಗಳು.

ಹೆಚ್ಚಿನ ವಿವರಗಳಿಗೆ ನಮ್ಮನ್ನು ವಿಚಾರಿಸಿರಿ.

ದಿ ವಿಜಯ ಬೇಂಕ್ ಲಿಮಿಟೆಡ್
ಪ್ರಧಾನ ಕಛೇರಿ ಮತ್ತು ಶಾಖೆಗಳು.

ಜುಮ್ಲಾ ಸಂಪತ್ತು (13—12—1956) | ರೂಪಾ 1 ಕೋಟಿಗೂ ಮಿಕ್ಕಿದೆ.

# ಪತ್ರಲೇಖನ

## ನಮ್ಮ ಪ್ರತಿಯೊಂದು ಪತ್ರವೂ ಕಲಾತ್ಮಕವಾಗಿರಬೇಕು

ದಿನ ಬೆಳಗಾಯಿತೆಂದರೆ ಅಂಚೆ ಪೆಟ್ಟಿಗೆಗಳಲ್ಲಿ ಅನೇಕ ಮಂದಿ ತಮ್ಮ ಪತ್ರಗಳನ್ನು ಹಾಕುತ್ತಾರೆ. ದೂರನ ಊರಿನಲ್ಲಿರುವ ಹಿತನಿಮ್ರರಿಗೆ, ಸಂಬಂಧಿಕರಿಗೆ ತಮ್ಮ ಯೋಗ ಕ್ಷೇಮವನ್ನು ತಿಳಿಸುವ, ವ್ಯಾಪಾರ ವಹಿವಾಟಿನ ಅಥವಾ ಇನ್ನಿತರ ರೀತಿಯ ಕಾಗದ ಪತ್ರಗಳು ಕೋಟಿ ಗಟ್ಟಲೆಯಲ್ಲಿ ಒಂದೂರಿನಿಂದ ಇನ್ನೊಂದೂರಿಗೆ ದಿನಂಪ್ರತಿ ಸಾಗಿಸಲ್ಪಡುತ್ತವೆ. ಆಂಜೆ ಜವಾನನ ಬರವನ್ನು ದೂರದಿಂದಲೇ ವೀಕ್ಷಿಸಿ, ತಮಗೆ ಪತ್ರವಿದೆಯೇ ಎಂದು ಕೇಳುವ, ಕಾದು ನೋಡುವ ಜನರು ಸಹಸ್ರಾರು. ಎಂದರೆ, ಪತ್ರವು ನಮ್ಮ ಇಂದಿನ ನಾಗರಿಕ ಜೀವನದ ಒಂದು ಮಹತ್ವದ ಪಾತ್ರವನ್ನು ವಹಿಸುತ್ತದೆ. ನಮ್ಮ ಪರೋಕ್ಷದಲ್ಲಿ ನಮ್ಮ ಅಭಿಪ್ರಾಯಗಳನ್ನು ನಮಗೆ ಬೇಕಾದವರಿಗೆ ತಿಳಿಸುವ ಮಹಾಸಾಧನವೇ ಈ ಪತ್ರ.

ಪತ್ರಲೇಖನವೂ ಒಂದು ಕಲೆ. ಈ ಕಲೆಯು ಈಗೀಗ ಕ್ಷೀಣಗೊಳ್ಳುತ್ತಿದೆ, ಆದರಲ್ಲಿನ ಕಲಾತ್ಮಕ ದೃಷ್ಟಿಯು ದೂರವಾಗುತ್ತಾ ಬರುತ್ತಿದೆ. ಆದರೆ ವ್ಯವಹಾರ ಸಾಧನಗಳು ಮಾತ್ರ ಪ್ರತಿಕ್ಷಣಗಳಲ್ಲಿಯೂ ಕೆಜ್ಜೆಯಿತ್ತಾ ಬರುತ್ತಿದೆ. ಜವಾನರ ಮೂಲಕ ಓಡುತ್ತಿದ್ದ ಪತ್ರಗಳು ಗಾಡಿ, ಮೋಟಾರು, ರೈಲು, ವಿಮಾನ ಹಾಗೂ ಹಡಗುಗಳಲ್ಲಿ ಕುಣಿಯುತ್ತಾ ಇವೆ. ಇಷ್ಟು ಸಂಕೀರ್ಣಗಳಿರುವಾಗ ಪತ್ರಲೇಖನ ಕಲೆಯು ಮಾತ್ರ ಬೆಳೆಯುವ ಬದಲು ಅಧೋಗತಿಗಿಳಿಯುತ್ತಿರುವುದು ಮಾತ್ರ ಶೋಚನೀಯ ಸಂಗತಿಯಾಗಿದೆ.

ಕೆಲವೇ ವರ್ಷಗಳ ಹಿಂದೆ ವರ್ತಮಾನ ಪತ್ರಗಳು ಅಪರೂಪವಾಗಿದ್ದಾಗ ಆಕಾಶವಾಣಿಯು ಆಕಾಶ ಕುಸುಮವಾಗಿದ್ದಾಗ, ದೂರದರ್ಶಕ ಯಂತ್ರವು ಜನರ ಕಲ್ಪನೆಗೆ ದೂರವಾಗಿದ್ದಾಗ, ಜನತೆಯ ನಡುವೆ ಪರಸ್ಪರ ಪತ್ರಗಳ ಮೂಲಕವಾಗಿಯೇ ಸಂಬಂಧವು ಬೆಳೆಯುತಿತ್ತು. ಬಂಧುಗಳಿಗೆ, ಸ್ನೇಹಿತರಿಗೆ ಎಲ್ಲರಿಗೂ ತನ್ನ ಸಮಾಚಾರಗಳನ್ನು ಪರೋಕ್ಷದಲ್ಲಿ ತಿಳಿಸುವುದಕ್ಕೆ ಮುಖ್ಯ ಸಾಧನ ಅದೊಂದೇ ಆಗಿತ್ತು. ಆದರೆ, ನಾಗರಿಕತೆ ಬೆಳೆದು ಬಂದಂತೆ, ಬಂಧುಗಳ ಸಂಬಂಧವು ಶಿಥಿಲವಾಗುತ್ತಾ ಬಂದು, ತನ್ನ ಕುರಿತಾದ ಯೋಚನೆಯೇ ಅಧಿಕವಾಗುತ್ತ ಬಂದಂತೆ ಪತ್ರಲೇಖನದಲ್ಲಿ ಬೇರೂರಿದ ಕಲಾತ್ಮಕ ದೃಷ್ಟಿಯು ಹಾರಿಹೋಯಿತೆನ್ನದೆ ಗತ್ಯಂತರವಿಲ್ಲ. ವ್ಯರ್ಥವಾಗಿ ಕುಳಿತು ಪತ್ರ ಬರೆಯುವುದು ಕಾಲವ್ಯಯ ಮಾಡುವ ಒಂದು ಸಾಧನ ಎಂಬಭಿಪ್ರಾಯವೂ ಸುಧಾರಿತ ಮಟ್ಟಿನ ಜನರಲ್ಲಿ ಮನೆಮಾಡಿದೆ. ವಿವಾಹದಿನ ಕಾಣಿಕೆಯನ್ನರ್ಪಿಸಿದ ಸ್ನೇಹಿತರಿಗೆ, ಶುಭ ಸಂದೇಶವಿತ್ತ ಮಹನೀಯರಿಗೆ, ಸವಿಪದ ಬಂಧುಗಳು ದಿವಂಗತರಾದಾಗ ದುಃಖಸೂಚಕ ತರಾವನ್ನು ಕಳಿಸಿದ ಸೌಜನ್ಯಹೆಚ್ಚರಿಗೆ, ಎಲ್ಲರಿಗೂ ತಮ್ಮ ಅಗಾಧ ಕೃತಜ್ಞತೆಯನ್ನು ಒಂದು ಕಾಲಂ ಇಂಚಿನಷ್ಟು ಸ್ಥಳದಲ್ಲಿ ಒಂದು ಸಣ್ಣ 'ಪ್ರಕಾಶ ಪತ್ರಿಕೆಯನ್ನು ಪ್ರಕಟಿಸಿದರೆ, ತೀರಿತು, ತಮ್ಮ ಕರ್ತವ್ಯ ಪೂರಣೆಯಾದಂತೆಯೇ ಎಂದು ತಿಳಿಯುವ ಕುಶಲ ಮತಿಗಳ ಸಂಖ್ಯೆ ಇಂದು ಬೆಳೆದಿದೆ. ವಧು ಬೇಕು, ಎಮ್ಮೆ ಕಳೆದಿವೆ, ಹುಡುಗ ಕಾಣೆಯಾಗಿದ್ದಾನೆ ಇತ್ಯಾದಿ ಎಲ್ಲವೂ ಈಗ ಪತ್ರಿಕೆಗಳ ಮುಖಾಂತರವೇ ಸಾರ್ವಜನಿಕರಿಗೆ ತಿಳಿಸಲ್ಪಡುತ್ತವೆ. ಇದಲ್ಲದೆ, ಪ್ರತ್ಯೇಕ ಪತ್ರ ಬರೆಯುವುದಕ್ಕಿಂತ ಹೀಗೆ ಪ್ರಕಾಶಪಡಿಸುವುದು ತನ್ನ ಕೀರ್ತಿಗೂ, ಸಂಭಾವಿತತನಕ್ಕೂ ಯೋಗ್ಯವೆಷ್ಟನ್ನುವ ಸುಸಂಸ್ಕೃತ ಭಾವನೆ ನಮ್ಮಲ್ಲಿ ಮನೆ ಮಾಡಿದೆ. "ಪ್ರತಿಯೊಬ್ಬರಿಗೂ ಪ್ರತ್ಯೇಕವಾಗಿ ಅರ್ಪಿಸುವುದು ಅಸಾಧ್ಯವಾದುದರಿಂದ ಈ ಮೂಲಕ ನಿಮಗೆ ನನ್ನ ಕೃತಜ್ಞತೆಯನ್ನು ಅರ್ಪಿಸುತ್ತೇನೆ" — ಈ ವಾಕ್ಯದಲ್ಲಿ ಎಲ್ಲ ಭಾವನೆಯೂ ಅಡಕವಾಯಿತು. ಆದರೆ ಈ ಒಂದು ಮನೋವೃತ್ತಿಯ ನಮ್ಮ ಜನರಲ್ಲಿ ಮನೆ ಮಾಡಿರುವುದರಿಂದಲೇ 'ಪತ್ರಲೇಖನ'ದಲ್ಲಿ ನೈಸರ್ಗಿಕ ಸೌಂದರ್ಯವು ಕಳೆಗುಂದಿ, ಯಾಂತ್ರಿಕತೆಯು ಬೆಳೆಯುವುದಕ್ಕೆ ಕಾರಣವಾಯಿತು.

ನಮ್ಮ ಪೂರ್ವಿಕರು ಪತ್ರಲೇಖನದತ್ತ ಕೊಡುತಿದ್ದಷ್ಟು ಮಹತ್ವವನ್ನು ನಾವೆಂದೂ ಕೊಡುವುದಿಲ್ಲ. ನಮ್ಮ 'ಮಿತವ್ಯಯಾಸಕ್ತಿ'ಯೇ ಇದಕ್ಕೆ ಕಾರಣ. ಆದುದರಿಂದಲೇ ನಮ್ಮ ಪತ್ರ ಯಾಂತ್ರಿಕವಾಗಿ ಪರಿಣಮಿಸಿತು. ಕೆಲ ಮಹನೀಯರು ತಮ್ಮ ಪತ್ರಗಳನ್ನು ಇನ್ನೊಬ್ಬರಿಂದ ಬರೆಯಿಸುತ್ತಾರೆ. ಅದರಿಂದ ತಮ್ಮ ದೊಡ್ಡ ಸ್ಥಿತಿಯನ್ನು ಪ್ರದರ್ಶಿಸಿ, ತಮಗೆ ಪತ್ರ ಬರೆವಷ್ಟೂ ವ್ಯವಧಾನವಿಲ್ಲವೆಂದು ಪರೋಕ್ಷವಾಗಿ ತಿಳಿಸ ಬಯಸುತ್ತಾರೆ. ಆದರೆ, ನಿಜವಾಗಿ ವ್ಯವಧಾನವಿಲ್ಲದೆ ಇರುವವರು ರಾಜ್ಯದ ಮಂತ್ರಿ ಮೊದಲಾದವರು ಈ ರೀತಿ ಮಾಡಿದರೆ, ಅದರಿಂದ ಶೋಚ್ಯಗೇಳುವ ಅಗತ್ಯವಿಲ್ಲ, ನಮ್ಮ ನಿಮ್ಮಂತಹ ಸಾಧಾರಣ ವ್ಯಕ್ತಿಗಳೂ ಈ ವಿಧಾನವನ್ನು ಅನುಸರಿಸಿದರೆ, ಅದಕ್ಕೇನು ಹೇಳಬೇಕು? ಒಬ್ಬ ಸಾಮಾನ್ಯ ವ್ಯಕ್ತಿಗೆ ತನ್ನ ಪತ್ರವನ್ನು ಬರೆಯಲು ಸಮಯವಿಲ್ಲವೆಂದರೆ, ಅದು ಅಭಿಮಾನದ ಸಂಗತಿಯಲ್ಲ, ಬದಲು ಬಿಗುಮಾನದ ಪ್ರದರ್ಶನ ಮಾತ್ರ. ಬರೆಯುವ ಇಚ್ಛೆಯಿದ್ದರೆ, ಪ್ರತ್ಯೇಕ ಭಾರತೀಯನೂ ತನ್ನ ಪತ್ರವನ್ನು ತಾನೇ ಬರೆಯಬಲ್ಲ. ಯಾರು ತಮಗೆ ವ್ಯವಧಾನವೇ ಇಲ್ಲವೆಂದು ತಿಳಿಯುವರೋ, ಅಂತಹ ವ್ಯಕ್ತಿಗಳಲ್ಲಿ ನೇಕಡಾರ್ಧ ರಷ್ಟು ಮಂದಿ ನಮ್ಮನ್ನೆ ಮೋಜಿಗಾಗಿ ಮಾತ್ರ ಆ ರೀತಿ ಕೇಳುತ್ತಾರೆ. ಲಿಯೋನಾರ್ಡೊ ವಿಂಚಿಯೆಂಬ ಶ್ರೇಷ್ಠ ಕಾಲಾಗಾರನು ಸಮಯವು ಅದನ್ನುಪಯೋಗಿಸುವನಿಗೆ ಧಾರಾಳವಾಗಿದೆ ಎನ್ನುತ್ತಾನೆ. ಮನಸ್ಸಿದ್ದಲ್ಲಿ ಮಾರ್ಗವಿಲ್ಲದೆಯೇನು? ಆದರೆ ಅಭಿಮಾನವನ್ನು ಮಾತ್ರ ಕೊಂಚ ಹೊತ್ತು ದೂರೀಕರಿಸಬೇಕು, ಅಷ್ಟೆ.

ಭಾರತದಲ್ಲಿ ಕಾಲಿರಿಸಿದ ವಿದೇಶೀ ಸಂಸ್ಕೃತಿಯ ಪ್ರಭಾವದಿಂದಾಗಿ ಸಾಮಾನ್ಯ ಜನರೆಲ್ಲರೂ ತಮ್ಮನ್ನು ಬಹು ದೊಡ್ಡ ವ್ಯಕ್ತಿಗಳೆಂದು ತಿಳಿದುಕೊಂಡು ವೈಯಕ್ತಿಕ ಪತ್ರಗಳಿಗೆ ತಕ್ಕ ಗಮನವನ್ನು ಕೊಡುವುದಿಲ್ಲ. ನಾವು ನಮಗೆ ಆಗತ್ಯ ಬಿದ್ದಾಗ ಅನೇಕ ಪತ್ರಗಳನ್ನು ಬರೆಯುವುದಿಲ್ಲವೆ? ವ್ಯಾಪಾರ ಸಂಬಂಧ, ಉದ್ಯೋಗ ಸಂಬಂಧಗಳಲ್ಲಿ. ಉಪಕಾರವಾಗಬೇಕಾದಾಗ, ಪ್ರೇಮವನ್ನು ವ್ಯಕ್ತಪಡಿಸಬೇಕಾದಾಗ, ಸಹಾಯವನ್ನು ಯಾಚಿಸುವಾಗ ನಾವು ಯಾರ್ಯಾರಿಗೆ ಪತ್ರ ಬರೆಯುವುದಿಲ್ಲ? ಆದರೆ, ಇನ್ನಿಲ್ಲವೂ ನಮ್ಮ ಸ್ವಂತ ಲಾಭದ ದೃಷ್ಟಿಯವು. ಆದುದರಿಂದಲೇ ಅವುಗಳಲ್ಲಿ ನಮಗೆಷ್ಟು ಮಮತೆ! ಇಂತಹ ಪತ್ರಗಳಲ್ಲಿ ನಮ್ಮ ಸೌಜನ್ಯ, ದೀನತೆ, ಉತ್ತಮ ಮನೋಭಾವನೆ, ವಿದ್ಯೆ ಎಲ್ಲವೂ ವ್ಯಕ್ತವಾಗುತ್ತವೆ. ಆದರೆ, ಪರಪೂರಲ್ಲಿರುವ ತಂದೆಗೋ, ಅಣ್ಣನಿಗೋ, ಮಿತ್ರನಿಗೋ, ಅವರಿಂದ ನಾವೇನನ್ನೂ ಬಯಸದ ವೇಳೆ 'ಕ್ಷೇಮ' ಎಂಬೆರಡಕ್ಷರಗಳಲ್ಲಿಯೇ ನಮ್ಮ ಮನೋಭಾವವು ಸಂಪೂರ್ಣವಾಗಿ ಪ್ರದರ್ಶನವಾಗಿರುತ್ತದೆ. ಕೆಲವೊಮ್ಮೆ ಅದಕ್ಕೂ ಬಿಡುವು ದೊರೆಯುವುದಿಲ್ಲವೆಂದರೆ ಆಶ್ಚರ್ಯಕಾರಿಯಲ್ಲವೆ?

ನಮ್ಮ ಪ್ರೌಢಶಾಲೆ ಹಾಗೂ ಕಲಾ ಕಾಲೇಜುಗಳಲ್ಲಿನ ವಿದ್ಯಾರ್ಥಿಗಳಲ್ಲಿ ಸ್ನೇಹ ಪತ್ರಗಳೂ ಆಗಾಗ ಸಂಚರಿಸುತ್ತಿದ್ದರೂ, ಆವುಗಳ್ಯಾವಾಗಿಯೇ ಇವೆ.ಇಂತಹ ಪ
ಗಳನ್ನು ಬರೆಯಲೇ ಬಾರದು ಎಂಬ ಆ
ಪ್ರಾಯವಿದ್ದರೂ, ಅವು ಹೃದಯಪೂ
ರ್ಣಿಯಾಗಿರಬೇಕೆಂಬ ಮತವೂ ಒಂದಿ

ನಾವು ಬರೆಯುವ ಒಂದೊಂದು ಪ
ವು ಒಂದೊಂದು ವಿಧಾನಕ್ಕೆ ಸೇರುತ್ತ
ಆವುಗಳಲ್ಲ ಒಂದು ವ್ಯವಹಾರೀ ಪತ್ರಗ
"ಮಹನೀಯರೇ, ನಿಮ್ಮ ಜನೇ ತಾ
ಕೆನ ಪತ್ರದಲ್ಲಿ ತಿಳಿಸಿದಂತೆ ನಾವು
ದಿನಗಂಂ ಗ್ರೋಸ್ ಸಾಬೂನನ್ನು...
ಹೀಗೆ ಅದು ಮುಂದುವರಿಯುತ್ತ
ವ್ಯೆಯಕ್ತಿಕ ಪತ್ರಗ
"ನಲ್ಮೆಯ ಬಾಳ ಗೆಳತ
ನಾವು ಪರಸ್ಪರ ಮುದ್ದಿಟ್ಟು ಅಂ
ಬೇಕ್ಕೊಂಡ ವೇಲೆ.... ..." ಹೀಗೆ ಆ
ಮುಂಬೆ ಹೋಗುತ್ತದೆ. ಇದಲ್ಲದೆ ಸ್ನೇಹ
ಚಾರದ ಪತ್ರಗಳು ಸರ್ವಸಾಮಾನ್ಯವಾ
ದುವುಗಳು.

ಆಂಗ್ಲ ಸಾಹಿತ್ಯದಲ್ಲಿ ಇಂತಹ ಪತ್ರ
ಗಳಿಗೆ ಬಹಳ ಪ್ರಾಧಾನ್ಯವಿದೆ. ಕೆಲವ
ಒಂದೊಂದು ಪತ್ರವನ್ನು ಕಾವ್ಯವಾ
ಯೂ ಬರೆಯುವುದುಂಟು ಸಂಸ್ಕೃತ ಶಾಕ
ತಲಾ ನಾಟಕದಲ್ಲಿ ಶಕುಂತಲೆಯು
ಶ್ಯಂತನಿಗೆ ತನ್ನ ಪ್ರೇಮವನ್ನು ಒಂ
ಶ್ಲೋಕದ ಮೂಲಕ ಬರೆದು ತಿಳಿಸು
ಹೆಂಚಿಕೆಯನ್ನು ಮಾಡಿದ ಘಟನೆಯ
ಉಲ್ಲೇಖವಾಗಿದೆ. ಇಂಗ್ಲೆಂಡಿನಲ್ಲಿ ಪ
ಗಳ ಸಂಕಲನವನ್ನು ಪ್ರಕಟಿಸುವ ಹವ
ಸವೂ ಇತ್ತು. ಇವುಗಳಲ್ಲಿ ನೀತಿ, ತ
ಆ ಕಾಲದ ಇತಿಹಾಸಗಳು ಕೂಡಿಕೊಂ
ರುವುದೂ ಇದಕ್ಕೆ ಕಾರಣವಾಗಿತ್ತು. ಡ
ಜಾನ್‌ಸನರು ಲಾರ್ಡ್ ಚೆಸ್ಟರ್ ಫೀ
ರಿಗೆ ಬರೆದ ಪತ್ರಗಳ ಸಂಕಲನವು ಇಂತ
ಉದಾತ್ತ ಪತ್ರಗಳಿಗೆ ಉದಾ
ರಣೆಯೆನ್ನಬಹುದು.

ವೈಯಕ್ತಿಕ ಪತ್ರಗಳು ಈಗ ನಾ
ಬಗೆಯಾಗಿ ಬದಲಾಗುತ್ತಿವೆ. ಒಬ್ಬೊ
ನೂ ಒಂದೊಂದು ವಿಧವಾಗಿ ಬರೆಯ
ತ್ತಾನೆ. ಪತ್ರಿಕೆಗಳಲ್ಲಿ ಸಂಪಾದಕರಿಗೆ
ದುಗರು ಬರೆಯುವ ಪತ್ರಗಳು ಸರ್ವ
ಮಾನ್ಯವಾಗಿವೆ. ಊರ ರಸ್ತೆಗೆ ಜಲ್ಲಿ
ಕಲ್ಲೇಕಾದರೆ, ಮುರಿದ ಸಂಕ ರಿಪೇರಿಯ
ಗಬೇಕಾದರೆ, ಸಿನೆಮಾ ಕಂಪೆನಿ ವ್ಯವ
ಜನ್ನಾಗಿಲ್ಲವಾದರೆ ಏನು ಬೇಕಾದ
ಈಗ ಪತ್ರಿಕೆಗಳಿಗೆ ಕಳಿಸಿದರೆ ಸರಿ, ಅ
ರು ಅದನ್ನು ಯೋಗ್ಯ ಕಂಡರೆ ಪ್ರಕಟಿ
ಬಿಡುತ್ತಾರೆ. ಅವನ್ನು ಯಾರು ಓದು
ದು ಆಗತ್ಯವೋ ಅಂತಹರು ಓದಲಿ, ಬಿ
ಲಿ. ಅಟ್ಟರ ಜಿಂತೆ ನಮಗಿಲ್ಲ. ಪತ್ರಿಕೆಗ
ಒದಗಿಸಿದ ಅವಕಾಶವನ್ನು ಸದುಪಯೋ
ಗ ಪಡಿಸಿಕೊಂಡರೆ ತೀರಿತು, ಅಷ್ಟಿಗೆ
ಮ್ಮ ಪಾಲಿನ ಕೆಲಸವಾಯಿತು.

ಇಂಗ್ಲೆಂಡಿನಲ್ಲಿ ಒಂದು ಸಮಸ್ಯೆಯವೆ
ಲೆ ಸಾರ್ವಜನಿಕರ ದೃಷ್ಟಿಯನ್ನು ಎಳೆ

(೧೦ನೇ ಪುಟ ನೋಡಿರಿ)

THE
CANARA INDUSTRIAL & BANKING SYNDICATE LTD.
Estd.: 1925, H. O.: UDIPI, S. India.
GROWING
RESOURCES
as on
31-12-1926 - Rs. 17,355
31-12-1936 - Rs. 35,45,544
31-12-1946 - Rs. 4,26,07,093
31-12-1956 - Rs. 10,64,10,312
THANKS
to
our thousands of customers all over the country for their confidence and good-will.
T. A. PAI, B. Com. (Bom.), A.I.I.B., F.R.E.S. (Lond) General Manager.
DR. T. M. A. PAI, M. B., B. S., Managing Director.

'NAVAYUGA' WEEKLY is in the list of periodicals and Newspapers approved for use in Secondary Schools as per proceedings Roc. No 466 N/50 dated 2-12-1950 of the Director of public Instruction Madras.

# ಜೀವನ ವಿಧಾನ

## ಆವರ್ತನ ರೂಪದಲ್ಲಿಯೇ ಜನಜೀವನವು ಸುತ್ತುತ್ತಿದೆ

ಹಳೆಯದನ್ನು ಬದಿಗಿರಿಸಿ ನೂತನತೊಂದನ್ನು ಹೊರತರುವುದೂ ನಾಗರಿಕತೆಯ ಮೆಟ್ಟಿಲಲ್ಲೊಂದು. ನಾಗರಿಕನಿಸಿಬೇಕಿದ್ದರೆ— ದಿನದಿಂದ ದಿನಕ್ಕೆ- ಉಡುಗೆ ತೊಡುಗೆಯಲ್ಲಿ, ನಡೆಗೆಯ ವಿಚಾರದಲ್ಲಿ, ನೋಡುವ ನೋಟದಲ್ಲಿ, ಆಡುವ ಆಟದಲ್ಲಿ, ಹೇಳುವ ಮಾತಿನಲ್ಲಿ, ತಿಂಡಿ ತಿನಿಸುಗಳಲ್ಲಿ ಏಕೊಂದು ಬದಲಾವಣೆಯಾಗುತ್ತಿರಬೇಕು. ಅಂದರೇನೇ ನಾಗರಿಕತೆಗೊಂದು ಭೂಷಣ

ಆದರೆ ನಾಗರಿಕತೆಯ ಆ ಮೆಟ್ಟಿಲುಗಳು ಉನ್ನತವಾಗಿರದೆ ವ್ಯತ್ಯಾಸವಾಗಿವೆ. ಅಂದರೆ ತುಳಿದ ಮೆಟ್ಟಿಲನ್ನೇ ಮತ್ತೊಮ್ಮೆ—ಮಗದೊಮ್ಮೆ ತುಳಿಯಬೇಕಾಗುತ್ತಿದೆ. ನಮ್ಮ ಆಚಾರ ವಿಚಾರಗಳನ್ನು —ನಡೆನುಡಿಗಳನ್ನು ವೀಕ್ಷಿಸಿದಲ್ಲಿ ನಮಗಿದರ ಸತ್ಯ ಕಲ್ಪನೆ ಹೊಳೆಯುವುದು.

ನಮ್ಮ ಹಿರಿಯರ ಉತ್ತುಸು ತೊಡುಗುಗಳಲ್ಲಿ ಬದಲಾವಣೆಯಾಗುತ್ತಾ ಈಗ ಪುನಃ ಅದೇ ಮಟ್ಟಕ್ಕೆ ಬಂದಿದೆ. ಪ್ರಾಚೀನ ಭಾರತೀಯರು ನಗ್ನ, ಅರೆ ನಗ್ನರಾಗಿದ್ದರು. ಮುಂದೆ ಪ್ರಗತಿಯನ್ನೈದುತ್ತಾ 'ಧೋಷಾ' ಪದ್ಧತಿಯ ವರೆಗೆ ಬಂದು ಮುಟ್ಟಿತು ಪರಿಸ್ಥಿತಿ. ಆದರೆ ಈಗೀಗ ಜನರು ತಮ್ಮ ಮನೋಭಾವನೆಯನ್ನು ಮತ್ತೂ ಬದಲಿಸಿ, ನಗ್ನತಾವಾದಿಗಳಾಗಿದ್ದಾರೆ. ಇದಕ್ಕೆ ಇಂದಿನ ಹೆಚ್ಚಿನ ನಾಗರಿಕರು ನೋಡುವ ಇಂಗ್ಲಿಷ್ ಚಲಚ್ಚಿತ್ರಗಳು; ಹೀರಳವಾಗಿ ಪ್ರಕಟವಾಗಿರುವ ಕಾಮಗ್ರಂಥಗಳು; ಪ್ರಗತಿಶೀಲ ಸಾಹಿತ್ಯಗಳು; ಸಿನಿವಮಾನಾಟಕ—ನಿತ್ಯ ಜೀವನದ ವೇಷ ಭೂಷಣಗಳು ಉದಾಹರಣೆ. ಈಗ ನಗ್ನತಾವಾದ ಸುರುವಾಗಿದೆಯಷ್ಟೆ; ಅದು ಇನ್ನೂ ಪ್ರಗತಿಯನ್ನೈಯಲಿಕ್ಕಿದೆ.

ಆಹಾರದ ಕುರಿತು ಹೇಳುವುದಿದ್ದರೆ— ನಮ್ಮ ಪೂರ್ವಜರು ಮಧು ಮಾಂಸಗಳ ಸೇವನೆಯ.ನ್ನು ಹೀರಳವಾಗಿ ಮಾಡುತ್ತಿದ್ದರು. (ಗುತ್ತುಗಾಡು ನಿವಾಸಿಗಳು.) ಯೇಕೆ — ಇನ್ನೂಹಿಂಸೆ ದೃಷ್ಟಿಸಿದರೆ ಹಸಿ ಮಾಂಸವನ್ನೇ ಭಕ್ಷಿಸುತ್ತಿದ್ದರು. ಬರಬರುತ್ತಾ ಮಾಂಸಾಹಾರಿಗಳು ಕಡಮೆಯಾಗಿ ಸಸ್ಯಾಹಾರಿಗಳು ಹೆಚ್ಚಾದರು. ಮತ್ತೂ ಮುಂದೆ ಬಂದಂತೆ ಮಾಂಸಾಹಾರವು ಅನಗತ್ಯವಾದುದಲ್ಲ; ಅದರಲ್ಲಿ ಒಳ್ಳೆಯ ಶಕ್ತಿ ಅಡಕವಾಗಿದೆ. ಶರೀರ ಪುಷ್ಟಿ ಬರಬೇಕಿದ್ದರೆ—ಆರೋಗ್ಯವಾಗಿರಬೇಕಾದರೆ ಮಾಂಸಾಹಾರ ಅತ್ಯಗತ್ಯ ಎಂದು ಜನರಿಗೆ ತೋಚತೊಡಗಿತು. ಅಂತೆಯೇ ಸಸ್ಯಾಹಾರಕ್ಕೆಂಥ ಮಾಂಸಾಹಾರ ಪ್ರಗತಿ ಸ್ರಥವಲ್ಲಿ ಮುನ್ನಡೆಯಿತು. ಔಷಧ, ಇಂಜೆಕ್ಷನುಗಳಲ್ಲೂ ಉಪಯೋಗಿಸಲ್ಪಟ್ಟವು. 'ಕೋಳಿ ಪೊಟ್ಟೆ' ಯೆಂಬುದು 'ನೂವಿನ ಹಣ್ಣು' ಎಂಬ ಸ್ಥೂಲ ಭಾವನೆ ಮುಂದುವರಿಯಿತು. ಮೊನ್ನೆಗಳೆಂದರೆ 'ತೊಂಡೆ ಕಾಯಿ'ಗಳಂತಾದುವು. ಆದರೆ ಅದೊಂದು ವಧೆಯೇ ಅಲ್ಲ ಎಂಬಷ್ಟೂ ಭಾವನೆ ಮುಂದುವರಿಯಿತು. ಇತ್ತೀಚೆಗೆ ಹೆಚ್ಚಿನವರೂ ಮಾಂಸಾಹಾರಿಗಳಾಗಿರುತ್ತಾರೆ. ಸಸ್ಯಾಹಾರಿಗಳು ಸಿಕ್ಕುವುದಿದ್ದರೆ ಹಳ್ಳಿಯ ಹಳಬರು ಕೆಲವರು; ಹಾಗೂ ಇಂದಿನ ನಾಗರಿಕರ ದೃಷ್ಟಿಯಿಂದ ಹೇಳುವುದಿದ್ದರೆ ಅಲ್ಲಿರುವ ಕೆಲ ಅಜ್ಞಾನಿ(!!)ಗಳು ಮಾತ್ರ. ಮಾಂಸಾಹಾರದೊಂದಿಗೆ ಕಾತುಕುಕ್ಕನವೂ ಮಿತಿಮೀರಿದೆ. ಭಾರತದಲ್ಲಂದು ಗೋವಧೆಯೂ ನಿರಾತಂಕವಾಗಿ ನಡೆಯುತ್ತಿರುತ್ತದೆ. ಒಂದು ದಿನದಲ್ಲಿ ಅದೆಷ್ಟು ಜೀವಿಗಳು ಮನುಷ್ಯರ ಆಹಾರಕ್ಕೋಸುಗ ಇಳೆಯಿಂದ ಪುರಳುವವೋ ಪರಮಾತ್ಮನೇ ಬಲ್ಲ! ಹಿಂದಿನ ಮಾಂಸ ಭಕ್ಷಕರಿಗೂ— ಇಂದಿನ ಸುಧಾರಿತರಿಗೂ ಈ ವಿಷಯದಲ್ಲಿ ಹೆಚ್ಚಿನ ವ್ಯತ್ಯಾಸವಿಲ್ಲ. ಅವರು ಬೇಯಿಸುತ್ತಲೂ ಇದ್ದಿಲ್ಲ; ಶುಚಿ ಮಾಡುತ್ತಲೂ ಇದ್ದಿಲ್ಲ; ಅಷ್ಟೆ ಆದರೆ ಮುಂದೆ ಅದೇ ಸಾಲಿಗೆ ನಾಗರಿಕ ಜನತೆ ಬರಲು ಹೆಚ್ಚು ಕಾಲವಿಳಂಬ ಬೇಡ.

ದೈವಿಕ ವಿಚಾರದಲ್ಲೂ ಅಷ್ಟೆ, ಪ್ರಾಚೀನರಿಗೆ ದೇವರಲ್ಲಿ ಭಕ್ತಿಯಿದ್ದಿಲ್ಲ; ಪೂಜೆ ಪುರಸ್ಕಾರವಿದ್ದಿಲ್ಲ. ಬಂಬರುತ್ತಾ ಬಂದಂತೆ ಮೂರ್ತಿಯನ್ನು— ಮೂರ್ತಿಯನ್ನು ಪೂಜಿಸಲಾರಂಭಿಸಿದುದಲ್ಲದೆ ದೇವಳಗಳ ಸ್ಥಾಪನೆಗೆಳಾಯವು. ಅಸ್ತಿಕರು ವೃದ್ಧಿಸಿದರು. ಸರಿ; ನಾಗರಿಕತೆ ಬಂದುದೇ ಬಂದುದು; ನಾಸ್ತಿಕತೆ ಬೇರು ಬಿಟ್ಟಿತು. ಈಗಂತೂ ಹೆಚ್ಚಿನ ಆಳಕ್ಕೆ ತೆರಳಿದೆ ಆ ಬೇರು. ದೇವರೆಂದರೆ ಹಾಸ್ಯಾಸ್ಪದವಾಗಿದೆ; ದೇವಪೂಜೆ ಜೋಗಿ, ವ್ಯಕ್ತಿ ಪೂಜೆಗೆ ಮುಟ್ಟಿದೆ. ದೇವಸ್ಥಾನವೆಂದರೆ ಮಸೆ ನುಶಗಳಾಗಿವೆ. ಜಾತ್ರೆಯೆಂದರೆ ಅಲ್ಲಿ ನಡೆಯುವುದು ದೇವಾರಾಧನೆಯಲ್ಲಿ— ಸುರಾದೇವಿಯಾರಾಧನೆ; ಬೆಲೆವೆಣ್ಣುಗಳ— ಇಸ್ಪೀಟುಗಳ ಆರಾಧನೆ!! ದೇವಮೂರ್ತಿಯೆದುರು ನಡೆಯುವುದು 'ದೇವಸೇವೆ'ಯಷ್ಟೆ; ಕಾಮಸೇವೆ;— ಧನ ಸೇವೆ!!!

ಜಾತಿಯತ್ತ ಅವಲೋಕಿಸಿರಿ. ಪ್ರಾರಂಭದಲ್ಲಿ 'ಹಂಗಡ'ಗಳೆಂದು ವಿಭಾಗವಿತ್ತೇ ಹೊರತು ಇತರ ಜಾತಿಗಳಿದ್ದಿಲ್ಲ. ಮುಂದೆ ವರ್ಣಗಳು ತಲೆದೋರಿ ಜಾತೀಯತಾ ಭಾವನೆಗಳು ತಲೆದೋರಿದುವು. ಬರಬರುತ್ತಾ ಜಾತೀಯತ ಭಾವನೆಗಳು ದೂರ ಸರಿದು ಜಾತಿ-ಜಾತಿಗಳೊಳಗೆ ಸಬಂಧಗಳೂ ಈಗೀಗ ಆಗುತ್ತಿವೆ. ಕಾಲವುರುಳಿದಂತೆ ಸ್ತ್ರೀ-ಪುರುಷ ಎಂಡೇ ಜಾತಿ ಉಳಿಯಬಹುದು.



ಅಣು ಶಕ್ತಿಯಿಂದ ಜನೋಪಕಾರ್ಯಕ್ಕಾಗಿ ಕಾರ್ಯಗಳನ್ನು ಮಾಡಿಸಿಕೊಳ್ಳುವುದೂ ಸಾಧ್ಯವಿದೆ. ಶಾಂತಿಗಾಗಿ ಈ ಶಕ್ತಿಯನ್ನು ಬಳಸುವಂತೆ ಮಾಡುವ ಕಾರ್ಯವಾಗಬೇಕಿದೆ. ಇದರಿಂದ ೨೦,೦೦೦ ಕಿಲೋ ವಾಟ್‌ಗಳಷ್ಟು ಉಷ್ಣವೂ ೫,೦೦೦ ಕಿಲೋವಾಟ್‌ಗಳಷ್ಟು ವಿದ್ಯುತ್ತೂ ಉತ್ಪಾದಿಸಲ್ಪಡುತ್ತದೆ. ಅಮೇರಿಕಾದಲ್ಲಿ ಆರ್ಗೋನೆಯ ರಾಷ್ಟ್ರೀಯ ಪ್ರಯೋಗಶಾಲೆಯಲ್ಲಿ ಇದು ಕಾರ್ಯರೂಪಕ್ಕೆ ಬಂದಿದೆ.

ಇನ್ನೇನು? ಪುರಾತನದಲ್ಲಿ ಪ್ರಾಣಿವರ್ಗೆರಿಗಳು ವ್ಯವಹಾರ ಸಾಧನಗೆಳಾಗಿದ್ದರೆ ಬರಬರುತ್ತಾ ನಾಣ್ಯಗಳು ಬಂದುವು. ಒಬ್ಬೊಬ್ಬರ ಒಂಬೊಂದು ನಾಣ್ಯಗಳಲ್ಲಿ ಬೇರೆ ಬೇರೆ ಚಿಹ್ನೆಗಳು ಮೂಡಿದುವು. ರೂಪ್ಯಾಗಳು ಹೊರಟವು. ವ್ಯವಹಾರದ ಸುಲಭತೆಗೆ— ನಾಗಿಸುವಿಕೆಯ ಅನುಕೂಲತೆಗೆ ನೋಟುಗಳು ಅಚ್ಚಾದವು. ರಾಜರುಗಳ ಮುದ್ರೆಯನ್ನು ಬದಲಿಸಿ, ನಾವು ಸ್ವತಂತ್ರರೆಂಬುದನ್ನು ತೋರಿಸಿ ಕೊಟ್ಟಾಯಿತು. ರಾಜಮುದ್ರೆಯ ನೋಟುಗಳೂ ಬದಲಾವಣೆ ಹೊಂದಿದುವು.

ಆಷ್ಟಕ್ಕೇ ತೃಪ್ತರಾಗದೆ ನಮ್ಮ ನಾಗರಿಕತೆಯನ್ನು ಎತ್ತಿತೋರಿಸಲು— ಅಂತರ್‌ರಾಷ್ಟ್ರೀಯ ವ್ಯವಹಾರವನ್ನು ಸುಲಭಗೊಳಿಸಲು ಇದೀಗ ದಶಮಾಂಶ ಪದ್ಧತಿ ಮೊನ್ನೆ ಮೊನ್ನೆ ದೇಶವಿಡೀ ಜ್ವಾರಿಗೆ ಬಂತು. ಇನ್ನು ತೀವ್ರವಲ್ಲಿ ದಶಮಾಂಶ ಅಳತೆ ಪದ್ಧತಿಯೂ ಬರಲಿದೆ. ದಶಮಾಂಶ ಪದ್ಧತಿ ಸಂತಿರುಳುವು ಭಾರತದಲ್ಲಿ ಈ ಮೊದಲೇ ಇತ್ತು ಎಂಬ ಸೂಚನೆ ಕಂಡು ಬರುತ್ತದೆ.

ಹೀಗೆ ನಾವು ತುಲನೆ ಮಾಡಿ ನೋಡಿದಲ್ಲಿ— ಕೆಲವು ವಿಷಯಗಳಲ್ಲಿ ತುಳಿದ ಮೆಟ್ಟಿಲುಗಳನ್ನೇ ಪುನರಪಿ ತುಳಿಯುತ್ತಿದ್ದರೆ —ಹೆಲವಲ್ಲಿ ತುಳಿಯುತ್ತಿದ್ದೇವೆ— ತುಳಿಯಲಿಕ್ಕಿದ್ದೇವೆ. ಈ ಭೂಮಿಯೇ ಉರುಟಾಗಿದೆಯೆಂದ ಮೇಲೆ ಜೀವನದ ಹಂತಗಳೂ ವೃತ್ತಾಕಾರವಾಗಿರುವುದರಲ್ಲಿ ಆಶ್ಚರ್ಯವೇನು?

ಜಗತ್ತಿನ ಆಗುಹೋಗುಗಳಿಗೆಲ್ಲಾ ವೇಲಧಿಕಾರಿಯಾದ ಆ —"ದಿವ್ಯ ಶಕ್ತಿ" ಯ ಕೈವಾಡವೇ ಇರಬೇಕು ಇದೆಲ್ಲಾ. ಯಾವುದಕ್ಕೂ ಕೊನೆಯಿದೆ ತಾನೇ! ಅಂತೆಯೇ ಮಾನವನನ್ನು ಕೊಂಡೊಯ್ಯುವ ಈ ದಾರಿ ಅವ್ಯದೋ ಒಂದು ಉದ್ದೇಶವನ್ನು ಸಾರ್ಥಕಗೊಳಿಸಲಿಕ್ಕೇ ಇರಬಹುದು. ಆಷ್ಟನ್ನೇ ನೆಮ್ಮಿಂದೀಗ ಹೇಳಲು ಸಾಧ್ಯ.

—ಕೀ. ವ. ಕೇಶವ, ದೇಲಂಪಾಡಿ.


ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

**ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.**

**ನಿಮ್ಮ ಶೇವಣಾತಿಗಳ ಮೇಲೆ ಹೆಚ್ಚು ಬಡ್ಡಿ ಬೇಕೇ?**

ಹಾಗಿದ್ದಲ್ಲಿ ನಿಮಗೆ ಸಮೀಪವಿರುವ "ಕೊರ್ಪೊರೇಶನ್" ಬೇಂಕಿನ ಶಾಖೆಯಲ್ಲಿ ವಿಚಾರಿಸಿರಿ. "ಕೊರ್ಪೊರೇಶನ್" ಬೇಂಕು ಎಲ್ಲಾ ತರದ ಶೇವಣಾತಿಗಳ ಮೇಲೆ ಬಡ್ಡಿ ದರಗಳನ್ನು ಇತ್ತೀಚೆಗೆ ಏರಿಸಿಯಿದೆ. ಅಲ್ಲದೆ ಶೇವಣಾತಿದಾರರಿಗೆ ಹೆಚ್ಚಿನ ಸವಲತ್ತುಗಳನ್ನು ನೀಡಲು, ಶರ್ತಗಳನ್ನೂ ಬದಲಾಯಿಸಿಯಿದೆ.

**51 ವರುಷಗಳ ಪರಿಪಕ್ವ ಬೇಂಕಿಂಗ್ ಅನುಭವ!**

**7,00,00,000 ರೂಪಾಯಿಗಳಿಗೂ ಮಿಗಿದ ಒಟ್ಟು ವಹಿವಾಟು!**

**THE CANARA BANKING CORPORATION LIMITED**



**ಮೂಲ್ಕಿ ಬೇಂಕ್ ಲಿಮಿಟೆಡ್, ಮುಲ್ಕಿ.**

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಸುಮಂದವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷವ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

**ನಮ್ಮ ಬಡ್ಡಿ ದರಗಳು.**

| ನಿರಖು ಶೇವಣಾತಿ. | |
|---|---|
| 24 ತಿಂಗಳಿಗೆ | 4% |
| 12 ,, | 3½% |
| 6 ,, | 3½% |
| 3 ,, | 3% |
| ಸೇವಿಂಗ್ಸ್ ಬೇಂಕ್ ಲೆಕ್ಕ | 2% |
| ಕರೆಂಟ್ ಎಕೌಂಟು | ½% |

THE MOOLKY BANK. LTD. MULKI

## ಭಾರತದ ಜೀವನಾಳಗಳು

# ಸಮರ್ಥ ಮುಂದಾಳುಗಳ ಮಾರ್ಗ ದರ್ಶನದಿಂದ ಭಾರತದ ಕೀರ್ತಿ ಹರಡಲಿ

**ರಾಷ್ಟ್ರಪತಿ ಪ್ರಸಾದ್**

ಭಾರತದ ರಾಷ್ಟ್ರಪತಿಯ ಚುನಾವಣೆ ಮೊನ್ನೆ ೬ನೇ ದಿನಾಂಕ ನಡೆಯಿತು. ೧೯೫೨ರಿಂದ-ಇದು ತನಕ ಭಾರತದಂತಹ ಆದರ್ಶಗಣ ರಾಜ್ಯ ರಚನೆಯ ಮಹಾ ಶಿಲ್ಪಿಗಳಲ್ಲಿ ರಾಷ್ಟ್ರಪತಿಯೂ ಅಗ್ರಗಣ್ಯರು. ರಾಷ್ಟ್ರದ ಸರ್ವೋಚ್ಚ ಪದವಿಯಲ್ಲಿ ನ್ಯುಕೊಂಡು ಅಖಿಲ ರಾಷ್ಟ್ರವನ್ನು ಸುಗಮವಾದ ಹಾದಿಯಲ್ಲಿ ಮುನ್ನಡೆಸಿಕೊಂಡು ಹೋಗುವುದೆಂದರೆ, ಅದು ಸಾಮಾನ್ಯ ಕಾರ್ಯವೇನಲ್ಲ. ರಾಷ್ಟ್ರದೇಳ್ಗೆಯ ಮಹತ್ತರ ಜವಾಬ್ದಾರಿಯ ಹೊರೆಯನ್ನು ಹೊತ್ತುಕೊಂಡು, ಕಾರ್ಯ ಪ್ರವೃತ್ತನಾಗುವ ರಾಷ್ಟ್ರಪತಿಯು ಜನಾಂಗದ ತಂತೆಗೆ ಸಮಾನನು. ಒಂದು ಪಕ್ಷದಲ್ಲಿದ್ದುಕೊಂಡೂ, ಪಕ್ಷಾತೀತನಾಗಿ ವರ್ತಿಸುವ ಎಚ್ಚರಿಕೆಯಾತಿ ಧೋರಣೆ ಅವನದು. ರಾಷ್ಟ್ರವು. ಅಪಾಯಕಾರಿ ಸ್ಥಿತಿಯಲ್ಲಿರುವ ನೇಳೆ ಸರ್ವ ಪಕ್ಷೀಯರ ಸಹಕಾರ ಪಡೆದು, ಅದನ್ನು ಗಂಡಾಂತರದಿಂದ ಪಾರು ಮಾಡುವ ಛಾತರದ ಹೊಣೆಯನ್ನು ಹೊತ್ತು, ಅಪಾಯಕಾರಿ ಸನ್ನಿವೇಶದೊತನೆ ಧೈರ್ಯದಿಂದ ಹೊಡೆದಾಡಿ ಜಯಿಸುವ ವ್ಯಕ್ತಿಯೇ ಸಮರ್ಥ ರಾಷ್ಟ್ರಾಧಿಪತಿ, ರಾಷ್ಟ್ರಾಧ್ಯಕ್ಷ.

ಈ ಬಾರಿಯೂ ಕಾಂಗ್ರೆಸ್ಸಿಗರು ಡಾ. ಪ್ರಸಾದರನ್ನೇ ಆ ಸ್ಥಾನಕ್ಕೆನೂಚಿಸಿದ್ದಾರೆ ಡಾ. ಪ್ರಸಾದರನ್ನು ಈ ಹೊಣೆಗಾರಿಕೆಯ ಪದವಿಗೆ ಆರಿಸುವುದರ ಮೂಲಕ ಕಾಂಗ್ರೆಸ್ ಪಕ್ಷದವರು ತಮ್ಮ ಬುದ್ಧಿಮತ್ತೆಯನ್ನು ಪಯೋಗಿಸಿರು ತ್ತಾರೆನ್ನಿಬಹುದು. ಕಾರಣವೆಂದರೆ—ಪ್ರಸಾದರು ಆ ಪದಕ್ಕೆ ಅರ್ಹರಾದ ವ್ಯಕ್ತಿ. ತನ್ನ ಏದು ವರ್ಷಗಳ ಅಡಳಿತೆಯಲ್ಲಿ ಅವರು ರಾಷ್ಟ್ರವನ್ನು ಸಾಕಷ್ಟು ಪ್ರಗತಿಪಥದಲ್ಲಿ ಮುನ್ನಡೆಸಿಕೊಂಡು ಹೋಗಿರುವರೆಂಬುದು ನಿರ್ವಿವಾದ. ಆದರ್ಶ ರಾಷ್ಟ್ರಪತಿಯಲ್ಲಿರ ತಕ್ಕ ಸಕಲ ಸದ್ಗುಣಗಳೂ ಅವರಲ್ಲಿ ಮೂರ್ತೀ ಭವಿಸಿವೆ. ಆದುದರಿಂದಲೇ ಅವರು ಭಾರತದ ಜನತೆಯ ನೆಚ್ಚಿನ 'ರಾಷ್ಟ್ರಪಿತ'ಜಿಯಾಗಿದ್ದಾರೆ. ಆ ವರಂಥ ಯೋಗ್ಯ ವ್ಯಕ್ತಿಯು ಮಾರ್ಗದರ್ಶನವಿಂದು ಭಾರತಕ್ಕೆ ಬೇಕಾಗಿದೆ. ಗಾಂಧೀಜಿ ತತ್ವದಲ್ಲಿ ಅಚಲ ಶ್ರದ್ಧೆಯುನ್ನಿಟ್ಟುಕೊಂಡ ಡಾ. ಪ್ರಸಾದರು ಜನಸೇವೆಯನ್ನೇ ಬಾಳಿನ ಗುರಿಯನ್ನಾಗಿರಿಸಿಕೊಂಡಿದ್ದಾರೆ. ಅವರ ಪವಿತ್ರ ಜೀವನ ರಾಷ್ಟ್ರ ಸೇವೆಯ ನಿರಂತರ ತಪಸ್ಸಿಗೆ ಒಗ್ಗುವಂತಹದು. ಅವರ ನಿಸ್ವಾರ್ಥಮಯ ನಿಷ್ಕಲಂಕವಾದ ಅಹಿಂಸಾತ್ಮಕ ಜೀವನವೇ ಇವಕ್ಕೆ ಸಾಕ್ಷಿ.

ಭಾವೀ ರಾಷ್ಟ್ರಪತಿ ಯಾಗಲಿರುವ ಡಾ. ಪ್ರಸಾದರ ಬಾಲ್ಯದಲ್ಲೇ ಕಂಡು ಬಂದಿತ್ತು. ಕಲಿಯುವಿಕೆಯಲ್ಲಿ ಎಷ್ಟೆಲ್ಲ ಮುಂದುವರಿದಿದ್ದರವರಾಗಿದ್ದರವರು. ಪ್ರತಿ ಪರೀಕ್ಷೆಯಲ್ಲೂ ಪ್ರಥಮ ಶ್ರೇಣಿಯಲ್ಲಿ ಅವರು ಉತ್ತೀರ್ಣರಾದುದೇ ಇದಕ್ಕೆ ಸಾಕ್ಷಿ. ಬಾಲ್ಯದಿಂದಲೂ ಅವರಿಗೆ ಸಾರ್ವಜನಿಕ ಸೇವೆಯ ಹುಚ್ಚು. ಆದರೊಂದಿಗೇ ಅಸಾಮಾನ್ಯ ವಿದ್ವತ್ತು, ಅಹಿಂಸೆಯಲ್ಲಿ ಅಚಲ ಶ್ರದ್ಧೆ. ಇವೇ ಅವರ ಭಾವೀ ಜೀವನವನ್ನು ಸುಗಮಗೊಳಿಸುವುದರಲ್ಲಿ ಸಹಕಾರಿಯಾದುವು. ಗಾಂಧೀಜಿಯ ಅನುಯಾಯಿಗಳಲ್ಲೊಬ್ಬನಾಗಿ ಭಾರತದ ರಾಷ್ಟ್ರೀಯ ಚಳವಳಿಯಲ್ಲಿ ಪ್ರಮುಖ ಪಾತ್ರಮಾಡಿದ ವ್ಯಕ್ತಿ ಡಾ. ಪ್ರಸಾದರು. ರಾಜ ನೀತಿಯು ರಾಜೇಂದ್ರ ಬಾಬುವನ್ನು ರಾಜಕೀಯ ರಂಗಕ್ಕೆಳೆದುದಲ್ಲ; ರಾಷ್ಟ್ರ ಸೇವೆಯ ಹುಚ್ಚೇ ಅವರನ್ನು ಆ ಕ್ಷೇತ್ರಕ್ಕೆಳಸಿದುದು. ಬಿಹಾರದಲ್ಲಿ ಹಿಂದೊಮ್ಮೆ ಭೂಕಂಪನ ಘಟಿಸಿದಾಗ ಜನಸೇವೆಯಲ್ಲಿ ಅವರಿಗಿರುವ ಪ್ರೇಮವ್ಯಕ್ತವಾಗಿದೆ. ಡಾ| ಪ್ರಸಾದರಲ್ಲಿ ನಾವು ಕಾಣುವ ಇನ್ನೊಂದು ಲಕ್ಷಣವೆಂದರೆ ಕಾರ್ಯದಕ್ಷತೆ. ಯಾವ ಕಾರ್ಯವನ್ನೇ ಆಗಲಿ, ನಿರ್ವಹಿಸಿಕೊಂಡಮೇಲೆ ಅದನ್ನು ಕೊನೆಸುಟ್ಟುವ ತನಕ ಸಹನೆ ಹಾಗೂ ದಕ್ಷತೆಯಿಂದ ವರ್ತಿಸುವ ಉದಾತ್ತ ಮನೋವೃತ್ತಿ ಅವರದು. ಯಾವ ಗುಣ ವಿಶೇಷಗಳಿರಲಿ, ನಿಗರ್ವಿ ಹಾಗೂ ದಯಾಗುಣಗಳಿಲ್ಲದಿದ್ದಲ್ಲಿ ಒಬ್ಬ ಮನುಷ್ಯನು ಜನಪ್ರಿಯನಾಗಲಾರ. ದಯಾ ಭರಿತ ನಿಗರ್ವೀ ವ್ಯಕ್ತಿಯಾದುದರಿಂದಲೇ ಪ್ರಸಾದರು ಭಾರತೀಯರಿಗೆ ನೆಚ್ಚಿನ 'ಬಾಬೂಜಿ' ಯಾಗಿದ್ದಾರೆ. ರಾಜೇಂದ್ರರಂತಹ ಜನಪ್ರಿಯ ವ್ಯಕ್ತಿಯನ್ನು ರಾಷ್ಟ್ರಪತಿಯಾಗಿ ಆರಿಸುವುದರ ಮೂಲಕ ಭಾರತೀಯರು ತಮ್ಮ ಭವ್ಯ ಭವಿತವ್ಯವನ್ನು ಮುನ್ನೆವೇ ನಿರ್ಮಿಸಿಕೊಳ್ಳಬಹುದು. ಹಿಂದೆಯೇ ಹೇಳಿದಂತೆ ಅವರಂತಹ ಮಹಾನುಭಾವನ ಮಾರ್ಗದರ್ಶನವನ್ನೊಂದು ಭಾರತ ಬಯಸುವುದು. ಅವರ ಮಾರ್ಗದರ್ಶಿತ್ವದಲ್ಲೇ ರಾಷ್ಟ್ರದ ಅಭಿವೃದ್ಧಿ ಆಡಕವಾಗಿರುವುದರಿಂದಲೂ, ಆ ಹೊಣೆಗಾರಿಕೆಯ ಪದವಿಯನ್ನೇರುವ ಅರ್ಹತೆಯೂ ಅವರಲ್ಲಿರುವುದರಿಂದಲೂ, ಅವರೇ ಭಾರತದ ಭಾವೀ ರಾಷ್ಟ್ರಪತಿಯಾಗಲಿ!

**ಉಪರಾಷ್ಟ್ರಪತಿ ರಾಧಾಕೃಷ್ಣನ್.**

ರಾಷ್ಟ್ರಪತಿಗೆ ಸಹಾಯಕನಾಗಿ ಉಪರಾಷ್ಟ್ರಪತಿ ಯೋರ್ವನಿರುವುದು ಪ್ರಜಾ ಪ್ರಭುತ್ವವಾದೀ ರಾಷ್ಟ್ರಗಳಲ್ಲೊಂದು ವಾಡಿಕೆ. ರಾಷ್ಟ್ರಾಧ್ಯಕ್ಷನಂತೆ ಅವನೂ ರಾಷ್ಟ್ರದೇಳ್ಗೆಯ ಕಾರ್ಯದಲ್ಲಿ ಸಕಭಾಗಿ. ಈ ತನಕ ಡಾ| ಸರ್ವಪಳ್ಳಿ ರಾಧಾಕೃಷ್ಣನ್. ಉಪರಾಷ್ಟ್ರಪತಿಯಾಗಿರುವರು. ಈ ಬಾರಿ ಅವರು ತಮ್ಮೀ ಪದವಿಯನ್ನು ತ್ಯಜಿಸುವರೆಂದು ವದಂತಿಯಾಗಿತ್ತು. ನೆಹರು, ಥೇಬಾರ್ ಮೊದಲಾದ ಕಾಂಗ್ರೆಸ್ ನಾಯಕರು ಆ ಸ್ಥಾನವನ್ನೆವರು ಸ್ವೀಕರಿಸುವಂತೆ ಒತ್ತಾಯಿಸಿದ್ದರೂ ಅವರೊಪ್ಪಿರಲಿಲ್ಲ ರಾಧಾಕೃಷ್ಣನ ರಾದ. ರೋ ಈ ಪದವಿಯಲ್ಲದ್ದುಕೊಂಡು, ಸ್ವದೇಶದಲ್ಲಿ ಮಾತ್ರವಲ್ಲ; ವಿದೇಶಗಳಲ್ಲೂ ಜನಪ್ರಿಯರೆನಿಸಿಕೊಂಡ ವ್ಯಕ್ತಿ. ಜನತೆಯ ಅವರು ಮೇಲೆ ತುಂಬಾ ವಿಶ್ವಾಸ ಗೌರವವನ್ನಿರಿಸಿದೆ. ಅವರೋರ್ವ ಮಹಾ ತತ್ವಜ್ಞಾನಿ, ಅವರು ರಾಜಕೀಯದಲ್ಲಿ ಅಷ್ಟೊಂದು ತಜ್ಞರಲ್ಲೆಂದು ಕೆಲವರ ವಾದವಿರಬಹುದು. ಆದರೆ ಅವರು ತನ್ನ ಪಾಲಿನ ಕರ್ತವ್ಯವನ್ನು ಅತಿ ದಕ್ಷತೆಯಿಂದ ಈ ತನಕ ನಿರ್ವಹಿಸಿಕೊಂಡು ಬಂದಿದ್ದಾರೆ. ಇನ್ನು ಮುಂದೆಯೂ ನಿರ್ವಹಿಸುವುದು ನಿಸ್ಸಂಶಯವಾಗಿ ಹೇಳಬಹುದು. ತನ್ನ ಪಾಲಿನ ಹೊಣೆಯನ್ನರಿತುಕೊಳ್ಳದೇ ದುಡುಕುವ ಸ್ವಭಾವ ಅವರಲ್ಲಿಲ್ಲವೆಂದು ಅವರ ಟೀಕಾಕಾರರು ಖಂಡಿತವಾಗಿ ತಿಳಿದಿರತಕ್ಕದ್ದು. ಅವರ ಮುಂದಾಳುತನದಲ್ಲಿ ಭಾರತದ ಭವಿತವ್ಯವೇ ಉಜ್ವಲವಾಗಿರಲಿ.

**ಪ್ರಧಾನಿ ನೆಹರು**

ಒಂದು ಜನಾಂಗದ ಉನ್ನತಿ ಅವನತಿಗಳು ಆ ರಾಷ್ಟ್ರದ ಸರಕಾರವನ್ನೆವಲಂಬಿಸಿರುವೆಯೆಂದರೆ ಏನೇನೂ ತಪ್ಪಿಲ್ಲ. ನಮ್ಮ ದೇಶದಲ್ಲಿ ಲೋಕಸಭೆಯುಳ್ಳಿ ಬಹುಮತ ಪಡೆದ ಪಕ್ಷವು ಕೇಂದ್ರ ಸರಕಾರವನ್ನು ರಚಿಸುವುದು. ಅಂತೆಯೇ ಬಹುಮತ ಪಡೆದ ಪಕ್ಷವು ಆರಿಸಿದ ನಾಯಕನು ನಮ್ಮ ದೇಶದ ಪ್ರಧಾನಿಯಾಗುವನು. ಈಗ ನಮ್ಮ ಪ್ರಧಾನಿಯಾಗಿರುವ ಪಂಡಿತ್ ಜವಾಹರಲಾಲ ನೆಹರೂರವರ ಹೆಸರನ್ನು ಕೇಳದವರು ಭಾರತದಲ್ಲೇ ಏಕೆ, ಜಗತ್ತಿನಲ್ಲೇ ಅತಿ ವಿರಳವೆನ್ನಬಹುದು. ಈ ಭಾರಿಯ ಸಾರ್ವತ್ರಿಕ ಚುನಾವಣೆಯಲ್ಲಿ ನೆಹರೂ ತನ್ನ ಪ್ರತಿಪ್ಪರ್ಧಿಗಳನ್ನು ಒಂದೂವರೆ ಲಕ್ಷ ಅಧಿಕ ಮತಗಳಿಂದ ಪರಾಭವಗೊಳಿಸಿ, ಲೋಕಸಭೆಗಾರಿಸಲ್ಪಟ್ಟು, ಆಳುವ ಪಕ್ಷದ ನಾಯಕನಾಗಿ ಚುನಾಯಿತರಾಗಿದ್ದಾರೆ. ವಿದೇಶ ಮಂತ್ರಿಯಾಗಿಯೂ ಭಾರತದ ವಿದೇಶ ನೀತಿಯನ್ನು ನೆಹರೂ ಜನಪ್ರಿಯಗೊಳಿಸಿದ್ದಾರೆ. ಸರ್ವ ಜನಾದರಣೀಯವಾದ ಪಂಚಶೀಲ ತತ್ವಗಳ ಬುನಾದಿಯ ಮೇಲೆ ರೂಪಿತವಾಗಿರುವ ಅವರ ವಿದೇಶ ನೀತಿಯು ಪರರಾಷ್ಟ್ರಗಳೊಡನೆ ಸೌಹಾರ್ದಮಯ ಸಹಅಸ್ತಿತ್ವವನ್ನು ನಿರ್ಮಿಸುವಂತೆಹುದು. ವಿದೇಶಗಳ ಪ್ರಭೃತಿಗಳನೇಕರು ಭಾರತದ ವಿದೇಶ ನೀತಿಯನ್ನು ಮೆಚ್ಚಿ ಹೊಗಳಿದ್ದಾರೆ. ಭಾರತದ ಪ್ರಧಾನಿಯಾಗಿ ನೆಹರೂ ವಿಶ್ವದ ಗೌರವಾದರಗಳನ್ನು ಪಡೆದಿದ್ದಾರೆ. ಸ್ವತಂತ್ರ ಭಾರತದ ನವಯುಗ ರಚನೆಯಲ್ಲಿ ಪಂಡಿತ್ ನೆಹರು ವಹಿಸಿರುವ ಪಾತ್ರ ಅನೋಘವಾದುದು, ಸ್ತುತ್ಯಾರ್ಹವಾದುದು.

ನೆಹರೂ ವಂಶದ ಇತಿಹಾಸವನ್ನವ ಲೋಕಿಸಿದಲ್ಲಿ, ಅವರಂತಹ ಘನವ್ಯಕ್ತಿಗಳು ಕಮ್ಮಿಸಿರುವಂತಿಕೆಯನ್ನು ರಾಷ್ಟ್ರ ಕ್ಕಾಗಿ ತ್ಯಜಿಸಿ, ಬಡತನವನ್ನಪ್ಪಿದುದು ಆಶ್ಚರ್ಯ ಕಾರಕವಾಗಿ ಕಾಣುತ್ತದೆ. ವಿದೇಶದಲ್ಲಿ ತನ್ನ ವ್ಯಾಸಂಗವನ್ನು ಪೂರ್ತಿಗೊಳಿಸಿ, ಸ್ವದೇಶಕ್ಕೆ ಜವಾಹರ್ ಮರಳಿದಾಗ ಸ್ವಾತಂತ್ರ್ಯದ ರಣಕಹಳೆಯನ್ನೂದಿದ್ದರು, ಗಾಂಧೀಜೀ ಅವರ ಕರೆಗೆ ಓಗೊಟ್ಟು, ತನ್ನ ಸುಖಭೋಗಗಳ ಪರಿವೆಯಿಲ್ಲದೇ ಸ್ವಾತಂತ್ರ್ಯ ರಣಾಂಗಣಕ್ಕೆ ಧುಮುಕಿದೆ ಮಹಾವ್ಯಕ್ತಿ. ಈ ಭಾರತರತ್ನ. ಇತಿಹಾಸ ಪ್ರಸಿದ್ಧ ಲಾಹೋರ್ ರಾಷ್ಟ್ರ ಸಭಾಧಿವೇಶನದ ಅಧ್ಯಕ್ಷಸ್ಥಾನದಿಂದ ಸ್ವಾತಂತ್ರ್ಯ ಘೋಷಣೆ ಮಾಡಿದ ಜವಾಹರಲಾಲರು ಸ್ವಾತಂತ್ರ್ಯದ ಮೂರ್ತಿ ಸ್ವರೂಪವಾಗಿದ್ದರು. ಶಾಸನಭಂಗ ಹಾಗೂ ಚಲೇಜಾವ್ ಚಳವಳಿಯಲ್ಲಿ ಧೀರ ಯೋಧನಂತೆ ಕಾದಾಡಿದ ವ್ಯಕ್ತಿ ಜವಾಹರ್. ಮುಂದೆ ನಡುಗಾಳಿ ಸರಕಾರದ ಪ್ರಧಾನಿಗಳಾದವರು ಇಂದಿನ ತನಕವೂ, ಇನ್ನು ಮುಂದೆಯೂ ಅದೇ ಸ್ಥಾನದಲ್ಲಿದ್ದುಕೊಂಡು ಭಾರತವನ್ನು ಪ್ರಪಂಚದ ಪ್ರಮುಖ ಪ್ರಜಾಪ್ರಭುತ್ವವಾದಿ ರಾಷ್ಟ್ರಗಳ ಪಾಲಿನಲ್ಲಿ ತಂದು ನಿಲ್ಲಿಸಲು ಸದಾ ಜವಾಹರಲಾಲರು ಹೆಣಗಾಡುತ್ತಿದ್ದಾರೆ, ಮುಂದೆಯೂ ಹೆಣಗಾಡುವರು. ಅವರ ಈ ಪ್ರಯತ್ನಕ್ಕೆ ಜಯವಾಗಲಿ!

ನೆಹರೂ ರಾಜಕೀಯ ಧುರೀಣ ಮಾತ್ರವಲ್ಲ, ಪ್ರಸಿದ್ಧ ಬರೆಹಗಾರರೂ ಆಹುದು. ಅವರು ಬರೆದ ಪ್ರಸಿದ್ಧ ಪುಸ್ತಕಗಳು ಜಗತ್ತಿನ ಅನೇಕ ಪ್ರಸಿದ್ಧ ಪಂಡಿತರಿಂದ ಪ್ರಶಂಸೆ ಹೊಂದಿವೆ. ಜಗತ್ತಿನ ಇತಿಹಾಸವೂ, ಭಾರತದ ಚರಿತ್ರೆಯೂ ಇವುಗಳಲ್ಲಿ ಹೆಚ್ಚು ಪ್ರತಿಬಿಂಬಿಸಿದೆ. ಮಹಾತ್ಮಾಜಿಯವರ ರಾಜಕೀಯ ಉತ್ತರಾಧಿಕಾರಿಯಾಗಿ ಭಾರತದ ಪ್ರಧಾನಿತ್ವದ ಅಡಳಿತಾ ಸೂತ್ರವನ್ನು ಕೈಗೊಂಡು ದೇಶವನ್ನು ಅಹಿಂಸಾತ್ಮಕ ಪಥದಲ್ಲಿ ಮುನ್ನಡೆಸುವ ನೆಹರೂ ಅಹಿಂಸೆಯ ಪ್ರತಿಮೂರ್ತಿ. ಯುದ್ಧದ ವಿಷಯವೇ ಸುಳಿದಾಡುತ್ತಿರುವ ಇಂದಿನ ವಾತಾವರಣದಲ್ಲಿ ಶಾಂತಿಯುತ ಸಹಜೀವನದ ಆದರ್ಶವನ್ನು ಜಗತ್ತಿಗೆ ಭಾರತವು ತೋರಿಸಿಕೊಟ್ಟು, ಮಾದರಿಯ ರಾಷ್ಟ್ರವಾಗಬೇಕಾಗಿದೆ. ಈ ಉದ್ದೇಶ ಸಾಧನೆಗೆ ನೆಹರೂ ನಾಯಕತ್ವ ನಮ್ಮ ದೇಶಕ್ಕೆ ಅತ್ಯಗತ್ಯ. ಶಾಂತಿನೊತೆ ನೆಹರೂ ಶಾಂತಿ ಸ್ಥಾಪನೆಗಾಗಿ ಸದಾ ಹೆಣಗಾಡುತ್ತಿದ್ದಾರೆ. ನೆಹರೂರವರ ಪ್ರಧಾನಿತ್ವದಲ್ಲಿ ರಚಿತವಾದ ಕೇಂದ್ರ ಸರಕಾ

(ನೇ ಪುಟ ನೋಡಿರಿ)

NAVAYUGA WEEKLY

ADVERTISEMENT RATES

Display Advertisements:— Rs. 2-8/ per column inch for contracts of 50" or more and Rs. 3/-per column inch for casual advertisements.

Classified Advertisements:— As. 8/- per line (minimum 8 lines).

*For rates for advertising in colours and special positions, please write to:*

*ADVERTISEMENT MANAGER,*

'NAVAYUGA'

Post Box No. 22, UDIPI, S. K.

## ಕಾಶ್ಮೀರ ಸಮಸ್ಯೆ

# ಯಾರಿಂಗರ ವರದಿ ನ್ಯಾಯನಿಷ್ಠವಾಗಿದೆ. ಪರಿಹಾರ ಸೂಚನೆ ಮಾತ್ರ ಇಲ್ಲ

ಭಾರತ ಮತ್ತು ಪಾಕಿಸ್ತಾನ ಸರಕಾರಗಳ ನಡುವೆ ಕಾಶ್ಮೀರ ಸಮಸ್ಯೆಯ ಕುರಿತಾದ ವಿವಾದವನ್ನು ಆಮೊಲಾಗ್ರವಾಗಿ ಪರಿಶೀಲಿಸಿ, ಅಲ್ಲಿನ ಪರಿಸ್ಥಿತಿಯನ್ನು ಭದ್ರತಾ ಮಂಡಲಕ್ಕೆ ವರದಿ ಮಾಡಲು ಭದ್ರತಾಮಂಡಲದ ಘಟಕ ರಾಷ್ಟ್ರಗಳ ಅಧ್ಯಕ್ಷರಾಗಿದ್ದ ಸ್ವೀಡನ್ನಿನ ಶ್ರೀ ಗುನ್ನಾರ್ ಯಾರಿಂಗರು ಕಳೆದ ಮಾರ್ಚ್—ಏಪ್ರಿಲ್ ತಿಂಗಳಲ್ಲಿ ಭಾರತ ಮತ್ತು ಪಾಕಿಸ್ತಾನ ಸರಕಾರಗಳೊಡನೆ ವಿಚಾರ ವಿನಿಮಯವನ್ನು ಮಾಡಿ ತಮ್ಮ ವರದಿಯನ್ನು ಕಳೆದ ತಿಂಗಳ ೩೦ನೇ ದಿನಾಂಕ ಒಪ್ಪಿಸಿದರು. ಈ ವರದಿಯಲ್ಲಿ ಶ್ರೀ ಯಾರಿಂಗರು ಭದ್ರತಾ ಮಂಡಲಕ್ಕೆ ಯಾವ ಒಂದು ವಿಧದ ಪರಿಹಾರ ಸೂಚನೆಯನ್ನು ಕೊಡುವುದಕ್ಕೂ ಸಾಧ್ಯವಾಗಿಲ್ಲವೆಂದು ಬರೆದಿದ್ದಾರೆ. ಸಮಸ್ಯೆಯನ್ನು ಸಂಪೂರ್ಣವಾಗಿ ಅಭ್ಯಸಿಸಿ, ಭಾರತ ಮತ್ತು ಪಾಕಿಸ್ತಾನ ಸರಕಾರಗಳ ಮನವೊಲಿಸಲು, ಉಭಯ ರಾಷ್ಟ್ರಗಳಲ್ಲಿ ಒಂದು ನಿರ್ದಿಷ್ಟ ಕಾಲ ಬರಲು, ತಾವು ಸಾಧ್ಯವಿದ್ದಷ್ಟು ಪ್ರಯತ್ನಿಸಿದರೂ ಅದು ವಿಫಲವಾಯಿತು ಎಂದು ಅವರು ಒಪ್ಪಿಕೊಂಡಿದ್ದಾರೆ. ಆದರೂ ಈ ಸಮಸ್ಯೆಯನ್ನು ಆದಷ್ಟು ಶೀಘ್ರದಲ್ಲಿಯೇ ಪರಿಹರಿಸಬೇಕು. ತಾತ್ಕಾಲಿಕ ಅಂತಾರಾಷ್ಟ್ರೀಯ ಒಪ್ಪಂದಗಳನ್ನು ಕೂಡಲೇ ಕಾರ್ಯಗತ ಮಾಡದಿದ್ದರೆ, ಪರಿಸ್ಥಿತಿಯು ಹತೋಟಿ ತಪ್ಪುವುದೆಂದು ಅವರು ಕಂಡುಕೊಂಡಿದ್ದಾರೆ. ಉಭಯ ರಾಷ್ಟ್ರಗಳೂ ಸಮನ್ಯಾಯ ಪರಿಹಾರವನ್ನು ಕಂಡುಹಿಡಿಯಲು ಉತ್ಸುಕರಾಗಿರುವರೆಂಬ ವರದಿ ಮಾಡಿದ್ದಾರೆ.

ಶ್ರೀ ಯಾರಿಂಗರ ವರದಿಯು ಎಲ್ಲರೂ ನಿರೀಕ್ಷಿಸಿದಂತೆಯೇ ಹೊರಬಿದ್ದಿದೆ. ಉಭಯ ಪಕ್ಷಗಳಿಗೂ ಇವರ ರಾಯಭಾರವು ಸಫಲವಾಗದಿರುವುದೆಂಬ ವಿಶ್ವಾಸವಿದ್ದಿಲ್ಲ. ಭಾರತ ಸರಕಾರವಾದರೂ ತಾನು ಹಿಂದಿನಿಂದಲೂ ಅಂಟಿಕೊಂಡ ತತ್ವ ಧೋರಣೆಗಳನ್ನೇ ಹಿಡಿದುಕೊಂಡಿವೆ. ಯಾರಿಂಗರ ಯಾವ ತರದ ಮಾತಿಗೂ ಕಟ್ಟುಬೀಳದೆ ತನ್ನ ಧೋರಣೆಯನ್ನು ಯೋಗ್ಯ ರೀತಿಯಲ್ಲಿ ಸಮರ್ಥಿಸಿಕೊಂಡಿದೆ.

ಯಾರಿಂಗರ ವರದಿಯಲ್ಲಿ ಉಲ್ಲೇಖವಾದ ಮುಖ್ಯ ಭಿನ್ನಾಭಿಪ್ರಾಯವು ಪಾಕಿಸ್ತಾನ ಮತ್ತು ಭಾರತಗಳ ಪರವಾಗಿ, ಭದ್ರತಾ ಸಮಿತಿಯ ೧೩-೮-೪೮ರಂದು ಸ್ವೀಕರಿಸಿದ ಈ ಗೊತ್ತುವಳಿಯನ್ನೇ ಕೊಂದಿರುಂಡಿತ್ತು, ಇದೇ ವ್ಯತ್ಯಸ್ತಾಭಿಪ್ರಾಯವೇ ಯಾರಿಂಗರು ಈ ಸದ್ಯಸ್ಥಿತಿಯಲ್ಲಿ ಧಾಗಿಗಳಾಗಲು ಕಾರಣ. ಪಾಕಿಸ್ತಾನವು ಆ ಗೊತ್ತುವಳಿಯನ್ನು ಸಂಪೂರ್ಣವಾಗಿ ತಾನು ಮನ್ನಿಸಿದ್ದೇನೆಂದು ೧೩-೮-೪೮ರ ನಿರ್ಣಯದಂತೆ ಸಾರ್ವತ್ರಿಕ ಚುನಾವಣೆಯನ್ನು ಬೇಡಿದರೆ, ಭಾರತವು ಮೊದಲನೆಯದೇ ಕಾರ್ಯಗತವಾಗಿಲ್ಲ ಎಂಬ ತನ್ನ ಪಲ್ಲವಿಯನ್ನು ಪುನರುಚ್ಚರಿಸಿತು. ಮೊದಲ ನಿರ್ಣಯದಲ್ಲಿ ಪಾಕಿಸ್ತಾನವು ಅಕ್ರಮಿತ ಪ್ರದೇಶದಿಂದ ಸೈನ್ಯವನ್ನು ಹಿಂದೆ ಕರೆಯಿಸಿಕೊಳ್ಳಬೇಕೆಂಬುದೂ ಒಂದಂಶ. ಸೇನೆಯನ್ನು ಹಿಂದೆ ಕರೆಯಿಸಿಕೊಳ್ಳುವುದಕ್ಕೆ ಬದಲಾಗಿ ಅಲ್ಲಿ ಹೆಚ್ಚೆಚ್ಚು ಸೈನ್ಯ ಸಂಗ್ರಹ ಮಾಡುತ್ತಿವೆ ಯೆಂಬ ವಿಚಾರವನ್ನು ಯಾರಿಂಗರು ತಿಳಿದುಕೊಂಡರು.

ಇಷ್ಟೆ ಎದ್ದಿರುವ ಭಿನ್ನಾಭಿಪ್ರಾಯವನ್ನು ವಿಕರೀತಿಗೆ ತರಲು ಅವಿಷ್ಟು ಯೋಚಿಸಿದರೂ ಯಾರಿಂಗರು ಅಸಫಲರಾದರು. ಆದರೂ ಒಂದು ಮಧ್ಯಸ್ಥಿಕೆಗೆ ಒಪ್ಪಿಸಿ ಈ ವಿಷಯವನ್ನು ತೀರ್ಮಾನಿಸುವ ಎಂದರೆ, ಪಾಕಿಸ್ತಾನವು ಒಪ್ಪಿತಾದರೂ, ಕಾಶ್ಮೀರದಲ್ಲಿ ತನ್ನ ಸಾರ್ವಭೌಮಾಧಿಕಾರವಿದೆ ಎಂದು ದೃಢವಾಗಿ ನಂಬಿದ ಭಾರತಕ್ಕೆ ಇದು ಸರಿಬರಲಿಲ್ಲ. ಪಾಕಿಸ್ತಾನಕ್ಕೆ ಕಾಶ್ಮೀರದಲ್ಲಿ ಯಾವ ಅಧಿಕಾರವೂ ಇಲ್ಲ ಎನ್ನುವುದೇ ಭಾರತದ ನಂಬಿಗೆ ಇದಕ್ಕೆ ಚ್ಯುತಿ ಬರುವ ವರ್ತನೆಗಳಿಗೆ ಭಾರತ ಸರಕಾರವು ಎಂದೂ ಸಮ್ಮತಿಸಲಿಲ್ಲ. ಅಂದು ೪೮ ಮತ್ತು ಈ ೫೨ರ ವರೆಗೆ ಪರಿಸ್ಥಿತಿ ಸಂಪೂರ್ಣವಾಗಿ ಬದಲಾಣೆ ಜೊಂದಿದೆ. ಕಾಶ್ಮೀರದಲ್ಲಿ ಅನೇಕ ಸುಧಾರಣೆಗಳಾಗಿವೆ. ಆರ್ಥಿಕ ಸೈನಿಕ ಮೊದಲಾದ ಸಂಬಂಧವು ಮೊದಲಿದ್ದಂತೆ ಇಂದು ಇಲ್ಲ.

ಮೂಲಭೂತ ವಿಷಯದಲ್ಲಿಯೆ ಭಿನ್ನಾಭಿಪ್ರಾಯವಿರುವಾಗ, ಆದರ ಪರಿಶೀಲನಾ ಕ್ರಮದಲ್ಲಿಯೂ ಸೌಹಾರ್ದವಿಲ್ಲದಿರುವಾಗ ಯಾರಿಂಗರು ಮತ್ತೇನೂ ಮಾಡಲು ಸಾಧ್ಯವಾಗದೆ ಸಂಕ್ಷಿಪ್ತ ವರದಿಯನ್ನೇ ಒಪ್ಪಿಸಿದರು.

ಪಾಕಿಸ್ತಾನವು ಈ ವರದಿಯನ್ನು ಕಂಡು ಕೆರಳಿದೆ. ಪ್ರಧಾನಿ ನೆಹರೂರವರೆ ಹಟಮಾರಿತನದಿಂದಾಗಿಯೇ ಈ ರಾಯಭಾರ ಸಂಪೂರ್ಣ ವಿಫಲವಾಯಿತೆಂದು ಟೀಕಿಸಿ, ಭಾರತದ ಒಂಬತ್ತು ಕೈಯನ್ನು ನೋಡಿಯೇ ಬಿಡುವ ಎಂಬ ರೀತಿಯ ಅಭಿಪ್ರಾಯಗಳನ್ನು ಪ್ರಕಟಿಸುತ್ತಿದೆ. ಶಸ್ತ್ರಾಸ್ತ್ರಗಳ ಮೂಲಕವಾಗಿಯಾದರೂ ಕಾಶ್ಮೀರದ ಈ ಜಟಿಲ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವೆವೆಂದು ಆರ್ಭಟಿಸುತ್ತಿದ್ದಾರೆ ಆದರೆ, ಅಲ್ಲಿನ ಪ್ರಧಾನಿ ಜನಾಬ್ ಸುಹ್ರವರ್ದಿಯವರು ಈಗ ಪರದೇಶದಲ್ಲಿರುವುದರಿಂದ ಮುಂದಿನ ಸಾರ್ವಜನಿಕ ಯಾವರೀತಿಯಲ್ಲಿ ಯೋಜಿಸಬೇಕೆಂದು ವಿದೇಶ ಮಂತ್ರಿ ನೂರನಿಗೆ ಸರಿಯಾಗಿ ತಿಳಿದಿಲ್ಲ. ಅಂತೂ ಯಾರಿಂಗರಿಂದ ಕೆಲವೊಂದು ವಿಷಯಗಳಲ್ಲಿ ಸ್ಪಷ್ಟೀಕರಣವನ್ನು ಕೇಳುವಂತೆ ನಿಶ್ಚಯಿಸಿದೆ. ಈ ಸಮಸ್ಯೆಗೆ ಪೂರಕವಾಗಿ ಉತ್ತರ ಪ್ರಾದೇಶಿಕ ವಲಯದಲ್ಲಿ ಕಾಶ್ಮೀರದ ಹೊಂದಿಕೆಯನ್ನೂ ಪ್ರತಿಭಟಿಸಿ ಭದ್ರತಾಸಮಿತಿಗೆ ದೂರು ಅದಷ್ಟು ಬೇಗನೇ ಅದರ ಸಭೆ ಸೇರಿಸಲು ಕೇಳಿಕೊಂಡಿದೆ.

ಶ್ರೀ ಯಾರಿಂಗರ ವರದಿಯು ಅನಿವಾರ್ಯವಾಗಿ ಆ ರೀತಿಗಿಳಿಯಿತು. ಭಾರತ ಪಾಕಿಸ್ತಾನಗಳ ಕಮಿಶನ್ನಿನಂಗೆ ಹಿಂದೊನ್ಮೆ ಈ ರೀತಿಯ ಪರಿಶೀಲನೆಯನ್ನು ನಡೆಸಿ ಪಾಕಿಸ್ತಾನವು ತಾಘು ಆಕ್ರಮಿಸಿದ ಕಾಶ್ಮೀರದ ಭಾಗದಿಂದ ತನ್ನ ಸೇನೆಯನ್ನು ಕೂಡಲೇ ಹಿಂತೆಗೆದುಕೊಳ್ಳಬೇಕೆಂದೂ, ಹಾಗೆ ಸಂಪೂರ್ಣವಾಗಿ ಹಿಂತೆಗೆದುಕೊಂಡನಂತರ ಸಾರ್ವತ್ರಿಕ ಚುನಾವಣೆಯು ನಡೆಯುಬಹುದೆಂದೂ ನಿರ್ಣಯಕ್ಕೆ ಭದ್ರತಾಸಮಿತಿ ಬಂದಿತ್ತು. ಆದರೆ ಪಾಕಿಸ್ತಾನವು ತನ್ನ ಸೈನ್ಯವನ್ನು ಇಂದಿನವರೆಗೂ ಹಿಂತೆಗೆದುಕೊಳ್ಳಿಲ್ಲ. ತತ್ಕಾರಣವಾಗಿ ಭಾರತವು ಸಾರ್ವತ್ರಿಕ ಚುನಾವಣೆಗೆ ಒಪ್ಪುವುದಿಲ್ಲ. ಉಳ್ಳರ್ಥ ಅಯಕಟ್ಟು ಇಂದು ಉಳಿದಿಲ್ಲ. ಆ ಕಾಲದ ಪರಿಸ್ಥಿತಿಗಳಿಗನುಗುಣವಾದ ನಿರ್ಣಯಗಳನ್ನು ಈ ಕಾಲದಲ್ಲೂ ಒಪ್ಪಿ, ಮತ ಗಣನೆಯನ್ನು ಮಾಡಬೇಕೆನ್ನುವುದು ಸರಿಯಲ್ಲ. ಒಂದು ವೇಳೆ ಮತಗಣನೆ ನಡೆದರೂ ಆಗ ಪರಿಸ್ಥಿತಿ ಬಿಗಡಾಯಿಸಬಹುದು. ಆದರೆ, ಪಾಕಿಸ್ತಾನವು ತಾನೆಂದಂತೆ ಭದ್ರತಾ ಸಮಿತಿಯ ಮೊದಲನೆನಿರ್ಣಯವನ್ನು ಕಾರ್ಯಗತ ಮಾಡಿದೆಯೇ ಇಲ್ಲವೇ ಎಂಬುದನ್ನು ನಿರ್ಧರಿಸಲು ಅಂದಿನ ಕಮಿಶನ್ ಇಂದು ಅಸ್ತಿತ್ವದಲ್ಲಿಲ್ಲ. ಮತಗಣನೆಯು ಆದಕ್ಕೊಂದು ನೆವನವಾಗಲಾರದು. ಇಷ್ಟು ತಡವಾಗಿ, ಸೈನಿಕ, ಆರ್ಥಿಕ ಮೊದಲಾದ ಪರಿಸ್ಥಿತಿಗಳು ಸಂಪೂರ್ಣ ಬದಲಾವಣೆ ಹೊಂದಿರುವ ಈ ಸನ್ನಿವೇಶದಲ್ಲಿ ಪುನಃ ಈ ಪ್ರಶ್ನೆಯನ್ನು ಮಧ್ಯಸ್ಥಿಕೆಗೆ ಒಪ್ಪಿಸುವುದೆಂದರೆ, ಅದು ಅರ್ಥಹೀನವಾದುದು. ಆದುದರಿಂದಲೇ ಯಾರಿಂಗರು ತಮ್ಮ ವರದಿಯಲ್ಲಿ ಈ ಮಾತುಗಳನ್ನು ಸೇರಿಸಿದ್ದಾರೆ. "ಕಾಶ್ಮೀರ ಸಮಸ್ಯೆಯನ್ನು ನಾನು ಪರಿಶೀಲಿಸಿದಾಗ ಇದರ ಬದಲಾದ ಆರ್ಥಿಕ ಪರಿಸ್ಥಿತಿ, ಅಯಕಟ್ಟಿನ ಮಹತ್ವದ, ಪಟ್ಟಿಯು ಹಾಗೂ ಪ್ರಿಣತಿಯ ರಾಷ್ಟ್ರಗಳ ಪಲ್ಲಟಿಸುತ್ತಿರುವ ಸಾಂಬಂಧ ಇವುಗಳನ್ನು ಗಮನಕ್ಕೆ ತಂದು ಕೊಂಡಿರುತ್ತೇನೆ. ತಾತ್ಕಾಲಿಕವಾಗಿರುವ ಅಂತರ್ರಾಷ್ಟ್ರೀಯ ಒಪ್ಪಂದಗಳನ್ನು ಕಾರ್ಯಗತ ಮಾಡುವುದು ತಡವಾದರೆ ನಮಂದೆ ಕಠಿಣವಾಗುತ್ತದೆಂಬುದನ್ನು ಭದ್ರತಾಮಂಡಲವು ಗಮನಿಸಬೇಕು. ಏಕೆಂದರೆ ತಕರಾರು ಕೊಟ್ಟಾಗ ಇದ್ದ ಪರಿಸ್ಥಿತಿ ಬದಲಾಗುವ ಸಂಭವನೀರುತ್ತದೆ."

ಹೀಗಿರುವಾಗ ಭಾರತವು ಮಧ್ಯಸ್ಥಿಕೆ ಪುನಃ ಈ ನಿಷಯವನ್ನು ಒಪ್ಪಿಸುವುದು ಭಾರತ ಸರಕಾರಕ್ಕೆ ಸರಿ ಬರಲಿಲ್ಲ.

ಕಾಶ್ಮೀರದ ಸಾರ್ವಭೌಮತ್ವಕ್ಕೆ, ಹಾಗೂ ಭಾರತದ ಹೊಣೆಗಾರಿಕೆಗೆ ಅದು ಚ್ಯುತಿಯನ್ನು ತರುತ್ತದೆಂದು ಭಾರತವು ನಂಬಿದೆ. ಈ ಸಮಸ್ಯೆಯಲ್ಲಿ ಪಾಕಿಸ್ತಾನಕ್ಕೂ ಅಧಿಕಾರವಿದೆ ಎಂಬುದನ್ನು ಒಪ್ಪಿಕೊಳ್ಳಲು ಭಾರತವು ಸಿದ್ಧವಿಲ್ಲ.

ಭಾರತವು ಈ ತೆರದ ಮಧ್ಯಸ್ಥಿಕೆಗೆ ಒಪ್ಪದೆ ಇರುವುದು ಭಾರತದ ದೃಷ್ಟಿಯಿಂದ ಸರಿಯಾದುದಾದರೂ ಪಾಕಿಸ್ತಾನವು ಅದನ್ನೆ ಅಪಪ್ರಚಾರಕ್ಕೆ ಸಾಧನವನ್ನಾಗಿ ಬಳಸಿಕೊಂಡಿದೆ. ನ್ಯಾಯವಾದ ಭಾರತದ ಹಕ್ಕನ್ನು ಕಳೆದುಕೊಳ್ಳಲು ಶ್ರೀ ನೆಹರೂ ಸಿದ್ಧರಾಗಿದ್ದರೆ, ಆಗ ಅವರ ಪ್ರಶಂಸೆ ಕೇಳಿಬರುತ್ತಿತ್ತೇನೋ! ಶಾಂತ ವಿಧಾನದಿಂದ ಈ ಸಮಸ್ಯೆಯು ಇತ್ಯರ್ಥಗೊಳ್ಳುವುದರಲ್ಲಿ ಭಾರತವು ಅಡ್ಡಗಾಲು ಹಾಕುತ್ತಿದೆ ಎಂದು ಮುಂತಾದ ಮಾತುಗಳು ಕೇಳಿಬರುತ್ತಿವೆ. ಆದರೆ, ಇವುಗಳು ನಿಷ್ಕಾರಣವಾಕ್ಯಗಳಲ್ಲವೆಂದು ಹೇಳುವುದಲ್ಲದೆ ಅನ್ಯ ಮಾರ್ಗವಿಲ್ಲ.

ಯುಕ್ತ ರಾಷ್ಟ್ರಸಂಘದ ವಲಯುಗಳಲ್ಲಿ ಈ ಬಗ್ಗೆ ಯಾವ ಹೆಚ್ಚಿನ ಆಸಕ್ತಿಯೂ ಕಂಡುಬರುವುದಿಲ್ಲ. ಪಾಕಿಸ್ತಾನ ಮಾತ್ರ ಏನು ಮಾಡಬೇಕೆಂದು ಗಡಿಬಿಡಿಗೊಳ್ಳುತ್ತಿದೆ. ಸುಹ್ರವರ್ದಿಯವರು ಸ್ವದೇಶಕ್ಕೆ ಮರಳಿದ ಮೇಲೆ ಮುಂದಿನ ಆಲೋಚನೆ. ಅದುವರೆಗೆ "ಏನಾದರೂ ಮಾಡಬೇಕು!" ಅಷ್ಟೆ.

ಯಾರಿಂಗರ ವರದಿಯು ಭಾರತದ ಪರವಾಗಿದೆ ಎಂದು ಅಲ್ಲಲ್ಲಿ ಕೇಳಿಬರುತ್ತಿದೆ. ಕಾಶ್ಮೀರದ ಸಮಸ್ಯೆಯನ್ನು ಇದ್ದಂತೆಯೇ ಇರಗೊಡುವುದೇ ಸೂಕ್ತ ಎಂಬ ಒಳಧ್ವನಿಯು ವರದಿಯಿಂದ ವ್ಯಂಜಕವಾಗುವುದೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಪಾಕಿಸ್ತಾನವು ಬಗದಾದು, ಸೀಟೋ ಮೊದಲಾದ ಸೈನಿಕ ಒಡಂಬಡಿಕೆಗಳಲ್ಲಿ ಈಗ ಸೇರಿಕೊಂಡಿದೆ. ಮಧ್ಯ ಪ್ರಾಚ್ಯ ಮತ್ತು ದಕ್ಷಿಣ ಆಸ್ಯಾ ಖಂಡದ ರಾಷ್ಟ್ರಗಳ ಕಂಧ ಕಾಶ್ಮೀರದ ಆರ್ಥಿಕ ಪರಿಸ್ಥಿತಿ ಮೊದಲಾದುವುಗಳು ಬದಲಾಗಿವೆ. ಹಾಗಿರುವಾಗ, ಈ ಪರಿಸ್ಥಿತಿಯಲ್ಲಿ ಚುನಾವಣೆಯನ್ನು ಕಾಶ್ಮೀರದಲ್ಲಿ ಮಾಡುವುದೂ ಅಪಾಯಕರವೆಂಬುದೂ ಅವರ ವರದಿಯಿಂದ ವ್ಯಕ್ತವಾಗುತ್ತದೆ.

ಭಾರತ ಸರಕಾರವೆತ್ತಿದ ಮೂಲ ಭೂತ ವಿತೋಛವನ್ನು ಯಾರಿಂಗರು ಮನಸ್ಸಿನಲ್ಲಿಟ್ಟುಕೊಂಡುದನ್ನು ನೋಡುವಾಗ ಯಾರಿಂಗರು ಈ ಸಮಸ್ಯೆಯ ಮೂಲವನ್ನು ಅರಿತುಕೊಂಡಿಯವರೆಂದು ತೃಪ್ತಿಪಡಬಹುದು. ಇವೇ ನಿಷಯವನ್ನು ಭದ್ರತಾ ಸಮಿತಿಯಲ್ಲಿ ಅದೆಷ್ಟು ಬಾರಿ ನಾನಾ ಭಂಗಿಯಿಂದ ಮಂಡಿಸಿದರೂ ಅದು ಅಲ್ಲಿಯ ಪದಸ್ಥರ ಗಮನಕ್ಕೆ ಬಂದಂತೆ ತೋರಲಿಲ್ಲ. ಆದರೆ, ಈಗ ಅನುಸಾವಧಾನವಾಗಿಯಾದರೂ ಇವರಿಗೆ ತಿಳಿದೀತು. ಭಾರತವು ಮಂಡಿಸಿದ ವಿಚಾರಗಳು ಮೂಲ ರಹಿತವಾದುವಲ್ಲ ಎಂಬುದನ್ನು ಯಾರಿಂಗರು ತಮ್ಮ ವರದಿಯಲ್ಲಿ ಅವ್ಯಕ್ತವಾಗಿ ತಿಳಿಸಿ, ಭಾರತದ ಪರವಾ

(ಉಳಿದ ಸುದ್ದಿ ನೋಡಿರಿ)

ಬೇಗನೆ ಪ್ರಕಟವಾಗುವುದು
ಜಾನ್ ಡ್ಯೂಯಿ ಬರೆದ
ಸ್ವಾತಂತ್ರ್ಯ ಮತ್ತು ಸಂಸ್ಕೃತಿ
ಅನುವಾದಕರು: ಕು. ಶಿ. ಹರಿದಾಸ ಭಟ್ಟ
(ಬೆಲೆ ರೂ. 2/-)
ನವಯುಗ ಎಂಟರ್‌ಪ್ರೈಸಸ್, ಲಿಮಿಟೆಡ್, ಉಡುಪಿ.

# NAVAYUGA

Popular Kannada Weekly

*Founder:—*

**A. B. SHETTY,**
Former Minister for Public Health, Govt. of Madras & Govt of Mysore

# ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

| ಸಂಪುಟ ೩೬ | ಉಡುಪಿ ೯-೫-೧೯೬೭ | ಸಂಚಿಕೆ ೩೫ |
|---|---|---|


## ಅಕ್ಕಿಯ ಬೆಲೆ ಏರುತ್ತಿದೆ!

ಕಳೆದ ವಾರ ಮೈಸೂರಿನ ಕೃಷಿ ಮಂತ್ರಿ ಶ್ರೀ ರುದ್ರಪ್ಪನವರನ್ನು ಸ್ವಾಗತಿಸಿ ಅವರಿಗೆ ನಿವೇದನೆಯನ್ನೊಪ್ಪಿಸುವ ಅವಕಾಶ ನಮ್ಮ ಜಿಲ್ಲೆಯ ಮಹಾಜನರಿಗೆ ಲಭ್ಯವಾಯಿತು. ಆಗ ಇತರ ವಿಷಯಗಳಲ್ಲದೆ ಅಕ್ಕಿಯ ಬೆಲೆಯು ದಿನದಿಂದ ದಿನಕ್ಕೆ ಏರುತ್ತಾ ಹೋಗುವುದಂ ಕಡೆಗೆ ಸಹ ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯಲಾಯಿತು. ಆದರೆ ಸಚಿವರು ಈ ಕುರಿತು ಜನತೆಗೆ ಸಮಾಧಾನಕರವಾದ ಯಾವುದೇ ಪರಿಹಾರವನ್ನು ಹೇಳಲಿಲ್ಲ; ಆವರ ಧ್ವನಿಯಲ್ಲಿ ಸಹಾನುಭೂತಿ ಇತ್ತೆಂದಾದರೂ ತೋರಲಿಲ್ಲ. ಅಕ್ಕಿಯ ಬೆಲೆಯು ಏರುತ್ತಿರುವುದರ ಜವಾಬ್ದಾರಿಯು ಸರಕಾರದ್ದಲ್ಲವೆಂದೇ ಅವರು ನೆಂಬಿದಂತೆ ತೋರಿತು! "ಈ ತ್ಪಾದಕರು ಕಡಿಮೆಯಿದ್ದು ಉಪಯೋಗಿಸುವವರು ಜಾಸ್ತಿಯಾದುದೇ ಅಕ್ಕಿಯ ಬೆಲೆ ಏರುತ್ತಿರುವುದಕ್ಕೆ ಕಾರಣ" ಎಂಬುದಾಗಿ ಮಾನ್ಯ ಮಂತ್ರಿಗಳು ಅಭಿಪ್ರಾಯಪಟ್ಟರು. ಅಲ್ಲಿಗೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ "ದ್ವಿತೀಯ ಯೋಜನೆಯಲ್ಲಿ ಆಹಾರವನ್ನು ಹೆಚ್ಚಿಸಲು ಹಲವಾರು ಯೋಜನೆಗಳ ಮೂಲಕ ಸೌಕರ್ಯವನ್ನು ಕಲ್ಪಿಸಲಾಗಿದ್ದರೂ ರೈತರು ಸರಕಾರವು ನಿರೀಕ್ಷಿಸಿದ ಮಟ್ಟಕ್ಕೆ ಮುಂದೆ ಬರಲಿಲ್ಲ" ಎಂದು ಅಸಮಾಧಾನವನ್ನೂ ಸೂಚಿಸಿದರು. ಇವೆರಡೂ ಮಾತುಗಳು ಗಾಯಕ್ಕೆ ಚಿಕಿತ್ಸೆ ನಡೆಸುವಂತಿಲ್ಲ; ಬದಲಿಗೆ ಉಪ್ಪನ್ನು ಕಿಚ್ಚುವಂತಿವೆ—ಎನ್ನುದೆ ನಿರ್ವಾಹವಿಲ್ಲ. ನಮ್ಮ ದೇಶದಲ್ಲಿ ಜನಸಂಖ್ಯೆ ಏರುತ್ತಿದೆ ಎಂಬುದು ಯಾರಿಗೆ ತಾನೆ ಗೊತ್ತಿಲ್ಲ? ಆ ವೇಗದಲ್ಲಿ ಆಹಾರೋತ್ಪಾದನೆ ಯಾಗುತ್ತಿಲ್ಲವೆನ್ನುವುದೂ ಎಲ್ಲರಿಗೆ ತಿಳಿದ ವಿಚಾರ. ತಿನ್ನುವವರು ಹೆಚ್ಚು; ಅಕ್ಕಿ ಇರುವುದೇ ಕಮ್ಮಿ; ಆದುದರಿಂದ ಇದ್ದುದಕ್ಕೆ ಬೆಲೆ ಹೆಚ್ಚು—ಎಂಬ ಮಂತ್ರಿಗಳ ಸೂತ್ರವಾಕ್ಯವು ಸಮಸ್ಯೆಯ ಪರಿಹಾರವನ್ನಾಗಲೀ ಜನತೆಯ ತೃಪ್ತಿಯನ್ನಾಗಲೀ ಸಾಧಿಸುವುದಿಲ್ಲ. ಅಕ್ಕಿಯ ಬೆಲೆಯು ಮಿತಿಮೀರಿತೆಂದು ಜನರು ಸರಕಾರಕ್ಕೆ ದೂರಿಬ್ಬರೆ, ಬೆಲೆ ಕಡಿಮೆಮಾಡಲು ತಕ್ಕ ಕ್ರಮಗಳನ್ನು ಕೈಗೊಳ್ಳುವ ಅಶ್ವಾಸನೆ ಸಿಗಬೇಕಲ್ಲದೆ ಬೇರೆಯಲ್ಲ. ನಮ್ಮ ಜಿಲ್ಲೆಯ ವಿಶಿಷ್ಟ ಪರಿಸ್ಥಿತಿಯನ್ನು ಅವಲೋಕಿಸಿ ನೋಡುವುದಾದಲ್ಲಿ ಈಗಲೇ ಮುಡಿಯೊಂದಕ್ಕೆ ೩೫ ರೂಪಾಯಿ ವರೆಗೆ ದರ ಏರಿದೆ. ಇದು ಅನ್ನ ಕ್ಷಾಮವನ್ನೇ ಎಂದು ಎಲ್ಲರೂ ನಂಬಿದ್ದರ್ಗಳ—ಹಂಗೇ ವರ್ಷದಲ್ಲಿ ಕಾಳ ಸಂತೆಯಲ್ಲಿ ಅಕ್ಕಿ ಮುಡಿಯ ವ್ಯಾಪಾರ ವಾಗುತ್ತಿದ್ದ ಮಟ್ಟವಲ್ಲಿದೆ ಎನ್ನುವುದು ಸ್ಪಷ್ಟ. ಈಗ ಕೆಲವು ವರ್ಷಗಳಿಂದ ದರಗಳು ಒಂದೇ ಸವನೆ ಏರುತ್ತಲೇ ಬರುತ್ತಿವೆ; ಆದಾಗ್ಯೂ ವರ್ಷದ ಕೆಲ ಭಾಗದಲ್ಲಿ ಅನುಕೂಲಿದ ಸಂದರ್ಭವೂ ಇಲ್ಲದಿಲ್ಲ. ಉದಾಹರಣೆಗೆ, ಕಟಾವಾದ ಬೆನ್ನಿಗೆ ದರಗಳು ಇಳಿದಿದ್ದವು; ತೀರ್ಪೆ ಕೊಡುವ ಕಾಲಕ್ಕೆ ದರಗಳು ತುಸು ತಗ್ಗಿದ್ದವು—ಳಕೆದ ವರ್ಷ ಅಕ್ಕಿ ಮುಡಿಗೆ ೧೭-೧೮ ರೂಪಾಯಿ ವರೆಗೆ ಮಾತ್ರ ಇತ್ತೆಂದು ನಮ್ಮ ನೆನಪು. ಆದರೆ ಈ ಸಲ ಪ್ರಾರಂಭದಲ್ಲೇ ೧೮ ರೂಪಾಯಿ ಬೆಲೆ ಇತ್ತಲ್ಲದೆ, ನಡುವೆ ಎಂದೂ ಕುಸಿಯದೆ ಬೆಲೆಯು ನಿತ್ಯ ಏರುತ್ತಾ ಬಂದು ಈಗಿನ ೩೫ ರೂಪಾಯಿ ಮಟ್ಟದಲ್ಲಿದೆ. ಇನ್ನು ಮುಂದೆ ಬರುವುದು ಮಳೆಗಾಲವಾದುದರಿಂದ ಆಗ ದರಗಳು ಇನ್ನೂ ಏರುತ್ತಾ ಹೋಗುವುದು ನಿಶ್ಚಯ. ನಾವು ಪ್ರತಿ ವರ್ಷವೆಂಬಂತೆ ಅಕ್ಕಿಯ ದರವು ಏರುತ್ತಾ ಬಡಬಗ್ಗರಿಗೂ ಮಧ್ಯಮ ವರ್ಗದವರಿಗೂ ಎಟ್ಟಿನ ತ್ರಾಸವಾಗುತ್ತಿರುವುದರ ಕಡೆಗೆ ಸರಕಾರದ ಗಮನವನ್ನು ಸೆಳೆಯುತ್ತಲೇ ಬಂದಿದ್ದರೂ ಸರಕಾರ ಅದಕ್ಕೆ ಕಡ್ಡಿಯ ಜೂರಿನಷ್ಟೂ ಬೆಲೆಯನ್ನು ಕೊಟ್ಟಲ್ಲವೆನ್ನಲು ತುಂಬ ವಿಷಾದವಾಗುತ್ತದೆ. ಅದೆಂದೂ ಬೆಲೆ ಇಳಿಸುವ ಕ್ರಮಗಳನ್ನು ಕೈಗೊಳ್ಳಲಿಲ್ಲ—ಪೀಡಿತ ಜನರೆಲ್ಲರ ಸಹಾಯಕ್ಕೆ ಧಾವಿಸಿ ಬರಲಿಲ್ಲ. ಎಲ್ಲೊ ಕೆಲವು ಕೇಂದ್ರಗಳಲ್ಲಿ ನ್ಯಾಯ ಬೆಲೆಯ ಅಂಗಡಿಗಳನ್ನು ತೆರೆದು ಮುಕ್ತ ಪೇಟೆಯುದಕ್ಕಿಂತ ತುಸು ಕಡಿಮೆ ಬೆಲೆಗೆ ಸರಕಾರವು ಅಕ್ಕಿಯನ್ನು ಮಾರಾಟ ಮಾಡುತ್ತಿದೆ. ನಿಜ,—ಆದರೆ ಇದು ಸಮಸ್ಯೆಯ ಅಂಚನ್ನೂ ಮುಟ್ಟಲ್ಲ; ಅಲ್ಲದೆ ಮುಕ್ತ ಪೇಟೆಯ ಬೆಲೆಯನ್ನು ಇಳಿಸಲಿಕ್ಕೆ ಇದರಿಂದ ಎಳ್ಳಷ್ಟೂ ಸಹಾಯವಾಗಿಲ್ಲವೆಂದೇ ನವ್ಯಾನುಭವ. ಕೇಂದ್ರ ಸರಕಾರದ ಮಂತ್ರಿಗಳು ಆಹಾರ ಧಾನ್ಯದ ಅಭಾವವೇನೂ ದೇಶದಲ್ಲಿಲ್ಲ ಎಂದು ಹಿಂದೆಯೂ ಈಗಲೂ ಡಂಗುರ ಹೊಡೆಯುತ್ತಲೇ ಬಂದಿದ್ದಾರೆ; ಸರಕಾರದ ಕಣಜದಲ್ಲಿ ಸಾಕಷ್ಟು ಸಂಗ್ರಹವಿದೆ; ಆಹಾರೋತ್ಪಾದನೆಯು ವರ್ಷದಿಂದ ವರ್ಷಕ್ಕೆ ಏರುತ್ತಾ ಬರುತ್ತಿದೆ ಎಂದು ಮುಂತಾಗಿ ಅವರು ಹೇಳುತ್ತಾರೆ. ಈಗ ದೇಶದಲ್ಲಿ ಎಲ್ಲಿಡೆಯೂ ಬೆಲೆ ಹೆಚ್ಚಿ ಕೊಂಡಿರುವುದರ ಕಡೆಗೆ ಅವರ ಗಮನ ಸೆಳೆದಾಗ, ಅದು ತಾತ್ಕಾರ್ತಿಕ ಸ್ವರೂಪದ್ದೆಂದೂ ಬೆಲೆಗಳು ಖಂಡಿತವಾಗಿಯೂ ಇಳಿಮುಖವಾಗುವವೆಂದೂ ಅವರು ಬಾಯಿ ಮಾತಿನ ನೆಂಬಿಕೆಯನ್ನು ಸ್ಥಕ್ತಪಡಿಸುತ್ತಾರೆ—ಹೊರತು ಅದು ಹೇಗೆ ಇಳಿದೀತು ಎನ್ನುವುದಿಲ್ಲ; ಇಳಿಯಲಿಕ್ಕೆ ಏನು ಮಾಡುತ್ತೀವೆ ಎಂದೂ ಹೇಳಿ ಹೋಗುವುದಿಲ್ಲ. ನಮ್ಮ ದಾಸ್ತಾನುಗಾರರ ಮತ್ತು ವ್ಯಾಪಾರಿಗಳ ಸದ್ಬುದ್ಧಿಯಲ್ಲಿ ಅವರಿಗೆ ವಿಶ್ವಾಸವಿದ್ದಷ್ಟು ಗಾಢವಾಗಿ ಅವರು ಸಮಸ್ಯೆಯ ವಿಶ್ಲೇಷಣೆಯ ಕುರಿತು ಆಸಕ್ತಿ ಹೊಂದಿಲ್ಲವೆನ್ನುವುದೇ ಈ ಹಾರಿಕೆಯ ಮಾತಿನ ಅರ್ಥ. ಮೈಸೂರಿನ ಮಂತ್ರಿಗಳು ರೈತರ ಹೆಚ್ಚು ಬೆಲೆ ಬೆಳೆಸುತ್ತಿಲ್ಲವಾದ ದೆಸೆಯಿಂದ ಬೆಲೆ ಏರಿದೆ ಎಂದು ಹೇಳಿರುವುದಾದರೂ ಹೀಗೆ ಜವಾಬ್ದಾರಿಯನ್ನು ಹಗುರನೆ ಡಿಕೊಳ್ಳುವ ತೂಕ ಕಪ್ಪಿನ ನಿದರ್ಶನ. ರೈತರು ಹೇಗೆ ಹೆಚ್ಚು ಬೆಳೆ ಬೆಳೆಸಿಯಾರು? ಅವರು ಹೆಚ್ಚು ಬೆಳೆ ಬೆಳೆಸುವಂತೆ ಕೃಷಿ ಇಲಾಖೆಯು ಎಷ್ಟುಮಟ್ಟಿಗೆ ಒತ್ತಾಸೆಯನ್ನು ನೀಡಿದೆ, ಪ್ರೋತ್ಸಾಹವನ್ನ ಕೊಟ್ಟಿದೆ? ನೀರಿನ ಪಂಪು ಇತ್ಯಾದಿಗಳನ್ನು ಈಗಿನ ಶರ್ತುಗಳಿಗನುಸಾರ ಎಷ್ಟುಮಂದಿ ರೈತರು ತಾನೆ ಪಡೆಯಬಲ್ಲರು? ಈಗಿನ ಗೇಣಿ ಧಾರಣೆಯ ಪರಿಸ್ಥಿತಿಯಲ್ಲಿ ಯಾರಿಗೆತಾನೆ ಹೆಚ್ಚು ಬೆಳೆ ಬೆಳೆಸಲು ಉತ್ಸಾಹಕ್ಕುಟ್ಟೀತು?—ಈ ವಿಷಯಗಳನ್ನು ಮಾನ್ಯ ಮಂತ್ರಿಗಳು ಆಲೋಚಿಸಿಕೊಳ್ಳದೆ ಬತ್ತ ಬೇಸಾಯಗಾರರ ಮೇಲೆ ತಪ್ಪು ಹೊರಿಸಲು ಹೋದದ್ದು ವ್ಯಸನಕರವಾದ ವಿಷಯ. ಇನ್ನು ಆಹಾರಾಭಾವದ ವಿಷಯ: ಇದು ಕೇವಲ ಕೃತ್ರಿಮ ಸ್ವರೂಪದ್ದೆಂದೂ, ಅಕ್ಕಿ ಇಲ್ಲವೆಂಬ ಸಂಗತಿಯು ಕೇವಲ ಭ್ರಾಂತಿಯೆಂದೂ ನಮಗೆ ತೋರುತ್ತದೆ. ಹೆಚ್ಚು ಬೆಲೆಯನ್ನು ಕೊಡುವ ಸಾಮರ್ಥ್ಯವಿರುವ ಪಕ್ಷದಲ್ಲಿ ಎಷ್ಟು ಬೇಕಾದರೂ ಅಕ್ಕಿ ಸಿಗುತ್ತಿರುವಾಗ ಮತ್ತು ನೂರರಲ್ಲಿ ೯೫ಕ್ಕಿಂತಲೂ ಕಿಚ್ಚು ಜನರು ಹೆಚ್ಚು ಬೆಲೆಯಲ್ಲಿ ಅಕ್ಕಿಯನ್ನು ಕೊಂಡುಕೊಳ್ಳುತ್ತಾ, ಕಷ್ಟದಿಂದ ದಿನ ದೂಡುತ್ತಿರುವಾಗ ಅಕ್ಕಿಯು ಇಲ್ಲ ಎನ್ನುವ ಮಾತಿನಲ್ಲಿ ಸತ್ಯತೆ ಉಳಿಯುವುದಿಲ್ಲ. ಅಕ್ಕಿ ಇದೆ—ಅದರೆ ವ್ಯಾಪಾರಿಗಳೂ ದಾಸ್ತಾನುಗಾರರೂ ಹೆಚ್ಚು ಬೆಲೆಯನ್ನು ಕೇಳುತ್ತಾರೆ; ಹಾಗೆ ಲಭವನ್ನು ಮಾಡಿಕೊಳ್ಳಲು ಬಯಸುತ್ತಾರೆ; ಎಂಬುದೇ ಈ ಸಮಸ್ಯೆಯ ಮೂಲ. ಸರಕಾರವು ಈ ದಾಸ್ತಾನುಗಳೆಲ್ಲ ಬೆಳಕಿಗೆ ಬರುವಂತೆ ಮತ್ತು ಅಕ್ಕಿಯನ್ನು ನ್ಯಾಯವಾದ ಬೆಲೆಯಲ್ಲಿ ಮಾರುವಂತೆ ಶಾಸನ ಮೂಲಕ ವಾಗಿಯಾದರೂ ತಕ್ಕ ಕ್ರಮ ತೆಗೆದುಕೊಳ್ಳದೆ ಹೋದಲ್ಲಿ ಈ ಲಾಭಬಡಕತನದ ಹವ್ಯಾಸವು ಲಂಗು ಲಗಾಮಿಲ್ಲದೆ ಪ್ರಬಲಿಸುವುದು ನಿಶ್ಚಯ. ಪಡಿ ಪದ್ಧತಿಯು ಪುನಃ ಜಾರಿಗೆ ಬರಬೇಕೆಂದು ನಾವೇನೂ ಒತ್ತಾಯಿಸುವುದಿಲ್ಲ—ಆವರೆ ಅಕ್ಕಿಯ ವಿತರಣೆಯು ನ್ಯಾಯವಾದ ರೀತಿಯಲ್ಲಿ ಜನರಿಗೆ ಭಾರವಾಗದ ದರದಲ್ಲಿ ಸಿಕ್ಕುವಂತೆ ನಡೆಯುವಂತೆ ನೋಡಿಕೊಳ್ಳುವ ಜವಾಬ್ದಾರಿಯಿಂದ ಸರಕಾರವು ತಪ್ಪಿಸಿಕೊಳ್ಳಲಾಗದು ಎಂಬುದೇ ನಮ್ಮ ಒತ್ತಾಯ.

## ಸಂಕ್ಷಿಪ್ತ ಸುದ್ದಿಗಳು

### ಭಾರತದ ರಾಷ್ಟ್ರಪತಿ ಸ್ಥಾನಕ್ಕೆ

ಇದೇ ದಿನಾಂಕ ೬ರಂದು ಚುನಾವಣೆಯು ನಡೆಯಿತು. ಸ್ಪರ್ಧಿಸಿದ ಪ್ರಚಲಿತ ರಾಷ್ಟ್ರಪತಿ ರಾಜೇಂದ್ರ ಪ್ರಸಾದ, ಪಂಜಾಬದ ಅಡ್ವೋಕೇಟರಾದ ಚೌಧರಿ ಹರಿರಾಮ ಮತ್ತು ಸೌಹಾರ್ತಿಯ ಶ್ರೀ ನಾಗೇಂದ್ರ ನಾರಾಯಣದಾಸರಲ್ಲಿ ರಾಜೇಂದ್ರ ಪ್ರಸಾದರೇ ಜಯಶೀಲರಾಗುವ ವಿಶ್ವಾಸವಿದೆ. ಮತಗಣನೆಯು ೧೦ನೇ ದಿನಾಂಕ ಪ್ರಾರಂಭವಾಗಿ ಅದೇ ದಿನ ಫಲಿತಾಂಶ ಪ್ರಕಟಗೊಳ್ಳುವ ನಿರೀಕ್ಷೆಯಿದೆ. ರಾಷ್ಟ್ರಪತಿ ಸ್ಥಾನಕ್ಕೆ ಸಾರ್ವತ್ರಿಕ ಚುನಾವಣೆಯು ಸಂಪೂರ್ಣವಾಗಿ ಮುಗಿಯದ ಮೊದಲು ನಡೆಯುವ ಈ ಚುನಾವಣೆಯನ್ನು ಆಹ್ವಾನಿಸಿದ್ದ ಹಿಂದೂ ಮಹಾ ಸಭೆಯ ಹಿಂದಿನ ಅಧ್ಯಕ್ಷ ಡಾ. ಎನ್. ಬಿ. ಖರೆ ಮತ್ತು ಕಾಂಗ್ರೆಸ್ಸಿನ ಶ್ರೀ ರಾಮನಾಥ ಕಾಲಿಯಾ ಇವರ ಎರಡೂ ಅರ್ಜಿಗಳನ್ನು ವರಿಷ್ಠ ನ್ಯಾಯಾಲಯದ ಪರ ಆಕ್ಷೇಪಣೆಯಿಂದು ದಿನಾಂಕ ೩ರಂದು ಕಿತ್ತು ಹಾಕಿದ್ದರು.

### ಕೇಂದ್ರ ಉಪ ಆಹಾರ ಮಂತ್ರಿ

ಶ್ರೀ. ಎಂ. ವಿ. ಕೃಷ್ಣಸ್ವಾಮಿಯವರು ಭಾರತದಲ್ಲಿ ಆಹಾರ ಸಂಗ್ರಹ ಕಾರ್ಯಕ್ರಮ ತೃಪ್ತಿಕರವಾಗಿದೆ ಎಂದು ಅಭಿವ್ಯಕ್ತಪಡಿಸಿದ್ದಾರೆ. ಯಾವ ತೆರದ ವಿಷಮ ಪರಿಸ್ಥಿತಿಯಲ್ಲಿಯೂ ಎದುರಿಸಲು ಶಕ್ತವಾಗುವಷ್ಟು ಧಾನ್ಯಗಳು ಸಂಗ್ರಹದಲ್ಲಿವೆ ಜನರು ದೇಶದ ಆಹಾರ ಪರಿಸ್ಥಿತಿಯ ಬಗ್ಗೆ ಅಕ್ಕರ ವಿಶ್ವಾಸವನ್ನು ಪ್ರದರ್ಶಿಸಬೇಕು. ಇಲ್ಲವಾದರೆ ಧಾನ್ಯಗಳ ಉತ್ಪಾದನೆ ಹೆಚ್ಚಿದರೂ ದರಗಳ ಮೇಲೆ ಅದು ಪರಿಣಾಮ ಮಾಡಲಾರದೆಂದು ಬೆಂಗಳೂರಲ್ಲಿ ತಿಳಿಸಿದರು. ಹೆಚ್ಚುತ್ತಿರುವ ಆಹಾರ ಧಾನ್ಯಗಳ ಬೆಲೆಯ ಕುರಿತು ಅವರೇನೂ ನುಡಿಯಲಿಲ್ಲ.

### ಇಂದಿನ ಶಿಕ್ಷಣ ಪದ್ಧತಿಯು

ತೀವ್ರಗತಿಯಲ್ಲಿ ಬದಲಾವಣೆ ಹೊಂದಬೇಕು ಎಂದು ಎರೋಡಾ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದ ಶ್ರೀಮತಿ ಹಂಸ ಮೆಹತಾರು ಬೆಂಗಳೂರಿನಲ್ಲಿ ತರಬೇತಿ ಕಾಲೇಜುಗಳ ಪ್ರಧಾನಾಧ್ಯಾಪಕರ ಪರಿಷತ್ತಿನಲ್ಲಿ ಹೇಳಿದರು. ತಮ್ಮ ವಿಶ್ವವಿದ್ಯಾಲಯದಲ್ಲಿ ಇತ್ತೀಚೆಗೆ ಪರೀಕ್ಷಾ ಪದ್ಧತಿಗಳಲ್ಲಿ ನಡೆಸಿದ ಬದಲಾವಣೆಗಳಿಂದ ಮಟ್ಟವು ಏರಿದೆ ಎಂದವರು ತಿಳಿಸಿ, ತರಾವುಗಳನ್ನು ಮಂಜೂರುಮಾಡುವುದರ ಬದಲು ಕಾರ್ಯಶೀಲರಾಗಿ ಈ ಪರಿವರ್ತನೆಗಳನ್ನು ಮಾಡಬೆಕೆಂದು ಆಶಿಸಿದರು.

### ಧಾರವಾಡದಲ್ಲಿ

ಇನ್ನೆ ಕನ್ನಡ ಸಾಹಿತ್ಯ ಸಮ್ಮೇಳನವು ದಿನಾಂಕ ೭ರಿಂದ ೯ರ ವರೆಗೆ ನಡೆಯುತ್ತದೆ. ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳೂ ಸುಪ್ರಸಿದ್ಧ ಕವಿಗಳೂ ಆದ ಡಾ. ಕು. ವೆಂ. ಪುಟ್ಟಪ್ಪನವರು ಅಧ್ಯಕ್ಷರಾಗಿದ್ದಾರೆ. ಕರ್ನಾಟಕದ ಎಲ್ಲ ಭಾಗಗಳ ಆರಿಸಿದ ಸಾಹಿತಿಗಳು ಇಲ್ಲಿನ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದಾರೆ. ಈ ಸಮ್ಮೇಳನವನ್ನು ಮೈಸೂರಿನ ಮುಖ್ಯಮಂತ್ರಿ ಮಾನ್ಯ ಎಸ್. ನಿಜಲಿಂಗಪ್ಪನವರು ಉದ್ಘಾಟಿಸಿದರು

### ಕೈಮಗ್ಗ ಸಪ್ತಾಹವು

ದಿನಾಂಕ ೭ರಿಂದ ಭಾರತದಾದ್ಯಂತವಾಗಿ ವಿವಿಧ ಮಂತ್ರಿಗಳಿಂದ ಉದ್ಘಾಟಿತವಾಯಿತು. ಜನತೆಯಲ್ಲಿ ಕೈಮಗ್ಗದ ಬಟ್ಟೆಗಳ ಬಗ್ಗೆ ವಿಶೇಷ ಆಸಕ್ತಿಯನ್ನುಂಟು ಮಾಡಿ, ತನ್ಮೂಲಕ ಮಗ್ಗದ ಬಟ್ಟೆಗಳ ಬೇಡಿಕೆಯನ್ನು ಹೆಚ್ಚಿಸಿ, ಗುಡಿಕೈಗಾರಿಕೆಯಾದ ಇದಕ್ಕೆ ಪ್ರೋತ್ಸಾಹ ನೀಡುವ ಸಲುವಾಗಿ ಈ ರೀತಿಯ ಸಪ್ತಾಹವನ್ನು ಆಚರಿಸಲಾಗುತ್ತಿದೆ.

### ಬಿಹಾರದಲ್ಲಿ

ಈ ವರ್ಷ ೬ ಜಿಲ್ಲೆಗಳಲ್ಲಿ ಮಹಾಪೂರದ ದೆಸೆಯಿಂದಾಗಿ ಹಿಂಗಾರು ಬೆಳೆ ಕೈಗೆ ಬರಲಿಲ್ಲವಾದುದರಿಂದ ಭೀಕರ ಕ್ಷಾಮವೊದಗಿದೆ. ಕೇಂದ್ರ ಹಾಗೂ ರಾಜ್ಯ ಸರಕಾರಗಳು ಆಹಾರ ಧಾನ್ಯಗಳನ್ನು ನ್ಯಾಯ

ಲೆಯಲ್ಲೊದಗಿಸಲು ನೆರವಾಗುತಿದ್ದಾ
ವೆ ಉತ್ತಂ ಬಿಹಾರದಲ್ಲಿ ನೆರೆನೀನಿಂ
ಾಗಬಹುದಾದ ಗಂಡಾಂತರ ಪರಿಸ್ಥಿತಿ
ನ್ನೆದುರಿಸಲು ತಕ್ಕ ಕಾರ್ಯಕ್ರಮಗ
ನ್ನು ಕೈಗೊಳ್ಳಲಿಕ್ಕಿಸಲಾಗುವುದೆಂದ ಆ
ರ ನಂತ್ರಿ ಅಜಿತಕುಮಾರ ಜೈನರು
ಳಿದ್ದಾರೆ.

### ಮೈಸೂರಿನ

ನೂತನ ಶಾಸನ ಸಭೆಯು ಜೂನ್
ೂದಲನೆ ದಿನಾಂಕ ಪ್ರಪ್ರಥಮವಾಗಿ
ರಲಿರುವುದೆಂದು ತಿಳಿದುಬರುತ್ತದೆ.

### ಯೂರಿಂಗರ

ವರದಿಯನ್ನು ಕಂಡು ಕೆಳಿದ ಪಾಕ
ನ್ತನವು ತನ್ನ ಮುಂದಿನ ಕಾರ್ಯಕ್ರಮ
ನ್ನು ತೀವ್ರವಾಗಿ ಆಲೋಚಿಸುತ್ತಿಲಿದೆ.
ದರ ಪ್ರಧಾನಿ ಸುಹ್ರವರ್ದಿಯವರು
ೃಯರ್ಣನೆ ದಿನಾಂಕ ಪರರೇಶ ಪ್ರವಾ
ದಿಂದ ಇಂತೆಂಕಲಿರ.ವರು ಕ ಶ್ಮೀರ
ಮಸ್ಯೆ ಯಲ್ಲಿ ಶ್ರೀ ಯಾರಿಂಗರು ಬಗದಾ
ಒಪ್ಪಂದವನ್ನೂ ಉಲ್ಲಂಘಿಸಿ ಸೂಚಿ
ದುದರಿಂದ, ಇದ್ಯವೇ ಕರಾಚಿಯಲ್ಲಿ ಸೇ
ಲಿರುವ ಬಗದಾದ ಒಪ್ಪಂದದ ರಾಷ್ಟ್ರ
ಳ ಸಮ್ಮೇಳನವ ನಂತರವೇ ಭದ್ರತಾ
ವಿತಿಯ ಸಭೆಯು ಕಾಶ್ಮೀರ ಸಮಸ್ಯೆ
ುನ್ನು ಚರ್ಚಿಸಲು ಕೂಡುವ ಸಂಭವ
ೇ ಹೆಚ್ಚು.

### ಈಜಿಪ್ಟಿನ ಅಧ್ಯಕ್ಷ

ಕರ್ನಲ್ ನಾಸೀರರನ್ನು ಕೆಡವಿ ಅವ
ಸ್ಥಾನದಲ್ಲಿ ತಮಗೆ ಬೇಕಾದವನೊಬ್ಬ
ನ್ನು ಆಲ್ಲಿರಿಸಲು ಬ್ರಿಟಿಷ ಕನ್ಸರ್ವೇಟ
ಿ ಪಕ್ಷವ ಶಾಮನ್‌ವೆಲ್ತದ ಪರಿಷತ್ತಿಗೆ
ಅಧ್ಯಕ್ಷ ಪೂರ್ವದ ಬಗ್ಗೆ ವರದಿ ಒಪ್ಪಿಸಿದ
ಜ್ಞರು ವಿಧ ನವೊಂದನ್ನು ಶಿಫಾ
ಸುಮಾಡಿದ್ದಾರೆ. ಅರಬ ರಾಷ್ಟ್ರಗಳ
ನಾಸೀರರ ವಿರುದ್ಧನಾಗಿ ಸ್ಪ ಜಾ
ಕಾರ್ಯವನ್ನು ನಡೆಸಬೇಕೆಂಬುದೇ ಅ
ಲಷೆ. ಆವರು ಮತ್ತೂ ಮುಂದುವರಿ
ು, ಅಮೆರಿಕೆ, ಫ್ರಾನ್ಸ್‌ನುತ್ತು ಬ್ರಿಟನ್
ಳು ಕೂಡಿ ಕೆಲಸಮಾಡಿದರೆ ಮಧ್ಯ
ಪೂರ್ವ ಮಾತ್ರವಲ್ಲ, ಜಗತ್ತಿನ ನಾಯ
ತ್ವವೇ ನಮ್ಮ ಕೈಗೆ ಬಂದೀತು ಎಂದಿ
ದ್ದಾರೆ.

### ಜಾಪಾನದ ವಿದ್ಯಾರ್ಥಿಗಳು

ಮೇ ೧೩ರಿಂದ ತಮ್ಮ ವರ್ಗಗಳಿಗೆ
ಹೋಗದೆ ಅಣು ಮತ್ತು ಜಲಜನಕ
ಬಾಂಬುಗಳ ಪ್ರಯೋಗದ ವಿರುದ್ಧವಾಗಿ
ಕಳವಳಿಯನ್ನು ಕೈಗೊಳ್ಳಲಿರುವರು.
ಪ್ರಸ್ಯಸ್ ದ್ವೀಪದ ಗಂಡಾಂತರ ವಲಯ
ೊಳಗೆ ಅಣು ಪ್ರಯೋಗ ವಿರೋಧಿ
ಂಡಳವು ಕಡಗು ಪಡೆಯನ್ನು ಕಳಿಸ
ುದ್ದರೆ, ಮೀನುಗಾರರ ದೋಣಿಗಳ ರಡೆ
ೊಂದನ್ನು ಕಳಿಸಲು ಅಣು ಜಾಗೂ
ಜಲಜನಕ ಬಾಂಬು ವಿರೋಧಿ ಸಮಿತಿ
ಯು ನಿರ್ಧರಿಸಿದೆ. ಅತ್ತ ಪೂರ್ವ ಜರ್ಮ
ನಿಯ ೧೪ ವಿಜ್ಞಾನಿಗಳೂ ಈ ಪ್ರಯೋಗ
ನ್ನು ನಿರೋಧಿಸಿ ಪ್ರಕಟಣೆ ಹೊರಡಿ
ಸಿದ್ದಾರೆ.

### ಅಣುಬಾಂಬು ರಚನೆಗೆ

ಅವಶ್ಯಕವಾದ ಸ್ಟ್ರಾಂಶಿಯಂ ಎಂ
ಬ ವಸ್ತುವನ್ನು ಕಂಡು ಹಿಡಿದ ನಾಲ್ವ
ರು ವಿಜ್ಞಾನಿಗಳಲ್ಲಿ ಒಬ್ಬರಾದ ಡಾ.
ಜೋಸೆಫ್ ಹಬ್ಲ್ಯಾಶ್. ಕೆನ್ನೆಡಿಯವರು
ಪ್ರಿಂಟ್ ಲೂಯಿಸಿನಲ್ಲಿ ತಾ. ೫ರಂದು
ಅಧಿನರಾದರು. ಆವರ ಪ್ರಾಯ ಕೇವಲ
೨೧.

## ಉಡುಪಿ

ಲಾ. ಇಂಜಿನಿಯರಿಂಗ್ ಕಾಲೇಜುಗಳ ಸ್ಥಾಪನೆಗೆ ಸಮ್ಮತಿ— ಮಣಿಪಾಲದ ಎಕೆಡೆಮಿ ಆಫ್ ಜನರಲ್ ಎಜ್ಯುಕೇಶನನವರು ಆರಂಭಿಸಬೇಕೆಂದಿರುವ ಲಾ, ಮತ್ತು ಇಂಜಿನಿಯರಿಂಗ್ ಕಾಲೇಜುಗಳ ಸ್ಥಾಪನೆಗೆ ಮೈಸೂರು ಸರಕಾರವು ಸಮ್ಮತಿ ಕೊಟ್ಟಿರುವುದೆಂದೂ ಈ ಕಾಲೇಜುಗಳನ್ನು ಈಶಾಲಾ ವರ್ಷದಲ್ಲಿ ತೆರೆಯಲಾಗುವುದೆಂದೂ ತಿಳಿದುಬರುತ್ತದೆ.

ಈ ಎರಡೂ ಕಾಲೇಜುಗಳು ಕರ್ನಾಟಕ ವಿಶ್ವವಿದ್ಯಾನಿಲಯಕ್ಕೆ ಸೇರಿಸಿಡೆಯಾಗುವವು. ಎಂ. ಜಿ. ಎಂ. ಕಾಲೇಜು ಮೊದಲೇ ಕರ್ನಾಟಕ ಯುನಿವರ್ಸಿಟಿಗೆ ಸೇರಿದೆ. ಆದ್ದರಿಂದ ಜಿಲ್ಲೆಯ ಇತರ ಕಾಲೇಜುಗಳನ್ನೂ ಕರ್ನಾಟಕ ಯುನಿವರ್ಸಿಟಿಗೇ ಸೇರಿಸುವ ಸಂಭವನಿದೆ.

**ಶಾಲಾ ಕಟ್ಟಡ ಉದ್ಘಾಟನೆ:—** ಗುಂಡಿಬೈಲು ಖಾಸಗಿ ಪ್ರಾಥಮಿಕ ಶಾಲೆಯ ನೂತನ ಕಟ್ಟಡವನ್ನು ಕಳೆದ ತಾ. ೨೫ರಲ್ಲು ಶ್ರೀ ಎ. ಜಿ. ಆಳ್ವರು ಉದ್ಘಾಟಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಟಿ. ಎ. ಪೈಗಳು ವಹಿಸಿದ್ದರು. ಹೆಡ್‌ಮಾಸ್ಟರ್ ಶ್ರೀ ನರಸಿಂಹ ಉಪಾಧ್ಯಾಯರು ವರದಿಯನ್ನೋದಿದರು ಶ್ರೀ ಕೃಷ್ಣ ಸೂರ್ಯ ಆಚಾರ್ಯರು ಸ್ವಾಗತವಾಚನವಾಡಿದರು. ಶ್ರೀಗಳಾದ ಶಿರಿ ಸಿಟ್ಟಿ, ಪ. ಲ. ನಾ. ಉಪಾಧ್ಯಾಯರು ಕಾಲೋಚಿತವಾತುಗಳನ್ನಾಡಿದರು.

**ನೇಕಾರರ ವಾರ್ಷಿಕ ಮಹಾ ಸಭೆಯು:—** ಕಳೆದ ತಾ. ೨೨ರಲ್ಲು ಯು. ಬಿ. ಇ. ಎಮ್. ಹಾ. ಎ. ಶಾಲೆಯಲ್ಲಿ ಶ್ರೀ ಕೆ. ದಾಸ ಸೇರಿಗಾರರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಸದಸ್ಯರಾಗಿದ್ದು ಮೃತಹೊಂದಿದ ವರಿಗೆ ಶ್ರದ್ಧಾಂಜಲಿ ಆರ್ಪಿಸಲಾಯಿತು. ಮುಂದಿನ ವರ್ಷಕ್ಕೆ ಶ್ರೀಗಳಾದ ಕೆ. ಗಂಗಯ್ಯ ಸಿಟ್ಟಿಗಾರ (ಅಧ್ಯಕ್ಷ), ಸಿರಿಯ ಸಿಟ್ಟಿಗಾರ (ಉಪಾಧ್ಯಕ್ಷ), ಡೇವಿಡ್ ಕಳಕಡ (ಕಾರ್ಯದರ್ಶಿ), ಕೇಜಪಾಲ ಕೋಟ್ಯಣ್ಣ (ಸಹಕಾರ್ಯದರ್ಶಿ), ಗುರುರಾಜ ಸಿಟ್ಟಿ (ಕೋಶಾಧಿಕಾರಿ) ಯವರು ಅಧಿಕಾರಿ ವರ್ಗಕ್ಕೆ ಆರಿಸಲ್ಪಟ್ಟರು.

ಆಕ್ಕಿಯ ಕ್ರಯವು ದಿನದಿಂದ ದಿನಕ್ಕೆ ಹೆಚ್ಚುತ್ತಿರುವುದನ್ನು ಕೂಡಲೇ ತಡೆಗಟ್ಟಲು ಉಡುಪಿ ತಾಲೂಕಿನ ಎಲ್ಲಾ ಕೇಂದ್ರಗಳಲ್ಲೂ ಕಡಮೆ ದರದಿಯ ಡಿಪೋಗಳನ್ನು ತೆರೆಯಬೇಕೆಂದು ನಿರ್ಣಯವಾಯಿತು. ಮಂಗಳೂರು ಮುನಿಸಿಪಲ್ ಮಜೂರರ ಕೇಳಿಕೆಗಳಿಗೆ ಸಹಾನುಭೂತಿ ಸೂಚಿಸಿ ಅವರ ಕೇಳಿಕೆಗಳನ್ನು ಮಾನ್ಯಮಾಡಬೇಕೆಂದು ನಗರ ಸಭಾಧಿಕಾರಿಗಳಿಗೆ ವಿನಂತಿಸುವ ಇತ್ಯಾದಿ ನಿರ್ಣಯಗಳಾದವು.

**ಕೋಚಣೀಯ ನಿಧನ:** ಅದಮಾರು ಟೋರ್ಡ್ ಹೈಸ್ಕೂಲಿನ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಇಂದಿರಾಬಾಯಿ ಸಂಜೀವ ರಾಯರು ತಾ ೨ ರಲ್ಲು ತಮ್ಮ ಉಡುಪಿ ಮನೆಯಲ್ಲಿ ಹೃತ್ಪಿಯೆ ನಿಂತು೩೭ನೇ ವಯಸ್ಸಿನಲ್ಲಿ ಅಕಾಲ ನಿಧನ ಹೊಂದಿದರೆನ್ನಲು ವಿಷಾದಿಸುತ್ತೇವೆ. ಶ್ರೀಮತಿಯವರ ಆತ್ಮಕ್ಕೆ ಚಿರ ಶಾಂತಿಯನ್ನು ಕೋರುವೆವು

**ಪಾಟ ಎಮ್. ಎ ಪೈಗಳ ಜನ್ಮ ದಿನಾಚರಣೆ:—** ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಗ್ ಸಿಂದಿಕೇಟಿನ ಶಿಬಂಧಿಯವರು ಕಳೆದ ತಾ. ೩೦ ರಲ್ಲು ಬೇಂಕಿನ ಸಂಸ್ಥಾಪಕರಾದ ಡಾ. ಟಿ. ಎಮ್. ಎ. ಪೈಗಳ ಜನ್ಮದಿನವ ನಿಮಿತ್ತ ಅವರಿಗೆ ಫೋಜನ ಸಮಾರಂಭ ಏರ್ಪಡಿಸಿ ಗೌರವಿಸಿದರು. ಮಣಿಪಾಲ ಹಾ. ಏ. ಶಾಲೆಯಲ್ಲಿ ಶ್ರೀ ಬಿ. ಎಲ್. ಎನ್ ರೈಗಳ ಅಧ್ಯಕ್ಷತೆಯಲ್ಲಿ ಡಾ. ಪೈಗಳಿಗೆ ಸತ್ಕಾರವಿತ್ತು ಗೌರವಿಸಲಾಯಿತು. ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರ ರಾಯರು ಡಾ. ಪೈಗಳ ಗುಣಗಾನಗೈದರು ಶ್ರೀ ಪಿ. ಎಲ್. ಎನ್. ಉಪಾಧ್ಯಾಯರು ಧನ್ಯವಾದಗಳ ನ್ನಿತ್ತರು. ಮಣಿಪಾಲ ಗೀತಾಮಂದಿರದಲ್ಲಿ ಪೂಜೆ, ಭಜನಾದಿಗಳನ್ನು ನಡೆಸಿ ಶ್ರೀ ಟಿ. ಎ ಪೈಗಳು ಡಾ. ಪೈಗಳಿಗೆ ದೀರ್ಘಾಯುಸ್ಸನ್ನು ಕೋರಿದರು. ಶ್ರೀ ಎಲ್. ಎಚ್. ಪ್ರಭುಗಳು ಅಧಿನಂದಿಸಿದರು.

**ಶ್ರೀ ಕೃಷ್ಣ ಮತದಲ್ಲಿ ವಸಂತ ಸಾಹಿತ್ಯೋತ್ಸವವು:—** ತಾ. ೨೦ರಿಂದ ಒಂದು ವಾರದ ತನಕ ಪರ್ಯಾಯ ಅದಮಾರು ಮಠದ ಸ್ವಾಮಿಗಳವರ ಉದಾರ ಶ್ರಯದಲ್ಲಿ ಜರಗಿತು. ಶ್ರೀ ಕೀರೂರು, ಶ್ರೀ ಪುತ್ತಿಗೆ, ಶ್ರೀ ಕಾಣೂರು ಮತ್ತು ಶ್ರೀ ಫಲಿಮಾರು ಮಠಾಧಿಪತಿಗಳು ಅನುಕ್ರಮವಾಗಿ ಸಭಾಧ್ಯಕ್ಷತೆ ವಹಿಸಿದ್ದರು ಎಫ್. ಎಲ್. ಶ್ರೀ ರಾಘವೇಂದ್ರ ಆಚಾರ್ಯ, ಶ್ರೀಗಳಾದ ಕಾ. ಶಿ. ಶರಿದಾಸ ಭಟ್ಟ, ಆರ್. ಎ. ಬನ್ನಂಜೆ, ಶ್ರೀ ಟಿ. ಎ. ಪೈ, ಎಸ್. ಎಲ್. ನಾರಾಯಣ ಭಟ್, ಎ. ಜೆ. ಆಳ್ವ ಮೊದಲಾದವರು ವಿವಿಧ ವಿಷಯಗಳಲ್ಲಿ ಭಾಷಣಕರ್ತರು. ದಿನಾಲೂ ರಾತ್ರೆ ಸಂಗೀತ, ಯಕ್ಷಗಾನ, ನಾಟಕಾದಿ ಕಾರ್ಯಕ್ರಮಗಳಿದ್ದುವು.

**ಕಾರ್ಮಿಕ ನಂತ್ರಿ ಶ್ರೀ ಬಿ. ವಿ. ಭಾಳಿಗರು:—** ತಾ. ೨೦ರಿಂದ ಜಿಲ್ಲಾ ಸಂಚಾರವನ್ನು ಕೈಗೊಂಡಿದ್ದು ಸುತ್ತೂರು, ಮೂಡಬಿದಿರೆ, ಮಂಗಳೂರುಗಳಿಗೆ ಬಂದು ಮೊದಲಾದ ಕಡೆಗಳಲ್ಲಿ ಸಂಭ್ರಮದ ಸ್ವಾಗತ ಪಡೆದು ಮಂಗಳೂರಿಗೆ ಬಂದಿರುವರು.

**ಕಟಪಾಡಿ-ಸ್ಥಳೀಯ ಎಸ್. ಪಿ. ಎಸ್. ಹಾ ಏ ಶಾಲೆ ಮತ್ತು ಎಸ್.ಎಮ್.ಎಸ್. ಎಲಿಮೆಂಟರಿ ಶಾಲೆ, ಚೊಕ್ಕಾಡಿ, ಇವುಗಳ** ಸಂಯುಕ್ತ ವರ್ಧಂತ್ಯುತ್ಸವವು ಕಳೆದ ತಾ. ೨೬ರಲ್ಲು ಕುಂದಾಪುರ ಸಬ್ ಕಲೆಕ್ಟರ್ ಶ್ರೀ ಕೆ. ಎಲ್. ಸೂರ್ಯನಾರಾಯಣಯ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಕರೆಸ್ಪೊಂಡೆಂಟ್ ಶ್ರೀ ಪಿ. ರಾಮದಾಸ ನಾಯ್ಕರು ಸ್ವಾಗತ ಭಾಷಣ ಮಾಡಿದರು. ಮುಖ್ಯೋಪಾಧ್ಯಾಯರು ಗಳು ವರದಿಗಳನ್ನು ಓದಿದರು. ಶ್ರೀ ಕೆ. ಪುಂಡಲೀಕ ಶೆಣ್ಯೈಯವರು ಸ್ವಾಗತವಾಚನ ಮಾದರು. ಅಧ್ಯಕ್ಷರು ಲಘುಮಾನ ವಿತರಣೆ ಮಾಡಿದರು, ಪಂತರ ವಿವಿಧ ವಿನೋದಾವಳಿ ಗಳಾದುವು.

**ಎಡನೀರು:—** ಸ್ಥಳೀಯ ಭಾರತಿ ಪ್ರಾಥಮಿಕ ಶಾಲೆಯ ವರ್ಧಂತ್ಯುತ್ಸವವು ತಾ. ೫ ರಲ್ಲು ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಸ್ವಾಗತಭಾಷಣ, ವರದಿವಾಚನಗಳಾದ ಬಳಿಕ ಉಡುಪಿಯ ಡಾ. ಕೆ. ಎಲ್. ವತ್ಸಳ್ಳರು ವಿಶುವಿಹಾರ'ದ ಉದ್ಘಾಟನೆಯನ್ನು ಮಾಡಿದರು. ಉಡುಪಿ ಸರಕಾರಿ ಬುನಾದಿ ತರಬೇತಿ ಶಾಲಾಧ್ಯಾಪಕ ಶ್ರೀ ಟಿ. ಶಿನಪ್ಪ ಹೆಗ್ಡೆಯವರು ಮಹಾತ್ಮಾ ಗಾಂಧಿಯವರ ಭಾವಚಿತ್ರ ಅನಾವರಣಗೊಡಿಸಿದರು ಶ್ರೀ ಎ. ಜೆ ಆಳ್ವಯವರು ಬಹುಮಾನವಿತರಣೆಮಾಡಿದರು. ಶ್ರೀ ಎಫ್ ಡಾಂತಿಯವರು ಸ್ವಸ್ತಿವಾಚನ ಮಾಡಿದ ತರುವಾಯ ಸಭಿಕರ ಭಾಷಣಗಳಾದುವು. ನಿಪಿಧ ವಿನೋದಾವಳಿ ನಾಟಿಕಾ ಭಿನಯಗಳಾಗಿ ಉತ್ಸವವು ಕೊನೆಗೊಂಡಿತು.

**ಅಂಬರನಾಥ:—** ಕಳೆದ ತಾ. ೨೫ರಲ್ಲು ದಕ್ಷಿಣ ಕನ್ನಡ ಜಿಲ್ಲಾ ಸಂಘದ ಮೂರನೆ ವಾರ್ಷಿಕೋತ್ಸವವು ಶ್ರೀ ಯು. ಜಿ. ಪುಟ್ಟಿಯವರ ಅಧ್ಯಕ್ಷತೆಯಲ್ಲಿ ಎಮ್ಮೇ ಕ್ವಜ್ ಪಾಲಿನಲ್ಲಿ ಜರಗಿತು. ಮುಂಬಯಿ ಸಿದ್ಧಾನ ಸಭೆಯ ಸ್ಪೀಕರ್ ಶ್ರೀ ಎಸ್. ಎಲ್. ಸಿಲಮ್ ರವರು ಸಿಶೇಷವಾಗಿ ಚಿತ್ಕೈಸಿದ್ದರು. ಸಂಘದ ಅಧ್ಯಕ್ಷ ಶ್ರೀ ಟಿ ಎಲ್. ಪುತ್ರನ್ಕಾರ್ಯರು ಸ್ವಾಗತ ಭಾಷಣಮಾಡಿದರು ಸಂಘದ ಉಪಾಧ್ಯಕ್ಷ ಶ್ರೀ ಎಸ್ ಎಸ್. ಹೆಬ್ಬೆಕಾರರು ಶುಭಹಿಂದೇಶಗಳನ್ನು ಓದಿದರು. ಕಾರ್ಯದರ್ಶಿ ಶ್ರೀ ಎಸ್. ಕೆ. ಫಲಿಮಾರು ವರದಿ ವಾಚನಮಾಡಿದರು. ಬಳಿಕ ಸಂಘದ ಅಭಿವೃದ್ಧಿಗಾಗಿ ಮಡಿದ ಶ್ರೀಗಳಾದ ಬಿ. ಕೆ ಕುಂವರ್ ಮತ್ತು ಎಮ್. ಬಿ. ಸೆಟ್ಟರಿಗೆ ಪಾರಿತೋಷಕ ಕೊಡಲಾಯಿತು.

ಶ್ರೀ ಎಸ್. ಎಲ್. ಸಿಲಮ್ ಮತ್ತು ಅಧ್ಯಕ್ಷರು ಮಾತನಾಡುತ್ತಾ ಕನ್ನಡಿಗರು ದೇಶದ ಯಾವ ಭಾಗದಲ್ಲಿದ್ದರೂ ಒಟ್ಟು ಸೇರಿ ಸಂಘ ಸಂಸ್ಥೆ ಸ್ಥಾಪಿಸಿ ತನ್ಮೂಲಕ ಸಮಾಜಸೇವೆ, ದೇಶಸೇವೆ ಮಾಡುತ್ತಿರುವುದು ಅಭಿನಂದನೀಯವೆಂತೆನ್ನು. ಸಂಘದ ಕೋಶಾಧಿಕಾರಿ ಶ್ರೀ ಎಮ್. ಎಮ್. ಸೆಟ್ಟರು ಸರ್ವರಿಗೂ ವಂದನೆಗಳನ್ನರ್ಪಿಸಿದರು.

### ಸುಯೇಜ ವಿವಾದವು

ಸಾಧಾರಣವಾಗಿ ಒಂದು ಹೆತೋಟಿಗೆ ಬಂದು ಮೊನ್ನೆ ಮೊನ್ನೆ ಸಂಚಾರಕ್ಕೆ ತೆರೆದಾಯಿತು. ಅದರಲ್ಲಿ ಸಾಮಾನ್ಯವಾಗಿ ಎಲ್ಲ ರಾಷ್ಟ್ರಗಳ ಹಡಗುಗಳೂ ಸಂಚಾರ ಮಾಡುತ್ತಿವೆ. ಈ ನಡುವೆ ಫ್ರೆಂಚ್ ಪ್ರಧಾನಿಗಳಾದ ಎಂ. ಗಾಯ್ ಮೋಲೆಟರು "ಸುಯೇಜ ಪುನರಣವು ಇನ್ನೂ ಮುಗಿದಿಲ್ಲ. ಬೆರಗುಗೊಳಿಸುವ ಘಟನೆಗಳು ಇನ್ನೂ ಬರಲಿವೆ" ಎಂಬ ಮಾತುಗಳನ್ನು ನುಡಿದು ನಿರೀಕ್ಷಕರ ಕುತೂಹಲವನ್ನು ಕೆರಳಿಸಿದೆ. ಇನ್ನೇನು ಗಂಡಾಂತರ ಕಾದಿದೆಯೋ ನೋಡಬೇಕು.

ಪೊಸಕೆರೆ
ಚಿದಂಬರಯ್ಯನವರು
ಅನುವಾದಿಸಿದ

ಭಗವದ್ಗೀತೆಯು

ಸಮೂಲ ಭಾಷಾಂತರ

ಪೊಕೆಟ್ ಎಡಿಷನ್.

ಸುಮಾರು 450 ಪುಟಗಳು

ಕ್ರಯ 0—12—0

ನವಯುಗ ಪ್ರೆಸ್, ಉಡುಪಿ.

## ಕಾಶ್ಮೀರ ಸಮಸ್ಯೆ

(೫ನೇ ಪುಟದಿಂದ)

ಗಿಯೇ ತಮ್ಮ ವರದಿಯನ್ನು ಸಿದ್ಧಪಡಿಸಿದರೆಂದು ಕೆಲವರ ಅಭಿಪ್ರಾಯ. ಹಾಗಿದ್ದರೂ ಇರಬಹುದು. ಆದುದರಿಂದ ಭಾರತ ಸರಕಾರವು ತೃಪ್ತಿಯ ಮುಗುಳ್ನಗೆಯೊಂದನ್ನು ಪ್ರಕಟಿಸಿದೆ.

ಪಾಕಿಸ್ತಾನವು ತನ್ನ ಕಟನವನ್ನು ಬಿಡುವ ಕುರುಹುಗಳು ಗೋಚರಿಸುತ್ತಿಲ್ಲ. ಆದು ಮುಂದಿನ ಕಾರ್ಯಾಚರಣೆಯನ್ನು ಚಿಂತಿಸುವುದರೊಂದಿಗೆ ಯಾರಿಂಗ್, ನೆಹರೂಗಳ ಮೇಲೆ ರಾವ್ ಬಾಣ ಬಿಡುತ್ತಿದೆ. ಪಾಪ, ಆರ್ಥಿಕ ರಾಜಕೀಯ ಪರಿಸ್ಥಿತಿ ಬದಲಾಗಿದೆ ಎಂದುದರಿಂದ ರೊಚ್ಚಿಗೆದ್ದಿತು! ಆದಕ್ಕಾಗಿ ಕಾಶ್ಮೀರ ವಿಚಾರವನ್ನು ಚರ್ಚಿಸಲು ಭದ್ರತಾ ಸಮಿತಿಯ ಸಭೆ ಕರೆಯಬೇಕೆಂದು ಕೇಳಬಹುದು ಈ ತಿಂಗಳ ಕೊನೆ ಅಥವಾ ಜೂನ ತಿಂಗಳಾದಿಯಲ್ಲಿ ಈ ಸಮಿತಿ ಸೇರಬಹುದು.

ಆದರೆ ಭಾರತವು ಈ ಬಗ್ಗೆ ಉತ್ಸುಕವಾಗಿಲ್ಲ. ಅದು ಈ ವಿಚಾರದಲ್ಲಿ ಒಂದೇ ಅಭಿಪ್ರಾಯವುಳ್ಳದಾಗಿದೆ. ಆದನ್ನೇ ವ್ಯಕ್ತಪಡಿಸಿದೆ. ಇನ್ನು ಭದ್ರತಾಸಮಿತಿಯಲ್ಲಿ ವಾದಬಿದ್ದರೆ ಮಾತ್ರ ಆದರಲ್ಲಿ ಭಾಗವಹಿಸಬಹುದು ಕಾಶ್ಮೀರವು ಭಾರತದ ಅವಿಭಾಜ್ಯ ಅಂಗವೆಂದು ಅದು ತಿಳಿದುಕೊಂಡಿದೆ. ಹಾಗಾಗಿಯೇ ಕಳೆದ ಹಲವು ವರ್ಷಗಳಿಂದ ಆಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಂಡಿದೆ. ಇದ್ದುದನ್ನು ಇನ್ನೂ ಇದೆ ಎಂದು ತೋರಿಸುವ ಅಗತ್ಯ ಈಗ ಇಲ್ಲ. ಆದರೆ, ಆದಕ್ಕೆ ಅಪಾಯ ತಟ್ಟಿವಾಗ ಮಾತ್ರ ಸುಮ್ಮನಿರಲಾರದು. ಆದರಿಂದಾಗಿಯೇ ಪಾಕಿಸ್ತಾನದ ಕಾರ್ಯಾಚರಣೆಯನ್ನೇ ಸುಮ್ಮನೆ ಇದಿರು ನೋಡುತ್ತಾ ಇದೆ.

ಕಾಶ್ಮೀರದ ಬಗ್ಗೆ ಯಾರಿಂಗರ ವರದಿಯು ನಿರೀಕ್ಷೆತರೀತಿಯಲ್ಲಿರಬಹುದೆಂದಿದ್ದರೂ ಕಾಶ್ಮೀರದ ಅಭಿವೃದ್ಧಿ ಕುರಿತಾದ ಮಾತುಗಳು ಭಾರತಕ್ಕೆ ಪುಷ್ಟಿಯಾಗುತ್ತವೆ. ನಮ್ಮ ಮುಂದಾಳುಗಳು ಈ ವಿಷಯದಲ್ಲಿ ಯೋಗ್ಯ ನ್ಯಾಯ ರೀತಿಯಲ್ಲಿಯೇ ವರ್ತಿಸಿದ್ದಾರೆ. ಇನ್ನು ಮುಂದಕ್ಕೂ ಇದೇ ರೀತಿಯಲ್ಲಿ ಮುನ್ನಡೆಯಲಿ.

## ಎಲ್ಲೆಲ್ಲಿ ಏನೇನು?

**ಕೇಂದ್ರ ಸರಕಾರದ ನೌಕರರು—** ತಾ. 1ರಲ್ಲು ಮೇ ದಿನವನ್ನು ಶ್ರೀ ಕೆ. ಆರ್. ಆಚಾರ್, ಎನ್. ಪಿ. ಅವರ ಅಧ್ಯಕ್ಷತೆಯಲ್ಲಿ ಆಚರಿಸಿದರು ಶ್ರೀಳಾದ ಪಿ. ಕೆ. ಆರ್. ನಂದಿಯಾರ್, ಮೈದಿನ್ ಅಹಮ್ಮದ್, ಕೆ. ಪಿ. ಆಚಾರ್, ಕೆ. ಆರ್. ಸೆಟ್ಟಿ, ಎಚ್. ಜಿ. ಲೋಬೋ, ಗಂಗಾಧರ ಪಾಕರು ಮಾತನಾಡಿದರು. ಎರಡನೇ ಸಂಬಳ ಕಮಿಶನ್ ನೇಮಕವಾಗಬೇಕು, ಮತ್ತು ತುಟ್ಟಿಭತ್ತೆಯನ್ನು ಹೆಚ್ಚಿಸಬೇಕು, ಎಂದು ಸರಕಾರವನ್ನು ವಿನಂತಿಸುವ ನಿರ್ಣಯವಾಯಿತು.

**ಸುಬ್ರಹ್ಮಣ್ಯ—** ಸ್ಥಳೀಯ ಶ್ರೀ ಮಠದಲ್ಲಿ ವರ್ಷಂಪ್ರತಿ ನಡೆಯುವ ಶ್ರೀ ನರಸಿಂಹ ಜಯಂತಿ ಮಹೋತ್ಸವವು ಶ್ರೀಮತ್ ನ್ಯಾಸ ವಿಶಿಷ್ಟ ಶ್ರೀ ಸಂಪುಟ ನರಸಿಂಹ ವೇದವರ ಸನ್ನಿಧಿಯಲ್ಲಿ ಇದೇ ತಾ. 11 ರಿಂದ 14 ರ ತನಕ ಜರಗಲಿರುವುದು.

**ಶಿರ್ವ—** ಇಲ್ಲಿಯ ಪಂಚಾಯತ ಬೋರ್ಡಿನ ಸಭೆಯು ಕಳೆದ ತಾ. 28ರಲ್ಲು ಶ್ರೀ ಎಸ್. ಎ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿ, ಶಿರ್ವ ಕಾಡಿ ಕಂಬಳ ಬಳಿ ಬಾವಿ ದುರಸ್ತಿ ಬಗ್ಗೆ ಗಣನೆಯಾಗಿ ಮಂಜೂರು ಮಾಡಲಾಯಿತು. ಪಂಚಾಯತ ಬೋರ್ಡಿಗೆ ಅಧಿಕೃತ ಕಟ್ಟಡವಿಲ್ಲ. ಕಟ್ಟಡವನ್ನು ರೂರಲ್ ವಾಟರ್ ಸಪ್ಲೈ ಸ್ಕೀಮಿನಂತೆ ಅಲ್ಲಲ್ಲಿ ಬಾವಿ ಅಗೆಯುವ ಕುರಿತು ನಿರ್ಣಯಗಳಾದುವು.

**ಪಡು ಕಳತ್ತೂರು—** ಸ್ಥಳೀಯ ಹಾಲಿ ಶಾಲೆಯ ವರ್ಧಂತಿ ಸಮಾರಂಭವು ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೃಷ್ಣಯ್ಯನವರು ಸ್ವಾಗತಿಸಿದರು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಪಿ. ಪೂಧವ ವತಾಳರು ವರದಿಯನ್ನೋದಿದರು. ಶ್ರೀ ಕೆ. ಸುಂದರರಾಯರು ಸ್ವಸ್ತಿವಾಚನಮಾಡಿದರು.

**ಕೈಪುಂಜಾಲ್** ಜೋರ್ಡು ಎಲಿಮೆಂಟರಿ ಶಾಲೆಯ ವಾರ್ಷಿಕೋತ್ಸವವು ತಾ. 27 ರಲ್ಲು ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಯು. ವಾದ್ಯು ಅವರು ಸ್ವಾಗತಮಾತುಗಳನ್ನಾಡಿದರು. ಶ್ರೀ ಕುಮಾರ ಸ್ವಾಮಿ ಉಳಿಯಾರಗೋಳಿಯವರು ಸ್ವಸ್ತಿವಾಚನಮಾಡಿದರು ಬಳಿಕ ಅಧ್ಯಕ್ಷ ಭಾಷಣವಾಗಿ ಮನರಂಜನ ಕಾರ್ಯಕ್ರಮಗಳಾದುವು.

**ಪರ್ಕಳ-** ಇಲ್ಲಿಯ ಬಾಸೆಲ್ ಮಿಶನ್ ಹಾ. ಎ. ಶಾಲೆಯ ವರ್ಧಂತ್ಯುತ್ಸವವು ತಾ. 29ರಲ್ಲು ಪ್ರಿನ್ಸಿಪಾಲ್ ಶ್ರೀ ಎಚ್. ಕುಂದರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಹೆಡ್ಮಾಸ್ಟರ್ ಶ್ರೀ ರಾಜೀವ ಕೋಟ್ಯಾನರು ನರದಿ ವಾಚನ ಮಾಡಿದರು. ಶ್ರೀ ಎಸ್. ರಘುಪ್ಪಯ್ಯ ಪ್ರ ಹೆಡ್ಡೆಯವರು ಸ್ವಸ್ತಿ ವಾಚನ ಮಾಡಿದರು. ಶ್ರೀ ಎ. ಜಿ. ಅಲ್ಬುಯವರು ಶಾಲಾ ಮುಖ್ಯಳ ಹಸ್ತಲಿಖಿತ 'ಸುದರ್ಶನ' ಪತ್ರಿಕೆಯನ್ನು ಉದ್ಘಾಟಿಸಿದರು. ಸಭಿಕರ ಭಾಷಣ, ಧನ್ಯವಾದಗಳಾದುವು. ಶಾಲೆಯ ಹಳೆ ವಿದ್ಯಾರ್ಥಿ ಸಂಘದ ಮಹಾ ಸಭೆಯು ತಾ. 29ರಲ್ಲು ಡಾ. ಯು. ಗಿರಿಧರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು.

**ಹೆಂಗವಳ್ಳಿ—** ಸ್ಥಳೀಯ ಬೋರ್ಡು ಎಲಿಮೆಂಟರಿ ಶಾಲೆಯ ವಾರ್ಷಿಕೋತ್ಸವವು ಕಳೆದ ತಾ. 25ರಲ್ಲು ಬೆಳ್ಳೆ ಪೆಟರ್ನರ್ ಡಾಕ್ಟರ್ ಶ್ರೀ ಅಚ್ಯುತ ನಾಯ್ಕರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಜರಗಿತು.

**ಕೋಟೇಶ್ವರ—** ಸ್ಥಳೀಯ ಬೋರ್ಡು ಹಾಸ್ಕೂಲಿನ ವರ್ಧಂತ್ಯುತ್ಸವವು ಕಳೆದ ತಾ. 21ರಲ್ಲು ಡಿ ಮುನ್ಸಿಫ್ ಶ್ರೀ ಕೆ. ಚಂದ್ರಶೇಖರ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ತಾ. 22ರಲ್ಲು ದಲಿವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಬಾಕೂರು ನೇಶನಲ್ ಹೈಸ್ಕೂಲಿನ ಹೆಡ್ಮಾಸ್ಟರ್ ಶ್ರೀ ಪಿ. ಎಸ್. ಭಟ್ ಜರಗಿತು.

**ಕಾರ್ಕಳ-** ಕಳದ ತಾ. 28ರಲ್ಲು ಕಾರ್ಕಳ ತಾಲೂಕು ಪ್ರಾಥಮಿಕ ಶಾಲಾ ಉಪಕರ ಯೂನಿಯನ್ ಮಹಾ ಸಭೆಯು ಶ್ರೀ ಎ. ಪಾಂಡುರಂಗ ಕಿಣಿಯರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಭೆಯಲ್ಲಿ 9 ಶೇರುದಾರರಲ್ಲಿ 12 ಮಂದಿ ಕಾನ್ಸಿಲರ್‌ಗಳು ಚುನಾಯಿತರಾಗಲಿಕ್ಕೆ ಅರ್ಜಿಸಲ್ಲಿಸಿದ್ದರು. ಜಿಲ್ಲೆಯ ಎಲ್ಲಾ ತಾಲೂಕುಗಳ ವಿದ್ಯಾರ್ಥಿಕ ಅಧ್ಯಾಪಕರ ಯೂನಿಯನ್ನಿನ ಪ್ರತಿನಿಧಿಗಳಿರುವ ಒಂದು ಜಿಲ್ಲಾ ಸಭೆಯನ್ನು ದ. ಕ ಜಿಲ್ಲಾ ಗಿಲ್ಡಿನ ಆಶ್ರಯದಲ್ಲಿ ಸಂಘಟಿಸುವರೆ ಶ್ರೀ ಕೆ. ಪದ್ಮನಾಭ ಭಟ್ಟರನ್ನು ಕನ್ವೀನರರಾಗಿ ಆರಿಸಲಾಯಿತು.

**ಎಡನೀರು—** ದ. ಕ. ಜಿಲ್ಲಾ ಬಾಳೆಹೊರು ಶ್ರೀ ಶಂಕರ ಜಯಂತೀ ಸಭೆಯ ಸ್ಮೊಂದನೇ ಅಧಿವೇಶನವು ಕಾಸರಗೋಡು ತಾಲೂಕು ಎಡನೀರು ಮಠದಲ್ಲಿ ಶ್ರೀ ಈಶಾನಂದ ಭಾರತೀ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ತಾ 4ರಂದು ವೈಭವದಿಂದ ಜರಗಿತು. ಈ ಸಭೆಗೆ ಶಂಕರ ಜಯಂತೀ ಸಭಾ ಸ್ಥಾಪಕ ಅಧ್ಯಕ್ಷರಾದ ಬಾಳೇಕುದ್ರುರು ಮಠದ ಶ್ರೀ ಆನಂದಾಶ್ರಮ ಸ್ವಾಮಿಗಳವರು, ಹರಿಪುರದ ಶ್ರೀ ಶ್ಯಂಪ್ರಕಾಶ ಶ್ರೀ ಅಭಿನವ ರಾಮಾನಂದ ಸರಸ್ವತಿ ಸ್ವಾಮಿಗಳವರು ಉಪಸ್ಥಿತರಿದ್ದು ಅವರೆಲ್ಲರಿಗೂ ಶ್ರೀ ಎಡನೀರು ಮಠಾಧೀಶರು ವಿಶಿಷ್ಟ ಗೌರವಗಳನ್ನಿತ್ತು ಸನ್ಮಾನಿಸಿದರು.

ಶಂಕರಜಯಂತಿ ನಿಮಿತ್ತ ವಿಶೇಷ ಪೂಜಾ ಅರ್ಚನೆ, ಸಂತರ್ಪಣೆಗಳಾದುವು ಸಂಜೆ ಶ್ರೀ ಎಡನೀರು ಮಠಾಧೀಶರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು. ಶ್ರೀ ಬಾಳೇಕುದ್ರುರು ಸ್ವಾಮಿಗಳವರು ಸಭೆಗೆ ಯಶಸ್ಸನ್ನು ಕೋರಿ ಆಶೀರ್ವಾದಾತ್ಮಕ ಭಾಷಣ ಮಾಡಿದರು. ನಂತರ ಸಾಧಕರಿಗೆ ಪಾರಿತೋಷಕ ಪ್ರದಾನಗಳಾದುವು. ಸಭೆಯ ಉದ್ದೇಶವನ್ನು ಶ್ರೀ ವಿ. ಎಸ್. ಹೆಬ್ಬಾರರು ಸ್ವಾಗತ ಭಾಷಣಮಾಡಿದ ಬಳಿಕ, ಕಾರ್ಯದರ್ಶಿ ಶ್ರೀ ರಂಗಯ್ಯ ಉಪಾಧ್ಯಾರು ವರದಿವಾಚನ ಮಾಡಿದರು. ಹಲವಾರು ವಿದ್ವಾಂಸರು ಆದ್ಯೈತ ವಿಷಯದಲ್ಲಿ ಉಚಿತ ಭಾಷಣ ಮಾಡಿದರು. ಹರಿಪುರದ ಸ್ವಾಮಿಗಳವರು ಶ್ರೀ ಶಂಕರಾಚಾರ್ಯರ ಉದ್ದೇಶವನ್ನು ಸರ್ವರೂ ಕಾಯಾ ವಾಚಾ ಮನಸಾ ತಂದುಕೊಂಡು ಇಹಪರ ಸುಖ ಭಾಗಿಗಳಾಗಬೇಕೆಂದು ಆಶಿಸಿದರು. ಅಧ್ಯಕ್ಷರ ಭಾಷಣಾನಂತರ ವಿದ್ವಾಂಸರಿಗೂ ವಿದ್ಯಾರ್ಥಿಗಳಿಗೂ ಸಂಭಾವನೆ ಪಿತಾರಿತೆಯಾಯಿತು. ರಾತ್ರೆ ದೀಪಾರಾಧನೆ, ನಾಟಕಾಭಿನಯ ಕಾರ್ಯಕ್ರಮಗಳಾದುವು.


### ನೋಟೀಸು

ಕುಂದಾಪುರ ರೆವೆನ್ಯು ಡಿವಿಜನಲ್ ಆಫೀಸರರ ಕೋರ್ಟು

O. P. 182/1957

ಗಡಹಾದ ರಾಮಕೃಷ್ಣ ರಾವ್- ಗಡಹಾದ ಲಕ್ಷ್ಮೀನಾರಾಯಣ ರಾಯರ ಮಗ- ಉಡ್ಪಿ ಕಸಬಾ ಬ್ರಹ್ಮಗಿರಿಯಲ್ಲಿರುವನವರು — ಅರ್ಜಿದಾರರು.

ಸುತ್ತು

1. ಬೆಲ್ಲ ಸೂಬಾರಿ- ಗರ್ದಿಮನೆ ಸದಿಯ ಪೂಜಾರಿಯ ಮಗ- ಕಿದಿಯೂರು ಗ್ರಾಮ. 2 ಸುಶೀಲಾ ಪೂಜಾರ್ತಿ— ಬಿಮಿಣೆ ಪೂಜಾರ್ತಿಯ ಮಗಳು. ವ ಗುರುತ ಪೂಜಾರಿಯ ಹೆಂಡತಿ— ಕಿದಿಯೂರು ಗ್ರಾಮ— ಎದ್ರಿರು.

ಸದ್ರಿ ಎದ್ರಿರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ—

ಮೇಲ್ಕಂಡ ಅರ್ಜಿದಾರರು ನಿಮ್ಮ ಮೇಲೆ ಆಸ್ತಿ ಸ್ವಾಧೀನತೆಗೂ, ಹಿಂದಿನ ಗೇಣಿ ಬಾಕಿಗೂ ಉಡ್ಪಿ ದಿ. ಮು. ಕೋರ್ಟಿನಲ್ಲಿ ಸಿಪಿಸಿ ಕ್ರಮ ನಂಬ್ರ 325/56ರ ಡಿಕ್ರಿ ಮೇರೆಗೆ ಸದ್ರಿ ಡಿಕ್ರಿಗೆ ಕಾರಣವಾದ ಆಸ್ತಿ ಸ್ವಾಧೀನತೆ ಮತ್ತು ಸದ್ರಿ ಡಿಕ್ರಿಯ ಇತರ ನಿವೃತ್ತಿ ಕೂಡಿ ಕೇಳಿ ನಿಮ್ಮ ಮೇಲೆ ಮೇಲ್ಕಾಣ್ಸಿದ ಕೋರ್ಟಿನಲ್ಲಿ ಮಧ್ಯಾಸ 1956ನೇ ಇಸ್ವಿ XIVನೇ ಅಕ್ಟೋ ಮೇರೆಗೆ ದಾಖ್ಲು ಮಾಡಿದ ಈ ಅರ್ಜಿಯು ಆಜೈರು ತಪ್ಪಿಗೆ ತಾ. 18-5-57ನೇ ಹಗಲು ಘಂಟೆ 11ಕ್ಕೆ ಉಡ್ಪಿ ಪೊಕ್ಕಾಮಿನಲ್ಲಿ ಇಟ್ಟಿದೆ ಎಂತಲೂ, ಆ ಕುರಿತು ನಿಮ್ಮ ಆಕ್ಷೇಪಗಳು ಇನ್ನಿರ್ಸದ್ರಿ ಕೋರ್ಟು ಮುಂದೆ ಸದ್ರಿ ತಾರೀಕಿನಲ್ಲಿ ಹಾಜರಾಗಿ ಜ್ಞಾಪಿಸಿರಿ ಮಾಡಬೇಕೆಂತಲೂ, ತಪ್ಪಿದ್ರೆ ನಿಮ್ಮನ್ನೆ ಶಿವ್ಯ ಮಾಡಿ ಸದ್ರಿ ಅರ್ಜಿಯನ್ನು ತೀರ್ಸಾನ ಮಾಡಲಾದೀತೆಂತಲೂ ತಿಳಿಸಿರುತ್ತದೆ

(By order of the Court)

K. Vittal Nayak,
Vakil for Petitioner.

ಉಡ್ಪಿ, ತಾ. 1-5-57,

ಭಾರತವು ತನ್ನ ವಿಮಾನದಳದ ಭವ್ಯದ್ಧಿಗಾಗಿ ಕೆಲವೊಂದು ಜೆಟ್ ವಿಮಾನಗಳನ್ನು ಕೊಂಡುಕೊಳ್ಳಲು ನಿರ್ಧರಿಸಿದೆ ಚಿತ್ರದಲ್ಲಿ ಗಂಟೆಗೆ ಸರಾಸರಿ ೬೦೦ ಮೈಲುಗಳ ವೇಗವುಳ್ಳ, ಅಮೇರಿಕದ ಸಂಯುಕ್ತರಾಷ್ಟ್ರದ ಒಂದು ಜೆಟ್ ವಿಮಾನವನ್ನು ಕಾಣಬಹುದು. ಇಷ್ಟೊಂದು ವೇಗವಿರುವ ಜೆಟ್ ವಿಮಾನಗಳಲ್ಲಿ ಇದೇ ಮೊದಲಿನದು. ವೇಲಿನ ಚಿತ್ರ: ವಾಶಿಂಗ್‌ಟನ್ನಿನಿಂದ ಹೊರಡುವುದು. ಕೆಳಗಿನ ಚಿತ್ರ: ಬಲ್ಟಿಮೋರ್‌ನಲ್ಲಿ ಇಳಿಯುವುದು.

## ಬಿಲ್ಲವರ ಎಸೋಸಿಯೇಶನ್ ರಜತ ಮಹೋತ್ಸವ

ಮುಂಬಯಿ ಕೋಟೆಯೊಳಗಿರುವ ಬಿಲ್ಲವರ ಎಸೋಸಿಯೇಶನ್, ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಸಮಾಜ ಸೇವೆಯನ್ನು ಶ್ರದ್ಧಾಪೂರ್ವಕ ವ್ಯಾಪ್ತಿ, ಇದೇ ಬರುವ ಆಕ್ಟೋಬರ್ ತಿಂಗಳಲ್ಲಿ ಸಂಸ್ಥೆಯ ರಜತಮಹೋತ್ಸವವನ್ನು ಆಚರಿಸಬೇಕೆಂದು ನಿರ್ಧರಿಸಿದೆ.

ಧರ್ಮಾರ್ಥ ಸ್ಥೀ ಕೈಗಾರಿಕಾ ಶಾಲೆ, ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ, ಧರ್ಮಾರ್ಥ ವಾಚನಾಲಯ, ದಿಲ್ಲಿಯಲ್ಲಿ ಸೇವಾದಳ ಪ್ರಥಮ ಚಿಕಿತ್ಸೆಯ ವ್ಯವಸ್ಥೆ, ಗತಿಪೀಡಿತ ಮಾಜಿ ಬಂಧುಗಳಿಗೆ ಆಶ್ರಯ ನೀಡುವಿಕೆ ಇತ್ಯಾದಿ ಬಹುತರದ ಸೇವೆಯಲ್ಲಿ ನಿರತವಾಗಿರುವ ಈ ಸಂಸ್ಥೆ, ಮುಂದಿನ ಸಮಾಜ ಸೇವೆಯ ಸಹಾಯಾರ್ಥವಾಗಿ, ರಜತಮಹೋತ್ಸವದ ಈ ಸಂದರ್ಭದಲ್ಲಿ, ಸಹಾಯಧನ ಸಂಗ್ರಹ ಮಾಡುವ ಆಯೋಜನೆಯಿಂದ, ಮುಂಬಯಿಯ ಇಪ್ಪತ್ತು ಕಾರ್ಯಕರ್ತರು ಸ್ವಂತ ಊರಾದ ದಕ್ಷಿಣ ಕನ್ನಡಕ್ಕೆ ತೆರಳಿದ್ದಾರೆ. ದಕ್ಷಿಣ ಕನ್ನಡದ ಉದಾರ ಮನಸ್ಸಿನಿಯರೂ, ಸಮಾಜ ಸಂಘ ಸಂಸ್ಥೆಗಳೂ, ಇದರ ಕಾರ್ಯಕರ್ತರು ಸಂದರ್ಶಿಸಿದಾಗ ಆನಂದೋದಾರವಾಗಿ ಸಹಕರಿಸಿ, ಅವರ ಈ ಪ್ರಯತ್ನಕಾರ್ಯದಲ್ಲಿ ಸಫಲತೆಯ ನೀಡಬೇಕಾಗಿ ಈ ಮೂಲಕ ನಮ್ಮ ವಿನಂತಿ ಮಾಡಿಕೊಳ್ಳುತ್ತೇವೆ ಎಂದು ರಜತ ಮಹೋತ್ಸವ ಸಮಿತಿಯ ಗೌ. ಕಾರ್ಯದರ್ಶಿ ಶ್ರೀ ನಾಗೇಶ್ ಆರ್. ಕೋಟ್ಯಾನ್ ಇವರು ತಿಳಿಸುತ್ತಾರೆ.

## ಭಾರತದ ಜೀವನಾಳಗಳು

(ಅನೇ ಪುಟದಿಂದ)

ಪ್ರ ಹಲವು ರಾಷ್ಟ್ರದ ಹಾಗೂ ಅಂತ ರಾಷ್ಟ್ರೀಯ ಸಮಸ್ಯೆಗಳನ್ನು ಬಗೆಹರಿಸಿ ಸುಲ್ಲದೇ, ರಾಷ್ಟ್ರಾಭಿವೃದ್ಧಿಗಾಗಿ ಹ ವು ಯೋಜನೆಗಳನ್ನು ಕೈಗೊಂಡಿದೆ. ಅನೇಕ ರಾಷ್ಟ್ರಗಳನ್ನು ಸಂದರ್ಶಿಸಿ, ನ್ನ ಜನತೆಯ ಪ್ರೇಮಾದರಗಳಿಗೆ ಪಾ ರಾಗಿದ್ದಾರೆ ನೆಹರೂಜಿ. ಭಾರತದಲ್ಲಿ ರು ಜನತೆಯ ನೆಚ್ಚಿನ ಪ್ರಧಾನಿಯಾ ್ತಾರೆ. ಮಕ್ಕಳನ್ನು ಕಂಡರೆ ನೆಹರೂರ ಗೆ ತುಂಬಾ ಇಷ್ಟ. ಮಕ್ಕಳ ಮಧ್ಯೆ ರೆ, ತನ್ನ ವಯೋವೃದ್ಧತ್ವವನ್ನೂ ರೆತು ಚಿಕ್ಕ ಬಾಲಕನಾಗುತ್ತಾರೆ— ರು. ವಯಸ್ಸು ಅರುವತ್ತೇಳು ಟದರೂ, ಹದಿನೆಂಟರ ತರುಣ ರುವ ಹುಮ್ಮಸ್ಸು ಅವರಲ್ಲಿದೆ. ರ ಪ್ರಧಾನಿತ್ವದಲ್ಲಿ ಭಾರತವು ತುಂ ಪ್ರಗತಿ ಸಾಧಿಸಿದೆಯೆಂಬುದು ನಿ ಂದೇಹ. ವಿದೇಶೀ ಸ್ವಾಧೀನತೆಗಳನೇಕರು ತಂತ್ರೋತ್ತರ ದಶಕದಲ್ಲಿ ಭಾರತ ಸಾಧಿಸಿದ ಅಭೂತಪೂರ್ವ ಪ್ರಗತಿ ನ್ನು ಕಂಡು ಬೆರಗಾಗಿ, ಪ್ರಗತಿಗೆ ಾರಣರಾದ ಸರಕಾರವನ್ನು ಪ್ರಶಂಸಿಸಿ ್ದರೆ. ಇಂತಹ ಪ್ರಗತಿ ಸಾಧನೆಯಲ್ಲಿ ಹೆರೂರವರ ಕೈವಾಡವಿದೆಯೆಂಬುದು ರ್ವರೂ ಒಪ್ಪತಕ್ಕ ವಿಷಯ. ಗೋವೆ ು ಹಾಗೂ ಕಾಶ್ಮೀರದ ಶಾಂತ ಶೀ ರ್ಣಾನಕ್ಕೆ ನೆಹರೂರ ಮುಂದಾಲ್ಚನ ಾರತಕ್ಕೆ ಅವಶ್ಯ. ಭಾರತೀಯರ ನೆಚ್ಚಿ ಪ್ರಧಾನಿಯಾಗಿ ನೆಹರೂ ಚಿರಕಾಲ ಳಲಿ!

**ಸಂರಕ್ಷಣಾ ಮಂತ್ರಿ ಮೆನನ್**

ಸಂಯುಕ್ತ ರಾಷ್ಟ್ರ ಸಂಘದ ಭದ್ರ ಾ ಸಮಿತಿಯಲ್ಲಿ ಇತ್ತೀಚೆಗೆ ಕಾಶ್ಮೀರ ವಾದ ನಡೆದಾಗ ಭಾರತದ ಪರವಾಗಿ ದಿಸಿದ ಕೃಶಶರೀರಿಯೋರ್ವನ ಎಂಟು ಂಟೆಗಳ ಅಮೋಘವಾದ ಅಭೂತ ರ್ವ ಭಾಷಣವು ಜಾಗತಿಕ ದಾಖಲೆ ನ್ನೇ ನಿರ್ಮಿಸಿತು. ಆ ಭಾಷಣಕಾರ ೀ ಭಾರತ ಸರಕಾರದ ಖಾತೆರಹಿತ ಂತ್ರಿಯಾಗಿದ್ದ ಶ್ರೀ ವೆಂಗಲೀಲ ಕೃ ್ಣ ಕೃಷ್ಣ ವೆನನ್. ಅನ್ಯಾಯದ ರಾವಿನೊಂದಿಗೆ ಹೋರಾಡಿದ ಮೆನನರ ೋರಾಟ ಫಲಕಾರಿಯಾಗುವುದೋ ಂದು ಕಾದು ನೋಡಬೇಕು. ಕಾಶ್ಮೀರ ಮಸ್ಯೆಯಲ್ಲಿ ಭಾರತದ ನಿಲುವಿನ ವಿದೇ ಯರ ಮುಂದೆ ಸ್ಪಷ್ಟವಾಗಿ ಮಂಡಿತ ರಾದ್ದೂ, ಅವರದನ್ನು ಮನಗಾಣದಿರು ುದು ವಿಷಾದನೀಯ.

ಕೃಶ ಶರೀರ ತೇಜಸ್ವೀ ಕಣ್ಣುಗಳಿಂದ ೂಡಿದ ಮೆನನ್ ಚಹಾಪ್ರೇಮಿ. ದಿನಂ ತಿ ಅತೀ ಕಡಿಮೆಯೆಂದರೆ ಹತ್ತು ಬ ಯಾದರೂ ಅವರು ಚಹಾ ಸೇವಿಸು ್ತಾರೆ. ಕೆಲವೊಮ್ಮೆ ಅವರ ಈ ಚಹಾ ್ರೇಮವು ಕೆಲವರ ಟೀಕೆಗೂ ಗುರಿಯಾ ತ್ತು. ಭದ್ರತಾ ಮಂಡಲಿಯಲ್ಲಿ ಕಾಶ್ಮೀ ದ ವಿವಾದವೆದ್ದಿ ಭಾರತದ ನಿಲುವಿನ ು ವಿಶದೀಕರಿಸುವ ನೇಳೆ ಅವರು ಅ ರೋಗ್ಯ ಸೀಡಿತರಾಗಿದ್ದರು. ಮಧ್ಯೆ ಲವೊಮ್ಮೆ ಅವರಿಗೆ ಮೂರ್ಛೆಯೂ

## ದ.ಕ. ಜಿಲ್ಲೆಯಲ್ಲಿ ಮೈಸೂರು ಮಂತ್ರಿ ಶ್ರೀ ರುದ್ರಪ್ಪನವರು

ಮೈಸೂರು ಸರಕಾರದ ನ್ಯಾಯಾಯಮಂತ್ರಿ ಶ್ರೀ ಎಚ್.ಎಸ್.ರುದ್ರಪ್ಪನವರು ತಾ.೩೧ಕ್ಕು ಪೂರ್ವಾಹ್ನ ಮೈಸೂರಿನಿಂದ ಹೊರಟು ಸಂ ಾಜೆಗೆ ಆಗಮಿಸಿದಾಗ ಕಲೆಕ್ಟರ ಶ್ರೀ ಎಜ್. ನರಸಿಂಹ ಮೊದಲಾದ ಅಧಿಕಾರಿಗಳು ಸ್ವಾಗ ತಿಸಿದರು. ಮಂತ್ರಿಗಳ ಜತೆಯಲ್ಲಿ ಕೊಡಗಿನ ಕನ್ಸರ್‌ವೇಟರ್ ಆಫ್ ಫಾರೆಸ್ಟ್ಸ್ ಡಾ. ಕಡಾಂದಿಯವರೂ ಇದ್ದರು. ಮಂತ್ರಿಗಳು ಸುಳ್ಯಕ್ಕೆ ಬಂದು ಫಾರೆಸ್ಟ್ ಇಲಾಖೆಯ ಸಾ ಗುವಾನಿ ಕೋಸುಗಳ ಪರಿಶೀಲನೆ ನಡೆಸಿ ದರು. ಅಲ್ಲಿಂದ ಪುತ್ತೂರಿಗೆ ಬಂದು ಕೃಷ್ಯಾ ಹ್ನ ಕೈಗೊಂಡ ಪಶು ಸಂಗೋಪನಾ ಕೇಂದ್ರ ವನ್ನು ಸಂದರ್ಶಿಸಿ ಅಲ್ಲಿಯ ಕಾರ್ಯವನ್ನು ಪರಿಶೀಲಿಸಿದರು. ಬಳಿಕ ವಿಟ್ಲಕ್ಕೆ ಬಂದು ಕೇಂದ್ರ ಆಡಿಕೆ ಸಂಶೋಧನಾ ಕ್ಷೇತ್ರವನ್ನು ನೋಡಿದರು. ನಂತರ ಮಂಗಳೂರಿಗೆ ಆಗಮಿಸಿದರು.

**ಭೋಜನ ಸತ್ಕಾರದಲ್ಲಿ**—ರಾತ್ರಿ ಮಂ ್ರಿಗಳು ಕೆರ್ಕಿ ಮಹಾಲಿನಲ್ಲಿ ಕೆನರಾ ಚೇಂ ಬರ್ ಆಫ್ ಕಾಮರ್ಸಿನವರಿತ್ತ ಭೋಜನ ಸತ್ಕಾರ ಸಮಾರಂಭದಲ್ಲಿ ಭಾಗವಹಿಸಿದರು. ಚೇಂಬರಿನ ಅಧ್ಯಕ್ಷ ಶ್ರೀ ಕೆ. ಶ್ರೀನಿವಾಸ ಬಂದಿತ್ತು. ಅಸ್ವಸ್ಥದಿಂದ ಬಳಲುತ್ತಿದ್ದರೂ, ಅವರಲ್ಲಿ ಸ್ಫೂರ್ತಿಯೇನೂ ಕಡಿಮೆ ಯಾದಂತೆ ಕಂಡು ಬಂದಿರಲಿಲ್ಲ. ಭಾರತದ ಕ್ಷೇಮಕ್ಕಾಗಿ ಈ ಐ ಸಿ. ಎಸ್. ಪದವೀಧರ ಬ್ರಹ್ಮಚಾರಿ ತುಂಬಾ ದುಡಿದಿರುವರು. ಅವರು ಅಸ್ವಸ್ಥರಾದ ನೇಳೆ, ಹಂಗೇರಿಯ ಪತ್ರಿಕೆಯೊಂದು— 'ವಿಶ್ವದ ಅರೋಗ್ಯಕ್ಕಾಗಿ ನಿರೋಗಿಯಾದ ಮೆನನ್' ಎಂಬ ಶೀರ್ಷಿಕೆಯಿಂದ ಮೆನನರನ್ನು ಬಹುವಾಗಿ ಪ್ರಶಂಸಿಸಿ, ಬರೆಹ ವೊಂದನ್ನು ಬರೆದಿದೆ.

ಕೆಲಕಾಲ ಮೆನನ್ ಸಂ. ರಾ. ಸಂಘ ದಲ್ಲಿ ಭಾರತೀಯ ಶಿಷ್ಟ ಮಂಡಲದ ನಾ ಯಕನಾಗಿದ್ದರು. ಆ ಮೇಲೆ ನೆಹರೂರ ವರ ೧೦ಚಾರಿ ರಾಯಭಾರಿತ್ವ' ಅವರ ಪಾಲಿಗೆ ಬಂದಿತು. ಶೆನ್ನ ಪಾಲಿನ ಕರ್ತ ವ್ಯವನ್ನು ಈ 'ಶಾಂತಿ ರಾಯಭಾರಿ' ಯ ಶ ಸ್ವಿ ಯಾಗಿ ಕೊ ನೆ ಗೊ ಳಿ ಸಿ ದನು. ನೆ ಹ ರೂ ರ ಮಂತ್ರಿಮಂ ಡಲದಲ್ಲಿ ಅವರಿಗೆ ಸದಸ್ಯತ್ವ ದೊರೆತಿದೆ. ಅವರು ಸಂರಕ್ಷಣಾ ಮಂತ್ರಿಯಾಗಿದ್ದಾ ರೆ. ವಿದೇಶ ಮಂತ್ರಿತ್ವ ಅವರಿಗೆ ದೊರೆ ತಿದ್ದರೆ ಭಾರತದ ವಿದೇಶ ನೀತಿಯನ್ನವ ು ನೆಹರೂರಷ್ಟೇ ಸಮರ್ಥವಾಗಿ ನಿರ್ವ ಹಿಸಬಲ್ಲರು.

ಹಲವು ರಾಜಕಾರಣಿಗಳು ಹೆಚ್ಚಾಗಿ ಹೆಸರಿಸುವುದು ಪತ್ರಿಕೆಗಳಿಗೆ, ಅವುಗಳ (ಅಪ್) ಪ್ರಚಾರಕ್ಕೆ! ಆದರೆ ಮೆನನ್ ವಾತ್ರ ಇದಕ್ಕೆ ಅಪವಾದವಾಗಿದ್ದಾರೆ. ಅವರ ಬಗ್ಗೆ ಪತ್ರಿಕೆಗಳಲ್ಲಿ ಏನಾದರೂ ಟೀಕೆಗಳು ಪ್ರಕಟವಾದುದೇ ಆದರೆ, ಅವ ರು ತಮ್ಮನ್ನು ಯೋಗ್ಯ ರೀತಿಯಲ್ಲಿ ಸಮ ರ್ಥಿಸಿಕೊಳ್ಳಬಲ್ಲರು. ಅವರಲ್ಲಿ ಅಪೂರ್ವ ವಾದ ವಾಕ್ಚಾತುರ್ಯವಿದೆ. ಭದ್ರತಾ ಮಂಡಲಿಯಲ್ಲಿ ಅವರ ಭಾಷಣವೇ ಇದ ಕ್ಕೆ ನಿದರ್ಶನ. ಭಾರತದ ಈ ಪ್ರಭಾವೀ ಪುರುಷನು ಆಯುರಾರೋಗ್ಯಭರಿತನಾ ಗಿ ಚಿರಕಾಲ ಜೀವಿಸಲಿ!

— ಎಮ್. ರಘುನಂದನ ರಾವ್, ಶಲ್ಲೂರು.

ಶಿಕ್ಷಕರು ಹೂಮಾಲೆಯನ್ನರ್ಪಿಸಿದರು. ಶ್ರೀ ಎಸ್. ರಾಘವೇಂದ್ರ ಶೈಗಳು ಸ್ವಾಗತ ಭಾಷಣ ಮಾಡಿದರು.

ಮಂತ್ರಿಗಳು ಉತ್ತರಿಸುತ್ತ, 'ದ. ಕ ಜಿಲ್ಲೆ ಯಲ್ಲಿ ಸೈಗಿರಿಕ ಸಂಪತ್ತು ಹಾಗೂ ಜನಶಕ್ತಿ ಧಾರಾಳವಾಗಿದೆ. ಈ ಅಪಾರ ಸಂಪತ್ ಶಕ್ತಿ ಗಳನ್ನು ಸದುಪಯೋಗಗೊಳಿಸಿ ಉತ್ಪಾದನೆ ಯನ್ನು ಹೆಚ್ಚಿಸುವುದರಲ್ಲಿ ಕೃಷಿಕರು ಹಾಗೂ ವ್ಯಾಪಾರೀ ವರ್ಗದವರ ತಕ್ಕ ಸಹಾಯ ಬೇಕು. ಇವುಗಳ ಸಕ್ಪ್ರಯೋಜನವನ್ನು ಪಡೆ ಯಲು ಸರಕಾರ ಸೂಕ್ತ ಯೋಜನೆಗಳನ್ನು ವೇಗವನ್ನೆಗೊಳ್ಳಲಿದೆ. ಸಂಪತ್ತನ್ನು ಹೆಚ್ಚಿಸಿದರೆ ಅದರ ಸರಿಯಾದ ವಿತರಣೆಯೂ ಸಾಧ್ಯ. ಆದು ದರಿಂದ ಹೆಚ್ಚು ಉತ್ಪಾದಿಸಿ, ಹೆಚ್ಚು ಸಂಪತ್ತನ್ನು ಗಳಿಸಿ ಯೋಗ್ಯ ನಿತರಣೆ ಯಾಗುವಂತೆ ಮಾಡುವುದು ನಮ್ಮೆಲ್ಲರ ಕರ್ತವ್ಯ. ಇದರಲ್ಲಿ ವ್ಯಾ ಪಾರೀ ವರ್ಗಕ್ಕೆ ಪ್ರಮುಖ ಪಾತ್ರವಿದೆ' ಎಂ ದರು.

**ನಗರ ಸಭೆಯ ಮಾನಪತ್ರ** — ಮಂಗಳೂರು ನಗರ ಸಭೆಯ ಕಡೆಯಿಂದ ಮಾನ್ಯ ಮಂತ್ರಿಗಳಿಗೆ ತಾ. ೩೧೦೦ದು ನಗರ ಸಭಾಪತಿಗಳ ಆನಿವಾರ್ಯ ಗೈರು ಹಾಜರಿಯಲ್ಲಿ ಉಪಸಿಭಾಪತಿ ಕಾಂಗ್ರೆಸ್ ಪಕ್ಷದ ನಾಯ ಕ ಶ್ರೀ ಪಂಡಿತ ಗಣಪತಿರಾವ್, ಎಮ್. ಎಲ್. ಎ ಅವರು ಮಾನಪತ್ರ ಒಪ್ಪಿಸಿದರು. ಮಂತ್ರಿಗಳು ಉತ್ತರಿಸುತ್ತಾ, 'ಈ ವರ್ಷ ವೇ ನೇರು ಕೃಷಿಗಾಗಿ ಸುಮಾರು ಒಂದು ಲಕ್ಷ ಎಕ್ರೆಯಷ್ಟು ಸ್ಥಳವನ್ನು ವಿತರಣೆ ಮಾಡುವ ಯೋಜನೆ ಸರಕಾರ್ಕಿದೆ ಎಂದರು.

**ದ. ಕ. ಜಿಲ್ಲಾ ಅಭಿವೃದ್ಧಿ ಮತು ಹಿತಚಿಂತನಾ ಬೋರ್ಡಿನವರು**— ತಾ. ೩೧೦೦ದು ರಾತ್ರಿ ಶ್ರೀ ರುದ್ರಪ್ಪನವರಿಗೆ ಭೋ ಜನ ಸತ್ಕಾರವಿತ್ತು ಗೌರವಿಸಿದರು ಬೋರ್ಡಿ ನ ಪ್ರಧಾನ ಕಾರ್ಯದರ್ಶಿ ಶ್ರೀ ಬಿ. ಬಿ. ಕಟ್ಟಿಯರು ಸ್ವಾಗತಿಸಿದರು. ಮಂತ್ರಿಗಳು ಉತ್ತ ರವಿಯುತ್ತಾ 'ಅಕೀಕೃತ ಕರ್ನಾಟಕದ ಏಳು ಭಾಗಗಳಲ್ಲಿ ಏಡು ವಿಧದ ಭೂಸುಧಾರ ಣಾ ಕಾನೂನುಗಳು ಹಾಗೂ ತೆರಿಗೆ ಪದ್ಧತಿಗ ಳಿವೆ. ಇವನ್ನೆಲ್ಲ ಪರಿಶೀಲಿಸಿ ಏಕರೂಪದ ಕಾ ನೂನುಗಳನ್ನು ರೂಪಿಸಲು ಒಂದು ಸಮಿತಿ ನೇಮಕವಾಗಿದ್ದು ಅದು ಬೇಗನೆ ತನ್ನ ನಿರ್ಧಾ ರಕ್ಕೆ ಬರಬಹುದಾಗಿದೆ. ಆದಷ್ಟು ಬೇಗನೆ ಇದೇ ಮೈಸೂರು ಪ್ರಾಂತ್ಯಕ್ಕೆ ಅನ್ವಯಿಸುವಂ ತಹ ಏಕರೀತಿಯ ಭೂಸುಧಾರಣಾ ಕಾನೂನು ಹಾಗೂ ತೆರಿಗೆಪದ್ಧತಿಯನ್ನು ಅನುಷ್ಠಾನಕ್ಕೆ ತರಲಾಗುವುದು ಎಂದು ಹೇಳಿದರು.

ಜಿಲ್ಲಾ ಎಜ್ಜಾನ್ಸ್‌ಮೆಂಟ್ ಎಸೋಸಿಯೇ ಶನನ ಪರವಾಗಿ ಶ್ರೀ ಪಿ. ಆರ್. ರಂಗನಾಥ ಪೂಜಾ ಮತ್ತು ಶ್ರೀ ಟಿ. ಎಮ್. ಆರಾಧ್ಯ ರು ಮಂತ್ರಿಗಳನ್ನು ಕಂಡು ಜಿಲ್ಲೆಯ ವಿವಿ ಧ ಭಾಗಗಳಿಗೆ ಆಭಿವೃದ್ಧಿ ಹಾಗೂ ಹೊರ ದೇಶ ಗಳಿಗೆ ಹೂಗಳನ್ನು ರಫ್ತು ಮಾಡುವ ಸಾಧ್ಯ ತೆಗಳ ಕುರಿತು ಮಾತುಕತೆ ನಡೆಸಿದರು. ಜಿಲ್ಲಾ ಅಭಿವೃದ್ಧಿ ಬೋರ್ಡಿನ ಪರವಾಗಿ ಶ್ರೀ ಬಿ. ಸಿಟ್ಟಿಯ ಜಿಲ್ಲೆಯ ಅಭಿವೃದ್ಧಿ ಗಾಗಿ ಕೈಗೊಳ್ಳಬೇಕಾದ ಕಾರ್ಯಕ್ರಮಗಳ ಕುರಿತು ಮಾತನಾಡಿದ್ದರು. ತಾ. ೧೯೦೦ದು ಬೆಳಿಗ್ಗೆ ಮಂತ್ರಿಗಳು ಕೆಮ್ಮಣ್ಣು ಮೂಡುಬೆದ್ರೆ ಮೊದಲಾದ ಸ್ಥಳಗಳ ಕಾರ್ಯಕ್ರಮ ತೀರಿಸಿ ಕೊಂಡು ಉಡುಪಿಗೆ ಪ್ರಯಾಣ ಬೆಳೆಸಿದರು.

**ಉಡುಪಿಯಲ್ಲಿ**— ತಾ ೧೯೦೦ದು ಸಂಜೆ ಉಡುಪಿ ಮುನಿಸಿಪಲ್ ಟೌನಿಸ್ ಎಲಿವೆಂಟರಿ ಶಾಲೆಯಲ್ಲಿ ನಗರ ಸಭೆಯ ಕಡೆಯಿಂದ ಉಡಾಧ್ಯಕ್ಷ ಶ್ರೀ ಪಿ. ವಿ. ಆಚಾರ್ಯರು ಮಂತ್ರಿ ಶ್ರೀ ಎಚ್. ಎಸ್. ರುದ್ರಪ್ಪನವರಿಗೆ ಮಾನಪತ್ರವಿತ್ತರು. ಮಾನಪತ್ರದಲ್ಲಿ, ಉಡು ಪಿಯ ಉದ್ಯಾನಗಳ ಅಭಿವೃದ್ಧಿಗೆ ಮತ್ತು ಹೊಸತಾಗಿ ತೆರೆಯುವ ಉದ್ಯಾನಗಳ ಬಗ್ಗೆ ರೂ ೨೫,೦೦೦/- ಸಹಾಯನಿಧಿಯನ್ನೀಯಬೇಕು. ನೀರಿನ ಅಭಾವವಿರುವ ಅಜ್ಜರಕಾಡಿನಲ್ಲಿ ಒಂ ದೆರಡು ಟ್ಯೂಬ್ ವೆಲ್ ಗಳನ್ನು ರಚಿಸಲು ಸಹಾಯ ನೀಡಬೇಕು, ಸಂತೆ ಮಾರ್ಕೆಟು ಕುಸ್ಯಸ್ಥಿತಿಗೆ ರೂಪಾಯಿ ಒಂದು ಲಕ್ಷ ಸಹಾಯ ಮೊರೆಯಬೇಕು. ನಗರದಲ್ಲಿ ಮಾತ್ರವಲ್ಲದೆ ಹಳ್ಳಿ ಕೇಂದ್ರಗಳಲ್ಲೂ ನ್ಯಾಯ ಬೆಲೆಯ ಅಂಗಡಿಗಳನ್ನು ತೆರೆಯಬೇಕು ಎಂದು ಕೇಳಲಾಗಿತ್ತು.

ಮಂತ್ರಿಗಳು ಉತ್ತರವೀಯುತ್ತಾ 'ಉಡು ಪಿಗೆ ಪಶುವೈದ್ಯ ಕಾಲೆ ಆಕ್ಕಿಗತ್ತವಿದೆ. ಆ ಬಗ್ಗೆ ಸೂಕ್ತ ಕಾರ್ಯಕ್ರಮ ಕೈಕೊಳ್ಳಬೇಕಾ ಗಿದೆ. ಮಾರ್ಕೆಟು ವಿಷಾರ ಸರಕಾರದೊಡನೆ ತಿಳಿಸಿ ಸಾಧ್ಯವಿದ್ದುದನ್ನು ಮಾಡಲು ಪ್ರಯತ್ನಿಸು ವೆನು. ಇತರ ವಿಷಾರಗಳ ಕುರಿತು ಪರ್ಯಾ ಲೋಚಿಸಲಾಗುವುದು ಎಂದರು. ಮುಂದು ವರಿಯುತ್ತಾ 'ಕೃಷಿ ಪ್ರಧಾನನಾದ ಈ ದೇಶ ದಲ್ಲಿ ರೈತರ ಪಾತ್ರ ಮಹತ್ವಪೂರ್ಣವಾದುದು. ಸ್ವಸ್ಥ ಪಂಚವಾರ್ಷಿಕಯೋಜನೆಯಲ್ಲಿ ಉದ್ಯೋಗ ಕಲ್ಪಿಸಿ ಕೊಡುವ ಕಾರ್ಯವು ಜಯಪ್ರದವಾ ಗಲಿಲ್ಲಿ. ದ್ವಿತೀಯ ಪಂಚವಾರ್ಷಿಕ ಯೋಜ ನೆಯಲ್ಲಿ ಆಹಾರ ವೃದ್ಧಿಗಲು ಹಲವಾರು ಯೋಜನೆಗಳ ಮೂಲಕ ಸೌಕರ್ಯಗಳನ್ನು ಕಲ್ಪಿಸಲಾಗಿದೆ. ಆದರೆ ಸರಕಾರವು ನೀರೀಕ್ಷಿ ದಪ್ಪರ ಮಟ್ಟಗೆ ರೈತರು ಮುಂದೆ ಬರಲಿಲ್ಲ. ದೇಶದ ಆರ್ಥಿಕ ಅಭಿವೃದ್ಧಿ ದೃಷ್ಟಿಯಿಂದ ರೈತಭಾಂದವರು ಮುಂದೆ ಬಂದು ಸರಕಾರ ವೆ ನೀಡಿದ ಸಾಲಸೌಕರ್ಯ ಉಸರ್ಯೋಗ ಪಡೆ ದು ಆಹಾರ ಧಾನ್ಯಗಳ ಹೆಚ್ಚಳಕ್ಕೆ ಸಹಕಾರ ನೀಡಬೇಕು. ರೈತರಲ್ಲಿ ಸಂಪತ್ತು ವೃದ್ಧಿಯಾ ದರೆ ದೇಶದ ಸಂಪತ್ತು ಉತ್ತಮಗೊಳ್ಳುವುದು ಅಕ್ಷರಯ ಬೆಲೆ ಏರಿದುದು ನಿಜ. ಉತ್ಪಾದಕ ರು ಕಡಿಮೆಯಿದ್ದು ಉಪಯೋಗಿಸುವವರು ಜಾಸ್ತಿ ಯಾಮದೇ ಕಾರಣ. ಸರಕಾರವನ್ನು ದೂರಿ ಫಲವಿಲ್ಲ. ಸರಕಾರವು ಕೊಡುವ ಸೌಕ ರ್ಯಗಳನ್ನು ಉಪಯೋಗಿಸಿ ಆಹಾರ ವೃದ್ಧಿ ಗೊಳಿಸಿದರೆ ಆಕ್ಕಿಯ ಬೆಲೆ ಕಡಿಮೆಯಾಗುವು ದು. ಆದುನರಿಂದ ಸರಕಾರದ ಅಭಿವೃದ್ಧಿ ಯೋಜನೆಗಳಲ್ಲಿ ಜನತೆ ಸಹಕರಿಸಿ ದೇಶವ ನ್ನು ಸಂಪತ್ತು ಸಮೃದ್ಧಿ ಯಾಗುವಂತೆ ಯತ್ನಿ ಸಬೇಕು ಎಂದು ಹೇಳಿದರು. ಡಾ. ಪಿ. ಜಿ. ಆಚಾರ್ಯರು ಧನ್ಯವಾದಗಳನ್ನರ್ಪಿಸಿದರು.

## ಮಂಗಳೂರು

**ಮಂಗಳೂರು ನಗರ ಸಭೆಯು**= ತಾ. ೩೦ ರಲ್ಲು ನಗರ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಆಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಮೆಜ್‌ಸ್ಟರ್ ಮಾರ್ಕೆಟಿನ ಪುನರ್ರ್ ಚನೆಗಾಗಿ ಸರಕಾರದೊಡನೆ ಎಂಟುಲಕ್ಷ ರೂ ಪಾಯಿ ಸಾಲಪನ್ನು ಎರಡು ನೂರು ಕಂತು ಗಳಲ್ಲಿ ಕೊಡಲು ಕೇಳುವ ನಿರ್ಧಾರವಾಯಿತು. ಅದು ಅಸಾಧ್ಯವಾದರೆ ನಗರಸಭೆಯು ಎಂಟು ಲಕ್ಷ ರೂಪಾಯಿಯನ್ನು ಯಾವುದಾದರೂ ಶೆಡ್ಯೂಲ್ ಬ್ಯಾಂಕುಗಳಿಂದ ಸಾಲ ತೆಗೆಯಲು ಅನುಮತಿಕೊಡುವಂತೆ ಸರಕಾರವನ್ನು ಕೇಳಿ ಕೊಳ್ಳಲಾಯಿತು ಮುಂಗಳೂರು ನಗರದ ಜನ ಸಂಖ್ಯೆ ೧.೨೦ ಲಕ್ಷ ಇರುವುದರಿಂದ ಅದನ್ನು ಮೈಸೂರು ರಾಜ್ಯದ ಮೈಸೂರು ಪಾವಣಗೆರೆ ಪುತ್ತೂ ರ್ಯಾಯ ನಗರಸಭೆಗಳಂತೆ ಪರಿ ಗಣಿಸಿ ಮೈಸೂರು ಸಿಟಿ ಮುನ್ಸಿಪಲ್ ಏಕ್ಟಿನನ್ವಯ ಸರಕಾರದೊಡನೆ ನೇರ ಪತ್ರ ವ್ಯವಹಾರ ನಡೆಸಲು ಅನುಮತಿ ಕೊಡ ಬೇಕೆಂದು ಕೇಳಿ ಕೊಳ್ಳುವ ನಿರ್ಣಯವಾ ಯಿತು.

**ವಿದಾಯ ಕೂಟ**—ಮಂಗಳೂರು ವ ಕೀಲ ಗುಮಾಸ್ತರ ಸಂಘದ ಆಶ್ರಯದಲ್ಲಿ ತಾ. ೩೧ಲ್ಲಿ ಮಂಗಳೂರಿನಲ್ಲಿ ಪುತ್ತೂರಿಗೆ ವರ್ಗಾಯಿಸಲ್ಪಟ್ಟ ಡಿ. ಮುನ್ಸಿಫ್ ಶ್ರೀ ಕೆ. ಚಿಂದ್ರಶೇಖರ ಹೆಗ್ಡೆಯವರಿಗೆ ಬೀಳ್ಕೊಡುವ ಸಮಾರಂಭವು ಜಿಲ್ಲಾ ಪ್ರಿನ್ಸಿಪಾಲ್ ಸಬ್ ಜಡ್ಜ್ ಶ್ರೀ ಜೆ. ಎಮ್. ನಿಕೇರರ ಅಧ್ಯಕ್ಷತೆ ಯಲ್ಲಿ ಜರಗಿತು.

**ಕೈಮಗ್ಗ ಸೆಪ್ತಾಹವು**= ತಾ. ೧೦ ರಂದು ದ. ಕ. ಜಿಲ್ಲಾ ಸೆಂಟ್ರಲ್ ಕೋಪರೇ ಟಿವ್ ಬ್ಯಾಂಕಿನ ಸಭಾಭವನದಲ್ಲಿ ಮಂಗಳೂ ರು ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಆಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಕೋಆ ರೇಟಿವ್ ಸಬ್ ರಿಜಿಸ್ಟ್ರಾರ್ ಶ್ರೀ ವಿಠಲ ಪೈರವರು ಸ್ವಾಗತಭಾಷಣಗೈದರು. ಜಿಲ್ಲಾ ಕಲೆಕ್ಟರ್ ಶ್ರೀ ಎಚ್. ನರಸಿಂಹಯ್ಯ ಡಿಪ್ಯುಟಿ ರಿಜಿಸ್ಟ್ರಾರ್ ಶ್ರೀ ಕೆ. ಕಾಳಪ್ಪ ಸೆಟ್ಟಿ, ಎಮ್. ರಾಜೀವ್ಯ, ಬಿ. ಕೆ. ಮಲ್ಲಿಕಾ ರ್ಜುನ ಮೊದಲಾದವರು ಭಾಷಣಗೈದಿದರು. ಉತ್ತಮ ನೇಕಾರರಿಗೆ ಬಹುಮಾನವಿತರಣೆ ಯಲ್ಲಿ ಕೆಲವು ಸಂಸ್ಥೆಗಳಿಗೆ ಪ್ರಶಸ್ತಿ ಪತ್ರಗಳ ಸ್ವೀಕರಿಸಲಾಯಿತು.

# ನೀವು ಮತ್ತು ಕಾನೂನು

## ಸೇವಕನ ಅಪರಾಧಕ್ಕೆ ಯಜಮಾನನು ಎಷ್ಟರ ಮಟ್ಟಿಗೆ ಜವಾಬ್ದಾರ?

ಸಾಮಾನ್ಯವಾಗಿ ಮಾನವನು ಮಾಡುವ ತಪ್ಪುಗಳಿಗೆ ಅತನೇ ಹೊಣೆ. ಬೇರೆಯವರು ಹೊಣೆಗಾರರಲ್ಲ. ಆದರೆ ಕೆಲವು ಸಂದರ್ಭಗಳಲ್ಲಿ ನೀವು ತಪ್ಪುತ್ತಿರಲ್ಲದಿದ್ದರೂ ಕೂಡಾ ನೀವು ಇನ್ನೊಬ್ಬರು ಮಾಡಿದ ಅಪರಾಧಕ್ಕೆ ಗುರಿಯಾಗುತ್ತೀರಿ. ಉದಾಹರಣೆಗಾಗಿ, ನಿಮ್ಮ ಕೆಲಸವನ್ನು, ನಿಮ್ಮ ಸೇವಕನು ಮಾಡುವಾಗ ಮಾಡಿದ ಅಪರಾಧಗಳಿಗೆ ನೀವು ಹೊಣೆಗಾರರಾಗುತ್ತೀರಿ. ಇಂತಹಬಂದು ನ್ಯಾಯವಿಲ್ಲವೆ ಕಾನೂನು ಯಾಕೆ ಇದೆ ಎಂಬುದನ್ನು ನಾವು ತಿಳಿದುಕೊಳ್ಳಬೇಕಾಗಿದೆ. ಸರ್ವಸಾಧಾರಣವಾಗಿ ಯಜಮಾನನು ಧನಿಕನು, ಸೇವಕನು ಬಡವನು. ಯಜಮಾನನ ಸೇವೆಯನ್ನು ಮಾಡುತ್ತಿರುವಾಗ ಸೇವಕನಿಂದ ಇನ್ನೊಬ್ಬರಿಗೆ ನಷ್ಟವಾಗುತ್ತದೆ. ಸೇವಕನು ಬಡವನಾದ ಕಾರಣ, ನಷ್ಟ ಹೊಂದಿದ ವ್ಯಕ್ತಿಗೆ ಯಾವುದೂ ತರಿದ ಪರಿಹಾರ ದೊರಕಲಾರದು. ಆದುದರಿಂದ ಯಜಮಾನನು ಹೊಣೆಯಾದಲ್ಲಿ, ನಷ್ಟ ಹೊಂದಿದವನಿಗೆ ಪರಿಹಾರ ದ್ರವ್ಯ ದೊರಕುತ್ತದೆ. ಒಬ್ಬನು ಮಾಡಿದ ತಪ್ಪಿಗೆ ಇನ್ನೊಬ್ಬನು ದಂಡ ತೆರುವುದು, ಅನ್ಯಾಯವಾಗಿ, ಆನೈತಿಕವಾಗಿ ತೋರಬಹುದು. ಆದರೆ ಸೇವಕನು, ಯಜಮಾನನಿಗೆ ಸೇವೆಯನ್ನು ಸಲ್ಲಿಸುತ್ತಿರುವಾಗ ಬೇರೆಯವರಿಗೆ ನಷ್ಟವಾಯಿತು. ಆದುದರಿಂದ ಯಜಮಾನನು ಹೊಣೆಯಾಗುವುದರಲ್ಲಿ ನ್ಯಾಯವಿದೆ. ಉದಾಹರಣೆಗಾಗಿ, ನೀವು ನಿಮ್ಮ ಕಾರಿನ ಮೂಲಕ ಉದುಪಿಯಿಂದ ಮಂಗಳೂರಿಗೆ ಹೊರಡುತ್ತೀರಿ ನಿಮ್ಮ ಡ್ರೈವರನು ಕಾರನ್ನು ಜೋಪಾಯಿಸುತ್ತಿದ್ದನು. ದಾರಿಯಲ್ಲಿ ಕಾರಿನ ಅಡಿಗೆ ಒಬ್ಬ ಬಡವನು ಬಿದ್ದು ಅತನ ಕಾಲು ಮುರಿದು ಹೋಗುತ್ತದೆ. ಅತನು, ಔಷಧ ಉಪಚಾರಗಳ ಕರ್ಚಿಗಾಗಿ ಮತ್ತು ಇತರ ನಷ್ಟಗಳಿಗಾಗಿ, ಡ್ರೈವರನ ಮೇಲೆ ದಾವೆ ಹೂಡುತ್ತಾನೆ. ಆದರೆ ಸೇವಕನು ಅಂದರೆ ಡ್ರೈವರನು ಜವಬ. ಪರಿಹಾರ ದ್ರವ್ಯವನ್ನು ತೊಡಲು ಆತ ಸಮರ್ಥನಿಲ್ಲ. ಹೀಗಿರುವಾಗ ನಷ್ಟ ಹೊಂದಿದವನು ಪರಿಹಾರ ಪಡೆಯುವುದಾದರೂ ಹೇಗೆ? ಇದಕ್ಕಾಗಿ ಸೇವಕನ ತಪ್ಪಿಗೆ ಯಜಮಾನನು ಹೊಣೆಯಾಗಬೇಕು (Vicarious liability) ಎಂದು ಕಾನೂನು ಹೇಳುತ್ತದೆ. ಕಾಲು ಮುರಿದು ಹೋದ ಬಡವನು ಯಜಮಾನನ ಮೇಲೆ ನಾನೆ ಹೂಡಿದಲ್ಲಿ ಅತನಿಗೆ ಯಜಮಾನನಿಂದ ಪರಿಹಾರ ಧನ ದೊರಕುತ್ತದೆ. ಆದರೆ ಎಲ್ಲಾ ಸಮಯದಲ್ಲಿಯೂ ಯಜಮಾನನು ಹೊಣೆಗಾರನಾಗಲಾರ. ಅತ ಯಾವಾಗ ಹೊಣೆಯಾಗುತ್ತಾನೆ? ಯಾಕೆ ಹೊಣೆಯಾಗುತ್ತಾನೆ? ಎಷ್ಟರ ಮಟ್ಟಿಗೆ ಹೊಣೆಯಾಗುತ್ತಾನೆ? ಈ ಎಲ್ಲಾ ವಿಷಯಗಳನ್ನು ನಾವು ತಿಳಿಯಬೇಕಾಗಿದೆ. ಇತ್ತೀಚೆಗೆ ಇಂಗ್ಲೆಂಡಿನಲ್ಲಿ ಇತ್ಯರ್ಥವಾದ ಒಂದು ಕೇಸು, ಈ ವಿಷಯದ ನೋಲೆ ಕುಂಬಾ ಬೆಳಕನ್ನು ಚೆಲ್ಲಿದೆ.

ಈ ಕೇಸಿನಲ್ಲಿ ಆಪರಾಧಿ, ಒಂದು ಕಲ್ಲು ಸಾಗಿಸುವ ಕಂಪೆನಿಯ ಲೋರಿಯ ಡ್ರೈವರನು. ಅತನ ಕರ್ತವ್ಯ:— ಕಂಪೆನಿಯ ಕಲ್ಲಿನ ಅಡೆಯಿಂದ ನಾಲ್ಕು ತಾಸುಗಳ ಅವಧಿಯ ಪ್ರಯಾಣ ಮಾಡಬೇಕಾದ ಸಮ್ಮಂಧ ಪಟ್ಟ ಕಲ್ಪಡಿಸಿದ್ದಲ್ಲಿಗೆ ಕಲ್ಲನ್ನು ಸಾಗಿಸುವುದು ಅತನ ಕರ್ತವ್ಯ. ಅಚೀಚೆ ಹೋಗುವಾಗ ದಾರಿಯಲ್ಲಿ ಲಾರಿಯನ್ನು ನಿಲ್ಲಿಸಿ, ಕಾಫಿ ಕುಡಿದು ವಿಶ್ರಮಿಸುವುದು ಡ್ರೈವರನ ಪದ್ಧತಿಯಾಗಿತ್ತು. ಕಂಪೆನಿಯ ಮಾಲೀಕನಿಗೆ ಕೂಡಾ ತಿಳಿದಿತ್ತು ಅವರೂ ಕೂಡಾ ಅತ ಮಾನವಾಗಿದ್ದ ಪ್ರತ್ಯಕ್ಷವಾಗಿಯಲ್ಲದಿದ್ದರೂ, ಪರೋಕ್ಷವಾಗಿ ಅತನ ಸಮ್ಮತಿಯಿತ್ತು.

**ಅವಘಡ:—** ಪದ್ಧತಿಯಂತೆ ಒಮ್ಮೆ ಲೋರಿಯನ್ನು ರಸ್ತೆಯ ಬದಿಯಲ್ಲಿ ನಿಲ್ಲಿಸಿ, ಡ್ರೈವರನು ಕಾಫಿ ಕುಡಿಯಲೋಸುಗ ರಸ್ತೆಯ ಒಂದು ಬದಿಯಿಂದ ಮತ್ತೊಂದು ಬದಿಗೆ ದಾಟುತ್ತಿದ್ದನು. ಹೀಗೆ ದಾಟುವಾಗ ಎಡುರಿನಿಂದ ಬರುತ್ತಿದ್ದ ಮೋಟರು ಸೈಕಲ್ ಸವಾರನೊಬ್ಬನನು ಡಿಕ್ಕಿಹೊಡೆದು ಪರಣಾಮವಾಗಿ ಇಬ್ಬರಿಗೂ ಜಖಂ ಆಗುತ್ತದೆ. ಇವರಲ್ಲಿ ಮೋಟಾರು ಸೈಕಲಿನವನ ತಪ್ಪು ಸ್ವಲ್ಪತಪ್ಪಿದ್ದರು ಕೂಡಾ, ಲಾರಿ ಡ್ರೈವರನ ತಪ್ಪುಕೂಡಾ ಇತ್ತು (contributory negligence) ಅವಘಡದಿಂದಾದ ನಷ್ಟಕ್ಕಾಗಿ ಲೋರಿ ಡ್ರೈವರನ ಮೇಲೂ, ಕಂಪೆನಿಯ ಮಾಲೀಕನ ಮೇಲೂ ಮೋಟರು ಸೈಕಲ್ ಸವಾರನು ದಾವೆ ಹೂಡುತ್ತಾನೆ.

**ಡ್ರೈವರನು ಅತನ ಕರ್ತವ್ಯದಲ್ಲಿರಲಿಲ್ಲ:—** ಮೋಟರು ಸೈಕಲ್ ಸವಾರನು ನ್ಯಾಯಾಧೀಶರ ಮುಂದೆ ಈ ರೀತಿ ವಾದಿಸುತ್ತಾನೆ. ಸ್ವಾಮೀ ಈ ಅವಘಡಕ್ಕೆ ಲೋರಿ ಡ್ರೈವರನ ಅಜಾಗರೂಕತೆಯೇ ಕಾರಣ. ಈ ಅವಘಡವು ಅತನ ಕೆಲಸದ ವೇಳೆಯಲ್ಲಿಯೇ ನಡೆಯಿತು. ಡ್ರೈವರನು ರಸ್ತೆಯನ್ನು ದಾಟಿ ಕಾಫಿ ಕುಡಿಯಲು ಹೋಗುತ್ತಿದ್ದ ಸಂಗತಿ ಕಂಪೆನಿಯ ಮಾಲೀಕನಿಗೆ ಕೂಡಾ ತಿಳಿದಿತ್ತು. ಕಾಫಿಕುಡಿದು ವಿಶ್ರಮಿಸಿಕೊಳ್ಳುವುದು ಅವಶ್ಯ ವೆಂದು ಕಂಪೆನಿಯವರಿಗೆ ತಿಳಿದಿತ್ತು. ಆದುದರಿಂದಲೇ ಅವರಿಗೆ ಈ ವಿಷಯ ತಿಳಿದಿದ್ದರೂ ಕೂಡಾ ಅವರು ಮೌನಸಮ್ಮತಿಯನ್ನು ತ್ತಿದ್ದರು. ಆದುದರಿಂದ ಅವನ ಕೃತ್ಯಕ್ಕೆ ಕಂಪೆನಿಯ ಸಮ್ಮತಿಯಿತ್ತಿದೆ. ಆದುದರಿಂದ ಈ ಅವಘಡದ ನೆಡೆಯಾಗ ಡ್ರೈವರನು ಕಂಪೆನಿಯು ಕೆಲಸದಲ್ಲಿದ್ದನೇ ಹೊರತು ನೈಯಕ್ತಿಕ ಕೆಲಸನನ್ನು ನಾಡುತ್ತಿದ್ದಿಲ್ಲ ಆದುದರಿಂದ ಅವನ ಈ ಕೃತ್ಯಕ್ಕೆ ಕಂಪೆನಿಯೂ ಹಾಗೂ ಡ್ರೈವರನು ಇಬ್ಬರೂ ಜವಾಬ್ದಾರರಾಗಿರುತ್ತಾರೆ.

**ಡ್ರೈವರನು ಕರ್ತವ್ಯದಲ್ಲಿರಲಿಲ್ಲ:—** "ಸ್ವಾಮೀ ಅವಘಡ ನಡೆದಾಗ ಡ್ರೈವರನು ಕಂಪೆನಿಯ ಕೆಲಸವನ್ನು ಮಾಡುತ್ತಿದ್ದಿಲ್ಲ. ಕಾಫಿ ಕುಡಿಯುವುದು ಡ್ರೈವರನ ವೈಯಕ್ತಿಕ ಸಂಗತಿಯಲ್ಲದೆ. ಕಂಪೆನಿಯ ಕೆಲಸವಲ್ಲ. ಡ್ರೈವರನ ಕರ್ತವ್ಯ ಲೋರಿಯನ್ನು ನಡೆಸುವುದು. ಕಾಫಿ ಕುಡಿಯುವುದು ಆತನ ವೈಯಕ್ತಿಕ ಕೆಲಸವಲ್ಲದೆ ಕಂಪೆನಿಯ ಕೆಲಸವಲ್ಲ. ಈ ಅವಘಡ ನಡೆದಾಗ ಡ್ರೈವರನು ವೈಯಕ್ತಿಕ ಕೆಲಸವನ್ನು ಮಾಡುತ್ತಿದ್ದನಲ್ಲದೆ ಕಂಪೆನಿಯ ಕೆಲಸವನ್ನು ಮಾಡುತ್ತಿದ್ದಿಲ್ಲ. ಆದ ದರಿಂದ ಈ ಅವಘಡದಿಂದ ಮೋಟಾರು ಸೈಕಲ್ ಸವಾರನಿಗಾದ ನಷ್ಟಕ್ಕೆ ಕಂಪೆನಿಯು ಜವಾಬ್ದಾರಿಯಲ್ಲವೆಂದು ಕಂಪೆನಿಯವರು ಕೋರ್ಟಿನಲ್ಲಿ ವಾದಿಸುತ್ತಾರೆ.

ನ್ಯಾಯಾಧೀಶ ಪಿಲ್ಚರ್ (Justic Pilcher)ರವರು, ಈ ಕೇಸಿನ ತೀರ್ಪನ್ನು ಈ ರೀತಿಯಾಗಿ ಇತ್ತರು 'ಡ್ರೈವರನ ಅಜಾಗರೂಕತೆಯಿಂದ, ಮೋಟಾರು ಸೈಕಲ್ ಸವಾರನಿಗೆ ನಷ್ಟವಾಗಿದೆಯೆನ್ನುವ ವಾದವು ಒಪ್ಪತಕ್ಕ ವಾದ. ಕಾನೂನಿನ ದೃಷ್ಟಿಯಿಂದ ನಾವು ಪರೀಕ್ಷಿಸಿದರೆ ಲೋರಿ ಡ್ರೈವರನು ಲೋರಿಯನ್ನು ಬಿಟ್ಟಾಕ್ಷಣ ಅತನು ಕಂಪೆನಿಯ ಕೆಲಸದಲ್ಲಿಲ್ಲ. ಲೋರಿಯನ್ನು ಬಿಟ್ಟು, ರಸ್ತೆ ದಾಟಿ ಹೋಟೆಲಿಗೆ ಹೋಗಲುಪ್ರಾರಂಭಿಸಿವ ಕ್ಷಣದಿಂದ ಆತ ಪುನಃ ಲೋರಿಯನ್ನು ಸೇರುವವರೆಗೆ ಅತ ಕಂಪೆನಿಗೆ ಸಮ್ಮಂಧಪಟ್ಟವನಾಗ್ಯುವುದಿಲ್ಲ. ಆ ವೇಳೆಯಲ್ಲಿ ಅತ ಕಂಪೆನಿಯ ಕೆಲಸದಲ್ಲಿರುವುದಿಲ್ಲ. ಅವಘಡವು ಡ್ರೈವರನ ವೈಯಕ್ತಿಕ ಕೆಲಸವನ್ನು ಮಾಡುವಾಗ ನಡೆಯಿತೇ ವಿನಃ ಕಂಪೆನಿಯ ಕೆಲಸವನ್ನು ಮಾಡುವ ಸಮಯದಲ್ಲಿ ನಡೆಯಲಿಲ್ಲ. ಹೀಗಿರುವಾಗ ಈ ಅವಘಡಕ್ಕೆ ಆದರಿಂದಾವ ನಷ್ಟಕ್ಕೆ ಕಂಪೆನಿಯುಹೊಣೆಯಾಗುವುದಿಲ್ಲ. ಡ್ರೈವರನು ಕಾಫಿ ಕುಡಿಯಲು ಹೋಗುವ ಬಗ್ಗೆ ಕಂಪೆನಿಯು ಮೌನ ಸಮ್ಮತಿಯನ್ನಿತ್ತಿತ್ತು ಎನ್ನುವ ವಾದಕ್ಕೆ ಹೆಚ್ಚಿನ ಗಮನವನ್ನು ಕೊಡಲಾಗುವುದಿಲ್ಲ. ಮೇಲೆ ಹೇಳಿದ ಕೇಸಿನಲ್ಲಿ ಲೋರಿ ಡ್ರೈವರನ ಅಜಾಗರೂಕತೆಯಿಂದ (ಅತನ ವೈಯಕ್ತಿಕ ಕೆಲಸವನ್ನು ಮಾಡುವಾಗ) ನಡೆಯಿತು. ಆದುದರಿಂದ ಅತನೇ ಜವಾಬ್ದಾರನೇ ವಿನಃ ಕಂಪೆನಿಯು ಜವಾಬ್ದಾರಿಯಲ್ಲ."

(೧ ಒಂದು ಮೇಲೆ ಡ್ರೈವರನು ಲೋರಿಯನ್ನು ನಡೆಸುತ್ತಿದ್ದಾಗ ಈ ಅವಘಡ ನಡೆಸುತ್ತಿದ್ದರೆ, ಕಂಪೆನಿಯು ಜವಾಬ್ದಾರಿಯಾಗುತ್ತಿತ್ತು. ಯಾಕೆಂದರೆ ಡ್ರೈವರನು ಕಂಪೆನಿಯ ಕೆಲಸವನ್ನು ಮಾಡುತ್ತಿದ್ದನು. ಆದರೆ ಮೇಲೆ ಹೇಳಿದ ಅವಘಡವು ಡ್ರೈವರನು ಕಾಫಿ ಕುಡಿಯಲು ಹೋಗುತ್ತಿದ್ದಾಗ ನಡೆಯಿತಿನಿಸಿ, ಕಂಪೆನಿಯು ಕಾರ್ಯವನ್ನು ಮಾಡುವಾಗ ನಡೆಯಲಿಲ್ಲ. ಕಂಪೆನಿಯವರು ಡ್ರೈವರನನ್ನು ಲೋರಿಯನ್ನು ಚಲಾಯಿಸುವ ಕಾರ್ಯಕ್ಕಾಗಿ ನೇಮಿಸಿದ್ದರೇ ಹೊರತು, ದಾರಿಯಲ್ಲಿ ಅಲ್ಲಲ್ಲಿ ಕಾಫಿ ಕುಡಿದು ವಿಶ್ರಮಿಸಿಕೊಳ್ಳಲು ನೇಮಿಸಿಲಿಲ್ಲ. ಆದರೆ ಹಿಂದೆ, ಕಂಪೆನಿಯವರು, ರಸ್ತೆಯ ಪಕ್ಕದಲ್ಲಿರುವ ಹೋಟೆಲಿನವನಿಗೆ ಕೊಡು ಎಂದು ಡ್ರೈವರನ ಪತ್ರಿಕೆ ಒಂದು ಪತ್ರವನ್ನು ಕೊಟ್ಟಿದ್ದರೆ, ಆ ಪತ್ರವನ್ನು ಕೊಡಲೋಸುಗ ಡ್ರೈವರನು ರಸ್ತೆಯನ್ನು ದಾಟುವಾಗ ಅವಘಡ ನಡೆಯಿತ್ತಿದ್ದರೆ, ಈ ಅವಘಡಕ್ಕೆ ಕಂಪೆನಿಯು ಜವಾಬ್ದಾರಿಯಾಗುತ್ತಿತ್ತು. ಯಾಕೆಂದರೆ, ಡ್ರೈವರನು ಕಾಫಿ ಕುಡಿಯಲು ಹೋಗುತ್ತಿದ್ದರು ಕೂಡಾ, ಕಂಪೆನಿಯ ಕೆಲಸವನ್ನು ಕೂಡಾ ಮಾಡುತ್ತಿದ್ದನು."

Based on:- (1) Crook vs. Derbyshire Stone Ltd.

Weekly Law Reports 20-4-57 PP. 432-437. also see Clerk & Lindsell on Torts 10th editic PP. 122.

Salmond's Law of Torts 194 PP. 23,-83-110.

[ಬೈಸ್ಸ್ ಆಫ್ ಇಂಡಿಯ]

—ಶ್ರೀ. ಕೆ. ಭಾಸ್ಕರ ಶೆಟ್ಟಿ, ಬಿ. ಎ


ಒಂದು ಹೊಸ ಮಹಾ ಕಾದಂಬರಿ

# ನಡುಹಗಲಿನ ಕಗ್ಗತ್ತಲೆ

ಸಿಲ್ಕ್ ಪುಟಗಳು ಬೆಲೆ 2·50 ರೂಪಾಯಿ

- ಯುರೋಪಿನಲ್ಲಿ ಈಗ ನಲ್ವತ್ತು ವರ್ಷಗಳ ಹಿಂದೆ ನಡೆದ ಇಡೀ ಪ್ರಪಂಚವನ್ನೇ ತಲ್ಲಣಗೊಳಿಸುತ್ತಿರುವ ಒಂದು ರಾಜನೈತಿಕ ಪದ್ಧತಿಯಿಂದ ಮನುಷ್ಯನ ಅಧ್ಯಪ್ತ ಪತನವಾಗುತ್ತಿರುವ ದುರಂತದ ಒಂದು ಮಾರ್ಮಿಕ ಕಾದಂಬರಿ.
- ರಶಿಯದ ರಕ್ತಮಯ ಕ್ರಾಂತಿಯು ವ್ಯಕ್ತಿಯ ಜೀವ ಮತ್ತು ಮತ್ತುರನ್ನು ನಿರ್ದಾಕ್ಷಿಣ್ಯವಾಗಿ ಹೀರುವ ಭೀಕರ ಚಿತ್ರಣ.
- ಇದರಲ್ಲಿ ಪ್ರಚಲಿತ ಪ್ರಪಂಚದ ರಾಜನೀತಿ, ಇತಿಹಾಸ, ಮತ್ತು ಅಂತಾರಾಷ್ಟ್ರೀಯ ರೀತಿ ನೀತಿಯ ಒಳನೋಟ ದೊರೆಯುತ್ತದೆ.
- ಪ್ರಖ್ಯಾತ ಲೇಖಕ ಆರ್ಥರ್ ಕೊಸ್ಲರ್ ಅವರ ಜರ್ಮನ್ ಕಾದಂಬರಿಯ ಮನೋಜ್ಞ ಕನ್ನಡವನ್ನು ಅನುವಾದಿಸಿದವರು ಕು. ಶಿ. ಹರಿದಾಸ ಭಟ್ಟರು.

ಪ್ರಕಾಶಕರು:

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ.

(ಪ್ರತಿಗಳು ನವಭಾರತ ಪುಸ್ತಕ ಭಂಡಾರ, ಉಡುಪಿ, ಇಲ್ಲಿಯೂ ದೊರೆಯುತ್ತವೆ)

ಕುಂದಾಪುರ ಡಿ. ಮು. ಕೋರ್ಟಿನ

S. C. 153/57

ಮಂಜುನಾಥ ಮೈಯ್ಯ —ವಾ

ಜೊಪ್ಪೆ ಹೆಂಗಸು ಸಪ ಪ್ರತಿವಾದಿರ

ಸದ್ರಿ ನಾಪಿಕಡೆಯಿಂದ ಈ ನೂಲ್ಕ ಜ ಹೀರು ಮಾಡಿಕೊಳ್ಳುವಬೇನೆಂದೆ

2 ಮಂಜ ಬಡಾ ಕೆರೆಮನೆ ಕರಿಯಮ್ಮ ಮುಗೆ ಕೆರ್ಗಾಲ ಗ್ರಾಮ

ವಾದಿಗೆ ಪ್ರತಿವಾದಿರಿಂದ ಬರಕತ್ತ ಚಾ ಸೇಜಿ ಜಾಕಿ ನಗೈರೆ ಬರಮಾಡಿಕೊಳ್ಳುವಗೊ ಸ್ಕರ ಮಾಡಿದ ಮೇಲ್ಕಂಡ ದಾವೆಯು ತಾ 22—6—57ಕ್ಕೆ ಆಪೈರೆ ತನ್ನಿಗೆಯಿಟ್ಟಿರ ಆ ಕುರಿತು ನಿಮ್ಮವೇನಾದ್ರು ಅಕ್ಷೇಪಣಿ ಸದ್ರಿ ದಿವ್ಸಗಲು 11 ಗಂಟೆಗೆಸ್ವತ ಹಾ ಕೀಲರ ದ್ವಾರಾ ಹಾಜ್ರಾಗಿ ಜಾಬೀರು ಮಾ ಕೊಳ್ಳತಕ್ಕದ್ದು ತಪ್ಪಿದ್ರೆ ನಿಮ್ಮ ಗೈರುಹಾಜ ಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡು ವುದು ಎಂಬ ಸಂಗತಿ ವಾದಿರ ಕಡೆಯಿಂದ ಕ ಮೂಲ್ಕ ತಿಳಿಯಪಡ್ಸಿಯಿದೆ.

G. Sanjiva Rao
Vakil for Plaintiff
Kundapur, Date 2-5-57



ಕವತ್ತಾರು ಜಾತ್ರೆ

ಪ್ರತಿ ವರ್ಷದಂತೆ ಕವತ್ತಾರ ಮಹಾ ಉತ್ಸವವು ಇವೇ ಮೆ ತಿಂಗಳ ತಾ. 13ನೇ ಸೋವ ವಾರ ನೆರವೇರುವುದು.

ಕವತ್ತಾರು ತಾ. ೫೦.

## ಪತ್ರಲೇಖನ

(೨ನೇ ಪುಟದಿಂದ)

ಬೇಕಾದರೆ, ಅಲ್ಲಿನ ಟ್ಯಾಬ್ಲಾಯ್ಡ್ ಪತ್ರಿಕೆಗೆ ಒಂದು ಪತ್ರವನ್ನು ಬರೆದರೆ ಸರಿ. ಅದು ಯೋಗ್ಯ ಪರಿಣಾಮಕಾರಿಯಾಗುವುದು. ಭಾರತದಲ್ಲಿಯೂ ಇಂತಹ ವಿಭಾಗಗಳು ಪ್ರಾರಂಭವಾದ ಪ್ರಾರಂಭ ಕಾಲದಲ್ಲಿ ಆವು ಪರಿಣಾಮ ಮಾಡಿದೆಯಂತೆ! ಆದರೆ, ಇಂದು, ನಮ್ಮ ಓದುಗರ ಓಲೆಗಳ ದುರಾದೃಷ್ಟವೋ ಅಲ್ಲ ಸಂಬಂಧಪಟ್ಟವರ ಅಲಸ್ಯವೋ ಇಂತಹ ಪತ್ರಗಳತ್ತ ಗಮನ ಹರಿಯುವುದು ದೂರವಾಗುತ್ತ ಬಂದಿದೆ.

ಭಾರತದಲ್ಲಿ ರಾಷ್ಟ್ರಪಿತನೆನಿಸಿದ ಮಹಾತ್ಮಾ ಗಾಂಧೀಯವರು ಒಬ್ಬ ಉತ್ತಮ ಮಟ್ಟದ ಪತ್ರಲೇಖಕರು. ಅವರು ದಿನನಿತ್ಯವೂ ತಮ್ಮ ಪತ್ರಗಳನ್ನು ತಾವೇ ಬರೆಯುತ್ತಿದ್ದರು. ಕೆಲವೊಮ್ಮೆ ಶ್ರೀ ಮಹಾದೇವ ದೇಸಾಯಿ ಅಮೃತ್‌ಕೌರ್ ಮೊದಲಾದ ನಿಕಟ ಸಂಗಾತಿಗಳಿಂದಲೂ ಬರೆಯಿಸುತ್ತಿದ್ದರು. ಗಾಂಧೀಜೀಯವರು ಚಟುಕಿನಲ್ಲಿ ಮುಖ್ಯ ವಿಷಯವನ್ನು ತಿಳಿಸುವ ಕೌಶಲವನ್ನು ಸಂಪಾದಿಸಿದ್ದರು. ಮುಂಬಾಯಿಯ ಕರ್ದಿನಲ್ ಇವಾಚರು ಇನ್ನೊಬ್ಬ ಸುಪ್ರಸಿದ್ಧ ಪತ್ರ ಲೇಖಕರು. ಅವರು ಯಾವಾಗಲೂ ತಮ್ಮ ಪತ್ರವನ್ನು ಕೈಯಲ್ಲಿಯೇ ಬರೆಯುತ್ತಿದ್ದರು. ಟೈಪ್ ರೈಟರಿನ ಆವಶ್ಯಕತೆಯು ಅವರಿಗೆ ಎಂದೂ ಬಿದ್ದಿಲ್ಲ. ಮಾನ್ಯ ವಿ. ಎಸ್. ಶ್ರೀನಿವಾಸ ಶಾಸ್ತ್ರಿ ಎನ್ನುವವರೂ ತಮ್ಮ ಲೇಖನಿಯಿಂದ ಬರೆಯದೆ ತೃಪ್ತರಾಗುತ್ತಿರಲಿಲ್ಲ. ಆಕರ್ಷಕವಾಗಿ ಪತ್ರ ಬರೆಯುವುದರಲ್ಲಿ ಸರ್. ಸಿ. ಪಿ. ರಾಮಸ್ವಾಮಿ ಅಯ್ಯರರು ಹೆಸರು ಹೋದವರು. ಕೆಲ ವರ್ಷಗಳ ಹಿಂದೆ ಈಗ ನಮ್ಮ ಮಹಾ ಪ್ರಧಾನಿಯೆಂಬಿರುವ ಶ್ರೀ ನೆಹರೂ ಕೂಡಾ ಸ್ವಂತ ಹಸ್ತದಿಂದಲೇ ಪತ್ರ ಬರೆಯುವ ಅಭ್ಯಾಸವನ್ನಿಟ್ಟು ಕೊಂಡಿದ್ದರು. ಈಗ ಮಾತ್ರ ಆ ಅಭ್ಯಾಸವನ್ನು ಕೆಲವೊಂದು ಕಾರಣಗಳಿಂದ ಬಿಟ್ಟು ಕೊಟ್ಟಿದ್ದಾರೆ. ದಿವಂಗತ ಜಿ. ಎಸ್. ಬಾಜ್‌ಪಾಯಿಯವರ ಪತ್ರಗಳು ಸರಳವಾಗಿದ್ದು, ಉತ್ತಮ ಭಾಷಾ ಸಂಪತ್ತಿನಿಂದಲೂ ಭಾವನೆಯಿಂದಲೂ ಕೂಡಿ ಕೊಂಡಿದ್ದುವು. ಸುಭಾಶ್ಚಂದ್ರ ಭೋಸರೂ ವೈಯಕ್ತಿಕ ಪತ್ರಗಳತ್ತ ಆಸಕ್ತರಾಗಿದ್ದರು.

ಪಂಡಿತ ನೆಹರೂರವರು ತನ್ನ ಮಗಳು ಇಂದಿರಾ ಗಾಂಧಿಗೆ ಬರೆದ ಪತ್ರಗಳು ಬಹಳ ಮಹತ್ವದವುಗಳಾಗಿವೆ. ಸಂಶೋಧಕ ದೃಷ್ಟಿಯಿಂದ, ಇತಿಹಾಸದೃಷ್ಟಿಯಿಂದ ಇವು ಬಹಳ ಮುಖ್ಯವಾಗಿವೆ. ಈ ಪತ್ರಗಳಲ್ಲಿ ಕೆಲವು ಸಂಕಲಿಸಲ್ಪಟ್ಟು ಪ್ರಕಾಶಿತವಾಗಿವೆ. ಈ ಪತ್ರಗಳನ್ನೂ ನಮ್ಮ ಪತ್ರಗಳನ್ನೂ ತುಲನೆ ಮಾಡಿ ನೋಡಿದರೆ, ಈಗಿನ ಪತ್ರವ್ಯವಹಾರವು ನಿಸ್ಸಾರವಾದುದೆಂದು ವೇದ್ಯವಾಗದಿರದು.

ಭಾರತದ ಇನ್ನೊಬ್ಬ ಪತ್ರಲೇಖಕರೆಂದರೆ ಶ್ರೀ ಸಿ. ರಾಜಗೋಪಾಲಾಚಾರಿಯವರು. ಅವರು ಸಾರ್ವಜನಿಕ ವೇದಿಕೆಯ ಮೇಲೆ ನಿಂತು ಬಹುಹೊತ್ತು ಮಾತಾಡುವವರು. ಆದರೆ, ತಮ್ಮ ಪತ್ರಗಳನ್ನು ಬಹಳ ಜುಟಿಕೆನೆಲ್ಲಿಯೇ ಮುಗಿಸಿಬಿಡುವ ಕಲೆಯನ್ನು ಹಸ್ತಗತ ಮಾಡಿಕೊಂಡ ಮಹನೀಯರು. ಒಂದೋ ಎರಡೋ ವಾಕ್ಯಗಳಲ್ಲಿಯೇ ತಮ್ಮ ಅಭಿಪ್ರಾಯವನ್ನು ಸರಳವಾಗಿ ತಿಳಿಸುವುದರಲ್ಲಿ ಇವರು ನುರಿತ ಪ್ರವೀಣರು. ಅದೇ ವಿಚಾರವನ್ನು ಬೇರೆಯವರು ಪ್ರಕಾಶಪಡಿಸುವುದಾದರೆ, ಒಂದೆರಡು ಪುಟಗಳಷ್ಟಾದರೂ ಬೇಕಾಗಬಹುದು. ಇವರ ಪತ್ರಗಳಲ್ಲಿ ಆವಶ್ಯಕ "ಅಭಿಪ್ರಾಯ"ವು ಯಾವ ಕಟ್ಟು ಪಾಡಿನ ಸಂಕಲೆಗಳಿಗೂ ಸಿಕ್ಕಿಬೀಳದೆ ನೇರವಾಗಿ ವ್ಯಕ್ತಪಡುತ್ತದೆ. ಪ್ರಾಯಃ ಭಾರತದ ರಾಜಕಾರಣಿಗಳಲ್ಲಿ ಈ ರೀತಿಯಲ್ಲಿ ಪತ್ರ ಬರೆಯುವ ಮಹನೀಯರು ಇವರೊಬ್ಬರೇ ಆಗಿದ್ದಾರೆನ್ನಬಹುದು.

ಪಂಡಿತ ಬನಾರ್ಸಿದಾಸ ಚತುರ್ವೇದಿಯವರ ಹಿಂದಿಯ ದೊಡ್ಡ ಬರಹಗಾರರು. ಅವರು ಬರೆದ ವೈಯಕ್ತಿಕ ಪತ್ರಗಳನ್ನು ಒಮ್ಮೆ ಓದಿದರೆ ಮತ್ತೂ ಮತ್ತೂ ಓದಬೇಕೆನಿಸುತ್ತದೆ. ದಿವಂಗತ ಸಚ್ಚಿದಾನಂದ ಸಿಂಹರೂ ಒಬ್ಬ ಉಚ್ಚ ವರ್ಗದ ಪತ್ರ ಲೇಖಕರು.

ಪತ್ರ ಲೇಖನದ ಕಲೆಯನ್ನು ಕರಗತ ಮಾಡಿಸಿಕೊಳ್ಳುವುದೂ ಇತರ ಕಲೆಗಳನ್ನು ಹಸ್ತಗತ ಮಾಡಿಕೊಳ್ಳುವಂತೆಯೇ ಪ್ರಯಾಸವಾದುದು. ಅದಕ್ಕೂ ಪ್ರತಿಭೆ, ಅಧ್ಯಾಸಗಳು ಪರಿಕರವಾಗಬೇಕು. ಬಿಚ್ಚು ಮನಸ್ಸಿನಿಂದ ಅಭಿಪ್ರಾಯವನ್ನು ವ್ಯಕ್ತಪಡಿಸುವ ಸಹೃದಯತೆ ಇರಬೇಕು. ವತ್ತಾಯಕ್ಕೆ ಬರೆಯವನ ಪತ್ರ ಯಾಂತ್ರಿಕ ಪತ್ರವಷ್ಟೆ. ನಾವು ಯಾವ ಉದ್ದೇಶಕ್ಕಾಗಿ ಪತ್ರ ಲೇಖನವನ್ನು ಬಳಸಬಯಸುವೆವೋ ಆ ಉದ್ದೇಶವನ್ನು ಸುಲಲಿತವಾಗಿ ರಸಿಸುವುದು ಅಗತ್ಯ. ಅದು ಆಯಾ ಉದ್ದೇಶಕ್ಕನು ಗುಣವಾದ ಶೈಲಿಯಿಂದ ಕೂಡಿರುವುದು ಯೋಗ್ಯ.

ಪತ್ರ ಲೇಖನವು ಹಿಂದೊಮ್ಮೆ ಹಸ್ತದಿಂದಲೇ ನಡೆಯುತ್ತಿತ್ತು. ಇದೀಗ ಯಾಂತ್ರಿಕೋಪಕರಣಗಳು ಆದಕ್ಕೆ ಒತ್ತಾಸೆಯಾಗುತ್ತವೆ. ಹಸ್ತಾಕ್ಷರದಲ್ಲಿ ಬರೆದ ಪತ್ರಗಳಿಗೆ ಒಂದು ಕಾಲದಲ್ಲಿ ಅಧಿಕ ಮಾನ್ಯತೆಯಿತ್ತು. ಈಗ ಮಾತ್ರ ಟೈಪ್ ರೈಟರ್‌ಗಳು ಪ್ರಚಾರದಲ್ಲಿ ಬಂದಿವೆ. ಇವು ವಿವಾಹ ಸಮಾರಂಭದ ಆಮಂತ್ರಣ ಪತ್ರಿಕೆ ಕಳಿಸಿದಂತೆ—ಬಂದು ಹೇಳುವ ಬದಲು! ಹಸ್ತಾಕ್ಷರಗಳು ಸುಂದರವಾಗಿರದೆ ಸೊರಟಾಗಲಾರಂಭಿಸಿದುದು ಇಂತಹ ಸಲಕರಣೆಗಳು ಬಂದನಂತರ. ಅಂತೂ ಹಸ್ತಾಕ್ಷರಕ್ಕೂ ಪತ್ರಲೇಖನದಲ್ಲಿ ಮಹತ್ವದ ಸ್ಥಾನವಿದೆ ಎನ್ನುವುದು ಸ್ಪಷ್ಟಿತ.

"ಶತಂವದ ವಿಕಮಪಿ ಮಾಲಿಖಾ" ಎಂಬುದೊಂದು ವಚನವು ಸಂಸ್ಕೃತ ಭಾಷೆಯಲ್ಲಿದೆ. ದೂರದಲ್ಲಿರುವವರೊಡನೆ ವ್ಯವಹಾರವನ್ನು ನಡೆಯಿಸುವುದು, ತನ್ನ ಶತ್ರುವಿಗೆ ಆವಾಜ್ಯಶಬ್ದಗಳಿಂದ ಬೈಯುವುದು ಪತ್ರ ಲೇಖನವಿಂದಲೇ ಸುಲಭ ಸಾಧ್ಯವಾದೀತು. ಎದುರಾಎದುರು ಬೈಯುವುದಸಾಧ್ಯವಾದಲ್ಲಿ ಒಂದು ಪತ್ರವು ಮೂಲಕ ತನ್ನ ಚಪಲವನ್ನು ತೀರಿಸಿಕೊಳ್ಳಬಹುದು. ಅದುದರಿಂದಲೇ ಈ ಪತ್ರಗಳು ಈಗ ಆಫೀಸುಗಳಿಗೆ ಬಂದಿವೆ.

ಕಲೆಯು ಕಲೆಗಾಗಿರಬೇಕಲ್ಲದೆ ಜೀವನೋಪಾಯಕ್ಕಾಗಿಯಲ್ಲ. ಹಾಗೆಯೇ ಪತ್ರಲೇಖನವೂ. ನಮಗೆ ನಮ್ಮ ಅಭಿಪ್ರಾಯವನ್ನು ದೂರದಲ್ಲಿದ್ದವನಿಗೆ ತಿಳಿಸಿದರೆ ಸಾಲದು, ಹಾಗೆ ತಿಳಿಸುವಾಗ, ಅದನ್ನು ಸುಂದರವಾಗಿ ಸಂಸ್ಕೃತ ಪದ್ಧತಿಯಲ್ಲಿ ತಿಳಿಸುವುದು ಯುಕ್ತವಲ್ಲವೆ? ನೀವು ಹಾಗೆ ತಿಳಿಸಿದೆರೆಂದೆ, ಪತ್ರ ಲೇಖನವು ಕಲೆಯನ್ನು ಹಸ್ತಗತವಾಗಿಸಿಕೊಂಡಿರೆಂದು ತಾತ್ಪರ್ಯ.

ಆದುದರಿಂದ, ನಮ್ಮ ವ್ಯವಹಾರಕ್ಕೆ ಪ್ರಮುಖ ಸಾಧನವೆಂದು ಪರಿಗಣಿತವಾದ ಈ ಪತ್ರ ಲೇಖನ ಕಲೆಯನ್ನು ನಾವೆಲ್ಲರೂ ಅಭ್ಯಾಸಮಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಹಾಗೆ ಮಾಡದಿರೆ ಮಾತ್ರ ಆ ಕಲೆಯು ಮುಂದಕ್ಕೂ ಬಾಳಿಕೊಂಡಿರಬಲ್ಲುದು. ಇಲ್ಲವಾದರೆ, ನಮ್ಮ ಹಲವಾರು ಕಲೆಗಳಂತೆಯೇ ಇದೂ ಯಾಂತ್ರಿಕತೆಯಾಗಿ ತನ್ನ ನೈಜತೆಯನ್ನೂ ನೈಸರ್ಗಿಕತೆಯನ್ನೂ ಕಳೆದುಕೊಳ್ಳುವುದರಲ್ಲಿ ಸಂದೇಹವಿಲ್ಲ. ಸ್ವತಂತ್ರ ಭಾರತದ ಪ್ರತ್ಯೇಕ ಪ್ರಜೆಯೂ ತನ್ನ ವ್ಯವಹಾರದಲ್ಲಿ ಈ ಒಂದು ಧ್ಯೇಯವನ್ನು ಇಟ್ಟುಕೊಳ್ಳಲಿ.

(ವಿವಿಧ ಸೂಲಗಳಿಂದ)

—ಎಸ್. ಗೋಪಾಲಂದ ರಾವ್, ಉಡುಪಿ.

### ಸೆಕೆಂಡರಿ ಶಾಲೆಗಳು

ತಮ್ಮ ಉಪಯೋಗಾರ್ಥವಾಗಿ 'ನವಯುಗ' ವಾರಪತ್ರಿಕೆಯನ್ನು ತರಿಸಿಕೊಳ್ಳಬಹುದೆಂದು Roc. No. 466-N/50 ತಾ. 12-12-50ನೇ ಪ್ರೊಸಿಡಿಂಗ್ಸಿನಂತೆ ಮದ್ರಾಸು ಸರಕಾರದ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ನವರು ಮಂಜೂರು ಮಾಡಿದ್ದಾರೆ.

ಈ ಪತ್ರಿಕೆ ಜಂದಾವಾರರಾಗಿರದ ಯಾವತ್ತೂ ಸೆಕೆಂಡರಿ ಶಾಲೆಗಳವರು ನವಯುಗಕ್ಕೆ ಚಂದಾವಾರರಾಗಿ ತರಿಸಿಕೊಂಡು ಪ್ರೋತ್ಸಾಹಿಸುವಂತೆ ಈಮೂಲಕ ವಿನಂತಿಸಿಕೊಳ್ಳಲಾಗಿದೆ.

ಮೆನೇಜರ್.




## ಕುಮಾರಿ ಬಿಲ್ಲಿಗಳು

**Govt. Regd.**

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. ೫/- ದೀರ್ಘಕಾಲದ ಬಾಧೆಗೆ ರೂ. 8/- (ನಿ.ಪಿ.ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

**P. DEVEE & Co.** (N. J.) CALCUTTA—40.

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ರಚಿತವಾದ—

## ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ

ಬೆಲೆ:— ಸಾಧಾರಣ ಪ್ರತಿ— ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವ ಸ್ಥಳ:—

ನವಭಾರತ ಪುಸ್ತಕ ಭಂಡಾರ, ಉಡುಪಿ.

.... ಹೊಸ ಪುಸ್ತಕ ....

ಆಲ್ಫ್ರೆಡ್ ನಾರ್ಥ್ ವ್ಹೈಟ್‌ಹೆಡ್ ಬರೆದ

## ಶಿಕ್ಷಣದ ಧ್ಯೇಯಗಳು

ಮತ್ತು ಇತರ ಪ್ರಬಂಧಗಳು

ಅನುವಾದಕರು:

ಕೆ. ಬಿ. ರಾಮಕೃಷ್ಣ ರಾವ್, ಬಿ. ಎ. (ಆನರ್ಸ್)

ಉ. ಲಕ್ಷ್ಮೀನಾರಾಯಣಾಚಾರ್ಯ, ಎಂ. ಎ; ಎಲ್. ಟಿ.

ಬೆಲೆ: 2—4—0 / 2·25 ರೂ.

ಪ್ರಕಾಶಕರು:

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ.

## ಕಾಂಗ್ರೆಸ್ಸಿನ ಶುದ್ಧೀಕರಣ

(ನಿನ್ನೆ ಸುಟದಿಂದ)

ವಹಿಸಬೇಕು, ಅವರೊಂದಿಗೆ ಸೇರಿ ಲಸ ಮಾಡಬೇಕು ಹಾಗಾದರೆ ಮಾತ್ರ ಂಗ್ರೆಸ್ಸ್ ಅಭಿವೃದ್ಧಿಯಾಗುವುದು. ಕಾಂ ಸ್ಸಿನ ಸಾಧನೆಗಳಲ್ಲಿ ಐಕ್ಯವೇ ಪ್ರಧಾನ ತ್ವವನ್ನು ಪಡೆದಿದೆ

ಭಾರತದಲ್ಲಿ ಕಳೆದ ಕೆಲವು ವರ್ಷಗ ಂದ ಕಾಂಗ್ರೆಸ್ ಸರಕಾರಗಳು ಸಾಕಷ್ಟು ಲಸವನ್ನು ಮಾಡಿವೆ. ಅವು ಈ ದೇಶದ ನರಿಗಿಂತ, ಪಂಡೀತೀಯರ— ವಿರೋಧಿ ಷ್ಟ್ರಗಳ— ಪ್ರಶಂಸೆಯನ್ನು ಹೆಚ್ಚಾಗಿ ಪಡೆದಿದೆ. ಅಮೇರಿಕದ ದೊಡ್ಡ ವಿಮರ್ಶ ಕರಾದ ಡಾ. ಜಿಸ್ಲೆ ಬೇಯವರು "ಭಾರತ ಸರಕಾರವು ಇಷ್ಟೊಂದು ಕಾರ್ಯಗಳನ್ನು ಮಾಡಿದ್ದರೂ ಇಲ್ಲಿಯ ಜನತೆಯು ಟೀಕಿಸುತ್ತಿರುವುದು ಆಶ್ಚರ್ಯದ ಸಂಗತಿ" ಎಂದು ಅಭಿಪ್ರಾಯ ಪಟ್ಟಿದ್ದಾರೆ. ಈ ತರದ ಜನತೆಯ ಟೀಕೆಗಳಿಗೆ ನಾವು ಕಾರಣರಲ್ಲ. ಇತರ ಪಕ್ಷಗಳೂ ಕಾರಣವಲ್ಲ. ಶತಮಾನಕಾಲದಿಂಬಲೂನಡೆದುಬಂದ ದಾರಿಗೊಡನೆ ನಾವು ಇಂದು ಸಮರಹೂಡಬೇಕಾಗಿದೆ. ಈ ಸ್ವಾಭಾವಿಕತೆಯನ್ನು ಕಾಂಗ್ರೆಸ್ ಪಕ್ಷವು ಜನತೆಗೆ ಮನದಟ್ಟು ಮಾಡಬೇಕಾಗಿದೆ.

ಈ ಚುನಾವಣಾಕಾಲದಲ್ಲಿ ಪಕ್ಷದ ಹೆಸರನ್ನೇ ಎತ್ತದ ಕಾಂಗ್ರೆಸ್ ಉಮೇದು ವಾರಿಗಳಿದ್ದಿರೆಂಬ ಸುದ್ದಿ ಬಂದಿದೆ. ಅವರು ಕಮ್ಮ ಕುರಿತಾಗಿಯೇ ಪ್ರಚಾರವನ್ನು ಮಾಡುತಿದ್ದರು. ವೈಯಕ್ತಿಕ ವಿಚಾರಗಳಿಗೆ ಪಕ್ಷದಲ್ಲಿ ಸ್ಥಾನವಿರಬಾರದು. ಹೆಚ್ಚು ಹಣವನ್ನು ವೆಚ್ಚ ಮಾಡಿದರೆ, ಅದರಿಂದ ಉತ್ತಮ ಪರಿಣಾಮವೆಂದಿಗೂ ಆಗಲಾರದು. ಜನರು ಹಣವೇ ಸರ್ವ ಶಾರ್ಯಗಳನ್ನೂ ಮಾಡಿಸುವುದೆಂದು ನಂಬುತ್ತಾರೆ. ಸಾಮಾನ್ಯ ಕಾರ್ಯಗಳಿಗೆ ಹಣ ಬೇಕಾಗಬಹುದು: ಕೇವಲ ಹಣ ಕ್ಕಾಗಿಯೇ ಜಾಯಿ ಬಿಡುವವನು ಪರಿಸ್ಥಿತಿಯನ್ನರಿಕೊಂಡಿಲ್ಲವೆಂದು ಕೀಳ ಬೇಕಾಗಿದೆ.

ಆಡಳಿತೆಗೂ ಪಕ್ಷಕ್ಕೂ ಇರುವ ಸಂಬಂಧದ ಕುರಿತು ನಾವು ಮಾತಾಡುತ್ತೇವೆ. ಆಡಳಿತೆಯು ವಿಧಾನವು ತೃಪ್ತಿಕರವಿಲ್ಲವಾದರೆ, ಕಾಂಗ್ರೆಸ್ ಸಂಸ್ಥೆಯೂ ಅದರ ಕಟು ಅನುಭವಗಳನ್ನು ಮಾಡಿಕೊಳ್ಳಬೇಕಾಗಿದೆ. ಕಮ್ಯೂನಿಸ್ಟ್ ರಾಷ್ಟ್ರಗಳಲ್ಲಿ ಆಡಳಿತೆ ಮತ್ತು ಪಕ್ಷಗಳೊಳಗೇ ಅಂತರವೇ ಇರುವುದಿಲ್ಲ. ನಮ್ಮ ರಾಷ್ಟ್ರ ಘಟನೆಯು ಅವಕ್ಕೆ ಸರಿಯಾಗಿಲ್ಲ. ಅದನ್ನು ನಾವು ಬಯಸುವುದೂ ಇಲ್ಲ. ಪಕ್ಷವು ಜನತಾ ಬೆಂಬಲವನ್ನು ಗಳಿಸಿಕೊಂಡು ಅಧಿಕಾರಕ್ಕೆ ಬರಬಹುದು ಆಷ್ಟೆ. ಸರಕಾರವೇ ಆಡಳಿತೆಯ ಸರ್ವಾಧಿಕಾರಿಯು. ಘಟನೆಗನುಗುಣವಾಗಿ ಮಾತ್ರ ಪಕ್ಷಗಳು ಅಧಿಕಾರಕ್ಕೆ ಬರಬಹುದು.

ಈ ಪಕ್ಷಗಳು ಜನತೆಯ ವಿಶ್ವಾಸವನ್ನು ಬೆಳೆಸಿಕೊಳ್ಳಬೇಕು. ಇಂಗ್ಲೆಂಡಿನ ರಾಜಕೀಯ ಪಕ್ಷಗಳನ್ನು ನೋಡಿದರೆ ಅಲ್ಲಿ ಲೇಬರ್ ಮತ್ತು ಕನ್ಸರ್‌ವೇಟ್ಸ್ ಪಕ್ಷಗಳಿವೆ. ಆವುಗಳು ಪ್ರತಿಯೊಬ್ಬ ನಾಗರಿಕನನ್ನೂ ತಮ್ಮ ಪಕ್ಷದ ಸದಸ್ಯರ

## ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಸುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ನ.)

### ಆಯುರ್ವೇದ ಸಮಸ್ಯೆಯ ಕುರಿತು ಪ್ರಶ್ನೋತ್ತರ ಮಾಲಿಕೆ.

ಲೇಖಕ ಮತ್ತು ಪ್ರಕಾಶಕ: ಆಯುರ್ವೇದ ಭೂಷಣ ಮತ್ತು ವಿಕಾರದ ಡಾ| ಐ. ಕೆ. ಪಿ. ಶರ್ಮಾ. ಎ. ಯಂ. ಎ. ಪಿ. ಮಂಗಳೂರು 3. ಭಾರತೀಯ ಆಯುರ್ವೇದ ಪ್ರಕಾಶನ ಗ್ರಂಥಮಾಲೆಯ 4ನೇ ಪುಷ್ಪ ಕ್ರೌನ್ $\frac{1}{8}$ ಆಕಾರದ 18 ಪುಟಗಳು, ಬೆಲೆ 0-1-0.

ಆಯುರ್ವೇದವು ಭಾರತೀಯ ಪದ್ಧತಿಯ ಪ್ರಸಿದ್ಧ ಚಿಕಿತ್ಸಾ ಪದ್ಧತಿ. ನಮ್ಮ ಸ್ವಕೀಯ ಸರಕಾರ ನಮ್ಮ ಪದ್ಧತಿಗೆ ಸಾಕಷ್ಟು ಬೆಂಬಲ ಪ್ರೋತ್ಸಾಹಕೊಡುವಂತೆ ಅದರ ಲಕ್ಷವನ್ನು ಸೆಳೆಯುವುದೂ ಜನತೆಯಲ್ಲಿ ಆಯುರ್ವೇದದ ಕುರಿತು ಜಾಗೃತಿಯನ್ನು ಹುಟ್ಟಿಸುವುದೂ ಈ ಕರು ಹೊತ್ತಿಗೆ ಪ್ರಕಟನೆಯ ಉದ್ದೇಶವೆಂದು ಕಾಣುತ್ತಿದೆ. ಸುಮಾರು 12 ಪ್ರಶ್ನೆಗಳನ್ನು ಕೇಳಿ ಅನಂತ್ರ ಸಮರ್ಪಕವಾದ ಉತ್ತರವನ್ನು ಕೊಡುವುದರ ಮೂಲಕಉದ್ದೇಶವನ್ನು ಲೇಖಕರು ಸಾಧಿಸಿದ್ದಾರೆ ಕೊನೆಯಲ್ಲಿ ಆಯುರ್ವೇದದ ಉದ್ಧಾರಕ್ಕೆ ಕೆಲವು ರಚನಾತ್ಮಕ ಸೂಚನೆಗಳೂ ಇವೆ.

ಭಾರತೀಯ ಜೀವಮಾನ, ಜೀವಮಾನ, ಇತ್ಯಾದಿಗಳಿಗೆ ಸಂಪೂರ್ಣ ಹೊಂದಿಕೆಯುಳ್ಳ ಪದ್ಧತಿಯೇ ಆಯುರ್ವೇದ. ಅದರ ತೀಕ್ಷ್ಣ ಪರಿಣಾಮಕಾರಿಯಲ್ಲವೆಂಬ ದೂರು ಕೇಳಿ ಬರುತ್ತಿದೆ. ಅನುಕೂಲ ಜಾಸ್ತಿಯಾದಲ್ಲಿ ಅವಘಡವೂ ಹೆಚ್ಚು; ತೀಕ್ಷ್ಣ ಗುಣಕಾರಿಯೆನ್ನುವ ಎಫೆಡ್ರಿನ್, ಕಲ್ಪಡ್ರಗ್ಸ್‌ಗಳಿಂದ ಆಚೆಗೆ ಆಪಾಯವು ಇದೆಯೆಂದು ಬಲ್ಲವರು ಹೇಳುತ್ತಾರೆ. ಸಿಬಜೋಲ್ 693 ಮಾತ್ರೆಗಳು ಲಕ್ಷಾಂತರ ಮಕ್ಕಳ ಪ್ರಾಣ ಉಳಿಸಿವೆ ಎನ್ನುವವರೇ ಮುಂದೆ ಪೆನ್ಸಲಿನ್ ಇಂಜಕ್ಷನ್ ಸಹಾ ಈ ಔಷಧ ತಿಂದ ದೇಹ ಪ್ರಕೃತಿಯ ಮೇಲೆ ಪರಿಣಾಮವಾಡುವುದಿಲ್ಲವೆನ್ನುತ್ತಾರೆ. ಕ್ಲೋರಾಮ್ಫೆನೆಟೋನ್, ಪೆನಸಿಲಿನ್, ಇತ್ಯಾದಿ ನವೀನ ಔಷಧಗಳು ಅಮೃತದಂತೆ ಜೀವಪ್ರದವಾಗಿರುತ್ತವೆ ಎಂಬುದೂ ಸಹಜವಲ್ಲ. ಅದರೆ ಆಯುರ್ವೇದ ಸಹಾ ಆಮೂಲ್ಯ ಪ್ರಯೋಗಗಳಿಂದ ಕೂಡಿಯೇ ಇದೆ. ಭಯಂಕರವಾದ ವಿಷ್ಟೀರಿಯವನ್ನು ರಕ್ಷ್ಮ ಚಿಕಿತ್ಸೆಯಿಲ್ಲದೆಇ ಒರಿದು ಮೂಲಿಕೆಯನ್ನು ಅರೆದು ಲೇಪಿಸಿದ್ದ, ಸೇವಿಸಿದ 1-2ತಾಸುಗಳಲ್ಲಿ ಗುಣಮಾಡಬಲ್ಲ ಮೂಲಿಕೆ ನಮ್ಮ ಹಳ್ಳಿಯ ಪಂಡಿತರಲ್ಲಿದೆ.

ವಿಷಯವು ಎಷ್ಟೇ ವಿವಾದಾಸ್ಪದವಿದ್ದರೂ ನಮ್ಮ ಸರಕಾರ ಆಯುರ್ವೇದ ಪದ್ಧತಿಗೆ ಸಾಕಷ್ಟು ಪೋತ್ಸಾಹಕೊಟ್ಟಿದ್ದು; ಆತೀ ಅಗ್ಗವಾದ, ದುಷ್ಪರಿಣಾಮವಿಲ್ಲದ ಔಷಧಿಗಳನ್ನು ನಮ್ಮ ಬಡ ಜನತೆಯು ಪಡೆಯಬಹುದು. ವಿಚಾರ ಲಹರಿಯನ್ನು ಎಬ್ಬಿಸಿ, ಪರಿಣಾಮಕಾರಿಯಾಗಿ ವಿಷಯವನ್ನು ನಂಂಡಿಸಿದ ಡಾ|| ಶರ್ಮರ ಸಾಹಸ ಸ್ತುತ್ಯ.

**ಶುಭದಾ:** ಮೂಲ ಲೇಖಕರು. ಶರಚ್ಚಂದ್ರ ಚಟರ್ಜಿ. ಅನುವಾದಕರು ಎ. ಶಂಕರ. ಪ್ರಕಾಶಕರು ಕಾವ್ಯಾಲಯ ಮೈಸೂರು. ಕ್ರೌನ್ $\frac{1}{8}$ ಆಕಾರದ 216ಪುಟಗಳು. ಬೆಲೆ ರೂ. 1.50ನಯಾಪೈಸೆ. (1-8-0)

ಸ್ತ್ರೀಯು ಸಸನೆಯ ಮೂರ್ತಿ ಎಂಬುದ ಪಟ್ಟಿಯಲ್ಲಿ ಸೇರಿಸಿಕೊಳ್ಳಲು ಬಯಸಿ, ಪ್ರಯತ್ನಮಾಡುತ್ತವೆ. ಜನತೆಯೊಂದಿಗೆ ನಿಕಟ ಸಂಪರ್ಕವನ್ನಿಟ್ಟುಕೊಂಡು ದರಿಂದ ಜನತಾ ವಿಶ್ವಾಸವನ್ನು ಪಡೆದಿವೆ. ಆಂತೆಯೇ ಕಾಂಗ್ರೆಸ್ ಪಕ್ಷವೂ ದೇಶದ ಜನರೊಂದಿಗೆ ಆದನ್ನು ಹೆಚ್ಚು ಹೊಂದಿಕೊಂಡು ಅವರ ವಿಶ್ವಾಸವನ್ನು ಪಡೆಯಬೇಕು. ಇದು ಕಾಂಗ್ರೆಸ್ಸಿಗರ ಇಂದಿನ ಕರ್ತವ್ಯವಾಗಿದೆ.

ಪಕ್ಷದ ಬಲವು ಬೆಳೆಯಬೇಕಾದರೆ, ಉತ್ಪಾಕ್ಷದಿಂದ ಕಾರ್ಯಶೀಲರಾಗಬೇಕು. ವ್ಯಕ್ತಿಗತ ವ್ಯಾಮುಖ್ಯವನ್ನು ಬದಿಗೊತ್ತಿ ಪಕ್ಷದ ನೇಲ್ಮೈಗಾಗಿ ದುಡಿಯಬೇಕು. ನಿಸ್ವಾರ್ಥ ಸೇವೆ, ಪ್ರಾಮಾಣಿಕತೆ, ವಿಶ್ವಾಸ ಮತ್ತು ತ್ಯಾಗಗಳಿಂದಲೇ ಕಾಂಗ್ರೆಸ್ ಹಿಂದೊಮ್ಮೆ ಜನ ಬೆಂಬಲವನ್ನು ಗಳಿಸಿತು; ಇನ್ನು ಮುಂದಕ್ಕೂ ಹಾಗೆ ಬಾಳಿದರೇನೇ ಜನರ ನೆರವನ್ನು ಪಡೆಯಬಲ್ಲುದು. ಆದುದರಿಂದ ಕಾಂಗ್ರೆಸ್ ಕಾಲದ ಪರಿಸ್ಥಿತಿಯನ್ನು ಸರಿಯಾಗಿ ಅರ್ಥಮಾಡಿಕೊಂಡು ಮುನ್ನಡೆಯಬೇಕಾಗಿದೆ. ಆದಕ್ಕಾಗಿ ಕಾಂಗ್ರೆಸ್ಸ್ ಸದಸ್ಯರು ಮನೆಮನೆ ದುಡಿಯಬೇಕಾಗಿದೆ. ಅಧಿಕಾರ ಲಾಲಸೆ ಹಣದ ಮೇಲಿನ ಪ್ರೇಮಗಳು ಕೇವಲ ವ್ಯಕ್ತಿಗಳನ್ನು ಅಧೋಗತಿಗಿಳಿಸುವುದಲ್ಲ, ಪಕ್ಷದ ಕೀರ್ತಿಗೇನೇ ಕಲಂಕವ್ಯಾಯವಾಗುವುದು.

ಪ್ರಧಾನಿ ನೆಹರೂರವರ ಕಳಕಳಿಯ ಕೇಳಿಕೆಗಳು ನಿರಾಧಾರವಾದುವಲ್ಲ. ಕಾಂಗ್ರೆಸ್ ಜನ ಬೆಂಬಲವನ್ನ ನಿಜವಾಗಿಯೂ ಕಳೆಯುಕೊಳ್ಳುತ್ತಿದೆ. ಜನನಾಯಕ ನೆಹರೂರವರ ಮೇಲಿನ ಉಪದೇಶದತ್ತ ಗಮನವೀಯುವುದು ಆಗತ್ಯ. ಹಾಗೆಗ ಮನವಿತ್ತು ಪಕ್ಷದ ಹಿಂದಿನ ಘನತೆಯನ್ನು ಮುಂದಕ್ಕೂ ಉಳಿಸಿಕೊಳ್ಳುವಂತೆ ಹೆಣಗಾಡಿದರೆ ಮಾತ್ರ ಈ ಉಪದೇಶಗಳು ಸಾರ್ಥಕಗೊಂಡಾವು ಆದುದರಿಂದ ಕಾಂಗ್ರೆಸ್ಸಿಗರಿತ್ತ ಕವಿಗೊಡುವರೆ?


ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

# ಮನೆ-ಮದ್ದು

**HOME REMEDIES**

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ.ಎಮ್.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ ರೂ. ೨—೦—೦ (ಟ. ಖರ್ಚು ಬೇರೆ).

**ನವಭಾರತ ಪುಸ್ತಕ ಭಂಡಾರ, ಉಡುಪಿ.**


ನ್ನು ಸರಿಣಾಮಕಾರಿಯಾಗಿ ಚಿತ್ರಿಸಿಲ್ಪಟ್ಟಿರ ಆತ್ಯುತ್ತಮ ಕಾದಂಬರಿಯಿದು.

ಹಲವಾರ್ ಮುರೆದ ಹಾರಾಜ್ ಜೆಂದ್ರ ಜೋಪಾಧ್ಯಾಯನು ಪತ್ನಿ ಸುಭದೆ ಮು ಮಕ್ಕಳೊಡನೆ ಸಂಸಾರ ನಡೆಸುತ್ತಾ ಇರು ನೆ. ಜಮೀನ್ದಾರ ನಂದೀ ಬಾಬುಗಳಲ್ಲಿ ಲಸಕ್ಕಿದ್ದು ಸಂದರ್ಭಸಿಕ್ಕಿದಂತೆ ಡುಗೆ ಗೊಡುತ್ತಾ ಜಮೀನ್ದಾರರಿಂದ ಬಂಧಿಶ ಡುವನು. ಪತ್ನಿ ಸುಭದೆ ಸ್ನೇಹಿತೆ ದಿಂದೂ ನೆರೆ ನಿಂದ ಔಷಧಿಯನ್ನು ಸುಣಗುತ್ತಳಿರ ಮಾಡುವಳು. ಮುಖೋಪಾಧ್ಯಾಯ ಜಾ ಯನ್ನು ಹುಡುಕಿಕೊಂಡು ಶಿಕ್ಷ ಸಿಕ್ಕಿದ್ದಲ್ಲಿ ಲಿಯುತ್ತಾ ಇರುತ್ತಾನೆ ಮಗ ಮೊಥವ ಜೇನೆಯಿಂದ ನರಳುತ್ತಾ ಇರುತ್ತಾನೆ. ಕೇ ದೊರಕಿಸಿಕೊಳ್ಳುವ ಬದಲಿಗೆ ಮುಖೋ ಧ್ಯಾಯ ನಾನಾ ದುರಾಚಾರಗಳಿಗೆ ಬಲಿಬಿ ಹೆಂಡತಿಯಿಂದಲೇ ಕಾನು ಕಸಗೊಳ್ಳುತ್ತಾ ಮಗಳು ಲಲನಾ ಬಾಲವಿಧವೆ. ತಾಯಿ ದು: ಖದಲ್ಲಿ ಬಹುನಾಗಿ ಸಹಕರಿಸುತ್ತಾಳೆ. ಪ ದೆ ತನ್ನನ್ನು ಪ್ರೀತಿಸುತ್ತಿದ್ದ ವಿವಾಹಿತ ಕೆಂದು ದೇವಿದ್ದ ಶಾರದಚರಣ ನ್ನು ಕರ ಗಳ ಹಿಂದೆ ತಿರಸ್ಕರಿಸಿದ್ದ ಲಲನೆ ಈಗ ವೆಯೊಪವೇರಿ, ಕೆಪ್ಪಗಳಲ್ಲಿ ಪಾಲುಗಾರಿ ದಾರಿತೋರಿದೆ ತನ್ನನ್ನು ವಿವಾಹವಾಗೆಂ ಶಾರಾವಾಚರಣನನ್ನು ಆದೇ ಬಾಯಿಂದ ಹೆತ್ತಾಳೆ. ಅದರೆ ವಿಧವೆಯೆಂದು ಅತ ತಿರಸಿಸುತ್ತಾನೆ. ತಂಗಿ ಭಲನಾಳನ್ನು ವಿವಾಹ ಗು ಎನ್ನುತ್ತಾಳೆ. ಹಾಗಾದರೂ ತಮ್ಮ ಬಾ ನಕ್ಕೆ ಒಂದು ಆಧಾರವಿಗಲಿ ಎಂದು ಪಣ ಸೆಯ ತಂದೆಯ ಹೆದರಿಕೆಯಿಂದ ಅವಕ್ಕೂ ತ ಒಪ್ಪುವುದಿಲ್ಲ. ಮಾಧವನ ಕಾಯಿಲೆ ರಿತವಾಗುತ್ತದೆ. ಲಲನಾಳೊಡನೆ ಅತ ರ್ಗಲೋಕದ ಸಂಚಾರವಿಘದ ಘಟ್ಟಿ ಬ್ಬ ಮಾತನಾಡುತ್ತಾನೆ. ಹುಚ್ಚು ಸದಾ ವ ಪ ಎಂದ ಜನರಾಡುತ್ತಿದ್ದ ಸಿದಾನಂದ ಚ ತರ್ತಿ ಲಲನಾಳ ಸ್ಥಿತಿಯ ಸಂಪೂರ್ಣ ಅ ನ್ನು ಮಾಡಿಕೊಳ್ಳುತ್ತಾನಾದರೂ ಸಭ್ಯ ರಿ ಯಲ್ಲೇ ಸಭಳರಿಯುತ್ತಾನೆ. ಮೃತ್ಯುಮುಖದ ರುವ ಮಾಧವ, ಕಪ್ಪಗಳ ಕಾಪ್ಪದಲ್ಲಿ ಬೇರ ತ್ತಿರುವ ತಾಯಿ, ಈ ಮುರಂತ ಚಿತ್ರಗಳಿಗೆ ಸಹಸನೆ ಲಲನಾ ಕಲಕತ್ತೆಯ ಕಡೆಗೆ ಹೊ ಟವಳು ಶ್ರೀಮಂತ ಜಮೀನ್ದಾರ್ ಸುರೆ ದ್ರನಾಥನಿಂದ ರಕ್ಷಿಸಿಲ್ಪಡುತ್ತಾಳೆ. ಜನರ ೊ ಆಳೆಯು ಸತ್ಯಳೆಂದೇ ಭಾವಿಸುತಾ ಮಾಧವನು ನಧಿವಶನಾಗುತ್ತಾನೆ. ತೀರಿಹೆ ಗುವ ಮುಂಚೆ ಲಲನಾಳು ಸದಾನಂದನ ಹೇಳಬೇಕೆಂದು ತಿಳಿಸಿದ್ದ ಮಾತುಗಳನ್ನು ಳುತ್ತಾನೆ. ವಿಘಟೂಪದಿಂದ ಸುರೇಂದ್ರನಾ ನ ಪ್ರೇಯಸಿ ಮಾಲತಿ ತೀರಿಹೋಗಿ, ಲಲ ಯನ್ನು ಅತ ತನ್ನ ಹೃದಯದ ಸಮ್ರಾಪ ಸೆಳೆಮಕೊಳ್ಳುತ್ತಾನೆ. ಲಲನೆ ಆಪ್ರತ್ಯಕ್ಷ ಗಿ ಬುಧದೆಗೆ ದ್ರವ್ಯ ಸಹಾಯ ಕಳುಹಿಸುತ ಳೆ. ಮನಸ್ಸಿನ್ಲಿದ ಮನಸ್ಸಿನಿಂದ ಬುಧದಾ ಹಣನನ್ನು ಸ್ವೀಕರಿಸುತ್ತಾಳೆ ಆದರೆ ಆಕೆಂ ಪತಿ ರಾತ್ರಿಕಾಲದಲ್ಲಿ ಮುಖಕ್ಕೆ ಮುಸು ಹಾಕಿಬಂದು ಕಳ್ಳನಂತೆ ಅವನ್ನು ಒಯ್ಯುತ್ತ ನೆ. ಇಸ್ಯಾದರೂ ಬುಧವೆ ನಂದನನ್ನು ತಾತ ರದಿಂದ ಕಾಣುವುದಿಲ್ಲ. ಪತಿದೇವನು ಪೂ ರ್ಣನೆಂಬ ಆಕೆಯ ಭಾವನೆ ಬದಲಾಗುವು ಲ್ಲ.

ಶರಚ್ಚಂದ್ರರ ಕಾದಂಬರಿಗಳು ಪ್ರಸಿ ದೆಂದು ಬೇರೆ ಬಿಡ್ಡಿಸಬೇಕಿಲ್ಲ. ಅಮ ಲ್ಯವಾದ ಈ ಕೃತಿಯು ಅನುವಾದ ಸ್ಯಕಾರ ಗಳಿಂದ ಕನ್ನಡಿಗರಿಗೆ ತುಂಬಾ ಉಪಯೋ ವಾಗಿದೆ. ಕನ್ನಡ ಜನತೆ ಈ ಕಾದಂಬರಿ ನ್ನು ಕೊಂಡು ಓದಬೇಕು. ತಾಯಂದಿರು ನ್ನು ಕಷ್ಟಕಾಲದಲ್ಲಿ ಧುಧದಾಳೆಯನ್ನು ಸ್ಮರಿಸ ಕು ಸಂಸಾರದಲ್ಲಿ ಬೆಳಗಲು ಬಾಳಲು ಕಾದಂಬರಿಯು ಸಹಾಯಮಾಡಿಯೇ ತೀರು ದು— ಆತ್ಯುತ್ತಮ ಕಾದಂಬರಿಗಳ ಸಾಲಿ ಲ್ಲಿರುವ ರುಕ್ಷಾ ಕಾದಂಬರಿಯು ಬೇಗ ದ್ವಿತೀಯ ಮುದ್ರಣ ಕಾಣಲಿ

—ದಾಂ


ನವಯುಗಕ್ಕೆ ಚಂದಾದಾ
ರರಾಗಿ ಪ್ರೋತ್ಸಾಹಿಸಿರಿ


Edited, Printed & Published by K. H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment

# ನವಯುಗ

ಸಂಪುಟ ೩೬
VOL. 36

16—5—1957

ಸಂಚಿಕೆ ೩೬
NO. 36

## ಕೈಮಗ್ಗದ ಬಟ್ಟೆಗಳು

### ಬದಲಾಗುತ್ತಿರುವ ಜನಾಭಿರುಚಿಗೆ ತಕ್ಕ ವಸ್ತ್ರ ನಿರ್ಮಾಣವಾಗಲಿ

ಈ ತಿಂಗಳ ೫ರಿಂದ ೧೧ನೆಕೆ ದಿನಾಂಕದ ವರೆಗೆ ಭಾರತದಾದ್ಯಂತ ಕೈಮಗ್ಗ ಸಪ್ತಾಹವನ್ನು ಆಚರಿಸಲಾಯಿತು. ಭಾರತದ ಜನಾದಿಕಾಲದ ಕೈಗಾರಿಕೆಯಾದ ಈ ಕೈಮಗ್ಗಗಳಲ್ಲಿ ಉತ್ಪಾದಿಸಿದ ಬಟ್ಟೆಗಳಿಗೆ ಯೋಗ್ಯ ಪ್ರಸಾರವನ್ನೊದಗಿಸಿಕೊಡುವುದು ಈ ಸಪ್ತಾಹದ ಉದ್ದೇಶವಾಗಿದೆ. ಸುಮಾರು ನಾಲ್ಕು ವರ್ಷಗಳಿಂದಲೂ ಇಂತಹ ಸಪ್ತಾಹವನ್ನು ಆಚರಿಸಿ ಭಾರತದ ಹಿರಿಯ ನುಡಿ ಕೈಗಾರಿಕೆಗೆ ತಕ್ಕ ಪ್ರೋತ್ಸಾಹವನ್ನೊದಗಿಸಲು ಪ್ರಯತ್ನಿಸಲಾಗಿದೆ.

ಗಾಂಧೀಜಿಯವರ ಆಕ್ಟೋಬರದಲ್ಲಿ ಅಖಿಲ ಭಾರತ ಕೈಮಗ್ಗ ಮಂಡಲಿಯನ್ನು ಸ್ಥಾಪಿಸಿ ಕೈಮಗ್ಗದ ಕೈಗಾರಿಕೆಗೆ ಸಂಬಂಧಿಸಿದ ಸಮಸ್ಯೆಯನ್ನು ಪರಿಶೀಲಿಸಿ ಅದರ ಅಭಿವೃದ್ಧಿಗಾಗಿ ಏನಾಗಬೇಕಾದ ಆಗತ್ಯ ಕಾರ್ಯಕ್ರಮಗಳನ್ನು ಸೂಚಿಸಲು ಭಾರತ ಸರಕಾರವು ಕೇಳಿಕೊಂಡಿತು. ಈ ಮಂಡಲಿಯು ಕೈಮಗ್ಗ ಕೈಗಾರಿಕೆಯ ಅಭಿವೃದ್ಧಿಗೆ ಹಾಗೂ ಪುನರ್ವ್ಯವಸ್ಥೆಗೆ ಸಹಕಾರ ಪದ್ಧತಿಯೇ ಆತ್ಯುತ್ತಮವಾದೆಂಬ ಅಭಿಪ್ರಾಯವನ್ನು ಸೂಚಿಸಿತು. ಭಾರತ ಸರಕಾರದವರೂ ಈ ಸಲಹೆಯನ್ನು ಸ್ವೀಕರಿಸಿ, ಕಣಕಾಸಿನ ಸಹಕಾರವನ್ನು ಕೈಮಗ್ಗ ಕೈಗಾರಿಕೆಗೆ ನೀಡಲು ನಿರ್ಧರಿಸಿದರು.

ಕೈಗಾರಿಕೆಯು ಅಭಿವೃದ್ಧಿಯಾಗಲು ಅತ್ಯವಾವ ಸಾಮಾನ್ಯ ನಿಯಮಗಳನ್ನು ಈ ಮಂಡಲಿಯು ಆಗಾಗ ಸಂಕಾಂದನುಮತಿ ಪಡೆದು ಸೂಚಿಸಿ, ಈ ಸಂಬಂಧದ ಪ್ರತ್ಯೇಕ ಯೋಜನೆಗೂ ಕೊಡಬೇಕಾದ ಹಣಕಾಸಿನ ಸಹಾಯವನ್ನೂ ಮಂಡಲಿಯು ಸೂಚಿಸಿದೆ. ಎಲ್ಲ ಕ್ಷೇತ್ರಗಳಲ್ಲಿ ಕೈಗಾರಿಕೆಯನ್ನು ಪರಿಶೀಲಿಸಿ ಕೈಗಾರಿಕಾ ಸಂಸ್ಥೆಗಳಿಗಾಗಿ ಒಂದು ಸಾಮಾನ್ಯ ಕಾರ್ಯನೀತಿಯನ್ನು ಈ ಮಂಡಲಿಯು ರೂಪಿಸಿದೆ. ಅವುಗಳನ್ನು ಸರಕಾರದ ಮೂಲಕ ಶಾಸನರೂಪಕ್ಕೆ ಕೇಂದ್ರ ಸರಕಾರದ ಅನುಮತಿ ಪಡೆದು ರಾಜ್ಯ ಸರಕಾರಗಳು ತರುತ್ತವೆ.

ಮಂಡಲಿಯು ಕೈಮಗ್ಗ ಕೈಗಾರಿಕೆಯ ಪರಿಸ್ಥಿತಿಯನ್ನವಲೋಕಿಸಿತು. ಈ ಬಟ್ಟೆಗಳು ಯೋಗ್ಯ ಗಿರಾಕಿಗಳಿಲ್ಲದೆ ಕೊಳೆಯುವುದು ಪ್ರಮುಖವಾದ ದೋಷವಾಗಿತ್ತು. ಗಮನಾರ್ಹ ಸಂಖ್ಯೆಯಲ್ಲಿ ನೇಯ್ಗೆಯವರಿಗೆ ಉದ್ಯೋಗವಿರಲಿಲ್ಲ ಬಡತನದಿಂದಾಗಿ ಅನುವಂಶಿಕ ವೃತ್ತಿಯನ್ನು ಕೃಷಿಯ ಪೇಟೆ ಪಟ್ಟಣಗಳನ್ನು ಸೇರಿಕೊಂಡಿದ್ದರು ಆದುದರಿಂದ ಕೈಗಾರಿಕೆಯು ಪುನರ್ವ್ಯವಸ್ಥೆಯತ್ತ ಮಂಡಲಿಯು ಗಮನವಿತ್ತಿತು. ಈಗ ಕೇಂದ್ರ ಹಾಗೂ ರಾಜ್ಯ ಸರಕಾರಗಳ ಸಹಾಯ ಸಹಕಾರಗಳಿಂದ ಈ ಕೈಗಾರಿಕೆಯು ಕರ್ನಾಟಕಮಯ ಸನ್ನಿವೇಶದಿಂದ ಹೊರಬಂದು ಶಾಶ್ವತವಾದ ಬುನಾದಿಯ ಮೇಲೆ ನಿಂತಿದೆಯೆನ್ನಬಹುದು. ಈ ಮಂಡಲಿಯ ಅಭಿವೃದ್ಧಿ ಸೂಚನೆಗಳನ್ನು ಮೂರು ವಿಧಗಳಾಗಿ ವರ್ಗೀಕರಿಸಬಹುದು (೧) ನೈಸರ್ಗಿಕ ಸಹಕಾರ ಕ್ಷೇತ್ರದ ವ್ಯಾಪ್ತಿಗೆ ಹೆಚ್ಚಿನ ಸಂಖ್ಯೆಯ ಮಗ್ಗಗಳನ್ನು ತರುವುದು. (೨) ಮಾರುಕಟ್ಟೆ—ಕೈಮಗ್ಗ ಬಟ್ಟೆಗಳ ಮಾರಾಟಕ್ಕೆ ವ್ಯವಸ್ಥೆ ಮತ್ತು (೩) ತಾಂತ್ರಿಕ—ಉತ್ಪಾದನೆಯನ್ನು ಉತ್ತಮಗೊಡಿಸುವುದು ಹಾಗೂ ಹೆಚ್ಚು ಮಾಡುವುದು.

ಸಹಕಾರ ತತ್ವಗಳನ್ನು ಮೂಲವಾಗಿಟ್ಟು ಈ ಕೈಗಾರಿಕೆಯನ್ನು ಸುಲಭದಲ್ಲಿ ಅಭಿವೃದ್ಧಿಗೊಳಿಸಬಹುದು. ಇದುವರೆಗಿನ ಪರಿಶೀಲನೆಯಿಂದ ಈ ಸಂಗತಿ ಸ್ಪಷ್ಟಗೊಳ್ಳುತ್ತದೆ. ದೇಶದಲ್ಲಿನ ಒಟ್ಟು ೨೬,೮೦,೦೦೦ ಮಗ್ಗಗಳಲ್ಲಿ ೬,೮೨,೦೦೦ ಮಗ್ಗಗಳು ಗಣಿಸಲ್ಪಟ್ಟ ಸಹಕಾರಿ ವ್ಯವಸ್ಥೆಯಿಂದ ನಡೆಯುತ್ತಿದ್ದುವು. ಈಗ ಇಂತಹ ವ್ಯಾಪ್ತಿಗೊಳಪಟ್ಟ ಮಗ್ಗಗಳು ೧೧ಲಕ್ಷ. ಸಹಕಾರ ಸಂಸ್ಥೆಗಳಲ್ಲಿ ಸದಸ್ಯರಾದ ನೇಕಾರರಿಗೆ ಕಾರ್ಯ ಬಂಡವಾಳ ಮತ್ತು ಪಾಲು ಬಂಡವಾಳಗಳಿಗಾಗಿ ಹಣವನ್ನು ಒದಗಿಸಲಾಗಿತ್ತು.

ಕೈಮಗ್ಗದ ಬಟ್ಟೆಗಳಿಗೆ ಗಿರಾಕಿಗಳನ್ನು ಹುಡುಕುವುದು ಈ ಕಾಲದಲ್ಲಿ ಸ್ವಲ್ಪ ಪ್ರಯಾಸಕರವಾದುದು ಆದರೂ ದರಗಳಲ್ಲಿ ರಿಯಾಯಿತಿಕೊಡುವ ಮೂಲಕ ಬಳಕೆದಾರರನ್ನು ಆಕರ್ಷಿಸಲಾಯಿತು. ರಾಜ್ಯ ಸರಕಾರಗಳು ಎಂಪೋರಿಯಂಗಳು ಮತ್ತು ಮಾರಾಟ ಕೇಂದ್ರಗಳನ್ನು ಪಡೆಯುವಂತೆಯೂ ಈ ಮಂಡಲಿಯು ಯೋಜನೆಗಳನ್ನು ರೂಪಿಸಿತು. ಈವರೆಗೆ ೧,೬೦೦ ಮಾರಾಟ ಕೇಂದ್ರಗಳನ್ನು ಸ್ಥಾಪಿಸಲಾಗಿದೆ ೩೭ 'ಚಲಿಸುವ ಗಾಡಿ''ಗಳನ್ನೂ ಏರ್ಪಡಿಸಲಾಗಿದೆ ಸರಕಾರವು ಸಾಕಷ್ಟು ಧನ ಸಹಾಯವನ್ನು ಇದಕ್ಕಾಗಿ ಕೊಡುತ್ತಿದೆ.

ಕೈಮಗ್ಗದ ಬಟ್ಟೆಗಳನ್ನು ದೊರುವಂತೆ ಇಲ್ಲದಿಲ್ಲ ಅವು ವಿಲ್ಲ ಬಟ್ಟೆಗಳಷ್ಟು ನಾಜೂಕಾಗಿರುವುದಿಲ್ಲ ಈ ಅಂಶವನ್ನು ಗಮನಿಸಿ ಈ ಕೈಗಾರಿಕೆಯು ತಾಂತ್ರಿಕವಾಗಿ ಬೆಳವಣಿಗೆಯನ್ನು ಉತ್ತಮಪಡಿಸಲು ಗಮನವೀಯಲಾಗಿತ್ತಿದೆ. ಉತ್ತಮ ಮಗ್ಗಗಳು ಉಪಕರಣಗಳನ್ನೂ ವರ್ಣ ಸಾಮಗ್ರಿಗಳನ್ನೂ ಒದಗಿಸಲಾಯಿತ. ಈ ಯೋಜನೆಗಳಿಗೆ ಅಲ್ಪಕಾಲಾವಧಿಯ ಸಾಲದ ರೂಪದಲ್ಲಿ ಸಹಾಯ ಕೊಡಲಾಯಿತು. ಪ್ರಯೋಜಿತ ಮಗ್ಗಗಳಲ್ಲಿ ಸುಮಾರು ೪೬,೦೦೦ ಮಗ್ಗಗಳನ್ನು ಆಧುನಿಕ ಗೊಳಿಸಲಾಗಿದೆ. ಉತ್ತಮ ನಮೂನೆಗಳನ್ನು ಸಿದ್ಧಪಡಿಸಿದವರಿಗೆ ಬಹುಮಾನ ಕೊಡುವುದು, ಅವೆಕ್ಸ್ ಮತ್ತು ಮೂಲ ನೇಕಾರರ ಸಂಘಗಳ ಕೆಲಸಗಾರರಿಗೆ ತರಬೇತಿ, ನಮೂನೆಗಳನ್ನು ತಯಾರು ಮಾಡುವ ಕೇಂದ್ರ ಕೈಮಗ್ಗದ ವಸ್ತ್ರಗಳಿಗೆ ಗುಣಾಂಕ, ಹೆತ್ತೋಟಿ, ವಸ್ತು ಪ್ರದರ್ಶನಗಳ ವ್ಯವಸ್ಥೆಗಳನ್ನು ಮಾಡಲಾಯಿತು.

ನೇಕಾರರ ವಸತಿಗಳ ಪುನರುಜ್ಜೀವನ ನೇಕಾರರ ಸಹಕಾರ ಸಂಸ್ಥೆಗಳಲ್ಲಿ ಸರಕಾರದವರು ಪಾಲು ತೆಗೆದುಕೊಳ್ಳುವುದು ಮೊದಲಾದ ಕಾರ್ಯಕ್ರಮಗಳನ್ನು ಕೈಗೊಳ್ಳಲಾಯಿತು. ಹಲವಾರು ವಸತಿ ಸ್ಥಳಗಳನ್ನು ಈಗಾಗಲೇ ಮಂಜೂರು ಮಾಡಿದೆ.

ಕೈಮಗ್ಗ ಬಟ್ಟೆಗಳ ನಿರ್ಯಾತ ವಿಜಾರವನ್ನೆ ಲಕ್ಷಿಸಿ, ಕೊಲಂಬೊ, ಬಗದಾದ ರಂಗೂನ ಮತ್ತು ಸಿಂಗಾಪುರಗಳಲ್ಲಿ ಕೈಮಗ್ಗ ವಸ್ತ್ರಗಳ ವಿಕ್ರಯ ಮಳಿಗೆಗಳಲ್ಲಿ ಅಧಿಕಾರಿಗಳನ್ನು ನಿಯುಕ್ತಿಗೊಳಿಸಲಾಗುವುದು. ಸಿಂಗಾಪುರ ಮತ್ತು ಬಗದಾದಗಳಲ್ಲಿ ಈಗಾಗಲೇ ಅಧಿಕಾರಿಗಳಿರುವರು. ಕೊಲಂಬೊ ಮತ್ತು ಏಡನ್, ಸಿಂಗಾಪುರ, ಬಗದಾದ ವತ್ತು ಕೌಲಾಲಾಂಪುರಗಳಲ್ಲಿ ಮಾರುಕಟ್ಟೆ ಕೇಂದ್ರಗಳಿರುವುವು. ಇದರೊಂದಿಗೆ ರಂಗೂನಿನಲ್ಲಿ ಪ್ರತಿನಿಧಿಕ ವ್ಯವಸ್ಥೆಯೂ ಇರುವುದು.

ಅವೈರಿಕ ದೇಶದ ಮಾರುಕಟ್ಟೆಗಳಲ್ಲಿ ಕೈಮಗ್ಗದ ವಸ್ತ್ರಗಳ ಬಗ್ಗೆ ಹೆಚ್ಚು ಆಸಕ್ತಿ ಕಂಡು ಬರುತ್ತಿದೆ ಇದರ ಸದುಪಯೋಗವನ್ನು ಮಾಡಿಕೊಳ್ಳುವುದಕ್ಕಾಗಿ ಅಲ್ಲಿನ ಜನರ ಅಭಿರುಚಿಗನುಗುಣವಾದ ರೀತಿಯ ಬಟ್ಟೆಗಳನ್ನು ಉತ್ಪಾದಿಸುವ ಸಲುವಾಗಿ ಸಲಹೆ ಪಡೆಯಲು ಭಾರತ ಸರಕಾರದವರು ಇತ್ತೀಚೆಗೆ ಅಮೆರಿಕದ ಪ್ರವೀಣರ ತಂಡವೊಂದನ್ನು ಭಾರತಕ್ಕೆ ಆಹ್ವಾನಿಸಿದ್ದರು. ಈ ತಂಡವು ದೇಶದಲ್ಲಿನ ಪ್ರಮುಖ ಕೇಂದ್ರಗಳಿಗೆ ಸಂದರ್ಶಣೆಯಿತ್ತು ಉತ್ತಮ ಮಟ್ಟದ ಕೈಮಗ್ಗದ ಬಟ್ಟೆಗಳಿಗೆ ಅಮೆರಿಕದಲ್ಲಿ ಬೇಡಿಕೆ ಇದೆಯೆಂದೂ, ಭಾರತದ ಕೈಮಗ್ಗಗಳಲ್ಲಿ ಅಲ್ಲಿನ ಮಾರುಕಟ್ಟೆಗಳಿಗೆ ಅಗತ್ಯವಾದ ವಸ್ತ್ರಗಳನ್ನು ಉತ್ಪಾದಿಸುವ ಸಾಮರ್ಥ್ಯವಿದೆಯೆಂದೂ ತನ್ನ ಅಭಿಪ್ರಾಯವಿತ್ತಿತು. ಈ ಮಂಡಲಿಯ ವಿಸ್ತೃತ ವರದಿಯಲ್ಲಿ ಮೇಲಿನ ಸತ್ಯಗಳನ್ನು ಕಾಣಿಸಿದ್ದಾರೆ ವರದಿಯನ್ನು ಭಾರತ ಸರಕಾರವು ಪರ್ಯಾಲೋಚಿಸುತ್ತಿದೆ.

(೧೨ನೇ ಪುಟ ನೋಡಿ)

SEASON DEPOSITS
ಸೀಸನ್ ಠೇವಣಾತಿಗಳು

ಸೇ. 4% ದರ ಬಡ್ಡಿಯಲ್ಲಿ ಸೀಸನ್ ಠೇವಣಾತಿಗಳನ್ನು ಈಗ ಸ್ವೀಕರಿಸಲಾಗುವುದು.

ದೊಡ್ಡ ಡಿಪೊಜಿಟು ಮೊಬಲಗುಗಳಿಗೆ ಸ್ಪೆಶಲ್ ಬಡ್ಡಿ ದರಗಳು.

ಹೆಚ್ಚಿನ ವಿವರಗಳಿಗೆ ನಮ್ಮನ್ನು ವಿಚಾರಿಸಿರಿ

ದಿ ವಿಜಯ ಬೇಂಕ್ ಲಿಮಿಟೆಡ್
ಪ್ರಧಾನ ಕಛೇರಿ ಮತ್ತು ಶಾಖೆಗಳು.

ಜುಮ್ಮಾ ಸಂಪತ್ತು (13—12—1956) | ರೂಪಾ 1 ಕೋಟಿಗೂ ಮಿಕ್ಕಿದೆ.

## ಬೌದ್ಧಮತ

# ಗೌತಮ ಬುದ್ಧನ ಮೂಲ ತತ್ತ್ವಗಳು ಸಕಲ ಮತ ಸಮ್ಮತವಿವೆ.

ಯದಾ ಯದಾಹಿ ಧರ್ಮಸ್ಯ ।
ಗ್ಲಾನಿರ್ಭವತಿ ಭಾರತ
ಅಭ್ಯುತ್ಥಾನಮಧರ್ಮಸ್ಯ ।
ತದಾತ್ಮಾನಂ ಸೃಜಾಮ್ಯಹಂ ॥
ಪರಿತ್ರಾಣಾಯ ಸಾಧೂನಾಂ ।
ವಿನಾಶಾಯ ದುಷ್ಕೃತಾಮ್
ಧರ್ಮಸಂಸ್ಥಾಪನಾರ್ಥಾಯ ।
ಸಂಭವಾಮಿ ಯುಗೇಯುಗೇ ॥

೪-೭, ೮.

ಇದು ಭಾರತದ ಜನರ ಹೃದಯದಲ್ಲಿ ಅನಂತಕಾಲ ಪೂರ್ವದಿಂದಲೂ ದೃಢವಾಗಿ ನಟ್ಟ ಪರಮಾತ್ಮನ ಮಾತುಗಳು. ಭಾರತದ ಸಾರವೆಂದು ಕರೆಯಲಾದ ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ತಿಳಿಸಿದ ಸತ್ಯಸಂಗತಿ. ಈ ಸಂಬುಗೆಯಿಂದಲೇ ಭಾರತೀಯರಲ್ಲಿ ಸಾಧು ಸಜ್ಜನರ ಕಡೆಗೆ ಒಂದು ಅಲೌಕಿಕವಾದ ಗೌರವ ಬೆಳೆದು ಬಂದಿದೆ. ಅದರ ಮೂಲದಿಂದಲೇ ಮಹಾತ್ಮರನ್ನು ಗೌರವಿಸುವ ಅಸಾಮಾನ್ಯ ಸಹೃದಯತೆ ಅವರ ಹೃತ್ಪುಟದಲ್ಲಿ ಬೇರೂರಿದೆ. ಈ ಭವ್ಯವಾದ ತಿಳುವಳಿಕೆಯು ಕಾಲ್ಪನಿಕವಾದುದಿರಬಹುದಾದರೂ, ಜನರ ಸುಖಕ್ಕಾಗಿ, ಅವರ ಏಳಿಗೆಗಾಗಿ ದುಡಿದ, ದುಡಿಯುತ್ತಿರುವ ವ್ಯಕ್ತಿಗಳನ್ನು ಮಹಾತ್ಮರೆಂದು ತಿಳಿದು ಆದರಿಸುವುದು ಈ ಒಂದು ಸುಂದರ ಹಾಗೂ ಶೋಭನ ಕಲ್ಪನೆಯಿಂದಾಗಿ ಆದುದರಿಂದ, ಈ ಕಲ್ಪನೆಯ ಮೇಲೆ ಭಾರತೀಯರಿಗೆ ಅಚಲ ವಿಶ್ವಾಸ. ಆದು ಕಲ್ಪನೆಯೆಂಬ ಕಾಲ್ಪನಿಕತೆಯೇ ಅವರಲ್ಲಿಲ್ಲ. ಸತ್ಯವೆಂಬಷ್ಟೇ ಅವರ ಮನಸ್ಸಿನಲ್ಲಿ ಪರಿಣಾಮ ಮಾಡಿದೆ.

ಜನರು ದುರ್ಮಾರ್ಗಕ್ಕೆಳಿದಾಗ, ದುಷ್ಟರು ಅಧಿಕವಾದಾಗ, ಸನ್ಮಾರ್ಗನಿರತರಿಗೆ ತಮ್ಮ ಮಾರ್ಗದಲ್ಲಿ ಎರಡು ತೊಡರುಗಳು ಕಾಣಿಸಿಕೊಂಡಾಗ, ಪರಪೀಡಕರನ್ನು ನಾಶಗೊಳಿಸಿ, ಜನರಲ್ಲಿ ಬಿಲವಾಗುತ್ತಿರುವ ಧರ್ಮವನ್ನು ಪುನಃ ಸಂಸ್ಥಾಪಿಸುವುದಕ್ಕಾಗಿ ಪರಮಾತ್ಮನು ಆಗಾಗ ಈ ಭೂಮಿಯಲ್ಲಿ ಅವತಾರ ಮಾಡುತ್ತಾನೆ. ಆತ ತಾನು ಇಳೆಯಲ್ಲಿ ಜನಿಸುವಾಗ ಹೇಳಿ ಹುಟ್ಟುವುದಿಲ್ಲ. ಇಂತಹ ದಿನ ಆತನು ಜನಿಸುತ್ತಾನೆ ಎಂದು ತಿಳಿಯುವುದೇ ಇಲ್ಲ. ಆದರೂ ಆಳಿದುಳಿದ ಜ್ಞಾನಿಗಳು ಮಾತ್ರ ಆತನ ಹುಟ್ಟನ್ನು ತಿಳಿಯಬಲ್ಲರು. ಆದರೆ, ಅಂತಹ ದಿವ್ಯಯೋಗಿಗಳ ಸಂಖ್ಯೆ ತೀರಾ ಅತ್ಯಲ್ಪ. ಅಂತಹ ಸಂಕಟಮಯ ಸಮಯದಲ್ಲಿ ಮಾನವ ಮಾನವರ ನಡುವಿನಲ್ಲಿ ಮಾನವ ಸಾಮಾನ್ಯನಾಗಿಯೇ ಜನಿಸಿ ಮಾನವರಿಗೆ ಮಾನವೀಯತೆಯ ಅರಿವನ್ನು ಮಾಡಿಕೊಟ್ಟು ತನ್ನ ಪೂರ್ವಕಾರಿಕೆಯನ್ನು ಸುಯೋಗ್ಯ ರೀತಿಯಲ್ಲಿ ನಿರ್ವಹಿಸಿ ತನ್ನ ಅವತಾರವನ್ನು ಅತ್ಯಂತಗೌಳಿಸುವ ಆ ಪರಮಾತ್ಮನು ಮತ್ಸ್ಯಾದಿ ಸಹಸ್ರಾವತಾರಿಯೆಂದು ನಮ್ಮ ಹಿಂದೂ ಪುರಾಣಗಳಲ್ಲಿ ಹೇಳಿದೆ. ಇಂತಹ ಭಗವಂತನ ಅವತಾರಗಳಲ್ಲಿ ಬೌದ್ಧಾವತಾರವೂ ಒಂದು. ಇದು ಆತನ ಒಂಭತ್ತನೆಯ ಅವತಾರವಾಗಿದೆ.

ಈ ಅವತಾರಗಳು ಐತಿಹಾಸಿಕ ದೃಷ್ಟಿಯಿಂದ ಮಾತ್ರ ಸ್ವಲ್ಪ ಸಂಶಯಾತ್ಮಕವಾಗಿವೆ. ಆದರೆ, ಬೌದ್ಧಾವತಾರವು ಮಾತ್ರ ಈ ದೃಷ್ಟಿಯಲ್ಲಿಯೂ ಸತ್ಯವಾಗಿದೆ. ಕ್ರಿ. ಪೂ. ಜಒ೦(೫೪೫)ರಲ್ಲಿ ಜನಿಸಿ ಕ್ರಿ. ಪೂ. ೪೮೦ (೪೬೩) ರಲ್ಲಿ ಪರಿನಿರ್ವಾಣವನ್ನು ಹೊಂದಿದ ಕಪಿಲವಸ್ತುವಿನ ರಾಜಕುಮಾರ ಸಿದ್ಧಾರ್ಥನೇ ಮುಂದಕ್ಕೆ ಪ್ರಪಂಚ ದುಃಖಮಯವಾಗಿರುವುದನ್ನು ತಿಳಿದುಕೊಂಡು ಜನತೆಯು ಶಾಶ್ವತಸುಖ ಪ್ರಾಪ್ತಿಗಾಗಿ ಕೈಗೊಳ್ಳಬೇಕಾದ ವಿಧಾನವನ್ನು ಕಂಡುಹಿಡಿಯುವ ಸಲುವಾಗಿತನ್ನ ಎಳೆ ವಯಸ್ಸಿನಲ್ಲಿ ಅಭಿನಿಷ್ಕ್ರಮಣವನ್ನು ಹೊಂದಿ, ಏಳು ವರ್ಷಗಳ ಕಾಲ ವಿವಿಧ ಬಾಧೆಗಳನ್ನು ಸಂಕಟಿಸಿ, ಘೋರ, ತಪಸ್ಸನ್ನು ಮಾಡಿ, ನುಂದಿನ ೪೫ ವರ್ಷಗಳಲ್ಲಿ ಜನತೆಗೆ ಯೋಗ್ಯ ಉಪದೇಶವಿತ್ತು ಈ ನಶ್ವರವಾದ ಪ್ರಪಂಚದ ಜೀವನದಲ್ಲಿ, ಮುಂದೆ ಸುಖಮಯವನ್ನಾಗಿ ಮಾಡುವ ತತ್ತ್ವಗಳನ್ನು ಬೋಧಿಸಿದ ಬುದ್ಧನು. ಈತನನ್ನೇ ಹಿಂದೂ ಜನರು ಪರಮಾತ್ಮನ ಅವತಾರಿ ಎಂದು ತಿಳಿದುಕೊಂಡಿರುವರು.

ಭಾರತದಲ್ಲಿ ಕ್ರಿ. ಪೂ. ಆರನೆ ಶತಮಾನದಲ್ಲಿ ಇಲ್ಲಿಯೇ ಹುಟ್ಟಿದ ಜೈನ ಮತ್ತು ಬೌದ್ಧ ಮತಗಳೆರಡೂ ಹೆಚ್ಚು ಪ್ರಚಾರದಲ್ಲಿಲ್ಲ. ಬೌದ್ಧಮತವಾದರೊ, ಭಾರತದ ಮಹಾ ಚಕ್ರವರ್ತಿಗಳ ಪರಿಶ್ರಮದಿಂದಲಾದರೂ ನೆರೆ ರಾಷ್ಟ್ರಗಳಾದ ಬರ್ಮಾ, ಸಿಂಹಳ, ತಿಬೇಟು, ಚೀನ, ಸಯಾಮ, ಜಪಾನ ಮೊದಲಾದ ದೇಶಗಳಲ್ಲಿ ಬನುಕುಳಿದು ಜಗತ್ತಿನ ದೊಡ್ಡ ಮತಗಳಲ್ಲಿ ಒಂದಾಗಿ ಬಾಳಿಕೊಂಡಿದೆ. ಇಂದಿಗೂ ಪ್ರಪಂಚದ ಜನ ಸಂಖ್ಯೆಯಲ್ಲಿ ಏನಿಲ್ಲೆಂದು ಪಾಲು ಬೌದ್ಧ ಧರ್ಮಾವಲಂಬಿಗಳಾಗಿದ್ದಾರೆ ಒಟ್ಟು ಸುಮಾರು ೫೦ ಕೋಟಿ ಜನರು ಈ ಧರ್ಮವನ್ನು ಅನುಸರಿಸುತಿದ್ದಾರೆ.

ಭಾರತವು ಅನೇಕ ಧಾರ್ಮಿಕ ಮನುಜನರಿಗೆ ಜನ್ಮವಿತ್ತ ಪವಿತ್ರ ಭೂಮಿ. ಆರ್ಯರು ಇನ್ನಿಸಿದ ಉಪನಿಷತ್ತುಗಳಿಂದ ನವೀನ ನಾಟಕ ಗ್ರಂಥಗಳ ವರೆಗೂ ಈ ಧರ್ಮದ ಮೇಲೆ ವಿವಿಧ ವಿಮರ್ಶೆಗಳು ಹೊರಡ ತ್ತವೆ. ಆ ಕಾಲದಿಂದ ಈ ಕಾಲದ ವರೆಗೂ ಆಗಾಗ ಮಹಾತ್ಮರು ಜನಿಸಿ, ಜನತೆಗೆ ಧರ್ಮೋಪದೇಶ ಮಾಡುತಿದ್ದಾರೆ. ಆದುದರಿಂದಲೇ ಭಾರತೀಯರ ಜೀವನದಲ್ಲಿ ಧರ್ಮಕ್ಕೊಂದು ವಿಶಿಷ್ಟ ಸ್ಥಾನವಿದೆ. ಎಲ್ಲ ಧರ್ಮಗಳ ಸಾರವೂ ಒಂದೇ. ಸತ್ಯ ಅಹಿಂಸೆ ದಯೆಗಳೇ ಮುಪ್ಪರಿಗೊಂಡು ಮಾನವೀಯತೆಯ ಬಾಳ ನರವಿನ ನೇಣಾಗಿ ಪರಿಣಮಿಸಿದೆ. ದಯವೇ ಧರ್ಮದ ಮೂಲವೆನ್ನುವುದನ್ನು ನಾನಾ ಮತದ ವರು ನಾನಾ ವಿಧಾನವಾಗಿ ವಿವರಿಸುತ್ತಾರೆ. ಶಾಶ್ವತ ಸುಖ ಸಂಪಾದನೆಯೇ ಭಾರತೀಯ ಜೀವನದ ಉದ್ದೇಶ. ನಶ್ವರವಾದ ತನ್ನ ಬಾಳಿನಲ್ಲಿ ಪೂರ್ಣವನು ಯಾವರೀತಿಯಲ್ಲಿ ನಡೆದುಕೊಂಡರೆ ಮಾನವನಾಗಿ ಬಾಳಿ, ಮುಂದೆ ಶಾಶ್ವತ ಸುಖವನ್ನು ಜನ್ಮದಿಂದ–ಮುಕ್ತಿಯನ್ನು–ಪಡೆಯಬಹುದು ಎಂದು ತಿಳಿಸುತ್ತದೆ. ಪ್ರತ್ಯೇಕ ಧರ್ಮವೂ ಇಂತಹ ಹಲವು ಭಾರತೀಯ ದಯಾಮೂಲ ಧರ್ಮಗಳಲ್ಲಿ ಬೌದ್ಧ ಮತವೂ ಒಂದು.

ಕಪಿಲವಸ್ತುವಿನರಸನಾದ ಶುದ್ಧೋದನ ಮಹಾರಾಜನಿಗೆ ಸಿದ್ಧಾರ್ಥನೆಂಬ ಸುಕುಮಾರನು ಜನಿಸಿದಾಗಲೇ ಅರಮನೆಯ ಜೋಯಿಸರು ಕೆಲವಭಿಪ್ರಾಯವನ್ನು ವ್ಯಕ್ತಪಡಿಸಿದರು. ಒಂದೋ ಮಹಾ ಚಕ್ರವರ್ತಿಯಾಗುವನು. ಇಲ್ಲವೇ ಜನರಿಗೆ ಶಾಶ್ವತ ಸುಖವನ್ನೊದಗಿಸುವ ಮಾರ್ಗವನ್ನು ಕಂಡುಹಿಡಿದು ಮಾನವರ, ಮಾನವೀಯತೆಯ ಚಕ್ರವರ್ತಿಯಾಗುವನು. ತಾನು ರಾಜ್ಯದ ಅರಸನಾಮದರಿಂದ ತಂದೆಗೆ ತನ್ನ ಮಗನೂ ತನ್ನಂತೆಯೇ ಅತುಲ ಸಂಪತ್ತನ್ನು ಅನುಭವಿಸಬೇಕೆಂಬ ಇರಾದೆ ಇದ್ದು, ಆತನು ಪುತ್ರನನ್ನು ಬಹಳ ಜಾಗ್ರತೆಯಿಂದ ಜೋಪಾಸನೆಗೊಡಿದನು. ೧೬ನೆ ವಯ್ಯದಲ್ಲಿಯೇ ವಿವಾಹ ಮಾಡಿಸಿದನು. ಕೆಲಸಮಯದಲ್ಲಿಯೇ ಸಿದ್ಧಾರ್ಥನಿಗೆ ಪುತ್ರ ಜನನವೂ ಆಯಿತು. ಆದರೆ, ಸಿದ್ಧಾರ್ಥನ ಮನಸ್ಸು ಸಂಸಾರದಲ್ಲಿ ಬಂಧಕವಾಗಿದ್ದಂತೆ ಆತನಿಗೆ ಅರಿವಾಯಿತು ಪ್ರಪಂಚವು ಸುಖಮಯವೆಂದೇ ತಿಳಿದುಕೊಂಡಿದ್ದ ರಾಜಕುಮಾರ ಅದು ಕೇವಲ ದುಃಖ ಪೂರಿತವೆಂದು ತಿಳಿದುಕೊಂಡನು. ಹಾಗಾಗಿ ಒಂದು ರಾತ್ರಿ ಯಾರಿಗೂ ತಿಳಿಯದಂತೆ ಅರಮನೆಯನ್ನು, ಅಲ್ಲಿನ ಇಹ ಸುಖವನ್ನು, ವಿಪುಲ ಸಂಪತ್ತನ್ನು, ಸೆಜ್ಜೆನ ಮಡದಿ, ಕುಮಾರರನ್ನು ತ್ಯಜಿಸಿ, ಅರಣ್ಯದತ್ತ ಪಯಣ ಗೆಯ್ದನು-ಸಂಕಟದ ಮೂಲವನ್ನು ಕಂಡುಹಿಡಿದು, ಸುಖದ ದಾರಿಯನ್ನು ಕಂಡು ಹಿಡಿಯುವ ಸದುದ್ದೇಶದಿಂದ. ಘೋರಾರಣ್ಯವನ್ನು ಪ್ರವೇಶಿಸಿ, ಅಲ್ಲಿ ನಾನಾ ತೆರದ ವಿಘ್ನಗಳನ್ನು, ಸಂಕಷ್ಟವನ್ನು ಸಹಿಸಿಕೊಂಡು ಅನ್ನನೀರುಗಳನ್ನೂ ತ್ಯಜಿಸಿ, ಧ್ಯಾನಾಸಕ್ತನಾಗಿ ಪ್ರಕೃತಿಯಿಂದ ಪಾಠಗಳನ್ನು ಕಲಿತುಕೊಂಡು ತನ್ನ ಗುರಿಯತ್ತ ನೆಟ್ಟದಿಟ್ಟಿಯನ್ನಿಟ್ಟುಕೊಂಡಿರುವಾಗ ಆತನಿಗೆ ಬಾಹ್ಯ ಪ್ರಪಂಚದ ಅರಿವು ಎಳ್ಳಿನಿತೂ ಬರಲಿಲ್ಲ. ಅವನ ಬುದ್ಧಿ ಮನಸ್ಸು ಸೃಷ್ಟಿಯಲ್ಲಿ ಬ್ರಹ್ಮಾಂಡದಲ್ಲಿ ಪರಬ್ರಹ್ಮಸ್ವರೂಪಿಯಲ್ಲಿ ಕೂಡಿಕೊಂಡಿತ್ತು. ಜ್ಞಾನಚಕ್ಷುಗಳಿಗೆ ಈ ವಿಶ್ವದ ತಿಳಿವು ಆಗ ತೊಡಗಿತು. ಕೋಟ್ಯಂತರ ಸೃಷ್ಟಿಗಳು, ಅವುಗಳಲ್ಲಿ ವಾಸಿಸುತ್ತಿರುವ ಪ್ರಾಣಿಗಳ ಸುಖ ದುಃಖಗಳು, ಸಂತೋಷ ಅಸಮಾಧಾನಗಳು ಅವನ ಗಮನಕ್ಕೆ ಬಂದುವು. ಅಲ್ಲಿ ಸಾತ್ವಿಕರ ಸುಕರ್ಮಗಳು, ಪಾಪಿಗಳ ಪಾಪಕಾರ್ಯಗಳು ಅವನ ತಿಳುವಳಿಕೆಗೆ ಗೋಚರವಾದುವು. ಇವುಗಳ ಹಿಂಬಗಡೆ ಜೀವ ಕೋಟಿಗಳನ್ನು ಮಿಥ್ಯದಿಂದ ಸತ್ಯವೆಡೆಗೆ, ಅಶಾಂತಿಯಿಂದ ಶಾಶ್ವತ ಶಾಂತಿಯೆಡೆಗೆ, ಅನಿತ್ಯ ಸುಖದಿಂದ ನಿತ್ಯ ಸುಖವೆಡೆಗೆ ಕರೆದೊಯ್ಯಲು ನಡೆಯುತಿದ್ದ ಭಗವಂತನ ನಿರಂತರ ಪ್ರಯತ್ನವೂ ಮನವರಿಕೆಯಾಯಿತು. ಆತನ ಕಣ್ಣೆದುರು ಜ್ಯೋತಿಯೊಂದು ಪ್ರಕಾಶಿಸಿ, ಸತ್ಯದ ಅರಿವನ್ನು, ಸಚ್ಚಿದಾನಂದ ಸ್ವರೂಪಿಯ ರೂಪರೇಷೆಗಳನ್ನು ಅವನಿಗೆ ತೋರಿಸಿತು.

ಆಸೆ ಆಕಾಂಕ್ಷೆಗಳನ್ನು ಒಂದು ಜನ್ಮದಲ್ಲಿ ಪೂರಯಿಸಿಕೊಳ್ಳಲಾರದೆ, ಜೀವಗಳು ಪುನರ್ಜನ್ಮವನ್ನು ಪಡೆಯುವುವು. ಈ ವಾಂಛೆಯನ್ನು ಈಡೇರಿಸುವುದಕ್ಕಾಗಿಯೇ ಪ್ರಪಂಚದ ಜೀವಗಳು ಬದುಕಲವ್ಯಳಿಸುವುವು. ಹೇರಡವಿಯನ್ನು ಸುಲಭವಾಗಿ ದಾಟುವ ಹೀರಾಸೆಯನ್ನು ಅವು ಇಟ್ಟುಗೊಳ್ಳುತಿದ್ದುವು. ಮರು ಮರೀಚಿಕೆಯನ್ನು ಬೆನ್ನಟ್ಟುವ ಸಾಹಸವನ್ನು ಬೈಗೊಳ್ಳುತಿದ್ದುವು. ಆದರೂ ತಮ್ಮ ಆಪೇಕ್ಷಿತವನ್ನು ಪಡೆಯಲಾರದೆ ಪ್ರಾಪಂಚಿಕ ವ್ಯವಹಾರಗಳಿಗೆ ಸಂಬಂಧಿಸಿದ ದುಃಖಗಳನ್ನು, ಕಷ್ಟಗಳನ್ನು ಅನುಭವಿಸುತ್ತ ಪುನಃ ಪುನಃ ಹುಟ್ಟಿ ಜನನ ಮರಣಗಳ ಸಂಕ್ಲೇಷವನ್ನು ಅನುಭವಿಸುತ್ತವೆ. ಗೌತಮ ಈ ಕಾರಣವನ್ನು, ಈ ವಾಂಛೆಯನ್ನು ತೊಡೆಹೋಡಿಸುವ ಸುಕರ ಮಾರ್ಗವನ್ನು ತಿಳಿದುಕೊಂಡನು, ಅಂದಿನಿಂದ ಬುದ್ಧನಾದನು.

ನುಂದೆ ತನ್ನ ಜೀವಾವಧಿಯ ಪರ್ಯಂತ ಸುಮಾರು ೪೫ ವರ್ಷಗಳ ಕಾಲ ಗೌತಮಬುದ್ಧನು ನಿರಂತರವಾಗಿ ತಾನು ಕಂಡುಕೊಂಡೆ ಶಾಶ್ವತ ಸುಖದ ಮಾರ್ಗವನ್ನು ಬೋಧಿಸಿ ಸಂಸಾರ ತಾಪತ್ರಯದಿಂದ ಬೆಂದು ಬಸವಳಿದು ದುಃಖಿಸುವ ಮಾನವರದ:ಖವನ್ನೂ ಮರುಹುಟ್ಟನ್ನೂ

(೧೧ನೇ ಪುಟ ನೋಡಿರಿ)

THE
CANARA INDUSTRIAL & BANKING SYNDICATE LTD.
Estd.: 1925, H. O.: UDIPI, S. India.
GROWING
RESOURCES
as on
31-12-1926 – Rs. 17,355
31-12-1936 – Rs. 35,45,544
31-12-1946 – Rs. 4,26,07,093
31-12-1956 – Rs. 10,64,10,312
THANKS
to
our thousands of customers all over the country for their confidence and good-will.
T. A. PAI, B. Com. (Bom.), AIIB., F.R.E.S. (Lond)
General Manager.
DR. T. M. A. PAI, M. B., B. S.,
Managing Director.

## ಶಿಕ್ಷಣ ಮಾಧ್ಯಮ

# ಎಲ್ಲ ಶಾಸ್ತ್ರಗಳನ್ನೂ ಕನ್ನಡದಲ್ಲಿಯೇ ಕಲಿಸುವುದು ಸಾಧ್ಯ

### ಭಾಷೆಗಳ ಪ್ರಶ್ನೆ

ಸಂಸ್ಕೃತಿಯ ಏಳಿಗೆಗೆ ತಳಹದಿಯಾಗುವ ಲೌಕಿಕದ ಚೌಕಟ್ಟಿನ ಸಾಧನೆಗಾಗಿಯೆ ಜನತೆ ಭಾಷಾನುಗುಣ ಪ್ರಾಂತಗಳನ್ನು ಬಯಸಿದ್ದು. ಆಯಾ ಚೌಕಟ್ಟಿನ ಪರಿಮಿತಿಯಲ್ಲಿ ಆಯಾ ದೇಶಭಾಷೆಗಳು ಎಲ್ಲ ವ್ಯವಹಾರಗಳನ್ನೂ ನಡೆಸಬೇಕಾಗಿದೆ. ಆ ವಿಚಾರವಾಗಿ ನಮ್ಮ ಬುದ್ಧಿಯಲ್ಲಿ ಯಾವ ಅನಿಶ್ಚಯತೆಯನ್ನೂ ಇಟ್ಟುಕೊಳ್ಳಬಾರದು. ಪ್ರದೇಶ ಪ್ರದೇಶಗಳ ಮತ್ತು ಪ್ರದೇಶ ಕೇಂದ್ರಗಳ ವ್ಯವಹಾರದ ಸಲುವಾಗಿ ನಮ್ಮ ರಾಜ್ಯಾಂಗ ಒಂದು ಭಾಷೆಯನ್ನೊಪ್ಪಿಕೊಂಡಿದೆ. ಆದರೆ ಆ ಭಾಷೆ ನಮಗೆ ಬಹಿರ್ಮುಖ ಭಾಷಾದೃಷ್ಟಿಯಿಂದ ಪರ್ಯಾಪ್ತವೆ ಬೇಕಾಗಬಹುದಾದ್ದು ವ್ಯಾವಹಾರಿಕ ಮಟ್ಟದಲ್ಲಿ ಅದೂ ಎಲ್ಲರಿಗಲ್ಲ. ಅಂತಹ ವ್ಯವಹಾರಗಳಲ್ಲಿ ಭಾಗವಹಿಸುವವರಿಗೆ ಮಾತ್ರ. ಆಯಾ ಪ್ರದೇಶದ ಸಾಮಾನ್ಯ ಜನತೆಯು ದೈನಂದಿನ ವ್ಯವಹಾರಕ್ಕೂ ಭಾವನಾತ್ಮಕ ಬುದ್ಧಿವೃಷ್ಟಿಯ ಸಾಧನೆಗೂ ವಿಶೇಷವಾದ ಸಾಂಸ್ಕೃತಿಕ ವಿಕಾಸಕ್ಕೂ ಆಧ್ಯಾತ್ಮಿಕ ವಿಕಾಸಕ್ಕೂ ಬೇಕಾದುದು ಆಯಾ ದೇಶಭಾಷೆಯೆ. ಆದ್ದರಿಂದ ಆಯಾ ದೇಶ ಭಾಷೆಗಳ ವಿಷಯದಲ್ಲಿ ಆಯಾ ಪ್ರದೇಶಗಳು ಎಷ್ಟು ಶ್ರಮಿಸಿದರೂ ಸಾಲದಾಗಿದೆ; ಎಷ್ಟು ಪ್ರೋತ್ಸಾಹ ಕೊಟ್ಟರೂ ಎಂದಿಗೂ ಅತಿರೇಕ ಎನಿಸಿಕೊಳ್ಳಲಾರದು. ಸರಕಾರಗಳಾಗಲಿ, ವಿದ್ಯಾಭ್ಯಾಸ ಇಲಾಖೆಗಳಾಗಲಿ, ವಿಶ್ವವಿದ್ಯಾನಿಲಯಗಳಾಗಲಿ, ಇತರ ಸಾಂಸ್ಕೃತಿಕ ಸಂಸ್ಥೆಗಳಾಗಲಿ, ಕಡೆಗೆ ವ್ಯಾಪಾರ ವಾಣಿಜ್ಯಾದಿ ಸಂಸ್ಥೆಗಳಾಗಲಿ ದೇಶ ಭಾಷೆಗೇ ಮೊತ್ತಮೊದಲನೆಯ ಸ್ಥಾನ ಕೊಡಬೇಕು. ಹಾಗೆ ಮಾಡದಿದ್ದರೆ ಪ್ರಜಾಪ್ರಭುತ್ವದ ಬುಡದ ಬೇರಿಗೆ ಬೆಸ್ಸೀ ಬೀರಿದಂತಾಗುತ್ತದೆ.

### ಗಾಂಧೀ ಮಾರ್ಗದರ್ಶನ

ನಮ್ಮ ಭರತವರ್ಷದ ಜನಜೀವನದಲ್ಲಿ ಬೇರೆಬೇರೆ ಭಾಷೆಗಳ ಸ್ಥಾನ ಹೇಗೆ ಇರಬೇಕು ಎಂಬುದನ್ನು ಅನೇಕ ವರ್ಷಗಳ ಹಿಂದೆಯೇ ನಮ್ಮ ಸ್ವಾತಂತ್ರ್ಯ ಶಿಲ್ಪಿ ಪೂಜ್ಯ ಮಹಾತ್ಮಾ ಗಾಂಧಿಜಿಯು ಉಳಿದವರಿಗೆ ಸಾಧ್ಯವಾಗದಿರಬಹುದಾದ ನಿಷ್ಪಕ್ಷಪಾತ ದೃಷ್ಟಿಯಿಂದಲೂ ವಿವಿಧ ಭಾಷಾ ಪ್ರದೇಶಗಳ ಮತ್ತು ಪೂರ್ಣ ರಾಷ್ಟ್ರದ ಸರ್ವಹಿತ ದೃಷ್ಟಿಯಿಂದಲೂ ಸ್ಪಷ್ಟವಾಗಿ ಸಾರಿದ್ದಾರೆ. ಅವರು ಇಡಿಯ ರಾಷ್ಟ್ರದ ವ್ಯವಹಾರಕ್ಕೆ ಹಿಂದಿಯನ್ನೂ ಪ್ರದೇಶಗಳ ವ್ಯಾವಹಾರಿಕ ಚಾರಿತ್ರಿಕ ವೈಜ್ಞಾನಿಕ ಆಧ್ಯಾತ್ಮಿಕಾದಿ ಸಕಲಕ್ಕೂ ಆಯಾ ದೇಶಭಾಷೆಗಳನ್ನೂ, ಅನಿವಾರ್ಯವಾಗಿ ಕೆಲವರಿಗೆ ಮಾತ್ರ ಬೇಕಾಗಿರುವ ರಾಷ್ಟ್ರ-ಭಾಷೆ ಮೊದಲಾದ ಅಂತರರಾಷ್ಟ್ರೀಯ ವ್ಯವಹಾರ ಮತ್ತು ವೈಜ್ಞಾನಿಕ ವ್ಯಾಕರಣಾದಿ ವಿಷಯಗಳಿಗಾಗಿ ಇಂಗ್ಲೀಷನ್ನು ನಿರ್ದೇಶಿಸಿದ್ದಾರೆ. ಇದು ಸರ್ವಸಮ್ಮತವೂ ಆಗಿದೆ. ನಾವು ಆ ಮಾರ್ಗದರ್ಶನದಲ್ಲಿಯೆ ನಡೆಯಬೇಕಾಗಿರುವುದು ಲೇಸು.

ಸ್ವಾತಂತ್ರ್ಯ ಪೂರ್ವ ಕಾಲದಲ್ಲಿಯೇ ಗಾಂಧೀಜಿಯವರು ಹೀಗೆ ಹೇಳಿದ್ದರು—

ಪರಭಾಷೆಯ ಮೂಲಕದ ಶಿಕ್ಷಣದಿಂದ ರಾಷ್ಟ್ರಕ್ಕೆ ಆಗುತ್ತಿರುವ ಜ್ಞಾನ ಹಾನಿ ಮತ್ತು ನೈತಿಕಭ್ರಷ್ಟ ಅಷ್ಟಿಷ್ಟಲ್ಲ. ಆ ನಷ್ಟವೆಷ್ಟು ಎಂಬುದನ್ನು ಬಹುಶಃ ನಮಗಿಂತ ಮುಂದಿನ ಪೀಳಿಗೆಯವರು ಅರಿಯಬಲ್ಲರು... ನಾವು ಅನೇಕ ಆಂಗ್ಲ ಭಾಷೆಯ ಗದ್ದದ ವತ್ತು ಪದ್ಯದ ಅನೇಕ ಪುಸ್ತಕಗಳನ್ನು ಓದಬೇಕಾಗಿತ್ತು.... ಆ ಏಳು ವರ್ಷಗಳ ಕಾಲ ಗುಜರಾತಿಯನ್ನೂ. ಗುಜರಾತಿಯ ಮೂಲಕ ಇತರ ವಿಷಯಗಳನ್ನೂ ಕಲಿತಿದ್ದರೆ ನನ್ನ ನೆರೆಯವರಿಗೂ ಆ ತಿಳಿವನ್ನು ಸುಲಭವಾಗಿ ಹಂಚಬಹುದಾಗಿತ್ತು; ಗುಜರಾತಿ ಸಾಹಿತ್ಯವನ್ನೂ ಬೆಳೆಸಬಹುದಾಗಿತ್ತು. ಜನತೆಗೆ ಇನ್ನೂ ಹೆಚ್ಚಿನ ಸೇವೆ ಸಲ್ಲುತ್ತಿತ್ತು.... ಪರಿಸ್ಥಿತಿ ಏನೆ ಇರಲಿ, ಈ ಕೂಡಲೆ ಶಿಕ್ಷಣ ಮಾಧ್ಯಮ ಬದಲಾವಣೆ ಹೊಂದಬೇಕು. ಈ ದೇಶ ಸ್ವತಂತ್ರವಾದ ಕೂಡಲೆ ಶಿಕ್ಷಣ ಮಾಧ್ಯಮದ ಪ್ರಶ್ನೆ ಪ್ರಶ್ನೆಯಾಗಿಯೆ ಉಳಿಯುವುದಿಲ್ಲ....".

ದೇಶಭಾಷೆಗಳ ಪರವಾಗಿ ಗಾಂಧೀಜಿ ಆ ಮಾತುಗಳನ್ನು ಹೇಳಿ ಇಪ್ಪತ್ತು ವರ್ಷಗಳ ಮೇಲಾಯಿತು. ಈ ಇಪ್ಪತ್ತು ವರ್ಷಗಳಲ್ಲಿ ಸೇತುವೆಯ ಕೆಳಗೆ ಎಷ್ಟೋ ನೀರು ಹರಿದು ಹೋಗಿದೆ. ನಮ್ಮ ದೇಶ ಭಾಷೆಗಳ ಸ್ಥಿತಿ ಅಂದು ಇದ್ದಂತಿಲ್ಲ. ಬುದ್ಧಿ ಸಾಹಿತ್ಯ, ಭಾವ ಸಾಹಿತ್ಯ, ವಿಜ್ಞಾನ ಸಾಹಿತ್ಯಾದಿ ನಾನಾ ಪ್ರಕಾರಗಳಲ್ಲಿ ಅವು ಅಭ್ಯುನ್ನತವಾಗಿ ಮುಂದುವರಿದಿವೆ.

### ಹೆಣಭಾರದ ಹೊರಭಾಷೆಯ ಚಪ್ಪಡಿ

ವಿದ್ಯಾರ್ಥಿಗಳಾಗುವ ನಮ್ಮ ಮಕ್ಕಳ ಮೇಲೆ ನಮಗೇನಾದರೂ ಕರುಣೆಯಿದ್ದರೆ ಮೊದಲು ಅವರ ಎದೆಯ ಮೇಲೆ ಪರಕೀಯರಾದ ಇರಿಟ್ಟು ಹೋಗಿರುವ ಹೆಣಭಾರದ ಹೊರ ಭಾಷೆಯ ಚಪ್ಪಡಿಯನ್ನು ಕಿತ್ತೊಗೆಯಬೇಕು. ಅವರ ಬೆಳೆವಣಿಗೆಗೆ ಬೇಕಾಗಿರುವ ಒಂದು ಬಟ್ಟಲು ಹಾಲನ್ನು ಮಣಭಾರದ ಇಂಗ್ಲೀಷ್ ಕಡಾಯಿಯಲ್ಲಿ ಹಾಕಿಕೊಟ್ಟರೆ ಅವರು ಕುಡಿಯುವುದೆಂತು? ಆ ಕಡಾಯಿ ಚಿನ್ನದ್ದೇ ಆಗಿರಬಹುದು; ಮುತ್ತು ರತ್ನದ ಕೆತ್ತನೆಗಳಿಂದ ಶೋಭಿಸಿ ಲೋಕ ಪ್ರಸಿದ್ಧವೇ ಆಗಿರಬಹುದು. ಜಗತ್ತಿನ ಮಾರುಕಟ್ಟೆಯಲ್ಲಿ ಅದಕ್ಕೆ ಅನರ್ಘ್ಯವಾದ ಬೆಲೆಯೂ ಇರಬಹುದು. ಹಾಗೆಂದು ಪುಷ್ಟಿ ಬೇಕಾಗಿರುವ ನಮ್ಮ ಮಕ್ಕಳನ್ನು ಆ ವ್ಯಾಮೋಹಕ್ಕೆ ತನಿಗೆ ಬಲಿಗೊಡುವುದೇನು?..... ...

ಎಷ್ಟೋ ಲಕ್ಷಾಧೀಶ್ವರಿಗೆ ಒಂದು ಮಗು ಶ್ರೀಕೃಷ್ಣನಂತೆ ಹಾಲಿನೊಂದಿಗೆ ಪೂತನಿಯು ವಿಷವನ್ನೇ ಹೀರಿ ಬೆಳೆದು, ಎಲ್ಲರ ಕಣ್ಣಿಗೂ ಬಾಯಿಬಂಡಿಯಾದಾಗ, ನಾವು ಶತಮಾನಕಾಲದಲ್ಲಿ ಇಡಿಯ ಭಾರತ ಖಂಡದ ವಿಸ್ತಾರದಲ್ಲಿ ಕೋಟಿಕೋಟಿ ಜನಸಂಖ್ಯೆಯಲ್ಲಿ ಅಂತಹ ತಾಲ್ಕಾರು ವಿಭೂತಿಪುರುಷರನ್ನೂ ಪ್ರತಿಭಾಶಾಲಿಗಳನ್ನೂ ತೋರಿ, ನಮ್ಮ ಇಂಗ್ಲೀಷ್ ಮಾಧ್ಯಮದ ಸಾರ್ಥಕತೆಯನ್ನು ಸಿದ್ಧಾಂತ ಪಡಿಸಲು ಪ್ರಯತ್ನಿಸುತ್ತಿದ್ದೇವೆ. ಇದು ಮೋಹಾಂಧರೆಗೆ ಅವಿವೇಕವೋ ಅಜ್ಞಾನವೊ ದೇವರಿ ಬಲ್ಲ! ಅಥವಾ ಕಮ್ಯೂನಿಸಂಗೆ ಈ ಸಮಸ್ಯೆಯ ಪರಿಹಾರ ಮಿಸಲಾಗಿದೆ ಎಂದೆ ಕಣಿಹೇಳುವವರ ಆಕೆಯ ನುಡಿಸಿನಲ್ಲ ಹುರುಳಿದೆಯೊ ಏನೊ ಯಾರಿಗೆ ಗೊತ್ತು!

### ಇಂಗ್ಲೀಷಿನ ವಿಚಾರ

ಭಾರತದ ವಿವಿಧ ಪ್ರದೇಶಗಳಲ್ಲಿ ಪ್ರತಿ ವರ್ಷವೂ ಪ್ರೌಢ ಪರೀಕ್ಷೆಗಳಿಗೆ ಕೂರುವ ಲಕ್ಷಾಂತರ ವಿದ್ಯಾರ್ಥಿಗಳಲ್ಲಿ ನೂರಕ್ಕೆ ಐದರಿಂದ ಹತ್ತರ ವರೆಗೆ ತೇರ್ಗಡೆ ಹೊಂದುವುದೂ ಕಷ್ಟವಾಗಿದೆ. ಹೀಗೆ ಉತ್ತೀರ್ಣರಾಗುವುದಕ್ಕೆ ಹಲವಾರು ಕಾರಣಗಳಿರಬಹುದು. ಆದರೆ ಬಹು ಮುಖ್ಯವಾದ ಮತ್ತು ಮೂಲಭೂತವಾಗಿರುವ ಕಾರಣ ಶಿಕ್ಷಣ ಮಾಧ್ಯಮದಿಂದ ಸಂಭವಿಸುತ್ತಿದೆ. ಆಂಗ್ಲ ಭಾಷೆಯಲ್ಲಿ ಸ್ವತಂತ್ರವಾಗಿ ಸರಿಯಾಗಿ ಎರಡು ವಾಕ್ಯ ಬರೆಯಲಾರದ ವಿದ್ಯಾರ್ಥಿ ಜರ್ಮನ್ ಸ್ವರಾಜ್ಯಶಾಸ್ತ್ರ ತತ್ತ್ವಶಾಸ್ತ್ರ ಭೌತ ಶಾಸ್ತ್ರಾದಿ ಪ್ರಗಲ್ಭ ವಿಷಯಗಳನ್ನು ಕರತು ಪ್ರೌಢ ಪ್ರಬಂಧಗಳನ್ನು ಬರೆಯುವುದಾದರೂ ಹೇಗೆ? ಸಾಧಿಸಿದಾರ. ಮಕ್ಕಳು ಒಂದು ಎರಡು ಮೂರು ನಾಲ್ಕು ವರ್ಷ ಪರೀಕ್ಷೆಗಳಲ್ಲಿ ಸೋತು ನಿರಾಶರಾಗಿ, ನಿಷ್ಪ್ರಯೋಜಕರೂ ಸಮಾಜಕಂಟಕರೂ ಆಗಿ ಮುಯ್ಯಿ ತೀರಿಸಿಕೊಳ್ಳುತ್ತಾರೆ. ಈ ಕೃತಕ ಪರಿಸ್ಥಿತಿಯಿಂದ ನಮ್ಮ ಮಕ್ಕಳನ್ನು ಎಷ್ಟು ಬೇಗ ಪಾರು ಮಾಡಿದರೆ ಅಷ್ಟೂ ಕ್ಷೇಮವಾಗುತ್ತದೆ ದೇಶಕ್ಕೆ.

ಅಂತರರಾಷ್ಟ್ರೀಯ ರಂಗಗಳಲ್ಲಿ ಪ್ರವೇಶಕ್ಕೆ ಬರಲು ಇಂಗ್ಲಿಷ ಅತ್ಯಾವಶ್ಯಕ ಎಂದು ನಾವು ಒಪ್ಪಿಕೊಂಡ ಮಾತ್ರಕ್ಕೆ ಇಂಗ್ಲಿಷ್ ಆವಶ್ಯಕ. ಆದ್ದರಿಂದ ಎಲ್ಲರೂ ಇಂಗ್ಲಿಷ್ ಕಲಿಯಬೇಕು, ಆದ್ದರಿಂದಲೇ ಇಂಗ್ಲಿಷನ್ನು ಕಡ್ಡಾಯವಾಗಿ ಎಲ್ಲರ ಕಲಿಯಲೇಬೇಕು ಎಂದೆ ಊಹಿಸುವುದು ಅವಿವೇಕದ ಸಂಸಾರವಧಿ ಯಾದೀತು ಖಂಡ. ದೇಶ ತನ್ನ ಮಕ್ಕಳಿಗೆ ಭಾಷೆಗಳನ್ನು ಕಲಿಸುವಾಗ ಯಾವ ಯಾವ ಭಾಷೆ ಯಾರು ಯಾರಿಗೆ ಎಷ್ಟೆಷ್ಟು ಪ್ರಮಾಣದಲ್ಲಿ ಎತಕ್ಕಾಗಿ ಬೇಕಾಗುತ್ತದೆ ಎಂಬುದನ್ನು ಗೊತ್ತುಮಾಡಿಕೊಳ್ಳಬೇಕು. ಇಂಗ್ಲಿಷ್ ಆಗಲಿ ಹಿಂದಿಯಾಗಲಿ ನಮ್ಮ ಮಕ್ಕಳಿಗೆ ಬೇಕು ಎಂದ ಮಾತ್ರಕ್ಕೆ ಯಾರಿಗೆ? ಎಷ್ಟು? ಏಕೆ? ಎಂಬುದಾವುದನ್ನೂ ಪರಿಗಣಿಸದೆ ವರ್ಷಿಸಿದರೆ, ಕೇನಸಿಂಗ್ ಹಿಮಾಲಯದ ಶಿಖರೋನ್ನತಕ್ಕೆ ಏರಿ, ತಾವೂ ಪ್ರಖ್ಯಾತರಾಗಿ ಭಾರತಕ್ಕೂ ಗೌರವ ತಂದರು. ನಮ್ಮ ಮಕ್ಕಳಿಗೂ ಅಂತಹ ಸದವಕಾಶ ಕಲ್ಪಿಸಿಕೊಡಬೇಕು; ಆದರಿಂದ ಎಲ್ಲ ಮಕ್ಕಳಿಗೂ ಪರ್ವತಾರೋಹಣವನ್ನು ಕಡ್ಡಾಯದ ಶಿಕ್ಷಣ ವಿಷಯವನ್ನಾಗಿ ಕಲಿಸಬೇಕು ಎಂದಷ್ಟೇ ಮೂರ್ಖತನವಾಗುತ್ತದೆ.

### ಕನ್ನಡ ಉತ್ತಮ ಮಾಧ್ಯಮ

ಕರ್ನಾಟಕದಲ್ಲಿ ಎರಡು ವಿಶ್ವವಿದ್ಯಾನಿಲಯಗಳಿವೆ. ಎರಡೂ ಬೋಧನೆ ಮತ್ತು ಸಂಶೋಧನೆಗಳ ಜೊತೆಗೆ ವಿದ್ಯಾಪ್ರಸಾರವನ್ನೂ ತಮ್ಮ ಕರ್ತವ್ಯಾಂತರ್ಗತವನ್ನಾಗಿ ಭಾವಿಸಿ ಪ್ರಜಾತಾರೋದ್ಯನ್ಮಾರ್ಗ ಕನ್ನಡಕೆ ಕೊಂಡು ಜನಸಾಮಾನ್ಯಗಳಲ್ಲಿ ಜ್ಞಾನ ಮತ್ತು ವಿಜ್ಞಾನ ಪಿಪಾಸೆಗಳನ್ನು ಪ್ರಸಾರಮಾಡಿತ್ತಿವೆ. ವಿಷಯ ಯಾವುದೇ ಆಗಲಿ, ಪ್ರಾಚೀನವೆ ಆಗಲಿ ನವೀನವೆ ಆಗಲಿ ಸಾಹಿತ್ಯವೇ ಆಗಲಿ, ವಿಜ್ಞಾನವೇ ಆಗಲಿ, ಪಂಪಕಾಲಿನಾಸರೀ ಆಗಲಿ ಅಣುಶಕ್ತಿ ಥೀಡಾರ್‌ಗಳೇ ಆಗಲಿ ಅದನ್ನು ಸಮಗ್ರವಾಗಿ ಸಮರ್ಪಕವಾಗಿ ವಿದ್ವತ್‌ಪೂರ್ವಕವಾಗಿ ಸಾಮಾನ್ಯರೂ ಗ್ರಹಿಸುವಂತೆ ವಿಶೇಷಜ್ಞರೂ ಒಪ್ಪಿಕೊಳ್ಳುವಂತೆ ಭಾಷಣಮಾಡಬಹುದೆಂಬುದನ್ನು ಅಧ್ಯಾಪಕವರ್ಗದವರು ಕಳೆದ ಇಪ್ಪತ್ತೈದು ಮೂವತ್ತು ವರ್ಷಗಳಿಂದ ತೋರಿಸಿಕೊಟ್ಟಿದ್ದಾರೆ. ಮತ್ತು ತೋರಿಸುತ್ತಿದ್ದಾರೆ. ಸ್ವತಂತ್ರ ವ್ಯಕ್ತಿಗಳೂ ವಿಶ್ವವಿದ್ಯಾನಿಲಯ ಸಂಸ್ಥೆಗಳೂ ಪ್ರಕಟಿಸುವ ಕನುಕೊತ್ತಿಗೆಗಳನ್ನೂ ಕೆಬ್ಬೈಕ್ಕಗೆಗಳನ್ನೂ ಸನಿಷ್ಟಿಸಿದರೆ ಕನ್ನಡ ಭಾಷೆಗೆ ಇಂಗ್ಲೀಷ್ ಅಥವಾ ಜರ್ಮನ್ ಅಥವಾ ರಷ್ಯನ್ ಭಾಷೆಗಳು ವಿಜ್ಞಾನಿಕ ವಿಷಯಗಳನ್ನು ಹೇಳಬಲ್ಲವೋ ಅದೆಲ್ಲವನ್ನೂ ಆಷ್ಟೆ ಸ್ಪಷ್ಟವಾಗಿ ನಿಸ್ಸಂಶಯವಾಗಿ ಹೇಳುವ ಶಕ್ತಿ ಸಿದ್ಧವಾಗಿದೆ ಎಂಬುದು ಎಂತಹ ಸಂದೇಹಗ್ರಸ್ತನಿಗೂ ವಿದಿತವಾಗುತ್ತದೆ.

ನಮ್ಮ ಭಾಷೆ ವಿದ್ಯಾಭ್ಯಾಸದ ಅತ್ಯುನ್ನತ ಮಟ್ಟಗಳಲ್ಲಿಯೂ ಶಿಕ್ಷಣ ಮಾಧ್ಯಮಕ್ಕೆ ಪರ್ಯಾಪ್ತವಾಗಿದೆ ಎನ್ನುವ

(೧೦ನೇ ಪುಟ ನೋಡಿರಿ)

ಡುಂಡುರವರ 'ಕೇಸರಿ ಜೀವನ'
(KESARI JEEVANA)
ಇದನ್ನೇ ಉಪಯೋಗಿಸಿರಿ.
ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.
ಕೆಮ್ಮು, ಶೀತ, ಆಸ್ತಮ, ಗೊರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ರಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ 6/8; ½ ರಾತಲಿಗೆ ರೂ. 1/13
ದ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.
1. ಶಾ ಕೆಂಪೆನ್ನಿ, ಮಂಗಳೂರು.
2. ವಿ. ನಿ. ಶೆಣ್ಯೈ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್‌ಟಿಟ್ಯೂಟ್, ಉಡುಪಿ,
ನಿಮಗೆವಾಡ ಕಿಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.
ZANDU ದಾಮೋದರ & ಕೊ,
ಮದ್ರಾಸ್—3.

## ಗ್ರಾಮದಾನ ಚಳವಳಿ

# ಗ್ರಾಮರಾಜ್ಯ ಸ್ಥಾಪನೆಗಾಗಿ ಸರ್ವಶಕ್ತಿಯನ್ನು ಕೇಂದ್ರೀಕರಿಸಿರಿ

ಅಖಿಲ ಭಾರತ ಸರ್ವೋದಯ ಸಮ್ಮೇಲನದ ಎರಡು ದಿನಗಳ ಕಾಲಾವಧಿ ವಿಶೇಷವು ದಿನಾಂಕ ೧೦ರಂದು ಮುತ್ತಾಯಗೊಂಡಿತು. ಸರ್ವಸೇವಾ ಸಂಘದ ಕಾರ್ಯದರ್ಶಿ ಶ್ರೀ ಸಿದ್ಧರಾಜ ಢಡ್ಡಾ ರವರು ಗ್ರಾಮದಾನ ಚಳುವಳಿಯ ಕುರಿತಾದ ಒಂದು ಠರಾವನ್ನು ಮಂಡಿಸಿದರು. ಅದು ಅವಿರೋಧವಾಗಿ ಮಂಜೂರು ಹೊಂದಿತು.

"ಭೂದಾನದ ಆರೋಹಣದಲ್ಲಿ ನಾವು ಒಂದು ಪ್ರಮುಖ ಘಟ್ಟವನ್ನು ಈಗ ಮುಟ್ಟಿದ್ದೇವೆ. ಆರಂಭದಿಂದಲೂ ಭೂದಾನವು ಕೇವಲ ಭೂಸಮಸ್ಯೆಗಳ ಪರಿಹಾರವನ್ನೇ ಧ್ಯೇಯವಾಗಿಟ್ಟುಕೊಂಡಿಲ್ಲ. ಸಾಮಾಜಿಕ ಕ್ರಾಂತಿಯೂ ಆದರ ಉದ್ದೇಶವಾಗಿತ್ತು. ಪ್ರಪಂಚವಿಡೀ ಒಂದೇ ಕುಟುಂಬದಂತೆ ವಾಸಿಸಬೇಕು ಎಂಬ ಧ್ಯೇಯವು ಈ ನವಯುಗವನ್ನು ನೇಯುವ ನೂಲಾಗಬೇಕು. ಯುಗದ ನೇಯ್ಗೆಯು ಕಂಡಕುಂಡವಾದ ಮಾನವ ಪ್ರಯತ್ನದಿಂದ ನಡೆದರೆ ಕ್ರಾಂತಿಯೇ ಆಗಬಹುದು. ಗಾಂಧೀಜಿಯವರು ಅಂತಹ ಒಂದು ಕ್ರಾಂತಿಯನ್ನು ತಮ್ಮ ಜೀವಿತಕಾಲದಲ್ಲಿ ಯಶಸ್ವಿಗೊಳಿಸಿದರು. ಸ್ವಾತಂತ್ರ್ಯಕ್ಕಾಗಿ ಗಾಂಧೀಜಿಯವರು ಸತ್ಯಾಗ್ರಹ ರೂಪದಲ್ಲಿ ಪುರುಷ ಪ್ರಯತ್ನವನ್ನೊಂದುಗೂಡಿಸಿದರು. ಇದರ ಪರಿಣಾಮವಾಗಿ ಭಾರತವು ಸ್ವತಂತ್ರವಾದ ದಲ್ಲದೆ ರಾಜಕಾರಣದ ಸಮರ ಭೂಮಿಯಲ್ಲಿ ಆಹಿಂಸೆಯೂ ಪ್ರವೇಶಿಸುವಂತಾಯಿತು.

"ಗಾಂಧೀಜಿಯವರು ಕ್ರಾಂತಿಯ ಇನ್ನೊಂದು ಹೆಜ್ಜೆಯನ್ನು ಭೂದಾನ ಯಜ್ಞದ ರೂಪದಲ್ಲಿ ನಮ್ಮ ಮುಂದಿಟ್ಟರು. ಈ ಭೂದಾನಯಜ್ಞದ ಮೂಲಕವಾಗಿ ಅಹಿಂಸೆಯು ಆರ್ಥಿಕ ಮತ್ತು ಸಾಮಾಜಿಕ ರಂಗಗಳಲ್ಲಿಯೂ ಪ್ರವೇಶಿಸಿತು. ಈ ರೀತಿಯಲ್ಲಿ ಸಹೋದರತೆಯನ್ನು ನೇಯುವ ಕಾರ್ಯವು ಇನ್ನೊಬ್ಬನ ಕಡೆಗಿರುವ ಮಾನವ ಸಹಜವಾದ ಭಾವನೆ ಹಾಗೂ ಕರುಣೆಗಳ ಪ್ರತ್ಯಕ್ಷ ಪ್ರಯೋಗದಿಂದ ಕೈಗೊಳ್ಳಲ್ಪಟ್ಟಿತು.

"ನೆರೆಯವನು ಹಸಿದಿರುವಾಗ ಒಬ್ಬನು ಕೈಗೆ ಉಣ್ಣಬಲ್ಲನು? ಎಂಬ ಭಾವನೆಯಿಂದ ಆಚಾರ್ಯ ವಿನೋಬಾಭಾವೆಯವರು ಭಾರತದ ಮೂಲ ಸಮಸ್ಯೆಯಲ್ಲಿ ಇನ್ನೊಂದು ಹೆಜ್ಜೆಯನ್ನಿಟ್ಟರು. ಒಂದು ವರ್ಷದ ನಂತರ ಜನರು ಭೂದಾನ ಕಾರ್ಯವನ್ನು ಪ್ರಾರಂಭಿಸಿದರು. ಆಚಾರ್ಯ ಭಾವೆಯವರ ಮಾರ್ಗದರ್ಶನದಿಂದ ಸರ್ವಸೇವಾ ಸಂಘವು ಈ ಹೆಂಜಿಕೆಯನ್ನು ಭಾರತದಲ್ಲೆಲ್ಲಾ ಪ್ರಚಾರಗೊಳಿಸುವ ಹೊಣೆಗಾರಿಕೆಯನ್ನು ತೆಗೆದುಕೊಂಡಿತು. ಭಾರತದ ಐದು ಲಕ್ಷ ಹಳ್ಳಿಗಳಲ್ಲಿ ಪ್ರತಿಯೊಂದರಲ್ಲಿರುವ ಭೂರಹಿತ ಕುಟುಂಬಗಳಲ್ಲಿ. ಒಂದೊಂದಕ್ಕೆ ಭೂಎಯನ್ನು ಒದಗಿಸುವ ಸಲುವಾಗಿ ಎರಡು ವರ್ಷಗಳಲ್ಲಿ ೫೫ ಲಕ್ಷ ಎಕ್ರೆ ಭೂಮಿಯನ್ನು ಸಂಪಾದಿಸುವ ಧ್ಯೇಯವನ್ನಿಟ್ಟುಕೊಂಡಿತು. ಈ ಅವಧಿಯು ಮುಗಿಯುವುದಕ್ಕೆ ಮೊದಲೇ ಭಾರತೀಯರು ಗುರಿಗಿಂತ ಅಧಿಕ ಪ್ರಮಾಣದಷ್ಟು ಭೂಮಿಯನ್ನು ದಾನವಿತ್ತರು.

"ಸಮಕಾಲಿಕವಾಗಿ ಭೂದಾನ ಯಜ್ಞದ ಮೇರೆಯು ವಿಸ್ತರಿಸಲ್ಪಟ್ಟಿತು. ಭೂರಹಿತತೆಯನ್ನು ದೇಶದಿಂದ ಹೋಗಲಾಡಿಸುವುದರ ಉದ್ದೇಶವು ಭೂದಾನ ಕಾರ್ಯಕರ್ತರಿಗಳಿಗೆ ಪ್ರತ್ಯಕ್ಷವಾಗಿ ತೋಡಗಿತು. ಎಲ್ಲ ಭೂರಹಿತರಿಗೂ ಭೂಮಿಯನ್ನೊದಗಿಸಲು ಐದು ಕೋಟಿ ಎಕ್ರೆಗಳಷ್ಟು ಭೂಮಿಯನ್ನು ಪಡೆಯುವ ನೂತನ ಧ್ಯೇಯವನ್ನು ಕೈಗೊಳ್ಳಲಾಯಿತು. ಈ ಗುರಿಯ ಸಾಧನೆಗೆ ಮೊದಲೇ ಭೂದಾನಾರೋಹವು ಆಶ್ಚರ್ಯಕಾರಿ ಕ್ರಾಂತಿಕಾರಕ ಸಂಭಾವನೆಯು ಮಟ್ಟವನ್ನು ಏರಿತು. ಭಾರತದ ೨೫೦೦೦ ಹಳ್ಳಿಗಳ ಜನರು ಭೂಮಿಯ ಮೇಲೆ ತಮಗಿರುವ ಒಡೆತನವನ್ನು ಬಿಟ್ಟು ಬಿಡಲು ಸ್ವಯಂ ಪ್ರೇರಣೆಯಿಂದಲೇ ಒಪ್ಪಿ ಸೌಹಾರ್ದದಿಂದಲೇ ತಮ್ಮ ಭೂಮಿಯನ್ನು ಗ್ರಾಮವು ದಾನಕ್ಕೆ ಕೊಟ್ಟರು. ಗ್ರಾಮದಾನದ ಈ ಪರಿಮಾಣದ ಸಫಲತೆಯಿಂದ, ೫ ಕೋಟಿ ಎಕ್ರೆಗಳಷ್ಟು ಭೂಮಿಯನ್ನು ಸಂಪಾದಿಸಿದಲ್ಲಿ ವೈಯಕ್ತಿಕ ಒಡೆತನವನ್ನು ನಾಶ ಮಾಡಿದಂತಾಗುವುದು.

"ನಾವು ನಮ್ಮ ಎಲ್ಲ ಶಕ್ತಿಗಳನ್ನೂ ಗ್ರಾಮದಾನ ಕಾರ್ಯದಲ್ಲಿ ಕೇಂದ್ರೀಕರಿಸಬೇಕು. ೧೯೭೧ನೆ ವರ್ಷವು ಭಾರತಕ್ಕೆ ವೈಶಿಷ್ಟ್ಯಪೂರ್ಣವಾದುದು. ಈ ವರ್ಷವು ಭಾರತದಲ್ಲಿ ಅಸಾಧಾರಣ ಕ್ರಾಂತಿಕಾರಕ ಬದಲಾವಣೆಗಳನ್ನು ನೇಯಬಹುದೆಂಬುದು ಸ್ಪಷ್ಟ. ಈ ನೇಯ್ಗೆಯು ಗಾಂಧೀಜಿಯವರಿಂದ ತೋರಿಸಿಕೊಟ್ಟಂತೆ ಗ್ರಾಮ ರಾಜ್ಯದಿಂದ ಮಾತ್ರ ಫಲಪ್ರದವಾಗಬಹುದು. ಮತ್ತು ಗ್ರಾಮದಾನವೊಂದೇ ಈ ಘಾನನೆಗೆ ಈ ರೂಪವನ್ನು ಕೊಡಲು ಶಕ್ತವಾಗಿದೆ. ಗ್ರಾಮದಾನವು ಒಂದು ಸ್ಪಷ್ಟ ನಿಶ್ಚಿತ ರೂಪವನ್ನು ಪಡೆದಿದೆ. ಎಲ್ಲ ರಾಜಕೀಯ ಪಕ್ಷಗಳೂ ಆಲೋಚಕರೂ ಈ ಯೋಜನೆಯನ್ನು ಸ್ವಾಗತಿಸಿದ್ದಾರೆ. ಆದುದರಿಂದ ನಮ್ಮೆಲ್ಲ ಶಕ್ತಿಗಳನ್ನು ಗ್ರಾಮದಾನ ಚಳವಳಿಯನ್ನು ಮುಂದುವರಿಸುವುದಕ್ಕಾಗಿ ವಿನಿಯೋಗಿಸಬೇಕು.

"ಮೂರನೆಯಯುದ್ಧರಂಗದ ಹೊಸ್ತಿಲಲ್ಲಿನಿಂತಿರುವ ಈ ಜಗತ್ತಿಗೆ ಭಾರತವು ಭೂದಾನ ಮತ್ತು ಗ್ರಾಮದಾನಗಳ ಮೂಲಕ ಒಂದು ಪ್ರೀತಿಪೂರ್ವಕ ಸಂದೇಶವನ್ನು ಕೊಡಬಹುದು. ಗ್ರಾಮರಾಜ್ಯವು ಭಾರತದಲ್ಲಿ [ಸ್ಥಾಪಿಸಲ್ಪಡುವವರೆಗೆ ತಾನು ತನ್ನ ಜೀವನವನ್ನೇ ಅದಕ್ಕಾಗಿ ಮುಡುಪಿಡುವುದಾಗಿ ವಿನೋಬಾ ಪ್ರತಿಜ್ಞೆ ಮಾಡಿದ್ದಾರೆ. ಭಾರತೀಯ ಶಕ್ತಿಗಳೆಲ್ಲ ಒಂದುಗೂಡಿದರೆ ಇತಿಹಾಸ ಪ್ರಸಿದ್ಧವಾದ ಈ ೧೯೭೧ರಲ್ಲಿಯೇ ನಾವು ಈ ಗ್ರಾಮರಾಜ್ಯವನ್ನು ಸಂಸ್ಥಾಪಿಸಬಹುದು. ಕಾಲ ಮತ್ತು ಪರಿಸ್ಥಿತಿಗಳನ್ನವಲೋಕಿಸಿ ನಾವು ಭಾರತೀಯರಲ್ಲಿ, ರಾಜಕೀಯ ಪಕ್ಷಗಳಲ್ಲಿ ಮುಖ್ಯವಾಗಿ ಕಾರ್ಯಕರ್ತರಲ್ಲಿ ಗ್ರಾಮದಾನ ಚಳವಳಿಗೆ ವಿಜಯ ಸಂಪಾದಿಸುವಂತೆ ತಮ್ಮ ಶಕ್ತಿಗಳನ್ನು ಒಟ್ಟುಗೂಡಿಸಿರಿಂದು ಕೇಳಿಕೊಳ್ಳುತ್ತೇವೆ."

ಶ್ರೀ ಜಯಪ್ರಕಾಶನಾರಾಯಣರು ಈ ಠರಾವಿನಲ್ಲಿ ಅಡಕವಾಗಿರುವ ಯೋಜನೆಯನ್ನೂ ತತ್ವಗಳನ್ನೂ ವಿವರಿಸಿದರು. ಕಾಂಗ್ರೆಸ್ ಅಧ್ಯಕ್ಷ ಶ್ರೀ ದೇಭಾರರು ಕಾಂಗ್ರೆಸ್ಸಿಗರ ಮತ್ತು ಕಾಂಗ್ರೆಸ್ ಪಕ್ಷದ ಬೆಂಬಲವು ಇದುವರೆಗೆದೊರೆತಂತೆಯೇ ಇನ್ನು ಮುಂದಕ್ಕೂ ಅಧಿಕವಾಗಿ ಭೂದಾನಕ್ಕೆ ದೊರೆವುದೆಂದು ಆಶ್ವಾಸನೆಯಿತ್ತರು. ಶ್ರೀ ದೇಭಾರರು ಪ್ರಧಾನ ಮಂತ್ರಿ ನೆಹರೂರವರು ಗ್ರಾಮದಾನವನ್ನು ಜನಸಮೂಹವನ್ನು ಚಟುವಟಿಕೆಯಿಂದ ಕೂಡುವಂತೆ ಮಾಡುವ ಒಂದು ಶಕ್ತಿಯೆಂದು ಹೇಳಿದುದನ್ನು ಪ್ರಸ್ತಾಪಿಸಿದರು.

ಗ್ರಾಮದಾನವು ಹಳ್ಳಿಯ ಸಮಾಜವನ್ನು ದ್ಧರಿಸುವ ಮತ್ತು ಇಡಿ ಗ್ರಾಮವನ್ನೂ ಒಂದೇ ಕುಟುಂಬವೆಂದು ತಿಳಿಯುವಂತೆ ಮಾಡುವ ಚಳವಳಿಯೆಂದು ದೇಭಾರರೆಂದರು. ಹಳ್ಳಿಯ ಸಾರ್ವಜನಿಕ ಜೀವನದ ಪ್ರತಿಯೊಂದು ಮಟ್ಟದಲ್ಲೂ ಗ್ರಾಮದಾನವು ಹೊಂದಿಕೊಳ್ಳುವುದು. ಭಾರತೀಯ ಸಂಸ್ಕೃತಿಯು ಮುಖ್ಯವಾಗಿ ದಾನ, ಸೇವೆ ಮತ್ತು ಮನೋಬಲಗಳಲ್ಲಿ ಅಡಕವಾಗಿದೆ. ನಮ್ಮ ಸಾಮಾಜಿಕ ಮತ್ತು ಆರ್ಥಿಕ ವಿಧಾನಗಳೂ ಈ ಮೂರು ತತ್ವಗಳಲ್ಲಿಯೇ ಸ್ಥಾಪಿಸಲ್ಪಟ್ಟಿದೆ. ಅನೇಕ ಜ್ಞಾನಿ ಹಾಗೂ ಮಹಾತ್ಮರು—ರಾಮ ಕೃಷ್ಣಪರಮಹಂಸರಿಂದ ಮಹಾತ್ಮಾ ಗಾಂಧೀಜಿಯವರೆಗೆ—ಈ ಭಾವನೆಗಳನ್ನು ಪಸರಿಸಲು ಈ ಭೂಮಿಯಲ್ಲಿ ಕಾಲಕಾಲದಲ್ಲಿ ಜನಿಸಿದ್ದಾರೆ. ಆದುದರಿಂದ ಆಚಾರ್ಯ ಭಾವೆ ಮತ್ತು ಪ್ರಧಾನಿ ನೆಹರೂರವರು ಆಕಸ್ಮಿಕ ವ್ಯಕ್ತಿಗಳಾಗಿರದೆ, ನಮ್ಮ ದೇಶದಲ್ಲಿ ನಡೆಯುತ್ತಿರುವ ಈ ಚಳವಳಿಯ ಎರಡು ಕುರುಹುಗಳಾಗಿದ್ದಾರೆ. ನೆಹರೂರವರು ಜಾಗತಿಕ ಶಾಂತಿಗಾಗಿ ಧರ್ಮಯುದ್ಧ ಸೇನಾನಿಯಾಗಿ ಹೋರಾಡುತ್ತಿರುವರು ಆಚಾರ್ಯ ಭಾವೆಯವರು ಹಳ್ಳಿಗಳ ಪುನರ್ನಿರ್ಮಾಣಕ್ಕಾಗಿ ದೃಢ ನಿರ್ಧರದಂತಹ ಬೃಹತ್ಕಾರ್ಯಕ್ಕಾಗಿ ದುಡಿಯುತ್ತಿದ್ದು ಇದರಿಂದ ಸಮಾಜ ಜೀವನಕ್ಕೆ ಹೊಸ ರೂಪವನ್ನು ಕೊಡಲು ಯತ್ನಿಸುತ್ತಿದ್ದಾರೆ. ಆದುದರಿಂದ ಕಾಂಗ್ರೆಸ್ಸಿಗರು ವಿನೋಬಾಜಿಯವರಿಗೆ ಆವರ ಹೊಸ ಚಳವಳಿಯನ್ನು ಜಯಿಸುವುದು ಮಾಡುವುದರಲ್ಲಿ ನೆರವಾಗಬೇಕು ಎಂದು ದೇಭಾರರು ಹೇಳಿ, ಪಕ್ಷ ಭೇದಗಳನ್ನು ಮರೆತು, ಹಳ್ಳಿಯ ಸಾರ್ವಜನಿಕ ಜೀವನದಲ್ಲಿ ಕ್ರಾಂತಿಯನ್ನುಂಟುಮಾಡಲು ವಿನೋಬಾರವರಿಗೆ ಕೈಕೊಡಬೇಕೆಂದು ಸಲಹೆ ನೀಡಿದರು. ಈ ಕಾರ್ಯವನ್ನು ಹಿಂದಿಯಿಂದಾಗಲೀ ಯೋಜನೆಯ ಹೇಗಾದಾಗಲೀ ಮಾಡದೆ ವಿಶ್ವಾಸ ಮತ್ತು ಸ್ನೇಹಪೂರ್ವಕ ಸ್ಥಿತಿಯಿಂದ ಪೂರೈಸಬೇಕೆಂದು ಅವರು ಕೇಳಿಕೊಂಡರು.

ಗ್ರಾಮದಾನ ಠರಾವಿನ ಕುರಿತು ವಾದಾಡುತ್ತಾ ಶ್ರೀ ಜಯಪ್ರಕಾಶ ನಾರಾಯಣರು ಅದು ದೇಶದ ಇತಿಹಾಸದಲ್ಲೊಂದು ನವೀನಾಧ್ಯಾಯವನ್ನು ತೆರೆಯುವುದೆಂದು ಅಭಿಪ್ರಾಯಪಟ್ಟರು. "ಗ್ರಾಮದಾನದ ಯೋಜನೆಯು ರಾಷ್ಟ್ರ ಮತ್ತು ಸರಕಾರಗಳಂತೆ ರಾಜಕೀಯವಾಗಿಯೇ ಕೈಗೊಳ್ಳಬೇಕಾಗಿದ್ದರೂ ಈವರೆಗೆ ಆ ವಿಷಯದಲ್ಲಿ ಯಾವುದೇ ರೀತಿಯ ಕಾರ್ಯಕ್ರಮಗಳೂ ಕೈಗೊಳ್ಳಲ್ಪಡದಿರುವುದರಿಂದ ಸರ್ವ ಸೇವಾ ಸಂಘವು ಆ ಕಾರ್ಯವನ್ನು ಕೈಗೊಳ್ಳಬೇಕಾಯಿತು ಗ್ರಾಮದಾನವು ಎಲ್ಲ ರಾಜಕೀಯ ಪಕ್ಷಗಳಿಂದಲೂ ಒಪ್ಪಿಗೆಯನ್ನು ಪಡೆದು ಜನಪ್ರಿಯವಾಗಿರುವುದು. ಭೂದಾನ ಚಳವಳಿಯಲ್ಲಿಯೇ ಗ್ರಾಮದಾನದ ಉದ್ದೇಶವು ಅಡಕವಾಗಿದ್ದರೂ ಜನರು ಅದರ ಹಿನ್ನೆಲೆಯ ಧ್ಯೇಯಗಳನ್ನು ಕಂಡುಕೊಳ್ಳಲಿಲ್ಲ. ಆದೊಂದು ಅಹಿಂಸಾತ್ಮಕ ಸಾಮಾಜಿಕ ಕ್ರಾಂತಿ. ಹಳ್ಳಿಗರ ಜೀವನವನ್ನು ಕ್ರಾಂತಿಕಾರಿಯಾಗಿ ಸುಧಾರಿಸಿ ಪುನರಾಚರಿಸುವುದು. ಈ ಚಳವಳಿಯ ಧ್ಯೇಯವಾಗಿದೆ. ಸರ್ವೋದಯ ತತ್ವಗಳನ್ನು ಪ್ರಚಾರಮಾಡಿ, ಸರ್ವೋದಯ ಕಾರ್ಯಕರ್ತರು ಸರ್ವೋದಯ ಸಮಾಜ ಮತ್ತು ಸರ್ವೋದಯ ಜಗತ್ತನ್ನು ಸ್ಥಾಪಿಸುವುದೊಲ್ಲ ನೆರವಾಗಬೇಕು. ತಮ್ಮ ಗುರಿಯನ್ನು ಮುಟ್ಟುವವರೆಗೂ ತಮ್ಮ ಕಾರ್ಯವನ್ನವರು ನಿಲ್ಲಿಸಬಾರದು" ಎಂದು ಶ್ರೀ ಜಯಪ್ರಕಾಶ ನಾರಾಯಣರೆಂದರು.

ಕೇರಳ ಸರಕಾರದ ತಾಗೂ ಕಮ್ಯುನಿಸ್ಟ್ ಪಕ್ಷದ ಪರವಾಗಿ ಕಾಯಿದೆ ಮಂತ್ರಿ ಶ್ರೀ ಶ್ರೀ ವಿ. ಆರ್. ಕೃಷ್ಣ ಅಯ್ಯರ್ ಕೇರಳ ಸರಕಾರವು ಶಾಸನ ರೀತಿಯಿಂದ ಈ ಭೂಸಮಸ್ಯೆಯನ್ನು ಪರಿಹರಿಸುವುದು ಸಾಧ್ಯವೆಂದೂ ಗ್ರಾಮದಾನದಂತಹ ಚಳವಳಿಯಿಂದಲೇ ಅದು ಕಾರ್ಯಗತಗೊಳಬಹುದೆಂದೂ ನಂಬಿಕೊಂಡಿದೆ ಎಂದು ವಿನೋಬಾರವರಿಗೆ ಸಂಪೂರ್ಣ ಸಹಕಾರವನ್ನು ನೀಡುವ ಭರವಸೆಯನ್ನಿತ್ತರು. ಪ್ರ. ಸ. ವಾ. ಪಕ್ಷದ ಧುರೀಣರಾದ ಪಟ್ಟಂಥಾನು ಪಿಳ್ಳೈಯವರೂ ತಮ್ಮ ಪಕ್ಷದ ಬೆಂಬಲವನ್ನು ನೀಡುವುದಾಗಿ ಸಾರಿದರು.

ಸರ್ವಪಕ್ಷ ಭೇದವಿಲ್ಲದೆ, ಈ ಗ್ರಾಮದಾನ ಚಳವಳಿಯು ಮುಂದುವರಿದು ಭಾರತದ ಹಳ್ಳಿಗಳು ಉದ್ಧಾರವಾಗಿ ಜನಜೀವನವು ಮಟ್ಟವು ಉನ್ನತಗೊಳ್ಳುವಂತೆ ಯತ್ನಿಸುವುದು ಪ್ರತ್ಯೇಕ ದೇಶಪ್ರೇಮಿಯ ಕರ್ತವ್ಯವಾಗಿದೆ.




# ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶಲ್ ನಂ ೧] [ಪೆಡಿಕೇಟಿಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಯತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. ೩—೪—೦
ಸಣ್ಣ ಬಾಟ್ಲಿಗೆ ರೂ. ೨—೦—೦

**ಶ್ರೀ ರಾಮತೀರ್ಥ ಯೋಗಾಶ್ರಮ,**
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪.

# ಕಲ್ಯಾಣ ರಾಷ್ಟ್ರ

## ಅಧಿಕಾರಿಗಳು ಸೌಜನ್ಯಯುಕ್ತರಾಗಲಿ

ಪ್ರಜಾಪ್ರಭುತ್ವದಲ್ಲಿ ಜನತೆಯ ಮೂಲಕವಾಗಿಯೇ ಜನತೆಯ ಆಡಳಿತೆಯು ನಡೆಯುತ್ತದೆ. ಜನಸೇವೆಯೇ ಇಂತಹ ಸರಕಾರದ ಕರ್ತವ್ಯವಾಗಿದೆ. ಆಡಳಿತೆಯನ್ನು ನಡೆಯಿಸುವ ವರೆಗೆ ಇದೊಂದು ಜಟಿಲ ವಿಷಯವಾಗಿ ಪರಿಣಮಿಸಲಾರದು. ಆದರೆ ಪ್ರಜಾರಾಜ್ಯ ಜೀವನ ಪದ್ಧತಿಯಲ್ಲಿ ಆತ್ಮಚಿಂತನ, ಬಾಹ್ಯ ಜನತೆಯ ಆಲೋಚನೆಗಳ ಗ್ರಹಣ, ಹಾಗೆಯೇ ಹೆಚ್ಚುತ್ತಿರುವ ಆವಶ್ಯಕತೆಗಳೊಂದಿಗೆ ನಿಕಟ ಸಂಬಂಧ ಕಲ್ಪನೆ ಇವುಗಳು ಮುಖ್ಯ ವಿಷಯಗಳಾಗಿವೆ. ಲೋಕತಂತ್ರದಲ್ಲಿ ಆಡಳಿತೆಯು ಉತ್ತಮ ವಿಧಾನದಲ್ಲಿ ನಡೆಯಲೂ ಬಹುದು, ಇನ್ನಿವೇ ನೀಚ ರೀತಿಗಿಳಿಯಲೂ ಬಹುದು.

ಭಾರತವು ಸ್ವಾತಂತ್ರ್ಯ ಪ್ರಾಪ್ತ್ಯನಂತರ ಪ್ರಜಾರಾಜ್ಯಭಾರ ಕ್ರಮವನ್ನು ಸ್ವೀಕರಿಸಿದೆ. ಏಳು ವರ್ಷಗಳ ಮೊದಲು ನಮಗಾಗಿಯೇ ಒಂದು ಸಂವಿಧಾನವನ್ನು ರೂಪಿಸಿಕೊಂಡೆವು. ಆ ಕಾಲದಲ್ಲಿ ಸರಕಾರದೆಮರು ಕೆಲ್ಯಾಣ ರಾಷ್ಟ್ರ ನಿರ್ಮಾಣ ಮಾಡುವ ಉದ್ದೇಶವಿತ್ತು. ಸರ್ವರಿಗೂ ಸಮೃದ್ಧ ಜೀವನವನ್ನು ಬದುಕಲು ಅಧಿಕಾಧಿಕ ಎಡೆಯನ್ನುಕಲ್ಪಿಸಿಕೊಡುವುದೇ ಕಲ್ಯಾಣರಾಷ್ಟ್ರವೆಂಬುದರ ಅರ್ಥ. ಈ ರೀತಿಯ ಅವಕಾಶವನ್ನು ಒದಗಿಸಿಕೊಡುವುದು ಸರಕಾರದ ಜವಾಬ್ದಾರಿಗೆ ಸೇರಿದು ಯಾವ ಪ್ರದೇಶದಲ್ಲಿ ಅಧಿಕಾಂಶ ಜನರು ಆರ್ಥಿಕ, ಶೈಕ್ಷಣಿಕ ಅಥವಾ ವಾಣಿಜ್ಯಕ ದೃಷ್ಟಿಕೋನಗಳಲ್ಲಿ ಹಿಂದುಳಿದಿರುವರೋ ಅಲ್ಲಿಯ ಸರಕಾರಕ್ಕೆ ಈ ಉದ್ದೇಶಗಳನ್ನು ಸಾಧಿಸುವುದು ಅಷ್ಟು ಸುಲಭವಲ್ಲ. ಆದುದರಿಂದ ಕಲ್ಯಾಣರಾಷ್ಟ್ರ ನಿರ್ಮಾಣವು ಸಾಧ್ಯವೇ ಎಂಬ ಪ್ರಶ್ನೆಯು ಉದ್ಭವಿಸಬಹುದು. ಆದರೆ, ಇದು ಸಾಧ್ಯವೆಂದು ತಿಳಿದೇ ಈ ನಿರ್ಧಾರಕ್ಕೆ ಬಂದಿರುವ ಪ್ರಯುಕ್ತ ಯಾವ ವಿಧಾನದಲ್ಲಿ ಮುನ್ನಡೆದರೆ, ಅತಿ ಶೀಘ್ರದಲ್ಲಿಯೇ ನಮ್ಮ ಗುರಿಯನ್ನು ಸೇರಿಯೇವು ಎಂಬುದೇ ನಮ್ಮ ಮುಂದಿರುವ ದೊಡ್ಡ ಮಹತ್ವದ ಪ್ರಶ್ನೆ.

ಭಾರತವು ಜಗತ್ತಿನ ಪ್ರಜಾಸ್ವಭುತ್ವ ರಾಷ್ಟ್ರಗಳಲ್ಲೆಲ್ಲ ಹಿರಿದಾದುದು. ಐದಾರು ಸಹಸ್ರಾರು ಜನರಿಗೆ ಅವರ ಜೀವನವನ್ನು ಯೋಗ್ಯ ರೀತಿಯಲ್ಲಿ ನಡೆಯಿಸಲು ತಕ್ಕ ಏರ್ಪಾಡುಗಳು ನಿಶ್ಚಿತ ರೂಪದಲ್ಲಿ ದೊರೆಯುವಂತೆ ಮಾಡುವುದು. ಈ ರೀತಿಯ ಏರ್ಪಾಡುಗಳನ್ನು ಒದಗಿಸುವುದರಲ್ಲಿ ವಿಕಾಸ ಕಾರ್ಯವೂ ಅಗತ್ಯವಾಗಿದೆ. ಪ್ರಥಮ ಪಂಚವಾರ್ಷಿಕ ಯೋಜನೆಯು ಈ ಸೌಧದ ಒಂದು ಮೆಟ್ಟಿಲಾಗಿತ್ತು. ಈಗ ದ್ವಿತೀಯ ಯೋಜನೆಯಲ್ಲಿಯೂ ಈ ಕಾರ್ಯವನ್ನು ನಾವು ಮುಂದುವರಿಸುತ್ತಾ ಇದ್ದೇವೆ. ಕೇಂದ್ರೀಯ ಹಾಗೂ ರಾಜ್ಯ ಸರಕಾರಗಳು ಈಗ ಉದ್ಯೋಗ, ವ್ಯಾಪಾರ, ವೈಜ್ಞಾನಿಕ ಶೋಧ, ಕೃಷಿ, ಸಮಾಜ ಕಲ್ಯಾಣ, ಕುಶಲ ಕಲೆಗಳು, ಸಾಹಿತ್ಯ ಮತ್ತು ಸಾಮುದಾಯಿಕ ವಿಕಾಸಾದಿ ಪ್ರತಿಯೊಂದು ಕ್ಷೇತ್ರ ಶ್ರಮಗಳಲ್ಲೂ ಕಾರ್ಯನಿರತವಾಗುತ್ತಲಿವೆ. ಕೇವಲ ಹತ್ತು ವರ್ಷಗಳ ಸೂರ್ವದಲ್ಲಿ ಭಾರತದ ಅಧಿಕಾಂಶ ನಿವಾಸಿಗಳಿಗೆ ಪೋಲಿಸು ಮತ್ತು ಸುಂಕ ವಸೂಲಿ ಮಾಡುವ ವಿಷಯಗಳಲ್ಲಿ ಮಾತ್ರ ಸರಕಾರದ ಪ್ರತಿನಿಧಿಯು ದೃಷ್ಟಿಗೋಚರವಾಗುತಿತ್ತು. ಆದರೆ ನಮ್ಮ ಜನತಾ ಸರಕಾರವು ಜೀವನದ ಪ್ರತ್ಯೇಕ ಕ್ಷೇತ್ರಗಳಲ್ಲೂ ಒಂದಲ್ಲೊಂದು ವಿಧಾನದ ಸುಧಾರಣೆಯನ್ನು ಕೈಗೊಳ್ಳುತ್ತಲಿದೆ. ಸ್ವತಂತ್ರತಾಪೂರ್ಣ ಚುನಾವಣೆಗಳು, ಮಜೂರ ಸಭೆಗಳು, ಸುದ್ದಿ ಸಂಸ್ಥೆಗಳು, ರಾಜನೈತಿಕ ಪತ್ರಗಳು ಮೊದಲಾದುವುಗಳಲ್ಲಿ ಸಾಧಾರಣ ವ್ಯಕ್ತಿಯ ವಿಚಾರ ಹಾಗೂ ಕಾರ್ಯಗಳು ಪ್ರತಿಫಲಿತವಾಗುತ್ತಲಿವೆ. ಐತಿಹಾಸಿಕ ಪರಿಸ್ಥಿತಿಯಿಂದಾಗಿ ಜನತೆಯ ಮೇಲೆ ತನ್ನ ಅಧಿಕಾರವನ್ನು ಚಲಾಯಿಸುತಿದ್ದ ಸರಕಾರವು ಇಂದು ಜನತೆಯ ಸೇವಕನಂತೆ ಪರಿವರ್ತಿತವಾಗಿದೆ. ಸರಕಾರೀ ಆಡಳಿತೆಯಲ್ಲಿಯೂ ಇದೇ ರೀತಿಯ ಪರಿವರ್ತನೆಯು ಕಂಡು ಬರುತ್ತದೆ.

ಬ್ರಿಟಿಷರ ಆಡಳಿತೆಯ ಕ್ರಮವು ತಮ್ಮ ಅಧಿಶಾಸ್ತ್ರವನ್ನು ಭಾರತದಲ್ಲಿ ಚಿರಸ್ಥಾಯಿಯಾಗಿರಿಸಲು ಬೇಕಾದ ವಿಧಾನದಲ್ಲಿತ್ತು. ಆದರೆ, ಅವರು ಭಾರತದಿಂದ ಹೊರಟ ನಂತರವೂ ಹೆಚ್ಚು ಮಹತ್ವಪೂರ್ಣ ವಿಷಯಗಳಲ್ಲಿ ಆಡಳಿತೆಯ ವಿಧಾನವು ಅದೇ ರೀತಿಯಲ್ಲಿ ಮುಂದುವರಿಯಿತು. ಆದರೂ ನಮ್ಮ ಸರಕಾರವು ಕೇವಲ ಪೋಲೀಸರ ಅಥವಾ ತೆರಿಗೆ ವಸೂಲು ಮಾಡುವವರ ರಾಜ್ಯವಾಗಿ ಮಾತ್ರ ಉಳಿದಿಲ್ಲ. ಈಗ ಸರಕಾರವು ಹೊಸ ದಿಂಧೆಗಳನ್ನು ಪ್ರಾರಂಭಿಸುತ್ತಲಿದೆ. ಹೊಸ ಕಾರ್ಖಾನೆಗಳನ್ನು ನಿರ್ಮಿಸುತ್ತಿದೆ. ಪ್ರತಿಯೊಂದು ಕ್ಷೇತ್ರಗಳಲ್ಲಿಯೂ ಹೊಸ ಹೊಸ ಶೋಧನೆಗಳನ್ನು ಮಾಡುತ್ತಿದೆ. ಗ್ರಾಮಾಂತರಗಳಲ್ಲಿ ಸಮಾಜ ವಿಕಾಸ ಯೋಜನೆಯನ್ನು ಹರಡಿಸುತ್ತಿದೆ. ಆದರೆ, ನಿಯಮ ಮತ್ತು ಪದ್ಧತಿಗಳು, ರಾಷ್ಟ್ರೀಯ ಪ್ರಗತಿಗೆ ಸಂಬಂಧಪಡಿರುವ ಅಗತ್ಯದ ಪ್ರಶ್ನೆಗಳ ಮೇಲೆ ಅಧಿಕಾರಿಗಳ ದೃಷ್ಟಿ, ಜವರುಟ ಪ್ರಣಿಗಳನ್ನು ಮಾಡಿಕೊಳ್ಳುವ ವಿಧಾನ, ಹಣವನ್ನು ಮುಂಜೂರು ಮಾಡುವ ಖರ್ಚು ಮಾಡುವ ಕ್ರಮಗಳು ಹತ್ತು ವರ್ಷಗಳ ಹಿಂದೆ ಹೇಗಿತ್ತೋ ಹಾಗೆಯೇ ಇಂದೂ ಇವೆ. ದೇಶದ ಸಾಧಾರಣ ವ್ಯಕ್ತಿಯು ತನ್ನ ಪ್ರತಿನಿಧಿಯನ್ನು ಆರಿಸುತ್ತಾನೆ. ಜನತೆಯ ಪ್ರತಿನಿಧಿಗಳೇ ದೇಶದ ಜನತೆಗಾಗಿ ಸರಕಾರವನ್ನು ಸ್ಥಾಪಿಸುತ್ತಾರೆ. ಆದರೆ, ಜನತೆಯಿಂದ ಹಾಗೆ ಸ್ಥಾಪಿಸಲ್ಪಟ್ಟ ಸರಕಾರಕ್ಕೂ ದೇಶದ ಬೆನ್ನೆಲುಬೆಯಾದ ಸಾಧಾರಣ ಪ್ರಜೆಗೂ ನಡುವೆಯೊಂದು ಸೊಡ್ಡಗಹನವಾದ ಕಂದಕವು ಮಾತ್ರ ಮೊದಲಿನಂತೆಯೇ ಇನ್ನೂ ಇದೆ. ಅದಿನ್ನೂ ಏರಿಬಂದಿಲ್ಲ. ಅದರ ಆಳ ಕಡಿಮೆಯಾಗಿಲ್ಲ. ಬ್ರಹದಾಕಾರದ ಪ್ರಾಕಾರವು ಇಲ್ಲವೆ ಕಂದಕವು ಜನತೆ ಮತ್ತು ಸರಕಾರದ ನಡುವೆಯಿದ್ದು ಅವರ ಸಂಬಂಧಕ್ಕೆ ತಡೆಯಾಗಿಯೇ ಉಳಿದಿದೆ.

ಈ ರೀತಿಯ ಸಂಬಂಧದ ತಡೆಯುಲ್ಲಿ ವ್ಯಕ್ತಿಯ ಪಾಲಿನ ಆತಂಕವೇನೂ ಇರುದಿಲ್ಲ. ಜನತೆಯು ಅಧಿಕಾರದಲ್ಲಿಯೇ ಆಡಳಿತೆಯನ್ನು ನಡೆಯಿಸಬೇಕಾದ ಸರಕಾರದ ಜವಾಬ್ದಾರಿಯೇ ಈ ಅಸಂಬಂಧಕ್ಕೆ ಹೇತುವಾಗಿದೆ. ಉಚ್ಚ ಪದವಿಯಲ್ಲಿ ಮಂಡಿಸಲಾದ ಅಧಿಕಾರಿಗೂ ಒಂದು ಮಿತ ಪ್ರಮಾಣದಲ್ಲಿ ಈ ಜವಾಬ್ದಾರಿಯ ಪಾಲು ಇದೆ. ಸಾಧಾರಣ ಜನತೆಯು ಮನಸ್ಸಿನಲ್ಲಿ ಸುಳಿದಾಡುವ ಉತ್ತಮೋತ್ತಮ ಭಾವನೆಗಳನ್ನಾದರೂ ಸರಕಾರದ ಗಮನಕ್ಕೆ ತರುವ ವಿಧಾನ ಯಾವುದು ಎಂಬ ಪ್ರಶ್ನೆಗೆ ಸಮರ್ಪಕ ಉತ್ತರವು ದೊರೆಯುವುದಿಲ್ಲ ನಮ್ಮ ಪ್ರಧಾನಿ ನೆಹರೂ ಒಮ್ಮೆ ಹೇಳಿದ್ದರು: "ಆಡಳಿತೆಯ ಸಮಸ್ಯೆಗಳನ್ನು ಬೌದ್ಧೋಗಿಕ ವಿಶೇಷಜ್ಞ, ಅಧ್ಯಾಪಕ, ಅಧಿಕಾರಿ, ರಾಜನೀತಿಜ್ಞ, ಮತ್ತು ಸಾಧಾರಣ ವ್ಯಕ್ತಿ ಇವರೆಲ್ಲರ ದೃಷ್ಟಿಕೋಣಗಳಿಂದಲೂ ನೋಡುವುದು ಅತಿ ಅಗತ್ಯ. ಆದರೆ ಇವರಲ್ಲಿ ಸಾಧಾರಣ ವ್ಯಕ್ತಿಯ ದೃಷ್ಟಿಕೋಣವೇ ಮಹತ್ತರವಾದುದೆಂದು ನನಗೆ ಕಾಣುತ್ತದೆ. ಸಾರ್ವಜನಿಕ ಆಡಳಿತೆಯು ದೇಶದ ಜನತೆಯನ್ನು ತನ್ನೊಂದಿಗೆ ಕರೆದುಕೊಂಡೇ ಮುಂದುವರಿಯಬೇಕು."

ಸರಕಾರವು ಆಡಳಿತೆಯ ಪುನರ್ನಿರ್ಮಾಣವನ್ನು ಮೊದಲೇ ಆಲೋಚಿಸಿತ್ತು. ೧೯೫೫ರಲ್ಲಿ ಶ್ರೀ ಎ. ಡಿ. ಗೋರವಾಲರನ್ನು ಈ ಬಗ್ಗೆ ವರದಿ ಮಾಡಲು ಕೇಳಿಕೊಂಡಿತ್ತು. ೧೯೫೬ರಲ್ಲಿ ಫೋರ್ಡ್ ಸಂಸ್ಥೆಯ ವಿಶೇಷಜ್ಞರೊಬ್ಬರು ಈ ಬಗ್ಗೆ ಒಂದು ವಿವರಣೆಯನ್ನಿತ್ತು ತನ್ನ ಸೂಚನೆಯನ್ನೂ ಸೂಚಿಸಿದರು. ಅವರು ಭಾರತ ಸರಕಾರವು ಬಹಳಮುಂದುವರಿದ ಸರಕಾರವೆಂದೂ, ದೇಶವನ್ನತಿಗಾಗಿ ಶ್ರಮಿಸುತ್ತಿದೆಯೆಂದೂ ಹೇಳಿದರು. ಜಗತ್ತಿನ ೧೨ ಉತ್ತಮ ಸರಕಾರಗಳಲ್ಲಿ ಭಾರತ ಸರಕಾರವೂ ಒಂದಾಗಿದೆ ಸರಕಾರವು ಯಾವುದೋ ಒಂದು ದೊಡ್ಡ ಕಾರ್ಯವನ್ನು ಪ್ರಾರಂಭಿಸಲು ನಿಶ್ಚಯಿಸಿ, ಅದಕ್ಕಾಗಿ ಧನದ ವ್ಯವಸ್ಥೆಯನ್ನೂ ಮಾಡುತ್ತದೆ. ಆದರೆ, ಅದು ಕಾರ್ಯರೂಪಕ್ಕೆ ಬರುವಾಗ ಮಾತ್ರ ವಿಳಂಬವೂ ಕಷ್ಟವೂ ಒದಗಿ ಬರುತ್ತವೆ. ಮಹತ್ವ ಪೂರ್ಣ ಸ್ಥಾನಗಳಲ್ಲಿ ಕುಳಿತಿರುವ ಕೆಲವು ವ್ಯಕ್ತಿಗಳು ಆ ಯೋಜನೆಯ ಯಾವುದೋ ಒಂದು ವಿಷಯದಲ್ಲಿ ತಮ್ಮ ಅಸಮ್ಮತಿಯನ್ನು ಸೂಚಿಸುತ್ತಾರೆ. ಅಥವಾ ಇನ್ನಾವುದೇ ವಿಧಾನದಿಂದ ಕಾರ್ಯವು ಕ್ಷಿಪ್ರಗತಿಲಿ ಮುಂದುವರಿಯಲು ಆತಂಕವೊಡ್ಡುತ್ತಾರೆ. ಸರಕಾರದ ಒಂದು ಅಂಶವು ಇನ್ನೊಂದಂಶದೊಡನೆ ಸಂದೇಹವಿಡುವುದೂ ಇದೆ. ಪ್ರತಿಬಾನಿಯೂ ಅಪ್ಪಣೆ ಚಲಾಯಿಸುವುದರಲ್ಲಿಯೇ ಆಸಕ್ತರಾಗಿರುತ್ತಾರೆ ಇವೆಲ್ಲ ವುಗಳಿಂದಾಗಿ, ಕಾರ್ಯಾರಂಭದಲ್ಲಿಯೇ ತಡೆಯಾಗುತ್ತದೆ.

ಈ ರೀತಿಯ ಆಡೆ ತಡೆಗಳನ್ನು ನಿವಾರಿಸಿ, ಜನತಾ ಕಾರ್ಯಕಲಾಪಗಳನ್ನು ಯೋಗ್ಯರೀತಿಯಲ್ಲಿ ಮುನ್ನಡೆಯಿಸುವುದು ಅಗತ್ಯವಾಗಿದೆ. ಹಾಗೆ ಮಾಡಿದರೆ ಸರ್ವತ್ರ ಜನತೆ ಮತ್ತು ಸರಕಾರಗಳನಡುವೆಯಿತ್ತ ಸಮ್ಮಿಲನದೆಡಬಯುವುದುಸಾಧ್ಯ. ಅಧಿಕಾರಿಗಳು ಸೌಜನ್ಯಶೀಲರಾಗಿ, ಸರಕಾರ ಮತ್ತು ಸಾಮಾನ್ಯ ಜನತೆಯ ನಡುವೆ ಸಂಬಂಧವನ್ನು ಕಲ್ಪಿಸಿಕೊಡುವ ಪಾತ್ರಧಾರಿಗಳಾಗಬೇಕು. ಹಾಗಾದಲ್ಲಿ ಜನತೆಯ ದೊಡ್ಡ ಸಂಕಾರಕ್ಕೆ ತಡೆಯುವುದು. ಸರಕಾರದ ಕಾರ್ಯಕಲಾಪಗಳೂ ಬೇಗಬೇಗನೇ ಕಾರ್ಯರೂಪದಲ್ಲಿ ಕಾಣಿಸಿಕೊಳ್ಳುವುವು.

ತನ್ನ ಸರಕಾರವು ಅವಿಶ್ರಾಂತ ಪ್ರಗತಿಯನ್ನು ಸಾಧಿಸಿದೆ, ತನಗೆ ಏನೇನು ಮಾಡಿದೆ, ಇನ್ನೇನು ಮಾಡಬೇಕಾಗಿದೆ ಇತ್ಯಾದಿ ವಿಚಾರಗಳತ್ತ ತನ್ನ ಮನಸ್ಸನ್ನು ಹರಿಸಿ, ಸರಕಾರಕ್ಕೂ ತನ್ನ ಸಲಹೆ ಸೂಚನೆಗಳನ್ನು ಕೊಟ್ಟು ತನ್ಮೂಲಕ ರಾಷ್ಟ್ರಕ್ಕೆ ಸೇವೆಯನ್ನು ಸಲ್ಲಿಸುವುದು ಪ್ರತ್ಯೇಕ ಪ್ರಜೆಯ ಕರ್ತವ್ಯ. ಅಧಿಕಾರಿಗಳೂ ತಮ್ಮ ದರ್ಶನವನ್ನು ತೋರಿಸಿದೆ ಜನತೆಯ ಸೇವೆಯನ್ನು ಮಾಡುವ ಉದ್ದೇಶವನ್ನಿಟ್ಟುಕೊಂಡ ಸರಕಾರದ ಪ್ರತಿನಿಧಿಯೆಂಬುವನ್ನು ನೆನಪಿನಲ್ಲಿಟ್ಟುಕೊಂಡು ಜನತೆಗೆ ತನ್ನಿಂದಾದಷ್ಟು ಹೆಚ್ಚು ಸೌಕರ್ಯವನ್ನು ಒದಗಿಸಿ, ಸರಕಾರ ಮತ್ತು ಜನತೆಯ ನಡುವಣ ಪ್ರಾಕಾರವನ್ನು ನೆಲಸಮಮಾಡುವುದು ಅಗತ್ಯ. ಸಂಸ್ಕಾರದ ಲಕ್ಷಣಗಟ್ಟಲೆಯು ಅಧಿಕಾರಿಗಳು ಜನತೆಯು ಸಹಯೋಗತ್ವವನ್ನು ಪಡೆದು ವಿಶ್ವಾಸ, ಸೌಹಾರ್ದ ಹಾಗೂ ಸೌಜನ್ಯಗಳಿಂದ ಕೂಡಿಕೊಂಡರೆ ಮಾತ್ರ ಸರಕಾರ ಮತ್ತು ಜನತೆಯು ಸಂಬಂಧ ಬಿಗಿಯಾಗುವುದು ಸಾಧ್ಯ. ಆಗ ಮಾತ್ರ ಕಲ್ಯಾಣ ರಾಷ್ಟ್ರ ಯೋಜನೆಯು ಕನಸಾಗದೆ ನನಸಾಗುವುದು.

—ಯೋಜನಾ.





ಹೊಸಕೆರೆ
ಚಿದಂಬರಯ್ಯನವರು
ಅನುವಾದಿಸಿದ

ಭಗವದ್ಗೀತೆಯು

ಸಮೂಲ ಭಾಷಾಂತರ

ಪೊಕೆಟ್ ಡಿಷನ್.

ಸುಮಾರು 450 ಪುಟಗಳು

ಕ್ರಯ 0—12—0

ಸನಯುಗ ಪ್ರೆಸ್, ಉಡುಪಿ.

# NAVAYUGA

Popular Kannada Weekly

*Founder:—*

**A. B. SHETTY,**
Former Minister for Public Health, Govt. of Madras & Govt of Mysore

# ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

| ಸಂಪುಟ | ಉಡುಪಿ | ಸಂಚಿಕೆ |
|---|---|---|
| ೩೩ | ೧೬-೫-೧೯೫೨ | ೩೩ |


## ಕನ್ನಡದಲ್ಲಿ ವ್ಯವಹಾರ

ಧಾರವಾಡದಲ್ಲಿ ಇದೇ ೨ನೇ ದಿನಾಂಕ ೪ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನದಿಂದ ಭಾಷಣವನ್ನು ಮಾಡುತ್ತಾ ಕನ್ನಡದ ವರಕವಿಗಳೂ ಮೈಸೂರು ವಿಶ್ವವಿದ್ಯಾನಿಲಯದ ಉಪ ಕುಲಪತಿಗಳೂ ಪ್ರಸಿದ್ಧ ಶಿಕ್ಷಣ ತಜ್ಞರೂ ಆದ ಡಾ. ಕೆ. ವಿ. ಪುಟ್ಟಪ್ಪನವರು ಶಿಕ್ಷಣ ಮಾಧ್ಯಮವನ್ನಾಗಿ ಹಾಗೂ ಆಡಳಿತದ ಭಾಷೆಯಾಗಿ ಕನ್ನಡವನ್ನು ಬಳಸಿಕೊಳ್ಳಬೇಕಾದ ಅಗತ್ಯವನ್ನು ಪ್ರತಿಪಾದಿಸಿದರು. ಬೋಧಕ ಭಾಷೆಯು ಈಗ ಸಿದ್ಧವಾಗಿ ನಿಂತಿದೆಯೆ? ನಮ್ಮ ಕನ್ನಡಕ್ಕೆ ಆ ಶಕ್ತಿ ಈಗ ಬಂದಿದೆಯೆ? ಎಂದೆಲ್ಲ ಸಂದೇಹಿಸುವುದು ಯೋಗ್ಯವಲ್ಲ ಎಂದು ಕುವೆಂಪು ಅಭಿಪ್ರಾಯಪಟ್ಟಿದ್ದಾರೆ ಆಂಗ್ಲ ಭಾಷೆಯಲ್ಲಿಯೇ ವಿಜ್ಞಾನ ಮತ್ತಿತರ ಶಾಸ್ತ್ರ ವಿಷಯಗಳನ್ನು ಕಲಿಸುವುದು ಸಾಧ್ಯ; ಇತರ ಭಾಷೆಗಳಲ್ಲಿ— ಅದರಲ್ಲೂ ಕನ್ನಡದಲ್ಲಿ ನಿಸ್ಸೃಷ್ಟವಾದ ಪದಗಳ ಕೊರತೆ ಬಹಳವಿರುವುದರಿಂದ ವಿಶ್ವವಿದ್ಯಾನಿಲಯಗಳಲ್ಲಿ ಬೋಧಕ ಭಾಷೆಯಾಗಿ ಕನ್ನಡವನ್ನು ಬಳಸಿಕೊಳ್ಳಲಾರವು ಎನ್ನುವ ಜನವರ್ಗ ದೇಶದ ವಿದ್ಯಾರ್ಥಿಗಳಿಗೆ ಮಹದನ್ಯಾಯವನ್ನು ಮಾಡುತ್ತಿದೆ ಎಂದವರು ಸ್ಪಷ್ಟಪಡಿಸಿದರು. ಆಂಗ್ಲಭಾಷೆಯು ಕೆಲವು ಉದ್ದೇಶಗಳಿಗಾಗಿ ಆವಶ್ಯವಾಗಿರಬಹುದು; ಒಳ್ಳೆಯದೂ ಆಗಿರಬಹುದು—ಆದರೆ, ಅಷ್ಟಕ್ಕಾಗಿ ದೇಶದ ಎಲ್ಲ ಮಕ್ಕಳೂ ಆಂಗ್ಲ ಭಾಷೆಯ ಮಾಧ್ಯಮದ ಮೂಲಕವಾಗಿಯೇ ಜ್ಞಾನಾರ್ಜನೆಯನ್ನು ಮಾಡಿಕೊಳ್ಳಬೇಕೆಂದು ಒತ್ತಾಯಿಸುವುದು ಎಷ್ಟಕ್ಕೂ ಸೂಕ್ತವಾದುದಲ್ಲ. ತೇನಸಿಂಗರು ಹಿಮಾಲಯದ ಅತ್ಯುನ್ನತ ಶಿಖರವನ್ನೇರಿ ಭಾರತಕ್ಕೆ ಕೀರ್ತಿ ತಂದರೆಂಬುದಕ್ಕಾಗಿ ಭಾರತದ ಎಲ್ಲ ಮಕ್ಕಳಿಗೂ ಕಡ್ಡಾಯವಾಗಿ ಪರ್ವತಾರೋಹಣದಲ್ಲಿ ಶಿಕ್ಷಣ ಕೊಡಬೇಕೆಂಬ ನಿರ್ಣಯ ಮಾಡಿಬಿಟ್ಟರೆ ಅದು ಕೇವಲ ಮೂರ್ಖತನವಾಗದೆ? ಅದೇ ರೀತಿ ಎಲ್ಲೋ ಕೆಲವು ಮಂದಿ ಪ್ರತಿಭಾವಂತ ಭಾರತೀಯರು ಆಂಗ್ಲ ಭಾಷೆಯಲ್ಲಿ ಪಡೆದ ಪಾಂಡಿತ್ಯ ಬಲದಿಂದ ಅಂತಾರಾಷ್ಟ್ರೀಯ ಖ್ಯಾತಿ ಸಂಪಾದಿಸುವದೆಂಬುದಕ್ಕಾಗಿ, ಅಥವಾ ರಾಷ್ಟ್ರಕ್ಕೆ ಅಂತಾರಾಷ್ಟ್ರೀಯ ರಂಗದಲ್ಲಿ ವ್ಯವಹರಿಸಲು ಕೆಲವು ಜನ ಬೇಕೆಂಬುದಕ್ಕಾಗಿ ಆಂಗ್ಲ ಭಾಷೆಯನ್ನೆ ಕಡ್ಡಾಯದ ಬೋಧಕ ಭಾಷೆಯಾಗಿ ಹೇರುವುದು ತರಸಲ್ಲ. ಆಂಗ್ಲ ಭಾಷೆಯ ಅಭ್ಯಾಸಕ್ಕಾಗಿ ನಾವು ಬೇಕಾದಷ್ಟು ಅನುಕೂಲತೆಗಳನ್ನು ಪ್ರತ್ಯೇಕವಾಗಿ ಒದಗಿಸುವುದಕ್ಕೆ ನಮ್ಮ ಆಕ್ಷೇಪವಿಲ್ಲ. ಆದರೆ ಬೋಧಕ ಭಾಷೆಯಾಗಿ, ಆಡಳಿತದ ಭಾಷೆಯಾಗಿ ನಾವು ಕನ್ನಡವನ್ನು ಅತ್ಯಂತ ಶೀಘ್ರದಲ್ಲಿ ಅಳವಡಿಸಿಕೊಳ್ಳದಿದ್ದರೆ ಕನ್ನಡದ ಜನತೆಗೆ ಏಳಿಗೆಯಿಲ್ಲ. ಈಗ ಸಂಕಲ್ಪವನ್ನು ಕಡ್ಡಾಯವಾಗಿ ಎಲ್ಲಿಯೂ ಕಲಿಸುವುದಿಲ್ಲ — ಆದಾಗ್ಯೂ ಸಂಸ್ಕೃತವನ್ನು ಕಲಿಯಲು ಇಷ್ಟಪಡುವವರಿಗಾಗಿ ಪ್ರತ್ಯೇಕವಾದ ವ್ಯವಸ್ಥೆಯನ್ನು ಅಲ್ಲಲ್ಲಿ ಮಾಡಲಾಗಿದೆ; ಮತ್ತಿದರ ಪ್ರಯೋಜನವನ್ನು ಪಡೆದುಕೊಂಡು ಎಷ್ಟೊ ಮಂದಿ ಸಂಸ್ಕೃತದಲ್ಲಿ ಉತ್ತಮ ಪಾಂಡಿತ್ಯವನ್ನೂ ಪಾಂಡಿತ್ಯವನ್ನೂ ಸಂಪಾದಿಸಿಕೊಂಡಿರುತ್ತಾರೆ. ಅದೇ ರೀತಿ ಆಂಗ್ಲ ಭಾಷೆಯನ್ನು ಕಲಿಯಬಯಸುವವರು ಪ್ರತ್ಯೇಕ ಶಿಕ್ಷಣವನ್ನು ಹೊಂದಿ ತಮ್ಮನ್ನು ತಾವೇ ಧನ್ಯರೆಂದು ಭಾವಿಸಿಕೊಳ್ಳಲು ಅಡ್ಡಿಯಿಲ್ಲ. ಆದರೆ ನೂರರಲ್ಲಿ ತೊಂಭತ್ತೈದಕ್ಕಿಂತಲೂ ಹೆಚ್ಚಿನ ವಿದ್ಯಾರ್ಥಿಗಳಿಗೆ ಆಂಗ್ಲ ಭಾಷೆಯೆಂದರೆನೇ ನಡುಕ ಹುಟ್ಟುತ್ತಿರುವಾಗ ಆ ಭಾಷೆಯನ್ನು ಬೋಧಕ ಭಾಷೆಯಾಗಿ ಮಾಡಿಕೊಂಡು ಬೆವರಿಸುವುದು ಜ್ಞಾನಾರ್ಜನೆ ಮಾಡಿಕೊಳ್ಳಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಕ್ರಮವಲ್ಲ. ಅಷ್ಟೇ ಅಲ್ಲ—ಇಳಿಯುತ್ತಾ ಬರುತ್ತಿರುವ ಕನ್ನಡ ಭಾಷೆಯ ಶಬ್ದಸಂಪತ್ತನ್ನು ಉಳಿಸಿಕೊಳ್ಳುವುದಕ್ಕೂ ಶಿಕ್ಷಣ ಮಾಧ್ಯಮವಾಗಿಯೂ ಆಡಳಿತದ ಭಾಷೆಯಾಗಿಯೂ ಕನ್ನಡವನ್ನು ಬಳಸಿಕೊಳ್ಳುವುದು ಅತ್ಯಂತ ಅವಶ್ಯವಾಗಿರುತ್ತದೆ. ದೈನಂದಿನ ವ್ಯವಹಾರದಲ್ಲಿ ಇಂದು ಕನ್ನಡಿಗರು ಕನ್ನಡಭಾಷೆಯ ನಡುವೆ ತಂದು ತುರುಕಿಸುತ್ತಿರುವ ಅನ್ಯ ಭಾಷೆಯ ಪದಗಳ ಒತ್ತಡವನ್ನು ನೋಡಿದರೆ, ಕನ್ನಡದಲ್ಲಿ ತಕ್ಕ ಭಾವವನ್ನು ವ್ಯಕ್ತಪಡಿಸಲು ಶಬ್ದಗಳ ಕೊರತೆ ಇಷ್ಟರಮಟ್ಟಗೂ ಇದೆಯೆ ಎಂಬ ಸಂಶಯ ಉಂಟಾಗುತ್ತದೆ. "ನನಗೆ ಅಗತ್ಯನ ಕೆಲಸವಿದೆ" ಎನ್ನುವ ಬದಲಿಗೆ "ನನಗೆ ಅರ್ಜೆಂಟಾದ ಕೆಲಸವಿದೆ" ಎಷ್ಟು ತ್ತಾರೆ; "ನಾನು ಸಂತೆ ಹೋಗುತ್ತೇನೆ" ಎನ್ನುವ ಸ್ಥಾನದಲ್ಲಿ "ನಾನು ಮಾರ್ಕೆಟ್ಟಿಗೆ ಹೋಗುತ್ತೇನೆ" ಎನ್ನುತ್ತಾರೆ; "ನಾನು ತಡವಾಗಿ ಎಂದೆನೆ?" ಎಂದು ಕೇಳಲು "ಸಾಧ್ಯವಿದ್ದರೂ "ನಾನು ಲೇಟಾಗಿ ಬಂದೆನೆ?" ಎಂದು ವಿಚಾರಿಸುವುದೇ ನಮ್ಮವರಿಗೆ ಸರಿ ಕಂಡಿದೆ, ಇದೇ ರೀತಿ ಮುಂದರಿದ್ದಾದರೆ, ಇನ್ನು ಕೆಲವು ದಶಕಗಳಲ್ಲಿ ಇಂದು ಹೊಸಗನ್ನಡದಲ್ಲಿ ಬರೆಯಲಾದ ಸುಸ್ವಕಗಳನ್ನು ಸಹ— ಹಳೆಗನ್ನಡದಲ್ಲಿ ಬರೆದ ಗ್ರಂಥಗಳನ್ನು ಈಗಿನವರು ಅರ್ಥ ಮಾಡಿಕೊಳ್ಳಲು ಪಡುತ್ತಿರುವ ಕಷ್ಟಪಂತೆ ಓದಿ ತಿಳಿಯಲು ಅವರ್ಥರಾಗಿ ಕನ್ನಡ ಪಂಡಿತರನ್ನೆ ಆಶ್ರಯಿಸಬೇಕಾದ ಪರಿಸ್ಥಿತಿ ಬಂದೊದಗಬಹುದು. ಕನ್ನಡಿಗರಿಗೆ ಇದಕ್ಕೆಂತ ಹೆಚ್ಚು ನಾಚಿಗೆ ಗೇಡಿನ ಪ್ರಸಂಗವೇನಿದೆ? ಆದುದರಿಂದ ನಾವೆಲ್ಲರೂ ಆತ್ಮಭಿಮಾನ ಕೂಸ್ಯರಾಗಬಾರದು. ಭಾರತದ ಇತರ ಭಾಷೆಗಳವರು ಈಗಾಗಲೇ ತಮ್ಮ ಭಾಷೆಯನ್ನು ಶಿಕ್ಷಣ ಮಾಧ್ಯಮಕ್ಕೂ ಆಡಳಿತಕ್ಕೂ ಬಳಸಿಕೊಳ್ಳಲು ದೃಢ ಸಂಕಲ್ಪ ಮಾಡಿರುತ್ತಾ ಕನ್ನಡಿಗರು ಮಾತ್ರ ಇನ್ನೂ ಮೀನಮೇಷದ ಎಣಿಕೆಯಲ್ಲೇ ಉಳಿಯುವುದು ಸಲ್ಲದು. ಈ ದೃಷ್ಟಿಯಿಂದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರ ಭಾಷಣವು ಕನ್ನಡಿಗರಲ್ಲಿ ಹೊಸ ಚೈತನ್ಯವನ್ನು ಮೂಡಿಸಿದೆ.

## ಉಡುಪಿ

**ಇಂಜಿನಿಯರಿಂಗ್ ಮತ್ತು ಲಾ ಕಾಲೇಜುಗಳ ಉದ್ಘಾಟನೆ**— ತಾ. 11ನೇ ಸಂಜೆ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಇಂಜಿನಿಯರಿಂಗ್ ಕಾಲೇಜಿನ್ನೂ ಕಾರ್ಮಿಕಮಂತ್ರಿ ಶ್ರೀ ಬಿ. ವಿ. ಬಾಳಿಗರು ಉಡುಪಿ ಲಾ ಕಾಲೇಜನ್ನೂ ಉದ್ಘಾಟಿಸಿದರು. ಸಭಾಧ್ಯಕ್ಷತೆಯನ್ನು ಸ್ಥಳೀಯ ಸಂಸ್ಥೆಗಳ ಆಡಳಿತ ಮಂತ್ರಿ ಶ್ರೀ ಚೆನ್ನಿಗರಾಮಯ್ಯನವರು ವಹಿಸಿದ್ದರು.

ಶ್ರೀ ನಿಜಲಿಂಗಪ್ಪನವರು ಉದ್ಘಾಟನಾ ಭಾಷಣದಲ್ಲಿ ಮಣಿಪಾಲದ ಎಕಾಡೆಮಿ ಆಫ್ ಜನರಲ್ ಎಜ್ಯುಕೇಶನಿನ ರಿಜಿಸ್ಟ್ರಾರರಾದ ಶ್ರೀ ಡಾ. ಟಿ ಎಂ. ಎ ಪೈಯವರನ್ನು ಅಭಿನಂದಿಸಿದರಲ್ಲದೆ ಉಡುಪಿಯ ಜನತೆಯ ಸಾಹಸವನ್ನು ಪ್ರಶಂಸಿಸಿದರು. ಮಾತ್ರವಲ್ಲದೆ ಈ ಜಿಲ್ಲೆಯ ಎಲ್ಲಾ ಕಾಲೇಜುಗಳೂ ಕರ್ನಾಟಕ ವಿಶ್ವವಿದ್ಯಾನಿಲಯಕ್ಕೆ ಸೇರಿಸುವುದಾಗಿ ರಾಜ್ಯಸರ್ಕಾರವು ನಿರ್ಧರಿಸಿದೆ ಎಂದು ತಿಳಿಸಿದರು.

ಶ್ರೀ ಬಾಳಿಗರು ಇಲ್ಲಿಯ ಜನತೆಯನ್ನು ಕೊಂಡಾಡಿದರಲ್ಲದೆ, ತನಗಿತ್ತ ಆದರಕ್ಕಾಗಿ ಕೃತಜ್ಞತೆಯನ್ನು ವ್ಯಕ್ತಪಡಿಸಿದರು.

ಪ್ರಸ್ತಾವನೆಯಲ್ಲಿ ಡಾ. ಪೈಗಳು ಮಂತ್ರಿತ್ರಯರಿಗೆ ಹೂಮಾಲೆಯನ್ನರ್ಪಿಸಿ ಸ್ವಾಗತ ಕೋರಿದರು.

**ನಗರ ಸಭೆಯ ಮಾನಪತ್ರ** — ಸಭಾರಂಭದಲ್ಲಿ ಉಡುಪಿ ನಗರ ಸಭೆಯ ಚೇರ್‌ಮೇನ್‌ರಾದ ಶ್ರೀ ಕೆ. ಕೆ. ಪೈಗಳು ಮಂತ್ರಿತ್ರಯರಿಗೆ ಮಾನಪತ್ರವನ್ನರ್ಪಿಸಿದರು. ಮುಖ್ಯ ಮಂತ್ರಿಯವರು ತಮ್ಮ ಭಾಷಣದಲ್ಲಿ ನಗರ ಸಭೆಗೆ ಹೊಸದ ಆದಾಯದ ತೆರಿಗೆಗಳ ಮೂಲಕ ಆದಾಯವನ್ನು ಸಚ್ಚಸಬಹುದೆಂದು ಸಲಹೆಯನ್ನಿತ್ತರು. ಮಂತ್ರಿ ಶ್ರೀ ಚೆನ್ನಿಗರಾಮಯ್ಯನವರು ನಗರದ ಅಭಿವೃದ್ಧಿಗಾಗಿ ಧನಸಹಾಯ ಬೇಕಾದರೆ ಪ್ರತ್ಯೇಕವಾಗಿ ಆವಶ್ಯಕತೆಯನ್ನು ಸರಕಾರದ ಮುಂದಿಡಬೇಕಲ್ಲದೆ ಭೂಕಂದಾಯದ ಒಂದೆಂದವನ್ನು ಕೇಳುವುದು ಯುಕ್ತವಲ್ಲ ಎಂದರು. ಬಳಿಕ ವಿವಿಧ ಸಂಘಸಂಸ್ಥೆಗಳಿಂದ ಮಂತ್ರಿ ಶ್ರೀ ಬಾಳಿಗರಿಗೆ ಮಾನಪತ್ರವನ್ನರ್ಪಿಸಲಾಯಿತು. ಕೊನೆಗೆ ಶ್ರೀ ಪಿ. ವಿ. ಆಚಾರ್ಯರು ಧನ್ಯವಾದಾರ್ಪಣೆ ಮಾಡಿದರು. ಸುಧ್ಯಾಪ್ತೆ ಕನ್ಯಾರ್ಟ ಮೆಡಿಕಲ್ ಕಾಲೇಜಿನಲ್ಲಿ ರಿಜಿಸ್ಟ್ರಾರ್ ಡಾ. ಟಿ. ಎಮ್. ಎ. ಪೈಗಳು ಮಂತ್ರಿತ್ರಯರನ್ನೂ ಆದರ ಪಂಗಡದವರನ್ನು ಸ್ವಾಗತಿಸಿ ಭೋಜನ ಸತ್ಕಾರವನ್ನಿತ್ತು ಗೌರವಿಸಿದರು.

ಶ್ರೀಮತಿ ಪ್ರೇಮಾ ಎ. ಪೈ ಮತ್ತು ಶ್ರೀ ಟಿ. ಎ ಪೈಯವರು ಏರಿಯಾದ್ಯ ಮಹಿಳಾ ಸಮಾಜ ಕೇಂದ್ರದಲ್ಲಿ ಮಂತ್ರಿತ್ರಯರನ್ನು ಸ್ವಾಗತಿಸಿದರು.

ಉದ್ಘಾಟನೆಯೆನ್ನು ಮಾಡಿದ ಮೈಸ್ಯ ಮಂತ್ರಿ ಮಾನ್ಯ ಶ್ರೀ ನಿಜಲಿಂಗಪ್ಪನವರು ಮೌನವಹಿಸಿದ್ದು ಅಸಹನೀಯವೆನಿಸಿದೆ. ಅವರಿಂದ ಕನ್ನಡಿಗರ ಜೀವಾಳವಾದ ಈ ಪ್ರಶ್ನೆಯ ಒಗ್ಗೆ, ಕನ್ನಡ ಭಾಷೆಯ ಸಂಪತ್ತನ್ನು ಕಾಯ್ದುಕೊಂಡು ಉಳಿಸಲು ಅವಶ್ಯವಾದ ಈ ಪರಿಹಾರ ಮಾರ್ಗದ ವಿಷಯದಲ್ಲಿ—ಏನು ಅಧಿಕೃತ ಅಭಿಪ್ರಾಯ ವ್ಯಕ್ತವಾಗುವುದೋ ಎಂದು ಕುತೂಹಲದಿಂದ ನಿಂತಿದ್ದ ಜನತೆಗೆ ನಿರಾಸೆಯಿಲ್ಲದೆ ಬೇರೇನೂ ಸಿಗಲಿಲ್ಲ. ಕನ್ನಡ ಸಾಹಿತ್ಯಕ್ಕೆ ಪ್ರೋತ್ಸಾಹ ಕೊಡುವ ವಿಚಾರವನ್ನೇನೋ ಶ್ರೀ ನಿಜಲಿಂಗಪ್ಪನವರು ಸಾರಿದರು—ಆದರೆ, ಸಮಸ್ಯೆಯ ತಿರುಳನ್ನು ಅವರು ಮುಟ್ಟದೆ ದೂರ ಉಳಿದರು. ಇನ್ನಾದರೂ ಸರಕಾರವು ಆಡಳಿತ ಭಾಷೆಯಾಗಿ ಮತ್ತು ಶಿಕ್ಷಣ ಮಾಧ್ಯಮವಾಗಿ ಕನ್ನಡವನ್ನು ಬಳಸುವ ನಿರ್ಣಯದಲ್ಲಿ ತನ್ನ ನಿರ್ಣಯವನ್ನು ಬೇಗನೇ ಸಾರಬೇಕೆಂದು ಒತ್ತಾಯಿಸುತ್ತೇವೆ.

## ಸಂಕ್ಷಿಪ್ತ ಸುದ್ದಿಗಳು

**ಡಾ. ರಾಜೇಂದ್ರ ಪ್ರಸಾದರು**

ಭಾರತದ ರಾಷ್ಟ್ರಪತಿಗಳಾಗಿ ಬಹುಮತದಿಂದ ಆಯ್ಕೆಗೊಂಡಿದ್ದು ಅವರ ಪ್ರತಿಜ್ಞಾವಿಧಿಯು ತಾ ೧೩ರಂದು ನೆರವೇರಿತು. ಆ ಸಮಯದಲ್ಲೇ ಉಪರಾಷ್ಟ್ರಪತಿ ಸ್ಥಾನಕ್ಕೆ ಅವಿರೋಧವಾಗಿ ಆರಿಸಿಬಂದಿರುವ ಡಾ ರಾಧಾಕೃಷ್ಣನರ ಪ್ರತಿಜ್ಞಾಸ್ವೀಕಾರವೂ ನಡೆಯಿತು.

**ನೂತನ ಲೋಕಸಭೆಯು**

ಮೊನ್ನೆ ೧೩ರಂದು ರಾಷ್ಟ್ರಾಧ್ಯಕ್ಷರಿಂದ ಉದ್ಘಾಟಿತವಾಯಿತು. ಪ್ರಚಲಿತ ಸ್ಥಿತಿಗತಿಗಳನ್ನು, ದ್ವಿತೀಯ ಪಂಚವಾರ್ಷಿಕ ಯೋಜನೆಯನ್ನು, ಇದುವರೆಗಿನ ಪ್ರಗತಿಯನ್ನು ವರ್ಣಿಸುತ್ತಾ, ರಾಷ್ಟ್ರಪತಿಗಳು ಅಣುಶಕ್ತಿ, ಥರ್ಮೋ ಅಣುಶಕ್ತಿಗಳ ಪ್ರಯೋಗಗಳನ್ನು ತಡೆಗಟ್ಟಬೇಕೆಂದು ಹೇಳಿದರು.

**ಶ್ರೀ ಎಸ್. ಎ. ಡಾಂಗೆಯವರು**

ಲೋಕಸಭಾ ಕಮ್ಯುನಿಸ್ಟ್ ಪಕ್ಷದ ನಾಯಕರಾಗಿ ಆರಿಸಲ್ಪಟ್ಟಿದ್ದಾರೆ. ಉಪ ನಾಯಕರಾಗಿ, ಶ್ರೀಗಳಾದ ಎ. ಕೆ. ಗೋಪಾಲನ್ ಮತ್ತು ಹಿರೇನ್ ಮುಖರ್ಜಿಯವರೂ ಆರಿಸಲ್ಪಟ್ಟಿದ್ದಾರೆ.

**ಸುಯೇಜ್ ಕಾಲುವೆಯಲ್ಲಿ**

ಬ್ರಿಟನ್ನು ಕನ್ನ ಹಡಗುಗಳನ್ನು ಸಂಚರಿಸಲು ಬಿಡುವುದೆಂದೂ, ಈ ಬಗ್ಗೆ ವ್ಯವಹಾರ ಹಾಗೂ ಸಂಧಿಗಳ ಮೊಬಲಗನ್ನು ಈಜಿಪ್ಟಿಗೆ ಸ್ಟರ್ಲಿಂಗ್‌ಗಳಲ್ಲಿಯೇ ಕೊಡುವುದೆಂದೂ ಪ್ರಧಾನಿ ಮೆಕ್‌ಮಿಲನರು ಸಾಮಾನ್ಯರ ಸಭೆಯಲ್ಲಿ ತಿಳಿಸಿದರು.

**ಲೋಕ ಸಭೆಯ ಅಧ್ಯಕ್ಷರಾಗಿ**

ಈ ಬಾರಿಯೂ ಶ್ರೀ ಆನಂತಶಯನಂ ಅಯ್ಯಂಗಾರರು ಅವಿರೋಧವಾಗಿ ಆರಿಸಿಬಂದಿದ್ದಾರೆ. ಪ್ರಧಾನಿ ನೆಹರೂರವರಿಂದ ಇವರ ಹೆಸರು ಸೂಚಿತವಾಗಿ ಮಂತ್ರಿ ಸತ್ಯನಾರಾಯಣ ಸಿಂಹರು ಆದನ್ನು ಅನುಮೋದಿಸಿದ್ದರು.

**ಮಲ್ಪೆಯಲ್ಲಿ ಮಂತ್ರಿತ್ರಯರಿಗೆ ಮಾನಪತ್ರ**— ತಾ. 11ರಂದು ಸುಧ್ಯಾಪ್ತೆ ಮಲ್ಪೆಯ ಗ್ರಾಮ ಕಾಂಗ್ರೆಸ್ ಸಮಿತಿಯು ಪರವಾಗಿ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪ, ಕಾರ್ಮಿಕ ಮಂತ್ರಿ ಶ್ರೀ ಬಾಳಿಗ, ಸ್ಥಳೀಯ ಆಡಳಿತೆಯ ಮಂತ್ರಿ ಶ್ರೀ ಚೆನ್ನಿಗರಾಮಯ್ಯ ಇವರಿಗೆ ಶ್ರೀ ತೇನಸ್ ಸೋಜರು ಮಾನಪತ್ರವನ್ನರ್ಪಿಸಿ ಗೌರವಿಸಿದರು. ಅದರಲ್ಲಿ ಕರಾವಳಿಯಿಂದ ಒಳನಾಡಿಗೆ ಮೀನು ಸಾಗಿಸಲು ಬೇಕಾದ ವಾಹನ, ರಸ್ತೆಗಳ ಸೌಕರ್ಯವನ್ನು ಒದಗಿಸಬೇಕು, ಈ ಪ್ರದೇಶದಲ್ಲಿ ಕೀಟೀಕರಣ ನುಜುಗಡ್ಡೆ ಕಾರ್ಖಾನೆಯನ್ನು ಸ್ಥಾಪಿಸಬೇಕು. ಇದೀ ಪರ್ಸೆಪೂ ಮೀನು ಹಿಡಿಯುವಂತೆ ಸೌಕರ್ಯವನ್ನು ಒದಗಿಸಿಕೊಡಬೇಕು. ಮಾತ್ರವಲ್ಲದೆ ಅಖಿಲಭಾರತ ಮೀನುಗಾರಿಕೆಯ ತಾಂತ್ರಿಕ ಸಂಸ್ಥೆಯನ್ನು ಸ್ಥಾಪಿಸಬೇಕು. ಮೀನುಗಾರರಿಗೆ ವಸತಿ ಸೌಕರ್ಯ, ಅವರ ಆರ್ಥಿಕ ಆಡಚಣೆಯು ಸುಧಾರಿಸುವಂತೆ ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂಬುವಾಗಿ ಕೇಳಿಕೊಂಡರಲ್ಲದೆ ಮಂಗಳೂರಿನಿಂದ ಮಲ್ಪೆ, ಮಲ್ಪೆಯಿಂದ ಭಟ್ಕಳವರೆಗೆ ಸಂಪರ್ಕವು ಹೊಂದುವಂತಾಗಬೇಕೆಂದು ಮುಂತಾಗಿ ಕೇಳಿಕೊಂಡಿದ್ದರು. ಮಾನ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಉತ್ತರಿಸುತ್ತಾ, ಸರಕಾರವು ಮೀನುಗಾರರ ಅಭಿವೃದ್ಧಿಯ ಬಗ್ಗೆ ಕೈಕೊಳ್ಳುವ ಯಾವುದೇ ಕಾರ್ಯಗಳಲ್ಲಿ ಸಾರ್ವಜನಿಕರು ಸಹಕರಿಸಬೇಕೆಂದರು.

ಆರಂಭದಲ್ಲಿ ಸುಂದ್ರಿಗಳು ಶ್ರೀ ಟಿ. ಎ. ಪೈಗಳೊಂದಿಗೆ ಆಗಮಿಸಿದೊಡನೆ ವಿಶೇಷ ಸ್ವಾಗತವೀಯಲಾಯಿತಲ್ಲದೆ ಬೇರೆ ಬೇರೆ ಮುಖಂಡರಿಂದ ಹೂಮಾಲೆಯನ್ನರ್ಪಿಸಲಾಯಿತು. ಇಲ್ಲಿಯ ಕಾರ್ಯಕ್ರಮ ಪೂರೈಸಿ ಮಂತ್ರಿಗಳು ಮೀನುಗಾರರ ಪರಿಷತ್ತಿಗೆ ತೆರಳಿದರು.

## ಸಾಹಿತ್ಯ ಸಮ್ಮೇಳನ

# ೧೯೫೭ರ ಕನ್ನಡ ಸಾಹಿತ್ಯ ಸಮ್ಮೇಳನವು ಮಾದರಿಯಾಗಲಿ

ರಾಜ್ಯ ಪುನರ್ಘಟನಾನಂತರದ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನವು ಮೊನ್ನೆ ೭, ೮ ಮತ್ತು ೯ನೆ ದಿನಾಂಕಗಳಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ಧಾರವಾಡದಲ್ಲಿ ಸೇರಿತು. ಸಮ್ಮೇಳನಕ್ಕಾಗಿ ಸಿದ್ಧಪಡಿಸಿದ ಚಿಕ್ಕ ಹಾಗೂ ಚೊಕ್ಕ ರಂಗಮಂಟಪಕ್ಕೆ ಕನ್ನಡಕ್ಕಾಗಿ ದುಡಿದ ಬಸವನಾಳರ ಹೆಸರನ್ನಿತ್ತು ಸೂಕ್ತವೇ ಆಗಿದೆ. ಈ ಸಮ್ಮೇಳನವು ಕೆಲವೊಂದು ದೃಷ್ಟಿಯಿಂದ ಮಹತ್ವದ್ದಾಗಿದೆ. ಕರ್ನಾಟಕದ ಎಳೆಯ ವಿಶ್ವವಿದ್ಯಾನಿಲಯದ ಉಪಕುಲಪತಿಗಳು ಈ ಎಳೆಯ ವಿಶ್ವವಿದ್ಯಾನಿಲಯದ ಉಪಕುಲಪತಿಗಳನ್ನು ಅಧ್ಯಕ್ಷಸ್ಥಾನಕ್ಕೆ ಆಹ್ವಾನಿಸಿದ್ದೂ ಇವುಗಳಲ್ಲಿ ಒಂದು. ಆಡುವ ನುಡಿ, ಆಲಿಸುವ ಸರಕಾರ, ಬಾಳುವ ಜನ ಒಂದಾದ ನಂತರದ ಪ್ರಥಮ ಸಮ್ಮೇಳನಕ್ಕೆ ಕನ್ನಡದ ನಾನಾ ಮೂಲೆಗಳಿಂದಲೂ ಪ್ರತಿನಿಧಿಗಳೂ ಪ್ರೇಕ್ಷಕರೂ ಕಿಕ್ಕಿರಿದು ತಮ್ಮ ಹೊಣೆಗಾರಿಕೆಯನ್ನು ನಿರ್ವಹಿಸಿದ್ದಾರೆ. ಸಮ್ಮೇಳನದಂಗವಾಗಿ ನಡೆದ ಪ್ರತಿಯೊಂದು ಕಾರ್ಯಕಲಾಪಗಳಲ್ಲಿಯೂ ಗಣನಾತೀತ ಪರಿಮಾಣದಲ್ಲಿ ಜನರು ಭಾಗವಹಿಸಿದ್ದನ್ನು ಕಾಣುವಾಗ, ಕನ್ನಡದ ಭಾಗ್ಯೋದಯವಾಯಿತೆನ್ನಬಹುದು.

ವಿದ್ಯಾರ್ಥಿಪರರಾಗಿ, ಸಿನ್ಸಿಪಾಲರಾಗಿ, ಇದೀಗ ಉಪಕುಲಪತಿಗಳಾಗಿರುವ ಡಾ. ಕು. ವೆಂ. ಪುಟ್ಟಪ್ಪನವರು ಸಾಹಿತ್ಯ ಸಮ್ಮೇಳನದ ಅಧ್ಯಕ್ಷಸ್ಥಾನಕ್ಕೆ ಈ ಮೊದಲು ಒಂದ ಕೇಳಿಕೆಗಳನ್ನು ಮನ್ನಿಸದೆ ಇದ್ದಿದ್ದರೂ, ಈ ಬಾರಿ ಏನೋ ಕಾರಣದಿಂದ ಸ್ವೀಕರಿಸಿ, ಕನ್ನಡ ನಾಡಿ ಜನರನ್ನು ಸಂತಸದ ಕಡಲಲ್ಲಿ ಮುಳುಗಿಸಿದ್ದಾರೆ; ಕನ್ನಡಿಗರ ಆಕರ್ಷಣ ಶಕ್ತಿಯಾಗಿದ್ದಾರೆ. ಕನ್ನಡದ ಸುಪ್ರಸಿದ್ಧ ಕವಿಗಳೆಂದು ಗೌರವಿತರಾದ ಇವರ ದೀರ್ಘ ಭಾಷಣವು ಕಾವ್ಯಮಯವೇ ಆಗದ್ದು, ಕನ್ನಡಿಗರೆಲ್ಲರಿಗೂ ಬೋಧಪ್ರದವಾಗಿದೆ. ಕರ್ನಾಟಕದ ಪ್ರಥಮ ಮುಖ್ಯಮಂತ್ರಿಗಳಾದ, ನಾಡೊಂದಾಗಲು ಶ್ರಮಿಸಿದ ಶ್ರೀ ಎಸ್. ನಿಜಲಿಂಗಪ್ಪನವರು ಈ ಸಮ್ಮೇಳನವನ್ನು ಉದ್ಘಾಟಿಸಿದರು. ಕರ್ನಾಟಕ ಏಕೀಕರಣಕ್ಕಾಗಿ, ಕನ್ನಡ ವಿದ್ಯಾರ್ಥಿಗಳ ಸಂಘಕ್ಕಾಗಿ, ಹಾಗೂ ಪರಿಷತ್ತಿಗಾಗಿ ಮಾಡಿದ ಕನ್ನಡದ ಕುಲಪುರೋಹಿತ ಶ್ರೀ ಆಲೂರ ವೆಂಕಟರಾಯರೂ ಉಪಸ್ಥಿತರಿದ್ದು ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಕಳೆಯೇರಿಸಿದರು.

ವಿವಿಧ ವೈಶಿಷ್ಟ್ಯಗಳಲ್ಲಿ ಸಮ್ಮೇಳನವು ಎಂದಿನಂತೆ ಜಾತ್ರೆಯಾಗಿ ಪರಿಣಮಿಸದೆ ಹೊಸ ಮಾರ್ಗದಲ್ಲಿ ನಿಂತಿರುವುದರ ರೀತಿಯನ್ನಿ ನಡೆದು ಮುಂದಿನ ಸಮ್ಮೇಳನಗಳಿಗೆ ಬಲವಾದ ಸಂಪ್ರದಾಯವನ್ನು ಹಾಕಿಕೊಟ್ಟಿತು. ಸಾಹಿತ್ಯ ಸಮ್ಮೇಳನದ ಉದ್ದೇಶವೇನು? ಅದು ಸಾಧಿಸಬೇಕಾದ ಕಾರ್ಯವೇನು ಎಂಬುದಕ್ಕೆ ಮಾರ್ಗದರ್ಶನ ಮಾಡಿತು. ಡಾರ್ಡ ಕೆಂಪಟ್ಟಳ್ಳು, ವಿಜ್ಞಾನ ರಂಗಿಕರಣ, ವಿಜ್ಞಾನ ಪುಸ್ತಕ ಪ್ರದರ್ಶನ ಹಾಗೂ ಮನರಂಜನಾದಿಗಳು ಈ ಸಮ್ಮೇಳನದ ಮಹತ್ವದ ಅಂಗಗಳಾಗಿ ಹೊಸ ಪರಂಪರೆಯನ್ನೇ ನಿರ್ಮಿಸಿದುವು. ಇದಕ್ಕೆ ಸರಿಯಾಗಿ ಸಮ್ಮೇಳನದಲ್ಲಿ ಸ್ವೀಕಾರವಾದ ಗೊತ್ತುವಳಿಗಳೂ ದಕ್ಷಿಣ ಭಾರತ ಗ್ರಂಥೋದ್ಯಮ ಮಂಡಳದ ಪುಸ್ತಕ ಪ್ರದರ್ಶನವೂ ಪ್ರಶಂಸಾರ್ಹವಾಗಿವೆ. ಕನ್ನಡದ ಸಾಂಸ್ಕೃತಿಕ ಶೈಕ್ಷಣಿಕ ಕೇಂದ್ರಗಳಲ್ಲಿ ಒಂದಾದ ಧಾರವಾಡದಲ್ಲಿ ಈ ಸಮ್ಮೇಳನವು ಸೇರುವುದು ಇದೀಗ ಮೂರನೆಸಲವಾದರೂ, ಮೇಲಿನ ದೃಷ್ಟಿಗಳಿಂದ ಹಿಂದಿನ ಜಾಡನ್ನು ಹಿಡಿಯದೆ, ಕನ್ನಡಿಗರ ರಕ್ತದಲ್ಲಿ ಇಂದು ತುಂಬಿಕೊಂಡ ಭಾವನೆಗಳನ್ನು ಕೆರಳಿಸಿತು.

ಸ್ವಾಗತ ಸಮಿತಿಯ ಅಧ್ಯಕ್ಷ ಕರ್ನಾಟಕ ವಿಶ್ವವಿದ್ಯಾನಿಲಯದ ಉಪಕುಲಪತಿ ಡಾ. ನಂದೀ ಮೊದಲಾದವರು ಎಲ್ಲರನ್ನೂ ಸ್ವಾಗತಿಸಿ, ಕನ್ನಡವು ಐದು ಪ್ರದೇಶಗಳಲ್ಲಿ ಐದು ವಿಧಗಳಲ್ಲಿ ಬಳಸಲಾಗುತ್ತಿರುವ, ಶಬ್ದ, ಅರ್ಥ, ವಾಕ್ಯ ರಚನೆಗಳಲ್ಲಿ ಅಂತರವು ಧಾರಾಳವಾಗಿರುವತ್ತನ್ನು ಗಮನವನ್ನು ಹರಿಸಿದ್ದಾರೆ "ಕನ್ನಡ ನಾಡಿನ ಏಕೀಕರಣವು ಬಹುಮಟ್ಟಿಗೆ ಪೂರ್ತಿಗೊಂಡಿರುವಾಗ ಬಳಸುವ ಶಬ್ದಗಳಲ್ಲಿ ಏಕರೂಪತೆಯನ್ನು ಸಾಧಿಸುವ ಕೂಡಿ ಇನ್ನೂ ಪೂರ್ಣವಾಗಿಲ್ಲ" ಎಂದು ತಿಳಿಸಿ, ವ್ಯವಹಾರಕ್ಕೆ ಮತ್ತು ಆಡಳಿತಕ್ಕೆ ಬೇಕಾಗುವ ಶಬ್ದಗಳಲ್ಲಿ ಏಕರೂಪತೆ ಮತ್ತು ಅರ್ಥ ಪರಿಪೂರ್ಣತೆಯಿರುವುದಗತ್ಯವೆಂದು, ಅದನ್ನು ಸರಕಾರವೂ ಪರಿಷತ್ತೂ ಗಮನಿಸಬೇಕೆಂದು ಅಭಿಪ್ರಾಯಪಟ್ಟರು.

ಮಾನ್ಯ ಮುಖ್ಯಮಂತ್ರಿ ನಿಜಲಿಂಗಪ್ಪನವರು ಕನ್ನಡ ಸಾಹಿತ್ಯ ಪರಿಷತ್ತು ಹಿಂದೆ ಸಾಹಿತ್ಯ ಕ್ಷೇತ್ರವೊಂದಕ್ಕೆ ಮಾತ್ರ ಹೆಚ್ಚು, ಗಮನವೀಯುತ್ತಿತ್ತು. ಆದರಲ್ಲಿ ಆಳವಾದ ಸಂಶೋಧನೆಗಳನ್ನು ಇನ್ನು ನಡೆಯಬೇಕು. ಈಗ ಪರಿಷತ್ತಿಗೆ ವಾಗ್ಮಿಗಳ ಅವಶ್ಯಕತೆಯಿಲ್ಲ ಬದಲು ಸಂಶೋಧಕರ ಅವಶ್ಯಕತೆಯಿದೆ ಎಂದು ಕನ್ನಡದ ಅನೇಕ ಅವಶ್ಯಕತೆಗಳಲ್ಲಿ ಒಂದನ್ನು ಸೂಚಿಸಿದರು. ಬರಹದ ಪ್ರಮಾಣ, ಕೈಬರಹ ಸಂಪಾದ್ಯ, ಗ್ರಂಥಕರ್ತರು ಬೆಳೆದೂ ಪಾಂಡಿತ್ಯ ಬೆಳವಣಿಗೆಯಾಗದ, ವಿಚಾರ ಸಾಹಿತ್ಯರಚನೆಯಾಗದ, ಕನ್ನಡಿಗರು ಅನ್ಯ ಭಾಷೆಯ ಹಾಗೂ ಆಂಗ್ಲ ಭಾಷಾ ಸಾಹಿತ್ಯಗಳನ್ನ ವಲೋಕಿಸದ ಮತ್ತು ಸಾಹಿತ್ಯ ವಿಮರ್ಶೆಯ ಕೊರತೆಗಳನ್ನು ನಿರೂಪಿಸಿ ಸರ್ವತೋಮುಖ ಪ್ರಗತಿಯನ್ನು ಸಾಧಿಸಲು ಬಹುಮುಖ ಸಾಹಿತ್ಯರಚನೆಯಾಗಬೇಕೆಂಬುದನ್ನು ತಿಳಿಸಿದರು ಇವರು ವಿಕೇತೆಯ ಮನೋಭಾವವುಳ್ಳವರಾಗಬೇಕು ಎಂದೂ ಅವರು ಸೂಚಿಸಿದರು.

ಸಮ್ಮೇಳನಾಧ್ಯಕ್ಷ ಡಾ. ಪುಟ್ಟಪ್ಪನವರು ಕನ್ನಡದಲ್ಲಿ ಎಲ್ಲ ಶಾಸ್ತ್ರಗಳನ್ನೂ ಅಭ್ಯಾಸ ಮಾಡಿಸುವುದು, ಮಾಡುವುದು ಸಾಧ್ಯ ವೆಂಬುದನ್ನು ಸ್ಪಾರಸ್ಯವಾಗಿ ವಿವರಿಸಿದರು. ಕರ್ನಾಟಕದಲ್ಲಿ ಕನ್ನಡವೇ ಶಿಕ್ಷಣದ ಮಾಧ್ಯಮವಾಗಬೇಕೆಂದು ಘೋಷಣೆಯಾಗಿ ಸಾರಿ, ಕನ್ನಡದ ಸಲುವಾಗಿ ಕನ್ನಡಿಗರು ಅತ್ಯವಶ್ಯವಾಗಿ ತಿಳಿದುಕೊಳ್ಳಬೇಕಾದ ಅಂಶಗಳನ್ನು ತಿಳಿಸಿದರು. ಸಾಹಿತ್ಯ ಪ್ರಪಂಚವನ್ನು ಒಂದು ವೇದಿಕೆಯಂತೆ ಕಾಣದೆ ಒಂದು ಸೋಪಾನ ಪಂಕ್ತಿಯಂತೆಯೋ ಆಥವಾ ಒಂದು ಪರ್ವತ ಶ್ರೇಣಿಯಂತೆಯೋ ಭಾವಿಸುವು ದುತ್ತಮವೆಂದವರು ಉಲ್ಲೇಖಿಸಿ, ನಾನಾ ವಿಧದ ಸಾಹಿತ್ಯವು ಕನ್ನಡಿಗರಿಗೆ ಬೇಕಾಗಿದೆಂದು ಸ್ಪಷ್ಟೀಕರಿಸಿದರು. ಕನ್ನಡಿಗರು ತಮ್ಮ ಶ್ರೇಯಸ್ಸನ್ನು ಕಾಪಾಡುವುದರ ಮೂಲಕವಾಗಿ ಭಾರತಕ್ಕೂ ಕೀರ್ತಿಯನ್ನು ತರುವ ಆವಶ್ಯಕತೆಯನ್ನು ಪ್ರಸ್ತಾಪಿಸಿದರು ಪಾಶ್ಚಾತ್ಯ ಮತ್ತು ಭಾರತೀಯ ಸಾಹಿತ್ಯ, ಕಾವ್ಯ ವಿಮರ್ಶೆಗಳನ್ನು ತುಲನೆ ಮಾಡಿ ನಮ್ಮ ಬಹುಮುಖ ಸಾಹಿತ್ಯವನ್ನು ನಿರ್ಮಿಸುವುದು ಅಗತ್ಯವೆಂದವರು ತಿಳಿಸಿದರು.

ಈ ಸಮ್ಮೇಳನದಲ್ಲಿ ಮೂರು ಚರ್ಚೆಗಳೂ ಒಂದು ವಿಚಾರ ಸಂಕಿರಣವೂ ಒಂದು ಕಾವ್ಯವಾಚನ ಕಾರ್ಯಕ್ರಮವೂ ಜರಗಿದುವು. ಮೊದಲನೇ ಚರ್ಚಾ ಸಮಿತಿಯ ವಿಷಯ "ನವೀನ ನಾಗರಿಕತೆ ವಸ್ತು ವಿಜ್ಞಾನಗಳ ಅಭಿವೃದ್ಧಿಗಾಗಿ ಬೇಕಾಗುವ ನೂತನ ಕನ್ನಡ ಶಬ್ದ ಪರಿಷ್ಕರಣ ಒದಗಿಸುವ ವಿಧಾನಗಳು." ಪ್ರೊ. ಕೆ. ಜಿ. ಕುಂದಣಕರರ ಅಧ್ಯಕ್ಷತೆಯಲ್ಲಿ ಡಾ. ಆರ್. ಸಿ. ಹಿರೇಮಠರ, ಸಂಯೋಜಕರಾಗಿದ್ದರು. ಶಬ್ದರೂಪಣೆಯ ವಿಧಾನಗಳನ್ನು ಚರ್ಚಿಸುತ್ತ ೧೦ ಮಂದಿ ಉದಾರ್ಯ ಸಕರು ಭಾಗವಹಿಸಿದ್ದರು. ಎಂಜನಿಯರಿಂಗ ಚರ್ಚಾಸಭೆಗೆ ಡಾ. ರಂ. ಶ್ರೀ. ಮುಗಳಿಯವರು ಅಧ್ಯಕ್ಷರಾಗಿದ್ದು ಶ್ರೀಮತಿ ಸರೋಜಿನಿ ಮಹಿಷಿಯವರು ಸಂಯೋಜಕಿಯಾಗಿದ್ದರು. ೧೬ ಉಪನ್ಯಾಸಕರು ಇದರಲ್ಲಿ ಪಾತ್ರವಹಿಸಿದ್ದರು. ಮೂರನೆ ಚರ್ಚೆ, 'ಇಂದಿನ ಕನ್ನಡದಲ್ಲಿ ಶಾಸ್ತ್ರೀಯವಾಚ್ಯ ಯಿದೆ ಕೊರತೆಗಳು ಇದ್ದುದರ ಸಮೀಕ್ಷೆ - ಇಲ್ಲಮದರ ಉಲ್ಲೇಖನ' ಈ ಸಮಿತಿಯ ಅಧ್ಯಕ್ಷರು ಡಾ. ಆರ್. ಕೆ. ಆಸುಂಡಿಯವರು, ಪ್ರೊ. ಕೆ. ಎಸ್. ನರಣರರು ಸಂಯೋಜಕರು. ಇದರಲ್ಲಿ ೧೩ ಜನರು ಭಾಗವಹಿಸಿದ್ದರು. ಸಿನ್ಸಿಪಾಲ್ ಗೋಕಾಕರ ಅಧ್ಯಕ್ಷತೆಯಲ್ಲಿ ವಿಚಾರ ಸಂಕೀರ್ಣವು ನಡೆಯಿತು. ಆರು ಉಪನ್ಯಾಸಕರು ಪಾತ್ರವಹಿಸಿದ್ದರು. ಡಾ. ಪುಟ್ಟಪ್ಪನವರ ಅಧ್ಯಕ್ಷತೆಯಲ್ಲಿ ಕಾವ್ಯವಾಚನವೂ ನಡೆದು ಹಳೆ ೧೨ ಕವಿಗಳಿದರಲ್ಲಿ ಭಾಗವಹಿಸಿದ್ದರು.

ಸಮ್ಮೇಳನದ ನಿರ್ಣಯಗಳಲ್ಲಿ 'ಮೈಸೂರು' ಎಂಬ ಹೆಸರಿನ ಜಲದಲಿಗೆ 'ಕರ್ನಾಟಕ'ವೆಂಬುದನ್ನೇ ಇಡಬೇಕೆಂಬ ಗಡಿನಾಡಿನ ಕಾಸರಗೋಡು, ಮತ್ತಿತರೆ ಮೊದಲಾದ ಕನ್ನಡ ಪ್ರದೇಶವನ್ನು ಕರ್ನಾಟಕದಲ್ಲಿ ಸೇರಿಸಲು ಪ್ರಯತ್ನಿಸಬೇಕೆಂಬ ಸಂಬಂಧಪಟ್ಟ ಸರಕಾರಗಳನ್ನು ಕೇಳಿಕೊಳ್ಳುವ ಪರಾಜ್ಯಗಳಲ್ಲಿ ಅನ್ಯಾಯವಾಗಿ ಕೋದ ಕನ್ನಡದ ಭಾಗಗಳಲ್ಲಿ ಕನ್ನಡ ಶಿಕ್ಷಣ, ಸಂಸ್ಕೃತಿಗಳ ವೇಲೆ ಆಗುತ್ತಿರುವ ಅನ್ಯಾಯವನ್ನು ತಡೆಗಟ್ಟುವಂತೆ ಕೇಳಿಕೊಳ್ಳುವ ಗೊತ್ತುವಳಿಗಳು ಮಹತ್ವದವುಗಳಾಗಿವೆ. ಇಲ್ಲವೆ ಕನ್ನಡದ ಸಾಂಸ್ಕೃತಿಕ ಸ್ಥಳಗಳ ರಕ್ಷಣೆ ಹಾಗೂ ಯಾತ್ರಿಕರಿಗೆ ಸೌಕರ್ಯವನ್ನೊದಗಿಸುವುದು, ಕನ್ನಡ ಟ್ಯುಟೋರಿಯಲ್‌ಗಳನ್ನು ಅಧಿಕ ಸಂಖ್ಯೆಯಲ್ಲಿ ತಯಾರಿಸುವುದು, ಧಾರವಾಡದ ಬಾನುಲಿ ಕೇಂದ್ರವನ್ನು ಬಲಪಡಿಸುವುದು, ಮೊದಲಾದ ಕೆಡೆಗೆ ಸರಕಾರಗಳ ಗಮನವನ್ನೆಳೆಯುವ, ಬೆಂಗಳೂರಲ್ಲಿ ಸಾಹಿತ್ಯ ಪರಿಷತ್ತು ಸಂಶೋಧನಾಲಯವನ್ನು ತೆರೆಯಬೇಕೆಂಬ, ಮೊದಲಾದ ಒಟ್ಟು ೧೫ ನಿರ್ಣಯಗಳನ್ನು ಸ್ವೀಕರಿಸಲ್ಪಟ್ಟಿತು.

ಸಾಂಪ್ರದಾಯಿಕವಾದ ಕುಂದು ಕೊರತೆಗಳು ಈ ಸಾಹಿತ್ಯ ಸಮ್ಮೇಳನದಲ್ಲಿ ಇಲ್ಲವೆನ್ನೆ ಬರುವುದಿಲ್ಲ. ಸಾಹಿತ್ಯ ಸಮ್ಮೇಳನದಂತಹ ಗುರುತರ ಸಭೆಯನ್ನು ನಡೆಸುವಾಗ ಜರಿ ಬೀಳುವುದು ಸ್ವಾಭಾವಿಕವಾಗಿಯೂ, ಸ್ಥಳದ ಭಾವ, ಊಟ ವಸತಿ ಸೌಕರ್ಯಗಳ ಕೊರತೆ, ವಿಷಯ ನಿಯಾಮಕ ಸಮಿತಿಯ ನಿರ್ಲಕ್ಷ್ಯ, ಪ್ರವೇಶದ ಹೊಸ ವ್ಯವಸ್ಥೆ ಮೊದಲಾದ ಲೋಪದೋಷಗಳು ಈ ಸಮ್ಮೇಳನವೂ ಬಿಟ್ಟಿಲ್ಲ ಆದರೂ ಒಟ್ಟಿನ ಮೇಲೆ, 'ಕರ್ನಾಟಕ'ವು ರೂಪುಗೊಂಡ ನಂತರದ ಪ್ರಥಮ ಸಾಹಿತ್ಯ ಸಮ್ಮೇಳನವು ಗಮನಾರ್ಹ ಪ್ರಗತಿಯನ್ನು ಪಡೆದಿದೆ ಮತ್ತು ಮುಂದಿನ ಸಮ್ಮೇಳನಗಳಿಗೆ ಉತ್ತಮ ಮಾರ್ಗದರ್ಶನವಾಗಿದೆಯೆನ್ನಬಹುದು. ಕನ್ನಡಿಗರೆಲ್ಲರ ಹೃದಯದಲ್ಲಿ ಪ್ರತಿಬಿಂಬಿಸಿದ ಕುವೆಂಪು ರವರ ಅಧ್ಯಕ್ಷತೆಯೆ ಈ ಸಾಹಿತ್ಯಸಮ್ಮೇಳನದ ಏಷ್ಯಮಕ್ಕೆ ಕಾರಣವೆಂದೂಹಿಸಬಹುದು.

---

### ಜಪಾನಿನ ಟೋಕಿಯೋದಲ್ಲಿ

ಮುಂದಿನ ಅಗಸ್ಟ್ ೬ರಂದು ಪಡೆಯಲಿರುವ ಅಣು ಮತ್ತು ಜಲ ಜನಕ ಬಾಂಬುಗಳ ವಿರುದ್ಧ ವಿಶ್ವ ಸಮ್ಮೇಳನದಲ್ಲಿ ಭಾರತವೂ ಸಹಭಾಗಿ ಯಾಗುವುದೆಂದು ತಿಳಿದು ಬಂದಿದೆ. ಈ ಸಮ್ಮೇಳನವು ಸರ್ವ ಪಕ್ಷೀಯ ಜಪಾನಿನ ಸಮಿತಿಯ ಆಶ್ರಯದಲ್ಲಿ ನಡೆಯುತ್ತದೆ.

### ಕೇಂದ್ರ ಶಿಕ್ಷಣ ಖಾತೆಯು

ಭಾರತದ ಶಿಕ್ಷಣ ವಿಧಾನದಲ್ಲಿ ಯಥೌಚಿತ್ಯ ಮತ್ತು ಮಾನವೀಯತೆಯಿರುವಂತೆ ಮಾಡಲು ಕಾರ್ಯಪ್ರವೃತ್ತವಾಗಿದೆ ಎಂದು ಕೇಂದ್ರ ವಿದ್ಯಾಮಂತ್ರಿ ಶಾಖಾಕಾರ್ಯದರ್ಶಿ ಪ್ರೊ. ನಾಯಿದಾನಿಯವರು ತಿಳಿಸಿದರೆ. ಪರೀಕ್ಷೆಗಳಲ್ಲಿ ಅಧಿಕ ವಿಶ್ವಾಸಾರ್ಹ ಸುಧಾರಣೆಗಳನ್ನು ಮಾಡುವುದೊಳ್ಳೆಯದಲ್ಲವೆ, ಅವನ್ನು ಕೆಲ್ಟಪ್ಪಾಕುತ್ತಿದರಲ್ಲಿ ಅರ್ಥವಿಲ್ಲ ವೆಂದವರು ಅಭಿಪ್ರಾಯಪಟ್ಟರು.

---


### ನೋಟೀಸು.

**ಕುಂದಾಪುರ ಡಿ.ಮು. ಕೋರ್ಟಿನಲ್ಲಿ**

R. E. P. 90/1957 O. S. 603/1953.

ಜನ್ನ ವಾಸುದೇವ ಉಪ್ಪು —ಅರ್ಜಿದಾರರ ಮುತ್ತು

ಸೀತಾರಾಮು ಕಾರಂತ ಕೂಡಾ —ಎದ್ರಿರು ಇವರೊಳಗೆ

ಕುಂದಾಪುರ ತಾಲೂಕು ಉಪ್ಪಿನಕುದ್ರು ಗ್ರಾಮದಲ್ಲಿರುವ ಮಂಜುನಾಥ ಕಾರಂತರ ಮಗಂದಿರು ಸಿದ್ರಿ ಅಲ್ಲಾರಿಯು 1, 3, 4ನೇ ಎದ್ರಿರವರ ಸೀತಾರಾಮು ಕಾರಂತರು 1, ಶೇಷಗಿರಿ ಕಾರಂತರು 1, ಪದ್ಮನಾಭ ಕಾರಂತರು 1, ಕೂಡಾ ಇವರಿಗೆ ತಿಳಿಸುವುದೇನಂದರೆ ಮೇಲ್ಕಂಡ ಅರ್ಜಿದಾರನು ಮೂಲಂಗೇನಿ ಬೀಕಿಬರ್ಗೆ ನೀವು ಕೂಡಾ ಎದ್ರಿರ ಮೇಲೆ ಪಡಿದ ಮೇಲ್ಕಂಡ ಮೂಲತಿದ ದಿಕ್ಕಿನ ಮೇಲೆ ನಡಿಸಿದ ಸದ್ರಿ ಅಮಲ್ದಾರಿಯಲ್ಲಿ ಪಲಂಮಿನ ಶರತ್ತುಗಳನ್ನು ನಿರ್ಣಯಿಸುವ ಬಗ್ಗೆ ತಾರೀಕು 11—6—1957ಕ್ಕೆ ಇಡೋಣಾಗಿಯವೆ ಈ ಕುರಿತು ಆಕ್ಷೇಪಣೆ ಇರುವುದಾದರೆ ಸದ್ರಿ ದಿನ ಸಕೋರ್ಟುಮುಂತಿ ಹಾಜರಾಗಿ ಜಾಹೀರು ಮಾಡಿಕೊಳ್ಳಬಹುದು.

(Sd) A. V. N. Hebbar,
Vakil for D. H. Petitioner.

ಕುಂದಾಪುರ, ತಾ. 12—5—57.

## ಮಿನುಗಾರರ ಪರಿಷತ್ತು

**ಮಹಾ ಮೈಸೂರು ಮಿನುಗಾರರ ಪರಿಷತ್ತಿನಲ್ಲಿ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪ ಮತ್ತು ಕಾರ್ಮಿಕ ಮಂತ್ರಿ ಶ್ರೀ ಬಾಳಿಗರು**– ತಾ. 11 ಮತ್ತು 12ರಂದು ಮಲ್ಪೆಯ ಫಿಶರೀಸ್ ಹೈಸ್ಕೂಲಿನ ಸಭಾಭವನದಲ್ಲಿ ಸಂಜೆ ಮಹಾ ಮೈಸೂರು ಮಿನುಗಾರರ ಸಮ್ಮೇಳನವು ಜರಗಿತು. ಈ ಪರಿಷತ್ತನ್ನು ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಉದ್ಘಾಟಿಸಿದರು ಅವರು ತಮ್ಮ ಭಾಷಣದಲ್ಲಿ ವಿವಿಧ ಕನ್ನಡ ಭಾಗಗಳು ಒಟ್ಟು ಸೇರಿ, ಮಹಾ ಮೈಸೂರು ಪ್ರಾರಂಭಕ್ಕೆ 180 ಮೈಲು ಉದ್ದದ ಸಮುದ್ರ ಕರಾವಳಿಯು ದೊರೆತಿದೆ. ಇದರ ಅಭಿವೃದ್ಧಿಯ ಬಗ್ಗೆ ಕೇಂದ್ರ ಸರಕಾರದೊಡನೆ ವ್ಯವಹರಿಸಿ, ಒಂದೆ ಯೋಜನೆಯನ್ನು ಕಾರ್ಯಗತಗೊಳಿಸಿದ್ದೇವೆ. ಈ ಮೀನ್ಗೆ ವ್ಯವಸಾಯವನ್ನು ಅನಲಂಬಿಸಿ ಜೀವಿಸುವ ಜನರಿಗೆ ಬೇಕಾದ ಸೌಕರ್ಯವನ್ನು ದೊರಕಿಸಿಕೊಟ್ಟರೆ ದೇಶದ ಸಂಪತ್ತು ವೃದ್ಧಿಯಾಗಲು ಸಹಾಯವಾಗಿ ಸಿಕ್ಕಿದಂತಾಗುವುದು. ಅದುದರಿಂದ ಇದರ ಅಭಿವೃದ್ಧಿಯ ಬಗ್ಗೆ ಎಷ್ಟೇ ಖರ್ಚು ತಗಲಿದರೂ ಕೇಂದ್ರದಿಂದ ಸಹಾಯ ಪಡೆದಾಗಲಿ, ಬೇರೆಡೆಯಿಂದ ಸಾಲ ಪಡೆದಾಗಲೀ ಯಾವ ರೀತಿಯಿಂದಲಾದರೂ ಸಾಧಿಸುವೆವು ಎಂದರು. ನಾವೆತ್ತವಲ್ಲದೆ ಈ ಪ್ರದೇಶದಲ್ಲಿ ಅತುಲನೈಸರ್ಗಿಕಸಂಪತ್ತಿದೆ ಆದರೆ ಅದನ್ನು ನಾವು ಸರಿಯಾದ ರೀತಿಯಲ್ಲಿ ಉಪಯೋಗಿಸುತ್ತಿಲ್ಲ. ಇದು ನಮ್ಮ ತಪ್ಪೇ ಹೊರತು ನಿಸರ್ಗದ್ದಲ್ಲ ಇತ್ತಿ ಕಾಫಿ, ಶ್ರೀಗಂಧ ಮೊದಲಾದವುಗಳು ಬೇಕಾದಷ್ಟು ಇವೆ. ಇಲ್ಲಿಯ ಸಮುದ್ರದಲ್ಲಿ ದೊರೆಯುವ ಮೀನುಗಳಿಗೆ ಪರದೇಶಗಳಲ್ಲಿ ಯೋಗ್ಯವಾದ ಬೆಲೆಯಿದೆ. ನಾವು ಒಳ್ಳೆಯ ರೀತಿಯಿಂದ ಇದರ ಬೆಳೆಯನ್ನು ಹೆಚ್ಚಿಸಿದರೆ ಆರ್ಥಿಕ ಆಪತ್ತಿನಿಯು ಕಡಿಮೆಯಾಗಿ ಅಳ ಕಡಲ ಮೀನುಗಾರಿಕೆ, ಕರಾವಳಿ ಮೀನುಗಾರಿಕೆಗಳ ಅಭಿವೃದ್ಧಿ ಪಡಿಸಬಹುದು. ಎಂದರು.

ಮಂತ್ರಿಗಳು ಮಂಡುವರಿಯುತ್ತಾ ಮಲ್ಪೆಯನ್ನು ಪ್ರಬುದ್ಧ ಬಂದರವಾಗಿ ಮಾಡಲು ಈ ಮೊದಲೇ ಅನುಮೋದಿಸಿದ್ದೇವೆ. ಆದೂ ಅಲ್ಲದೆ ಕಾರವಾರವು ಹಡಗು ಕಟ್ಟುಗಕೇಂದ್ರವಾಗಿಯೂ, ಬಟ್ಕಳವು ನಾಡ್ಡಿ ವ್ಯವಸಾಯ ಬಂದರವಾಗಿಯೂ ಮಾಡಲು ಕೇಂದ್ರದೊಡನೆ ವ್ಯವಹರಿಸುತ್ತಾ ಇದ್ದೇವೆ. ಒಟ್ಟಿನಲ್ಲಿ ಈ ವ್ಯವಸಾಯದ ಅಭಿವೃದ್ಧಿಯ ಬಗ್ಗೆ ಸತತ ಪ್ರಯತ್ನಿಸುವೆ ಎಂದರು.

ಪ್ರಥಮದಲ್ಲಿ ಮಂತ್ರಿತ್ರಯರಿಗೆ ಸ್ವಾಗತ ಸೀಡಿ ಡಾ. ಎಸ್. ಜಂಪರವರು ಸ್ವಾಗತವನ್ನಾಡಿದರು. ಕಾರ್ಮಿಕ ಮಂತ್ರಿ ಶ್ರೀ ಬಾಳಿಗರು ಇದರ ಆಂಗಡವಾಗಿ ನಿರ್ಮಿಸಿದ ಮಿನುಗಾರಿಕೆಯ ವಸ್ತು ಪ್ರದರ್ಶನವನ್ನು ಉದ್ಘಾಟಿಸಿದರು. ಅವರು ತಮ್ಮ ಭಾಷಣದಲ್ಲಿ ಈ ವ್ಯವಸಾಯದ ಅಭಿವೃದ್ಧಿಯ ಬಗ್ಗೆ ಅಖಿಲಭಾರತ ಮಿನುಗಾರಿಕೆಯ ಬೋರ್ಡು ಸ್ಥಾಪಿಸಬೇಕು. ಇದು ಸಾಧ್ಯವಿಲ್ಲದಿದ್ದರೆ ಮೈಸೂರು ಎನ್ಸಾಂತ್ಕಕ್ಕಾದರೂ ಒಂದು ಬೋರ್ಡು ರಚಿಸಬೇಕು ಎಂದರು.

ಪರಿಷತ್ತಿನ ಅಂಗವಾಗಿ ಏರ್ಪಡಿಸಿದ ಮಹಿಳಾಸಮ್ಮೇಳನದ ಸ್ವಾಗತಸಮಿತಿ ಸಭೆರವಾಗಿ ಕುಮಾರಿ ಸುಶೀಲಾ ಮಲ್ಪೆ ಇವರು ಸ್ವಾಗತ ಮಾತುಗಳನ್ನಾಡಿದರು. ಶ್ರೀಮತಿ ಚಿನ್ನಮ್ಮನವರು ಪ್ರತಿ ಹಳ್ಳಿಯಲ್ಲಿ ಹೆರಿಗೆ ಕೇಂದ್ರ, ಶಿಶುವಿಹಾರ ಕೇಂದ್ರಗಳನ್ನು ರಚಿಸಬೇಕೆಂದು ವಿನಂತಿಸಿದರು.

ವಿದ್ಯಾರ್ಥಿ ಸಮ್ಮೇಳನದ ಪರವಾಗಿ ಶ್ರೀ ಚಂದ್ರಶೇಖರು ಸ್ವಾಗತಭಾಷಣಮಾಡಿದರು. ಶ್ರೀ ಎಂ. ರವಿರಾಜರು ಮಿನುಗಾರರ ಪರಿಸ್ಥಿತಿಯನ್ನು ವಿವರಿಸಿದರಲ್ಲದೆ ಶಿಕ್ಷಣ ಮೊದಲಾದ ಕ್ಷೇತ್ರಗಳಲ್ಲಿ ಯಾವ ರೀತಿಯ ಸುಧಾರಣೆ ಯಾಗಬೇಕೆಂದು ಕೇಳಿಕೊಂಡರು.

ಬೆಳಿಗ್ಗೆ ಶ್ರೀ ಯು. ಎಸ್. ನಾಯಕ್, ಎಂ. ಎಲ್. ಎ.ಯವರು ಧ್ವಜಾರೋಹಣ ಮಾಡಿದರು ಶ್ರೀ ಎಚ್. ತಿಂಗಳಾಯರು ಧನ್ಯವಾದವನ್ನರ್ಪಿಸಿದರು

ನಂತರ ಸ್ಯಾತ್ರಿತ್ರಯರು ಮಲ್ಪೆಯನ್ನು ಸಂದರ್ಶಿಸಿ ಉಡುಪಿಗೆ ತೆರಳಿದರು.

ಮರುದಿನ ಪ್ರತಿನಿಧಿಗಳ ಸಭೆಯು ಶ್ರೀ ಯು. ವಿಶ್ವನಾಥ ಎಡ್ಡೊಕೇಟ್ ಇವರ ಅಧ್ಯಕ್ಷತೆಯಲ್ಲಿಯೂ ಪ್ರತಿನಿಧಿಗಳ ನಿರ್ಧಾರಗಳ ನಿರೂಪಣೆ ಹಾಗೂ ಬಹಿರಂಗ ಅಧಿವೇಶನವು ಶ್ರೀ ಕೆ. ಕೆ. ಸೆಟ್ಟಿ, ಎಂ. ಎಲ್. ಸಿ. ಇವರ ಅಧ್ಯಕ್ಷತೆಯಲ್ಲಿಯೂ ಜರಗಿತು.

**ಮೂಲ್ಕಿಯಲ್ಲಿ ಕಾರ್ಮಿಕ ಮಂತ್ರಿ ಶ್ರೀ ಬಾಳಿಗರು:** ತಾ 9ರಂದು ಕಾರ್ಮಿಕ ಮಂತ್ರಿ ಶ್ರೀ ವೈ.ಕಾಂತ ಬಾಳಿಗರು ಕಷ್ಟಕ್ಕೆ ರಾಗಿ ಜಿಲ್ಲಾ ಕಲೆಕ್ಟರ್ ಶ್ರೀ ನರಸಿಂಹ, ಶ್ರೀ ಬಿ. ಆರ್. ಕರ್ಕೇರ ಎಂ. ಎಲ್. ಎ. ಮೊದಲಾದವರೊಡನೆ ಮೂಲ್ಕಿಗೆ ಆಗಮಿಸಿದರು. ಅಲ್ಲಿಯ ಸಕಲ್ಲ ಕಾಂಗ್ರೆಸಿನ ಪರವಾಗಿ ಶ್ರೀ ಎಂ. ಆರ್. ಹರಿಪೂಜರು ಮಾನಪತ್ರವನ್ನು ಮಾನ್ಯ ಮಂತ್ರಿಗಳಿಗೆ ಅರ್ಪಿಸಿದರು. ಶ್ರೀ ಬಾಳಿಗರು ಅದಕ್ಕೆ ಉತ್ತರಕೊಡುತ್ತಾ ಜಿಲ್ಲೆಯಲ್ಲಿ ನಿರುತ್ತಿರುವ ಆಕ್ಕಿಯ ಧಾರಣೆಯನ್ನು ತಡೆಗಟ್ಟಲು ಮಂಗಳೂರಿನಲ್ಲಿ ಸರಕಾರ ಕೇಂದ್ರ ಆಕ್ಕಿ ಡಿಪೊ ಒಂದನ್ನು ತೆರೆಯಲು ಮೈಸೂರು ಸರಕಾರ ಕೇಂದ್ರ ಸರಕಾರದೊಡನೆ ಯತ್ನಿಸುತ್ತಿದೆ ಎಂದರು. ಅಲ್ಲದೆ ಮೂಲ್ಕಿಯಲ್ಲಿ ಒಂದು ಕಾಲೇಜಿನ ಅವಶ್ಯಕತೆಯು ನಿಜವಾದದ್ದು. ಅದಕ್ಕೆ ಸಾರ್ವಜನಿಕರು ಧನ ಸಹಾಯವನ್ನಿತ್ತು ಸಹಕರಿಸಬೇಕಲ್ಲದೆ ತಮ್ಮ ಗ್ರಾಮದ ಅಭಿವೃದ್ಧಿಯ ಬಗ್ಗೆ ಮುತುವರ್ಜಿ ವಹಿಸಬೇಕೆಂದು ಕೇಳಿಕೊಂಡರು. ಸಮಾಜ ಸರಕಾರವು ಮೂಲ್ಕಿ ಬಂದರದ ಅಭಿವೃದ್ಧಿಯ ಕಡೆಗೂ ಗಮನ ಕೊಡಬಹುದು ಯಾಕೆಂದರೆ ಮೈಸೂರು ಸರಕಾರವು ಬಂದರಗಳ ಅಭಿವೃದ್ಧಿಯ ಕಡೆಗೆ ಹೆಚ್ಚಿನ ಆಸಕ್ತಿ ವಹಿಸುತ್ತಿದೆ. ಎಂದು ಮುಂತಾಗಿ ಹೇಳಿದರು. ಸಭಾಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ಬಿ. ಆರ್. ಕರ್ಕೇರ ಎಂ. ಎಲ್. ಎ. ಅವರು ಸಂಕಾರವು ಕೈಗೊಳ್ಳುವ ಯಾವುದೇ ಅಭಿವೃದ್ಧಿ ಕಾರ್ಯಗಳಲ್ಲಿ ಜನತೆಯು ಸಹಕರಿಸಬೇಕೆಂಬುದಾಗಿ ತಮ್ಮ ಭಾಷಣದಲ್ಲಿ ಹೇಳಿದರು.

ಪ್ರಥಮದಲ್ಲಿ ಸರ್ಕಲ್ ಕಾಂಗ್ರೆಸಿನ ಕಾರ್ಯದರ್ಶಿ ಶ್ರೀ ಎಸ್. ಟಿ. ಸುವರ್ಣರು ಸ್ವಾಗತಿಸಿದರು. ಶ್ರೀ ಪುರುಷೋತ್ತಮ ಕಾಮತರು ವರ್ತಕ ಸಂಘದ ಪರವಾಗಿ ಮಾನಪತ್ರವೊಂದನ್ನು ಮಂತ್ರಿಗಳಿಗೆ ಅರ್ಪಿಸಿದರು.

**ಕಟೀಲಿನ ಶ್ರೀ ದುರ್ಗಾ ಪರಮೇಶ್ವರಿ** ದೇವಸ್ಥಾನವನ್ನು ಸಂದರ್ಶಿಸಿದರು. ಶ್ರೀ ಶ್ರೀಧರ ಸೆಟ್ಟಿ ಮತ್ತು ಡಾ. ಎಸ್. ಜಂಪರವರು ಮಂತ್ರಿಗಳನ್ನು ಸ್ವಾಗತಿಸಿದರು.

**ಪಡುಬಿದ್ರೆ**—ತಾ. 9ರಂದು ಕಾರ್ಮಿಕ ಮಂತ್ರಿ ಶ್ರೀ ಬಾಳಿಗರು ಪಡುಬಿದ್ರೆಯ ಸ್ತ್ರೀ ಮತ್ತು ಶಿಶು ಶ್ರೇಯೋಭಿವೃದ್ಧಿ ಕೇಂದ್ರವನ್ನು ಉದ್ಘಾಟಿಸಿದರು. ಶ್ರೀಮತಿ ಪ್ರೇಮಾ ಎ. ಪೈಗಳು ಪ್ರಾರ್ಥನೆಯನ್ನೋದಿದರು. ಮಾನ್ಯ ಮಂತ್ರಿಗಳು ತಮ್ಮ ಭಾಷಣದಲ್ಲಿ ಪ್ರತಿಯೊಂದು ಗ್ರಾಮದಲ್ಲಿಯೂ ಇಂಥಹ ಕೇಂದ್ರವನ್ನು ತೆರೆಯಬೇಕೆಂದು, ಶಿಶು ಸಂರಕ್ಷಣಾ ಕೇಂದ್ರವನ್ನು ತೆರೆಯಬೇಕಲ್ಲದೆ, ಸುಹೆಳೆಯರ ಮಾನಸಿಕ ಮತ್ತು ಸಾಂಪತ್ತಿಕ ಅಭಿವೃದ್ಧಿಯ ಬಗ್ಗೆ ಹೆಚ್ಚಿನ ಮಹಿಳಾಭಿವೃದ್ಧಿ ಕೇಂದ್ರಗಳನ್ನು ತೆರೆಯಬೇಕೆಂದರು. ಇದಕ್ಕೋಸ್ಕರ ಶ್ರೀ ಟಿ.ಎ. ಪೈ, ಪ್ರೇಮಾ ಎ. ಪೈ, ಗೋಪಾಲ ಹೆಗ್ಡೆ ಮೊದಲಾದವರು ಕುಬಾ ದುಡಿಯುತ್ತಿದ್ದಾರೆ. ಅವರೊಂದಿಗೆ ಸಾರ್ವಜನಿಕರು ಸಹಕರಿಸಬೇಕಲ್ಲದೆ ಸರಕಾರವು ಇಂಥಹ ಕಾರ್ಯಗಳಿಗೆ ನೆರವು ನೀಡುವುದೆಂದೆ ಎಂದು ಮುಂತಾಗಿ ಹೇಳಿದರು. ಸಭಾಧ್ಯಕ್ಷತೆಯನ್ನು ಶ್ರೀ ಬಿ. ಬಿ. ಸೆಟ್ಟರು ವಹಿಸಿದ್ದರು. ಚಿಕ್ಕ ಮಕ್ಕಳಿಂದ ಕುಮ್ಮಿ ಕೋಲಾಟ ಮೊದಲಾದ ಚಟುವಟಿಕೆಗಳಾದ ನಂತರ ಶ್ರೀ ಟಿ. ಎ. ಪೈಗಳು ಭಾಷಣ ವಿತ್ತರು. ಶ್ರೀ ಶಿವಣ್ಣ ಹೆಗ್ಡೆ ಯನ್ನರು ಧನ್ಯವಾದಗಳನ್ನರ್ಪಿಸಿದರು.

**ಕುಂದಾಪುರದಲ್ಲಿ ಕಾರ್ಮಿಕಮಂತ್ರಿ ಶ್ರೀ ಬಾಳಿಗರು**.ತಾ 10ರಂದು ಕುಂದಾಪುರದ ಗೀತಾ ಟಾಕೀಸಿನಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಮಾತನಾಡುತ್ತಾ, ಯಾವುದೇ ರೀತಿಯ ಪಕ್ಷಭೇದವನ್ನೆಣಿಸದೆ ಜಿಲ್ಲೆಯ ಹಿತದೃಷ್ಟಿಯಿಂದ ಯಾವಾಗಲೂ ಶ್ರಮಿಸುವೆನೆಂದೂ, ಸರಕಾರವು ತೊಡಗಿಸುವ ಯಾವುದೇ ಕೆಲಸವು ಯಶಸ್ವಿಯಾಗಬೇಕಾದರೆ ಸಾರ್ವಜನಿಕರ ನೆರವು ಆತ್ಯವಶ್ಯಕ. ಇಲ್ಲಿಗೊಂದು ಕಾಲೇಜಿನ ಆವಶ್ಯಕತೆ ಇದೆ. ಆದರೆ ಇದೀಗಲೇ ಮೂರು ಕಡೆಗಳಲ್ಲಿ ಕಾಲೇಜು ಸ್ಥಾಪಿಸಬೇಕೆಂದು ಕೇಳಿಕೊಂಡಿರುವರು ಅದುದರಿಂದ ಎಲ್ಲಾ ಕಡೆಗಳನ್ನು ಸರಕಾರ ವಹಿಸಲು ಸಿದ್ಧವಿರಲಿಕ್ಕಿಲ್ಲ. ಇದ್ದಿಯನರು ಯೋಗ್ಯರೀತಿಯಲ್ಲಿ ಸಹಕರಿಸಿದರೆ ಆಮ ಸಾಧ್ಯವಾಗಬಹುದೆಂದು ಹೇಳಿದರು. ಕುಂದಾಪುರ, ಗಂಗೊಳ್ಳಿ ಮೊದಲಾದೆಡೆಗಳಲ್ಲಿ ನ್ಯಾಯ ಬೆಲೆಯಂಗಡಿಯನ್ನು ತೆರೆಯುವಂತೆ ತಿಳಿಸುವೆನೆಂದು ಹೇಳಿದರು ಅಲ್ಲದೆ ಮಂಗಳೂರಲ್ಲೊಂದು ಸರಕಾರಿ ಆಕ್ಕಿ ಡಿಪೊ ಒಂದನ್ನು ಸ್ಥಾಪಿಸಲು ಯತ್ನಿಸ.ವುದಾಗಿ ಹೇಳಿದರು.

ಪಂಚಾಯತಿನ ಅಧ್ಯಕ್ಷ ಶ್ರೀ ಕೆ. ಪೆಂಕಪ್ಪ ಶೆಟ್ಟರು ಸಭಾಧ್ಯಕ್ಷತೆ ವಹಿಸಿದ್ದರು. ಪ್ರಥಮದಲ್ಲಿ ಶ್ರೀ ವೈ.ಮಂಜಯ್ಯ ಶೆಟ್ಟಿ ಎಂ. ಎಲ್. ಎ. ಯನರು ಸ್ವಾಗತಿಸಿದರು.

ಸರ್ಕಲ್ ಕಾಂಗ್ರೆಸಿನ ಪರವಾಗಿ ಶ್ರೀ ಎಂ. ಎಂ. ಹೆಗ್ಡೆಯವರು ಕೋಟಿ ಫಿಶರಿಸ ಮತ್ಸ್ಯ ವ್ಯವಸಾಯಿಗಳ ಪರವಾಗಿ ಶ್ರೀ ಸೋಮು ಪೂರಕಾಲರೂ ಮಂತ್ರಿಗಳಿಗೆ ಮಾನಪತ್ರಗಳನ್ನು ಅರ್ಪಿಸಿದರು. ಶ್ರೀ ಎನ್. ಎಸ್. ಹಕ್ಲಾಡೇಶ್ವರಯ್ಯನವರು ಧನ್ಯವಾದಾರ್ಪಣೆ ಮಾಡಿದರು.

ಭೋಜನಾನಂತರ ಮಾನ್ಯಮಂತ್ರಿಗಳು ಕುಂದಾಪುರದ ಗಣ್ಯ ವಕೀಲರಾಗಿದ್ದ ದಿ. ಶ್ರೀ ಎಂ ನಾರಾಯಣ ಕಾಮತರ ಭಾವಚಿತ್ರವನ್ನು ಅನಾವರಣಗೊಳಿಸಿದರು.

ಗಂಗೊಳ್ಳಿ ಬಂದರಿನ ಸಂದರ್ಶನಾನಂತರ ಶ್ರೀ ನ್ಯಾ ಮಂಜಯ್ಯ ಶೆಟ್ಟಿ ಎಂ. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಿಗಿದ ಸಭೆಯಲ್ಲಿ ಮಾತನಾಡಿದರು. ಪ್ರಥಮದಲ್ಲಿ ಶ್ರೀ ಎಸ್. ಕಾಮತರು ಸ್ವಾಗತಿಸಿದರು. ಗಂಗೊಳ್ಳಿ ಗ್ರಾಮಸೇವಾ ಸಂಘದವರು, ವರ್ತಕರ ಸಂಘದವರು, ಮೀನುಗಾರ ಸಹಕಾರಿ ಸಂಘದವರು ಮಂತ್ರಿಗಳಿಗೆ ಮನವಿಯನ್ನರ್ಪಿಸಿದರು.

ನಂತರ ಮಾನ್ಯ ಮಂತ್ರಿಗಳು ಹೆಬ್ರಿ, ಶೀರಾಡಿ, ಮೂಡಬಿದ್ರೆ ಮೊದಲಾದಡೆಯಲ್ಲಿ ಜರಿಗಿದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

**ಹೊಂಬಾಡಿ ಮಂಡಾಡಿ**— ಇದೇ ತಾ. 8ರಲ್ಲಿ ವಿಶೇಷೋದಯ ಪ್ರೌಢ ಪ್ರಾಥಮಿಕ ಶಾಲಾ ಸಭಾಂಗಣಕ್ಕೆ ಸಭಾಂಗಣಕ್ಕೆ ಮಾನ್ಯ ಕುಂದಾಪುರ ವಿವಿಜ್ಞಾ ವಿವಿಜನಲ್ ಆಫೀಸರ್ ರಾದ ಶ್ರೀ ಕೆ. ಎಲ್. ಸೂರ್ಯನಾರಾಯಣನ್—ಇವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು. ಈ ಸಭೆಯಲ್ಲಿ ಶ್ರೀಗಳಾನೈ. ಮಂಜಯ ಶೆಟ್ಟಿ, ಎಂ. ಎಲ್. ಎ. ಎಸ್. ಎಸ್. ಕೊಲ್ಕೆಬೈಲು, ಮಾಜಿ ಎಂ ಎಲ್. ಎ. ಎಸ್. ಎಸ್. ಪರಮೇಶ್ವರಯ್ಯ ಮೊದಲಾದ ಪ್ರಮುಖರು ಉಪಸ್ಥಿತರಿದ್ದರು.

ಪ್ರಥಮದಲ್ಲಿ ಶಾಲಾ ಮೇನೇಜರರು ಆಧ್ಯಕ್ಷರನ್ನು ಆಸನ ಸ್ವೀಕರಿಸಲು ಕೇಳಿಕೊಂಮೇಲೆ ಶ್ರೀ ಎಂ. ಎಂ. ಹೆಗ್ಡೆಯವರು ಶ್ರೀ ಪಿ ಕೃಷ್ಣರಾಯರಿಂದ ನಿರ್ವೇಜಿತ ಭಾಷಣಗಳಾಮವು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ವಿದ್ಯೆಯ ಮಹತ್ವ ಈಗಿನ ಸರಕಾರದ ಜನೋಪಯೋಗೀ ಯೋಜನೆಗಳನ್ನು ವಿವರಿಸಿ ಜನರು ಸಹಕಾರವನ್ನು ಕೋರಿದರು. ಅನಂತರ ವಿದ್ಯಾರ್ಥಿನಿಯರಿಂದ 'ಸಾಹಿತ್ರಿ-ಸತ್ಯವಾನ್' ಎಂಬ ಪೌರಾಣಿಕ ನಾಟಕವೂ ಬಾಲಕರಿಂದ 'ಜರಾಸಂಧ ವಧೆ' ಎಂಬ ಯಕ್ಷಗಾನ ನಾಟಕವೂ, ವಯಸ್ಕರಿಂದ 'ಇದ್ದವರು ಮೂವರು; ಕದ್ದವರು ಯಾರು?' ಎಂಬ ಸಾಮಾಜಿಕ ನಾಟಕವೂ ಆಡಲ್ಪಟ್ಟವು. ಶಾಲಾ ಮುಖ್ಯೋಪಾಧ್ಯಾಯರು ವರ್ಷೋತ್ಸವದ ಬಗ್ಗೆ ಧನಸಹಾಯ ನೀಡಿದವರಿಗೆ ಕೃತಜ್ಞತೆಯನ್ನರ್ಪಿಸಿದರು.

**ಉಚ್ಚಿಲ ಶ್ರೀ ಮಹಾದೇವಿ ದೇವಸ್ಥಾನದ** ಪ್ರವೇಶೋತ್ಸವವು ತಾ. 13-5-52ರಿಂದ ತಾ. 23-5-52ರ ವರೆಗೆ ವಿಶೇಷ ಕಾರ್ಯಕ್ರಮಗಳೊಂದಿಗೆ ನೆರವೇರಲಿರುವ ದೆಂದೂ ಆಶಾರಾಸ್ಯ ಘಾಟಿ 3ರಿಂದ 7ರ ವರೆಗೆ ಧರ್ಮಸಮ್ಮೇಳನವು ನೆರವೇರಲಿದ್ದು ಅದನ್ನು ಧರ್ಮಸ್ಥಳ ಶ್ರೀ ರತ್ನವರ್ಮ ಹೆಗ್ಡೆ, M. L.A., ಅವರು ಉದ್ಘಾಟಿಸುವರೆಂದೂ ಸ್ವಾಮಿ ರಾಮಕೃಷ್ಣ ಪರಮಹಂಸ ಆಶ್ರಮದ ಅದಿ ದೇವಾನಂದ ಸ್ವಾಮಿಯವರು ಅಧ್ಯಕ್ಷತೆ ವಹಿಸಲಿರುವರೆಂದೂ ಸುಪ್ರಾಜನ ರೆಲ್ಲರೂ ಸಹಕರಿಸಬೇಕೆಂದೂ ದ. ಕ. ಮೊಗವೀರ ಮಹಾಜನ ಸಂಘದ ಅನುಮತಿಯಿಂದ ಶ್ರೀ ಯು. ಸದಿಯ ಸಾಮುಕಾರ್, ಅಧ್ಯಕ್ಷೆ ಕಾ. ಕ. ಇವರು ವಿನಂತಿಸುತ್ತಾರೆ.

**ಪಟ್ಲೆ**—ಲೋಕಮಾನ್ಯ ತಿಲಕ ಹಾ. ಎ. ಶಾಲಾ ವಾರ್ಷಿಕೋತ್ಸವವು ಶ್ರೀ ಎ. ಜೆ. ಅಲ್ಬೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಕಲೆಕ್ಟೊಂಪೆಂಟ್ ಶ್ರೀ ಮರ್ಡ ಗೋವಿಂದ ಪೆಟ್ಟಿರವರು ಸ್ವಾಗತಭಾಷಣಮಾಡಿದರು. ಶಾಲಾ ಆಡಳಿತ ಮಂಡಲಿಯ ಉಪಾಧ್ಯಕ್ಷರಾದ ಶ್ರೀ ಹಿರೇಬೆಟ್ಟು ಸದಾಶಿವ ಪೆಟ್ಟಿಯವರು ವಿದ್ಯಾರ್ಥಿಗಳಿಗೆ ಬಯಲೂಸಿತರಣೆ ಮಾಡಿ ಬಂದ ಸಂದೇಶಗಳನ್ನು ಹಿಡಿದರು. ಮುಖ್ಯೋಪಾಧ್ಯಾಯರಾದ ಶ್ರೀ ಮರ್ಡ ಗೋವಿಂದ ಭಟ್ಟರು ಶಾಲಾ ವರದಿಯನ್ನು ವಾಚನಮಾಡಿದರು.

ಅಧ್ಯಕ್ಷರ ಭಾಷಣವಾದ ಮೇಲೆ ಶ್ರೀಗಳಾದ ಬನ್ಯಂಜೆ ರಾಮಾಚಾರ್ಯ, ಸಿ. ಶೀನ ಶೆಟ್ಟಿ, ದಾಂತಿಯವರು ಮಾತನಾಡಿದರು. ವಿದ್ಯಾರ್ಥಿ ವಿದ್ಯಾರ್ಥಿನಿಯರು "ಗೌತಮಬುದ್ಧ" ಮತ್ತು "ಕರುಳಿನ ಮೊಕೆ" ಎಂಬ ನಾಟಕವನ್ನು ಮನಮುಟ್ಟುವಂತೆ ಅಭಿನಯಿಸಿದರು.

ಅಂದು ಬೆಳಿಗ್ಗೆ ಶ್ರೀ ಸದಾಶಿವ ಹೆಗ್ಡೆಯವರು ಧ್ವಜಾರೋಹಣ ಮಾಡಿದರು. ಶ್ರೀ ಯು. ಮಹಾಬಲ ಶೆಟ್ಟಿಯು ಶಾಲಾ ಮಕ್ಕಳಿಗೆ ಸಿಹಿ ತಿಂಡಿ ಕೊಡಿಸಿದರು.


ನಿಮ್ಮಪ್ಪನ್ನ ನೀನೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮವುಂಟಿಂಗ ಬರೆದಿರುವ—
ದಿ! ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ

ಬೆಲೆ:– ಸಾಧಾರಣ ಪ್ರತಿ– ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವ ಸ್ಥಳ:—

ನವಭಾರತ ಪುಸ್ತಕ ಭಂಡಾರ, ಉಡುಪಿ.



ಮಕ್ಕಳ ಮಗ್ಗಿಪುಸ್ತಕ

ಬೆಲೆ: ೦ ೧–೦

ನವಯುಗ ಸ್ಟೋರ್ಸ್, ಉಡುಪಿ.

## ಮಂಗಳೂರು

### ಮಂತ್ರಿ ಶ್ರೀ ಬಾಳಿಗರಿಗೆ ಆದರದ ಸ್ವಾಗತ

ತಾ– ಮೈಸೂರು ರಾಜ್ಯ ಸರಕಾರದ ಕಾರ್ಮಿಕ ಮಂತ್ರಿ ಶ್ರೀ ಬಿ. ವೈಕುಂಠ ಬಾಳಿಗರಿಗೆ ತಾ. ೮ರಲ್ಲಿ ಮಂಗಳೂರು ನಗರ ಸಭೆಯವರು ಮಾನಪತ್ರವಿತ್ತು ಸ್ವಾಗತಿಸಿದರು. ನಗರಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಆಡಿಗರು ಆರ್ಪಿಸಿದ ಮಾನಪತ್ರದಲ್ಲಿ ಮಂತ್ರಿಗಳ ದಕ್ಷ ವ್ಯಕ್ತಿತ್ವ, ಕ್ರಿಯಾಶಕ್ತಿ ಮೊದಲಾದುವನ್ನು ಕೊಂಡಾಡಲಾಗಿತ್ತಲ್ಲದೆ ಬರುವ ಮಾರ್ಚಿ ಅಂತ್ಯದೊಳಗೆ ನೀರಿನ ಸರಬರಾಯಿ ಯೋಜನೆಯು ಸಂಪೂರ್ಣವಾಗುವಂತಾಗಬೇಕೆಂದೂ ಭೂಗತ ಚರಂಡಿ ಯೋಜನೆಯನ್ನು ತ್ವರ್ಯ ಕೈಗೊಳ್ಳಬೇಕೆಂದೂ, ಮಂಗಳೂರನ್ನು ಸರ್ವತೋಮುಖವಾಗಿ ಬೆಂದರವನ್ನಾಗಿ ಮಾಡಬೇಕೆಂದೂ ನಗರಕ್ಕೊಂದು ಸಭಾಭವನ, ನಗರ ಸಭೆಗೊಂದು ಸ್ವಂತ ಆಫೀಸು ಕಟ್ಟಡಕ್ಕೆ ಸರಕಾರ ಸಹಾಯಕೊಡಬೇಕೆಂದೂ ಮುಂತಾಗಿ ಕೇಳಿಕೊಳ್ಳಲಾಗಿತ್ತು.

ಮಂತ್ರಿ ಬಾಳಿಗರು ಆದರದ ಸ್ವಾಗತಕ್ಕಾಗಿ ಆಭಾರಸೂಚಿಸಿ ತಾತ್ಕಾಲಿಕ ಕಾರ್ಯವನ್ನು ನೆರವೇರಿಸುವುದಾಗಿ ಹೇಳಿದರು

ಅನಂತರ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಆಫೀಸಿನಲ್ಲಿ ನೆರೆದ ಕಾಂಗ್ರೆಸ್ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿ ಕಾಂಗ್ರೆಸ್ಸನ್ನು ಬಲಪಡಿಸುವ ಕುರಿತು ಸೂಚನೆಗಳನ್ನಿತ್ತರು. ಅರಂಭದಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಡಾ. ಯು. ಪಿ. ಮಲ್ಯರು ಸ್ವಾಗತಿಸಿದರು. ಕೊನೆಯಲ್ಲಿ ಶ್ರೀ ಎಫ್. ಎಕ್ಸ್. ಡಿ. ಪಿಂಟೋ, ಎಂ. ಎಲ್. ಎ. ಅವರು ಧನ್ಯವಾದ ಗೈದರು.

ರಾತ್ರಿ ಕೆನರಾ ಬ್ಯಾಂಕಿಂಗ್ ಕೊರ್ಪರೇಶನ್ ನೌಕರರು ಕೆನರಾ ಹೈಸ್ಕೂಲಿನಲ್ಲಿ ಮಂತ್ರಿಗಳನ್ನು ಸ್ವಾಗತಿಸಿ ಆಭಿನಂದಿಸುವುದಕ್ಕಾಗಿ ಭೋಜನ ಕೂಟವೊಂದನ್ನು ಏರ್ಪಡಿಸಿದ್ದರು. ಬೇರೆಕಡೆ ಆಪೇಕ್ಷಿತ ಮಂಡಳಿಯ ಅಧ್ಯಕ್ಷ ಡಾ. ಸುಂದರರಾಮ ಪೈಗಳು ಮಂತ್ರಿ ಬಾಳಿಗರನ್ನು ಸ್ವಾಗತಿಸಿ ಮಾನಪತ್ರವನ್ನರ್ಪಿಸಿದರು. ಅಂತ್ಯದಲ್ಲಿ ಡಾ. ಯು. ಪಿ. ಮಲ್ಯರು ಧನ್ಯವಾದ ಗೈದಿತ್ತರು.

ದ. ಕ. ಜಿಲ್ಲಾ ಕೈಮಗ್ಗ ಸಹಕಾರಿ ಸಂಘಗಳ ಸಮಿತಿಯ ಆಶ್ರಯದಲ್ಲಿ ಜರಗಿದ ಅ. ಭಾ. ಕೈಮಗ್ಗ ನಿರ್ಯಾತದ ಅಂಗವಾಗಿ ನೆರವೇರಿದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಮಂತ್ರಿ ಬಾಳಿಗರು ಉದ್ಘಾಟಿಸಿತ್ತ ಕೈಮಗ್ಗಗಳಿಗೆ ಪ್ರೋತ್ಸಾಹಿಸುವ ಅವಶ್ಯಕತೆಯನ್ನು ವಿವರಿಸಿದರು.

ಮಂತ್ರಿಗಳು ಗೌರವಾರ್ಥವಾಗಿ ಶರವು ಯಕ್ಷಗಾನ ಸಂಘದ ಆಶ್ರಯದಲ್ಲಿ ಯಕ್ಷಗಾನ ನಡೆಯುತ್ತಿದ್ದುದರಿಂದ, ಆ ಕ್ಷಣ ತನಗೆ ರಾಜೀನಾಮೆ ಕೊಡಬೇಕಾಪದರಿಂದ ಅವರು ಸ್ಥಾನಕ್ಕೆ ಬೇರೊಬ್ಬನನ್ನು ಚುನಾಯಿಸುವ ಏರ್ಪಾಡನ್ನು ಸಮಿತಿಯ ಅಧ್ಯಕ್ಷರು ಜೇಗನೆ ಮಾಡಬೇಕೆಂದೂ ನಿರ್ಣಯಿಸಲಾಯಿತು.

### ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪ ನವರು

ತಾ 12ನೇ ಬೆಳಿಗ್ಗೆ ಕೊಡಿಯಾಲ ಬೈಲು ರಾಮ ನಿವಾಸದಲ್ಲಿ ಜಿಲ್ಲಾ ಆಭಿವೃದ್ಧಿ ಸಂಘದ ಆಶ್ರಯದಲ್ಲಿ ಜರಗಿದ ತೋಟಗಳ ಸ್ವಧೇಯ ಪಾರಿತೋಷ ವಿತರಣೆ ಮಾಡಿದರು. ಸಂಘದ ಗೌ| ಕಾರ್ಯದರ್ಶಿ ಶ್ರೀ ಕೆ. ರಂಗನಾಥ ಕೊಂಜರು ಮುಖ್ಯಮಂತ್ರಿಗಳ ನ್ನೂ ಕಾರ್ಮಿಕ ಮಂತ್ರಿ ಬಾಳಿಗರನ್ನೂ ಸ್ವಾಗತಿಸಿದರು. ಶ್ರೀ ಟಿ. ಎಂ. ಆಂತಾನ್ನರು ತೋಟಗಾರಿಕಾ ಸ್ಪರ್ಧೆಯ ವಿವರ ಕೇಳಿಕೊಳ್ಳಲಾಗಿತ್ತು. ಮಂತ್ರಿಗಳು ತಮ್ಮ ಉತ್ತರದಲ್ಲಿ ಸ್ಥಳೀಯ ಸಂಸ್ಥೆಗಳ ಆಡಳಿತದಲ್ಲಿರುವ ಕಾಲೆ, ಆಸ್ಪತ್ರೆಗಳನ್ನು ಸರಕಾರವೇ ವಹಿಸಿಕೊಳ್ಳಬಹುದೆಂದೂ ನಗರ ಸಭೆಯು ಉಪ್ಪರಿತಿಯನ್ನು ಹೆಚ್ಚಿಸುವುದಕ್ಕಾಗಿ ನಗರದೊಳಗೆ ಬರುವ ಸಾಮಾನುಗಳ ಮೇಲೆ ಸುಂಕವನ್ನು (ಆಕ್ಟ್ರಾಯ್ ತೆರಿಗೆ) ಹೊರಿಸಬಹುದೆಂದೂ ಹೇಳಿದರು.

ಅನಂತರ ಮಂತ್ರಿಗಳು ದಕ್ಷಿಣ ಕಾಡಿನ ಹರಿಜನ ಕೇರಿಗಳನ್ನು ಡಾ. ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಗೆ ತೆರಳಿದಾಗ ಶ್ರೀ ಎಂ. ಮಂಜಪ್ಪ, ಎಂ. ಎಲ. ಎ. ಅವರು ಸ್ವಾಗತಿಸಿದರು. ಹರಿಜನರ ಪರವಾದ ಕೇಳಿಕೆಗಳ ಮಾನವಿಯೊಂದನ್ನು ಶ್ರೀ ಕೆ. ಕೆ ಶೆಟ್ಟಿ, ಎಂ. ಎಲ್. ಸಿ ಅವರು ಓದಿದರು. ಮಂತ್ರಿಗಳು ತಮ್ಮ ಭಾಷಣದಲ್ಲಿ ಹರಿಜನರು ತಮ್ಮ ಹೊಣೆಯರಿತು ಕಾರ್ಯ ಪ್ರವೃತ್ತರಾಗಬೇಕೆಂದರು.

### ಜಿಲ್ಲಾ ಕಾಂಗ್ರೆಸ್ ಕಛೇರಿಯ

ಕಾರ್ಯಕಾರಿ ಸಮಿತಿಯ ಸಭೆಯು ಇತ್ತೀಚೆಗೆ ಡಾ| ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀ ಆರೆಬೈಲು ಭೋಜರಾಯರ ನಿಧನಕ್ಕಾಗಿ ಸಂತಾಪ ಸೂಚಿಸಿತು, ಮತ್ತು ಶ್ರೀ ಬಿ. ವೈಕುಂಠ ಬಾಳಿಗರು ಮಂತ್ರಿಗಳಾಗಿ ನೇಮಕವಾದುದಕ್ಕೆ ಆಭಿನಂದಿಸಿತು. ಜಿಲ್ಲೆಯಲ್ಲಿ ಏಳುಮಂದಿ ಕಾಂಗ್ರೆಸ್ ಪ್ರಚಾರಕರನ್ನು ನೇಮಿಸಬೇಕೆನ್ನುವ ಇತ್ಯಾದಿ ನಿರ್ಣಯಗಳಾದುವು. ಜಿಲ್ಲೆಯಲ್ಲಿ ಕೃಷಿಕ ಸಂಘಟನೆಯು ಕುರಿತು ಪರಿಶೀಲಿಸಿ ನವೆದಿ ಬಿಸ್ಸಲು ಶ್ರೀ ಗೋವಿದ ಕೆ. ಕೆ. ಶೆಟ್ಟಿ, ಬಿ. ಎ. ಪೈ, ಬಿ. ಎಸ್. ಭಾಸ್ಕರ ರೈಗಳನ್ನು ನೇಮಕಗೊಳಿಸಲಾಯಿತು. ಕಳದ ಮಹಾ ಚುನಾವಣೆಯಲ್ಲಿ ಕುಂದಾಪುರ ಮತ್ತು ಉಡುಪಿಯಲ್ಲಿ ಕಾಂಗ್ರೆಸ್ ಉಮೇದ್ವಾರಿಗಳು ಅಪಜಯಹೊಂದಿದ ಹಾಗೂ ಕೆಲವು ಮತನಾರ ಕ್ಷೇತ್ರಗಳಲ್ಲಿ ಕಾಂಗ್ರೆಸಿಗೆ ಕಡಿಮೆ ಮತ ದೊರೆತ ಕುರಿತು ಪರಿಶೀಲನೆ ನಡೆಸಿ ವರದಿಮಾಡಲು ಶ್ರೀಗಳಾದ ಕೆ ಸೂರ್ಯನಾರಾಯಣ ಆಡಿಗ, ಬಿ ಬಿ. ಶೆಟ್ಟಿ, ಮತ್ತು ಟಿ. ಎ. ಪೈಗಳ ಸಮಿತಿಯನ್ನು ನೇಮಿಸಲಾಯಿತು.

ಕೆ. ಪಿ. ಸಿ. ಸಿ. ಯ ಸದಸ್ಯ ಶ್ರೀ ಕೆ. ಮುದ್ದು ಸುಬ್ಬಯ್ಯರು ಕಳದ ಮಹಾ ಚುನಾವಣೆಯಲ್ಲಿ ಕಾಂಗ್ರೆಸಿಗೆ ವಿರೋಧವಾಗಿ ಕೆಲಸ ಮಾಡಿರುವರೆಂದು ಸ್ಪಷ್ಟವಾಗಿ ತಿಳಿದುಬರುವುದರಿಂದ ಅವರ ಮೇಲೆ ಶಿಸ್ತು ಜಾರಿಮಾಡಬೇಕೆಂದು ಶಿಫಾರಸು ಮಾಡಲಾಯಿತು.

ಎರಡು ಹುದ್ದೆಗಳನ್ನು ಒಬ್ಬರೇ ವಹಿಸಬಾರದೆಂದು ಅ ಭಾ. ಕಾಂಗ್ರೆಸ್ ಸಮಿತಿಯ ಆದೇಶದಂತೆ, ಜಿಲ್ಲಾ ಬೋರ್ಡಿನ ಅಧ್ಯಕ್ಷ ಡಾ ಕೆ. ಕೆ. ಹೆಗ್ಡೆಯವರು ಎಂ. ಎಲ್. ಎ ಗಳಾಗಿ ಆರಿಸಲ್ಪಟ್ಟಿದ್ದರಿಂದ, ಅಧ್ಯಕ್ಷ ತನಕ್ಕೆ ರಾಜೀನಾಮೆ ಕೊಡಬೇಕಾಪದರಿಂದ ಅವರ ಸ್ಥಾನಕ್ಕೆ ಬೇರೊಬ್ಬನನ್ನು ಚುನಾಯಿಸುವ ಏರ್ಪಾಡನ್ನು ಸಮಿತಿಯ ಅಧ್ಯಕ್ಷರು ಜೇಗನೆ ಮಾಡಬೇಕೆಂದೂ ನಿರ್ಣಯಿಸಲಾಯಿತು.

### ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪ ನವರು

ತಾ– ಮೈಸೂರು ಸರಕಾರದ ಸ್ಥಳೀಯ ಸರಕಾರಗಳ ಮಂತ್ರಿ ಶ್ರೀ ಆರ್. ಚೆನ್ನಿಗರಾಮಯ್ಯನವರು ತಾ. 10ರಂದು ಆಗಮಿಸಿದಾಗ ಮಂಗಳೂರು ನಗರ ಸಭೆಯವರು ಸ್ವಾಗತಿಸಿ ಮಾನಪತ್ರವನ್ನರ್ಪಿಸಿದರು. ಆದರಲ್ಲಿ ನಗರದಲ್ಲಿ ಈ ವರೆಗೆ ಕೈಕೊಂಡ ಅಭಿವೃದ್ಧಿ ಕಾರ್ಯಗಳನ್ನು ನಿವೇದಿಸಲಾಗಿತ್ತಲ್ಲದ ಮುಂದಿನ ಕಾರ್ಯಗಳಿಗಾಗಿ ಸರಕಾರದ ಸಹಾಯವನ್ನು ಕೇಳಿಕೊಳ್ಳಲಾಗಿತ್ತು.

ಮಂತ್ರಿಗಳು ಉತ್ತರವಿತ್ತು ಮಾತನಾಡಿ ಮಂಗಳೂರು ನಗರಸಭೆಯ ಕಾರ್ಯಗಳನ್ನು ಶ್ಲಾಘಿಸಿ ಮಂಗಳೂರು ನಗರವನ್ನು ಸುಂದರ ಬೆಂದರವನ್ನಾಗಿ ಮಾಡಲು ಸಹಾಯಕೊಡುವುದಾಗಿ ಹೇಳಿದರು. ಸಭೆಯಲ್ಲಿ ಸೇರಿದ್ದ ಸಾರ್ವಜನಿಕರ ಪರವಾಗಿ ಶ್ರೀ ಎಂ. ಮಂಜಪ್ಪ, ಎಂ. ಎಲ. ಎ. ಅವರು ಸ್ವಾಗತಿಸಿದರು. ಹರಿಜನರ ಪರವಾದ ಕೇಳಿಕೆಗಳ ಮಾನವಿಯೊಂದನ್ನು ಶ್ರೀ ಕೆ. ಕೆ ಶೆಟ್ಟಿ, ಎಂ. ಎಲ್. ಸಿ ಅವರು ಓದಿದರು. ಮಂತ್ರಿಗಳು ತಮ್ಮ ಭಾಷಣದಲ್ಲಿ ಹರಿಜನರು ತಮ್ಮ ಹೊಣೆಯರಿತು ಕಾರ್ಯ ಪ್ರವೃತ್ತರಾಗಬೇಕೆಂದರು.

### ಜಿಲ್ಲಾ ಕಾಂಗ್ರೆಸ್ ಕಛೇರಿಯ

ಕಾರ್ಯಕಾರಿ ಸಮಿತಿಯ ಸಭೆಯು ಇತ್ತೀಚೆಗೆ ಡಾ| ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀ ಆರೆಬೈಲು ಭೋಜರಾಯರ ನಿಧನಕ್ಕಾಗಿ ಸಂತಾಪ ಸೂಚಿಸಿತು, ಮತ್ತು ಶ್ರೀ ಬಿ. ವೈಕುಂಠ ಬಾಳಿಗರು ಮಂತ್ರಿಗಳಾಗಿ ನೇಮಕವಾದುದಕ್ಕೆ ಆಭಿನಂದಿಸಿತು. ಜಿಲ್ಲೆಯಲ್ಲಿ ಏಳುಮಂದಿ ಕಾಂಗ್ರೆಸ್ ಪ್ರಚಾರಕರನ್ನು ನೇಮಿಸಬೇಕೆನ್ನುವ ಇತ್ಯಾದಿ ನಿರ್ಣಯಗಳಾದುವು. ಜಿಲ್ಲೆಯಲ್ಲಿ ಕೃಷಿಕ ಸಂಘಟನೆಯು ಕುರಿತು ಪರಿಶೀಲಿಸಿ ನವೆದಿ ಬಿಸ್ಸಲು ಶ್ರೀಗಳಾದ ಕೆ. ಕೆ. ಶೆಟ್ಟಿ, ಬಿ. ಎ. ಪೈ, ಬಿ. ಎಸ್. ಭಾಸ್ಕರ ರೈಗಳನ್ನು ನೇಮಕಗೊಳಿಸಲಾಯಿತು. ಕಳದ ಮಹಾ ಚುನಾವಣೆಯಲ್ಲಿ ಕುಂದಾಪುರ ಮತ್ತು ಉಡುಪಿಯಲ್ಲಿ ಕಾಂಗ್ರೆಸ್ ಉಮೇದ್ವಾರಿಗಳು ಅಪಜಯಹೊಂದಿದ ಹಾಗೂ ಕೆಲವು ಮತನಾರ ಕ್ಷೇತ್ರಗಳಲ್ಲಿ ಕಾಂಗ್ರೆಸಿಗೆ ಕಡಿಮೆ ಮತ ದೊರೆತ ಕುರಿತು ಪರಿಶೀಲನೆ ನಡೆಸಿ ವರದಿಮಾಡಲು ಶ್ರೀಗಳಾದ ಕೆ ಸೂರ್ಯನಾರಾಯಣ ಆಡಿಗ, ಬಿ ಬಿ. ಶೆಟ್ಟಿ, ಮತ್ತು ಟಿ. ಎ. ಪೈಗಳ ಸಮಿತಿಯನ್ನು ನೇಮಿಸಲಾಯಿತು.

ಕೆ. ಪಿ. ಸಿ. ಸಿ. ಯ ಸದಸ್ಯ ಶ್ರೀ ಕೆ. ಮುದ್ದು ಸುಬ್ಬಯ್ಯರು ಕಳದ ಮಹಾ ಚುನಾವಣೆಯಲ್ಲಿ ಕಾಂಗ್ರೆಸಿಗೆ ವಿರೋಧವಾಗಿ ಕೆಲಸ ಮಾಡಿರುವರೆಂದು ಸ್ಪಷ್ಟವಾಗಿ ತಿಳಿದುಬರುವುದರಿಂದ ಅವರ ಮೇಲೆ ಶಿಸ್ತು ಜಾರಿಮಾಡಬೇಕೆಂದು ಶಿಫಾರಸು ಮಾಡಲಾಯಿತು.

ಎರಡು ಹುದ್ದೆಗಳನ್ನು ಒಬ್ಬರೇ ವಹಿಸಬಾರದೆಂದು ಅ ಭಾ. ಕಾಂಗ್ರೆಸ್ ಸಮಿತಿಯ ಆದೇಶದಂತೆ, ಜಿಲ್ಲಾ ಬೋರ್ಡಿನ ಅಧ್ಯಕ್ಷ ಡಾ ಕೆ. ಕೆ. ಹೆಗ್ಡೆಯವರು ಎಂ. ಎಲ್. ಎ ಗಳಾಗಿ ಆರಿಸಲ್ಪಟ್ಟಿದ್ದರಿಂದ, ಅಧ್ಯಕ್ಷ ತನಕ್ಕೆ ರಾಜೀನಾಮೆ ಕೊಡಬೇಕಾಪದರಿಂದ ಅವರ ಸ್ಥಾನಕ್ಕೆ ಬೇರೊಬ್ಬನನ್ನು ಚುನಾಯಿಸುವ ಏರ್ಪಾಡನ್ನು ಸಮಿತಿಯ ಅಧ್ಯಕ್ಷರು ಜೇಗನೆ ಮಾಡಬೇಕೆಂದೂ ನಿರ್ಣಯಿಸಲಾಯಿತು.

### ಗ್ರಾಮಾಧಿಕಾರಿಗಳಿಗೆ ತುಟ್ಟಿಭತ್ತೆ

ದ. ಕ. ಜಿಲ್ಲೆಯ ಗ್ರಾಮಾಧಿಕಾರಿಗಳಿಗೆ ತುಟ್ಟಿಭತ್ತೆಯಲ್ಲಿ ರೂ 2ನ್ನು ಮೈಸೂರು ಸರಕಾರ ವಿರಿಸಿರುವುದೆಂದು ಹೇಳಿಲಾಗಿದೆ.

### ಜಿಲ್ಲೆಯ ಕಾಲೇಜುಗಳು

ಕರ್ನಾಟಕ ವಿದ್ಯಾನಿಲಯಕ್ಕೆ ಸೇರ್ಪಡೆಯಾಗಬೇಕೆಂದೂ ಆ ಬಗ್ಗೆ ಸೇರಿಕೆಯ ಆರ್ಜಿಯನ್ನು ಳಿಸುಸುವಂತೆ ದ. ಕ. ದ ಮಂಗಳೂರು ಗವರ್ನಮೆಂಟ್ ಕಾಲೇಜು, ಗವರ್ನಮೆಂಟ್ ಟ್ರೈನಿಂಗ್ ಕಾಲೇಜು, ಸೈಂಟ್ ಎಸೋಸಿಯಸ್ ಕಾಲೇಜು, ಸೈಂಟ್ ಅನ್ಸ್ ಕಾಲೇಜು, ಸೈಂಟ್ ಅಗ್ನೆಸ್ ಕಾಲೇಜು, ಉಡುಪಿಯ ಎಂ. ಜಿ. ಎಂ. ಕಾಲೇಜು ಈ ಆರು ಕಾಲೇಜುಗಳಿಗೆ ಮೈಸೂರು ಸರಕಾರ ಸೂಚಿಸಿರುವುದೆಂದೂ ಗೊತ್ತಾಗಿದೆ. ಈ ಎಲ್ಲಾ ಕಾಲೇಜುಗಳು ಈ ವರೆಗೆ ಮದರಾಸು ನಿಶ್ವವಿದ್ಯಾನಿಲಯಕ್ಕೆ ಸೇರ್ಪಡೆಯಾಗಿದ್ದುವು. ಮೆನೆಸಾಲದ ಕಸ್ತೂರ್ಬಾ ಮೆಡಿಕಲ್ ಕಾಲೇಜು ಆರಂಭದಲ್ಲೇ ಕರ್ನಾಟಕ ವಿಶ್ವವಿದ್ಯಾನಿಲಯಕ್ಕೆ ಸೇರ್ಪಡೆಯಾಗಿದೆ.

**'ಸಮಾಜ ಸೇವಕ'**–ಎಂಬ ಪತ್ರಿಕೆಯ ಜವಬ್ದಾರಿಯನ್ನು ತಾ 5ರಂದು ಶ್ರೀ ಪಿ. ಕೆ. ನಾರಾಯಣನವರು ಕನ್ನಡ ಮೊಯಿಲಿ ಸಮಾಜ ಸುಧಾರಕ ಸಂಘದ ಯುವಕ ಸಮಿತಿಯ ಆಶ್ರಯದಲ್ಲಿ ನೆರವೇರಿಸಿದರು.

## ಮುಂಬಯಿ

### ದೇವಾಡಿಗ ಸಮಾಜಸ್ಥರೆಲ್ಲರೂ ಒಂದಾಗಬೇಕು

–ಗುರಿಕಾರರ ಕಟ್ಟುಪಾಡಿ, ಕೂಡುಕಟ್ಟಿನಲ್ಲಿ ದಂಡ, ತಪ್ಪು, ಸಮಾಜದಿಂದ ಬಹಿಷ್ಕಾರ, ಅಮಾನಸು, ಪಾದ ವಿವಾಹಗಳ ತಿಕ್ಕಾಟ್ಟು ಪಂಗಡಗಳ ರಚನೆ ಇತ್ಯಾದಿ ದಬ್ಬಾಳಿಕೆಯಿಂದ ದೇವಾಡಿಗ ಸಮಾಜವು ದಿನೇ ದಿನೇ ಅವನತಿಹೊಂದುತ್ತಿರುವುದನ್ನು ಮನಗಂಡು ಸಮಾಜದ ಉನ್ನತಿಗಾಗಿ ಹಲವಾರು ವರ್ಷಗಳಿಂದ ದುಡಿಯುತ್ತಿರುವ 'ದೇವಾಡಿಗ ಸುಧಾರಕ ಸಂಘ, ಮುಂಬಯಿ ಇವರು ಕಳದ ತಿಂಗಳ ತಾ 14ರಲ್ಲು ಜರುಗಿದ ವಿಶೇಷ ಮಹಾಸಭೆಯಲ್ಲಿ ಸರ್ವಾನುಮತದಿಂದ ನುಂಜೂರುಪಾಡಿದ ಕೆಲವು ತುಂಬಾಕ್ಷಿಭೀಯವಾಗಿದೆ. ಇನ್ನುಮುಂದಾದರೂ ದೇವಾಡಿಗ ಸಮಾಜಸ್ಥರು ಇಂತಹ ಕೀಳು ಭಾವನೆಗಳಿಗೆ ಸಮಾಜದಲ್ಲಿ ಅವಕಾಶ ಕೊಡದೆ ಯಾವುದೇ ರೀತಿಯಿಂದ ಯಾರನ್ನಾದರೂ ಬಹಿಷ್ಕಾರ ಆಥವಾ ಅಮಾನುಸತು ಇಟ್ಟಿದ್ದರೆ ಆಂಥವರನ್ನು ಸಮಾಜಕ್ಕೆ ಸೇರಿಸಿಕೊಂಡು ಅವರೊಡನೆ ಪರಸ್ಪರ ಸಹಕಾರ ಸಹಾನುಭೂತಿಯಿಂದ ವ್ಯವಹರಿಸಬೇಕಾಗಿ ದೇವಾಡಿಗ ಬಂಧುಗಳಲ್ಲಿ ಸಿವಿನಯ ಸಮಾಜದ ಹಿತಚಿಂತಕರು ವಿಸ್ತಂಭಿಸುತ್ತಾರೆ.

### ಬಂಟರ ಯಾನೆ ನಾಡವರ ಸಂಘ, ಮುಂಬಯಿ

ಈ ಸಂಘದ 28ನೆಯ ವಾರ್ಷಿಕ ಮಹಾ ಸಭೆಯು ತಾ. 5-5.57 ರಲ್ಲಿ ಸಂಘದ ಉಪಾಧ್ಯಕ್ಷರಾದ ಆತ್ತೂರು ಭೋಜ ಶೆಟ್ಟ ಅಧ್ಯಕ್ಷ ತನದಲ್ಲಿ ಬಜಾರ್ ಗೇಟ್ ಹೈಸ್ಕೂಲಿನ ಪಜಾರದಲ್ಲಿ ಜರಗಿತು. ಗೌ ಪ್ರಧಾನ ಕಾರ್ಯದರ್ಶಿ ಎಂ.ಬಿ ಗಂಗಯ ಶೆಟ್ಟಿ ಗತನಷದ ವರದಿಯನ್ನೋದಿದರು ಕೊನ ವರ್ಷಕ್ಕೆ ಶ್ರೀಗಳಾದ ಆತ್ತೂರು ಭೋಜ ಶೆಟ್ಟ (ಅಧ್ಯಕ್ಷ), ಕಾಮ ಬಿ. ಶೆಟ್ಟಿ (ಉಪಾಧ್ಯಕ್ಷ) ಮೂಲ್ಕಿ ಗಂಗಯ ಶೆಟ್ಟಿ (ಗೌ ಪ್ರಧಾನ ಕಾರ್ಯದರ್ಶಿ) ಕೆಳಕಮ ಗಾಕರ ಶೆಟ್ಟಿ (ಗೌ ಉಪಕಾರ್ಯದರ್ಶಿ) ಎನ್ನೂಲು ನಿಳು ಶೆಟ್ಟಿ (ಗೌ ಕೋಶಾಧಿಕಾರಿ) ಯನ್. ಗೋಪಾಲ ಶೆಟ್ಟಿ (ಗೌ ಉಪ ಕೋಶಾಧಿಕಾರಿ) ಮತ್ತು 31 ಮಂದಿ ಆಡಳಿತ ಮಂಡಳಿಗೆ ಆರಿಸಲ್ಪಟ್ಟರು.

ಸ್ಕೂಲ್ ಕಮ್ಮಿಗೆ, ಶ್ರೀಗಳಾದ ಪಾದ ಶೆಟ್ಟಿ (ಚೇರ್‌ಮೆನ್), ಕೆ. ಶಾಮುರಾಯ ಶೆಟ್ಟಿ (ಗೌ. ಕಾರ್ಯದರ್ಶಿ) ಸುಂದರ ಬಿ. ಶೆಟ್ಟಿ (ಗೌ. ಕೋಶಾಧಿಕಾರಿ) ಮುಹಾಬಲ ಯನ್. ಶೆಟ್ಟಿ (ಗೌ. ವಾಜನಾಲಯಾಧಿಕಾರಿ) ಮತ್ತು ಇತರ ಎಂಟು ಮಂದಿ ಸದಸ್ಯರು ಆರಿಸಲ್ಪಟ್ಟರು.

### ಸೆಕೆಂಡರಿ ಶಾಲೆಗಳು

ತಮ್ಮ ಉಪಯೋಗಾರ್ಥವಾಗಿ 'ನವಯುಗ' ವಾರಪತ್ರಿಕೆಯನ್ನು ತರಿಸಿಕೊಳ್ಳಬಹುದೆಂದು Roc. No. 456-N /50 ತಾ. 12-12 50ನೇ ಪ್ರೊಸಿಡಿಂಗ್ಸಿನಂತೆ ಮವ್ಯಾಸು ಸರಕಾರದ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ನವರು ಮಂಜೂರು ಮಾಡಿದ್ದಾರೆ.

ಈ ವರೆಗೆ ಚಂದಾವಾರರಾಗದೆ ಯಾವ ತ್ತೂ ಸೆಕೆಂಡರಿಶಾಲೆಗಳವರು 'ನವಯುಗ'ಕ್ಕೆ ಚಂದಾವಾರರಾಗಿ ತರಿಸಿಕೊಂಡು ಪ್ರೋತ್ಸಾಹಿಸುವಂತೆ ಈಮೂಲಕ ವಿನಂತಿಸಿಕೊಳ್ಳಲಾಗಿದೆ.

**ಮೆನೇಜರ್.**

### ಇನ್ನೂ ಚಂದಾಹಣವನ್ನು

ಕಳುಹಿಸಿಸದವರು ದಯಮಾಡಿ ಕೂಡಲೇ ಕಳುಹಿಸಿಕೊಡುವಂತೆ ಇನ್ನೊಮ್ಮೆ ಕೇಳಿಕೊಳ್ಳುತ್ತೇನೆ. ಅಂತೂ ಸಕಾಲದಲ್ಲಿ ಚಂದಾ ಪಾವತಿಯಾಗದಿದ್ದರೆ ನಾವು ಅನಿವಾರ್ಯವಾಗಿ ಕಳುಹಿಸುವ ವಿ. ಪಿ. ಪಿ. ಯನ್ನಾದರೂ ಪಡಕೊಳ್ಳುವಂತೆ ವಿಜ್ಞಾಪಿಸುತ್ತೇನೆ.

ಮೆನೇಜರ್, ನವಯುಗ.







**ಕುಮಾರಿ ಬಿಲ್ಲೆಗಳು**

**Govt. Regd.**

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಆವರಶ್ಯಕತೆಯ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮವು ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ.ಪಿ.ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

**P. DEVEE & Co. (N. J.) CALCUTTA—40.**

ಸ್ವಾಕಿನ್ಸನ: ಷಾ ಕಂಪೆನಿ, ಮಂಗಳೂರು—1.

# ಹೋರಾಟದ ಇತಿಹಾಸ

## ೧೮೫೭ರ ಬಂಡಾಯವು ಕೇವಲ ಪಿತೂರಿಯಲ್ಲ! ಜನತೆಯ ಅಸಮಾಧಾನದ ಕುರುಹು ಅದು

"ಈಸ್ಟ್ ಇಂಡಿಯಾ ಕಂಪೆನಿಯು ಭಾರತದಲ್ಲಿ ನವಾಬ ಆಥವಾ ಮುಘಲ್ ಬಾದಶಹಾರವರ ಕೆಸರಿನಲ್ಲಿ ಭಾರತದ ಆಡಳಿತವನ್ನು ನಡೆಸ ತೊಡಗಿದರು; ಆದ್ದರಿಂದ ಬಹಳ ದಿನಗಳ ವರೆಗೆ ಭಾರತೀಯರಿಗೆ ವಿದೇಶೀಯರು ಅಧಿಕಾರ ಸೂತ್ರವನ್ನು ಹಿಡಿದುಕೊಂಡಿರುವುದು ಹಾಗೂ ತಮ್ಮ ದೇಶದಲ್ಲಿಯೇ ತಾವು ಗುಲಾಮರಾಗಿ ಬಾಳಬೇಕಾದ ಸ್ಥಿತಿಗಳಿದದ್ದೂ ಅವರಿಗೆ ಗೊತ್ತಾಗಲಿಲ್ಲ. ಆದರೆ, ಯಾವಾಗ ಅವರಿಗೆ ಇದರ ಅರಿವು ಮೂಡಿತೋ, ಆಗ ಅದು ದೇಶದಲ್ಲೆಲ್ಲಾ ತೀವ್ರವಾಗಿ ವ್ಯಾಪಿಸಿತು. ದೇಶದಲ್ಲಿ ವಿಸ್ಫೋಟನೆಯ ಸಿದ್ಧತೆ ನಡೆಯಿತು. ಈ ವಿಸ್ಫೋಟನೆಯು ಕೇವಲ ಕೆಲವು ವ್ಯಕ್ತಿಗಳ ಪಿತೂರಿಯ ಪರಿಣಾಮವಲ್ಲ. ಬಹು ಸಂಖ್ಯಾಕ ಜನತೆಯ ಅಸಂತೋಷದ ಫಲವಾಗಿತ್ತು" ಎಂಬ ವಿಚಾರವನ್ನು ಭಾರತ ಸರ್ಕಾರದ ಶಿಕ್ಷಣ ಮತ್ತು ವೈಜ್ಞಾನಿಕ ಸಂಶೋಧನೆ ಶಾಖೆಯ ಮಂತ್ರಿಗಳಾದ ಮೌಲಾನಾ ಅಬುಲ್ ಕಲಾಂ ಆಜಾದ್‌ರವರು, ಡಾ॥ಎಸ್. ಎನ್. ಸೆನ್‌ರವರ 'ಸ್ವಾತಂತ್ರ್ಯ ಹೋರಾಟದ ಇತಿಹಾಸ'ಕ್ಕೆ ಬರೆದಿರುವ ಪ್ರಸ್ತಾವನೆಯಲ್ಲಿ ತಿಳಿಸಿರುವರು.

ಬೆಳೆಯುತ್ತಿರುವ ಅಸಂತುಷ್ಟಿಗಳಿಗೆ ಎರಡು ಅಂಶಗಳು, ೧೮೫೭ರ ದಂಗೆಗೆ ಮುಖ್ಯವಾಗಿ ಕಾರಣವಾದುವೆನ್ನಬಹುದು. ಅವುಗಳಲ್ಲಿ ಈಸ್ಟ್ ಇಂಡಿಯಾ ಕಂಪೆನಿಯವರು ಜಹಗೀರುದಾರಿ ಮತ್ತು ಜಮೀನುದಾರಿ ಪದ್ಧತಿಯನ್ನು ಕೊನೆಗಾಣಿಸಿ, ಗೇಣಿದಾರರನ್ನು ತಮ್ಮ ಅಧೀನದಲ್ಲಿಟ್ಟುಕೊಳ್ಳುವ ಕಾರ್ಯನೀತಿ ಮೊದಲನೆಯ ಕಾರಣ. ಎರಡನೆಯ ಹಾಗೂ ನಿರ್ಣಾಯಕ ಕಾರಣವೆಂದರೆ ಲಾರ್ಡ್ ಡಾಲ್‌ಹೌಸಿಯು ಭಾರತೀಯ ರಾಜ್ಯಗಳನ್ನು ಒಂದಾದ ಮೇಲೊಂದರಂತೆ ಬ್ರಿಟಿಷ್ ಆಡಳಿತದಲ್ಲಿ ವಿಲಿನಯನಗೊಳಿಸುವ ಕಾರ್ಯನೀತಿ. ಈ ಸಂದರ್ಭವನ್ನು ಕುರಿತು ಮೌಲಾನಾ ಆಜಾದ್‌ರವರು "೧೮೫೭ರಲ್ಲಿ ಕಂಪೆನಿಯು ಅವಧ ರಾಜ್ಯವನ್ನು ತಮ್ಮ ಅಧಿಕಾರಕ್ಕೊಳಪಡಿಸಿಕೊಂಡಾಗ, ಸೇನೆಯಲ್ಲಿ ಅದರಲ್ಲೂ ಮುಖ್ಯವಾಗಿ ಬಂಗಾಳಿ ಸೇನೆಯಲ್ಲಿ—ರೋಷದ ಭಾಸನೆಯು ಹುಟ್ಟುತಿಂಬ ವಿಷಯದಲ್ಲಿ ನನಗೆ ಕೊಂಚವೂ ಸಂದೇಹವಿಲ್ಲ. ದನದ ಕೊಬ್ಬನ್ನು ಸವರಿನ ತೋಟಗಳು. ಸೇನೆಯಲ್ಲಿ ಹೊಸದಾಗಿ ಆಸಂತೃಪ್ತಿಯನ್ನೇನೂ ಹುಟ್ಟಿಸಲಿಲ್ಲ. ಅದು ವರೆಗೂ ಅದುಮಿ ಹಿಡಿದಿದ್ದ ಆಸಂತೃಪ್ತಿಯನ್ನು ಅವು ಹೊರ ಹೊಮ್ಮಿಸಿದವಷ್ಟೆ" ಎಂದು ಬರೆದಿರುವರು.

ಈ ಬಂಡಾಯವು ಕೇವಲ ರಾಷ್ಟ್ರೀಯ ಚಳವಳಿಯ ಫಲಿತಾಂಶವೇ ಎಂಬ ಪ್ರಶ್ನೆಯನ್ನು ವಿಮರ್ಶಿಸುತ್ತ ಮೌಲಾನಾ ಅಬುಲ್ ಕಲಾಂ ಆಜಾದ್‌ರವರು, ರಾಷ್ಟ್ರೀಯತೆಯನ್ನು ಆಧುನಿಕ ಅರ್ಥವಲ್ಲ ತೆಗೆದು ಕೊಂಡರೆ, ಆ ಪ್ರಶ್ನೆಗೆ ಉತ್ತರ ಹೌದೆಂದೇ ಹೇಳಬೇಕಾಗುವುದು. ಬಂಡಾಯದಲ್ಲಿ ಭಾಗ ವಹಿಸಿದವರು ದೇಶ ಪ್ರೇಮದಿಂದ ಕೂಡಿದ್ದರೆಂಬುದರಲ್ಲಿ ಸಂಶಯವೇನಿಲ್ಲ. ಆದರೆ ಅದು ದಂಗೆಯನ್ನು ಕೈಗೊಳ್ಳುವಷ್ಟು ಪ್ರಬಲವಾಗಿರಲಿಲ್ಲ. ಜನರನ್ನು ಸಜ್ಜುಗೊಳಿಸಲು, ದೇಶ ಪ್ರೇಮದ ಜೊತೆಗೆ, ಮತೀಯ ಭಾವಪ್ರಚವಾದ ಮನವಿ ಮಾಡಿಕೊಳ್ಳಬೇಕಾಯಿತು ಎಂದು ತಿಳಿಸಿರುವರು. ಮುಂದುವರಿದು ಅವರು ಈ ಬಂಡಾಯವು ಪೂರ್ವ ಯೋಜನಿತವಾಗಿತ್ತು ಆಥವಾ ಸೇನೆ ಹಾಗೂ ಭಾರತೀಯರು, ಕಂಪೆನಿಯ ಆಡಳಿತವನ್ನು ಪದಚ್ಯುತಗೊಳಿಸಲು ಪಿತೂರಿ ಮಾಡಿಕೊಂಡಿದ್ದರೆ ಎಂಬ ಬಗೆಗೆ ನಡೆಸಿದ ದೀರ್ಘ ಸಂಶೋಧನೆಗಳ ಫಲವಾಗಿ ಯಾವ ದಾಖಲೆಯೂ ದೊರಕಿಲ್ಲ ಎಂದು ತಿಳಿಸಿರುವರು.

ಮೌಲಾನಾ ಆಜಾದರು, ಭಾರತೀಯ ನಾಯಕರ ಈ ಸೋಲಿಗೆ ಕಾರಣಗಳನ್ನು ತಮ್ಮ ಪ್ರಸ್ತಾವನೆಯಲ್ಲಿ ವಿಚಾರಮಾಡಿರುವರು; ಈ ದಂಗೆಯ ನಾಯಕರು ಸಂಘಟಿತರಾಗದಿದ್ದುದು, ಅವರ ಪರಸ್ಪರ ಅಸೂಯಾ ಪರವಾಗಿದ್ದು ಒಬ್ಬರ ವಿರುದ್ಧ ಒಬ್ಬರು ಹೋರಾಡುತ್ತಿದ್ದುದು. ಅದಕ್ಕೆ ಸರಿಯಾಗಿ ಬ್ರಿಟಿಷರು ಸ್ವಾಮಿ ನಿಷ್ಠರಾಗಿ ಹೋರಾಟ ನಡೆಸಿದ್ದು ಈ ನಾಯಕರ ಸೋಲಿಗೆ ಕಾರಣವಾಯಿತು.

ಇದಲ್ಲದೆ, ಅಹಮದುಲ್ಲಾ ಮತ್ತು ತಾಂತ್ಯಾಟೋಪಿ ಮುಂತಾದ ಕೆಲವು ನಾಯಕರನ್ನು ಬಿಟ್ಟು ಮಿಕ್ಕವರಿಲ್ಲ ಯಾವುದಾದರೊಂದು ಸ್ವಾರ್ಥಕ್ಕಾಗಿ ಈ ಸಂಘರ್ಷದಲ್ಲಿ ಸೇರಿಕೊಂಡಿದ್ದರು. ತಮ್ಮ ಸ್ವಂತ ಆಸಕ್ತಿಗಳಿಗೆ ಧಕ್ಕೆ ತಗಲುವವರೆಗೂ ಅವರು ಬ್ರಿಟಿಷರ ವಿರುದ್ಧ ಹೋರಾಡಲಿಲ್ಲ.

ದಂಗೆಯ ಕಾಲದಲ್ಲಿ ನಡೆದ ಅನಾಹುತಗಳನ್ನು ಪ್ರಸ್ತಾಪಿಸುತ್ತ, ಮೌಲಾನಾ ಆಜಾದರು, ವಿದ್ರೋಹವನ್ನು ಅಡಗಿಸಲು ಇಂಗ್ಲೀಷರು ನಡೆಸಿದ ಅತ್ಯಾಚಾರಗಳನ್ನು ಬ್ರಿಟಿಷ್ ಇತಿಹಾಸಕಾರರು ಮುಚ್ಚಿಡಲು ಪ್ರಯತ್ನಿಸಿರುವರು. ಆದರೂ ಸಹ, ಕೆಲವರು ಈ ಜುಲುಮೆಗಳನ್ನು ನಿಂದಿಸಿದರು.

ಮೌಲಾನಾ ಆಜಾದ್‌ರವರು ೧೮೫೭ರ ಅಂದೋಳನದಲ್ಲಿನ ಈ ಪ್ರಸ್ತಾವನೆಯಲ್ಲಿ ಎರಡು ಅಂಶಗಳ ಕಡೆ ಗಮನ ಸೆಳೆದಿರುವರು. ಮೊದಲನೆಯದು ಆ ಕಾಲದಲ್ಲಿ ಹಿಂದೂ ಮತ್ತು ಮುಸ್ಲಿಮರಲ್ಲಿದ್ದ ಐಕ್ಯ. ಎರಡನೆಯದು ಮುಘಲ್ ಆಡಳಿತದಲ್ಲಿ ಜನತೆಗಿದ್ದ ರಾಜನಿಷ್ಠೆ.

ಜನರು ಅನುತೀಯು ಭಾವನೆಯಿಂದ ವಿಮುಕ್ತರಾಗಿ ನಾಯಕರ ಯಾವುದೇ ವಿಶೇಷ ಪ್ರಯತ್ನದ ಫಲವಾಗಿರಲಿಲ್ಲ. ಹಿಂದು ಮತ್ತು ಮುಸ್ಲಿಮರು ಶಾಶ್ವತ ಬುನಾದಿಯ ಮೇಲೆ ಸ್ನೇಹವನ್ನೂ, ಸೌಹಾರ್ದವನ್ನೂ ಹೊಂದಿದ್ದರು. ಆದ್ದರಿಂದ ಅವರಲ್ಲಿ ಏಕತೆಯಾಗಬೇಕೆಂಬ ಬಗೆಗೆ ಯಾವ ವಿಶೇಷ ಮನವಿಯನ್ನು ಮಾಡಿಕೊಳ್ಳಬೇಕಾಗಿರಲಿಲ್ಲ ಎಂದು ಮೌಲಾನಾ ಆಜಾದರು ತಮ್ಮ ಪ್ರಸ್ತಾವನೆಯಲ್ಲಿ ತಿಳಿಸಿರುವರು. ಹಿಂದುಗಳು ಮತ್ತು ಮುಸ್ಲಿಮರು ಏಕತ್ರವಾಗಿ ದೆಹಲಿಯ ಕಡೆ ದೃಷ್ಟಿಯಿಟ್ಟದ್ದುದನ್ನು ಮೌಲಾನಾ ಆಜಾದ್‌ರವರು ಪ್ರಸ್ತಾಪಿಸುತ್ತಾ ಬಹಾದೂರ್ ಷಾ ನೊಬ್ಬನೇ ಭಾರತದ ನಿಜವಾದ ಚಕ್ರವರ್ತಿ ಎಂಬ ಭಾವನೆಯು ಹಿಂದೂ-ಮುಸ್ಲಿಮರಲ್ಲಿ ಇತ್ತು ಎಂದು ತಿಳಿಸಿರುವರು ನಾನಾ ಸಾಹೇಬನು, ಮರಾಠರಿಗೂ ಮೊಘಲರಿಗೂ ಹಿಂದಿನಿಂದ ವೈಮನಸ್ಯ ವಿದ್ದರೂ, ತಾನು ಮೊಘಲ್ ನ್ಯಾಯಾಸ್ಥಾನದ ಸುಬೇದಾರ ಎಂದು ಕರೆದುಕೊಳ್ಳಲು ಹಿಂಜರಿಯದಿದ್ದುದು ಇದಕ್ಕೊಂದು ನಿದರ್ಶನ ಎಂದು ಹೇಳಿರುವರು.

೧೮೫೭ರ ಶತಾಬ್ದಿಯನ್ನು ಭಾರತದಾದ್ಯಂತ ಆಚರಿಸಲಾಗುವುದು. ಆದರ ಸ್ಪಾನಾರ್ಹಿಕ ವಿವರಣೆಯನ್ನು ಪ್ರಕಾಶಗೊಳಿಸಲು ಈ ಸಂದರ್ಭವನ್ನು ಏಕೆ ಆರಿಸಿಕೊಳ್ಳಲಾಗಿದೆ? - ಎಂಬ ಪ್ರಶ್ನೆಗೆ ಉತ್ತರವೀಯುತ್ತಾ ಮೌಲಾನಾ ಆಜಾದ್‌ರವರು, "ಇಂದು ವಾತಾವರಣವು ೧೮೫೭ರ ಘಟನೆಗಳನ್ನು ನಿಷ್ಪಕ್ಷಪಾತವಾಗಿ ವಿಮರ್ಶಿಸುವುದಕ್ಕೆ ಅನುಕೂಲವಾಗಿದೆ ಎಂದು ತಿಳಿಸಿರುವರು.

ಈ ಪುಸ್ತಕದ ಬಗೆಗೆ ಮಾತನಾಡುತ್ತಾ ಡಾ॥ ಸೆನ್ ರವರೂ, ನಿಜವಾದ ಐತಿಹಾಸಿಕ ಲೇಖಕರಂತೆ ಈ ಪುಸ್ತಕವನ್ನು ಬರೆಯಬೇಕೆಂದು ಸೂಚಿಸಲಾಗಿತ್ತು; ಆದರೆನ್ನಿಸಿದು ಅವರ ಕೆಲಸದಲ್ಲಿ ಪ್ರವೇಶಿಸುವ ಆಥವಾ ಅವರ ಅಭಿಪ್ರಾಯಗಳ ಮೇಲೆ ಪ್ರಭಾವ ಬೀರುವ ಪ್ರಯತ್ನ ನಡೆದಿಲ್ಲವೆಂದು ಮೌಲಾನಾ ಆಜಾದ್‌ರವರು ತಿಳಿಸಿರುವರು.

ಆದ್ದರಿಂದ ಈ ಪುಸ್ತಕದಲ್ಲಿನ ಘಟನೆಗಳ ಅರಿಕೆ ಮತ್ತು ವ್ಯಾಖ್ಯಾನಗಳು ಅವರವು. ಅವರು ಯಾವ ಅಭಿಪ್ರಾಯಗಳಿಗೂ ಯಾವ ರೀತಿಯಲ್ಲೂ ಸರಕಾರದವರು ಬದ್ಧರಾಗಿರುವುದಿಲ್ಲ-ಎಂದು ಮೌಲಾನಾ ಆಜಾದ್‌ರವರು ತಿಳಿಸಿದರು






# ಶಿಕ್ಷಣ ಮಾಧ್ಯಮ

(೫ನೇ ಪುಟದಿಂದ)

ದರ ಬಗೆಗೆ ಯಾರೂ ಸಂದೇಹಪಡಬೇಕಾಗಿಲ್ಲ.

ಅಂತರಾಷ್ಟ್ರೀಯವಾದ ವೈಜ್ಞಾನಿಕ ಪರಿಭಾಷೆಯನ್ನೆಲ್ಲ ಭಾಷಾಂತರಿಸುವುದ ವ್ಯರ್ಥ ಸಾಹಸ. ಅದರಿಂದ ಯಾವ ಪ್ರಯೋಜನವೂ ಇಲ್ಲ; ಗೊಂದಲಕ್ಕೆ ಮಾತ್ರ ಅವಕಾಶವಾಗುತ್ತದೆ. ಆದ್ದರಿಂದ ಎಲ್ಲ ಕಡೆಗೂ ಸರ್ವಸಮಾನವಾಗಿ ರೂಢಿಯಲ್ಲಿರಬಹುದಾದ ಎಲ್ಲಿಯೋ ಕೆಲವು ಪದಗಳ ಹೊರತು ಉಳಿದುದೆಲ್ಲವನ್ನೂ ಅಂತರರಾಷ್ಟ್ರೀಯವಾದ ಪರಿಭಾಷೆಯಿಂದಲೇ ವ್ಯವಹರಿಸುವುದು ಉಚಿತ.

ಕೇರಳದಲ್ಲಿ ಮಲೆಯಾಳಂತೆ, ಆಂಧ್ರದಲ್ಲಿ ತೆಲುಗಿನಂತೆ, ತಮಿಳುನಾಡಿನಲ್ಲಿ ತಮಿಳಿನಂತೆ ಕರ್ನಾಟಕದಲ್ಲಿ ಕನ್ನಡ ಪ್ರಥಮ ಭಾಷೆಯಾಗದಿದ್ದರೆ, ಕನ್ನಡವೆ ಶಿಕ್ಷಣ ಮಾಧ್ಯಮವಾಗದಿದ್ದರೆ ಕನ್ನಡಿಗರ ಬಾಳು ಕುಂಠಿತವಾಗುತ್ತದೆ; ಕನ್ನಡಿಗರ ಏಳಿಗೆಗೆ ಧಕ್ಕೆ ಬರುತ್ತದೆ; ಕರ್ನಾಟಕದ ರಚನೆ ಅರ್ಥವಿಹೀನವಾಗುತ್ತದೆ; ಈ ತಹ ದುಃಖದ ಪರಿಣಾಮಗಳ ಪರಿಸ್ಥಿತಿಗೆ ಕಾರಣವಾಗುವವರೆಲ್ಲರೂ ವ್ಯಕ್ತಿಗಳಾಗಲಿ ಸಂಸ್ಥೆಗಳಾಗಲಿ, ಚಿರಕಾಲಕ್ಕೆ ತನವಾಗಿ ಶಾಪಗ್ರಸ್ತರಾಗುತ್ತಾರೆ; ಕವಿವಾದಿಯೂ ಆಗುತ್ತಾನೆ.

### ಉಜ್ವಲ ಆಶಾವಾದ

ಆದರೆ ಹಾಗಾಗುವುದಿಲ್ಲ ನಮ್ಮ ಜನರಾಗೆ ಆಗಗೊಡಲು ಬಿಡುವುದಿಲ್ಲ. ಒಂದು ವೇಳೆ ಕನ್ನಡಿಗರ ದೌರ್ಬಲ್ಯೋಪಮವಾದ ಆತ್ಯಾದಾರ್ಯದಿಂದಲೊ ಅತಿಸಾತ್ವಿಕತೆಯಿಂದಲೊ ಅವರು ಔದಾಸೀನ್ಯವನ್ನು ಅವಲಂಬಿಸಿದರೆ ತೆಲಗು ತಮಿಳು ಮಲೆಯಾಳಿ ಮರಾಠಿ ಬಾಗಾಳಿ ಮೊದಲಾದ ಭಾರತೀಯ ಭಾಷೆಗಳ ನಮ್ಮ ನೆರೆಯ ಸಹೋದರರು ತಮ್ಮ ತಮ್ಮ ಭಾಷೆಗಳಿಗೆ ತಮ್ಮ ತಮ್ಮ ನಾಡುಗಳಲ್ಲಿ ಸರಿಯಾದ ಸ್ಥಾನಮಾನಗಳನ್ನು ಕಲ್ಪಿಸುವುದರಿಂದಲೆ ನಮ್ಮನ್ನು ಸರಿಯಾದ ದಾರಿಗೆ ಅನಿವಾರ್ಯವಾಗಿಯೇ ತಳ್ಳುವದರಲ್ಲಿ ಸಂದೇಹವಿಲ್ಲ ಆದ್ದರಿಂದಲೆ ನಾನು ಸಂಪೂರ್ಣ ಆಶಾವಾದಿಯಾಗಿದ್ದೇನೆ.

ಕನ್ನಡ ನಾಡಿನಲ್ಲಿ ಕನ್ನಡವೆ ಪ್ರಥಮ ಭಾಷೆಯಾಗುತ್ತದೆ. ಕನ್ನಡ ನಾಡಿನ ಶಿಕ್ಷಣ ಕ್ರಮದಲ್ಲಿ ಕನ್ನಡ ಪ್ರಥಮ ಭಾಷೆಯಾಗುತ್ತದೆ. ವಿದ್ಯಾಭ್ಯಾಸದ ಎಲ್ಲ ಮಟ್ಟಗಳಲ್ಲಿಯೂ ಕನ್ನಡ ಶಿಕ್ಷಣ ಮಾಧ್ಯಮವಾಗುತ್ತದೆ. ಪ್ರದೇಶ-ಪ್ರದೇಶದ ಮತ್ತು ಪ್ರದೇಶ ಕೇಂದ್ರದ ವ್ಯವಹಾರ ವಾತ್ಸಲ್ಯಕ್ಕಾಗಿ ಹಿಂದಿ ಉಳಿಯುತ್ತದೆ. ಹೊರ ಪ್ರಪಂಚದೊಡನೆಯೂ ಮತ್ತು ದಿನ ದಿನವೂ ವಿಸ್ತರಿಸುತ್ತಿರುವ ಜಗತ್ತಿನ ಯಂತ್ರವಿದ್ಯೆ, ಜ್ಞಾನ-ವಿಜ್ಞಾನಗಳೊಡನೆಯೂ ಸಂಬಂಧ ಸಂಪರ್ಕಗಳನ್ನಿಟ್ಟುಕೊಳ್ಳುವ ಸಲುವಾಗಿ ಇಂಗ್ಲಿಷ್, ಸ್ವಯಂ ಚಿತ ಇತರ ಪ್ರಸಿದ್ಧ ಭಾಷೆಗಳಂತೆಯೆ ಐಚ್ಛಿಕ ಭಾಷೆಯಾಗಿ, ಮತ್ತು ಕೆಲವರ ಭಾಗಕ್ಕೆ ವಿಶೇಷ ಸಾಮರ್ಥ್ಯಾಧ್ಯಯನ ವಿಷಯವಾಗಿಯೂ ಮುಂದುವರಿಯುತ್ತದೆ.

(೫ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅಧ್ಯಕ್ಷ ಶುವೆಂಪುರವರ ಭಾಷಣದಿಂದ)

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

## ಬೌದ್ಧಮತ

(೨ನೇ ಪುಟದಿಂದ)

ಸ್ಕೊ ನೀಗುವ ಸುಲಭ ಸ್ಪರಳ ವಿಧಾನವನ್ನು ತೋರಿಸಿಕೊಟ್ಟು ಬೆಳಗಿದ ದಿವ್ಯ ಜ್ಯೋತಿಯಾಗಿ ಬೆಳೆದು ಅಡಗಿದನು. ಜಗತ್ತಿನ ಮೇಲೆ ಅನೇಕ ಧರ್ಮಸಂಸ್ಥಾಪಕರೂ ತತ್ತ್ವಜ್ಞಾನಿಗಳೂ ಹುಟ್ಟಿ ಹೋಗಿದ್ದಾರೆ. ಆದರೆಲ್ಲರಲ್ಲಿಯೂ ಗೌತಮ ಬುದ್ಧನು ದೊಡ್ಡವನು. ಇಲ್ಲದೆ ಅನೇಕ ವಿಧಾನಗಳಲ್ಲಿ ಮಾನವ ಜನಾಂಗದ ಧರ್ಮ ಪ್ರೇಷಕರಲ್ಲಿ ಈತನು ಅತ್ಯಂತ ಜ್ಞಾನಿಯಾದವನು ಎಂಬುದನ್ನು ಜಗತ್ತು ಕಂಡುಕೊಳ್ಳಬಹುದು.

ಭಾರತ ಸರಕಾರವು ಶಾಂತಿಯನ್ನು ಬಯಸುವ ರಾಷ್ಟ್ರ; ಅದು ಜಗತ್ತಿನ ಮುಂದೆ ವ್ಯವಹಾರಕ್ಕಾಗಿ ಪಂಚಶೀಲ ತತ್ತ್ವಗಳನ್ನು ಮಂಡಿಸಿದೆ. ಈ ಪಂಚಶೀಲಗಳು ಬುದ್ಧನು ಕಂಡುಕೊಂಡ ಮಾರ್ಗಗಳು. ಈ ಐಹಿಕ ಜೀವನವನ್ನೇ ಶಾಶ್ವತವೆಂದು ನಂಬಿ, ಸಂಪತ್ತಿನ ಭೋಗವೇ ಮಹಾ ಭೋಗವೆಂದು ತಿಳಿದು "ಪುನರಪಿ ಜನನಂ ಪುನರಪಿ ಮರಣಂ" ಎಂಬುದನ್ನು ವ್ಯವಹಾರ ರೂಪದಲ್ಲಿ ಅನುಭವಿಸುವ ಮಾನವರು ಪುನರಾಗಿ ಬಾಳಿ ಶಾಶ್ವತ ಸುಖ ಸಂಪಾದನೆಗಾಗಿ ಈ ಪಂಚಶೀಲಗಳನ್ನು ಅನುಸರಿಸಿದರೆ, ಆಗ ಪ್ರಪಂಚದಲ್ಲಿ ಶಾಂತಿ ನಿಜವಾಗಿಯೂ ನೆಲಸೀತು.

"ಹಿಂಸೆಯನ್ನು ಮಾಡಬಾರದು; ಯಾವುದೇ ಕ್ಷುಲ್ಲಕ ಕ್ರಿಮಿಯನ್ನಾದರೂ ಕೂಡಾ ಕೊಲ್ಲುವ ಯೋಜನೆ ಕೂಡಾ ಹೀನವಾದುದು. ಪರರ ವಸ್ತುಗಳನ್ನು ಎಂದೂ ಅಪಹರಿಸಬಾರದು; ಅವರು ಕೊಟ್ಟರೆ ಅದನ್ನು ಸಂತೋಷದಿಂದ ಸ್ವೀಕರಿಸಬೇಕು. ಪರ ಸ್ತ್ರೀ ಗಮನವು ಅತಿ ಹೀನಾಯವಾದುದು; ಅವರನ್ನು ಅಕ್ಕ ತಂಗಿಯರಂತೆ ಕಾಣಬೇಕು. ಸತ್ಯಸಂಧನಾಗಿದ್ದು ಅಸತ್ಯದ ದ್ವೇಷಿಯಾಗಿರಬೇಕು; ಪರದೂಷಣೆ, ಸುಳ್ಳು ಸಾಕ್ಷ್ಯಗಳಿಂದ ದೂರವಾಗಿರಬೇಕು. ಮದ್ಯಸೇವನೆಯನ್ನು ಎಂದಿಗೂ ಮಾಡಬಾರದು." ಈ ರೀತಿ ಗೌತಮ ಬುದ್ಧನ ಪಂಚಶೀಲಗಳು. ಮಾನವರು ಈ ತತ್ತ್ವಗಳನ್ನು ದಿನನಿತ್ಯದ ಅನುಷ್ಠಾನವಾಗಿ ಅಂಗೀಕರಿಸಿಕೊಂಡು, ಅದರಂತೆ ನಡೆದರೆ ಪ್ರಪಂಚವು ಸುಖ ಸುಮಯವಾಗದಿರಲಾರದು. ಮಾನವನ ನಾಲ್ಕೆಯೂ ಫಲಿಸಿ, ಆತನ ಮರುಹುಟ್ಟನ್ನು ಮರೆಸಿ, ಅಳಿಸೊಡರಿಂದ ದೂರವಾಗಿ ಆತನಿಗೆ ಶಾಶ್ವತ ಸುಖವು ದೊರೆಯದಿರದು.

ಬುದ್ಧನು ವೈದಿಕ ಧರ್ಮವನ್ನು ಮೆಚ್ಚುವುದಿಲ್ಲ. ವೇದಗಳನ್ನು ಮನ್ನಿಸುವುದಿಲ್ಲ. ದೇವತೆಗಳನ್ನು ಸಂತೋಷಪಡಿಸುವುದೆಂದು ನಂಬುವ ಯಜ್ಞಯಾಗಾದಿ ಕರ್ಮಗಳಿಗಾಗಿ ಪ್ರಾಣಿ ಹಿಂಸೆಯನ್ನು ಮಾಡುವುದು ಮಹಾಪರಾಧವೆನ್ನುತ್ತಾನೆ. ಭಗವಂತನು ಸರ್ವ ವ್ಯಾಪಿಗಳೆಲ್ಲೂ ಸಮಭಾವನೆಯುಳ್ಳವನು. ಆತನ ದೃಷ್ಟಿಯಲ್ಲಿ ಬುದ್ಧಿವಂತ ಮನುಷ್ಯನೂ ತಿಳಿಗೇಡಿ ಪ್ರಾಣಿಗಳೂ ಸಮವೇ ಆದುದರಿಂದ ನಯಾವಂತನಾಗಿರುವುದೇ ಜೀವನದ ಮುಖ್ಯ ಧ್ಯೇಯ. ಎಂತಲೇ ಗೌತಮನ ಮತದಲ್ಲಿ ಅಹಿಂಸೆಯು ಅಗ್ರಗಣ್ಯ ಸ್ಥಾನವನ್ನು ಪಡೆದಿದೆ. ಈ ತತ್ತ್ವವನ್ನು ಆತನು ಬಹಳ ಬೇಗನೇ ಕಂಡುಕೊಂಡಿದ್ದನು. ಮಗಧ ರಾಜ್ಯದ ರಾಜನಾದ ಅಜಾತಶತ್ರುವು ಯಜ್ಞದಲ್ಲಿ ಬಲಿಕೊಡುವುದ ಕ್ಕಾಗಿ ಸಾವಿರಾರು ಪ್ರಾಣಿಗಳನ್ನು ಒಟ್ಟಿ ಸಿ ಕೋಗುತಿದ್ದಾಗ, ಬುದ್ಧನು ರಾಜನಿಗೆ ಪ್ರಾಣಿ ಹಿಂಸೆಯು ಹೇಯಕೃತ್ಯವೆಂದೂ, ಅಹಿಂಸೆಯೆಷ್ಟು ಮಹಿಮೆ ಧರ್ಮವು ಬೇರಿಲ್ಲವೆಂದೂ ತಿಳುಹಿಸಿ, ಪ್ರಾಣಿವಧೆಯನ್ನು ನಿಲ್ಲಿಸಿದನೆಂದು ಕಥೆಯಿದೆ.

ಜೀವನದಲ್ಲಿ ಜರಾವ್ಯಾಧಿಗಳು ನಿಯುಕ್ತವಾಗಿವೆ. ಆದುದರಿಂದ ಆದು ದುಃಖಮಯವಾದುದು. ಆದು ಅಸಫಲವಾದ ತೃಷ್ಣೆಯಿಂದುಂಟಾಗುತ್ತದೆ. ಇದರಿಂದಾಗಿಯೇ ಪುನರ್ಜನ್ಮವು ಬರುವುದು. ಇದಕ್ಕಾಗಿ ಪುನರ್ಜನ್ಮ ಹೇತುವಾದ ತೃಷ್ಣೆಯನ್ನು—ಆಕಾಂಕ್ಷೆಯನ್ನು ಛೇದಿಸಿ ದೂರಮಾಡಿಕೊಳ್ಳಬೇಕು. ಹೇಗೆ ತೃಷ್ಣಾ ಛೇದನಕ್ಕಾಗಿ ಅಷ್ಟಾಂಗಿಕ ಮಾರ್ಗವನ್ನು ಅನುಸರಿಸಬೇಕು. ಆಗ ನಿರ್ವಾಣವು ಪ್ರಾಪ್ತವಾಗುತ್ತದೆ. ನಿರ್ವಾಣವೆಂದರೆ ಶಾಶ್ವತ ಸುಖದ ನೆಲೆ. ಆ ಮೇಲೆ ಪುನರ್ಜನ್ಮವಿಲ್ಲ, ಮುಕ್ತಿ. ಈ ರೀತಿಯಲ್ಲಿ ಮುಕ್ತಿ ಅಥವಾ ನಿರ್ವಾಣವನ್ನು ಹೊಂದ ಬೇಕಾದರೆ, ಭೋಗ ಮಗ್ನತೆಯನ್ನೂ ಅತಿಕಾಯ ಕ್ಲೇಶವನ್ನೂ ಪರಿತ್ಯಜಿಸಿ ಮಧ್ಯಮ ಮಾರ್ಗದಲ್ಲಿ ನಡೆದು, ಸಿರಾಡಂಬರ ಜೀವನವನ್ನು ಸಾಗಿಸಬೇಕು. ಇದೇ ಶಾಶ್ವತ ಸುಖಸೌಧದ ಪ್ರಥಮ ಸೋಪಾನ.

ತೃಷ್ಣೆಯನ್ನು ದೂರವಿರಿಸಿದರೆ ಮಾನವನು ದುಃಖ ನಿರೋಧವನ್ನು ಮಾಡಿಕೊಳ್ಳುವುದು ಸಾಧ್ಯ ಇದಕ್ಕೆ ನೀತಿಯು ನೆಲೆಗಟ್ಟು ಆಗತ್ಯ. ಅಷ್ಟಾಂಗಿಕ ಮಾರ್ಗವನ್ನು ಅನುಸರಿಸಿದರೆ ವೈರಾಗ್ಯ ಸಂಪನ್ನನಾಗಿ ದುಃಖದಿಂದ ದೂರವಿರಬಹುದು. ಸಮ್ಯಕ್ ದೃಷ್ಟಿ (ಸರಿಯಾದ ಜ್ಞಾನ), ಸಮ್ಯಕ್ ಸಂಕಲ್ಪ (ಪ್ರಾಣಾಣಿಕನಾದ ಗುರಿ), ಸಮ್ಯಕ್ ವಾಕ್ (ಸತ್ಯಪೂರ್ಣ ವಚನ), ಸಮ್ಯಕ್ ಕರ್ಮಾಂತ (ಪ್ರಾಮಾಣಿಕ ಕಾರ್ಯ), ಸಮ್ಯಕ್ ಆಜೀವ (ಪ್ರಾಣಿಗಳಿಗೆ ನೋವು ಮಾಡದ ಜೀವನ), ಸಮ್ಯಕ್ ವ್ಯಾಯಾಮ (ಸ್ವಜ್ಞಾನ, ಸಂಯಮನ ಮಾರ್ಗದರ್ಶನ ರೂಪವಾದ ಪ್ರಯತ್ನ), ಸಮ್ಯಕ್ ಸ್ಮೃತಿ (ವಿಚಾರಶೀಲ ವಿಚಾರ), ಮತ್ತು ಸಮ್ಯಕ್ ಸಮಾಧಿ (ಜೀವನ ರಹಸ್ಯಗಳ ಕುರಿತಾದ ಪ್ರಾಮಾಣಿಕ ಧ್ಯಾನ, ಚಿಂತನ, ಮನನಗಳ ತಪಸ್ಸು ಎಂಬ ಎಂಟು ಅಂಗಿಕ ಮಾರ್ಗಗಳು ಮಾನವನು ವೈರಾಗ್ಯ ಸಂಪಾದನೆಯನ್ನು ಮಾಡಲು ಉಪಕಾರಿಯಾಗುತ್ತವೆ. ಈ ಅಂಗಿಕಗಳನ್ನು ತಮ್ಮ ನಿತ್ಯ ಜೀವನದ ಅನುಷ್ಠಾನಾಂಗಗಳಾಗಿ ಸೇರಿಸಿಕೊಂಡರೆ, ಅತನ ದುಃಖಗಳಿಗೆ ಪರಿಹಾರವಾಗಿ ಯಾವ ವಿಧದ ಆಕಾಂಕ್ಷೆಯೂ ಬಾಕಿಯುಳಿಯದೆ ತೃಷ್ಣಾಕಂಠಿಂದಿಂದುಂಟಾಗುವ ಪುನರ್ಜನ್ಮವು ನಾಯವಾಗುವುದು. ಆಗ ಜೀವನಿಗೆ ಸುಖ ಪ್ರಾಪ್ತಿಯಾಗುವುದು.

ಜೀವನವು ದುಃಖಮಯವಾದುದು. ಈ ದುಃಖಕ್ಕೆ ಕಾರಣಗಳಾದುವುಗಳಿಗೆ ನಿಧಾನಗಳೆಂದು ಹೆಸರು. ಅವು ಅವಿದ್ಯಾ, ಸಂಸ್ಕಾರ, ವಿಜ್ಞಾನ, ನಾಮರೂಪ, ಷಡಾಯತನ, ಸ್ಪರ್ಶ, ವೇದನಾ, ತೃಷ್ಣಾ, ಉಪಾದಾನ, ಭವ, ಜಾತಿ, ಜರಾಮರಣಗಳು. ಇವುಗಳಲ್ಲಿ ಕೊನೆಯದು ಅದರ ಮೊದಮೊದಲನೆಯದನ್ನು ಅವಲಂಬಿಸಿರುವುದು. ಆದುದರಿಂದ ಮೊದಲನೆಯದಾದ ಅವಿದ್ಯೆಯನ್ನು ನಾಶಮಾಡಿಕೊಂಡರೆ ಈ ದುಃಖ ಹೇತುಗಳೆಲ್ಲವೂ ಮಯವಾಗಿ,ಸುಖ ಪ್ರಾಪ್ತಿಯಾಗುವುದು, ಆದುದರಿಂದ ತಿಳಿವಳಿಕೆಯೇ ಶಾಶ್ವತ ಸುಖ ಪ್ರಾಪ್ತಿಗೆ ಕಾರಣವಾಗುತ್ತದೆ.

ಬುದ್ಧನಿಗೆ ಜೀವಾತ್ಮ, ಪರಮಾತ್ಮ ಮತ್ತು ಜಗತ್ತು ಇವು ಮಹತ್ವದವುಗಳೆಂದು ತೋರಲಿಲ್ಲ. ದುಃಖಮಯವಾದ ಈ ಜಗತ್ತಿನಿಂದ ಯಾವ ರೀತಿಯಿಂದ ಪಾರಾಗಿ ಹೋಗಬೇಕೆಂದೇ ಆತನು ಆಲೋಚಿಸಿದನು. ಆದುದರಿಂದಲೇ ಆತನ ಅತ್ಯವಾದವನ್ನು ಒಪ್ಪಿಕೊಳ್ಳದೆ ಅನಾತ್ಮವಾದವನ್ನೇ ಪ್ರಚಾರಕ್ಕೆ ತಂದನೆಂದು ಕೇಳಿವರು ಹೇಳುತ್ತಾರೆ. ಸರ್ವಶಕ್ತನಾದ ಭಗವಂತನ ವಿಚಾರವಾಗಿ ಆತನು ಮಾತೆತ್ತಲೇ ಇಲ್ಲ. ಜಗತ್ತು ಹೇಗೆ ಹುಟ್ಟಿತು, ಪರಮಾತ್ಮನ ಸ್ವರೂಪವೇನು ಜೀವಾತ್ಮ ಮತ್ತು ಪರಮಾತ್ಮರೊಳಗೆ ಇರುವ ಸಂಬಂಧ - ಇವುಗಳ ವಿಚಾರವಾಗಿ ಗಲಭೆ ಎಬ್ಬಿಸಲಿಲ್ಲ. ಆದರ್ಶರೀತಿಯಲ್ಲಿ ಜೀವನವನ್ನು ಬಾಳಿಕೊಳ್ಳಲು ಇವುಗಳ ವಿಚಾರಗಳು ಜನಗತ್ಯ ಎಂಬುದೇ ಆತನ ಅಭಿಮತವೆನ್ನುತ್ತಾರೆ. ಮಾನವನು ತನ್ನ ಕರ್ಮ ಫಲವನ್ನು ಅನುಭವಿಸಿಯೇ ತೀರುವನು ಮತ್ತು ಆ ಕರ್ಮ ಫಲವೇ ಆತನಿಗೆ ಉತ್ತಮ ಇಲ್ಲವೆ ಅಧಮ ಫಲಗಳನ್ನು ಕೊಡುವುವು. ಇದಕ್ಕಾಗಿ ತೃಷ್ಣೆಯನ್ನು ಬದಿಗಿರಿಸುವುದೇ ಮೂಲ ಸಾಧನ. ಅದಕ್ಕಾಗಿ ಅವಿದ್ಯೆಯನ್ನು ಹೋಗಲಾಡಿಸಬೇಕು. ಆಗ ಮಾನವನ ಕಲ್ಯಾಣವಾಗುತ್ತದೆ ಅದಕ್ಕೆ ಅಂಗವಾಗಿ, ಕೆಲವೊಂದು ನಿಯಮಗಳನ್ನು ಕೈಗೊಳ್ಳಬೇಕು ಎಂಬುದೇ ಆತನ ಅಭಿಪ್ರಾಯ ಹೀಗಾಗಿ ಪರಮಾತ್ಮನೇ ಸರ್ವ ದ್ರವ್ಯಗಳ ಸೃಷ್ಟಿಕರ್ತ, ಆತನೇ ಸೂತ್ರಧಾರ ಆತನಭಿಮತದಂತೆ ಈ ಜಗತ್ತಿನಲ್ಲಿ ಒಂದು ಕಲ್ಲಾದರೂ ಅತ್ತಿತ್ತ ಚಲಿಸಬೇಕು ಎಂದು ನಂಬಿದ ವೈದಿಕರು ಈ ಮತವನ್ನು ನಾಸ್ತಿಕವಾದವೆಂದು ಕರೆದಿದ್ದರು.

ಆದರೆ, ಬುದ್ಧನು ಉಪದೇಶಿಸಿದ ಸಾರಾಂಶಗಳು, ಜೀವನು ಮುಕ್ತಿಗಾಗಿ ಅನುಸರಿಸಬೇಕಾದ ತತ್ತ್ವಗಳ ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಹೇಳಿದ ಮಾತುಗಳಿಗೆ ನಿರೋಧವಾದುದಲ್ಲ. ಆತನ್ನೊ, ತನಗೆ ಪ್ರಿಯನಾದವನು ಯಾರೆಂಬ ಈ ರೀತಿಯಾಗಿ ಕರೆದಿದ್ದಾನೆ:

ಅದ್ವೇಷ್ಟಾ ಸರ್ವ ಭೂತಾನಾಂ
ಮೈತ್ರಃ ಕರುಣ ಏವಚ
ನಿರ್ಮಮೋ ನಿರಹಂಕಾರಃ
ಸಮ ದುಃಖ ಸುಖಃ ಕ್ಷಮಿ ॥
ಸಂತುಷ್ಟಃ ಸತತಂ ಯೋಗೀ
ಯತಾತ್ಮಾ ದೃಢ ನಿಶ್ಚಯಃ
ಮಯ್ಯರ್ಪಿತ ಮನೋಬುದ್ಧಿ
ಯೋಮೇ ಭಕ್ತಃ ಸಮೇ ಪ್ರಿಯಃ ॥
೧೩-೧೩, ೧೪.

"ಸಕಲ ಪ್ರಾಣಿಗಳಲ್ಲಿಯೂ ಹಗೆಯಿಲ್ಲದೆ, ಸ್ನೇಹವನ್ನೂ ಕರುಣೆಯನ್ನೂ ತೋರಿಸುತ್ತ ಮಮಕಾರ-ಅಹಂಕಾರಗಳಿಲ್ಲದೆ, ಸಹನಶೀಲನಾಗಿರುವವನೂ, ಸುಖ ದುಃಖಗಳಲ್ಲಿ ಸಮ ಬುದ್ಧಿಯುಳ್ಳವನೂ ಯಾವಾಗಲೂ ಸಂತುಷ್ಟನೂ ಇಂದ್ರಿಯ ನಿಗ್ರಹಿಯೂ ತತ್ವ ನಿರ್ಣಯವುಳ್ಳವನೂ ನನ್ನಲ್ಲಿಯೇ ಒಪ್ಪಿಸಿದ ಮನೋ ಬುದ್ಧಿಗಳುಳ್ಳವನೂ ಆಗಿರುವ ನನ್ನ ಭಕ್ತನು ನನಗೆ ಬಹಳ ಪ್ರಿಯನಾದವನು-"

ಬುದ್ಧನ ನಿರ್ಯಾಣವಸ್ತು ಹೊಂದುವುದಕ್ಕೆ ಉಪದೇಶಿಸಿದ ತತ್ವಗಳೂ, ಭಗವದ್ಗೀತೆಯಲ್ಲಿ ಪರಮಾತ್ಮನಿಗೆ ಪ್ರಿಯನಾದ ಭಕ್ತನ ಆಚರಣೆಗಳೂ ಸಾರ್ವತ್ರಿಕವಾಗಿವೆ. ಈ ತತ್ತ್ವವನ್ನೇ ಸುಧಾರಿಸಿ, ಜನತೆಯು ಸನ್ಮಾರ್ಗ ಪ್ರವರ್ತಕವಾಗುವಂತೆ ಪುನಃ ಪ್ರಚಾರಗಳಿಸಿ ಜನಮನ್ನಣೆ ಪಡೆದ ವ್ಯಕ್ತಿ ಭಗವಾನ್ ಗೌತಮನು.

ಗೌತಮನ ನಿರ್ವಾಣದ ಕೆಲಕಾಲಾನಂತರ ಹಿಂದೂ ಮತದ ಪ್ರಭಾವವು ಈ ಮತದ ಮೇಲೆ ವಿಶೇಷ ರೀತಿಯಲ್ಲಿ ಬಿದ್ದು ಮುಂದಕ್ಕೆ ಅವರಲ್ಲಿ ಬುದ್ಧ ಮತ್ತು ಬೋಧಿ ಸತ್ವರನ್ನು ಹಿಂದೂ ಜನರಂತೆಯೇ ಪೂಜೆ ಮಾಡುವ ಮಹಾಯಾನ ಮತ್ತು ಆದಿ ಕಾಲದ ತತ್ತ್ವಗಳನ್ನೇ ಮುಂದುವರಿಸಿವ ಹೀನಯಾನಗಳೆಂಬೆರಡು ಪಂಗಡಗಳು ಒಡೆದುವು. ಇವುಗಳಲ್ಲಿ ಹೀನಯಾನವು ಸಿಂಹಲದ್ವೀಪ, ಬ್ರಹ್ಮದೇಶ ಮತ್ತು ಸಯಾಮಗಳಲ್ಲಿಯೂ, ತಿಬೇಟು, ಚೀನಾ, ಜಪಾನ್ ಮೊದಲಾದೆಡೆಗಳಲ್ಲಿ ಮಹಾಯಾನವೂ ಪ್ರಚಾರದಲ್ಲಿದೆ. ಮಹಾಯಾನ ಪಂಥದ ಗ್ರಂಥಗಳು ಸಂಸ್ಕೃತ ಭಾಷೆಯಲ್ಲಿಯೂ ಹೀನಯಾನದವು ಪಾಳಿ ಭಾಷೆಯಲ್ಲಿಯೂ ಇವೆ. ಮಹಾಯಾನ ಸಂಪ್ರದಾಯವು ಹಿಂದೂ ಧರ್ಮದ ಒಂದು ಪ್ರತಿಬಿಂಬ ಹಿಂದೂ ದೇವತೆಗಳ ಬದಲು ಬೌದ್ಧ ದೇವತೆಗಳ ಉಪಾಸನೆಯು ನಡೆಯುತ್ತದೆ.

ಕಳೆದ ವರ್ಷ ಮೇ ತಿಂಗಳಲ್ಲಿ ಈ ಭಗವಾನ್ ಬುದ್ಧನ ೨೫೦೦ನೆಯ ಜಯಂತ್ಯುತ್ಸವನ್ನು ಅತಿ ವಿಜೃಂಭಣೆಯಿಂದ ಆಚರಿಸಲಾಯಿತು. ಈ ವರ್ಷವೂ ಸಿಂಹಳದಲ್ಲಿ ಈ ವಾರ್ಷಿಕ ಬುದ್ಧಜಯಂತ್ಯುತ್ಸವವು ನಡೆಯಲಿದ್ದು ಅದರಲ್ಲಿ ಭಾರತದ ಪ್ರಧಾನಿ ನೆಹರೂರವರು ಭಾಗವಹಿಸಲಿದ್ದಾರೆ. ಭಗವಂತನಾದ ಬುದ್ಧನ ತತ್ತ್ವಗಳ ಅರ್ಥವನ್ನು ಇಂದು ಲೋಕದ ಜನರು ತಿಳಿದುಕೊಂಡರೆ ಮಾತ್ರ ಜಗತ್ತು ಉಳಿದೀತು. ಅದಕ್ಕಾಗಿ ನಾವೆಲ್ಲರೂ ಆ ತತ್ತ್ವಗಳನ್ನು ಆಧ್ಯಸಿಸುವ ದೃಢನಿರ್ಧಾರವನ್ನು ಮಾಡೋಣ.

(ಸಾಧಾರ)

—ಎಸ್. ಗೋಪಿಚಂದರಾವ್,
ಉಡುಪಿ.

## ಕೈಮಗ್ಗದ ಬಟ್ಟೆಗಳು

(ನಿನ್ನೆ ಪುಟದಿಂದ)

ಕೈಗಾರಿಕೆಯ ಭವಿಷ್ಯದಭಿವೃದ್ಧಿಗಾಗಿ ಯಿರುವ್ಯಂತಾರಾಜ್ಯಹಾಗೂ ನಿರ್ಯಾತ ಮಾರುಕಟ್ಟೆಗಳ ಪ್ರಾಮುಖ್ಯವನ್ನು ಮಂಡಲಿಯು ಅಂಗೀಕರಿಸಿದೆ ಅಂತಾ ರಾಜ್ಯವ್ಯಾಪಾರವು ಖಾಸಗಿ ವ್ಯಾಪಾರಿಗಳ ಕೈಯಲ್ಲಿದೆ. ಮಂಡಲಿಯ ಸಲಹೆಗಳ ಮೇಲೆ ಅಖಿಲ ಭಾರತ ಕೈಮಗ್ಗ ಬಟ್ಟೆಗಳ ಮಾರಾಟದ ಸಹಕಾರ ಸಂಘವನ್ನು ಸರಕಾರದ ಸಹಕಾರದೊಂದಿಗೆ ಸ್ಥಾಪಿಸಲಾಗಿದೆ. ಈ ಸಂಘದ ಪ್ರಧಾನ ಕಾರ್ಯಾಲಯವು ಮುಂಬಯಿಯಲ್ಲಿದ್ದು, ಆಕರ್ಷಕ ಸಸ್ತಾ ಮಳಿಗೆಯಿಂದ ಕೂಡಿಕೊಂಡಿದೆ. ಇತ್ತೀಚೆಗೊಂದು ಮಾರಾಟ ದಂಗಡಿಯನ್ನೂ ತೆರೆಯಲಾಗಿದೆ. ಈ ಸಂಘವು ತನ್ನ ಚಟುವಟಿಕೆಗಳನ್ನು ಭಾರತದ ಇತರ ಪ್ರಮುಖ ಕೇಂದ್ರಗಳಿಗೂ ವಿದೇಶೀಯ ಮಾರುಕಟ್ಟೆಗಳಿಗೂ ವಿಸ್ತರಿಸುತ್ತಿದೆ.

ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಕೈಮಗ್ಗದ ಉದ್ಯಮಕ್ಕೆ ಪ್ರಮುಖ ಪಾತ್ರವನ್ನು ಕೊಡಲಾಗಿದೆ. ೧೯೫೫—೫೬ರ ವೇಳೆಗೆ ಈ ಉದ್ಯಮವು ತನ್ನ ಉತ್ಪಾದನೆಯನ್ನು ೬,೦೦೦ಕೋಟಿಗಳಷ್ಟು ಹೆಚ್ಚಿಸುವ ನಿರೀಕ್ಷೆಯಿದೆ. ಈ ಗುರಿಯ ರಾಜ್ಯವಾರು ಹಂಚಿಕೆಯನ್ನು ಅಂತಿಮವಾಗಿ ಸಿದ್ಧಪಡಿಸಲಾಗಿದೆ. ೧೯೫೫ರಲ್ಲಿ ೧೫,೭೩೦ ಲಕ್ಷ ಗಜಗಳಷ್ಟು ಕೈಮಗ್ಗದ ಬಟ್ಟೆ ಉತ್ಪಾದನೆಯಾಗಿತ್ತು. ೧೯೫೬ರಲ್ಲಿ ಉತ್ಪಾದನೆಯು ೧೫,೪೧೦ ಲಕ್ಷ ಗಜಗಳಿಗೆ ಏರಿತು. ಪ್ರಸ್ತುತ ವರ್ಷದಲ್ಲಿ ಉತ್ಪಾದನೆಯು ಕನಿಷ್ಠ ಸಕ್ಷ ೫,೦೦೦ ಲಕ್ಷ ಗಜದಷ್ಟು ಹೆಚ್ಚುವುದು. ಅಗತ್ಯ. ಇದಕ್ಕಾಗಿ ರಾಜ್ಯ ಸರಕಾರಗಳು ಸರ್ವ ಪ್ರಯತ್ನಗಳನ್ನೂ ಮಾಡುತ್ತಿರುವುವು.

೧೯೫೫ ಸೆಪ್ಟಂಬರದಲ್ಲಿ ಸುಂಕ ನಿಧಿ ಯೋಜನೆಗಳು ಪ್ರಾರಂಭವಾದುವು. ಅಂದಿನಿಂದ ೧೯೫೭ ಮಾರ್ಚಿನ ವರೆಗೆ ಸರಕಾರವು ಈ ಕೈಗಾರಿಕೆಯ ಅಭಿವೃದ್ಧಿ ಸಂಬಂಧವಾದ ವಿವಿಧ ಯೋಜನೆಗಳಿಗಾಗಿ ೧೨.೭೭ ಕೋಟಿರೂಪಾಯಿಗಳನ್ನು ಮಂಜೂರುಮಾಡಿದರು. ಈ ಹಣದಲ್ಲಿ ೧೫ ಕೋಟಿಗಳಷ್ಟು ರಾಜ್ಯಸರಕಾರಗಳ ಪಾಲಿಗೆ ಬಂದಿವೆ.

೧೯೫೬ರಲ್ಲಿ ೫೯೭,೮೬,೦೦೦ ಗಜಗಳಷ್ಟು ಕೈಮಗ್ಗದ ವಸ್ತ್ರಗಳನ್ನು ನಿರ್ಯಾತಮಾಡಲಾಯಿತು. ಹಿಂದಿನ ವರ್ಷಕ್ಕಿಂತ ಇದು ೬೦ ಲಕ್ಷ ಗಜದಷ್ಟು ಹೆಚ್ಚು. ೧೯೫೬ರ ಕೈಮಗ್ಗ ಬಟ್ಟೆಯ ನಿರ್ಯಾತ. ಆದಾಯ ೮೬.೭೬ ಕೋಟಿ ರೂಪಾಯಿ. ೧೯೫೫ರಲ್ಲಿ ೭೭.೭೬ ಕೋಟಿ ಬೆಲೆಬಾಳುವ ಕೈಮಗ್ಗದ ವಸ್ತ್ರಗಳನ್ನು ರಫ್ತುಮಾಡಲಾಗಿತ್ತು. ಅಮೆರಿಕಾ, ಇಂಗ್ಲೆಂಡ, ಸಿಲೋನ, ಮಲಯಾ ಮತ್ತು ಸುಡಾನಗಳಂತಹ ರಾಷ್ಟ್ರಗಳಿಗೆ ರಫ್ತುಮಾಡುತ್ತಿರುವ ಕೈಮಗ್ಗ ವಸ್ತ್ರದ ಪ್ರಮಾಣವು ಗಮನಾರ್ಹವಾದ ರೀತಿಯಲ್ಲಿ ಹೆಚ್ಚಿದೆ.

ಪರಂಪರಾಗತ ನಮೂನೆ, ಬಳಸುವವರ ಆಸಕ್ತ ನಮೂನೆ ಹಾಗೂ ವಿನ್ಯಾಸಗಳತ್ತ ಗಮನಕೊಡುವುದರಿಂದ ಕೈಮಗ್ಗದ ಬಟ್ಟೆಗಳ ಬೇಡಿಕೆಯು ಅಧಿಕವಾಗುವುದು ಸಾಧ್ಯ. ಆದುದರಿಂದ ವಿನ್ಯಾಸ, ನೆಯ್ಗೆ ಹಾಗೂ ನಮೂನೆಗಳನ್ನು ಒದಗಿಸುವುದಲ್ಲದೆ, ದಕ್ಷರಾದ ನೆಯ್ಗೆಗಾರರನ್ನೂ ಒದಗಿಸುವುದು ಆವಶ್ಯಕವಾಗಿ ಪರಿಣಮಿಸಿತು. ಭಾರತ ಸರಕಾರದವರು ಮುಂಬಯಿ, ಮದರಾಸು, ದೆಹಲಿ ಮತ್ತು ಕಾಶಿಗಳಲ್ಲಿ ಪ್ರಮುಖ ನೆಯ್ಗೆ ಕೇಂದ್ರಗಳನ್ನೂ ಕಂಚಿಪುರ, ಚಂಗೇರಿ ಮತ್ತು ಸೂರತ್ ಗಳಲ್ಲಿ ಉಪಕೇಂದ್ರಗಳನ್ನೂ ಸ್ಥಾಪಿಸುವ ಕುರಿತು ನಿರ್ಧಾರಣೆಯಾಗಿದೆ. ಇವುಗಳಲ್ಲಿ ಮುಂಬಯಿ ಕೇಂದ್ರವು ಈಗಾಗಲೇ ಕಾರ್ಯಾಚರಣೆಗೆ ತೊಡಗಿದೆ. ಉಳಿದುವು ಶೀಘ್ರದಲ್ಲಿಯೇ ಕಾರ್ಯಶೀಲವಾಗುವ ನಿರೀಕ್ಷೆಯಿದೆ. ದಿನೇದಿನೇ ಕೈಮಗ್ಗದ ಬಟ್ಟೆಗಳ ಬೇಡಿಕೆಯು ಅಧಿಕವಾಗುತ್ತಿದೆ. ಉತ್ಪಾದನೆಯ ಬಳಕೆಗಾರರ ಬೇಡಿಕೆಯೊಂದಿಗೆ ಸಮನ್ವಯಗೊಳಿಸುವುದು ಅಗತ್ಯವಾದ ಆವಶ್ಯಕತೆಯಾಗಿದೆ. ಈ ರೀತಿಯ ಸಮನ್ವಯ ಕಾರ್ಯ ಮಾಡದೆಯದೆ ಹೋದಲ್ಲಿ ಉತ್ಪಾದನೆಗೆ ಬೇಡಿಕೆಯೇ ಇಲ್ಲದೆ ಹೋಗಬಹುದು. ಹಾಗಾಗಿ ಕೆಲಸವು ನಿಂತು ಹೋಗಿ ಕೈಗಾರಿಕೆಯ ನಾಶವಾಗುವುದು. ಆದುದರಿಂದ ಅಖಿಲ ಭಾರತ ಕೈಮಗ್ಗ ಮಂಡಳಿಯು ಮಗ್ಗ ನಿರ್ಮಿತ ಬಟ್ಟೆಗಳನ್ನು ಜನಪ್ರಿಯಗೊಳಿಸುವ ವಿಚಾರದಲ್ಲಿಯೇ ತಲ್ಲೀನವಾಗಿದೆ. ಹಾಗೆಯೇ ನಿರಂತರ ಕಾರ್ಯಶೀಲವಾಗಿದೆ. ಕೈಮಗ್ಗದ ಬಟ್ಟೆಗಳಿಗೆ ಪ್ರೋತ್ಸಾಹ ಕೊಡುವುದು ದೇಶೀಯರ ಕರ್ತವ್ಯವಾಗಿದೆ.

## ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಸುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ನ.)

### ಭಕ್ತ ವಾದಿರಾಜರು —

ಲೇಖಕಿ: ಹಂಡೆ ಶ್ರೀಪಾದ ದಾಸರು; ಕೀರ್ತನೆ ಭೂಷಣ ಪ್ರಕಾಶಕರು: ಹಂಡೆ ಗುರು ವೇದವ್ಯಾಸಾಚಾರ್ಯರು. ಶ್ರೀ ಹರಿದಾಸ ವಿಜಯ ಮಾಲೆಯ ಎರಡನೆಯ ಮೊಗ್ಗೆ. ಕ್ರೌನ್ $\frac{1}{8}$ ಆಕಾರದ 62+4 ಪುಟಗಳು. ಬೆಲೆ: 0-10-0.

ಉಡುಪಿ ಶ್ರೀ ಸೋದೆಮಠದ ಶ್ರೀ ಮದ್ವಿಶ್ವೇತ್ತಮತೀರ್ಥ ಶ್ರೀ ಪಾದಂಗಳವರು ಮುನ್ನುಡಿಯನ್ನು ಬರೆದು ಹರಸಿದ್ದಾರೆ.

ಹರಿಕಥಾ ಸೇವೆಯಿಂದ ಕನ್ನಡ ಭಕ್ತಕೋಟಿಯ ಶ್ರೀತ್ಯಾದರ ಭಕ್ತಿಗಳಿಗೆ ಕಾರಣರಾದ ಹಂಡೆ ಶ್ರೀಪಾದ ದಾಸರು ಈ ಕಿರುಹೊತ್ತಿಗೆಯನ್ನು ಶ್ರದ್ಧಾಪೂರ್ವಕ ರಚಿಸಿ, ಭಕ್ತಿಯಿಂದ ಶ್ರೀ ವಾದಿರಾಜರ ಚರಣಾರವಿಂದಗಳಿಗೆ ಸಮರ್ಪಿಸಿದ್ದಾರೆ.

ಉಡುಪಿಯ ಅಷ್ಟಮಠಗಳಲ್ಲೊಂದಾದ ಶ್ರೀ ಸೋದೆ ಮಠವು ಶ್ರೀ ವಾದಿರಾಜರ ಮಠವೆಯಿಂದಲೂ, ಭೂತರಾಜರ ಕಾರಣಿಕದಿಂದಲೂ ಪ್ರಸಿದ್ಧವಾಗಿದೆ. ಇಂದಿಗೂ ಸೋದೆ ಮಠದಲ್ಲಿ ಭೂತರಾಜರ ಸಹಾಯದಿಂದಲೂ ಶ್ರೀ ಶ್ರೀಗಳವರ ನಿಷ್ಠೆಯಿಂದಲೂ, ಆಚಾರ್ಯರಾದ ಶ್ರೀಪತಿ ಆಚಾರ್ಯರ ಕರ್ತವ್ಯದಕ್ಷತೆಯಿಂದಲೂ ಅಸ್ತಿಕರ ಅಶಯಗಳು ಈಡೇರುತ್ತವೆಂದೂ, ಹಿಂದಿನ ಧಾರ್ಮಿಕ ಮಹತ್ವತೆಯನ್ನು ಇಂದಿಗೂ ಶ್ರೀ ಸಂಸ್ಥಾನವು ಉಳಿಸಿಕೊಂಡಿರುವರೆಂದೂ ಭಕ್ತಾದಿಗಳು ಹೇಳುತಿದ್ದಾರೆ.

ಶ್ರೀ ವಾದಿರಾಜರು ತನ್ನ ಸ್ವಯಂ ಪ್ರತಿಭೆ ಮತ್ತು ತಪಶ್ಶಕ್ತಿಗಳಿಂದ ಜನ ಸಮೂಹದ ಮೇಲೂ ಮಹಾ ವ್ಯಕ್ತಿಗಳ ಮೇಲೂ ತನ್ನ ಪ್ರಭಾವವನ್ನು ಬೀರಲು ಸಮರ್ಥರಾಗಿದ್ದರೆಂಬುದಕ್ಕೆ ಕೋಟೇಶ್ವರ ಮತ್ತು ಮಟ್ಟು ಎಂಬಲ್ಲಿಯ ಬ್ರಾಹ್ಮಣ ಸಮಾಜದ ತಳಕಾರುಗಳನ್ನು ಉತ್ತಮವಾಗಿ ಪರಿಹರಿಸಿ ಅವರನ್ನು ತಮ್ಮ ಭಕ್ತವೃಂದಕ್ಕೆ ಸೇರಿಸಿದುದೇ ನಿದರ್ಶನ.

ಈ ಚಿಕ್ಕ ಪುಸ್ತಕದಲ್ಲಿ ಲೇಖಕರು ಭಕ್ತ ವಾದಿರಾಜರ ಜನನ, ಜೀವನ, ವ್ಯಂದಾವನ ಗಮನಗಳನ್ನು ಸಂಕ್ಷೇಪವಾಗಿಯೂ, ಆಕರ್ಷಕವಾಗಿಯೂ ವಿವರಿಸಿದ್ದಾರೆ. ಆಸ್ತಿಕರು ಉಡುಪಿಯ ಕುರಿತು ಶ್ರೀ ಸೋದೆ ಮಠದ ಕುರಿತು ತಿಳಿಯಲಪೇಕ್ಷಿಸುವರು, ಈ ಪುಸ್ತಕವನ್ನು ಓದಿ ಆನಂದಿಸಬಹುದು. ಚಿಕ್ಕ ಚಿಕ್ಕ ವ್ಯಾಕರಣ ದೋಷಗಳು ಹೇಗೆ ಬಂದುಬಿಡುತ್ತವೆ ಹೇಳಲಾಗುವುದಿಲ್ಲ. ಇಂತಹ ಧಾರ್ಮಿಕ ಮಹತ್ವದ ಪುಸ್ತಕಗಳನ್ನು ಅಚ್ಚುಹಾಕುವಾಗ ವಿಷಯಕ್ಕೆ ಎಷ್ಟು ಗಮನಕೊಡಬೇಕೋ ಅಷ್ಟೇ ಲಕ್ಷ್ಯವನ್ನು ಭಾಷೆಯ ಕಡೆಗೆ ಕೊಡಬೇಕು. ಪರಿವಾಸ ರಾಜರು ಸೂಚಿಸಿಗೆ ಅಷ್ಟಮಠದ ಶ್ರೀ ಶ್ರೀಗಳವರು ಸಹಾಯಕರಾಗಿ ನಿಂತಿರುವುದರಿಂದ ಇಂತಹ ಅನೇಕ ಪುಸ್ತಕಗಳು ಈ ಮಾಲೆಯಿಂದ ಪ್ರಕಾಶನಗೊಳ್ಳಬಹುದೆಂದು ನಂಬುಗೆಯಿದೆ.

### ಗ್ರಾಮ ಧರ್ಮ—

ಶ್ರೀ ಆಚಾರ್ಯ ವಿನೋಬಾ ಭಾವೆಯವರ ಭಾಷಣ ಸಾರ: ಪ್ರಕಾಶಕರು: ಭಾರತ ಸರಕಾರದ ಸಮಾಚಾರ ಮತ್ತು ಆಕಾಶವಾಣಿ ಸಚಿವಾಲಯದ ಪ್ರಕಾಶನ ವಿಭಾಗ, ದೆಹಲಿ. ಪುಟ 12.

ಭಾರತದ ಉದ್ಧಾರವಾಗಬೇಕಾದರೆ ಗ್ರಾಮಗಳ ಉದ್ಧಾರವಾಗಬೇಕು. ಗಾಮ್ಯರಾಜ್ಯ ವೇ ರಾಮರಾಜ್ಯ ಇತ್ಯಾದಿ ಪಲ್ಲವಿಗಳು ಲೇಳೀ ಕೇಳಿ ಕಿವಿಕರ ಹುಟ್ಟಿಸಿದ ಹಳೆಯ ಹಾಡುಗಳೇ ಈ ದಿಸೆಯಲ್ಲಿ ಸಾವಿರ ಮಾತುಗಳನ್ನು ಆಡುತ್ತಿದ್ದರೇ ಹೊರತು ಒಂದು ಕೃತಿಯೂ ಆಗುತ್ತಿರಲಿಲ್ಲ. ಶ್ರೀ ವಿನೋಬಾ ಭಾವೆಯವರು ಗ್ರಾಮಧರ್ಮವನ್ನು ಎತ್ತಿ ಹಿಡಿಯು ತನ್ನ ಭಾಷಣದಂತೆ ಕೃತಿಗಳನ್ನೂ ಮಾಡುತ್ತಿದ್ದಾರೆ. ಗ್ರಾಮಜ್ಞಾನವನ್ನು ಪಡೆದು ಅಲ್ಲಲ್ಲಿ ಗ್ರಾಮ ಧರ್ಮದಂತೆ ಆದರ್ಶ ಗ್ರಾಮಗಳನ್ನು ರಚಿಸಲು ದುಡಿಯುತ್ತಿದ್ದಾರೆ. ಆಂತೂ ಈ "ಗಾಂಧಿಯುಗ" ದ ಪವಾಡ ಪುರುಷರ ಸಾಲಿಗೆ ಆಚಾರ್ಯ ಭಾವೆಯವರೂ ಒಬ್ಬರಾಗಿ ನಿಂತಿದ್ದಾರೆ. ಈ ಕಿರುಹೊತ್ತಗೆಯಲ್ಲಿ ಆದರ್ಶ ಗ್ರಾಮದ ಕುರಿತು ಆಚಾರ್ಯ ಭಾವೆಯವರು ವಿವರಿಸುತ್ತಿದ್ದಾರೆ. ಹಳ್ಳಿಯಲ್ಲಿ ಶಾಲೆಗಳು, ವೈದ್ಯಕೀಯ ಚಿಕಿತ್ಸೆ ಸಹಕಾರಿ ಜೀವನ ಇತ್ಯಾದಿ ತತ್ವಗಳನ್ನು ಪ್ರತಿಪಾದಿಸಿದ್ದಾರೆ.

ಎಲ್ಲದಕ್ಕಿಂತಲೂ ಮೊದಲಾಗಿ ನಮ್ಮ ಗ್ರಾಮಗಳೆಂದರೆ ಹಿಂದಿನ ಕಾಲದಲ್ಲಿ ಕೇವಲಕೆಲಸಿಲಿಯ ಅನುಕೂಲತೆಗಾಗಿ ಮಾಡಿದ ಕೃತಕ ಘಟಕಗಳು ಒಂದು ಗ್ರಾಮವು ೪-೫ ಮೈಲು ಉದ್ದನೇ ಇರುವುದಂಟು ಹಾಗೆಂದು ವಿಸ್ತೀರ್ಣದಲ್ಲಿಯೂ ಏಕರೂಪತೆಯಿರುವುದಿಲ್ಲ. ಆದುದರಿಂದ ಭೌಗೋಲಿಕವಾಗಿಯೂ ಗ್ರಾಮಗಳನು ನವೀನರೀತಿಯಲ್ಲಿ ರೂಪಿಸಬೇಕಾಗಿದೆ. ಹಾಗೆಯೇ ನಮ್ಮ ಮುಂದಾಳುಗಳು ಮಂತ್ರಿಗಳ್ಕು ಕೇವಲ ಸರಕಾರಿಸಭೆಯ ಮಸೂದೆಗಳನ್ನು ಸ್ವೀಕರಿಸುವ ಬದಲು ಹೆಚ್ಚಿನ ಬಾಬ್ಯತೆದ ಕೇಳಿಕೆಗಳನ್ನು ಸ್ವೀಕರಿಸಬೇಕು. ದೊಡ್ಡ ದೊಡ್ಡ ತಾರು ಹಾಕಿದ ರಸ್ತೆಗಳು ಹಿಂದಾಡುವಂತೆ ಹಳ್ಳಿಗಳಲ್ಲಿಯೂ ನಡೆದು ಸಾಗಿದಬೇಕು. ಹಳ್ಳಿಗಳಿಂದ ತೀರ್ವ ಬರಬೇಕು. ಸೌಕರ್ಯ ನಗರಗಳಿಗಾಗಬೇಕು ಎಂಬ ಭಾವನೆಯು ಪಲ್ಲಟವಾಗಬೇಕು. ಉತ್ಪತ್ತಿಯ ಕಡಾ 75 ಹಳ್ಳಿಗಾಗಿ ವಿನಿಯೋಗ ವಾಗಬೇಕು. ಹಳ್ಳಿಯ ಆಸ್ಪತ್ರೆ, ಶಾಲೆ, ರಂಗಭೂಮಿ, ವಾಚನಾಲಯ, ಸಹಕಾರೀ ಅಂಗಡಿ, ವ್ಯಾಯಾಲಯ, ಇತ್ಯಾದಿ ಎಲ್ಲಾ ಅವಶ್ಯಕತೆಗಳನ್ನೂ ಪೂರೈಸಿಕೊಳ್ಳಬಹುದು. ಕೇವಲ ಜುನಾವಣಾ ಕಾಲದಲ್ಲಿ ನಮ್ಮ ಮುಂದಾಳುಗಳು ಹಳ್ಳಿಯ ಕಡೆಗೆ ಓಡುವಂತಹ ಪರಿಪಾಟವನ್ನು 'ನಾಚಿಕೆ'ಯೆಂದು ಬಿಟ್ಟುಬಿಡಬೇಕು.

"ಒಬ್ಬ ಗಾಂಧಿಯು ಸಾವಿರ ಮೂರು ಭಾರತೀಯರನ್ನು ಸರಿವಾಡಬಲ್ಲ. ಆ ಲಕ್ಷೋಪಲಕ್ಷ ಮೂರ್ಖರು ಈ ಭಾರತವನ್ನಾಳ್ದಾರೆ" ಎಂಬೊಬ್ಬ ವಿಮರ್ಶಕ ಹೇಳಿದ್ದಂತೆ ಒಬ್ಬ ವಿನೋಬಾ ಸಾವಿರ ಸ್ವಾರ್ಥಿಗಳನ್ನು ದಾನ-ಧರ್ಮ ಪದ್ಧತಿಯಿಂದ ಸೆಳೆಯಬಹುದು. ಆದರೆ ಈ ಭಾರತ ದಿನ ನೂರಾರು ಸ್ವಾರ್ಥಿ ಪ್ರಾಣಿಗಳನ್ನು ತಂತಾ ಬರುತ್ತದೆ. ನಮ್ಮ ಮುಂದಾಳುಗಳು ಎಷ್ಟು ಯೋಜ್ಞಾಗಿ ಪೂಜ್ಯ ಭಾವೆಯವರ ಮಾರ್ಗದಲ್ಲಿ ಸಹಕರಿಸುತ್ತಾರೋ ಆಷ್ಟು ಬೇಟ್ಟು ಭಾರತವು ಸುಧಾರಿಸಿಕೊಳ್ಳಬಹುದು.

ಈ ದಿಸೆಯಲ್ಲಿ ಈ ಹೊತ್ತಿಗೆ ಸಹಕಾರಿಯಾಗಬಲ್ಲುದೋ ಏನೋ.

—ದಾ


ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

HOME REMEDIES

ಬರೆದವರು: ಡಾಕ್ಟರ್ ಕೊರಡ್ಡೆಲ್ ವೆಂಕಟ್ರಾವ್, ಎಲ್. ಐ.ಎಮ್

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ ರೂ. ೨—೦—೦ (ಟ. ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.



ಮೂಲ್ಕಿ ಬೇಂಕ್ ಲಿಮಿಟೆಡ್
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

| | | |
|---|---|---|
| ನಿರಿಖು ಠೇವಣಿಯಾತಿ. | | |
| 24 | ತಿಂಗಳಿಗೆ | 4% |
| 12 | ,, | 3½% |
| 6 | ,, | 3½% |
| 3 | ,, | 3% |
| ಸೇವಿಂಗ್ಸ್ ಬೇಂಕ್ ಲೆಕ್ಕ | | 2% |
| ಕರೆಂಟ್ ಎಕೌಂಟು | | ½% |

THE MOOLKY BANK, LTD. MULKI


### ಸೂಚನೆ

"ನವಯುಗ" ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚೆನ್ನಾಗಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿ ಬರೆದಿರಬೇಕು. ಲೇಖಕರು ಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ. ನ

Edited, Printed & Published by K. H. Shetty, at the Navayuga press. Udipi S. India

REGD. NO. M. 3618

LICENCE NO. 31
Licensed to Post without Prepayment.

# ನವಯುಗ

ಸಂಪುಟ ೩೬ VOL.36

23—5—1957

ಸಂಚಿಕೆ ೩೭ NO. 37

## ಕಾಂಗ್ರೆಸಿನ ಶಕ್ತಿ

### ೀರ್ತಿಭಂಜಕ ದೌರ್ಬಲ್ಯ ನಿವಾರಣೆಯಾಗಬೇಕು

"ಕಾಂಗ್ರೆಸಿನ ಆಡಳಿತೆಯು ಕಾರ್ಯ ಮವಾಗಿಲ್ಲವೆಂದು ಆಗಾಗ ದೂರುಗ ಕೇಳಿ ಬರುತ್ತಿವೆ ಹಾಗೆ ಆಡಳಿತ ಲ್ಲಿ ಲೋಪ ದೋಷಗಳಿರುವುದೇ ಆದರೆ ವು ಕಾಂಗ್ರೆಸ್ ಸಂಸ್ಥೆಯ ದೋಷಗಳ ಪ್ರತಿಬಿಂಬಗಳೇ ಆಗಿವೆ. ಸಾಮಾಜಿಕ ಕಾರ್ಯಕ್ಷಮತೆ ಹೆಚ್ಚಿದಾಗಲೆ ಆಡಳಿತೆ ಯು ಕಾರ್ಯಕ್ಷಮತೆ ಹೆಚ್ಚುವುದು. ಂತೆಯೆ ಇತರ ಪಕ್ಷಗಳ ದೋಷ ಳನ್ನು ಹುಡುಕಿ ಅವುಗಳನ್ನು ಗೌರವದಿಂದ ನೋಡುವುದರಿಂದಲೂ ಯೋಜನವಾಗದು. ನಾವು ಜನತೆಗೆ ೋಗ್ಯ ಮಾರ್ಗದರ್ಶನ ಮಾಡುತಿದ್ದೇ —ನಮ್ಮ ಕರ್ತವ್ಯವನ್ನು ನಾವು ಮಾ ತಿದ್ದೇವೆ ಎಂದು ಕಾಂಗ್ರೆಸ್ ಕಾರ್ಯ ರ್ತರು ತಮ್ಮ ವಿವೇಕವನ್ನೊಪ್ಪಿಕೊ ಳ್ಳುವುದು ಅವರ ಕರ್ತವ್ಯವಾಗಿದೆ"

ಕಾಂಗ್ರೆಸ್ ಪಕ್ಷದ ಬಲ ಸಂವರ್ಧನೆ ಗೊಳಿಸುವುದರೆ— ಅದರ ಜನಪ್ರಿಯತೆ ಯನ್ನು ಹೆಚ್ಚಿಸುವುದರ ಕುರಿತು ಪರ್ಯಾ ಲೋಚನೆ ನಡೆಸುವುದಕ್ಕಾಗಿ ಇತ್ತೀಚೆಗೆ ರಗಿದ ಕಾಂಗ್ರೆಸ್ ಕಾರ್ಯಕರ್ತರ ಭೆಯೊಂದರಲ್ಲಿ ಭಾಷಣ ಮಾಡುತ್ತಾ ೀಂದ್ರ ಮಂತ್ರಿ ಮುರಾರ್ಜಿ ದೇಸಾಯಿ ುವರು ಮೇಲಿನಂತೆ ನುಡಿದರು. ಂಧ್ಯ ಗಾಂಧೀವಾದಿಗಳೆನಿಸಿಕೊಳ್ಳುವವ ೂ ಅದಕ್ಕೆ ವ್ಯತಿರಿಕ್ತವಾಗಿ ವರ್ತಿ ುವುದನ್ನು ಕಂಡು ನನಗೆ ನಿರಾಶೆಯಾ ುತ್ತಿದೆಯೆಂದು ಅವರು ಅದೇ ಭಾಷಣ ಲ್ಲಿ ಹೇಳಿದರು. ಇಂತಹ ಮನೋಭಾವ ) ಕಾಂಗ್ರೆಸಿಗರಲ್ಲಿ ಇನ್ನೂ ಮುಂದರಿ ುವುದಾದರೆ ಕಾಂಗ್ರೆಸು ಅವನತಿಯತ್ತ ಾಗುವುದು ನಿಶ್ಚಯವೆಂದವರು ಎಚ್ಚರಿ ಸಿದ್ದರೂ ಇಂತಹ ಮನೋಭಾವವ ನ್ನು ಬಿಡಬೇಕೆಂದವರು ಕೇಳಿಕೊಂಡರು. ಷ್ಟದ ಉನ್ನತ ಗುರಿಯು ಶೀಘ್ರವಾಗಿ ಾಧಿತವಾಗುವಂತೆ, ಅಧಿಕಾರದಿಂದ ೂರಗೆ ಸಾಮಾಜಿಕ ಕ್ಷೇತ್ರದಲ್ಲಿ ಬಿಸ್ತೆ ುಂದ ದುಡಿಯುವಂತೆ ಸಲಹೆಯನ್ನಿ ರು.

ಇಂತಹದೇ ವಿಷಯಗಳನ್ನೊಳಗೊಂ ಆದೇಶಗಳು ಅ. ಭಾ. ಕಾಂಗ್ರೆಸಧ್ಯಕ್ಷ ಂದ ಪ್ರಾದೇಶಿಕ ಕಾಂಗ್ರೆಸು ಕಮಿಟಿಗಳಿ ಗೆ ಹೋಗಿರುವುದಾಗಿ ತಿಳಿದುಬರುತ್ತದೆ. ನಮ್ಮ ಕಾಂಗ್ರೆಸ್ ವರಿಷ್ಠರ ಈ ಉದ್ದೇಶ ವು ಪೂರ್ತಿಎಷ್ಟರಮಟ್ಟಿಗೆ ಫಲಕಾರಿಯಾಗುವು ದೋ—ಕಾಂಗ್ರೆಸಿಗರಾದವರೆಲ್ಲಾ ಈ ಸೂ ಚನೆಗಳನ್ನು ಸ್ವಾಗತಿಸಿ ಆದರ್ಶಕ್ಕೆ ತಮ್ಮ ನ್ನು ಹೊಂದಿಸಿಕೊಳ್ಳುವರೋ ಆದನ್ನೇ ಕಾಂಗ್ರೆಸಿನ ಭವಿಷ್ಯವು ಹೊಂದಿಕೊಂಡಿಡಿ ಯಿಂಬುದು ತೀರ ಸ್ಪಷ್ಟ. ಇದನ್ನು ಕಾಂ ಗ್ರೆಸಿಗರೆಲ್ಲರೂ ಬಿಚ್ಚುಮನಸ್ಸಿನಿಂದ ವಿವೇ ಚಿಸಬೇಕು; ಇನ್ನುಮುಂದಕ್ಕೆ ನಮ್ಮ ವ ರ್ತನೆ, ಕಾರ್ಯಸಾಧನೆಯೇ ನಮ್ಮನ್ನು ಕಾ ಪಾಡಬೇಕಲ್ಲದೆ, ಮಹಾತ್ಮಾ ಗಾಂಧಿಯವರ ಆದರ್ಶವನ್ನೋ ಹಿಂದಿನ ಇನ್ನಾವ ವೈಭವದ ನೂತನತ್ವವನ್ನೋ ಪುನರುಚ್ಚರಿಸಿ ಬೇಳೆ ಬೇ ಯಿಸಿಕೊಳ್ಳುವ ಕಾಲಕಳೆಯಬಿತ್ತಾಬಂದಿ ದೆಯೆಂಬುದನ್ನು ಮರೆಯಬಾರದು

ಕಾಂಗ್ರೆಸ್ ಪರಿಷ್ಕರಿಂದ ಹೊರಟ ಈ ಉಪಯುಕ್ತ ಆದೇಶದ ಕುರಿತು ಭಿನ್ನಾ ಭಿಪ್ರಾಯವನ್ನು ಕೆಲವು ಕಾಂಗ್ರೆಸಿಗರು ವ್ಯಕ್ತಪಡಿಸುವುದನ್ನು ಕಂಡು ನಮಗೆ ವಿ ಶಾದವಾಗುತ್ತಿದೆ ಇವರು ಅಂಬೋಣ ನೆಂದರೆ ಜನತಾ ಸೇವೆ ಗೈಯುವ ಎಲ್ಲ ಅ ವಕಾಶವೂ ಕಾಂಗ್ರೆಸಿಗರಿರುವಾಗ—ಆಡಳಿತ ಸೂತ್ರವೇ ಕಾಂಗ್ರೆಸಿನ ಕೈಯಲ್ಲಿರುವಾಗ, ಪ್ರತ್ಯೇಕ ಜನತಾ ಸಂಪರ್ಕ, ಸಾಮಾಜಿ ಕ ಕಾರ್ಯಗಳ ಅವಶ್ಯವೇಕೆ—ಎಂಬುದಾ ಗಿದೆ. ಇದು ತೀರ ಹುರುಳಿಲ್ಲದ ವಾದವೆ ನ್ನಿಸಿ ನಿರ್ವಾಹವಿಲ್ಲ.

ಚುನಾವಣೆ ಬೇಳೆಗೆ ಪಕ್ಷಕ್ಕೆ ಜನತಾ ಸಂಪರ್ಕಬೇಕು, ಮತ್ತೆ ಸರಕಾರವೇ ಎಲ್ಲ ವನ್ನೂ ನೋಡಿಕೊಳ್ಳಲು ಸಾಕು ಎಂದ ರೆ, ಇವರು ಕೇವಲ ಮತಗಳಿಸುವ ಉ ದ್ದೇಶ ಮಾತ್ರದಿಂದ ಬರುತ್ತಾರಲ್ಲದೆ ಜನ ರ ಹಿತಕ್ಕಾಗಿ—ಉಪಕಾರಕ್ಕಾಗಿ ಬರುತ್ತಾ ರೆಂದು ಹೇಗೆ ಹೇಳಬಹುದು? ಉಪಕಾರ ಕ್ಕಾಗಿ ಬರುವವರು ಜೇರೆ ವೇಳೆಯಲ್ಲಿ ಒರಲ್ಲೇ ಬಾರದೇಕೆ? ಎಂದು ಕೇಳದರೇನು ಉತ್ತರ?

ಇಂದಿನ ಪರಿಸ್ಥಿತಿಯಲ್ಲಿ ಸ ರಕಾರದ ಕಾರ್ಯಗಳು ಗಳಿಸಿದ್ದ ಕ್ಕಿಂತ ಕಡಿಮೆಯಾಗದ ಜನಪ್ರೀತಿಯ ನ್ನು ಸಾಮಾಜಿಕ ಕಾರ್ಯಗಳ ಮೂಲಕ ಗಳಿಸುವುದು ಸಾಧ್ಯವಿದೆಯೆಂದು ನಮಗ ನಿಸುತ್ತದೆ ಏಕೆಂದರೆ 'ದೇವರು ಕೊಟ್ಟ ರೂ ಪೂಜಾರಿ ಬಿಡ ಎನ್ನುವಂತಹ ನೀತಿ ಯು ನಮ್ಮಲ್ಲಿದೆ ಉದಾಹರಣೆಗಾಗಿ ಸರ ಕಾರವು ಭೂಸಂಬಂಧವಾಗಿ ಮಾಡಿದ ಶಾಸನದ ಪ್ರಯೋಜನವನ್ನು ಒಕ್ಕಲಿಗ ರೆಲ್ಲ ಪಡೆದಿಲ್ಲ. ಅನೇಕರಿಗೆ ಆ ಕುರಿತು ಹೆಚ್ಚಾಗಿ ತಿಳಿದೇ ಇಲ್ಲ ಇಲ್ಲಿಗೇನು ಸರ ಕಾರಿ ನೌಕರರು ಬಂದು ವಿಚಾರಿಸುವು ದಿಲ್ಲ ಎನ್ನುವಾಗ ಕಾಂಗ್ರೆಸ್ ಸರಕಾರದ ಕೆಲಸಗಳಿಂದ ಪ್ರಯೋಜನ ಹೊಂದದ ಜನರು ಅದರ ಮೇಲೆ ಪ್ರೇಮವನ್ನಿಡದಿ ಉಳಿದರೆ ಆಶ್ಚರ್ಯವೇನು? ಇಲ್ಲಿ ಸರಕಾ ರವು ಜನಹಿತ ಶಾಸನಗಳನ್ನು ಮಾಡಿ ಜನ ರ ಪ್ರೀತಿ ಗಳಿಸುವುದಕ್ಕಿಂತಲೂ ಹೆಚ್ಚಾ ಗಿ ಆ ಶಾಸನಗಳ ಪ್ರಯೋಜನಗಳನ್ನು ಜನತೆಯು ಹೊಂದುವಂತೆ, ಅಧಿಕಾರಿಗಳ ಲ್ಲದವರು ಸಾಮಾಜಿಕ ಕ್ಷೇತ್ರಗಳಲ್ಲಿ, ಮಾ ಡಿದ ಪ್ರಯತ್ನದಿಂದಲೆ ಗಳಿಸಬಹುದೆಂಬು ದು ನಿರ್ವಿವಾದವಾಗಿ ಕಾಣುತ್ತದೆ ಆದರೆ ಇಷ್ಟರ ತನಕ ಕಾಂಗ್ರೆಸಿಗರ ದೃಷ್ಟಿಯು ವಿಶೇಷವಾಗಿ ಈ ದಿಕ್ಕಿಗೆ ಹರಿದಿಲ್ಲವೆಂದೇ ಹೇಳಿದರೆ ಹೆಚ್ಚಾಗದು. ಸಾಲದ್ದಕ್ಕೆ ಸರ ಕಾರದ ಸುಧಾರಣಾ ಕಾರ್ಯಗಳೇ ಅಸ ಫಲವಾಗುವಂತೆ ಯತ್ನವೆಸಗಿದವರು ತೀ ರಾ ಕಡಿಮೆ ಸಂಖ್ಯೆಯಲ್ಲಿರಲಿಕ್ಕಿಲ್ಲ.ಇಂಥ ವರು— ಪಕ್ಷದ ಮುಖ್ಯ ಉದ್ದೇಶ ಸಾಧ ನೆಯನ್ನು ಸಹಿಸದವರು ಪಕ್ಷದ ಪರಮ ಮಿತ್ರರಾಗಿದ್ದರೂ ಅವರು ಶಕ್ತುಗಳಿಗಿಂ ತಲೂ ಅಪಾಯಕಾರಿಗಳೆಂದು ಧಾರಾಳ ವಾಗಿ ಹೇಳಬಹುದು. ಇಂಥವರ ನೆರವಿ ನಿಂದ ಪಕ್ಷವು ಮುನ್ನಡೆಗಿರೆ ಅದೊಂದು ದಿನ ಗುಂಡಿಗೆ ಬೀಳಬೇಕಾದೀತು. ಕಾಂ ಗ್ರೆಸು ಸಾಮಾನ್ಯ ಜನತೆಯ ಒಲವಿನಂ ತೆ ವರ್ತಿಸುವುದರಿಂದ— ಅದರ ಘನವಾದ ವಿಶ್ವಾಸದ ತಳಹದಿಯ ಮೇಲೆ ಬಾಳಿ ಬೆಳಗಬೇಕಲ್ಲದೆ ಸ್ವಾರ್ಥಸಾಧಕರ ಸಹಾ ಯದಿಂದಲ್ಲ ಮಹಾತ್ಮಾಜ್ಜಿಯವರ ಮು ಖ್ಯ ಆದರ್ಶವನ್ನು ಅನುಸರಿಸಲು ಮನ ಸೂರ್ವಕ ಒಪ್ಪಿಗೆಯಿಲ್ಲದ ಅತ್ಮವಂಚ ಕರ ನೆರವು ಕಾಂಗ್ರೆಸಿಗೆ ಸರ್ವಥಾ ಹಿತವಲ್ಲ

ಕಾಂಗ್ರೆಸಿನ ಈಗಿನ ಶಕ್ತಿಯಾದರೂ ಸಹಜವಾಗಿ ಇರಬೇಕಾದಂತೆ ಅದರ ಸಾಮಾನ್ಯ ಸದಸ್ಯರೆ ಹಾಗೂ ಬೆಂ ಬಲಿಗರನ್ನೇ ಹೊಂದಿರದೆ ಸಾ ಧಾ ರಣ ಕಾಂಗ್ರೆಸಿನ ಅರ್ಧದಷ್ಟು ಶಕ್ತಿಯು ಪ್ರಧಾನಿ ನೆಹರೂರವರದೇ ಆ ಗಿದೆಯೆಂಬುದು ಒಪ್ಪತಕ್ಕ ವಿಷಯವಾಗಿದೆ.

ಜನತಾ ಸಂಪರ್ಕವನ್ನು ಬೆಳೆಸಿಕೊ ಳ್ಳುವುದರಲ್ಲಿ ಕಾಂಗ್ರೆಸಿಗರು ವಿರೋಧಿ ಪಕ್ಷದವರಿಗಿಂತಲೂ ಹಿಂದುಳಿದಿರುವರೆಂ ದು ನೆಹರೂರವರೇ ಒಮ್ಮೆ ನುಡಿದಿದ್ದರು. ಈ ವರ್ತನೆಯನ್ನು ಅವರು ಆಗಾಗ ಖಂ ಡಿಸುತ್ತಲಿದ್ದಾರೆ

ಗತಕಾಲದಲ್ಲಿ ಕಾಂಗ್ರೆಸಿಗರು ರಾಷ್ಟ್ರ ಕ್ಕಾಗಿ ಮಾಡಿದ ತ್ಯಾಗ, ಸೇವೆಯು ಉಜ್ವ ಲ ಕೀರ್ತಿಯ ಆ ಮಟ್ಟವು ಇಂದಿನ ಕಾಂ ಗ್ರೆಸಿನಲ್ಲಿ ಉಳಿದಿಲ್ಲವೆಂದು ವರಿಷ್ಠರೇ ಹೇ ಳುತಿದ್ದಾರೆ. ಈ ಕೀರ್ತಿಭಂಜಕ ದೌರ್ಬ ಲ್ಯದ ನಿವಾರಣೆಗಾಗಿ ವರಿಷ್ಠರು ಮಾಡು ವ ಯತ್ನವೆಲ್ಲಾ ಸಫಲವಾಗಲಿ, ಕಾಂಗ್ರೆ ಸು ಸಂಸ್ಥೆಯ ದೋಷಗಳು ದೂರವಾಗಿ ರಾಷ್ಟ್ರಸೇವೆ ಸಲ್ಲಿಸುವಂತಾಗಲಿ ಎಂಬು ದೇ ನಮ್ಮ ಆಶಯ.

—ವಿ. ಬಿ ಅಮ್ಮಾಡಿ.

SEASON DEPOSITS
ಸೀಸನ್ ಠೇವಣಾತಿಗಳು

ಶೇ. 4 % ದರ ಬಡ್ಡಿಯಲ್ಲಿ ಸೀಸನ್ ಠೇವಣಾತಿ ಗಳನ್ನು ಈಗ ಸ್ವೀಕರಿಸಲಾಗುವುದು.

ದೊಡ್ಡ ಡಿಪೊಜಿಟು ಮೊಬಲಗುಗಳಿಗೆ ಸ್ಪೆಶಲ್ ಬಡ್ಡಿ ದರಗಳು.

ಹೆಚ್ಚಿನ ವಿವರಗಳಿಗೆ ನಮ್ಮನ್ನು ವಿಚಾರಿಸಿರಿ

ದಿ ವಿಜಯ ಬೇಂಕ್ ಲಿಮಿಟೆಡ್
ಪ್ರಧಾನ ಕಛೇರಿ ಮತ್ತು ಶಾಖೆಗಳು.

ಜುಮ್ಲಾ ಸಂಪತ್ತು (13—12—1956) | ರೂಪ್ಯಾ 1 ಕೋಟಿಗೂ ಮಿಕ್ಕಿದೆ.

# ಸಹಕಾರ ಪದ್ಧತಿ

## ದೇಶದ ಉದ್ಧಾರವು ಸಹಕಾರಭಾವದಿಂದಲೇ ಆಗಬಲ್ಲುದು

ಮಾನವನು ಸಾಮಾಜಿಕ ಜೀವಿ. ಆತನು ಎಂದು ಮಾನವನಾದನೋ ಆ ಗಳಿಗೆಯಿಂದಲೇ ಸಾಮಾಜಿಕನೂ ಆಗಿದ್ದಾನೆ. ಆ ಸಮಯದಲ್ಲಿ ಆತನು ನಾವು ಇಂದು ಕಲ್ಪಿಸಿಕೊಳ್ಳುವುದಕ್ಕಿಂತ ಅಧಿಕ ಪ್ರಮಾಣದಲ್ಲಿ ಸಾಮಾಜಿಕನಾಗಿದ್ದನೆನ್ನಬಹುದು. ಇಂದಿನ ದಿನದಲ್ಲಿ 'ಸಾಮಾಜಿಕ' ನೆಂದರೆ ಸಮಾಜದಲ್ಲಿ ಜೀವಿಸುವವನು ಎಂದಷ್ಟೇ ಅರ್ಥವನ್ನು ಕಟ್ಟಿಕೊಳ್ಳುತ್ತೇವೆ. ಆದರೆ, ಅನಾದಿಕಾಲದಲ್ಲಿ ಮಾನವ ಮತ್ತು ಸಮಾಜಗಳ ಬಂಧನ ಇಷ್ಟೂ ಬಿಗಿಯಾಗಿತ್ತು. ಉತ್ಪಾದನಾ ಪದ್ಧತಿ ಉತ್ಪಾದನೆಯ ಹಂಚಿಕೆ ಹಾಗೂ ವಿವಾಹವು ಕೂಡಾ ಒಂದು ಕಾಲದಲ್ಲಿ ಸಾಮಾಜಿಕವಾಗಿತ್ತು ಎಂದರೆ ಆಶ್ಚರ್ಯವಾಗದಿರದು. ಆತನು ಸಮಾಜದಲ್ಲಿ ವಾಸಿಸುವುದಷ್ಟೆ ಅಲ್ಲ, ತನ್ನ ಸಂಪಾದನೆಯನ್ನು ವಿತರಿಸುವ ವಿಧಾನ ಎಂದರೆ, ಉತ್ಪಾದನೆಯೊಂದಿಗೆ ಅದರ ಉಪಭೋಗವನ್ನು ನೂಡುವ ಪದ್ಧತಿಯೂ ಸಾಮಾಜಿಕವಾಗಿತ್ತು.

ಕೆಲ ಕಾಲಕ್ಕೆ ಮೊದಲು ಸಮಾಜ ಮೊದಲೋ ಆಥವಾ ಮಾನವನು ಮೊದಲೋ ಎಂಬ ವಿಚಾರವು ನಮ್ಮ ವಿಜ್ಞಾನಿಗಳ ತಲೆ ತಿನ್ನುತಿತ್ತು. ಮನುಷ್ಯ ಮತ್ತು ಸಮಾಜದ ಉತ್ಪತ್ತಿಯು ಏಕಕಾಲದಲ್ಲಿಯೇ ಒಂದರೊಡನೊಂದಾಗಿಯೇ, ಆಗಿದೆ ಎಂಬುದಿಂದು ಸುನಿಶ್ಚಿತವಿದೆ. ಈ ಅಭಿಮತವನ್ನು ಸರ್ವ ವಿದ್ವಾಂಸರೂ ಗ್ರಹಿಸಿಕೊಂಡಿದ್ದಾರೆ. ಈ ವಿಷಯದಲ್ಲಿ ಜಿ. ಡಿ. ಎಚ್. ಕೋಲ್‌ರವರು ಈ ರೀತಿ ಅಭಿಪ್ರಾಯ ಪಡುತ್ತಾರೆ. "ಮಾನವನು ಸಮಾಜವನ್ನು ನಿರ್ಮಿಸುವುದಿಲ್ಲ. ಬದಲು ಆತನು ಸಮಾಜದಲ್ಲಿ ಜನಿಸುತ್ತಾನೆ; ಆದರಲ್ಲಿಯೇ ಬಾಳುತ್ತಾನೆ. ಹುಟ್ಟಿದೊಡನೆಯೇ ಸಾಮಾಜಿಕ ಪರಿಸ್ಥಿತಿಗಳಿಗೆ ಅಂಟಿಕೊಳ್ಳುತ್ತಾನೆ. ಮಾನವರು ಯಾವ ಸಮಯದಲ್ಲಿ ವಿಕಾಸವನ್ನು ಹೊಂದಿದರೋ ಆಗ ಅವರು ತಮ್ಮ ಸುತ್ತುಮುತ್ತಲಿನ ಪ್ರಾಣಿಗಳಿಗಿಂತ ದುರ್ಬಲರೂ ಅಕ್ಷಮರೂ ಆಗಿದ್ದರು. ಏಕೆಂದರೆ, ಅವರು ಸಹಕಾರವಿಲ್ಲದೆ ಆ ಸಮಯದಲ್ಲಿ ಬದುಕುವುದು ಅಸಾಧ್ಯವಾಗಿತ್ತು. ಮಾನವನು ಪ್ರಾಣಿಗಳಿಗಿಂತ ಭಿನ್ನನಾಗುತ್ತಾ ಬಂದನು. ಅವನು ಪ್ರಕೃತಿಯನ್ನು ತನ್ನ ಸ್ವಾರ್ಥಕ್ಕಾಗಿ ಉಪಯೋಗಿಸುತ್ತಾ ಎಲ್ಲವುಗಳ ನಿಜಸ್ವರೂಪವನ್ನು ಬದಲಾಯಿಸುತ್ತಾ ಮುನ್ನಡೆದನು"—ಸಮಾಜವು ಮಾನವರ ಸಮೂಹ ಮಾತ್ರವಲ್ಲ, ಆದರೊಂದಿಗೆ ಮನುಷ್ಯನ ಕ್ರಿಯಾಶೀಲ ಪಾರಸ್ಪರಿಕ ಸಂಬಂಧವೂ ಇದೆ. ಇದರಿಂದಾಗಿ ಪ್ರಕೃತಿಯೊಂದಿಗೆ ಹೆಚ್ಚಾಗಿ ಕ್ರಿಯಾಶೀಲ, ಸಾಮೂಹಿಕ, ವ್ಯಾವಹಾರಿಕ ಮತ್ತು ಪಾರಸ್ಪರಿಕ ಕ್ರಿಯೆ ಮತ್ತು ಪ್ರತಿಕ್ರಿಯೆಗಳು ನಡೆಯುತ್ತಾ ಇರುತ್ತವೆ.

ಪರಿವಾರ ಆಥವಾ ಕುಟುಂಬದ ಉತ್ಪತ್ತಿಗೆ ಮೊದಲು ಮಾನವನು ಸಾಮೂಹಿಕನಾಗಿದ್ದನು. ಹೀಗಾಗಿ ಕೌಟುಂಬಿಕ ದಂತಹ ಸಣ್ಣ ಸೀಮೆಯು ಇರಲಿಲ್ಲ. ಆದಿ ಮಾನವನು ಮರಗಳಲ್ಲಿ, ಬಂಡೆಕಲ್ಲುಗಳೆಡೆಯಲ್ಲಿ ಏಕಾಕಿಯಾಗಿಯೇ ವಾಸಿಸುತಿದ್ದನು. ಮುಂದೆ ಬಹು ಸಮಯಾನಂತರ ಆತನಲ್ಲಿ ಪರಿವಾರ ಭಾವನೆಯು ಹುಟ್ಟಿತು. ಭಾಷಾ ವಿಜ್ಞಾನಿಗಳೂ, ಪ್ರಾಚೀನ ಅನ್ವೇಷಣೆಗಳ ಸಂಶೋಧಕರೂ ಹಿಂದಿನಿಂದಲೂ ಮಾನವನು ಸಾಮಾಜಿಕ ಜೀವಿಯಾಗಿದ್ದನೆಂದು ಅಭಿಪ್ರಾಯ ಪಡುತ್ತಾರೆ. ಹಿಮಯುಗ ಹಾಗೂ ಹಿಮೋತ್ತರ ಯುಗಗಳಲ್ಲಿ ಮಾನವನು ಸಾಮಾಜಿಕನಾಗಿದ್ದನೆಂದು ಸಂಶೋಧನೆಗಳಿಂದ ತಿಳಿಯುತ್ತದೆ. ಹಳೆಯ ಶಿಲಾಯುಗಕಾಲದ ಕಲ್ಲಿನ ಆಯುಧಗಳು ನಮಗೆ ದೊರೆಯುತ್ತವೆ.

ನವೀನ ಶಿಲಾಯುಗದಲ್ಲಿ ಮಡಿಕೆಗಳನ್ನು ತಯಾರಿಸುವ ಶಿಲ್ಪವು ಕಂಡುಬರುತ್ತದೆ. ಇವುಗಳನ್ನು ಗೃಹಶಿಲ್ಪವೆಂದು ಕರೆಯುತ್ತಾರೆ. ಆದರೆ, ಗಾರ್ಡನ್ ಚಾಯಿಲ್ಡನ ಅಭಿಪ್ರಾಯವು ಇದಕ್ಕೆ ವ್ಯತಿರಿಕ್ತವಾಗಿದ್ದು "ಇಡಿ ಸಮಾಜದ ಸದಸ್ಯರೆಲ್ಲರ ಅಭಿಜ್ಞೆಗಳು ಒಂದು ಸ್ಥಳದಲ್ಲಿ ಒಟ್ಟು ಸೇರುತ್ತವೆ. ಅವುಗಳನ್ನು ಜನರು ಪ್ರಜಾರಮಾಡುತ್ತಾರೆ. ಅಭಿಪ್ರಕದ ಒಂದು ಗ್ರಾಮವನ್ನು ಸಂದರ್ಶಿಸಿದರೆ, ಅಲ್ಲಿ ಮನೆಯೊಡತಿಯು ಏಕಾಕಿಯಾಗಿ ಮಡಿಕೆ ಮಾಡುವುದನ್ನೋ ಇಲ್ಲವೇ ಅಡುಗೆ ಮಾಡುವುದನ್ನೋ ನಾವು ಕಾಣಲಾರೆವು. ಊರಿನ ಸ್ತ್ರೀಯರೆಲ್ಲರೂ ಒಂದು ಸೇರಿ ಪರಸ್ಪರ ಸಹಕಾರವನ್ನಿತ್ತು ತಮ್ಮ ಕಾರ್ಯಗಳನ್ನು ಜಾಗ್ರತೆಯಾಗಿ ಮುಗಿಸುತ್ತಾರೆ. ಹೀಗೆ ಆದು ಒಂದು ಸಾರ್ವಜನಿಕ ಕಾರ್ಯವೇ ಆಗಿದೆ. ಮತ್ತು ಹಾಗೆ ಮಾಡುವುದರ ನಿಯಮವು ಸಾಮಾಜಿಕ ಅಭಿಜ್ಞತೆಯ ಫಲಸ್ವರೂಪವಾಗಿದೆ. ಈ ಕ್ರಮವು ಹಿಂದಿನ ಕಾಲದಲ್ಲಿಯೂ ಪ್ರಚಾರದಲ್ಲಿದ್ದುದರಿಂದಲೇ ಗಡಿಗೆಗಳೆಲ್ಲ ಏಕರೂಪತೆಯೂ ಏಕರಸತೆಯೂ ತಾಳಿಸಿಕೊಂಡಿದೆ. ಆ ಅವಶೇಷಗಳನ್ನವಲೋಕಿಸಿದರೆ, ಆವುಗಳಲ್ಲಿ ವ್ಯಕ್ತಿತ್ವದ ಪರಂಪರೆಯ ಬದಲು ಸಾಮೂಹಿಕ ಪರಂಪರೆಯು ಅಚ್ಚೊತ್ತಿರುವುದು ಕಂಡುಬರುತ್ತದೆ." ಎಂದು ಹೇಳುತ್ತಾರೆ. ಸಮಗ್ರ ರೂಪದಲ್ಲಿ ನವಶಿಲಾ ಯುಗದ ಜೀವನ ಕ್ರಮವನ್ನವಲೋಕಿಸುವುದಾದರೆ, ಆದರಲ್ಲಿ ಸಹಕಾರವೇ ಕಂಡು ಬರುವುದು. ಅರಣ್ಯಗಳನ್ನು ನಾಶ ಮಾಡುವುದು, ನೀರ ಮೂಲವನ್ನು ಕಂಡು ಹಿಡಿಯುವುದು ಮೊದಲಾದುವು ಸಾಮೂಹಿಕವಾಗಿಯೇ ನಡೆಯುತಿದ್ದುವು. ಕಾಡು ಪ್ರಾಣಿಗಳಿಂದ ತಮ್ಮ ಜೀವನವನ್ನು ಉಳಿಸಿಕೊಳ್ಳುವುದು ಈ ವಿಧಾನದಿಂದ ಮಾತ್ರ ಸಾಧ್ಯವಾಗಿತ್ತು. ಪಶ್ಚಿಮ ಯುರೋಪಿನಲ್ಲಿ ವಾಸಿಸಿದ್ದ ನವಶಿಲಾ ಯುಗದ ಜನರು ವ್ಯವಸ್ಥಿತ ವಿಧಾನದಲ್ಲಿಯೇ ಜೀವಿಸಿದ್ದರೆಂಬುದು ಸಿದ್ಧವಾಗಿದೆ. ಇವೆಲ್ಲವುಗಳಿಂದ ಆ ಕಾಲದಲ್ಲಿಯೂ ಮಾನವರಲ್ಲಿ ಸಾಮಾಜಿಕ ಸಂಘಟನೆಯಿತ್ತು ಎಂಬುದನ್ನು ತಿಳಿದುಕೊಳ್ಳಬಹುದು.

ಅನಾದಿಕಾಲದ ಪ್ರಾಣಿಗಳು ಇಂದಿನ ಕಾಲಕ್ಕಿಂತಲೂ ಕ್ರೂರವಾಗಿದ್ದು, ಅವುಗಳನ್ನು ತನ್ನ ಅಂಕೆಯಲ್ಲಿ ತರಲು, ಇಲ್ಲ, ಕೊಲ್ಲಲು, ತಕ್ಕ ಸಾಧನ ಸಾಮಗ್ರಿಗಳು ಮಾನವನ ಸಹಯೋಗದಲ್ಲಿಲ್ಲದಿರುವುದರಿಂದ, ಈ ವಿಷಯದಲ್ಲಿ ಆತನು ಸಂಪೂರ್ಣ ಸಾಮಾಜಿಕ ಜೀವಿಯೇ ಆಗಿದ್ದನು. ಹೀಗೆ, ಸಾಮೂಹಿಕವಾಗಿಯೇ ಪ್ರಾಣಿಗಳನ್ನು ಮುತ್ತುವುದು, ಅವುಗಳ ಮೇಲೆ ಆಯುಧ ಪ್ರಯೋಗ ಮಾಡುವುದು; ಹೀಗೆ ಸಂಪಾದಿಸಿದ ಸೊತ್ತನ್ನು ಸಾಮೂಹಿಕವಾಗಿಯೇ ಉಪಭೋಗಿಸುವುದು ಆಕಾಲದ ನಿಯಮವಾಗಿತ್ತು. ಆಂಗ್ಲರು ಆಸ್ಟ್ರೇಲಿಯದಲ್ಲಿ ಕಾಲಿಟ್ಟಿದಾಗ ಅಲ್ಲಿನ 'ಬುಶ್‌ಮೆನ್' ಎಂಬ ಜಾತಿಯ ಮನುಷ್ಯರು ಜೊದರುಗಳಲ್ಲಿ ವಾಸಿಸುತ್ತಿದ್ದರು, ತಾವು ಸಂಪಾದಿಸಿದ ಶಿಕಾರಿಯನ್ನು ಎಲ್ಲರಿಗೂ ಹಂಚಿ ತಿನ್ನುತಿದ್ದರು ಎಂದು ತಿಳಿಸಿದ್ದು ಬರುತ್ತದೆ. ಆದಿಯ ಸಮಾಜವಾದ ಯುಗದಲ್ಲಿ ಜೀವಸಕ್ಕಾಗಿ ಹೋರಾಡಿ ಬೇಕಾಗುತಿದ್ದುದರಿಂದ ವಿಕಾಸ ಮತ್ತು ಸಹಕಾರವು ಅನಿವಾರ್ಯವಾಗಿತ್ತು. ತನ್ನ ಶತ್ರು ಜಾನುವಾರು ಅಥವಾ ಮನುಷ್ಯರೊಂದಿಗೆ ಹೊಡೆದಾಡಿ ತನ್ನ ಜೀವನವನ್ನು ಭದ್ರವಾಗಿರಿಸಲು ಸಾಮೂಹಿಕ ಕಾರ್ಯವೇ ಅಗತ್ಯವಾಗಿ ಕಾಣುತಿತ್ತು. ಕಾರ್ಯಗಳಲ್ಲಿ ಸಹಕಾರವು ಇದಕ್ಕಿಂತಲೂ ಲಾಭಜನಕವಾಗಿತ್ತು. ಒಂದುಗೂಡಿ ಕೆಲಸ ಮಾಡುವುದರಿಂದ ಆಧಿಕ ಆಹಾರ ಮತ್ತು ಇತರಾವಶ್ಯಕತೆಗಳು ಸುಲಭದಲ್ಲಿ ಪೂರೈಕೆಯಾಗಿತಿದ್ದುವು

ಆದರೆ, ಕೆಲ ಕಾಲಾನಂತರ ಆ ಸಹಕಾರ ಭಾವವು ಜನರಲ್ಲಿ ಮಾಯವಾಗುತ್ತಾ ಬಂತು. ಯಾವ ಕಾರಣದಿಂದ ಯಾವ ರೀತಿಯಲ್ಲಿ ಇದು ಅಂತ್ಯವಾಯಿತು, ವೈಯಕ್ತಿಕ ವಿಕಾಸವು ಯಾವ ವಿಧಾನದಿಂದ ಬಲಿಯಿತು, ಒಂದು ವರ್ಗವು ಇನ್ನೊಂದು ವರ್ಗವನ್ನು ಎಂದು ಶೋಷಿಸಲು ಮೊದಲುಮಾಡಿತು ಈ ವಿಷಯವಾಗಿ ಹೆಚ್ಚಿನ ವಿವರಗಳು ಅನಾವಶ್ಯಕ. ನಮ್ಮ ಸಮಾಜವು ಆರಂಭದಲ್ಲಿ ಮುಂದುವರಿಯುತ್ತಾ ಹೋಯಿತು; ಶೋಷಣ ಮನೋಭಾವದಿಂದಾಗಿ ಸಹಕಾರ ಮನೋಭಾವವು ದೂರವಾಯಿತು. ಹಾಗಾಗಿ ಹೆಚ್ಚಾದ್ದ ಉತ್ಪಾದನೆಗಳು ಕೆಲವೇ ಜನರ ಭೋಗಕ್ಕಾಗಿಯೇ ಉಳಿಯುವಂತಾಯಿತು. ಹೀಗಾಗಿ ಸಮಾಜವೂ ಶಿಥಿಲವಾಗತೊಡಗಿತು. ಬಂಡವಾಳಶಾಹಿಯು ಬೆಳೆಯಿತು. ಈ ಬಂಡವಳಿಗಾರರು ಕರ್ಮಚಾರಿಗಳನ್ನು ಶೋಷಿಸತೊಡಗಿದರು. ಆದುದರಿಂದ ಈ ಕರ್ಮಚಾರಿಗಳು ತಮ್ಮ ಸಂಘಗಳನ್ನು ಸ್ಥಾಪಿಸಿಕೊಂಡು ಕಾರ್ಖಾನೆಗಳೊಡೆಯರಾದ ಬಂಡವಳಶಾಹಿಗಳೊಡನೆ ಹೋರಾಡತೊಡಗಿದರು.

ಮಜೂರರ ಏಕಮಾತ್ರ ಪ್ರಬಲಾಸ್ತ್ರ ಹರತಾಳ ಮಾಡುವುದಾಗಿತ್ತು. ಆದರೆ, ಒಡೆಯರೊಡನೆ ಇದಕ್ಕಿಂತಲೂ ದೊಡ್ಡ ಅಸ್ತ್ರವೊಂದಿತ್ತು. ಹಸಿವೆಯಿಂದ ಸಾಯುತ್ತಿರುವ ಜನರನ್ನು ಕೆಲಸಕ್ಕೆ ಸೇರಿಸಿ, ತಮ್ಮ ಲಾಭವನ್ನು ಮಾಡಿಕೊಳ್ಳುವುದು. ಹೀಗೆ ಮಜೂರ ವರ್ಗದ ಸಂಗ್ರಾಮವು ಬೆಳೆಯುತ್ತಾ ಬಂದರೂ ಅದು ಅಲ್ಪಲಾಭದಾಯಕವೇ ಆಗುಳಿಯಿತು. ಬ್ರಿಟಿಷ ಸಂಸತ್ತಿನಲ್ಲಿ ಮಜೂರರಿಗೆ ಮತಾಧಿಕಾರವಿರದಿದ್ದುದರಿಂದ ಇವರ್ತ ಪ್ರಭಾವವು ಅದರ ಮೇಲೆ ಬೀಳಲಿಲ್ಲ. ಗಣತಿರ ಸುಧಾರಣೆಯಲ್ಲಿ ಮಧ್ಯ ವರ್ಗದ ಜನರಿಗೂ ಮತಾಧಿಕಾರವು ದೊರೆಯಿತು. ಆದರೂ ಇದರಿಂದ ನಿಮ್ನ ಮಧ್ಯವರ್ಗದವರಿಗೂ ಮಜೂರರಿಗೂ ಪ್ರಯೋಜನ ಸಿಕ್ಕಲಿಲ್ಲ.

ಈ ಮಧ್ಯದಲ್ಲಿ ಮಾನವತಾವಾದಿ ಮಾನವನೊಬ್ಬನ ಜನ್ಮ ಮಂಚೆಸ್ಟರಿನಲ್ಲಾಯಿತು. ಈತನು ಮಜೂರರ ಪರಿಸ್ಥಿತಿಯನ್ನು ಕಂಡುಕೊಂಡು ಮಃಖಿತನಾದನು. ಇವನೇ ರಾಬರ್ಟ್ ಓವೇನ್' ತನ್ನ ಕಾರ್ಖಾನೆಯ ಮಜೂರರ ಸ್ಥಿತಿಗತಿಗಳನ್ನು ಈತನು ಸುಧಾರಿಸಿದನು. ತನ್ನ ಸ್ನೇಹಿತ ಒಡೆಯರೊಡನೆ ಮಜೂರರೊಂದಿಗೆ ಉತ್ತಮ ವ್ಯವಹಾರವನ್ನು ನಡೆಸುವಂತೆ ಕೇಳಿಕೊಂಡನು. ಇವನ ಪ್ರಭಾವದಿಂದಾಗಿ ಮಜೂರರ ಹಿತವರ್ಧಕ ಕಾನೂನೊಂದು ಬ್ರಿಟಿಷ ಸಂಸತ್ತಿನಲ್ಲಿ ಮಂಜೂರಾಯಿತು. "ಸಮಾಜವಾದ" ಎಂಬ ಪದವನ್ನು ಪ್ರಪ್ರಥಮವಾಗಿ ಇವನು ಉಪಯೋಗಿಸಿದನೆಂದು ಹೇಳುತ್ತಾರೆ. ಮಜೂರ ಸಹಕಾರ ಸಮಿತಿಯೊಂದನ್ನು ಸ್ಥಾಪಿಸಿ, ಮಜೂರರಿಗಾಗಿ ಕಾರ್ಖಾನೆಯ ಲಾಭದ ಒಂದಂಶವನ್ನು ಕೊಡಬೇಕೆಂದು ಇವನು ಅಭಿಪ್ರಾಯಪಟ್ಟನು. ಇದಕ್ಕಾಗಿ

(ಇಂದೇ ಕುಟ ನೋಡಿರಿ)

THE
CANARA INDUSTRIAL & BANKING SYNDICATE LTD.
Estd.: 1925, H. O.: UDIPI, S. India.

GROWING

RESOURCES
as on
31-12-1926 - Rs. 17,355
31-12-1936 - Rs. 35,45,544
31-12-1946 - Rs. 4,26,07,093
31-12-1956 - Rs. 10,64,10,312

THANKS
to
our thousands of customers all over the country for their confidence and good-will.

T. A. PAI, B. Com. (Bom.), AII.B., F.R.E.S. (Lond)
General Manager.

DR. T. M. A. PAI, M. B., B. S.,
Managing Director.

## ಸಾಹಿತ್ಯದಲ್ಲಿ ಸಮಸ್ಯೆ

# ಜನತಾಬುದ್ಧಿ ಸಂಸ್ಕಾರವೇ ಸಾಹಿತ್ಯಕ್ಕೆ ತಕ್ಕ ಪ್ರೋತ್ಸಾಹ

ಒಂದು ಪುಸ್ತಕದ ವಿಷಯವಾಗಿ ಹೇಗೆ ಎಂದು ಮೊದಲು ಬರುವುದು 'ಗ್ರಂಥಕರ್ತನಾರು?' ಎಂಬ ಪ್ರಶ್ನೆ. ಅನಂತರ ಬರುವವನು ಪ್ರಕಾಶಕ. ಸಾಹಿತ್ಯ ವಿಷಯವನ್ನು ಕುರಿತು ಮಾತಾಡವಾಗ ಸಾಮಾನ್ಯ ಗ್ರಂಥಕರ್ತರೂ, ಪ್ರಕಾಶಕರೂ ಸಜ್ಜು ಗುಜ್ಜಿಗೆ ಈಡಾಗುತ್ತಾರೆ. ಪ್ರಸಿದ್ಧ ಸಾಹಿತಿಗಳೆಂದೂ ಪ್ರಕಾಶಕರೆಂದೂ ಜೇರ್ಗಡೆಯಾದ ಪುಣ್ಯಾತ್ಮರಷ್ಟೇ ಈ ನಜ್ಜು ಗುಜ್ಜಾಟದ ಕಲ್ಲಿಗೆ ಸಿಕ್ಕದೆ ದೂರ ಉಳಿಯುವರು. ಅಂ ಈವರು ಒಂದೋ ಬೆಳಿಗುವರು; ಇಲ್ಲನೇ ಮಸಕಾಗಿ ತೆಪ್ಪಗಿರುವರು.

ಒಳ್ಳೆಯ ಸಾಹಿತಿಗಳಿಗೆ ಬರುವಷ್ಟು ಪ್ರಶಂಸೆ ಒಳ್ಳೆಯ ಪ್ರಕಾಶಕರಿಗೆ ಬರುವುದಿಲ್ಲ. ಏಕೆಂದರೆ, 'ಪ್ರಕಾಶಕರು' ಎಂಬ ಪದದಲ್ಲೇ ಶ್ಲಾಘನೆಯೊಂ ಅಡಗಿಕೊಂಡಿದೆ. ಧೈರ್ಯದಿಂದ ಹಣ ಹಾಕಿ ಪುಸ್ತಕ ಪ್ರಕಟಪಡಿಸುವ ಸಾಹಸಕರೂಪವೇ 'ಪ್ರಕಾಶಕ' ಶಬ್ದದಲ್ಲಿದೆ. ಇನ್ನೇಕೆ ಅವರಿಗೆ ಕೆಟ್ಟಿನ ಪ್ರಶಂಸೆ? ಪಾಪಕೆಲ ಹಣ ಬಂದರೆ ಪ್ರಕಾಶಕರಿಗೆ ಹೊಗಳಿಕೆಗಿಂತ ನೂರು ಪಾಲು ಹೆಚ್ಚಾಯಿತು

'ಪ್ರಕಾಶಕ' ಎಂಬ ಹೆಸರು ಸುಂದರವಾಗಿದೆ ಆದರೆ ಜನತೆಯ ಬುದ್ಧಿಗೆ ಪ್ರಕಾಶ ನೀಡುವವನು ಪ್ರಕಾಶಕನಲ್ಲ, ಗ್ರಂಥಕರ್ತ. 'ಪ್ರಕಾಶಕ' ಪೆಸರಿನಲ್ಲಿ ಅತ ಮಾಡುವುದು ವ್ಯಾಪಾರ. ಜನತೆಯೊಡನೆ ಅವನಿಗಿರುವುದು ವ್ಯಾಪಾರ ಸಂಬಂಧ. ವ್ಯಾಪಾರದಲ್ಲಿ ನ್ಯಾಯ ಪಾಲಿಸಿದ ಪ್ರಕಾಶಕ ಮಾತ್ರ ಒಳ್ಳೇ ಕೆಸರು ಗಳಿಸಬಲ್ಲ.

ಪ್ರಕಾಶಕನಿಗೂ ಗ್ರಂಥಕರ್ತನಿಗೂ ಇರುವ ಸಂಬಂಧವಾದರೂ ವ್ಯಾಪಾರ ಸಂಬಂಧವೇ ಆಗಿದೆ. ಇದು ಜನತೆಗೆ ತಿಳಿಯಲಾಗದಂತಹುದು. ಒಳಗಿನ ಸಂಬಂಧ ಅವರವರೊಳಗೆ ಎಷ್ಟೊ ರೊಚ್ಚು ಕೆಚ್ಚುಗಳವೆ; ಪತ್ರವ್ಯವಹಾರಗಳವೆ; ವಾದ ಪ್ರತಿವಾದಗಳವೆ. ಇವಬ್ಬರ ಸಂಬಂಧವು ಮೆಚ್ಚು ನೆಚ್ಚುಗಳಿಂದ ಸುನುಖವಾದಾಗಲೇನೇ ಸಾಹಿತ್ಯ ಕ್ಷೇತ್ರವು ಉತ್ತಮವಾಗುವುದೆಂದು ಹೇಳಬೇಕು ಸಾಹಿತಿಯು ಹೊಟ್ಟೆ ತಣ್ಣಗಾದರೇನೇ ಸಾಹಿತ್ಯ ಕ್ಷೇತ್ರವು ಬೆಳಗಿ ಕಳೆಗೊಂಡೀತು.

ನಮ್ಮ ಸಾಹಿತ್ಯದ ಪ್ರಕಾಶನೋದ್ಯಮದಲ್ಲಿ ಪರದೇಶದವರ ಎತ್ತುಗಡೆಯನ್ನು ನಕಲು ತೆಗೆಯಲಾಯಿತು. ಒಬ್ಬರು ತೆಗೆದ ನಕಲನ್ನು ಬೇರೆಯವರೂ ತೆಗೆಯಲೇಬೇಕಾದ ನಿರ್ಬಂಧವೇರ್ಪಟ್ಟಿತು. ಒಳ್ಳೆಯ ಮಳೆಯಾಯಿತು. ಕೆಲವು ಅದೃಷ್ಟಕಾಲಿಗಳಿಗೆ ಒಳ್ಳೆಯ ಬೆಳೆ ದೊರೆಯಿತು. ಮತ್ತೆ ಕೆಸರು ತುಂಬಿತು; ಬೆಳೆ ಕಟ್ಟಿತು. ಇಂಥ ಪರಿಣಾಮಕ್ಕೆ ನಕಲಿನ ಪ್ರವೇಶಕರಾದ ಪ್ರಕಾಶಕರೇ ಕಾರಣರೆನ್ನದೆ ನಿಧಿಯುಂಟೆ? ನಕಲು ತೆಗೆದ ಎತ್ತುಗಡೆಮನ್ನು ಆಸಲಿನವರಷ್ಟು ಜಯಪ್ರದವಾಗಿ ಮಾಡಲಾರದೆ ಹೋದಲ್ಲಿ ಅದು ಬರಿಯ ನಕಲಿಯೇ ಆಗುತ್ತದೆ.

ಪ್ರಕಾಶನ ಎಂಬುದಕ್ಕೆ ಭಾವುಕ ಭಾಷೆಯಲ್ಲಿ "ಸೇವೆ" ಎನ್ನಬಹುದು. ಜನತೆಗೆ ಅದು ಸೇವೆಯೇ ಆದರೂ ಆ ಸೇವಾ ವಸ್ತುವಿನ ಜನ್ಮಕ್ಕೆ ಕಾರಣನಾದ ಗ್ರಂಥಕರ್ತನಿಗೆ ಆ ಸೇವೆಯ ಪುಣ್ಯವು ಎಷ್ಟರಮಟ್ಟಿಗೆ ಸಿಕ್ಕುತ್ತೆ? ಪ್ರಕಾಶನವು ಹೆಣದಿಂದಾಗುವ ಕಾರ್ಯ. ಅದುದರಿಂದ ಪ್ರಕಾಶಕನಿಗೆ ಲಾಭದೃಷ್ಟಿ ಇದ್ದೇ ಇರುತ್ತೆ. ಈ ಲಾಭದೃಷ್ಟಿಯಿಂದಾಗಿ ಏನೋ ಅಲ್ಪ ಸಂಭಾವನೆಗೆ ಗ್ರಂಥಕರ್ತನಿಂದ ಪೂರ್ಣ ಹಕ್ಕು ಬರೆಸಿಕೊಳ್ಳುವಂತೆ ಮಾಡಿಬಿಡುತ್ತೆ. ಪುಸ್ತಕ ಮಾರ್ಕೆಟ್ಟಿಗೆ ಬಂದರೂ ಗ್ರಂಥಕರ್ತನಿಗೆ ಆ ಸಂಭಾವನೆ ಕೂಡಾ ದೊರೆತಿರಲಾರದು. ಗ್ರಂಥಕರ್ತನಿಗೂ ಪ್ರಕಾಶಕನಿಗೂ ಎಷ್ಟೋ ವ್ಯವಹಾರಗಳು ನಡೆಯಲು ಅವಕಾಶವುಂಟು. ಇದಕ್ಕೂ ಮಿಗಿ ಏನೂ ಪ್ರತಿಫಲಕೊಡದೆ ಮೋಸವನ್ನೆ ಮಾಡಿ ಪಾರಾಗುವ ಪ್ರಕಾಶಕರೂ ನಾಡಿನಲ್ಲಿದ್ದಾರೆ.

ಮೋಸಗಾರ ವ್ಯಾಪಾರಿಗಳನ್ನು ಹೊಗಳಬೇಕು. ಕಳ್ಳನು ತನ್ನ ಬಡತನದ ಕಾಟದಿಂದಾಗಿಯೇ ಕಳುವು ಮಾಡುತ್ತಾನೆ. ಇಲ್ಲದಿದ್ದರೆ ಅವನೆಷ್ಟೋ ಒಳ್ಳೆಯವ. ಎಂಬ ಹಾಗೆ, ಪ್ರಕಾಶಕರೇನು ಮಾಡುತ್ತಾರೆ? ಅವರಿಗೆ ಹಣ ಬಂದರಲ್ಲವೇ ಅವರು ಗ್ರಂಥಕರ್ತನಿಗೆ ಕೊಟ್ಟಾರು? ಅವರೆ ಪ್ಪೋ ಒಳ್ಳೆಯವರು. ಎಂದು ಪ್ರಕಾಶಕರನ್ನು ಶ್ಲಾಘಿಸಬೇಕು. ಹೀಗೆ ಪ್ರಕಾಶಕರು ಕ್ಷಮ್ಯರಾಗಿ ಉಳಿಯುತ್ತಾರೆ.

ಆಗ ನಮ್ಮ ಕಣ್ಣಿಗೆ ಕಾಣುವವರು ಜನತೆ. ಜನತೆಯೆಂದರೆ ಪಂಡಿತರಿಂದ ಹಿಡಿಯ ಪಾಮರರ ವರೆಗೂ ಇದ್ದಾರೆ. ಇವರು ಯಾರ ಹಿಡಿತಕ್ಕೂ ಸಿಕ್ಕುವವರಲ್ಲ; ಕಪ್ಪೆಯಂತೆ ಯಾವ ಅಸಾಮ್ಯವೂ ಇಲ್ಲದೆ ಜಾರಿ ಜಾರಿ ನೀತಿರುತ್ತಾರೆ. ಈ ಜನತೆಯಲ್ಲಿ ಅರ್ಧ ಭಾಗದವರು, 'ಓದಿದರೇನು ಪ್ರಯೋಜನ? ಹೊಟ್ಟೆ ತುಂಬುತ್ತದೆಯೆ?" ಎಂಬ ಧೋರಣೆಯವರು. ಉಳಿದುದರಲ್ಲಿ ಅರ್ಧದವರು ಪುಸ್ತಕಟಿಸಿಕ್ಕಲ್ಲಿ ಮಾತ್ರ ಓದುವ ಸ್ಪೃಹೆ ಬರುವ ಜಾತಿಯವರು. ಉಳಿದವರಲ್ಲಿ ಪುಸ್ತಕ ಕೊಂಡುಕೊಳ್ಳೋಣವೆಂಬಾತುರ ಫಕ್ಕನೆ ಹುಟ್ಟುತ್ತೆ. ಒಂದು ಕಾರ್ಡು "ಇಂಥ ಪುಸ್ತಕಕ್ಕೆ ಬೆಲೆ ಎಷ್ಟು?" ಎಂದು ವಿಚಾರಿಸಿ ಬರೆಯುವ ವರೆಗೂ ಅದಿರುವುದುಂಟು. ಮತ್ತೆ ಹಾಗೆಯೇ ಆಡಗಿ ಹೋಗಿ ಬಿಡುತ್ತದೆ. ಇದನ್ನು ಮಿಂಚಿ ಅಪ್ಪಿತಪ್ಪಿ ಅದೃಷ್ಟವಶಾತ್ ಪುಸ್ತಕ ಕೊಂಡುಕೊಂಡವರಿಂದಲೇ ಪ್ರಕಾಶಕ-ಲೇಖಕರು ಹರಿದು ಹಂಚಿಕೊಂಡು ಬಾಳಬೇಕು.

ಪುಸ್ತಕ ಕೊಳ್ಳಿದಿರಲು ಜನತೆಯಲ್ಲಿ ದುಡ್ಡಿಲ್ಲದಿರುವುದೊಂದು ಕಾರಣವೆನ್ನಲು ಸಾಧ್ಯವಿಲ್ಲ. ಇದಕ್ಕೆ, ಅಂದುಕೊಳ್ಳಿದಂತೆಯೇ ಜನರು ಮಾಡುವ ಖರ್ಚೇ ಸಾಕ್ಷಿ. ಕ್ರತು ಕಪ್ಪಿ ಎಷ್ಟು ಬಾರಿ ಹೋಟಲಿಗೆ ಹೋಗುವುದಿಲ್ಲ? ಸಿಗರೇಟುಗಳನ್ನು ಅಲಕ್ಷ್ಯವಾಗಿ ತಾನೂ ಸೇದಿ ಸ್ನೇಹಿತರಿಗೂ ಎಷ್ಟು ಬಾರಿ ಕೊಡುವುದಿಲ್ಲ? ಸಿನೆಮಕ್ಕೆ ಹೋಗಲಿಕ್ಕೆ ಯಾರಿಗಾದರೂ ದುಡ್ಡಿಲ್ಲದೆ ಹೋಗುತ್ತದೆಯೆ? ಇಲ್ಲ. ಆದುದರಿಂದ ಪುಸ್ತಕ ಕೊಂಡುಕೊಳ್ಳಲು ದುಡ್ಡಿಲ್ಲ ವೆಂಬುದು ಜನತೆಯ ಅಲ್ಪ ಜ್ಞಾನದ ದ್ಯೋತಕವೆಂದೇ ತೋರುತ್ತದೆ.

ಜನತೆಯ ಗೌರವಾದರಗಳನ್ನು ಕಡಮೆ ಮಾಡಿಕೊಂಡ ವಿಷಯದಲ್ಲಿ ಪುಸ್ತಕಗಳೂ ಕಾರಣವಪಹಿಸದಿಲ್ಲ. ಅನೇಕ ಪ್ರಕಾಶಕರು ಅಲ್ಪ ಬುದ್ಧಿಯಿಂದ ಅಲ್ಪ ಕೃತಿಗಳಿಗೇ ಉತ್ತೇಜನ ಕೊಡುತ್ತ ಉಪಕೃತ ಕೃತಿಗಳ ಪ್ರಕಾಶನವೇ ಹೆಚ್ಚಾಗುವುದೂ ಒಂದು ಕಾರಣ. ಎಲ್ಲರೂ ಲೇಖಕರೂ ಗ್ರಂಥಕರ್ತರೂ ಆದರೆ ಓದುವುದು ಯಾರು? ಎಂಬ ಸಂಶಯನೀಳುವ ಹಾಗೆ ಆಗಬಾರದು. ಈಗ ಕೆಲವು ಪೆಸರುವಾಸಿಯಾದ ಗ್ರಂಥಗಳೂ ಗ್ರಂಥಕರ್ತರೂ ಮಾತ್ರವೇ ಉದಾಹರಣೆಯಾಗಿ ಉಳಿದಿದ್ದಾರಲ್ಲದೆ ಉಳಿದ ಕಲವರು ಕತ್ತಲೆಯಲ್ಲೇ ಇದ್ದಾರೆ. ಈ ಕತ್ತಲೆಯಲ್ಲಿ ಪ್ರತಿಭೆಯಿಲ್ಲದ ಮಹತ್ವಾಕಾಂಕ್ಷೆಗಳಾದ ಸಾಮಾನ್ಯ ಸಾಹಿತಿಗಳೊಂದಿಗೇ ಪ್ರತಿಭಾನ್ವಿತರಾದ ದುರಾದೃಷ್ಟ ವ್ಯಕ್ತಿಗಳೂ ಇದ್ದಾರೆ.

ಲೇಖಕರು ಎಂದರೆ ಬರೆಯುವವರು ಹೊರತು ಸಾಹಿತಿಗಳಲ್ಲ. ಹಿತವಾದ ವಿಷಯಗಳನ್ನು ರುಚಿಯಾಗಿ ಕೊಡಬಲ್ಲವನು ಸಾಹಿತಿ ರಸಕಲ್ಪನೆಯುಳ್ಳವನು ಕವಿ. ನಿಜವಾದ ಪ್ರತಿಭೆಯುಳ್ಳ ಕವಿ ಸಾಹಿತಿಗಳು ಸ್ವಯಂಸ್ಫೂರ್ತಿಯಿಂದ ಆತ್ಮ ಸಂತೋಷದಿಂದ ಬರೆಯುವವರು. ಯಾವುದೊಂದು ಒತ್ತಾಯದಿಂದ ಬರೆಯುವವರಲ್ಲ. ಜೀವಂತ ಪ್ರಕೃತಿಯೇ ಅವರಿಗೆ ಒತ್ತಾಯ ಮಾಡುತ್ತಿರುತ್ತದೆ. ಬೇರೆವಿಧದ ಒತ್ತಾಯದಿಂದ ಬರೆದುದು ಪಾಠ ಪುಸ್ತಕವಾದೀತೆ; ವರದಿಯಾದೀತು; ಯಾವುದೊಂದು ಧರ್ಮ ಗ್ರಂಥವಾದೀತು. ಜನತೆಸಾಸ್ವಿದಿಸುವಷ್ಟವಾಗಿ ಮೆಚ್ಚುವಂತಹ ಲಲಿತ ಸಾಹಿತ್ಯವಾಗಲಿಕ್ಕಿಲ್ಲ.

ಒಂದಕ್ಕೊಂದು ಕೊಂಡಿಯಾಗಿ ಸಿಕ್ಕಿಕೊಂಡಿರುವ ಸಾಹಿತ್ಯ ಸಮಸ್ಯೆಗಳು ಸುಗಮವಾಗಿ ಬಗೆಹರಿಯಬೇಕಾದರೆ, ಮೊತ್ತ ಮೊದಲು ಜನತೆಯ ಬುದ್ಧಿ ಸಂಸ್ಕಾರವಾಗಬೇಕು. ಆ ಜನತೆಯ ಸದಿಷ್ಟದ ಒತ್ತಡವು ಪ್ರಕೃತಿಯಲ್ಲಿ ಬೆರೆತು ಸಾಹಿತಿಗಳ ಪ್ರತಿಭೆಯನ್ನು ಸತ್ಕೃತಿಗಳಿಗೆ ಹುರುಡಿಸಬಲ್ಲುದು. ಇದಾಗಬೇಕಾದ್ದು ವಿದ್ಯೆಯಿಂದ. ಆಹಂಭಾವಕ್ಕೆಡೆಯಾಗದ ವಿದ್ಯೆಯಿಂದ ಹುಡ್ಡಿನ ಬೆಲೆ ತಿಳಿಯುತ್ತದೆ. ದುಂದು ವ್ಯಯ ಕಡಮೆಯಾಗುತ್ತದೆ. ಆ ದುಡ್ಡು ಪುಸ್ತಕಗಳ ಕಡೆಗೆ ಹರಿಯುತ್ತದೆ. ಅಚ್ಚಿನ ಯಂತ್ರವು ಪ್ರತಿ ರಸ್ತೆಯಲ್ಲಿಯೂ ತಿರುಗುತ್ತಿರುವ ಈ ಕಾಲದಲ್ಲಿ ಪುಕ್ಕಟೆ ಪುಸ್ತಕ ಓದುವುದು ಎಂಥ ಅವಮಾನ! ಎಂಬ ದೃಷ್ಟಿ ಸಭ್ಯ ಸಂಸ್ಕಾರದಲ್ಲಿ ಸೇರಿಕೊಳ್ಳಬೇಕು. ಇಲ್ಲದಿದ್ದರೆ ಸಾಹಿತ್ಯ ಸಮಸ್ಯೆಗಳಿಗೆ ಮುಕ್ತಿಯೇ ಇಲ್ಲ.

—ಎಂ. ರಂಗರಾವ್, ಮದ್ರಾಸು.


ಒಂದು ಹೊಸ ಮಹಾ ಕಾದಂಬರಿ

# ನಡುಹಗಲಿನ ಕಗ್ಗತ್ತಲೆ

ಸಿಲ್ಕ ಪುಟಗಳು ಬೆಲೆ 2·50 ರೂಪಾಯಿ

- ಯುರೋಪಿನಲ್ಲಿ ಈಗ ನಲ್ವತ್ತು ವರ್ಷಗಳ ಹಿಂದೆ ನಡೆದ ಇಡೀ ಪ್ರಪಂಚವನ್ನೇ ತಲ್ಲಣಗೊಳಿಸುತ್ತಿರುವ ಒಂದು ರಾಜನೈತಿಕ ಪದ್ಧತಿಯಿಂದ ಮನುಷ್ಯನ ಆತ್ಮವು ಪತನವಾಗುತ್ತಿರುವ ದುರಂತದ ಒಂದು ಮಾರ್ಮಿಕ ಕಾದಂಬರಿ.
- ರಶಿಯದ ರಕ್ತಮಯ ಕ್ರಾಂತಿಯು ವ್ಯಕ್ತಿಯ ಜೀವ ಮತ್ತು ನೆತ್ತರನ್ನು ನಿರ್ದಾಕ್ಷಿಣ್ಯವಾಗಿ ಹೀರುವ ಭೀಕರ ಚಿತ್ರಣ.
- ಇದರಲ್ಲಿ ಪ್ರಚಲಿತ ಪ್ರಪಂಚದ ರಾಜನೀತಿ, ಇತಿಹಾಸ, ಮತ್ತು ಅಂತಾರಾಷ್ಟ್ರೀಯ ರೀತಿ ನೀತಿಯ ಒಳನೋಟ ದೊರೆಯುತ್ತದೆ.
- ಪ್ರಖ್ಯಾತ ಲೇಖಕ ಆರ್ಥರ್ ಕೊಸ್ಲರ್ ಅವರ ಜರ್ಮನ್ ಕಾದಂಬರಿಯ ಸುನೋಜ್ಞ ಕನ್ನಡವನ್ನು ಅನುವಾದಿಸಿದವರು ಕು. ಶಿ. ಹರಿದಾಸ ಭಟ್ಟರು.

ಪ್ರಕಾಶಕರು:

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ.

(ಪ್ರತಿಗಳು ನವಭಾರತ ಪುಸ್ತಕ ಭಂಡಾರ, ಉಡುಪಿ, ಇಲ್ಲಿಯೂ ದೊರೆಯುತ್ತವೆ)


### ಸೆಕೆಂಡರಿ ಶಾಲೆಗಳು

ತಮ್ಮ ಉಪಯೋಗಾರ್ಥವಾಗಿ 'ನವಯುಗ' ವಾರಪತ್ರಿಕೆಯನ್ನು ತರಿಸಿಕೊಳ್ಳಬಹುದೆಂದು Roc. No. 466-N/50 ತಾ. 12-12-50ನೇ ಪ್ರೊಸಿಡಿಂಗ್ಸಿನಂತೆ ಮದ್ರಾಸು ಸರಕಾರದ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ನವರು ಮಂಜೂರು ಮಾಡಿದ್ದಾರೆ.

ಈ ವರೆಗೆ ಚಂದಾದಾರರಾಗದ ಯಾವ ಸ್ಕೂ ಸೆಕೆಂಡರಿಶಾಲೆಗಳವರು 'ನವಯುಗ'ಕ್ಕೆ ಚಂದಾದಾರರಾಗಿ ತರಿಸಿಕೊಂಡು ಪ್ರೋತ್ಸಾಹಿಸುವಂತೆ ಈಮೂಲಕ ವಿನತಿಸಿಕೊಳ್ಳಲಾಗಿದೆ.

ಮೆನೇಜರ್.

### ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ, ಕಾಗದದ ಒಂದೇ ಮುಗ್ಗುಲಿನಲ್ಲಿರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ. ನ.

## ರಾಷ್ಟ್ರದ ಪ್ರಗತಿ

# ಪಂಚವಾರ್ಷಿಕ ಯೋಜನೆಗೆ ನಿಮ್ಮ ಪಾಲಿನ ಅಳಿಲುಸೇವೆ ಸಲ್ಲಿಸಿರಿ

ಈ ದಿನಗಳಲ್ಲಿ ಪಂಚವಾರ್ಷಿಕ ಯೋಜನೆಗಳ ಮಾತುಗಳೇ ಎಲ್ಲೆಲ್ಲಿಯೂ ಕೇಳಿ ಬರುತ್ತಿವೆ. ಈ ಯೋಜನೆಗಳನ್ನು ಕಾರ್ಯರೂಪದಲ್ಲಿ ತರಲು ನಾಗರಿಕರು ಅಧಿಕ ತ್ಯಾಗ ಸೇವೆಗಳಿಗೆ ಸನ್ನದ್ಧರಾಗಿರಿ ಎಂಬ ಉಪದೇಶವು ಪ್ರತಿಯೊಂದು ಕ್ಷೇತ್ರದಲ್ಲಿಯೂ ದೊರೆಯುತ್ತಿವೆ. ಇಲ್ಲಿ 'ಯೋಜನೆಗಳನ್ನು' ಎಂಬ ಬಹುವಚನ ಪ್ರಯೋಗವಿದೆ. ಭಾರತದಲ್ಲಿ ಕೇವಲ ಒಂದು ಯೋಜನೆಯಿಂದ ಆದರ ಉದ್ದೇಶವು ಈಡೇರಲಾರದು. ಅದುದರಿಂದ ಯೋಜನೆಗಳ ಸಮೂಹವೇ ಬೇಕಾಗಿದೆ. ಒಂದರನಂತರ ಇನ್ನೊಂದು ಯೋಜನೆಯನ್ನು ರೂಪಿಸಬೇಕಾಗಿದೆ. ಪ್ರಥಮ ಯೋಜನೆಯು ಎಪ್ರಿಲ್ ೫೦ರಲ್ಲಿ ಪ್ರಾರಂಭವಾಗಿ ಮಾರ್ಚಿ ೫೬ರಲ್ಲಿ ಅಂತ್ಯವಾಯಿತು, ಎರಡನೆಯದು ಎಪ್ರಿಲ್ ೫೬ರಲ್ಲಿ ಆರಂಭವಾಗಿ ಮಾರ್ಚಿ ೬೧ರಲ್ಲಿ ಕೊನೆಗೊಳ್ಳುವುದು. ಹೀಗೆಯೇ ನಮ್ಮ ಯೋಜನೆಗಳು ಐದೈದು ವರ್ಷಗಳಿಗೆ ಸಂಬಂಧಪಟ್ಟಿರುವುದರಿಂದ ಇದಕ್ಕೆ ಪಂಚವಾರ್ಷಿಕ ಯೋಜನೆಗಳೆಂಬ ನಾಮಧೇಯವಿತ್ತಿರುವರು. ಭಾರತದ ಜೀವನಮಟ್ಟವು ಒಂದು ಸ್ತಿಮಿತರೀತಿಗೆ ಬಂದು ದೇಶವಾಸಿಗರು ಸಾಮಾನ್ಯತೃಪ್ತಿಯ ಕೆರುನಗೆಯೊಂದನ್ನು ನಗುವಂತೆ ಮಾಡಲು ಇಂತಹ ೫ ಯೋಜನೆಗಳು ಅತ್ಯಾವಶ್ಯಕವಿವೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ನಮ್ಮ ಮುಂದೆ ಎದ್ದುಕಾಣುವ ಒಂದೇ ಒಂದು ಪ್ರಶ್ನೆ ಯೋಜನೆಗಳ ಉದ್ದೇಶವೇನು? ನಮಗೆ ಯೋಜನೆಗಳೇಕೆ? ಈ ಯೋಜನೆಗಳಂತ್ಯದಲ್ಲಿ ನಮಗೇನು ಲಾಭ ದೊರೆಯುತ್ತದೆ? ಎಂಬುದು. ಇದು ಬಹಳದೊಡ್ಡ, ಮಹತ್ವದ ಪ್ರಶ್ನೆಯಂತೆ ಕಂಡರೂ ಉತ್ತರವು ತೀರಾ ಸರಳವಾಗಿಯೇ ಇದೆ. ನಮ್ಮ ಬಾಳ್ವೆಯು "ಬಡತನ"ವಾದುದು. ಈ ಬಡತನವನ್ನು ಸಮಾಪ್ತಿಗೊಳಿಸುವುದಕ್ಕಾಗಿ ನಾವು ಯೋಜನೆಗಳನ್ನು ರೂಪಿಸುತ್ತೇವೆ. ಅದುದರಿಂದ ಈ ಯೋಜನೆಗಳ ಉದ್ದೇಶ ಮಹತ್ವದವುಗಳಾಗಿವೆ. ನಾವು ನಮ್ಮ ಜೀವನದ ಮಟ್ಟವನ್ನು ಎತ್ತರಿಸಲು ಯೋಜನಾತ್ಮಕ ಪ್ರಯಾಸಗಳನ್ನು ಅನುಭವಿಸಬೇಕಾಗಿದೆ. ಇದರಿಂದಾಗಿ ನಾವು ಸಮೃದ್ಧಿಯೆಡೆಗೆ ಮುನ್ನಡೆಯುವುದು ಸಾಧ್ಯ.

ನಮ್ಮ ಜೀವನ ಮಟ್ಟವನ್ನು ಉನ್ನತಗೊಳಿಸುವುದು ಆದೆಷ್ಟು ಆವಶ್ಯಕ ಎಂಬುದನ್ನು ನಾವು ತಿಳಿಯಬೇಕು. ೧೯೩೧ರ ಜನಗಣನೆಯ ಸಮಯದಲ್ಲಿ ಭಾರತದ ಒಟ್ಟು ಜನಸಂಖ್ಯೆ ೩೬ ಕೋಟಿಯಿತ್ತು. ಪ್ರತಿಸರ್ವರೂ ಈ ಸಂಖ್ಯೆ ಸುಮಾರು ೫೦ ಲಕ್ಷಗಳಷ್ಟು ಹೆಚ್ಚುತ್ತಿರುತ್ತದೆ. ಈಗ ಈ ಪ್ರಕಾರದಲ್ಲಿ ಜನಸಂಖ್ಯೆಯು ಸಾಮಾನ್ಯತಃ ೩೮ ಕೋಟಿಯಿದ್ದರೂ ೧೯೪೧ರಲ್ಲಿ. ಇನ್ನೊಂದು ಜನಗಣನಾ ವೇಳೆಯಲ್ಲಿ ೪೦ ಕೋಟಿ ಯಾಗುವುದರಲ್ಲಿ ಸಂದೇಹವಿಲ್ಲ. ಈ ಎಲ್ಲ ಮತ್ತು ಹೆಚ್ಚುತ್ತಿರುವ ಜನರ ಪೋಷಣೆಗಾಗಿ ನಾವು ಹೆಚ್ಚು ಅನ್ನದ ಎಡೆಗಳನ್ನು ಮಾಡಿಡಬೇಕು. ನಮ್ಮ ಆಹಾರ ಪರಿಸ್ಥಿತಿಯು ಧಾರಾಳವಾಗಿದೆಯೆ? ಭಾರತದ ವಾರ್ಷಿಕ ರಾಷ್ಟ್ರೀಯ ಆದಾಯವು ಸುಮಾರು ೧೦ ಸಾವಿರ ಕೋಟಿ ರೂಪಾಯಿಗಳೆಂದು ಲೆಕ್ಕಹಾಕಿ ನೋಡಿದ್ದಾರೆ. ಈ ಮೊಬಲಗನ್ನು ಎಲ್ಲ ಜನರಿಗೂ ಸಮಾನವಾಗಿ ಹಂಚುವುದಾದರೆ, ಆಗ ತಲಾ ಒಂದರ ೩೭೫ ರೂಪಾಯಿ ದೊರೆಯುವುದು. ಎಂದರೆ ದಿನವೊಂದಕ್ಕೆ ಭಾರತೀಯನ ಸಂಪಾದನೆ ೭೫ ನಯೇ ಪೈಸೆಗಳು.

ಇಷ್ಟೊಂದು ಕಡಿಮೆ ಆದಾಯವನ್ನವಲಂಬಿಸಿ, ನಾವು ಒಳ್ಳೆ ರೀತಿಯ ಜೀವನವನ್ನು ಬದುಕುವ ಆಶೆಯನ್ನಿಟ್ಟುಕೊಳ್ಳುವುದು ಸರಿಯಾದುದಲ್ಲ. ವಿಲಾಸ ಮತ್ತು ಉಚ್ಚ ಮಟ್ಟದ ಬಾಳ್ವೆಯನ್ನು ಸಾಗಿಸುವ ವಿಚಾರವದು ಬಹು ದೂರವಾದುದು. ಆದರೂ ಜೀವನಾವಶ್ಯಕವೆನಿಸಿದ ಅನ್ನ, ಬಟ್ಟೆ ಹಾಗೂ ಗೃಹೋಪಯೋಗಿ ಒಡವೆಗಳನ್ನು ಈ ನಮ್ಮ ಪಾಲಿನ ೭೫ ನಯೇ ಪೈಸೆಗಳಿಂದ ತರುವುದು ಸಾಧ್ಯವೆ? ಮಕ್ಕಳಿಗೆ ವಿದ್ಯಾಭ್ಯಾಸವನ್ನೀಯಬಲ್ಲೆವೆ? ಅಥವಾ ರೋಗಗ್ರಸ್ಥರಾಗಿ ಹಾಸಿಗೆ ಹಿಡಿದಾಗ, ಅಂಥವರನ್ನು ಯೋಗ್ಯರೀತಿಯಿಂದ ಚಿಕಿತ್ಸಿಸಿತರನ್ನಾಗಿಸುವುದರಲ್ಲಿ ಸಫಲರಾದೇವೆ?—ಇಲ್ಲ, ಇದು ಎಂದಿಗೂ ಅಸಾಧ್ಯ.

ಇದರ ಪರಿಣಾಮ ಭೀಕರವಾದುದು. ಎಲ್ಲಿ ನೋಡಿದರಲ್ಲಿ ಹಸಿವೆಯಿಂದ ಕಂಗೆಟ್ಟ ಜನರು, ಅನೈರ್ಮಲ್ಯದಿಂದಾಗಿ ಹಾಸಿಗೆ ಹಿಡಿದಿರುವ ದೇಸಿಗರು ಪ್ರತಿಯೊಬ್ಬರೂ 'ಕಷ್ಟ ಕಷ್ಟ' ಎಂಬ ನುಡಿಯನ್ನು ನುಡಿಯುತ್ತ, ತಮ್ಮ ಬಾಳ್ವೆಯನ್ನು ಸುಗಮವಾಗಿಸುವ ಸುದಿನವನ್ನೇ ಇದಿರುನೋಡುವ ಹಿರಿದಾಸೆಯಿಂದ ಕಾದಿರುವರು. ನಮ್ಮ ಜೀವನ ಮಟ್ಟವು ತೀರಾ ಕೆಳಮಟ್ಟಕ್ಕೆ ಇಳಿದಿದೆ. ಮಾನವವರ್ಗದ ಜೀವನಕ್ಕೆಂತಲೂ ನಮ್ಮ ಜೀವನ ನಿಮ್ನವರ್ಗದ್ದಿದೆ ಎಂದರೂ ಅದು ಅತಿಶಯೋಕ್ತಿಯಾಗದು. ನಮ್ಮ ವಿಶಾಲವಾದ ದೇಶ ಪೆತ್ತ? ನಮ್ಮ ಬಡಕಲು ಜೀವನವೆತ್ತ?

ನಮ್ಮ ಸ್ಥಿತಿಯು ಅದೆಷ್ಟು ಕೆಳಗಿದೆಯೆಂದು ಕೆಲದೇಶಗಳೊಡನೆ ತುಲನೆ ಮಾಡಿದರೆ ವೇದ್ಯವಾಗಬಹುದು. ನಮ್ಮ ದೈನಿಕ ಆದಾಯ ೭೫ ನಯೇ ಪೈಸೆಯಾದರೆ, ಅಮೆರಿಕದ ಪ್ರತಿಯೊಬ್ಬನ ಕೆಸಿಗೆ ಪ್ರತಿನಿತ್ಯ ೫೫ ರೂಪಾಯಿಂ ಬೀಳುತ್ತಿದೆ. ಇದರಿಂದು ಒಬ್ಬ ಅಮೇರಿಕನನ ಜೀವನ ಮಟ್ಟವನ್ನು ಸಾಮಾನ್ಯ ಭಾರತೀಯನಿಂದ ಊಹಿಸುವುದೂ ಅಸಾಧ್ಯ. ಆಂಗ್ಲೇಯ, ಫ್ರೆಂಚ್, ಜರ್ಮನರ ಆದಾಯದ ಪ್ರಮಾಣವು ಇಷ್ಟಿಲ್ಲದಿದ್ದರೂ, ನಮಗಿಂತ ಅತ್ಯುನ್ನತ ಸ್ಥಿತಿಯಲ್ಲಿದ್ದಾರೆಂಬುದು ನಿಶ್ಚಯ.

ನಮ್ಮ ವರ್ತಮಾನಕಾಲದ ಬಡತನದ ನೋವನ್ನು ಸಂಪೂರ್ಣವಾಗಿ ನಮ್ಮ ಮೇಲೆಯೇ ಹೇರಿಕೊಳ್ಳಲಾಗದು. ಬಹು ದಿನಗಳಿಂದಲೂ ನಾವು ಪರದೇಶೀಯರ ಆಡಿಯಾಳುಗಳಾಗಿದ್ದೆವು. ನಮ್ಮ ವಿದೇಶಿ ಪಡಳಿತಗಾರರು ನಮ್ಮ ವಿಕಾಸದತ್ತ ದೃಷ್ಟಿಯನ್ನೇ ಇಡುತ್ತಿರಲಿಲ್ಲ. ಅವರು ಯಾವುದೊಂದು ಕೆಲಸವನ್ನು ಕೈಗೊಂಡರೂ ಅದರಿಂದ ತಮ್ಮ ಲಾಭವನ್ನೇ ಮಾಡಿಕೊಳ್ಳುತಿದ್ದರು. ದೇಶದಲ್ಲಿ ಉತ್ಪನ್ನವಾಗುವ ಧನವನ್ನು ತಮ್ಮ ದೇಶಕ್ಕೆ ರವಾನಿಸುತಿದ್ದರು. ಇದರ ಪರಿಣಾಮವಾಗಿ ನಾವು ಉಪವಾಸ ಬಿದ್ದು ಸಾಯಬೇಕಾಗುತಿತ್ತು; ಆಗ ಅವರು ನಮ್ಮ ಉದರದಲ್ಲಿ ವೇದನೆಯು ವಾಡ್ಮವನ್ನು ಬಾರಿಸಿ ಆನಂದಪಡುತಿದ್ದರು.

ಆದರೆ ಈಗ ಭಾರತೀಯ ಪರಿಸ್ಥಿತಿ ಸಂಪೂರ್ಣ ವ್ಯತ್ಯಸ್ತಗೊಂಡಿದೆ. ನಾವು ಸ್ವತಂತ್ರರಾಗಿದ್ದೇವೆ. ನಮ್ಮ ಭಾಗ್ಯವನ್ನು ನಮ್ಮ ಮನೋಭಿಪ್ರಾಯಕ್ಕನುಸಾರವಾಗಿ ನಾವು ನಿರ್ಮಿಸಬಲ್ಲವರಾಗಿದ್ದೇವೆ. ಈಗ, ಬಡತನದಿಂದ ದೇಶ ಪತನವಾಗುವುದೆಂಬ ಸತ್ಯವಾಕ್ಯವನ್ನು ಗಟ್ಟಿಯಾಗಿ ಘೋಷಿಸಬಲ್ಲೆವು. ಒಂಜಲ್ಲ ಒಂದು ವಿಧಾನದಿಂದ ನಾವು ಬಡತನದಿಂದ ಪಾರಾಗುವುದು ಅತ್ಯಾವಶ್ಯಕವಾಗಿದೆ. ಇದಕ್ಕಾಗಿ ಯೋಜನೆಗಳನ್ನು ರೂಪಿಸುತಿದ್ದೇವೆ. ಇದರಿಂದ ನಾವು ಸುಧಾರಿಸಿಕೊಳ್ಳುವುದು ಸಾಧ್ಯ. ನಮ್ಮ ಯೋಜನೆಗಳೆಂದರೆ ಬಡತನದೆಮ್ಮರುಗೆಯ್ಯುವ ಸಂಗ್ರಾಮಗಳು. ವು ನಮ್ಮ ಜೀವನಕ್ರಮವನ್ನು ಸುಧಾರಿಸಲು ಸೊಂಟಕಟ್ಟಿದ್ದೇವೆ ಎಂಬುದರ ಮುನ್ಸೂಚನೆಗಳು.

ರಾಷ್ಟ್ರ ಪುನರ್ನಿರ್ಮಾಣದ ಈ ಮಹಾನ್ ಕಾರ್ಯದಲ್ಲಿ ಸರಕಾರದ ಪಾಲು ಅತ್ಯಧಿಕವಾಗಿದೆ. ನಾವು ನಮ್ಮ ಕರ್ತವ್ಯಗಳನ್ನು ಯೋಗ್ಯ ಪ್ರಮಾಣದಲ್ಲಿ ಪೂರ್ತಿ ಮಾಡದೆ ಹೋದರೆ, ನಮ್ಮ ಉದ್ದೇಶವು ಕೈಗೂಡುವುದು ಅಸಂಭವ. ಶಾಲೆಗಳು, ಚಿಕಿತ್ಸಾಲಯಗಳು ಮತ್ತು ಮಾರ್ಗಗಳು ಇವುಗಳ ಕೊರತೆ ನಮಗೆ ತುಂಬ ಇದೆ. ಆದರೆ, ಬೇಕೆಂದ ಮಾತ್ರಕ್ಕೆ ಇವು ಸಿದ್ಧ ರೂಪಕ್ಕೆಳೆಯಲಾರವು. ನಾವೇ ಸ್ವತಂತ್ರರಾಗಿ ದೊಡ್ಡ ನೀರಾವರಿ ಯೋಜನೆ ಯನ್ನಾಗಲೀ ಉಗಿಯಂತ್ರಗಳನ್ನಾಗಲೀ ನಿರ್ಮಿಸಲಾರೆವು. ನಮ್ಮಲ್ಲಿ ಅದಕ್ಕೆ ಬೇಕಾದ ಸಾಧನ ಸಾಮಗ್ರಿಗಳಾಗಲೀ, ಜ್ಞಾನವಾಗಲೀ ಪ್ರಕೃತಿಯಿಲ್ಲ. ಅವರೂ ಸರಕಾರದ ನೆರವಿನಿಂದ ನಾವು ಸ್ವಲ್ಪಸ್ವಲ್ಪ ಅಂಶಗಳನ್ನೂ ಕಾರ್ಯರೂಪಕ್ಕೆಳಿಸಬಲ್ಲೆವು.

ದೇಶದ ವಿಕಾಸಕ್ಕಾಗಿ ಸರಕಾರವೇ ಯೋಗ್ಯ ರೂಪದಲ್ಲಿ ಯೋಜನೆಗಳನ್ನು ರಚಿಸಬಲ್ಲುದು. ಸರಕಾರಕ್ಕೆ ಅಧಿಕ ಸಾಧನ ಶಕ್ತಿ ಮತ್ತು ಜ್ಞಾನಗಳಿವೆ. ಇನ್ನೆಷ್ಟು ಅನ್ನ ಬೇಕು, ಬಟ್ಟೆ ಬೇಕು ಮೊದಲಾದುವುಗಳ ಸಂಪೂರ್ಣ ವಿಚಾರವು ಸರಕಾರಕ್ಕೆ ಮಾತ್ರ ತಿಳಿದಿರುತ್ತದೆ. ಉತ್ತಮ ವಿಧಾನದಲ್ಲಿ ಯೋಜನೆಗಳನ್ನು ರೂಪಿಸಿ, ಉಚಿತ ನೇತೃತ್ವವನ್ನು ಸರಕಾರವೇ ವಹಿಸಬಲ್ಲುದು ಜನತೆಯು ಸರಕಾರದೊಡನೆ ಸಹಕರಿಸಿ ಈ ಯೋಜನೆಯನ್ನು ಪೂರ್ಣಗೊಳಿಸಬೇಕು. ತನ್ಮೂಲಕ ದೇಶದ ಸಮೃದ್ಧಿಯನ್ನು ಮಾಡಿಕೊಳ್ಳಬೇಕು. ಈ ಮಾತುಗಳನ್ನು ಧ್ಯಾನದಲ್ಲಿಟ್ಟುಕೊಂಡು ಸರಕಾರವೊಂದು ಯೋಜನಾ ಆಯೋಗವನ್ನು ರಚಿಸಿತು. ಅಖಂಡ ದೇಶಕ್ಕಾಗಿ ಯೋಜನೆಗಳನ್ನು ರೂಪಿಸುವುದೇ ಈ ಆಯೋಗದ ಕಾರ್ಯ. ಭಾರತವು ೧೭ ಲಕ್ಷ ಚದರ ಮೈಲುಗಳಷ್ಟು ವಿಸ್ತೀರ್ಣವುಳ್ಳ ವಿಶಾಲದೇಶ. ಇದರಲ್ಲಿ ನಾನಾ ಬಗೆಯ ಜನರು ವಾಸವಾಗಿದ್ದಾರೆ! ಜನಸಂಖ್ಯೆಯ ೬೬ ಶೇಕಡಾದಷ್ಟು ಜನರು ಭಾರತದ ಐದೂವರೆ ಲಕ್ಷ ಹಳ್ಳಿಗಳಲ್ಲಿ ಮತ್ತು ಉಳಿದ ೧೭ ಶೇಕಡಾದಷ್ಟು ಜನರು ೬೫ ನಗರ ಮತ್ತು ಪಟ್ಟಣಗಳಲ್ಲಿ ಹಂಚಿಹೋಗಿದ್ದಾರೆ. ಇವರೆಲ್ಲರ ಮೇಲೆ- ಮುಖ್ಯವಾಗಿ ಹಳ್ಳಿಗರ ಮೇಲೆ- ಪ್ರಭಾವ ಬೀಳುವಂತೆ ಯೋಜನೆಗಳನ್ನು ರೂಪಿಸುವುದು ಅಗತ್ಯ.

ಆದುದರಿಂದ ಈ ತೆರದ ಯೋಜನೆಗಳನ್ನು ರೂಪಿಸುವುದು ಬಹಳ ಕಠಿಣ ಹಾಗೂ ಜಟಿಲವಾದ ಕೆಲಸವಾಗಿದೆ. ಉತ್ತಮ ವರ್ಗದ ಯೋಜನಾ ತಯಾರಿಗೆ ಆದೆಷ್ಟೋ ವಿಷಯಗಳ ಅಧ್ಯಯನವು ಆಗತ್ಯವಿದೆ. ಹೊಸದೆಹಲಿಯಲ್ಲಿ ಯೋಜನಾ ಆಯೋಗದ ಕಾರ್ಯಾಲಯವಿದೆ. ಅವರ ಕಾರ್ಯಕರ್ತರ ಇಡೀ ದೇಶದ ಸ್ಥಿತಿಗತಿಗಳ ಸತ್ಯಸಂಗತಿಗಳನ್ನು ಒಟ್ಟುಗೂಡಿಸುತ್ತಾರೆ. ಭಾರತದ ಪ್ರಧಾನಿ ಶ್ರೀ ನೆಹರೂರವರು ಈ ಆಯೋಗದ ಅಧ್ಯಕ್ಷರಾಗಿದ್ದಾರೆ. ಇವರಿಗೆ ಆಯೋಗದ ಉಪಾಧ್ಯಕ್ಷ ಶ್ರೀ ಟಿ. ಟಿ. ಕೃಷ್ಣಮಾಚಾರಿ, ಯೋಜನಾ ಮಂತ್ರಿ ಗುಲ್ಜಾರೀಲಾಲನಂದಾರವರು ಸಹಕಾರಿಗಳಾಗಿದ್ದಾರೆ.

ಯೋಜನಾ ನಿರ್ಮಾಣವು ಕಠಿಣ ಕಾರ್ಯವಾದರೂ ಉನ್ಮೇಗ ಪೂರ್ಣವಾದುದು. ನಮ್ಮ ಜೀವನ ಮಟ್ಟವನ್ನು ಉನ್ನತಗೊಳಿಸಿ, ಭಾರತದ ಪುನರ್ನಿರ್ಮಾಣವನ್ನು ಮಾಡುವುದೇ ಈ ಯೋಜನೆಗಳ ಉದ್ದೇಶ. ನಮ್ಮ ಯೋಜನೆಗಳಿಂದಲೇ ನಮ್ಮಭಿಧ್ಯೋದಯವಾಗುವುದು ಸಾಧ್ಯ. ಅದುರಿಂದಲೇ ದೇಶದ ಪ್ರಗತಿಯೂ ಧ್ರುವ ಸತ್ಯ.

ಕೇವಲ ಯೋಜನೆಗಳನ್ನು ರೂಪಿಸಿದಲ್ಲಿ ಪ್ರಯೋಜನವಿಲ್ಲ. ಅವನ್ನು ಕಾರ್ಯಗತಗೊಳಿಸಲು ಹಣ ಬೇಕಾಗುವುದು. ಇದಕ್ಕಾಗಿ, ದೇಶದ ಅಭಿವೃದ್ಧಿ ಯೋಜನೆಗಳಿಗೆ ಹಣವನ್ನೊದಗಿಸುವುದು ನಾಗರಿಕನ

(ನನೇ ಸುಟ ನೋಡಿರಿ)

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

**ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.**

**ನಿಮ್ಮ ಜೀವನಾತಿಗಳ ಮೇಲೆ ಹೆಚ್ಚು ಬಡ್ಡಿ ಬೇಕೇ?**

ಹಾಗಿದ್ದಲ್ಲಿ, ನಿಮಗೆ ಸವಿಾಪವಿರುವ "ಕೊರ್ಪೊರೇಶನ್" ಬ್ಯಾಂಕಿನ ಶಾಖೆಯಲ್ಲಿ ವಿಚಾರಿಸಿರಿ. "ಕೊರ್ಪೊರೇಶನ್" ಬ್ಯಾಂಕು ಎಲ್ಲಾ ತರದ ಜೀವನಾತಿಗಳ ಮೇಲೆ ಬಡ್ಡಿ ದರಗಳನ್ನು ಇತ್ತೀಚೆಗೆ ಏರಿಸಿಯಿದೆ. ಆಲ್ಲದೆ ಜೀನಗಾತಿದಾರರಿಗೆ ಹೆಚ್ಚಿನ ಸವಲತ್ತುಗಳನ್ನು ನೀಡಲು, ಶರ್ತಗಳನ್ನೂ ಬದಲಾಯಿಸಿಯಿದೆ.

**51 ವರುಷಗಳ ಪರಿಶಕ್ತ ಬ್ಯಾಂಕಿಂಗ್ ಅನುಭವ!**

**7,00,00,000 ರೂಪಾಯಿಗಳಿಗೂ ಮಿರಿದ ಒಟ್ಟು ವಹಿವಾಟು!**

**THE CANARA BANKING CORPORATION LIMITED**

### ಸೂಚನೆ

'ನವಯುಗ'ದ ಚಂದಾ ಹಣ ಮತ್ತು ಜಾಹೀರಾತಿನ ಹಣವನ್ನು ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಇದರ ಯಾವುದೇ ಶಾಖೆಯಲ್ಲಿ ಯಾವತ್ತೊಂದು ತರದ ಖರ್ಚೂ ಇಲ್ಲದೆ (ನವಯುಗ ವಾರಪತ್ರಿಕೆಯ ಖಾತೆಗೆ) ಪಾವತಿ ಮಾಡಬಹುದು.

ಮನೇಜರ್.

# ಭಾರತದ ಮುಂಗಡಪತ್ರ

## ಹೊರಲಾರದ ಕರಭಾರ! ಪ್ರಗತಿಪಥದಲ್ಲಿ ಸದ್ವಿನಿಯೋಗವಾಗಲಿ

ಭಾರತಸರಕಾರದ ಹಣಕಾಸಿನ ಮಂತ್ರಿಗಳಾದ ಶ್ರೀ ಟಿ. ಟಿ. ಕೃಷ್ಣಮಾಚಾರಿಯವರು ೧೯೫೬-೫೭ರ ಮುಂಗಡ ಪತ್ರವನ್ನು ಕಳೆದವಾರ ಸಂಸತ್ತಿನಲ್ಲಿ ಮಂಡಿಸಿದರು. ಮುಂಗಡಪತ್ರದಲ್ಲಿ ಜನರ ನಿತ್ಯೋಪಯೋಗಕ್ಕೆ ಆತ್ಯಾವಶ್ಯಕವಾದ ಸುಮಾರು ೯೦ ವಸ್ತುಗಳ ಮೇಲೆ ಅಧಿಕ ಕರವನ್ನು ಸೂಚಿಸಿ ಸುಮಾರು ೬೩ ಕೋಟಿಗಳಷ್ಟು ರೂಪಾಯಿಯನ್ನು ಸಂಪಾದಿಸುವ ಯೋಜನೆಯನ್ನು ಮಾಡಿದ್ದಾರೆ ಮೊನ್ನೆ ಮಾರ್ಚ್ ತಿಂಗಳಲ್ಲಿ. ಮಂಡಿಸಿದ ತಾತ್ಕಾಲಿಕ ಮುಂಗಡ ಪತ್ರದಲ್ಲಿ ೩೬ ಕೋಟಿ ರೂಪಾಯಿಗಳ ಕೊರತೆಯು ಸೂಚಿತವಾಗಿದ್ದರೂ; ಇದೀಗ ೪೪ ಕೋಟಿಗಳ ಉಳಿತಾಯದಲ್ಲಿ ಈ ಮುಂಗಡಪತ್ರವು ಪರಿಣಮಿಸುವಂತಾಗಿದೆ. ಇದಲ್ಲದೆ ಪಂಚವಾರ್ಷಿಕ ಯೋಜನೆಯ ಉಪಯೋಗಕ್ಕೆ ಕಡಮೆ ಬೀಳುವ ೨೬೫ ಕೋಟಿ ರೂಪಾಯಿಗಳಷ್ಟನ್ನು ಟ್ರೆಜರಿ ಬಿಲ್ಲುಗಳ ಮಾರಾಟದಿಂದ ಸಂಗ್ರಹಿಸುವುದಾಗಿಯೂ ಮಾನ್ಯ ಅರ್ಥಮಂತ್ರಿಗಳು ತಿಳಿಸಿದ್ದಾರೆ.

ಈ ಮುಂಗಡಪತ್ರವನ್ನೂ ಹೊಸಕರಗಳ ಸೂಚನೆಯನ್ನೂ ನುಂಡಿಸುತ್ತ, "ದೇಶದ ಪ್ರಗತಿಗಾಗಿ ಸರಕಾರವು ಕೈಗೊಳ್ಳುವ ಪಂಚವಾರ್ಷಿಕ ಯೋಜನೆಗಾಗಿ ಪ್ರತ್ಯೇಕ ದೇಶವಾಸಿಯೂ ತ್ಯಾಗಕ್ಕೆ ಸಿದ್ಧನಾಗಬೇಕು." ಎಂದು ಹೇಳಿ, ಜನರು ಸಂತೋಷ ಮನಸ್ಕರಾಗಿಯೇ ಈ ತೆರಿಗೆಗಳನ್ನು ತೆರಲು ಸಿದ್ಧರಾಗಬೇಕೆಂದು ವಿನಂತಿಸಿದರು. ॥ ಪ್ರಧಾನಿ ನೆಹರೂ ಶ್ರೀ ದೇಭಾರವರು ಸಹ ಈ ಕರಗಳನ್ನು ಸಮರ್ಥಿಸಿ ದೇಶದ ಪ್ರಗತಿ ಕಾರ್ಯದಲ್ಲಿ ಕೈಕೊಡಬೇಕಾಗಿ ಕರೆಕೊಟ್ಟರು.

ದೇಶದ ಪ್ರಗತಿಯಿಂದಲೇ ದೇಶವಾಸಿಯ ಪ್ರಗತಿಯೂ ಸಾಧ್ಯ. ಆದುದರಿಂದ ಪ್ರಗತಿಯ ಪಥದತ್ತ ನುನ್ನಡೆಸುವ ಯೋಜನೆಗಳಿಗೆ ಜನತೆಯ ನೆರವು ಅತ್ಯಧಿಕ ಪ್ರಮಾಣದಲ್ಲಿ ದೊರೆಯುವುದು ಅವಶ್ಯಕವಾಗಿದೆ ಎಂದು ಎಲ್ಲರೂ ಒಪ್ಪುತ್ತಾರೆ. ಆದರೆ, ಸರಕಾರವು ವಿಧಿಸುವ ಪ್ರಮಾಣದಲ್ಲಿ ತೆರಿಗೆಯನ್ನು ತೆರುವ ಶಕ್ತಿಯೇ ಜನತೆಗಿಲ್ಲವಾದರೆ, ಅಂತಹ ಹೊರಲಾರದ ಹೊಸ ತೆರಿಗೆಯನ್ನು ಸಲ್ಲಿಸುವುದಾದರೂ ಹೇಗೆ? ಎಂಬುದೇ ದೊಡ್ಡ ಪ್ರಶ್ನೆ. ಸರಕಾರವು ಕಳೆದ ವರ್ಷವೇ ಸುಮಾರು ೭೦ ಕೋಟಿ ರೂಪಾಯಿಗಳಷ್ಟು ಹೊಸ ತೆರಿಗೆಗಳನ್ನು ಹೊರಿಸಿತ್ತು. ಇದೀಗ ಸುಮಾರು ೯೩ ಕೋಟಿಯಷ್ಟು ಬೆಳೆಯಿತು ಮುಂದೆ ಇನ್ನೆಷ್ಟು ತೆರಬೇಕಾಗಿದೆಯೋ ಕಾದು ನೋಡಬೇಕು. ಭಾರತದ ಪ್ರಗತಿಯನ್ನು ಬಯಸುವವನಿಗೆ ಈ ಮುಟ್ಟಿದ ತೆರಿಗೆಯು ಪ್ರಿಯವಾದುದಾದರೂ ಅದನ್ನು ಕೊಡುವ ಶಕ್ತಿಯಿಲ್ಲವೆಂದು ಹೇಳಬಹುದು.

ಕಳೆದ ವರ್ಷಕ್ಕಿಂತ ಈ ವರ್ಷ ದೇಶದ ಆರ್ಥಿಕ ಪರಿಸ್ಥಿತಿಯು ಹೀನವಾಗಿದೆ. ಸರಕಾರದ ವಿವಿಧ ಯೋಜನೆಗಳಲ್ಲಿಯೇ ಹಣವು ತೊಡಗಿದೆಯೆಂದೆ ಜನರ ಕೈಗೆ ಇನ್ನೂ ಬಂದಿ - ೇಶದ ನಾನಾ ವಲಯಗಳಲ್ಲಿ ಅನುಕೂಲ ವಾತಾವರಣಗಳೇರ್ಪಡಲಿ ಈ ವರ್ಷದ ಬೆಳೆಯು ಜನ್ನಾಗಿ ಕೈಗೆ ಬಂದಿಲ್ಲವೆಂಬ ಸುದ್ದಿಯೂ ಕೇಳಿ ಬರುತ್ತಿದೆ. ಹಾಗಿರುವಾಗ, ಆರ್ಥಿಕ ಮುಟ್ಟವು ತೀರ ಕೆಳಮಟ್ಟದಲ್ಲಿರುವ ಈ ಸಮಯದಲ್ಲಿ ಪುನಃ ಕರಭಾರವನ್ನು ಹೇರುವುದು ಸಮಂಜಸವೆಂದು ಹೇಳುವುದು ಕಷ್ಟ.

ಸಂಸತ್ತಿನಲ್ಲಿ ಈ ಹೊಸ ಕರಭಾರಗಳ ಸೂಚನೆಯು ಹೊರಬಿದ್ದೊಡನೆ ವಿವಿಧ ರೀತಿಯ ವಿರೋಧಾಭಿಪ್ರಾಯಗಳು ಪ್ರಕಟವಾದುವು. ಸಾಮಾನ್ಯತಃ ಈ ಕರಭಾರವು ಅಗತ್ಯವಾದರೂ ಸಂಸತ್ತಿನ ಸದಸ್ಯರ ಒಪ್ಪಿಗೆಯನ್ನು ಪಡೆಯುವುದು ಹೆಚ್ಚು ಸುಲಭಸಾಧ್ಯವೆನ್ನಿಸಬರುವುದಿಲ್ಲ. ಈ ಕಾವು ದೇಶದ ಎಲ್ಲ ವರ್ಗದ ಜನರಲ್ಲೂ ಹೆಚ್ಚಿ ಹೋಗುವುದೆಂಬುದು ನಿಜ; ಆದರೆ, ತೆರಿಗೆಗಳ ಭಾರವೇ ಹೊರಲಾರದಾಗ, ಮಾತ್ರ ಅಲ್ಪ ಪ್ರಮಾಣವಾದರೂ ಸಹನೀಯವಾಗಲಾರದು.

ದೇಶದ ಎಲ್ಲೆಡೆಗಳಲ್ಲೂ ಇದೀಗಲೇ ಆವಶ್ಯಕ ಪದಾರ್ಥಗಳ ಬೆಲೆ ಏರುತ್ತಾ ಬರುತ್ತಿದೆ. ಕಳೆದ ವರ್ಷಕ್ಕಿಂತ ಈ ವರ್ಷ ಪ್ರತಿಯೊಂದು ವಸ್ತುವಿನ ಬೆಲೆಯೂ ಹೆಚ್ಚಿದೆ. ಅದರೆ, ಜನರಲ್ಲಿ ಚಲಾವಣೆಯಾಗುವ ಹಣದ ಪ್ರಮಾಣವು ಕಡಿಮೆಯಾಗಿದೆ. ಅಧಿಕ ಸುಂಕ ಹೇರುವುದೆಂಬ ಸೂಚನೆಯಿಂದಲೇ ಕೆಲವೆಡೆ ಸರಕಾರುಗಳ ಬೆಲೆಯಲ್ಲಿ ಹೆಚ್ಚಳವಾದುದನ್ನು ನಾವು ಗಮನಿಸಬೇಕು. ಹೀಗೆಯೇ ಬೆಲೆಯೇರುತ್ತಾ ಹೋದರೆ, ಜನರು ಜೀವಿಸುವುದು ಹೇಗೆ ಎಂಬುದೇ ಸಮಸ್ಯೆಯಾಗುತ್ತದೆ.

ಭಾರತದ ಆರ್ಥಶಾಸ್ತ್ರಜ್ಞರಲ್ಲೇ ಪ್ರಮುಖವಾಗಿ ಸಂಪತ್ತು ಮತ್ತು ವೆಚ್ಚದ ಮೇಲೆ ತೆರಿಗೆಯನ್ನು ಹೊರಿಸಲಾಗಿದೆ. ಸುಳ್ಳು ಲೆಕ್ಕ ಬರೆಯುವ ಹವ್ಯಾಸವೂ ಅನಾವ್ಯಯವೂ ಇದರಿಂದ ದೂರವಾಗಬಹುದೆಂಬ ನಂಬುಗೆಯಿಂದ ಈ ತೆರದ ಕರವನ್ನು ಹೇರಲಾಗಿದೆ. ಆದರೆ, ಇದರ ಪರಿಣಾಮ ಹೀಗಾಗುವುದೆಂದು ತಿಳಿದಿಲ್ಲ. ಅಂಜಿಕೆಕಾರ್ಡ್, ಸಕ್ಕರೆ, ಕಾಫಿ, ವನಸ್ಪತಿ ತೈಲಗಳು, ಚಾ, ತಂಬಾಕು, ಬೆಂಕಿ ಪೆಟ್ಟಿಗೆ ಮೊದಲಾದ ನಿತ್ಯಜೀವನಕ್ಕೆ ಅತ್ಯಾವಶ್ಯಕ ಪದಾರ್ಥಗಳ ಮೇಲಿನ ಸುಂಕದಿಂದಾಗಿ ಬಡ ದೇಶದ ಜನರು ಭಾರವಾದುಸಿರನ್ನು ಬಿಡಬೇಕಾದೀತು. ಕಾಗದ ಮತ್ತು ಚಿಮಣಿ ಎಣ್ಣೆಗಳ ಮೇಲೆ ಕರ ಹೇರಿದ್ದರೂ ಅದು ಹಿಂತೆಗೆದುಕೊಳ್ಳಲ್ಪಟ್ಟಿತೆಂದು ತಿಳಿಯುತ್ತದೆ. ಕರವುಕ್ತ ಆ ಪಾಸುದೆ ಮಿತಿಗಳಲ್ಲೂ ಅಲ್ಪ ಸ್ವಲ್ಪ ಬದಲಾವಣೆಗಳಾಗಿವೆ. ರೈಲ್ವೇ ಪ್ರಯಾಣಕರ ಮೇಲೆ ಹೊಸಕರ ಬಿದ್ದಿದೆ.

ಸರಕಾರವು ಈ ಹೊಸ ಸುಂಕಗಳನ್ನು ಹೊರಿಸಲು ಇಟ್ಟುಕೊಂಡಿರುವ ಧ್ಯೇಯೋದ್ದೇಶಗಳು ಸರಕಾರದ ಆದಾಯವು ಸಾಕಷ್ಟು ಅಧಿಕವಾಗುವುದು, ಹೆಚ್ಚು ಗಳಿಸಲು ಮತ್ತು ಹೆಚ್ಚು ಉಳಿಸಲು ಸ್ಫೂರ್ತ್ಯಾಹ್ವಾನ ದೊರೆಯುವುದು, ಜನರ ದೈನಂದಿನ ಉಪಯೋಗದ ವಸ್ತುಗಳಲ್ಲಿ ಅತಿಪ್ರಸರಣ ಪರಿಣಾಮವಾಗದಂತೆ, ಅವುಗಳ ಉಪಯೋಗದ ಮೇಲೆ ವ್ಯಾಪಕ ನಿಯಂತ್ರಣವನ್ನು ಹೇರುವುದು ಮತ್ತು ಆದಾಯವು ಹೆಚ್ಚಿದಂತೆ ಕರವು ಹೆಚ್ಚುತ್ತಾ ಹೋಗುವಂತೆ ಕರದ್ವಾರೂಪದಲ್ಲಿ ಬದಲಾವಣೆಗಳನ್ನು ಮಾಡುವುದು ಇದರಿಂದಾಗಿ ದೇಶದ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವುದು ಆಗಿದೆ. ಈ ದೃಷ್ಟಿಯಿಂದ ವಿಮರ್ಶಿಸಿದರೆ, ಈ ಉದ್ದೇಶಗಳಲ್ಲಿ ಎಲ್ಲವೂ ಕೈಗೂಡುವುದು ಅಸಾಧ್ಯವಾಗಬಹುದು. ಕಾಫಿಗೆ ಬೆಲೆ ಹೆಚ್ಚಿತೆಂದು ಅದನ್ನು ಹೆಚ್ಚಾಗಿ ಬಳಸುವ ಶ್ರೀಮಂತನು ಹೆಚ್ಚಿನ ಬೆಲೆಯನ್ನು ತೆತ್ತು ಉಪಯೋಗಿಸಿಯಾನು. ಆರ್ಥಿಕ ದುಸ್ಥಿತಿಯಿಂದ ಕಂಗೆಟ್ಟ ಬಡ ರೈತನು ತಾನು ಉಪಯೋಗಿಸುವ ಅಲ್ಪ ಪ್ರಮಾಣದಲ್ಲಿ ಅದಾವ ಕಡಿತನನ್ನು ಮಾಡಬಹುದು? ಅವನಿಗೆ ಅಧಿಕ ಬೆಲೆ ತೆರುವ ಶಕ್ತಿ ಹೇಗೆ ಬರಬೇಕು? ಇವೇ ಸಮಸ್ಯೆ ಉಳಿದ ವಿಷಯಗಳಲ್ಲಿಯೂ ಉದ್ಭವಿಸುತ್ತದೆ.

ಇವೆಲ್ಲವುಗಳಿಂತಾಗಿ ಹಿರಿಯ ರಾಜಕಾರಣಿ ರಾಜಾಜಿಯವರು ಪಂಚವಾರ್ಷಿಕ ಯೋಜನೆಯು ಅವಧಿಯನ್ನು ಹೆಚ್ಚಿಸಿ ಸುಂಕಗಳನ್ನು ಕಡಿಮೆ ಮಾಡುವುದು ಶ್ರೇಯಸ್ಕರವೆಂದು ಅಭಿಪ್ರಾಯಪಟ್ಟಿದ್ದಾರೆ. ದೇಶದ ಅಭಿವೃದ್ಧಿ ಕಾರ್ಯಕ್ಕಾಗಿ ಹಣವನ್ನು ಉಳಿಸುವುದು ನಾಗರಿಕನ ಕರ್ತವ್ಯ ಆತನು ತ್ಯಾಗ ಮಾಡಬೇಕು. ಆದರೆ, ಆ ತ್ಯಾಗಕ್ಕೂ ಒಂದು ಮಿತಿಯಿದೆ. ಶಕ್ತಿ ಮೀರಿ ತ್ಯಾಗ ಮಾಡಿದರೆ, ಅದರಿಂದ ಅನರ್ಥವಾದೀತು. ಮುಂದೆ ವೃದ್ಧಾಪ್ಯದಲ್ಲಿ ಹೊಟ್ಟೆ ತುಂಬ ತಿಂಡಿಂಡು ಸುಖಿಯಾಗಿ ಬದುಕುವ ಉದ್ದೇಶದಿಂದ ಇಂದು ಉಪವಾಸ ಬೀಳಬಯಸುವಯುವಕನಂತೆ, ದೇಶದ ಸಂಪತ್ತು ಅಧಿಕವಾಗಿ ಮುಂದೆ ಸುಖಜೀವನ ಸಾಗಿಸುವ ಇರಾದೆಯಿಂದ ಇಂದು ದೊರೆಯುವ ಅರೆಹೊಟ್ಟೆಯನ್ನೆದಲ್ಲೂ ಕಡಿತ ಮಾಡಿಕೊಳ್ಳುವುದು ಸರಿಯಲ್ಲವೆಂದು ಕೆಲವರ ಅಭಿಪ್ರಾಯ.

ಯೋಜನಾಪಥಿಯನ್ನು ಮುಂದುವರಿಸುವುದರಿಂದ, ಪ್ರಗತಿ ನಿಧಾನವಾಗಬಹುದಷ್ಟೆ. ಕಾಂಗ್ರೆಸ್ ಪಾರ್ಲಿಮೆಂಟರಿ ಸಭೆಯಲ್ಲೂ ಈ ಸಂಬಂಧದ ಚರ್ಚೆಯು ನಡೆಯುತ್ತಿದ್ದು ಈ ವಿಧದ ಅಭಿಪ್ರಾಯಗಳು ಹೆಚ್ಚಿನ ಸದಸ್ಯರ ಬಾಯಿಂದ ಬಂದಿವೆ. ವಿರೋಧಿ ಪಕ್ಷಗಳವರ ಪಲೆಯೇ ತಿರುಗಿದೆ. ಅವರೆಲ್ಲರೂ "ಎಲ್ಲರನ್ನೂ ಹಿಂಡುನಂಥ ಕರಭಾರ" ಎಂಬುದಾಗಿ ಭಾವಿಸಿದ್ದಾರೆ. ಬಡ ಜನರಿಗೆ ಪರಿಹಾರ ಕೊಡುವ ಉದ್ದೇಶದಿಂದ, ಈಗ ಹೊರಿಸುವುದೆಂದು ಸೂಚಿತವಾದ ಹೊಸ ಕರಭಾರದ ಪುನರ್ವಿಮರ್ಶೆಯಾವುದೂ ಸಂಭವನೀಯ. ಹಾಗಾದಲ್ಲಿ ದೇಶದ ಬೆನ್ನೆಮೂಳೆಯಾದ ರೈತರ, ಹಾಗೂ ಕೋಟಿಗಟ್ಟಲೆಯ ಬಡ ಜನರ ಹಿತದೃಷ್ಟಿಯನ್ನಿಟ್ಟುಕೊಂಡು ಅಂತಹ ಪುನರ್ವಿಮರ್ಶೆಯಾಗುವುದು ಅಗತ್ಯ.

ಒಂದು ವೇಳೆ, ಪುನರ್ವಿಮರ್ಶೆಯು ಅಸಾಧ್ಯವಾಗಿ ನಿರೀಕ್ಷಿತ ಕರಗಳು ಕೇರಲ್ಪಟ್ಟರೆ, ಪಂಚವಾರ್ಷಿಕ ಯೋಜನೆಯ ಕಾರ್ಯಕಲಾಪಗಳು ಮುನ್ನಡೆಯುವುವು ದೇಶವಾಸಿಯು ಅಧಿಕ ಶಕ್ತಿಮೀರಿದ ತ್ಯಾಗಕ್ಕೆ ಸಿದ್ಧನಾಗಬೇಕಾಗುವುದು. ಬೆನ್ನೆಮೂಳೆ ಮುರಿಯುವಷ್ಟು ತ್ಯಾಗಕ್ಕೆ ತಯಾರಾಗಿಬೇಕಾಗಬಹುದು. ಹಾಗೆ ತ್ಯಾಗದಿಂದ ಸಂಪಾದಿಸಿದ ಹಣವು ಸದ್ವಿನಿಯೋಗವಾಗುವಂತೆ ಸರಕಾರ ಎಚ್ಚರವಾಗಬೇಕು. ಜನರಿಗೆ ಉಳಿತಾಯಮಾಡುವಂತೆ ಹೇಳಿ, ತಾನು ವೆಚ್ಚವನ್ನು ಮಾಡುವಾಗ ಎಚ್ಚರಿಕೆ ವಹಿಸದೆ ಮಾಡುವ, ಅನಾವ್ಯಯವನ್ನು ತಡೆಗಟ್ಟಿ, ಜನತೆಯು ಹಿತಕ್ಕಾಗಿಯೇ ಎಲ್ಲ ಹಣವೂ ವಿನಿಯೋಗವಾಗುವಂತೆ ಜಾಗ್ರತವಾಗಿರುವುದು ಅತ್ಯಗತ್ಯ. ಅತಿಕಷ್ಟದಿಂದ ದೇಶದ ಪ್ರಗತಿಗಾಗಿ ಒದಗಿಸಿದ ಧನವು ಅನಾವ್ಯಯಗೊಂಡರೆ, ಆದರಿಂದ ಬಡ ತೆರಿಗೆದಾರನಿಗಾಗುವ ಕಳವಳ ಅಸದಳವಾದುದು. ಅದನ್ನು ಗಮನಿಸುವುದು ಸರಕಾರದ ಕರ್ತವ್ಯ.

ದೇಶದ ರಾಷ್ಟ್ರೀಯ ಆದಾಯವು ಏರಿದೆ ಎಂದು ಲೆಕ್ಕಿಗರು ತಿಳಿಸುತ್ತಾರೆ. ಆದರೆ, ಅದರ ಪರಿಣಾಮವು ದೇಶದ ಎಲ್ಲ ಜನರ ಮೇಲೂ ಹರಡಿಲ್ಲವೆನ್ನಿಸಬಹುದು. ಪ್ರಗತಿಪಥದ ಮಾರ್ಗದರ್ಶಿಸೆಯಲ್ಲಿ ಅನೇಕ ಎಡರುತೊಡರುಗಳನ್ನು ಪ್ರಜೆಯು

(ಅನೇ ಪುಟ ನೋಡಿರಿ)

Approved by the Text Book Committee of Madras, for non-detailed study in higher Forms (vide Page 7, Fort St. George Gazette, Part I—B dated 4—5...1955).

ಬಂಗಾರನಂತಹ ಪುಸ್ತಕವೆಂದು ಸಮಗ್ರ ಕರ್ನಾಟಕದ ಪತ್ರಿಕಾ ಪ್ರಪಂಚದಿಂದ ಪ್ರಶಂಸಿಸಲ್ಪಟ್ಟ ಹೊಸ ಬಗೆಯ ಗ್ರಂಥ

ಬಿದುಕು ಬಂಗಾರ

(ಬರೆದವರು: ಕುಮಾರಸ್ವಾಮಿ)

ಹೈಸ್ಕೂಲುಗಳ IV ಯಾ Vನೇ ಫಾರ್ಮುಗಳಿಗೆ ಉಪಪಠ್ಯ ಪುಸ್ತಕವಾಗಿ ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾತಿ ಪಡೆದಿದೆ.

ಕಳೆದ ವರ್ಷ ಹಲವು ಜಾಗಸಿ ಮತ್ತು ಜಿಲ್ಲಾ ಬೋರ್ಡಿನ ಎಲ್ಲಾ ಹೈಸ್ಕೂಲುಗಳಲ್ಲಿಯೂ ಉಪಪಠ್ಯ ಪುಸ್ತಕವಾಗಿ ಆರಿಸಲ್ಪಟ್ಟಿದೆ.

ಪುಟಗಳು ೧೫೫ ಬೆಲೆ: ರೂ. ೧ : ೫೫

ಪ್ರತಿಗಳಿಗೆ ಬರೆಯಿರಿ:

ನವಯುಗ ಪ್ರೆಸ್, ಉಡುಪಿ.

# NAVAYUGA

Popular Kannada Weekly

*Founder:—*

**A. B. SHETTY,**

Former Minister for Public Health, Govt. of Madras & Govt of Mysore

# ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

| ಸಂಪುಟ | ಉಡುಪಿ | ಸಂಚಿಕೆ |
|---|---|---|
| ೩೩ | ೨೩-೫-೧೯೩೨ | ೩೩ |


## ಪ್ರಾಥಮಿಕ ಶಿಕ್ಷಕರು

ಬೆಂಗಳೂರಿನಲ್ಲಿ ನೇರಿದ ಮೈಸೂರು ರಾಜ್ಯದ ಪ್ರಾಥಮಿಕ ಶಿಕ್ಷಕರ ಪರಿಷತ್ತಿನಲ್ಲಿ ಮಾತನಾಡುತ್ತಾ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಅಧ್ಯಾಪಕರಾದ ವರಿಗೆ ಕಡಿಮೆಯೆಂದರೆ ತಿಂಗಳಿಗೆ ನೂರು ರೂಪಾಯಿಗಳ ಸಂಬಳವಾದರೂ ಸಿಗುವಂತಾಗಬೇಕೆಂದು ಅಭಿಪ್ರಾಯ ಪಟ್ಟರೆಂದು ತಿಳಿದುಬರುತ್ತದೆ. ಮುಖ್ಯ ಮಂತ್ರಿಯವರು ಹೀಗೆ ಅಧ್ಯಾಪಕರ ಬಗ್ಗೆ ಕನಿಕರದಿಂದ ಮಾತನಾಡಿದುದಕ್ಕೆ ಕೃತಜ್ಞತೆಯನ್ನು ನಾವು ಸಹ– ಅಧ್ಯಾಸ ಕರಂತೆಯೇ–ಅರ್ಪಿಸುತ್ತೇನೆ. ಆದರೆ, ಬಾಯಿಮಾತಿನ ಈ ಸಹಾನುಭೂತಿಯಿಂದಲೇ ಅಧ್ಯಾಪಕರು ಕೃಪ್ತಿಹೊಂದಲಿ ಎಂಬ ಧೋರಣೆ ಮಾತ್ರ ನಿಲ್ಲಬೇಕೆಂದು ಒತ್ತಾಯಿಸುತ್ತೇನೆ. "ಏನು, ಸಾಮಾನ್ಯ ವೇದೆಗೆ ಸಿಗುವಷ್ಟೂ ಸಂಬಳವು ಈ ಮಹಾನಗರದಲ್ಲಿ ಗೌರವಾರ್ಹ ವ್ಯಕ್ತಿಯಾದ, ಮತ್ತು ಅತ್ಯಂತ ಪವಿತ್ರ ಕಾರ್ಯದಲ್ಲಿ ನಿರತನಾದ ಪ್ರಾಥಮಿಕ ಶಿಕ್ಷಕನಿಗೆ ಸಿಗುತ್ತಿಲ್ಲವೆ? ಇದು ಪರಮಾಶ್ಚರ್ಯ!" ಎಂದು ನಮ್ಮ ಪ್ರಧಾನ ಮಂತ್ರಿಗಳು ಉದ್ಗರಿಸಿ ಹೆಚ್ಚು ಸಮಯವಾಗಿಲ್ಲ. ಆದರೆ, ಗೌರವಾರ್ಹನೂ ಪವಿತ್ರ ಕಾರ್ಯತತ್ಪರನೂ ಆದ ಶಿಕ್ಷಕನನ್ನು–ಆದರಲ್ಲೂ ಪ್ರಾಥಮಿಕ ಶಿಕ್ಷಕನನ್ನು–ಇನ್ನೆತ್ತಿಗೇನು, ನಾಳೆಗೇನು ಎಂಬ ಚಿಂತೆಯಲ್ಲಿ ಸದಾ ಪೀಡಿತನಿರುವಂತೆ ಸರಕಾರವು ಮೊದಲಿನಿಂದಲೂ ಮಾಡಿರುತ್ತದೆ; ಆರ್ಥಿಕ ದಾಸ್ಯವು ಶಿಕ್ಷಕರ ಋಣಭಾರವನ್ನು ಹೆಚ್ಚಿಸಿರುವುದಲ್ಲದೆ, ಅವರು ತಲೆ ತಗ್ಗಿಸಿ ಸಮಾಜದಲ್ಲಿ ನಡೆಯುವಂತೆಯೂ ಪರೋಕ್ಷವಾಗಿ ಪರಿಣಾಮವನ್ನು ಬೀರಿರುತ್ತದೆ. ಶಿಕ್ಷಣಕ್ಕಾಗಿ ಇಂದು ಬೇಕಾಗಿರುವುದು ಸಹಾನುಭೂತಿಪರವಾದ ಮಾತುಗಳಲ್ಲ. ಶಿಕ್ಷಕರ ಗೋಳು ತನ್ನ ಗಮನಕ್ಕೆ ಇಷ್ಟ ರತನಕ ಬಂದೇ ಇಲ್ಲವೆಂಬಂತೆ ತಾನು ಕೇವಲ ಅಜ್ಞಾನಿ ಎಂಬಂತೆ ಪ್ರಧಾನಿ ನೆಹರುಗಳು [ಮಾತನಾಡುವುದರಿಂದಲೂ ಅವರಿಗೆತ್ತ ಸಮಾಧಾನವಾಗಲಿಕ್ಕಿಲ್ಲ. "ಹೌದು, ನೂರು ರೂಪಾಯಿಯಾದರೂ ಶಿಕ್ಷಕರಿಗೆ ಸಿಗಲೇಬೇಕು—" ಎಂಬ ಮಾತನ್ನಾಡುವುದೂ ಸಮಸ್ಯೆಗೆ ಪರಿಹಾರವಲ್ಲ. ಪ್ರಾಥಮಿಕ ಶಿಕ್ಷಕರ ಸಂಬಳವನ್ನು "ನೂರು ರೂಪಾಯಿ" ಎಂದು ನಿಗದಿಗೊಳಿಸುವುದೇ ಮುಖ್ಯವಾದುದಲ್ಲ–ಅದನ್ನು ಕೂಡಲೇ ಕಾರ್ಯಗತಗೊಳಿಸಬೇಕಾದದ್ದು ಅದಕ್ಕಿಂತ ಹೆಚ್ಚು ಮುಖ್ಯ. ಪ್ರಾಥಮಿಕ ಶಿಕ್ಷಕರೂ ನೂರು ರೂಪಾಯಿ ಸಂಬಳ ತಿನ್ನುವ ದಿನ ಬರಬೇಕು; ಆದರೆ ಇಂದಲ್ಲ—ಬೆಲೆಗಳು ಈಗಿನದರ ಇಮ್ಮಡಿಯಾದಾಗ, ಸರಕಾರವೇ ಉಪಾಯಗಾಣದೆ ಸಂಬಳ ಏರಿಸಬಹುದು. ನಮ್ಮ ಜಿಲ್ಲೆಯ ಅಧ್ಯಾಪಕರನ್ನೆ ನೋಡಿದರಿ, ಹದಿನೈದು ವರ್ಷಗಳ ಹಿಂದೆ ಸಾಮಾನ್ಯ ಪ್ರಾಥಮಿಕ ಶಿಕ್ಷಕನು ಈಗಿನದರ ಅರಿವಾಸಿ ಸಂಬಳವನ್ನೂ ಪಡೆಯುತ್ತಿರಲಿಲ್ಲ. ಆದರೆ ಈಗ ಆತನ ಬಡತನ ದೂರವಾಗಿದೆ, ಆತನ ಸ್ಥಿತಿಗತಿ ಚೆನ್ನಾಗಿದೆ ಎಂದು ಹೇಳಬಹುದೆ? ಸತ್ಯ ಇದಕ್ಕೆ ದೂರವಾಗಿದೆ. ಈಗ ಸಂಬಳ ಹೆಚ್ಚಾಗಿದ್ದರೆ, ಜೀವನದ ವೆಚ್ಚವೂ ಕುಂಬಿ ಏರಿದೆ. ಆದುದರಿಂದ "ಈಗಿನ ಪರಿಸ್ಥಿತಿಯಲ್ಲಿ" ನೂರು ರೂಪಾಯಿಯಾದರೂ ತಿಂಗಳೊಂದಕ್ಕೆ ಪ್ರಾಥಮಿಕ ಶಿಕ್ಷಕನಿಗೆ ಸಂಬಳವಾಗಿ ಸಿಕ್ಕಿದರೆ ಆದೀತು ಎನ್ನುವ ತಾತ್ಪರ್ಯ ಮಾಡಿಕೊಳ್ಳಬೇಕಲ್ಲದೆ, ಇನ್ನು ಹತ್ತೂ ವರ್ಷಗಳ ಮೇಲೆ ನೂರುರೂಪಾಯಿ ಕೊಡಬೇಗುವುದಲ್ಲ. ಈಗಿನ ವಾತಾವರಣದಲ್ಲಿ ಶಿಕ್ಷಕರ ಸಹಾಯಕ್ಕೆ ಧಾವಿಸಲು ಸರಕಾರ ಏನು ಕ್ರಮ ಕೈಗೊಳ್ಳುತ್ತದೆ ಎಂಬ ವಿಷಯದ ನಿರ್ಣಯವಾಗದೆ, ಬೇರೆ ಎಲ್ಲ ಮಾತುಗಳೂ ಅರ್ಥಶೂನ್ಯವಾಗುತ್ತವೆ. ಶಿಕ್ಷಕರ ಸಂಬಳ ಏರಿಸುವುದಕ್ಕೆ ಆರ್ಥಿಕ ಅಡಚಣೆಗಳು ಸರಕಾರಕ್ಕೆ ಇವೆಯಂತೆ! ಸರಕಾರದೊಡನೆ ಏನು ಕೇಳಿದರೂ ಆಯಕೈ ಸಿಗುವ ಉತ್ತರವಲ್ಲಿ "ಆರ್ಥಿಕ ಅಡಚಣೆ"ಗೆ ಅಗ್ರಸ್ಥಾನ ಎಂಬುದು ನಮ್ಮೆಲ್ಲರ ಸಾಮಾನ್ಯ ಅನುಭವ. ಆರ್ಥಿಕ ಅಡಚಣೆಯಿಂದ ಬಳಲಿದ ಸರಕಾರವಾಗಲೀ ಸಮಯವಾಗಲೀ ಎಂದೂ ಇರಲಾರದು. ಆದರೂ ಸರಕಾರವು ಅನೇಕ ಕೆಲಸಗಳನ್ನು ಕೈಗೊಳ್ಳುತ್ತದೆ; ನಡೆಸುತ್ತದೆ; ಬೇಕಾದುದೋ ಬೇಡವಾದುದೋ ನಿಜವಾಗಿ ಜನೋಪಯೋಗಿಯಾದುದೋ ಕೇವಲ ಕಂಟ್ರಾಕ್ಟರುಗಳ ಬೊಕ್ಕಸ ಬೆಳೆಸುವಂಥದೋ—ಅಂತೂ ಕೆಲಸ ನಡೆಯುತ್ತಾ ಹೋಗುತ್ತದೆ. ಈ ಅನೇಕ ನಮೂನೆಯ ಕೆಲಸಗಳಿಗೆ ಸುರುವಲು ರಾಶಿರಾಶಿಯಾದ ಹಣ ಸರಕಾರವಷ್ಟಿದ್ದರೆ ಅದರಲ್ಲೆ ಎಲೊ ಕೆಲವು ಲಕ್ಷರೂಪಾಯಿಗಳನ್ನು ಪ್ರಾಥಮಿಕ ಶಿಕ್ಷಕರ ಮೇಲ್ಮೈಗಾಗಿ ಏಕೆ ವಿನಿಯೋಗಿಸಬಾರದು? ಒಂದು ಸಿಧಾನ ಸೌಧವನ್ನು ಕಟ್ಟಿದ, ಅದರಲ್ಲಿ ಹಣವು ಪೋಲಾಗಿದೆ ಎಂದು ಆರೋಪಿಸುವುದಕ್ಕೆ ಹಿಂಜರಿಯದವರು ನಾವು! ಹಾಗಿರುವಾಗ ಪೋಲಾಗುವ ಹಣವನ್ನೆ ಉಳಿಸಲು, ಅದು ಸಾಧ್ಯವಾಗದಿದ್ದರೆ, ವಿಧಾನ ಸೌಧದಂಥ ಕಟ್ಟಡಂಜನರಿಗೇನೇ ಕೈಹಾಕದೆ ಹಣವನ್ನುಳಿಸಿ, ಅದನ್ನು ಪ್ರಾಥಮಿಕ ಶಿಕ್ಷಕರ ಸಂಬಳ ಏರಿಸುವುದಕ್ಕೆ ಏಕೆ ಮನಸ್ಸು ಮಾಡಬಾರದು? ಮನಸ್ಸಿದ್ದಲ್ಲಿ ಮಹಾದೇವ ಎಂಬಂತೆ ಸರಕಾರದ ಪರಿಷ್ಕಾರಿಗೆ ನಿಜವಾಗಿಯೂ ಪ್ರಾಥಮಿಕ ಶಿಕ್ಷಕರ ಸಂಬಳ ಹೆಚ್ಚಬೇಕೆನ್ನುವ ಇಕ್ಕಾಂಕ್ಷೆ ಇದ್ದರೆ ದಾರಿಗಳು ಎಷ್ಟೋ ತೆರೆದಿರುತ್ತವೆ. ಆದರೆ ಆ ಮನಸ್ಸು ಎಂದು ಬಂದೀತು? ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗೆ ಕೇಳುವುದಾದರೆ, ಮೈಸೂರಿನಲ್ಲಿ ಸರಕಾರಿ ಶಾಲೆಗಳಲ್ಲಿ ಅಧ್ಯಾಪಕರಿಗೆ ಕೊಡುವ ಹೊಸ ಸಂಬಳವನ್ನು ನಮ್ಮಲ್ಲಿಯ ಖಾಸಗಿ ಶಾಲೆಗಳಿಗೂ ಅನ್ವಯಿಸಲು ಸರಕಾರ ಇಸ್ಪರ ವರೆಗೆ ಒಪ್ಪಿಲ್ಲ. ಈ ಬಗ್ಗೆ ಆರ್ಪಿಸಿದ ಮನವಿಗಳು ಇನ್ನೂ ಗಾಢನಾದ ಪರ್ಯಾಲೋಚನೆಯಲ್ಲೆ ಇವೆ ಎಂದು ಕಾಣುತ್ತದೆ. ಸಮಸ್ಯೆಗಳ ಆಶ್ಚರ್ಯಕ್ಕೆ ದೊರೆತ ಸಮಯ ಇನ್ನೂ ಸಾಕಾಗಿಲ್ಲ ಎಂಬುದೂ ಯಾವುದೇ ಆಂತಿಮ ನಿರ್ಣಯವಾಗಿವೆ ಇರವುದರ ಕಾರಣವಾಗಿರಬಹುದು. ಆದರೆ ಇವೆಲ್ಲ ಕಾಲಕಳೆಯಣದ ತಂತ್ರಗಳೆಂದೇ ಪ್ರಾಥಮಿಕ ಶಿಕ್ಷಕ ವರ್ಗ ಭಾವಿಸಿದರೆ ಅದರಲ್ಲಿ ತಪ್ಪೇನು? ಮೈಸೂರು ಸರಕಾರದವರು ನೂರು ರೂಪಾಯಿ ಸಂಬಳವನ್ನು ಶಿಕ್ಷಕರಿಗೆ ಕೊಡುವ ದೊಡ್ಡ ಮನಸ್ಸನ್ನು ಈಗಾಗಲೇ ಮಾಡಿದ್ದಿದ್ದರೂ ಚಿಂತೆಯಿಲ್ಲ– ದಕ್ಷಿಣ ಕನ್ನಡ ಜಿಲ್ಲೆಯ ಖಾಸಗಿ ಶಾಲೆಗಳ ಅಧ್ಯಾಪಕರಿಗೂ ಸರಕಾರಿ ಶಾಲೆಗಳ ಅಧ್ಯಾಪಕರ ಸಂಬಳದ ಮಟ್ಟದಲ್ಲೆ ವೇತನವನ್ನು ಕೊಡುವ ಉದಾರ ಧೋರಣೆಯನ್ನು ಈಗಿನಿಂದೀಗ ಘೋಷಿಸಲಿ; ಮತ್ತು ಹಾಗೆ, ನಿಜವಾದ ಸಹಾಯವನ್ನು ನೀಡಲಿ! ಪ್ರಾಥಮಿಕ ಶಿಕ್ಷಣದ ಸಮಿಷ್ಕರಣದ ದೆಸೆಯಿಂದ ಶಿಕ್ಷಕರ ಕೆಲಸದ ಅವಧಿಯು ಹೆಚ್ಚುವ ಸಂಭವನೀಯ ಕಾಣಿಸುತ್ತಿದೆ– ಆದುದರಿಂದ ಪಡಿತವನ್ನು ಹೆಚ್ಚಿಸಿ, ಪ್ರತಿಫಲವನ್ನು ಮಾತ್ರ ತಗ್ಗಿಸುವ ನೀತಿ ಮುಂದರಿದುದಾದರೆ ಆಸಂತೃಪ್ತಿಯೇ ಹೆಚ್ಚೀತು.

## ಸಂಕ್ಷಿಪ್ತ ಸುದ್ದಿಗಳು

### ಭಾರತದ ಪ್ರಧಾನಿ ನೆಹರೂರವರು

ತನ್ನ ಮೂರು ದಿನಗಳ ಸಿಂಹಳ ಪ್ರವಾಸವನ್ನು ಮುಗಿಸಿ ೨೦ನೇ ದಿನಾಂಕದಂದು ಮದರಾಸಿಗೆ ಆಗಮಿಸಿ, ದಕ್ಷಿಣ ಆರ್ಕಾಟು ಜಿಲ್ಲೆಯ ನೇವೇಲಿ ಎಂಬಲ್ಲಿ ೬೮ ಕೋಟಿ ರೂಪಾಯಿಗಳ ಲಿಗ್ನೈಟ್ ಯೋಜನೆಯ ಮೊದಲನೆ ಗಣಿಯ ಮಣ್ಣು ಕೀಳುವ ಕಾರ್ಯಕ್ರಮವನ್ನು ಪ್ರಾರಂಭಿಸಿದರು.

### ಆಂಧ್ರ ಕೇಸರಿ ಟಿ. ಪ್ರಕಾಶಂ

ರವರು ಅಸ್ವಸ್ಥರಾಗಿದ್ದು ಮೊನ್ನೆ ತಾ ೨೦ರಂದು ಹೈದರಾಬಾದಿನ ಜನರಲ್ ಆಸ್ಪತ್ರೆಯೊಂದರಲ್ಲಿ ತನ್ನ ಆಸ್ಸನೆ ವರ್ಷ ಪ್ರಾಯದಲ್ಲಿ ದಿವಂಗತರಾದರು ಇವರು ಮದರಾಸು, ಆಂಧ್ರ ರಾಜ್ಯಗಳ ಮಂತ್ರಿಗಳಾಗಿ, ಕಾಂಗ್ರೆಸ್ ಧುರೀಣರಾಗಿ ಹಿರಿಯ ರಾಜಕಾರಣಿಯಾಗಿದ್ದರು.

### ಕೇಂದ್ರ ಅರ್ಥಮಂತ್ರಿ

ಟಿ. ಟಿ. ಕೆ. ಯವರು ಮೊನ್ನೆ ಮಂಡಿಸಿದ ಕರಗಳನ್ನಲ್ಲದೆ ಹೊಸ ಕರಗಳನ್ನು ಈ ವರ್ಷಾಂತ್ಯದೊಳಗೆ ಮನಃ ವಿಧಿಸುವುದಿಲ್ಲ. (ದಶಂಬರ ೫೭ರವೊಳಗೆ) ಎಂದು ಲೋಕ ಸಭೆಯಲ್ಲಿ ೫೭–೫೮ರ ತಾತ್ಕಾಲಿಕ ಕರಭಾರದ ವಿಧೇಯಕದ ಚರ್ಚಾವೇಳೆಯಲ್ಲಿ ಭರವಸೆಯಿತ್ತಿದ್ದಾರೆ.

### ಕಾಮನ್‌ವೆಲ್ತ್‌ನಿಂದ

ಭಾರತವು ಹೊರ ಬರುವುದಿಲ್ಲ. ಅಂತಹ ಕಠಿಣ ಪರಿಸ್ಥಿತಿಯು ಬರಬಾರದು. ಆದರೂ ಈ ವಿಚಾರವನ್ನು ಗಂಭೀರವಾಗಿ ಪರಿಶೀಲಿಸುತ್ತಲಿದ್ದು, ನಾವು ಬಯಸದ, ನಮಗೆ ಅನಿಷ್ಟಕರವಾದ ಕ್ರಮವನ್ನು ಕೈಗೊಳ್ಳುವ ಪರಿಸ್ಥಿತಿ ತಲೆದೋರಿದರೆ, ಆಗ ಕಾಮನ್‌ವೆಲ್ತಿನಿಂದ ಹೊರ ಬರುವ ವಿಚಾರವಾಗಿ ಪರಿಶೀಲಿಸಲೇ ಬೇಕಾಗುವುದೆಂದು ಗೃಹ ಮಂತ್ರಿ ಪಂತರು ರಾಜ್ಯ ಸಭೆಯಲ್ಲಿ ದೃಢಪಡಿಸಿದರು.

### ಮೈಸೂರು ಸರಕಾರವು

ರಾಜ್ಯದ ಬೇರೆ ಬೇರೆ ಕಡೆಗಳಲ್ಲಿ ಪ್ರಲಿತವಿರುವ ಹೊಲ ಸಾಗುವಳಿ ಕಾಯಿಗಳನ್ನು ಪರಿಶೀಲಿಸಿ ಏಕರೂಪದ ಒಂದು ಕಾಯದೆಯನ್ನು ಸಿಫಾರಸು ಮಾಡಲು ಏರ್ಪಡಿಸಿದ್ದ ಸಮಿತಿಯು ಮೇ ೧೯೦೦ ದಿಂದ ಜೂನ್ ೧೯೦೯ ವರೆಗೆ ಕೊಡಗು, ದಕ್ಷಿಣ ಕನ್ನಡ, ಮತ್ತು ಉತ್ತರಕನ್ನಡ ಜಿಲ್ಲೆಗಳಲ್ಲಿ ಸಂಚರಿಸಲಿದೆ ಮಡಿಕೇರಿ, ಪೊನ್ನಂಪೇಟೆ, ವಿರಾಜಪೇಟೆ, ಪುತ್ತೂರು, ಮಂಗಳೂರು, ಕಾರವಾರ ಮತ್ತು ಅಂಕೋಲಾ ಪಟ್ಟಣಗಳಲ್ಲಿ ಸಮಿತಿಯು ಹೋದೊಡೆಯರ ಹಾಗೂ ರೈತರ ಪ್ರತಿನಿಧಿಯನ್ನು ಕಾಣಲಿವುದು.

### ಹುಬ್ಬಳ್ಳಿಯಲ್ಲಿ

ವೈದ್ಯಕೀಯ ಕಾಲೇಜೊಂದರ ಅಗತ್ಯವು ಮುಖ್ಯಮಂತ್ರಿ ನಿಜಲಿಂಗಪ್ಪನವರಿಂದ ಹಾಕಲ್ಪಟ್ಟಿತು. ಸಾಧ್ಯವಾದಷ್ಟು ಈ ಜೂನ ತಿಂಗಳಿಂದಲೇ ಈ ಕಾಲೇಜನ್ನು ಪ್ರಾರಂಭಗೊಳ್ಳುವುದೆಂದು ಅವರು ನುಡಿದಿದ್ದಾರೆ.

### ಕೇರಳದ ಮುಖ್ಯಮಂತ್ರಿ

ನೇಬೂದರಿ ಪಾದರು ಕೇಂದ್ರಸರಕಾರದ ವಿವಿಧ ಮಂತ್ರಿಗಳೊಡನೆ ವಿಜಾರವಿನಿಮಯವನ್ನು ಮಾಡಿ ಇಬೀಗ ಹಿಂದುರುಗಿದ್ದಾರೆ. ಕೇಂದ್ರ ಮತ್ತು ತಮ್ಮ ರಾಜ್ಯ ಸರಕಾರಗಳ ನಡುವೆ ಘರ್ಷಣೆ ನಡೆಯುವ ಸಂಭವವಿಲ್ಲ ವೆಂದವರು ಹೇಳಿದರು. ತಮ್ಮ ರಾಜ್ಯದ ಮುಂಗಡಪತ್ರದ ಕುರಿತಾಗಿ ಮಾತಾಡುತ್ತ, ಸದ್ಯವೇ ಶಾಸನ ಸಭೆಯ ಮುಂದಿಡುವಾಗ ಶ್ರೀಮಂತರ ಮೇಲೆ ಹೆಚ್ಚಿನ ಕರ ಹೇರುವ ಕೇಂದ್ರ ಸರಕಾರದ ಧೋರಣೆಯನ್ನು ಅನುಸರಿಸುವೆವಾದರೂ, ಜೀವನೋಪಯೋಗಿ ಸರಕುಗಳ ಮೇಲೆ ಕರ ಹೆಚ್ಚಿಸುವುದಿಲ್ಲ" ಎಂದು ಹೇಳಿದರು.

### ಸಿಂಹಳ–ಭಾರತಗಳ

ಪ್ರಧಾನಿಗಳು ಇತ್ತೀಚೆಗಿನ ನಮ್ಮ ಗಲಿಕೆಯ ವೇಳೆಯಲ್ಲಿ ಅಣ್ವಸ್ತ್ರಗಳನ್ನು ಒಪಿಸ್ಕರಿಸಬೇಕೆಂದು ಒಂದು ಜುಟ್ಟಿ ನವಿಯನ್ನು ಮಾಡಿಕೊಂಡಿದ್ದಾರೆ.

### ಹೈಡ್ರೋಜನ್ ಬಾಂಬನ್ನು

ಮಧ್ಯ ಶಾಂತಸಾಗರದಲ್ಲಿ ತಾ. ೧೫ರಂದು ಬ್ರಿಟನ್ನು ಸ್ಫೋಟಗೊಳಿಸಿತು ಇದು ಗಾನೇ ಬ್ರಿಟಿಷ್ ಅಣ್ವಸ್ತ್ರಪ್ರಯೋಗವೆಂದೂ ಈ ದೇಶದ ಐದನೆಯ ಅಣ್ವಸ್ತ್ರಪ್ರಯೋಗ ಮೂಲಿತೆಯ ಪ್ರಾರಂಭನೇ ಮೊ ಹೇಳಲಾಗಿದೆ.

### ಮದ್ರಾಸ ಬಂದರದಲ್ಲಿ

ಸಿಂಗಾಪುರದಿಂದ ಬಂದ ಹಡಗೊಂದರಲ್ಲಿಯ ೨೫೦ ಜನರು ಇನ್‌ಫ್ಲುಯೆಂಜ್ವರಪೀಡಿತರಾಗಿದ್ದರೆಂದೂ, ಆವರನ್ನು ಹಡಗಿನಲ್ಲಿಯೇ ಪ್ರತ್ಯೇಕ ಕಂಪಾರ್ಟ್‌ಮೆಂಟೊಂದರಲ್ಲಿರಿಸಲಾಗಿದ್ದು ಡಾಕ್ಟರು ರೋಗಾಣುಮುಕ್ತರೆಂದು ಪ್ರಮಾಣಿಗಿದ್ದಾರೆನ್ನುವ ವರೆಗೆಬಂದರದಲ್ಲಿ ಕಾಲಿರಿಸಲಾಗದೆಂದೂ ತಿಳಿದಿದೆ. ಈ ಜ್ವರವು ಅಂಟುರೋಗವಾಗಿದ್ದು ಬೇಗನೆ ಹರಡುವುದರಿಂದಾಗಿ ಮದ್ರಾಸ್, ಮೈಸೂರು ಮೊದಲಾದ ರಾಜ್ಯ ಸರಕಾರಗಳು ಮುಂಜಾಗ್ರತೆಯನ್ನು ಏರಿಸಿವೆ

### ಮೈಸೂರು ದಸರಾ ಉತ್ಸವವು

ಮೆರವಣಿಗೆ, ಪ್ರದರ್ಶನ ಮೊದಲಾದವುಗಳೊಡನೆ ಘಟನಾತ್ಮಕವಾಗಿ ಬದಲಾ

ಪರಿಸ್ಥಿತಿಗಳಿಗನುಗುಣವಾಗಿ ವಾಡಿಕೆ
ುಂತೆ, ನಡೆಯಬೇಕೆಂದು ಮೈಸೂರು
ುಂತ್ರಿಮಂಡಲಿಯು ನಿರ್ಧರಿಸಿದೆ. ಈ
ಂಬಂಧವಾಗಿ ರಾಮನಾಥನ್ ಸಮಿತಿ
ು ನರದಿಯನ್ನು ಚರ್ಚಿಸಿ ಅದರ ಮು
ೃ ಸಿಫಾ ಸುಗಳನ್ನು ಅನುಸರಿಸಿತು.

### ಪಶ್ಚಿಮ ಕರಾವಳಿ ಹೆದ್ದಾರಿ

ರಜನೆಯು ಯೋಜನೆಗೆ ಭಾರತ ಸರ
ರವು ತನ್ನ ಒಪ್ಪಿಗೆಯನ್ನು ಸೂಚಿಸಿದೆ.
ರವಾರದಿಂದ ಮಂಗಳೂರಿನ ವರೆಗೆ ಬ
ುಶಃ ಇನ್ನೂ ಮುಂದೆ ಇನ್ನೂರು ಮೈ
ು ಉದ್ದವಾದ ಈ ರಸ್ತೆಗೆ ಐದು ಕೋಟಿ
ೂಪಾಯಿಗಳ ಯೋಜನೆಯನ್ನು ಭಾರ
ಸರಕಾರವು ಮನ್ನಿಸಿದೆ.

### ಹೊಸಕರಭಾರದಲ್ಲಿ

ಭಾರತದ ಹಿರಿಯ ರಾಜಕಾರಣಿ ಶ್ರೀ
ಣಾಜೀಯವರು ಸಂಪತ್ತು ಹಾಗೂ
ಚ್ಚುಗಳ ಮೇಲಿನ ಕರವನ್ನು ಟೀಕಿಸು
ತ್ತಾ ಇದರ ಪರಿಣಾಮವು ಅತೀವ ದಬ್ಬಾ
ಕೆ ಕಡುದುಃಖ ಹಾಗೂ ಸಾರ್ವಜನಿಕ
ೃತಿಕ ಪತನವೆಂದು ಅಭಿಪ್ರಾಯಪಟ್ಟಿ
ದ್ದಾರೆ. ಮಹತ್ವದ ಘಟ್ಟಗಳಲ್ಲಿ ಜನತೆಯ
ತ್ಮವು ಅಧಿಕಾರಿಗಳಿಗೆ ದಾಸನಂತಿರಬೇ
ಾಗುವುದೆಂದು ಅವರು ಹೇಳಿ, ಯೋಜ
ಗಳನ್ನು ತಗ್ಗಿಸುವ ಸಲಹೆಯನ್ನು ಮಾ
ಡಿದ್ದಾರೆ.

### ಗೋವಾ ಪ್ರಶ್ನೆಯನ್ನು

ಪ್ರಧಾನಿ ನೆಹರೂ ಪ್ರಸ್ತಾಪಿಸುತ್ತಾ ಅದು
ಲದೊಳಗೇ ಭಾರತದಲ್ಲಿ ಸಮಾವೇಶ
ೂಳ್ಳುವುದೆಂಬುದು ನಿಶ್ಚಿತವೆಂದರು
ಸ್ತಾಸ್ತ್ರಗಳ ಪ್ರಯೋಗದಿಂದ ವಶಪಡಿಸಿ
ೂಳ್ಳಬಹುದಾದರೂ, ಆದರಿಂದ ಅಂತಾ
ಷ್ಟ್ರೀಯ ಪ್ರತಿಕ್ರಿಯೆಯು ನಮ್ಮ
ರುದ್ಧ ಉಂಟಾಗಿ, ಅದರಿಂದ ನಾವು
ಾರಾಗುವುದು ಸುಲಭಸಾಧ್ಯವಲ್ಲವೆಂದ
ು. ಮತ್ತು ಗೋವಾ ಪ್ರಶ್ನೆಯನ್ನು
ರೋಧಿ ಪಕ್ಷದವರೊಡನೆ ವಿಚಾರಿಸಲು
ನು ಸಿದ್ಧನಿರುವುದಾಗಿಯೂ ಹೇಳಿ
ದು.

### ಅ. ಭಾ. ಮಲೆನಾಡು ಪರಿಷತ್ತಿನ

ಷನೆ ಅಧಿವೇಶನವನ್ನು ದಿನಾಂಕ ೧೪
ಂದು ಸಿರಸಿಯಲ್ಲಿ ಉದ್ಘಾಟಿಸುತ್ತ ಕೇಂ
್ರ ಸರಕಾರದ ವಸತಿ, ಪೂರೈಕೆ ಹಾಗೂ
ಕ್ಷಿ ಶಾಖೆಗಳ ಮಂತ್ರಿ ಶ್ರೀ ಕೆ. ಸಿ
ಡ್ಡಿಯವರು ಮಲೆನಾಡು ಪ್ರದೇಶದ
ಭವೃದ್ಧಿಗಾಗಿ ಕೇಂದ್ರ ಸರಕಾರ ಮತ್ತು
ೋಜನಾ ಆಯೋಗಗಳಲ್ಲಿ ಯತ್ನಿಸುವ
ರವನೆಯಿತ್ತರು ಬಹುಕಾಲದಿಂದ ಕಡೆ
ಣಿಸಿದ ಈ ಪ್ರದೇಶವನ್ನು ಅಭಿವೃದ್ಧಿ
ೂಳಿಸಬೇಕೆಂದು ಅಧಿವೇಶದ
ೈಗಶಾಧ್ಯಕ್ಷರು ಹೇಳಿದರು.
ಮಲೆನಾಡ ಪ್ರದೇಶವನ್ನು ಹಿಂದು
ದ ಪ್ರದೇಶವೆಂದು ಸರಕಾರ ಸಾರಬೇ
ು ಇಲ್ಲಿನ ಪರಿಸ್ಥಿತಿಗಳನ್ನು ಲಭ್ಯಸಿಸಿ
ಶಿಷ್ಟ ಸಮಸ್ಯೆಗಳ ಪರಿಹಾರಕ್ಕೆ ಸೂಕ್ತ
ಲಕೆಗಳನ್ನು ಈಯುವಂತೆಯೂ, ನೈಸ
ಕ ಸಂಪತ್ತವನ್ನು ಪರಿಶೀಲಿಸುವಂತೆ
ೂ ಅಧಿಕಾರಿ, ಅಧಿಕಾರೇತರ ಮಂಡಳಿ
ೊಂದನ್ನು ಸ್ಥಾಪಿಸಬೇಕು ಎಂದು ಸರ
ಾರವನ್ನು ಕೇಳಿಕೊಳ್ಳಲಾಯಿತು.

ನವಯುಗಕ್ಕೆ ಚಂದಾದಾ
ರರಾಗಿ ಪ್ರೋತ್ಸಾಹಿಸಿರಿ.

### ಶೈಕ್ಷಣಿಕ ಸಮೀಕ್ಷೆ

ದೇಶದಲ್ಲಿ ಶೈಕ್ಷಣಿಕ ಸಮೀಕ್ಷೆಯೊಂದನ್ನು (Survey) ಕೈಗೊಳ್ಳಬೇಕೆಂದು ಭಾರತ ಸರಕಾರವು ನಿರ್ಧರಿಸಿದ್ದು ಅಕ್ಟೋಬರ್ ೧೯೩೭ ರೊಳಗಾಗಿ ಪೂರ್ಣಗೊಳ್ಳಬೇಕಾಗಿರುವ ಈ ಸಮೀಕ್ಷೆಯ ಕಾರ್ಯದಲ್ಲಿ ಮೈಸೂರು ಸರ ಕಾರವೂ ಭಾಗವಹಿಸುತ್ತಿದೆ. ಈ ಕಾರ್ಯ ಕೈಗೊಳ್ಳುವುದಕ್ಕಾಗಿ ಶಿಕ್ಷಣ ಖಾತೆಯ ಅಧೀ ನದಲ್ಲಿ ಶೈಕ್ಷಣಿಕ ಸಮೀಕ್ಷಾ ವಿಭಾಗವೊಂದ ನ್ನು ಸ್ಥಾಪಿಸಲಾಗಿದ್ದು ಅದು ಬೆಂಗಳೂರಿನಲ್ಲಿ ರಾಜ್ಯದ ಶಿಕ್ಷಣಖಾತೆಯ ಡೈರೆಕ್ಟರರಿಗೆ ಕ ಚೇರಿಗೆ ಜೋಡಿಸಲ್ಪಟ್ಟಿದೆ. ರಾಜ್ಯ ಶಿಕ್ಷಣ ಸಮೀಕ್ಷೆಯ ಅಧಿಕಾರಿಗಳು ಈ ವಿಭಾಗದ ಮುಖ್ಯಾಧಿಕಾರಿಗಳಾಗಿದ್ದಾರೆ. ಸಮೀಕ್ಷೆಯ ಪ್ರಾಮುಖ್ಯ ಅಂಶಗಳು ಕೆಳಗಿನಂತಿವೆ:—

(೧) ಶಾಲೆಗಳ ಸ್ಥಳಗಳಿಗೆ ಸಂಬಂಧಿಸಿ, ಎಲ್ಲ ವಿಧಗಳ ವಾಸ್ತವ್ಯಗಳ ಮೂಲಭೂತ ಸಮೀಕ್ಷೆ;

(೨) ಸಂವಿಧಾನದ ಅಜನೆಯ ನಿಯಮದಲ್ಲಿ ಹೇಳಿದ ನಿರ್ದೇಶಕ ತತ್ವಗಳನ್ನು ಕಾರ್ಯಗತ ಗೊಳಿಸಲು ಸಹಾಯಕವಾಗುವ ಉದ್ದೇಶದಿಂ ದ ಕೆಲವೊಂದು ಆಯ್ದ ಕ್ಷೇತ್ರಗಳ ವಿಸ್ತೃತ ವಾದ ಸಮೀಕ್ಷೆ;

(೩) ರಾಜ್ಯದಲ್ಲಿಯ ಶೈಕ್ಷಣಿಕ ಆಡಳಿತ ಪದ್ಧತಿಗಳ ಅಭ್ಯಾಸ.

ನಿರ್ದಿಷ್ಟ ಸಮಯದಲ್ಲಿ ಸಮೀಕ್ಷೆಯ ಕಾರ್ಯವನ್ನು ಮುಗಿಸಲು ಶೈಕ್ಷಣಿಕ ಸಮೀಕ್ಷೆ ವಿಭಾಗದ ಅಧಿಕಾರಿಗಳೂ ಸಿಬ್ಬಂದಿಗೂ ಸಹಕಾರ ನೀಡಬೇಕೆಂದು ಸಾರ್ವಜನಿಕರಲ್ಲಿ ವಿನ್ನಪ.

## ಉಡುಪಿ

### ಟೀಚರ್ಸ್ ಯೂನಿಯನಿನ ಕಡೆಯಿಂದ

ಶ್ರೀ ಎಫ್. ಡಾಂತಿಯವರು ಉಡುಪಿಗೆ ಆಗಮಿಸಿದ್ದ ಸೈಮೂರು ವಿದ್ಯಾರ್ಥಿಗ ಡ್ಯಾರೆಕ್ಟರೆರನ್ನು ಭೇಟಿಯಾಗಿ ವಿನ್ನತ್ತಿಳೆ ಯೊಂದನ್ನರ್ಪಿಸಿದರು. ಮೈಸೂರು ಸರಕಾರ ವು ಹೆಚ್ಚಿಸಿದ ಸಂಬಳದ ದರವನ್ನು ವಿದ್ಯಾರ್ಥಿಗ ಳ ಶಾಲಾ ಶಿಕ್ಷಕರಿಗೂ ಅನ್ವಯಿಸಬೇಕೆಂ ದೂ, ಆದಷ್ಟು ತೀವ್ರ ಪ್ರಾಥಮಿಕ ಶಿಕ್ಷಣದ ಹೊರೆಯನ್ನು ಸರಕಾರವೇ ವಹಿಸಿಕೊಳ್ಳಬೇ ಕೆಂದೂ, ಸಂಬಸರಿ ಹಾಜರಿ ಇತ್ಯಾದಿ ಕಾರಣ ಗಳಿಂದ ಈಗ ಸರ್ವಿಸಿನಲ್ಲಿರುವ ಶಿಕ್ಷಕರನ್ನು ಕೆಲಸದಿಂದ ತೆಗೆಯಬಾರದೆಂದೂ ವಿನಂತಿಸಲಾಗಿತ್ತು. ಡೈರೆಕ್ಟರರು ಸಹಾನುಭೂತಿಯನ್ನು ವ್ಯಕ್ತಪಡಿಸಿದರು. ಶ್ರೀ ಟಿ. ಎ. ಪೈಗಳೂ ಸಲಹೆಗಳನ್ನಿತ್ತರು.

**ಶ್ರೀ ನೃಸಿಂಹ ಜಯಂತಿ**— ಶ್ರೀ ಕೃಷ್ಣಾಪುರ ಮಠದ ಶ್ರೀ ವಿದ್ಯಾಧಿರಾಜ ತೀರ್ಥ ಶ್ರೀಪಾದಂಗಳವರು ತಾ. ೧೪ರಲ್ಲು ತಮ್ಮ ಮಠದಲ್ಲಿ ಶ್ರೀ ನೃಸಿಂಹ ಜಯಂತಿ ಮಹೋತ್ಸವವನ್ನು ವಿಶೇಷ ಪೂಜೆ, ಸಂತರ್ಪಣೆ ಮೊ ದಲಾದ ಧಾರ್ಮಿಕ ಶುಭ ಸಂಪ್ರದಾಯಗಳಿಗೆ ಗನುಸಾರವಾಗಿ ವೈಭವದಿಂದ ಆಚರಿಸಿದರು.

**ಬೋರ್ಡ್ ಹೈಸ್ಕೂಲಲ್ಲಿ** ತಾ. 15 ರಂದು ಜಿಲ್ಲೆಯ ತಾಲೂಕು ಯೂನಿಯನ್ನು ಪ್ರತಿನಿಧಿಗಳಾದ ಸರ್ವಶ್ರೀ ಯು. ದಾಸಪ್ಪ, ಬಿ.ವೆಂಕಟ್ರಾವ್, ಕೆ.ಪದ್ಮನಾಭ ರೈ, ಎಚ್. ಕೆ. ಪಿ. ಕೆದಿಲಾಯ, ಕೆ. ಭೋಜರಾಜ ಹೆಗ್ಡೆ ಮತ್ತಿತರರು ಸೇರಿದ ಪ. ಳ ಜಿಲ್ಲಾ ಪ್ರಾಥಮಿಕ ಅಧ್ಯಾಪಕ ಸಂಘಟನೆಯ ಕುರಿತು ವಿ ಚಾರ ವಿನಿಮಯ ಮಾಡಿದರು. ಶ್ರೀ ಬಿ. ವೆಂಕಟ್ರಾಯರು ಮೈಸೂರು ಮುಖ್ಯ ಮಂತ್ರಿಗಳ ನ್ನು ಕಂಡು ಮಾತನಾಡಿದ ವಿಷಯವನು ಸಭೆಯಲ್ಲಿ ತಿಳಿಸಿದರು.

## ಪತ್ರವ್ಯವಹಾರ

ದಾತ್ಮಿದಾರರ ಅಧಿಕಾರ್ಯಗಳಿಗೆ ನಾವು ಜವಾಬ್ದಾರರಲ್ಲ. (ಸಂ. ನ.)

### ನಮ್ಮ ಜನರಿಗೆ ಮಾನಸಾಕ್ಷಿ ಎಂಬುದಿಲ್ಲವೆ?

ಸಾರ್ವಜನಿಕ ಜೀವನದಲ್ಲಿ ಅತ್ಯಂತ ಹೀ ನಾಯಮಾನವಾದ ಕೃತ್ಯಗಳೂ ಇಂದು ನಮ್ಮ ಜನರ ಮನಸಿಗೆ ಬಾರದಿರುವುದು ಸಚೇದಾ ಶ್ಚರ್ಯದ ಸಂಗತಿ. ತಪ್ಪುಗಳ ವಿರುದ್ಧ ನಾ ವು ಪ್ರತಿಭಟನೆ ಕೊಡುವ ಬದಲಿಗೆ ಎಲ್ಲವ ನ್ನೂ ಸರಿ ಎಂದು ಒಪ್ಪಿಕೊಳ್ಳುವ ಪರಿಸ್ಥಿತಿಗೆ ಬಂದಿದ್ದೇವೆ. ಸಾರ್ವಜನಿಕ ಅಧಿಕಾರ್ಯದ ಒತ್ತಡವು ಅನೇಕ ಪಾಪಾಚರಣೆಗಳಿಗೊಂದು ತಡೆಯಾಗುತ್ತಿತ್ತು. ಆದರೆ ಇಂತಹ ಪ್ರಬಲ ಸಾರ್ವಜನಿಕ ಅಧಿಕಾರ್ಯ ಎಲ್ಲಿದೆ?

ಕಳೆದ ಕೆಲವಾರು ವರುಷಗಳಲ್ಲಿ ನಮ್ಮ ಜಿಲ್ಲೆಯಲ್ಲಿ ಹಲವಾರು ಕೊಲೆಗಳೂ, ಸಾಪ ಕೃತ್ಯಗಳೂ ನಡೆದಿವೆ. ಇವುಗಳಲ್ಲಿ ಒಂದಾವ ರೂ ಪತ್ತೆಯಾಚ್ಚಲ್ಪಟ್ಟಿದೆಯೆ? ನಮ್ಮ ದೊಡ್ಡ ಪೋಲಿಸ್ ಖಾತೆಯು ಎಷ್ಟೊಂದು ಅಧಿಕಾರದ ನೀಯವಿದೆ! ಈ ಖಾತೆಯನ್ನು ಪೋಷಿಸಲು ನಮ್ಮ ಸರಕಾರ ಪ್ರತಿ ವರುಷ ಕೋಟಿಗಟ್ಟಲೆ ರೂಪಾಯಿ ಕರ್ಚು ಮಾಡುತ್ತಿದೆ. ಅಪರಾಧಿ ಗಳನ್ನು ಕಂಡುಹಿಡಿಯಬಲ್ಲ ಕೆಲವಾದರೂ ಅಧಿಕಾರಿಗಳು ಇವರಿಗೆ ನಿಗೆರವಾದರೆ?

ಶ್ರೀ ಆರೂರು ವೆಂಕಟರಾಯರ ಕೊಲೆ ಯನ್ನೆ ಜನತೆ ಅಸ್ಪು ಬೇಗ ಮರೆಯಲಿಕ್ಕಿ ಲ್ಲ. ಆನಂತರ ಉದಿಯಾವರ ಮತ್ತು ಆಲೆ ಮೂರುಗಳಲ್ಲೂ ಕೊಲೆಯ ಆಪಾದನೆ ಬಂತು. ಇ ವು ಗ ಳಿ ಗೆ ಲ್ಲ ಕೀರ್ತಿಪ್ರಾಯವಾಗಿ ಕಿ ನ್ನಿ ಮೂ ಲೈ ಯ ಲ್ಲಿ ಶ್ರೀ ಪಿ. ಗೋಪಾಲ ನಾಯಕರ ಮನೆಯ ಇಬ್ಬರು ನಿಗರ್ತಿಕ ಪರಿಚಾರಿಕೆಯರು ಭೀಕರ ಹಾಗೂ ಅಪಾಯಾನುಪ ರೀತಿಯಲ್ಲಿ ಕೊಲ್ಲಲ್ಪಟ್ಟರು. ಉಡುಪಿ, ಕೋಟ ಮತ್ತು ಕಾಪುಸರ್ಕ್ಲಿಗೆ ಮೂರು ನಿನಗಾ ಥಿಯೇಟರುಗಳಿಗೆ ಬೆಂಕಿ ಕೊಡಲ್ಪಟ್ಟಿ ತು. ಇತ್ತೀಚೆಗೆ ಪದುಬಿದ್ರಿಯ ನರ್ತಕರೊಬ್ಬರು ಅದೃಶ್ಯರಾದರು; ಆನರ ಕಳೇಬರ ಉಲ್ಲಾಳ ದಲ್ಲಿ ಸಿಕ್ಕಿತು. ಇವುಗಳಲ್ಲಿ ಯಾವುದೊಂದೂ ಪತ್ತೆಯಾಗಿದೆಯೆ? ಜಿಲ್ಲಾ ಕಾಂಗ್ರೆಸ್ ಸಮಿ ತಿಯ ಸದಸ್ಯರೊಬ್ಬರ ಕೊಲೆಯಾಗಿದೆ; ಕೊ ಲೆಗಾರನನ್ನು ಕಂಡುಹಿಡಿವಂತೆ ತೋರುವು ದಿಲ್ಲ.

ಇಂತಹ ಹೀನ ಕೃತ್ಯಗಳಾಗುತ್ತಿದ್ದರೂ ನಮ್ಮ ಸಾರ್ವಜನಿಕರ ಮನಸ್ಸು ಕೆದರದಿರು ವುದು, ಆಥವಾ ನಮ್ಮ ಸಮಾಜ ಇಂತಹ ಪಾಪಿಗಳಿಗೆ ಆಶ್ರಯ ಕೊಡುತ್ತಿರುವುದು ಶು ದ್ಧ ನಾಚಿಕೆಗೇಡಿ. ಪಾಪಾಚರಣೆಯಿಂದ ಪ್ರ ಯೋಜನವಿಲ್ಲವೆಂಬುದನ್ನು ನಾವಿನ್ನೂ ತೋರಿ ಸಿ ಕೊಟ್ಟಿಲ್ಲ.

ಕೊಲೆ ಮಾಡಿದರೆ ಏನಾಗುವೆನೆಂಬುದೆ ನ್ನು ನಮ್ಮ ಜನರಿಂದು ತಿಳಿದಿದ್ದಾರೆ. ಆರಂಭ ದಲ್ಲಿ ಸ್ವಲ್ಪ ಗಲಭೆ-ಹೆಚ್ಚಿಗೆ ದುಡ್ಡು ಕೊಟ್ಟು ಬುದ್ಧಿವಂತ ವಕೀಲರೊಡನೆ ವಿಚಾರವಿನಿಮ ಯ—ಸಾಕ್ಷ್ಯ ಸಿಗದಂತೆ ಸರ್ವ ಪ್ರಯತ್ನ- ಅನುಕೂಲ ಸ್ಥಿತಿಯ ಮೆಡಿಕಲ್ ಸರ್ಟಿಫಿಕೇ ಟು-ಪೋಲಿಸರ ಇಷ್ಟದಂತೆ ಹೇಳಿಕೆಕೊಡುವ ನರಪರಾಧಿಯೊಬ್ಬನ ನೆದಸ್ತಗಿರಿ-ಯಾವ ಕೋ ರ್ಟಿನಲ್ಲೂ ನಿಲ್ಲಲಾರದ ರೀತಿಯಲ್ಲಿ ಮೊಕದ್ದ ಮೆಯ ನಿರೂಪಣೆ—ಆನಂತರ ಪರದೆಯ ನೇಲೆ ಸಂಯುಕ್ತವು. ನರಪರಾಧಿಯ ಬಿಡುಗ ಡೆಯಾಗುವುದು. ಈ ವಿಷಯಗಳಿಗೆಲ್ಲ ಜೆಟ್ಟಿನ ಪ್ರಚಾರ ನಿಗದಂತೆ ಜಾಗರೂಕತೆ ವಹಿಸಿಕೊ ಳ್ಳಲಾಗುವುದು. ಆ ಮೇಲೆ, ಇದೀ ದುರ್ಘಟ ನೆಯ ನೆನಪೇ ಹೋಗುವುದು. ಮತ್ತೆ ನೆನಪಾ ಗುವುದು ಇನ್ನೊಂದು ಕೊಲೆಯಾದಾಗ!

ಇವನ್ನೆಲ್ಲ ನೋಡಿ ನೋಡಿ ಸಾರ್ವಜನಿಕರಿ ಗೆ ಜಿಗುಪ್ಸೆ ಉಂಟಾಗಿರುವುದು. ಈ ಗೀಳಿಗ ಕೊಲೆಯ ವರ್ತಮಾನ ಕೇಳಿದೊಡನೆ ಇದೇ ದಿಗೂ ಪತ್ತೆಯಾಗುವುದಿ ಲ್ಲವೆಂಬ ನಿರ್ಣಯಕ್ಕೆ ಜನರು ಬರುತಿದ್ದಾರೆ. ಇಂತಹ ವಿಷಯಗಳಲ್ಲಿ ನ್ಯಾಯ ದೊರೆಯುವು ದಿಲ್ಲವೆಂದು ಸ್ವಭಾವತ ಜನರು ನೆನಸುತ್ತಾರೆ. ನ್ಯಾಯ ಪಾಲನೆ ಮತ್ತು ಸಾರ್ವಜನಿಕ ರಕ್ಷಣೆಗಾಗಿ ಸರಕಾರ ಕೋಟಿಗಟ್ಟಲೆ ರೂಪಾಯಿ ಕರ್ಚುಮಾಡುತ್ತಿದ್ದರೂ ಈ ಕಾರಣದಿಂದ ಜನರ ಮನಸಿನಲ್ಲಿ ಸರಕಾರದ ಮೇಲಿದ್ದ ಸದ್ಭಾವನೆ ನೂಯವಾಗುತ್ತಿದೆ. ಜನರ ಜೀವಕ್ಕೆ ಇಲ್ಲಿ ಬೆಲೆಯೇ ಇಲ್ಲವೆ? ಸಾರ್ವಜನಿಕರಿಗೆ ಇದರ ಮೇಲೆ ಲಕ್ಷ್ಯವೇ ಇಲ್ಲವೆ? ಕೊಲೆಗಾಯಿತ್ರಿ ಯಾದವರ ಸಂಬಂಧಿಕರು ಈ ವಿಷಯದಲ್ಲಿ ಅಸಹಾಯಕರಾಗಿದ್ದರೆ ಸಾರ್ವಜನಿಕರು ಸಹಾ ಯ ನೀಡಬೇಕು. ಇದು ನಮ್ಮ ಕರ್ತವ್ಯ. ಕೊಲೆಯ ಪತ್ತೆಹಚ್ಚಲು ಪೋಲಿಸರು ಪ್ರಯ ತ್ನಿಸಲಿ ಯಾ ಪ್ರಯತ್ನಿಸದಿರಲಿ—ಸರಕಾರದಿಂ ದ ನ್ಯಾಯ ಕೇಳುವ ಹಕ್ಕು ಜನರಿಗಿದೆ. ನ್ಯಾ ಯ ಸಿಗುವತನಕ ಎಂದಿಗೂ ತೃಪ್ತರಾಗಕೂ ಡದು. ನಮ್ಮ ಮನಸಾಕ್ಷಿಯು ಎಚ್ಚೆತ್ತಿರ ಬೇಕು. ಇಂತಹ ಪಾಪಾಚರಣೆಗಳು ನಿಲ್ಲಲಿ ಎಂದು ಧ್ವನಿಕೊಡುವ ಎದೆಗಾರಿಕೆ ನಮ್ಮಲ್ಲಿ ಬರಬೇಕು. ಇದರ ತೆರೆಯ ಮರೆಯಲ್ಲಿ ಪ್ರತಿ ಭಾವಂತರೂ, ಶ್ರೀಮಂತರೂ ಇರಬಹುದೆಂಬ ಭೀತಿ ನಮಗೆ ಬೇಡ. ಇಂಥವರಿಂದ ಬಡವರಿ ಗೆ ರಕ್ಷಣೆ ನೀಡದ ಸರಕಾರವು ಜನರ ನಿಶ್ವಾಸ ವನ್ನು ಕಳೆದುಕೊಳ್ಳುವುದು.

ಆದುದರಿಂದ ಈ ಪಾತಕಗಳ ಸತ್ಯ ಶೋ ಧನೆಯ ಬಗ್ಗೆ ಜನರು ಎಚ್ಚರಗೊಳ್ಳಬೇಕು, ಪತ್ರಿಕೆಗಳೂ ಈ ಕುರಿತು ಸಹಕರಿಸಬೇಕು, ಜನತಾ ಅಭಿಪ್ರಾಯವು ಬಲಿಯಬೇಕು. ಈ ಪಾತಕಗಳನ್ನು ಪತ್ತೆಹಚ್ಚಲು ಯುಕ್ತಕಾರ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆಯೆಎಂಬುದು ಸಂಬಂಧಪಟ್ಟ ರಿಕಾರ್ಡುಗಳನ್ನು ತರಿಸಿ ಸರ ಕಾರ ವಿಮರ್ಶಿಸಬೇಕು, ಮತ್ತು ಸಾರ್ವಜನಿ ಕರಿಗೆ ತಕ್ಕ ಸಮಾಧಾನಕೊಡಬೇಕು. ಇಲ್ಲ ವಾದರೆ ಸರಕಾರ ಹಾಗೂ ಜನತೆಗೆ ಜವಾಬ್ದಾ ರರಾಗಿರುವ ಅಧಿಕಾರಿಗಳೂ ಪಾತಕದಲ್ಲಿ ಸಹ ಭಾಗಿಗಳಾಗುತ್ತಾರೆ.

ಇವರೆಲ್ಲಿ ರಾಜಕೀಯ ಪಕ್ಷಗಳ ಪಾತ್ರನೇ ನು? ಜನತಾ ಸೇವೆಯಲ್ಲಿ ಈ ಪಕ್ಷಗಳಿಗೆ ಆ ಸಕ್ತಿ ಇದೆಯೆ? ಇದ್ದರೆ ಇಂತಹ ಪಾತಕಿಗಳ ನ್ನು ಶಿಕ್ಷೆಗೆ ಗುರಿಪಡಿಸಿ ಇನ್ನು ಮುಂದಾದರೂ ನಮ್ಮ ನವಾಜದಲ್ಲಿ ನಾಗರಿಕ ಜೀವನವು ಸಭ್ಯಗೊಳಿಕೆಬೇಕೆಂದು ಅ ವ ರೇ ಕೆ ಬಹಿರಂಗವಾಗಿ ಕೇಳಿಕೆಯನ್ನು ಮುಂದಿಡು ವುದಿಲ್ಲ? ಇಂಗ್ಲಾಂಡು ಮೊದಲಾದ ದೇಶಗ ಳಲ್ಲಿ ಇಂತಹ ಪಾಪಾಚರಣೆಯನ್ನು ಎಸ್ಪಕ್ಕೂ ಸಹಿಸರು. ಇವನ್ನು ಪತ್ತೆಹಚ್ಚಲು ಪೋಲಿಸ ರೊಂದಿಗೆ ತಮ್ಮ ಕರ್ತವ್ಯವೆಂದೇ ಅಲ್ಲಿ ಪ್ರತಿ ಯಬ್ಬ ನಾಗರಿಕನೂ ತಿಳಿಯುತ್ತಿದ್ದ.

ಜನತಾದ್ರೋಹಿಗಳಿಂದ ಜನರನ್ನು ರಕ್ಷಿ ಸಲು ಬಲವಾದ ಜನತಾ ಅಭಿಪ್ರಾಯ ರೂಪಿ ಸುವುದೇ ಇಂದಿನ ಮುಖ್ಯ ವಿಷಯ.

"ವಿಚಾರಿ"




ಹೊಸಕೆರೆ
ಚಿದಂಬರಯ್ಯನವರ
ಭಗವದ್ಗೀತೆಯ
ಸಮೂಲ ಭಾಷಾಂತರ
ಪೊಕೆಟ್ ಎಡಿಷನ್.
ಸುಮಾರು 450 ಪುಟಗಳು
ಕ್ರಯ 0—12—0
ನವಯುಗ ಪ್ರೆಸ್, ಉಡುಪಿ.

## ಹರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ವೆಂದ ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕೀರ್ತನವನ್ನೂ ಮಹಿಮಾ ವರ್ಣನೆ ಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ.

ಬೆಲೆ: ೦—೨—೦

ನವಯುಗ್ ಪ್ರೆಸ್, ಉಡುಪಿ

## ಭಾರತದ ಮುಂಗಡಪತ್ರ

(ಜನೇ ಪುಟದಿಂದ)

ಅನುಭವಿಸಬೇಕು. ಆದಕ್ಕಾಗಿ ದುಡಿಯುಬೇಕು. ಆದರೆ, ದೇಶದಲ್ಲಿ ಸಮಸ್ಯೆಗಳು ಹೆಚ್ಚುವುದೇ ಗಮನಕ್ಕೆ ಬರುವುದಲ್ಲದೆ ಪ್ರಗತಿ ಸುಲ್ಲ. ಸ್ವಾತಂತ್ರ್ಯ ಪ್ರಾಪ್ತಿಯ ಅನಂತರ ದೇಶದ ಆರ್ಥಿಕ ನುಟ್ಟವು ಸುಧಾರಿಸಿಲ್ಲ. ದಿನೇದಿನೇ ಅಧೋಗತಿಗೇನೇ ಇಳಿಯುತ್ತಿದೆ. ಇದಕ್ಕೆ ಹಲವಾರು ಕಾರಣವಿರಬಹುದು. ಆದರೂ, ಸರಕಾರದ ಆನಾವಸ್ಥೆಯೂ ಒಂದೆಂದು ಹೇಳಬಹುದು. ಆದುದರಿಂದ ಸರಕಾರವು ಜನತೆಗೆ ಉಳಿತಾಯದ ಉಪದೇಶವನ್ನೀಯುವುದರೊಂದಿಗೆ ತಾನೂ ಆ ವಿಧಾನವನ್ನು ಕೈಗೊಳ್ಳುವುದು ಆಗತ್ಯವಲ್ಲವೆ? ಅನಾವ್ಯಯವನ್ನು ತಡೆಗಟ್ಟುವುದು ಅದರ ಕರ್ತವ್ಯವಲ್ಲವೆ? ಸರಕಾರ ಇದನ್ನು ಗಮನಿಸಬೇಕು.

ನಾವು ಸಮಾಜವಾದೀ ಸಮಾಜವನ್ನು ಸ್ಥಾಪಿಸುವ ಬೃಹತ್ ಸಿದ್ಧಾರಿ ಮಾಡಿದ್ದೇವೆ. ಈ ಕರಗಳನ್ನು ಹೊರಿಸುವಾಗ, ಆ ಧ್ಯೇಯವನ್ನೂ ಮನಸ್ಸಿನಲ್ಲಿಟ್ಟುಕೊಂಡಿದೆಯೆಂದು ತಿಳಿಯುತ್ತದೆ. ಆರ್ಥಿಕ ಮಂತ್ರಿಗಳು ತಮ್ಮ ಬಜೆಟ್ ಭಾಷಣವನ್ನು ಮುಕ್ತಾಯಗೊಳಿಸುತ್ತಾ, "ನಮ್ಮ ಮುಂದಿರುವ ಮಹತ್ಸಾಧನೆಯು ನಮ್ಮ ಯೋಜನೆಯ ಅನುಷ್ಠಾನಕ್ಕೆ ಸದ್ಯದಲ್ಲಿ ಆಗಕ್ಯವೆನಿಸುವ ಸಂಪನ್ಮೂಲಗಳನ್ನು ಹೆಚ್ಚಿಸುವುದಷ್ಟೇ ಅಲ್ಲ, ಮುಂಬರುವ ವರ್ಷಗಳಲ್ಲಿ ಜನಭವೃದ್ಧಿ ಪ್ರಯತ್ನಗಳ ಅಧಿಕ ಹೊರೆಯನ್ನು ಹೊರೆದುಕೊಳ್ಳುವಂತಹ ತೆರಿಗೆಯ ರಚನೆಯನ್ನು ಕೈಕೊಳ್ಳುವ ಪ್ರಯತ್ನವನ್ನೂ ಇದರಲ್ಲಿ ನೂಡಲಾಗಿದೆ" ಎಂದು ತಿಳಿಸುತ್ತಾ ಅನ್ಯಾಯ ಇಥವಾ ಅಸಮಾನತೆಯ ವೈಪರೀತ್ಯವನ್ನು ಪೂರ್ಣವಾಗಿ ತೊಡೆದು ಹಾಕಲು ರಾಷ್ಟ್ರೀಯ ಪ್ರಮಾಣದಲ್ಲಿ ತ್ಯಾಗ ಮಾಡಬೇಕೆಂದು ಮನವಿ ಮಾಡಿಕೊಂಡರು. ಈ ಮಾತುಗಳನ್ನು ಪ್ರಜೆಗಳು ಗಮನಿಸಬೇಕು. ಸರಕಾರ ತನ್ನ ಕಾರ್ಯಗಳಲ್ಲಿ ಯೋಗ್ಯ ದೃಷ್ಟಿಯನ್ನಿಟ್ಟರೆ ನೂತ್ರ ಈ ತ್ಯಾಗದ ಸಫಲತೆಯಾದೀತು- ಹಾಗಾಗಬಹುದೆಂದು ನಿರೀಕ್ಷಿಸೋಣ.

(ಬರೆದು ಬಂದುದು.)



ನಾಗರಿಕ ಯುದ್ಧದಲ್ಲಿ ಸಾರಿಗೆ ಸಂಪರ್ಕಕ್ಕೆ ಒಂದು ಮಹತ್ವದ ಸ್ಥಾನವಿದೆ. ಭಾರತವು ತನ್ನ ದ್ವಿತೀಯ ಪಂಚವಾರ್ಷಿಕ ಯೋಜನಾವಧಿಯಲ್ಲಿ ರಾಷ್ಟ್ರೀಯ ಹೆದ್ದಾರಿ ನಿರ್ಮಾಣದ ಕಾರ್ಯವನ್ನೂ ಕೈಗೊಂಡಿದೆ. ಚಿತ್ರದಲ್ಲಿ ಈ ಸಂಬಂಧದ ಹಲವು ದೃಶ್ಯಗಳನ್ನು ಕಾಣಬಹುದು.

ಚಿತ್ರ ೧. ಮಾರ್ಗ ನಿರ್ಮಾಪಕರ ತಂಡವೊಂದು ನವೀನ ನಿರ್ಮಿತ ರಸ್ತೆಯೊಂದರ ಮೇಲ್ಚಾಗವನ್ನು ಸಿದ್ಧಗೊಳಿಸುತ್ತಿದ್ದಾರೆ.

ಚಿತ್ರ ೨. ಕೇಂದ್ರ ಮಾರ್ಗ ಸಂಶೋಧನಾ ಸಂಸ್ಥೆಯಲ್ಲಿ ಸುಧಾರಿತ ಎತ್ತಿನ ಗಾಡಿಯ ಚಕ್ರವನ್ನು ಯಂತ್ರದ ಸಹಾಯದಿಂದ ಪರೀಕ್ಷಿಸಲಾಗುತ್ತಿದ್ದಾರೆ.

ಚಿತ್ರ ೩. ಭಾರತ-ನೇಪಾಳ ಮಾರ್ಗದ ಸುಂದರ ದೃಶ್ಯವೊಂದು. ಈ ಮಾರ್ಗವು ನೇಪಾನೋಪಾದಿಯಲ್ಲಿ ರಚಿಸಲ್ಪಟ್ಟು ವಾಸ್ತು ಶಿಲ್ಪದ ಮಹತ್ಸಾಧನೆಯಾಗಿರುವುದು.

## ಎಲ್ಲೆಲ್ಲಿ ಏನೇನು?

**ಉದ್ಯಾವರ**- ಮೊಗವೀರ ಸಮಾಜದ ಅಧ್ಯ ವ್ಯಕ್ತಿಗಳೂ ದಾನ-ಧರ್ಮನಿಷ್ಠರೂ ಜನಪ್ರೀತರೂ ಆದ ಉದ್ಯಾವರ ಶ್ರೀ ಸದಿಯ ಸಾಹುಕಾರರು ತಾ. 16ರಲ್ಲು ತಮ್ಮ ಸ್ವಗೃಹದಲ್ಲಿ ನಧನರಾದರೆನ್ನಲು ವಿಷಾದವಾಗುತ್ತದೆ. ಇವರ ಸ್ಮಶಾನ ಯಾತ್ರೆಯಲ್ಲಿ ಬಹು ಜನರು ಸೇರಿದ್ದರು. ದಿವಂಗತರ ಆತ್ಮಕ್ಕೆ ಚಿರಶಾಂತಿಯನ್ನು ಕೋರುವೆವು.

**ಸಂತಾಪಸೂಚಕ ಸಭೆಯು**— ತಾ 17ರಲ್ಲು ದಿವಂಗತರ ಮನೆಯಲ್ಲಿ ಡಾ. ಎಸ್. ಆರ್. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕಾಡಿಯ ಗುರಿಕಾರರು ಸ್ವಾಗತಿಸಿದರು. ಶ್ರೀ ಯು. ಎಸ್. ನಾಯಕ್, ಎಮ್. ಎಲ್. ಎ. ಅವರು ದಿವಂಗತರ ಭಾವಚಿತ್ರಕ್ಕೆ ಹೂಮಾಲೆಯನ್ನರ್ಪಿಸಿದರು. ಬಳಿಕ ಶ್ರೀ ಗಳಾದ ಭಾಸ್ಕರ ಸೆಟ್ಟಿ, ಎನ್. ಡಿ. ಕೆಮ್ಮುರ್, ವೈ. ಕಾಂತಪ್ಪ ಶೆಟ್ಟಿ, ಸೋಮಾಲ ಶೆಟ್ಟಿ, ಡಿ. ಎ. ಕರ್ಕೇರ ಮತ್ತು ಕುಪ್ಪ ಬಂಗೇರರು ಕಾಲೋಚಿತ ಮಾತುಗಳನ್ನಾಡಿದರು. ನಂತರ ಸಂತಾಪಸೂಚಕ ನಿರ್ಣಯವಾಯಿತು. ದಿವಂಗತರಿಗೆ ಯೋಗ್ಯ ಸ್ಮಾರಕವೊಂದನ್ನು ನಿರ್ಮಿಸಲು ಡಾ. ಎಸ್. ಆರ್. ಪೈ, ಶ್ರೀಗ ಳಾದ ಯು. ಎಸ್. ನಾಯಕ್, ಎಮ್. ಎಲ್. ಎ, ಟಿ. ಎ. ಪೈ, ಆನಂದ ಮೆಂಡನ್, ಆರ್. ಬಿ. ಕರ್ಕೇರ, ಎಮ್. ಕೆ. ಕಾಂತಪ್ಪ, ಕೆ. ಆರ್. ಬಂಗೇರ ಮೊದಲಾದವರಿರುವ ಕಮಿಟಿ ರಚಿಸಲ್ಪಟ್ಟಿತು.

**ಕೆಳಕಾರ್ಕಳಬೆಟ್ಟು**— ಸ್ಥಳೀಯ ಬೋರ್ಡು ಎಲಿಮೆಂಟರಿ ಶಾಲೆಯ ವಾರ್ಷಿಕೋತ್ಸವವು ತಾ. 16ರಲ್ಲು ಶ್ರೀ ಎ. ಜಿ. ಆಳ್ವರವರ ಅಧ್ಯಕ್ಷತೆಯಲ್ಲಿ ಜರಗಿತು. ಉತ್ಸವದ ಆಂಗವಾಗಿ ಶ್ರೀ ಟಿ. ಎ. ಪೈಗಳು ಬೆಳಿಗ್ಗೆ ಧ್ವಜಾರೋಹಣಮಾಡಿದರು. ಸಂಜೆ ಕಾರ್ಯಕ್ರಮದಲ್ಲಿ ಶ್ರೀ ಕೆ. ವಿಶ್ವನಾಥ ಹೆಗ್ಡೆ, ಎಜ್ಯೋಕೇಟ್ ಬೆಂಗಳೂರು, ಅವರು ಸ್ವಾಗತಭಾಷಣ ಮಾಡಿದರು. ಹೆಡ್ಮಾಸ್ಟರ್ ಶ್ರೀ ಎಮ್. ಸುಂದರೆ ಸೆಟ್ಟರು ವರದಿಯನ್ನೋದಿದರು ಸಭೆಗೆ ಸರಿವಾಗಿ ಶ್ರೀ ಸುಬ್ಬಣ್ಣ ಸೆಟ್ಟರು ಭಾಷಣವಿತ್ತರು.

**ಪಡುಬಿದ್ರೆ**- ದ. ಕ. ಜಿಲ್ಲಾ ಸಂಸ್ಕೃತ ಶಾಲಾಧ್ಯಾಪಕರ ಸಮ್ಮೇಳನವು ತಾ. 10 ರಲ್ಲು ಪಡುಬಿದ್ರೆಯಲ್ಲಿ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಟಿ. ವೆಂಕಟರಮಣಾಚಾರ್ಯರು ಸ್ವಾಗತಿಸಿದ ಬಳಿಕ ಶ್ರೀ ಕೆ. ರಮಾನಾಥಾಚಾರ್ಯರು ಸಮ್ಮೇಳನದ ಧ್ಯೇಯ ಧೋರಣೆಗಳನ್ನು ವಿವರಿಸಿದರು. ಶ್ರೀಗಳಾದ ವೈ. ಆರ್. ಉಡುಪ ಎನ್. ಎಸ್. ಆನಂತಕೃಷ್ಣಾಚಾರ್, ಆರ್. ಎ. ಬನ್ನಂಜೆ, ಮೊದಲಾದವರು ಸಂದರ್ಭೋಚಿತ ಮಾತುಗಳನ್ನಾಡಿದರು. ಸಭಾಧ್ಯಕ್ಷರು ತಮ್ಮ ಭಾಷಣದಲ್ಲಿ ಸಂಸ್ಕೃತವು ಎಲ್ಲಾ ಭಾಷೆಗಳಿಗೂ ಮಾತೃಸ್ಥಾನದಲ್ಲಿರುವುದೆಂದೂ ಅದನ್ನು ಉಳಿಸಿ, ಬೆಳೆಸಿ, ಮೆರೆಸುವುದು ಭಾರತೀಯರ ಆದ್ಯ ಕರ್ತವ್ಯವೆಂದು ಹೇಳಿದರು.

**ಕುತ್ಕಿಕಟ್ಟೆ**—ಸ್ಥಳೀಯ ಎಯಿಡೆಡ್ ಎಲಿಮೆಂಟರಿ ಶಾಲೆಯ ಹೊಸ ಕಟ್ಟಡವನ್ನು ತಾ 16ರಲ್ಲು ಜಿಲ್ಲಾ ಕಲೆಕ್ಟರ್ ಶ್ರೀ ಎಚ್. ನರಸಿಂಹಸವರು ನೆರವೇರಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಮೈಸೂರು ಶಿಕ್ಷಣ ಡೈರೆಕ್ಟರ್ ಶ್ರೀ ಬಿ. ಎಮ್. ಕೃಷ್ಣನ್, ಅವರು ವಹಿಸಿದ್ದರು. ಕಟ್ಟಡ ಸಮಿತಿ ಅಧ್ಯಕ್ಷ ಶ್ರೀ ಟಿ. ಎ. ಪೈಗಳು ಸ್ವಾಗತ ಭಾಷಣಮಾಡಿದರು. ಕಾರ್ಯದರ್ಶಿ ಶ್ರೀ ಗುರುರಾಜಭಟ್ಟರು ಕಟ್ಟಡ ನಿರ್ಮಾಣ ವರದಿಯನ್ನೋದಿದರು ಶ್ರೀಮತಿ ಪ್ರೇಮಾ ಎ. ಪೈಗಳು ಶಿಕ್ಷಾವಿಹಾರ ಕೇಂದ್ರದ ಉದ್ಘಾಟನೆ ಮಾಡಿದರು. ಶ್ರೀ ಎ. ಜಿ. ಆಳ್ವರವರು ಶಾಲಾ ಮೆನೇಜರ್ ಶ್ರೀ ಗಿರಿಯಣ್ಣ ಸೆಟ್ಟರ ಭಾವಚಿತ್ರ ಅನಾವರಣ ಮಾಡಿದರು. ಶ್ರೀ ಎಫ್. ದಾಂತಿಯವರು ಸಂದರ್ಭೋಚಿತ ಮಾತುಗಳನ್ನಾಡಿದರು. ಶ್ರೀ ಟಿ ಎ. ಪೈಗಳು ಧನ್ಯವಾದಗಳನ್ನಿತ್ತರು.

**ಮೂಲ್ಕಿ**- ಕಾರ್ನಾಡು ಸದಾಶಿವರಾವ್ ಸ್ಮಾರಕ ಸೇವಾಶ್ರಮದ ಆಶ್ರಯದಲ್ಲಿ ತಾ. 5ರಲ್ಲು 'ಅಂಬರ್ ಚರಕ ಪರಿಶ್ರಮಾಲಯ' ಉದ್ಘಾಟನೆಯು ಮುಲ್ಕಿ ಬ್ಲಾಕ್ ಡೆವಲಪ್ ಮೆಂಟ್ ಆಫೀಸರ್ ಶ್ರೀ ರಾಮರಾಯರಿಂದ ಜರಗಿತು. ಸ್ಥಳೀಯ ಸರಕಾರೀ ಹೈಸ್ಕೂಲು ಹೆಡ್ಮಾಸ್ಟರ್ ಶ್ರೀ ಕೆ. ವಿಠಲ ಶೆಣೈಯವರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀ ಜಿ. ಮಹಾಬಲ ಸೆಟ್ಟರು ಸೇವಾಶ್ರಮದ ಉದ್ದೇಶ ಮತ್ತು ಕಾರ್ಯಕ್ರಮಗಳನ್ನು ವಿವರಿಸಿ ಸ್ವಾಗತಿಸಿದರು. ಕುಮಾರಿ ಜಯಂತಿಯವರು ಅಂಬರ ಚರಕ ಪರಿಶ್ರಮಾಲಯದ ವಿವರಗಳನ್ನಿತ್ತರು. ಡಾ. ರಾಮಣ್ಣ ಸೆಟ್ಟರು ಭಾಷಣವಿತ್ತ ಬಳಿಕ ಕಾರ್ಯದರ್ಶಿ ಡಾ. ಸಂಜೀವನಾಥರು ಉಪಕಾರ ಸ್ಮರಿಸಿದರು. ನಂತರ ಕಾರ್ಯಾಗಾರವು ಚಾರ್ಮಾಡಿ ರೈತ ಯುವಕರ ಸಭೆಯು ಶ್ರೀ ಬಿ. ಭಾಸ್ಕರ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿ ಈ ಪ್ರದೇಶಕ್ಕೆ ಯುವಕ ರೈತ ಸಂಘವನ್ನು ಸ್ಥಾಪಿಸಬೇಕೆಂದು ನಿರ್ಣಯಿಸಲಾಯಿತು. ರಾತ್ರೆ ರಸ್ತೆಗಾಯಕೂಟವು ಜರಗಿತು.

**ಮುಕ್ಕಮಿತ್ರ ಪಟ್ಣ**—ಸ್ಥಳೀಯ ಗಂಗಯ್ಯಾಸ್ಮಾರಕ ಫೌಂಡಿನವರು ಹೊಸತಾಗಿ ಕಟ್ಟಿಸಿದ 'ರಾಮಾನುಜ ಮಂದಿರ'ದ ಉದ್ಘಾಟನೆಯನ್ನು ತಾ. 5ರಲ್ಲು ಡಾ. ಎಸ್. ಚೆಂಬಾರವರು ನೆರವೇರಿಸಿದರು. ಕಡಂದಲೆ ಗುತ್ತು ಶ್ರೀ ಸಂಜೀವ ಸೆಟ್ಟರು ಸಮಾರಂಭದ ಅಧ್ಯಕ್ಷತೆವಹಿಸಿದ್ದರು ಶ್ರೀ ಚೆಂದಯ್ಯ ಮಾಸ್ತರರು ಸ್ವಾಗತಿಸಿ ಕಟ್ಟಡ ನಿರ್ಮಾಣದ ವರದಿಯನ್ನೋದಿದರು. ಸಭಿಕರ ಭಾಷಣಗಳಾದ ಮೇಲೆ ವೆಂಕಟ್ರಮಣ ಮಾಸ್ತರರು ಧನ್ಯವಾದಗಳನ್ನಿತ್ತರು.

**ಕುಂದಾಪುರ**— ಬ್ಯಾರಿಸ್ಟರು ಹ್ಯಾಕೋರ್ಟು ಎಡ್ವೋಕೇಟ್ ಸಂಘದ ಕಾರ್ಯದರ್ಶಿ ಶ್ರೀ ಕೆ. ಜಗನ್ನಾಥ ಸೆಟ್ಟಿ, ಬಿ. ಎ. ಬಿ. ಎಸ್. ಸಿ., ಎಲ್. ಎಲ್. ಎಮ್., ಇವರಿಗೆ ಸ್ಥಳೀಯ ಬಾರ್ ಎಸೋಸಿಯೇಶನ್ನವರು ಇತ್ತೀಚೆಗೆ ಸತ್ಕಾರಕೂಟವಿತ್ತು ಗೌರವಿಸಿದರು.

ಕಳೆದ 'ನವಯುಗ' ಸಂಚಿಕೆಯ ಲೆಕ್ಕಪುಟದಲ್ಲಿ ಮಾನ್ಯಮಂತ್ರಿಗಳು ಕುಂದಾಪುರದ ಗಣ್ಯ ವಕೀಲರಾಗಿದ್ದ ದಿ. ಶ್ರೀ ಎಂ. ನಾರಾಯಣ ಕಾಮತರ ಭಾವಚಿತ್ರವನ್ನು ಅನಾವರಣಮಾಡಿದರು, ಎಂಬುದನ್ನು ಗಣ್ಯ ವಕೀಲರಾಗಿರುವ ಶ್ರೀ ನಾರಾಯಣ ಕಾಮತರೆ.... ಎಂಬುದಾಗಿ ತಿರಿದಿಸಿ ಪ್ರಮಾದಕ್ಕಾಗಿ ವಿಷಾದಿಸುತ್ತೇನೆ.

(ಸಂ. ನ.)

## ಇನ್ನೂ ಚೆಂದಾಹಣವನ್ನು

ಕಳಹಿಸದವರು ದಯವಾಡಿ ಕೂಡಲೇ ಕಳುಹಿಸಿಕೊಡುವಂತೆ ಇನ್ನೊಮ್ಮೆ ಕೇಳಿಕೊಳ್ಳುತ್ತೇನೆ. ಅಂತೂ ಸಂಚಲದಲ್ಲಿ ಚೆಂದಾ ಪಾವತಿಯಾಗದಿದ್ದರೆ ನಾವು ಅನಾವಾರ್ಯವಾಗಿ ಕಳುಹಿಸುವ ವಿ. ಪಿ. ಪಿ. ಯನ್ನಾದರೂ ಪಡೆಕೊಳ್ಳುವಂತೆ ವಿಜ್ಞಾಪಿಸುತ್ತೇನೆ.

**ಮೆನೇಜರ್, ನವಯುಗ.**

## ಮಂಗಳೂರು

**ಕೊಡಗಿನ ಕಾಲೇಜುಗಳು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಜೋಡಣೆ**— ಈಗ ಮದ್ರಾಸು ವಿಶ್ವವಿದ್ಯಾನಿಲಯಕ್ಕೆ ಸೇರಿರುವ ಕೊಡಗಿನ ಕಾಲೇಜುಗಳನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಜೋಡಿಸಲು ಮೈಸೂರು ಸರಕಾರವು ನಿರ್ಧರಿಸಿರುವುದಾಗಿ ಮೈಸೂರು ಮುಖ್ಯ ಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ಮಂಗಳೂರು ಪತ್ರಿಕಾ ಪ್ರತಿನಿಧಿಗಳು ಕೇಳಿದ ಪ್ರಶ್ನೆಗೆ ಉತ್ತರವಿತ್ತರು. ಮದ್ರಾಸು, ಆಂಧ್ರ ಮತ್ತು ಬೊಂಬಾಯಿ ವಿಶ್ವವಿದ್ಯಾಲಯಗಳ ಕಾಲೇಜುಗಳಲ್ಲಿ ಪ್ರಿಪೊಫೆಶನಲ್ ಕೋರ್ಸು ಪತ್ತಿತರೆ ವೃತ್ತಿಪರ ಪದವಿ ತರಗತಿಗಳಿಗೆ, ಮಹಾನ್ಯೂಸೂರಿನ ಭಾಗಗಳಾಗಿರುವ ಹಿಂದಿನ ಮದ್ರಾಸು, ಮುಂಬಯಿ, ಹೈದರಾಬಾದು ಪ್ರಾಂತಗಳ ಪ್ರದೇಶಗಳ ವಿದ್ಯಾರ್ಥಿಗಳಿಗೆ ಕೆಲವೊಂದು ಸ್ಥಾನಗಳನ್ನು ಕಾಯ್ದಿರಿಸಲಾಗುವುದೆಂದು ಸಂಬಂಧಪಟ್ಟ ಸರಕಾರಗಳು ಆಶ್ವಾಸನೆಯಿತ್ತಿರುವುದಾಗಿಯೂ ಮುಖ್ಯ ಮಂತ್ರಿಗಳು ತಿಸಿದರು.

**ಮಜೂರ ಹಿತಶಾಸನಗಳ ಕ್ರೋಢೀಕರಣದ ಆವಶ್ಯಕತೆ**—ಸಿಲಾಗ್ರಿಸ್ ಹ್ಯಾಸ್ಕೂಲಿನಲ್ಲಿ ಸಾಮಾಜಿಕ ಅಧ್ಯಯನ ಸಂಸ್ಥೆಯ ವತಿಯಲ್ಲಿ ನಡೆಯುತ್ತಿರುವ ವಿಚಾರ ಗೋಷ್ಠಿಯಲ್ಲಿ ತಾ 14ರಂದು ಮಜೂರ ಹಿತ ಶಾಸನಗಳ ಕುರಿತಾಗಿ ಶ್ರೀ ಕಾರ್ನಾಡು ಶಿಧರ ರಾಯರು ಭಾಷಣಿಸಿದ್ದರು. ನಂತರ ನಡೆದ ಚರ್ಚೆಯಲ್ಲಿ ಈ ಶಾಸನಗಳು ಎಲ್ಲರಿಗೂ ಸುಲಭವಾಗಿ ತಿಳಿಯಲು ಅನುಕೂಲವಾಗುವಂತೆ ಕ್ರೋಢೀಕರಣದ ಕಾರ್ಯವು ಆಗತ್ಯವೆಂದು ಅಭಿಪ್ರಾಯವಾಯಿತು. ಶ್ರೀಗಳಾದ ಎಫ್. ಎಕ್ಸ್. ಡಿ. ಸಿಂಟೊ, ಪ್ರಭಾಕರ ಫೋಟೆ ಪೊಫಲಾದವರು ಚರ್ಚೆಯಲ್ಲಿ ಭಾಗವಹಿಸಿದ್ದರು. ಕಾರ್ಯದರ್ಶಿ ಕುಮಾರಿ ಒಲಿಂನಾ ಪೇರೇರು ಧನ್ಯವಾದಗಳನ್ನಿತ್ತರು.

**ವಾರ್ಷಿಕ ಮಹಾಸಭೆ**— ದ. ಕ. ಜಿಲ್ಲಾ ದೇವಾಡಿಗರ ಸುಧಾರಕ ಸಂಘದ ವಾರ್ಷಿಕ ಮಹಾ ಸಭೆಯು ತಾ. 12ರಲ್ಲು ಶ್ರೀ ಎಮ್. ಬಾಬು ದೇವಾಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಸಮಾಜದ ಅಭಿವೃದ್ಧಿ ಕುರಿತು ಶ್ರೀಗಳಾದ ಪಿ. ಎಸ್. ಕೃಷ್ಣ, ಧರ್ಮಪ್ಪ ದೇವಾಡಿಗರ, ಕೆ. ದಾಮೋದರ ಮೊದಲಾದವರು ಸಲಹೆ ಸೂಚನೆಗಳನ್ನಿತ್ತರು. ಹೊಸ ವರ್ಷಕ್ಕೆ ಶ್ರೀಗಳಾದ ಕೆ. ರುಥ್ರಯ್ಯ ಎಮ್. ಜಯರಾಮ ಪ್ರಸಾದ್, ಬಿ. ಸದಾನಂದ, ಬಾಬು ಡಿ ದೇವಾಡಿಗ, ಬಿ. ಎನ್. ದೇವಾಡಿಗ, ಕೆ. ಶೇಷಪ್ಪ ದೇವಾಡಿಗ, ಎಮ್ ಬಾಬು ದೇವಾಡಿಗ, ಕೆ. ಗೋಪಾಲ ಮತ್ತು ಯು. ಗೋಪಾಲನವರು ಕಾರ್ಯಕಾರೀ ಸಮಿತಿಗೆ ಆರಿಸಲ್ಪಟ್ಟರು. ಸಂಘದ ವಾರ್ಷಿಕೋತ್ಸವವು ಆದೇ ದಿನ ಶ್ರೀ ಎನ್. ಶ್ರೀನಿವಾಸ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎ. ಕೆ. ಸೇವಕರು ಸಮಾಜದ ಅಭಿವೃದ್ಧಿಯನ್ನು ಸಾಧಿಸುವ ಕುರಿತು ಸಲಹೆಗಳನ್ನಿತ್ತರು.

## ರಾಷ್ಟ್ರದ ಪ್ರಗತಿ

(ಇನೇ ಪುಟದಿಂದ)

ಕರ್ತವ್ಯ. ತನ್ನ ಕೈಲಾದಷ್ಟನ್ನು ಸರಕಾರದ ಈ ಯೋಜನೆಗೆ ನೆರವು ನೀಡುವುದು ಆಗತ್ಯವಾದುದು. ಈತರದ ಯೋಜನೆಗಳನ್ನು ಪೂರಯಿಸಲು ದೇಶಿಗರು ಅಧಿಕ ತೆರಿಗೆ ತೆರಬೇಕಾದೀತು. ಧನಸಹಾಯ ಮಾಡಬೇಕಾದೀತು, ಶಕ್ತಿವಿಂಡಿದ ತ್ಯಾಗಕ್ಕೆ, ಸೇವೆಗೆ ಸಿದ್ಧರಾಗಬೇಕಾದೀತು. ಆದರೆ, ಇವೆಲ್ಲವೂ ನಮ್ಮ ಭಾಗ್ಯವನ್ನು ರೂಪಿಸುವ, ಜಡತನವೊಂದಿಗೆ ಹೋರಾಡುವ ಸಂಗ್ರಾಮಕ್ಕೆ ವ್ಯಯವಾಗುವುದರಿಂದ, ನಮ್ಮ ಭವಿಷ್ಯವನ್ನತ್ತಮಗೊಳಿಸಲು ನಾವು ಎಲ್ಲದಕ್ಕೂ ತಯಾರಿರಬೇಕು ದೇಶದ ಕೋಟಿ ಸಂಖ್ಯೆಯ ಜನರ ಉದ್ಧಾರ ಕಾರ್ಯದಲ್ಲಿ ನಮ್ಮ ಅಳಿಲುಸೇವೆಯನ್ನು ಸಲ್ಲಿಸಬೇಕು.

—ಯೋಜನಾ.

## ಬೆಂಗಳೂರು

**ಬೆಂಗಳೂರಲ್ಲಿ ಪಾಸಗಿ ಶಿಕ್ಷಣ ಸಂಸ್ಥೆಗಳ ಸಮ್ಮೇಳನ**—ನವಮೈಸೂರು ರಾಜ್ಯದ ಪಾಸಗಿ ಶಾಲೆಗಳ ಪ್ರತಿನಿಧಿಗಳ ಎರಡು ದಿನಗಳ ಸಮ್ಮೇಳನವು ಇದೇ ತಾ. 17 ನುತ್ತು

**ಭಾರತ ರಶ್ಯಾ ಸಾಂಸ್ಕೃತಿಕ ಸಂಘದ ಆಶ್ರಯದಲ್ಲಿ**—ತಾ. 16ರಲ್ಲು ಬಿ ಸೆಂಟ್ ಬಾಲಿಕಾ ಪಾಠ ಶಾಲೆಯಲ್ಲಿ ವೈಭವೆ ಗೊಳಿಸಲಾದ ಕಲಾ ಸಾಂಸ್ಕೃತಿಕ ಉತ್ಸವದ ನೇಳಿ ಭಾಕಡಲ್ಲಿರುವ ಸೋವಿಯೆಟ್ ರಾಷ್ಟ್ರ ಭಾರದ ಸಾಂಸ್ಕೃತಿಕ ವಿಭಾಗದ ಅಧಿಕಾರಿಗ ಳಾದ ಮಿ. ಕುದ್ರಿ ಪೋವ್‌ರೆವರು ಭಾಷಣ ಮಾಡುತ್ತಾ, ಭಾರತವು ತುರ್ತಾ ಪ್ರಗತಿ ಸಾಧಿಸಿದೆ ಎಂದರು. ಆರಂಭದಲ್ಲಿ ಡಾ. ಎಮ್. ಉಮೇಶರಾಯರು ಸ್ವಾಗತ ಭಾಷಣಗಳನ್ನಾಡಿದರು. ಕೊನೆಯಲ್ಲಿ ಜಾ. ಎಮ್. ಎಸ್. ಶಾಸ್ತ್ರಿಗಳು ಧನ್ಯವಾದವಿತ್ತರು.

**ಜಿಲ್ಲಾ ನಾಟಕ ಸ್ಪರ್ಧೆ ಪ್ರಾರಂಭ**

ಮಂಗಳೂರಿನ ಜಿಲ್ಲಾ ನಾಟ್ಯ ಕಲೋತ್ಸವ ಸಮಿತಿಯ ಆಶ್ರಯದಲ್ಲಿ ನಡೆಯ ಜಿಲ್ಲಾ ದ್ವಿತೀಯ ನಾಟಕ ಸ್ಪರ್ಧೆಯು ತಾ. 16ರಂದು ಸಂಜೆ ಗಣಪತಿ ಹ್ಯಾಸ್ಕೂಲಿನ ಪಾರಿಜಾತ ಸಭಾಗದಲ್ಲಿ ಡಾ. ಕೆ. ನಾಗಪ್ಪ ಆಳ್ವ, ಎಮ್. ಎಲ್. ಎ, ಅವರ ಅಧ್ಯಕ್ಷತೆಯಲ್ಲಿ, ಶ್ರೀ ಎಮ್. ಶಂಕರ ಆಳ್ವರಿಂದ ಉದ್ಘಾಟಿಸಲ್ಪಟ್ಟಿತು. ಶ್ರೀ ಎಚ್. ಕೆ. ತಿಂಗಳಾಯರು ಸ್ವಾಗತಿಸಿದರು. ಶ್ರೀ ನರೇಂದ್ರ ಮೊದಲನರು ಗತ ವರ್ಷದ ವರದಿಯನ್ನೋದಿದರು ರಾತ್ರಿ ಕಲ್ರಿ ವಿದ್ಯಾರ್ಥಿ ವೃಂದದವರು 'ಬಪ್ಪೂರ್ದಗಂಡೆ' ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸಿದರು. ಶ್ರೀ ಎ. ಆನಂದ ಸೆಟ್ಟಿರು ಧನ್ಯವಾದಗಳನ್ನಿತ್ತರು. ತಾ. 17ರಲ್ಲು ಜಪ್ಪು ಶಿವಾನಂದ ನಾಟಕ ಸಭೆಯವರು 'ಕಲ್ಲೇರ ಕರುಮಣಿ' ಎಂಬ ನಾಟಕವನ್ನಭಿನಯಿಸಿದರು.

**ದ. ಕ. ಜಿಲ್ಲಾ ಬೋರ್ಡಿನ ವಿಶೇಷ ಸಭೆಗಳು**— ತಾ. 1-6-57ನೆ ಶನಿವಾರ ಅಪರಾಹ್ನ ೩½ ಮತ್ತು ೬ ಗಂಟೆಗೆ ಜರಗಲಿರುವುದು. ಮೊದಲಿನ ಸಭೆಯಲ್ಲಿ ಪಲ್ಲಿಕ್‌ಹೆಲ್ತ್, ಸ್ಟೇಂಡಿಂಗ್ ಕಮಿಟಿಯಲ್ಲಿ ತೆರವಾದ ಎರಡು ಸ್ಥಾನಗಳಿಗೆ ಸದಸ್ಯರನ್ನು ಚುನಾಯಿಸುವಿಕೆಯೂ ಎರಡನೆ ಸಭೆಯಲ್ಲಿ ಬೋರ್ಡಿನ ಅಧ್ಯಕ್ಷಸ್ಥಾನಕ್ಕೆ ಡಾ. ಕೆ. ಕೆ. ಹೆಗ್ಡೆ, ಎಮ್. ಎಲ್. ಎ, ಅವರು ಸಲ್ಲಿಸಿದ ರಾಜೀನಾಮೆ ಪತ್ರದ ಪರಿಶೀಲನೆಯೂ ನಡೆಯಲಿರುವುದು.

**ಜಿಲ್ಲಾ ಪಂಚಾಯತುಗಳು**— ಅಡಳಿತ ನಿರ್ವಹಿಸುವಾಗ ಎದುರಿಸಬೇಕಾಗಿ ಬರುವ ಅಡಚಣೆಗಳನ್ನು ಜಿಲ್ಲಾ ಪಂಚಾಯತು ಯೂನಿಯನ್‌ನ ಅಧ್ಯಕ್ಷ ಶ್ರೀ ಕೆ. ಸೀತಾರಾಮು ಶೆಟ್ಟರು ಈಚೆಗೆ ಮಂಗಳೂರಿಗೆ ಬಂದಿದ್ದಲ್ಲಿ ಸ್ಥಳೀಯ ಅಡಳಿತ ಸಂತ್ರಿ ಶ್ರೀ ಆರ್. ಚೆನ್ನಿಗರಾಮಯ್ಯನವರಿಗೆ ತಿಳಿಸಿದರು. ಈ ಸಂದರ್ಭದಲ್ಲಿ ಹಾಜರಿದ್ದ ಜಿಲ್ಲಾ ಕಲೆಕ್ಟರ್ ಶ್ರೀ ಎಚ್. ನರಸಿಂಹ, ನಗರಾಭಿಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗ ಮತ್ತು ಜಿಲ್ಲಾ ಬೋರ್ಡು ಅಧ್ಯಕ್ಷ ಡಾ. ಕೆ.ಕೆ.ಹೆಗ್ಡೆ ನೊವೆಲಾವವರೊಡನೆ ಮಂತ್ರಿಗಳು ಪರ್ಯಾಲೋಚಿಸಿ, ಸೂಕ್ತ ಕಾರ್ಯಾಚರಣೆಗಳನ್ನು ಮಾಡುವುದಾಗಿ ಭರವಸೆಯಿತ್ತರು.

16ರಲ್ಲು ಸುಬ್ಬಣ್ಣ ಚಿಟ್ಟೆ ಪುರಭವನದಲ್ಲಿ ಜರಗಿತು. ಮೊದಲದಿನ ಪೂರ್ವಾಹ್ನ ಅಧಿವೇಶನವು ಶ್ರೀ. ಆರ್. ಎಸ್. ಹುಕ್ಕೇರಿಕರ ಅಧ್ಯಕ್ಷತೆಯಲ್ಲಿ ಜರಗಿತು. ಸ್ವಾಗತ ಸಮಿತಿ ಅಧ್ಯಕ್ಷರಾದ ಮೇಯರ್ ಶ್ರೀ ಜಿನರಾಜಯ್ಯ ದೀಪ ಪಾಸರು ಸ್ವಾಗತ ಭಾಷಣ ಮಾಡಿದರು. ರಾಜ್ಯದ ನುಮ್ಮ ಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ಸಮ್ಮೇಳನವನ್ನು ಉದ್ಘಾಟಿಸುತ್ತಾ ಪಾಸಗಿ ಶಾಲೆಗಳ ಸ್ಥಿತಿಗತಿಗಳನ್ನು ಸುಧಾರಿಸುವ ವಿಚಾರದಲ್ಲಿ ಸರಕಾರಕ್ಕೆ ಸಹಾನುಭೂತಿಯಿದೆ ಆದರೆ ಪರಿಸ್ಥಿತಿಯನ್ನು ಹೇಗೆ ಸುಧಾರಿಸಬೇಕೆಂಬುದೇ ಪ್ರಶ್ನೆ. ಈ ವಿಚಾರದಲ್ಲಿ ಈ ಸಮ್ಮೇಳನವು ನೂಡುವ ನಿರ್ಣಯಗಳು ಮತ್ತು ಕೊಡುವ ಸಲಹೆಗಳನ್ನು ಪರಿಶೀಲಿಸಲಾಗುವುದು. ಉಪಾಧ್ಯಾಯರು ಪರಿಶ್ರಮಕ್ಕೆ ಯೋಗ್ಯ ಪ್ರತಿಫಲ ದೊರಕಬೇಕೆಂಬುದು ನರ್ವ ಸಮ್ಮತವಾದ್ದು. ಒಬ್ಬ ಉಪಧ್ಯಾಯನಿಗೆ ತಿಂಗಳಿಗೆ ಕನಿಷ್ಠ ಪಕ್ಷ ರೂಪಾಯಿ 100/- ವೇತನವಾದರೂ ದೊರಕಬೇಕೆಂಬುದು ನನ್ನ ಸ್ವಾಭಿಪ್ರಾಯ! ಎಂದು ಮುಂತಾಗಿ ಹೇಳಿದರು.

ಸಮ್ಮೇಳನಾಧ್ಯಕ್ಷ ಶ್ರೀ ಆರ್. ಎಸ್. ಹುಕ್ಕೇರಿಯರು ತಮ್ಮ ಭಾಷಣದಲ್ಲಿ ಪಾಸಗಿ ಶಾಲೆಗಳಿಗೆ ಸಹಾಯಧನವನ್ನೀಯುವುದರಲ್ಲಿ ಸರಕಾರವು ಉದಾರತೆ ತೋರಿಸಬೇಕಾಗಿದೆ. ಎಂದರು. ರಾಜ್ಯದ ಇತರ ಭಾಗಗಳಲ್ಲಿರುವ ಪದ್ಧತಿಯಂತೆ ಅಧ್ಯಾಪಕರ ಸಂಬಳ ಮತ್ತು ನಿವೃತ್ತಿ ವೆಚ್ಚದ ಪೂರ್ತಿಯನ್ನಾದರೂ ಸಹಾಯಧನವಾಗಿ ಕೊಡುವ ನಿಯಮವನ್ನು ಹಳೆಯ ಮೈಸೂರು ಭಾಗದಲ್ಲಿಯೂ ಸರಕಾರವು ಜಾರಿಗೆ ತರಬೇಕೆಂದು ಸಲಹೆಕೊಟ್ಟರು. ಸ್ವಾಗತಸಮಿತಿ ಕಾರ್ಯದರ್ಶಿ ಶ್ರೀ ಎಸ್. ಪಿ. ಎಲ್. ಶಾಸ್ತ್ರಿಗಳು ಧನ್ಯವಾದಗಳನ್ನಿತ್ತರು. ಅಪರಾಹ್ನ ಡಾ. ಭೆಗವಂತರಾವರ ಅಧ್ಯಕ್ಷತೆಯಲ್ಲಿ 'ಪಾಸಗಿ ಶಾಲೆಗೆ ಪಟ್ಟಿಗೆ ಸ್ವಾತಂತ್ರ್ಯದ ಆವಶ್ಯಕತೆ' ಎಂದೀ ವಿಷಯದ ಮೇಲೆ ಚರ್ಚೆ ನಡೆಯಿತು.

**ನಿರ್ಣಯಗಳು**— ಅಧ್ಯಾಪಕರಿಗೆ ಸರಕಾರಿ ಸುಬ್ಬದಲ್ಲಿ ವೇತನ ಮತ್ತು ಕೇಂದ್ರ ಸರಕಾರದ ಸುಬ್ಬದಲ್ಲಿ ಭತ್ತೆ ಕೊಡುವಂತೆ ಸರಕಾರವು ಮೆನೇಜುಮೆಂಟುಗಳಿಗೆ ಸೂಚಿಸಬೇಕೆನ್ನುವ, ಎಯಿಡೆಡ್ ಶಾಲಾ ಅಧ್ಯಾಪಕರಿಗೆ ಸರಕಾರವು ವಿಶಾಸುವೇತನ ಮತ್ತು ಪಿಡ್ಡಾಯನಿಮಾ ಸವಲತ್ತು ನಿಗದಿ ಪಡಿಸಿದು ಮಾಡಬೇಕೆನ್ನುನ, ನಿವೃತ್ತಿಸ್ವಾಯಿಯನ್ನು ನಿರ್ಧರಿಸಬೇಕೆನ್ನುನ, ತಾಂತ್ರಿಕ ಶಿಕ್ಷಣವನ್ನು ಕೊಡುತ್ತಿರುವ ಸಂಸ್ಥೆಗಳಿಗೆ ಹೆಚ್ಚಿನ ಸ್ಕಾಲರ್‌ಶಿಪ್ ಕೊಡಬೇಕೆನ್ನುವ ಇತ್ಯಾದಿ ನಿರ್ಣಯಗಳಾಗಿದುವು. ರಾಜ್ಯದ ಶಿಕ್ಷಣ ಖಾತೆಯ ಕಾರ್ಯದರ್ಶಿ ಶ್ರೀ ಆರ್. ಶ್ರೀನಿವಾಸರು ನಿರ್ಣಯಗಳ ಕುರಿತು ಮಾತನಾಡಿ, ಹೆಚ್ಚಿನ ಹೊರೆಯನ್ನು ಸರಕಾರಕ್ಕೆ ಹೊರಲು ಸಾಧ್ಯವೋ ಎಂಬುದನ್ನು ಪರಿಶೀಲಿಸಲಾಗುವುದೆಂದರು.

ಎರಡನೆಯ ದಿವಸದ ಸಭೆಗೆ ಶ್ರೀ ಬಿ. ಎ. ಪೈ ಯವರು ಅಧ್ಯಕ್ಷರಾಗಿದ್ದರು. ಶ್ರೀ ಯಂ. ಪಿ. ಯಿಶ್ರ, ಶಾಸ್ತ್ರಿಯವರು ಸ್ವಾಗತ ಮಾತುಗಳನ್ನಾಡುತ್ತಾ ಆರ್ಥಿಕ ಹಾಗೂ ತೈಕ್ಷಣಿಕ ರಂಗದಲ್ಲಿ ತುಂಬಾ ಅನುಭವವಿರುವ ಶ್ರೀ ಬಿ. ಎ. ಸೈಗಳ ಮಾರ್ಗದರ್ಶನ ನಮಗೆಲ್ಲರಿಗೂ ಬಹಳ ಅವಶ್ಯವಿರುವುದಾಗಿ ಹೇಳಿದರು. ಪಾಸಗಿ ಶಾಲಾ ತೈಕ್ಷಕತ 'ಎಸೋಸ್ ಕೆಂಡಿಶನ್" ಮತ್ತು ಗ್ರಾಂಟ್ ಇನ್ ಏಡ್‌ಗಳ ಕುರಿತು ಶ್ರೀಗಳಾದ ಯಂ. ಆರ್. ಶ್ರೀಪತಿ ರಾವ್, ಕೆ ವಿ. ನಾರಾಯಣನ್, ಲೆ. ಫಾ. ಟಿ. ಎ. ಲೋಬೊ, ಜೆ ಪಿ. ಜಾಸ್ಕರ್, ಗೋಪಾಲಸ್ವಾಮಿ ಅಯ್ಯಂಗಾರ್ ಮೊದಲಾದವರು ಭಾಷಣಮಾಡಿದರು. ಸರಕಾರೀ ದರಪ್ಪು ಸಂಬಳವನ್ನು ಶಿಕ್ಷಕರಿಗೆ ಕೊಡಬೇಕೆಂದು ಪಾಸಗಿ ಮೆನೇಜುಮೆಂಟುಗಳನ್ನು ಸರಕಾರವು ಒತ್ತಾಯಿಸಬೇಕೆನ್ನುವ ಕಡಾಯ ವಿಷಯ ಸವಲತ್ತನ್ನು ಕೊಡಬೇಕೆನ್ನುವ, ಶಿಕ್ಷಕರ ನುಳ್ಳಿಗೆ ದರ್ಮೂರ್ಥ ಶಿಕ್ಷಣ ದೊರಕಬೇಕೆನ್ನುವ, ನಿವೃತ್ತಿಯ ಪ್ರಾಯ 60 ವರುಷವಾಗಬೇಕೆನ್ನುವ ಇತ್ಯಾದಿ 15 ಠರಾವುಗಳು ಸ್ವೀಕೃತವಾದುವು.

ಅಧ್ಯಕ್ಷ ಸ್ಥಾನದಿಂದ ಶ್ರೀ ಹೈಯವರು ಹೀಗೆಂದರು, ಏಕೀಕೃತ ಕರ್ನಾಟಕದ ದೊಡ್ಡ ಮತ್ತು ಶೀಘ್ರ ಲಕ್ಷ್ಯಕೊಡಬೇಕಾದಸಮಸ್ಯೆಗಳಲ್ಲಿ ಶಿಕ್ಷಣವೂ ಒಂದಾಗಿದೆ. ಏಮುಭಾಗಗಳಲ್ಲಿ ಬೇರೆ ಬೇರೆ ಶಿಕ್ಷಣವಿಧಾನವಿದ್ದು ಅವನ್ನು ಸಮನ್ವಯಗೊಳಿಸುವ ಜವಾಬ್ದಾರಿಯು ಚಿಕ್ಕ ದೇನೂ ಆಲ್ಲ ಇಲ್ಲಿ ಬೇರೆ ಬೇರೆ ಪ್ರದೇಶದವರು ನಿರೆದಿದ್ದೀರಿ. ನಿಮ್ಮ ನಿಮ್ಮ ಕಡೆಯ ವಿಚಾರಗಳನ್ನು ಪರಸ್ಪರ ತಿಳಿದು ಸರಕಾರಕ್ಕೆ ಸಲಹೆ ಕೊಡುವುದು ನಿಮ್ಮ ಕರ್ತವ್ಯ. ಪಾಸಗಿ ಸಂಸ್ಥೆಗಳು ಶಿಕ್ಷಣದ ಸೇವೆಯನ್ನು ಸಲ್ಲಿಸುತ್ತಾ ಬಂದಿವೆ. ಎಲ್ಲಾ ಮೆನೇಜ್‌ಮೆಂಟಿನವರೂ ಸುಧಗರೆಂದಾಗಲೀ, ಎಲ್ಲಾ ಶಿಕ್ಷಕರು ಸಂಭಾವಿತರೆಂದಾಗಲೀ ಹೇಳಲಾಗುವುದಿಲ್ಲ. ಸರಕಾರ ಸಲ್ಲಿಸಿದ ಸಹಾಯ ಪ್ರಸ್ತಾವನ್ನೂ ಕಡಿತಗೊಳಿಸಿಟ್ಟುಕೊಳ್ಳುವ ಮೆನೇಜುಮೆಂಟುಗಳು ಯಾಕೆ ಬೇಕು? ಹಾಗೆಯೇ ಯಾಕೂ ಆಗದ್ದೆ, ಏನೂ ಕೆಲಸ ಸಿಗದಾಗ ಉಪಾಧ್ಯಾಯ ನೃತ್ತಿಗೆ ಬರುವ ಶಿಕ್ಷಕರೂ ಉತ್ತಮರಲ್ಲ. ಸರಕಾರ ಜನತೆ ಮತ್ತು ಶಿಕ್ಷಕರು ಕೂಡಿ ಈ ಸಮಸ್ಯೆಯನ್ನು ಬಗೆಹರಿಸಬೇಕು. ವೈದ್ಯಕೀಯ ಸೌಲಭ್ಯ, ಧರ್ಮಾರ್ಥ ಶಿಕ್ಷಣ, ವಿಮೆ, ಇತ್ಯಾದಿ ಸೌಲಭ್ಯಗಳನ್ನು ಶಿಕ್ಷಕರಿಗೊದಗಿಸಬೇಕೆನ್ನುತ್ತಾ ಕರ್ನಾಟಕದ ಏಮು ವಿಭಾಗಗಳ ಶೈಕ್ಷಣಿಕ ಪರಿಸ್ಥಿತಿಯ ರೂಪರೇಖೆಗಳನ್ನು ವಿವರಿಸಿದರು. ಶ್ರೀ ವೈಗಳ ಭಾಷಣವು ಅತ್ಯಂತ ಆನುಭೆಗಪೂರ್ಣವೂ ಸಂಗ್ರಾಹ್ಯವೂ ಆಂಕೆ ಸಂಖೆಗಳಿಂದ ಕೂಡಿದ್ದುದೂ ಆಗಿತ್ತು. ಶ್ರೀ ಯಂ. ಪಿ. ಯಿಶ್ರ ಶಾಸ್ತ್ರಿಗಳು ಧನ್ಯವಾದಗ ಳೆನ್ನಿತ್ತರು.

ಮಧ್ಯಾಹ್ನದ ಸಭೆಯು ಮೈಸೂರು ವಿಶ್ವವಿದ್ಯಾನಿಲಯದ ವೈಸ್‌ಚಾನ್ಸಲರ್ ಶ್ರೀ ಬಿ. ಎಂ. ಶ್ರೀಕಂಠಯ್ಯನವರ ಅಧ್ಯಕ್ಷತೆಯಲ್ಲಿ ಜರಗಿ ಡಾಕ್ಟರ್ ಸಿಕೆಂಡರಿ ವಿದ್ಯಾಭ್ಯಾಸದ ಶಾಲೆಗಳ ಕುರಿತು ವಿಚಾರ ಗೋಷ್ಠಿ ನಡೆಯಿತು.

ಶಿಕ್ಷಣಾಮಂತ್ರಿಗಳು ನುಡಿತ್ತಾಯ ಸಮಾರಂಭದಲ್ಲಿ ನೂತನವಾಡಿ ಈ ಸಮ್ಮೇಳನದ ತೆರವುಗೆರನ್ನು ಕಾರ್ಯರೂಪಕ್ಕೆ ತರಲು ಸಾಧ್ಯವಿದ್ದಷ್ಟು ಯತ್ನಿಸುವುದಾಗಿ ತಿಳಿಸಿದರು.

ಸಮ್ಮೇಳನಕ್ಕೆ ಬೇರೆ ಬೇರೆ ಪ್ರದೇಶಗಳಿಂದ 200ರಕ್ಕೂ ಮಿಕ್ಕ ಪ್ರತಿನಿಧಿಗಳು ಬಂದಿದ್ದರು. ಮಂಗಳೂರಿನಿಂದ ಶ್ರೀ ಮುಕುಂದ ರಾಯರು, ಉಡುಪಿಯಿಂದ ಶ್ರೀ ದಾಂತಿಯವರೂ ಸಮ್ಮೇಳನದಲ್ಲಿ ಭಾಗವಹಿಸಿದ್ದರು.


ಕನ್ನಡದಲ್ಲಿ ನೊದಲನೆಯದೆಂದೇ ಹೇಳಬಹುದಾದ
ಅಣು ಶಕ್ತಿಯ ಸಚಿತ ವಿನೇಚನಾ ಗ್ರಂಥ

**ಹಿರೋಶಿಮಾದಿಂದ ಜಿನೇವ**

ಬರೆದವರು:

**ಶ್ರೀ. ಯು. ರಾಘವೇಂದ್ರ ಆಚಾರ್ಯ**, ಎಂ. ಎ., ನವದೆಹಲಿ.

ಮುನ್ನುಡಿಕಾರರು: **ಶ್ರೀ. ಶಿವರಾಮ ಕಾರಂತರು.**

ಪ್ರತಿಯೊಬ್ಬರೂ ಓದಲೇಬೇಕಾದ ನವೀನ ಪುಸ್ತಕ.

ಉತ್ತಮ ಕಾಗದ. ಬೆಲೆ: ರೂ. ೧—೮—೦.

ನವಯುಗ ಪ್ರೆಸ್, ಉಡುಪಿ.


## ಗೋ ವಿಜಯ

(ಗೋವಿನ ಕಥೆ)

ಶ್ರೀ ಮುಖ್ಯಪ್ರಾಣ ಉಪಾಧ್ಯಾಯರಿಂದ ರಚಿತವಾದ, ಮಕ್ಕಳಿಗೂ, ವಯಸ್ಕರಿ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ.

ತಮ್ಮಪ್ಪನ್ನಕ್ಕೆ ತಾವೇ ಕತೆ, ಹಾಡು, ಆರ್ಥ ಸಂಭಾಷಣೆ, ವಿಷಯ ಜ್ಞಾನ, ಹಾಗೂ ಶಾಲೀಂಕ ಶಿಷ್ಟಣ ಮೊದಲಾದುವನ್ನು ಏಕ ಕಾಲದಲ್ಲಿ ಕಲಿತು ನಿಮ್ಮ ನುಕ್ಕಳು ಜಾಣರಾಗಬೇಕೇ? ಹಾಗಾದ್ದರೆ ಈ ಪುಸ್ತಕವನ್ನು ಆವಶ್ಯ ಅವರ ಕೈಗೆ ಕೊಡಿ

60 ಪುಟಿಗಳು: ಬೆಲೆ ೧—೪—೦.

ನವಯುಗ ಪ್ರೆಸ್, ಉಡುಪಿ.

## ನಾರಿಯರ ಮಹತ್ವ

# ದೇಶದ ಬೆನ್ನಮೂಳೆಯಾದ ಸ್ತ್ರೀಯರನ್ನು ಗೌರವದಿಂದ

ಕಾಣಿರಿ

ಜೀವಿಗಳಿಗೆ ಜನ್ಮವನ್ನಿತ್ತು ಜಗತ್ತಿನ ಜನನಿಯಾಗಿ ಸರ್ವಜೀವರ ಜೀವಿತಮುಖಿಯಾಗಿರುವವಳೇ ಸ್ತ್ರೀ! ಪ್ರಪಂಚದಲ್ಲಿ ಸ್ತ್ರೀ ಶಕ್ತಿಯನ್ನು ಪ್ರತಿಬಂಧಿಸುವ ಪ್ರಭಾವಿ ಶಕ್ತಿ ಬೇರೊಂದಿಲ್ಲ! ಅವಳೇ ಆದಿ ಶಕ್ತಿ! ಆದಿಮಾತೆ!! ಜಗತ್ತಿಗೆನೇ ಜನ್ಮದಾತೆ ಅವಳೆಂದಾಗ ಹೆಣ್ಣಿನ ಹಿರಿಕಸ ಎಷ್ಟೆಂಬುದು ಅರಿತ ಷ್ಟು ಪೂರ್ಣವೇದ್ಯವಾಗದ ವಿಷಯ. ಅವಳ ಬಾಳಿನ ಪ್ರತಿನೂಲೆಳೆಯಲ್ಲೂ ಅನಂತವಾದೊಂದು ಶಕ್ತಿ ಆಡಕವಾಗಿದೆ. ಎಷ್ಟೋ ವೀರ ಕೃತ್ಯಕ್ರಿಯ ಕೇಸರಿಗಳನ್ನೂ, ಧರ್ಮ ಬೋಧಕರನ್ನೂ ಯುಗ ಪ್ರವರ್ತಕರನ್ನೂ ಪ್ರಸವಿಸಿದ ಪುಣ್ಯಾರುದ್ಧಾರಕ್ಕಾಗಿ ಅವತರಿಸಿರುವ ಪುಣ್ಯ ಪುರುಷರನ್ನೂ, ಯತಿಮಹಾತ್ಮರನ್ನೂ ಜಗತ್ತಿನ ಕಾರ್ಯರಂಗದಲ್ಲಿ ಲೋಕ ಹಿತಸಾಧಕರಾಗಿ ದುಡಿಯುವಂತೆ ಹರಸಿ ಕಳುಹಿಸಿದವಳೇ ಹೆಣ್ಣಲ್ಲವೇ?

ಜನಸೇವೆಯಲ್ಲಿ ಅವಳ ಕೈವಾಡವು ಅಪ್ರತ್ಯಕ್ಷವಾಗಿದ್ದರೂ ಅದು ಬಹುಮುಖ ಪ್ರಗತಿಪರ ಸಾಧಕವಾಗಿದೆ. ಸಮಾಜದ ಒಳಿತು-ಕೆಡುಕೆಂಬುದೆರಡರ ಕಾರ್ಯಭಾರಕ್ಕೂ ಅವಳೇ ಹೆಣ್ಣಲೆಯಾಗಿರುವ ಪ್ರಭೋದಕಶಕ್ತಿ! ದಾಂಪತ್ಯ ಜೀವನದಲ್ಲಿ ಪತಿಸೇವೆಗಾಗಿ, ಪತಿಪ್ರೇಮಕ್ಕಾಗಿ ಅಹೋರಾತ್ರಿ ದುಡಿದು ತನ್ನ ದೇಹವನ್ನೂ ದಂಡಿಸಿ ನಿರಂತರವೂ ಅವನ ಜೀವನದ ಹಿತ ಸಾಧಕಳಾಗಿ ತನ್ನ ಜೀವವನ್ನೇ ಮುಡಿಪಿಟ್ಟವಳು ಸ್ತ್ರೀ. ಎಂತಹ ಕಠಿಣ ಕಾಯಿಲೆಯಿಂದ ದೇಹದುರ್ಬಲವಾದರೂ ಬೇನೆ ಬೇಸರವನ್ನು ನಿರ್ಲಕ್ಷಿಸಿ ಸಂಸಾರ ನಿರ್ವಹಣೆಯಲ್ಲಿ ಬರಬಹುದಾದ ಎಡೆತಡೆಗಳನ್ನೆಲ್ಲ ಧೈರ್ಯ ಮತ್ತು ಸ್ಥೈರ್ಯದಿಂದ ಎದುರಿಸಿ ಒಂದಿಷ್ಟೂ ಎದೆಗುಂದದೆ, ನಿರು ತ್ಸಾಹಿತಳಾಗದೆ ಮುನ್ನಡೆದು ತನ್ನ ಪತಿಯು ಸ್ವಹಿತಕ್ಕಾಗಲೀ, ಪರಹಿತಕ್ಕಾಗಲೀ ಕೈಗೊಂಡ ಕಾರಭಾರಕ್ಕೆ ಭಂಗಬಾರದಂತೆ ಸಂಸಾರ ಗಾಡಿಯಲ್ಲಿ ಸಂಬಿದ್ದ ಕಷ್ಟಗಳ ಹೊರೆಗೆ ಹೆಗಲೊಡ್ಡಿ ಮುಂದೆಳೆವ ಹೊಣೆ ಹೆಣ್ಣಿಗೇ ನಿಗಸಲಿದೆ.

ಮಹಿಳೆಯರಲ್ಲಿರುವಷ್ಟು ವಿಶಾಲ ಮನೋಭಾವ ಬೇರಾವ ಜೀವಿಗಳಲ್ಲೂ ಇರದು. ಮನೆಗೆಲಸದಲ್ಲಿ ಅವಿಶ್ರಾಂತ ಶ್ರಮದಿಂದ ದುಡಿದು ದಣಿದರೂ ಮನೆಮಂದಿಯ ಸುನಪ್ಪೊಲಿಸಿ ಸದಾ ಸಂತೋಷವೂ, ಶಾಂತಿಯೂ ಸ್ಥಿರವಾಗಿ ನಲಿದಾಡುವಂತೆ ಬಯಸಿ ಸರ್ವರ ಕ್ಷೇಮಾಭಿವೃದ್ಧಿಯಾಗಿ ಲೇಶಮಾತ್ರವೂ ತನ್ನ ನಡತೆ ಹೆರರಿಗೆ ಮಾರಕವಾಗದಂತಾಗಲೆಂದು ಆಪೇಕ್ಷೆ ಪಡುವಳು. ಸಂಸಾರ ನಿರ್ವಹಣೆಯಲ್ಲಿ ಗಂಡಿಗಿಂತಲೂ ಹೆಣ್ಣಿನ ಪಾತ್ರವೇ ಹಿರಿದು. ಪತಿ—ಪತ್ನಿಗಳೀರ್ವರೂ ತಮ್ಮ ಬಾಳ ತೇರಿನ ಮುನ್ನಡೆಯಲ್ಲಿ ಜೋಡುಗಾಲಿಗಳಂತೆ ಒಮ್ಮತದಿಂದ ಸಹಕರಿಸಿಕೊಂಡಿರಬೇಕು. ಭಾವೀ ಭವಿತವ್ಯಕ್ಕಾಗಿ ಆತ್ಮೀಯತೆಯಿಂದ ಸಮ್ಮಿಲನಗೊಂಡು ನೆಮ್ಮದಿಯ ಸ್ಥಿರ ಶಾಂತಿಗಾಗಿ ಶ್ರಮಿಸಿ ಬಾಳನ್ನು ಬೆಳಗಿಸಬೇಕು. ಜೊತೆ ಬಾಳ್ವೆಯಲ್ಲಿ ವಿರಸಭಾವ ತಳೆಯದೆ ಪರಸ್ಪರ ಅರಿತು ತಪ್ಪು ಕಲ್ಪನೆಗಳಿಗೆ ಮನಸ್ಸನ್ನು ಹರಿಯಗೊಡದೆ ಸಮರಸ ಜೀವನವ ಸವಿಯಬಲ್ಲವಂತಾಗಿರಬೇಕು ಎಂತಃ ಕಷ್ಟಕಾಲವಾದರೂ ಅದು ಜೀವನದ ಸತ್ವ ಪರೀಕ್ಷೆಗೆಂದೇ ತಿಳಿಯಬೇಕಲ್ಲದೆ ತಪ್ಪು ದಾರಿಯನ್ನು ತುಳಿದು ನಿರಾಶಾವಾದಿಗಳಾಗಿ ತೊಳಲಾಡಲಾಗದು. ಪರಸ್ಪರ ದ್ವೇಷಾಸೂಯೆ ಮನೋರಂಜ್ಯದ ನೆರೆಯಲ್ಲೂ ಸುಳಿಯಬಾರದು.

ಪತಿ-ಪತಿಯರು ವೈಹಿಕವಾಗಿ ಬೇರಾಗಿದ್ದರೂ ಪ್ರೇಮವು ಪರಸ್ಪರ ಸಮ್ಮುಶ್ರವಾಗಿ ಆತ್ಮೀಯತೆಯ ಬೆಸುಗೆಯಿಂದ ಬಂಧಿತವಾಗಿರಬೇಕು. ಮಾನಸಿಕವಾಗಿ ಒಬ್ಬರಿಗೊಬ್ಬರು ಪ್ರೇಮದಾಳದ ನೆಲೆಯನ್ನು ಅರಿತವರಾಗಿ ಜೋಡು ಹಕ್ಕಿಗಳಂತಿರಬೇಕು. ಧರ್ಮಾನುಯಾಯಿಗಳಾಗಿ ನೀತಿ ನಿಯಮಗಳಿಗೆ ಬಹಿಷ್ಕಾರವಿಲ್ಲದೆ ಸಮಾಜದನಾಗರೀಕತೆಯನೆರೆಳು ತಾವಾಗಿ ತಮ್ಮ ಆದರ್ಶ ಜೀವನವನ್ನೆಲ್ಲರೂ ಅನುಸರಿಸುವಂತಿರಬೇಕು. ಜೀವನ ಧರ್ಮದಲ್ಲಿ ಬಾಳಿನ ಬೆಳಕನ್ನು ಕಾಣುವ ಹೆಗ್ಗುಲಿಯು ದಂಪತಿಗಳಲ್ಲಿ ಪಡಿಮೂಡಿರಬೇಕು. ಆತ್ಮೋನ್ನತಿಯೇ ಜೀವನದ ಧ್ಯೇಯವಾದವೆಂಬುದನ್ನು ಪತಿಪತಿಯರೀರ್ವರೂ ತಿಳಿದಿರಬೇಕು. ಪುರುಷರ ಜೀವಿತಕ್ಕಾಗಿ ಆಹಾರವನ್ನೊದಗಿಸಿಕೊಡುವ ಯಂತ್ರವೇ ಸ್ತ್ರಿಯೆಂದು ಎಣಿಸಬಾರದು. ಗಂಡಿಗಿದ್ದಷ್ಟೇ ಹೊಣೆ ಹೆಣ್ಣಿಗೂ ಇದೆ. "ತ್ವಂ ಸ್ತ್ರೀ, ತ್ವಂ ಪುಮಾನಸಿ ತ್ವಂ ಕುಮಾರ ಉತವಾ ಕುಮಾರೀ". ಸ್ತ್ರೀಯು ನೀನೇ ಪುರುಷನು ನೀನೆ, ಹುಡುಗಿಯು ನೀನೆ, ಹುಡುಗನು ನೀನೆ ಎಂದು ಉಪನಿಷತ್ತೇ ಸಾರುತ್ತಿದೆ.

ನಾವೆಲ್ಲರೂ ಈ ಪ್ರಪಂಚದಲ್ಲಿ ಜೀವಿಸಿರುವಂತೆ ಮೂಲಭೂತವಾಗಿದ್ದವಳೇ ಸ್ತ್ರೀ. ಅವಳು ಜಗನ್ಮಾತೆ! "ನಾರಿ ಒಲಿದರೆ ನಾಕ. ನಾರಿ ಸ್ವರ್ಗವೆಂದಾರಿ, ನಾರಿ ಮುನಿದರೆ ಮಾರಿ" ಎಂದು ಸರ್ವಜ್ಞನು ನಾರಿಯ ಹಿರಿಕಸನವನ್ನು ಅವಳ ನುಹದ್ ಶಕ್ತಿಯನ್ನು ಮನೋಜ್ಞವಾಗಿ ತನ್ನ ಸಾಹಿತ್ಯ ಕೃತಿಯಲ್ಲಿ ಪ್ರತಿಪಾದಿಸಿದ್ದಾನೆ. ಸಮಾಜದ ಪ್ರತಿಯೊಂದು ಸಂಘ ಸಂಸ್ಥೆಯಲ್ಲೂ ಮಹಿಳೆಯರ ಕಾರಸ್ಥಾನವು ಗಂಡಿನಂತೆ ಸಮಾನವಾಗಿದೆ. ಮಹಿಳೆಯರಿಂದ ಪರೋಕ್ಷವಾದ ಪ್ರೋತ್ಸಾಹ, ಪುರಸ್ಕಾರವಿಲ್ಲದೆ ಯಾವ ಕಾರ್ಯಕ್ರಮವೂ ಗಂಡಿನ ಕೈಗೂಡುವಂತಿಲ್ಲ. ಸಮಾಜ ಸುಧಾರಣೆಯ ಸಾರ್ವತ್ರಿಕ ಕೆಲಸ ಕಾರ್ಯಗಳಲ್ಲಾ ಹೆಣ್ಣಿನ ಕೈವಾಡ ಇದ್ದೇ ಇದೆ. ಸಂಸಾರ ಬಂಧಕ್ಕೆ ಕಟ್ಟಿ ಬಿದ್ದು ಮನೆಯ ಹೊಣೆಹೊತ್ತ ಗಂಡು—ದೇಶೋನ್ನತಿಯ ಸೇವಾರಂಗಕ್ಕಿಳಿದು ದುಡಿಯಬೇಕಿದ್ದರೆ ಅವನಿಗೆ ಹೆಣ್ಣಿನ ಬೆಂಬಲ ಬೇಕೇ ಬೇಕು. ಅವಳ ಅನುಮತಿ, ಗಂಡಿನ ಕೆಲಸದಲ್ಲಿ ಅವಳು ತೋರುವ ಆನಂದ, ಶ್ರದ್ಧೆ ಇವು ಅವನ ಕಾರ್ಯಭಾರದ ಫಲವೀಕ್ಷಣೆಯ ವೃಷ್ಟಿಕ್ಕೆ ಪುರಸ್ಕಾರದ ನೀರೆರೆದಂತೆ.

ಭಾರತೀಯ ಉನ್ನತಿಯ ಪರಿವರ್ತನೆಯಲ್ಲಿ ಅವಳ ನಿರಂತರ ಪರಿಶ್ರಮವೂ ಮಹತ್ವಿಕೆಯುಳ್ಳದ್ದು. ಭಾರತೀಯ ಸಂಸ್ಕೃತಿಯ ಉಜ್ವಲ ಪ್ರತೀಕವೇ ಸ್ತ್ರೀ ಶಕ್ತಿ. ಅವಳು ಕರ್ತವ್ಯಪಾಲನೆಗಾಗಿಯೇ ಅವಿರ್ಭಾವಿಸಿದವಳು. ನಮ್ಮ ಪೂರ್ವೇತಿಹಾಸದ ಪ್ರತಿಯೊಂದು ಸಂಪುಟದಲ್ಲೂ, ಚಾರಿತ್ರಿಕ ಘಟನೆಗಳಲ್ಲೂ ಸ್ತ್ರೀಯೇ ಸೂತ್ರ ಧಾರಿಣಿಯಾಗಿರುವುದನ್ನು ನಾವು ಮಹಾ ಗ್ರಂಥಗಳ ಉಲ್ಲೇಖದಿಂದ ತಿಳಿಯುತ್ತೇವೆ. ಗಂಡಿನ ಪಾತ್ರ ಪೋಷಣೆಯಲ್ಲಿ ಅವಳು ಮಾತೆಯಾಗಿ, ಮಡದಿಯಾಗಿ, ಸಹಭಾಗಿನಿಯಾಗಿ, ಸಹಚಾರಿಣಿಯಾಗಿ ಎಷ್ಟು ಸಹಕಾರ ನೀಡುತ್ತಿರುವಳೆಂಬುದನ್ನು ನಾವು ಸೂಕ್ಷ್ಮಾವಲೋಖನದಿಂದ ತಿಳಿಯಬೇಕಾದುದು ಧರ್ಮ. ಸ್ತ್ರೀ ಅಬಲೆಯೆಂದು ತಿರಸ್ಕರಿಸುವುದು ಸರ್ವಥಾ ಸಲ್ಲದ ಸಂಗತಿ. ಸಮಾಜದ ಸುಧಾರಣೆಗಾಗಿ, ದೇಶದ ಉನ್ನತಿಗಾಗಿ, ಜನತೆಯ ಸೇವೆಗಾಗಿ ಅವಳು ಸಬಲೆಯಾಗಿ ದುಡಿಯಲು ಸಮರ್ಥಳು. ಇದು ನಮ್ಮ ಕರ್ನಾಟಕದ ಇತಿಹಾಸ ಪುಟಗಳಿಂದ ವೀರ ಮಹಿಳೆಯರ ದಿವ್ಯ ಹಾಗೂ ಭವ್ಯ ಚರಿತ್ರೆಯನ್ನೂ ಆಳವಾಗಿ ಅಭ್ಯಾಸಿಸುವ ಯತ್ನ ಮಾಡಿದಲ್ಲಿ ತಿಳಿದು ಸಮಾಧಾನವಾಗುವುದು. ಮಹಿಳೆಯರನ್ನು ಗೌರವಿಸದೆ, ಅವರನ್ನು ಸಮಾಜದಲ್ಲೂ, ರಾಜಕೀಯದಲ್ಲೂ ಸಮದೃಷ್ಟಿಯಿಂದ ಕಾಣದಿದ್ದಲ್ಲಿ ನಮ್ಮ ಜನತೆ, ನಮ್ಮ ದೇಶ ಮೇಲ್ಕೆಯ ಮೇಲುಹಂತವನ್ನೇರುವಂತಿಲ್ಲ. ಗಂಡಿನಿಂದಲೇ ಸರ್ವವೂ ಸಾಧ್ಯವೆನ್ನುವ ಯೋಜನೆ ಮೆಚ್ಚುವಂತಿಲ್ಲ. ಭಾರತದ ನಾರಿಯರ ಆದರ್ಶವೂ, ಆದರಣೀಯವೂ ಆದ ತ್ಯಾಗ, ಕರ್ತವ್ಯ ಪಾಲನೆ, ನಿಸ್ವಾರ್ಥ ಸೇವೆ, ತಾಳ್ಮೆ, ವಿಶಾಲ ಮನೋಭಾವ, ಸಮದೃಷ್ಟಿ, ಕ್ಷಮಾಶೀಲ ಇನೆಲ್ಲ ಹಿರಿಗುಣಗಳಿಗೆ ಮೆಚ್ಚಿನ ಉಡುಗೊರೆಯ ಸ್ನೇಯದೆ ನ್ಯಕ್ಕೆ—ಅವನೊಬ್ಬ ಗಾಂಪ!

ಜೀವನದಲ್ಲಿ ಆಶಾವಾದಿಯಾಗಿ, ಎತಹ ಕಷ್ಟನಷ್ಟಗಳಿಗೂ ಎದೆಗೊಟ್ಟು ದುರಿಸುವ ಮನೋಬಲ ಸ್ತ್ರೀಯಲ್ಲಿದೆ ಎಬುದು ಸುಸ್ಪಷ್ಟ. ಜೋಧಪ್ರದವಾಗಿರುವ ಉಚ್ಚ ಮಟ್ಟದ ಸಾಹಿತ್ಯ ಕೃತಿಗಳಲ್ಲೂ ನಾರಿಯರೇ ನಾಯಕಿಯರಾಗಿ ಜೀವಿಗುತ್ತಿರುವುದನ್ನು ನಾವು ತಿಳಿಯಬಹುದಾಗಿದೆ. ಕನ್ನಡನಾಡಿನ ಇತಿಹಾಸದಲ್ಲಿ ಮಹಿಳೆಯರನ್ನೇಕರು ತಮ್ಮ ನಾಡಿನಬಿಕ್ಯತೆಗಾಗಿ, ಗೌರವರಕ್ಷಣೆಗಾಗಿ, ಪರಕೀಯರ ಆಕ್ರಮಣ ಪ್ರತಿಭಟನೆಗಾಗಿ, ಸ್ವಾತಂತ್ರ್ಯ ಸ್ಥಿರಸ್ಥಾಪನೆಗಾಗಿ ಜೀವದ ಹಂಗು ತೊರೆದು ರಣರಂಗಕ್ಕಿಳಿದು, ಕತ್ತಿ ಹಿಡಿದು ಹೋರಾಡಿ ಮಡಿದವರು ಎಷ್ಟೋ ಮಂದಿ. ಸಾಹಿತ್ಯ ಕ್ಷೇತ್ರದಲ್ಲೂ ಕೀರ್ತಿ ಶಿಖರದ ನ್ನೇರಿ ವಿಜಯ ಪತಾಕೆಯನ್ನು ಹಾರಿಸಿದವರು—ವಾಗ್ದೇವಿತಂತಿ, ಅಕ್ಕ ಮಹಾದೇವಿ ಮೊದಲಾದವರು ತಮ್ಮ ಕೃತಿಗಳಿಂದ ನಾಡಿನ ಹಿರಿಯರ ಬುದ್ಧಿ ಶಕ್ತಿಯನ್ನು ಎಚ್ಚರಿಕೋರಿದ ಚಿರಕೀರ್ತಿಯ ಕಿಡಿಗಳು. ಇಂದಿನ ಮಹಿಳೆಯರಿಗೆ ಅವರ ಅಸಾಮಾನ್ಯ ಕಾವ್ಯ ಪ್ರತಿಭೆಯೂ, ನವ್ಯ ಜೀವನವೂ ಮಾರ್ಗ ದರ್ಶನ ಮಾಡುವ ಆದರ್ಶವಾಗಿದೆ.

ಜಗತ್ತಿನ ಪ್ರಗತಿಗೆ ಸ್ತ್ರೀ ಪುರುಷರಿರ್ವರೂ ಸಮಾನರಾಗಿ ದುಡಿಯ ಬೇಕಾದುದು ಸುಸಂಗತಿಯೇ ಸರಿ. ಅಂತಾಗಿಯೆ ಸ್ತ್ರೀ ಶಿಕ್ಷಣವೂ, ಸ್ತ್ರೀ ಸ್ವಾತಂತ್ರ್ಯವೂ ಅಗತ್ಯವೆಂದು ಮಹಾ ಪ್ಪುರು ಆಗಾಗ ಉದ್ಗಾರವನೆತ್ತಿದ್ದಾರೆ. ಮುಂದಿನ ಜನಾಂಗವನ್ನು ನಾಗರಿಕ ಪ್ರಜೆಗಳಾಗಿ ರೂಪಿಸುವ ಹೊಣೆ ಸ್ತ್ರೀಗಲ್ಲದೆ ಪುರುಷನದ್ದಲ್ಲ. ಮಹಾ ಪುರುಷರೂ, ದೇಶೋದ್ಧಾರಕರೂ ಹೆತ್ತ ಮಾತೆಯ ಪವಿತ್ರರೂಪಿಗಳು. ಇದು ಸಮರ್ಥನೆಗೆ ಭಕ್ತಿ ಪತಿ ಶಿವಾಜಿಯು ಚರಿತ್ರೆಯೇ ನಮಗೊದಗಿದ ನಿದರ್ಶನ. ಇಂಥವರು ದೇಶಕ್ಕಾಗಿ ಶ್ರಮಿಸಿ ಸಂಪಾದಿಸಿದ ಪುಣ್ಯಫಲದಲ್ಲೂ ಕೀರ್ತಿಯಲ್ಲೂ ಸ್ತ್ರೀಯು ಸಮಭಾಗಿಯಾಗಿಲು ಅರ್ಹಳು. ಗೋವಾಲರಿಂದ ಭೂಪಾಲರತನಕ ಜನ್ಮವಿತ್ತು ಪೊರೆವನಳು ಸ್ತ್ರೀ ಭಾವೀ ಪ್ರಪಂಚದ ಭವ್ಯ ಭವಿಷತ್ತನ್ನು ರೂಪಿಸುವ ರಾಷ್ಟ್ರನಾಯಕರನ್ನೂ ಸೃಷ್ಟಿಸಿದವಳು ಸ್ತ್ರೀ ಜಗತ್ತಿನ ಆಗು ಹೋಗುಗಳೆಲ್ಲವುಗಳ ಮೂಲವೇ ಸ್ತ್ರೀ ಎಂದೊಪ್ಪಿ ತರ್ಕಿಸಿ ತಲೆನೋವು ಮಾಡಿಕೊಳ್ಳುವ ಅವಶ್ಯವಿಲ್ಲ. ನಿಸ್ವಾರ್ಥ ಸೇವೆ, ಕರ್ತವ್ಯಪಾಲನೆಯ ಮಾರ್ಗದರ್ಶಕಗಳು ದೇಶದ ಬಹುಮುಖ ಪ್ರಗತಿಗೆ ಬೆನ್ನೆಲುಬೇಕಾಗಿವೆ!

—ಕಡಂದಲೆ ಜಯರಾಮ ಶೆಟ್ಟಿ


.... ಹೊಸ ಪುಸ್ತಕ ....

ಆಲ್ಫ್ರೆಡ್ ನಾರ್ಥ್ ವೈಟ್‌ಹೆಡ್ ಬರೆದ

**ಶಿಕ್ಷಣದ ಧ್ಯೇಯಗಳು**

ಮತ್ತು ಇತರ ಪ್ರಬಂಧಗಳು

ಅನುವಾದಕರು:

ಕೆ. ಬಿ. ರಾಮಕೃಷ್ಣ ರಾವ್, ಬಿ. ಎ. (ಆನರ್ಸ್)

ಉ. ಲಕ್ಷ್ಮೀನಾರಾಯಣಾಚಾರ್ಯ, ಎಂ. ಎ; ಎಲ್. ಟಿ.

ಬೆಲೆ: 2—4—0 / 2·25 ರೂ.

ಪ್ರಕಾಶಕರು:

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ.



PHONE 203 ESTD 1926

FOUNDATION STONE

Engraved MARBLE TABLETS

(GOLD FILLED & LEAD FILLED)

Work by

Crown RUBBER STAMP CO.

BALMATTA ROAD, MANGALORE.

## ಸಹಕಾರ ಪದ್ಧತಿ

(೨ನೇ ಪುಟದಿಂದ)

ಅಮೆರಿಕಾ ಮತ್ತು ಬ್ರಿಟನ್ನಿನಲ್ಲಿ ಕೆಲವು ಬ್ಯಾಂಕುಗಳಲ್ಲಿ ತಕ್ಕ ವ್ಯವಸ್ಥೆಗಳನ್ನು ಮಾಡಿದರೂ ಸರಕಾರ ಮತ್ತು ಇತರ ಶಾಲಿಕರ ಪ್ರಭಾವದಿಂದಾಗಿ ಹೆಚ್ಚುಕಾಲ ಪದ್ಧತಿ ಬಾಳಲಿಲ್ಲ. ಆದರೂ ಈ ವ್ಯಕ್ತಿ ಪ್ರಭಾವದಿಂದ "ಸಮಾಜವಾದ" ಎಂಬ ಶಬ್ದವು ಪ್ರಚಾರಗೊಳ್ಳುತ್ತಾ ಂತೆ..

ಭಾರತವು ಸ್ವತಂತ್ರ ರಾಷ್ಟ್ರವಾದ ಳಿಕೆಯಲ್ಲಿ ಈ ಸ್ವಾತಂತ್ರ್ಯ ಪದಾರ್ಥ ನ್ನು ಸಾರ್ಥಕಗೊಳಿಸುವತ್ತ ಸರ ಕಾರದ ದೃಷ್ಟಿ ಹರಿಯಿತು. ಅದಕ್ಕಾ ಎಲ್ಲರಿಗೂ ಅನ್ನವನ್ನು ಒದಗಿ ಸುವುದೇ ಸ್ವತಂತ್ರತೆಯು ಗುರಿಯಾಯಿ ತು. ಈ ಅಭಿವೃದ್ಧಿ ಕಾರ್ಯಗಳನ್ನು ರೂ ಪಿಸಲು ಯೋಜನಾ ಆಯೋಗದ ನಿರ್ಮಾಣವಾಯಿತು. ಯೋಜ ನೆಯೋಗವು ಸರಕಾರಕ್ಕೆ ನಿಶೇ ಷ ಮಹತ್ವವನ್ನಿತ್ತಿತು. ಅದುದ ರಿಂದಲೇ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಈ ಮಾತುಗಳನ್ನು ಸೇರಿ ದ್ದಾರೆ. "ನಿಯೋಜಿತ ಸಿಕಾಸದ ಒಂದು ಅಂಗವಾಗಿ ಸಹಕಾರ ವಿಭಾಗದ ನಿರ್ಮಾ ಣವಾಗಬೇಕು. ಕೆಲ ಪ್ರದೇಶಗಳು ಸಹ ಕಾರ ಪದ್ಧತಿಯಿಂದ ಸಂಘಟಿಸಲು ವಿಶೇ ಷ ರೂಪದಲ್ಲಿ ಉಪಯುಕ್ತವಾಗಿವೆ ರೈತ ರಿಗೆ ಸಾಲ ಕೊಡಲು, ಬೆಳೆಯನ್ನು ವೇಟೆ ಯಲ್ಲಿ ಯೋಗ್ಯ ಬೆಲೆಗೆ ಮಾರಲು, ಉ ತ್ತಮ ಬೀಜಗಳನ್ನು ಒದಗಿಸಲು, ಈ ಸಹಕಾರೀ ಪದ್ಧತಿಯು ಪ್ರಯೋಜನಕಾ ರಿಯಾಗಿದೆ. ಮಜೂರಿ ಕ್ಷೇತ್ರಗಳಲ್ಲಿ ಈ ಸಹಕಾರ ಭಾವನೆಯು ಉತ್ತಮೋ ತ್ತರ ಆರ್ಥಿಕ ವ್ಯವಹಾರದ ಮುಖ್ಯ ಅಧಾ ರವಾಗಿ ಮುಂದುವರಿಯಬೇಕು.

ರಾಷ್ಟ್ರೀಕರಣದಿಂದ ಸಹ ಸಾಧಿಸಲಾ ಗದು, ಪ್ರಯೋಜನವನ್ನು ಸಹಕಾರ ಪದ್ಧತಿಯಿಂದ ಸಾಧಿಸಿಕೊಳ್ಳಬಹುದು. ಯೂಗೋಸ್ಲಾರ್ಕ್ ದೇಶದಲ್ಲಿ ಈ ಸಹಕಾರ ಪದ್ಧತಿಯು ಯಶಸ್ವಿಯಾಗುತ್ತಾ ಇದೆ. ಮಾನವರಲ್ಲಿ ಸಹಜವಾಗಿರುವ ಸಹಕಾರ ಬುದ್ಧಿಯನ್ನು ಯೋಗ್ಯ ಮಾರ್ಗದರ್ಶನ ದಿಂದ ಉಪಯೋಗಿಸಿಕೊಂಡರೆ, ಸಹಕಾರ ಪದ್ಧತಿಯು ಎಷ್ಟಕ್ಕೆಂತಲೂ ಸಾಮೂಹಿಕ ಲಾಭವನ್ನು ಅಧಿಕ ಪ್ರಮಾಣದಲ್ಲಿ ಮಾ ಡಿಕೊಡಬಲ್ಲದು. ವೈಯಕ್ತಿಕ ಸಂಪತ್ತ ನ್ನು ಮೂರಿ, ಸರ್ವರ ಉದಯವನ್ನೂ ಈ ಸಹಕಾರಿ ಮನೋವೃತ್ತಿಯು ಮಾಡಿಕೊ ಡುವುದು. ಸಹಕಾರಿ ವ್ಯಾಪಾರದಲ್ಲಿ ಒದ ಗಿಬರುವ ಲಾಭಾಂಶವು ಅದರ ಸದಸ್ಯ ರಲ್ಲಿಯೂ ವಿತರಣೆಯಾಗುವುದು. ಹಾಗಾಗಿ ಸಂಪತ್ತು ಒಂದೆಡೆಯಲ್ಲೇ ಕೇಂ ದ್ರೀಕೃತವಾಗುವ ಪ್ರಮೇಯವು ಕಪ್ಪು ವುದು. ಸಂಪತ್ತಿನ ಹಂಚುವಿಕೆ ಯೋಗ್ಯ ರೀತಿಯಲ್ಲಿ ಶ್ರುತಿಯೊಬ್ಬ ಸದಸ್ಯನಲ್ಲೂ- ಆತನು ಉತ್ತಮ ವರ್ಗದವನಿರಲಿ, ಮ ಧ್ಯಮ ಇಲ್ಲ ನಿಮ್ನ ವರ್ಗದವನಿರಲಿ— ಹಂಚಿ ಹೋಗುತ್ತದೆ.

ಪಂಡಿತ ನೆಹರೂ ಒಮ್ಮೆ ಭಾಷಣ ದಲ್ಲಿ ಹೇಳಿದ್ದರು: "ಹಳ್ಳಿಯಲ್ಲಿರುವ ೫೦ ಅಥವಾ ೧೦೦ ಕುಟುಂಬಗಳು ತಮ್ಮ ಪಾಲಿನ ಜಮೀನನ್ನು ಒಂದು ಸೇರಿಸಿ, ಬೇಸಾಯ ಮಾಡಬೇಕು. ಬೆಳೆಯು ಕೈ ಸೇರಿದನಂತರ ಕಂತಮ್ಮ ಪಾಲಿನ ಧಾನ್ಯ ಗಳನ್ನು ತಕ್ಕ ಪ್ರಮಾಣದಲ್ಲಿ ಹಂಚಿ ಕೊಳ್ಳಬೇಕು" ಎಂದು. ಇದರಿಂದ ಎರ ಡು ಲಾಭವಾಗುವುದು. ರೈತರಲ್ಲಿ ಬೆಳೆ ಯಬಹುದಾದ ಪಾರಸ್ಪರಿಕ ಜಗಳಗಳು ನಾಯಮವಾಗುವುದೊಂದು, ಉತ್ಪನ್ನದಲ್ಲಿ ಪ್ರತ್ಯಪ್ರತ್ಯೇಕ ಬೇಸಾಯ ಮಾಡುವುದೆ ಕ್ಕಿಂತಅಧಿಕ ಪ್ರಮಾಣದಲ್ಲಿ ಬೆಳೆ ಕೈಗೆ ಬರುವುದಿನ್ನೊಂದು. ಇದಕ್ಕೆ ಸಮಷ್ಟಿ ವ್ಯವಸಾಯವೆಂದು ಹೆಸರು.

ನಮ್ಮ ಊರಿನಲ್ಲಿ ಜಮೀನು ತುಂಡು ತುಂಡುಗಳಾಗಿ ಹಂಚಲಾಗಿದೆ. ಹಾಗಾ ಗಿ ಚಿಕ್ಕ ಚಿಕ್ಕ ಗದ್ದೆಗಳೇ ದೃಷ್ಟಿಗೋಚರ ವಾಗುತ್ತವೆ. ಈ ಗದ್ದೆಗಳನ್ನು ಪ್ರತ್ಯೇಕಿ ಸುವುದಕ್ಕಾಗಿ ಧರೆಗಳನ್ನು ಹಾಕ ಲಾಗುವುದು. ಇದಕ್ಕಾಗಿಯೇ ಭೂಮಿಯ ಬಹುಭಾಗವು ವ್ಯರ್ಥ ವ್ಯಯವಾಗುವುದು. ಸಮಷ್ಟಿ ವ್ಯವ ಸಾಯವನ್ನು ಸಹಕಾರಿ ವಿಧಾನದಿಂದ ನಡೆಸಿಕೊಂಡರೆ, ಆಗ ಎಲ್ಲ ಗದ್ದೆಗಳು ಒಂದಾಗಿ ಧರೆಯ ಭಾಗವೂ ಬೆಳೆ ಬೆಳೆಯಲು ದೊರೆಯುವುದು. ಅಧಿಕ ಜಮೀನಿನ ಲ್ಲಿ ಅಧಿಕ ಉತ್ಪತ್ತಿಯಾಗುವುದು. ಹಾಗಾಗಿ ಈ ವ್ಯವಸಾಯವು ಲಾಭದಾಯಕ ವಾಗಿದೆ. ಒಂದಾಗಿ ನೀರಾವರಿ ವ್ಯವಸಾಯವನ್ನು ಮಾಡುವಾಗ ಸಣ್ಣ ಸಣ್ಣ ಯಂತ್ರಗಳ ಸಹಾಯವನ್ನೂ ಪಡೆಯಬಹುದು. ಇದ ರಿಂದ ಉತ್ತಮ ಬೆಳೆಯು ದೊರೆಯುತ್ತ ದೆ. ಆದರೆ, ಸಣ್ಣ ಶ್ರೇಷ್ಠನಿಗೆ ಯಾಂತ್ರಿಕೋ ಪಕರಣದ ನೆರವನ್ನು ಬಯಸುವುದು ಆ ಕಾಶ ಕುಸುಮವೇ ಸರಿ.

ನಾವು ಭಾರತವು ಸ್ವಯಂಪೂರ್ಣ ದೇಶವಾಗಬೇಕೆಂದೂ, ಸಂಘಟಿತ ರಾಷ್ಟ್ರ ವಾಗಬೇಕೆಂದೂ ಬಯಸುತ್ತೇವೆ. ಸಹ ಯೋಗವು ಒಂದು ಮಹತ್ವದ ವಸ್ತುವಾ ಗಿದೆ. ಸಹಕಾರಿ ಸಂಘಗಳ ಮೂಲಕ ವಾಗಿಯೇ ಸಂಘಟನೆಯಾಗುವುದು ಉ ತ್ತಮ ಉಪಾಯ. ಕೇವಲ ಕೃಷಿ ವಿಧಾ ನದಲ್ಲಿ ಮಾತ್ರವಲ್ಲ, ಕಾರ್ಖಾನೆಗಳನ್ನೂ ಈ ಸಹಕಾರಿ ಪದ್ಧತಿಯಿಂದ ನಡೆಸಬ ಹುದು ದೇಶದೆಲ್ಲೆಡೆಗಳಲ್ಲೂ ಸಹಕಾರಿ ಸಂಘಗಳ ಸ್ಥಾಪನೆಯಾಗಬೇಕು. ನಮ್ಮ ದೇಶವು ಸಹಕಾರಿ ಕಾಮನ್‌ವೆಲ್ತ್ ರಾ ಷ್ಟ್ರವಾಗಬೇಕು. ಇದು ನಮ್ಮ ಧ್ಯೇಯವಾ ಗಬೇಕು.

ಕೆಲವರು ಸಹಕಾರ ಮತ್ತು ಸಮಾಜ ವಾದಗಳೆಂದರೆ, ಮೂಗು ಮರಿಯುತ್ತ ಅದು ಭಾರತೀಯ ಪರಂಪರೆಗೆ ವಿರುದ್ಧ ವಾದುದೆಂದು ಹೇಳುತ್ತಾರೆ. ಈ ಆಭಿಪ್ರಾ ಯವನ್ನು ಪುರಸ್ಕರಿಸುವವರು ಇತಿಹಾಸ ವನ್ನು ತಿಳಿದಿಲ್ಲವೆನ್ನಬೇಕು. ವೇದಕಾಲ ದಲ್ಲಿಯೂ ಭಾರತದಲ್ಲಿ ಸಭೆ, ಸಮಿತಿ, ವಿದಥಗಳಿದ್ದ ಇತಿಹಾಸವಿದೆ. ಇದನ್ನು ಅವರು ಕಂಡುಕೊಂಡಿಲ್ಲ. ಇನ್ನೊಂದು ಪಂಗಡದವರಭಿಮತವು ರೈತರು ಈ ಸಹ ಕಾರಿ ಪದ್ಧತಿಗೆ ಒಪ್ಪುವುದಿಲ್ಲ ಎಂಬುದು ಆದರೆ, ಸಾವಿರಾರು ವರ್ಷಗಳ ಹಿಂದಿನಲ್ಲಿ ನಮ್ಮ ರೈತರು ಸಮಷ್ಟಿ ವ್ಯವಸಾಯ ವನ್ನು ನಡೆಯುತಿದ್ದರೆಂಬುದನ್ನೂ, ಈಗ ನಾವು ಅದೇ ವಿಧಾನವನ್ನನುಕರಿಸಬೇ ಕೆಂದೂ ರೈತರಿಗೆ ತಿಳಿಹೇಳಬೇಕು. ಈ ವಿಚಾರವನ್ನು ವಿಮರ್ಶಿ ಸುತ್ತ ನೆಹರೂ ಹೇಳಿದ್ದರು: "ಯಾರು ದೂರುತರುವರೋ ಅವರೇ ಈ ವಿಧಾನ ವನ್ನೊಪ್ಪುವುದಿಲ್ಲ; ರೈತರಿಗೆ ತಮ್ಮ ಉ ತ್ಪಾದನೆಯನ್ನಧಿಕ ಮಾಡುವ ಹೇರಾಸೆ ಯಿಲ್ಲವೆ? ಹಾಗಿರುವಾಗ, ತಮ್ಮ ಸಂಪದ ಭಿವೃದ್ಧಿಗಾಗಿ ಹಾತೊರೆಯುತ್ತಿರುವಾಗ, ಅದೇ ಈ ವಿಧಾನವನ್ನು ನಿರಾಕರಿಸುವ ರು? ಮತ್ತೂ ಅವರು ಮಾನ್ಯಮಾಡದೆ ಹೋದರೆ—ಅವರು ತಮ್ಮ ದರಿದ್ರತೆ ಮ ತ್ತು ಬಡತನವನ್ನು ಆದು ಹೇಗೆ ದೂರವಿ ರಿಸುವರು?"

ಆದುದರಿಂದ ಕೃಷಿ ವಿಧಾನದಲ್ಲಿ ಸ ಮಾಜವಾದವು ನಿಜಕ್ಕಾಗಿಯೂ ಪರಿಣಾ ಮಕಾರಿಯಾದುದು; ಮತ್ತು ಇದರಿಂದ ದೇಶದ ಸಂಪತ್ತೂ ಅಧಿಕಗೊಳ್ಳುವುದು. ಸರಕಾರವೇ ರಾಷ್ಟ್ರೀಕರಣ ಮಾಡಿ ಈ ಕ್ರಮವನ್ನು ಅನುಸರಿಸುವುದರಿಂದ ವಿಶೇಷ ಪ್ರಯೋಜನವಾಗಲಾರದು. ಬದಲು, ಕೃ ಷಿಕರೇ ಮೇಲೆ ತಿಳಿಸಿದಂತೆ ಸಹಕಾರಿ ತತ್ವಗಳಡಿಯಲ್ಲಿ ಮುನ್ನಡೆದರೆ, ಆದರಿಂದ, ಅವರ ಬಡತನವೂ ದೂರವಾಗದಿರದು.

"ಇದೇ ಸಹಕಾರಿ ಪದ್ಧತಿಯನ್ನು ಕಾ ರ್ಖಾನೆಗಳಿಗೂ ಅನುಸರಿಸ ಬಹುದು. ಆ ಲ್ಲಿನ ಮಜೂರರಿಗೆ ತಕ್ಕ ಪ್ರಾತಿನಿಧ್ಯವನ್ನೀ ಯಬೇಕು. ಒಂದೆಲ್ಲ ಒಂದು ದಿನ ಕಾ ರ್ಖಾನೆಗಳೆಲ್ಲ ಸಕಲ ಕಾರ್ಯಕಲಾಪಗಳೂ ಈ ಮಜೂರರ ಹತೋಟಿಯಲ್ಲಿ ಬರುವು ದು ನಿಶ್ಚಯ. ಆದರೆ, ಹಾಗಾಗುವುದಕ್ಕಿಂ ತ ಕಾರ್ಖಾನೆಗಳ ಮಾಲಿಕರು ತಾವಿಂದೀ ಗಲೇ ಮನಸ್ಸುಮಾಡಿ, ಸಹಕಾರಿ ಭಾವ ನೆಯಿಂದ ತಮ್ಮಲ್ಲಿಯ ಕೆಲಸಗಾರರನ್ನು ಕಾಣುವುದು ಕಾರ್ಖಾನೆಯ, ಮಜೂರ ಹಾಗೂ ದೇಶದ ಹಿತದೃಷ್ಟಿಯಿಂದ ಪ ರಿಣಾಕಾರಿಯಾದುದು" ಎಂದು ನೆಹರೂ ಒಂದೆಡೆ ವ್ಯಕ್ತಪಡಿಸಿದ್ದಾರೆ. ಸರಕಾರವೇ ಈ ನಿಯಮಗಳನ್ನು ವ್ಯವಹಾರಕ್ಕೆ ತರ ಬಹುದು, ಆದರೆ, ಆದರಿಂದ ತುಂಬ ಕಠಿ ಣಪರಿಸ್ಥಿತಿಗಳು ಒದಗುತ್ತವೆ. ಆದುದರಿಂ ದ ಜನರ ಮನಃ ಪರಿವರ್ತನೆಯಿಂದಲೇ ಇಂತಹ ಕಾರ್ಯಗಳು ಫಲಿಸಬೇಕಲ್ಲದೆ ಶಾಸನದಿಂದಲ್ಲ.

ಭಾರತವು ಸಮಾಜವಾದ ಮಾದರಿಯ ರಾಷ್ಟ್ರವಾಗುವ ಧ್ಯೇಯವನ್ನು ಇಂದಿನ ಕಾಂಗ್ರೆಸ್ ಸರಕಾರವಿಟ್ಟುಕೊಂಡಿದೆ. ಬಡ ವರು-ಶ್ರೀಮಂತರನಡುವಿರುವ ಮಹತ್ತರ ವಾದ ಪ್ರಾಕಾರವನ್ನು ಕುಗ್ಗಿಸಿ, ಹೆಚ್ಚು ಅಂತರವಿಲ್ಲದಂತೆ ಮಾಡುವುದೇ ಈ ಸ ಮಾಜವಾದ. ಇದನ್ನು ಸಹಕಾರದಿಂದಲೇ ಮುನ್ನಡೆಸಬೇಕು.

ಭಾರತದಲ್ಲಿ ಸಹಕಾರಿ ಚಳವಳವು ಪ್ರಚಾರದಲ್ಲಿದ್ದರೂ ಅದು ಸಾಕಷ್ಟು ಮುಂದುವರಿದಿಲ್ಲ. ಕೆಲವೆಡೆ ಸಹಕಾರಿ ಸಂಸ್ಥೆಗಳು ದಿವಾಳಿ ಹೋದುದೂ ಇದೆ. ವೈಯಕ್ತಿಕ ಸ್ಪರ್ಧೆಯಲ್ಲಿ ಸಹಕಾರಿ ಸಂಸ್ಥೆ ಗಳು ಬಹುಕಿ ನಿಲ್ಲುವ ಸಂಭವ ಕಡಿಮೆ ಯಾಗಿದೆ. ಆದಕ್ಕಾಗಿ, ಜನರು 'ಸಹಕಾ ರ'ದ ಮೇಲೆ ವಿಶ್ವಾಸವಿಟ್ಟು, ಸಹಕಾರೀ ಪದ್ಧತಿಯನ್ನು ಬೆಳೆಸಬೇಕು. ವೈಯಕ್ತಿಕ ವ್ಯಾಪಾರ್ಯನನ್ನು ಕಡಿಮೆ ಮಾಡಬೇಕು. ಆ ಗ ಮಾತ್ರ ಸಹಕಾರ ಪದ್ಧ ತಿಯು ಯಶಸ್ವಿಯಾಗಿ ದೇಶದ ಪ್ರತಿಯೊಂದು ಕ್ಷೇತ್ರದಲ್ಲೂ ವ್ಯವಹಾ ರಕ್ಕೆ ಬಂದು, ದೇಶದ ಸಾಮಾನ್ಯ ಜನರ ಉತ್ಪಾದನೆಯು ಅಧಿಕವಾಗುವುದು, ಆವರ ಬಡತನವೂ ನೀಗುವುದು. ಸಮಾ ಜ ಕಲ್ಯಾಣವಾಗುವುದಲ್ಲದೆ ಜೊತೆಗೆ ದೇ ಶದ - ಸರಕಾರದ-ಉದ್ದೇಶವೂ ಫಲಿಸು ವುದು. ಇದಕ್ಕಾಗಿ, ಶಕ್ತಿ ಮೀರಿ ದುಡಿ ಯುವುದು ಪ್ರತ್ಯೇಕ ದೇಶವಾಸಿಯ ಕರ್ತ ವ್ಯವಾಗಿದೆ.

ಅರಿದಿನದ ನಮ್ಮ ಯತ್ನದಿನದೇನೆನ್ನ ದಿರು
ಕಿರಿದು ನೋಡಗೂಡಿರಲು ಸಿರಿಯ ಹುದು ಬಾಳ್ಗೆ
ಪರಿಸೋಪಿಸದೆ ನಿನ್ನೊಡಲ ದಾರಿ ಮರದ ಫಲ?
ಕಿರುಜಾಜಿ ಸೊಗಕುಡದೆ— ಮಂಕು ತಿಮ್ಮ?॥

(ಸಾಧಾರ)

— ಎಸ್. ಗೋಪೀಚಂದ ರಾವ್,
ಉಡುಪಿ.


## ಮೂಲ್ಕಿ ಬೇಂಕ್ ಲಿಮಿಟೆಡ್,
ಮೂಲ್ಕಿ.

ಜಿಲ್ಲೆಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದು ವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿ ಕೇಟುಗಳು 4½% ಬಡ್ಡಿ ಗಳಿಸುತ್ತವೆ.

**ನಮ್ಮ ಬಡ್ಡಿ ದರಗಳು.**

| ನಿರಿಖು ಠೇವಣಾತಿ. | |
|---|---|
| 24 ತಿಂಗಳಿಗೆ | 4% |
| 12 ,, | 3½% |
| 6 ,, | 3½% |
| 3 ,, | 3% |
| ಸೇವಿಂಗ್ಸ್ ಬೇಂಕ್ ಲೆಕ್ಕ | 2% |
| ಕರೆಂಟ್ ಎಕೌಂಟು | ½% |

THE MOOLKY BANK, LTD. MULKI



## ಕುಮಾರಿ ಬಿಲ್ಲೆಗಳು

**Govt. Regd.**

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ನಿ.ಪಿ.ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

**P. DEVEE & Co.** (N. J.) CALCUTTA—40.

ಸ್ಥಾಪಕರು: ಶ್ರೀ ಕಂಪೆನಿ, ಮಂಗಳೂರು—1.

## ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಸುಸ್ತಕಗಳನ್ನು ಕಳಿಸುವವರು ದಯವಿಸಾದಿ ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ನ.)

### PANCHA RATNA (ಇಂಗ್ಲೀಷ್)
### (ಪಂಚರತ್ನ)

ಲೇಖಕ: ಯು. ಆರ್. ಆಚಾರ್ಯ ಯಂ. ಎ. ಪ್ರಕಾರಕರು: ಶ್ರೀ ಮಧ್ವ ಸಂಘ ದಿಲ್ಲಿ ಕ್ರೌನ್ 8 ಆಕಾರದ 38 ಪುಟ. ಬೆಲೆ: 0-10-0 ಆಣೆ.

ಇಂಗ್ಲೀಷಿನ ಈ ಚಿಕ್ಕ ಪುಸ್ತಕದಲ್ಲಿ ದ್ವೈತ ಮತ ಸ್ಥಾಪನಾಚಾರ್ಯ ಶ್ರೀ ಮನ್ಮಧ್ವಾಚಾರ್ಯ ಮತ್ತು ಮಾಧ್ವತತ್ವವನ್ನು ಪಚಾರಕ್ಕೆ ತಂದವರಲ್ಲಿ ಪ್ರಮುಖರಾದ ಶ್ರೀ ಶ್ರೀಪಾದ ಜಯತೀರ್ಥ, ವ್ಯಾಸರಾಯತೀರ್ಥ, ವಾದಿರಾಜತೀರ್ಥ ಮತ್ತು ರಾಘವೇಂದ್ರತೀರ್ಥ-ಇವರ ಜೀವನ ಚರಿತ್ರೆಯನ್ನು ಸಂಕ್ಷೇಪವಾಗಿ ಸಂಗ್ರಹಿಸಲಾಗಿದೆ. ಕೊನೆಯಲ್ಲಿ ವೇದ ತತ್ವಗಳ ಪ್ರಾಮುಖ್ಯ ಸೂತ್ರಗಳೂ ಇವೆ.

ಸನಾತನ ಧರ್ಮತತ್ವಗಳನ್ನು ಸಾಕಷ್ಟು ಅಭ್ಯಾಸಿಸಿ ಭಾರತೀಯರಿಗೆ ಧಾರ್ಮಿಕ ಬೋಧನೆಯನ್ನು ಮಾಡಿದ ಮೂವರು ಮತಾಚಾರ್ಯರಲ್ಲಿ ಶ್ರೀ ಮಧ್ವಾಚಾರ್ಯರು ಬಹುಪ್ರಸಿದ್ಧರು. ಶ್ರೀ ಮನ್ಮಧ್ವಾಚಾರ್ಯರು ದ್ವೈತಮತ ಸ್ಥಾಪಕರಾದರೂ ಆ ಮತವನ್ನು ಪ್ರಚಾರಗೊಳಿಸಿದ ಕೀರ್ತಿಯು ಬಹುಪಾಲು ಶ್ರೀ ಜಯತೀರ್ಥರಿಗೂ ಶ್ರೀ ವ್ಯಾಸರಾಯ ತೀರ್ಥರಿಗೂ ಸಲ್ಲಬೇಕು. ಅಂಸ್ಲ ವಿಮರ್ಶಕನೊಬ್ಬನು ಶ್ರೀ ಜಯತೀರ್ಥರಿಷ್ಟು ವೇದ, ಉಪನಿಷತ್ತು, ವ್ಯಾಕರಣಗಳನ್ನು ಅಭ್ಯಾಸಿಸಿದ ವಿದ್ವಾಂಸರು ಭಾರತದಲ್ಲಿ ಬೇರೊಬ್ಬರಿದ್ದಾರೋ ಎಂಬುದು ಅನುಮಾನ" ಎಂದಿದ್ದನು. ಶ್ರೀ ವ್ಯಾಸರಾಯ ತೀರ್ಥರೂ ಉಳಿದ ಶ್ರೀಗಳಂತೆ ಹಾಗೆಯೇ ಅನೇಕ ಗ್ರಂಥಗಳನ್ನು ರಚಿಸಿಯೂ ವಿರೋಧಿಗಳನ್ನು ವಾದ ವೈಖರಿಯಿಂದು ಗೆದ್ದೂ, ಪವಾಡಗಳನ್ನು ನಡೆಸಿಯೂ ಎಲ್ಲರೂ ಒಂದಲ್ಲ ಒಂದು ವಿಧವಾಗಿ ಪ್ರಖ್ಯಾತರು ಈ ಐವರು ವೇದೋಪನಿಷತ್ತುಗಳನ್ನು ಅರಿತುಕೊಂಡಿದ್ದ ದ್ವೈತಮತದ ಪಂಚರತ್ನ ಪ್ರಾಯರೆಂಬುದು ನಿರ್ವಿವಾದ.

ಶ್ರೀ ಯು. ಆರ್. ಆಚಾರ್ಯರು ರಚಿಸಿದ ಈ ಕೃತಿ ಸುಲಭ ಶೈಲಿಯಲ್ಲಿದ್ದು ಸಂಗ್ರಾಹ್ಯವಾಗಿದೆ. ದ್ವೈತ ಮತದ ಮೇಲೆ, ಮತಾಚಾರ್ಯರ ಮೇಲೆ ಅಭಿಮಾನ ಹೆಚ್ಚಿಸುವಂತಹುದು. ಇದರ ಭಾಷಾಂತರ ಪ್ರಸಿದ್ಧ ಭಾಷೆಗಳೆಲ್ಲವುಗಳಲ್ಲೂ ಆಗಬೇಕಾದುದು ಆಗತ್ಯ. ಶ್ರೀ ಪೇಜಾವರ ಮಾಧೀಶ ಶ್ರೀ ವಿಶ್ವೇಶ ತೀರ್ಥ ಶ್ರೀ ಪಾದಂಗಳವರು ಮಾಧ್ವ ಮತದ ಪ್ರಚಾರಕ್ಕಾಗಿ ಬಿಡಿಯುಡತ್ತಾ ತನ್ನ ಹಿರಿಯ ಪಂಚರತ್ನಗಳ ಬೆಳಕಿನಿಂದ, ಆದರ್ಶದಿಂದ ನುಸ್ಫೂರ್ತಿಯುತ್ತಿರುವುದು ಅಭಿನಂದನೀಯ. ಈಗಿನ ಪರ್ಯಾಯ ಪೀಠಸ್ಥ ಶ್ರೀ ವಿಬುಧೇಶ ತೀರ್ಥರೂ ಉಳಿದ ಶ್ರೀಗಳಂತೆ ಮಾಧ್ವ ಮತ ತತ್ವಗಳ ಪ್ರಚಾರದೆ ಕಡೆಗೆಸತ್ಯ ವಿಶೇಷ ಗಮನಕೊಡುತ್ತಿರುವುದು ಸಹಾ ಸ್ತುತ್ಯವೇ.

ಜಗತ್ತಿನ ವಿದ್ವಾಂಸರನ್ನೂ ತತ್ವ ಶಾಸ್ತ್ರ ಜ್ಞರನ್ನೂ ದ್ವೈತ ತತ್ವಾಮೃತದಿಂದ ಆಕರ್ಷಿಸುವ ದ್ವೈತಮತದ ಕೇಂದ್ರವಾದ ಉಡುಪಿಯ ಶ್ರೀ ಕೃಷ್ಣನ ಪೂಜಾ ಧನ್ಯತೆಯನ್ನು ಪಡೆದಿರುವ ಆಸ್ಥೆ ಮತಿಯ ಶ್ರೀಗಳವರು ಇಂತಹ ಉತ್ತಮವಾದ ಪುಸ್ತಕಗಳ ಲೇಖಕರಿಗೂ ಪ್ರಕಾಶಕರಿಗೂ ಬೆನ್ನೆಲೋಲಾಗಿ ನಿಂತು, ಜನಸಾಮಾನ್ಯರನ್ನು ನೀತಿ ಧರ್ಮಗಳಿಗೆ ನೆಲೆಯುವುದರ ಕಡೆಗೆ ಎಲ್ಲ ವಿಧದಲ್ಲೂ ಸಹಕರಿಸಿ, ಶ್ರೀ ಹರಿವಾಯುಗಳ ಕೃಪೆಯು ಜಗತ್ತಿಗೆ ದೊರಕುವಂತೆ ಯತ್ನಿಸಬೇಕು.

—ದಾಂತಿ.

DWADASH SHRENI

**READY RECKONER** of Salaries in Rupees and Naya Paisa by Md. Nazir Ahmad. Publishers P.C.Dhwadash Shreni & Co Private Ltd. Aligarh.

Price: 1·75 N. P.

ಕಳೆದ ಎಪ್ರಿಲ್ ತಿಂಗಳಿಂದ ಜ್ಯಾರಿಗೆ ಬಂದಿರುವ ನಯಾಪೈಸೆ ಪದ್ಧತಿ ಹಾಗೂ ಒಂದಿಸೆ ವಿಧಿ.

ಭಾರತದ ರಾಷ್ಟ್ರಪತ್ನಿಯೆನ್ನಿಸಿರುವ ಭಾರತದ ಪ್ರಧಾನಿ ಶ್ರೀ ಜವಾಹರಲಾಲ್ ನೆಹರೂರವರ ಸಲಹೆಯಂತೆ ೧೯೫೨ ಏಪ್ರಿಲ್ ೧೭ರಿಂದ ೧೩ ಮಂದಿ ಮಹಿಳೆಯರನ್ನು ಕ್ಯಾಬಿನೆಟ್ ಮಂತ್ರಿಮಂಡಲದ ಸದಸ್ಯರನ್ನಾಗಿ ನೇಮಿಸಿರುವರು. ಚಿತ್ರದಲ್ಲಿ ಇವರನ್ನು ಕಾಣಬಹುದು. ಎಡದಿಂದ ಬಲಕ್ಕೆ: ಮೌಲಾನಾ ಅಬುಲ್ ಕಲಂ ಆಜಾದ್, ಜೆ. ಡಿ. ಪಂತ್, ಮುರಾರ್ಜಿ ದೇಸಾಯಿ, ಜಗಜ್ಜೀವನರಾಂ, ಗುಲ್ಜಾರಿಲಾಲ್ ನಂದಾ, ಟಿ. ಟಿ. ಕೃಷ್ಣಮಾಚಾರಿ, ಲಾಲ್ ಬಹದ್ದೂರ್ ಶಾಸ್ತ್ರಿ, ಸರ್ದಾರ್ ಸ್ವರ್ಣಸಿಂಗ್, ಕೆ. ಸಿ. ರೆಡ್ಡಿ, ಅಜಿತ್ ಪ್ರಸಾದ್ ಜೈನ್, ವಿ. ಕೆ. ಕೃಷ್ಣ ಮೆನನ್ ಮತ್ತು ಎಸ್. ಕೆ. ಪಾಟೀಲ್.

## ಶಿಕ್ಷಕರ ನಿವೇದನೆ

### ಮೈಸೂರು ಸರಕಾರವು ದ. ಕ. ಜಿಲ್ಲೆಯ ಅಧ್ಯಾಪಕರಿಗೆ ತೋರಿಸಿದ ಮಲತಾಯಿ ಧೋರಣೆ ಮಾರ್ಪಡಲಿ!

ಭಾರತದ ಭಾಸೀಜನಾಂಗವನ್ನು ವಿದ್ಯಾದಾನದ ಮೂಲಕ ರೂಪಿಸುವ ನಮ್ಮೆ ಪ್ರಾಥಮಿಕ ಶಾಲಾ ಅಧ್ಯಾಪಕ ಸಮಾಜವು ಸ್ವಾತಂತ್ರ್ಯಕ್ಕೆ ಸಿಕ್ಕಿ 10 ವರ್ಷಗಳಾದರೂ ಸಾಮಾಜಿಕ ದೃಷ್ಟಿಯಿಂದಾಗಲೀ ಆರ್ಥಿಕ ದೃಷ್ಟಿಯಿಂದಾಗಲೀ ಯಾವ ಸುಧಾರಣೆಯನ್ನೂ ಪಡೆಯದಿರುವುದು ತುಂಬಾ ಶೋಚನೀಯ.

ಸರಕಾರವು ಇತರ ಎಲ್ಲಾ ಖಾತೆಗಳ ನೌಕರರ ಜೀವನದ ಪುಟ್ಟನ್ನು ಸುಧಾರಿಸುವುದರಲ್ಲಿ ಆ ವಿಶ್ರಾಂತ ಪ್ರಯತ್ನವನ್ನು ಎಸಗುತ್ತಿರುವಾಗ ಪ್ರಾಥಮಿಕ ಶಾಲೆಗಳಲ್ಲಿ ದುಡಿಯುತ್ತಿರುವ ಅಸಂಖ್ಯಾತ ಅಧ್ಯಾಪಕರ ಕನಿಷ್ಠತರ ಅವಶ್ಯಕತೆಗಳನ್ನು ಕೂಡಾ ಪೂರೈಸಲು ನಿರಾಕರಿಸುತ್ತಾ ಬಂದಿರುವುದು ಖೇದದಾಯಕವಾಗಿದೆ.

ಸ್ವರಾಜ್ಯ ಸಿಕ್ಕಿದ ನಂತರ, ಇತರ ಖಾತೆಯ ನೌಕರರ ಅಭಿವೃದ್ಧಿಯನ್ನು ಮನದಣಿಯೆ ನೋಡುತ್ತ, ಆವರಿಂತೆಯೇ ಸವಲತ್ತುಗಳನ್ನು ಪಡೆಯಲು ನಮ್ಮ ಸಂಕಷ್ಟ ನಿವಾರಣೆಗಾಗಿ ನಾವು ಸೌಮ್ಯ ರೀತಿಯಲ್ಲಿ ಸರಕಾರದೊಡನೆ ಹಲವು ಬಾರಿ ನಿವೇದಿಸಿಕೊಂಡರೂ ಸಫಲವಾಗದೆ, ಕರ್ನಾಟಕ ಏಕೀಕರಣದ ಮೇಲಾದರೂ ನಮ್ಮ ಸಂಕಷ್ಟಗಳ ನಿವಾರಣೆಯಾದೀತೆಂದು ನಾವೆ ಮಾಡಿದ ಹಲವಾರು ಮನವಿಗಳೂ ಫಲಕಾರಿಯಾಗದೆ, ಸರಕಾರದಿಂದ ಸಂಪೂರ್ಣ ನಿರಾದರ ಮತ್ತು ನಿರ್ಲಕ್ಷ್ಯತೆಯನ್ನು ಪಡೆದಿರುವುದು ದಕ್ಷಿಣ ಕನ್ನಡ ಜಿಲ್ಲೆಯ ಅಧ್ಯಾಪಕ ಸಮಾಜದ ದುರದೃಷ್ಟ!

ಹಳೆಯ ಮೈಸೂರು ರಾಜ್ಯದಲ್ಲಿ ಬಹು ಸಂಖ್ಯಾತ ಪ್ರಾಥಮಿಕ ಶಾಲೆಗಳು ಸರಕಾರದ ಆಡಳಿತಂದಲೇ ನಡೆಸಲಾಗುತ್ತಿದ್ದು, ಇತ್ತೀಚೆಗೆ ಮಹಾಮೈಸೂರು ಸರಕಾರವು ಜಾರಿಗೆ ತಂದ ನೌಕರರ ಹೊಸ ವೇತನ ಮಟ್ಟದ ಸಾಲಿಭೃತೆಗಳು ಅಲ್ಲಿಯ ಶಾಲಾ ಅಧ್ಯಾಪಕರುಗಳಿಗೆ ಮಾತ್ರ ದೊರಕುವುದಲ್ಲದೆ, ನಮ್ಮ ಜಿಲ್ಲೆಯ ಸರಕಾರೇತರ ಅಂದರೆ ಸ್ಥಳೀಯ ಸಂಸ್ಥೆಗಳು ಮತ್ತು ಖಾಸಗಿ ಆಡಳಿತಗೊಳಪಟ್ಟ ಪ್ರಾಥಮಿಕ ಶಾಲಾ ಅಧ್ಯಾಪಕರಿಗೆ ದೊರಕದಂತಾಗಿದೆ.

ಆದಕಾರಣ ಇಂತಹ ಸಂಕಷ್ಟ ಕಾಲದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಅಂಗವಾಗಿರುವ ಪುತ್ತೂರು ಮತ್ತು ಬೆಳ್ತಂಗಡಿ ತಾಲೂಕುಗಳ ಪ್ರಾಥಮಿಕ ಶಾಲಾ ಅಧ್ಯಾಪಕರ ಸಂಘವು, ತಾ. 28-4-57ರಲ್ಲಿ ಪುತ್ತೂರಲ್ಲಿ ಜರಿಗಿದ ಮಹಾಸಭೆಯಲ್ಲಿ ನಿರ್ಣಯಿಸಿದ ಪ್ರಕಾರ ಜನತಾಪ್ರತಿನಿಧಿಗಳ್ಳೂ, ಮೇಲಧಿಕಾರಿಗಳೂ ವಿದ್ಯಾರ್ಥಿಗಳ ಹಿತಿಯರೂ ಈ ಕೆಳಗೆ ನಮೂದಿಸಿರುವ ಅತಿ ಕನಿಷ್ಠ ಅವಶ್ಯಕತೆಗಳನ್ನು ಮಾಹಾ ಮೈಸೂರು ಸರಕಾರವು ನಮ್ಮ ಜಿಲ್ಲೆಯ ಉಪಾಧ್ಯಾಯವೃಂದಕ್ಕೆ ಪೂರೈಸಿಕೊಡುವಂತೆ ಸಹಾನುಭೂತಿಯಿಸ್ಸಿತ್ತು ಸಹಕರಿಸಬೇಕಾಗಿ ಪ್ರಾರ್ಥಿಸುವುದು.

ಕನಿಷ್ಠ ಕೇಳಿಕೆಗಳು:

1. ಏಕಸಮಾನ ಪ್ರಾಥಮಿಕ ವಿದ್ಯಾಭ್ಯಾಸವನ್ನು ಜಾರಿಗೊಳಿಸುವ ಮುಖಾಮೈಸೂರು ಸರಕಾರವು ಸರಕಾರೀ ಮತ್ತು "ಸರಕಾರೇತರ" ಎಂಬ ಭೇದವೆಣಿಸದೆ ರಾಜ್ಯದಲ್ಲಿರುವ ಎಲ್ಲಾ ಪ್ರಾಥಮಿಕ ಶಾಲಾ ಅಧ್ಯಾಪಕರಿಗೆ ಹೊಸ ವೇತನಪ್ರಮಾಣವು ಸಮಾನರೀತಿಯಿಂದ ಅನ್ವಯಿಸುವಂತೆ ಮಾಡಬೇಕು.

2. 1948ನೇ ಇಸವಿಯ ಲಾಗ್ಯಾತ್ತು ಮದ್ರಾಸು ಸರಕಾರದವರು ಕೊಡಲು ಬಾಕಿ ಮಾಡಿರುವ ನಮ್ಮ ಜಿಲ್ಲೆಯ ಅನೇಕ ಪಂಚಾಯತು ಶಾಲಾ ಅಧ್ಯಾಪಕರ ಭತ್ತಿಪಾಣವನ್ನು ಹಳೆ ಮದ್ರಾಸು ಸರಕಾರವೆ ಉತ್ತರಾಧಿಕಾರತ್ವವನ್ನು ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗೆ ಪಡೆದಿರುವ ನಮ್ಮ ಮಹಾಮೈಸೂರು ಸರಕಾರವು ದೊರಕಿಸಿಕೊಡುವಂತಾಗಬೇಕು.

3. ಇತ್ತೀಚೆಗೆ ವಿದ್ಯಾಧಿಕಾರಿಗಳಿಂದ ಜಾರಿಗೊಳಿಸಲ್ಪಟ್ಟಿ ಸುಕುನು, ಈ ಮೊದಲು ಒಬ್ಬ ಉಪಾಧ್ಯಾಯನಿಗೆ 20 ಮಕ್ಕಳ ಸರಾಸರಿ ಹಾಜರಿ ಎಂದಿದ್ದು ಅದನ್ನು 30ಕ್ಕೆ ಏರಿಸಿರುವುದರಿಂದ ಪ್ರಾಥಮಿಕ ಶಿಕ್ಷಣ ಪುಟ್ಟಕ್ಕೆ ಧಕ್ಕೆ ಉಂಟಾಗುವುದು ಮಾತ್ರವಲ್ಲದೆ ಅನೇಕ ಮಂದಿ ಉಪಾಧ್ಯಾಯರು ಕೆಲಸದಿಂದ ಹೊರತಳ್ಳಲ್ಪಡುವರಾದುದರಿಂದ, ಆ ಮುಕುನನ್ನು ರದ್ದು ಪಡಿಸಬೇಕು.

ಕಾರ್ಯಕಾರಿ ಸಮಿತಿ, ಪುತ್ತೂರು ಮತ್ತು ಬೆಳ್ತಂಗಡಿ ಪ್ರಾಥಮಿಕ ಶಾಲಾ ಅಧ್ಯಾಪಕರ ಸಂಘ, ದ. ಕ. ಜಿಲ್ಲಾ.
ಏಪ್ರಿಲ್ 6.5.52.

— ——

'NAVAYUGA' WEEKLY is in the list of periodicals and Newspapers approved for use in Secondary Schools as per proceedings Roc. No 466 N/50 date 2-12-1950 of the Directors of public Instruction Madras.

REGD. NO. 3018

# ನವಯುಗ

ಸಂಪುಟ VOL. 16 — 30—5—1957 — ಸಂಖ್ಯೆ NO. 38

## ಯಕ್ಷಗಾನ ಕಲೆ

### ಅನುಕರಣೆಯಿಂದ ಯಕ್ಷಗಾನ ಕಲೆಯನ್ನು ಕೆಡಿಸಬೇಡಿರಿ!

ಮಲೆನಾಡಿನವರಾದ ನಾವೆಲ್ಲರೂ ಈ ಸಮ್ಮೇಳನದಲ್ಲಿ ನಮ್ಮೂ ನಾಡಿನ ಸಂಕಷ್ಟ ಪರಂಪರೆಗಳನ್ನು ತೋಡಿಕೊಳ್ಳುವುದಕ್ಕೆ, ಅವುಗಳ ನಿವಾರಣೆಗೆ ಉಚಿತ ಪರಿಹಾರ ಮಾರ್ಗಗಳನ್ನು ಕಂಡುಹಿಡಿಯುವುದಕ್ಕೆ ನೆರೆದಿದ್ದೇವೆ. ನಮಗಿರುವುದು ವಿಶಾಲವಾದ, ಭವ್ಯವಾದ ನೈಸರ್ಗಿಕ ಸಂಪತ್ತು. ಕಣ್ಣಿನ ಆ ಸೊಬಗಿನ ಸ್ವರ್ಗದಲ್ಲಿ ವಾಸಿಸುತ್ತಿರುವ ನಮ್ಮ ಜೀವನವು ಮಾತ್ರ ಅದಕ್ಕೆ ಪ್ರತಿಯಾದದ್ದು. ಸೃಷ್ಟಿಯ ಸೊಬಗು ಎಷ್ಟೆಷ್ಟು ಮನೋಹರವಾಗಿ ನಮ್ಮ ಮುಂದೆ ಕಾಣಿಸುತ್ತಿದೆಯೋ ಅಷ್ಟೇ ದಾರಿದ್ರ್ಯದ ಬಾಳು ನಮ್ಮದು. ಅದಕ್ಕೆ ಆರ್ಥಿಕವಾದ ಪರಿಹಾರ ಕ್ರಮಗಳನ್ನು ಹುಡುಕುವುದಕ್ಕೆ ಇಲ್ಲಿ ಸೇರಿದ್ದಾಗಿದೆ. ಅದಕ್ಕೆ ತಕ್ಕ ದಾರಿ ಕಂಡುಹಿಡಿಯದೆ ಮಲೆನಾಡಿನ ಜೀವನಕ್ಕೆ ನೆಮ್ಮದಿ ದೊರೆಯಲಾರದು.

ಇಂಥದೊಂದು ಮಹಾ ಸಮ್ಮೇಳನದ ಅಂಗವಾಗಿ ನೀವು ನಡೆಯಿಸುತ್ತಿರುವ ಈ ಯಕ್ಷಗಾನ ಗೋಷ್ಠಿಗೆ ಅಧ್ಯಕ್ಷನನ್ನಾಗಿ ನನ್ನನ್ನು ಕರೆಸಿದ್ದೀರಿ. ಸಭೆಯನ್ನು ಕರೆದುದೇನೋ ಉಚಿತ. ಈ ನಮ್ಮ ಮಲೆನಾಡಿನ ನಿವಾಸಿಗಳ ಭಾವ ಜೀವನವು ವಿಶೇಷವಾಗಿ, ಪರಿಣಾಮಕಾರಿಯಾಗಿ, ಪ್ರಕಟವಾದೊಂದು ಸಾಧನವಿರುವುದಾದರೆ ಅದು ನಮ್ಮ ಯಕ್ಷಗಾನಕಲೆ. ಈ ಕಲೆಯು ಒಂದು ಮುಖದ ಕಲೆಯಲ್ಲ; ಬ್ರಹ್ಮನಿಗಿರುವಂತೆ ನಾಲ್ಕು ಮುಖಗಳು ಅದಕ್ಕೆ. ಅದು ಸಮ್ಮಿಶ್ರಕಲೆ. ನೃತ್ಯ, ನಾಟಕ, ಗೀತೆ, ಚಿತ್ರ ಈ ನಾಲ್ಕು ಪ್ರಬಲ ಶಕ್ತಿಗಳ ಸಮ್ಮೇಳನದಿಂದ ಬೆಳೆದು ಬಂದ ಸಾಧನ ಅದು. ಮಲೆನಾಡಿನ ರಸಿಕ ಜೀವನಕ್ಕೆ ಯಕ್ಷಗಾನ ಹಿರಿಯ ಸಾಧನವಾಗಿದೆ. ಈ ರಸಿಕ ಜೀವನವು ವಿಲಾಸ ಮುಖಿಯಲ್ಲ; ಉದಾತ್ತ ಜೀವನಕ್ಕೆ ಸಂಬಂಧಿಸಿದ್ದು, ಸೌಂದರ್ಯಮುಖಿಯಾದುದು ಹೀಗಿರುತ್ತ ಮಲೆನಾಡಿನ ಜನರು ಯಕ್ಷಗಾನ ಸಾಂಪ್ರದಾಯಗಳನ್ನು ಕುರಿತು ವಿವೇಚನೆ ನಡೆಸಿ, ನಮ್ಮ ಕಲಾಸಂಪತ್ತನ್ನು ಉಳಿಸಿ, ಬೆಳೆಯಿಸಿ, ಕಾಪಾಡಿಕೊಳ್ಳದಿದ್ದರೆ ಇನ್ನಾರು ಆ ಕೆಲಸ ಮಾಡಬೇಕು? ಈ ಜಾನಪದ ಕಲೆಯು ವಿಕಾಸಗೊಂಡು ಬೆಳೆಯುವುದಕ್ಕೆ ಬೇಕಾದಂಥ ಬಿತ್ತು, ಕ್ಷೇತ್ರ, ಆಶ್ರಯಕೆ ಎಲ್ಲವೂ ಹಿಂದಿನ ಕಾಲದ ಮಲೆನಾಡಿನಲ್ಲಿ ಇತ್ತೆಂಬುದರಿಂದಲೇ ಈ ಭಾಗದಲ್ಲಿಯೇ ಅದು ಇನ್ನೂ ಸಜೀವವಾಗಿ ಉಳಿದುಕೊಂಡಿದೆ. ಉಳಿದರಬೇಕಾದಷ್ಟು ಶಕ್ತವಾಗಿ, ಸುಂದರವಾಗಿ ನಮ್ಮ ಜೀವನಕ್ಕೆ ಜೀವನವನ್ನು ಉಂಟು ಮಾಡಬಹುದಾದಷ್ಟು ಓಜಸ್ವಿಯಾಗಿ ಮಾತ್ರ ಬಾಳಿಕೊಂಡಿಲ್ಲ. ಅದು ದುಃಖದ ಮಾತು. ಆದರೆ ಇತರ ಅನೇಕ ಜಾನಪದ ಕಲೆಗಳಂತೆ ಅದು ಸಂಪೂರ್ಣ ನಷ್ಟವಾಗಿಲ್ಲ: ಪಾರುಮಾಡಲಾರದಂಥ ಪರಿಸ್ಥಿತಿಗೂ ಮುಟ್ಟಿಲ್ಲ.

ನನಗೂ ಇನ್ನೂ ಕೆಲವರಿಗೂ ಆಗಾಗ ಬರಬಹುದಾದ ಮತ ಭೇದವೆಂಬುದು ಯಕ್ಷಗಾನದ ಮಹಿಮೆಯಿನ್ನು ಕುರಿತಲ್ಲ. ಅದು ಹಿರಿದಾದ ವಸ್ತುವೇ ಅದರ ಅವನತಿ, ಹಿಂಸೆ, ಅಪಚಾರಗಳು ಅರಿವಿದ್ದೂ ಆರಿವಿಲ್ಲದೆಯೋ ಜನಗಳ ಕೈಯಲ್ಲಿ ನಡೆಯುತ್ತ ದೆಯಲ್ಲ–ಎಂಬ ಬೇಸರ ನನಗೆ. ಆರ್ಥದಾರಿಗಳೆನಿಸುವವರು 'ಸೀತೆ' 'ರಾಮ' 'ಕೌರವ' 'ಅರ್ಜುನ' ಮೊದಲಾದ ಪುರಾಣ ಪಾತ್ರಗಳ ಶೀಲವನ್ನು ತಿಳಿಯ ಲೆತ್ನಿಸಿ, ಪಾತ್ರ ಪ್ರವಿಷ್ಟಾನೆಯ ಪ್ರಯತ್ನಕ್ಕೆ ತೊಗದೆ, ಅನೇ ಕಥಾಪಾತ್ರಗಳಿಂದ ವಕಾಲತ್ತು ನಾಮೆ ಹಾಕಿಸಿಕೊಂಡು ಜಗಳಕ್ಕೆ ನಿಲ್ಲುಸಿದ್ದಾರೆ! ಇಂಥ ಈಗಿನ ಯಕ್ಷಗಾನ ರೂಟು! (ವಿಸ್ತರ ಇಲ್ಲವೆ ಅಭಿನಂದಕರೆ 'ಶಾಖಾಸಗಿರಿ'ಯನ್ನು ಗಳಿಸುವುದಕ್ಕೆ; ವೈಯಕ್ತಿಕ ದ್ವೇಷಗಳನ್ನು ತೀರಿಸಿಕೊಳ್ಳುವುದಕ್ಕೆ ಯಕ್ಷಗಾನ ಕಲಾವಿದರು ಹೊಟ್ಟೆಪಾಡಾದರೆ, ಯಾರ್ಯಾರೂ ನಮ್ಮನ್ನೂ ನಮ್ಮ ಯಕ್ಷಗಾನವನ್ನೂ ಕಾಪಾಡಲಾರರು.

ಯಕ್ಷಗಾನವೆಂಬುದು ಗಾಯನಕ್ಕೆ ಅನ್ವಯಿಸುವ ಮಾತು. ಇದು ಸ್ವತಂತ್ರವಾದ ತನ್ನದೇ ಆದ ಶೈಲಿ ಮತ್ತು ಸಾಂಪ್ರದಾಯಗಳುಳ್ಳ ಒಂದು ಗಾನ ಮಾರ್ಗ. ಇದು ಕನ್ನಡ ನಾಡಿನಲ್ಲಿ ವಿಜಯ ನಗರದ ಅರಸರುಗಳ ಕಾಲದಲ್ಲೂ ಅದಕ್ಕಿಂತ ಬಹು ಮುಂಚೆಯೂ ಪ್ರಸಾರವಾಗಿದ್ದಂತಹ ಒಂದು ಗಾಯನ ಸಾಂಪ್ರದಾಯ. ಇದು ಚೆನ್ನಾಗಿಯೇ ಬೆಳೆದು ಬಂದ ಸಾಂಪ್ರದಾಯ; ಕ್ಷುಲ್ಲಕ ಜನಪದಗೀತ ಜಾತಿಯಲ್ಲ. ಹಿಂದಿನ ಅರಸುಗಳ ಆಸ್ಥಾನಗಳಲ್ಲಿ ತುಂಬ ಮನ್ನಣೆಯಪ್ಪು ಪಡೆದಿದ್ದಂತಹ ಒಂದು ಸಾಂಪ್ರದಾಯವೂ ಆಗಿತ್ತು. ಕೆಲವೊಂದು ಸಾಹಿತ್ಯ ಗ್ರಂಥಗಳಲ್ಲಿ, ಅರಸರುಗಳ ಮುಂದೆ ಯಕ್ಷಗಾನ ನಡೆಯಿಸುತಿದ್ದರೆಂಬ ಮಾತನ್ನು ನಾವು ಓದಬಹುದು.

ಗಂಧರ್ವಗಾಯನದಂತೆ ಇದಕ್ಕೂ ಒಂದು ಬೆಡಗಿನ ಹೆಸರು ಬಂತು. ಅದ್ದರಿಂದ ಇದು ಬೇರೆಯಾದುದು ಎಂಬುದನ್ನು ತೋರಿಸಲು 'ಯಕ್ಷ' ಎಂಬ ಪದವನ್ನು ಬಳಸಿಕೊಂಡರು. ಆದರೆ ಇದು ಕನ್ನಡ ಜನರಿಗೆ ಮಾತ್ರ ವಿಶಾಲವಾದ ಗಾನ ಪದ್ಧತಿ–ಎಂದು ತಿಳಿಯಬೇಡಿ. ಆಂಧ್ರದಲ್ಲೂ ಈ ಗೀತ ಶೈಲಿಯು ಹಬ್ಬಿದಂತೆ ಕಾಣುತ್ತದೆ. ರಾಗ ತಾಳಗಳ ದೃಷ್ಟಿಯಿಂದಲೂ ಯಕ್ಷಗಾನವು ಸಾಕಷ್ಟು ಸಂಪತ್ತುಳ್ಳದು. ಕರ್ನಾಟಕ ಸಂಗೀತದ ರಾಗ ತಾಳಗಳು ಅದರವು.

ಕರ್ನಾಟಕ ನಾಟಕ ಪದ್ಧತಿ ರಂಗ ಭೂಮಿಗೆ ಬರುವ ಮುಂಚೆಯೇ ನಮ್ಮ ಬಯಲಾಟವೆಬುದು ಹುಟ್ಟಿಕೊಂಡಿತು. ಕೆಳದಿಯ ವೆಂಕಟಪ್ಪ ನಾಯಕನು ತನ್ನ ರಾಜಧಾನಿಯಾದ ಇಕ್ಕೇರಿ ಶಿವಲ್ಲಿ ನಾಟಕ ಶಾಲೆ ಕಟ್ಟಿದ ವಿಚಾರ ಬಂತಷ್ಟೆ.

ಕೇರಳ ಕರ್ನಾಟಕ ಗಡಿಯಲ್ಲಿ ಕುಂಬಳೆಯಿಂದ ಸೀಮೆಯಲ್ಲಿ ಕಥಕ್ಕಳಿ ವೇಷಗಳ ಪ್ರಭಾವ ಯಕ್ಷಗಾನ ವೇಷಗಳ ಗಳ ಮೇಲೆ ಬಿದ್ದುದುಂಟು. ಆದರೆ ಸಹಜ ಯಕ್ಷಗಾನ ವೇಷಗಳ ಪರಂಪರೆಯೆಂಬುದು ಮಾತ್ರ ಈ ಮಲೆನಾಡಿನಲ್ಲೇ ಕುಟ್ಟಿದ್ದು; ಇಲ್ಲೇನೇ ಬೆಳೆದದ್ದು. ಆದರ ಲಾವಣ್ಯತ್ವ ಶೈಲಿ, ಶಕ್ತಿಗಳು ಸ್ಥಳೀಕ ಜನರ ಕಾಣಿಕೆ. ನಮ್ಮ ಯಕ್ಷಗಾನದ ಸುಂದರನೇಪಥ್ಯಗಳೇ ಬೇರೆ. ಕೇರಳದವುಗಳೇ ಬೇರೆ. ನಮ್ಮ ಮುಖವರ್ಣಿಕೆಗಳೇ ಬೇರೆ; ಅವರವೇ ಬೇರೆ. ಕುಣಿತ ವಾದರೂ ಹಾಗೆಯೇ. ಬದನೂರು, ಇಕ್ಕೇರಿ, ಸೊರಬ ಮೊದಲಾದ ಊರುಗಳಲ್ಲಿ ಹಿಂದೆ ನೆಲೆಸಿ, ಈಗಲೂ ನೆಲೆಸಿರುವ 'ಗುಡಿಗಾರರು' ಇಲ್ಲಿನ ವೇಷ ಭೂಷಣಗಳನ್ನು ಸೃಷ್ಟಿಸಿದವು. ಇವರೇ ಮಾಡಿದ ಗೊಂಬೆ, ತೊಗಲು ಗೊಂಬೆಗಳ ನೂಲು ಸಾಂಪ್ರದಾಯವು ಅತಿಶಯವಾದುದೆಂದು ನನಗೆ ಅನಿಸುತ್ತದೆ. ಪ್ರಪಂಚದ ಯಾವುದೇ ದೇಶದ ಮುಖವಾಡವೇಷಭೂಷಣಗಳಿಗಿಂತ ಕಡಿವೆಯೆನಿಸದಂಥ ವೇಷಭೂಷಣಗಳು ಇಲ್ಲಿಯವು. ಇವೆಲ್ಲ ನಮ್ಮ ಕಲಾವಿದಂ ತಪಸ್ಸಿನ ಫಲ ಆವುಗಳು ಯಾರೂ ಮಾಡಬಹುದಾದ ಕೃತಿಗಳಲ್ಲ. ಇಲ್ಲಿಯ ಯಕ್ಷಗಾನ ವೇಷಗಳು, ಗೊಂಬೆಗಳು, ತೊಗಲು ಗೊಂಬೆಗಳು-ಕಲೆಯ ದೃಷ್ಟಿಯಿಂದ ಸಾಮಾನ್ಯವಾದ ವಸ್ತುಗಳಲ್ಲ. ಅವನ್ನೆಲ್ಲ ಮರೆತು ಮೂಲೆಗೊತ್ತಿ ಕೆಳದರ್ಜೆಯ ಸಿನೆಮಾ ನಾಟಕಗಳ ಅನುಕರಣೆಯನ್ನು ನಮ್ಮ ಯಕ್ಷಗಾನ ನಟರು ಮಾಡುತ್ತಿರುವದನ್ನು ಕಾಣುವಾಗ ತುಂಬ ದುಃಖವಾಗುತ್ತದೆ. ಒಂದುಕಡೆ ನಮ್ಮ ಜಿಲ್ಲೆಯಲ್ಲಾ ಗುತ್ತಿರುವಂತೆ ಕರ್ನಾಟಕ ಸಂಗೀತದಿಂದ ಯಕ್ಷಗಾನದ ಕೊಲ್ಲೆ; ಇನ್ನೊಂದುಕಡೆ ಚಲಚ್ಚಿತ್ರ ವೇಷಗಳಿಂದ ಬಯಲಾಟ ವೇಷಗಳ ಕೊಲೆ. ಈ ಎರಡು ಅನುಕರಣೆಯ ಪ್ರವೃತ್ತಿಗಳಿಂದ ಬಯಲಾಟ ಕೆಟ್ಟಂತೆ, ಕೆಡುತ್ತಿರುವಂತೆ ಇನ್ನಾವುದರಿಂದಲೂ ಕೆಟ್ಟಿಲ್ಲ. ಕಣ್ಣಿಗೆ ನೋಹಕವಾಗಿ ಕಾಣಿಸುವುದೊಂದೇ ಕಲೆಯ ಲಕ್ಷಣವಲ್ಲ; ಬೆಡಗು ಅದರ ಮುಖ್ಯ ಗುಣವಲ್ಲ. ಭಾವಪೂರ್ಣತೆ, ಅರ್ಥ ಸಾರ್ಥಕ್ಯಗಳು

(ಇನ್ನೇ ಪುಟ ನೋಡಿರಿ)

**ANNOUNCEMENT**

**BRANCHES**

**of the Bank**

**will be opened shortly,**

**at**

**MYSORE and BANGALORE**

**THE VIJAYA BANK, LTD.**

**H. O. MANGALORE - 3.**

Estd: 1931.

# ಪಾವನ ಜೀವನ

## ಯುಗ ವಿಭೂತಿ ವಿನೋಬಾರ ಆದರ್ಶ ಸೇವಾ ಜೀವನ

"ನಿನಗಾಗಿ ನಾನು ಯಾವ ವಿಶೇಷ ಕಾರ್ಯವನ್ನು ಹೆಗೆದುಕೊಳ್ಳಬಹುದೆಂಬುದು ನನಗೆ ತೋಚುವುದಿಲ್ಲ. ನಿನ್ನ ಪ್ರೇಮ ನಿನ್ನ ಚಿರಿತ್ರೆಗಳು ನನ್ನನ್ನು ಮೋಹ ಸಾಗರದಲ್ಲಿ ಮುಳುಗಿಸಿದುವು. ನಿನ್ನ ಪರೀಕ್ಷೆಯನ್ನು ನಡೆಯಿಸಲು ನಾನು ಅಸಮರ್ಥನಾಗಿದ್ದೇನೆ. ನೀನು ಮಾಡಿದ ನನ್ನ ಪರೀಕ್ಷೆಯನ್ನು ನಾನು ಸ್ವೀಕಾರ ಮಾಡುತ್ತೇನೆ. ಮತ್ತು ನೀನೆಂದೆಂತೆ ನಿನಗಾಗಿ ಮಾತ್ರ ನಿನ್ನ 'ತಂದೆ' ಎಂದ ನಾಮಧೇಯವನ್ನಿಟ್ಟುಕೊಳ್ಳಲು ಒಪ್ಪುತ್ತೇನೆ. ನನ್ನ ಅಪೇಕ್ಷೆಯನ್ನು ನೀನು ಸಾಮಾನ್ಯವಾಗಿ ಪೂರ್ಣಮಾಡಿರುವಿ. ಒಳ್ಳೆಯ ತಂದೆಯು ತನಗಿಂತಲೂ ಉತ್ತಮನಾದ ಮಗನನ್ನು ಪಡೆಯುವಷ್ಟೆಂಬ ನುಡಿಗಟ್ಟಿನಲ್ಲಿ ನನಗೆ ಮಾಪ್ಯತೆಯಿದೆ. ತಂದೆಯು ಪ್ರಾರಂಭಿಸಿದ ಕಾರ್ಯಗಳನ್ನು ಅಭಿವೃದ್ಧಿ ಮಾಡುವವನೇ ಉತ್ತಮ ಪುತ್ರನೆಂದೂ ನಾನು ತಿಳಿಯುತ್ತೇನೆ. .....ನನಗೆ ಕೊಟ್ಟಿ 'ತಂದೆ' ಎಂಬ ಹೆಸರನ್ನು ನಿನಗೆ ನನ್ನೆಡೆಯಲ್ಲಿರುವ ಪ್ರೀತಿ ವಿಶ್ವಾಸಗಳ ಕಾಣಿಕೆ ಎಂದು ತಿಳಿದು ಗ್ರಹಣ ಮಾಡಿದ್ದೇನೆ. ಆ ಹೆಸರಿಗೆ ತಕ್ಕರೀತಿಯಲ್ಲಿ ನಡೆದುಕೊಳ್ಳಲೂ ಆದಷ್ಟು ಪ್ರಯತ್ನಿಸುತ್ತೇನೆ....."

"ಪರಮಾತ್ಮನು ನಿನಗೆ ದೀರ್ಘಾಯುವನ್ನೀಯಲಿ. ನಿನ್ನ ಉಪಯೋಗವು ಭಾರತದ ಉನ್ನತಿಗಾಗಿ ಆಗಲಿ ಎಂಬುದೇ ನನ್ನ ಆಕಾಂಕ್ಷೆಯಾಗಿದೆ...."

ವಿನೋಬಾರವರು ಗಾಂಧೀಜಿಯವರಿಗೆ ಬರೆದೊಂದು ಪತ್ರಕ್ಕೆ ಗಾಂಧೀಜೀ ಮೇಲಿನಂತುತ್ತರ ಬರೆದಿದ್ದರು. ಗಾಂಧೀಜಿಯವರ ಹೃದಯದಲ್ಲಿ ವಿನೋಬಾರವರ ಬಗ್ಗೆ ಅಪಾರ ಮಹತ್ವ ಮತ್ತು ಅಪಾರತ್ವ ವಿದ್ದಿತೆಂಬುದನ್ನು ಈ ಉತ್ತರದಿಂದ ತಿಳಿದುಕೊಳ್ಳಬಹುದು

ವಿನೋಬಾರವರು ಹುಟ್ಟಿನಿಂದಲೇ ವಿರಾಗಿಗಳು. ಬಾಲ್ಯ ಕಾಲದಿಂದಲೇ ಅವರಲ್ಲಿ ತ್ಯಾಗ, ತಪಸ್ಸುಗಳ ಭಾವನೆಗಳು ಜಾಗ್ರತವಾಗುತ್ತಾ ಇದ್ದುವು. ತನ್ನ ಸಾಧ್ವಿಯಾದ ತಾಯಿಯ ಪುಣ್ಯಸಂಸ್ಕಾರಗಳೂ ಅವುಗಳನ್ನು ಬಹಳ ಬೆಳೆಸಿದುವೆನ್ನಬಹುದು. ತನ್ನ ಹನ್ನೆರಡನೆಯ ವರ್ಷದಲ್ಲಿಯೇ ವಿನೋಬಾರವರು ಆಜನ್ಮ ಬ್ರಹ್ಮಚಾರಿಯಾಗಿರುವ ಭೀಷ್ಮ ಪ್ರತಿಜ್ಞೆಯನ್ನು ಕೈಗೊಂಡರು. ಜತೆಗೆ ಸ್ವದೇಶ ಸೇವೆಯನ್ನು ಮಾಡುವ ದೃಢ ನಿಶ್ಚಯವನ್ನೂ ಮಾಡಿದರು.

ಇದೇ ವೈರಾಗ್ಯ ಭಾವನೆಯಿಂದ ತನ್ನ ಶಾಲಾ ವಿದ್ಯಾಭ್ಯಾಸವನ್ನು ಸವಾಪ್ತಿಗೊಳಿಸಿದರು ತನಗೆ ದೊರೆತೆಲ್ಲಾ ಪ್ರಮಾಣ ಪತ್ರಗಳನ್ನೂ ಅಗ್ನಿ ದೇವನಿಗೆ ಆಹುತಿಯಿತ್ತರು. ತಪಸ್ಸಿನ ಕಡೆಗೆ ಮನವೊಲಿದರಿಂದ ತನ್ನ ಮನೆಯನ್ನು ತ್ಯಜಿಸಿ ಹೊರ ಬಿದ್ದರು. ಆದರೆ, ಪರಮಾತ್ಮನ ಸಾಕ್ಷಾತ್ಕಾರವೊದ್ದೇಶದಿಂದ ಹಿಮಾಲಯ ಪರ್ವತವನ್ನು ಸೇರುವ ಮೊದಲೇ ಗಾಂಧೀಜಿಯವರಂತಹ ದೇವನು ಅವರಿಗೆ ತಾನಾಗಿಯೇ ದೊರೆತನು. "ಜಗತ್ತಿನಿಂದ ದೂರವ್ಹೋಗುವದು ಮುಕ್ತಿಯೆನಿಸಿಕೊಳ್ಳದು. ಈ ಜಗತ್ತಿನಲ್ಲಿಯೇ ಇದ್ದುಕೊಂಡು, ಪ್ರಾಣಿಕೋಟಿಯು ಸೇವಾಕಾರ್ಯ ನಿರತನಾಗಿರುವುದೇ ಎಲ್ಲ ತರದ ತಪಸ್ಸುಗಳಿಗಿಂತಲೂ ಶ್ರೇಷ್ಠತರವಾದುದು. ದರಿತರೇ ಸಾಕ್ಷಾತ್ ದೇವತೆಗಳು. ದರಿದ್ರ ನಾರಾಯಣನ ಪೂಜೆಗಿಂತ ದೊಡ್ಡದಾಗಿ ಯಾವ ಪೂಜೆಯೂ, ಯಾವ ತಪಸ್ಸೂ, ಯಾವ ಧರ್ಮವೂ ಇಲ್ಲ" ಎಂದು "ಗಾಂಧಿ ದೇವರ" ಉಪದೇಶವಾಯಿತು. ವಿನೋಬಾರವರಿಗೆ ಈ ಉಪದೇಶದಿಂದ ಮನತಿರುಗಿತು. ಅವರು ಗಾಂಧೀಯವರೊಡನೆ ಹೊರಟು ಹೋದರು. ಕೆಲಸಮಯದನಂತರ ಅವರವರಾಗಿಯೇ ಹೋದರು.

ಬಾಪೂರವರು ತಮ್ಮ ಕೊಸ ಶಿಷ್ಯರಿಂದಾಗಿ ತುಂಬ ಪ್ರಭಾವಿತರಾದರು. ವಿನೋಬಾರವರ ತಂದೆಯವರಿಗೊಂದು ಪತ್ರ ಬರೆಯುತ್ತಾ ಅವರು "ನಿಮ್ಮ ವಿನೋಬಾನನ್ನೊಷನಿದ್ದಾನೆ. ಈ ಅಲ್ಪಾಯುವಿನಲ್ಲಿಯೇ ನಿಮ್ಮ ಪುತ್ರನು ಪ್ರಾಪ್ತಿಸಿಕೊಂಡಿರುವ ತೇಜಸ್ಸನ್ನು ಮತ್ತು ಪೈರಾಗ್ಯಗಳನ್ನು ನನಗೆ ಪ್ರಾಪ್ತಿಮಾಡಿಕೊಳ್ಳಲು ಅನೇಕ ವರ್ಷಗಳೇ ಕಳೆದಿದ್ದುವು." ಎಂದು ಸೂಚಿಸಿದ್ದರು.

'ವಿನಾಯಕ' ಎಂಬ ಹೆಸರಿನ ಬದಲು 'ವಿನೋಬಾ' ಎಂದು ಪ್ರಥಮವಾಗಿ ಬರೆದುದು ಪ್ರಾಯಶಃ ಆ ಪತ್ರದಲ್ಲಿಯೇ ಇರಬೇಕು. ಈ ನವನಾಮಧೇಯವು ಪ್ರಚಲಿತವೂ ಆಯಿತು. ವಿನೋಬಾರವರು ತನ್ಮಯರು ನಿಷ್ಠರಾಗಿ, ಅಸಕ್ತಿಯಿಂದ ತನ್ನ ಕಾರ್ಯಗಳನ್ನು ಮಾಡುವುದನ್ನು ಕಂಡು ಗಾಂಧೀಜಿಯವರು ಆನಂದ ತುಂದಿಲರಾಗುತಿದ್ದರು. ಆಶ್ರಮದಲ್ಲಿ ಪಾಯಿಖಾನೆಗಳನ್ನು ಶುದ್ಧಿಮಾಡುವುದು, ಅಸ್ಪೃಶ್ಯರೊಡನೆ ಸಮನ್ವಯವಹಾರವನ್ನು ಪ್ರಯೋಗ ಮಾಡುವುದು ಮೊದಲಾದ ಕಾರ್ಯಗಳ ಆಚರಣೆಗೆ ತಂದವರಲ್ಲಿ ವಿನೋಬಾ ಪ್ರಥಮ ವ್ಯಕ್ತಿ. ಬಾಪೂರವರು ಈ ಕಾರ್ಯಗಳನ್ನು ಮುಕ್ತಕಂಠದಿಂದ ಕೊಂಡಾಡುತ್ತ ಅವುಗಳನ್ನು ಆಶ್ರಮವಾಸಿಗಳ ಕಾರ್ಯಗಳಲ್ಲಿಯೇ ಸೇರಿಸಿದರು. ಈ ಪರಿವರ್ತನೆಯು ಒಂದು ದೊಡ್ಡ ಸುಂಟರಗಾಳಿಯನ್ನೇ ಎಳಿಸಿತು. ಗಾಂಧೀಜಿಯವರ ತಂಗಿಯೇ ಆಶ್ರಮವನ್ನು ತ್ಯಜಿಸಿ ದೂರ ಹೋದರು. ಆದರೆ, ಮುಂದಿಟ್ಟ ಹೆಜ್ಜೆಯನ್ನು ಗಾಂಧೀಜೀ ಹಿಂದಿಡಲಿಲ್ಲ.

ವಿನೋಬಾರವರ ಆಶ್ರಮಜೀವನವು ಆದರ್ಶಪ್ರಾಯವಾಗಿತ್ತು. ಅವರ ತ್ಯಾಗ ಪೂರ್ಣ ಋಷಿತುಲ್ಯ ಜೀವನವನ್ನು ಕಂಡು ಶ್ರದ್ಧೇಯರು ಜಮನಾಲಾಲ್‌ಜೀ ಬಜಾಜ್‌ರವರು ತುಂಬ ಪ್ರಭಾವಿತರಾಗಿದ್ದರು. ವಿನೋಬಾರವರ ತ್ಯಾಗವೃತ್ತಿಯಿಂದಮಂತ್ರಮುಗ್ಧರಾಗಿ ಅವರು ನುಡಿದಿದ್ದರು: "ನನ್ನ ಈ ಶರೀರವನ್ನು ವಿನೋಬಾರವರ ಶ್ರದ್ಧೆಗೆ ಯೋಗ್ಯವನ್ನಾಗಿ ಪರಮಾತ್ಮನು ಮಾಡಿವರೆ, ಅದು ನನ್ನ ಸೌಭಾಗ್ಯದ ಸುಸಮಯವಾಗುವುದು. ಲೋಕದಲ್ಲಿ ಬಾಪೂ ಪಿತರಾರಾದರೆ, ವಿನೋಬಾ ಗುರುಸ್ಥಾನದಲ್ಲಿ ರಾರಾಜಿಸತಕ್ಕವರು."

ಆ ದಿನಗಳಲ್ಲಿ ಗಾಂಧೀಜೀಯವರು ವ್ಯಕ್ತಿಗತ ಸತ್ಯಾಗ್ರಹವನ್ನು ಹೂಡುವ ಸಂಕಲ್ಪ ಮಾಡಿದ್ದರು. ಆದರೆ, ಈ ಕಾರ್ಯಕ್ಕೆ 'ಶ್ರೀ ಗಣೇಶಾಯನಮಃ" ಎನ್ನುವುದಾರಂದು ಪ್ರಶ್ನೆ ಎದ್ದಿತು. ಬಾಪೂರವರು ನಿಸ್ಸಂಕೋಚವಾಗಿ ವಿನೋಬಾರವರನ್ನು ಆರಿಸಿದರು. ವಿನೋಬಾರವರ ಮುಂದಾಳುತನದಲ್ಲಿ ಬಾಪೂ ಸೇನೆ ವೈರೋಧಿಗೆ ನಡೆಯಿತು. ಅಲ್ಲಿ ಅವರು ನೀರೀಕ್ಷಿಸಿದುದಕ್ಕಿಂತಲೂ ಅಧಿಕ ಪ್ರಮಾಣದಲ್ಲಿ ಕಾರ್ಯವು ಸಫಲವೆನಿಸಿತು.

'ವಿನೋಬಾ' ಎನ್ನುವುದು ಭಾರತೀಯರಿಗೊಂದು ಹೊಸ ಹೆಸರು. 'ಹರಿಜನ ಸೇವಕ' ಎಂಬ ಪತ್ರಿಕೆಯು ಸಾವಿರಾರು ಓದುಗರು ಈ ಸಂಬಂಧವಾದ ಪ್ರಶ್ನೆಗಳನ್ನು ಕೇಳಿದರು---'ವಿನೋಬಾ ಯಾರು ಎಂಬುದನ್ನು ತಿಳಿಯ ಬಯಸುತ್ತೇವೆ'. ಬಾಪೂ ತಮ್ಮ ಉತ್ತರದಲ್ಲಿ ಬರೆದರು--- "ವಿನೋಬಾ ಯಾರು? ನಾನು ಸತ್ಯಾಗ್ರಹದಲ್ಲಿ ಅವರನ್ನು ಅಗ್ರಗಣ್ಯರನ್ನಾಗಿ ಏಕೆ ಮಾಡಿದೆನು? ಬೇರೆಯಾರನ್ನಾದರೂ ಆ ಪದೇಕೆ ನೆ ಮಿಸಬಲ್ಲಿ?—ಅವರು ದೊಡ್ಡ ತ್ಯಾಗಿ ಮತ್ತು ತಪಸ್ವಿಗಳಾಗಿದ್ದಾರೆ.... ಸಂಸ್ಕೃತದ ಪ್ರಕಾಂಡ ಪಂಡಿತರು. ನನ್ನ ಆಶ್ರಮದ ಸರ್ವ ಪ್ರಥಮ ಸದಸ್ಯರು. ವಿಲಕ್ಷಣ ಸ್ಮರಣ ಶಕ್ತಿವಂತರು. ಸ್ವಾಭಾವಿಕ ಅಧ್ಯಯನ ಶೀಲರು. ಅವರಿಗೆ ಪದೈಶರಾದ ವ್ಯಕ್ತಿಗಳು ಬಹಳ ಕಡಮೆ."

ಗಾಂಧೀಜೀಯವರಿಳಿದ ಕಾರ್ಯಗಳನ್ನು ವಿನೋಬಾರವರು ಕಕ್ಷರರಾಗಿ ಮಾಡುತಿದ್ದರು. ಪರಮಾತ್ಮನನಂತರ ವಿನೋಬಾ ಯಾರನ್ನಾದರೂ ಮೌನ್ಯಮಾಡುವರಾದರೆ, ಗಾಂಧೀಯವರನ್ನು ಮಾತ್ರ. ಗಾಂಧಿಯೇ ಅವರ ಸರ್ವಸ್ವ. ಅವರನ್ನು ದೇಹಸ್ವರೂಪಿ ಪರಮಾತ್ಮನೆಂದು ತಿಳಿದುಕೊಂಡರು. ಗಾಂಧೀಜೀಯವರೂ ವಿನೋಬಾರ ಪರಮ ಭಕ್ತಿಯಿಂದ ಆತ್ಯಂತ ಪ್ರಭಾವಿತರಾಗಿದ್ದುದರಿಂದ ಅವರನ್ನು ಬಿಟ್ಟಿರುವುದು ಅಸಾಧ್ಯವಾಗಿತ್ತು. ವಿನೋಬಾರವರ ಒಂದು ಪತ್ರಕ್ಕೆ ಉತ್ತರರೂಪವಾಗಿ ಹೃದಯಸ್ಪರ್ಶಿ ಶಬ್ದಗಳಿಂದ ಬರೆದಿದ್ದರು-- "ನಿನ್ನ ಶ್ರದ್ಧೆ ಮತ್ತು ಭಕ್ತಿಗಳು ಕಣ್ಣಿನಲ್ಲಿ ಆನಂದ ಬಾಷ್ಪಗಳನ್ನು ಸುರಿಯುವಂತೆ ಮಾಡುತ್ತವೆ. ನಾನು ಅದಕ್ಕೆ ಯೋಗ್ಯನಹುದೊ, ಅಲ್ಲವೋ ಆದರೂ ನಿಶ್ಚಯವಾಗಿಯೂ ನೀನು ಮಹಾ ಸೇವೆಗೆ ನಿಮಿತ್ತನಾಗುವೆ." ಗಾಂಧೀಜೀ ಅಭಿಮಾನದಿಂದ ಆಗಾಗ ಹೇಳುತಿದ್ದರು: "ಮಗನು ತಂದೆಗಿಂತ ದೊಡ್ಡವನಾದ" ಎಂದು.

ಬಾಪೂರವರ ಸ್ನೇಹಶೀತಲ ಛಾಯೆಯು ದೂರ ಹೋದೆ ನಂತರ ನಾಲ್ಕೂ ಸಿಟ್ಟುಗಳಲ್ಲಿ ನಿರಾಶೆಯ ಕಾರ್ಮೋಡವು ಅಂಧಕಾರವನ್ನು ಪಸರಿಸಿತು. 'ಗಾಂಧೀ ಛಾವೆ'ದ ಭವಿಷ್ಯವೇನು? ಎಂಬ ಮಹತ್ ಸಮಸ್ಯೆ ಹುಟ್ಟಿಕೊಂಡಿತು. ಸರ್ವೋದಯವು ಮುಂದೆ ನಡೆಯಬಲ್ಲುದೆ? ಗಾಂಧೀಜೀಯವರು ಪ್ರಾರಂಭಿಸಿದ ಕಾರ್ಯಗಳು ಅವರ ಮೃತ್ಯುವಿನಲ್ಲಿಯೇ ಸವಾಪ್ತಗೊಳ್ಳುವುವೆ? ಎಂಬ ಪ್ರಶ್ನೆಗಳು ಉದ್ಭವಿಸಿದುವು.

ಇಂತಹ ನಿರಾಶಾ ಘನಘೋರಾಂಧಕಾರದಲ್ಲಿ ಆಶೆಯ ಎಳೆ ಮಿಂಚೊಂದು ಮಿಂಚಿತು-ಅದೇ ವಿನೋಬಾ, ವಾಸ್ತವದಲ್ಲಿ ಗಾಂಧೀಜೀಯವರು ಯಾವ ಮಹಾ ಕಾರ್ಯದ 'ಶ್ರೀ ಗಣೇಶಾಯ ನಮಃ" ಮಾಡಿದ್ದರೋ ಅದರ ಭೂಮಿಕೆಯು ಸಮಾಪ್ತಗೊಂಡಿತ್ತು. 'ಸರ್ವೋದಯ'ದ ಉದಯ ಮಾತ್ರವೇ ಭಾರತದ ಅಂತರಿಕ್ಷದಲ್ಲಿ ಆಗಿತ್ತು. ವಿನೋಬಾ ಆಶಾದೀಪವಾಗಿ ಅಂತಹ ನಿಪಮ ಸಂದರ್ಭದಲ್ಲಿ ಅವತೀರ್ಣರಾದರು. ಬಾಪೂರವರು ಅಪೂರ್ಣವಾಗಿ ತೊರೆದು ಹೋದ ಕಾರ್ಯಗಳನ್ನು ಪೂರ್ಣಮಾಡುವ ಪ್ರತಿಜ್ಞೆಗೈದರು. "ಬಾಪೂಜೀಯವರ ಮಾರ್ಗದಲ್ಲಿಯೇ ಮುನ್ನಡೆಯಲು ನನ್ನ ಪ್ರಯತ್ನ" ಎನ್ನುತ್ತಾ ಅವರು ಕರ್ಮಕ್ಷೇತ್ರದಲ್ಲಿ ಹೊರಳಾಡತೊಡಗಿದರು.

ಹೈದರಾಬಾದಿನ ಸರ್ವೋದಯ ಸಮ್ಮೇಳನದಲ್ಲಿ ಭಾಗವಹಿಸಿದನಂತರ ವಿನೋಬಾ ತೆಲಂಗಾಣವನ್ನು ತಲಪಿದರು.

(ಇನ್ನೂ ಪುಟ ನೋಡಿರಿ)


## NOTICE

Notice is hereby given that Share Certificate No. 184 issued by the Vijaya Bank Limited, in respect of 4 shares numbered 1160 to 1163 now standing in the name of late Sri Nakatte Thimmappa Shetty, Yadthare village, Post Byndoor, who died in the year 1939, is reported to be lost and an application has been received from his legal representative Sri. Manjaya Shetty, for the issue of a fresh Share Certificate in the place of the original for the purpose of transmission of the said shares to his name. Any person having any objection whatsoever for the issue of a fresh Share Certificate or for the transmission of the said shares to the name of the applicant, should communicate immediately the same to the undersigned. If objection is not filed with the undersigned within 15 days from this date, a fresh Share Certificate in the place of the said original Share Certificate No. 184 for 4 shares, will be issued and the transmission of the said shares to the name of the applicant Sri Manjaya Shetty will be registered in the books of the Bank.

The Vijaya Bank Ltd.,
Head Office, MANGALORE-3.
Dated: 22—5—1957.

(Sd.) B. Mahabala Shetty,
Secretary.

# ಭಗವದ್ಭಜನೆ

## ಕಲಿಯುಗದಲ್ಲೂ ಆಧ್ಯಾತ್ಮಿಕತೆಯನ್ನುಳಿಸಿರಿ

"ಅನಿತ್ಯಮಸುಖಂ ಲೋಕಮಿಮಂ ಪ್ರಾಪ್ಯ ಭಜಸ್ವಮಾಮ್-" ಪರಮಾತ್ಮನ ವಚನವಿದು. ಆದ್ದರಿಂದ ನಾವು ಅವನನ್ನು ಭಜಿಸಲು ಇಂದಿನಿಂದಲೇ ಆರಂಭಿಸುವ. ಈ ಶ್ಲೋಕಾರ್ಥದಲ್ಲಿ "ಅನಿತ್ಯಂ, ಅಸುಖಂ, ಇಮಂ ಲೋಕಂ ಪ್ರಾಪ್ಯ, ಮಾಮ್ ಭಜಸ್ವ" ಎಂಬ ಅಭಿಪ್ರಾಯವಿದೆ. ಇದರಲ್ಲಿ "ಅನಿತ್ಯಂ" ಎಂಬುದರಿಂದ ತಡವಾಡಬೇಡ ಎಂಬ ಸೂಚನೆ ದೊರೆಯುವುದು. ಈಗಲೇ ಶ್ವಾಸವು ನಿಂತರೆ ಮತ್ತೆ ಏನನ್ನೂ ಮಾಡಲು ಅಸಾಧ್ಯ. ಎಣಿಸಿದ ವಿಚಾರಗಳೆಲ್ಲಾ ಅಲ್ಲಿಗೇ ಅಂತ್ಯಗೊಳ್ಳುವುವು. ದೇಹವು ಪಂಚಭೂತಗಳಲ್ಲಿ ಸೇರುವುದು. ಶರೀರವು ಕ್ಷಣಭಂಗುರವಾಗಿದೆ. ಸಮಯದ ಪ್ರತಿಕ್ಷಣವೂ ಬೇಗವಾಗಿ ಮುಂದರಿಯುವುದು. ಮೃತ್ಯುವು ಕ್ಷಣಕ್ಷಣಕ್ಕೂ ಸಮೀಪಿಸುತ್ತಿರುವುದು. ಜೀವನದ, ಅತ್ಯಮೂಲ್ಯ ಸಮಯವನ್ನು ವ್ಯಯಿಸಿ ನಾವು ಪಡೆದುದೇನು?

ಎರಡನೇ ಪದವು "ಅಸುಖಂ"–ಈ ಲೋಕದಲ್ಲಿ ಸುಖವಿಲ್ಲ ಎಂಬ ತಾತ್ಪರ್ಯ ಇಷ್ಟೇ ಅಲ್ಲ. ಪರಮಾತ್ಮನು "ದುಃಖಾಲಯಮಶಾಶ್ವತಂ" ಎಂದಿದ್ದಾನೆ. ನಾವು ಮಾತ್ರ ಇಲ್ಲಿ ಸುಖವನ್ನು ಹುಡುಕುತ್ತೇವೆ. ಇದು ಆಶ್ಚರ್ಯದ ಸಂಗತಿ! ಒಬ್ಬ ವ್ಯಕ್ತಿಯು ವಿದ್ಯಾಲಯದಲ್ಲಿ ಬಟ್ಟೆಗಳನ್ನು ಹುಡುಕಿದರೆ, ಬಟ್ಟೆ ಅಂಗಡಿಯಲ್ಲಿ ಔಷಧವನ್ನು ಅರಸಿದರೆ, ಆಸ್ಪತ್ರೆಯಲ್ಲಿ ಮಿಠಾಯಿಯಂತಹ ಲಿಂಡಿಗಾಗಿ ಶೋಧಿಸಿದರೆ ಅಂತೆಯೇ ದುಃಖಾಲಯದಲ್ಲಿ ಸುಖವನ್ನು ಹುಡುಕಿದರೆ ಸಿಗುವುದೆಂತು? ಸುಖರಾಶಿಗಳೆಂದು ಭಾವಿಸಲ್ಪಡುವ–ಧನ, ಸ್ತ್ರೀ, ಪುತ್ರ, ಭೂಮಿ, ಭೋಗ-ಇವುಗಳೆಲ್ಲಾ ಆದಿ ಅಂತ್ಯಗಳಲ್ಲಿ, ಸರ್ವಕ್ಕೂ ದುಃಖದಾಯಕವಾಗಿವೆ.

ವಿಚಾರಣೀಯವಾದ ಅಂಶವೆಂದರೆ ನಮ್ಮಲ್ಲಿ ಯಾವ ವಸ್ತುವಿನ ಅಭಾವ ವಿದೆಯೋ, ಯಾವುದನ್ನು ನಾವು ಬಯ್ಸುವೆವೋ ಅದು ಸುಖದಾಯಕವಾಗಿದೆ. ಆದರ ಆಸೆಯು ಬಲವಾದಷ್ಟೂ, ದೊರೆದಾಗ ಆಗುವ ಸುಖದ ಕಲ್ಪನೆ ಹೆಚ್ಚುತ್ತ. ಹಾಗೆಯೇ ವಸ್ತುವಿನ ಅಭಾವವಿದ್ದರೂ, ಅಭಾವದ ಅನುಭವವಿಲ್ಲದಿದ್ದರೆ, ಅದಕ್ಕೋಸ್ಕರ ಹಡಪಡಿಸವಿದ್ದರೆ ಅದು ದೊರಕಿದರೂ ಸುಖವಾಗಿಲಾರದು. ಆದ್ದರಿಂದ ಲೌಕಿಕ ಸುಖಸಾಧನಗಳನ್ನು ಪಡೆಯಬೇಕಾದರೆ ಆದಿಯಲ್ಲಿ ದುಃಖದ ಅವಶ್ಯಕತೆ ಇದೆ. ಇದು ಅಭಾವದ ದುಃಖವಾಯಿತು. ಆ ವಸ್ತುವು ಸಿಗುವವರೆಗೆ ಸಿಗುವ ದುಃಖವಾಯಿತು. ಧನ ಮುಂತಾದ ವಸ್ತುಗಳು ಮನೋರಥಾನುಸಾರ ಸಿಗುವುದಿಲ್ಲ. ಇದು ಎರಡನೇ ದುಃಖ. ಸಿಕ್ಕಿದರೂ, ಇತರರಿಗೆ ಅದಕ್ಕಿಂತ ಅಧಿಕವಾಗಿ ಸಿಗುವುವು. ಆಗ ಹೊಸತೊಂದು ದುಃಖದ ಉದಯವಾಗುವುದು. ಇದು ಮೂರ್ಯನೇ ದುಃಖ. ಸಿಕ್ಕಿದರೂ ಅದು ನಾಶವಾಗುವ ನಿಶ್ಚಂತೆಯಿಂದ ಚಿಂತೆಗೆ ಕಾರಣವಾಗುವುದು. ಇದು ನಾಲ್ಕನೇ ದುಃಖ. ಸಿಕ್ಕಿಯೂ ನಷ್ಟವಾದರೆ ಅಧಿಕ ಕಷ್ಟವಾಗುವುದು. ಆ ದುಃಖವು-ಅಂತ್ಯ ದುಃಖವು-ಆದಿಗಿಂತಲೂ ಅತೀ ಹೆಚ್ಚಿನದಾಗಿರುವುದು. ಇದು ಐದನೇ ದುಃಖವಾಯಿತು. ಅತಿ ಮಾಯಾ ಮೋಹಿನಿಯ ಶಕ್ತಿಯಿಂದ ಕಲ್ಪಿತ ಸುಖದ ಅನುಭವವಾಗುವುದು ಅಲ್ಲದೆ ನಿಜವಾಗಿ ಸುಖ ನೆಲ್ಲಿ? ವಿಚಾರಿಸಿ ನೋಡಿದರೆ ಯಾವ ಸಂಸಾರಿಕ ವ್ಯಾಪಾರಿಗೂ ತಾನಿರುವ ಪರಿಸ್ಥಿತಿಯಲ್ಲಿ ಸುಖ ಸಂತೋಷಗಳಲ್ಲ. ಪ್ರತಿಯೊಂದೂ ಅದಕ್ಕಿಂತ ಅಧಿಕ ಸುಖ ಲಾಲಸೆಯಿಂದ ದುಃಖಪಡುವುದು.

ಇನ್ನು ವಮೂರನೆಯದು "ಇಮಮ್ ಲೋಕಮ್ ಪ್ರಾಪ್ಯ." ಇಲ್ಲಿ "ಇಮಂ ಲೋಕಂ" ಎಂಬುದು "ಈ ಮಾನವ ಶರೀರ" ಎಂಬ ಸಂಕೇತವಾಗಿದೆ. ಈ ಮನುಷ್ಯ ಶರೀರವನ್ನು ಪಡೆದು ತನ್ನನ್ನೇ ಭಜಿಸು ಎಂದು ಪರಮಾತ್ಮನು ಹೇಳಿದ್ದಾನೆ. ಯಾಕೆಂದರೆ ಇತರ ಕಾರ್ಯಗಳು ಬೇರೆ ಬೇರೆ ದೇಹಗಳಿಂದ ನಡೆಯಬಲ್ಲವು ಅನೇಕ ವ್ಯಾಪಿಯೋಗಿಗಳಲ್ಲಿ ಹುಟ್ಟಿದಾಗ ಕರ್ತವ್ಯ ಕರ್ಮದ ಜ್ಞಾನವಿರುವುದಿಲ್ಲ. ಸಾಧನ ಸಾಮಗ್ರಿಗಳಿರುವುದಿಲ್ಲ. ಅಧಿಕಾರವಿರುವುದಿಲ್ಲ ಅಧಿಕಾರ—ಜ್ಞಾನ—ಸಾಮಗ್ರಿ ಇವು ಮೂರೂ ಈ ಮಾನವ ಶರೀರದಲ್ಲಿಯೇ ಇವೆ. ಒಮ್ಮೊಮ್ಮೆ ಪಶುಪಕ್ಷಿಗಳಲ್ಲಿಯೂ ಭಗವದ್ಭಕ್ತಿಯು ತೋರಿಬರುವುದುಂಟು.ಅವು ಅನವಾದಾತ್ಮಕ ಹಾಗೂ ಅತೀ ವಿರಳ.

ಮಾನವ ಶರೀರವನ್ನು ಪಡೆದೂ ಸಾಧನೆ ಮಾಡದವರು- "ಇದು ಕಲಿಯುಗ, ಸಮಯವು ಕೆಟ್ಟದು. ನಾಲ್ಕು ದಿಕ್ಕಿನಲ್ಲಿಯೂ ಪಾಪವೇ ಪಸರಿಸಿರುವುದು. ಗಟ್ಟ, ಆಹಿಂಸಾದಿಗಳ ಪಾಲನೆಯೂ, ಭಗವಚ್ಚಿಂತನೆಯೂ ಅಸಾಧ್ಯ. ಎಲ್ಲರ ಬುದ್ಧಿಯೂ ಅಧರ್ಮದ ಕಡೆಗೆ ಹೊರಳುವುದು. ಏನು ಮಾತಲಿ? ಇಡೀ ವಾಯುಮಂಡಲವೇ ಪಾಪದಿಂದ ತುಂಬಿರುವಾಗ ಓರ್ವ ಮಾನವನು ಏನನ್ನು ತಾನೇ ಮಾಡಬಲ್ಲನು? "ಕಾಲಕ್ಕೆ ತಕ್ಕ ಕೋಲ" ಎಂಬಂತೆ "ಗಾಳಿ ಬಂದಂತೆ ಕೂಡೆ ಹಿಡಿಯ"ದಿದ್ದರೆ ದಿನ ಕಳೆಯುವುದು ಕಷ್ಟ. ಸಮಯಕ್ಕನುಸರಿಸಿ ನಡೆದರೆ ಸಾಧನೆ ಮಾಡಲು ಸಾಧ್ಯವಾಗದು" ಎಂದು ಉದ್ಗಾರ ಎಳೆಯುತ್ತಾರೆ.

ಸ್ವಲ್ಪ ವಿಚಾರಿಸುವ. ನಾವು ಸಮಯಕ್ಕನುಸರಿಸಿ ನಡೆಯುತ್ತೇವೆಯೇ ಎಂದು. ಇಲ್ಲ. ಎಂದಿಗೂ ಇಲ್ಲ. ಶೀತಕಾಲ ಬಂದಾಗ ಬೆಚ್ಚಗಿನ ಬಟ್ಟೆಗಳನ್ನು ಧರಿಸುತ್ತೇವೆ. ಬೆಂಕಿಯ ಬಳಿಯಲ್ಲಿ ಕುಳಿತು ಕೊಳ್ಳುತ್ತೇವೆ. ಕೋಣೆಯ ಕಿಟಕಿ ಬಾಗಿಲುಗಳನ್ನು ಮುಚ್ಚಿ ಮಲಗುತ್ತೇವೆ. ಇದು ಸಮಯಕ್ಕೆ ಪ್ರತಿಕೂಲವಾಗಿ ನಡೆಯುವುದಲ್ಲವೇನು? ಹೀಗೆಯೇ ದೇಹದೆಯಲ್ಲಿ ತಂಪಾದ ಪಾನೀಯಗಳನ್ನು ಕುಡಿಯುತ್ತೇವೆ. ಬಿಸಿಲಿನಿಂದ ಆದಷ್ಟು ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತೇವೆ. ಮಳೆ ಗಾಲದಲ್ಲಿ ಕೊಡಾ ಆದಷ್ಟು ಪ್ರಯತ್ನ ಮಾಡಿ ಆದರಿಂದ ತಪ್ಪಿಸಿಕೊಳ್ಳುವ ಪ್ರಯತ್ನ ನಡೆಯುತ್ತೇವೆ. ಹಾಗಿಯೇ ಕಲಿಕಾಲದಲ್ಲೂ ಆಧ್ಯಾತ್ಮಿಕತೆಯನ್ನು ಉಳಿಸಲು ಪ್ರಯತ್ನಿಸುವ. ಹೇಗೆ ಶರೀರದ ರಕ್ಷಣೆ ಮಾಡದಿರುವುದರಿಂದ ಅದು ಹೇಗೆ ನಾಶವಾಗುವುದೋ, ಹಾಗೆಯೇ ತಧ್ಯಾತ್ಮಿಕ ಜೀವರಕ್ಷಣೆ ಮಾಡದಿರುವುದರಿಂದ ಅಧ್ಯಾತ್ಮ ಲಾಭದಿಂದ ಸರ್ವಥಾ ವಂಚಿತರಾಗ ಬೇಕಾಗುವುದು.

ಆದ್ದರಿಂದ ಸಮಯಕ್ಕೆ ದೋಷ ಕೊಡುವುದು ತಪ್ಪು. ಆಧ್ಯಾತ್ಮಿಕ ಉನ್ನತಿಗೆ ಕಲಿಯುಗವೇ ಉತ್ತಮವಾಗಿದೆ. ಕಾರಣ ಈ ಯುಗದಲ್ಲಿ ಭಗವದ್ಭಜನೆಗೆ ಬಹಳ ಬೆಲೆ ಸಿಗುವುದು. ಸುಲಭದಲ್ಲಿ ಮುಕ್ತಿ ಸಿಗುವುದು. ಇತರ ಯುಗಗಳಲ್ಲಿ ಇದು ಸಂಭವವಿಲ್ಲ. ಆದರೂ ಒಬ್ಬ ರಾಜನ್ಯನೀ ಕವಿ ಹೇಳಿದಂತೆ ' ಕರುಣಾನಿಧಿ ಪರಮಾತ್ಮನು ಕೃಪೆಯಿಂದ ಶ್ರೇಷ್ಠ ಮನುಷ್ಯ ಶರೀರವನ್ನು ದಯಪಾಲಿಸಿದನು. ಮೂರ್ಖ, ಕೃಶ್ಣನ್ನ ಮಾನವನು ಇದನ್ನು ತಿಳಿಯದೆ ಶರೀರವನ್ನು ಮಣ್ಣುಗೂಡಿಸಿದನು." ಇದಕ್ಕೆ ನಾವೇನು ಮಾಡಲಿ? ಪರಮಾತ್ಮನು ನಮ್ಮನ್ನು ಸಂಸಾರಿಯನ್ನಾಗಿ ಮಾಡಿ, ಸಾಂಸಾರಿಕ ಕಾಮ-ಬಂಧನಗಳಲ್ಲಿ ಸಿಲುಕಿಸಿಬಿಟ್ಟನೆ. ಹೇಗೆ ಅವನನ್ನು ಭಜಿಸಲಿ, ಅವನ ಇಚ್ಛೆ ಹೇಗಿದೆಯೋ ಹಾಗೇ ಆಗುವಂದ" ಎನ್ನುವ ಮರಿಗೂ ಕಡಿಮೆ ಇಲ್ಲ. ತಾನು ಉದ್ಯೋಗವನ್ನು ಮಾಡದೇ ಇತರರ ಮೇಲೆ ದೋಷಾರೋಪಣೆ ಮಾಡಿ ತಾನು ನಿರ್ದೋಷಿಯಾಗಿ ಉಳಿಯಲು ಪ್ರಯತ್ನಿಸುವುದು ಮೂರ್ಖತನ ಆದ್ದರಿಂದ ವಿವೇಕಪೂರ್ವಕ ವಿಚಾರ ಮಾಡಿ, ನಮ್ಮ ವಾಸ್ತವಿಕ ಉನ್ನತಿಗೆ ಕಟಿಬದ್ಧರಾಗಿ ಉತ್ಸಾಹ, ತತ್ಪರತೆಗಳಿಂದ ಪ್ರಯತ್ನಿಸುವ.

ಇನ್ನು ನಾಲ್ಕನೆಯ ಮಾತು— "ಮಾಮ್ ಭಜಸ್ವ"– "ನನ್ನನ್ನು ಭಜಿಸು." ಪರಮಾತ್ಮನ ಸ್ವರೂಪವೇನು? ಅವನನ್ನು ಭಜಿಸುವುದೆಂದರೇನು? ಹೇಗೆ? ಇಂದಿನ ವರೆಗೆ ನೋಡಿದಂತೆ, ಕೇಳಿದಂತೆ, ಓದಿದಂತೆ, ತಿಳಿದಂತೆ, ಸಾಕಾರ-ನಿರಾಕಾರ, ಸಗುಣ-ನಿರ್ಗುಣ, ಇತ್ಯಾದಿಯಾಗಿ ಯಾವ ರೂಪವನ್ನು ನಿರ್ಧರಿಸುವಿರೋ–ಅದೇ ಪರಮಾತ್ಮನ ಸ್ವರೂಪ. ಅವನನ್ನು ಸರ್ವಶ್ರೇಷ್ಠನೆಂದು ತಿಳಿದು ಶರಣಾಗತಿ ಹೊಂದುವುದೊಂದೇ ಭಗವದ್ಭಜನೆ. ಅರ್ಥಾತ್ ಜಿಹ್ವೆಯಿಂದ ನಾಮಜಪ, ಮನದಿಂದ ಸ್ವರೂಪ ಚಿಂತನೆ, ಬುದ್ಧಿಯಿಂದ ನಿಶ್ಚಯ. ಶರೀರದಿಂದ ಆಜ್ಞಾಪರಿಪಾಲನೆ ಹಾಗೂ ಸರ್ವವನ್ನೂ ಅವನಿಗೆ ಸಮರ್ಪಿಸಿ, ಅವನ ಪ್ರತಿಯೊಂದು ವಿಧಾನದಿಂದಲೂ ಸಂತುಷ್ಟರಾಗಿರುವುದು-ಭಗವದ್ಭಜನೆ.

ಪರಮಾತ್ಮ ಸ್ವರೂಪವನ್ನು ಚಿಂತನೆ ಮಾಡುತ್ತಾ ಅವನ ಪರಮ ಪಾವನನಾಮವನ್ನು ನಿತ್ಯ-ನಿರಂತರ ನಿಷ್ಠಾನುಭಾವದಿಂದ ಶ್ರದ್ಧಾಪೂರ್ವಕ ಜಪಿಸುವುದೂ ಅವನ ಗುಣ, ಪ್ರಭಾವ, ಲೀಲೆಗಳ ಮನನ, ಚಿಂತನ, ಶ್ರವಣ, ಕಥನ ಮಾಡುತ್ತಿರುವುದೂ, ಸದಾ ಸರ್ವದಾ ಅವನ ಸ್ಮೃತಿಯನ್ನು ಇಟ್ಟುಕೊಳ್ಳುವುದು-ಶರಣಾಗತಿಯ ಮೊದಲನೇ ರೀತಿಯಾಗಿದೆ.

ಎರಡನೆಯದು–ಪರಮಾತ್ಮನ ಆಜ್ಞೆಗಳನ್ನು ಪರಿಪಾಲಿಸುವುದು. ಇದರಲ್ಲಿ ಧ್ಯಾನದಲ್ಲಿಡಬೇಕಾದ ವಿಷಯ. ಮನ, ಇಂದ್ರಿಯ, ಶರೀರಗಳ ಅನುಕೂಲತೆಯನ್ನು ಮಾತ್ರ ನೋಡದೆ, ಪರಮಾತ್ಮನ ಆಜ್ಞೆ ಏನು ಎಂಬುದನ್ನು ವಿಚಾರಿಸಿ ಕೆಲಸಮಾಡುವುದು. ಭಗವದಾಜ್ಞೆಯೂ ವೈದು? ಅದು ಹೇಗೆ ಪ್ರಾಪ್ತವಾಗುವುದು ಶ್ರೀಮದ್ಭಗವದ್ಗೀತೆಯಂತಹ ಪರಮಾತ್ಮನ ಶ್ರೀಮುಖದ ವಚನಗಳು. ಎರಡನೆಯದಾಗಿ ಭಗವದ್ಭಕ್ತ ಮಹಾ ಪುರುಷರವ ಚನಗಳು, ಭಗವದಾಜ್ಞೆಗಳಾಗಿವೆ. ಯಾವ ಅಂತಃಕರಣದಲ್ಲಿ ಸ್ವಾರ್ಥಹಾಗೂ ಅಹಂಕಾರಗಳು ಮನೆಮಾಡಿಲ್ಲವೋ ಅಲ್ಲಿ ಭಗವದಾಜ್ಞೆಗಳು ಸ್ಫುರಣವಾಗುವುವು. ಹಾಗೂ ಮೂರನೆಯದಾಗಿ ಮಹಾಪುರುಷರ ಆಚರಣೆಗಳೂ ನಮ್ಮ ಅದರ್ಶವಾಗಬಹುದು. ಗೀತೆಯಲ್ಲಿಯೂ "ಯದ್ಯದಾಚರತಿ" ಎಂಬ ಶ್ಲೋಕದಲ್ಲಿ ಅದನ್ನೇ ಹೇಳಿದೆ.

ನಾಲ್ಕನೆಯದಾಗಿ–ಸಾಧಕನಿಗೆ ತನ್ನ ರಾಗದ್ವೇಷಯುಕ್ತ ಅಂತಃಕರಣದಲ್ಲಿ ಸ್ಫುರಿಸಿದ್ದೇ ಭಗವದಾಜ್ಞೆ ಎಂದು ತಿಳಿಯಬಹುದು. ಇದನ್ನೆಯದು–ಯಾರೊಬ್ಬನೂ ತನ್ನ ಸ್ವಭಾವಕ್ಕನುಸರಿಸಿ ಆಜ್ಞೆ ಕೊಡುವುದರಿಂದ. ದಯಾಳು ಪರಮಾತ್ಮನ ಸ್ವಭಾವವನ್ನು ತಿಳಿಯಲು ಪ್ರಯತ್ನಿಸುವುದು. ಪರಮಾತ್ಮ ಆಜ್ಞೆಯನ್ನು ತನ್ನ ಸ್ವಭಾವಕ್ಕನುಸರಿಸಿಯೇ ಕೊಡುವನು. ಆದ್ದರಿಂದ ಯಾವ ಕಾರ್ಯದಿಂದ ತನ್ನ ಸ್ವಾರ್ಥ ತ್ಯಾಗವಾಗಿ ಪ್ರಾಣಿ ಮಾತ್ರದ ಕಲ್ಯಾಣವಾಗುವುದೋ, ಯಾ

(ನನೇ ಪುಟ ನೋಡಿರಿ)


## ಸಮಯ ಇನ್ನೂ ಮಿಂಚಿಹೋಗಿಲ್ಲ

ಜೀವನದಲ್ಲಿ ಒಂದು ರೀತಿಯ ವ್ಯವಸ್ಥೆಯಿರಬೇಕಾದರೆ ಆಪತ್ಕಾಲದಲ್ಲಿ ಸಹಾಯಕ್ಕೊದಗುವ ಒಂದು ಆಪದ್ಧನ ಸಂಗ್ರಹದ ಯೋಜನೆಯನ್ನು ಚಿಕ್ಕವಂದಿನಿಂದಲೇ ಆರಂಭಿಸಬೇಕೆಂಬುದು ಸಹಜನೇ. ಆದರೆ ಕಾಲ ಕಳೆದು ಹೋಯಿತೆಂದು ಕಣ್ಣೀರು ಕರೆಯುತ್ತಾ ಕುಳಿತುಕೊಳ್ಳುವುದಕ್ಕಿಂತ ಇಂದಿನಿಂದಲೇ ಸ್ವಲ್ಪ ಸ್ವಲ್ಪ ಹಣವನ್ನಾದರೂ ಉಳಿತಾಯಮಾಡಲು ಯತ್ನಿಸುವುದೇ ಮುಖ್ಯ. ಸಮಯವಿನ್ನೂ ಮಿಂಚಿಹೋಗಿಲ್ಲ, ಹಲವಾರು ಆಕರ್ಷಕ ಮತ್ತು ಸುಲಭಸಾಧ್ಯವಾದ ಉಳಿತಾಯದ ಯೋಜನೆಗಳಿಗೆ–

**ಸಿಂಡಿಕೇಟ್ ಬ್ಯಾಂಕಿನಲ್ಲಿ** ವಿಚಾರಿಸಿರಿ.

**96 ಶಾಖೆಗಳು**

**ರೂ. 10.64 ಕೋಟಿಗೂ ಮಿಕ್ಕಿದ ಚಲಾವಣಾ ನಿಧಿ**

ಇವುಗಳಿಂದ ನಾವಿರಾರು ಜನರ ಆರ್ಥಿಕ ಅವಶ್ಯಕತೆಗಳಲ್ಲಿ ಸಹಕರಿಸಲ್ಪಟ್ಟ

ಶೆಡ್ಯೂಲ್ಡ್ ಬ್ಯಾಂಕು

ಟಿ. ಎ. ಪೈ, ಬಿ. ಕಾಂ.(ಲಂಡನ್), ಎಫ್.ಆರ್.ಇ.ಎಸ್.(ಲಂಡನ್), ಎ. ಐ. ಬಿ., ಜನರಲ್ ಮೆನೇಜರ್.

ಡಾ। ಟಿ. ಎಂ. ಎ. ಪೈ, ಎಂ.ಬಿ.ಬಿ.ಎಸ್., ಮೆನೇಜಿಂಗ್ ಡೈರೆಕ್ಟರ್.

**The Canara Industrial & Banking Syndicate, Ltd.,**

Head Office: UDIPI, S. India.

## ಜನನ ನಿಯಂತ್ರಣ

# ದೇಶದ ಬಡತನವನ್ನು ದೂರ ಮಾಡುವ ಮಾರ್ಗ ಇಲ್ಲಿದೆ

ಭಾರತವು ಅನಾದಿಕಾಲದಲ್ಲಿ 'ಸಾಲು ಜೇನು ಸುರಿವನಾಡು' ಎಂದೆನ್ನಿಸಿತ್ತು. ಆ ಹೆಸರು ಇಂದಿಗೂ ಉಳಿದಿದೆ. ಆದರೆ ವಸ್ತು. ಬಾಪ್ಪು ಅಧಿಕ ಜನಸ್ತೋಮ ಮತ್ತು ವಿರಳ ಉತ್ಪಾದನೆಗಳಿಂದಾಗಿ ಬಡತನದ ಭೂತದ ಕೈಯು ಬಿಗಿಯಾದ ಹಿಡಿತಕ್ಕೆ ಸಿಕ್ಕಿನರಳುತಿದ್ದರೂ ಈ ಪಟ್ಟಿ ಇನ್ನೂ ಕಳಚಿ ಹೋಗಿಲ್ಲ. ಹೊರಕಲು ಬಟ್ಟೆಗಳನ್ನು ಧರಿಸಿದ, ಬಳಚಿದ, ಮ್ಲಾನವದನಂದಿ ಎಳೆಮಕ್ಕಳತ್ತ ವಿಶೇಷ ಗಮನವೀಯದ ಆಯಾಪ ಮತ್ತು ಸತ್ವಹೀನತೆಯಿಂದ ಜೀವನದೊಡನೆ ಹೋರಾಡುತ್ತಿರುವ ನಮ್ಮ ದೇಶವಾಸಿಗಳನ್ನು ನಾವು ಯಾವಾಗಲೂ ನೋಡುತ್ತೇವೆ. ಇದನ್ನು ನೋಡುತ್ತಾ ಪ್ರತಿಯೊಬ್ಬ ಆತ್ಮಗೌರವಿ ಹಾಗೂ ವಿಚಾರಶೀಲ ಭಾರತೀಯನು "ನಾವೇನು ಅಧಿಕ ಪ್ರಮಾಣದಲ್ಲಿರುವೆವೆ? ಎಂದು ಕೇಳುತ್ತಾನೆ.

ಸುಭಾಷಚಂದ್ರ ಭೋಸರು ೧೯೩೮ರ ತ್ರಿಪುರಿ ಕಾಂಗ್ರೆಸ್ಸಿನಲ್ಲಿ ಹೇಳಿದ್ದರು. ಮುಂದಿನ ಹತ್ತು ವರ್ಷಗಳಲ್ಲಿ ಹೆಚ್ಚಲಿರುವ ಮೂರು ಕೋಟಿ ಜನರನ್ನು ಯೋಗ್ಯ ರೀತಿಯಲ್ಲಿ ಕಾಣುವುದು ನಮ್ಮಿಂದ ಅಸಾಧ್ಯ."ಇದುಸುಮಾರು ೨೦ವರ್ಷಗಳ ಹಿಂದಿನಮಾತು.೧೯೫೧ರ ಜನಗಣನೆಯು ೧೯೩೧ರದನ್ನು ಒಂದು ಮಹಾ ವಿಭಾಗನೆಂದು ಕರೆಯಿತು. ೧೯೩೧ರಿಂದೀಚೆಜನಸಂಖ್ಯೆಯು ಇಳಿಯುತ್ತಾ ಬರುತಿದ್ದುದೇ ಇದಕ್ಕೆ ಕಾರಣ. ಆ ಸಮಯದಲ್ಲಿ ಹೆಚ್ಚು ಕಡಿಮೆ ವ್ಯವಸಾಯಕ್ಕೆ ಉಪಯೋಗಿಸುವ ಭೂಮಿಯ ಪ್ರಮಾಣವು ಜನಸಂಖ್ಯೆಗನುಗುಣವಾಗಿಯೇ ಇತ್ತು. ಆದರೆ,೧೯೩೧ರ ನಂತರ ಜನಸಂಖ್ಯೆಯು ಹೆಚ್ಚುತ್ತಾ ಬಂದು, ಆಹಾರ ಧಾನ್ಯಗಳ ಪ್ರಮಾಣವು ಕಡಿಮೆಯಾಗುತ್ತಾ ಬಂತು. ೧೫೦ ವರ್ಷಗಳ ಹಿಂದೆ ಮಾಲ್ಥುಸ್ ಎಂಬ ಖಾದ್ಯಿಯು ಭೂಮಿಯು ಆಹಾರೋತ್ಪಾದನೆಯು ಜನಸಂಖ್ಯೆಯ ಬೆಳವಣಿಗೆಗಿಂತ ನಿಧಾನವಾಗಿಯೇ ಆಗುತ್ತದೆ ಎಂದಿದ್ದ ಮಾತನ್ನು ನಾವು ನೆನಪಿಸಿಕೊಳ್ಳಬೇಕು. ಅದರ ಸತ್ಯಾಸತ್ಯತೆಯನ್ನು ವಿಮರ್ಶಿಸದೇಕು ಅವನ ಅಭಿಪ್ರಾಯದಂತೆ, ಹೆಚ್ಚುತ್ತಿರುವ ಜನಸಂಖ್ಯೆಯು ಪ್ರಮಾಣದಲ್ಲಿ ನಾವು ಆಹಾರ ಧಾನ್ಯಗಳನ್ನು ಹೆಚ್ಚಿಸಲು ಅಸಾಮರ್ಥ್ಯರಾಗಿರುವುದರಿಂದ, ಹೆಚ್ಚಿಸದ ಆಹಾರದ ಪ್ರಮಾಣಕ್ಕನುಗುಣವಾಗಿಯೇ ನಾವು ಜನಸಂಖ್ಯೆಯನ್ನು ಬೆಳೆಸಬೇಕು. ಆಹಾರೋತ್ಪಾದನೆಯನ್ನು ಅಧಿಕಗೊಳಿಸುವುದು ಅಥವಾ ಮುಂದಾಲೋಚನೆ, ನೈತಿಕ ಮಟ್ಟ ಮತ್ತು ವಿವಾಹದ ಪ್ರಾಯದಲ್ಲಿ ಹೆಚ್ಚಳ ಮಾಡುವುದರಿಂದ ಜನಸಂಖ್ಯೆಯ ಬೆಳವಣಿಗೆಗತಡೆ ಹಾಕುವುದು ಎಂಬೆರಡು ಉಪಾಯಗಳಿಂದ, ಜನರೆಲ್ಲಾ ಅನ್ನವನ್ನು ಒದಗಿಸಬಹುದೆಂದಾತ ಸೂಚಿಸಿದ್ದ. ಇಲ್ಲವಾದರೆ, ಯುದ್ಧ, ರೋಗ ಮತ್ತು ಕ್ಷಾಮಗಳಂತಹ ವಿಪತ್ತುಗಳು ನಿಜವಾಗಿಯೂ ಉಂಟಾಗುವುವು ಎಂದಾತ ಸ್ಪಷ್ಟಪಡಿಸಿದ್ದ.

ಮಾಲ್ಥುಸನ ಈ ಸಿದ್ಧಾಂತವು ಸತ್ಯವಾಗಿ ಪರಿಣಮಿಸಿದ್ದರೆ, ಅದು ಇಂದಿನ ಭಾರತದಲ್ಲಿ ನೂತ್ರ. ಅಧಿಕವಾಗುತ್ತಿರುವ ಜನಸಂಖ್ಯೆಯ ಎಲ್ಲೆಯನ್ನು ನಮ್ಮ ಆಹಾರೋತ್ಪಾದನೆಯು ಮುಟ್ಟುವುದಿಲ್ಲ. ನಾವು ಉಣ್ಣಿಸುವುದಕ್ಕಿಂತಲೂ ಅಧಿಕತರ ಪ್ರಮಾಣದಲ್ಲಿ ಹುಟ್ಟಿಸುತ್ತೇವೆ. ಆದುದರಿಂದ ನಮ್ಮ ಅತ್ಯಧಿಕ ಸಂಖ್ಯೆಯ ಜನರು ಬಡತನದಿಂದ ಹಿಂಡಲ್ಪಟ್ಟಿದ್ದಾರೆ. ನಮ್ಮ ಶರೀರದ ಎತ್ತರ, ಭಾರ ಮತ್ತು ಬಾಳುವೆಗಳು ಲೋಕದ ಇತರ ದೇಶಗಳ ನರದಕ್ಕಿಂತ ತೀರಾ ಹೀನಮಟ್ಟದಲ್ಲಿವೆ. ರೋಗವು ಅನೇಕ ಮನೆಬಾಗಿಲುಗಳನ್ನು ತಟ್ಟುತ್ತಿದೆ. ಆದನ್ನು ಭಾರತೀಯನು ಸದಯನಾಗಿ ಸ್ವಾಗತಿಸುತ್ತಾನೆ. ಯವನು ನಮ್ಮಿಂದ ಪಡೆವಷ್ಟು ಪ್ರಮಾಣದಲ್ಲಿ ಬೇರೆ ಯಾವ ದೇಶದಿಂದಲೂ ಕೆಲಸವನ್ನು ಕೈಗೊಳ್ಳುವುದಿಲ್ಲ. ನಮ್ಮ ಆಯುಃ ಪ್ರಮಾಣವೂ ಬಹಳ ಎಳೆಯದು.

ಈ ಪ್ರಾಮುಖ್ಯ ಪರಿಸ್ಥಿತಿಯ ಕಾರಣವನ್ನು ಬಹಳ ಸುಲಭದಲ್ಲಿಯೇ ಕಂಡು ಹಿಡಿಯಬಹುದು. ಮೊದಲನೆಯದಾಗಿ, ಜನಸಂಖ್ಯೆ ಮತ್ತು ಆಹಾರ ಧಾನ್ಯ ಹಾಗೂ ಜೀವನದ ಮಟ್ಟಿತರ ಆವಶ್ಯಕತೆಗಳ ನಡುವೆ ಸಮತೂಕವೆಂಬುದೇ ಅಗೋಚರವಾಗಿದೆ. ವರ್ಷಂಪ್ರತಿ ಹುಟ್ಟುತ್ತಿರುವ ಳಜರಿಂದ ೫೦ ಲಕ್ಷದ ವರೆಗಿನ ಮಕ್ಕಳ ಜನನವು ನಮ್ಮ ಬಡತನದ ಆಂಚುಗಳನ್ನು ಮಸೆಯುತ್ತದೆ. ಆದು ನಮ್ಮ ಜೀವನ ಮಟ್ಟವನ್ನು ಕೆಳಗಳಿಸುತ್ತದೆ; ನಮ್ಮ ನಾರಿಯರ ಶಕ್ತಿಯನ್ನು ಜಸಹಿರಿಸುತ್ತದೆ ಮತ್ತು ನಾವು ಆರಸುತ್ತಿರುವ ಗುರಿ ಸೇರುವ ಕಾರ್ಯದಲ್ಲಿ ನಮ್ಮನ್ನು ಹಿಮ್ಮೆಟ್ಟಿಸುತ್ತದೆ. ನಮ್ಮಮ್ಮೆ ಬಡತನದ ಕಂಟಕಮಯ ವೃತ್ತದಲ್ಲಿಯೇ ಭ್ರಮಿಸುವಂತೆ ಮಾಡುತ್ತದೆ: ಬಡತನ– ಹೆಚ್ಚು ಮಕ್ಕಳು— ದೊಡ್ಡ ಬಡತನ-ಮತ್ತೂ ಹೆಚ್ಚು ಮಕ್ಕಳು– ಇನ್ನೂ ದೊಡ್ಡ ಬಡತನ– ಹೀಗಿನೆ ಈ ಆನರ್ತನ. ನಾವು ಈ ಆವರ್ತನವನ್ನು ತೊಡೆದು ಹಾಳಬೆ ಕೋದರೆ, ನಮ್ಮ ಜನಾಂಗವೇ ನಾಶವಾಗುವುದು

ಭಾರತದಲ್ಲಿ ಮಾನವರು ಬಹಳ ಚಿಚಿನ ಪ್ರಮಾಣದಲ್ಲಿ ವ್ಯರ್ಥರಾಗುತ್ತಾರೆ. ಕಾಯಕಶಕ್ತಿಮಾಡುವ ಪ್ರಾಯವನ್ನು ಮುಟ್ಟುವುದಕ್ಕೆ ಮೊದಲೇ ಮಕ್ಕಳ ಸಂಖ್ಯೆಯಲ್ಲಿ ಅರ್ಧದಷ್ಟು ಸಾಯುತ್ತಾರೆ. ನಮ್ಮ ವಿವಾಹಿತರ ವಿನಿಯಂತ್ರಿತ ಭಾವದಿಂದಾಗಿ ತಮಗೆ ತಾವೇ ಅಸಂತೋಷವನ್ನು ಆಮಂತ್ರಿಸಿಕೊಳ್ಳುತ್ತಾರೆ. ಸಾಮಾನ್ಯ ವಿದ್ಯಾಭ್ಯಾಸ, ಸ್ತ್ರೀ ವಿದ್ಯಾಭ್ಯಾಭಿವೃದ್ಧಿಗಳನ್ನು ಹಿಂದೆ ಜಗ್ಗಿ ಹಿಡಿದು ಬಡತನದ ನಾಗರಿಕತೆಯ ಫಲಗಳನ್ನು ದೂರವಿರಿಸುತ್ತದೆ. ಕೀಳು ಮಟ್ಟದ ಜೀವನವು ಆವಶ್ಯಕ ಔದ್ಯೋಗಿಕಾಭಿವೃದ್ಧಿಯನ್ನು ಮಾಡಿಕೊಳ್ಳುವುದಕ್ಕೆ ತಡೆಯಾಗುತ್ತದೆ. ಭಾರತದ ಯಾವುದೇ ಒಂದೆಡೆಯಲ್ಲಿ ಬರ ಇಲ್ಲವೆ ನೆರೆಯಿಂದ ಹಾನಿಯೊದಗಿದರೆ, ಇಲ್ಲಿನ ಜನರ 'ಕೀಳುಮಟ್ಟದ ಜೀವನ'ಕ್ಕೂ ಬಲವಾದ ತಡೆಯುಂಟಾಗುತ್ತದೆ. ನಮ್ಮ ಹೆಚ್ಚುವ ಜನರನ್ನು ಇರಿಸಲು ಲೋಕದ ಲ್ಲೆಲ್ಲಿಯೂ ಸ್ಥಳವಿಲ್ಲ. ಈ ಸಮಸ್ಯೆಗಳನ್ನು ಪರಿಹರಿಸಲು ಕುಟುಂಬ ಯೋಜನೆ ಮತ್ತು ಆರ್ಥಿಕ ಯೋಜನೆಗಳಿಂದ ವಶ್ಯ ಸಾಧ್ಯ.

ಕಳೆದರ್ಧ ಶತಮಾನದಲ್ಲಿ ನಮ್ಮ ಜನ ಸಂಖ್ಯೆಯು ನೂರಕ್ಕೆ ಏನತ್ತರಷ್ಟು ಹೆಚ್ಚಿತು. ೧೯೩೧-೫೧ರ ದಶಕದಲ್ಲಿ ನಮ್ಮ ಜನ ಸಂಖ್ಯೆಯು ನೂರಕ್ಕೆ ೧೧, ೫೧-೬೧ರ ದಶಕದಲ್ಲಿ ನೂರಕ್ಕೆ ೧೫.೫ ೪೧-೭೧ರ ದಶಕದಲ್ಲಿ ನೂರಕ್ಕೆ ೧೫.೫ರಷ್ಟು ಹೆಚ್ಚುತ್ತಿತ್ತಾಬಂತು. ಇಂದು ನಮ್ಮವರ ಸಂಖ್ಯೆ ೩೫೦ ಲಕ್ಷ ಜಗತ್ತಿನ ಒಟ್ಟು ಜನಸಂಖ್ಯೆ ೨೬೨೫ಲಕ್ಷ ಇದು ನೂರಕ್ಕೆ ೧೨ರಂತೆ ಪ್ರತಿ ವರ್ಷ ಬೆಳೆಯುತ್ತಾ ಬರುವುದು. ಈ ಪ್ರಮಾಣದಲ್ಲಿಯೇ ಯು ಕ್ರಾಷ್ಟ್ರ ಸಂಘದ ವರದಿಯೊಂದು ಜನಸಂಖ್ಯೆಯು ಆಹಾರದಉತ್ಪಾದನೆಯಿಂದ ಹೆಜ್ಜೆ ಮುಂದಿಡುತ್ತಿದೆ ಎನ್ನುತ್ತದೆ. ಭಾರತವು ಇದಕ್ಕೆ ಧಾರಾಳವಾಗಿ ನೆರವು ನೀಡುತ್ತದೆ.

ರೂಬ್ಬರನು ಮಾನವನೊಂದು ಉಷ್ಣಯಂತ್ರ ಎಂದು ಕಂಡು ಹಿಡಿದನು. ಇದರಿಂದ ಮಾನವನು ಆರೋಗ್ಯವಂತನಾಗಿ ಬಾಳಬೇಕಾದರೆ ಒಂದು ನಿರ್ದಿಷ್ಟಪ್ರಮಾಣದ ಉಷ್ಣಬೇಕೆಂದು ಕೊಂಡು ರಾಧಾಕಮಲ್ ಮುಖರ್ಜಿಯವರು ದೇಶದ ಒಟ್ಟು ಆಹಾರವನ್ನು ದಿನ ಒಂದಕ್ಕೆ ೨೬೦೦ ಕೆಲೊರಿಗಳಷ್ಟು ಉಷ್ಣದಂತೆ ಲೆಕ್ಕ ಹಾಕಿ ತಾಗಿ ನೋಡಿದರು. ಆಗ ಅವರು ೪೧ಲಕ್ಷ ಕಿಲೊರಿಗಳಷ್ಟು ಉಷ್ಣದ ಕೊರತೆಯಿರುವುದನ್ನು ಕಂಡು ಬೆಚ್ಚಿಬಿದ್ದರು. ಈ ಪ್ರಕಾರ ಆಹಾರಗಳನ್ನು ಕಂಚಿದರೆ, ನಮ್ಮ ಜನಸಂಖ್ಯೆಯಲ್ಲಿ ಪ್ರತಿ ನೂರಕ್ಕೆ ೧೨ರಷ್ಟು ಜನರು ಆಹಾರವಿಲ್ಲದೆ ಉಪವಾಸ ಬೀಳಬೇಕಾಗುತ್ತದೆ. ಯುಕ್ತ ರಾಷ್ಟ್ರ ಸಂಘದ ಆಹಾರ ಮತ್ತು ವ್ಯವಸಾಯ ಸಂಸ್ಥೆಯವರ ಅಂದಾಜನ್ನು ಹಿಡಿದುಕೊಂಡರೂ ನಮಗೆ ಬೇಕಾಗುವ ಉಷ್ಣದ ಪರಿಮಾಣವನ್ನು ಪ್ರತಿಯೊಬ್ಬನಿಗೆ ದಿನಂಪ್ರತಿಗೆ ೧೫೦೦ ಕಿಲೊರಿಗಳಷ್ಟು ಎಂದರೆ, ಈಗ ಇರುವುದಕ್ಕಿಂತ ೫೧೦ ಕಿಲೊರಿಗಳಷ್ಟು ಹೆಚ್ಚಿಸಬೇಕಾಗುವುದು. ಇದಕ್ಕಾಗಿ ನಮ್ಮ ಆಹಾರೋತ್ಪಾದನೆಯನ್ನು ೩೩ ಸೇಕಡಾದಷ್ಟು ಅಧಿಕವಾಗಿಸಬೇಕು. ಈಗ ನಮ್ಮ ದೈನಿಕ ಉಷ್ಣವು ೧೫೦೦ ಎಂದಿಟ್ಟುಕೊಂಡರೂ ಯುದ್ಧ ಪ್ರಾರಂಭದ ೧೯೩೦ ಕೆಲೊರಿಗಳ ಮಟ್ಟವನ್ನು ಇನ್ನೂ ಮುಟ್ಟಲ್ಲ. ೧೯೫೩ರಲ್ಲಿ ಆಹಾರ ಸಮಿತಿಯ ವರದಿಯಲ್ಲಿ ಡಾ. ಆಯ್ಯೊಂಗ್ಯಾರ್ ರು. "ಯಾವ ಸಮಯದಲ್ಲೇ ಆದರೂ ಒಂದು ಮೂರನೆ ಅಂಶದಷ್ಟು ಜನರಿಗೆ ಯೋಗ್ಯ ಆಹಾರ ವ್ಯವಸ್ಥೆಯಾಗಬೇಕು' ಎಂದು ಬರೆದಿದ್ದಾರೆ. ಡಾ. ಜೆ. ಎಮರ್ಸನ್ರವರು ಇನ್ನೂ ಉತ್ತಮವಾದ ಚಿತ್ರವನ್ನು ಚಿತ್ರಿಸಿದ್ದಾರೆ: "೩೦೦ ರಿಂದ ೪೦೦ ಲಕ್ಷಗಳಷ್ಟು ಜನರು ಸಾಮಾನ್ಯವಾಗಿ ದಿನಕ್ಕೊಂದು ಊಟಕ್ಕಿಂತ ಹೆಚ್ಚು ಉಣ್ಣಲಾರರು ಮತ್ತು ಅವರು ಆರು ತಿಂಗಳಿಂದಲೇ ಬದುಕುತ್ತಾರೆ. ನನ್ನ ಮನೆಬಾಗಿಲಿಗೆ ಮುತ್ತಿದ್ದರೋಗಿಗಳಿಗೆ ಯಾವ ವಿಧಾನವೆಲ್ಲಾದರೂ ಯೋಗ್ಯ ಆಹಾರವನ್ನು ಸೂಚಿಸುವುದು ನಿಷ್ಪ್ರಯೋಜಕಸಂಗತಿಯಾಗಿದೆ. ವಾಂತಿಬೇಧಿಯ ರೋಗಿಯ ಬಟ್ಟೆಗಳನ್ನು ಸುಟ್ಟುಬಿಡಬೇಕೆಂದವರಿಗೆ ಹೇಳಿದರೆ, ಒಂದುವೇಳೆ ರೋಗಿಯು ಆರೋಗ್ಯಕೊಂದಿದರೆ, ಆತನೇನನ್ನು ಧರಿಸಬೇಕು ಎಂಬ ಪ್ರಶ್ನೆಯು ಕೇಳಲ್ಪಡುತ್ತದೆ. ಬಡತನವು ಎಲ್ಲವುಗಳನ್ನುತಡೆಹಿಡಿದಿದೆ. ಭಾರತೀಯ ಹಳ್ಳಿಗಳಿಗೆ ಮಾತ್ರೆಗಳು ಬೇಕಾಗಿಲ್ಲ; ಬದಲು ಆಹಾರ ಮತ್ತು ವಿದ್ಯೆಗಳು ಆವಶ್ಯಕವಾಗಿವೆ." ಈ ವಿಚಾರದ ತಮ್ಮ ಹುಸ್ತಕಕ್ಕೆ ಡಾ. ಎಮರ್ಸನ್ರು 'ಉಸಿರಿಲ್ಲದ ಭಾರತ' ಎಂದು ನಾಮಕರಣ ಮಾಡಿದ್ದಾರೆ.

ಇತ್ತೀಚೆಗೆ ನಡೆದ ಆಹಾರದ ಸರೀಪ್ಲೆಯಲ್ಲಿ ನಮ್ಮ ಆಹಾರವು ಗುಣದಲ್ಲಿ ನೂರಕ್ಕೆ ತೊಂಬತ್ತರಷ್ಟು ಮತ್ತು ಪರಿಮಾಣದಲ್ಲಿ ನೂರಕ್ಕೆ ನಲುವತ್ತರಷ್ಟು ಅಪೂರ್ಣವಾಗಿದೆ ಎಂದು ತಿಳಿದು ಬಂದಿ

(೨೦ನೇ ಪುಟ ನೋಡಿರಿ)

ಹೊಸಕೆರೆ
ಚಿದಂಬರಯ್ಯನವರ
**ಭಗವದ್ಗೀತೆಯ**
ಸಮೂಲ ಭಾಷಾಂತರ
ಪೊಕೆಟ್ ಎಡಿಷನ್,
ಸುಮಾರು 450 ಪುಟಗಳು
ಕ್ರಯ 0—12—0
ನವಯುಗ ಪ್ರೆಸ್, ಉಡುಪಿ.

**ಕುಮಾರಿ ಬಿಲ್ಲೆಗಳು**
**Govt. Regd.**
ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/-
(ವಿ.ಪಿ.ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!
**P. DEVEE & Co. (N. J.)** CALCUTTA—40.
ಸ್ಟಾಕಿಸ್ಟರು: ಹಾ ಕಂಪೆನಿ, ಮಂಗಳೂರು—1.

## ಜನನ ನಿಯಂತ್ರಣ

(೪ನೇ ಪುಟದಿಂದ)

ದಿ. ಆಧಿಕಾದಾಯದ ಹಿನ್ನೆಲೆಯಲ್ಲಿರುವ ವರಿಗೂ ಏನನ್ನು ಹೇಗೆ ತಿನ್ನಬೇಕೆಂದು ಗೊತ್ತಿಲ್ಲ. ಒಟ್ಟಿನಲ್ಲಿ ನಮ್ಮ ಆಹಾರದ ತೂಕವು ಕಪ್ಪಿದೆ. ಆಹಾರ ಮತ್ತು ಆರೋಗ್ಯ ವಿಚಾರಗಳ ಸತ್ಯ ಸಂಗತಿಗಳನ್ನು ನಮ್ಮ ಜನರಿಗೆ ತಿಳಿಸಿ ಕೊಡಲು ಇದೀಗ ಸಮಯವಾಗಿದೆ. ಐದು ಮಂದಿಯ ಸಾಮಾನ್ಯ ಭಾರತೀಯ ಕುಟುಂಬದ ವಾರ್ಷಿಕ ಆದಾಯವು ೪೪೪-೪ ರೂಪಾಯಿಯಾಗಿದ್ದು ವ್ಯಯವು ೬೭೫ ರೂಪಾಯಿಯಾಗಿದೆ. ಈ ವ್ಯಯದ ಸೇಕಡಾ ೪೪-೭ರಷ್ಟು ಕೇವಲ ಆಹಾರ ಕ್ಕಾಗಿಯೇ. ವಿನಿಯೋಗಿಸಲ್ಪಡುತ್ತಿದೆ. ಹಾಗಿರುವಾಗ ನಾವಾದರೂ ಏನೆಂದು ಅವರಿಗೆ ತಿಳಿಸಿ ಉಪದೇಶಿಸಬಹುದು?

ಕೇಳು ಮಟ್ಟದ ಜೀವನವು ಆಹಾರದ ಸತ್ವಗಳನ್ನು ಸ್ತ್ರೀ ಪುರುಷರ ಶಕ್ತಿಯನ್ನು ಅಪಹರಿಸಿ ಕಾಯಿಲೆಕಸುರಿಗಳನ್ನು ಆಮಂತ್ರಿಸಿ, ಮುಂದಿನ ಜೀವನವನ್ನು ಶಕ್ತಿಹೀನವಾಗಿ ಮಾಡುತ್ತದೆ. ಆದುದರಿಂದಲೆ ನಮ್ಮ ಮರಣ ಪ್ರಮಾಣವು ಅತ್ಯಧಿಕವಾಗಿದೆ. ಹುಟ್ಟಿದ ಮೊದಲ ವರ್ಷದಲ್ಲೇ ಮೂಲ ಜನಸಂಖ್ಯೆಯ ಕಾಲಂಶದಷ್ಟು ಮೃತ್ಯುವಶರಾಗುತ್ತಿರುತ್ತಾರೆ. ಐನೆನೆ ವರ್ಷದೊಳಗೆ ಸೇಕಡಾ ೪೦ ಜನರು ಧರ್ಮಪುರವನ್ನು ಸೇರುತ್ತಾರೆ. ೨೦ ವರ್ಷದೊಳಗೆ ಸೇಕಡಾ ೫೦ರಷ್ಟು ಮರಣ್ಯೋಖರಾಗುತ್ತಾರೆ. ಇವೆಲ್ಲವುಗಳ ಫಲಿತಾಂಶವಾಗಿ ನಮ್ಮ ಆಯುಃಪ್ರಮಾಣವು ಅತಿ ಕೆಳಮಟ್ಟದಲ್ಲಿದೆ. ಭಾರತೀಯನು ೩೦ವರ್ಷಗಳವರೆಗೆ ಬದುಕುವೆನೆಂದಿದ್ದಾಗ್ಯೂ ಅಮೆರಿಕನನು ೬೫ವರ್ಷ ಮತ್ತು ಯುರೋಪಿಯನನು ೬೦ವರ್ಷ ಬದುಕುವ ಆಶೆಯನ್ನಿಟ್ಟುಕೊಳ್ಳುವನು. ಯಮನ ಪಾಶವು ನಮ್ಮ ಮೇಲೆ ಬಹಳ ಬೇಗನೇ ಬೀಸಲ್ಪಡುತ್ತದೆ.

ಇವರಿಂದಾಗಿ, ಭಾರತವು ತನ್ನ ಜನಸಂಖ್ಯೆಗನುಗುಣವಾಗಿ ಆಹಾರೋತ್ಪಾದನೆಯ ಪ್ರಮಾಣವನ್ನಧಿಕಮಾಡಬೇಕು; ರಾಷ್ಟ್ರೀಯ ಆದಾಯವನ್ನು ಏರಿಸಿಕೊಳ್ಳಬೇಕು; ಮತ್ತು ಜನನ ನಿಯಂತ್ರಣವನ್ನು ಕೈಗೊಳ್ಳಬೇಕು; ಈ ಮೂರು ವಿಧಾನಗಳಿಂದಲೇ ಭಾರತವು ಅಭ್ಯುದಯಗೊಳ್ಳಬಹುದು.

ಮೊದಲನೆರಡು ಮಾರ್ಗಗಳಲ್ಲಿ ನಾವು ಮುನ್ನಡೆಯುತ್ತಲೇ ಇದ್ದೇವೆ. ಆಹಾರದ ವಿಷಯದಲ್ಲಿ ಪ್ರಥಮ ಪಂಚವಾರ್ಷಿಕ ಯೋಜನೆಯು ಸಾಧ್ಯವಾದಷ್ಟು ಪರಿಹಾರವನ್ನು ನೂಪಿತು. ಆದರೂ ಇದು ಸಾಲದು. ರಾಷ್ಟ್ರೀಯ ಆದಾಯವನ್ನೂ ಹೆಚ್ಚಿಸಿತು. ದ್ವಿತೀಯ ಯೋಜನಾಂತ್ಯದಲ್ಲಿ ಇನ್ನು ಮತ್ತಷ್ಟು ಸುಧಾರಿಸಲಿಯುವುದು.

ಭಾರತದ ದ್ವಿತೀಯ ಯೋಜನೆಯಲ್ಲಿ ಉದ್ಯೋಗೀಕರಣಕ್ಕೆ ವಿಶೇಷ ಪ್ರಾಧಾನ್ಯ ನೀಡಲಾಗಿದೆ. ಇದರಿಂದ ಜನರು ನಾಗರಿಕರಾಗುತ್ತಾರೆ. ಅಧಿಕ ಸಂಖ್ಯೆಯಲ್ಲಿ ಸ್ತ್ರೀಯರು ಕರ್ಮಚಾರಿಗಳಾಗುತ್ತಾರೆ. ಜನನ ನಿಯಂತ್ರಣವು ಪ್ರಚಾರವಾಗುತ್ತದೆ. ವಿವಾಹದ ವಯಸ್ಸಿನ ಮುಂದೂಡಲ್ಪಡುತ್ತದೆ ಮತ್ತು ಸಾಮಾಜಿಕ ಪರಿಸ್ಥಿತಿಯು ಸುಧಾರಿಸಲ್ಪಡುತ್ತದೆ. ಇದರಿಂದ ಇನ್ನು ಮುಂದಿನ ಜನನಗಳ ಸಂಖ್ಯೆಯು ಕುಗ್ಗುತ್ತದೆ. ಇತ್ತೀಚೆಗೆ ಮರಣ ಪ್ರಮಾಣವು ಕಡಿಮೆಯಾಗುತ್ತಾ ಬರುತ್ತಿದೆ. ಆದರೆ ಜನನವು ಆಪೇ ಮಟ್ಟದಲ್ಲಿನ್ನುದು ಜನಸಂಖ್ಯೆಯು ಹೆಚ್ಚುತ್ತಾ ಇದೆ. ಇನ್ನೊಂದು ದಶಕದಲ್ಲಿ ಭಾರತದಲ್ಲಿ ೫೦ ಕೋಟಿ ಜನರು ಹೆಚ್ಚು ಹುಟ್ಟಲಿದ್ದಾರೆ. ಈ ಹೆಚ್ಚುವ ಸಂಖ್ಯೆ ಗ್ರೇಟ್ ಬ್ರಿಟನ್ನಿನ ಜನಸಂಖ್ಯೆಯಷ್ಟು!

ಆಹಾರಗಳನ್ನು ರಾಷ್ಟ್ರೀಯ ಆದಾಯವನ್ನು ಆದೆಷ್ಟು ಹೆಚ್ಚಿಸಿದರೂ ಹೆಚ್ಚುತ್ತಿರುವ ಜನಸಂಖ್ಯೆಯಿಂದಾಗಿ ಮುಂದಿಟ್ಟ ಕಜ್ಜೆಯನ್ನು ಹಿಂದಿಟ್ಟಂತೆಯೇ ಆಗುತ್ತದೆ. 'ಜನನಾಂಗಕ್ಕೆ ಬಡತನವೆಂಬುದು ಉಪಕಾರಿಯಾಗಿದೆ' ಎಂದು ಅವಂ ಸ್ಮಿತ್ತನು ಹೇಳುತ್ತಾನೆ. ಇದು ಭಾರತೀಯರಿಗೆ ವಿಶೇಷ ಅರ್ಥವನ್ನು ಕೊಡುತ್ತದೆ. ಉತ್ತಮ ರೀತಿಯಲ್ಲಿ ಜೀವನವನ್ನು ಸಾಗಿಸಬಲ್ಲ ವಿದ್ಯಾವಂತ ನಾಗರಿಕನು ಜನನ ನಿಯಂತ್ರಣವನ್ನು ಅನುಸರಿಸಲು ಸಿದ್ಧನಾಗಿದ್ದರೂ, ವಿವಾಹವನ್ನೇ ಮಾಡಿಕೊಳ್ಳಲು ಹಣದಭಾವದಿಂದ ಅಶಕ್ತನಾದ ಬಡವನು ಇದಕ್ಕೆ ಸಿದ್ಧನಾಗಿಲ್ಲ. ಜನನ ನಿಯಂತ್ರಣವು ವಾಪಕರವೆಂಬ ತಪ್ಪು ತಿಳಿವಳಿಕೆಯಿಂದಾಗಿ ಜನರು ತಮಗೂ ದೇಶಕ್ಕೂ ಹೊರೆಯನ್ನುಂಟುಮಾಡುತ್ತಾರೆ.

ಓರ್ವ ಸಾಧಾರಣ ಭಾರತೀಯ ಮಹಿಳೆಯು ಸುಮಾರು ೬ ಮಕ್ಕಳಿಗೆ ಜನ್ಮವೀಯುತ್ತಾಳೆ. ಇದರಲ್ಲಿ ನೂರಕ್ಕೆ ೬೦ರಿಂದ ೩೦ರಷ್ಟು ತಪ್ಪುತಾಯಸಮ್ಮುಖದಲ್ಲಿಯೇ ಮೃತ್ಯುಮುಖರಾಗುತ್ತಾರೆ. ಜನನವೆಮುಂ ತ್ರಣದಿಂದ ಮಕ್ಕಳ ಹುಟ್ಟನ್ನು ತಡೆಕಟ್ಟುವುದು ಪಾಪವೆಂದು ತಿಳಿಯುವವರು ಹಸಿವೆಯಿಂದ ಮತ್ತು ನಿರ್ಲಕ್ಷ್ಯದಿಂದ ಮಕ್ಕಳನ್ನು ಸಾಯಗೊಡುವುದು ಕಡು ಪಾಪ ಕಾರ್ಯವೆಂದು ತಿಳಿಯುವುದಿಲ್ಲ. ಮಾನವ ಜನಾಂಗದ ಶಾಶ್ವತ ಬಡತನವನ್ನು ಹೋಗಲಾಡಿಸಲು ಶಕ್ತವಾಗಿದ್ದರೂ ಹಾಗೆ ಮಾಡಗೊಡದಿರುವುದು ವಿಧಿಪರಾಧವೆಂದು ನೀತಿಬೋಧಕರು ತಿಳಿಯಬೇಕು. ಅದು ದೇವ ಮಾನವನಿಗೆ ಬಗೆಯುವ ದ್ರೋಹವಾಗಿದೆ. ಭಾರತೀಯ ಮಹಿಳೆಯರಿಂದನ್ನು ಆಲೋಚಿಸುವರೆ? ಇಥವಾ ವಿರೋಧವಾಗಿಯೇ ತಿಳಿಯುವರೆ? ಇದಕ್ಕೆ ಭಾರತೀಯರಿಂದ ಬರುವ ಉತ್ತರನನ್ನೇ ಭಾರತದ ಭವಿಷ್ಯವು ಆವಲಂಬಿಸಿದೆ. ಪಲ್ಗ್ ಬರ್ಗರವರು" ದುಃಖವಲ್ಲಿಯೂ ಒಂದು ರಸಾಯನ ಶಕ್ತ್ಯಡಗಿಕವಾಗಿದೆ. ಅದನ್ನು ಜಾಣತನಕ್ಕೆ ರೂಪಾಂತರಗೊಳಿಸಿ ತನ್ಮೂಲಕ ಸಂತೋಷವನ್ನು ಸಂಪಾದಿಸುವುದು ಸಾಧ್ಯ! ಭಾರತವು ಇದೀಗ ಬಡ ಮತ್ತು ಅಶಕ್ತವಾಗಿದ್ದರೂ ದೇಶವಾಸಿಗಳಲ್ಲಿ ಭವಿಷ್ಯದ ಚಲನಾ ಶಕ್ತಿಯು ಅಡಕವಾಗಿದೆ. ತಮ್ಮ ಪ್ರಾರಬ್ಧ ಕರ್ಮವನ್ನು ಹೊಡೆದೋಡಿಸುವ ಶಕ್ತಿಯೂ ಭಾರತೀಯರಲ್ಲಿದೆ.

—ಯೋಜನಾ.



ದೇಶದ ಸಂಪದಭಿವೃದ್ಧಿ ಕಾರ್ಯದಲ್ಲಿ ಕೃಷಿ ವ್ಯವಸಾಯದ ಸುಧಾರಣೆಯಂತೆಯೇ ಅತಿ ಮುಖ್ಯವಾದುದು ಖನಿಜವಸ್ತುಗಳ ಅಭಿವೃದ್ಧಿ. ಭಾರತದ ದ್ವಿತೀಯ ಯೋಜನೆಯಲ್ಲಿ ನಾನಾ ಖನಿಜಗಳನ್ನು ಭೂಮಿಯಡಿಯಿಂದ ಆಗೆಯುವ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಚಿತ್ರದಲ್ಲಿ ಈ ಕುರಿತಾದ ಕೆಲವು ದೃಶ್ಯಗಳನ್ನು ಕಾಣಬಹುದು.

ಚಿತ್ರ ೧. ಯುವಕ ಗಣಿಕೆಲಸದವನೊಬ್ಬನು ಅಭ್ರಕದ ಗಣಿಯಲ್ಲಿ ಕಾರ್ಯಮಗ್ನನಾಗಿದ್ದಾನೆ.

ಚಿತ್ರ ೨. ಕಾರ್ಮಿಕರ ತಂಡವೊಂದು ಮದರಾಸು ರಾಜ್ಯದ ದಕ್ಷಿಣ ಆರ್ಕಾಟಿನ ನೈವೇಲಿ ಲಿಗ್ನೈಟ್ ಯೋಜನೆಯಲ್ಲಿ ಲಿಗ್ನೈಟ್‌ಗಾಗಿ ಭೂಮಿಯನ್ನು ಆಗೆಯುತ್ತಿದ್ದಾರೆ.

ಚಿತ್ರ ೩. ಭಾರತೀಯ ಹಾಗೂ ವಿದೇಶೀಯ ಎಂಜಿನಿಯರುಗಳ ಗುಂಪೊಂದು ಜ್ವಾಲಾಮುಖಿಯಲ್ಲಿ ಎಣ್ಣೆ ಪಡೆಯುವ ಬಗ್ಗೆ ಭೂಮಿಯನ್ನು ತೋಡುವ ಯಂತ್ರದ ಬಳಿ ಕಾರ್ಯನಿರತರಾಗಿದ್ದಾರೆ.

ಚಿತ್ರ ೪. ಗಣಿ ಕೆಲಸಗಾರರಿಗೆ ನಿರ್ದಿಷ್ಟವಾದ ಅಸ್ಪತ್ರೆಯ ಒಂದು ಭಾಗ. ಹಾಸಿಗೆಗಳಲ್ಲಿ ಮಲಗಿದವರು ಗಣಿ ಕೆಲಸಗಾರರು ಆಥವಾ ಅವರ ಕೌಟುಂಬಿಕರು.


**ಮಹಿಳಾ ಸಾಹಿತ್ಯ! ನವೀನ ಪುಸ್ತಕ!**

**ಕುಮಾರಿ ಪಿ. ಯಶೋದಾ ಅವರು ಬರೆದ**

# ಬಾಳಿನ ಬೆಳಕೆ

ಬಾಳಿನ ನೈಜ ಚಿತ್ರಗಳನ್ನು ಹೃದಯಂಗಮವಾಗಿ ಚಿತ್ರಿಸುವ ಐದು ನೂತನ ಕತೆಗಳ ಸಂಗ್ರಹ. ಸ್ತ್ರೀ ಪುರುಷರೆಲ್ಲರೂ ಅವಶ್ಯ ಓದಲೇ ಬೇಕಾದ ಬಾಳ್ನೋಟಗಳು!

ಬೆಲೆ ೦—12—೦. (೦—14—೦ ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮಾಡಬಹುದು.)

ನವಭಾರತ ಪುಸ್ತಕ ಭಂಡಾರ, ಉಡುಪಿ.

# NAVAYUGA

Popular Kannada Weekly

*Founder:—*

**A. B. SHETTY,**

Former Minister for Public Health, Govt. of Madras & Govt of Mysore

# ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

| ಸಂಪುಟ | ಉಡುಪಿ | ಸಂಚಿಕೆ |
|---|---|---|
| ೩೭ | ೩೦-೫-'೫೫ | ೩೮ |


## ಚೈತನ್ಯಶೀಲ ಕಾಂಗ್ರೆಸು

ರಾಜಧಾನಿಯಾದ ಹೊಸದೆಹಲಿಯಿಂದ ಬಂದಿರುವ ವಾರ್ತೆಯೊಂದು ಕಾಂಗ್ರೆಸು ಸಂಸ್ಥೆಯನ್ನು ಚೈತನ್ಯಯುಕ್ತವಾಗಿ ಮಾಡುವುದಕ್ಕೆ ತಕ್ಕ ಕ್ರಮಗಳನ್ನು ಸೂಚಿಸಲು ಎಂಟು ಮಂದಿ ಸದಸ್ಯರುಳ್ಳ ಸಮಿತಿಯನ್ನು ನೇಮಿಸಲಾಗಿದೆ ಎಂದು ತಿಳಿಸುತ್ತದೆ. ಕಾಂಗ್ರೆಸಿನ ವರಿಷ್ಠರು ಕಳೆದ ವಾರ ಈ ವಿಷಯವನ್ನು ಗಾಢವಾಗಿ ಪರ್ಯಾಲೋಚಿಸಿದರೆಂದೂ ಅಖಿಲ ಭಾರತ ಕಾಂಗ್ರೆಸು ಸಮಿತಿಯು ಇದೇ ಜೂನಿನ ೧೯ನೇ ತಾರೀಕಿನಂದು ಸಭೆ ಸೇರಲಿರುವುದರಿಂದ ಅದರ ಮುಂದೆ ತಕ್ಕ ಗೊತ್ತು ವಳಿಯನ್ನು ಮಂಡಿಸಲು ಸಹಾಯಕವಾಗಲೆಂದು ಎಂಟು ಮಂದಿಯ ಉಪ ಸಮಿತಿ ನೇಮಕಗೊಂಡಿತೆಂದೂ ಪ್ರಸಿದ್ಧವಾಗಿದೆ. ಕಾಂಗ್ರೆಸು ಸಂಸ್ಥೆಯು ಏನೇನೂ ಜೀವನ್ಮಾಗಿ ಕೆಲಸ ಮಾಡುತ್ತಿಲ್ಲ; ಅದರಲ್ಲಿ ಶಕ್ತಿ ಚೈತನ್ಯಗಳು ಬಲವಾಗಿಲ್ಲ; ಅದು ಜೀರ್ಣಾವಸ್ಥೆಯಲ್ಲಿದ್ದು ದಿನದಿಂದ ದಿನಕ್ಕೆ ಜಘೋಗತಿಗೆ ಇಳಿಯುತ್ತಾ ನಡೆದಿರುತ್ತದೆ—ಎಂಬ ಮೂಲ ಸತ್ಯದ ತಿಳಿವಳಿಕೆಯು ಕಾಂಗ್ರೆಸಿನ ವರಿಷ್ಠರಿಗೆ ಆಗಿರುವುದೇನೊ ಸಮಾಧಾನಕರ. ಆದರೆ, ಇದಕ್ಕೆ ಪರಿಹಾರೋಪಾಯಗಳೇನು? ಆ ಪರಿಹಾರೋಪಾಯಗಳನ್ನು ಕಾರ್ಯಗತಗೊಳಿಸುವ ಜನರಾದರೂ ಯಾರು? —ಎಂದು ಅಲೋಚಿಸಲು ಹೊರಟಾಗ, ನಿರಾಸೆಯೇ ಎದುರಾಗುತ್ತದೆ. ಕಾಂಗ್ರೆಸು ಸಂಸ್ಥೆಯು ಎಪ್ಪತ್ತು ವರ್ಷಗಳ ಹೋರಾಟ ಕಾಲದಲ್ಲಿ ತಿದ್ದಿಕೊಂಡು ಬೆಳೆಸಿಕೊಂಡ ಉನ್ನತ ಚಾರಿತ್ರ್ಯವನ್ನು ಸ್ವಾತಂತ್ರ್ಯ ಸಂಪಾದಿಸಿದ ಈ ಹತ್ತು ವರ್ಷಗಳ ಅವಧಿಯಲ್ಲಿ ಸಂಪೂರ್ಣವಾಗಿ ಕಳಂಕಿತಗೊಳಿಸಿದೆ ಎಂದರೆ, ತಪ್ಪಾಗಲಾರದು. ಏಕೆಂದರೆ, ಕಾಂಗ್ರೆಸಿನಲ್ಲಿ ಪ್ರಾಮಾಣಿಕರಾದ ಜನ ಸೇವಕರಿಗಿಂತ ಇಂದು ನೂರುಪಾಲಿನಷ್ಟು ಹೆಚ್ಚು ಅಧಿಕಾರ ಲಾಲಸಿಗರೇ ತುಂಬಿದ್ದಾರೆಂದು ಹೇಳಬಹುದು. ಇದು ನಾವು ಹೇಳುವ ಮಾತಲ್ಲ—ಸ್ವತಃ ಕಾಂಗ್ರೆಸಿನ ಧುರೀಣರೇ ಆದ ನೆಹರುಗಳದೇ ಅಭಿಪ್ರಾಯ. ಜನಸಾಮಾನ್ಯರಿಗೆ ಸಾಮಾನ್ಯವಾಗಿ ಕಾಂಗ್ರೆಸಿಗರ ನೀತಿ ಮತ್ತೆ, ಚಾರಿತ್ರ್ಯ ಹಾಗು ಪ್ರಾಮಾಣಿಕತೆಯ ಬಗ್ಗೆ ಈಗ ಏನೇನೂ ಆದರಾಭಿಮಾನ ಅಥವಾ ವಿಶ್ವಾಸವುಳಿದಿಲ್ಲ ಎಂದವರು ಈಚೆಗೆ ಪ್ರದೇಶ ಕಾಂಗ್ರೆಸಿನ ಅಧ್ಯಕ್ಷರನ್ನು ಉದ್ದೇಶಿಸಿ ಮಾತನಾಡುವಾಗ ಹೇಳಿದ್ದರು. ಇದರಲ್ಲಿ ಸುಳ್ಳಿನಂಶ ವಿರುವಂತೆ ನಮಗೇನೂ ಕಾಣಿಸುವುದಿಲ್ಲ. ಒಂದು ಕಾಲದಲ್ಲಿ ತ್ಯಾಗಪೂರ್ಣವಾದ ನಿಸ್ವಾರ್ಥ ಸೇವೆಗೆ ಕಾಂಗ್ರೆಸಿಗನನ್ನು ಮಾದರಿಯಾಗಿ ತೋರಿಸುತ್ತಿದ್ದರೆ, ಇಂದು ಕಪಟ, ವಂಚನೆ ಮತ್ತು ಅಧಿಕಾರ ಲಾಲಸೆಯ ಪ್ರತಿಮೂರ್ತಿಯಾಗಿ ಕಾಂಗ್ರೆಸಿಗನನ್ನು ಬಣ್ಣಿಸಲಾಗುತ್ತದೆ. ಇದೆಂಥ ವಿಪರ್ಯಾಸ? ಕಾಂಗ್ರೆಸಿನ ಲೋಪ ದೋಷಗಳ ಮೂಲವಿದೇ ಎಂದು ಎಲ್ಲರೂ ಬಲ್ಲರು. ಜನರೊಡನೆ ನಿಕಟ ಸಂಪರ್ಕ ಬೆಳೆಸುವ ಹಂಬಲವೇ ಕಾಂಗ್ರೆಸಿಗರಲ್ಲಿಲ್ಲ. ಹಿಂದೆಯಾದರೆ ಪ್ರತಿಯೊಂದು ಹೋರಾಟದಲ್ಲೂ ಜನತೆಯ ಬೆಂಬಲ ಪಡೆಯುವ ಆಸೆ ಕಾಂಗ್ರೆಸಿನದಾಗಿತ್ತು; ಜನತೆಯ ಪ್ರೇರೈತ್ಸಾಹವನ್ನು ಸಂಪಾದಿಸಲು ಆದು ವಿಶೇಷವಾದ ಚಟುವಟಿಕೆಯನ್ನೂ ನಡೆಸುತಿತ್ತು—ಆದರೆ, ಇಂದು ಅಧಿಕಾರ ಕೈಗೆ ಬಂದಿದೆ ಎಂಬ ಅಹಂಕಾರದಿಂದಲೋ ಏನೋ, ಸಾಮಾನ್ಯ ಕಾಂಗ್ರೆಸಿಗನಿಗೆ, ಕಾಂಗ್ರೆಸು ಸಂಸ್ಥೆಯ ಶಾಖೋಪಶಾಖೆಗಳಿಗೆ, ಜನರ ಚಿಂತೆಯಾಗಲೀ ಗೊಡವೆಯಾಗಲೀ ಬೇಡವಾಗಿವೆ. ಕಾಂಗ್ರೆಸಿಗನೆಂದೆನಿಸಿಕೊಂಡವನು ಇಂದು ಒಂದೋ ಅಧಿಕಾರಸ್ಥಾನದಲ್ಲಿರಲು ಹೆಣಗಾಡುತ್ತಾನೆ; ಸಾಧ್ಯವಾಗದಿದ್ದರೆ ಜನರಿಂದ ದೂರವಾಗಿ ಉಳಿಯುತ್ತಾನೆ—ಅಂತೂ ಜನರ ಹತ್ತಿರ ಹೋಗುವ, ಹೋಗಿ ಅವರ ಬೇಕು—ಬೇಡಗಳನ್ನು ವಿಚಾರಿಸುವ, ವಿಚಾರಿಸಿ ಅವರಿಗೆ ನೆರವಾಗುವ ದೊಡ್ಡ ಮನಸ್ಸು ಯಾವ ಕಾಂಗ್ರೆಸಿಗನಲ್ಲೂ ಕಂಡು ಬರುವುದಿಲ್ಲ. ಗಾಂಧೀಜಿಯವರ ಮಾರ್ಗದರ್ಶನ ಕಾಲದಲ್ಲಿ ಎಷ್ಟು ಬಗೆಯ ರಚನಾತ್ಮಕ ಕಾರ್ಯಕ್ರಮಗಳನ್ನು ಕಾಂಗ್ರೆಸಿಗರು ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದಂತೆಯೇ ನಡೆಸುತ್ತಿದ್ದರು! ಇಂದು ಎಲ್ಲ ವಿಧಾಯಕ ಕೆಲಸಗಳೂ ಸರಕಾರದ ಜನತಾಬ್ಯಾರಿಯಾಗಿವೆ—ಹೊರತು, ಕಾಂಗ್ರೆಸಿಗರು ಉತ್ಸಾಹದಿಂದ ನಿರ್ವಹಿಸಬೇಕಾದ ಸ್ವಧರ್ಮವಾಗಿಲ್ಲ. ಇಷ್ಟೆಲ್ಲ ಶೋಚನೀಯ! ಇನ್ನು ಅಧಿಕಾರಸ್ಥಾನದಲ್ಲಿರುವ ಕಾಂಗ್ರೆಸಿಗರಾದರೂ ಜನಹಿತದ ಕಡೆಗೆ ಗಮನ ಕೊಡುವರೆ? ಆದೂ ಇಲ್ಲ ಎಂಬುದು ಗಾಯದ ಮೇಲೆ ಬರೆ ಎಳೆದಂತೆ ಪರಿಸ್ಥಿತಿಯನ್ನು ಇನ್ನಷ್ಟು ವಿಷಮತೆಗೊಯ್ಯುತ್ತದೆ. ಕಾಂಗ್ರೆಸಿನ ಅಧ್ಯಕ್ಷರಾದ ಶ್ರೀ ಢೇಬರರೇ ಕಾಂಗ್ರೆಸು ಸರಕಾರಗಳು ಜನತೆಯನಿತ್ಯಜೀವನದ ಮೇಲೆ ಗಂಭೀರವಾದ ಪರಿಣಾಮವನ್ನು ಮಾಡುತ್ತಿರುವ ಕೆಲವು ಪ್ರಾಮುಖ್ಯ ಸಮಸ್ಯೆಗಳ ವಿಚಾರದಲ್ಲಿ ತಮ್ಮ ನಿಲುಮೆಯನ್ನು ಘಂಟಾಘೋಷವಾಗಿ ಸಾರುವುದಿಲ್ಲವೆ, ತಕ್ಕ ಕಾರ್ಯಾಚರಣೆಯನ್ನೂ ಶೀಘ್ರದಲ್ಲಿ ಕೈಗೊಳ್ಳದಿದ್ದರೆ ಕಾಂಗ್ರೆಸಿನಲ್ಲಿ ಕೆಲವರಿಗಾದರೂ ಉಳಿದಿರುವ ನಂಬಿಕೆ ಹಾರಿ ಹೋಗಲು ಹೆಚ್ಚು ಸಮಯ ಬೇಕಾಗಲಾರದು ಎಂದು ಕಳೆದ ವಾರ ಎಚ್ಚರಿಕೆಯ ಮಾತನ್ನಾಡುವ ಪ್ರಸಂಗ ಬಂತು. ಕಾಂಗ್ರೆಸಿನ ನಿಷ್ಕ್ರಿಯತೆಗೆ ಇದಕ್ಕಿಂತ ದೊಡ್ಡ ನಿದರ್ಶನ ಬೇರೇನು ಬೇಕು? ಅಧಿಕಾರವನ್ನು ಕೈಗೆ ತೆಗೆದುಕೊಂಡು ನಡೆಸಿದ ಹತ್ತು ವರ್ಷಗಳಲ್ಲಿ ಜನರು ಯಾವ ರೀತಿಯಲ್ಲಿ ಸುಖವನ್ನು ಅನುಭವಿಸಿದರು? ಕಾಂಗ್ರೆಸಿನ ಧ್ಯೇಯ ಘೋಷಣೆಗಳು ಗೊತ್ತುವಳಿಗಳ ರೂಪದಲ್ಲಿ ಮಾತ್ರವೇ ಇರುವುದಾದರೆ ಅದರಿಂದ ಜನರಿಗೆ ಆಗುವ ಪ್ರಯೋಜನವಾದರೂ ಏನು? ಭೂ ಸುಧಾರಣೆ ಆಡಳಿತೆಯ ಸುಧಾರಣೆ, ಕ್ಷಿಪ್ರನ್ಯಾಯದಾನ ರಾಷ್ಟ್ರೀಯ ಶಿಕ್ಷಣ—ಮತ್ತಿತರ ನೂರಾರು ಸಮಸ್ಯೆಗಳು ಇನ್ನೂ ಸಮಸ್ಯೆಗಳಾಗಿಯೇ ಉಳಿದಿವೆಯಲ್ಲದೆ, ಪರಿಹಾರೋಪಾಯಗಳನ್ನು ಕಾಂಗ್ರೆಸು ಸರಕಾರಗಳು ಯೋಚಿಸಲಿಲ್ಲ. ಇದರ ಪರಿಣಾಮವೇನಾಯಿತೆಂಬುದು ತೀರಾ ಸ್ಪಷ್ಟ: ಕೇರಳವು ಕಮ್ಯುನಿಸ್ಟರದಾಯಿತು; ಒರಿಸ್ಸದಲ್ಲಿ ಜಮೀನ್ದಾರರ ಕೈ ಮೇಲಾಯಿತು; ಬಂಗಾಲ, ಪಂಜಾಬ, ಮುಂಬಯಿಗಳಲ್ಲಿ ವಿರೋಧಿಗುಂಪು ಪ್ರಬಲವಾಯಿತು ಇಷ್ಟಾದರೂ ಬುದ್ಧಿಬಾರದ ಕಾಂಗ್ರೆಸ್ಸಿಗರು ತಮ್ಮೊಳಗಿನ ಒಳಜಗಳವನ್ನು ಬಿಟ್ಟಲ್ಲ: ಬದಲಿಗೆ ಅದರಲ್ಲಿಯೇ ನಿರತರಾಗಿ ಕಂತೋಷಪಡುವರೆಂದು ತೋರುತ್ತದೆ. ಮೈಸೂರಿನ ರಾಜಕೀಯವನ್ನೆ ಬಿಡಿಸಿನೋಡಿದರೆ ಸಾಕು- ನೀರುಳ್ಳಿಯನ್ನು ಬಿಡಿಸಿದರೆ ಎಷ್ಟು ಪದರೋ ಅಷ್ಟು ಒಳಗುಂಪು: ಅನಂತಯೇ ನಾತವೂ ಕೂಡ! ಹೀಗೆ "ಕೊಳೆತು ನಾರುವ" ಕಾಂಗ್ರೆಸು ಎಷ್ಟು ದಿನ ಬಾಳಿತೋ ಎಂದು ಜನರು ಹೇಳುತ್ತಿದ್ದರೆ ಅದು ಕಾಂಗ್ರೆಸಿನ ಗತವೈಭವಕ್ಕೆ ಹೇಳಿಸಿದ ದಾಖಲೆಯಲ್ಲ—ಪ್ರಶಂಸೋದ್ಗಾರವಂತೂ ಅದಲ್ಲ; ಸಿಫಾರಸು ಪತ್ರವೂ ಅಲ್ಲ. ಆದು ವ್ಯಂಗ್ಯಾತ್ಮಕ ಬಾಣ. ಈ ಶರಹತಿಯಿಂದಲಾದರೂ ಕಾಂಗ್ರೆಸಿಗರು ಎಚ್ಚತ್ತುಕೊಂಡಾರೆ? ಕಾಂಗ್ರೆಸಿನ ಸಂಘಟನೆಗೊಪ್ಪುವ ಶಕ್ತಿ, ಚೈತನ್ಯ ಮತ್ತು ಮುಂದಾಲೋಚನೆ ಒಬ್ಬಗಿ ಒಂದೀತೆ? ಹಳೆಯು ಕುಲಿಗಳು ರಂಗಮಂದಿರ ಪುರಿಯಾದ ಬಳಿಕವೂ ಕಾಂಗ್ರೆಸು ಬಲಿಷ್ಠವಾದ ರಾಜಕೀಯ ಪಕ್ಷವಾಗಿ ಉಳಿಯುವಂತೆ ಹೊಸ ಪೀಳಿಗೆಯನ್ನು ಈ ಸಂಸ್ಥೆಯು ಆಕರ್ಷಿಸಿಕೊಂಡಿದೀ?— ಈ ಪ್ರಶ್ನೆಗಳಿಗೆ ಉತ್ತರವನ್ನು ಕೊಡುವ ಹೊಣೆಗಾರಿಕೆಯು ಪ್ರತಿಯೊಬ್ಬ ಕಾಂಗ್ರೆಸ್ಸಿಗನದಾಗಿದೆ. ಆತನು ದೃಢ ಮನಸ್ಸು ಮಾಡಿ, ಜನಸೇವೆಯ ದೀಕ್ಷೆತೊಟ್ಟರಷ್ಟಾದರೆ ಕಾಂಗ್ರೆಸಿನ ಸರಕಾರಿಯಂತ್ರವು ಜನಹಿತದ ಕೆಲಸಗಳಿಗೆ ಪ್ರಾಶಸ್ತ್ಯ ನೀಡಿದ್ದಾದರೆ—ಕಾಂಗ್ರೆಸಿನ ಮೇಲೆ ಇನ್ನೂ ಶ್ರದ್ಧೆಯನ್ನುಟ್ಟುಕೊಂತ ಜನರು ವನಸ್ಸಿಗಾದರೂ ಸಮಾಧಾನವಾಗಿ, ಹಾಗೆ ಸುತ್ತಣ ವಾತಾವರಣದಲ್ಲೂ ಶಾಂತಿಯು ಹೊಸೆಸಂಚರಿಸೀತು. ಹಾಗಲ್ಲದೆ ಹೋದರೆ, ನಮ್ಮ ಅಪ್ರತಿಮ ಮುಂದಾಳುಗಳ ದುರ್ದೈವ; ಆಗ ಕಾಂಗ್ರೆಸು ಹತಭಾಗ್ಯರ ಕೈಯಲ್ಲಿ ಸಿಕ್ಕಿದೆ ಎನ್ನದೆ ವಿಧಿಯಿಲ್ಲ.

## ಸಂಕ್ಷಿಪ್ತ ಸುದ್ದಿಗಳು

### ದ್ವಿತೀಯ ಪಂಚವಾರ್ಷಿಕ ಯೋಜನೆಗೆ

ರಶ್ಯಾ, ಬ್ರಿಟನು ಮತ್ತು ಜರ್ಮನಿಗಳು ನೆರವಾಗುವುದಾಗಿ ಮೊದಲೇ ಒಪ್ಪಿಕೊಂಡಿದ್ದು ಫ್ರಾನ್ಸ್‌ನ್ನು ಕೆಲವೊಂದು ರಾಜಕೀಯ ಕಾರಣಗಳಿಂದ ಹಿಂಜರಿದಿತ್ತು. ಆದರೆ ಈಗ ಅದು ಕೂಡಾ ತನ್ನ ಉದ್ದಿಮೆದಾರರ ಪರವಾಗಿ ವ್ಯವಹಾರ್ಸ್‌ದ ಆಗ್ರಹದಿಂದಾಗಿ ಮುಂದೆ ಬಂದಿದೆ. ಈ ದೇಶದ ಸರಕಾರವು ಭಾರತವು ಕಟ್ಟಲಿರುವ ಎಣ್ಣೆ ಶುದ್ಧೀಕರಣ ಮತ್ತು ಹಡಗು ನಿರ್ಮಾಣ ಕಾರ್ಖಾನೆಗಳಲ್ಲಿ ಹೆಚ್ಚಾಗಿ ಉಪಯೋಗಕ್ಕೆ ಬೀಳುವ ಸಿರೀಕ್ಷೆಯಿದೆ.

### ಹೊಸ ಕರ ಭಾರವನ್ನು

ಜನರು ಸಹಿಸಿಕೊಳ್ಳುವ ಪರಿಸ್ಥಿತಿ ಬರಬೇಕಾದರೆ ಮಂತ್ರಿಗಳು ಮತ್ತು ಉಚ್ಚ ಮಟ್ಟದ ಆಡಳಿತಾಧಿಕಾರಿಗಳು ತಮ್ಮ ವೆಚ್ಚವನ್ನು ಕಡಿಮೆಮಾಡಿಕೊಳ್ಳುವುದು ಅಗತ್ಯ ಎಂದು ಕಾಂಗ್ರೆಸಿನ ಸಾಂಸತ್ತಿಕ ಪಕ್ಷದ ಸದಸ್ಯರು ಪ್ರತಿಪಾದಿಸಿದರು. ಇಲ್ಲವಾದರೆ, ಸರಕಾರದ ಹಣವು ಅನಾವಶ್ಯಯವಾಗುವೆಂಬ ಸಂದೇಹವು ಜನತೆಯಲ್ಲಿ ಎದ್ದು ಬರುವುದು. ಸಾಧ್ಯವಾದುದರಿಂದ, ಮಂತ್ರಿಗಳು ಎಂದಾ ಜೀವನವನ್ನು ನಡೆಸಬೇಕೆಂದು ಕೇಳಿಕೊಂಡರು.

### ಜಾಪಾನಿನ ಪ್ರಧಾನಿ

ಶ್ರೀ ನೊಬೊಸುಕೆ ಕೆಶಿಯವರು ಭಾರತವನ್ನು ಸಂದರ್ಶಿಸಿದರು. ಅವರು ಭಾರತ ಮತ್ತು ಜಾಪಾನುಗಳ ಮೈತ್ರಿಯನ್ನು ಬಯಸಿ, ಅಣುಸ್ಫೋಟನವನ್ನು ನಾವು ನಿರೋಧಿಸಬೇಕೆಂದು ವಿನಂತಿಸಿದರು. ಉಭಯ ಪ್ರಧಾನಿಗಳು ಒಂದು ಜತೆ ಹೇಳಿ

---


Approved by the Text Book Committee of Madras, for non-detailed study in higher Forms (vide Page 7, Fort St. George Gazette, Part I—B dated 4—5...1955).

ಬಂಗಾರದಂತಹ ಪುಸ್ತಕವೆಂದು ಸಮಗ್ರ ಕರ್ನಾಟಕದ ಪತ್ರಿಕಾ ಪ್ರಪಂಚದಿಂದ ಪ್ರಶಂಸಿಸಲ್ಪಟ್ಟ ಹೊಸ ಬಗೆಯ ಗ್ರಂಥ

# ಏಡುಕು ಬಂಗಾರ

(ಬರೆದವರು: ಕುಮಾರಸ್ವಾಮಿ)

ಹೈಸ್ಕೂಲುಗಳ IV ಯಾ Vನೇ ಫಾರ್ಮುಗಳಿಗೆ ಉಪಪಠ್ಯ ಪುಸ್ತಕವಾಗಿ ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾತಿ ಪಡೆದಿದೆ.

**ಕಳೆದ ವರ್ಷ ಹಲವು ಜಾಗಗಳಲ್ಲಿ ಮತ್ತು ಜಿಲ್ಲಾ ಬೋರ್ಡಿನ ಎಲ್ಲಾ ಹೈಸ್ಕೂಲುಗಳಲ್ಲಿಯೂ ಉಪಪಠ್ಯ ಪುಸ್ತಕವಾಗಿ ಆರಿಸಲ್ಪಟ್ಟಿದೆ.**

ಪುಟಗಳು ೧೫೫ ಬೆಲೆ: ರೂ. ೧ : ೫೦

ಪ್ರತಿಗಳಿಗೆ ಬರೆಯಿರಿ:

**ನವಯುಗ ಪ್ರೆಸ್, ಉಡುಪಿ.**

ಕೆಯನ್ನು ಈಯುತ್ತ ಆಣು ಬಹಿಸ್ಕರಣ ವನ್ನು ಪ್ರೋತ್ಸಾಹಿಸಿದರು.

**ಭಾರತ-ಆರ್ಮೀನಿಯನ್**

ಗಳ ನಡುವೆ ವ್ಯಾಪಾರ ಕಾಲದಿಂದ ಲೂ ವ್ಯವಹಾರ ಬಳಕೆಯಾಗಿದ್ದಿತೆಂಬ.ದ ಕ್ಕೆ ಪುರಸ್ಕರ್ತವಾದ ಕೆಲವೊಂದು ಹೆಸ್ತ ಪ್ರತಿಗಳು ದೊರಕಿವೆಯೆಂದು ರಷ್ಯದ 'ಟಾಸ್' ವರದಿಮಾಡಿದೆ. ಇವುಗಳಂದ, ಭಾರತದ ಕೆಲವು ರಾಜರ ಹೆಸರುಗಳು ಆರ್ಥಿಕಸಂಬಂಧವಷ್ಟಲ್ಲದೆ ಭಾರತಕ್ಕೆ ಕೆಲ ವೊಂದು ವಸಾಹತುಗಳಿದ್ದುವೆಂದೂ ತಿಳಿ ದು ಬರುತ್ತದೆ ತಜ್ಞರು ಈ ಬಗ್ಗೆ ಇನ್ನೂ ಮುಂದಿನ ಕಾರ್ಯಗಳನ್ನು ಸೂಚಿಸಲಿ ದ್ದಾರೆ.

**ಮೈಸೂರ ಸರಕಾರದ**

ಮಂತ್ರಿಗಳ ಪಾತೆಗಳಲ್ಲಿ ಸ್ವಲ್ಪ ಬದಲಾವಣೆಯಾಗಿದ್ದು ದಕ್ಷಿಣ ಕನ್ನಡದ ಪ್ರತಿನಿಧಿಯಾದ ಪೈ ಕುಂಠ ಬಾಳಿಗರು ಕಾರ್ಮಿಕ ಹಾಗೂ ಶಾಸನಾಂಗ ಮಂತ್ರಿಗಳಿನಿಸುವರು. ಇವ ರಿಗೆ ಶ್ರೀ ಮರಿಯಪ್ಪನವರಿಂದ ಕಾನೂನು, ಶ್ರೀ ಪೂಣಚ್ಚನವರಿಂದ ವಾರ್ತಾ ಮತ್ತು ಹೊಸತಾಗಿ ನಿರ್ಮಿಸಲಾದ ಬಂದರುಗಳ ಖಾತೆಗಳು ಹೆಚ್ಚಾಗಿ ದೊರೆತಿವೆ. ಕಂದಾಯ ಮಂತ್ರಿಗಳಿಂದ ವಾಣಿಜ್ಯ ಮತ್ತು ತೆರಿಗೆಯ ಇಲಾಖೆಗಳು ಶ್ರೀ ಮರಿಯಪ್ಪನವರಿಗೆ ಕೊಡಲ್ಪಟ್ಟವೆ.

**ಉತ್ತರ ಕರ್ನಾಟಕದ**

ಬಿಜಾಪುರ, ಧಾರವಾಡ ಮತ್ತು ಜಿಲ್ಲೆಗಳ ೧೨ ತಾಲೂಕುಗಳಲ್ಲಿ ಬರ ಬಡಿದಿದೆಯೆಂದು ತಿಳಿದು ಬಂದಿದೆ ಸು ಮಾರು ೧೩ ಲಕ್ಷ ಜನರು ಇದರಿಂದ ದುರವಸ್ಥೆಗೀಡಾಗಿದ್ದಾರೆ. ಮೈಸೂರ ಸರ ಕಾರವು ಇತ್ತ ತನ್ನ ವಿಶೇಷ ಗಮನವ ನ್ನು ಹರಿಸಿ ಯೋಗ್ಯ ಕಾರ್ಯಕ್ರಮವ ನ್ನೂ ಆಹಾರ ಸರಬರಾಜನ್ನೂ ಸೂಡು ತ್ತಲಿದೆ.

**ಕಾಸರಗೋಡು ತಾಲೂಕು**

ಕೇರಳಕ್ಕೆ ಅನ್ಯಾಯವಾಗಿ ಸಂ ಯೋ ಜಿ ತ ವಾಗಿದ್ದು, ಚಂದ್ರಗಿರಿ ಹೊಳೆಯ ಉತ್ತರ ದಿಕ್ಕಿರುವ ಪ್ರದೇಶವು ಮೈಸೂರಿನೊಂದಿಗೆ ಸೇರ ಬೇಕೆಂದು ಕೇಂದ್ರ ಸರಕಾರಕ್ಕೆ ಅನೇಕ ಕೇಳಿಕೆಗಳು ಬಂದಿವೆಯೆಂದು ಗೃಹ ಸಚಿವ ಶಾಖೆಯಲ್ಲಿ ರಾಜ್ಯಾಂಗ ಮಂತ್ರಿ ಗಳಾದ ಶ್ರೀ ಬಿ. ಸ್ ಪಾತಾರವರು ಲೋಕ ಸಭೆಗೆ ತಿಳಿಸಿದರು.

**ವಿ.ಕೆ. ಕೃಷ್ಣಮೆನನ್ನರು**

ಸಂಯುಕ್ತ ರಾಷ್ಟ್ರಸಂಘದ ಟ್ರಸ್ಟಿಶಿಪ್ ಕೌನ್ಸಿಲಿನಲ್ಲಿ ಭಾಗವಹಿಸಲು ನ್ಯೂಯೋರ್ಕಿಗೆ ತೆರಳಿದರು. ದಾರಿಯಲ್ಲಿ ಕೈರೊದಲ್ಲಿ ನಸ್ಸೇರರ ಸ್ಮಾರಕ ರಾಜಕೀಯ ಸಲಹೆಗಾರರಾದ ಜನಾಬ್ ಅಲಿ ಸಾಬ್ರಿಯವರೊಂದಿಗೆ ಮತ್ತು ಲಂಡನ್ನಿನಲ್ಲಿ ಬ್ರಿಟನ್ನಿನ ರಾಜಕಾರಣಿಗಳೊಂದಿಗೆ ಸುಯೆಜ್ ರಾಷ್ಟ್ರೀಕರಣದಕಾಲದಲ್ಲಿ ಕಡಿದು ಹೋದ ಆಂಗ್ಲೋ ಈಜಿಪ್ಷ್ಯ ಸಂಬಂಧವನ್ನು ಪುನಃ ಸಂಸ್ಥಾಪಿಸುವ ಕುರಿತು ವಿಚಾರವಿನಿಮಯ ಮಾಡಿದರೆಂದು ತಿಳಿಯಲಾಗಿದೆ.

**ಮುಂಬಾಯಿ ನಗರದಲ್ಲಿ**

ನಿಧಾನವಾಗಿ ವ.ಳೆ ಸುರಿದುದರಕಾರ ಣವಾಗಿ, ಎಲ್ಲಾಕಡೆಗಳಲ್ಲಿಯೂ ಶೀತಜ್ವರವು ಹಬ್ಬಿದೆ ಎಂಬ ತಿಳಿದುಬಂದಿದೆ.

# ಉಡುಪಿ

**ಆಲ್ ಇಂಡಿಯಾ ಮೆಡಿಕಲ್ ಎಸೋಸಿಯೇಶನಿನ** — ಉಡುಪಿ ಶಾಖೆಯು ಈಚೆಗೆ ಸ್ಥಾಪಿಸಲ್ಪಟ್ಟು ಡಾ. ಎಸ್. ಆರ್. ಪೈ (ಅಧ್ಯಕ್ಷ), ಡಾ. ಪಿ. ಆರ್ ನಾಯಕ್ (ಉಪಾಧ್ಯಕ್ಷ), ಡಾ. ವಿ. ಎಲ್. ಪಂಡಿತ್ (ಗೌ. ಕಾರ್ಯದರ್ಶಿ ಮತ್ತು ಕೋಶಾಧಿಕಾರಿ), ಡಾ. ಮೋಹನದಾಸ ಪೈ (ಗೌ. ಜತೆಕಾರ್ಯದರ್ಶಿ), ಡಾ ಪಿ. ಜಿ. ಅಚಾರ್, ಡಾ. ಬಿ. ಬಿ. ಶೆಟ್ಟಿ, ಡಾ. ಭಾಸ್ಕರ ರಾವ್ ಕಾರ್ನಾಡ್ ಮತ್ತು ಡಾ. ಎ. ಕೃಷ್ಣರಾಯರು (ಇವರು ಕಾರ್ಯ ಸಮಿತಿ ಸದಸ್ಯರು) ಆರಿಸಲ್ಪಟ್ಟರು. ಡಾ. ಕೆ. ಎಲ್. ಪತ್ತಾಳರು ಪ್ರಾಂತ ಸಮಿತಿ ಗೂ ಡಾ. ಟಿ. ಮಾಧವ ಪೈಗಳು ಕೇಂದ್ರ ಸಮಿತಿಗೂ ಈ ಶಾಖೆಯ ಪ್ರತಿನಿಧಿಗಳಾಗಿ ಚುನಾಯಿಸಲ್ಪಟ್ಟರು.

**ವಾರ್ಷಿಕೋತ್ಸವ**—ಸ್ಥಳೀಯ ಮೋಡರ್ನ್ ಸ್ಕೂಲ್ ಫಿಫ್ ಕೋಮರ್ಸಿನ ವಾರ್ಷಿಕೋತ್ಸವವು ತಾ. 26ರಂದು ವರಡೇಂದ್ರ ಕಲಾಮಂದಿರದಲ್ಲಿ ಡಾ. ಕೆ. ಮೋಹನದಾಸ ಪೈಗಳ ಅಧ್ಯಕ್ಷತೆಯಲ್ಲಿ ಜರಿಗಿತು. ಪ್ರಿನ್ಸಿಪಾಲ್ ಶ್ರೀ ಟಿ. ಎ. ವಾಸುದೇವನ್, ಅವರು ವರದಿಯನ್ನೋದಿದರು. ಕುವಾರಿ ಯು. ಎಸ್. ಸುಲೋಚನೆಯವರ ಸ್ವಾಗತಾಚನ, ಅದಕ್ಕೆ ಕುವಾರಿ ಸುಮತಿ ಪ್ರಭುಗಳ ಉತ್ತರಗಳಾ ದಬಳಿಕ ಪಾರಿತೋಷಕವಿತರಣೆಯಾಯಿತು.

---

ಆರೋಗ್ಯಧಿಕಾರಿಗಳು ಶಕ್ತಿಮೀರಿ ತಮ್ಮಪ್ರಯತ್ನಗಳನ್ನು ನಡೆಸುತಿದ್ದಾರೆ. ಆದರೆ, ಈ ರೋಗಕ್ಕೆ ಔಷಧಿ ಇಲ್ಲವೆಂದು ಆರೋಗ್ಯಾಧಿಕಾರಿಗಳೇ ಒಪ್ಪಿಕೊಂಡಿದ್ದು ಮುಂಜಾಗ್ರತೆವಹಿಸಲು ತಿಳಿಸಿದ್ದಾರೆ.

**ಕೇಂದ್ರ ಸರಕಾರವು**

ಒಬ್ಬ ಕಾಂಗ್ರೆಸಿಗನನ್ನು ಕೊಂದನೆಂಬ ಆಪಾದನೆಯಿಂದ ದೇಹಾಂತ ಶಿಕ್ಷೆಗೆ ಗುರಿಯಾದ ವಾಸು ಪಿಳ್ಳೈಯೆಂಬವನ ಶಿಕ್ಷಾವಧಿಯನ್ನು ಕಡಿಮೆಮಾಡ ಬುದೆಂದು ತಿಳಿದು ಬಂದಿದೆ ಇವನ ಶಿಕ್ಷೆಯ ವಿರುದ್ಧವಾಗಿ ಮೇಲಿನ ಕೋರ್ಟುಗಳಿಗೆ ಮಾಡಿದ್ದ ಆರ್ಜಿ, ರಾಜ್ಯಪಾಲ ಮತ್ತು ರಾಷ್ಟ್ರಪತಿಗಳಿಗೆ ಮಾಡಿದ ಮನವಿಗಳು ತಿರಸ್ಕೃತವಾಗಿದ್ದುವು. ಆದರೆ, ಇತ್ತೀಚೆಗೆ ಕೇರಳ ಸರಕಾರವು ಅಧಿಕಾರಕ್ಕೆ ಬಂದೊಡನೆಯೇ ಶಿಕ್ಷಾವಧಿಯನ್ನು ಕಡಿಮೆ ಮಾಡಲೆಸಿ, ಈ ಬಗ್ಗೆ ರಾಷ್ಟ್ರಪತಿಗೆ ಕೊಡನೆ ವಿನಂತಿಸಿದುದರ ಪರಿಣಾಮವಾಗಿ ಕೇಂದ್ರಸರಕಾವು ಈ ನಿರ್ಣಯಕ್ಕೆ ಬಂದಿದೆ.

**ಮೈಸೂರು ರಾಜ್ಯದಲ್ಲಿ**

೧೯೫೬–ಗಲಲ್ಲಿ ೩೬೫ ಏಕೋಪಾಧ್ಯಾಯರ ಶಾಲೆಗಳನ್ನು ತೆರೆಯಲಾಗುವುದು. ಇವುಗಳಲ್ಲಿ ಅಧ್ಯಾಪಕರಾಗಿ ಎಸ್. ಎಸ್. ಎಲ್. ಸಿ. ಗಳನ್ನೇ ನೇಮಿಸಲಾಗುವುದು. ಈ ಯೋಜನೆಗೆ ಒಟ್ಟು ರೂ. ೨,೭೫,೯೪೦ ಮರುಪಾವತಿ ವೆಚ್ಚ ಮತ್ತು ರೂ. ೪೨,೧೦೦ ಪಾವತಿ ಮಾಡಲಿಕ್ಕಿಲ್ಲದ ವೆಚ್ಚಗಳನ್ನು ರಾಜ್ಯಸರಕಾರವು ಮಂಜೂರುಮಾಡಿದೆ

**ಪ್ರಧಾನಿ ನೆಹರೂ**

ತನ್ನ ಪ್ರಧಾನಿ ಪಟ್ಟವನ್ನು ತ್ಯಜಿಸಿ ಕಾಂಗ್ರೆಸ್ಸಿನ ಅಧ್ಯಕ್ಷಸ್ಥಾನವನ್ನು ವಹಿಸ ಬೇಕೆಂಬ ಅಧಿಕಾರೇತರ ಗೊತ್ತುವಳಿ ಯೊಂದು ಜೂನ್ ೧ರಂದು ಸೇರಲಿರುವ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಅಧಿವೇಶನದ ಮುಂದೆ ಚರ್ಚೆಗೆ ಬರುವ ಸಂಭವವಿದೆ.

**ವಾರ್ಷಿಕ ಮಹಾಸಭೆ**— ಉಡುಪಿ ಕೋಪರೇಟಿವ್ ಹಾಲು ಸರಬರಾಯಿ ಸಂಘದ ಮಹಾಸಭೆಯು ತಾ. 28 ರಂದು ಸಂಜೆ ಶ್ರೀ ಯು. ಪುಂಡಲೀಕ ಶೆಣೈಯವರ ಅಧ್ಯಕ್ಷತೆಯಲ್ಲಿ ಜರಿಗಿತು. ಕಾರ್ಯದರ್ಶಿ ಶ್ರೀ ಎಮ್. ನಾಮನ ಭಟ್ಟರು ಗತವರುಷದ ವರದಿಯನ್ನೋದಿದರು. ಸೇರಿದ 63 ದರದ ದಲ್ಲಿ ಸೆಂಬರ್‌ರಿಗೆ ಡಿವಿಡೆಂಟ್ ಹಂಚಲು ಗೊತ್ತು ಮಾಡಲಾಯಿತು. ಹೊಸ ವರ್ಷಕ್ಕೆ ಡಾ. ಟಿ. ಮಾಧವ ಪೈ, ಡಾ. ಸುಂದರರಾಮ ಪೈ, ಡಾ. ಕೆ. ಎಲ್. ಉಪಾಧ್ಯಾಯ, ಶ್ರೀ ಗೆಳವಾದ ಎಸ್. ಪಾಮನ ಭಟ್, ಪಿ. ಎನ್. ಕೃಷ್ಣಮೂರ್ತಿ ರಾವ್, ಕೆ. ಕಮಲಾಕ್ಷ ಪೈ ಲಕ್ಷ್ಮೀನಾರಾಯಣ ರಾವ್, ಪಿ.ಕೆ. ಶೇಷಗಿರಿ ರಾವ್ ಮತ್ತು ಎ.ತ್ರಿವಿಕ್ರಮ ನಾಯ್ಕರು ಡೈರೆಕ್ಟರ ಮಂಡಳಿಗೆ ಒಮ್ಮತದಿಂದ ಆರಿಸಲ್ಪಟ್ಟರು.

**ಸಹಾಯಾರ್ಥ ನಾಟಕ**— ಕುಂಜಾರು ಶ್ರೀ ಗಿರಿಜಾ ಹಾಲ್ ಎ! ಶಾಲಾ ಸಹಾಯಾರ್ಥವಾಗಿ ಆ ಶಾಲೆಯ ಹುಡುಗ.ಹುಡುಗಿಯರು ತಾ. 25ರಂಯ ರಾತ್ರಿ ವರಡೇಂದ್ರ ಕಲಾ ಮಂದಿರದಲ್ಲಿ 'ಮೇವಾಡದ ಭಾಗ್ಯಲಕ್ಷ್ಮಿ' ನಾಟಕವನ್ನು ಅಭಿನಯಿಸಿದರು ಡಾ. ಎಸ್. ಆರ್. ಪೈಗಳು ಸಭಾಧ್ಯಕ್ಷತೆ ವಹಿಸಿದ್ದರು. ಶಾಲಾ ಮೆನೇಜರ್ ಶ್ರೀ ಕುರ್ಕಾಲು ಗಣಪಯ್ಯ ಶೆಟ್ಟರು ಸ್ವಾಗತಿಸಿ ವಂದನೆಗಳನ್ನಿತ್ತರು.

**ಶ್ರೀ ಜಗನ್ನಾಥ ರಾವ್ ಜೋಶಿಯವರ ಆಗಮನ** — ಅಖಿಲ ಭಾರತೀಯ ಜನಸಂಘದ ಜತೆಕಾರ್ಯದರ್ಶಿ ಶ್ರೀ ಜಗನ್ನಾಥ ರಾವ್ ಜೋಶಿಯವರು ತಾ. 24ರಂದು ಆಪರಾಷ್ಟ್ರ ಸ್ಥಳೀಯ ಜನಸಂಘದ ಕಾರ್ಯಾಲಯದಲ್ಲಿ ಏರ್ಪಡಿಸಲಾದ ಸ್ಥಳೀಯ ಸುದ್ದಿಗಾರರ ಸಭೆಯಲ್ಲಿ ಜನಸಂಘದ ಧ್ಯೇಯ ಧೋರಣೆಗಳು, ಕೇಂದ್ರ ಸರಕಾರದ ತೆರಿಗೆ ರೀತಿ ನೀತಿಗಳು, ಇತ್ಯಾದಿ ಪ್ರಜಲಿತ ವಿಷಯಗಳ ನ್ನು ವಿವರಿಸಿದರು. ಅರಂಭದಲ್ಲಿ ಶ್ರೀ ಯು. ಎಸ್. ಭಟ್ಟರು ಪರಿಚಯಾತ್ಮಕ ಮಾತುಗಳ ನ್ನಾಡಿದರು. ಕೊನೆಯಲ್ಲಿ ಶ್ರೀ ಕೆ. ಪ್ರಭಾಕರರಾಯರು ಧನ್ಯವಾದಗಳನ್ನಿತ್ತರು ಜಿಲ್ಲಾ ಧಿಪ ಪರವಾಗಿ ಶ್ರೀ ಎಸ್. ವಿಠಲ ಕಿಣಿಯವರು ಧನ್ಯವಾದಗಳನ್ನಿತ್ತರು.

ಸಂಜೆ ರಥಬೀದಿಯಲ್ಲಿ ಶ್ರೀ ಟಿ. ವಾಸುದೇವ ಶೆಣೈಯವರ ಅಧ್ಯಕ್ಷತೆಯಲ್ಲಿ ಸೇರಿದ ಮಹಾಜನಸಭೆಯಲ್ಲಿ ಶ್ರೀ ಜೋಶಿಯವರು ಕಳದ ಮಹಾ ಚುನಾವಣೆಯಲ್ಲಿ ಹಣಕಾಸು ಮಹತ್ವದ ಪಾತ್ರ ಸಹಿಸಿತ್ತೆಂಬ್ಕೊ ಜನಹಿತ ಕಲ್ಯಾಣ ಸಾಧಿಸುವ ಜನಗಳಿಗೆ ಸ್ಥಾನ ದೊರೆಯಲಿಕ್ಕಿಲ್ಲವೆಂದೂ ಹೇಳಿದರು. ಕಾಶ್ಮೀರ ಹಾಗೂ ಗೋವೆ ಭಾರತಕ್ಕೆ ಸೇರಿದ ಭಾಗಗಳೆಂದೂ ಅವುಗಳ ಸಮಸ್ಯೆ ಬೇಗನೆ ಬಗೆಹರಿಯಬೇಕೆಂದೂ ಸೂಚಿಸಿದರು.

**ಮುನಿಸಿಪಲ್ ಕೌನ್ಸಿಲು ಸಭೆಯು**— ತಾ. 27 ರಂದು ಸಂಜೆ ಚೆರ್‌ಮೆನ್ ಶ್ರೀ ಕೆ. ಕೆ. ವೈಗಳ ಅಧ್ಯಕ್ಷತೆಯಲ್ಲಿ ಜರಿಗಿತು. ಕಡಿಮಾಳಿ ವಾರ್ಡಿನಲ್ಲಿ ನಂಬ್ರ 1.2.25 ನೆ ಕಟ್ಟಡದಲ್ಲಿ ಬುಕ್‌ಬ್ಯಾಂಡಿಂಗ್ ತಾತ್ಕಾಲಿಕ ಕ್ಲಾಸುಗಳು ನಡೆಸುತ್ತ ಲಿರುವುದರಿಂದ ಸದ್ರಿ ಕಟ್ಟಡದ ತೆರಿಗೆಯನ್ನು ವಿನಾಯಿತಿ ಪಡಿಸಬೇಕೆಂದು ಮನವಿಯಾದ ಏಕೆಮಿ ಆಫ್ ಜನರೆಲ್ ಡ್ಯುಕೇಶನ್ ಅದರ ರಿಜಿಸ್ಟ್ರಾರರ ಪತ್ರದ ಮೇಲೆ ತುಂಬಾ ಚರ್ಚೆ ನಡೆಯಿ ಸರಕಾರದ ಒಪ್ಪಿಗೆಗೆ ಒಳಪಟ್ಟು ರಿಯಾಯಿತಿ ಕೊಡಬಹುದೆಂಬಾಯಿತು. ಕುಂಜಿಬೆಟ್ಟು ನಿವಾಸಿಯಾ ಕೆಟು ಕಟ್ಟಿಸುವ ಅವಧಿಯನ್ನು ಇನ್ನೆರಡು ವರ್ಷ ಮುಂದರಿಸಬೇಕೆಂಬು ಜಿಲ್ಲಾ ಕಲೆಕ್ಟರ ರನ್ನು ನಿರ್ಣಯಿಸುವ ನಿರ್ಣಯವಾಯಿತು.

**ಲಾ ಮತ್ತು ಇಂಜನಿಯರಿಂಗ್ ಕಾಲೇಜುಗಳು**— ಇದೇ ಜೂನ್ ತಾ. 15 ರಿಂದ ಪ್ರಾರಂಭವಾಗಲಿರುವವೆಂದೂ ಈ ಬಗ್ಗೆ ಪೂರ್ವ ಸಿದ್ಧತೆಗಳೆಲ್ಲಾ ಜರಗುತ್ತಿವೆಯೆಂದೂ 1957–58 ಮತ್ತು 58–59ನೇ ವರ್ಷಗಳಿಗೆ ಬೇಕಷ್ಟು ವಿದ್ಯಾರ್ಥಿಗಳು ಸೀಟುಗಳನ್ನು ಕಾಯ್ದಿರಿಸಿಕೊಂಡಿರುವರೆಂದೂ ಕರ್ನಾಟಕ ಯು ನಿವರ್ಸಿಟಿ ಬಗ್ಗೆ ೨೦ ಸೀಟುಗಳನ್ನಷ್ಟೇ ಇರಿಗೊದಿಸಲಾಗಿದೆಯೆಂದೂ ತಿಳಿದುಬರುತ್ತದೆ.

ಈ ಕಾಲೇಜುಗಳನ್ನು ನಡೆಸುವ ಮಣಿಪಾಲದ ಏಕೆಡೆಮಿ ಆಫ್ ಜನರಲ್ ಎಜ್ಯುಕೇಶನ್ ಸಂಸ್ಥೆಯವರು ಕುಂದಾಪುರ, ಮೂಲ್ಕಿ, ಪುತ್ತೂರು ಗಳಲ್ಲಿ ಆಯಾಯ ಸ್ಥಳೀಯ ಮಹಾ ಜನರ ಬೆಂಬಲ ಪಡೆದು ಕೆಲಾ ಕಾಲೇಜುಗಳನ್ನು ಸ್ಥಾಪಿಸುವ ಯತ್ನದಲ್ಲಿರುವರೆಂದೂ ತಿಳಿಯುತ್ತದೆ. ಅಂತೂ ರಿಜಿಸ್ಟ್ರಾರ್ ಡಾ. ಟಿ. ಎಮ್. ಎ. ಪೈಗಳ ಯತ್ನ ಯಶಸ್ವಿಯಾಗುವುದರಲ್ಲಿ ಅನುಮಾನವಿಲ್ಲ.

**ವಿನಾಹ**—ಶ್ರೀ ಬೈಲೂರು ವಿಟ್ಲ ಶೆಟ್ರು ಪುತ್ರಿ ಸೌ! ಮುಕಾಂಬಿಯನ್ನು ನಂದಿಕೂರು ಚೀರಕ್ಕಗುತ್ತು ದಿ! ಶೀಪ ಶೆಟ್ರ ಪುತ್ರ ಜಯಣ್ಣ ಶೆಟ್ಟರು ತಾ 24ರಂದು ಶ್ರೀ ರಾಮ ಕೃಷ್ಣ ಥಿಯೇಟರಿನಲ್ಲಿ ವಿವಾಹವಾದರು. ನೂತನ ವಧೂವರರಿಗೆ ಶುಭಾಶಯಗಳು.

**ಜಿಲ್ಲಾ ಮರಾಟರ ಸಂಘದ** — ಉಡುಪಿ ಶಾಖೆಯ ವಾರ್ಷಿಕ ಅಧಿವೇಶನವು ಶ್ರೀ ಟಿ ಎ. ಪೈಯವರ ಅಧ್ಯಕ್ಷತೆಯಲ್ಲಿ ನಗರಸಾಲದಲ್ಲಿ ತಾ. 28ರಂದು ಜರಿಗಿತು. ಪುತ್ತೂರಿನ ಶ್ರೀ ಯಸ್ ಸುಬ್ಬಯ್ಯ ಶಾಯಿಕ್ ಎಂ. ಎಲ್. ಎ. ರವರು ಅಧಿವೇಶನವನ್ನು ಉದ್ಘಾಟಿಸುತ್ತಾ ತಾನು ಮರಾಠೀ ಸಮಾಜಕ್ಕೆ ಸಂಬಂಧಿಸಿದವನಾದರೂ ಜಾತೀಯ ದೃಷ್ಟಿಗಿಂತಲೂ ಉದ್ಯೋಗದಲ್ಲಿಯೂ ಬಡತನದಲ್ಲಿಯೂ ನೀವು ನನ್ನಂತೆಯೇ ಎಂಬ ಕಾರಣದಿಂದ ನಿಮ್ಮನ್ನು ನನ್ನವರೆಂದು ನಾನು ತಿಳಿಯುತ್ತೇನೆ. ಹೆಚ್ಚೆನವರು ನೀವು ಚಾಲಗೇಣ ವಕ್ಕಲುಗಳು. ನಾನೂ ಒಬ್ಬ ಚಾಲಗೇಣ ವಕ್ಕಲು. ನೀವೆಲ್ಲರೂ ಬಡ ಭಾಗತೇಯನ ಪ್ರತಿರೂಪಗಳು. ನಾನೂ ಹಾಗೆಯೇ. ನಿಮ್ಮ ಬೆಂಬಲ ಪ್ರೋತ್ಸಾಹ ವಿಲ್ಲದ ಪ್ರತಿನಿಧಿ ಸರಕಾರ ಇದ್ದೂ ಇಲ್ಲದಂತೆ ಆದುದರಿಂದ ನಿಮ್ಮ ಒತ್ತಾಸೆಗಳನ್ನೂ ಸರಕಾರಕ್ಕೆ ಸಶಕ್ತವಾಗಿ ಮಾಡಿರಿ ಎಂದರು.

ಸ್ವಾಗತವನ್ನು ಮಾಡುತ್ತಾ ಶ್ರೀ ಅಣ್ಣಯ ನಾಯಕರು ನಾವು ಜೀವನದ ಎಲ್ಲಾ ಕ್ಷೇತ್ರಗಳಲ್ಲಿಯೂ ಹಿಂದುಳಿದವರೆಂದು ತಿಳಿದು ಸರಕಾರ ನಮಗೆ ಹಿಂದುಳಿದ ವರ್ಗದ ವಿಶೇಷ ಅನುಕೂಲತೆಗಳಿಗಾಹೋರಾಟ ಮಾಡಿದೆ. ಕೆಲವು ವ್ಯಕ್ತಿಗಳು ನಮ್ಮನ್ನು ಈ ಸೌಲಭ್ಯದಿಂದ ಹೊರಕು ಪಡಿಸಲು ಯತ್ನಿಸುತ್ತಿರುತ್ತೆ. ಸರಕಾರಕ್ಕೆ ಹಿಂದಿನಂತೆ ಮುಂದೆಯೂ ನಮಗೆ ಈ ಅನುಕೂಲತೆಗಳನ್ನು ಊರ್ಜಿತ ವಿರಿಸಬೇಕೆಂದರು. ಧನಸಹಾಯ ಕೊಟ್ಟು, ಉಳುವವನೇ ಭೂಮಿಯ ಒಡೆಯನಾಗಬೇಕೆನ್ನುವ, ಸರಕಾರದ ನಡೆಲಕ್ಕುಗಳು ಮುಂದಿನ ಸಲ್ಲಬೇಕೆನ್ನುವ ಮೊದಲಾದ ಠರಾವುಗಳು ಸ್ವೀಕೃತವಾದವು ಸಭಿಕರ ಪರವಾಗಿ ಶ್ರೀ ದಾಂತಿ, ಕೆ. ಶಾಂತಪ್ಪನವರು ಮೂತನಾಡಿದರು.

ಅಧ್ಯಕ್ಷರು ಈ ವರ್ಗದ ವಿದ್ಯಾರ್ಥಿಗಳಿಗೆ ಮಣಿಪಾಲದಲ್ಲಿ ಧನಾರ್ಥಿ ಶಿಕ್ಷಣ, ಊಟ, ವಸತಿಯ ಅನುಕೂಲ ವೇರ್ಪಡಿಸುವುದಾಗಿ ವಾಗ್ದಾನವಿತ್ತರು ಚಾಲಗೇಣ ವಕ್ಕಲುಗಳಿಗೆ ಆನರ ಹಿಡುವಳಿಯ ಮೇಲೆ ಭದ್ರತೆ ಸಿಗದಿದ್ದರೆ ನನ್ನ ಆಧೀನ ಬೆಳೆಯ ಯೋಜನೆ ನಿಷ್ಪ್ರಯೋಜಕವೆಂದರು.

ಶ್ರೀ ಅಣ್ಣಯ ನಾಯಕರು ಧನ್ಯವಾದ ವಿತ್ತನಂತರ ಅಪರಾಹ್ನಾಂತರದೊಡನೆ ಕಾರ್ಯಕಲಾಪಗಳು ಅಂತ್ಯವಾದುವು

---

'NAVAYUGA' WEEKLY is in the list of periodicals and Newspapers approved for use in Secondary Schools as per proceedings Roc· No· 466 N/50 date 2-12-1950 of the Directors of public Instruction Madras·

---

## ಇನ್ನೂ ಚಂದಾಹಣವನ್ನು

ಕಳುಹಿಸದವರು ದಯಮಾಡಿ ಕೂಡಲೇ ಕಳುಹಿಸಿಕೊಡುವಂತೆ ಇನ್ನೊಮ್ಮೆ ಕೇಳಿಕೊಳ್ಳುತ್ತೇನೆ. ಅಂತೂ ಸಕಾಲದಲ್ಲಿ ಚಂದಾ ಪಾವತಿಯಾಗದಿದ್ದರೆ ನಾವು ಅನಿವಾರ್ಯವಾಗಿಕಳುಹಿಸುವ ವಿ. ಪಿ. ಪಿ. ಯನ್ನಾದರೂ ಪಡಕೊಳ್ಳುವಂತೆ ವಿಜ್ಞಾಪಿಸುತ್ತೇನೆ.

**ಮೆನೇಜರ್, ನವಯುಗ.**

## ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಸುಸ್ತಕಗಳನ್ನು ಕಳಿಸು ವವರು ದಯಮಾಡಿ ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ನ.)

### ಗೋದಾನ—

(ಕಾದಂಬರಿ) ಗ್ರಂಥಕರ್ತೃ: ದಿವಂಗತ ಪ್ರೇಮಚಂದ, ಅನುವಾದಕರು: ಶ್ರೀಕೆ. ರಾಮಕೃಷ್ಣ ಉಡುಪ. ಎಂ ಎ., ಬಿ. ಟಿ., ಪ್ರಕಾಶಕರು: ಸಾಹಿತ್ಯಭಂಡಾರ ಪುಟ್ಟಳ್ಳಿ, ಪುಟ 380, ಬೆಲೆ: ಸಾಧಾಪ್ರತಿ ರೂ. 3_12_0 ಕೆಲಿಕೊ 5_8_0.

ದಿವಂಗತ ಪ್ರೇಮಚಂದರ ಕಾದಂಬರಿಗಳು ಬಹು ಪ್ರಸಿದ್ಧಿಯನ್ನು ಪಡೆದಿರುವುದರಿಂ ದಲೇ ಅನೇಕ ಭಾಷೆಗೆ ಅವು ಭಾಷಾಂತರಿಸಲ್ಪಟ್ಟಿವೆ. ಗೋದಾನ ಕಾದಂಬರಿ ಇಂಗ್ಲಿಷ್, ಫ್ರೆಂಚ್, ರೆಷ್ಯನ್ ಭಾಷೆಗಳಲ್ಲಿ ಸಹಾ ಭಾಷಾಂತರಿಸಲ್ಪಟ್ಟು ಜನ ಮನ್ನಣೆಗೆ ಪಾತ್ರವಾಗಿದೆ. ರೆಷ್ಯದಲ್ಲಂತೂ ಅತ್ಯಂತ ಹೆಚ್ಚು ಜನಾನುರಾಗಗಳಿಸಿದೆ. ಇಂತಹ ವಿಶ್ವವಿಖ್ಯಾತ ಕಾದಂಬರಿಯನ್ನು ಕನ್ನಡಕ್ಕೆ ಅನುವಾದಿಸಿದ ಉಡುಪರೂ ಪ್ರಕಾಶಿಸಿದ ಪುಟ್ಟಳ್ಳಿಯ ಸಾಹಿತ್ಯಭಂಡಾರದವರೂ ಅಭಿನಂದನಾರ್ಹರು.

ಪಳ್ಳಿಯ ರೈತ ಹೋರಿರಾಮು ಒಂದು ಒಳ್ಳೆಯ ದನವನ್ನು ಸಾಕಬೇಕೆಂದು ಪಂಬಲ ದಲ್ಲಿರುತ್ತಾನೆ. ನೆರೆಕೆರೆಯ ಜೋಲ ನಿಧಾರ ನಾಗಿದ್ದ. ತನಗೊಂದು ನೆಂಟಸ್ತಿಕೆ ಹೋರಿರಾಮು ಗಂಟು ಹಾಕ್ಯಾನೆಂದು ಅಶಿಪಟ್ಟು ಉತ್ತಮವಾದ ದನವೊಂದನ್ನು ಹೋರಿರಾಮುನಿಗೆ ಕಡಕೊಡಲು ಒಪ್ಪುತ್ತಾನೆ. ಸಹೋದರಿ ಮಾತ್ಸರ್ಯದಿಂದ ಹೋರಿ ರಾಮನ ಸಹೋದರಿ ಹೀರನು ದನಕ್ಕೆ ವಿಷ ಹಾಕಿ ಕೊಲ್ಲುತ್ತಾನೆ. ಹೋರಿರಾಮನ ಬಡುಕಾಲದ ಆಶೆ ಹಾಗೆಯೇ ಉಳಿಯುತ್ತದೆ. ದನಕೊಟ್ಟ ಡಾಲನ ಮಗಳು ಜಾನಿಯಾಳನ್ನು ಹೋರಿರಾಮನ ಸುಗ ಗೋವರೆ ಹಾರಿಸಿಕೊಂಡು ಬರುತ್ತಾನೆ. ಇದರಿಂದ ಸಿಟ್ಟುಗೊಂಡ ಜೋಲ ಹೋರಿರಾಮುನ ಜೀವನಾಧಾರವಾಗಿದ್ದ ಎತ್ತುಗಳನ್ನೇ ಹೊಡೆದುಕೊಂಡು ಹೋಗುತ್ತಾನೆ. ಗೋವರೆ ಜಾನಿಯಳನ್ನು ತನ್ನ ಮನೆಯಲ್ಲಿ ಬಿಟ್ಟು ಪೇಟೆ ಸೇರಿ ತುಂಡಾ ಸಂಪಾದಿಸಿ ಊರಿಗೆ ಬಂದು ಎತ್ತುಗಳನ್ನು ಹಿಂದಕ್ಕೆ ತರುತ್ತಾನಾದರೂ ತನ್ನ ಉದ್ದಟತನದಿಂದ ಊರಿನ ಮುಖಂಡರನ್ನು ಗೇಲಿಮಾಡಿ ದ್ವೇಷ ಗಂಟು ಹಾಕಿತ್ತಾನೆ. ತಂದೆಗೆ ವಿರೋಧಿಯಾಂತು ಹೆಂಡತಿಯನ್ನು ಕರೆದು ಹೊರಟುಬಿಡುತ್ತಾನೆ. ಇತ್ತ ಹೋರಿರಾಮು ಹಲವಾರು ಕಷ್ಟಗಳಿಗೆ ಸಿಲುಕಿದರೂ ಎದೆಗೆಡದೆ, ಮರ್ಯಾದೆ ಪುರುಷರ ಜೀವನ ಸಾಗಿಸುತ್ತಾನೆ. ಹೋರಿರಾಮುನ ಹೆಂಡತಿ ಜಾನಿಯ್ಯಾ ಸಿಡುಕಿನವಳಾದರೂ ಕಷ್ಟಕ್ಕೆ ಈಡಾದವರ ನೆರವಾಗಿ ಬಂದೇ ಬರುವ ಸ್ವಭಾವದವಳು, ಗಂಡನನ್ನು ಬೈಯುವಾಗ ಬೈದು, ಪೂಜಿಸುವಾಗ ಪೂಜಿಸಿ ಜೀವನ ಸಾಗಿಸುತ್ತಾಳೆ.

ಹೋರಿರಾಮನ 'ದನ'ದ ಆಸೆ ಹಾಗೆಯೇ ಉಳಿಯುತ್ತದೆ. ಕರ್ಮಯೋಗಿಯಾಗಿ ಇಹ ಲೋಕ ಯಾತ್ರೆಯನ್ನು ಮುಗಿಸುವ ಮುನ್ನ ಅತನ ಆತ್ಮಶಾಂತಿಯಿಂದ ಮುಕ್ತಿ ಮಾರ್ಗವನ್ನು ಸೇರುವಂತೆ ಜಾನಿಯ ಒಂದೂಕಾಲು ರೂಪಾಯಿಕೊಟ್ಟು ಗೋದಾನವಮಾಡಿಸುತ್ತಾಳೆ.

ಪೇಟೆಯ ವಿಲಾಸೀ ಜೀವನ, ಶ್ರೀವಂತಿಕೆಯ ಆಡಂಬರಗಳನ್ನು ಉದ್ರಿಕ್ತ ಮಾತುಗಳ ಪ್ರಯೋಗದಿಂದ ವರ್ಣಿಸಿ ದಿನಕ್ಕೊಂದರಂತೆ ೧೯೬ ಪುಟಗಳ ಪುಸ್ತಕಗಳನ್ನೂ ಪ್ರೇಮಚಂದರ ಈ ಕಾದಂಬರಿಯನ್ನೂ ಹೋಲಿಸ ಹೋಗುವುದೇ ಪಾಪವಾಗಬಹುದು! ಗೋದಾನದಂತ ಪ ಕಾದಂಬರಿ ರಚನೆ ಒಂದು ತಪಸ್ಸು. ದೀರ್ಘಕಾಲ ಪಳ್ಳಿಯ ಜೀವನವನ್ನು ಕುದ್ದಾಂತ ಕರಣದಿಂದ ತಿಳಿದು, ಜನರಿಗೆ ನಿರ್ಮಲವಿತ್ತವಾಗಿ ತಿಳಿಸು ಹೇಳುವ ಮಹಾ ಹಿಜಸ್ಸು ಇಲ್ಲಿ ಅಗಸ್ತ್ಯ ಪಳ್ಳಿಯ ಜನಜೀವನವನ್ನು ಇದ್ದಂತೆ, ಪರಿಣಾಮವಾಗುವಂತೆ ಚಿತ್ರಿಸಿದ್ದುದರಿಂದಲೇ ರಷ್ಯಾದಂತಹ ದೇಶಗಳಲ್ಲಿ ಈ ಕಾದಂಬರಿಯ ಲಕ್ಷ ಪ್ರತಿಗಳು ಮಾರಿಹೋಗಿದೆಯೆಂದೂ ಹೇಳಬೇಕು.

ಒಂದು ದನ ಸಾಕಲು ಅನುಕೂಲತೆಯಿಲ್ಲದೆ ಕೊರಗುವ ಕರ್ಮಯೋಗಿ ಹೀರಾರಾಮು ಪೇಟೆಯವರ ತಂತ್ರಗಾರಿಕೆಯ ಕೇಕಡಾ ಒಂದಂಶವನ್ನು ಸಹಾ ಪಾಪವೆಂದು ಕಾಣುತ್ತಾನೆ. ದುಡಿದು ಮಡಿದು ದುಡಿಸಿಯಲ್ಲೇ ದೇಹವ ಹಿಡತ್ತಾನೆ. ಇಂತಹ ಕಾದಂಬರಿಗಳು ಸಾವಿರ ಸಂಖ್ಯೆಯಲ್ಲಿ ಮೂರಾಟವಾಗಬೇಕು. ಕರ್ನಾಟಕದ ಪ್ರಕಾಶಕರು ಇಂತಹ ಉತ್ತಮ ಕಾದಂಬರಿಗಳ ಪ್ರಕಾಶನವನ್ನು ಸೇವಾದೃಷ್ಟಿಯಿಂದಲಾದರೂ ಕೈಗೊಳ್ಳಬೇಕು.

ದಿವಂಗತ ಪ್ರೇಮಚಂದರ ಮಾಡಪಿಯು

---

ತಲ್ಲೂರು — ಸ್ಥಳೀಯ ಜೋರ್ಡನ್ ಹಾ ಎ ಶಾಲೆಯ ವರ್ಧಂತ್ಯುತ್ಸವವು ತಾ 11ರಲ್ಲಿ ರಿ ಫಾ| ಥೋಮಸ್ ದೇಸಾಕ್ಕರವರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯ ಶ್ರೀ ಪಿ. ರಾಧಾಕೃಷ್ಣರಾಯರು ಶಾಲಾ ವರದಿಯನ್ನೋದಿದರು. ಶ್ರೀ ಟಿ. ವಿಷ್ಣುಕಾಮತರು ಹಳೆ ವಿದ್ಯಾರ್ಥಿಗಳೊಟ್ಟಿದ ವರದಿಯನ್ನೊಪ್ಪಿಸಿದರು. ಶ್ರೀ ಎಸ್. ರಘೂರಾಮ ಸೆಟ್ಟರು ಸ್ವಸ್ತಿವಾಚನ ಮಾಡಿದರು. ಅಧ್ಯಕ್ಷರ ಭಾಷಣವಾದ ಬಳಿಕ ವಿವಿಧ ವಿನೋದಾವಳಿಗಳಾದುವು.

ಸುರತ್ಕಲ್—ಮುಕ್ಕ ಮಿತ್ರ ಸಮ್ಮೇಳನ ಗಂಗಯ: ಸ್ಥಾನಿಕ ಫಂಡಿನ 14ನೇ ವಾರ್ಷಿಕೋತ್ಸವವು ತಾ 16ರಂದು ಶ್ರೀ ಬಿ. ಅರ್ ಕರ್ಕೇರ, ಎಸ್ಸೆಸ್ಸೆಲ್ಸಿ, ಎಲ್. ಎ. ಆವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆ, ವರದಿವಾಚನೆ, ಇನಾಂ ಹಂಚಿಕೆ, ಭಾಷಣ ಇತ್ಯಾದಿ ಕಾರ್ಯಕ್ರಮಗಳು ಸಾಂಗವಾಗಿದುವು.

ಬಂಟ್ವಾಡಿ— ಇಲ್ಲಿಯ ನ್ಯೂ ಎಜುಕೇಷನ್ ಎಲಿಮೆಂಟರಿ ಶಾಲೆಯು ವಾರ್ಷಿಕೋತ್ಸವವು ತಾ. 18ರಲ್ಲು ಶ್ರೀ ಎಸ್. ಅಂತಯ್ಯ ಸೆಟ್ಟಿ, ಎಡ್ವೋಕೇಟ್ ಆವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಸುಪರ್ವೈಸಿಂಗ್ ಪಾಧ್ಯಾಯ ಶ್ರೀ ಪಿ. ಯು. ಎಸ್. ಕ್ಯಾಸ್ತಲಿನೊ ವರದಿ

---

ಕಾದಂಬರಿ ಕಾರರು ಕನ್ನಡನಾಡಿನಲ್ಲಿ ಹುಟ್ಟಿ ಮೆರೆಯಲಿ. ಅನುವಾದಕ ಉಡುಪರು ಪ ಕ. ಜಿಲ್ಲೆಯ ಜಲೋ ಮಾತುಗಳನ್ನು, ಕನ್ನಡ ನುಡಿತಾಯಿ ಭಂಡಾರಕ್ಕೆ ಸೇರಿಸಿ, ಕಾದಂಬರಿಯ ಮೂಲಕ ಆತ್ಯುತ್ಸಾಹವನ್ನು ಸ್ವಹಿತ್ಯಸೇವೆ ಮಾಡಿದ್ದಾರೆ.

ಪಾಂತಿ.

---

ಯನ್ನೋದಿದರು. ಶಾಲಾ ಜೂನಿಯರ್ ಇಂ ಪೆಕ್ಟರ್ ಶ್ರೀ ಪಿ. ಕೃಷ್ಣರಾಯರು ಪಾರಿತೋ ಷಿಕವಿತರಣೆ ಮಾಡಿದರು. ಶ್ರೀ ಜಿ. ರಾಜೀವ ಸೆಟ್ಟರು ಧನ್ಯವಾದಗೈದ್ದಿತ್ತರು.

ಬಾಡ್ಕಾರು — ದಿವಂಗತ ಶ್ರೀ ಕಾ ಕಾರು ದುಗ್ಗಪ್ಪ ಸೆಟ್ಟಿ ದ್ವಿತೀಯ ಪುತ್ರ ಶ್ರೀ ಗೋಪಾಲ ಸೆಟ್ಟರು ದಿವಂಗತ ಶ್ರೀ ವ ದಿಗ ಮಂಜಯ್ಯ ಸೆಟ್ಟರ ದ್ವಿತೀಯ ಪುತ್ರಿ ಶ್ರೀಮತಿ ಜೆಂದ್ರಕಲಾ ವಧೂವನ್ನು ತಾ. 2 ರಲ್ಲು ಉಡುಪಿ ಕಡಿಯಾಳಿ ಶ್ರೀ ಮಹಿಷಮ ರ್ದಿನೀ ದೇವಿ ಸನ್ನಿಧಿಯಲ್ಲಿ ವಿವಾಹವಾದರು ನೂತನ ದಂಪತಿಗಳಿಗೆ ಶುಭಾಶಯಗಳು.

ನೇಣೂರು— ತಾ 25ರಲ್ಲು ನೇಣೂರು ಕೇಂದ್ರದ ಅಧ್ಯಾಪಕ ಸಂಘದ ಮಹಾಸಭೆಯು ಶ್ರೀ ಪಿ. ನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಕಳ ತಾಲೂಕು ಯೂನಿಯನ್ ಜತೆ ಕಾರ್ಯದರ್ಶಿ ಶ್ರೀ ಕ ಪಶ್ನಾಚಾರ್ಯ ರೈಗಳು ಪ್ರಾಥಮಿಕ ಶಾಲಾ ಯ ನಿಯನ್ನುಗಳು ಒಂದೇ ಘಟಕವಾಗಿರುವುದ ಅವಶ್ಯಕತೆಯನ್ನು ವಿವರಿಸಿದರು. ಈ ಮೊ ಲು ಜಿಲ್ಲಾ ಗಿಲ್ಡಿಗೆ ನೇರ ಸೇರ್ಪಡೆಗೊಂಡಿ ಈ ಸಂಘವನ್ನು ಕಾರ್ಕಳ ತಾಲೂಕು ಯ ನಿಯನ್ನಿಗೆ ಸಂಯೋಜಿಸುವ ನಿರ್ಣಯವನ್ನು ಮಹಾಸಭೆಯು ಏಕಾಭಿಪ್ರಾಯದಿಂದ ಅಂಗೀಕರಿಸಿತು.

ಶಿರ್ವ— ಸ್ಥಳೀಯ ಪಂಚಾಯತ ಜೂ ನಿಯರ ಸಭೆಯು ತಾ 26ರಂದು ಶ್ರೀ ಎಸ್ ಎ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿ ಆಂದ್ರಕೇಸರಿ ಶ್ರೀ ಟಿ. ಪ್ರಕಾಶರವರ ಸ್ಮಾರಕ ಸಭೆಯ ಬಗ್ಗೆ ಸಂಚಾಲಕಸೂಚಿಸುವ ನಿರ್ಣಯವನ್ನು ಯಿತು. ಕಲಶ್ತೂರು-ಅರ್ಬಿಕಟ್ಟೆಯ ಮೇಲಿನ ಸಂಕ ಹಾಳುಬಿದ್ದ ಬಗ್ಗೆ ಧನ ಸಹಾಯ ರೂಪಾಯಿ 200/-] ಕೊಡುವ ಇತ್ಯಾದ್ಯಿ ನಿರ್ಣಯಗಳಾ ದುವು.

---

ಕುಂಜಿಬೆಟ್ಟು ಗಿರಿಜಾ ಹಾ| ಎ| ಶಾಲಾ ವಿದ್ಯಾರ್ಥಿಗಳು ತಾ 21ರಂದು ಉಡುಪಿ ಶ್ರೀ ವರದೇಂದ್ರ ಕಲಾಮಂದಿರದಲ್ಲಿ ಪ್ರಯೋಜನಕ್ಕಾಗಿ ಪ್ರದರ್ಶಿಸಿದ "ಮೇವಾಡ ಭಾಗ್ಯಲಕ್ಷ್ಮಿ" ನಾಟಕದ ಒಂದು ದೃಶ್ಯ.


ಇದೀಗ ಪ್ರಕಟವಾಗಿದೆ

ಜಾನ್ ಡ್ಯೂಯಿ ಬರೆದ

ಸ್ವಾತಂತ್ರ್ಯ ಮತ್ತು ಸಂಸ್ಕೃತಿ

ಅನುವಾದಕ: ಳು. ಶಿ. ಹರಿದಾಸ ಭಟ್ಟ

(ಬೆಲೆ ರೂ. 2/-)

ನವಯುಗ ಎಂಟರ್‌ಪ್ರೈಸ್, ಲಿಮಿಟೆಡ್, ಉಡುಪಿ.



ಶೇದಿರಿ ಹರ್ಷದಾಯಕ

ಎಸ್.ಆರ್.

ಬೀಡಿಗಳನ್ನು

ಎಲ್ಲಾ ಕೆಡೆಗಳಲ್ಲಿಯೂ ಮೊರಲ್ಪಡುತ್ತವೆ.

25 ಬೀಡಿಗಳ ಕಟ್ಟು ೧೧೫

ಎಸ್.ಆರ್. ಬೀಡಿ ವರ್ಕ್ಸ್, ಉಡುಪಿ. ದ.ಕ.



ಝುಂಡುರವರ 'ಕೇಸರಿ ಜೀವನ'

(KESARI JEEVANA)

ಇದನ್ನೇ ಉಪಯೋಗಿಸಿರಿ.

ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಶೀತ, ಜ್ವಸ್ತ್ರ, ಗೊರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ 6/8; ½ ರಾತಲಿಗೆ ರೂ. 1/13

ದ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.

1. ಶಾ ಕಂಪೆನಿ, ಮಂಗಳೂರು.
2. ವಿ. ವಿ. ಸೆಣೈ, ಕಾರ್ಕಳ.
3. ಕೆನರಾ ಮೆಡಿಕೆಲ್ ಎಂಡ್ ಸರ್ಜಿಕಲ್ ಇನ್ಸ್ಟಿಟ್ಯೂಟ್, ಉಡುಪಿ,

ವಿವರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU ದಾವೋದರ & ಕೊ, ಮದ್ರಾಸ್—3.

## ಭಗವದ್ಭಜನೆ

(೩ನೇ ಪುಟದಿಂದ)

ಅಹಿತವೂ ಆಗುವುದಿಲ್ಲವೋ, ಅದೇ ಭ
ನದಾಜ್ಞೆಯೂಗಿದೆ. ಈರೀತಿಯಲ್ಲಿ ಅವ
ಆಜ್ಞೆಗಳನ್ನು ಗ್ರಹಿಸಿ, ಅದರ ರಹಸ್ಯ
ನ್ನು ತಿಳಿದು, ಅದರಂತೆ ನಡೆಯುವಲ್ಲಿ
ಂದರಿಯಬಾರದು. ಅದನು ನಮ್ಮ ಧ
ರ್ಮವೆಂದುತಿಳಿದು ಅದರ ಸಾರವಾಗಿ
ಪ್ರಾಣಪರ್ಯಂತ ಕಾರ್ಯಗೈಯ್ಯಬೇಕು
-"ಸ್ವಧರ್ಮೇ ನಿಧನಂ ಶ್ರೇಯಃ"

ಮೂರನೆಯದು- ಸರ್ವಸ್ವವನ್ನೂ ಪ್ರ
ು ಸರ್ಮಪಣ ಮಾಡುವುದು. ನಿಜವಾ
ರ್ವವೂ ಪರಮಾತ್ಮನದು, ಕಾರಣ
ವು ಹುಟ್ಟುವಾಗ ಏನನ್ನೂ ತರಲೂಇ
ಹೋಗುವಾಗ ಏನನ್ನೂ ಕೊಂಡು
ೋಗುವುದೂ ಇಲ್ಲ. ಅಲ್ಲದೆ ಇಲ್ಲಿ
ರು ವಾ ಗಲೂ ಎಲ್ಲವನ್ನೂ
ಮ್ಮ ಇಚ್ಛೆಯಂತೆ ನಡೆಸ
ುವೆವು. ಇದರಿಂದ ನಮ್ಮದೆಂಬುದೇನೂ
ಲ್ಲ. ಎಲ್ಲವೂ ಪರಮಾತ್ಮನಧೀನ ಎಂ
ು ಸ್ಪಷ್ಟವಾಗಿ ತಿಳಿಯಬಹುದು. ಆದ
ೂ ನಾವು ಭ್ರಮಿತರಾಗಿ ನಾನು, ನನ್ನ
ು ಎಂದು ವಿಭಾಗಿಸಿಕೊಂಡಿದ್ದೇವೆ.
ಶ್ವದೀಯಂ ವಸ್ತು ಗೋವಿಂದ ತುಭ್ಯ
ೀವ ಸಮರ್ಪಯೇ"- ಅಂತೇ ನಡೆ
ುವ.

ನಾಲ್ಕನೆಯದು- ಪರಮಾತ್ಮನ ಪ್ರತಿ
ಯೊಂದು ವಿಧಾನದಿಂದಲೂ ಪ್ರಸನ್ನ
ಾಗಿರುವುದು. ಅದರಲ್ಲಿಯೂ ಅನುಕೂ
ತೆಗಳಲ್ಲಿ ಪ್ರಸನ್ನತೆಯೂ, ಪ್ರತಿಕೂಲತೆ
ಳಲ್ಲಿ ಮುಖವೂ ಇರುವುದು. ವಾಸ್ತವ
ಾಗಿ ಅನುಕೂಲತೆಗಳಲ್ಲಿರುವ ಪ್ರಸನ್ನತೆ
ು ಮೋಹದ ಕಾರಣದಿಂದಾಗುವ
ಪ್ರಸನ್ನತೆಯಾಗಿದೆ. ಆದನ್ನು ವಿವೇಕದಿಂ
ನಾಶಮಾಡಿ "ಪರಮಾತ್ಮನ ಪ್ರತಿ
ೊಂದು ವಿಧಾನವೂ ನನಗೆ ಸಮ
ುಂಗಲಮಯವಾಗಿದೆ" ಎಂದು ನಿರ್ಧ
ರಿಸಬೇಕು. ಆಗ ಪ್ರತಿಕೂಲತೆಯಲ್ಲಿ
ಯೂ ದುಃಖ ಉಂಟಾಗದು. ಅನು
ಕೂಲತೆ ಪ್ರತಿಕೂಲತೆಗಳೆರಡೂ ಪರ
ಮಾತ್ಮನವರ ದಾನವೆಂದು ತಿಳಿದಾಗ ಅ
ನ ಸ್ಮರಣೆಯು ಮರವೆಯಾಗದು.

ವಿಚಾರಿಸಿ ನೋಡಿದರೆ ಮನಸ್ಸು, ಇಂದ್ರಿ
ು, ಶರೀರಗಳ ಪ್ರತಿಕೂಲ ಘಟನೆಗಳಲ್ಲಿ
ಒಂದು ಲಾಭವಿದೆ. ಅನುಕೂಲ ಘಟ
ನೆಗಳಿಂದ ಪುಣ್ಯ ಕ್ಷೀಣವಾಗುವುದು.
ಪ್ರತಿಕೂಲತೆಗಳಿಂದ ಪಾಪವು ವ್ಯಯವಾ
ುವುದು. ಪಾಪನಾಶದಿಂದ ಹಿತವೂ,
ಪುಣ್ಯ ನಾಶದಿಂದ ಅಹಿತವೂ ಆಗುವು
ದು. ಎರಡನೆಯದಾಗಿ ಪ್ರತಿಕೂಲತೆಗ
ಳಿಂದ ಮಾನವನ ವಿಕಾಸವಾಗುವುದು.
ಅನುಕೂಲತೆಗಳಿಂದ ಉನ್ನತಿಯು ತಡೆ
ಯಲ್ಪಡುವುದು. ಆದ್ದರಿಂದ ಪರಮಾತ್ಮ
ನು ಪ್ರತಿಕೂಲತೆಗಳನ್ನನುಗ್ರಹಿಸಿದಪ್ಪೂ
ನಮ್ಮ ಹಿತವಾಗುವುದು. ವೈಯೆಲ್ಲಾ
ಹೊಳೆಯಾದ ಬಾಲಕನು, ತಾಯಿ ಸ್ನಾನ
ಮಾಡಿಸುವಾಗ ಅಳುತ್ತಾ ಗದ್ದಲಮಾಡಿ
ರೂ, ತಾಯಿ ಅವನ ಇಚ್ಛೆಗೆ ವಿರೋ
ಧವಾಗಿ ಸ್ನಾನ ಮಾಡಿಸುವಳು. ಅಂತೆ
ಯೇ ನಮ್ಮ ಪಾಪವನ್ನು ನಾಶಗೊಳಿಸು
ವಾಗ, ಪರಮಾತ್ಮನು ನಾವೆಷ್ಟು ರೋಧಿ
ಸಿದರೂ ಪ್ರತಿಕೂಲತೆಗಳನ್ನೇ ತಂದೊ
ಡ್ಡುವನು. ನಮ್ಮನ್ನು ಶುದ್ಧಗೊಳಿಸುವನು.
ಪರಮಾತ್ಮನ ವಾಣಿಯೇ ಅಂತಿದೆ.

"ಯಸ್ಯಾಹಮನುಗೃಹ್ಣಾಮಿ ಹರಿಷ್ಯೆ
ತದ್ಧನಂ ಶನೈಃ |
ಕರೋಮಿ ಬಂಧು ವಿಷ್ಯೇದಂ ಸ ತು
ದುಃಖೇನೆ ಜೀವತಿ ||

"ಯಾರಮೇಲೆ ನಾನು ಕೃಪೆ ಮಾಡು
ವೆನೋ, ಅವನ ಸಮಸ್ತ ಧನವನ್ನೂ
ಮೆಲ್ಲ ಮೆಲ್ಲನೆ ಹರಿಸುವೆನು. ಬಂಧು ಬಾಂ
ಧವರ ವಿಯೋಗಗೊಳಿಸುವೆನು. ಅದರಿಂ
ದ ಅವನು ದುಃಖಪೂರ್ವಕ ಜೀವನ
ಧಾರಣ ಮಾಡಬೇಕು."

ಈ ರೀತಿ ಭಗವಂತನ ಚಿಂತನ, ಭಗ
ವದಾಜ್ಞಾಪಾಲನ, ಸರ್ವಭಗವದರ್ಪಣ,
ಮತ್ತು ಭಗವದ್ವಿಧಾನದಿಂದ ಪ್ರಸನ್ನನಾ
ಗಿರುವುದು ಇವೇ ಭಗವದ್ಭಜನೆಯ ವಿವಿ
ಧ ಅಂಗಗಳು.

ಆದ್ದರಿಂದ ಎಲ್ಲರೂ ಶೀಘ್ರೆದಲ್ಲಿ ಭಗ
ವದ್ಭಜನ ಜರಾಯಣರಾಗೋಣ. ಪರ
ಮಾತ್ಮನನ್ನು ಭಜಿಸುತ್ತಾ ವಾಣಿಗ್ರ
ಹಿತವಾಗಲಿ. ಚಿತ್ತವು ದ್ರವಿತವಾಗಲಿ,
ಮನವು ಪರಮಾತ್ಮನಲ್ಲಿ ಕಲ್ಲೀನವಾಗಲಿ.
ಸ್ವಾಭಾವಿಕವಾಗಿ ಪರಮಾತ್ಮನನ್ನು ಭಜಿ
ಸುವಂತಾಗಲಿ. ಆಗ ಮಾತ್ರ ಭಜಿಸಿದಂ
ತಾಗುವುದು. ಇಲ್ಲವಾದಲ್ಲಿ ಬರೇ ನಟನೆ
ಯೇ ಸರಿ.

"ಅನಿತ್ಯಮಸುಖಂ ಲೋಕಮಿಮಂ
ಪ್ರಾಪ್ಯ ಭಜಸ್ವಮಾಮ್" | "ಸುಖ
ಹಿತ, ಕ್ಷಣಭಂಗುರವಾದ ಈ ಮನುಷ್ಯ
ಶರೀರವಪ್ರಾಪ್ತಿಯಿಂದ ನಿರಂತರನನ್ನು
ಭಜಿಸಿರಿ."

—ಪುರುಷೋತ್ತಮ ನುಳ್ಳಿ.
ಪೆರ್ಡೂರು.

## ಲೋಕ ಸಭೆಯಲ್ಲಿ ರೈಲ್ವೆ ಆಡಳಿತದ ಕುರಿತು ಶ್ರೀ ಕೆ. ಆರ್. ಆಚಾರ್ಯರ ಭಾಷಣ

ದ. ಕ. ಜಿಲ್ಲೆಯ ದಕ್ಷಿಣ ಭಾಗ ಹಾಗೂ ಕೊಡಗು ಜಿಲ್ಲೆಯ ಲೋಕಸಭಾ ಪ್ರತಿನಿಧಿಗ
ಳಾದ ಶ್ರೀ ಕೆ. ಆರ್. ಆಚಾರ್ಯರು ಲೋ
ಕಸಭೆಯಲ್ಲಿ ರೈಲ್ವೆ ಆಡಳಿತದ ವಿಷಯ ಚರ್ಚೆ
ಯ ಕಾಲಕ್ಕೆ ತಾ. 21ರಲ್ಲು ಮಾಡಿದ ಭಾಷ
ಣದ ಸುಮ್ಮಾ ಸಾರಾಂಶ ಹೀಗಿದೆ:-

"ರೈಲ್ವೆ ಸೌಕರ್ಯವಿಲ್ಲದ ಇಡೀ ಕೊಡಗು ಪ್ರದೇಶ ಮತ್ತು ಆದೇಶ ಸೈಲು ದಕ್ಷಿಣ
ಕನ್ನಡ ಜಿಲ್ಲೆಯ ಸಾರ್ವಜನಿಕ ಅಭಿಪ್ರಾಯ
ಶ ಭಾಗದ ಪ್ರತಿನಿಧಿಕರಿಸಿದ ನನಗೆ ರೈಲ್ವೆ
ಆಡಳಿತ ಸಮಸ್ಯೆಗಿಂತ ನನ್ನ ಪ್ರಾತಿನಿಧ್ಯ ಕ್ಷೇ
ತ್ರಕ್ಕೆ ರೈಲ್ವೆ ಇಲ್ಲದಿರುವ ಕೊರತೆ ಶ್ರಕ್ಷಿಯೇ
ನವಗೆ ದೊಡ್ಡ ಸಮಸ್ಯೆಯಾಗಿದೆ. ನನ್ನ ಮತ
ದಾರ ಕ್ಷೇತ್ರದಲ್ಲಿ ರೈಲ್ವೆ ಗಾಡಿಯನ್ನು ಸಪ
ಕರ್ನಾರೆ ನೋಡದ ಸಾವಿರಾರು ಜನರಿದ್ದಾರೆ.
1906ನೆ ಇಸವಿಯಲ್ಲಿ ಆಂದರೆ ಅರ್ಧ ಶತ
ಮಾನದ ಹಿಂದೆ ದ. ಕ. ಜಿಲ್ಲೆಯಲ್ಲಿ ಸಾಧಾ
ರಣ ಆದು ಮೈಲು ರೈಲ್ವೆ ಹಾದಿಯಲಾಗಿ
ತ್ತು. ಇಂದಿನ ತನಕ ಆ ದಾರಿಯು ಮುಂದು
ವರಿಕೆಯಲ್ಲಿ. ಧಾರ್ ಸಮಿತಿಯವರು ಕೂಡಾ
ತಮ್ಮ ವರದಿಯಲ್ಲಿ ಮಡ್ಡಾರು ರಾಜ್ಯತ ತುತ್ತ
ತುದಿಯಾದ ದ. ಕ. ಜಿಲ್ಲೆಯು ಕತೆಗಣಿಸ
ಲ್ಪಟ್ಟಿರುವುದಾಗಿ ಹೇಳಿರುವುದನ್ನು ಈ ಸಂದ
ರ್ಭದಲ್ಲಿ ಜ್ಞಾಪಕಕ್ಕೆ ತರಬೇಕಾಗಿದೆ. ಈಗ
ದ. ಕ. ಜಿಲ್ಲೆಯು ಮಂಗಳೂರಿನಿಂದ ಸೇರ್ಪ
ಡೆಯಾದುದರಿಂದ ರೈಲ್ವೆ ಲೈನ್ ವಿಸ್ತರಣೆ
ಅತ್ಯಂತ ಆವಶ್ಯಕವಿರುತ್ತದೆ. ಮೈಸೂರು
ರಾಜ್ಯದ ಮುಖ್ಯಪಟ್ಟಣ ಬೆಂಗಳೂರಿಗಾಗಲೀ
ಅಥವಾ ಮೈಸೂರಿಗಾಗಲೀ ಪ್ರಯಾಣಮಾಡ
ಲು ಅತೀ ಸವಿಸರದ ಮತ್ತು ಅತ್ಯಲ್ಪ ಕಾಲ
ದಲ್ಲಿ ಸೇರಬಹುದಾದ ಮಂಗಳೂರು-ಹಾಸನ
ರೈಲ್ವೆ ಆತ್ಯಂತ ಜರೂರಾಗಿ ಆಗಬೇಕಾಗಿದೆ.
ಮಲೆನಾಡು ಅಭಿವೃದ್ಧಿಗೂ ಈ ರೈಲ್ವೆ ಲೈನು
ಆಗತ್ಯವಿದೆ ರೈಲ್ವೆ ಮಂತ್ರಿಗಳು ಈ ಕೇಳಿಕೆಗೆ
ತೀವ್ರ ಗಮನಕೊಡಬೇಕಾಗಿ ನಾನಾದೇಶ
ವಿನಂತಿಸುತ್ತಿದ್ದೇನೆ. ಈಚೆಗೆ ರೈಲ್ವೆ ಸಮಯ
ದಲ್ಲಿ ಬದಲಾವಣೆಯಾದುದರಿಂದ ಮಂಗಳೂರಿ
ನಿಂದ ಹೊರಡುವ ಮದ್ರಾಸು ಮೈಲು ಗಾ
ಡಿಯು ಬೆಳಿಗ್ಗೆ 8.15ಕ್ಕೆ ಹೊರಡುತ್ತಿರಲಿ
ಇದರಿಂದಾಗಿ ಜಿಲ್ಲೆಯ ಇತರ ಭಾಗಸ್ಥರಿಂ
ಮೈಲು ಗಾಡಿ ಹತ್ತುವವರು ಮುಂಜಿನ ದಿವ
ಸವೇ ಮಂಗಳೂರಿಗೆ ಬಂದು ಸೇರಲಿಗಳ ಅತಿ
ಕ್ಷ್ಯವನ್ನು ಇಂದು ರಾತ್ರಿ ಸಡೆಯಲೇಬೇಕಾಗು
ತ್ತದೆ. ಈ ಸ್ಥಿತಿಯನ್ನು ಮರುಸ್ಥಿಗೊಳಿಸ
ಬೇಕಾಗಿದೆ.

## ವಿದ್ಯಾರ್ಥಿ ವೇತನ

ಕರ್ನಾಟಕ ಫ್ರೀ ಸೈಟ್ ಡ್ಯಾಸ್ಕೂಲಿನ
ಸಂಚಾಲಕರಾದ ಮುಂಬಯಿಯ ಬಂಟರ
ಯಾನೆ ನಾಡವರ ಸಂಘವು ಇಲ್ಲಿಯ ಕಾ
ಲೇಜುಗಳಲ್ಲಿ ಕಲಿಯುವ ಯೂ ಕಲಿಯಲಿಚ್ಛಿ
ಸುವ ಸ್ಥಳೀಯ ಬಡ ವಿದ್ಯಾರ್ಥಿಗಳಿಗೆ ಎಂದಿ
ನಂತೆ ವಿದ್ಯಾರ್ಥಿವೇತನ ದೊರೆದಿಂದ ಸಾಲ
ಕೊಡುವುದೆಂದೂ, ಧನ ಸಹಾಯ ಪಡೆಯಲಿ
ಚ್ಛಿಸುವ ವಿದ್ಯಾರ್ಥಿಗಳು ತಾ. 5-6-1957
ರೊಳಗೆ ಅರ್ಜಿಮಾಡಬೇಕಾಗಿ ಅಪೇಕ್ಷಿಸಿರಾ
ಗಿದೆ.

Hon. General Secretary,
Bunt Alias Nadava Sangha
17, Kumta Street,
Bombay 1.


## ದಿ. ವಿಜಯಾ ಬೇಂಕ್, ಲಿಮಿಟೆಡ್, ಕಾರ್ಕಳ.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಈ ಬೇಂಕಿನಲ್ಲಿ ಅಡವಿಟ್ಟ ನಗಗಳನ್ನು ಬಿಡಿಸಿ
ಕೊಂಡು ಹೋಗದೆ ಇದ್ದುದೆಂದಿಂದಲೂ ಅವರಿಗೆ ಬಿಟ್ಟು ಬಿಡಿಸಿ ನೋಟೀಸು ಜಾರಿಯಾಗದೆ
ನಾಮಾಸುಬಂದಿರುವುದರಿಂದಲೂ ಈ ಮೂಲಕ ತಿಳಿಯಪಡಿಸುವುದೇನೆಂದರೆ-ಕ್ರಿಯುವರು
ಅಡವಿಟ್ಟ ನಗಗಳನ್ನು ತಾ 3.6.57 ನೇ ಸೋಮವಾರ ಸಾಯಂಕಾಲ 3ಕ್ಕೆ ಯಾ ಬೇಂಕಿ
ನವರಿಗೆ ಯುಕ್ತ ಕಂಡ ತಾರೀಕಿಗೆ ಮುನ್ನ ನೋಟೀಸು ಕೊಡದೇನೇ ಬಹಿರಂಗವಾಗಿ ಏಲಂ
ಮಾಡಲ್ಪಡುವುದು. ಏಲಂನಲ್ಲಿ ಹುಟ್ಟಬಂದ ವಿಷಯ ಸಾಲದ ಮೊಬಲಗಿಗೆ ಕಡಿಮೆಯಾ
ದಲ್ಲಿ ಸಂಬಂಧಪಟ್ಟವರದೇ ಆ ಜವಾಬ್ದಾರಿಯಿಂದ ಬೇಂಕಿಗೆ ಬರ ಬೇಕಾದ ವಿಷಯವನ್ನು ವಸೂಲು
ಮಾಡಲಾದೀತೆಂಬುದನ್ನು ಈ ಮೂಲಕ ತಿಳಿಸೋಣಾಗಿಯದೆ.

| ಸಾಲದ ನಂಬ್ರ | ಹೆಸರು ಮತ್ತು ವಿಳಾಸ | ತಾ. 31—8—57 ರವರೆಕ್ಕೆ ಸೊಬಲನು |
|---|---|---|
| 202/55 | ಶ್ರೀ ಸುಂದರ ಶೆಟ್ಟಿ, ಮಹಾಬಲ ಶೆಟ್ಟ ಮಗ, ಕೆರೆಮನೆ, ಕೌಡೂರು ಗ್ರಾಮ, ಸೋಪ್ಪು ಬೈಲೂರು. | SS 00 |
| 1016/55 | ಶ್ರೀ ಮೋಂಟು ಯಾನೆ ನೇಮು ಶೆಟ್ಟಿ, ರಾಮಣ್ಣ ಶೆಟ್ಟ ಅಳಿಯ, ತಳಿಯೂರಿ, ಕುಕ್ಕುಂದೂರು ಗ್ರಾಮ, ಸೋಪ್ಪು ಕುಕ್ಕುಂದೂರು. | SS 25 |
| 233/56 | ಶ್ರೀ ಧರ್ಮರಾಜ ಹೆಗ್ಡೆ, ಭೋಜಪ್ಪ ಹೆಗ್ಡೆರೆ ಅಳಿಯ, ಅಂಬಿಬ್ಬು ಶಿರಾಲು ಗ್ರಾಮ, ಸೋಪ್ಪು ಅಜೆಕಾರು. | SS 75 |

Karkala
27-5-57.

K. Gopalkrishna Shetty,
Agent.



ಕನ್ನಡದಲ್ಲಿ ಮೊದಲನೆಯದೆಂದೇ ಹೇಳಬಹುದಾದ
ಅಣು ಶಕ್ತಿಯ ಸಚಿತ್ರ ವಿವೇಚನಾ ಗ್ರಂಥ

# ಹಿರೋಶಿಮಾದಿಂದ ಜಿನೇವ

ಬರೆದವರು:

ಶ್ರೀ. ಯು. ರಾಘವೇಂದ್ರ ಆಚಾರ್ಯ, ಎಂ. ಎ., ನವದೆಹಲಿ.

ಮುನ್ನುಡಿಕಾರರು: ಶ್ರೀ. ಶಿವರಾಮ ಕಾರಂತರು.

ಪ್ರತಿಯೊಬ್ಬರೂ ಓದಲೇಬೇಕಾದ ನವೀನ ಪುಸ್ತಕ.

ಉತ್ತಮ ಕಾಗದ. ಬೆಲೆ: ರೂ. ೧—೪—೦.

ನವಯುಗ ಪ್ರೆಸ್, ಉಡುಪಿ.



## ನಾನಾ ಬಗೆಯ ಪುಸ್ತಕಗಳು

| | | |
|---|---|---|
| 1 | ಸ್ವತಂತ್ರ ಜೀವನೋಪಾಯ | 0 4 |
| 2 | ಸುರಪಿ ಪಿಶಾಚಿ | 0 10 |
| 3 | ನಾವ ಕತೆಗಳು | 0 4 |
| 4 | ಕುಸಲವ | 0 6 |
| 5 | ಕಾನ್ಸ ಸಾಮ್ರಾಜ್ಞಿ | 1 6 |
| 6 | ಮಧುಪರ್ಕ | 3 0 |
| 7 | ಮುಂಬಿನ ದೇವರು | 0 4 |
| 8 | ಸ್ವಭಾವಿಕೆ ಯೋರು | 1 0 |
| 9 | ತೆಂಪ್ತಿ ಗವನಾದರೆ | 0 4 |
| 10 | ಪುರುಷ ವಧು | 0 4 |
| 11 | ಸನ್ಯಾಸಿಯ ಸೋಗಿನಲ್ಲಿ | 0 12 |
| 12 | ನಂದಾದೀಪ | 0 14 |
| 13 | ವೀಶಭಕ್ತ | 1 4 |
| 14 | ಪ್ರೇಮ ವಿಜಯ | 1 0 |
| 15 | ರಂಗಭೂಮಿ | 0 10 |
| 16 | ಸೇವಾಪಥೆ | 0 8 |
| 17 | ನಾರೀ ಹೃದಯ | 1 8 |
| 18 | ಭಾರತೀಯ ಕತೆಗಳು | 1 12 |
| 19 | ಪ್ರಕಾಶ | 2 8 |
| 20 | ಮೂರು ಪ್ರಬಸನಗಳು | 1 4 |
| 21 | ನನೆ ನೋಟಗಳು | 1 4 |
| 22 | ಅನ್ನವೇನು ಮತ್ತಿತರ ಕತೆಗಳು | 1 0 |
| 23 | ಭಾರತವಲ್ಲಿ ಜಾತಿಭೇದ | 1 0 |
| 24 | ನಿಷ್ಣುವಿನ ದಶಾ ಪಂಥಗಳು ಆರ್ಥಾತ್ ದಶಾವತಾರಗಳು | 0 12 |
| 25 | ಆಕಾಶ ಗಂಗೆ | 1 12 |
| 26 | ಸ್ವತಂತ್ರ್ಯೋತ್ತರ ಸಾನರೆಕತರು | 1 4 |
| 27 | ಜೀವನ ಸಂಗ್ರಾಮ | 1 8 |
| 28 | ಕದಂಬ | 1 4 |
| 29 | ಕವಿತಾಕಾಮಿನಿ | 2 0 |
| 30 | ಸ್ವರಾಜ್ಯ ವಿಜಯ | 0 8 |
| 31 | ಸಕ್ಕ ಸಾಗರ | 0 12 |
| 32 | ಜಮಿನ್ದಾರೆ | 1 8 |
| 33 | ಬಾಳಿನ ಬೆಡಗು | 1 0 |
| 34 | ಲೋಸಮುದ್ರೆ | 1 0 |
| 35 | ಚಿಗುರು | 0 10 |
| 36 | ನನ್ನ ಕತೆಗಳು | 0 10 |
| 37 | ನಗ್ಡೆಯೊ ನಗಬಹುದು | 6 10 |
| 38 | ಧರ್ಮ ಸಂಕಟ | 0 6 |

ವಿವರಣಾ ಕೆಟಲಾಗಿಗೆಬರೆಯಿರಿ
ನವಭಾರತ ಬುಕ್ ಡಿಪೊ, ಉಡುಪಿ.
ಅಥವಾ ಕಿರಿಯತ ಪ್ರಪಂಚ, ಉಡುಪಿ.

## ಭಾರತದ ಕಲಾನಿಧಿ

# ಮದರಾಸಿನ ಪ್ರಾಚೀನತೆಮ ವಸ್ತುಸಂಗ್ರಹಾಲಯವು ಸರ್ವಶ್ರೇಷ್ಠವಾಗಿದೆ

ಭಾರತದಲ್ಲಿ ಎಲ್ಲರಿಗಿಂತ ಮೊದಲು ಪ್ರಾಂತೀಯ ವಸ್ತು ಸಂಗ್ರಹಾಲಯವನ್ನು ಸ್ಥಾಪಿಸಿದ ಕೀರ್ತಿ ಮದರಾಸಿಗೆ ಸಲ್ಲುತ್ತದೆ. ಆರಂಭದಲ್ಲಿ ಈ ವಸ್ತು ಸಂಗ್ರಹಾಲಯವು ಪ್ರಾಕೃತಿಕ ಸಾಧನೆ ವನಸ್ಪತಿ, ಜೀವಜಂತು ಮತ್ತು ಮನುಷ್ಯ ಜಾತಿ ಸಂಬಂಧವಾದ ನಮೂದರಿ ವಸ್ತುಗಳನ್ನು ಸಂಗ್ರಹಿಸಿಡುತ್ತಿತ್ತು. ಲೋಹ, ಕಲ್ಲಿದ್ದಲು, ನಮ್ಮ ಕಟ್ಟಡ ನಿರ್ಮಾಣ ಶಿಲೆಗಳು. ಇವುಗಳಿಗೆ ಸಂಬಂಧಪಟ್ಟ ವರದಿಯನ್ನು, ಆರಂಭದಲ್ಲಿ ಮದರಾಸ್ ವಸ್ತು. ಸಂಗ್ರಹಾಲಯವೇ ಪ್ರಕಟಿಸುತ್ತಿತ್ತು. ಮರಗಿಡಗಳನ್ನು ಬೆಳೆಸುವ ಸಂಬಂಧವಾಗಿಯೂ ಇಲ್ಲಿ ಪ್ರಯೋಗಗಳನ್ನು ನಡೆಸಲಾಗುತ್ತಿತ್ತು. ಆದರ ಪರಿಣಾಮವಾಗಿ, ಮದರಾಸು ವಸ್ತು ಸಂಗ್ರಹಾಲಯದ ಆವರಣದಲ್ಲಿ ಅಪರೂಪ ವೃಕ್ಷಗಳು ಇಂದಿಗೂ ಇರುವುವು.

ಮದರಾಸ್ ವಸ್ತುಸಂಗ್ರಹಾಲಯವು ಈಗ, ವನಸ್ಪತಿ ಹಾಗೂ ಆರ್ಥಿಕ ಫಸಲು. ಭೂಗರ್ಭಶಾಸ್ತ್ರ, ಪ್ರಾಣಿಶಾಸ್ತ್ರ, ಪ್ರಾಕ್ತನ ವಸ್ತು ಶಿಕ್ಷಣ ಸಂಬಂಧವಾದ ಶಿಲೆ ಮತ್ತು ಕಸಬುಗಳು, ಶಾಸನಗಳ ಮತ್ತು ಪ್ರಾಗೈತಿಹಾಸಿಕ ವಸ್ತುಗಳನ್ನು ಸಂಗ್ರಹಿಸಿದೆ.

ಮದರಾಸ್ ವಸ್ತು ಸಂಗ್ರಹಾಲಯದ ಪ್ರಾಕ್ತನ ವಸ್ತು ವಿಭಾಗವು ದೇಶದಲ್ಲಿ ಸರ್ವೋತ್ತಮ ವಿಭಾಗಗಳಲ್ಲಿ ಒಂದಾಗಿದೆ. ಅಲ್ಲಿ ಪಲ್ಲವ, ಚೋಳ, ಪಾಂಡ್ಯ ವಿಜಯನಗರ, ಚಾಲುಕ್ಯ, ನೊಳಂಬ, ಹೊಯಿಸಳ, ಗಾಂಧಾರ ಗುಪ್ತ, ಪಾಲ ಮತ್ತು ಸೇನಾಗಳ ಕಾಲದ ತೆಲುಗು, ಮತ್ತು ನ್ನಡ ಮತ್ತು ಉತ್ತರ ಭಾರತೀಯ ಕಮಂದಿರಗಳು, ಮೂರ್ತಿಕಲೆ ಹಾಗೂ ವಸ್ತು ಶಿಲ್ಪದ ಮಾದರಿಗಳನ್ನು ಕಾಲ ಕ್ರಮಕ್ಕನುಗುಣವಾಗಿ ಇಡಲಾಗಿದೆ.

ಕೃಷ್ಣಾನದಿ ಕಣಿವೆಯಲ್ಲಿನ ಸ್ತೂಪಗಳು ಬೌದ್ಧ ಮೂರ್ತಿ ಕಲೆಯ ಸರ್ವೋತ್ತಮ ಮಾದರಿಗಳಿನಿಸಿವೆ. ಅವುಗಳನ್ನು ಗುಂಟೂರು ಜಿಲ್ಲೆಯ ಅಮರಾವತಿಯಿಂದ ಪಡೆದುಕೊಳ್ಳಲಾಗಿದೆ. ಆಮೃತ ಶಿಲೆಯಲ್ಲಿ ಬುದ್ಧನ ಜೀವನದ ವಿವಿಧ ದೃಶ್ಯಗಳನ್ನೂ ಜಾತಕ ಕತೆಗಳನ್ನೂ ಅಂಕಿತಗೊಳಿಸಲಾಗಿದೆ. ಕಾಡಾನೆಯನ್ನು ಹಿಡಿದು ಪಳಗಿಸುವ ದೃಶ್ಯ, ಭಗವಾನ್ ಬುದ್ಧನ ಅನಂತೀಪಗಳ ಪಂಚಕೆಯ ದೃಶ್ಯ, ರಾಜ ಸಭಾದೃಶ್ಯ ಇತ್ಯಾದಿಗಳು ಅವರಲ್ಲಿವೆ.

ಈ ವಿಶ್ವ ವಿಖ್ಯಾತ ಶಿಲ್ಪಗಳಲ್ಲದೆ, ಭಟ್ಟಿಪ್ರೋಲಿನಲ್ಲಿ ದೊರೆತ ಅತ್ಯುತ್ತಮ ಚಿನ್ನಾಭರಣಗಳು ಮತ್ತು ಕರಂಡಕ (ಕ್ಯಾಸ್ಕೆಟ್)ಗಳೂ ಅಮರಾವತಿ ಮತ್ತು ನಾಗಾರ್ಜುನ ಕೊಂಡಗಳಲ್ಲಿ ದೊರೆತಿವೆ. ಕಂಚಿನ ಪ್ರತಿಮೆಗಳೂ ಇಲ್ಲಿ ಇರುವುವು. ಸಾಂಚಿ ಮತ್ತು ಅಮರಾವತಿಯ ಸ್ತೂಪಗಳ ಸೂಕ್ಷ್ಮ ಪ್ರತಿಕೃತಿಗಳು ಈ ಯುಗದ ಸ್ತೂಪಗಳ ಭವ್ಯತೆಯನ್ನು ಸೂಚಿಸುತ್ತವೆ. ಹಲವು ಶಿಲಾ ಲೇಖನಗಳು ಭಾರತದಲ್ಲಿನ ಲಿಪಿಗಳ ವಿಕಾಸ ಕ್ರಮವನ್ನು ನಿರೂಪಿಸುತ್ತವೆ.

ಈ ಸಂಗ್ರಹಾಲಯದಲ್ಲಿ, ಮೌರ್ಯಯುಗದ ಶತಮಾನ ಹಾಗೂ ಪುರಾಣಗಳಿಂದ ಹಿಡಿದು ಬ್ರಿಟಿಷ್ ಈಸ್ಟಿಂಡಿಯಾ ಕಂಪೆನಿಯ ವರೆವಿಗೂ ದೇಶಾದ್ಯಂತ ಪ್ರಚಲಿತವಾಗಿರುವ ನಾಣ್ಯಗಳ ಸಂಗ್ರಹವಿರುವುದು. ದಕ್ಷಿಣ ಭಾರತದಲ್ಲಿ ಭೂಗರ್ಭದಲ್ಲಿ ದೊರೆತ ರೋಮನ್ ಮತ್ತು ವೆನಿಷನ್ ನಾಣ್ಯಗಳು, ಕ್ರಿಸ್ತ ಶಕದ ಆರಂಭದ ಶತಮಾನಗಳಲ್ಲಿ ಭಾರತ ಹಾಗೂ ಮೆಡಿಟರೇನಿಯನ್ ರಾಜ್ಯಗಳ ನಡುವೆ ಇದ್ದ ವಾಣಿಜ್ಯ ಸಂಪರ್ಕವನ್ನು ತಿಳಿಸುತ್ತದೆ. ದಕ್ಷಿಣ ಭಾರತದಲ್ಲಿ ಅರಿಕಮೇಡು, ಭಾರತದ ರೋಮನ್ ವಾಣಿಜ್ಯ ಕೇಂದ್ರವಾಗಿತ್ತು. ಇಲ್ಲಿ ಮುಖ್ಯವಾಗಿ ಬಟ್ಟೆ ಮತ್ತು ಅಭರಣಗಳವ್ಯಾಪಾರವಾಗುತ್ತಿತ್ತು. ಆ ಕಾಲದ ಅತಿ ಮುಖ್ಯವಾದ ಸಂಗ್ರಹಗಳು ಇಲ್ಲಿರುವುವು. ಈ ಸಂಗ್ರಹಾಲಯದಲ್ಲಿ ೪೦೦ ತಾಮ್ರಪಟಗಳಿವೆ. ಅವುಗಳಿಂದ ದಕ್ಷಿಣ ಭಾರತದಹಿಂದೂ ಯುಗದ ಇತಿಹಾಸವು ದೊರೆಯುತ್ತದೆ. ಈಸ್ಟಿಂಡಿಯಾ ಕಂಪೆನಿಯ ಕಾಲದ ಶಸ್ತ್ರಾಸ್ತ್ರಗಳು ಮತ್ತು ಕಾಗದ ಪತ್ರಗಳು, ಬ್ರಿಟಿಷರ ಕಾಲದ ಇತಿಹಾಸವನ್ನು ನಿರೂಪಿಸುತ್ತವೆ.

ಸಂಗ್ರಹಾಲಯದ ಪ್ರಾಕೃತಿಕ ಇತಿಹಾಸ ವಿಭಾಗದಲ್ಲಿ, ದಕ್ಷಿಣ ಭಾರತದಲ್ಲಿ ಜಲಚರಗಳು ಹಾಗೂ ಭೇಚರಗಳ ಪೂರ್ಣ ಸಂಗ್ರಹವಿರುವುದು, ಅಪರೂಪವಾದ ಹವಳಗಳು, ಕೀಟಗಳು, ಮತ್ಸ್ಯ, ಸರ್ಪ ಹಾಗೂ ಪಶುಪಕ್ಷಿಗಳ ಸಂಗ್ರಹವಿರುವುದು. ನಾಗರ ಹಾವು, ಮತ್ತು ಆಮೆ ಇತ್ಯಾದಿಗಳು ತಮ್ಮ ನೈಸರ್ಗಿಕ ಸ್ಥಳಗಳಲ್ಲಿರುವುದನ್ನು ಈ ವಿಭಾಗದಲ್ಲಿರುವ ಚಿತ್ರಗಳು ತೋರಿಸುತ್ತವೆ. ವಿದೇಶಿ ಪಶುಪಕ್ಷಿಗಳ ಒಂದು ವಿಭಾಗವೂ ಇಲ್ಲಿರುವುದು

ಈ ಸಂಗ್ರಹಾಲಯದಲ್ಲಿ ೬೦ ಅಡಿ ಎತ್ತರದ ಅಡಿ ಪಂಜರವಿರುವುದು. ನೋಡಬೇಕಾದ ವಸ್ತುಗಳೆಲ್ಲವಿರುವುದು.

ವನಸ್ಪತಿ ವಿಭಾಗಗಳಲ್ಲಿ ದಕ್ಷಿಣ ಭಾರತದ ವಿವಿಧ ವನಸ್ಪತಿಗಳನ್ನು ಇಡಲಾಗಿದೆ. ಅವುಗಳಲ್ಲಿ ದಿನ್ನುಗಳು, ನಾರು, ಅರಗು, ಮರದ ಸೊಂಡು, ಎಣ್ಣೆಯ ಬೀಜಗಳು ಹಾಗೂ ಔಷಧಿ ಹಾಗೂ ಕೈಗಾರಿಕೆಗಳಲ್ಲಿ ಉಪಯೋಗಿಸಲಾಗುವ ಕಚ್ಚಾ ಸಾಮಗ್ರಿಗಳನ್ನು ಇಡಲಾಗಿದೆ.

ಭೂಗರ್ಭಶಾಸ್ತ್ರ ವಿಭಾಗದಲ್ಲಿ ಅಭ್ರಕ, ಮ್ಯಾಂಗನೀಸ್, ಇತ್ಯಾದಿ ಖನಿಜಗಳಿರುವುವು. ಅವುಗಳಲ್ಲಿ ಗಾಜು, ರತ್ನ, ಕಟ್ಟಡಗಳಿಗೆ ಉಪಯೋಗಿಸುವ ಕಲ್ಲು ಮತ್ತು ಲಿಗ್ನೈಟ್‌ಗಳು ಇರುವುವು. ಒಂದು ವಿಭಾಗದಲ್ಲಿ ಕ್ಷಿಕರಣದ ಮೂಲಕ ಖನಿಜಗಳು ಹೇಗೆ ಕಾಣುವುದೆಂಬುದನ್ನು ತಿಳಿಸಲಾಗಿದೆ

ಈ ಸಂಗ್ರಹಾಲಯದಲ್ಲಿರುವ ಪ್ರಾಗೈತಿಹಾಸ ವಿಭಾಗದಲ್ಲಿ, ಒಂದು ಲಕ್ಷ ವರ್ಷಗಳ ಹಿಂದೆ ಮನುಷ್ಯರ ಜೀವನವನ್ನು ಸಾಚಿಸುವ ಶಿಲೆ, ಕಂಚು ಮತ್ತು ಕಬ್ಬಿಣದ ಅವಶೇಷಗಳನ್ನಿಡಲಾಗಿದೆ. ವಿಶ್ವವಿಖ್ಯಾತ ಶಿಲಾಯುಗ ಹಾಗೂ ನವಶಿಲಾಯುಗದ ಆಯುಧಗಳು, ಪುರಾತನ ಕಾಲದ ವ್ಯಾಪಾರಿಗಳು ಅಭರಣಗಳು, ರತ್ನಗಳು, ಯುದ್ಧದಲ್ಲಿ ಉಪಯೋಗಿಸುವ ಶಸ್ತ್ರಾಸ್ತ್ರಗಳು, ಬೇಸಾಯ ಉಪಕರಣಗಳು ಇತ್ಯಾದಿಗಳ ಅತ್ಯುತ್ತಮ ಸಂಗ್ರಹವಿರುವುದು.

ಈ ಸಂಗ್ರಹಾಲಯದಲ್ಲಿರುವ ಮಾನವ ವಿಜ್ಞಾನ ಸಂಬಂಧ ವಿಭಾಗದಲ್ಲಿ ದಕ್ಷಿಣ ಭಾರತದ ಕೆಲವು ಆದಿಮ ಜಾತಿಯವರ ಜೀವನದ ಪರಿಚಯವಾಗುವುದು. ಇವರಲ್ಲಿ ಎಮ್ಮೆ ಕೋಣವನ್ನು ಪೂಜಿಸುವ ತೋಡರು, ಕೊಚ್ಚಿನ್ನಿನ ಕಾತರು. ಆಂಧ್ರದ ಚೆಂಚುಗಳು, ಖೌಂಡರು, ಕಬರರು, ಗೊಸಟೆರು, ತೆಲುಗಣದ ಲಂಬಾಣಿಗಳು, ಜಾತಿಯವರ ನೇಸ ಭೂಷಣಗಳನ್ನೂ, ಆಯುಧ ಸಾಮಗ್ರಿಗಳನ್ನೂ ಬರವಣಿಗೆ ಸಾಮಗ್ರಿಗಳನ್ನೂ ಸಂಗೀತ ಹಾಗೂ ಪೂಜಾ ಉಪಕರಣಗಳನ್ನೂ ಇಲ್ಲಿ ನೋಡಬಹುದು.

ಭಾರತದ ಪ್ರಧಾನ ಮಂತ್ರಿಗಳು ದೆಹಲಿಗರಲ್ಲಿ ವಸ್ತು ಸಂಗ್ರಹಾಲಯಗಳ ಶತಮಾನೋತ್ಸವ ಸಂದರ್ಭದಲ್ಲಿ ರಾಷ್ಟ್ರೀಯ ಕಲಾ ವಿಭಾಗವನ್ನು ಆರಂಭಿಸಿದರು. ಅದರಲ್ಲಿ ದಕ್ಷಿಣ ಭಾರತದ ಹಲವು ಅತ್ಯಪೂರ್ವ ತೈಪ್ಪ ಕಂಚಿನ ಪ್ರತಿಕೃತಿಗಳನ್ನು ಪ್ರದರ್ಶಿಸಲಾಗಿದೆ. ಅವುಗಳಲ್ಲಿ ಮುಖ್ಯವಾಗಿ ತಿರುವಲಂಗುಡಿನ ಪ್ರಸಿದ್ಧ ನಟರಾಜ ಶಿವ ಮತ್ತು ಶ್ರೀರಾಮ ಪಂಚಾಯತನದ ಮೂರ್ತಿಯ ಮೂರ್ತಿಗಳು ಇರುವುವು. ರಜಪೂತ, ಮೊಘಲ್, ರವಿವರ್ಮ ಆಂಧ್ರ ಮತ್ತು ತಂಜಾವೂರು ರೀತಿಯ ಕಲಾ ವರ್ಣಚಿತ್ರಗಳು ಅಲ್ಲಿರುವುವು. ಜೊತೆಗೆ ಸಮಕಾಲೀನ ಕಲಾವಿದರಾದ ಶ್ರೀ ಡಿ. ವಿ. ರಾಯ್ ಚೌಧುರಿ ಮುಂತಾದವರ ಕಲಾಕೃತಿಗಳೂ ಅಲ್ಲಿರುವುವು. ದಕ್ಷಿಣ ಭಾರತವು ಪುರಾತನ ಕೆತ್ತನೆಯ ಕೆಲಸ, ದಂತದ ಕೆಲಸ ಹಿತ್ತಾಳೆ ದೀಪ ಮತ್ತು ಪಾತ್ರೆಗಳ ಕೆಲಸ, ಬಟ್ಟೆ ನೇಯ್ಗೆ ಇತ್ಯಾದಿಗಳಲ್ಲಿ ಹೆಸರುವಾಸಿಯಾಗಿದೆ. ಅವುಗಳಲ್ಲಿ ಮುಖ್ಯವಾದುದನ್ನು ಈ ವಿಭಾಗದಲ್ಲಿ ಪ್ರದರ್ಶಿಸಲಾಗಿದೆ.

ಈ ವಸ್ತು ಸಂಗ್ರಹಾಲಯದ ಸಂಶೋಧನ ಪ್ರಕಟಣೆಗಳು ಅಂತರರಾಷ್ಟ್ರೀಯ ವಿನಿಮಯದ ಪ್ರಾರಂಭದಲ್ಲಿದ್ದು ಹಲವು ವಿದೇಶ ರಾಷ್ಟ್ರಗಳೊಂದಿಗೆ ವಿಚಾರ ವಿನಿಮಯಕ್ಕೆ ಅರ್ಹವಾಗಿರುತ್ತವೆ. ವಾಸ್ತು ಶಿಲ್ಪ, ಲೋಹದ ಪ್ರತಿಮೆ, ನೃತ್ಯ, ಸಂಗೀತ, ಉಪಕರಣಗಳ ಇತ್ಯಾದಿಗಳ ಮೇಲೆ ಮದರಾಸ್ ವಸ್ತು ಸಂಗ್ರಹಾಲಯದವರು ಹೊರಡಿಸಿರುವ ಪ್ರಕಟಣೆಗಳು ಜನಪ್ರಿಯವಾಗಿವೆ. ಆರು ಪ್ರಕಟಿಸಿರುವ ಪ್ರಾಕೃತಿಕ ಇತಿಹಾಸ ಹಾಗೂ ಮಾನವ ವಿಜ್ಞಾನ ಶಾಸ್ತ್ರದ ಪ್ರಕಟಣೆಗಳು, ವಿದ್ಯಾರ್ಥಿಗಳು ಮತ್ತು ವಿದ್ವಾಂಸರಿಗೆ ಅಧ್ಯಯನ ಗ್ರಂಥಗಳಾಗಿವೆ.

---


ಒಂದು ಹೊಸ ಮಹಾ ಕಾದಂಬರಿ

**ನಡುಹಗಲಿನ ಕಗ್ಗತ್ತಲೆ**

ಸಿಲ್ಕ್ ಪುಟಗಳು ಬೆಲೆ 2·50 ರೂಪಾಯಿ

● ಯುರೋಪಿನಲ್ಲಿ ಈಗ ನಲ್ವತ್ತು ವರ್ಷಗಳ ಹಿಂದೆ ನಡೆದ ಇಡೀ ಪ್ರಪಂಚವನ್ನೇ ತಲ್ಲಣಗೊಳಿಸುತ್ತಿರುವ ಒಂದು ರಾಜಕೀಯ ಪದ್ಧತಿಯಿಂದ ಮನುಷ್ಯನ ಆತ್ಮವು ಪತನವಾಗುತ್ತಿರುವ ದುರಂತದ ಒಂದು ಮಾರ್ಮಿಕ ಕಾದಂಬರಿ.

● ರಷಿಯದ ರಕ್ತಮಯ ಕ್ರಾಂತಿಯು ವ್ಯಕ್ತಿಯ ಜೀವ ಮತ್ತು ನೈತ್ತಿರನ್ನು ನಿರ್ವಾಪ್ಪಿಣ್ಯವಾಗಿ ಹೀರುವ ಭೀಕರ ಚಿತ್ರಣ.

● ಇದರಲ್ಲಿ ಪ್ರಚಲಿತ ಪ್ರಪಂಚದ ರಾಜನೀತಿ, ಇತಿಹಾಸ, ಮತ್ತು ಅಂತಾರಾಷ್ಟ್ರೀಯ ರೀತಿ ನೀತಿಯ ಒಳನೋಟ ದೊರೆಯುತ್ತದೆ.

● ಪ್ರಖ್ಯಾತ ಲೇಖಕ ಆರ್ಥರ್ ಕೊಸ್ಲರ್ ಅವರ ಜರ್ಮನ್ ಕಾದಂಬರಿಯ ಮನೋಜ್ಞ ಕನ್ನಡವನ್ನು ಅನುವಾದಿಸಿದವರು **ಕು. ಶಿ. ಹರಿದಾಸ ಭಟ್ಟರು.**

ಪ್ರಕಾಶಕರು:

**ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ.**

(ಪ್ರತಿಗಳು ನವಭಾರತ ಪುಸ್ತಕ ಭಂಡಾರ, ಉಡುಪಿ, ಇಲ್ಲಿಯೂ ದೊರೆಯುತ್ತವೆ)



**ಸೆಕೆಂಡರಿ ಶಾಲೆಗಳು**

ತಮ್ಮ ಉಪಯೋಗಾರ್ಥವಾಗಿ 'ನವಯುಗ' ವಾರಪತ್ರಿಕೆಯನ್ನು ತರಿಸಿಕೊಳ್ಳಬಹುದೆಂದು Roc. No. 466-N/50 ತಾ. 12-12-50ನೇ ಪ್ರೊಸಿಡಿಂಗ್ಸಿನಂತೆ ಮದ್ರಾಸು ಸರಕಾರದ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ನವರು ಮಂಜೂರು ಮಾಡಿದ್ದಾರೆ.

ಈ ವರೆಗೆ ಚಂದಾದಾರರಾಗಿದ್ದ ಯಾವತ್ತೂ ಸೆಕೆಂಡರಿಶಾಲೆಗಳವರು 'ನವಯುಗ'ಕ್ಕೆ ಚಂದಾದಾರರಾಗಿ ತರಿಸಿಕೊಂಡು ಪ್ರೋತ್ಸಾಹಿಸುವಂತೆ ಈಮೂಲಕ ವಿನಂತಿಸಿಕೊಳ್ಳಲಾಗಿದೆ.

**ಮೆನೇಜರ್.**




# ಪಾವನ ಜೀವನ

(೨ನೇ ಪುಟದಿಂದ)

ಚಲ್ಲಿ ಶೋಷಣ, ದಮನ, ಆಶಾಂತಿ–ಅರಾಜಕತೆಗಳ ಒಂದು ಭತ್ರ ಸಾಮ್ರಾಜ್ಯವು ಮನೆಮಾಡಿತ್ತು. ದರಿದ್ರನಾರಾಯಣರ ಈ ದೀನ-ಹೀನ ಪರಿಸ್ಥಿತಿಯನ್ನು ನೋಡಿ, ಹೃದಯವು ಕರುಣಾಪೂರ್ಣವಾಯಿತು. ಚಲ್ಲಿನ ವಾಸ್ತವಿಕತೆಯನ್ನು ಅವರ ಈ ಹೇಳಿಕೆಯಿಂದ ತಿಳಿಯಬಹುದು. "ಅಹಿಂಸೆಯಲ್ಲಿರುವ ನನ್ನ ಆಚಲ ಶ್ರದ್ಧೆಯಿಂದಾಗಿಯೇ ನಾನು ಚಲ್ಲಿ ಕಾರ್ಯಮಾಡುತ್ತಾ ಇದ್ದೆ. ಇಲ್ಲವಾದರೆ, ಕಮ್ಯೂನಿಷ್ಟರಲ್ಲಿ ಸೇರಿಕೊಂಡು ಬಿಡುತ್ತಿದ್ದೆ— ಅಲ್ಲಿನ ಸ್ಥಿತಿ ಅಂತಹುದು."

ಇಷ್ಟರಲ್ಲಿಯೇ ವಿನೋಬಾ ಸಂಕುಪಾಗಲಿಲ್ಲ. ಅವರು ಶೋಷಕರಿಗೆ ಉಪದೇಶವೀಯುತ್ತಾ ಘೋಷಿಸಿದರು: ನಾವು ನಮ್ಮ ದೇಶದಲ್ಲಿ ರಕ್ತ ಪಾತವಾಗಬಾರದೆಂದು ಬಯಸುತ್ತೇವೆ. ಶ್ರೀಮಂತ-ಬಡವರ ಜಗಳಗಳು ನಡೆಯಬಾರದು....ಬಡ ಜನರನ್ನು ಜೀವನದುರ್ಗದಿಂದಿಳಿಸುವ ಪ್ರಯತ್ನವನ್ನು ಮಾಡಬೇಡಿರಿ. ಆದರೆ, ಈ ಸಂತೋಷಪ್ರಿಯ ಜನತೆಯನ್ನು ಉರುಳಿಸುವ ಪ್ರಯತ್ನವನ್ನು ಮಾಡಿದಿರಾದರೆ, ಅವರು ನಿಮ್ಮನ್ನು ಜೀಡನಂತೆ ಕುಕ್ಕಿ ಕುಕ್ಕಿ ತಿನ್ನುತ್ತಾರೆ."

ವಾಸ್ತವವಾಗಿ ಇದು ವಿನೋಬಾರವರ ಮಾತಾಗಿರಲಿಲ್ಲ. ಅದು ಯುಗದ ಪಲ್ಲವಿಯಾಗಿತ್ತು. ಸಮಯದ ಉಸಿರಾಗಿತ್ತು. ಯಾರು ತಾನೇ ಅದನ್ನು ಮೀರಿ ನಡೆಯಬಹುದು?

"ಎಲ್ಲ ಭೂಮಿಯೂ ಪರಮಾತ್ಮನದು"- ವಿನೋಬಾರವರ ಈ ನುಡಿಮುತ್ತು ಕನ್ಯಾ ಕ.ಮಾರಿಯಿಂದ ಹಿಮಾಲಯದ ವರೆಗೆ ಪ್ರತಿಧ್ವನಿತವಾಯಿತು. ತೆಲಂಗಾಣದ ಪುಟ್ಟ ಪಲ್ಲಿಯಿಂದಲೇ ಭೂಮಿದಾನ ಭಾಗೀರಥಿಯ ಅವ್ಯಾಹತ ಧಾರೆಯು ಪ್ರಥವಹಿಸುವುದಕ್ಕೆ ಮೊದಲಾಯಿತು. ಏರೆದೇ ತಿಂಗಳುಗಳೊಳಗಾಗಿ ಹನ್ನೆರಡು ಸಾವಿರ ಎಕ್ರೆಗಳಷ್ಟು ಭೂಮಿಯು ಸಂಗ್ರಹಿತವಾಯಿತು.

ಅಂದಿನಿಂದ ವಿನೋಬಾರವರ "ಭೂಮಿದಾನ ಯಾತ್ರೆ"ಯು ಪ್ರಾರಂಭವಾಯಿತು. ದೀನ ದಲಿತರ ದೇವತೆಯಾಗಿ ಮನೆ ಮನೆಯನ್ನು ಬಾಗಿಲು ಬಾಗಿಲನ್ನು ಪ್ರವೇಶಿಸಿ ಕ್ರಾಂತಿ ಭಾನೂದಯವಾಗುವುದನ್ನು ತಿಳಿಸಿ, ಎಚ್ಚರಾಗುವಂತೆ ಕೇಳಿಕೊಂಡು ಮುಂದೆ ನಡೆದರು.

"ಇದು ದಾನವಲ್ಲ; ದಾಕ್ಷಿಣ್ಯ ಇಲ್ಲವೇ ಉಪಕಾರವಲ್ಲ: ಇದು ನನ್ನ ಹಕ್ಕು. ಆದುದರಿಂದ ನನಗೆ ಕೊಡಿರಿ" ಎಂದು ಹೇಳುತ್ತಾ ತನ್ನ ಐದನೆ ಒಂದಂಶದ ಅಧಿಕಾರವನ್ನು ಎತ್ತಿಕೊಂಡು ಭಾರತದ ಪ್ರತ್ಯೇಕ ಗೃಹವನ್ನೂ ಹೊಗುತಿದ್ದಾರೆ. ಈ ಮಹಾ ವ್ರತಕ್ಕಾಗಿ ಅವರು ಜಪ – ತಪ; ನಿಯಮ-ಧರ್ಮಗಳನ್ನು ಮನ್ನಿಸಿದ್ದಾರೆ. ಇದನ್ನವರು 'ಪ್ರಜಾಸೂಯ ಯಜ್ಞ' ಎಂದು ಹೇಳುತ್ತಾರೆ. ಇದನ್ನು "ಧರ್ಮಪರಿವರ್ತನೆ" ಎಂಬ ನಾಮಧೇಯದಿಂದ ಕರೆಯುತ್ತಾರೆ. ಇದನ್ನೇ ಅವರು ಶ್ರೀಕ ಕೂಲಿಗಾರರ ರಾಜ್ಯವೆಂದು ಅಂದರು. ನಿಶ್ಚಯವಾಗಿಯೂ ಅದೇ ಬಾಪೂವಿನ "ಸ್ವಪ್ನ ಭಾರತ" ವಾಗಿದೆ.

ಈಗ 'ಭೂದಾನ ಭಾಗೀರಥಿ'ಯಿಂದ ಕೆಲವು ಕವಲುಗಳು ಹರಿದಿವೆ. ಸಂಪತ್ತು ದಾನ, ಶ್ರಮದಾನ, ಸರ್ವಸ್ವದಾನ, ಜೀವನದಾನ, ಗ್ರಾಮದಾನವೊಲವಾದ ಅನೇಕ ಶಾಖೆಗಳು ಉದ್ಭವಿಸಿಹರಡಿಕೊಂಡಿರುವುವು. 'ಭೂಮಿ'ಯು ಪರಮಾತ್ಮನ ಕೊಡುಗೆ ಎಂದು ತಿಳಿದಂತೆಯೇ ಐಶ್ವರ್ಯವೂ ಆತನದೇ ಎನ್ನುತ್ತಾರೆ ವಿನೋಬಾಜೀ. 'ಲಕ್ಷ್ಮೀಯು ಸಮಾಜರೂಪಿ ನಾರಾಯಣನಿಗೇನೇ ಸೇರಿದವಳು. ನಾವವನಾರಾಯಣನ ಸೇವಕರು. ಹಾಗಿರುವಾಗ, ಲಕ್ಷ್ಮೀಯ ಮೇಲೆ ನಮಗೆಲ್ಲಿಯ ಅಧಿಕಾರ? ಎಂದು ಸ್ಪಾರ್ಶವಾಗಿ ವಿನೋಬಾಜೀ ತನ್ನ ಅಭಿಪ್ರಾಯವನ್ನು ಸಮರ್ಥಿಸಿಕೊಳ್ಳುತ್ತಾರೆ. ಈ ಕಥನವು ಅತ್ಯಂತ ಪುಹಲ್ಪ ಪೂರ್ಣವಾಗಿದ್ದು ಸಾರ್ಥಕವೆನಿಸಿಕೊಂಡಿದೆ.

ವಿನೋಬಾರವರು ವರ್ತಮಾನಕಾಲದ ವಿಶ್ವದ ಮಹತ್ತಮ ಕ್ರಾಂತಿಯ ಪ್ರವರ್ತಕರು. ಅವರು ಸ್ವಯಂ ಮಹಾತ್ಮರು. ಅವರ ಜೀವನಾದರ್ಶವು ಸರ್ವರಿಗೂ ಅನುಕರಣೀಯವಾಗಿದೆ. ಅವರನ್ನು ಕಾಣುವಾಗ, ಪ್ರಾಚೀನ ಋಷಿ-ಮುನಿಗಳ ಸ್ಮೃತಿಯು ಬರುವುದು. ಬಡವರ ದೇವತೆಯೇ ಆವರೆಂದರೂ ತಪ್ಪಿಲ್ಲ. ಆದರೆ, ವಿನೋಬಾರವರ ಉಪಾಸ್ಯ ದೇವತೆಯು ದರಿದ್ರ ದೇವತೆಯಾಗಿದೆ. ತಮ್ಮ ಜೀವನದ ಏಕ ಮಾತ್ರೋದ್ದೇಶವನ್ನಾಗಿ 'ಸೇವೆ' ಯನ್ನಿಟ್ಟುಕೊಂಡಿದ್ದಾರೆ. 'ರಾಮ'ನಲ್ಲಿ ಅವರಿಗೆ ಎಲ್ಲಿಲ್ಲದ ಆಸ್ಥೆ, ಒಂದು ಬಾರಿ ಚಿತ್ರಕೂಟಕ್ಕೆ ಹೋಗಿದ್ದರೂ ಅಲ್ಲಿನ ರಾಮ ಮಂದಿರಕ್ಕೆ ಅವರು ಕಾಲಿರಿಸಲಿಲ್ಲ. ಎಲ್ಲರಿಗೂ ಸಹಜವಾಗಿಯೇ ಆಶ್ಚರ್ಯವಾಯಿತು. ಆದುದರಿಂದ ಕಾರಣವನ್ನು ವಿಚಾರಿಸಿದಾಗ, ಅವರು ಇವೆಲ್ಲವೂ ರಾಮನ ಸೇವೆಗಳು. ಇದಕ್ಕಿಂತ ದೊಡ್ಡ 'ರಾಮನ ಸೇವೆಯದೇನು? ಎಂದುತ್ತರಿಸಿದರು.

ಅವರಿಗೆ ದರಿದ್ರದೇವತೆಗಳಲ್ಲಿ ಅಪಾರ ಶ್ರದ್ಧೆಯಿದೆ! ಅವರು ಪ್ರಾರ್ಥನಾ ಸಭೆಗಳಲ್ಲಿ ಹೇಳುತ್ತಿರುತ್ತಾರೆ. "ಎಲ್ಲಿ ನೀವೆಲ್ಲರೂ ವಾಸಿಸುವಿರೋ ಅದೇ ಸ್ಥಳವು ನನಗೆ ಪವಿತ್ರವಾದುದು. ನನಗೆ ನಿಮ್ಮ ಶರೀರವು ಪಂಚಭೂತಗಳಿಂದ ನಿರ್ಮಾಣವಾದ ಜಡವಸ್ತುವಿನಂತೆ ತೋರುವುದಿಲ್ಲ. ನಾನು ನಿಮ್ಮನ್ನು ಪರಮಾತ್ಮನೆಂದು ತಿಳಿದು ನಿಮ್ಮೆಲ್ಲರ ಸೇವೆ ಮಾಡುವುದಕ್ಕಾಗಿ ಬಂದಿಸ್ದೇನೆ. ನಿಮ್ಮೆಲ್ಲರ ಸೇವೆ ಮಾಡುವ ಸುಅವಸರವು ದೊರೆಯುವಾಗ ಆಯಾಸವೆಂಬುದು ಎಲ್ಲಿ ಓಡಿಹೋಗುವುದೋ ನನಗೆ ತಿಳಿದಿಲ್ಲ!"

ಮಾನವ ಜೀವನವು ಶಾಶ್ವತವಲ್ಲ. ಆದರೂ ಬದುಕಿದಷ್ಟು ಸಮಯ ಸಾರ್ಥಕ ಜೀವನವನ್ನು ಬಾಳಬೇಕು. ಭಾರತ ದಂತಹ ದರಿದ್ರರ ದೇಶದಲ್ಲಿ—ಬಡತನದ ಗರಹೊಡೆದ ನಾಡಿನಲ್ಲಿ—ಐಶ್ವರ್ಯ, ಸುಖ, ಭೋಗಗಳನ್ನು ಅನುಭವಿಸುತ್ತಾ ಆಕಾಶದತ್ತ ದಿಟ್ಟಿಸುತ್ತಾ ಬಾಳುವುದು ಪರಮಾತ್ಮನಿಗೆ ಬೇಕಾಗಿಲ್ಲ. 'ದೇಶಸೇವೆಯೇ ಈಶಸೇವೆ, ಜನರಿರುವಲ್ಲಿ ಜನಾರ್ಧನ' ಎಂಬ ನಾಡನುಡಿಗಳ ಅರ್ಥವನ್ನು ಸರಿಯಾಗಿ ಮಾಡಿಕೊಂಡೆ ದೀನದಲಿತರ ಸೇವೆಯಿಂದಲೇ ತನ್ನ ಜೀವನವನ್ನು ಸಾರ್ಥಕ, ಸಾಧುಸಂತರಿಗೆ ಯೋಗ್ಯವನ್ನಾಗಿಸಿದ ಭಾರತ ಮಾತೆಯ ಪುತ್ರ—ವಿನೋಬಾ. ಎಡೆಬಿಡದೆ, ಹೊತ್ತುಗೊತ್ತಿಲ್ಲದೆ ತನ್ನ ಸೇವೆಯ ಅಂಗವನ್ನಾಗಿಟ್ಟುಕೊಂಡು ಭೂದಾನ ಚಳವಳಿಯ ನುನ್ನೇತ್ರರಾಗಿ ಬಿಸಿಲು ಮಳೆಗಾಳಿಗಳಲ್ಲಿ ಬನವಳಿದು ದೇಶಪರ್ಯಟನ ಕಾರ್ಯದಲ್ಲಿ ತನ್ನ ಆಯುಷ್ಯವನ್ನು ಸವೆಯಿಸುವ ಭಾರತದ ಪುನರ್ನಿರ್ಮಾಣದ ಮಹಾನ್ ಶಿಲ್ಪಿ ವಿನೋಬಾ.

ಭಾರತವು ರೈತರದೇಶ ಜನ ಸಂಖ್ಯೆಯ ಸೇಕಡಾ ೮೨ರಷ್ಟು ಹಳ್ಳಿಯಲ್ಲಿ ವಾಸಿಸುತಿದ್ದಾರೆ. ಹಳ್ಳಿಯ ಪ್ರತಿ ೧೦೦ ಮನೆಗಳಲ್ಲಿ ೪೯ ಜನರು ವಾಸಿಸುತಿದ್ದಾರೆ. ಪ್ರತಿ ೧೦೦ ರೈತರಲ್ಲಿ ೬೫ರಷ್ಟು ಮುಂದಿಗೆ ತಮ್ಮ ಸ್ವಂತ ಜಮೀನಿದೆ ೧೫ ಮಂದಿಗೆ ಏನೂ ಭೂಮಿಯಿಲ್ಲ. ೨೭ ಜನರು ಇನ್ನೊಬ್ಬರ ಗದ್ದೆಗಳಲ್ಲಿ ಕೂಲಿಗಾರರಾಗಿ ಬದುಕುತ್ತಾರೆ ಮತ್ತಿಬ್ಬರು ಬೇರೆಯವರಿಂದ ವ್ಯವಸಾಯ ಮಾಡಿಸುತ್ತಾರೆ. ಪ್ರತಿ ಎಳು ಮಂದಿ ರೈತರಲ್ಲಿ ಕೇವಲ ಇಬ್ಬರು ಮಾತ್ರ ಸ್ವಯಂ ಪರಿಪೂರ್ಣರಾಗಿದ್ದಾರೆ. ಉಳಿದವರು ಸಂಪೂರ್ಣವಾಗಿ ಇಲ್ಲವೆ ಅಪೂರ್ಣವಾಗಿ ಪರಾವಲಂಬಿಗಳಾಗಿ ಬಾಳುತಿದ್ದಾರೆ. ಇಲ್ಲಿನ ಭೂಮಿಯನ್ನು ಸರಿಯಾಗಿ ಹಂಚುವುದಾದರೆ, ಈಗ ತಲಾವೊಂದರ ೨.೫ ಎಕ್ರೆಗಳಷ್ಟು ಬರುವುದು. ಪ್ರತಿವರ್ಷ ಹೊಸತಾಗಿ ಹೆಚ್ಚುತ್ತಿರುವುದು ೫೦ ಲಕ್ಷ ಜನ!

ಭಾರತದಲ್ಲಿ ಭೂಮಿಯಾದೂರ ಸಮಪ್ರಮಾಣದಲ್ಲಿ ಹಂಚಿಹೋಗಿಲ್ಲ. ಐಶ್ವರ್ಯವಂತ ದರಿದ್ರರ ನಡುವೆ ಕಂದಕ ವಿದ್ದು ಅದು ಅತ್ಯಂತ ಗಹನವಾಗಿದೆ. ಈ ಕಂದಕವನ್ನು ಮುಚ್ಚಿ ದೇಶಹಿತಕ್ಕಾಗಿ 'ಸಮಾಜವಾದ'ದ ತಳಹದಿಯಲ್ಲಿ ಕಲ್ಯಾಣ ರಾಷ್ಟ್ರವನ್ನು ಸ್ಥಾಪಿಸುವ ಉದ್ದೇಶವನ್ನು ಸರಕಾರವಿಟ್ಟುಕೊಂಡಿದೆ. ಭೂಸಮಸ್ಯೆಯಷ್ಟು ಜಟಿಲ ಸಮಸ್ಯೆ ಬೇರೆಯಾವುದೂ ಇಲ್ಲಲ್ಲ. ಅದನ್ನು ಕಾನೂನಿನ ಮೂಲಕ ಮಾಡ ಬಹುದು. ಅಷ್ಟು ಸುಲಭವೂ ಅಲ್ಲ; ಪರಿಸ್ಥಿತಿ ಬಿಗಡಾಯಿಸುವ ಅಂಜಿಕೆಯೂ ಇದೆ. ಅದುದರಿಂದ ಜನರ ಮನಃ ಪರಿವರ್ತನೆಯಿಂದಲೇ ಈ ಬ್ರಹತ್ ಸಮಸ್ಯೆಯನ್ನು ಪರಿಹರಿಸುವುದು ಉತ್ತಮ ಎಂದು ಎಲ್ಲ ರಾಜಕೀಯ ಪಕ್ಷಗಳೂ ಅಭಿಪ್ರಾಯಪಡುತ್ತಿವೆ; ವಿನೋಬಾರವರ ಭೂದಾನ; ಗ್ರಾಮದಾನ ಚಳವಳಿಗಳಿಗೆ ತಮ್ಮ ಸಹಕಾರವನ್ನು ಈಯುತ್ತಿವೆ.

ಇತ್ತೀಚೆಗೆ ನಡೆದ ಸರ್ವೋದಯ ಸಮ್ಮೇಳನದ ಕಾಲಾಡಿ ಅಧಿವೇಶನದಲ್ಲಿ ಗ್ರಾಮದಾನ ಚಳವಳಿಯನ್ನು ಅತಿ ತೀಕ್ಷ್ಣದಲ್ಲಿ ಮುಂದೊತ್ತುವ ನಿರ್ಣಯವಾಗಿದೆ. ವಿನೋಬಾರವರ ಈ ನವೀನ ಉದ್ಯಮದಲ್ಲಿ ಜಯಪ್ರಕಾಶ ನಾರಾಯಣ, ಯು. ಎನ್. ಧೇಬಾರ, ಪಟ್ಟಂಥಾನು ಪಿಳ್ಳೈ, ನೆಂಬೂದರಿಪಾದ್ರಿ—ಇವರೆಲ್ಲರೂ ಪಕ್ಷ ಭೇದಗಳಿಲ್ಲದೆ ತಮ್ಮ ಸಹಕಾರವನ್ನೀಯಲು ಒಪ್ಪಿಕೊಂಡಿದ್ದಾರೆ. ದೇಶದ ಪುನಾರಚನೆಯು ಈ ವಿಧದ ಶಾಂತ ಕ್ರಾಂತಿಯಿಂದಲೇ ಸಾಧ್ಯವೆಂದವರು ಮನಗಂಡಿದ್ದಾರೆ.

ಈ ರೀತಿಯಾಗಿ ಎಲ್ಲ ಭಾರತೀಯರ ವಿಶ್ವಾಸವನ್ನು ಪಡೆದು, ದರಿದ್ರರ ಸೇವೆಯನ್ನೇ ಚಿಂತಿಸುತ್ತಾ, ಅದಕ್ಕಾಗಿ ದುಡಿಯುತ್ತ ತನ್ನ ಜೀವನವನ್ನು ಪಾವನಗೊಳಿಸಿದ ಮಹಾನ್—ವ್ಯಕ್ತಿ ವಿನೋಬಾ. ಅವರ ದೇಶ ಪುನಾರಚನಾ ಕಾರ್ಯದಲ್ಲಿ ಸಹಕಾರಿಯಾಗುವುದು, ವಿನೋಬಾರವರು ಕೈಗೊಂಡ ಕಾರ್ಯವು ಯಶಸ್ವಿಯಾಗಲೆಂದು ಪ್ರಾರ್ಥಿಸುವುದು ಪ್ರತ್ಯೇಕ ದೇಶ ಪ್ರೇಮಿಯ ಕರ್ತವ್ಯ.

(ಸಾಧಾರ)

—ಎಸ್. ಗೋಪೀಚಂದ ರಾವ್
ಉಡುಪಿ


ನಿಮ್ಮಷ್ಟಕ್ಕೆ ನೀನೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ ಶ್ರೀ. ಕೊರಡ್ಕಲ್ಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ

ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ಪ್ರತಿಗಳು ಸಿಗುವ ಸ್ಥಳ:—
ನವಭಾರತ ಪುಸ್ತಕ ಭಂಡಾರ, ಉಡುಪಿ.



ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

| ನಿರಖು ಠೇವಣಾತಿ. | |
|---|---|
| 24 ತಿಂಗಳಿಗೆ | 4% |
| 12 ,, | 3½% |
| 6 ,, | 3½% |
| 3 ,, | 3% |
| ಸೇವಿಂಗ್ಸ್ ಬೇಂಕ್ ಲೆಕ್ಕ | 2% |
| ಕರೆಂಟ್ ಎಕೌಂಟು | ½% |

THE MOOLKY BANK, LTD. MULKI

## ಯಕ್ಷಗಾನ ಕಲೆ

(ಗಿನೇ ಪುಟದಿಂದ)

ಕಲೆಯ ಗುರಿ. ಕಲೆ ; ಅನುಕರಣೆಯಲ್ಲ; ಹೊಸ ಸೃಷ್ಟಿ. ಯಕ್ಷಗಾನ ವೇಷಗಳಲ್ಲಿ ಯ ಜೆಲುವನ್ನು ನಮಗೆ ತಿಳಿಸಿಕೊಡು ವಂಥ ಕಲೆಯಿತ್ತೀಚಿಗಿನ ಸೌಂದರ್ಯ ಶಾಸ್ತ್ರ ಗಳ ಪರಿಚಯ ನಮಗಿರುತಿದ್ದರೆ ಹೀಗಾ ಗುತ್ತಿರಲಿಲ್ಲ. ಗಾಜಿನ ಮಣಿಗಳೂ ಸಿಕ್ಕಾ ಪಟ್ಟೆ ಬಣ್ಣದ ಅರಿವೆಗಳೂ ತಮ್ಮ ಹಾವಳಿ ನಡೆಸುತ್ತಿರಲಿಲ್ಲ. ಕಲೆಯ ಪರಿಚಯವಿಲ್ಲದ ಜನರು ಈ ನಮ್ಮ ಯಕ್ಷಗಾನದ ಸುಧಾರ ಣೆಗೆ ಹೋಗದಿರಲಿ.

ಇಂದು ಕೆಲವು ಅರ್ಥಧಾರಿಗಳು ತಮ್ಮ ಕಲೆಯನ್ನು ಮಾರುವುದಕ್ಕೂ ಹೊರಟಿದ್ದಾರೆ. ರಾಜಕೀಯ ಅಲ್ಲಿಗೂ ಹೊಕ್ಕಂತಿದೆ. ತಮ್ಮ ಊರಿನ ರಾಜಕೀಯದ ಜತೆ ಯಲ್ಲಿ ಚುನಾವಣೆಯ ರಾಜಕೀಯ ಅದ ತೊಡನೆ ಬೆರೆಯುವಂತಿದೆ. ಇತ್ತೀಚೆಗೆ ಕೆಲವು ಅರ್ಥಧಾರಿಗಳು ಅರ್ಜುನನ ರಥ ಕ್ಕೆ ಜೋಡಿತ್ತಿಗಳನ್ನು ಕಟ್ಟಲು ಹೊರ ಟದ್ದುಂಟು. ನಾಳೆ ಕೃಷ್ಣನ ಕೈಯಲ್ಲಿ ಎಟಂ ಬಾಂಬು ಕೊಟ್ಟಾರು! ಸುದರ್ಶನ ದ ಕೆಲಸ ಅದೇ ಆಟವೇ—ಲೋಕನಾಶ! ಹಿಂದೆ ಸೆನ್ಸಾರ್‌ಕಮಿಶನಿನ ವಿರೋಧ ಕ್ಕಾಗಿ ಕೆಲವರು ಯಕ್ಷಗಾನವನ್ನು ಬಳ ಸಿದ್ದರು. ಇಂಥ ಕಲಾಕ್ಷೇತ್ರದ ದುಡು ಕೆಗಳು ಯಕ್ಷಗಾನ ಕಲೆಯ ಉದ್ಧಾರ ಕ್ಕೆ ಹೊರಟವರಂತೆ ನಟಿಸುವಾಗ ಹೆಚ್ಚಿನ ವ್ಯಥೆಯಾಗುತ್ತದೆ. ಈಗಾಗಲೇ ವಂದಿ ಮಾಗಧರಂತೆ ಅಧಿಕಾರಸ್ಥ ಜನಗಳ ಸ್ತುತಿ ಮಾಡುತ್ತ, ಆತ್ಮ ವಿಕ್ರಯದ ಹೊಸ ಬಾಳನ್ನು ಅವರು ತೊಡಗುವ ಸೂಚನೆ ಕಾಣುತ್ತಿದೆ. ಇದು ಬಾಳಲ್ಲ! ಕಲೆಯ ಹಾಳಿಗೆ ಕಾರಣವಾಗುವಂಥ ಬೀಳು. ವ್ಯಾಪಾರಿಕತೆ ಇಲ್ಲದ ಕಲೆಯಾಗಲಿ ಸಾಹಿತ್ಯವಾಗಲಿ ಬೆಳೆಗಲಾರದು. ಯಕ್ಷಗಾನಕ್ಕೂ ಆದೆ ಬೇಕು. ಅನ್ಯ ದೇಶೀಯರು ಆಧುನಿಕಯು ಗಕ್ಕೆ ತಕ್ಕಂತೆ ತಮ್ಮ ಜಾನಪದ ಕಲೆ ಗಳನ್ನು ಬೆಳೆಯಿಸುತ್ತಿದ್ದಾರೆ. ಸ್ಪೇನ್, ಯಾಗೊಸ್ಲಾವಿಯಾ—ದೇಶಗಳ ಜನರು ತಮ್ಮ ಜಾನಪದ ಕಲೆಯನ್ನು ಪ್ರದರ್ಶಿ ಸುವ ರೀತಿಯಲ್ಲಿ ನಾವೂ ಪ್ರದರ್ಶಿಸುವ ಪ್ರಯತ್ನ ಮಾಡಿದ್ದಾದರೆ ಇದು ಭಾರತ ದ ಆಧುನಿಕ ಸಂಸ್ಕೃತಿಗೆ ಕನ್ನಡದ್ದೇ ಆದ ಹಿರಿಯ ಕೊಡುಗೆಯಾಗಬಲ್ಲುದು.

ತಮ್ಮನ್ನು ತಾವು ತಿಳಿಯದವರು ಅನ್ಯ ರಿಗೇನನ್ನೂ ಕೊಡಬಲ್ಲರು? ಯಕ್ಷಗಾನದ ವಿಷಯದಲ್ಲಿ ನಾವು ಕಲಿಯಬೇಕಾದ್ದು ಬಹಳ ಇದೆ. ಅದಕ್ಕೆ ಬೇಕಾದ ವಿಷಯ; ಕಣ್ಣು, ಕೆವಿ, ಶ್ರಮಸಾಧನ ಬುದ್ಧಿಗಳು ನಮ್ಮ ಜನರಿಗೆ ಬರಲೆಂದು ಹಾರೈಕೆ.

(ನೇ ದಿನಾಂಕ ೩೦ರಂದು ಸಿರಸಿಯಲ್ಲಿ ಆ.ಭಾ. ೩ನೆ ಮಲೆನಾಡು ಸಮ್ಮೇಳನದ ಅಂಗ ವಾಗಿ ಜರಗಿದ ಯಕ್ಷಗಾನ ಗೋಷ್ಠಿಯಲ್ಲಿ ಶ್ರೀ ಶಿವರಾಮ ಕಾರಂತರು ಮಾಡಿದ ಅಧ್ಯ ಕ್ಷ ಭಾಷಣದ ಸಾರ.)

### ಸೂಚನೆ

**"ನವಯುಗ" ದಲ್ಲಿ ಪ್ರಕಟಣೆಗಾ ಗಿ ಲೇಖನಗಳನ್ನು ಆಮಂತ್ರಿಸಲಾ ಗಿದೆ. ಇವು ಚಿಕ್ಕದಿರ ಬೇಕಲ್ಲದೆ, ಕಾಗದದ ಒಂದೇ ಮಗ್ಗುಲಿನಲ್ಲಿರ ಬೇಕು. ಲೇಖಕ ಬಂಧುಗಳು ಸಹ ಕರಿಸಬೇಕಾಗಿ ವಿನಂತಿ. —ಸಂ. ನ.**

ಭಾರತದ ರಾಷ್ಟ್ರಾಧ್ಯಕ್ಷರು ಪ್ರಧಾನಿ ನೆಹರೂರವರ ನಲಹೆಯಂತೆ ಈ ಮಹನೀಯರನ್ನು ಮಂತ್ರಿಮಂಡಲದಲ್ಲಿ ರಾಜ್ಯಮಟ್ಟದ ಮಂತ್ರಿಗಳನ್ನಾಗಿ ನೇಮಿಸಿರುವರು: ಎಡದಿಂದ ಬಲಕ್ಕೆ– ಸತ್ಯನಾರಾಯಣ ಸಿಂಹ, ಬಿ. ವಿ. ಕೇಸ್ಕರ್, ಡಿ. ಪಿ. ಕರಮಕರ, ಪಂಜಾಬರಾವ್ ದೇಶಮುಖ್, ಕೆ. ಡಿ. ಮಾಳವೀಯ, ಎಮ್. ಸಿ. ಛಾಗ್ಲಾ, ನಿತ್ಯಾನಂದ ಕನುಂಗೋ, ರಾಜ ಬಹದ್ದೂರ್, ಬಿ. ಎನ್. ದಾತಾರ್, ಎಂ. ಎಂ. ಷಾ, ಎನ್. ಕೆ. ಜೇ, ಕೆ. ಎಲ್ ಶ್ರಾವಾಲಿ, ಎ. ಕೆ. ಸೆನ್ ಮತ್ತು ಹುಮಾಯೂನ್ ಕಬೀರ್.

### ಮುಂಬಯಿ

**ದುಃಖ ಸೂಚಕ ತರಾವು**---ಮೊಗವೀರ ವ್ಯವಸ್ಥಾಪಕ ಮಂಡಳಿಯ ಮುಖಾಂ ಪೋಷಕರೂ, ಸಮಾಜದ ಅಗ್ರಗಣ್ಯ ಮುಂ ದಾಳುಗಳಲ್ಲೊಬ್ಬರೂ ಆಗಿದ್ದ ಶ್ರೀ ಉದಿಯಾವರ ಸದಿಯ ಸಾಹುಕಾರರು ತಾರೀಕು 16-5-57ರಲ್ಲಿ ಉದಿಯಾವರದ ತನ್ನ ಮನೆಯಲ್ಲಿ ಸ್ವರ್ಗಸ್ಥರಾಗಿರುವುದರಿಂದ, ಮೊಗವೀರ ಸಮಾಜದ ಅಪರೂಪ ವ್ಯಕ್ತಿಯೊಬ್ಬರನ್ನು ನಾವು ಕಳೆದುಕೊಂಡಂತಾಯಿತು. ಇವರು ಹಲವ ವರ್ಷಗಳಿಂದ ಮಂಡಳಿಗೆ ತನ್ನು ಮನೆ, ವ ದಿಂದ ಬೆಂಬಲವನ್ನೀಯುತ್ತಿದ್ದುದಲ್ಲದೆ, ಸಮಾ ಜ ಪ್ರಮುಖ ಸಂಸ್ಥೆಯಾದ ದಕ್ಷಿಣ ಕನ್ನಡ ಮೊಗವೀರ ಮಹಾಜನ ಸಂಘದ ಅಧ್ಯಕ್ಷ ಸ್ಥ ಯನ್ನು ಮರಣ ಪರ್ಯಂತವೂ ಅಲಂಕರಿಸಿ ತ್ತಿದ್ದು, ಸಮಾಜಕ್ಕೆ ಅಪ್ರತಿಮ ಸೇವೆ ಸಲ್ಲಿಸಿ ತ್ತಿದ್ದರು".

ಜ್ಞಾನಿಯೂ, ವಿದ್ಯಾಭಿಮಾನಿಯೂ, ಸ ಗುಣಿಯೂ, ದಾನಿಯೂ, ಕರ್ತವ್ಯ ನಿಷ್ಠರೂ ಪರೋಪಕಾರಿಯೂ, ಸಮಾಜ ಸೇವಾ ತತ್ಪ ರರೂ, ಧಾರ್ಮಿಕರೂ, ಭಗವದ್ಭಕ್ತರೂ ಆಗಿದ್ದ ಶ್ರೀ ಯು. ಸದಿಯ ಸಾಹುಕಾರರು ತನ್ನ ಜೀ ವನ ಯಾತ್ರೆಯನ್ನು ಮುಗಿಸಿ ಸ್ವರ್ಗವಾಸಿ ಯಾಗಿದ್ದರಿಂದ, ನುಂಡಳಿಗೂ, ಅವರ ಕು ಟುಂಬಕ್ಕೂ ಸಮಾಜಕ್ಕೂ ತುಂಬಲಾರದ ನ ಷ್ಟವಾಗಿದೆ. ಇವರೆಲ್ಲರ ದುಃಖದಲ್ಲಿ ತಾ. 1 ರಂದು ಸೇರಿದ ಈ ವ್ಯವಸ್ಥಾಪಕ ಸಮಿತಿಯ ಸಭೆಯು ಸಭಾಗಿಯಾಗಿರುವುದಲ್ಲದೆ, ದಿವಂ ಗತರ ಪವಿತ್ರ ಆತ್ಮಕ್ಕೆ ಶ್ರೀ ಪರಮಾತ್ಮನ ಚಿರಶಾಂತಿಯನ್ನಿತ್ತು ಮೋಕ್ಷ ಪದವಿಯನ್ನು ದಯಪಾಲಿಸಲೆಂದು ಪ್ರಾರ್ಥಿಸುತ್ತದೆ."

ದಿವಂಗತರ ಸ್ಮರಣಾರ್ಥವಾಗಿ ತಾ. 1 ಮತ್ತು 17—6—57ರಲ್ಲಿ ಮಂಡಳಿಯ ಕ ಚೇರಿಯನ್ನೂ ಎಲ್ಲಾ ಶಾಖೆಗಳನ್ನೂ ಮುಚ್ಚ ಲಾಗಿತ್ತು.


ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ

**ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?**
**ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?**

# ಮನೆ-ಮದ್ದು

**HOME REMEDIES**

ಬರೆದವರು: ಡಾಕ್ಟರ್ ಕೊರಡ್ಕಲ್ ನೆಂಕಟ್ರಾವ್, ಎಲ್. ಐ.ಎಮ್.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆ ಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೊರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ ರೂ. ೨—೦—೦ (ಟಿ. ಖರ್ಚು ಬೇರೆ).

**ನವಭಾರತ ಪುಸ್ತಕ ಭಂಡಾರ, ಉಡುಪಿ.**


Edited, Printed & Published by K. H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment.

# ಪ್ರಜಾಮತ

ಸಂಪುಟ ೩೬ VOL.36 — 6—6—1957 — ಸಂಚಿಕೆ ೩೯ NO. 39

## ಕಾಂಗ್ರೆಸ್ಸಿನ ಸಂಘಟನೆ

## ನಿಸ್ವಾರ್ಥದೃಷ್ಟಿಯಿಂದ ಜನಸಂಪರ್ಕವನ್ನು ಬೆಳೆಸಿಕೊಳ್ಳಬೇಕು

ಕಾಂಗ್ರೆಸ್ ಜನತಾ ಸಂಸ್ಥೆ. ಅದು ಬೆ
ದು ಬಂದುದು ಜನತೆಯ ಮಧ್ಯದಿಂದ
ೀ. ಇಂದು ಅದನ್ನು ಜನತೆಯಿಂದ ದೂ
ಕರಿಸಲು ಯಾವ ವಿಷ ಶಕ್ತಿಯಿಂದ
ಲೂ ಸಾಧ್ಯವಿಲ್ಲ.

ಆದರೆ ಬಾಹ್ಯ ಶತ್ರುಗಳಿಗಿಂತಲೂ
ಂತರಿಕ ಕೀಟಗಳ ಆಸೂಯೆ ವತಿನೆಗ
ಂದ ಕಾಂಗ್ರೆಸಿನ ಶಕ್ತಿ ಹ್ರಾಸವಾಗುತ್ತಿ
ದೆ ಕಾಂಗ್ರೆಸಿನ ಒಳಗಿನ ಈ ಪಂಚಮದ
ದ ಕಾರ್ಯಾಚರಣೆಯು ಚುನಾವಣಾ
ಳೆಗೆ ಸ್ಪಷ್ಟವಾಗಿ ಕಂಡುಬರುತ್ತದೆ ಏಂ
ನ ಮಹಾ ಚುನಾವಣೆಯ ವೇಳೆಯ
ಲ್ಲೂ, ಆ ಮೇಲೆ ಇತ್ತೀಚೆಗೆ ನಡೆದ ಚು
ನಾವಣಾ ವೇಳೆಯಲ್ಲಿಯೂ ಈ ಸತ್ಯ
ಸ್ಪಷ್ಟವಾಗಿದೆ. ಕಾಂಗ್ರೆಸಿನ ಅಧಿನಾ
ಯಕ ವರ್ಗ ಈ ಕುರಿತು ಜಾಗೃತರಾದ
ರೂ ಈ ಪೀಡೆಯ ಶಾಶ್ವತ ಪರಿಹಾರಕ್ಕೆ
ಮೂಲ ಉಚ್ಚಾಟನೆಗೆ ಯಾವ ಯೋಗ್ಯ
ಪರಿಹಾರವನ್ನೂ ನೀಡಲಿಲ್ಲವೆಂಬುದನ್ನು
ನಾವು ಸ್ಪಷ್ಟವಾಗಿ ಹೇಳಬಹುದು.

ಕಾಂಗ್ರೆಸ್ ನಿಸ್ವಾರ್ಥ ಸೇವೆಯ—
ಜನತಾ ಜನಾರ್ಧನನ ಉಪಾಸನೆಯ
ಧ್ಯೇಯದ-ಜನಸಾಮಾನ್ಯರ ಪ್ರತಿನಿಧಿಕ
ಸಂಸದ ಸಂಸ್ಥೆಯಾಗಿ ಬೆಳೆದುಬಂದು,
ಸ್ವಾತಂತ್ರ್ಯವ ಬಳಿಕ ತನ್ನ ಚಾರಿತ್ರ್ಯ
ಶುದ್ಧಿಯ ವೈಶಾಲ್ಯದಿಂದ ಅಧಿಕಾರ
ಸೂತ್ರ ಹಿಡಿದುಕೊಂಡಿತು. ಕಾಂಗ್ರೆಸಿನ
ಸತ್ಪದಡಿ ತ್ಯಾಗ ಮಾಡಿದವರು—ನಂಕ
ಯಾತನೆ ಅನುಭವಿಸಿದವರು—ದೇಶದ
ಸ್ವಾತಂತ್ರ್ಯ ಕಡಿವಾಣವನ್ನು ಕಡಿಯ
ಜ ನೆರವಾದವರು, ಎಲ್ಲರಿಗೂ ಅಧಿಕಾರ
ದೊರೆ ಸಿಗುವಂತಿಲ್ಲ. ರಾಜ್ಯದ ಅಧಿಕಾರ
ಸ್ವಾಗಮಯಿಯ ಕೈ ಸೇರುವುದಕ್ಕಿಂತ
ಬುದ್ಧಿವಂತ ಜನರ ಬಳಿ ಹೋಗಬೇಕಾ
ದ್ದು ನ್ಯಾಯ. ಬುದ್ಧಿವಂತ ತ್ಯಾಗನುಯಿ
ಯಾಗಿರಬೇಕಾದ್ದು ಅವಶ್ಯ ಅಂಥವರ
ಜೆ ಅಧಿಕಾರ ಹೋದಾಗಲೇ ಪ್ರತಿಸ್ಪರ್ಧಿ
ಪಟ್ಟಿಕೊಳ್ಳುವಂತಾಯಿತು. ತಮ್ಮ ತ್ಯಾ
ದ ಬೆಲೆಗೆ ಅಧಿಕಾರವಿಲ್ಲವೆಂದು ನಿರು
ಸ್ಪಹಗೊಂಡವರು ಕೋಪೋದ್ರೇಕ ತಾ
ದಾಗ ಪಕ್ಷದೊಳಗೆ ಎರಡು ಪಂಗಡ
ಳಾದುವು. ಅಧಿಕಾರವಾಹಿಯು ತನ್ನ
ಸೋಗೈತೆಯನ್ನು ತನ್ನ ತ್ಯಾಗದ ಹಿನ್ನೆಲೆ
ಯಲ್ಲಿ ಪರೀಕ್ಷಿಸುವುದಕ್ಕಿಂತಲೂ, ತನ್ನ
ಮೆದುಳಿನ ಮೇಲೆ ಸವಾಲು ಹಾಕಿದ್ದರೆ
ಈ ಉಪದ್ವ್ಯಾಪ ಏಳುತ್ತಿರಲಿಲ್ಲ.

ಹೀಗಾಗಿ ಕಾಂಗ್ರೆಸಿನೊಳಗೆ ಸ್ವಾರ್ಥ
ಲಾಲಸೆಯ ಕಿಚ್ಚು ಬಹುಬೇಗನೇ ದಹಿಸಿ
ಹೊಡಗಿತು. ಪರಿಣಾಮ ಈ ತಂಡ ಸಿಡಿ
ದೆದ್ದಿತು ಕಾಂಗ್ರೆಸಿನಿಂದ ಕೂರಬಂದು
ಪ್ರತಿಪಕ್ಷದ ನಿರ್ಮಾಣವಾಯಿತು. ಇಂ
ದು ಭಾರತದ ಪ್ರಮುಖ ಪ್ರತಿಪಕ್ಷ ಈ
ಹಿನ್ನೆಲೆಯಲ್ಲೇ ಸ್ಥಾಪಿತವಾದುದು ಈ
ರೀತಿ ಜನಸಾಮಾನ್ಯರ ಹಿತದೃಷ್ಟಿಗೆ ಮಂ
ಕು ಬಡಿದು ಅಧಿಕಾರ, ಸ್ವಾರ್ಥ, ಅಸೂ
ಯೆಗಳ ರಸಮಿಶ್ರಿತ ಗಾಜು ಇಂತಹ ಜನ
ರ ಕಣ್ಣಿಗೆ ಅಡ್ಡಬಂತು

ಇಂತಹವರ ಸಂಖ್ಯೆ ವರ್ಷವರ್ಷವೂ
ಕಾಂಗ್ರೆಸಿನೊಳಗೆ ಹೆಚ್ಚುತ್ತಲೇ ಇದೆ.
ಅವರ ವಿಂಬರೂಪ ಚುನಾವಣೆಯ
ವೇಳೆಯಂತೂ ಸ್ಪಷ್ಟವಾಗಿ ಬಯಲಿಗೆ
ಬರುತ್ತಲಿದೆ. ಈ ದಂಡು ಕಾಂಗ್ರೆಸಿನ
ಹೊಂಕ್ಕೆ ಬಂದು ಯಾವ ಕಾರ್ಯಕ ನಡೆ
ಸಿದರೂ ನಾವದಕ್ಕ ಬೆಲೆ ಕೊಡಬೇಕಾ
ಗಿಲ್ಲ ಪ್ರತಿಯೊಬ್ಬನಿಗೂ ವ್ಯಕ್ತಿ ಸ್ವಾತಂ
ತ್ರ್ಯವಿದೆ ಅವನು ಪಟನೆಯ ಚೌಕಟ್ಟಿನ
ಲ್ಲಿ ತನ್ನ ರಾಜಕೀಯವನ್ನು ಸ್ವತಂತ್ರ್ಯ
ಮನೋಭಾವದಿಂದ ರೂಪಿಸಲು ಸ್ವತಂ
ತ್ರನಿದ್ದಾನೆ ಆದರೆ ಕಾಂಗ್ರೆಸಿಗನಾಗಿ
ನಿಟಿಸಿ, ವಿರೋಧವಾಗಿ ತನ್ನ ಸ್ವಾರ್ಥ
ಸಾಧನವ ಹಿತ ಶತ್ರುವಿನ ಕುರಿತು ಎಂ
ರೂ ಕನಿಕರ ತಾಳಲಾರದು. ಇಂದು
ಕಾಂಗ್ರೆಸಿಗೆ ಕಗ್ಗುಲಿದ ಕಲಂಕ
ಇಂತಹ ದೈತ್ಯ ದಂಡುಗಳಿಂದಲೇ ಈ
ಕಂಗೆಡಗಳ ಸಂಪೂರ್ಣ ಉಚ್ಚಾ
ಟನೆಯಾದಾಗಲೇ ಕಾಂಗ್ರೆಸ್ ಸತ್ವಶಾಲಿ
ಯಾಗಬಲ್ಲುದು

ಇದೀಗ ದ್ವಿತೀಯ ಮಹಾ ಚುನಾವ
ಣೆ ಮುಗಿದಿದೆ ಇನ್ನೈದು ವರ್ಷಗಳ ಕಾಲ
ಕ ಕಾಂಗ್ರೆಸಿನ ಕೈಗೆ ಅಧಿಕಾರ ಸೂತ್ರ
ಬಂದಿದೆ. ಸಾಕಷ್ಟು ಬಹುಮತಗಳಿಂದ
ಒಂದು ಪ್ರಾಂತ್ಯದ ಹೊರತು ಉಳಿದೆಲ್ಲ
ಕಡೆಗಳಲ್ಲಿ ಕಾಂಗ್ರೆಸ್ ರಾಜ್ಯಭಾರ ನಡೆ
ದಿದೆ. ಹಾಗೆಂದು ಕಾಂಗ್ರೆಸಿನ ಜನಪ್ರಿಯ
ತೆಯ ಬಗ್ಗೆ ಇನ್ನೂ ನಿಶ್ಚಿಂತೆಯಿಂದ ಕು
ಳಿತಿದ್ದರೆ ಮುಂದಿನ ಮಹಾ ಚುನಾವಣೆ
ಯ ವೇಳೆ ಕಾಂಗ್ರೆಸಿನ ಅಧಃಪತನ ಸ್ಪ
ಷ್ಟ ಗೋಚರಕ್ಕೆ ಬರಬಹುದು. ಈ ಮಾ
ತನ್ನು ಹಿರಿಯ ರಾಜಕಾರಣಿಗಳು ಕಂಡು
ಕೊಂಡಿದ್ದಾರೆ. ಅವರೂ ಚುನಾವಣೆಯ
ನಂತರ ಕೇವಲ ಕೆಲವೊಂದು ಕಡೆ ತಾ
ತ್ಕಾಲಿಕ ಎಚ್ಚರಿಕೆಯ ಕಾರ್ಯ ವಿಧಾನಗ
ಳ ಘೋಷಣೆ ನಡೆದರೂ ಮೂಲಮೂಲಿನ
ಸ್ವಚ್ಛತೆ ಆವರಿಸಿದೆ.

ಇದೇ ರೀತಿ ಪರಿಸ್ಥಿತಿಯನ್ನು ಬಿಟ್ಟು
ಬಿಟ್ಟರೆ ಕಾಂಗ್ರೆಸಿನ ಒಳಗಿನ ದುಶ್ಯಕ್ತಿಗ
ಳೇ ಕಾಂಗ್ರೆಸಿನ ಸಮಾಧಿಗೆ ಕಾರಣವಾ
ಗುವುದು ನಿಶ್ಚಿತ

ಮೊನ್ನೆ ಮೊನ್ನೆ ಪಂ ನೆಹೂರವರು
ದಿಲ್ಲಿಯಲ್ಲಿ ಇದೇ ಮಾತನ್ನು ಒತ್ತಿ ಹೇಳಿ
ದ್ದಾರೆ. ಬಾಹ್ಯ ಶತ್ರುಗಳ ಹೆದರಿಕೆ ಇಲ್ಲ
ಆಂತರಿಕ ಕೃತ್ರಿಮತೆಗೆ ಜಾಗ್ರತೆ ವಹಿಸ
ಬೇಕು.

ಪ್ರಧಾನ. ಪಂಚ ವಾರ್ಷಿಕ ಯೋಜನ
ಯ ಯಶಸ್ವೀ ಮುಕ್ತಾಯ, ದ್ವಿತೀಯ ಪಂಚ ವಾರ್ಷಿಕ ಯೋಜನೆಯ ಸರ್ವ ಜನಗ್ರಾಹಿ ಯೋಜನೆ ಇವು ದೇಶದ ಜನತೆಗೆ ಸರ್ವಾಧಾನವನ್ನಿತ್ತಿವೆ ಕಾಂಗ್ರೆಸಿನ ಘೋರಣೆ ನಿಶ್ಚಿತ ತಳಹದಿಯಲ್ಲಿ ಕಾರ್ಯರೂಪಕ್ಕೆ ಬರುತ್ತಿರುವುದನ್ನು ಕಂಡು ಕಾಂಗ್ರೆಸಿನ ಮೇಲೆ ಜನರ ಪ್ರೀತಿ ಗಾಢವಾಗುತ್ತಿದೆ. ಇಂದು ಕಾಂಗ್ರೆಸಿನ ಕಾರ್ಯ—ಘೋರಣೆಗಳಿಂದ ಪ್ರತಿ ಪಕ್ಷಗಳು ನಿರ್ವೀರ್ಯವಾಗಿವೆ ಜನರಿಗೆ ಪ್ರತಿ ಪಕ್ಷಗಳ ಯಾವ ಮೋಹಕ ಘೋರಣೆಯೂ ನಂಬಿಕೆಗೆ ಪಾತ್ರವಾಗಿಲ್ಲ. ಕಾಂಗ್ರೆಸ್ ಸೋತುದರ ಕಾರಣವು ಇಲ್ಲೇ ಇನೆ ಪ್ರತಿ ಪಕ್ಷಗಳ ಕಡೆಗೆ ಕಾಂಗ್ರೆಸಿನೊಳಗಿನ ಕೆಲವೊಂದು ಸ್ವಾರ್ಥ ಲಾಲಸಿಗಳು ಮುಸುಕಿನ ಮರೆಯಲ್ಲಿ ಸೇರಿ, ಪಿತೂರಿ ನಡೆಸಿದುದೇ ಕಾಂಗ್ರೆಸಿನ ಪರಾಜಯಕ್ಕೆ ಕಾರಣವಾಗಿದೆ. ಕೇರಳದಲ್ಲಾದ ಅವಸ್ಥೆಗೂ, ಒರಿಸ್ಸಾದಲ್ಲಾದ ಅನಿರೀಕ್ಷಿತ ಸೋಲಿಗೂ ಇದೇ ಕಾರಣವೆನ್ನಬಹುದು.

ಆದರೆ ಇಂತಹ ಸಂದರ್ಭ ಸಾಧಕರನ್ನು ಕಾಂಗ್ರೆಸ್ಸಿಗೆ ಹುಡುಕಿ ತೆಗೆಯುವುದೇ ಬಹುಕಷ್ಟವೆಂಬ ವಿಚಾರವೆನ್ನುವುದನ್ನು ಒಪ್ಪಲೇಕು. ಇಂತವರ ನಿಜ ಬಣ್ಣ ಬಯಲಾಗುವುದು ಚುನಾವಣೆಯ ವೇಳೆಯಲ್ಲೇ ಆದೂ ಬಹುಶ್ರಮ ವಹಿಸಬೇಕಾಗುತ್ತದೆ. ಈ ಸಂದರ್ಭಗೆ ಎಚ್ಚರವಾಗಿ ಕಾಂಗ್ರೆಸ್ ಯಾವುದೇ ಹುಗ್ಗು, ದಾಕ್ಷಿಣ್ಯಕ್ಕೆ ಒಲಿ ಬೀಳದೆ ಸಂಪೂರ್ಣವಾಗಿ ಅವನ್ನು ಕಿತ್ತಿಗೆ ಒಳಪಡಿಸಬೇಕು ಅವರ ಉಚ್ಚಾಟನೆಗೆ ಯಾವುದೇ ಪ್ರಭಾವಕ್ಕೆ ಒಳಗಾಗಬಾರದು ಕಠೋರವಾದ ಬಹಿಷ್ಕಾರ ವಿಧಿಗಳನ್ನು ಹಾಕಬೇಕು.

ಕಾಂಗ್ರೆಸ್ ಚುನಾವಣೆಯ ವೇಳೆಯಲ್ಲೇ ಜಾಗೃತವಾದರೆ ಸಾಧ್ಯವಿಲ್ಲ. ವರ್ಷದ ಕಿಟಿಗ ದಿನವೂ ಜನತಾ ಸಂಪರ್ಕ ಬೆಳೆಸುವ ಒಂದು ಮಾಧ್ಯಮವನ್ನು ಕಂಡುಕೊಳ್ಳಬೇಕು. ಜನರಿಗೆ ಇಂದು ಕಾಂಗ್ರೆಸಿನ ಸಾಧನೆಗಳು ಪರಿಣಾಮಕಾರಿ ರೀತಿಯಲ್ಲಿ ಅರ್ಥವಾಗಿಲ್ಲ ಇಂದು ಅಕ್ಕಿ ದರ ಏರಿದೊಡನೆ, ತೆರಿಗೆ ಹೆಚ್ಚಾದೊಡನೆ, ಉಡಳಿತೆಯಲ್ಲಿ ಶಿಥಿಲತೆ ಕಂಡು ಬಂದೊಡನೆ ಸರಕಾರವನ್ನು ದೂರುವ ಚಟ ಬೆಳೆದು ಹೋಗಿದೆ. ಅದನ್ನು ತಪ್ಪಿಸಿ, ಅವರೊಡನೆ ನೇರವಾದ ಸಂಪರ್ಕ ಬೆಳೆಸಲು ಒಂದು ಶಿಸ್ತುಬದ್ಧ ಸ್ವಯಂ ಸೇವಕ ದಳವನ್ನು ಪ್ರತಿ ಗ್ರಾಮದಲ್ಲೂ ನೇಮಿಸಬೇಕು. ಅಂತಹ ಪಂಗಡಗಳು ಪ್ರತಿ ಮನೆಗೂ ತಿಂಗಳಿಗೊಮ್ಮೆ ಯಾದರೂ ಸಂದರ್ಶಿಸಿ, ಅವರ ಹಾಲು-ಹವಾಲೆಯನ್ನು ನೇರ

(೨ನೇ ಪುಟ ನೋಡಿರಿ)

**ANNOUNCEMENT**

**BRANCHES**

**of the Bank**

**will be opened shortly,**

**at**

MYSORE and BANGALORE

**THE VIJAYA BANK, LTD.**

**H. O. MANGALORE - 3.**

Estd: 1931.

## ಜನತೆಯ ಕರ್ತವ್ಯ

# ಆರೋಗ್ಯವನ್ನು ಕೆಡಿಸುವ ಅಣುವಿಷಪ್ರಯೋಗವನ್ನು ಸಾರ್ವತ್ರಿಕವಾಗಿ ನಿಷೇಧಿಸಿರಿ

ಒಬ್ಬನನ್ನು ಪ್ರತ್ಯಕ್ಷವಾಗಿ ಎದುರಿಸುವುದು ಆದೆಷ್ಟು ಸಾಹಸಕಾರ್ಯವೊ, ಹಿಂದುಗಡೆಯಿಂದ ಒಬ್ಬನನ್ನು ಹಾಯುವುದು ಅಷ್ಟೇ ಮೂರ್ಖತನದ ಕೆಲಸ. ಜಗತ್ತಿನಲ್ಲಿ ಶಾಂತಿಯನ್ನು ಸಂಸ್ಥಾಪಿಸಬೇಕು; ಎಲ್ಲ ರಾಷ್ಟ್ರಗಳೊಡನೆಯೂ ಸ್ನೇಹವರ್ತನೆಯಿಂದ ಬಾಳಬೇಕು, ಪರಸ್ಪರ ಸಹಕಾರ, ಸಹಾನುಭೂತಿಗಳನ್ನು ತೋರಿಸಬೇಕು; ಒಂದು ರಾಷ್ಟ್ರದ ಅಭಿವೃದ್ಧಿಗೆ ಇನ್ನೊಂದು ಪೋಷಕವಾಗಬೇಕು ಎಂಬಿತ್ಯಾದಿ ಘೋಷೋದ್ದೇಶಗಳನ್ನು ಯುದ್ಧ ಕಾಲಾನಂತರ ಜಗತ್ತಿನ ಎಲ್ಲ ರಾಷ್ಟ್ರಗಳೂ ಕಂಡುಕೊಂಡವು ಅದಕ್ಕಾಗಿ ಯುಕ್ತ ರಾಷ್ಟ್ರಸಂಘವನ್ನು ಸ್ಥಾಪಿಸಿಕೊಂಡುವು. ನಿಶ್ಶಸ್ತ್ರೀಕರಣಾದಿ ಉದ್ದೇಶಗಳನ್ನು ಆದು ಇಟ್ಟುಕೊಂಡಿತು. ಅಮೆರಿಕದ ಸಂಯುಕ್ತ ರಾಷ್ಟ್ರಗಳು, ಗ್ರೇಟ್ ಬ್ರಿಟನ್, ರಶ್ಯಾ ಹಾಗೂ ಫ್ರಾನ್ಸ್‌ಗಳು ಮುಖ್ಯ ರಾಷ್ಟ್ರಗಳಾಗಿ ಸದಸ್ಯರಾದುವು.

ಈ ಮುಖ್ಯ ದೊಡ್ಡ ರಾಷ್ಟ್ರಗಳು ಭಾವಯಶಃ ಇಬ್ಬಣಗಳಾಗಿವೆ. ರಶ್ಯಾವೊಂದೆಡೆ. ಉಳಿದುವು ಬೇರೆಯೆಡೆ. ಈ ಎರಡು ಬಣಗಳು ಒಂದನ್ನೊಂದು ಕುಹಕ ದೃಷ್ಟಿಯಲ್ಲಿ ನೋಡುತ್ತವೆಯೇ ಹೊರತು ಯಥಾರ್ಥ ದೃಷ್ಟಿಯಿಂದ ಕಾಣುವುದಿಲ್ಲ. ಹನ್ನೊಂದು ವರ್ಷಗಳಿಗೆ ಮೊದಲು ಯಾವ ಉದ್ದೇಶಗಳ ಸಾಧನೆಗಾಗಿ ಯುಕ್ತ ರಾಷ್ಟ್ರಸಂಘದ ಸ್ಥಾಪನೆ ಮಾಡಿದರೋ ಆ ಮೂಲೋದ್ದೇಶವನ್ನು ಎಲ್ಲರೂ ಮರೆತುಬಿಟ್ಟಿಂತಿದೆ. ಇದೀಗ ಅಮೆರಿಕಾ, ಬ್ರಿಟನ್ ಮತ್ತು ರಶ್ಯಗಳು ಒಂದಕ್ಕಿಂತ ಇನ್ನೊಂದು ಅಧಿಕ ಪ್ರಮಾಣದಲ್ಲಿ ಮಾರಕಾಸ್ತ್ರಗಳ ಪ್ರಯೋಗವಿನ್ನು ಮಾಡುತ್ತ, ಪರರಿಗೆ ಅವುಗಳ ನಿಷೇಧಕ್ಕಾಗಿ ಉಪದೇಶಿಸುತ್ತವೆ. ಈ ಮೂರ್ಖತನದಿಂದ ಜಗತ್ತಿನಾದ್ಯಂತವಾಗಿ ದ ಪ್ಪರಿಣಾಮಗಳು ಕಂಡುಬರುತ್ತವೆ ಗಾಂಭೀರತೆಯ ಹಿರಿಯ ರಾಜಕಾರಣಿಗಳಾದ ರಾಜಾಜೀಯವರು ಇಂತಹ ಮೂರ್ಖತನದ ಪ್ರತಿಭಟನೆಯನ್ನು ಮಾಡುತ್ತಲಿದ್ದಾರೆ.

ಜಗತ್ತು ಇಂದು ಯುದ್ಧದಿಂದ ಬೂರವಿರುವ ಯಾವುದೇ ಒಂದು ಪ್ರಕಾರದ ವಿಧಾನವನ್ನು ಕಂಡುಕೊಂಡಿಲ್ಲ. ನಾಶಕಾರಕಾಸ್ತ್ರಗಳ ಪ್ರಥಮ ಪರಿಚಯವನ್ನು ಜನರಿಗೆ ಮಾಡಿಕೊಟ್ಟಾಗ ದೊಡ್ಡ ದೊಡ್ಡ ವಿಜ್ಞಾನಿಗಳೂ ಮಹಾನೇಮುರೊ ರಾಷ್ಟ್ರಗಳು ಇನ್ನು ಮುಂದಕ್ಕೆ, ಯುದ್ಧದಲ್ಲಿ ಆಶಕ್ತರಾಗಲಾರರೆಂದು ತಿಳಿದಿದ್ದರು ಆದರೆ, ಆಂತಹ ಪರಿಸ್ಥಿತಿಯು ಇಂದಿನವರೆಗೂ ಒದಗಲಿಲ್ಲ. ಬದಲು ಯುದ್ಧವು ಪ್ರಚಲಿತ ದಿನಗಳಲ್ಲಿ ಅನಿವಾರ್ಯವಾಗುವ ಪರಿಸ್ಥಿತಿಯೇ ಅಧಿಕವಾಗುತ್ತಿದೆ. ಯುದ್ಧಕ್ಕಾಗಿ ಅಸ್ತ್ರ ಸಂಗ್ರಹವು ಹಿಂದಿನ ದಿನಗಳಿಂತ ಈಗ ಬಹಳ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ. ವೈಜ್ಞಾನಿಕ ಪ್ರಯೋಗಗಳು ಮಾನವನ ಜ್ಞಾನಕ್ಷಿತಿಜವನ್ನು ಕಂಡುಕೊಂಡಿಲ್ಲವೆಂದೇ ಈ ಪರಿಸ್ಥಿತಿಗೆ ಅರ್ಥಮಾಡಿಕೊಳ್ಳಬಹುದು. ಮಾನವರು ಯಾರಾದರೊಬ್ಬನೊಂದಿಗೆ ಕದನಕ್ಕಾಗಿ ಹಾತೊರೆಯುವುದಾದರೆ, ಅವರು ಅದರ ಪರಿಣಾಮವನ್ನು ಎಂದೂ ಗಮನಿಸುವುದಿಲ್ಲ. ಜಪಾನಿನ ಮೇಲೆ ಅಣುಬಾಂಬು ಹಾಕಿದ ಕಾಲದಲ್ಲಿದ್ದುದಕ್ಕಿಂತಲೂ ಇಂದು ಅಣುಗಳ ಕರಾಳತೆಯು ಬಲಿತಿದೆ, ಮತ್ತು ನಮ್ಮ ದೃಷ್ಟಿಯನ್ನೇ ಸೆಳೆಯುತ್ತಿದೆ. ಆದುದರಿಂದ, ಅಣುಶಕ್ತಿಯ ಸಂಶೋಧನೆಯಿಂದ, ಯುದ್ಧಗಳಿಗೆ ಪೂರ್ಣ ವಿರಾಮ ಬಿತ್ತು ಎಂದು ತಿಳಿದುಕೊಂಡಿದ್ದವರ ಕಲ್ಪನೆಯು ಕನಸಿನ ಭತ್ತವಾಯಿತೇ ಹೊರತು ನೆನಸಾಗಲಿಲ್ಲ. ಅಲ್ಲದೆ ಆ ಭವ್ಯ ಭಾವನೆಯು ನುಚ್ಚುನೂರಿ ಯಾಯಿತು.

ಭಾರತದಲ್ಲಿ ಬ್ರಿಟಿಷರು ರಾಜ್ಯವಾಳುತಿದ್ದಾಗ, ಅವರ ಶಸ್ತ್ರಾಸ್ತ್ರಗಳಿಗಿಂತಲೂ ಬಲಶಾಲಿ ಶಸ್ತ್ರಗಳ ಸಂಶೋಧನೆಯಾಗಿ, ಅವರ ಸಹಾಯದಿಂದ ಭಾರತೀಯರು ಬ್ರಿಟಿಷರನ್ನು ಭಾರತದಿಂದ ಹೊಡೆದೋಡಿಸುವ ಕಾಲ ಬರಲಿಯೆಂಬ ಬಯಸಿದ್ದ ಕಾಲವೋದಿತ್ತು. ಗಾಂಧೀಜೀಯವರು ನವೀನಾಸ್ತ್ರವೊಂದನ್ನು ನರ್ಮ ಒದಗಿಸಿದಾಗೆ, ನಮ್ಮ ಅಭಿಲಾಷೆ ಒಂದು ದೃಷ್ಟಿಯಿಂದ ಈಡೇರಿತು. ಆದೇ ಆಯುಧಧಾರಿಗಳು ಈಗ ಹಿಂದಿನದಕ್ಕಿಂತಲೂ ಭಯಾನಕವಾದ ಅಣು ಶಸ್ತ್ರಾಸ್ತ್ರಗಳನ್ನು ಇಂದು ಪಡೆದಿದ್ದಾರೆ. ಹುಲಿ, ಆನೆ ಆಥವಾ ಸಿಂಹಗಳಿಗೆ ಕೊಡೆಯುಬಳುದಾದ ಗುಂಡುಗಳನ್ನು ಜನರು ಇಟ್ಟುಕೊಳ್ಳಬಾರದೆ ಒಂದು ಕಾಲವಿತ್ತು. ಯಾರು ಆಗ ಹಾಗೆ ವಿಧಿಸಿದ್ದರೋ ಅವರು ಇಂದು ತಮ್ಮ ಶಸ್ತ್ರುಗಳನ್ನು ಮಾತ್ರ ಹೊಡೆಯುವುದಿಲ್ಲ; ಜನರಿಗೆ ವಿಷವನ್ನೂ ಉಣ್ಣಿಸುತ್ತಾರೆ. ಆದು ಆಸ್ಟರಲ್ಲಿ ನಿಲ್ಲುವುದಿಲ್ಲ, ಪ್ರತಿಯೊಬ್ಬರಲ್ಲಿಯೂ ಆ ವಿಷವು ಪರಿಣಾಮವನ್ನುಂಟುಮಾಡುತ್ತದೆ. ಮಕ್ಕಳು ಮರಿಗಳು, ಗಂತರು ಹೆಂಗಸರು, ರಣಯೋಧರು, ರಣಯೋಷೇತರರು ಎಲ್ಲರೂ ಈ ವಿಷದ ಬಾಧೆಗೊಳಗಾಗುತ್ತಾರೆ. ಈ ಅಣುವಿನ ವಿಷವು ಕರ್ಮದಂತೆ ಜೀವಿಗಳಿಗೆ ಅನಾಹುತವನ್ನು ಒದಗಿಸುತ್ತದೆ. ಆದರೆ ಕರ್ಮನಿಂಬಾದರೂ ಬಿಡುಗಡೆ ಹೊಂದುವ ಅವಕಾಶವಿದೆ; ಅಣು ವಿಷದಿಂದ ದೂರವಿರಲು ಯಾವ ವಿಧಾನವೂ ಇರುವುದಿಲ್ಲ. ಬೆಳಕು, ಗಾಳಿ ಯಾವುದರಿಂದಲೂ ಇದನ್ನು ನಾಶಮಾಡುವುದು ಸಾಧ್ಯ. ಆನುದರಿಂದ ಸುಧಾತರಿ ಜನಾಂಗದವರು ಮಾಡುವ ಯುದ್ಧ ಕೃತ್ಯಗಳಲ್ಲಿಯೂ ಮಾನವತೆಯು ಎದ್ದು ತೋರುವುದು ಅಗತ್ಯ.

ಜನತೆಯು ಸಾಕಷ್ಟು ಆಹಾರಾದಿಗಳನ್ನು ಪಡೆದು ಸುಖಕಾರಿತಿಗಳಿಂದ ಬಾಳಬೇಕಾದರೆ ಜನಸಂಖ್ಯೆಯನ್ನು ಕಡಮೆ ಮಾಡುವುದಲ್ಲದೆ ಅನ್ಯ ಮಾರ್ಗವಿಲ್ಲವೆಂಬುದಾಗಿ ಡಾಕ್ಟರರೂ ಸರಕಾರದ ಆರೋಗ್ಯಾಧಿಕಾರಿಗಳೂ ಅಭಿವ್ಯಯಪಡುತ್ತಾರೆ. ಆದುದರಿಂದ ಈ ಉದ್ದೇಶ ಸಾಧನೆಗಾಗಿ ಯುದ್ಧವಾಗುವುದಾದರೆ ತೊಂದರೆಯಿಲ್ಲ. ಆದೊಂದು ಉತ್ತಮ ರೀತಿಯಲ್ಲಿ ಸಮಸ್ಯೆಯನ್ನು ಪರಿಹರಿಸಬಲ್ಲುದು. ಆದರೆ, ಮಾನವನಲ್ಲಿ ಸಹಜವಾಗಿರಬೇಕಾದ ಧೈರ್ಯ ಸಾಹಸಗಳಿಂದ ಈ ಕಾರ್ಯವನ್ನು ಯಶಸ್ವಿಗೊಳಿಸಬೇಕು. ಸಾವಿರಾರು ಮೈಲುಗಳಷ್ಟು ದೂರದಲ್ಲಿರುವ ಜನರನ್ನು ಕೊಲ್ಲುವಂತಹ ಅನಾಗರಿಕ ವಿಧಾನವನ್ನು ಮಾತ್ರ ಅವರು ತೊರೆಯಬೇಕು. ಈ ಒಂದು ವಿಚಾರಕ್ಕಾಗಿ ಕೋಟ್ಯಂತರ ಡಾಲರುಗಳನ್ನು ವೆಚ್ಚಮಾಡಿ ಈ ಅಸಂಸ್ಕೃತಿಯನ್ನು ಬೆಳೆಯಿಸುವುದನ್ನು ನಿಲ್ಲಿಸಬೇಕು. ದೂರದ ಜನರನ್ನು ಹಿಂದಿನಿಂದ ಇರಿಯುವುದು ನಾಗರಿಕತೆಯೆ? ಜಗತ್ತಿನ ಮುಂದುವರಿದ ದೊಡ್ಡ ರಾಷ್ಟ್ರಗಳೇ ಇಂತಹ ಅನಾಗರಿಕತೆಯ ಬೀಜವನ್ನು ಬಿತ್ತುತ್ತಿರುವಾಗ ಲೋಕದಲ್ಲಿ ಶಾಂತಿಯು ಲಭಿಸುವುದು ಅತಿ ದೂರದ ಸಂಗತಿ. ಅವು ಒಂದರೊಡನೊಂದು ಈ ಅಸಂಸ್ಕೃತ ಆಚರಣೆಯಲ್ಲಿ ಮುಂದುವರಿಯುತ್ತಿವೆ. ಹಾಗಾಗಿ ಈ ಅಸಂಸ್ಕೃತಿಯೇ ಒಂದು ಸಂಸ್ಕೃತಿಯ ರೂಪವನ್ನು ಧರಿಸಿಕೊಂಡಿದೆ. ಸಾರ್ವಜನಿಕ ಆರೋಗ್ಯವನ್ನು ಭಯಸುವ ಪ್ರತಿಯೊಬ್ಬನೂ ಈ ಅಣುವಿನಲ್ಲಿ ಅಡಕವಾದ ವಿಷವನ್ನು ಜಗತ್ತಿನಲ್ಲಿಡೀ ಹರಡಿಸುವುದನ್ನು ಎಂದಿಗೂ ಒಪ್ಪಲಾರ. ಇಂತಹ ಮಾರಕಾಸ್ತ್ರಗಳಲ್ಲಿ ವಿಶ್ವಾಸವನ್ನಿಡುವವರು ಬುದ್ಧಿಹೀನರಾಗಿಯೇ ಅವುಗಳ ಪ್ರಯೋಗವನ್ನು ಮಾಡುತ್ತಾರೆ. ಇಂತಹ ಜನರಲ್ಲಿ ವಿಶ್ವಾಸವನ್ನು ಇಡುವುದೆಂದರೆ, ಕ್ಷಾಮಕ್ಕೆ ತುತ್ತಿಯನ್ನು ಹಿಡಿದುಕೊಂಡ ಹುಟ್ಟು ಮಗುವಿನಲ್ಲಿ ವಿಶ್ವಾಸ ವಿಡುವುದಕ್ಕಿಂತಲೂ ಮೂರ್ಖತನವೆ.

ಬ್ರಿಟಿಷ ರಾಷ್ಟ್ರವೇ ಮೊದಲಲ್ಲಿ ಈ ಅಣು ಶಕ್ತಿಯ ಪ್ರಯೋಗವನ್ನು ನಿಲ್ಲಿಸಬೇಕು, ಏಕೆಂದರೆ, ಕಾಮನ್‌ವೆಲ್ತ್ ರಾಷ್ಟ್ರವಾದ ಭಾರತಕ್ಕೆ ಅದನ್ನು ನಿಲ್ಲಿಸುವಂತೆ ಬ್ರಿಟನ್ನನ್ನು ಕೇಳಿಕೊಳ್ಳುವ ಅಧಿಕಾರವಿದೆ ಹಾಗೆ ಕೇಳಿದಾಗ ಬ್ರಿಟನ್ ಒಪ್ಪದಿದ್ದರೆ ಮಾತ್ರ ಭಾರತವು ಕಾಮನ್‌ವೆಲ್ತ್‌ನಿಂದ ಹೊರಬರಬೇಕು. ಅಮೆರಿಕಾ ಆಥವಾ ಇನ್ನಾವುದೇ ರಾಷ್ಟ್ರದೊಡನೆ ಅಣುಪ್ರಯೋಗವನ್ನು ನಿಲ್ಲಿಸಲು ಕೇಳುವುದು, ಆಧಿಕಾರದಿಂದಲ್ಲ; ಬದಲು ಸೌಹಾರ್ದ ಸೌಜನ್ಯದಿಂದ ಮಾತ್ರ. ಆದುದರಿಂದ, ಸಹರಾಷ್ಟ್ರಪ್ರಯೋಗವಿನವ ಭಾರತವು ಬ್ರಿಟನ್ನಿನೊಡನೆ ಈ ಭಯಾನಕ ಮಾರಕಾಸ್ತ್ರಗಳನ್ನು ತಡೆಹಿಡಿಯಂತೆ ಕೇಳುವುದು ಅಗತ್ಯ.

ಅಣುಶಕ್ತಿ ಮತ್ತು ಜನತಾರೋಗ್ಯಗಳ ನಡುವಣ ಸಮರವು ಈಗಾಗಲೇ ಮೊದಲಾಗಿದೆ. ಅಣುಶಕ್ತಿಯು ಜೆಳೆಯುತ್ತಾ ಬಂದು ಜಗತ್ತನ್ನೇ ಕಲುಷಿತಗೊಳಿಸುತ್ತಿದೆ. ಆದುದರಿಂದ ಅಂತಹುದನ್ನು ಕೂಡಲೇ ತಡೆಗಟ್ಟಬೇಕು. ನಮ್ಮ ಸರಕಾರವು ಈ ಮಹತ್ವದ ಸಮಸ್ಯೆಯನ್ನು ಯೋಗ್ಯ ರೀತಿಯಲ್ಲಿ ಬಿಡಿಸಲು ಶಕ್ಯರೀತಿಯಲ್ಲಿ ಪ್ರಯತ್ನಿಸಬೇಕು. ನಮ್ಮೊಂದಿಗೆ ಈ ಶೋಧನ ಕಾರ್ಯದಲ್ಲಿ ಸಹಕಾರಿಗಳಾಗಲು ಕೂತೂಹಲಿಗಳಾಗಿರುವ ಇತರ ರಾಷ್ಟ್ರಗಳು ಹಲವಿವೆ. ಈ ಅಣುಶಕ್ತಿಯ ಗುಳಿಗೆಯ ರುಚಿಯನ್ನು ಕಂಡಿರುವ ಜಪಾನವು ಸಿಕ್ಕಿ ಸಿಕ್ಕಿದಲ್ಲೀ ಈ ಮಾರಕಾಸ್ತ್ರದುಪಯೋಗವನ್ನು ತಡೆಯಬೇಕು ಎಂದು ಕೇಳಿಕೊಳ್ಳುತ್ತಿದೆ. ಅದರ ಕೇಳಿಕೆಯು ಅಖಂಡ ಲೋಕದ ಕೇಳಿಕೆಯಾದುದರಿಂದ ನಾವೆಲ್ಲರೂ ಅದಕ್ಕೆ ನೆರವು ನೀಡುವುದು ಅತ್ಯಗತ್ಯ. ನಮ್ಮ ಸರಕಾರಗಳು ದೊಡ್ಡ ಶಕ್ತ ರಾಷ್ಟ್ರಗಳ ಈ ಮಾರಕ ಕ್ರಿಯೆಗಳಿಗಾಗಿ ನಾಚುಗೆಪಡುವಂತೆ ಮಾಡಿ, ತಮ್ಮ ತಪ್ಪುಕಾರ್ಯದಿಂದ ದೂರವಿರುವಂತೆ ಗೆಯ್ಯುವುದು ಅತ್ಯಗತ್ಯ.

(ರಾಜಾಜಿಯವರ ಭಾಷಣದ ಆಧಾರದಿಂದ.)




# ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶ್ಯಲ್ ನಂ ೧] [ಸೆಡೇಟಿವ್

ಸ್ಮರಣಶಕ್ತಿ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

**ಸ್ಥಾನಿಕ ಕ್ರಯ:** ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

**ಶ್ರೀ ರಾಮತೀರ್ಥ ಯೋಗಾಶ್ರಮ,**
**ದಾದರ್** (ಸೆಂಟ್ರಲ್ ರೈಲ್ವೆ) **ಮುಂಬಯಿ, ೧೪.**



# ಮೂಲ್ಕಿ ಬೇಂಕ್ ಲಿಮಿಟೆಡ್,

ಮೂಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

**ನಮ್ಮ ಬಡ್ಡಿ ದರಗಳು.**

| ನಿರಖು ಠೇವಣಾತಿ. | |
|---|---|
| 24 ತಿಂಗಳಿಗೆ | 4% |
| 12 ,, | 3½% |
| 6 ,, | 3½% |
| 3 ,, | 3% |
| ಸೇವಿಂಗ್ಸ್ ಬೇಂಕ್ ಲೆಕ್ಕ | 2% |
| ಕರೆಂಟ್ ಎಕೌಂಟು | ½% |

THE MOOLKY BANK, LTD. MULK



# ಮಕ್ಕಳ ಮಗ್ಗಿಪುಸ್ತಕ

ಬೆಲೆ: ೦-೧೫-೦

ನವಯುಗ ಪ್ರೆಸ್, ಉಡುಪಿ

## ಭಾರತೀಯ ಮಹಿಳೆಯರು

# ಒದಗಿದ ಸ್ವಾತಂತ್ರ್ಯದ ಸದುಪಯೋಗವಾಗಲಿ

ಭಾರತೀಯ ಸಭ್ಯತೆಯ ಪ್ರಾಚೀನ [illegible]ಮ ಸಮಯವು ವೈದಿಕ ಯುಗವಾಗಿದೆ. [illegible]ವದನ್ನು ಜಗತ್ತಿನ ನಾಗರಿಕತೆಯ ಅ [illegible]ಶ್ಚ ಮಟ್ಟವೆಂದರೂ ಆದರಲ್ಲಿ ಅತಿಶ [illegible]ಕ್ತಿಯಿಲ್ಲ. ಆ ಸಮಯದಲ್ಲಿ ಭಾರ [illegible]ಯ ಸ್ತ್ರೀಯರ ಸ್ಥಾನಮಾನಗಳು ಬಹ [illegible] ಉನ್ನತವಾಗಿದ್ದುವು. ಅವರು ಸ್ವತಂತ್ರ [illegible]ರಾಗಿದ್ದರು. ವಿದ್ಯಾಭ್ಯಾಸವೇ ಮೊದಲಾದುವುಗ [illegible] ನ್ಯವಸ್ಥೆಯೂ ಅವರಿಗೆ ವೈದಿಕ ಕಾಲ [illegible]ಲ್ಲಿ ಧಾರಾಳವಾಗಿತ್ತು. ಜ್ಞಾನ ಮತ್ತು [illegible]ರ್ಮ ಕ್ಷೇತ್ರಗಳಲ್ಲಿ ಅವರಿಗೆ ವಿಕಾಸ [illegible]ೊಂದುವ ಸಂದರ್ಭಗಳು ದೊರೆಯುತಿ [illegible]ದ್ದು, ಪುರುಷರ ಭೋಗ ಸಾಮಗ್ರಿಗಳೆಂ [illegible]ದು ಮಾತ್ರ ಅವರನ್ನು ತಿಳಿಯುತ್ತಿರಲಿಲ್ಲ. [illegible]ಮಾಜೋದ್ಧಾರ ಕಾರ್ಯದಲ್ಲಿ ಯಾವ [illegible]ೀತಿಯಿಂದಲೂ ಕೈಹಾಕುವ ಅವಕಾಶವು [illegible]ರಿಯರಿಗಿತ್ತು. ಯಜ್ಞೋಪವೀತಗಳನ್ನ [illegible]ರಿಸಿಕೊಂಡು, ಅವರು ವೇದಾಧ್ಯಯನ [illegible]ಮತ್ತು ಅಗ್ನಿ ಹೋತ್ರಗಳನ್ನೂ [illegible]ಮಾಡಬಹುದಾಗಿತ್ತು. ಆ ಕಾಲದಲ್ಲಿಯೇ [illegible]ಶೋಷ್ಣಾ, ಸೂರ್ಯಾ, ಲೋಪಾಮುದ್ರಾ, [illegible]ಗಾರ್ಗೀ ಮೈತ್ರೇಯಿ ಮೊದಲಾದ ಋಷಿ [illegible]ಪತ್ನಿಯರು ಭಾರತದಲ್ಲಿ ಬಾಳಿದ್ದರು. ಆವರ ಮೂಲಕ ಪ್ರಕಾಶಗೊಂಡ [illegible]ತ್ಯಗಳು ಭಾರತೀಯರಿಗೆ ಮಾನ್ಯವಾ [illegible]ವೆ.

ಸ್ತ್ರೀ ಪುರುಷರ ನಡುವೆ ಆ ಕಾಲದಲ್ಲಿ [illegible]ನ್ನತಿಯಿರಲಿಲ್ಲ. ಭೇದಭಾವವಿಲ್ಲದೆ, [illegible]ಬ್ಬರೊಡನೊಬ್ಬರು ಸಮಾನಸ್ಕಂಧರಾಗಿ [illegible]ಡೆದುಕೊಳ್ಳುತಿದ್ದರು. ಒಬ್ಬರಲ್ಲಿನ ಕುಂ [illegible]ಯಿಕೊರತೆಗಳನ್ನು ಇನ್ನೊಬ್ಬರು ತುಂಬಿ [illegible]ರ್ಣವಾಡುತಿದ್ದರು. ಪಾತಾಗಿ ದಂಪ [illegible]ತಿಗಳು ಪೂರ್ಣರಾಗಿದ್ದು ಸುಖಸಂತೋ [illegible]ಷಗಳಿಂದ ಒಂದಾಗಿ ಬಾಳುತಿದ್ದರು. [illegible]ದರೂ ವ್ಯಕ್ತ್ಯೇಕ ವ್ಯಕ್ತಿಗತ ಜೀವನದಲ್ಲಿ [illegible]ಸ್ವಾತ್ರ್ಯ ಅವರು ಸ್ವತಂತ್ರರಾಗಿ ನಡೆಯು [illegible]ತ್ತಿದ್ದರು. ಕೆಲ ಸಮಯಾನಂತರ ಒಬ್ಬ [illegible]ರು ತನ್ನ ಸ್ವರೂಪದಲ್ಲಿ ಇನ್ನೊಬ್ಬರು [illegible]ನ್ನ ವಿಶೇಷ ಸಂಯುಕ್ತತ ಸ್ವರೂಪದಲ್ಲಿ [illegible]ಪ್ರಕಟವಾಗುತ್ತಾ ಬಂದರು. ವಿಷ್ಣು ಪು [illegible]ರಾಣದಲ್ಲಿ ಈ ಕುರಿತಾದ ಒಂದು ಉಲ್ಲೇ [illegible]ಖವಿದೆ: "ಪುರುಷನು ವಿಷ್ಣು, ಸ್ತ್ರೀ [illegible]ಪ್ಪೈ ಪುರುಷನು ವಿಚಾರ; ಸ್ತ್ರೀ [illegible]ಚನ್ನು ವ್ಯಕ್ತಗೊಳಿಸುವ ಭಾ ಷೆ. [illegible]ರುಷನು ಧರ್ಮ; ಸ್ತ್ರೀ ಬುದ್ಧಿ." ಹೀಗೆ [illegible]ಯೇ ಮುಂದುವರಿದು "ಪುರುಷನು ಶಕ್ತಿ [illegible]ಸ್ತ್ರೀ ಸೌಂದರ್ಯ. ಪುರುಷನು ಆತ್ಮ, ಸ್ತ್ರೀ [illegible]ಶರೀರ" ಎಂದು ಮೊದಲಾಗಿ ಅಲ್ಲಿ ನಿರೂ [illegible]ಪಿತವಾಗಿದೆ. ಇಲ್ಲಿ ಸ್ತ್ರೀಯು ಮಹತ್ವವು [illegible]ಪುರುಷನಿಗಿಂತ ಏನೇನೂ ಕಡಮೆಯಿಲ್ಲ [illegible]ವೆಂದು ತಿಳಿಯಬಹುದು.

ಮನುಸ್ಮೃತಿಯು ಭಾರತೀಯ ವ್ಯವ [illegible]ಹಾರ ಶಾಸ್ತ್ರಗಳಲ್ಲಿ ಪ್ರಮುಖವಾದುದು. [illegible]ಅದರಲ್ಲಿ ಭಾರತೀಯ ಸ್ತ್ರೀ ಜೀವನಕ್ಕೆ [illegible]ವಿಶೇಷ ಸನ್ಮಾನವೀಯಲಾಗಿದೆ.

ಯತ್ರನಾರ್ಯಸ್ತು ಪೂಜ್ಯಂತೇ |
ರಮಂತೇ ತತ್ರದೇವತಾಃ
ಯತ್ರೈ[illegible]ತಾಸ್ತು ನಪೂಜ್ಯಂತೇ |
ಸರ್ವಾಸ್ತತ್ರಾಫಲಾಃ ಕ್ರಿಯಾಃ ||

ಎಂದರೆ, ಸ್ತ್ರೀಯರ ಪೂಜೆಯು ನಡೆಯುವಲ್ಲಿ ದೇವತೆಗಳು ವಾಸಿಸುವರು, ಅವರ ಪೂಜೆಯಾಗದಿರೆಡೆಗಳಲ್ಲಿ ನಡೆಯುವ ಸಕಲ ಕ್ರಿಯೆಗಳೂ ನಿಷ್ಫಲಗೊಳ್ಳುವುವು. ಇಲ್ಲಿ ಸ್ತ್ರೀಯರ ಬಗೆಗೆ ಭಾರತೀಯರಿಟ್ಟ ಗೌರವ ಭಾವನೆಯು ವ್ಯಕ್ತವಾಗುವುದು. ಆದರೆ, ಹೀಗೆ ನಾರಿಯರನ್ನು ಪೂಜಿಸುವುದವಶ್ಯವೆಂದಭಿಪ್ರಾಯಪಟ್ಟ ಮನುವೇ

ಪಿತಾರಕ್ಷತಿ ಕೌಮಾರೇ | ಭರ್ತಾ
ರಕ್ಷತಿ ಯೌವನೇ
ರಕ್ಷಂತಿ ಸ್ಥವಿರೇ ಪುತ್ರಾ | ನ ಸ್ತ್ರೀ
ಸ್ವಾತಂತ್ರ್ಯ ಮರ್ಹತಿ ||

ಎಂದರೆ, ಎಳೆಯವಳಿರುವಾಗ ತಂದೆಯೂ, ಯೌವನ ಕಾಲದಲ್ಲಿ ಪತಿಯೂ, ವೃದ್ಧಾಪ್ಯದಲ್ಲಿ ಪುತ್ರರೂ ಸ್ತ್ರೀಯನ್ನು ಪೊರೆಯುತ್ತಾರೆ. ಆದುದರಿಂದ ಸ್ತ್ರೀಯು ಸ್ವತಂತ್ರಳಾಗಿ ಜೀವನ ಪಥದಲ್ಲಿ ವಿಕಾಕಿಯಾಗಿರುವುದು ಸಲ್ಲದು. ಒಂದಲ್ಲ ಒಂದು ವಿಧದ ಆಧಾರವು ಆಕೆಗೆ ಬೇಕು ಎಂದಿದ್ದಾನೆ. ಮಹಾ ಭಾರತದ ಕಾಲದಲ್ಲಿ ಕೌರವಪೊಡನೆ ಯುದ್ಧ ಮಾಡಲಾರೆವೆಂದು ಪಾಂಡವರು ನುಡಿದು ಸಂಧಿಯನ್ನೊಡಂಬಟ್ಟರೂ ಸಂಗ್ರಾಮವನ್ನೇ ಮುಂದಿಟ್ಟು ಕೊಳ್ಳುವೆನೆಂದು ನುಡಿವ ಸ್ವಾತಂತ್ರ್ಯ ವ್ಯಾಪದಿಗಿದ್ದಿತು. ಆದರೆ, ಆ ಮಟ್ಟದ ಸ್ವಾತಂತ್ರ್ಯವನ್ನುವಿನ ಕಾಲದಲ್ಲಿ ದೊರವಾಗುತ್ತ ಬಂದು ಹಿಂದಿನ ಉಚ್ಚತೆಯ ಆದರ್ಶವು ತಿಪ್ಪೆಗೆ ಬಿದ್ದು, ಸಮಾಜದ ದೃಷ್ಟಿಯಲ್ಲಿ ಅಬಲೆಯಾಗಿ ಪರಿಣಮಿಸಿದಳು. ಅವಳು ಕೇವಲ ಪೂಜೆಗೆ ಮಾತ್ರ ಅರ್ಹಳು ಎಂಬ ಭಾವನೆಯು ನೆಲೆ ಮಾಡಿತು.

ಭಾರತದಲ್ಲಿ ವಿದೇಶೀಯರು ಪಾದಾರ್ಪಣ ಮಾಡಲಾರಂಭಿಸಿದರು. ವಿಜಯೋನ್ಮಾದದಿಂದ ರಾಜ್ಯ ಧನಗಳ ಗೊಡವೆಯನ್ನಲ್ಲದೆ ಸ್ತ್ರೀ ಅಪಹಾರಕ್ಕೂ ಅವರು ಮೊದಲುಮಾಡಿದರು. ಅಂದಿನಿಂದ ಭಾರತದಲ್ಲಿ ಸರದಾಪದ್ಧತಿಯು ಪ್ರಚಲಿತವಾಯಿತು. ಆ ಕಾಲದಿಂದ ಸ್ತ್ರೀಯರ ಸ್ಥಾನವು ಮತ್ತಾ ಹ್ರಾಸಗೊಳ್ಳುತ್ತಾ ಬಂತು. ಆಕ್ರಮಣಕಾರರಿಗೆ ಒಂದರಮೇಲೊಂದರಂತೆ ವಿಜಯ ಪ್ರಾಪ್ತಿಯಾಗುತ್ತಾ ಬಂದಂತೆ ಇಲ್ಲಿನ ಕಂಪತ್ಸಮೃದ್ಧಿಯಿಂದ ನಾಲಗೆ ಒಸರಿ ಇಲ್ಲಿಯೇ ನೆಲೆಯೂರುವ ದೃಢನಿರ್ಧಾರಕ್ಕೆ ಬಂದರು. ಅವರ ಅತ್ಯಾಚಾರಗಳಿಂದಾಗಿ ಭಾರತೀಯ ಸ್ತ್ರೀಗೆ ಸ್ವತಂತ್ರವಾಗಿ ವ್ಯವಹಾರ ರಂಗಕ್ಕೆಳಿಯುವುದು ಅಸಾಧ್ಯವಾಗಿ ಪರಿಣಮಿಸಿತು ಆಕೆಯು ಸ್ವಾವಲಂಬಿಯಾಗುವುದು ಸಂಪೂರ್ಣ ಅಸಾಧ್ಯವಾದುದರ ಪರಿಣಾಮವಾಗಿ, ಪರಾವಲಂಬಿಯಾದಳು. ಆಕೆಯ ಸ್ವಾಮಿ "ಗೃಹಿಣೀ ಗೃಹಮುಚ್ಯತೇ" ಎಂದು ಮನೆಯಲ್ಲಿಯೇ ಕೂರಿಸಿಕೊಂಡು, ಸನ್ಮಾನಿಸತೊಡಗಿದನು. ಆಕೆಯು ಹೊಸ್ತಿಲನ್ನು ದಾಟಿ ಹೊರಬರುವುದೂ ಅಸಾಧ್ಯವಾಯಿತು. ಕ್ರಮೇಣ ಆಕೆಯೂ ಗೃಹದಲ್ಲಿ ಕೂತಿರುವುದೇ ತನ್ನ ಕರ್ತವ್ಯವೆಂದು ತಿಳಿದುಕೊಳ್ಳತೊಡಗಿದಳು. ಎಂತಲೆ ಮನು ಮಹರ್ಷಿ ಆ ರೀತಿ ಬರೆದನು. ಪ್ರಾಚೀನ ಭಾರತೀಯ ಸ್ತ್ರೀಯ ಸ್ವಾತಂತ್ರ್ಯವು ಪರಾಕ್ರಮಣ ಮತ್ತವರ ಏಳಿಗೆ ಉಪಟಳಗಳಿಂದಾಗಿ ತಪ್ಪಿಹೋಗಿ ಆಕೆ ಸ್ವತಂತ್ರಳಾಗಿರಲು ಆಯೋಗ್ಯಳೆಂಬ ಭಾವನೆಯೇ ನಮ್ಮ ಜನರಲ್ಲಿ ಬೆಳೆದು ಬಲವು ಅಸುಪ್ಪೊದಗಿತು.

ಭಾರತದ ಮಹತ್ವದ ನಿಜಸ್ವರೂಪವು ಭಾರತೀಯ ಕುಟುಂಬದಲ್ಲಿಯೇ ದೊರೆಯುತ್ತದೆ. ಭಾರತೀಯ ಸ್ತ್ರೀ ತಾನೆಷ್ಟು ಹೀನಸ್ಥಿತಿಯಲ್ಲಿದ್ದರೂ ತನ್ನ ಕುಟುಂಬವನ್ನು ಯೋಗ್ಯ ಮಾರ್ಗದರ್ಶನದಿಂದ ಮುನ್ನಡೆಸುವ ಶಕ್ತಿವಂತಳಾಗಿದ್ದಾಳೆ. ಪತಿ ಪರಾಯಣೆಯಾಗಿ, ಪತಿಯ ಒಲುಮೆಯನ್ನು ಪಡೆದು ಸಂಸಾರ ರಥವನ್ನೆಳೆಯುವಲ್ಲಿ ಗಂಡಿಗೆ ಹೆಗಲೆಣೆಯಾಗಿ ಮುನ್ನೆಡೆವ ಸಾಮರ್ಥ್ಯವಂತಳು. ಒಂದೆಡೆಯಲ್ಲಿ ಪುರುಷನು ಮಾತೃಶಕ್ತಿಯ ರೂಪದಲ್ಲಿ ಸ್ತ್ರೀಯ ಪೂಜೆಯನ್ನು ಮಾಡುತ್ತಾನೆ. ಇನ್ನೊಂದೆಡೆ ಸ್ತ್ರೀಯೂ ಪವಿತ್ರ ಪತಿವ್ರತ ಧರ್ಮವನ್ನನುಸರಿಸಿರುತ್ತಾಳೆ. ಭಾರತೀಯ ಸ್ತ್ರೀ ಪುರುಷರು ಕೋಟಾನುಕೋಟಿ ಆದ್ಯಪೂರ್ವ ಸ್ನೇಹಸೂತ್ರದಿಂದ ಹೀಗೆ ಬಿಗಿಯಲ್ಪಟ್ಟಿದ್ದಾರೆ" ಎಂದೊಬ್ಬ ಆಂಗ್ಲೇಯನು ಹೇಳಿದ್ದಾನೆ. ಈ ನುಡಿಗಳು ಅಕ್ಷರಶಃ ಸತ್ಯ.

ಈ ರೀತಿಯ ಸಮಾಜ ವ್ಯವಸ್ಥೆಯಲ್ಲಿಯೇ ಶತಮಾನಗಳುರುಳಿದುವು. ಪಂಜಾಬ ಕೇಸರಿಯೆಂದು ಹೆಸರಾದ ಲಾಲಾ ಲಜಪತರಾಯ್ ಯಸರೊನ್ನೆ, "ಸ್ತ್ರೀ ಪುರುಷರಲ್ಲಿ ಒಬ್ಬನ ಸ್ವಭಾವವಿನ್ನೊಬ್ಬ ಸ್ತ್ರೀಯಲ್ಲಿ ಬೇಳುವುದಂತೆ ಸ್ತ್ರೀ ಸಮಗಿದೆ" ಎಂದು ಪುರುಷರ ಸಮಸ್ಯೆಯಂ [illegible]ದಲ್ಲಿಯೇ ಭಾರತೀಯ ಸ್ತ್ರೀಯರ ಕಾಲದಲ್ಲಿ ಒಮ್ಮಿಂದೊಮ್ಮೆಲೇ ಅವರ ಕಾ [illegible]ತಂತ್ರ್ಯದ ವಿಚಾರಧಾರೆಯು ಪ್ರವೇಶವಾಯಿತು.

ಮುಸಲ್ಮಾನರ-ಸೊಗಲರ ವಿರುದ್ಧವಾಗಿ ಭಾರತೀಯ ನಾರಿಯರು ಖಡ್ಗ ಪಾಣಿಗಳಾಗಿ ಕೆಚ್ಚೆದೆಯಿಂದ ಕಾದಾಡಿದ್ದ ಸಂಗತಿ ಸರ್ವಶ್ರುತವಿವೆ. ಅವರ ವೀರತೆಯು ಮಹಾನ್ ಮತ್ತು ದರ್ಶನೀಯವಾಗಿತ್ತು. ಅವರ ಶೂರತ್ವವೂ ಅತುಲವಾದುದಾಗಿತ್ತು. ರಾಣಿ ಪದ್ಮಿನಿ, ಝಾಂನ್ಸಿ ಲಕ್ಷ್ಮೀ ಬಾಯಿ, ಚಾಂದಾಬೀಬಿ, ತಾರಾಬಾಯಿ, ಅಹಲ್ಯಾಬಾಯಿ ಮೊದಲಾದ ಸ್ತ್ರೀಯರು ತಮ್ಮ ವೀರ್ಯವನ್ನು ಪ್ರದರ್ಶಿಸಿ, ಸ್ವತಂತ್ರತೆಯನ್ನು ಮಾಡಿಕೊಳ್ಳುವ ಪ್ರಯತ್ನಶೀಲರಾಗಿದ್ದರು.

ಭಾರತದಲ್ಲಿ ಸ್ವಾತಂತ್ರ್ಯ ಪ್ರಾಪ್ತಿಗಾಗಿ ಮೊದಲಾದ ಆಂದೋಲನಕ್ಕೆ ಕಾರಣಿಕೆಯಾಗಿಯೇ ಸ್ತ್ರೀ ಜೀವನದ ಸರ್ವಾಂಗೀಣ ವಿಕಾಸದ ಜಳವಳಯೂ ಆರಂಭವಾಯಿತು. ಸ್ತ್ರೀ ಶಿಕ್ಷಣ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಪಾತ್ರವಹಿಸುವ ದರ್ಜೆ ಸತತ ಪರಿಶ್ರಮದಿಂದ ಕಾರ್ಯ ವಾರಂಭವಾಯಿತು. ಕಾಲ ಕಾಲವೆಲ್ಲ ಕಾಡಿ-ಕೊಂಡ ನವೀನ ವಿಚಾರಧಾರೆಗೆ ಳನ್ನು ಕೂಡಿಸಿಕೊಂಡು ವಿಕಾಸ ಮಾರ್ಗದತ್ತ ಮುಂದುವರಿಯತೊಡಗಿತು.

ಇದೇ ಕ್ರಾಂತಿಯುಗ. ದೇಶದ ದಶದಿಸೆಗಳಲ್ಲಿಯೂ ಜಾಗೃತಿಯ ತೆರೆಗಳು ಏಳುತ್ತಾ ಇವೆ. ನಮ್ಮ ದೇಶವು ತನ್ನ ಶಿಕ್ಷಾ ಚಾರ ಮತ್ತು ಸಂಸ್ಕೃತಿಗಳಲ್ಲಿ ನಿತ್ಯ ನವೀನ ಮಾರ್ಗಗ್ರಹಣವನ್ನು ಮಾಡುತ್ತಾ ಇದೆ. ದಿನದ ಇಪ್ಪತ್ತನಾಲ್ಕು ತಾಸುಗಳಲ್ಲಿಯೂ ದೇಶದ ಉನ್ನತಿಯ ಪಥದತ್ತ ಧಾವಿಸುವ ಯೋಜನೆಯಲ್ಲಿದೆ. ಒಂದು ಶತಮಾನ ಪೂರ್ವದಲ್ಲಿ ಭಾರತದಲ್ಲಿ ಬಾಲ್ಯವಿವಾಹವು ಪ್ರಚಲಿತವಲ್ಲಿದ್ದಿಲ್ಲ. ಹರ್ಷನ ತಂಗಿ ರಾಜಶ್ರೀಯು ವೈತ್ತಾಂತದಿಂದ ೬ ನೆಯ ಶತಮಾನದಲ್ಲಿ-ಈ ಬಾಲ್ಯ ವಿವಾಹ ಪದ್ಧತಿ ಇರಲಿಲ್ಲ. ಎಂದು ತಿಳಿಯುತ್ತದೆ. ಅದರೆ ಮುಂದೆಕ್ಕೆ ಭಾರತದಲ್ಲಿ ಕಾಲಿರಿಸಿದ ಮುಸಲ್ಮಾನರ ಕ್ರೂರಕೃತ್ಯಗಳಿಂದ ತಮ್ಮ ಮಗಳಂದಿರನ್ನು ಕಾಪಾಡಲು, ತನ್ಮ ಹೊಣೆಗಾರಿಕೆಯನ್ನು ನೀಗಿಸಲು ಅವರು ಬಾಲವಿವಾಹಕ್ಕೆ ಕೈ ಹಾಕಿದರೆಂದು ಹೇಳಬಹುದು.

ಈಗ ವಿವಾಹ ಸಂಬಂಧದ ಕಾನೂನುಗಳಿಂದಾಗಿ ವಿವಾಹದ ವ್ಯಾಯಮಿತಿಯನ್ನು ಏರಿಸಿದ್ದಾರೆ. ಆದುದರಿಂದ ಸ್ತ್ರೀ ವಿದ್ಯಾಭ್ಯಾಸಕ್ಕೂ ವಿಶೇಷ

(೦೦ನೇ ಪುಟ ನೋಡಿರಿ)


## ಸಮಯ ಇನ್ನೂ ಮಿಂಚಿಹೋಗಿಲ್ಲ

ಜೀವನದಲ್ಲಿ ಒಂದು ರೀತಿಯ ವ್ಯವಸ್ಥೆಯಿರಬೇಕಾದರೆ ಆಪತ್ಕಾಲದಲ್ಲಿ ಸಹಾಯ ಕ್ಕೊದಗುವ ಒಂದು ಆಪತ್ಪನ್ನ ಸಂಗ್ರಹದ ಯೋಜನೆಯನ್ನು ಚಿಕ್ಕಂದಿನಿಂದಲೇ ಆರಂಭಿಸಬೇಕೆಂಬುದು ಸಹಜವೇ. ಆದರೆ ಕಾಲ ಕಳೆದು ಹೋಯಿತೆಂದು ಕಣ್ಣೀರು ಕರೆಯುತ್ತಾ ಕುಳಿತುಕೊಳ್ಳುವುದಕ್ಕಿಂತ ಇಂದಿನಿಂದಲೇ ಸ್ವಲ್ಪ ಸ್ವಲ್ಪ ಹಣವನ್ನಾದರೂ ಉಳಿತಾಯಮಾಡಲು ಯತ್ನಿಸುವುದೇ ಮುಖ್ಯ. ಸಮಯವಿನ್ನೂ ಮಿಂಚಿಹೋಗಿಲ್ಲ ಹಲವಾರು ಆಕರ್ಷಕ ಮತ್ತು ಸುಲಭಸಾಧ್ಯವಾದ ಉಳಿತಾಯದ ಯೋಜನೆಗಳಿಗೆ-

**ಸಿಂಡಿಕೇಟ್ ಬ್ಯಾಂಕಿನಲ್ಲಿ** ವಿಚಾರಿಸಿ.

**96** ಶಾಖೆಗಳು

ರೂ. **10.64** ಕೋಟಿಗೂ ಮಿಕ್ಕಿದ ಚಲನವಣ ನಿಧಿ

ಇವುಗಳಿಂದ ನಾವಿರಾರು ಜನರ ಆರ್ಥಿಕ ಆವಶ್ಯಕತೆಗಳಲ್ಲಿ ಸಹಕರಿಸಲ್ಪಟ್ಟ ಶೆಡ್ಯೂಲ್ಡ್ ಬ್ಯಾಂಕು

ಟಿ. ಎ. ಪೈ, ಬಿ. ಕಾಂ.(ಬೊಂಬಾಯಿ),
ಎಫ್.ಆರ್.ಇ.ಎಸ್.(ಲಂಡನ್), ಎ. ಐ. ಐ ಬಿ.,
ಜನರಲ್ ಮೆನೇಜರ್.

ಡಾ॥ ಟಿ. ಎಂ. ಎ. ಪೈ,
ಎಂ..ಬಿ.ಬಿ.ಎಸ್.,
ಮೆನೇಜಿಂಗ್ ಡೈರೆಕ್ಟರ್.

**The Canara Industrial & Banking Syndicate, Ltd.,**
Head Office: UDIPI, S. India.

# ಯೋಜನೆಯ ಸಫಲತೀಲ

## ಸಯಂನಾರದೊಂದಿಗೆ

## ಸಹಕರಿಸಿರಿ

ಜನಗಣನೆಗನುಗುಣವಾಗಿ ೧೯೫೧ರಲ್ಲಿ ಭಾರತದ ಜನಸಂಖ್ಯೆ ೩೬೧ ಮಿಲಿಯಗಳಷ್ಟಿತ್ತು. ಇದನ್ನು ಪ್ರಥಮ ಪಂಚವಾರ್ಷಿಕ ಯೋಜನೆಯ ಆರಂಭಕಾಲದ ಜನ ಸಂಖ್ಯೆಯೆಂದು ಪರಿಗಣಿಸಬಹುದು. ಯೋಜನೆಯ ಐದು ವರ್ಷಗಳ ಅವಧಿಯಲ್ಲಿ ಜನಸಂಖ್ಯೆಯು ಎಷ್ಟು ಹೆಚ್ಚಿತು ಎಂದು ಸರಿಯಾದ ಗಣನೆಯು ದೊರೆಯುವುದಿಲ್ಲ. ಸಾಮಾನ್ಯವಾಗಿ ಬೆಳೆಯುತ್ತಿರುವ ಜನಸಂಖ್ಯೆಯೊಡನೆ ಅಭಿವೃದ್ಧಿಗೊಂಡ ಆರೋಗ್ಯ ಮತ್ತು ವೈದ್ಯಕೀಯ ಸಹಾಯಗಳು ದೇಶದ ಎಲ್ಲ ಮೂಲೆಗಳಲ್ಲಿಯೂ ಮರಣಸಂಖ್ಯೆಯು ಕಡಿಮೆಯಾಗಿ ಜನ ಸಂಖ್ಯೆಯ ಹೆಚ್ಚಳಕ್ಕೆ ಒತ್ತಾಸೆಯಿತ್ತಿವೆ. ದೇಶದಲ್ಲಿ ಕಾರ್ಯರೂಪದಲ್ಲಿ ತಂದ ಯೋಜನೆಯ ಫಲವಾಗಿ ಕೃಷಿಕ ಉತ್ಪಾದನೆಯ ಹೆಚ್ಚಳವನ್ನೂ ಸಾಧಿಸಲಾಗಿದೆ.

ಮರಣ ಸಂಖ್ಯೆಯು ಕಡಿಮೆಯಾದುದು, ಜನನಸಂಖ್ಯೆಯು ಅಧಿಕವಾದುದು ಜನಸಂಖ್ಯೆಯಅಭಿವೃದ್ಧಿಗೆ ಹೇತುವಾಯಿತು. ೧೯೪೧ರಿಂದ ೫೧ರ ನಡುವಿನ ಒಂದು ದಶಕದಲ್ಲಿ ಭಾರತೀಯ ಜನ ಸಂಖ್ಯೆಯು ಪ್ರತಿ ವರ್ಷ ಸೇಕಡಾ ೧.೩ರಂತೆ ಬೆಳೆಯಿತು. ಎಂದರೆ, ೧೯೪೧ರಲ್ಲಿದ್ದ ೧೩೦೦ ಜನರು ೧೯೫೧ರಲ್ಲಿ ೧೩೧೩ ಆದರು. ಇದೇ ರೀತಿಯಲ್ಲಿ ಮುಂದಿನ ೯ ವರ್ಷಗಳಲ್ಲೂ, ೧೯೫೧ ರಿಂದ ಅವಧಿಯಲ್ಲಿ ಜನ ಸಂಖ್ಯೆಯು ಸೆ ಕಡಾ ೧.೩ರಂತೆ ಪ್ರತಿ ವರ್ಷ ಬೆಳೆಯುತೆಂದು ಊಹಿಸಲಾಗಿದೆ. ಹೀಗಾಗಿ, ಪ್ರಥಮ ಪಂಚ ವಾರ್ಷಿಕ ಯೋಜನೆ ಆರಂಭದಲ್ಲಿದ್ದ ೩೬೧ ಮಿಲಿಯವು ಯೋಜನಾಂತ್ಯದಲ್ಲಿ ೩೮೮ ಮಿಲಿಯನಾಗಿತ್ತೆಂದು ಅಂದಾಜು ಮಾಡಬಹುದು. ಇದೇ ಪ್ರಮಾಣದಲ್ಲಿ ಲೆಕ್ಕ ಹಾಕಿದರೆ, ಈಗಿನ ಜನ ಸಂಖ್ಯೆಯು ೪೯೩ ಮಿಲಿಯವಿದ್ದು ದ್ವಿತೀಯ ಯೋಜನಾಂತ್ಯದಲ್ಲಿ ೪೧೫ ಮಿಲಿಯವಾಗುವುದು. ಹೀಗೆ ಏಕ ಪ್ರಕಾರವಾಗಿ ಬೆಳೆಯುತಿರುವ ಜನರಿಗೆ ನಾವು ಯಾವ ವಿಧಾನದಿಂದ ಜೀವನ ಸೌಕರ್ಯಗಳನ್ನು ಒದಗಿಸ ಬಲ್ಲೆವು?

ನಮ್ಮ ಯೋಜನೆಯ ಉದ್ದೇಶಗಳಲ್ಲಿ ವಾರ್ಷಿಕ ತಲಾ ಆದಾಯವನ್ನು ಏರಿಸುವುದು ಒಂದು. ರಾಷ್ಟ್ರದ ವಾರ್ಷಿಕ ರಾಷ್ಟ್ರೀಯ ಆದಾಯವನ್ನು ಜನ ಸಂಖ್ಯೆಯಿಂದ ವಿಭಾಗಿಸಿ ಈ ಸಂಖ್ಯೆಯನ್ನು ಪಡೆಯಬಹುದು. ಪ್ರಥಮ ಪಂಚ ವಾರ್ಷಿಕ ಯೋಜನಾಂತ್ಯದಲ್ಲಿ ನಮ್ಮ ವಾರ್ಷಿಕ ರಾಷ್ಟ್ರೀಯ ಆದಾಯವು ರೂ. ೧೧,೪೦೦ ಎಂದರೆ ತಲಾ ವಾರ್ಷಿಕ ಆದಾಯ ರೂ. ೨೮೧. ಇದೇ ರೀತಿಯಲ್ಲಿ ದ್ವಿತೀಯ ಯೋಜನಾಂತ್ಯದಲ್ಲಿ ರಾಷ್ಟ್ರೀಯ ಆದಾಯವು ವರ್ಷಕ್ಕೆ ೧೩,೫೪೦ ಕೋಟಿ ರೂಪಾಯಿಗಳೆಂದೂ ತಲಾ ವಾರ್ಷಿಕಾದಾಯವು ೩೫೧ ರೂಪಾಯಿಯೆಂದೂ ಲೆಕ್ಕ ಹಾಕಿದ್ದಾರೆ. ಈ ಅಂಕೆಗಳು ಊಹನೆಗಳು ಮಾತ್ರ. ದೇಶದ ಉತ್ಪತ್ತಿಯು ಅಧಿಕ ಪ್ರಮಾಣದಲ್ಲಿ ಬೆಳೆದರೂ ಜನ ಸಂಖ್ಯೆ ಬೆಳೆಯುವುದರಿಂದ ಈ ಉತ್ಪಾದನೆಯನ್ನು ಹಂಚುವಾಗ, ಹೆಚ್ಚಿನ ಪ್ರಗತಿಯು ಕಂಡು ಬರುವುದಿಲ್ಲ. ನಾವು ಇದೇ ವಿಧಾನದಲ್ಲಿ ಜನಸಂಖ್ಯೆಯತ್ತ ನಿರ್ಲಕ್ಷ್ಯ ಭಾವನೆಯನ್ನೇ ಇಟ್ಟು ಕೊಂಡರೆ, ದೇಶದ ಆರ್ಥಿಕ ಮಟ್ಟವನ್ನು ಉನ್ನತಗೊಳಿಸ ಬೇಕೆಂಬ ನಮ್ಮ ತೀವ್ರಾಭಿಲಾಷೆಯು ಹೆಚ್ಚು ಮಟ್ಟಿಗೆ ಸೋಲುತ್ತದೆ. ಭಾರತದ ಜನತೆಯೊಂದಿಗೆ ಪ್ರತಿದಿನ ೧೩,೦೦೦ ಬಾಯಿಗಳು ಹೊಸದಾಗಿ ಕೂಡಿಕೊಳ್ಳುತ್ತಾರೆಂಬ ಸಂಗತಿಯನ್ನು ಪ್ರತಿಯೊಬ್ಬನೂ ತಿಳಿಯಬೇಕಾಗಿದೆ.

ನಮ್ಮ ದ್ವಿತೀಯಯೋಜನೆಯ ಮೂಲಗುರಿ ರಾಷ್ಟ್ರದ ಔದ್ಯೋಗೀಕರಣದಿಂದ ತೀವ್ರವಾಗಿ ದೇಶದ ಅಭಿವೃದ್ಧಿಯನ್ನು ಸಾಧಿಸುವುದು. ನಾವು ಹೊಸ ಕಾರ್ಖಾನೆಗಳನ್ನು ಸ್ಥಾಪಿಸಲು, ಮೊದಲು ಮಾಡಿದ್ದೇವೆ. ನಮಗೆ ಅವಶ್ಯಕನಿರುವ ಅಧಿಕ ವಸ್ತುಗಳನ್ನು ಪಡೆಯಲು, ಮತ್ತು ಜನರು ಕೂಸ ಹೊಸ ವಿಧಾನಗಳಲ್ಲಿ ಜೀವನವನ್ನು ಸಾಗುವಂತೆ ಮಾಡಲು ಈ ಚಿಕ್ಕ ದೊಡ್ಡ ಕಾರ್ಖಾನೆಗಳು ನೆರವಾಗುತ್ತವೆ. ಇದಕ್ಕೆ ಹೆಚ್ಚು ಬಂಡವಾಳವು ಬೇಕು. ಮತ್ತು ಈ ಬಂಡವಾಳದ ಮೊಬಲಗು ಅಧಿಕ ಉಳಿತಾಯದಿಂದಲೇ ಬರಬೇಕು. ಪಂಚವಾರ್ಷಿಕ ಯೋಜನೆಯ ನಿಯೋಜಕರು ಪ್ರಥಮ ಯೋಜನೆಯಲ್ಲಿ ರಾಷ್ಟ್ರೀಯ ಆದಾಯದ ೭.೫ ಸೇಕಡಾವನ್ನು ರಾಷ್ಟ್ರೀಯ ಅಭಿವೃದ್ಧಿಗಾಗಿ ಉಳಿಸಲು ನೋಡಿದ್ದರೂ ದ್ವಿತೀಯ ಯೋಜನೆಯಲ್ಲಿ ೧೧.೭ ಸೇಕಡಾವನ್ನು ಬಳಸಲು ನಿರ್ಣಯಿಸಿದ್ದಾರೆ. ಈ ಹಿಣವೆಲ್ಲಿಂದ ಬರಬೇಕು? ಸಮಾಜವು ಹೆಚ್ಚಾಗಿ ಹಣವನ್ನು ಉಳಿಸಬೇಕು. ವೈಯಕ್ತಿಕ ಉಳಿಕೆಯು ಆ ವ್ಯಕ್ತಿಯಲ್ಲಿರುವ ಉಳಿತಾಯಮನೋವೃತ್ತಿಯನ್ನಲ್ಲದೆ, ಆತನಲ್ಲಿ ಉಳಿಸಲಿರುವ ಸಾಧ್ಯತೆಯನ್ನೂ ಅವಲಂಬಿಸಿಕೊಂಡಿದೆ. ಭಾರತದಲ್ಲಿನ ಎಲ್ಲ ಜನರಲ್ಲಿಯೂ ಉಳಿತಾಯವನ್ನು ಮಾಡುವ ಸಾಧ್ಯತೆಯು ಬಹಳ ಅಲ್ಪ ಪ್ರಮಾಣದ್ದಿದೆ. ದೇಶದ ಜನಸಂಖ್ಯೆಯಲ್ಲಿ ನೂರಕ್ಕೆ ನಲುವತ್ತರಷ್ಟು ಜನರು ೧೫ ವರ್ಷ ಪ್ರಾಯವನ್ನು ಮೀರದವರು, ಎಂದರೆ ಕೆಲಸ ಮಾಡಿ ಸಂಪಾದನೆ ಮಾಡುವ ಪ್ರಾಯದಲ್ಲಿ ಇಪ್ಪತ್ತೊಂದು ಅಧಿಕ ಸಂಖ್ಯೆಯ ಜನರು ಕಾಲಿರಿಸುವುದಿಲ್ಲ. ಅಷ್ಟೇ ಅಲ್ಲದೆ ಅವರು ತಮ್ಮ ಆರೈಕೆ, ಸಾಕಣೆ, ಪಿಡ್ಕೆ, ಆರೋಗ್ಯ ಮೊದಲಾದ ಪೌಕರ್ಯಗಳಿಗಾಗಿ ಪರರನ್ನು ಅವಲಂಬಿಸಿದ್ದಾರೆ. ಅತ್ಯಧಿಕ ವೆಚ್ಚದಿಂದ ಈ ಮಕ್ಕಳ ಆರೈಕೆಯನ್ನು ಮಾಡಿದರೆ ಮಾತ್ರ ಇವರು ಬೆಳೆದು ಬಂದು ತಮ್ಮ ದುಡಿಮೆಯಿಂದ ನುಂದಕ್ಕೆ ದೇಶದ ಆದಾಯವನ್ನು ಹೆಚ್ಚಿಸಬಲ್ಲರು. ಸಾಮಾನ್ಯ ಜನರಿಗೆ ತಮ್ಮ ಜೀವನವನ್ನು ಸಾಗಿಸುವುದೇ ಪ್ರಯಾಸವಾಗಿರುವಾಗ, ಈ ಮಕ್ಕಳ ಹೊರೆಯನ್ನು ಹೊತ್ತುಕೊಂಡು ಅವೇನನ್ನು ಉಳಿಸೀತು? ಉಳಿತಾಯವಿಲ್ಲದೆ ಬಂಡವಳವೊದಗದು. ಬಂಡವಾಳವಿಲ್ಲದೆ ಯಾವ ಅಭಿವೃದ್ಧಿಯ ಯೋಜನೆಯಾದರೂ ಹೇಗೆ ಕಾರ್ಯರೂಪಕ್ಕೆ ಬರಬಹುದು?

ಮೂರನೆಯದಾಗಿ ಉದ್ಯೋಗಾವಕಾಶಗಳನ್ನು ಅಧಿಕ ಪ್ರಮಾಣದಲ್ಲಿ ಒದಗಿಸುವ ಉದ್ದೇಶವನ್ನು ಯೋಜನೆಯಲ್ಲಿ ಇಟ್ಟುಕೊಂಡಿದೆ. ದ್ವಿತೀಯ ಯೋಜನೆಯಲ್ಲಿ ೧೦ ಮಿಲಿಯ ಉದ್ಯೋಗಗಳನ್ನು ಕಲ್ಪಿಸುವ ಆಂದಾಜನ್ನು ಮಾಡಿದ್ದಾರೆ. ಆದರೆ, ಈ ನೆಡುವೆ ನಮ್ಮ ಜನ ಸಂಖ್ಯೆಯು ೫೫ ಮಿಲಿಯದಷ್ಟು ಅಧಿಕವಾಗಿ ಅವರಲ್ಲಿ ೧೦ ಮಿಲಿಯದಷ್ಟು ಜನರು ಕೆಲಸ ಮಾಡುವ ಪ್ರಾಯದ ಮಿತಿಯನ್ನು ಹೊಂದುವುದರಿಂದ, ನಮ್ಮ ನಿರುದ್ಯೋಗ ಸಮಸ್ಯೆಯು ಯಥಾಸ್ಥಿತಿಯಾಗಿಯೇ ನಿಲ್ಲುತ್ತದೆ ಕೇವಲ ನಿರುದ್ಯೋಗ ಸಮಸ್ಯೆಯನ್ನು ಗಮನಿಸುತ್ತಾ ಹೋದರೆ, ಅದರಿಂದ ನಮ್ಮ ಯೋಜನೆಯ ಗುರಿಯನ್ನು ಸುಟ್ಟಬ್ಬವುದು ಕಷ್ಟಸಾಧ್ಯವಾಗುವುದು. ನಾವೆಲ್ಲರೂ ಈ ಒಂದು ಸತ್ಯ ಚಿತ್ರವನ್ನು ಅಭಿವೃದ್ಧಿ ಯೋಜನೆಗಳ ಜಯಪಜಯಗಳ ನಿರ್ಣಯವನ್ನು ಮಾಡುವುದಕ್ಕೆ ನೋದಲು ಇಟ್ಟುಕೊಂಡು ಮುಂದೆ ಚಿಂತಿಸಬೇಕಾಗಿದೆ.

ಆದುದರಿಂದ ಜನಸಂಖ್ಯೆಯನ್ನು ಆರ್ಥಿಕದಲ್ಲಿಟ್ಟುಕೊಳ್ಳುವತ್ತ ಯೋಜನಾಸಂಯೋಜಕರು ತಮ್ಮ ಗಮನವನ್ನು ಹರಿಸಲಿಲ್ಲವೆಂದು ದೂರುವ ಜನರಿದ್ದಾರೆ. ಈ ವಿಷಯದತ್ತ ಎರಡು ವಿಧಾನಗಳಿಂದ ದೃಷ್ಟಿಹಾಯಿಸಬಹುದು. ಕುಟುಂಬ ಯೋಜನೆಯನ್ನು ಯೋಗ್ಯರೀತಿಯಲ್ಲಿ ಅಧಿಕ ಪ್ರಮಾಣದಲ್ಲಿ ಪ್ರಚಾರಮಾಡುವುದರಿಂದ ಮತ್ತು ಜನನ ನಿಯಂತ್ರಣದಿಂದ. ಒಂದು ಕುಟುಂಬದಲ್ಲಿ ಮೂರು ಮಕ್ಕಳಿಗಿಂತ ಅಧಿಕ ಸಂಖ್ಯೆಯಲ್ಲಿ ಸಂತಾನವನ್ನು ಪಡೆಯುವುದು ಬಡತನಕ್ಕೆ ಹೇತುವಾಗುವುದು. ಮೊದಲೇ ಇದ್ದ ಬಡತನದ ಭೂತವನ್ನು ಬಡಿದೆಬ್ಬಿಸಿದಂತಾಗುವುದು. ತಮ್ಮ ಶಕ್ತಿಗನುಗುಣವಾಗಿಯೇ ಮಕ್ಕಳನ್ನು ಪಡೆಯಬೇಕು. ಇದು ಸಂಯಮದಿಂದ ಮಾತ್ರ ಸಾಧ್ಯ.

ನಮ್ಮ ಹಳ್ಳಿಗಳನ್ನು ಸಂದರ್ಶಿಸಿದರೆ ಒಂದು ಕುಟುಂಬದಲ್ಲಿ ೧೦ ರಿಂದ ೧೫ ಮಕ್ಕಳಿರುವುದೂ ಗೋಚರವಾಗುತ್ತದೆ. ತನಗಿರುವ ಅಲ್ಪಾದಾಯದಲ್ಲಿ ಅಷ್ಟು ಜನರನ್ನು ಹೇಗೆ ತಾನೆ ಸಾಕಬಹುದು? ಇದು ಪರಿಣಾಮವಾಗಿಯೇ ಶಿಶು ಮರಣ, ತಾಯಂದಿರ ಆರೋಗ್ಯ, ಅಲಸ್ಯೆಯುಸ್ಯಗಳ ಹಾವಳಿ! ಇದರಿಂದಲೇ ದೇಶದ ಅಭಿವೃದ್ಧಿ ಯೋಜನೆಗಳಿಂದ ಅಧಿಕ ಪ್ರಮಾಣದಷ್ಟು ಪ್ರಗತಿಯು ಸಾಧಿಸಲ್ಪಟ್ಟರೂ, ದೇಶದ ಜನ ಜೀವನ ಕ್ರಮದಲ್ಲಿ, ಹೆಚ್ಚು ಬದಲಾವಣೆ ಯಾಗುವುದು ಕಂಡು ಬರುವುದಿಲ್ಲ. ಆದುದರಿಂದ, ಭೂಮಿಗೆ ಭಾರವಾಗಿ, ದೇಶಕ್ಕೆ ಹೊರೆಯಾಗಿ ಬಾಳುವ ಸ್ಥಿತಿಗವು ಒದಗುತ್ತದೆ. ಭಾರತೀಯರ ಉದ್ಯೋಗವಾಗಬೇಕಾದರೆ, ಅವರ ಜೀವನವು ಸ್ವಲ್ಪ ಮಟ್ಟಿಗಾದರೂ ಸುಧಾರಿಸಬೇಕಾದರೆ, ಒಂದು ಕಡೆ ಅಭಿವೃದ್ಧಿ ಯೋಜನೆಗಳ ಜತ ಪ್ರೋತವಾಗಿ ಸಾಗಬೇಕು; ಇನ್ನೊಂದೆಡೆ ಜನರೂ ಸಂಯಮಿಗಳಾಗಬೇಕು. ಹೊಸಕಾಗಿ ಜನರನ್ನು ಹೆಚ್ಚಿಸುವುದಕ್ಕಿಂತ ಇದ್ದ ಜನರನ್ನು ಉತ್ತಮ ರೀತಿಯಲ್ಲಿ ನೋಡಿಕೊಳ್ಳುವುದು, ಅವರ ಉನ್ನತ ಮಟ್ಟದಲ್ಲಿ ಜೀವಿಸುವಂತೆ ಮಾಡುವುದು ಒಳ್ಳೆಯ ಕಾರ್ಯವೆಂಬ ಭಾವನೆಯುಳ್ಳವರಾಗಬೇಕು.

ಈ ಮಹತ್ವದ ಬದಲಾವಣೆಯನ್ನು ನಮ್ಮ ಮನೋಭಾವನೆಯಲ್ಲಾಗಿಸಿಕೊಳ್ಳುವುದಕ್ಕೆ ದೇಶದ ಅಭಿವೃದ್ಧಿಯು ಎಂದಿಗೂ ಉತ್ತಮರೀತಿಯ ಪರಿಣಾಮವನ್ನು ತೋರಿಸುವುದಿಲ್ಲವೆಂಬುದು ಜನರು ನಿರಂತರ ಬಡತನದಲ್ಲಿಯೇ ಕೊಳೆಯುತ್ತಿರಬೇಕಾಗುವುದು. ಆದುದರಿಂದ, ದೇಶದ ರಾಷ್ಟ್ರೀಯ ಆದಾಯ ಮತ್ತು ಜನಸಂಖ್ಯೆಗಳನ್ನು ಯೋಗ್ಯ ಪ್ರಮಾಣದಲ್ಲಿಟ್ಟುಕೊಳ್ಳುವ ಸಂಯಮನ ಬುದ್ಧಿಯು ನಮ್ಮಲ್ಲಿ ಬೇಕಾಗಿದೆ. ದೇಶದ ಉದ್ಧಾರಕ್ಕಾಗಿ ಪಂಚವಾರ್ಷಿಕ ಯೋಜನೆಗಳನ್ನು ರೂಪಿಸುವಲ್ಲಿ ಸರಕಾರದೊಂದಿಗೆ ಪ್ರತ್ಯೇಕ ಪ್ರಜೆಯೂ ತನ್ನ ಹೆಚ್ಚಿನ ನೆರವನ್ನೀಯುವುದು ಕರ್ತವ್ಯವೆಂದು ತಿಳಿದು ಕಾರ್ಯಪ್ರವೃತ್ತನಾಗಬೇಕು.

ಹೀಗಾದಲ್ಲಿ ಮಾತ್ರ ಜನ ನಿಯಂತ್ರಣದಲ್ಲಿ ಮುನ್ನಡೆಯುವುದು ಸಾಧ್ಯ. ರಾಷ್ಟ್ರದ ಮುಖ್ಯಾವಶ್ಯಕತೆಗಳಿಗೆ ತಕ್ಕ ಜನತೆಯ ದೃಷ್ಟಿ ಬೀಳುವುದು ಮುಖ್ಯ ಆಗತ್ಯನಾಗಿದೆ. ದೇಶದೇಳಿಗೆಗಾಗಿ ಪ್ರಯತ್ನದಿಂದಲಾದರೂ ತನ್ನ ಪಾಲಿನ ಸೇವೆ ಸಲ್ಲಿಸುವಷ್ಟು ಸಂಯಮನವನ್ನು ಪಾಲಿಸುವುದು ದೇಶಪ್ರೇಮಿಯ ಕರ್ತವ್ಯ.

ಯೋಜನಾ.


ನಮ್ಮ ಹೊಸ ಪಾಲು ಭಂಡವಳ

ಜಮಾಯಿಸುವ ಕಾರ್ಯವನ್ನು

ಅತ್ಯಂತ ಯಶಶ್ವಿಯಾಗಿ ಮಾಡಲು

ಅಮಿತವಾಗಿ ಸಹಕರಿಸಿದ

ನಿಮ್ಮೆಲ್ಲರಿಗೂ

ನಮ್ಮ ಧನ್ಯವಾದಗಳು.

ದಿ ಪಾಂಗಾಳ ನಾಯಕ್ ಬೇಂಕ್ ಲಿ.

ಸ್ಥಾಪನೆ: 1920.

# ಯಕ್ಷಗಾನದ ಮಹತ್ವ

## ಯಕ್ಷಗಾನವು ಜನಜೀವನದ ಆದರ್ಶದ ಕೈಗಂಬವಾಗಿದೆ

"ಯಕ್ಷಗಾನವು ದಕ್ಷಿಣೋತ್ತರ ಕನ್ನಡಿಗರುಳ್ಳ ಪಡು ಕರಾವಳಿಯ ಜನಜೀವನದಲ್ಲಿ ಹಾಸುಹೊಕ್ಕಾಗಿ ಬೆಳೆದು ಬಂದಿರುವ ಒಂದು ವಿಶಿಷ್ಟ ಕಲೆಯಾಗಿದೆ. ಈ ಕಲೆಯು ಹಿಂದೆ ರಾಜ ಮಹಾರಾಜರ ಸಾನ್ನಿಧ್ಯದಿಂದ ಸಹಾಯವನ್ನು ಪಡೆದು ಸಂಪೂರ್ಣ ಯಶಸ್ಸಿನಿಂದ ರಾರಾಜಿಸಿದ್ದಿತಾದರೂ ಬರಬರುತ್ತಾ ಇದು ಕೇವಲ ಹಳ್ಳಿಗಾಡುಗಳ-ನಿರಕ್ಷರಕುಕ್ಷಿಗಳ ಮನೋರಂಜನೆಯ ಜಾನಪದ ಕಲೆಯಾಗಿ ಪರಿಣಮಿಸಿತು. ಆದರೆ ಇತ್ತೀಚೆಗೆ ಶ್ರೇಷ್ಠ ವಿದ್ವಾಂಸರೂ ಇದರಲ್ಲಿ ಆಸಕ್ತಿಯಿಂದ ದುಡಿಯುತ್ತಿರುವುದರಿಂದ ಇದು ಅಭ್ಯುದಯದ ದಾರಿಯನ್ನು ತುಳಿಯುತ್ತಿದೆಯೆನ್ನಲು ಆನಂದವಾಗುತ್ತದೆ.

ಜೀವನದಲ್ಲಿ ಯಕ್ಷಗಾನದ ಮಹತ್ವ ಬಹಳ ಹಿರಿದಾದುದು. ಜನಜೀವನದ ದಿವ್ಯ ನೈಜ ಪ್ರತಿಬಿಂಬವನ್ನೀಯುವ ಸಾಹಿತ್ಯವಾದರೂ ತೀರಾ ಇತ್ತೀಚಿನ ವರ್ತಮಾನ ಕಾಲದ-ವ್ಯಾವಹಾರಿಕ ಜಗತ್ತಿನ- ಸ್ಥೂಲ ಸ್ವರೂಪದ ಸತ್ಯ ಚಿತ್ರಣವನ್ನು ಮಾತ್ರ ನೀಡಬಹುದೆ ಹೊರತು ಅದಕ್ಕೆಂತ ಹೆಚ್ಚಿನದಾದ ಆದರ್ಶವನ್ನು ಜನತೆಗೆ ಕರುಣಿಸಲಾರದು. ಆದರೆ ಯಕ್ಷಗಾನವು ಹಾಗಲ್ಲ. ಅದು ಜನಜೀವನದ ಪ್ರತಿಬಿಂಬವೂ ಹೌದು; ಜನಜೀವನಕ್ಕೊಂದು ಕೈಗಂಬವೂ ಹೌದು. ಅದು ಜೀವನದ ವಿವಿಧ ಮುಖಗಳನ್ನು ಪ್ರತಿಬಿಂಬಿಸುವುದರೊಂದಿಗೆ ಮಾನವ ಜೀವನವು ಹೇಗಿರಬೇಕು-ಎಂಬ ಆದರ್ಶವನ್ನೂ ತೋರಿಸಿಕೊಡುತ್ತದೆ. ಎಂತಲೇ ಅದು ಒಂದು ಸಂಪೂರ್ಣ ಕಲೆ. ಸಾಹಿತಿಯು ಆದರ್ಶವನ್ನೂ ನಿರ್ಮಿಸಲಾರನು. ಆದರೆ ಯಕ್ಷಗಾನ ಕಲಾವಿದನು ಅದನ್ನು ಮಾಡಬಲ್ಲನು. ಇಲ್ಲಿ ಆದರ್ಶವಿಲ್ಲದ ಜೀವನವು ಚಿಕ್ಕಾಣಿಯಿಲ್ಲದ ನಾವೆಯಂತೆ- ಎಂಬುದನ್ನು ತಿಳಿದಿರಬೇಕು. ಯಕ್ಷಗಾನವು ಅಂತಹ ಆದರ್ಶ ನಿರೂಪಣೆಯ ಗೊತ್ತುಗುರಿಗಳನ್ನು ಸ್ಥಾಪಿಸಬಲ್ಲುದೆಂತೇ ಆ ಕಲೆಯು ಸಾಹಿತ್ಯಕ್ಕಿಂತಲೂ ಒಂದು ಹೆಜ್ಜೆ ಮುಂದುವರಿದು ಆದರ್ಶ ಕಲೆಯೆನಿಸುತ್ತದೆ.

ಯಕ್ಷಗಾನವು ಮಾಡುವ ಆದರ್ಶ ನಿರೂಪಣಾ ಕಾರ್ಯದಲ್ಲಿ ಯಕ್ಷಗಾನ ಕಥಾ ವಸ್ತುಗಳ ಪಾತ್ರವು ಮಹತ್ವವಾದುದು ಸಾಮಾನ್ಯವಾಗಿ ಮಹಾ ಭಾರತ, ಭಾಗವತ, ರಾಮಾಯಣಗಳಂತಹ ಋಷಿ ಪ್ರೋಕ್ತ ಗ್ರಂಥಗಳಿಂದ ಕಥಾ ಸನ್ನಿವೇಶಗಳನ್ನು ಆರಿಸಿತೊಳ್ಳುವುದು ಯಕ್ಷಗಾನವು ಒಂದು ರೂಢಿ. ನಮ್ಮ ದೇಶದ ಜನಜೀವನದಲ್ಲಿ ಮೊದಲಿಂದಲೂ ಪುರಾಣೇತಿಹಾಸಗಳು ಒಂದು ವಿಶಿಷ್ಟ ಸ್ಥಾನವನ್ನು ಗಳಿಸಿಕೊಂಡಿವೆ. ಜನತೆಯಲ್ಲಿ ಸಂಸ್ಕೃತಿಯ ಬೀಜವನ್ನು ಬಿತ್ತಿ ನಿತ್ಯಜೀವನದಲ್ಲಿ ಅವರನ್ನು ಸನ್ಮಾರ್ಗದಲ್ಲಿ ಕೊಂಡೊಯ್ದು ಮುನ್ನಡೆ ಬೇಕು ಬೇಕಾದಂತೆ ತಿದ್ದಿ ತೀಡಿ ಅವರ ಸಂಪೂರ್ಣ ಚಿತ್ರವನ್ನು ರೂಪಿಸುವ ಕಾರ್ಯದಲ್ಲಿ ಇಂತಹ ಪುರಾಣೇತಿಹಾಸಗಳು ವಹಿಸುವ ಹೊಣೆಗಾರಿಕೆಯು ಅತೀ ಹೆಚ್ಚಿನದು. ಯಾವನೊಬ್ಬ ಭಾರತೀಯನಾದರೂ, ಅವನ ನಡೆನುಡಿಗಳಲ್ಲಿ-ಆಟ ಪಾಠಗಳಲ್ಲಿ-ಜೀವನದ ಹೆಜ್ಜೆ ಹೆಜ್ಜೆಗಳಲ್ಲಿ ಪುರಾಣೇತಿಹಾಸಗಳ ಪ್ರಭಾವವು ಬಿಳಿ ಹಗಲಿನಂತೆ ಅಚ್ಚೊತ್ತಿದುದು ಕಂಡು ಬರುತ್ತದೆ. ಆದ್ದರಿಂದಲೇ ಇಂತಹ ಕಥಾ ಭಾಗಗಳನ್ನೊಳಗೊಂಡ ಯಕ್ಷಗಾನವು ಮಾನವನನ್ನು ಸಾಂಸ್ಕೃತಿಕ ಪಥದಲ್ಲಿ ಮುನ್ನಡೆಸಬಲ್ಲ ಸಂಪೂರ್ಣ ಕಲೆಯಾಗಿದೆ

ಭಾರತ, ಭಾಗವತ, ರಾಮಾಯಣಗಳು ಆಧುನಿಕ ಬರಡು ಕಾದಂಬರಿಗಳಂತಲ್ಲ. ವ್ಯಾಸ, ವಾಲ್ಮೀಕಿ, ಲಕ್ಷೀಶರಂತಹ ಆತ್ಮ ಸಾಕ್ಷಾತ್ಕಾರವನ್ನು ಹೊಂದಿದ ಮಹಾಮುನಿಗಳ ಕೃತಿಗಳಾದ್ದರಿಂದಲೇ ಜನಜೀವನದಲ್ಲಿ ಸಾಮಾನ್ಯವಾಗಿ ಬರಲಾರದಂತಹ ನಿತ್ಯ ಸಮಸ್ಯೆಗಳನ್ನೂ ಅವುಗಳ ಆದರ್ಶ ಪರಿಹಾರವನ್ನೂ ನಾವಲ್ಲಿ ಕಾಣಬಹುದು. ಜೀವನದ ಕಷ್ಟ-ಸುಖ ಸಾಗರದಲ್ಲಿ ಮುಳುಗಿಯೂ, ತೇಲಿಯೂ-ಪಾರಂಗತರಾದ ಅನುಭವಿ ಪಂಡಿತ ಶ್ರೇಷ್ಠ ಪ್ರಾಜ್ಞರಿಂದ ಈ ಕಥಾ ಭಾಗಗಳಿಗೆ ಇಷ್ಟೊಂದು ಮಹತ್ವ. ಅನುಭವದಲ್ಲಿ-ಅಮೃತವಿದೆ-ಎಂಬುದು ಮಾತು. ಕೃತಿಗಳಿಯದ ಸೊಲ್ಲು ಬರಿಯ ಬೊಳ್ಳು! ಬೀಡಿಭಿಕಾರಿಯಾಡುವ ತತ್ವ ಬೋಧನೆಯಾದೀತದು!

ಜೀವನವು ದ್ವಂದ್ವಮಯ. ಕಷ್ಟ-ಸುಖ, ಒಳಿತು-ಕೆಡುಕು, ದಯೆ-ನಿರ್ದಯೆ, ಸ್ವರ್ಗ-ನರಕ ನೀತಿ-ಅನೀತಿ, ಪಾಪ-ಪುಣ್ಯ, ಸಕ್ಕ-ವಿಷ್ಯ, ಧರ್ಮ-ಅಧರ್ಮಗಳೇ ಮೊದಲಾದ ವಿರೋಧ ವಸ್ತುಗಳ ಸಮ್ಮಿಶ್ರಣದ ವ್ಯವಸ್ಥೆಯದು. ಅಲ್ಲಿ ಎರಡು ಮಾರ್ಗ: ಅದೊಂದು ಸಮತೂಕ. ಒಂದು ಸ್ವರ್ಗಕ್ಕೆ ದಾರಿಯಾದರೆ ಇನ್ನೊಂದು ನರಕದ ಹಾದಿ. ಇಂತಹ ಸಂಧಿ ಸ್ಥಳದಲ್ಲಿ ನಿಂತಿರುವ ಮಾನವನು ಎತ್ತಲೂ ಸಾಗಬಹುದು. ಆ ಸ್ವಾತಂತ್ರ್ಯ ಅವನಿಗಿದೆ. ಅದು ಕರ್ಮ ಸ್ವಾತಂತ್ರ್ಯ. ಆದರೆ ನರಕದ ಹಾದಿ ತುಳಿದೂ ಸ್ವರ್ಗದ ಸುಖವನ್ನೆ ಪೇಕ್ಷಿಸುವ ಹಕ್ಕು ಅವನಿಗಿಲ್ಲ. ಎಂತಲೇ ಗೀತೆಯಲ್ಲಿ ಭಗವಾನ್ ಶ್ರೀ ಕೃಷ್ಣನು ಮನುಷ್ಯನಿಗೆ ಕರ್ಮ ಸ್ವಾತಂತ್ರ್ಯವನ್ನು ಕೊಟ್ಟಿರುವನೇ ವಿನಾ ಫಲಾ ಸ್ವಾತಂತ್ರ್ಯವನ್ನು ಕೊಟ್ಟಿಲ್ಲ. ಕರ್ಮಕ್ಕೆ ಸತ್ಫಲವು ಪೂರ್ವ ನಿಶ್ಚಿತವಾದುದು. ಆದ್ದರಿಂದ ಸತ್ಫಲವನ್ನೇ ಪೇಕ್ಷಿಸುವುದು ಅಥವಾ ಸುಖಾಕಾಂಕ್ಷೆಯು ಸನ್ಮಾರ್ಗ ದುರ್ಮಾರ್ಗಗಳ ದ್ವಂದ್ವ ಒಳಿತನ್ನೇ ಆರಿಸಿಕೊಂಡು ಸನ್ಮಾರ್ಗಗಾಮಿಯಾಗುವುದು ಅಗತ್ಯ. ಈ ಜಟಿಲ ಮಿಶ್ರಣದಲ್ಲಿ ಸನ್ಮಾರ್ಗವಾವುದೆಂಬುದನ್ನು ಆರಿಸುಕೊಳ್ಳುವುದೆಂತು? ಎಂಬುದೇ ನಮ್ಮ ನಿತ್ಯ ಜೀವನದಲ್ಲಿ ಎದುರಾಗುವ ಪ್ರಶ್ನೆ. ಯಕ್ಷಗಾನವು ಜೀವನದ ಕೈಗಂಬವು ಹೇಗೆಂಬುದು ಈಗ ಇನ್ನಷ್ಟು ವಿಶದವಾದೀತು. ಉದಾಹರಣೆಗೆ-ಹರಿಭಕ್ತನಾದ ಪ್ರಹ್ಲಾದನು ಹರಿವಿರೋಧಿಯಾದ ತನ್ನ ತಂದೆಯ ಕೋಪಕ್ಕೆ ಒಳಗಾಗಿ ಹರಿನಾಮವನ್ನು ಬಿಡಬೇಕೆ ಅಥವಾ ಪಿತೃವಿರೋಧವನ್ನು ಸಾಧಿಸಬೇಕೆ-ಎಂಬ ಧರ್ಮ ಸಂಕಟಕ್ಕೆ ಸಿಲುಕಿದಾಗ ಪ್ರಹ್ಲಾದನು ಈ ದ್ವಂದ್ವವನ್ನು ಹೇಗೆ ಬಿಡಿಸಿದನು—ಎಂದೆ ಮಕ್ಕಳ ರುಚಿ ಅಭಿರುಚಿಗಳು ಸರಪ್ಪರಿ ಒಂದೆಕ್ಕೊಂದು ವಿರೋಧವಾದಲ್ಲಿ ಎಂತು ವರ್ತಿಸಬೇಕು-ಎಂಬ ಮಾರ್ಗದರ್ಶನ ಮಾಡುತ್ತದೆ ಪ್ರಹ್ಲಾದನು ದಿವ್ಯಶಕ್ತಿ ಸಂಭೂತನಾಗಿರುವುದರಿಂದಲೇ ಅವನ ವರ್ತನೆಯು ನಮಗೊಂದು ಆದರ್ಶ ಇದೇ ರೀತಿ ಸತ್ಯಹರಿಶ್ಚಂದ್ರನಳ ದಮಯಂತಿ, ಸೀತಾಪರ್ಣಶವರಿ ಮುಸ್ಲಿಮರ ಕಾಳಗಗಳಂತಹ ವಿವಿಧ ಕಥಾ ಭಾಗಗಳು ಒಂದೊಂದು ಸನ್ನಿವೇಶಗಳಲ್ಲಿ ಒಂದೊಂದು ವಿಧದಿಂದ ಜೀವನದ ಕೈಗಂಬಗಳಾಗಿ ನಿಂತಿವೆ. ಸರಾರ್ಥಕ್ಯಾಗಿ ತನ್ನ ಬೇಹದ ಅರ್ಧ ಭಾಗವನ್ನೇ ಕೊಯಿದು ದಾನವಿತ್ತಂತಹ ಭಕ್ತಿಮಯ ಉದಾತ್ತ ಧ್ವನಿಜನ ತ್ಯಾಗ ಹೃದಯವನ್ನೇ ಸೀಳಿ ಕಲಶವನ್ನು ತೆಗೆದು ತನ್ನ ಪ್ರಾಣವನ್ನೇ ಧಾರೆಯೆರೆದ ವೀರ ಕರ್ಣನ ದಾನಶೀಲತೆ, ಕಾಮನನ್ನು ಸುಟ್ಟು ತೇಜಸ್ವಾಗಿ ಪರಿವರ್ತಿಸಿ ಜೀವನದ ಶಕ್ತಿಯನ್ನಾಗಿ ಮಾಡಿಕೊಂಡ ಭೀಷ್ಮ, ಹನುಮಂತರ ಅಖಂಡ ಬ್ರಹ್ಮಚರ್ಯ, ಶ್ರೀರಾಮಚಂದ್ರನ ಪಿತೃವಾಕ್ಯ ಪರಿಪಾಲನೆ, ಧರ್ಮರಾಯನ ಧರ್ಮನಿಷ್ಠೆ-ಇನ್ನೂ ಇಂತಹ ಅಮಿತ ನಿದರ್ಶನಗಳು ಯಾರಿಗೆ ತಾನೇ ಆದರ್ಶವಲ್ಲ?

ಯಕ್ಷಗಾನವು ಮನುಷ್ಯ ಜೀವನದ ವಿವಿಧ ಮುಖಗಳನ್ನೂ ಆವರಿಸಿಕೊಳ್ಳುವ ಕಲೆಯಾದುದರಿಂದ ಆದೊಂದು ವ್ಯಾವಹಾರಿಕ ನಿಯಮಗಳ ನಿಘಂಟೆನ್ನಬಹುದು. ಅದೇ ರೀತಿ ಅದೊಂದು ನೀತಿ ಶಾಸ್ತ್ರವೂ ಹೌದು; ತತ್ವಬೋಧೆಯೂ ಆಧ್ಯಾತ್ಮ ಸಾಧನವೂ ಹೌದು. ತಾಳ-ಲಯ-ಗತಿ-ಗೀತ-ಗಾನ-ಸಾಹಿತ್ಯ ಸಂಗೀತ-ಚಿತ್ರ ನೃತ್ಯ ಅಭಿನಯಗಳು ವೇಷ ಭೂಷಣಾದಿ ಅಲಂಕಾರಗಳು ಸಂಭೋಧನೆ,-ಸಂಧಾಷಣೆಗಳಿಂದ ಕೂಡಿ, ರಸವತ್ತಾದ ವಾಗ್ವೈಖರಿಯಿಂದ ನಡೆಯುವ ಮಂತಹವಾದ-ತತ್ವಬೋಧ--ಇತ್ಯಗಳಿಂದ ಜನತೆಯು ಅಧ್ಯಾತ್ಮಿಕ, ನೈತಿಕ, ವ್ಯಾವಹಾರಿಕ, ಹಾಗೂ ಧಾರ್ಮಿಕ ವಿಕಾಸವಾಗುವುದೊಂಬುದರಲ್ಲಿ ಸಂದೇಹವಿಲ್ಲ. ಈ ರೀತಿ ಜೀವನದ ಬಹುಮುಖಗಳವರೆಗೂ ವ್ಯಾಪಕತ್ವವಿರುವುದೇ ಯಕ್ಷಗಾನವು ಸಂಪೂರ್ಣತೆಯನ್ನೈದಲು ಇನ್ನೊಂದು ಕಾರಣ. ಎಂದರೆ ಯಕ್ಷಗಾನದಲ್ಲಿ ಕೇವಲ ಸಂಭಾಷಣೆ ಹಾಗಲಿ, ಕೇವಲ ನೃತ್ಯ ಅಭಿನಯಗಳಾಗಲೀ, ಸ್ವತ್ಯೇಕವಾಗಿ ಮಾನ್ಯತೆಯಿಲ್ಲ. ಅವು ಒಂದಕ್ಕೊಂದು ಪೂರಕಗಳು.

ಯಕ್ಷಗಾನ ಕಲಾವಿದನು ಸಮಾಜದ ಸಾಮಾನ್ಯ ಪ್ರೇಕ್ಷಕನಿಗೂ ಪುರಾಣೇತಿಹಾಸಗಳಿಗೂ ಮಧ್ಯವರ್ತಿಯಾಗಿರುತ್ತಾನೆ. ಪುರಾಣೇತಿಹಾಸಗಳ ದಿವ್ಯ ವಾಕ್ಯಗಳನ್ನು ವ್ಯಾಖ್ಯಾನಿಸುವ ಹೊಣೆಯು ಅವನ ಮೇಲಿದೆ. ಈ ಹೊಣೆಯನ್ನು ಪಾತ್ರಧಾರಿಯು ಯೋಗ್ಯ ರೀತಿಯಲ್ಲಿ ನಿರ್ವಹಿಸಿದಾಗ ಮಾತ್ರ ಯಕ್ಷಗಾನಕ್ಕೆ ಸದುದ್ದೇಶವು ಸಾಧಿಸಲ್ಪಡಬಲ್ಲುದು. ಅದಕ್ಕಾಗಿ ಯಕ್ಷಗಾನ ಪಾತ್ರಧಾರಿಯು ವಿದ್ವಾಂಸನೂ, ಪ್ರತಿಭಾವಂತನೂ, ಗುಣಸಂಪನ್ನನೂ, ಆಗಿರಬೇಕು. ಮಾತ್ರವಲ್ಲ, ಅವನ ಆತ್ಮಶಕ್ತಿ, ಮನೋಧಾರ್ಢ್ಯತೆ, ಹಾಗೂ ನೈತಿಕ ಮಟ್ಟವು ಉಚ್ಚರೀತಿಯದ್ದಿರಬೇಕು. ಆಗ ಮಾತ್ರ ಕಥಾಭಾಗದ ಕವಿಭಾವನೆಯನ್ನು ಅವನು ವ್ಯಕ್ತಪಡಿಸಲು ಸಮರ್ಥನಾದಾನು. ಯಕ್ಷಗಾನದ ಪಾತ್ರಧಾರಿಯು ಕಥಾ ಶ್ರೇಷ್ಠಣೆಯನ್ನೆಂದಿಗೂ ಮಾಡಬಾರದು. ತನ್ನ ಪಾತ್ರ ಧರ್ಮವನ್ನರಿತು ಪಾತ್ರ ಪೋಷಣೆ ಮಾಡುವ ಸಂದರ್ಭದಲ್ಲಿ ಅವನು ತನ್ನ ವೈಯಕ್ತಿಕ ವಿಚಾರಗಳನ್ನು ಪೂರ್ಣವಾಗಿ ಪಾತ್ರನೇ ತನ್ನಲ್ಲಿ ಅವಿರ್ಭವಿಸಿದಂತೆ ವರ್ತಿಸದಿದ್ದಲ್ಲಿ ಯಕ್ಷಗಾನ ಕೂಟವು ಪರಸ್ಪರ ದ್ವೇಷಾಸೂಯೆಯ-ಪ್ರದರ್ಶನಗಳ ರಂಗವಾಗಿಯೋ, ಒಣ ಚರ್ಚಾ ಕೂಟವಾಗಿಯೋ-ಅಥವಾ ಸ್ವಪ್ರತಿಷ್ಠಾ ಸ್ಥಾಪನೆಯ ಸಂದರ್ಭವಾಗಿಯೋ ಸಂಭವಿಸಬಹುದು. ಆದ್ದರಿಂದ ಪಾತ್ರ ಧೋರಣೆ-ವೈಯಕ್ತಿಕ ಧೋರಣೆ-ಈ ದ್ವಿಮುಖ ಧೋರಣೆಯು ಪುಕಯೊಬ್ಬ ಯಕ್ಷಗಾನ ಕಲಾವಿದನೂ ತಿಳಿಯಬೇಕಾದ ಸಂಗತಿ. ಈ ದೃಷ್ಟಿಯಿಂದ ಯಕ್ಷಗಾನವು ಸತ್ಸಂಗತಿಗಳನ್ನು ತೀರ್ಮಾನಿಸುವ ಒಂದು ನ್ಯಾಯಾಲಯವೂ ಹೌದು.

(ದೇಲಂಪಾಡಿ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಂಘವು ಹದಿನೂರನೇ ವಾರ್ಷಿಕೋತ್ಸವವ ಅಧ್ಯಕ್ಷ ಸ್ಥಾನದಿಂದ ಶ್ರೀನಾನ್ ಮುಂಡ್ಕಿಣ ಶಂಕರನಾರಾಯಣ ಭಟ್, ಎಡ್ವೋಕೇಟ್, ಮಂಗಳೂರು-ಆಡಿರುವ ಮಾತಿನ ಭಾಷಣದ ಸಾರ.)


**Mahatma Gandhi Memorial College, Udipi.**

(Affiliated to Karnatak University)

The College re-opens for admission to new classes on June 17, 1957.

The following courses of study are offered:—(1) Pre-University (One Year) in Arts, Science, and Commerce; (2) Three-year Degree courses in B. A., B. Sc., and B. Com for those who have passed their Pre-University; and (3) Two-year Degree courses in B. A. and B. Com. for those who have passed the Intermediate.

Admission to the B. Com. and B. Sc. is subject to affiliation being granted.

Further details are given in the College Prospectus copies of which may be obtained from the College Office.

*H. Sunder Rao.*
*Principal.*

# NAVAYUGA

Popular Kannada Weekly

*Founder:—*

**A. B. SHETTY,**
Former Minister for Public Health, Govt. of Madras & Govt of Mysore

# ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

| ಸಂಪುಟ | ಉಡುಪಿ | ಸಂಚಿಕೆ |
|---|---|---|
| ೫೬ | ೬-೬-'೫೨ | ೩೯ |


## ಸಂಘಟನೆಯ ಬಿಗಟು

ಅಖಿಲ ಭಾರತ ಕಾಂಗ್ರೆಸು ಸಮಿತಿಯ ಎರಡು ದಿನಗಳ ಅಧಿವೇಶನದಲ್ಲಿ ಸಂಘಟನೆಯ ಬಿಗಟನ್ನು ಬಿಡಿಸುವ ಕೆಲಸಕ್ಕೆ ಸಾಕಷ್ಟು ಮಹತ್ವವನ್ನು ಕೊಡಲಾಯಿತು. ನೆರೆದಿದ್ದ ಪ್ರತಿನಿಧಿಗಳು ಪ್ರತಿಪಕ್ಷಗಳವರು ಸಾಮಾನ್ಯವಾಗಿ ಮಾಡುತ್ತಿರುವ ಟೀಕೆಗಳಿಗಿಂತಲೂ ಉಗ್ರವಾದ ಭಾಷೆಯನ್ನು ಉಪಯೋಗಿಸಿ ಕಾಂಗ್ರೆಸಿಗರನ್ನು ತನ್ನ ವಾಗ್ಬಾಣಗಳಿಂದ ಚುಚ್ಚಿ, ಜೊಡೆದೆಬ್ಬಿಸುವ ವಕ್ತಾರನನ್ನು ತಮ್ಮ ನಡುವೆಯೇ ಕಂಡುಬಂದಂಗಾದರು ಆ ವಕ್ತಾರನೇ ಪ್ರಧಾನಿ ನೆಹರು; ಕಾಂಗ್ರೆಸಿನ ಕಣ್ಮಣಿ. ನೆಹರುಗಳು ಸಾಮಾನ್ಯ ಕಾಂಗ್ರೆಸಿಗನ ದೌರ್ಬಲ್ಯಗಳು ನಿಂದಾಸ್ಪದವಾದ ಮತ್ತು ನಿರ್ಲಜ್ಜೆಯ ಸುಟ್ಟಕ್ಕೂ ಇಳಿದಿರುತ್ತವೆ ಎಂದು ಗಂಭೀರವಾಗಿ ಎಚ್ಚರಿಸಿದರು. ಕಾಂಗ್ರೆಸಿಗರು ತನ್ನನ್ನು ಹಾಗು ಇತರ ಕೆಲವು ಹಳೆ ಕಾಲದ ಧುರೀಣರನ್ನು "ಮಹಂತ"ರೆನ್ನಾಗಿ (ಧಾರ್ಮಿಕ ಗುರುಗಳನ್ನಾಗಿ) ಮಾಡಿ ಅವರ ಸುತ್ತಲೂ ಜೀಲರಂತೆ (ಶಿಷ್ಯರಂತೆ) ತಿರುಗಾಡುತ್ತಿದ್ದಾರೆ—ಆದರೆ ಆ ಗುರುಗಳಲ್ಲರುವ ಯೋಗ್ಯತೆಯನ್ನು ತಮ್ಮಲ್ಲಿ ತಂದುಕೊಳ್ಳಲು ಪ್ರಯತ್ನಪಡುವುದಿಲ್ಲ. ಆ ಗುರುಗಳಾದರೂ ಹೊಸ ಪ್ರತಿಭಾಶಾಲಿಗಳು ಕಾಂಗ್ರೆಸಿನ ಮುಖ್ಯ ಸ್ಥಾನಗಳಿಗೆ ಬಾರದಂತೆ, ಬಂದರೂ ಶರಾವಲಂಬಿಗಳೇ ಆಗಿ ಉಳಿಯುವಂತೆ ಮಾಡುತ್ತಾರೆ, ಹೊಸ ಪ್ರತಿಭಾಶಾಲಿಗಳಿಗೆ ತಕ್ಕ ಪ್ರೋತ್ಸಾಹವನ್ನು ಕೊಟ್ಟು ಉತ್ಸಾಹದ ವಾತಾವರಣವನ್ನು ಉಂಟುಮಾಡುವುದಿಲ್ಲ-ಎಂದು ಮುಂತಾಗಿ ನೆಹರುಗಳು ಕಾಂಗ್ರೆಸಿನ ಇಂದಿನ ಸ್ಥಿತಿಗತಿಯನ್ನು ವಿವರಿಸಿದರು. ಮುಂದರಿದು ಅವರು ಸಾಮಾನ್ಯ ಕಾಂಗ್ರೆಸಿಗನ ಚಾರಿತ್ರ್ಯವು ಸುಧಾರಿಸಲ್ಪಡುವ ಅಗತ್ಯವನ್ನು ಬಲವಾಗಿ ಪ್ರತಿಪಾದಿಸಿದರು. ಕಾಂಗ್ರೆಸು ಸಂಸ್ಥೆಯು ಮಹಾವೃಕ್ಷವಾದರೆ, ಅದರ ಸತ್ವ, ಚೇತನಗಳ ಮೂಲವು ಜನತಾ ಹೃದಯದಲ್ಲಿ ಅಳವಾಗಿ ಬಿಟ್ಟಿರುವ ಸಾಮಾನ್ಯ ಕಾಂಗ್ರೆಸಿಗನೆಂಬ ಸಾವಿರಾರು ಬೇರುಗಳಲ್ಲದೆ, ಶಿರೋಭಾಗದಲ್ಲಿರುವ ಅಧಿಕಾರಾರೂಢ ಕಾಂಗ್ರೆಸಿಗರೆಂಬ ಎಲೆಗಳ ಸಮೂಹದಲ್ಲಿಯಲ್ಲ ಬೇರಿನಂತೆ ಸಾಮಾನ್ಯ ಕಾಂಗ್ರೆಸಿಗರು ಜನತೆಂದ ಬೇಕಾದ ಶಕ್ತಿ, ವಿಶ್ವಾಸಗಳನ್ನು ಸಂಪಾದಿಸಿದರೆ ಮಾತ್ರ ಕಾಂಗ್ರೆಸಿನ ಸರಕಾರಿ ಅಡಳಿತ ಯಂತ್ರವು ಹಸುರಲೆಯಾಗಿ ಕಂಗೊಳಿಸಬಲ್ಲುದು ಅನ್ಯಥಾ ಸಾಧ್ಯವಿಲ್ಲ. ಇಂದಿನ ಸರಿಸ್ಥಿತಿಯಲ್ಲಿ ಬೇರುಗಳೆಲ್ಲ ಶುಂಡಾಗುತ್ತಿವೆ; ಆದರೂ ಎಲೆಯು ನಳು ಕಳುವಾಗಿಯೇ ಇನ್ನೂ ಉಳಿದಿದ್ದರೆ, ಆ ಎಲೆಯು ಜೀವಸತ್ವವನ್ನು ಬೇರುಗಳಿಂದಲ್ಲ-ಕಾಂಡದಲ್ಲಿ ಸಂಗ್ರಹವಾಗಿಟ್ಟಿರುವ ಆಹಾರದಿಂದ ಪಡೆಯುತ್ತಿರುವುದೇ ಕಾರಣ; ಜೊತೆಯಲ್ಲಿ ಅಲ್ಲಲ್ಲಿ ಕೆಲವು ಬೇರುಗಳು ಈಗಲೂ ಅಲ್ಪ ಸ್ವಲ್ಪ ಪ್ರಮಾಣದಲ್ಲಿಯೇ ಆಗಲಿ, ತಮ್ಮ ಕರ್ತವ್ಯವನ್ನು ನೆರವೇರಿಸುತ್ತಿರುವುದು ಇನ್ನೊಂದು ಕಾರಣ. ಈ ಅಳಿವುಳಿದ ಬೇರುಗಳ ಸಮೂಹವೇ ಹಳೆಯ ಮುಂದಾಳುಗಳ ಗುಂಪು; ಕಾಂಡವೆಂದರೇನೇ ಕಾಂಗ್ರೆಸಿನ ಹಳೆಯ ಕೀರ್ತಿ, ವೈಭವಗಳ ದಾಖಲೆ. ಆದರೆ ಇವೆರಡೂ ದೀರ್ಘಕಾಲ ಬಾಳುವ ಹಾಗಿಲ್ಲ; ಇವನ್ನು ಹೆಚ್ಚು ಸಮಯದ ವರೆಗೆ ಅವಲಂಬಿಸಿ ಕಾಂಗ್ರೆಸು ಸಂಸ್ಥೆ ಜೀವಂತವಾಗಿರುವುದು ಅಸಾಧ್ಯ ಎಂಬ ದಾಗಿ ನೆಹರು ತಕ್ಕ ಉಪಮೆಯನ್ನು ಕೊಟ್ಟು ಕಾಂಗ್ರೆಸಿನ ಶಕ್ತಿಹೀನತೆಯ ಮೂಲವನ್ನು ತೋರಿಸಿ ಕೊಟ್ಟರು. ಕಾಂಗ್ರೆಸಿಗರು ಶಿಸ್ತುಗೆಟ್ಟವರಾಗಿ ಯೂನಿಯನ್ ಜಿಯಲ್ಲಿ ದ್ವಾರಿಂದೂ ಶಕ್ತಿಹೀನತೆಯ ಜೊತೆಗೆ ಇದೂ ತನ್ನನ್ನು ಅಪಾರ ಚಿಂತೆಗೀಡು ಮಾಡಿರುವ ವಿಷಯವೆಂದೂ ನೆಹರು ಇದೇ ಸಂದರ್ಭದಲ್ಲಿ ನುಡಿದರು. ನಮ್ಮ ಕಾಂಗ್ರೆಸಿಗರಲ್ಲಿ ಒಂದೋ ಎರಡೋ ಕೋಟಿ ಕಾಂಗ್ರೆಸು ಸದಸ್ಯರಿದ್ದಾರೆ. ಆದರೆ ಇವರೆಂಥ ಸದಸ್ಯರು? ಎಂದು ನೆಹರುಗಳು ಪ್ರಶ್ನಿಸುತ್ತಾ ತಾನೇ ಅದಕ್ಕೆ ಉತ್ತರವನ್ನೂ ಕೊಟ್ಟರು. ಏನೆಂದರೆ, ಇವರೆಲ್ಲರೂ ಹೆಸರಿಗೆ ಮಾತ್ರ ಕಾಂಗ್ರೆಸಿಗರು; ಕೆಲಸಕ್ಕಲ್ಲ. ಆ ಬುದರಿಂದ ನಿಜವಾಗಿ ಕೆಲಸ ಮಾಡುವವರನ್ನು ಮಾತ್ರವೇ ಕಾಂಗ್ರೆಸಿಗರಾಗಿ ಇಟ್ಟುಕೊಳ್ಳುವುದು ವಿಹಿತವೆಂಬ ಇಂಥ ವರು ನೂರಕ್ಕೆ ಹತ್ತರಷ್ಟೂ ಕಡಿಮೆ ಸಿಕ್ಕರೂ ಚಿಂತಿಲ್ಲವೆಂದೂ ಕೆಲಸಗೇಡಿಗಳಾಗಿ ತಮ್ಮ ವರ್ಚಸ್ಸನ್ನು ಕಾಂಗ್ರೆಸಿನ ನೆರೆಯಲ್ಲಿ ಹೆಚ್ಚಿಸಿಕೊಳ್ಳಲಿಕ್ಕಾಗಿ ಬಂದು ಸೇರಿರುವ ೯೦% ಸದಸ್ಯರನ್ನು ವಜಾಪಡಿಸಿ ಕೈತೊಳೆದುಕೊಳ್ಳುವುದೇ ಲೇಸೆಂದೂ ನೆಹರು ಶುದ್ಧೀಕರಣದ ಕರೆಕೊಟ್ಟರು. ನಿಜವಾದ ಕೆಲಸಗಾರರ ಪರಿಶ್ರಮ ಫಲವನ್ನು ಕೆಲಸಗೇಡಿ ಸದಸ್ಯರು ಉಂಡು, ಕಾಂಗ್ರೆಸಿನ ಸಂಘಟನೆ, ಕೀರ್ತಿ ಮತ್ತು ವರ್ಚಸ್ಸುಗಳಿಗೆ ಘಾತಕರಾಗಿ ವರ್ತಿಸದಂತೆ ಎಚ್ಚರವಹಿಸಬೇಕಾದ ಅಗತ್ಯವನ್ನು ಇಂದು ಎಂದಿಗಿಂತಲೂ ತುಂಬ ಹೆಚ್ಚಿದೆ ಎಂದರು ನೆಹರು. ಕಾಂಗ್ರೆಸಿನ ಸದಸ್ಯ ಸಂಪತ್ತು ಹೆಚ್ಚಾಗಬೇಕೆಂಬುದು ನಿಜ; ಆದರೆ ಈ ಸದಸ್ಯರು ಶ್ರದ್ಧೆಯಿಂದ ಕಾಂಗ್ರೆಸಿನ ತತ್ವಪಾಲನೆಗಳಲ್ಲಿ ಆಸಕ್ತರಾಗಿ ಉಳಿದರೆ ಮಾತ್ರ ಅದರಿಂದ ಸಂಸ್ಥೆಗೆ ಶ್ರೇಯಸ್ಸು; ಇಲ್ಲವಿದ್ದರೆ ಅಂಥವರಿಂದ ಕಾಂಗ್ರೆಸಿಗೆ ಉಳಿಗಾಲವಿಲ್ಲ ಎಂಬುದನ್ನೂ ನೆಹರು ತಿಳಿಸಿ ಹೇಳಿದರು. ಇಷ್ಟೆಲ್ಲ ಬಗೆಯಿಂದ ಕಾಂಗ್ರೆಸ್ಸನ್ನು ಕಾಂಗ್ರೆಸಿಗರನ್ನು ದೂರಿದರೂ ನೆಹರು ತಾನು ದೂರುತ್ತಿರುವುದು ಕಾಂಗ್ರೆಸ್ಸನ್ನು ಹೆಂಗಿಳಿಕ್ಕಾಗಿ ಅಲ್ಲವೆಂದೂ, ತನ್ನ ಲೋಪದೋಷಗಳ ನಿಜವಾದ ತಿಳಿವಳಿಕೆಯು ಸಂಸ್ಥೆಗೆ ಆಗಿ, ಅದು ತನ್ನನ್ನು ತಾನೇ ಸುಧಾರಿಸಿಕೊಳ್ಳಲು ಪ್ರಯತ್ನ ಶೀಲವಾಗಲೆಂಬುದೇ ತನ್ನ ನಿಜವಾದ ಉದ್ದೇಶವೆಂದೂ ನೆಹರು ಮಾರ್ಮಿಕವಾದ ಮಾತನ್ನಾಡಿದರು. "ನಾನೀಗ ನನ್ನ ಸಂಸ್ಥೆಯನ್ನೇ ಟೀಕಿಸುತ್ತಿದ್ದೇನೆ; ನೀವು ಸಹ ಟೀಕಿಸುತ್ತಿರುವುದುಂಟು; ಹಾಗೆ ನೋಡಿದರೆ ನಾವಿಲ್ಲರೂ ನಮ್ಮ ಸಂಸ್ಥೆಯನ್ನು ಆಗಿಂದಾಗ್ಗೆ ಟೀಕಿಸುತ್ತಿರುತ್ತೇವೆ. ಇದು ನಮ್ಮ ಪ್ರಗತಿಯ ದಾರಿಯಲ್ಲಿ ಅಡ್ಡಿ ಕಡೆಗಳಿಲ್ಲದಂತೆ ಮಾಡುವುದಕ್ಕೆ ಸಹಕಾರಿಯಾದ ಕ್ರಮ. ನಮ್ಮ ಸ್ವಂತ ದೋಷ ಮತ್ತು ಪ್ರಮಾದಗಳನ್ನು ಗುರುತಿಸಿಕೊಂಡು, ಅವನ್ನು ತಿದ್ದಿಕೊಂಡು ಮುನ್ನಡೆಯುವುದೇ ಜೀತನದ ಲಕ್ಷಣ" ಎಂದು ನೆಹರು ಕಾಂಗ್ರೆಸಿಗರಲ್ಲಿ ಆತ್ಮ ವಿಶ್ವಾಸವನ್ನೂ ಹುಟ್ಟಿಸಿದರು; ಆಲ್ಲದೆ ಕಾಂಗ್ರೆಸು ಪೂರ್ತಿ ಕೆಟ್ಟೇ ಹೋಗಿದೆ ಎನ್ನುವ ಪ್ರತಿಪಕ್ಷಗಳ ಟೀಕೆಗೂ ತನ್ನ ವಾತಿಗೂ ಅಂತರವಿದೆ ಎಂದು ಸೂಚಿಸಿದರು. ಕಾಂಗ್ರೆಸಿನ ಸದಸ್ಯ ಸಂಪತ್ತಿನ ವಿಸ್ತಾರವನ್ನು ನೋಡಿದರೆ, ತಕ್ಕ ಮಾರ್ಗದರ್ಶನ ಮತ್ತು ಉತ್ತೇಜನೆಯನ್ನಿತ್ತು ಪ್ರೋತ್ಸಾಹಿಸಿದ ಪಕ್ಷದಲ್ಲಿ ಈ ಸದಸ್ಯರು ಕಾಂಗ್ರೆಸಿನ ಹಳೆಯ ಉತ್ತಮ ಚಾರಿತ್ರಾರ್ಹ ದಾಖಲೆಯನ್ನೆ ಊರ್ಜಿತದಲ್ಲಿಡಲು ಮುಂದಾಗಬಹುದೆಂಬ ವಿಶ್ವಾಸವನ್ನು ನೆಹರು ಪ್ರದರ್ಶಿಸಿದರು. ಕಚ್ಚಾ ಸಾಮಗ್ರಿ ಇದೆ—ಅದರಿಂದ ಸರಕನ್ನು ತಯಾರಿಸಬಲ್ಲ ಕುಶಲ ಕಾರ್ಯಕರ್ತ ಅಗತ್ಯ ಎಂಬ ಮಾತಿನ ನೆನಪು ಈ ಸಂದರ್ಭದಲ್ಲಿ ನಮಗೆ ಆಗುತ್ತದೆ. ಹಿಂದೆ ಗಾಂಧೀಜಿಯಂಥವರೊಬ್ಬರು ಜನತೆಯ ನಡುವೆ ಇಳಿದು ಕುಶಲ ಕಾರ್ಯಕರ್ತನಾದರು; ಇಂದು ನೆಹರು ಜನತೆಯ ದೃಷ್ಟಿ ಕೇಂದ್ರವಾಗಿದ್ದಾರೆನ್ನುವುದು ನಿಜವಾದರೂ ಜನತೆಯ ನಡುವೆ ಅವರು ಸದಾ ಬಂದಿರಲಾರದೆ, ಪ್ರಧಾನಿ ಪಟ್ಟದಲ್ಲಿದ್ದಾರೆ; ಮತ್ತು ಆ ಪ್ರಧಾನಿ ಪಟ್ಟವನ್ನು ಅವರು ಬಿಟ್ಟು ಬರುವುದೂ ಇಂದಿನ ಸ್ಥಿತಿಗತಿಯಲ್ಲಿ ದೇಶಕ್ಕೆ ಅಪಾಯಕರ ವೆನ್ನುವುದು ಸ್ಪಷ್ಟ. ಹೀಗಾಗಿ ಸಾಮಾನ್ಯ ಕಾಂಗ್ರೆಸಿಗನೇ ನೆಹರು ಮತ್ತಿತರ ಧುರೀಣರ ಆಶಯಗಳನ್ನು ಮನವರಿಕೆ ಮಾಡಿಕೊಂಡು ತನಗೆ ತಾನೇ ಗುರುವಾಗಿ, ಮಾರ್ಗದರ್ಶಕನಾಗಿ, ಕ್ರಿಯಾಶೀಲ ಚಾರಿತ್ರ್ಯ ಸಂಪನ್ನನಾಗಿ ತನ್ನ ಯೋಗ್ಯತೆಯನ್ನು ಸಂವರ್ಧಿಸಿಕೊಳ್ಳುವುದೇ ಆತ ಸಕ್ರಿಯಪಡಬಹುದಾದ ಏಕಮೇವ ಉಪಾಯ ಈ ಪ್ರಯತ್ನ ಕಾಂಗ್ರೆಸಿಗರ ದಾಗಲಿ; ಮತ್ತದು ಎದ್ದಿರಲಿ ಎಂದು ಹಾರೈಸುತ್ತೇವೆ.

## ಸಂಕ್ಷಿಪ್ತ ಸುದ್ದಿಗಳು

### ಅಖಿಲಭಾರತ ಕಾಂಗ್ರೆಸ್ ಸಮಿತಿಯು

ಮೊನ್ನೆ ತಾರೀಕು ೧೧ ಮತ್ತು ೧೨ರಂದು ನವದೆಹಲಿಯಲ್ಲಿ ಸೇರಿ, ಕಾಂಗ್ರೆಸ್ಸನ್ನು ಜೈತನ್ಯಶೀಲವನ್ನಾಗಿಸುವ ಕುರಿತಾಗಿ ಆಲೋಚಿಸಿತು. ಕ್ರಿಯಾಶೀಲ ಸದಸ್ಯರೇ ಕಾಂಗ್ರೆಸ್ಸನ್ನು ಬಲಪಡಿಸಬಲ್ಲವರೆಂದು ದರಿಂದ, ಸದಸ್ಯತನದಲ್ಲಿ ಕೆಲವೊಂದು ನಿಯಮಗಳನ್ನು ಮಾಡಿ, ಮೂಲ ಘಟನೆಗೆ ತಿದ್ದುಪಡಿಯನ್ನು ಮಾಡಲು ಸೂಚಿಸಿತು. ಈ ತಿದ್ದುಪಡಿಯನ್ನು ಪರಿಶೀಲನೆಗಾಗಿ ಒಂದು ಉಪಸಮಿತಿಗೆ ಒಪ್ಪಿಸಲಾಯಿತು. ಅದು ಕಾಂಗ್ರೆಸ್ಸಿನ ಮುಂದಿನ ಆಗಸ್ಟ್ ತಿಂಗಳ ಅಧಿವೇಶನದಲ್ಲಿ ಸ್ವೀಕಾರವಾಗುವ ನಿರೀಕ್ಷೆಯಿದೆ.

### ಮಂತ್ರಿಗಳ ಸಂಬಳವನ್ನು

ಕಡಿಮೆಮಾಡಿಕೊಳ್ಳಬೇಕೆಂಬ ಸೂಚನೆಗೆ ಪ್ರಧಾನಿ ನೆಹರೂ ಕಾಂಗ್ರೆಸ್ ಸಮಿತಿಯಲ್ಲಿ ತನ್ನ ಸಂಬಳದ ಮತ್ತು ವೆಚ್ಚದ ಲೆಕ್ಕವನ್ನು ಒಪ್ಪಿಸಿದರು. ತೆರಿಗೆ, ಸದಸ್ಯತನ, ಸ್ವಂತ ಆತಿಥಿಗಳ ಉಪಚಾರಗಳಿಗಾಗಿ ವಿಶೇಷವಾದ ಹಣವನ್ನು ತೆಗೆದುಕೊಂಡ ಹಣವು ತನಗೇ ಸಾಕಾಗದಿರುವಾಗ ಮಕ್ಕಳು ಮರಿಗಳ ಚಿಂತೆಯಿರುವ ಇತರ ಮಂತ್ರಿಗಳ ಪಾಡೇನು? ಎಂದವರು ತಿಳಿಸಿ, ಮಂತ್ರಿಗಳಿಗೆ ತೆರಿಗೆ ಹೋಗಿ ಕೈಗೆ ಬರುವ ಹಣವು ರೂಪಾಯಿ ೧,೦೦೦ಕ್ಕಿಂತ ಬಹಳ ಹೆಚ್ಚೇನೂ ಇಲ್ಲ ಎಂದರು.

### ಮುಂಬಯಿ ನಗರದಲ್ಲಿ

ಕೇಂದ್ರ ರೈಲ್ವೆಯ ಬಂದರ ಶಾಖೆಯಲ್ಲಿನ ವಡಾಲಾ ಮತ್ತು ಸಿವರಿ ನಿಲ್ದಾಣಗಳ ನಡುವೆ ಸಿಂತ ಬಂದು ಲೋಕಲ್ ಗಾಡಿಗೆ ಇನ್ನೊಂದು ಗಾಡಿಯು ಬಂದು ಢಿಕ್ಕಿ ಹೊಡೆದುದರ ಪರಿಣಾಮವಾಗಿ ೧೫ ಜನರು ಮರಣಗೊಂಡರೆಲ್ಲದೆ ಸುಮಾರು ೬೬ ಮಂದಿಗೆ ತೀವ್ರ ಗಾಯಗಳಾಗಿವೆ ಯೆಂದು ತಿಳಿದು ಬಂದಿದೆ. ಅಪಘಾತದ ಪೆಟ್ಟಿನಿಂದ ಗಾಡಿ ಡಬ್ಬಿಗಳ ಭಾಗಿಲು, ಕಿಟಕಿಗಳು ಮುರಿದು ಪುಡಿಪುಡಿಯಾಗಿದ್ದವು. ರೈಲ್ವೆಗಳ ಸರಕಾರಿ ಪರೀಕ್ಷಾಧಿಕಾರಿ ಶ್ರೀ. ಡಿ. ಸಿ. ದೇಸಾಯಿಯವರು ಮುಂದಿನ ವಿಚಾರಣೆಗೆ ಪ್ರಾರಂಭಿಸಿರುವರು.

### ಹೊಸಕಾಗಿ ಹೊರಿಸಿದ ಕರಭಾರಗಳಲ್ಲಿ

ಕೇಂದ್ರೀಯ ಅರ್ಥ ಮಂತ್ರಿಗಳು ಕೆಲವೊಂದು ರಿಯಾಯಿತಿಗಳನ್ನು ಕೊಡಲೊಪ್ಪಿರುವರು. ಅಂಚೆ ಕಾರ್ಡಿನ ಬೆಲೆಯನ್ನು ಹೆಚ್ಚಿಸದೆ ಅಂಚೆ ಪಾಕೇಟಿನ ಮೇಲೆ ಪ್ರಾರಂಭದ ೧/೫ ತೊಲೆಗೆ ೧೨ ನಯೇ ಪೈಸೆ ಮುಂದಿನ ಪ್ರತಿ ೧/೫ ತೊಲೆ ಅಥವಾ ಅದರಂಶಕ್ಕೆ ೧೦ ನಯೇ ಪೈಸೆ ಎಂದು ನಿರ್ಧರಿಸಲಾಯಿತು. ಅಂತರ್ದೇಶೀಯ ಪಾರ್ಸೆಲುಗಳ ದರವನ್ನೂ ಏರಿಸಲಿಲ್ಲ. ಜನರ ನಿತ್ಯೋಪಯೋಗಿ ಸರಕುಗಳಾದ ಕಾಫಿ ಮತ್ತು ಚಹಗಳ ಮೇಲಿನ ಹೊಸ ನಿಯೋಜಿತ ಸುಂಕವನ್ನು ಹಿಂತೆಗೆಯಲಾಯಿತು. ಹಾಗೆಯೇ ರೇಲ್ವೆ ಮತ್ತು ಸಂಪತ್ತುಗಳ ಮೇಲೆಯೂ ಕೆಲವೊಂದು ಚಿಕ್ಕ ಪ್ರಮಾಣದ ಸವಲತ್ತುಗಳು ಕೊಡಲ್ಪಟ್ಟಿವೆ. ಈಗ, ಹೊಸ ಕರಭಾರದಿಂದ ಸರಕಾರಕ್ಕೆ ಬರುವ ಆದಾಯವು ೫೬.೮೮ ಕೋಟಿಗಳಷ್ಟು ಕಡಮೆಯಾಗುವುದು.

### ಇನ್‌ಫ್ಲುಯೆಂಜಾ ಹಾವಳಿಯು

ಭಾರತದ ನಾನಾ ಪ್ರಮುಖ ನಗರಗಳಲ್ಲಿ ಹರಡಿ ಕೆಲವೊಂದು ಮರಣಕ್ಕೆ ಕಾರಣವಾಗಿವೆ. ಮದ್ರಾಸು, ನಾಗ್ಪುರ, ಬೆಂಗಳೂರು, ಹುಬ್ಬಳ್ಳಿ, ಬೆಳಗಾವಿ, ಬೊಂಬಾಯಿ, ಅಹಮ್ಮದಾಬಾದು, ನವದೆಹಲಿ, ಕಲ್ಕತ್ತಾ ಮೊದಲಾದೆಡೆಯಲ್ಲಿ ಈ ಜ್ವರವು ಪ್ರಸರಿಸಿದ ಸುದ್ದಿಗಳು ಬಂದಿವೆ. ಎಲ್ಲ ಆಸ್ಪತ್ರೆಗಳಲ್ಲಿಯೂ ವಿಶೇಷ ರೀತಿಯಲ್ಲಿ ಚಿಕಿತ್ಸೆ ಮಾಡುವ ಸೌಕರ್ಯಗಳನ್ನು ಒದಗಿಸಲಾಗಿದೆ. ದೊಡ್ಡ ನಗರಗಳಲ್ಲಿ ಜನಸಂದಣಿ ಅಧಿಕವಿರುವೆಡೆಯಲ್ಲಿಯೇ ಈ ರೋಗವು ಬಲಿಯುತ್ತಿದೆಯೆಂದೂ, ಸಿವಾರಣೆಗೆ ಸರಕಾರ ಹಾಗೂ ಸ್ಥಳೀಯ ಸಂಸ್ಥೆಗಳು ಶಕ್ತಿಮೀರಿ ಸ್ಪಯತ್ನಿಸುತ್ತಿರುವುದಾದರೂ ಕೆಲವೊಂದು ವ್ಯಾಣಹಾನಿ ಸಂಭವಿಸಬಹುದೆಂದೂ ತಿಳಿದುಬಂದಿದೆ.

### ಆಹಾರ ಧಾನ್ಯಗಳ

ಬೆಲೆಗಳಲ್ಲಿ ಏರಿಕೆಯಾಗದಂತೆ ತಡೆ
ಸುವ ಸಲುವಾಗಿ, ಲೋಕಸಭೆಯಲ್ಲಿ
ಂದು ವಿಧೇಯಕವನ್ನು ಮಂಜೂರು
ಗೂಡಿ ಸರಕಾರಕ್ಕೆ ವಿಶೇಷ ಅಧಿಕಾರವ
ನ್ನೀಯಲಾಯಿತು. ಇದರಿಂದ, ನಿಯಂತ್ರಿ
ಬೆಲೆಗಳ ಅಭಾವವಿದ್ದಲ್ಲಿ ಮೂರು ತಿಂ
ಗಳಲ್ಲಿ ಸ್ಥಳೀಯ ಪೇಟೆಯಲ್ಲಿದ್ದ ದರಗಳ
ವ್ಯಾಪಾರಿ ದರದಂತೆ ಆಹಾರಧಾನ್ಯ ಸಂಗ್ರ
ಹಕಾರರಿಗೆ ಅವರ ಸಂಗ್ರಹದ ಜೆಲೆ ಸಲ್ಲಿಸಿ
ಸರಕಾರವು ವಶಪಡಿಸಿಕೊಳ್ಳಬಹುದೆಂದು
ತಿಳಿಸಲಾಗಿದೆ.

### ಅಣು ಸ್ಫೋಟನದಿಂದ

ಇಡಿ ಜಗತ್ತಿನಲ್ಲಿ ಸುಮಾರು ೫೦ ಸಾ
ವಿರ ಜನರು ಮರಣಗೊಳ್ಳುವರೆಂದೂ
ಈ ಪರಿಣಾಮಗಳು ಎಲ್ಲ
ಪ್ರಾಂತವಲ್ಲಾದೆ ನಿಧಾನವಾಗಿ ಕಾಣಿಸಿ
ಕೊಳ್ಳುವುದೆಂದೂ ಜಾಗತಿಕ ಆರೋಗ್ಯ
ಸಂಸ್ಥೆಯ ಮುಖ್ಯಸ್ಥರಾಗಿದ್ದ ಡಾ. ಬ್ರಾ
ಕ್ ಚೆಶೋಮರು ನ್ಯೂ ವೆಸ್ಟ್‌ಮಿನಿಸ್ಟರ್
ಸ್ಸ್ ಕ್ಲಬ್‌ನಲ್ಲಿ ತಿಳಿಸಿದರು.

### ಉತ್ತರ ಕನ್ನಡ ಜಿಲ್ಲೆಯ

ಕುಮಟಾ, ಹೊನ್ನಾವರ, ಭಟ್ಕಳ,
ಂಕೋಲಾ ಮತ್ತು ಕಾರವಾರ ಪಟ್ಟಣ
ಗಳಿಗೆ ವಿದ್ಯುಚ್ಛಕ್ತಿಯನ್ನು ಪೂರೈಸುವು
ದಾಗಿ ಮೈಸೂರು ಸರಕಾರವು ನಿಶ್ಚಯಿಸಿ
ಈ ಬಗ್ಗೆ ೧೯೬೦-೬೧ರ ಅನಧಿಯಲ್ಲಿ ಕೆ
ಲಸವನ್ನು ಪೂರ್ತಿಗೊಳ್ಳುವಂತೆ ಒಂದು
ಯೋಜನೆಯನ್ನು ಸಿದ್ಧಪಡಿಸಿದೆ. ಈ ಕಾ
ಮಗ್ರವು ಸದ್ಯ ತಾತ್ಕಾಲಿಕ ತಂತಿಯ ಅಭಾ
ವದಿಂದಾಗಿ ಪ್ರಾರಂಭವಾಗದಿದ್ದರೂ, ಅ
ತ್ತ ದೊರಕಿಸೊಡನೆಯೇ ಯೋಜನೆಯ
ನ್ನು ಕಾರ್ಯರೂಪಗೊಳಿಸಲಾಗುವುದೆಂದೂ
ತಿಳಿಯುತ್ತದೆ.

### ಮೈಸೂರು ಶಾಸನ ಸಭೆಯು

ಇಬೇ ೩೦ಗಳಂದು ಪ್ರಸ್ತಪಮ
ವಾಗಿ ಸೇರಲಿದೆ. ಈ ಬಾರಿಯ ಅಧಿವೇಶ
ನದಲ್ಲಿ ಏದು ರಾಜ್ಯಗಳ ಏದು ಕ್ರಮಗಳ
ತಡಪಳಕಟ್ಟಿಲ ಏಕ ರೂಪತೆಯನ್ನು ತರುವ
ಕೆಲವೊಂದು ಗೊತ್ತುವಳಿಗಳ ಸೂಚನೆ
ಯಾಗುವ ನಿರೀಕ್ಷೆಯಿದೆ. ಇವುಗಳಲ್ಲಿ
ಕಾಯಿದೆ ಮತ್ತೊದೆ. ಸ್ವಾಮ್ಪ್ ಮಸೂದೆ
ಮಾರಾಟ ತೆರಿಗೆಯ ಮಸೂದೆಗಳೂ
ಸಿವೆ.

### ಹೈಡ್ರೋಜನ್ ಬಾಂಬೊಂದನ್ನು

ಬ್ರಿಟನ್ ಮೇ ದಿನಾಂಕ ಇಗರಂದು
ಸ್ಫೋಟಗೊಳಿಸಿದ್ದು, ತನ್ನ ಈ ಎರಡನೆ
ಯ ಪ್ರಯೋಗವನ್ನು ಅದು ಮಧ್ಯ ಶಾಂ
ತಸಾಗರ ಪ್ರದೇಶವಲ್ಲಿ ಚಾಪಾನಿನಿಂದ
೩೧೦೦ ಮೈಲಿಗಳಷ್ಟು ಹೆವಾಯಿ ನಡು
ಗಡ್ಡಿಯಿಂದ ೧೩೦೦ ಮೈಲು ದೂರವಿರು
ವ ಕ್ರಿಸ್‌ಮಸ್ ದ್ವೀಪದಲ್ಲಿಯೇ ಕೈಗೊ
ಳ್ಳಲ್ಪಟ್ಟಿದೆ.

### ನೌಕಾ ನಿರ್ಮಾಣ ಕಾರ್ಖಾನೆ

ಯನ್ನು ಸ್ಥಾಪಿಸಲು ಉತ್ತರ ಕನ್ನಡ
ದ ಭಟ್ಕಳಕ್ಕದಲ್ಲಿ ಸರ್ವೆ ನಡೆಸಲು ಮೈಸೂ
ರು ಸರಕಾರವು ಶ್ರೀ ಎ. ಎಂ. ಭಟ್ಟರಿಗೆ
ಅನುಮತಿಯಿತ್ತಿರುವರೆಂದು ತಿಳಿಯುತ್ತ
ದೆ. ರೇಲ್ವೆ ಬೋರ್ಡಿನವರೂ ತಾಳಗುಪ್ಪ
ಭಟ್ಕಳ ರೇಲ್ವೆಯನ್ನು ಹಾಕಲು ನಿರ್ಧರಿ
ಸಿದ್ದಾರೆ.


### ಸೂಚನೆ

'ನವಯುಗ'ದ ಚಂದಾ ಹಣ ಮತ್ತು
ಇತರೆ ಹಣವನ್ನು ಕೆನರಾ ಇಂಡ
ಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿ
ಕೇಟ್ ಲಿಮಿಟೆಡ್ ಇದರ ಯಾವುದೇ
ಶಾಖೆಯಲ್ಲಿ ಯಾವದೊಂದು ತರೆದ
ಚೆಕ್ಕ್ ಇಲ್ಲದೆ (ನವಯುಗ ವಾರಪತ್ರಿ
ಕೆಯ ಖಾತೆಗೆ) ಜಾಮತ ಮಾತಬಹುದು.

ಮೆನೇಜರ್.

ಅಂಚೆ, ದೂರದರ್ಶನ ಮತ್ತು ತಂತಿ ಸೇವೆಗಳ ವಿಕಾಸವು ದೇಶದ ಔದ್ಯೋಗಿಕ ವಿಜ್ಞಾನ ಮತ್ತು ಸಾಮಾಜಿಕ ಪ್ರಗತಿಯ ಒಂದು ಸಮಗ್ರ ಭಾಗವಾಗಿರುವುದು. ಪ್ರಥಮ ಪಂಚವಾರ್ಷಿಕ ಯೋಜನಾವಧಿಯಲ್ಲಿ ೫೦೦೦ಕ್ಕಿಂತ ಅಧಿಕ ಜನಸಂಖ್ಯೆಯಿರುವ ಸ್ಥಳಗಳಲ್ಲೆಲ್ಲ ಅಂಚೆ ಕಛೇರಿಯನ್ನು ತೆರೆಯಲಾಯಿತು. ಚಿತ್ರದಲ್ಲಿ ಈ ವಿಭಾಗದ ಕೆಲವೊಂದು ದೃಶ್ಯಗಳನ್ನು ಕಾಣಬಹುದು.

ಚಿತ್ರ ೧. ಅಂಚೆ ಸೌಕರ್ಯಗಳ ವಿಶೇಷ ವ್ಯವಸ್ಥೆಯಿರುವ ಚಲಿಸುವ ಮೋಟಾರು ಬಂಡಿಯೊಂದು ಗೊತ್ತಾದ ಸ್ಥಳದಲ್ಲಿ ನಿಂತಿದೆ. ಕಾರ್ಡು, ಕವರು ಮುಂತಾದುವುಗಳನ್ನು ಇಲ್ಲಿಂದ ಪಡೆದುಕೊಳ್ಳಬಹುದು.

ಚಿತ್ರ ೨. ನವದೆಹಲಿಯಲ್ಲಿ ಗಣರಾಜ್ಯೋತ್ಸವ ತಿಂಗಳಲ್ಲಿ ನಡೆದ ಅಂತಾರಾಷ್ಟ್ರೀಯ ಅಂಚೆ ಮತ್ತು ಬೀಟಿಗಳ ಪ್ರದರ್ಶನದ ಆವರಣದಲ್ಲಿ ನಿರ್ಮಿಸಿದ್ದ ಪುರಾತನ ಕಾಲದ 'ಅಂಚೆ ದೂತ'ನ ವಿಗ್ರಹ.

ಚಿತ್ರ ೩. ದೆಹಲಿಯಲ್ಲಿರುವ ದೂರದರ್ಶನ ವಿನಿಮಯ ಕೇಂದ್ರದ ಒಳಭಾಗದ ಒಂದು ದೃಶ್ಯ.

ಚಿತ್ರ ೪. ಮುಂಬಯಿ ಕೇಂದ್ರ ತಂತಿ ಕಛೇರಿಯ ಮಧ್ಯಭಾಗದಲ್ಲಿರುವ ಉಪಕರಣಗಳ ಕೋಣೆಯ ಒಳಭಾಗದ ಒಂದು ದೃಶ್ಯ.

## ಉಡುಪಿ

**ಶ್ರೀ ಕೃಷ್ಣಾಪುರ ಮಹಾಧೀಶರ ವರ್ಧಂತಿ**— ಶ್ರೀ ಕೃಷ್ಣಾಪುರ ಸುಶ್ರೀ ಶ್ರೀ ವಿದ್ಯಾಧಿರಾಜ ತೀರ್ಥ ಶ್ರೀಪಾದಂಗಳವರು ಕಳದ ತಾ ೩೦ರಂದು ತಮ್ಮ ಮಠದಲ್ಲಿ ತಮ್ಮ ಜನ್ಮ ವರ್ಧಂತಿಯನ್ನು ಮಹಾ ವೈಭವದಿಂದ ಧಾರ್ಮಿಕ ರಿತ್ಯಾ ಆಚರಿಸಿದರು. ಈ ಸಮಾರಂಭಕ್ಕೆ ಆಪ್ತಾಪೇಕ್ಷಿತ್ತಿದ್ದ ಬಾಳೆಗಾರು ಮಠದ ಶ್ರೀ ರಘುನಾಥ ತೀರ್ಥ ಸ್ವಾಮಿಗಳವರಿಗೆ ಸಂಸ್ಥಾನಕ್ಕೆ ಚಿತನಾವ ಉಚ್ಚ ನುಟ್ಟಿದ ಔತಣ ಸತ್ಕಾರ ನಡೆಯಿತು.

**ಕ್ರಿಶ್ಚಿಯನ್ ಹ್ಯಾಸ್ಕೂಲಿನಲ್ಲಿ**- ಹೆಡ್ಮಾಸ್ಟರಾಗಿದ್ದ ಶ್ರೀ ಎಸ್. ಎನ್. ಮತಾಯಸರು ನಿನ್ನತ್ತರಾಯದರಿಂದ ಅವರ ಸ್ಥಾನದಲ್ಲಿ ಮಂಗಳೂರಿನ ಶ್ರೀ ಅಗಸ್ಟಿನ್ ಜೋಸೆಫ್ ವಾ, ಅವರು ಹೆಡ್ಮಾಸ್ಟರಾಗಿ ಚಾರ್ಜು ವಹಿಸಿರುವರು.

**ಉಪಾಹಾರ ಸಮಾರಂಭ**- ಕಳದ ತಾ. ೩೦ರಲ್ಲು ಕುಂದಾಪುರ ಕೋಣೆಯಲ್ಲಿ ಶ್ರೀ ರವರಾಂದ ಮತ್ತು ಶ್ರೀಮತಿ ಸುಶೀಲೆ ಯರ ವಿವಾಹ ಜರಗಿದುದರ ಅಂಗವಾಗಿ ಇದೇ ತಾ. ೪ರಲ್ಲು ಸಂಜೆ ವರನ ತಂದೆ ಶ್ರೀ ಮಾನಂಜೆ ತೀಪಗರಿಬಾಯರು ಕಡಿಯಾಳಿಯಲ್ಲಿರುವ ತಮ್ಮ 'ಮೊಗ್ಗ ನಿವಾಸ' ದಲ್ಲಿ ಉಪಹಾರಕೂಟವನ್ನೇರ್ಪಡಿಸಿದರು. ಆಹ್ವಾನಿತರು ಅನುಮತ್ಸಲ್ಪಟ್ಟಿದ್ದರು.

**ಪ್ರಸೂತಾ ಪೆಪ್ಪೆದ ಸಭೆಯು**- ತಾ. ೨೨ರಂದು ಸಂಜೆ ಶ್ರೀ ಯು. ಎಸ್. ನಾಯಕ್, ಎಸ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀಗಳಾದ ಬಿ. ಎಸ್. ಲೂವಿಸ್ ಮತ್ತು ಎಸ್. ಆರ್. ಭಟ್ಟರು ಕಾರ್ಯದರ್ಶಿಗಳಾಗಿ ಆಯ್ಕೆಪಟ್ಟರು.

---

**ದ. ಕ. ಜಿಲ್ಲಾ ಬೋರ್ಡಿನ ಸಾಮಾನ್ಯ ಸಭೆಯು**- ತಾ. ೧೮ರಂದು ಡಾ. ಕೆ. ಕೆ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಡಾ. ಕೆ. ನಾಗಪ್ಪ ಆಳ್ವ, ಎಸ್. ಎಲ್. ಎ. ಮತ್ತು ಮೂಬೆಲ್ ಪ್ರಿಟೋರವರ ಸಮಸ್ಕೃತ ನವನ್ನು ಊರ್ಜಿತಗೊಳಿಸಲಾಯಿತು.

1957-58ನೆ ನವರ್ಷದಲ್ಲಿ ರಸ್ತೆ ದುರಸ್ತಿಗಾಗಿ ಅಂದಾಜು ರೂಪಾಯಿ 2,85,610. ಸಬ್ರಹ್ಮಣ್ಯ-ದರ್ಬೆ ರಸ್ತೆಗೆ ತಾರು ಹಾಕಲು ಅಂದಾಜು ರೂ. 1,51,000; ಮುದ್ರಾಡಿ ಅಲ್ಪಾಡಿ ರಸ್ತೆಗೆ ತಾರು ಹಾಕಲು ಅಂದಾಜು ರೂ. 14,000; ವೃಷಭಾವತಿಪ್ರೆ-ಹೊಸ್ಕಾರ್ ರಸ್ತೆಯಲ್ಲಿ ಹೊಸಾಲ್ ಸೇತುವೆ ರಚನೆಗಾಗಿ ಪರಿಷ್ಕೃತ ಅಂದಾಜು ರೂ. 19,000; ಪುತ್ತೂರು ಪಂಜ ರಸ್ತೆಯಲ್ಲಿ ಒಂಬು ಸೇತುವೆ ರಚನೆಗಾಗಿ ರೂ. 23,000; ಸುತ್ತು ಪರ್ಬೆ-ಸುಬ್ರಹ್ಮಣ್ಯ ರಸ್ತೆ ದುರಸ್ತಿಗಾಗಿ ರೂಪಾಯಿ 13,200 ಮಂಜೂರುಮಾಡಲಾಯಿತು. ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಆಶ್ರಯದಲ್ಲಿ ಗುರುಪುರದಲ್ಲಿ ನಡೆಯುತ್ತಿರುವ ಗ್ರಾಮಾಂತರ ವೈದ್ಯಕೀಯ ಸಹಾಯ ಕೇಂದ್ರಕ್ಕೆ ರೂ. 500/- ಸಹಾಯ ಧನ ಕೊಡಬಹುದೆಂದಾಯಿತು. ಬೆಲ್ಲಾ ಬೋರ್ಡಿನ ನೌಕರರಿಗೆ ಹೊಸ ವೇತನ ಪ್ರಮಾಣವನ್ನು ಕೊಡಲು ನಿರ್ಧಾರವಾಗಿ ಸರಕಾರಿ ಆಜ್ಞೆಯಲ್ಲಿ ನಮೂದಿಸಿಲ್ಲದೆ ಕೆಲವೊಂದು ನೌಕರರಿಗೆ ವೇತನ ನುಟ್ಟಿದ ಬಗ್ಗೆ ಸರಕಾರಕ್ಕೆ ಸೂಚನೆಗಳನ್ನೀಯಲು ಅಧ್ಯಕ್ಷರಿಗೆ ಅಧಿಕಾರವೀಯಲಾಯಿತು.

ಡಾ. ಕೆ. ಕೆ. ಹೆಗ್ಡೆ ಎಮ್. ಎಲ್ ಎ. ಯವರು ಅಧ್ಯಕ್ಷಸ್ಥಾನಕ್ಕೆ ರಾಜೀನಾಮೆಯಿತ್ತು ದರಿಂದ ತೆರವಾದ ಸ್ಥಳಕ್ಕೆ ಹೊಸ ಅಧ್ಯಕ್ಷರನ್ನು ಚುನಾಯಿಸುವರೆ ಜಿಲ್ಲಾ ಬೋರ್ಡಿನ ವಿಶೇಷ ಸಭೆಯು ಇದೇ ತಾ. 17ರಲ್ಲು ಸಂಜೆ 3 ಗಂಟೆಗೆ ಸೇರುವುದು.

**ಆರೋಗ್ಯ ಮಂತ್ರಿ**— ಶ್ರೀ ಅಂ. ಎಂ ಪಾಟೀಲರು ತಾ. 4ನೇ ಸಂಜೆ ಮಂಗಳೂರಿಗೆ ಆಗಮಿಸಿ ಕಸ್ತೂರ್ಬಾ ಮೆಡಿಕಲ್ ಕಾಲೇಜಿಗೆ ಸಂದರ್ಶನವಿತ್ತು ಈ ಕಾಲೇಜಿನ ವಿದ್ಯಾರ್ಥಿ ತರಬೇತಿಯ ಅನುಕೂಲ್ಯಕ್ಕಾಗಿ ಮಂಗಳೂರು ಆಸ್ಪತ್ರೆಯನ್ನು ಜೇಗನೆ ವಿಸ್ತರಿಸಲಾಗುವುದೆಂದೂ ಉಡುಪಿಯಲ್ಲಿರುವ ಈ ಕಾಲೇಜಿನ ಪ್ರಕ್ಟಿಕಲ್ ವಿಭಾಗಕ್ಕೆ ಯೋಗ್ಯವಾಸವಂತೆ ಅಲ್ಲಿ 80 ಮಂಚಗಳಿರುವ ಆಸ್ಪತ್ರೆಯೊಂದನ್ನು ತೆರೆಯುವ ಆಲೆಯಿದೆಯೆಂದೂ ಹೇಳಿದರಲ್ಲದೆ ಈ ಕಾಲೇಜಿನ ಸ್ಥಾಪಕ ಡಾ. ಮಾಧವ ಪೈಗಳ ಸಫಲ ಯತ್ನಗಳನ್ನು ಶ್ಲಾಘಿಸಿ ಈ ಕಾಲೇಜಿಗೆ ದಕ್ಷಿಣ ಭಾರತದಲ್ಲಿ ಉಜ್ವಲ ಭವಿಷ್ಯವಿದೆಯೆಂದರು.

ತಾ. 5ನೇ ಸೋಮವಾರ್ಖ ಸಚಿವರು ಮಣಿಪಾಲಕ್ಕೆ ಆಗಮಿಸಿ ಕಸ್ತೂರ್ಬಾ ಮೆಡಿಕಲ್ ಕಾಲೇಜಿಗೆ ಸಂದರ್ಶನವಿತ್ತು ಉಡುಪಿ ಸರಕಾರಿ ಆಸ್ಪತ್ರೆಯನ್ನು ಪರಿಶೀಲಿಸಿ ಆಸರಾಸ್ಮನುಂಗಳೂರಿಗೆ ತೆರಳಿ ಸಂಜೆ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಭಾಷಣವಿತ್ತರು.

(ವಿವರ ಮುಂದಿನ ವಾರ ಕೊಡಲಾಗುವುದು)

# ಮಂಗಳೂರು

**ದ. ಕ. ಜಿಲ್ಲಾ ಬೋರ್ಡಿನ ವಿಶೇಷ ಸಭೆಯು** – ತಾ. 1ರಲ್ಲು ಸೇರಿ, ಬೋರ್ಡಿನ ಅಧ್ಯಕ್ಷಸ್ಥಾನಕ್ಕೆ ಡಾ. ಕೆ. ಕೆ. ಹೆಗ್ಡೆಯವರಿತ್ತ ರಾಜೀನಾಮೆಯನ್ನು ಸ್ವೀಕರಿಸಲಾಯಿತು. ಶ್ರೀ ನುಂಜಯ್ಯ ಹೆಗ್ಡೆಯವರು ಮಾತನಾಡುತ್ತಾ, ಡಾ. ಹೆಗ್ಡೆಯವರು ತನ್ನ ಅಧ್ಯಕ್ಷ ಸ್ಥಾನದ ಎರಡೂವರೆ ವರ್ಷಗಳ ಕಾಲ ಅವಧಿಯಲ್ಲಿ ಜಿಲ್ಲೆಯ ಏಳಿಗೆಗಾಗಿ ಮಾಡಿದ ಕಾರ್ಯಗಳನ್ನು ಪ್ರಶಂಸಿಸಿ, ಆ ಬಗ್ಗೆ ಅವರನ್ನು ಅಭಿನಂದಿಸಲು ಒಂದು ನಿರ್ಣಯವನ್ನು ಮಂಡಿಸಿದರು. ಶ್ರೀ ಕೆ. ಕೆ. ಸೆಟ್ಟರು ನಿರ್ಣಯವನ್ನು ಅನುಮೋದಿಸಿದರು. ಶ್ರೀಗಳಾದ ಎ. ಕೃಷ್ಣ ಸೆಟ್ಟಿ, ಎಸ್. ಡಿ. ಸಾಪಲ್ಯ, ಎನ್. ಎಸ್. ಪರಮೇಶ್ವರಯ್ಯ, ಬಿ. ಎಸ್. ಭಾಸ್ಕರ ರೈ ಮತ್ತು ಜಿಲ್ಲಾ ಬೋರ್ಡಿನ ಕಾರ್ಯದರ್ಶಿ ಶ್ರೀ ಕೆ. ಸಂಜೀವ ಸೆಟ್ಟರು ಡಾ. ಹೆಗ್ಡೆಯವರ ದಕ್ಷಸೇವೆಯನ್ನು ಪ್ರಶಂಸಿಸಿದರು. ಡಾ. ಹೆಗ್ಡೆಯವರು ಸೂಕ್ತ ಉತ್ತರಗಳನ್ನಿತ್ತು ಸರ್ವರಿಗೂ ಧನ್ಯವಾದಗಳನ್ನಿತ್ತರು.

ವಿಶೇಷ ಸಭೆಯ ಮೊದಲು ಸೇರಿದ ಬೋರ್ಡಿನ ಸಾಮಾನ್ಯ ಸಭೆಯಲ್ಲಿ ಸಾರ್ವಜನಿಕ ಆರೋಗ್ಯ ವಿಭಾಗದ ಸ್ಥಾಯಿ ಸಮಿತಿಗೆ ಶ್ರೀ ವೈ. ತೇಜಪ್ಪ ಸೆಟ್ಟರನ್ನು ಬೋರ್ಡಿನ ಪ್ರತಿನಿಧಿಯಾಗಿಯೂ ಶ್ರೀ ಹಾಲಾಡಿ ಮಹಾಬಲ ಸೆಟ್ಟರನ್ನು ಸದಸ್ಯೇತರ ಪ್ರತಿನಿಧಿಯಾಗಿಯೂ ಸರ್ವಾನುಮತದಿಂದ ಆರಿಸಲಾಯಿತು.

**ನಗರ ಸಭೆಯು**– ತಾ. 31ರಲ್ಲು ಸಂಜೆ ನಗರ ಸಭಾಸತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ನಗರದಲ್ಲಿ ಇನ್ನೂ ಹೆಚ್ಚಿನ ನ್ಯಾಯಬೆಲೆಯ ಅಂಗಡಿಗಳನ್ನು ತೆರೆಯುವಂತೆ ಜಿಲ್ಲಾ ಕಲೆಕ್ಟರರನ್ನು ವಿನಂತಿಸಲು ಹಾಗೂ ಆಗತ್ಯವಿದ್ದಲ್ಲಿ ನಗರ ಸಭೆಯೇ ಕೆಲವು ಅಂಗಡಿಗಳನ್ನು ತೆರೆಯಲು ನಿರ್ಧರಿಸಲಾಯಿತು. ಮುನ್ಸಿಪಲ್ ಶಾಲೆಗಳಲ್ಲಿ ಕಲಿಯುವ ಬಡ ವಿದ್ಯಾರ್ಥಿಗಳಿಗೆ 1956-58ನೆ ವರ್ಷದಲ್ಲಿ ಪಠ್ಯ ಪುಸ್ತಕ ಹಾಗೂ ಸ್ಲೇಟು ಮೊದಲಾದುವುಗಳನ್ನು ಒದಗಿಸಲು ರೂ 1000/. ಮಂಜೂರು ಮಾಡಲಾಯಿತು.

**ಭೂಸುಧಾರಣಾ ಸಮಿತಿಯ ಆಗಮನೆ**– ಮೈಸೂರು ರಾಜ್ಯವಲ್ಲಿ ಏಕರೀತಿಯ ಒಕ್ಕಲುತನ ಪದ್ಧತಿಯನ್ನು ತರುವ ಬಗ್ಗೆ ರಾಜ್ಯದ ವಿವಿಧ ಪ್ರದೇಶಗಳಲ್ಲಿ ಪ್ರಚಲಿತ ವಾಲ್ತಿ ಇರುವ ಒಕ್ಕಲುತನ ಪದ್ಧತಿಗಳ ಬಗ್ಗೆ ಕೈಗೊಳ್ಳಬೇಕಾದ ಕ್ರಮಗಳನ್ನು ಪರೀಕ್ಷಿಸುವರೆ ಮೈಸೂರು ಸರಕಾರದಿಂದ ನೇಮಿಸಲ್ಪಟ್ಟ ಮೈಸೂರು ಭೂಸುಧಾರಣಾ ಸಮಿತಿಯು ತಾ. 31ರಲ್ಲು ಸುಳ್ಯಾ ರಲ್ಲಿ ಮೊಕ್ಕಾಂ ಹೂಡಿತ್ತು. ಈ ಸಮಿತಿಯ ಸದಸ್ಯರಾದ ಕೆ. ಲಿಂಗಪ್ಪ ಸೆಟ್ಟಿ, ಬಿ. ವಿಠಲದಾಸ ಸೆಟ್ಟಿ, ಕೆ. ಸಂಜೀವ ರೈ, ಮೊದಲಾದವರಿಗೆ ಸಲಹೆಗಳನ್ನು ಪಡೆಯಿತು. ತಾ. 1ರಲ್ಲು ಮಂಗಳೂರಿಗೆ ಆಗಮಿಸಿ ಭೂಸಾಲಿಕರ ಹಾಗೂ ಇತರರ ಸಾಕ್ಷ್ಯಗಳನ್ನು ಪಡೆಯಿತು. ಶ್ರೀಗಳಾದ ಎಸ್. ಎಂ. ಅಡ್ಯಂತಾಯ, ಎಚ್. ದಾಸಣ್ಣ ಆಳ್ವ, ಪಿ. ವಾಸುದೇವ ರಾವ್, ಪಿ. ಆರ್. ರಂಗಸಾಫ ಪೂಂಜ, ಎಂ. ಎನ್. ಚೌಟ, ಎಸ್. ನಾಗರಾಜಯ್ಯ, ಬಿ. ತಿಮ್ಮಪ್ಪ ಹೆಗ್ಡೆ, ಪಿ. ಎಲ್. ಲೋಬೋ, ಎಸ್. ಗೋಪಾಲ ಶಾಲೆಣ್ಣ, ಎ. ಶಂಕರ ಆಳ್ವ, ಬಿ. ಬಿ. ಸೆಟ್ಟಿ, ಎಸ್. ವಿಠಲ ಸೆಟ್ಟಿ, ಎ. ಕೃಷ್ಣ ಸೆಟ್ಟಿ, ಎಮ್ ಎಚ್ ಕೃಷ್ಣಪ್ಪ ಬಿ. ವಿ. ಕಕ್ಕಿಲ್ಲಾಯ ಮೊದಲಾದವರು ತಂತಮ್ಮ ಅಭಿಪ್ರಾಯಗಳನ್ನಿತ್ತರು.

ಸಮಿತಿಯ ಅಧ್ಯಕ್ಷರಾಗಿ ಶ್ರೀ ಬಿ. ಡಿ. ಜತ್ತಿ, ಎಮ್. ಎಲ್. ಎ. ಮತ್ತು ಶ್ರೀ ಕೆ. ಬಾಲಸುಬ್ರಹ್ಮಣ್ಯಂರವರು ಕಾರ್ಯದರ್ಶಿಗಳಾಗಿರುವರು.

**ದ. ಕ. ಜಿಲ್ಲಾ ಕಾಂಗ್ರೆಸ್ ಮಹಾಸಭೆಯು**– ತಾ. 26ರಂದು ಪೂರ್ವಾಹ್ನ ಶ್ರೀ ಎಸ್. ಎಳ್ಳಪ್ಪ ಡಿ. ಒಂಟೋ, ಎಮ್. ಎಲ್. ಎ, ಆವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ.ಕೆ. ಸೆಟ್ಟಿ, ಎಮ್.ಎಲ್. ಸಿ.ಅವರು ಶ್ರೀಗಳಾದ ಟಿ. ಪ್ರಕಾಶಂ ಮತ್ತು ಸದಿಯ ಸಾಮ್ರಾಜ್ಯ ಕಾರರಿಗೆ ನಿಧನದ ಬಗ್ಗೆ ಸಂತಾಪಸೂಚಕ ನಿರ್ಣಯವನ್ನು ಮಂಡಿಸಿದರು. ಆದು ಮಂಜೂರಾಯಿತು. ಬಳಿಕ ಮಹಾ ಚುನಾವಣೆಯ ಮತ್ತು ಆ ನಂತರದ ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯಕಲಾಪಗಳ ವರದಿ ನಿಮರ್ಶಿಸಲ್ಪಟ್ಟತು. ಈ ಸಂದರ್ಭದಲ್ಲಿ ಡಾ. ಯು. ಪಿ. ಮಲ್ಯರು ಸಭಾಧ್ಯಕ್ಷತೆ ವಹಿಸಿದ್ದರು. ಎರಡು ಎಸೆಂಬ್ಲಿ ಮತದಾರ ಕ್ಷೇತ್ರಕ್ಕೆ ಒಬ್ಬೊಬ್ಬ ಕಾಂಗ್ರೆಸ್ ಪ್ರಚಾರಕರನ್ನು ನೇಮಿಸುವ ಕುರಿತು ಕಾರ್ಯಕಾರೀ ಸಮಿತಿಯು ಮಾಡಿದ ನಿರ್ಣಯವನ್ನು ಮಂಜೂರುಮಾಡಲಾಯಿತು. ಕಾಂಗ್ರೆಸ್ ಶಾಸನಸಭಾಸದಸ್ಯರು ಕನಿಷ್ಟಪಕ್ಷ ಆರು ತಿಂಗಳಿಗೊಮ್ಮೆಯಾದರೂ ತಾವು ಮಾಡಿದ ಕಾರ್ಯಕಲಾಪಗಳ ವರದಿಯನ್ನು ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಒಪ್ಪಿಸಬೇಕೆಂದು ನಿರ್ಣಯವಾಯಿತು. ನ್ಯಾಯವಾದಿ ಭೂಸುಧಾರಣೆಯನ್ನು ಕೂಡಲೇ ಜಾರಿಗೆ ತಂದು ಕೃಷಿಕರಿಗೆ ಅವಶ್ಯವಿರುವ ಜಕ್ಕು ಬಾಧ್ಯತೆಗಳನ್ನೂ ಸವಲತ್ತುಗಳನ್ನೂ ಒದಗಿಸುವ ಆವಶ್ಯಕತೆ ಕುರಿತು ಹಲವರು ಮಾತನಾಡಿದರು.

## ಅಂಬರನಾಥದಲ್ಲಿ ಕನ್ನಡಿಗರ ಸಂಘ ಸ್ಥಾಪನೆ—

ಒಂಭತ್ತು ಸಾವಿರಕ್ಕೂ ಮಿಕ್ಕ ಕನ್ನಡಿಗರಿರುವ ಅಂಬರನಾಥದಲ್ಲಿ ಕಳೆದ ತಾ. 26ರಲ್ಲು ಶ್ರೀ ಕೃಷ್ಣಮೂರ್ತಿಯವರ ಅಧ್ಯಕ್ಷತೆಯಲ್ಲಿ ಕನ್ನಡಿಗರ ಮಹಾಸಭೆ ಜರಗಿತು. ಶ್ರೀ ಪುತ್ರನ್ನಾರ್ಯರು ಸ್ವಾಗತ ಭಾಷಣಗೈದು, ಕನ್ನಡಿಗರ ಸಂಘಸ್ಥಾಪನಾ ಯೋಜನೆಯ ರೂಪರೇಷೆಗಳನ್ನು ವಿವರಿಸಿದರು. 'ಅಂಬರನಾಥ ಕನ್ನಡ ಸಂಘ' ಎಂಬ ನಾಮಧೇಯದಿಂದ ಸಂಘವೊಂದನ್ನು ಸ್ಥಾಪಿಸಲು ನಿರ್ಣಯವಾಗಿ ಆ ಬಗ್ಗೆ ನಿಬಂಧನೆಗಳನ್ನು ತಯಾರಿಸಲು ಶ್ರೀ ಟಿ. ಎಲ್. ಸುತ್ರನ್ನಾರ್ಯರು ಅಧ್ಯಕ್ಷರಾಗಿರುವ ಎಡ್‌ಹೋಕ್ ಕಮಿಟಿ ರಚಿಸಲ್ಪಟ್ಟಿತು.

**ಶಿರ್ವ**– ಕೀರ್ತಿಶೇಷ ಕುತ್ಯಾರುಗುತ್ತು ಪಟೇಲ್ ಎಲ್ಲಪ್ಪ ಸೆಟ್ಟರ ಪುತ್ರ ಶ್ರೀ ಕೆ. ವಾಸುದೇವ ಸೆಟ್ಟಿ, ಬಿ. ಎ. ಬಿ. ಟಿ. ಅವರು ತಾ. 2ರಲ್ಲು ಕೆರೆಮ ನಡಿಗುತ್ತು ಶ್ರೀ ಸಂಜೀವ ಸೆಟ್ಟರ ಪುತ್ರಿ ಚಿ|ಸೌ|ಶಾಂತಳೊಡನೆ ವಿವಾಹವಾದರು. ಊರ ಪರವೂರವರೆ ನೇಕರು ಹಾಜರಿದ್ದು ನೂತನ ವಧೂವರರನ್ನು ಆಶೀರ್ವದಿಸಿದರು.

**ಪೆರ್ಡೂರು**– ಸ್ಥಳೀಯ ಕಲಾಮಂಡಳಿಯ ಬಳಿನೇ ವರ್ಧಂತಿ ಸಮಾರಂಭವು ಕಳೆದ ತಾ. 26ರಲ್ಲು ಬಿ. ಇ. ಎಮ್. ಹಾ. ಎ. ಶಾಲೆಯಲ್ಲಿ ಶ್ರೀ ಕೆ.ಭೋಜರಾಜ ಸೆಟ್ಟಿರಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿಯವರು ವರದಿಯನ್ನೊಪ್ಪಿಸಿದ ಬಳಿಕ ಶ್ರೀ ಶ್ರೀನಿವಾಸ ಉಪಾಧ್ಯಾಯರ ಕಾಲೋಚಿತಪಾತಂಗಳಾದವು. ಶ್ರೀ ಎ. ಪಿ. ಕಲ್ಯಾಣಿಯವರು ವಂದನೆಗಳನ್ನಿತ್ತರು.

**ದೇಲಂಪಾಡಿ**– ಬನಾರಿ ಗೋಪಾಲಕೃಷ್ಣ ಯಕ್ಷಗಾನ ಸಂಘದ ಹದಿನೂರನೇ ವಾರ್ಷಿಕೋತ್ಸವವು ಕಳೆದ ತಾ. 25ರಲ್ಲು ಮಂಗಳೂರು ಎಡ್ವೋಕೇಟ್ ಶ್ರೀ ಎಮ್. ರಂಗ ರನಾರಾಯಣ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ರನಾನಂದ ಬನಾಯರವರು ಸ್ವಾಗತಿಸಿದ ಬಳಿಕ, ಕಾರ್ಯದರ್ಶಿಗಳು ವರದಿಯನ್ನೋದಿದರು. 'ಭಕ್ತ ಮಯೂರಧ್ವಜ' ಕಥಾಭಾಗದ ಯಕ್ಷಗಾನ ಕಾಲಕ್ಷೇಪ, 'ಶ್ರೀ ಕೃಷ್ಣ ನಿಜಯ' ಯಕ್ಷಗಾನ ನಾಟಕ ಇತ್ಯಾದಿ ಕಾರ್ಯಕ್ರಮಗಳಾದುವು. ಶ್ರೀ ಕೀ ವ. ಕೇಶವನವರು ಧನ್ಯವಾದಗಳನ್ನಿತ್ತರು. ಶ್ರೀ ಕೀ. ಮಾಸ್ತರ್ ವಿಷ್ಣು ಭಟ್ಟರು ಸತ್ಕಾರಕೂಟವನ್ನೇರ್ಪಡಿಸಿದ್ದರು.

**ಕಾವೂರು**– ಕಾವೂರು ಗ್ರಾಮದ ಮುಳ್ಳಕಾಡಿನಲ್ಲಿ ಕಳೆದ ತಾ. 26ರಂದು ದ. ಕ. ಜಿಲ್ಲಾ ಕೃಷಿಕರ ಸಂಘದ ಅಧ್ಯಕ್ಷ ಶ್ರೀ ಕೆ. ಕೆ. ಸೆಟ್ಟಿ, ಎಮ್ ಎಲ್. ಸಿ. ಯವರ ಅಧ್ಯಕ್ಷತೆಯಲ್ಲಿ ಕೃಷಿಕರ ಸಭೆಯೊಂದು ಜರಗಿ, ದೇರೆಬೈಲು ಕಾವೂರು ಗ್ರಾಮದಲ್ಲಿ ಕೃಷಿಕರ ಸಂಘ ಸ್ಥಾಪನೆಯಾಯಿತು. ಶ್ರೀ ಎನ್. ರಮನಾಥರು ಕೃಷಿಕರ ಸಂಘಟನೆಯ ಕುರಿತು ಭಾಷಣಗೈದರು. ಶ್ರೀಗಳಾದ ಎಮ್. ಕೃಷ್ಣ ಮೇಲಂಟಿ (ಅಧ್ಯಕ್ಷ), ದೇರೆಬೈಲು ವೀರಪ್ಪ ಸೆಟ್ಟಿ (ಉಪಾಧ್ಯಕ್ಷ), ಪಿ. ಕೆ ಐತಾಮನ (ಪ್ರಧಾನ ಕಾರ್ಯದರ್ಶಿ), ಬಾಬು ಸೆಟ್ಟಿ ಮತ್ತು ಕೆ. ನಾರಾಯಣ ದೇವಾಡಿ (ಜತೆಕಾರ್ಯದರ್ಶಿ), ಡಿ. ಇ. ಡಿ. ಸಿ (ಖಜಾಸ್ಥ) ಕೂಡಾ 17 ಮಂದಿಯುಳ್ಳ ಕಾರ್ಯಕಾರೀ ಸಮಿತಿ ರಚಿಸಲ್ಪಟ್ಟಿತು.

**ಬ್ರಹ್ಮಾವರ**— ಸ್ಥಳೀಯ ಸಹಕಾರಿ ಸಂಘದ ಹೊಸ ಕಟ್ಟಡವನ್ನು ಸಹಕಾರಿ ಬ್ಯಾಂಕ್ ಸ್ಪಾರ್ಟ್ ರಿಜಿಸ್ಟ್ರಾರ್ ಶ್ರೀ ಕೃಷ್ಣಯ್ಯನವರು ಉದ್ಘಾಟಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಬಿ. ಜಗಜ್ಜೀವನದಾಸ ಸೆಟ್ಟಿ ಎಮ್. ಎಲ್. ಎ ಅವರು ವಹಿಸಿದ್ದರು. ಸಂಘದ ಅಧ್ಯಕ್ಷ ಶ್ರೀ ಬಿ. ಮಾಧವರಾಯರು ಸ್ವಾಗತಿಸಿದರು. ಶ್ರೀ ತೀರ್ಥಪ್ಪ ಸೆಟ್ಟಿ ವರದಿಯನ್ನೊಪ್ಪಿಸಿದರು. ಶ್ರೀ ಎ. ಜೆ. ಅಯ್ಯನರು ರಾಷ್ಟ್ರ ನಾಯಕರ ಭಾವಚಿತ್ರಗಳನ್ನು ಅನಾವರಣಗೊಳಿಸಿದರು. ಶ್ರೀ ಶಿವಂ ಸೆಟ್ಟರು ಕಾಲೋಚಿತಪಾತಂಗಳನ್ನಾಡಿದರು. ಶ್ರೀ ಕೃಷ್ಣ ಕಿಣಿಯವರು ಧನ್ಯವಾದಗಳನ್ನಿತ್ತರು.

**ಕೆರೂರು**— ಸ್ಥಳೀಯ ಬೋರ್ಡ್ ಹೈಸ್ಕೂಲಿನ ಮಿಂಟಿರಿಶಾಲಾ ಹೊಸ ಕಟ್ಟಡ ಪ್ರವೇಶೋತ್ಸವವು ಈಚೆಗೆ ಶ್ರೀ ವೈ. ಮಂಜಯ್ಯಶೆಟ್ಟಿ ಎಮ್. ಎಲ್. ಎ. ಅವರಿಂದ ನೆರವೇರಿಸಲ್ಪಟ್ಟಿತು. ಈ ಸಂದರ್ಭದಲ್ಲಿಯೇ ಶಾಲಾ ವಜ್ರ ಮಹೋತ್ಸವ ಸಮಾರಂಭವು ಶ್ರೀ ಕೆ. ಎನ್. ಉರಾಳ ಅಧ್ಯಕ್ಷತೆಯಲ್ಲಿ ಜರಗಿತು. ಆಮಂತ್ರಣ ಪತ್ರಿಕೆಯನ್ನು ಶ್ರೀ ಕಾಪು ಸಂಜೀವ ಸೆಟ್ಟಿರು ಧ್ವಜಾರೋಹಣಗೈದರು.

**ಕೊಡಿಬಾಡಿ**— ಇಲ್ಲಿಯ ಬೋರ್ಡ್ ಪ್ರಾಥಮಿಕ ಶಾಲೆಯ ಹೊಸ ಕಟ್ಟಡವನ್ನು ತಾ. 20ರಲ್ಲು ಜಿಲ್ಲಾ ಬೋರ್ಡು ಸದಸ್ಯ ಎ. ಭಾಮ ಭಟ್ಟರು ಉದ್ಘಾಟಿಸಿದರು. ಸಮ ಪತೇಲ್ ಶ್ರೀ ಬಿ. ಸಂಕಪ್ಪ ರೈ ಶಾಲೆಗೆ ದಾನವಿತ್ತ ಚಿತ್ರಗಳ ಅನಾವರಣ ನಡೆಯಿತು. ಶ್ರೀಗಳಾದ ಕಿಟ್ಟಣ್ಣ ರೈ, ಕೃಷ್ಣ ಸೆಟ್ಟಿ, ನೇಮಿರಾಜ್ ಮೊಲಾದವರು ಕಾಲೋಚಿತಪಾತಂಗಳನ್ನಾಡಿದರು.

**ಕಾರ್ಕಳ**—ಮೈಸೂರು ಸರಕಾರವ ಸುಧಾರಣಾ ಸಮಿತಿಯವರು ತಾ. 2 ಹೂವಾಸ್ಥ ಕಾರ್ಕಳ ಪ್ರವಾಸಿಕರ ಬ ಯಲ್ಲಿ ಮೊಕ್ಕಾಂನೂಡಿ ಶ್ರೀಗಳಾದ ಕೆ. ಮುಕುಂದ ಪ್ರಭು, ವಿ. ವಿ. ಶೆಣೈ, ಕೆ. ಸುದೇವ ಕಾಮತ್, ವಿ. ವೆಂಕಟೇಶ ಭಟ್, ಡಾ. ಸದಾಶಿವಯ್ಯ, ಡಾ ಪಿ. ಬಿ ಭಟ್ ಮೊದಲಾದವರನ್ನು ಕಂಡು ತಾವು ಬಂದ ಕಾರ್ಯದ ಕುರಿತು ವಿಚಾರವಿನಿಮಯ ನಡೆಸಿರು. ಕಾರ್ಕಳ ತಾಲೂಕು ಭೂಮಾಲಕರ ಸಂಘದಿಂದ ಶ್ರೀ ಪಿ. ರಾಮುಜೆಂದ್ರರಾಯರು ಮನವಿಯನ್ನರ್ಪಿಸಿದರು.


ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಧಾರವಾಡ)

**ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.**

ನಿಮ್ಮ ಶೇವಣಾತಿಗಳ ಮೇಲೆ ಹೆಚ್ಚು ಬಡ್ಡಿ ಬೇಕೇ?

ಹಾಗಿದ್ದಲ್ಲಿ, ನಿಮಗೆ ಸಮೀಪವಿರುವ "ಕೊರ್ಪೊರೇಶನ್" ಬ್ಯಾಂಕಿನಲ್ಲಿ ವಿಚಾರಿಸಿ. "ಕೊರ್ಪೊರೇಶನ್" ಬ್ಯಾಂಕು ಎಲ್ಲಾ ತರದ ಶೇವಣಾತಿಗಳ ಮೇಲೆ ಬಡ್ಡಿ ದರಗಳನ್ನು ಇತ್ತೀಚೆಗೆ ಏರಿಸಿಯದೆ. ಅಲ್ಲದೆ ಶೇವಣಾತಿದಾರರಿಗೆ ಹೆಚ್ಚಿನ ಸವಲತ್ತುಗಳನ್ನು ನೀಡಲು, ನಿಯಮಗಳನ್ನೂ ಬದಲಾಯಿಸಿಯದೆ.

**51 ವರುಷಗಳ ಪರಿಪಕ್ವ ಬ್ಯಾಂಕಿಂಗ್ ಅನುಭವ!**

**7,00,00,000 ರೂಪಾಯಿಗಳಿಗೂ ಮಿರಿದ ಒಟ್ಟು ವಹಿವಾಟು!**

**THE CANARA BANKING CORPORATION LIMITED**



Approved by the Text Book Committee of Madras, for non-detailed study in higher Forms (vide Page 7, Fort St. George Gazette, Part I—B dated 4—5...1955).

ಬಂಗಾರಪೇಂತಹ ಪುಸ್ತಕವೆಂದು ಸಮಗ್ರ ಕರ್ನಾಟಕದ ಪತ್ರಿಕಾ ಪ್ರಸಂಶೆಯಿಂದ ಪ್ರಶಂಸಿಸಲ್ಪಟ್ಟ ಹೊಸ ಬಗೆಯ ಗ್ರಂಥ.

**ಬಿದುಕು ಬಂಗಾರ**

(ಬರೆದವರು: ಕುಮಾರಸ್ವಾಮಿ)

ಹೈಸ್ಕೂಲುಗಳ IV ಯಾ Vನೇ ಫಾರ್ಮುಗಳಿಗೆ ಉಪಪಠ್ಯ ಪುಸ್ತಕವಾಗಿ ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾತಿ ಪಡೆದಿದೆ.

**ಹಲವು ಜಾಸಗಿ ಮತ್ತು ಜಿಲ್ಲಾ ಬೋರ್ಡಿನ ಎಲ್ಲಾ ಹೈಸ್ಕೂಲುಗಳಲ್ಲಿಯೂ ಉಪಪಠ್ಯ ಪುಸ್ತಕವಾಗಿ ಅರಿಸಲ್ಪಟ್ಟಿದೆ.**

ಪುಟಗಳು ೧೫೫ ಬೆಲೆ: ರೂ. ೧ : ೫೦

ಪ್ರತಿಗಳಿಗೆ ಬರೆಯಿರಿ:

**ನವಯುಗ ಪ್ರೆಸ್, ಉಡುಪಿ.**


**ವರದಿ ಸ್ವೀಕಾರ**

**ಬಂಟರ ಯಾನೆ ನಾಡವರ ಸಂ**

ಬೊಂಬಾಯಿ – ಈ ಸಂಸ್ಥೆಯು 195 ಅಂಕ್ಯವಾದ ಇಸ್ವತ್ತೊಂಭತ್ತನೆಯ ವಾರ್ಷಿಕ ವರದಿ ಹಸ್ತಗತವಾಗಿದೆ. ವಿದ್ಯಾ ಸಂಬಂಧವಾದ ಚೂಡಿಕ್ಕೋಗಿಕ ಶಿಕ್ಷಣದಲ್ಲಿ ರುಚಿಯಿದ್ದು ಬಡತನದ ದೆಸೆಯಿಂದ ಅಂತಹ ಶಿಕ್ಷಣ ಹೊಂದಲು ಅಶಕ್ತರಾದ ಮುಂಬಯಿಯಲ್ಲಿರುವ ಬಂಟರ ಯಾನೆ ನಾಡವರ ಜಾತಿಯ ವಿದ್ಯಾರ್ಥಿಗಳಿಗೆ ಧನ ಸಹಾಯ ನೀಡುವ, ವಾಚನಾಲಯ, ಗ್ರಂಥಾಲಯ, ಧನಸಹಾಯ ಶಿಕ್ಷಣಪಿಯುವ ರಾತ್ರಿ ಶಾಲೆಗಳನ್ನು ತೆರೆದು ಜ್ಞಾನಾಭಿವೃದ್ಧಿಯನ್ನುಂಟುಮಾಡುವ ಬಡ ಕೋಗಿಗಳಿಗೂ, ಅಶಕ್ತ ಆಸಾಧಕರಿಗೂ ಸಹಾಯ ನೀಡುವ, ಮೇಲಾಗಿ ಒಕ್ಕಲಿಗ ಮತ್ತು ಐರಸ್ಪರ ಪ್ರೀತಿಯನ್ನು ಜಾತಿ ಬಾಂಧವರಲ್ಲಿ ಹುಟ್ಟಿಸಿ, ತನ್ಮೂಲಕ ಸಂಘಟನೆಯನ್ನು ಬಲಿಸುವ ಇತ್ಯಾದಿ ಸ್ತೋಯಗಳ ಕಾರ್ಯಗತಗೊಳಿಸುತ್ತಿರುವ ಸಂಘದ ಸದಸ್ಯರಿಗೆ ಅಭಿನಂದನೆಗಳನ್ನರ್ಪಿಸುತ್ತೇವೆ. ಸಂಘವು ಇನ್ನೂ ಹೆಚ್ಚಿನತರ ಕಾರ್ಯಗಳನ್ನು ಕೈಗೊಂಡು ಜನತೆಗೆ ಜನ್ಮಾರ್ಧಿನ ಸೇವೆಮಾಡುವಂತಾಗಲೆಂದು ಹಾರೈಸುವೆವು.


**ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿ**

## ಕಾಂಗ್ರೆಸ್ಸಿನ ಸಂಘಟನೆ

(೧ನೇ ಪುಟದಿಂದ)

ಗಿ ಕೇಳಬೇಕು. ಅದರೊಂದಿಗೆ ಸರ
ರ, ಕಾಂಗ್ರೆಸ್–ಇವುಗಳ ಸಾಧನೆ,
ರಯನ್ನು ಸಾಮಾನ್ಯ ಭಾಷೆಯಲ್ಲಿ
ಹೇಳಬೇಕು. ಇಂತಹ ಕೆಲಸಗಳನ್ನು
ಸ್ವಯಂಸೇವಕ ದಳ ನಿಸ್ವಾರ್ಥವಾಗಿ
ಡಿ, ಒಂದು 'ದಿನವಹಿ'ಯಲ್ಲಿ
Dairy) ಬರೆದಿಟ್ಟು ಸಂಬಂಧಪಟ್ಟ
ಂದ್ರಕ್ಕೆ ಕಳುಹಿಸಬೇಕು. ಈ ಸ್ವಯಂ
ವಕ ದಳವು ವಾರದ ರಜಾ ದಿನದಲ್ಲಿ
ಟ್ಟುಗೂಡಿ ಹಳ್ಳಿಯ ಸಂಚಾರಕ್ಕೆ ಹೊ
ುವಂತೆ ವ್ಯವಸ್ಥೆಮಾಡಿಸುವುದೊಳ್ಳಿತು. ಏ
ಂದರೆ ವಾರದ ಇತರ ದಿನಗಳಲ್ಲಿ ಪ್ರತಿ
ಾಬ್ಬನಿಗೂ ಇತರ ಕಾರಣಗಳಿಗಾಗಿ ಕೆಲಸ
ಇರುತ್ತವೆ. ಈ ಸೇವೆಯ ನೆವದಲ್ಲಿ ತನ್ನ
ವನ ನಿರ್ವಹಣೆಯ ಉದ್ಯೋಗಕ್ಕೆ
ಕ್ಕೆ ತಟ್ಟುವಂತಾಗಬಾರದು.

ಈ ಸ್ವಯಂಸೇವಕ ದಳದಲ್ಲಿ ಸೇವಕರ
ಸಂಖ್ಯೆಯು ಗರಿಷ್ಠಕ್ಕಿಂತ ಕಡಿಮೆಯಾಗದೆ
ಕ್ಕೆ ಮಿಕ್ಕದಂತಿರಬೇಕು. ಇಂತಹ
ಗಳು ಹಳ್ಳಿಗಳಲ್ಲಿ ಒಂದಕ್ಕಿಂತ ಹೆಚ್ಚಿ
ರೂ ಚಿಂತಿಲ್ಲ. ಅವುಗಳು ಕೆಲಸಗಳ
ವಿಭಾಗಿಸಿ ತನ್ನು ಕಾರ್ಯ ನಿರ್ವಹಿ
ಸಿಹುದು. ದಳವು ಸಂಪೂರ್ಣ ಶಿಸ್ತು
ದ್ಧವಾಗಿರಬೇಕು. ದಳದ ನಾಯಕನ
ಜ್ಞೆಯು ಸಂಕೂರ್ಣ ಪಾಲಿಸಲ್ಪಡಬೇ
. ಈ ದಳಗಳು ಹಳ್ಳಿ ಸಂ
ರ್ಕ ಬೆಳೆಸಲು ಅನುಕೂಲವಾ
ುವಂತೆ ಅವರಿಗೆ ಆಗಾಗ್ಗೆ ಕಾಂಗ್ರೆಸ್
ಗೂ ಕಾಂಗ್ರೆಸ್ ಸರಕಾರಗಳ ಕಾ
ರ್ಯಕಲಾಪಗಳನ್ನು ತಿಳಿಸಲು ಕಾಂಗ್ರೆಸ್
ಯಿತಿಗಳು ಸಹಾಯಕವಾಗಬೇಕು. ಈ
ಯಂಸೇವಕ ದಳಗಳು ಸಂಪೂರ್ಣವಾ
ಕಾಂಗ್ರೆಸಿನ ಘಟನೆ ಹಾಗೂ ಕಾಂಗ್ರೆ
ನ ಶಿಸ್ತಿಗೆ ಒಳಪಟ್ಟು ತಾಲೂಕು ಕೇಂ
ಗಳ ಆಧೀನದಲ್ಲಿರುವುದು ಐಕ್ಯಕ್ಕೂ
ತರ ಸಂಬಂಧಗಳ ದೃಷ್ಟಿಯಿಂದಲೂ
ಗತ್ಯವಾಗಿದೆ. ಆಯಾಪ್ರದೇಶದಲ್ಲಿರುವ ರ
ರಚನಾತ್ಮಕಕಾರ್ಯಗಳಲ್ಲಿ ಈ ದಳಗಳ
ಪ್ರಮ ಉಪಯೋಗಿಸಿಕೊಳ್ಳಲು ಸಾ
ವಿದೆ. ಇವೆಲ್ಲ ನಿಸ್ವಾರ್ಥ ದೃಷ್ಟಿಯಿಂದ
ಡೆಯುವಂತೆ ಆದಷ್ಟು ಯತ್ನಿಸಿದರೆ
ಾರ್ಯ ಸಾಫಲ್ಯ ಹೊಂದುವುದರಲ್ಲಿ
ಂದೇಹವಿಲ್ಲ.

ರಾಷ್ಟ್ರೀಯ ಸ್ವಯಂಸೇವಕ ದಳ
(R. S. S.)ದ ಶಿಸ್ತುಬದ್ಧ ಕಾರ್ಯಕ್ರ
ವನ್ನು ನಾವು ನಿರೀಕ್ಷಿಸಿದರೆ ಅಲ್ಲಿನ
ಂಘಟನೆ ಬಗ್ಗೆ ನಮಗೇ ಅಚ್ಚರಿ ಎನಿಸು
ದೆ ಅವರ ಧ್ಯೇಯವು ವಿಶೇಷಾಭಾಸ
ುರಬಹುದಾದರೂ ಅವರ ನಿಸ್ವಾರ್ಥ
ಂಘಟನೆಯು ಮಾದರಿಯದ್ದಾಗಿದೆ.

ಕಾಂಗ್ರೆಸಿನ ಅಂಗ ಸಂಸ್ಥೆಗಳು ಈ
ಾದರಿಯಲ್ಲಿ ತನ್ನ ಸಂಘಟನೆ ಬೆಳೆಸಿ
ಳ್ಳಬೇಕೆಂದು ದೇಶದ ಪ್ರತಿಯೊಬ್ಬ
ಸ್ವಾತಂತ್ರ್ಯ ಪ್ರೇಮಿಯೂ ಆಪೇಕ್ಷಿಸು
ತ್ತಾನೆ

**ಉಡುಪಿ ನಾರಾಯಣ ಬಲ್ಲಾಳ,**
ಹಾಳನ.

### ಸೂಚನೆ

"ನವಯುಗ" ದಲ್ಲಿ ಪ್ರಕಟನೆಗಾ
ಲೇಖನಗಳನ್ನು ಆಮಂತ್ರಿಸಲಾ
ದೆ. ಇವು ಚಿಕ್ಕದಿರ ಬೇಕಲ್ಲದೆ,
ಾಗದದ ಒಂದೇ ಮಗ್ಗುಲಿನಲ್ಲಿರ
ಬೇಕು. ಲೇಖಕ ಬಂಧುಗಳು ಸಹ
ರಿಸಬೇಕಾಗಿ ವಿನಂತಿ. —ಸಂ. ನ.

ಭಾರತದ ರಾಷ್ಟ್ರಾಧ್ಯಕ್ಷರು ಭಾರತದ ಪ್ರಧಾನ ಮಂತ್ರಿ ಶ್ರೀ ಜವಾಹರಲಾಲ್ ನೆಹರೂರವರ ಸಲಹೆ ಪಡೆದು ೧೯೫೭ರ ಏಪ್ರಿಲ್ ೧೫ರಂದು ಈ ಕೆಳಕಂಡ ಮಹನೀಯರನ್ನು ಭಾರತ ಮಂತ್ರಿಮಂಡಲದ ಉಪಮಂತ್ರಿಗಳನ್ನಾಗಿ ನೇಮಿಸಿರುವರು: ಎಡದಿಂದ ಬಲಕ್ಕೆ: ಸರ್ದಾರ್ ಸುರೆಜಿತ್ ಸಿಂಗ್ ಮಜೀಥಿಯಾ, ಶ್ರೀಗಳಾನಿ ಅಬೀದ್ ಅಲಿ, ಅನೀಲ್ ಕುಮಾರ್ ಚಂದ, ಎಂ. ವಿ. ಕೃಷ್ಣಪ್ಪ, ಜೈಕುಮ್‌ಲಾಲ್ ಹಾಥಿ, ಸೆತಿಶ ಚಂದ್ರ, ಎಸ್. ಎನ್. ಮಿಶ್ರಾ, ಶ್ರೀ ಬಲರಾಮ ಭಗತ್, ಡಾ|| ಮನ ಮೋಹನ ಗೌರ್, ಫಾನಿವಾಜ್ ಖಾನ್, ಶ್ರೀಮತಿಗಳಾದ ಲಕ್ಷ್ಮಿ ಎನ್. ಮೆನನ್ ಮತ್ತು ನಯಲೆಟ್ ಆಳ್ವ.

## ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸು
ವವರು ದಯಮಾಡಿ ಎರಡು ಪ್ರತಿಗಳನ್ನು
ಕಳಿಸಬೇಕು. ಸಂ. ನ.)

### ಹೂರ್ನೇಮಾ ರಜನಿ—

(ಕಾದಂಬರಿ) ಬರೆದವರು: ಯಜ್ಞ.
ವಿಟ್ಠಲ ಶೆಣೈ, ವಿದ್ವಾನ್. ಪುಟ 153 ಬೆಲೆ:
ರೂ. 1–0–0.

ಮೇಧಾವಿ ವಿದ್ಯಾರ್ಥಿ ಮನೋಹರನು
ತನ್ನ ಅಸಾಧಾರಣ ಸಾಧನೆಯಿಂದ ಜೀವನ
ದೊಂದಿಗೆ ಓದನ್ನೂ ಸಾಧಿಸಿಕೊಂಡು ಪದವೀ
ಧರನಾದ, ನಮ್ಮ ಉಜ್ವಲ ಆದರ್ಶದ ಜೀವನ
ವನ್ನು ನವೆಸುವ, ಕಥಾ ಚಿತ್ರಣ ಪ್ರ. ಕ.
ಚೆಲ್ಲಿಯೆ ಅನೇಕ ವಿದ್ಯಾರ್ಥಿಮಿಗಳ ಜೀವನದ
ಪಡಿಯಚ್ಚನಂತಿದೆ. ಅತೆಯೇ ಸುವರ್ಣನಂ
ತಪರರನ್ನೂ, ನರಸಿಂಹನಂತಹ ವ್ಯಕ್ತಿಗಳೂ
ಸಮಾಜದಲ್ಲಿ ಅಲ್ಲಲ್ಲಿ ಕಾಣುವ ಜೀವಂತ
ವ್ಯಕ್ತಿಗಳ ಪ್ರತಿಬಿಂಬಗಳೇ.

ಮೋಸದ ಜಾಹೀರಾತು, ಆಕ್ಷೆ-ಸೊಸೆಯ
ವರ ಕಲಹಗಳನ್ನೂ ಮೊಂದಿಸಿಕೊಂಡಿದ್ದಾರೆ.
ಮುಖ್ಯವಾಗಿ ಮನೋಹರನ ಚಾತ್ರರಜನೆ
ಯಲ್ಲಿ ಅತನ ವಿದ್ಯಾಭ್ಯಾಸದ ಅಧಿಕಾಚಿಂಯ
ಪ್ರತಿಸಾದನೆಯು ನೈಜತೆಯ ಪುಟ್ಟಕ್ಕೆ ಚೆನ್ನಾ
ಗಿ ಮುಟ್ಟಿದೆ.

ಶ್ರೀ ಸಂಜೀವ ಭಟ್ಟರು ನುಸ್ಸುಡಿಯನ್ನು ಬರೆಯು ಈ ಲೇಖಕರಿಂದ ಇದಕ್ಕಿಂತ ಉತ್ತ ಮ ಕಾದಂಬರಿಗಳು ರಚನೆಯಾಗಲೆಂದು ಹಾ ರೈಸಿದ್ದಾರೆ. ಆವಶ್ಯಕ ಈ ಸಂದರ್ಭದಲ್ಲಿ ಸು ನರುಜ್ಜರಿಸುವುದರ ಜೊತೆಗೆ ದಿನಕ್ಕೊಂದರಂತೆ ಉತ್ತಮ ಪುಸ್ತಕಗಳನ್ನು ಓದುವ 'ಮಹಾ ಓದುಗ' ಶ್ರೀ ಸಂಜೀವ ಭಟ್ಟರು ತನ್ನು ಜ್ಞಾನ ಮತ್ತು ಅನುಭವ ಸಂಪತ್ತಿನ ಸಲಹೆಗಳಿಂದ ಈ ಲೇಖಕರಿಂದ ಉತ್ತಮ ಪುಸ್ತಕಗಳನ್ನು ಬರಿಸಿದ ಆವರ ಆಪೇಕ್ಷೆಯನ್ನು ಪೂರೈಸಲು ನೆರವಾಗಲಿ. ಪುಸ್ತಕದ ಮುದ್ರಣ ಕಾರ್ಯವೂ, ಹೊದಿಕೆಯೂ, ಮುಖ ಚಿತ್ರವೂ ಭಾಷಾ ಬರಿಹುದ್ದತೆಯೂ ಮಾದರಿಯಾಗಿವೆ.

ಶಾಂತಿ.


# ಝಂಡುರವರ 'ಕೇಸರಿ ಜೀವನ'

**(KESARI JEEVANA)**

ಇದನ್ನೇ ಉಪಯೋಗಿಸಿರಿ.

**ಅಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.**

ಕೆಮ್ಮು, ಶೀತ, ಆಸ್ತ್ಮ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಜೈತನ್ಯವನ್ನೂ ಕೊಡುತ್ತದೆ. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ 6/8; ½ ರಾತಲಿಗೆ ರೂ. 1/13

ಪ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.

1. ಶಾ ಕೆಂಪೆನಿ, ಮಂಗಳೂರು.
2. ವಿ. ವಿ. ಶೆಣೈ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್‌ಟಿಟ್ಯೂಟ್, ಉಡುಪಿ,

ನಿಪರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU ದಾಮೋದರ & ಕೊ,
ಮದ್ರಾಸ್—3.

ಏಕಾಂತದಲ್ಲಿ
ಓದುವಂತಹುದು
ಕೋಕ ಶಾಸ್ತ್ರ
ನೀವು ಎಂದೂ ಓದ
ದಂತಹ ವಶೀಕರಣ
ಪುಸ್ತಕ. ಅನೇಕ
ಆಶ್ಚರ್ಯಕರವಾದ ಫೋಟೋಗಳುಂಟು.

**ಬೆಡ್‌ರೂಂ ಫೋಟೋಸ್**

ಅತ್ಯುತ್ತಮ ಭಂಗಿಯಲ್ಲಿ ನೀವು ಹುಡುಗಿ ಯರ ಫೋಟೋವನ್ನು ನೋಡಿ ಆನಂದಿಸ ಬೇಕೆಂದಿದ್ದರೆ ಖಂಡ ಒಂದು ಸೆಟ್‌ಗೆ ಇಂದೇ ಬರೆಯಿರಿ. ಎರಡಕ್ಕೆ ಒಟ್ಟು ಬೆಲೆ ರೂ. 6/-

Correspondence in English only.

H. H. STORES (N. U.)
P. B. 51 MEERUT (U. P.)

# ಮಕ್ಕಳ ಮಗ್ಗಿಪುಸ್ತಕ

ನವಯುಗ ಸ್ಟೋರ್ಸ್, ಉಡುಪಿ.

## ಭಾರತೀಯ ಮಹಿಳೆಯರು

(೩ನೇ ಪುಟದಿಂದ)

ಪ್ರೋತ್ಸಾಹ ದೊರೆತಂತಾಯಿತು. ಸ್ತ್ರೀಗೂ ಪುರುಷನಂತೆಯೇ ಸ್ವಾತಂತ್ರ್ಯ, ಅಧಿಕಾರಗಳಿವೆಯೆಂಬುದನ್ನು ತಿಳಿದುಕೊಂಡಂತಾಯಿತು. ಒಂದು ಕಾಲದಲ್ಲಿ ಪ್ರಜಾರದಲ್ಲಿಲ್ಲದ ಸತೀಸಹಗಮನ ಪದ್ಧತಿಯು ರೂಢಿಯಾಗಿ ಬಂದು ರಾಜಾರಾಮ ಮೋಹನರಾಯರ ಅವಿರತ ಶ್ರಮದಿಂದಾಗಿ ಮಾಯವಾಯಿತು. ವಿಧವಾ ವಿವಾಹಪ್ರಹರ್ಷನ ಕಾಲದಲ್ಲಿಲ್ಲದ ಕಾರಣ ಆ ಸಮಯದಲ್ಲಿ ಸತೀ ಪದ್ಧತಿಯು ಸರ್ವಮಾನ್ಯವಾಗಿತ್ತು. ವಿಧವಾ ವಿವಾಹವನ್ನು ಪುರಸ್ಕರಿಸಿ ಬಾಲ ವಿವಾಹವನ್ನೂ ಸತೀ ಪದ್ಧತಿಯನ್ನೂ ಖಂಡಿಸಿದ ಆ ರಾಮಮೋಹನರಾಯರು ಸ್ತ್ರೀ ಜಾತಿಗೆ ತುಂಬ ಉಪಕಾರ ಮಾಡಿದರು. ಅವರು ಸ್ತ್ರೀಯರಿಗೂ ಶಿಕ್ಷಣ ಸೌಕರ್ಯವನ್ನು ಒದಗಿಸುವುದಲ್ಲದೆ ನಾನಾ ವಿಧಾನದಿಂದ ಸ್ತ್ರೀಯರ ಅಬಲತೆಯ ಮೂಲವನ್ನು ಪರಿಶೋಧಿಸಿ, ಅದರ ನಾಶಕ್ಕಾಗಿ ಯೋಗ್ಯ ರೀತಿಯನ್ನು ಕಂಡುಹಿಡಿಯುವುದರಲ್ಲಿ ಜಯಶೀಲರಾದರು.

ಭಾರತ ಸರಕಾರವು ಹಿಂದೂ ಕೋಡನ್ನು ಮಂಜೂರು ಮಾಡಿ ಕೆಲವೊಂದು ಸ್ತ್ರೀಯರಿಗೆ ತಮ್ಮ ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲನ್ನು ಪಡೆಯುವ-ಇದುವರೆಗೆ ಪುರುಷರಿಗೆ ಮಾತ್ರ ವಿಶಾಲವಾದ-ಹಕ್ಕನ್ನು ಒದಗಿಸಿಕೊಟ್ಟಿದೆ. ಸ್ತ್ರೀಯರ ಆರ್ಥಿವೃದ್ಧಿಗಾಗಿ ಮಹಿಳಾ ಸಮಾಜಗಳು ಉದ್ಭವಿಸಿವೆ. ಸರಕಾರಿ ಹಾಗೂ ಖಾಸಗಿ ವಿಭಾಗಗಳಲ್ಲಿ ಸ್ತ್ರೀಯರಿಗೆ ಉದ್ಯೋಗ ಸೌಕರ್ಯವೂ ಹೆಚ್ಚಾಗಿ ದೊರೆಯುತ್ತಿದೆ. ಹೀಗಾಗಿ ಸ್ತ್ರೀಯರ ಶ್ರೇಯೋಭಿವೃದ್ಧಿಗಳು ನಿರಂತರವಾಗಿ ಸಾಗಬಹುದೆಂದು ಆಶಿಸಿದರೆ ತಪ್ಪಾಗಲಾರದು. 'ತೊಟ್ಟಿಲು ತೂಗುವ ಕೈಯೇ ರಾಷ್ಟ್ರವನ್ನಾಳುವ ಕೈ' ಎಂದು ಹಿರಿಯರ ಮಾತು ಅಕ್ಷರಶಃ ಸತ್ಯವಾಗಬಹುದು. ಪುರುಷರ ಪ್ರಾಧಾನ್ಯವು ಕಡಿಮೆಯಾಗಿ ಸ್ತ್ರೀ ಪ್ರಾಬಲ್ಯವಾದೀತು. ಇದರಿಂದ ಪುರುಷರು ಹುರುಪಿಸುವ ಅಗತ್ಯವಿಲ್ಲ. ಸ್ತ್ರೀ ಉತ್ತಮಳಾದರೆ, ಪುರುಷನಿಗೂ ಅದರಿಂದ ಲಾಭವೇ.

ಪುರುಷ-ಸ್ತ್ರೀ ಒಂದು ರಥಕ್ಕೆ ಕಟ್ಟಿದ ಜೋಡು ಕುದುರೆಗಳು. ಅವರು ಏಕ ಸಮವಾಗಿ ಐಕ್ಯದಿಂದ ಸಾಂಸಾರಿಕ ನೊಗವನ್ನೆಳೆದರೇನೇ ಸಂಸಾರದ ಸೌಖ್ಯ, ದೇಶದ ಸೌಖ್ಯ. ಅದು ಹೊರತು ಕೋಣ ನೀರಿಗೆಳೆದರೆ ಹೋರಿ ಏರಿಗೆಳೆಯಿತೆಂಬಂತೆ ಭಿನ್ನಾಭಿಪ್ರಾಯಗಳಿಂದ ಮನೆಯನ್ನು ಸಂಗ್ರಾಮರಂಗವಾಗಿ ಬಳಸಿಕೊಂಡರೆ, ಯಾರ ಸ್ವಾತಂತ್ರ್ಯ, ಅಧಿಕಾರದಿಂದಲೂ ಸುಖವಿಲ್ಲ ಆದುದರಿಂದ, ಸ್ತ್ರೀ ಪುರುಷರು ತಮ್ಮ ಸ್ವಾತಂತ್ರ್ಯದೊಂದಿಗೆ ಇನ್ನೊಬ್ಬರ ಸ್ವಾತಂತ್ರ್ಯವನ್ನು ಅಪಹರಿಸದೆ ಮುನ್ನಡೆದರೆ, ಉಭಯಕರಿಗೂ ಶ್ರೇಯಸ್ಕರ.

(ಸಾಧಾರ)

—ಎಸ್. ಗೋಪೀಚಂದ ರಾವ್,
ಉಡುಪಿ.

## ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ

## ಕಾಂಗ್ರೆಸಿಗರ ಕರ್ತವ್ಯ

### ಜನತೆಯ ಸಂಕಷ್ಟಗಳನ್ನರಿತು ನಿವಾರಣೆಗೆ ಪ್ರಯತ್ನಿಸಬೇಕು

ಭಾರತದ ಪ್ರಧಾನಿ ಜವಾಹರಲಾಲ ನೆಹರೂರವರು ಮೊನ್ನೆ ಕಾನೆ ತಾರೀಕು ನಂದು ನವದೆಹಲಿಯಲ್ಲಿ ಸೇರಿದ್ದ ಪ್ರಾದೇಶಿಕ ಕಾಂಗ್ರೆಸ್ ಸಮಿತಿಗಳ ಅಧ್ಯಕ್ಷ ಮತ್ತು ಕಾರ್ಯದರ್ಶಿಗಳ ಸಭೆಯಲ್ಲಿ ಭೂ ಸುಧಾರಣೆಯ ಕುರಿತು ತೀವ್ರ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿ ಕೇಳಿಕೊಂಡರು. ಭಾರತವು ಆಹಾರ ಧಾನ್ಯಗಳಿಗಾಗಿ ಪರದೇಶಗಳತ್ತ ಕೈನೀಡುವ ಪರಾವಲಂಬನವನ್ನು ತೊರೆದು ಆದಷ್ಟು ಶೀಘ್ರವಾಗಿಯೇ ನಮಗೆ ಅಗತ್ಯವಿರುವ ಪ್ರಮಾಣದಲ್ಲಿ ಆಹಾರ ಧಾನ್ಯಗಳ ಉತ್ಪಾದನೆಯನ್ನು ಹೆಚ್ಚಿಸಬೇಕು, ದೇಶದ ರೈತರಿಗೆ ತಮ್ಮ ಕಾರ್ಯದ ಕಡೆಗೆ ಹೊಸ ಉತ್ಸಾಹವೂ ಉತ್ತೇಜನವೂ ದೊರೆಯುವ ಹೊರತು ಈ ಉತ್ಪಾದನೆಯ ಹೆಚ್ಚಳವನ್ನು ಮಾಡುವುದು ಪ್ರಯಾಸಕರವೆಂದವರು ತಿಳಿಸಿದರು.

ದೇಶದ ಆಂತರಿಕ ವಿಚಾರಗಳನ್ನು ವಿಮರ್ಶಿಸುತ್ತ ಸರಕಾರವು ತನ್ನ ಉದ್ದೇಶವನ್ನು ಹಂಸೆ ಮತ್ತು ವರ್ಗ ಹೋರಾಟಗಳ ಮೂಲಕ ಸಾಧಿಸುವುದನ್ನು ವಿರೋಧಿಸಿ, "ಭಾರತದ ಕಮ್ಯೂನಿಸ್ಟ್ ಪಕ್ಷವು ಈ ಮಾರ್ಗವನ್ನು ಹಿಡಿದುಕೊಂಡಿದೆ. ಆದರೆ ಇದು ಮೂಲಭೂತವಾಗಿ ತಪ್ಪು ದಾರಿಯಾಗಿದೆ ನಾವು ಪರಸ್ಪರ ಸಹಾಯ, ಸಹಕಾರ ಮತ್ತು ಸೌಜನ್ಯಗಳಿಂದ ಬದಲೇ ಒಂದು ಹೊಸ ಸಮಾಜವನ್ನು ಸಂಸ್ಥಾಪಿಸಬೇಕಾಗಿದೆ. ತಾವು ಸಂಪಾದಿಸಿದ ಹೊಸ ಅನುಭವಗಳಿಂದ, ಕಮ್ಯೂನಿಸ್ಟ್ ರಾಷ್ಟ್ರಗಳಾದರೂ ತಮ್ಮ ಧ್ಯೇಯ ಧೋರಣೆಗಳನ್ನು ಬದಲಾಯಿಸಬೇಕಾದ ಸಂದರ್ಭ ಬಂದಿಡೆ." ಎಂದವರು ಸರಳ, ಸುಲಭ ಹಾಗೂ ನಿಧಾನ ಪದ್ಧತಿಯಿಂದಲೇ ಸಮಾನತೆಯನ್ನು ಸಾಧಿಸುವ ಆವಶ್ಯಕತೆಗಳನ್ನು ಒತ್ತಿ ಹೇಳಿದರು.

ಕಾಂಗ್ರೆಸ್ಸಿನಲ್ಲಿ ಇತ್ತೀಚೆಗೆ ಹುಡಿಕೊಂಡ ಅಶಕ್ತತೆಯನ್ನು ಉಲ್ಲೇಖಿಸಿ ಕಾಂಗ್ರೆಸಿಗರು ಚಿಕ್ಕ ಪುಟ್ಟ ವಿಚಾರಗಳಿಗಾಗಿ ಜಗಳ ಕಾಯದೆ, ತಮ್ಮ ಪಂಗಡ ಮತ್ತು ಜಾತಿ ಭಾವನೆಗಳನ್ನು ಕೆತ್ತುಹಾಕಿ, ದೇಶದ ಹಿಡಿತನ ಏಳಿಗೆಗಾಗಿ ದುಡಿಯಲು ವಿನಂತಿಸಿದರು. ಕಾಂಗ್ರೆಸ್ ಶಾಸನ ಮತ್ತು ರಚನಾತ್ಮಕ ಕಾರ್ಯವಿಭಾಗಗಳ ಪಕ್ಷಗಳನ್ನು ಒಂದಕ್ಕೊಂದು ಹೊಂದಿಕೊಂಡಿರುವಂತೆ ಮಾಡಲು ಕರೆಕೊಟ್ಟರು. "ದೇಶದ ಜನತೆಯೊಂದಿಗೆ ನಿಕಟ ಸಂಬಂಧವನ್ನು ಇಟ್ಟುಕೊಳ್ಳುವುದು ಪ್ರತ್ಯೇಕ ಕಾಂಗ್ರೆಸಿಗರ ಕರ್ತವ್ಯವಾಗಿದೆ. ಕಾಂಗ್ರೆಸಿಗರು ಜನರ ನಿತ್ಯದ ಸಂಕಷ್ಟಗಳನ್ನು ಕಂಡುಕೊಂಡು, ಅವನ್ನು ಹೋಗಲಾಡಿಸುವುದರಲ್ಲಿ ಪ್ರಯತ್ನ ಮಾಡಬೇಕು. ಈ ಉದ್ದೇಶಕ್ಕಾಗಿ ಪ್ರತ್ಯೇಕ ವ್ಯವಸ್ಥೆಯನ್ನು ಮಾಡುವುದು ಅಗತ್ಯ." ಎಂದವರು ಉಪದೇಶಿಸಿದರು.

"ದೇಶದ ಕೆಲವೊಂದು ರಾಜ್ಯಸರಕಾರಗಳು ಸಾಮಾನ್ಯವಾಗಿ ಸ್ಥಳೀಯ ಜನತೆಯ ಸಾಂಪತ್ತಿಕ ಸಂಕಷ್ಟಗಳನ್ನು ಶೀಘ್ರದಲ್ಲಿಯೇ ಹೋಗಲಾಡಿಸುವ ದೆಸೆಯಲ್ಲಿ ಆಸಕ್ತಿಯನ್ನು ತೋರಿಸಲಿಲ್ಲ. ಕಾಂಗ್ರೆಸ್ಸಿಗರು ಮತ್ತು ಕಾಂಗ್ರೆಸ್ ಸಮಿತಿಗಳು ಜನತೆಯ ಪರವಾಗಿ ಜನರ ಸಂಕಷ್ಟಗಳನ್ನು ಸರಕಾರದ ಗಮನಕ್ಕೆ ತರುವುದು ಮತ್ತು ವಸ್ತುವನ್ನು ದೂರೀಕರಿಸುವುದು ತಮ್ಮ ಕರ್ತವ್ಯವೆಂದು ತಿಳಿಯಬೇಕು. ಅವರು ಈ ಕಾರ್ಯವನ್ನು ಸ್ನೇಹದಿಂದಲೇ ಮಾಡಿಕೊಳ್ಳಬೇಕಷ್ಟೆ, ವಿರೋಧಿ ಪಕ್ಷಗಳು ಮಾಡುವ ವಿಧಾನದಲ್ಲಿಡಬಾರದು.

"ಕಾಂಗ್ರೆಸಿಗರು ಸೋಲು ಅಥವಾ ನಿರಾಶೆಯಾಯಿತೆಂದು ಭಾವಿಸಬಾರದು. ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ಸು ಕೆಲವೊಂದು ಪ್ರದೇಶಗಳ ಜೊರತಾಗಿ ಉಳಿದೆಡೆಗಳಲ್ಲಿ ಜಯಶ್ರೀತೆಯನ್ನು ಪಡೆದಿದೆ. ಇದು ಹಲವು ಸ್ಥಳಗಳಲ್ಲಿ ಹಲವು ಸ್ಥಾನಗಳನ್ನು ಗೆದ್ದುಕೊಂಡು ಕೆಲವೆಡೆಗಳಲ್ಲಿ ಕೆಲವು ಸ್ಥಾನಗಳನ್ನು ಮಾತ್ರ ಕಳೆದುಕೊಳ್ಳುವ ಪ್ರಶ್ನೆಯಲ್ಲ, ಅದೊಂದು ತಾತ್ವಿಕ ಪ್ರಶ್ನೆಯಾಗಿದೆ.

ಪ್ರಜಾಪ್ರಭುತ್ವದಿಂದಲೇ ಶಾಂತಿಯು ತನಾಗಿ ನಾವು ಸಮಾಜವಾದಿ ಪದ್ಧತಿಯ ಸಮಾಜವನ್ನು ಸ್ಥಾಪಿಸುವ ಧ್ಯೇಯಗಳನ್ನಿಟ್ಟುಕೊಂಡಿದ್ದೇವೆ. ಈ ದೃಷ್ಟಿಯಿಂದಲೇ ನಾವು ಸಂಕಲ್ಪವಾಗಿ ಲಕ್ಷ್ಯಪೂರ್ವಕವಾಗಿ ನಮ್ಮ ನಾನಾ ಸಾಮಾಜಿಕ ಮತ್ತು ಆರ್ಥಿಕ ಧ್ಯೇಯಗಳನ್ನು ವಿಮರ್ಶಿಸಬೇಕು. ದ್ವಿತೀಯ ಪಂಚ ವಾರ್ಷಿಕ ಯೋಜನೆಯು ನಮ್ಮ ಧ್ಯೇಯ ಧೋರಣೆಗಳ ಮತ್ತು ತತ್ವಗಳ ಪಡಿಯಚ್ಚು". ಎಂದು ಶ್ರೀ ನೆಹರೂ ತಿಳಿಸಿದರು.

ಪ್ರಕೃತದಲ್ಲಿ ಉಷ್ಣಾಂಶವಲ್ಲದೇ ಗಿರಿರುವ ಆಹಾರ ಪರಿಸ್ಥಿತಿಯತ್ತ ಹೊರಳಿ 'ನಾವು ನಮ್ಮ ಉತ್ಪಾದನೆಯ ಸಾಧನೆಗಳನ್ನು ಉತ್ತಮಗೊಳಿಸಿ, ನಮ್ಮ ಆಹಾರ ಪದಾರ್ಥಗಳ ಉತ್ಪಾದನೆಯನ್ನು ಅತ್ಯಗತ್ಯವೆಂದು ಭಾವಿಸಿ, ಹೆಚ್ಚಿಸಬೇಕು. ಕೃಷಿಕ ಉತ್ಪಾದನೆಯು ಹೆಚ್ಚಳವಾಗದೆ, ಔದ್ಯೋಗಿಕ ಸಾಧನೆಯಲ್ಲಿ ಅಭಿವೃದ್ಧಿಯಾಗದೆ ದೊಡ್ಡ ಸಾಮಾಜಿಕ ಮತ್ತು ಆರ್ಥಿಕ ವಿಧಾನವನ್ನನುಸರಿಸದೆ ಸಮಾಜವಾದ ಮೂದರಿಯ ಕಲ್ಯಾಣ ರಾಷ್ಟ್ರವನ್ನು ಸ್ಥಾಪಿಸುವುದು ಅಸಾಧ್ಯ" ಎಂದು ನುಡಿದು ಹೆಚ್ಚು ಆಹಾರ ಬೆಳೆಯುವೇಕವ ಅಗತ್ಯವನ್ನು ವಿಶದೀಕರಿಸಿದರು.

"ಬೇರೆ ಬೇರೆ ತರದ ಅಭಿವೃದ್ಧಿಯೋಜನೆಗಳನ್ನು ಕಾರ್ಯರೂಪಕ್ಕಿಳಿಸಲು ಹೆಚ್ಚು ಆದಾಯವು ಬೇಕಾಗುವುದು. ವಿಶಾಲವಾದ ತಳಹದಿಯಲ್ಲಿ ತೆರಿಗೆಗಳ ಹೆಚ್ಚಳವೇ ಇದಕ್ಕೊಂದು ಮಾರ್ಗ. ಈ ಹೆಚ್ಚಿನ ತೆರಿಗೆಗಳಿಂದ ನಾವು ಜನರಿಗೆ ವಿದ್ಯೆ, ಆರೋಗ್ಯ ಮೊದಲಾದ ವಿಭಾಗಗಳಲ್ಲಿ ಹೆಚ್ಚಿನ ಸೌಕರ್ಯಗಳನ್ನು ಒದಗಿಸುತ್ತೇವೆ." ಎಂದವರು ಹೊಸ ಕರಭಾರದ ಆವಶ್ಯಕತೆಗಳನ್ನು ಮನವರಿಕೆಮಾಡಿಕೊಟ್ಟರು. ಈ ತೆರಿಗೆಗಳು ತೀರಾ ಅಗತ್ಯವಿದ್ದಷ್ಟೆ ಅವು ಅತ್ಯಂತ ಕನಿಷ್ಠ ಮಿತಿಯಲ್ಲಿವೆ. ಈ ಹೊಸ ಸೂಚನೆಗಳ ಯೋಜನೆಯು ಸಫಲತೆಗೆ ಕಾರಣೀಭೂತವಾಗಿಸಿಯೆಂದು ಶ್ರೀ ನೆಹರೂ ಅಭಿಪ್ರಾಯಪಟ್ಟರು.



ಬ್ರಿಟಿಷ ಇಂಜಿನಿಯರರ ಸಂಸ್ಥೆಯಿಂದ ತಯಾರಿಸಲ್ಪಟ್ಟ "ವೈಕೋನ್" ಎಂಬ ಈ ಟ್ರೇಕ್ಟರ್ ಇದೀಗ ಅರು ಬೇರೆ ಬೇರೆ ದೇಶಗಳಲ್ಲಿ ಪರೀಕ್ಷೆಗೊಳಪಟ್ಟಿದೆ. ಇದೊಪ್ಪಿಗೆ ಹದಿನಾರು ಟನ್‌ಗಳಷ್ಟು ಮಣ್ಣನ್ನು ಸಮತಟ್ಟು ಮಾಡುತ್ತದೆ. ಎಲ್ಲೆಡೆಯ ಸಿವಿಲ್ ಇಂಜಿನಿಯರರ ಆವಶ್ಯಕತೆಗಳನ್ನೂ ಈ ಹೊಸ ಯಂತ್ರವು ಪೂರೈಸಲು ಶಕ್ತವಾದೆ.



## ಅಧ್ಯಾಪಕರ ಬಾಳು

# ಸಮಾಜ ಶಿಕ್ಷಕರ ಅತೃಪ್ತಿಯ ನಿಲವನ್ನು ಹೊಡೆದೋಡಿಸಿರಿ.

ಬಂಡೆಕಲ್ಲನ್ನು ಒಡೆದು ಹಡೆದು ಸುಂದರ ವಿಗ್ರಹವನ್ನಾಗಿಸುವವನೇ ಶಿಲ್ಪಿ; ಕಂಚನ್ನು ಕರಗಿಸಿ ಉಪಯೋಗಕರವಾದ ಒಡವೆಯನ್ನಾಗಿಸುವವನೇ ಕಂಚುಗಾರ; ಅವೆ ಮಣ್ಣನ್ನು ಕಿಡ್ಡಿತೀಡಿ ಚೆಲೋ ಮೂರ್ತಿಯನ್ನು ನಿರ್ಮಿಸುವವನೇ ಕಲಾಗಾರ–ಹೀಗೆಯೇ ಮನೋಮಂದಿರದಲ್ಲಿ ಪ್ರಸುಪ್ತವಾಗಿ ಹುದುಗಿರುವ ಭಾವಗಳನ್ನು ಎಚ್ಚರಿಸಿ, ಅವಕ್ಕೆ ಕರಿಯಾದ ರೂಪವನ್ನಿತ್ತು ಅವುಗಳ ಸ್ಫುರಣೆಗೆ ಯೋಗ್ಯವಾದ ದಾರಿಯನ್ನು ತೋರಿಸಿ ತನ್ಮೂಲಕ ಉತ್ತಮ ನಾಗರಿಕ ಜನತಾಂಗವನ್ನು ನಿರ್ಮಿಸುವ ಶಿಲ್ಪಿ ಎಂದರೆ ಅಧ್ಯಾಪಕ; ಇದು ಬಹುಕಾಲದ ಅನುಭವದಿಂದ ಕಂಡುಕೊಂಡ ಸತ್ಯ. ಇದರಿಂದ ಸಮಾಜದಲ್ಲಿ ಅಧ್ಯಾಪಕನ ಸ್ಥಾನ ಮತ್ತು ಮಾನಗಳ ಬೆಲೆ ಮತ್ತು ಗರಿಮೆಗಳು ಸುವ್ಯಕ್ತವಾಗುತ್ತಿವೆ.

ಆದರೆ ಇವೆಲ್ಲವೂ ಗತಕಾಲದ ಗರ್ಭದಲ್ಲಿ ಸುದೂರಿ ಎಷ್ಟೋ ದಶಮಾನಗಳೇ ಕಳೆದು ಹೋಗಿವೆ. ಅವನ್ನು ಪುನಃ ತೋರಲು ನನ್ನ ಲೇಖನಿಗು ಮೊನೆಯು ಗತಕಾಲದ ಗರ್ಭವನ್ನು ಒಕ್ಕುತ್ತಿಲ್ಲ. ಅಧ್ಯಾಪಕನ ಅದ್ಯತನದ ಅವನತಿಯು ಬೀಭತ್ಸ ಸ್ಥಿತಿಯ ಕಡೆಗೆ ಒಂದಿಷ್ಟು ಬೆಳಕು ಚೆಲ್ಲಿ ಸಹೃದಯರ ದೃಷ್ಟಿಗೆ ಅದು ಗೋಚರವಾಗಲಿ ಎಂದೇ ನನ್ನ ಲಘು ಪ್ರಯತ್ನ.

ಧನೋರ್ಥವಾಗಿ ಸಾರ್ವತ್ರಿಕ ವಿದ್ಯಾ ಪ್ರಚಾರವಾಗಬೇಕು ಎಂಬ ಚಳುವಳಿ ಎಂದು ಆರಂಭಿಸಿತೋ ಅಂದೇ ಅಧ್ಯಾಪಕ ಸಮಷ್ಟಿ ವೃತ್ತಿಯ ಅವನತಿಯ ಉದಯವಾಯಿತು. ಈ ಚಳುವಳಿಯ ಯಶಸ್ಸಿಗೆ ಅಧಿಕ ಪ್ರಮಾಣದಲ್ಲಿ ಹಣವೂ, ಉತ್ಸಾಹವೂ ಬೇಕಾದುದರಿಂದ ಕೊಡುವ ಅಲ್ಪ ನೇತನದಲ್ಲಿ ಕೃಪ್ತರಾಗಬಲ್ಲ ಅಲ್ಪ ವಿದ್ಯಾವಂತರನ್ನೇ ಸರಕಾರವು ಆರಿಸಿಕೊಂಡಿತು. ಮಾತ್ರವಲ್ಲ ತತ್ವಕ್ಕಾಗಿ ವಿದ್ಯಾ ಪ್ರಚಾರವನ್ನು ಒಪ್ಪಿದವೂ ಇದು ಬಡು ಎನ್ನುತಾನೇ? ವಿದ್ಯೆಯ ಸ್ವಚಾರದಿಂದ ಪ್ರತ್ಯಕ್ಷ ಲಾಭವು ಸರಕಾರಕ್ಕೆ ಖಂಡಿತ ಇಲ್ಲವಷ್ಟೆ. ಆದುದರಿಂದಲೇ ಈ ಕಡೆಗೆ ಉಪೇಕ್ಷೆ; ಮಲತಾಯಿಯ ಶುಶ್ರೂಷೆ. ಈ ಶುಶ್ರೂಷೆಯಿಂದ ಕೈರನಾದುದು ಅಧ್ಯಾಪಕ ಅವಮಾನಗೊಂಡುದು ಅಧ್ಯಾಪನ ವೃತ್ತಿ. ಸಮಾಜದಲ್ಲಿ ಹೀನ ವೃತ್ತಿ ಎನಿಸಿದುದು ಅಧ್ಯಾಪನ ವೃತ್ತಿ ಸಮಾಜವು ಕಡೆಗಣಿಸುತ್ತಿರುವುದು ಅಧ್ಯಾಪಕನನ್ನು.

ಇದರಿಂದಾಗಿ ಉಪಾಧ್ಯಾಯನ ಅದರಲ್ಲೂ ಪ್ರಾಥಮಿಕ ಶಾಲೆಗಳಲ್ಲಿ ದುಡಿಯುತ್ತಿರುವವನ--ಆದೂ--ಹಳ್ಳಿಗಳಲ್ಲಿನ ಶೋಚನೀಯ ಸ್ಥಿತಿಯನ್ನು ಸಂಖ್ಯಾಲೋಚಿಸೋಣ.

ಶಾಲೆಯೆಂದೆನಿಸುವ ಕಟ್ಟಡವು ಅರೆ ಮನೆಯಾಗಬೇಕಲ್ಲ; ನಿಜ. ಆದರೂ ಮಳೆಬಿಸಿಲುಗಳಿಂದ ಸುರಕ್ಷಿತವಾದ ವಿದ್ಯಾರ್ಥಿವರ್ಗದ ಕಟ್ಟಡವಾದರೂ ಶಾಲೆಗೆ ಬೇಡವೇ? ನಮ್ಮಲ್ಲಿ ಮಳೆ ಇಲ್ಲದೆ ಇರುತಿದ್ದರೆ, ಚಪ್ಪರದಡಿಯಲ್ಲಿ ಇಲ್ಲವೇ ಮರಗಳೆ ಮರೆಯಲ್ಲಿ ಪಾಠ ಪ್ರವಚನಗಳನ್ನು ನಿರಂತರವೂ ನಿರಾತಂಕವಾಗಿ ನಡಾಸಿಸಲು ಉಪಾಧ್ಯಾಯನಿಗೆ ಅನುಮತಿ ಸಿಗುತಿತ್ತೊ ಏನೊ ಎಂದು ಈಗಿಗ ಸಂದೇಹವಾಗುತ್ತಿದೆ. ಮಧ್ಯಾನುವರ್ಗದ ಕಟ್ಟಡ, ಆಟದ ಬಯಲು, ಬಾವಿ ಮೂತ್ರದೊಡ್ಡಿ ಇಲ್ಲದ ಶಾಲೆಗಳೇ ನಮ್ಮಲ್ಲಿ ಹೆಚ್ಚು. ಇಂತಹ ಶಾಲೆಗಳಲ್ಲಿ ಉಪಾಧ್ಯಾಯನು ಶಾಲೆಯ ಸಾಮಾನುಗಳನ್ನು ರಿಕಾರ್ಡು ರಿಜಿಸ್ಟ್ರಿಗಳನ್ನು ಜೋಪಾನವೆ ಮಾಡುವುದೆಂದರೆ ಅವನಿಗೆ ಹೊರಲಾರದ ಹೊರೆ. ಈ ಗುಡಿಸಲಿನ ಶಾಲೆಗಳಲ್ಲಿರುವ 'ವಸ್ತು'ಗೆ ಏನು ಗೌರವ ದೊರಕೀತು? ವಿದ್ಯಾಭ್ಯಾಸದ ಗಾಂಭೀರ್ಯವನ್ನು ಕಗ್ಗೊಲೆಯಲ್ಲದೆ ಮತ್ತೇನು? ಅಧ್ಯಾಪನ ವೃತ್ತಿಯ ಅವನತಿಯ ತಾಂಡವ ನೃತ್ಯವಲ್ಲವೆ ಇದು? ವೃತ್ತಿಯ ಗೌರವ ನಾಚಿ ಪಾತಾಳಕ್ಕಿಳಿಯದೇ?

ವಜ್ರವಾದರೂ ಕುಂದಣದೊಡನೆ ಸೇರಿದಾಗ ತಾನೆ ತೊಡುಗೆಯೆನಿಸಿ ಮಾನ್ಯವಾಗುವುದು? ನಮ್ಮದು ಒಡ ಸರಕಾರ–ಒಪ್ಪುವೆ. ಆದರೆ ಇತರ ಇಲಾಖೆಗಳಿಗೆ, ಅಭಿವೃದ್ಧಿ ಯೋಜನೆಗಳ ಕೆಸರಲ್ಲಿ ಸರಕಾರವು ನೂಡುವ ದುಂದು ವೆಚ್ಚದ ಸ್ವಲ್ಪಾಂಶವನ್ನು ಈಕಡೆ ವಿನಿಯೋಗಿಸಿದರೆ....? ಏಕೆ ಪ್ರಾಥಮಿಕ ಶಿಕ್ಷಣಕ್ಕೆ ಸರಕಾರವು ಹಣವನ್ನು ವ್ಯಯಿಸುತ್ತಿಲ್ಲವೇ? ಭಕ್ತದಲ್ಲಿ ಸಾಸಿವೆ ಊಟವನ್ನು ಹಾಕುತಿದ್ದ ವ್ಯಕ್ತಿ ಹೋಟೆಲಿನಲ್ಲಿ ಮೊದಲಿನ ಊಟವನ್ನು ಕೊಡುವ ನೀತಿ ಇದು ಎಂದೆನಿಸುವುದಿಲ್ಲವೆ? ಇದರಿಂದಾಗಿ ವಿದ್ಯಾಸಂಸ್ಥೆಯನ್ನು, ಅಧ್ಯಾಪಕನನ್ನು ಇತರರಿಂದ ಭಿನ್ನ ಎಂದು ಬೇರೆತ್ತಿ ತೋರಿಸಿದಂತಾಗುವುದಿಲ್ಲವೇ? ಅದುದರಿಂದಲೇ ಹಳ್ಳಿಯ ಸಮಾಜವು ದಿನಸ್ತಿತ್ಯ ಶಾಲೆಯನ್ನೂ, ಅಧ್ಯಾಪಕನನ್ನೂ ಕಡೆಗಣಿಸುತ್ತ ಇದೆ. ಇಂತಹ ವಾತಾವರಣದಲ್ಲಿ ಬೆಳೆದ ಮಗು ವಿದ್ಯೆಯ ಕಡೆಗೆ ಗೌರವವನ್ನು ತಳೆದೀತೆ? ತಿರಸ್ಕೃತ ವಿದ್ಯೆಯನ್ನು ಪಡೆದ ವಿದ್ಯಾರ್ಥಿಗಳಲ್ಲಿ ವಿದ್ಯೆಯ ಸಂಸ್ಕಾರವನ್ನ ಲವಲೇಶವಾದರೂ ಉಳಿದೀತೆ? ಉಪಾಧ್ಯಾಯನ ಕಡೆಗೆ ವಿದ್ಯಾರ್ಥಿಯು ತೋರುವ ಗೌರವ ಗಾಣಿನೆಂದು ಭಾವಿಸುವ; ಏಕೆಂದರೆ ಎಷ್ಟೆಂದರೂ ಅವನು ಗಾಳಿಯೂದಿದ ಮಣ್ಣು ಹೆಂಟೆ ತಾನೆ?

ಶಾಲೆಯೊಳಗೆ ಬೆಂಚು ಕುರ್ಚಿ ಬೇಜಾಗಳು ಬೇಡವಾದರೂ ಕನಿಷ್ಠಪಕ್ಷ ವಿದ್ಯಾಭ್ಯಾಸವನ್ನು ಆಟವಾಗಿಸುವ ಶೈಕ್ಷಣಿಕ ಉಪಕರಣಗಳು–ಇವುಗಳಾದರೂ ಬೇಡವೇ? ಅವುಗಳನ್ನು ಒದಗಿಸುವ ಮನೋವೃತ್ತಿಯಾದರೂ ಬೇಡವೇ? ಶಿಕ್ಷಣಕ್ಕೆ ಉಪಯುಕ್ತವಾದ ಇಂತಹ ಸಾಧನಗಳು ಇಲ್ಲದಾಗ ಉಪಾಧ್ಯಾಯನು ಎಷ್ಟು ಕಷ್ಟಪಡಬಹುದು? ಮನಸ್ಸಿನಲ್ಲೆಷ್ಟು ಕೊರಗಬಹುದು? ಸಮಾಜದಲ್ಲಿ ಅವನಿಗೆ ಆಗುತ್ತಿರುವ ಅಪಮಾನ ಶಾಲೆಯೊಳಗಿನ ಇಂತಹ ಕಷ್ಟಗಳು, ಸಾಂಸಾರಿಕ ಅಡಚಣೆಗಳು ಈ ಮುಪ್ಪಿನಿಯ ಕುಣಿಕೆಯಲ್ಲಿ ಸಿಕ್ಕಿದ ಅವನ ಬಾಳಿನ ಗೋಳು ಎಣಿಕೆಗೆ ಎಟುಕಲಾರದು.

ಹಳ್ಳಿಗರಿಗೆ ಸ್ವಭಾವತಃ ವಿದ್ಯೆಯ ಮೇಲೆ ಆದರವಿಲ್ಲ--ಒಪ್ಪಬಹುದು; ಆದರೆ ಅಜ್ಞಾನಜನ್ಯ ಎನ್ನದೆ ನಿರ್ಮಾಣವಿಲ್ಲ. ಅದುದರಿಂದ ಸಹಜವಾಗಿ ಹಳ್ಳಿಯ ಹೆತ್ತವರು ಕಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿಲ್ಲ. ಒತ್ತಾಯ ದಾಕ್ಷಿಣ್ಯ ಹಂಗುಗಳಿಗೆ ಬಲಿಬಿದ್ದು ಮನೆಯಲ್ಲಿ ಯಾವ ತರದ ಆಡಚಣೆಗಳೂ ಇಲ್ಲದಾಗ, ಮಕ್ಕಳ ತಂಟೆ ಹೆಚ್ಚಾದಾಗ ಆವರನ್ನು ಶಾಲೆಗೆ ಕಳುಹಿಸುತ್ತಿರುವುದು ರೂಢಿ. ಇಂತಹ ಬ. ಸ. ಅ. (ಲಘುತ್ವನು ಸಾಮಾನ್ಯ ಅಸವರ್ಥ) ದಿನಗಳು ವರ್ಷದಲ್ಲಿ ಬಹಳ ಕಡಿಮೆ. ಹಾಜರಿಯಲ್ಲಿ ಕಡಿತವಾದಾಗ ಮೇಲಿನ ಅಧಿಕಾರಿಗಳ ಅಪಸ್ವರವು ಅನಿವಾರ್ಯವಾದರೂ ವಿದ್ಯಾ ಪ್ರಜಾಸದಂತಹ ಘನಕಾರ್ಯಗಳು ಉಪಾಧ್ಯಾಯರಿಂದ ನಿರ್ವಹಿಸಲ್ಪಡಬೇಕು, ಇಲ್ಲವಾದರೆ ಕರ್ತವ್ಯಲೋಪಕ್ಕಾಗಿ ಭರ್ತ್ಸನೆ ಇವು ತೀರಾ ಸಾಮಾನ್ಯ. ಪ್ರಚಾರ ಮಾಡಿದರೂ ಅದರಿಂದ ಸಶ್ಚರಿತಾವಿಲ್ಲ. ತಮ್ಮ ಒಳಿತಿಗೊ, ಲಾಭಕ್ಕೊ ಏನೋ ವ್ಯಾಪಾರಿಗಳಂತೆ ಪ್ರಜಾರಕ್ಕೆ ಅಧ್ಯಾಪಕ ಹೊರಟಿದ್ದಾನೆ ಎಂಬ ಅವಜ್ಞೇನೆ ಬೇರೆ. ಜನತೆಗೆ ಇವನ ಹಂಗು ದಾಕ್ಷಿಣ್ಯಗಳೇನೂ ಇಲ್ಲವಾದುದರಿಂದ ಮಾತು ನಡೆಯುವುದಿಲ್ಲ. ಅಧ್ಯಾಪಕನಿಗೆ ಸಹಾಯಕವಾಗಿ ಅಧಿಕಾರವಿರಲೀ, ದರ್ಪವಿರಲೀ, ಧನವಿರಲೀ ಇರುವುದಿಲ್ಲ. ಕೊನೆಗೆ ಇವನು ಊರಪರ ಕಣ್ಣಿಗೇ ಕಸವಾಗುತ್ತಾನೆ ಎಂಬುದು ಅನುಭವದ ಮಾತು. ಇನ್ನೊಂದು ನ್ಯಾಯಸ್ಥ ಸಮಸ್ಯೆ–ಉಪಾಧ್ಯಾಯ ಎಂಬ ವ್ಯಕ್ತಿ ವಿದ್ಯಾಪ್ರಚಾರಕನೋ—ಯಾ–ಶಿಕ್ಷಕನೆನೊ, ಇವೆರಡೆ ಬಾಡಿ ಇಲಾಖೆಯಲ್ಲಿ ಬರಬಾರದು ಎಂಬ ಪ್ರಜಾರಕ್ಕೆ –ಶಿಕ್ಷಕ ಎಂಬ ಎರಡು ಹುದ್ದೆಗಳನ್ನು ಹೊತ್ತವನೆನೊ? ಇತರ ಯಾವ ಸರಕಾರಿ ನೌಕರನ್ನು ಪ್ರಚಾರಕ್ಕೆ ಕಳುಹಿಸದೆ ಅವಕ್ಕಾಗಿ ಒಂದು ಕಾರ್ಯಕ್ರಮವನ್ನೇ ಬೇರೆ ಇರುವುದನ್ನು ಕಾಣುತ್ತೀವೆ ಗೋಡೆ ಗೋಡೆಗಳಲ್ಲಿ ಬಣ್ಣ ಬಣ್ಣದ ಚಿತ್ರುಗಳೇನು? ಸಿನೇಮಾ ಸ್ಲೈಡುಗಳೇನು? ರೇಡಿಯೊ ಕಾರ್ಯಕ್ರಮಗಳೇನು? ಸಭೆ ಭಾಷಣಗಳೇನು? ಆದರೆ ವಿದ್ಯಾ ಪ್ರಚಾರಕ್ಕೆ ಹರಕು ಅಂಗಿಯ ಕ್ಷಾರಕಾಯದ ಎಲುಬು ಗೂಡಿನ ಅಧ್ಯಾಪಕ!

ಇದರೊಂದಿಗೆ ಶಾಲೆಗಳಲ್ಲಿ ಮಕ್ಕಳಿಗಾಗಿ ಪಾಠೇತರ ಚಟುವಟಿಕೆಗಳನ್ನು ಮಾಡಿಸಬೇಕು. ಇದರ ಖರ್ಚಿಗಾಗಿ ಸಾರ್ವಜನಿಕರ ಮುಖವನ್ನು ಅವನು ನೋಡಬೇಕು. ಅವರುದರೂ ಎಷ್ಟು ಕೊಟ್ಟಾರು? ಬಂಡು ಎನ್ನೆಗೆ ಎಷ್ಟು ಪೋಷಣೆ ರಕ್ಷಣೆ ಸಿಕ್ಕೀತು? ವ್ಯವಹಾರದಲ್ಲಿ ಪ್ರಯೋಜನವೇ ಪ್ರಾಮುಖ್ಯ. ಉಪಾಧ್ಯಾಯನಿಂದ ವ್ಯಾವಹಾರಿಕ ಪ್ರಯೋಜನ, ಹೆಂಗು ಸಾರ್ವಜನಿಕರಿಗಿರುವುದಿಲ್ಲ. ಆದುದರಿಂದ ಅವರಿಂದ ಸಹಾಯವೂ ಶೂನ್ಯ; ಇದ್ದರೂ ಅತ್ಯಲ್ಪ; ಅದೂ ವಿಮನಸ್ಕತೆಯಿಂದ; ಅಲ್ಲೂ ಅಧ್ಯಾಪಕನ ಕೇಳಿಕೆಗಳಲ್ಲ; ಬೇಡಿಕೆಗೆ ಎಂಬ ಭಾವನೆ.

ಶಾಲೆಗೆ ಸಂಬಂಧಿಸಿದ ಕೆಲವೊಂದು ರಿಕಾರ್ಡುಗಳನ್ನು ತಯಾರಿಸುವಾಗ ಇಡೀ ಗ್ರಾಮದ ಜನಸಂಖ್ಯೆ ಜಾತೀವಾರಾಗಿ ತಃಬಿಸಬೇಕಾಗುವುದು. ಗ್ರಾಮದಲ್ಲಿ ನೆರ ಅಂಕೆಶಂಖ್ಯೆಗಳನ್ನು ಸಂಗ್ರಹಿಸುವ ಕೆಲಸ ಶಾಲೆಯ ಉಪಾಧ್ಯಾಯನಿಗೆ ಏಕೆ? ಬೇಕಾದರೆ ಅವನ್ನೆಲ್ಲ ಸಂಗ್ರಹಿಸುವಷ್ಟು ಬಿಡುವು ಅವನಿಗಿದೆಯೆ? ಇವನು ಅದಕ್ಕಾಗಿ ಮನೆಮನೆ ಆಲೆಯಬೇಕೆ? ರಿವಿನ್ಯೂ ಇಲಾಖೆಯಿಂದ ಆದನ್ನು ಪಡೆಯಬಾರದೇ? ಶಾಲೆಗೆ ಸಂಬಂಧಿಸಿದ ನಿಯಮಾವಳಿಯ ಆಡಂಬರವೇನು? ಕಟ್ಟಡ, ಮೂತ್ರದೊಡ್ಡಿ, ಬಾವಿ, ಹೂತೋಟ, ಆಟದ ಬಯಲು, ಕುಡಿಯುವ ನೀರಿನ ವ್ಯವಸ್ಥೆ–ಇವೆಲ್ಲ ಅಲ್ಲದೆ ಇನ್ನು ಏನೇನೊ—ಮೇಲೆ ಹೇಳಿದುದರಲ್ಲಿ ಒಂದೂ ಇಲ್ಲದ ಶಾಲೆಗೂ ಇರಬಹುದು; ಎಲ್ಲವೂ ಇರುವ ಶಾಲೆಗಳು ಇಲ್ಲವೇ ಇಲ್ಲ. ಹಾಗಿರುವಾಗ ಶಾಲಾ ನಿಯಮಾವಳಿಗಳಲ್ಲಿ ಇಂತಹ ಬಯಲಾಡಂಬರಗಳೇಕೆ? ಮತ್ತೆ ಅರ್ಥಹೀನವಾದ, ಉಪದ್ರವಕಾರಕವಾದ ವಿಹಿತಾಯತಿಗಳೇಕೆ? ಇಂತಹ ವಿವರಗಳನ್ನು ತಿಳಿಸುವಲ್ಲಿ ಉಪಾಧ್ಯಾಯನ ಕೆಲಸು ಹಿಂಡಿಹಿಂಡಿಯಾಗಿಲಿಕ್ಕಿಲ್ಲವೇ? ಮನೆಯಲ್ಲಿ ಜೀನಸು ಮುಗಿದಮ್ಮ ಗಂಟುರೇ ಬಂದಾಗಿನ ಬಡ ಸಂಸಾರಿಗರ ಸ್ಥಿತಿಯಂತಲ್ಲದೆ ಮತ್ತಿನ್ನೇನು?

ಮನೆ ಬಿಟ್ಟು ದೂರದೂರಿನ ಹಳ್ಳಿಗಳಲ್ಲಿ ದುಡಿಯುತ್ತಿರುವ ಉಪಾಧ್ಯಾಯನ ವಸತಿಗೆ ಅನುಕೂಲತೆಗಳಿರುವುದಿಲ್ಲ; ಬಾಡಿಗೆಗೆ ಮನೆ ಸಿಕ್ಕುಲಾರದೆ. ಪರರ ಕೈ ತುತ್ತಿಗೆ ಅಭಿಮಾನ ಶೂನ್ಯನಾಗಿ ಕಾಯುವೇಕಾಗುವುದು. ಅದೂ ಸಿಕ್ಕುವುದಾದರೆ, ಇಲ್ಲವಾದರೆ ಒಂದೊಟ್ಟೊ? ಆನಶನ ವ್ರತವೊ? ಆದರಲ್ಲೂ ಎಳೆಪ್ರಾಯದ ಅಧ್ಯಾಪಿಕೆಯ ಮಾನರಕ್ಷಣೆಗೆ ಯಾವ ಭದ್ರತೆ ಇದೆ? ಇದಿನ ಸ್ತ್ರೀ ಸ್ವಾತಂತ್ರ್ಯದ ಸಂಧಿಕಾಲದಲ್ಲಿ ಅವಳ ಸ್ಥಿತಿ ಚಿಂತಾಜನಕ.

ಸಹೃದಯರೇ, ಇವೆಲ್ಲವನ್ನೂ—ಅಲೋಚಿಸುವಾಗ ಅಧ್ಯಾಪಕವೃತ್ತಿ ಹೊಲಸು ಎನಿಸದೇ? ತನ್ನ ಮತ್ತು ತನ್ನ ವೃತ್ತಿಯ ಗೌರವವನ್ನೂ, ತನ್ನ ಜೀವನವನ್ನೂ ಕಾಪಾಡಿಕೊಳ್ಳಲಾರದ ಈ ಅಧ್ಯಾಪಕ ವೃತ್ತಿ ಜನ್ಮಜನ್ಮಾಂತರ ಪಾಪ ಸಂಚಯದ ಫಲವಾಗಿ ಬಂದಿರಬೇಕೇ? ಹಾಗೆ ಎನಿಸುವುದಿಲ್ಲವೇ? ತನ್ನ ನೌಕರರ, ಪ್ರಜೆಗಳ ಗೌರವನ್ನು ಸಮಾನವಾಗಿ ಕಾಪಾಡುವುದು ಸರಕಾರದ–ಯಾ ಸಂಬಂಧಿಸಿದವರ ಕರ್ತವ್ಯವೇ? ಪ್ರಜಾಪರಕಾರವಾದರೂ ತನ್ನ ಆಡಳಿತದಲ್ಲಿ ಇದನ್ನು ಕಾರ್ಯಗತಗೊಳಿಸಬೇಡವೇ? ಅಧ್ಯಾಪಕ ವೃತ್ತಿಗೆ ಕುಲೀನರು ಸುಶಿಕ್ಷಿತರು ಕಾಲಿಟ್ಟಾಡನೆಯೇ ಹೀಗಾದರೆ? ಹಾಗಾದರೆ ಮುಂದಿನ ಅಧ್ಯಾಪಕರ ಸ್ಥಿತಿ ಹೇಗಾಗಬಹುದು? ಇನ್ನೆ ಅಧ್ಯಾಪಕರಲ್ಲಿ ಪೆಗೆಯಾಪತ್ತಿನ ಅತೃಪ್ತಿ ಪ್ರಜ್ವಲಿಸದೇ? ಅಧ್ಯಾಪಕರ ವೈಕ್ತಿಗತ ಸಮಸ್ಯೆಗಳು ಇನ್ನೂ ಹಲವಿವೆ. ಮುಂದೆ ಎಂದಾದರೂ ಚರ್ಚಿಸೋಣ.

—ಪಿ. ಗೋಪಾಲಕೃಷ್ಣ ಕುದ್ದಾಣಾಯ, ಇರ್ದೆ.

# ಭೂ-ಸುಧಾರಣೆ

**ನ್ಯಾಯವಾದ ಮತ್ತು ಶಾಂತಿಯುತವಾದ ಕಾನೂನಿನ ಬಚ್ಚ ಯಾಗಲಿ**

* *

**ಧನಿ=ವಕ್ಕಲುಗಳೊಳಿಗೆ ವೈಷಮ್ಯವನ್ನು ಹರಡಿಸಿರುವ ಇಂದಿನ ವಾತಾವರಣ ಶೀಘ್ರವೇ ತಿಳಿಯಾಗಲಿ**

ಅಧಿಕಾಹಾರೋತ್ಪತ್ತಿ, ನಿರುದ್ಯೋಗ ನಿವಾರಣೆ ಮತ್ತು ಆರ್ಥಿಕ ಸಮಾನತೆಗಳ ಮೂರು ಮುಖ್ಯ ಧ್ಯೇಯಗಳನ್ನಿಟ್ಟುಕೊಂಡು ಸಮಾಜವಾದೀ ರಾಷ್ಟ್ರ ನಿರ್ಮಾಣದ ಕಡೆಗೆ ಭರದಿಂದ ಹೆಜ್ಜೆಯಿಡುವುದಾಗಿ ಸಾರಿದ ನಮ್ಮ ಜನತಂತ್ರ ರಾಜ್ಯವು ಮೈಸೂರು ಪ್ರಾಂತ್ಯದಲ್ಲೊಂದು ಭೂಸುಧಾರಣಾ ಸಮಿತಿಯನ್ನು ನೇಮಿಸಿ ಆ ಮೂಲಕ ಈ ಧ್ಯೇಯಗಳ ಸಾಧನೆಗಾಗಿ ಹೊಂಟಿರುವುದು ಸ್ವಾಗತಾರ್ಹವಾದುದೇ. ಎಂದಿನ ವರೆಗೆ ಹೊಲದಲ್ಲಿ ಗೇಯುವ ರೈತನಿಗೆ ಆ ಹೊಲದ ಮೇಲೆ ಒಂದುರೀತಿಯ ಅಧಿಕಾರವಿರುವುದಿಲ್ಲವೋ ಅಂದಿನ ತನಕ ನಮ್ಮ ಅಧಿಕಾಹಾರೋತ್ಪತ್ತಿಯ ಆ ಉತ್ಪತ್ತಿಯ ಹೆಚ್ಚಳದ ಯಾವ ಕಾರ್ಯಕ್ರಮವು ಪ್ರತ್ಯಕ್ಷ ಫಲದಾಯಕವಾಗಲಾರದು. ಬದಲಿಗೆ ಅದು ಕೇವಲ ಪುಸ್ತಕದ ಬದನೆಕಾಯಿಯಾಗಿಯೇ ಉಳಿಯುವುದು. ಉತ್ಪತ್ತಿಯನ್ನು ಜಿಗಿಸುವುದರಲ್ಲಿ ಪ್ರಮುಖ ಮತ್ತು ಕೇಂದ್ರ ಸ್ಥಾನದ ಪಾತ್ರವು ವ್ಯವಸಾಯಗಾರನದೇ. ಏರುತ್ತಿರುವ ಜನಸಂಖೆಯ ಪ್ರಮಾಣದಲ್ಲಿ ಹೊಲ್ಯಗಳ ಸಂಖ್ಯೆಯೂ, ಹಾಗೆಯೇ ರೈತಸಂಖ್ಯೆಯೂ ಅಭಿರುಚಿಯೂ ವೃದ್ಧಿಯಾದರೆ ಮಾತ್ರ ಇವೆಲ್ಲ ಸಾಧ್ಯವೆಂಬುದು ಅಕ್ಷರಶಃ ಸತ್ಯ. ಭೋಳು ಗುಡ್ಡವಾದರೂ ಅದು ತನ್ನದೆಂಬ ಮಮತೆ ಆ ನೆಲದ ಮೇಲೆ ಹುಟ್ಟಿಕೊಂಡರೆ ಅದನ್ನಾತ ಬಂಗಾರದ ಬಯಲಾಗಿ ಪರಿವರ್ತಿಸಿಯಾನು ತನ್ನ ಕಾಯಕಕ್ಲೇಶದಿಂದ ಕಡಿದು ಕೊಚ್ಚಿ ಮಾಡಿದ ಹೊಲದ ಮೇಲೆ ನೆಟ್ಟು ನೀರೆರೆದು ಬೆಳೆಸುವ ಗಿಡಮರಗಳ ಮೇಲೆ ಆತನಿಗೆ ಅಧಿಕಾರ ಏದ್ದರೆ ಮಾತ್ರ ಆ ಕಾರ್ಯದಲ್ಲಿ ಆತ ಅಭಿರುಚಿ ತೋರಿಸಿಯಾನು. ಆದ್ದರಿಂದ ಗೇಯುವ ನೆಲದ ಒಡೆತನ ಗೇಯುವ ರೈತನಿಗೆ ದೊರಕಬೇಕೆಂಬ ತತ್ವಕ್ಕೆ ಇಂದು ಮನ್ನಣೆ ದೊರಕಿದೆ.

ಕೇವಲ ಮಣ್ಣಿನ ಮೇಲೆ ಅಧಿಕಾರ, ಹಿಡುವಳಿಯ ಭದ್ರಟಿ ಮಾತ್ರ ಸಾಕಾಗಲಾರದು. ಸಕಾಲಿಕ ಸಹಾಯವನ್ನು ಸಹಾ ಸರಕಾರ ಸಲ್ಲಿಸಬೇಕು. ಬಾವಿ ತೋಡಲಿಕ್ಕೆ, ಗೊಬ್ಬರ ಬೀಜಗಳಿಗೆ ಸರಕಾರ ಸಾಲದ ರೂಪದಲ್ಲಿ ಸಹಾಯವನ್ನೂ ನೀಡಬೇಕು. ಪಂಪು ಸೆಟ್ಟುಗಳಿನ್ನು ಸಹಾ ಪೂರೈಸಬೇಕು. ಆದರೆ ಸಾಕಷ್ಟು ಭದ್ರತೆಯಿಲ್ಲದೆ ಸರಕಾರ ಸಾಲ ಕೊಡಲಾರದು. ಗೇಯುವ ಹೊಲ ಇತರರಿಂದಾದ ಮೇಲೆ ಧನಿಯು ಒಪ್ಪಿಗೆ ವಿನಹ ಸಾಲ ಸಿಗಲಾರದು. ಆದ್ದರಿಂದ ಭಾರತದ ಕಿಡಿ ರೈತ ಇಂದು ಈ ಯೋಜನೆಗಳ ಸಹಾಯವನ್ನು ಪಡೆಯಲಾರದ ಸ್ಥಿತಿಯಲ್ಲಿದ್ದಾನೆ. ಇದಕ್ಕೆ ಹೊಲದ ಮೇಲೆ ಆತನಿಗಾವ ಭದ್ರತೆಯೂ ಇಲ್ಲದಿರುವುದೇ ಕಾರಣ.

ಇದನ್ನು ಸರಕಾರ ಒಪ್ಪಿದೆ. ಕಾಂಗ್ರೆಸ್, ಸಿ. ಎಸ್. ಪಿ., ಕಮ್ಯೂನಿಸ್ಟ್ ಈ ಎಲ್ಲಾ ಪಕ್ಷಗಳೂ ಈ ಮಾತನ್ನು ಹೌದೆಂದು ಹೇಳುತ್ತಿವೆ. ಮೊನ್ನೆ ಆಂದರೆ ತಾ. 31ರಂದು ಕಾಂಗ್ರೆಸ್ ಕಾರ್ಯಕರ್ತರನ್ನುದ್ದೇಶಿಸಿ ಪಂಡಿತ ನೆಹರುಗಳು ಈ ಕಟು ಸತ್ಯವನ್ನೆ ಪುನರುಚ್ಚರಿಸುತ್ತಾ ಹೀಗೆಂದಿದ್ದಾರೆ. "ಭೂಸುಧಾರಣೆಯು ಗತಿ ಅತಿ ನಿಧಾನಗೊಂಡುದು ಹೆಚ್ಚಿನ ಸಂತಾಪದಾಯಕ. ಇನ್ನಾದರೂ ಪ್ರಗತಿಪರ ಭೂ ಸುಧಾರಣೆಗಳು ಶಾಸನರೂಪದಲ್ಲಿ ಕಾರ್ಯರೂಪಕ್ಕೆ ಬರಬೇಕು. ಇದಕ್ಕಾಗಿ ಕಾಂಗ್ರೆಸು ಹೆಚ್ಚಿನ ಆಸ್ಥೆಯಿಂದ ದುಡಿಯಬೇಕು. ಉಳುವವನಿಗೆ ವಿಶೇಷ ಸೌಲಭ್ಯವನ್ನು ಒದಗಿಸಿಕೊಡದಿದ್ದರೆ ವ್ಯವಸಾಯದ ಉತ್ಪಾದನೆ ಎಂದಿಗೂ ಅಭಿವೃದ್ಧಿಯಾಗದು. ಮತ್ತು ಅವನಲ್ಲಿಯ ಕಾರ್ಯತತ್ಪರತೆ ಸಹ ಬಲಿತುಕೊಳ್ಳುವುದಿಲ್ಲ." ಮಾತ್ರವಲ್ಲ ನಮ್ಮ ಎಲ್ಲಾ ಪ್ರಮುಖ ಪಕ್ಷಗಳು ಕಳೆದ ಚುನಾವಣೆಯ ಕಾಲಕ್ಕೆ ಹೊಗಡಿಸಿದ ಘೋಷಣೆಗಳೂ ಕೃಷಿಕ-ವಕ್ಕಲಿಗೆ ಸುಖವನ್ನು ತಂದುಕೊಡುತ್ತೇವೆಂದು ಸಾರುತಿದ್ದುವು. ಚುನಾವಣಾ ಸಭೆಗಳಲ್ಲಂತೂ ಈ ಪಲ್ಲವಿಗಳನ್ನು ಹಾಡಿದ್ದಾರೆ; ಕೂಗಿದ್ದಾರೆ ಅಂದಮೇಲೆ ಎಲ್ಲರೂ ಒಪ್ಪತಕ್ಕ ಈ ತತ್ಕಾಲದ ಕಾರ್ಯಾಚರಣೆಗೆ ವಿಳಂಬವೇಕೆಂದು ಅರ್ಥವಾಗಲಾರದು.

ಧನಿಕ ವರ್ಗದವರಲ್ಲಿ ಕೆಲವರು ಭೂಸುಧಾರಣೆಯೆಂದೊಡನೆ ಅದೇಕೋ ಒಂದು ರೀತಿಯ ವೈಮನಸ್ಸನ್ನು ತಾಳುತ್ತಾರೆ. ಯಾವ ಪಕ್ಷಕ್ಕೆ ಸೇರಿದವರಾದರೂ ಭೂಸುಧಾರಣೆ ಎಂದೊಡನೆ ಎಲ್ಲವನ್ನೂ ಸಂಶಯಪಟ್ಟು ತಮ್ಮದೇ ಆದ ಧನಿಕರ ಪಕ್ಷವನ್ನು ಕಟ್ಟಲು ತೊಡಗುತ್ತಾರೆ ಪ್ರತ್ಯಕ್ಷವಾಗಿ ಅಲ್ಲದಿದ್ದರೂ ಪರೋಕ್ಷವಾಗಿಯಾದರೂ ಸಹಾಯ ಮಾಡುತಿದ್ದಾರೆ. ಎಂಬ ಆಪಾದನೆ ಕೇಳಿಬರುತ್ತಿದೆ.

ಕಾಲವು ಬದಲಾಗುತ್ತಿದೆ ಎಂಬ ಸತ್ಯವನ್ನು ನಮ್ಮ ಧನಿವರ್ಗದವರು ಅರಿತುಕೊಳ್ಳಬೇಕು. ಸಾಮ್ರಾಜ್ಯ ಶಾಹಿ, ಸಂಸ್ಥಾನಿ ಆಡಳಿತೆ, ಜಹಗೀರು ಪದ್ಧತಿಗಳೆಲ್ಲವೂ ಈ ಕಾಲಚಕ್ರದ ಉರುಳಾಟಕ್ಕೆ ಸಿಕ್ಕಲೇಬೇಕಾಯಿತು ಎಂಬುದನ್ನು ತಿಳಿದುಕೊಂಡು ಉದಾರ ಹೃದಯಂಗಮಬೇಕು. ಶಾಂತಿಯಿಂದಾಗುವ ಕಾರ್ಯವನ್ನು ಕ್ರಾಂತಿಯಿಂದಲೇ ಆಗುವಂತೆ ಅನುವು ಮಾಡಬಾರದು. ದುಡ್ಡುಕೊಟ್ಟು ಭೂಮಿಯನ್ನು ಪಡೆದುಕೊಂಡ ಭೂಮಾಲಿಕನ ಭಂಡವಾಳವನ್ನು ಸರಕಾರವೂ ಜನತೆಯೂ ಒಪ್ಪಬೇಕು. ಭೂಮಾಲಿಕರಿಗೆ ಸಲ್ಲುವ ಗೇಣಿಯೆಂಬುದು ಆತನು ವಿನಿಯೋಗಿಸಿದ ನಿಧಿಗೆ ದೊರಕುವ ಬಡ್ಡಿಯೆಂಬ ತತ್ವವನ್ನು ಎಲ್ಲರೂ ಒಪ್ಪಿಕೊಳ್ಳಬೇಕು.

ಸರಕಾರ ಆದಷ್ಟು ಬೇಗನೇ ಭೂಸುಧಾರಣೆಯನ್ನು ಬಳಕೆಗೆ ತಂದು ಕೃಷಿಕ—ವಕ್ಕಲುಗಳಲ್ಲಿ ಹಿಡುವಳಿಯ ಮೇಲೆ ಭದ್ರತೆಯೂ, ಧನಿಗೆ ನ್ಯಾಯ ಗೇಣಿಯು ಸಿಗುವಂತೆ ಶಾಸನವನ್ನು ಶೀಘ್ರವೇ ತರಬೇಕು. ಇಲ್ಲದಿದ್ದರೆ ಇದು ಧನಿ-ವಕ್ಕಲುಗಳ ಮನಸ್ಸನ್ನು ಕದಡಿಸುತ್ತಾ ಹೋಗುವ ವಿಷವೈಷಮ್ಯವಾಗಬಹುದು ಎಷ್ಟು ತೀವ್ರ ಈ ಕಾನೂನು ಬಳಕೆಗೆ ಬರುವುದೋ ಅಷ್ಟು ರಾಷ್ಟ್ರಕ್ಕೆ ಹಿತವಾಗುವುದು ಈ ಭಾರಿ ಈ ಕಾರ್ಯವು ಆಗಲೇ ಮುಗಿಯಬೇಕು. ಈ ಸಮಿತಿ ರಚನೆ ಈ ಸಂಚಾರ ಇವುಗಳೆಲ್ಲಾ ಕಾಲಕರಣ ಮಾಡಲು ಉಪಾಯಗಳು ಎಂದು ಜನರಾಡದಂತೆ ಜಾಗ್ರತೆ ವಹಿಸಬೇಕು. ಆದ್ದರಿಂದ ನಮ್ಮ ಮುಂದಾಳುಗಳು, ಸರಕಾರ, ಶಾಸನಾ ಸಭಾ ಸದಸ್ಯರು ಈ ಇತ್ಯರ್ಥ ಈ ಬಾರಿ ಆಗಿಯೇ ತೀರಬೇಕೆಂದು ನಿರ್ಧರಿಸಿ ಪ್ರಯತ್ನಿಸಬೇಕು

ಸಮಿತಿಯ ರಚನೆ, ಮತ್ತು ಸಂಚಾರ ವಾರಂಭವಾದೊಡನೆ ನಮ್ಮ ಧನಿಕ ವರ್ಗದವರು ಸಾಕಷ್ಟು ಪ್ರತಿನಿಧಿತ್ವವನ್ನು ವಹಿಸಿದ್ದಾರೆ. ಕೃಷಿಕ-ವಕ್ಕಲುಗಳು ಹಾದು ಈ ಸಮಿತಿಯ ಮುಂದೆ ಬಂದು ಅಭಿಪ್ರಾಯ ಕೊಡುವ ಅಥವಾ ಪ್ರಶ್ನಾವಳಿಯನ್ನು ಬರೆದು ಗಳುಹಿಸುವ ಯೋಗ್ಯತೆಯಲ್ಲಿಯೂ, ಅನುಕೂಲತೆಯಲ್ಲಿಯೂ ಹಿಂದುಳಿದಿದ್ದಾರೆ. ಮಾತ್ರವಲ್ಲ ಇದರಿಂದ ಧನಿಕ ವರ್ಗದವರು ಸಿಟ್ಟೆಗೇಬಹುದೆಂಬ ಭೀತಿಯೂ ಅವರನ್ನು ಕಾಡಿಸದಿಲ್ಲ. "ನನ್ನ ಭೂಮಿಯ ಮೇಲೆ ನನಗೆ ಹಕ್ಕು ಬೇಕು" ಎಂದು ಹೇಳುವ ಪರಿಸ್ಥಿತಿಯು ಇಂದು ನಮ್ಮ ವಕ್ಕಲುಗಳಲ್ಲಿ ಶೇಕಡಾ ಒಂದೆರಡು ಮುಂದಿಯೂ ಇಲ್ಲ. ಈ ವಿಷಯವನ್ನು ಸಹಾ ಅಂದರೆ ಕೃಷಿಕ-ವಕ್ಕಲುಗರ ನಿಸ್ಸಹಾಯಕತೆಯನ್ನು ಸಹಾ ಮನಗಂಡು, ಸಮಿತಿಯವರು ತಮ್ಮ ಪ್ರವಾಸವನ್ನು ರೂಪಿಸಬೇಕು

ಪ್ರಾಮುಖ್ಯವಾಗಿ ಈ ವಿಷಯಗಳ ಕಡೆಗೆ ಸಮಿತಿ ಗಮನವಿಯಬೇಕು.

1. ಉತ್ಪತ್ತಿಯ ಮೇಲೆ ಶೇಕಡಾ ೨೫ ರಿಂದ 33½ಗೆ ಮಿಕ್ಕದ ಗೇಣಿ ನಿರ್ಣಯ.

2. ಚಿಕ್ಕ ಭೂಮಾಲಿಕರಿಗೆ ೫ ಮೂವರ ಒಂದು ಕುಟುಂಬಕ್ಕೆ ೫ ಎಕ್ರೆ ನಿಯಂ ನಾಗುವಳಿ.

3. ಜೀರೇನೂ ಉತ್ಪತ್ತಿಯಿಲ್ಲದವನಿಗೆ ಮಾತ್ರ ಸ್ವಾಧೀನ ಪಡೆಯುವ ಅರ್ಹತೆ.

4) ರಶೀದಿಯನ್ನು ಕೊಡದಿದ್ದರೆ ಜುಲುಮಾನೆ.

ಹಿಡುವಳಿಯ ಭದ್ರತೆಗೆ ಈ ಎರಡರಲ್ಲೊಂದು ಮಾರ್ಗವನ್ನನುಸರಿಸುವುದು ಸೂಕ್ತವಾಗಬಹುದು.

1) ಯೋಗ್ಯ ಗೇಣಿ ನಿರ್ಣಯವಾದ ಮೇಲೆ ಕೃಷಿಕ ವಕ್ಕಲಿಗೆ ಮೂಲಗೇಣಿ ಹಕ್ಕನ್ನು ಕೊಡುವುದು.

ಅಥವಾ

ನಿರ್ದಿಷ್ಟ ಅವಧಿ (ಸುಮಾರು 20 ವರುಷ) ಯೊಳಗೆ. ಪರಿಹಾರ ಕಟ್ಟಿಸಿ ಧನಿ ತನವನ್ನು ರದ್ದುಗೊಳಿಸುವುದು.

ಈ ಪರಿಹಾರವನ್ನು ಸರಕಾರವೇ ಬೋಂಡು ರೂಪದಲ್ಲಿ ಸಲ್ಲಿಸಿ ಧನಿಗಳ ಜೀವನೋಪಾಯಕ್ಕೆ ಒಂದು ದಾರಿಮಾಡಿಕೊಟ್ಟು ವಕ್ಕಲುಗಳಿಂದ ತೀರ್ವೆಯ ಜೊತೆಗೆ ವಸೂಲುಮಾಡಬೇಕು.

ಸರಕಾರವು ಪ್ರಕಟಿಸಿದ ಪ್ರಶ್ನಾವಳಿಯು ಹಳ್ಳಿಯ ರೈತರಿಗೆ ಸಿಗುವಂತೆಯೂ ಇಲ್ಲ. ಅವುಗಳನ್ನು ಉತ್ತರಿಸಲು ಅವರಿಗೆ ಸಾಧ್ಯವೂ ಇಲ್ಲ. ಜನತೆಯ ಅಭಿಪ್ರಾಯವನ್ನು ನಮ್ಮ ವಂದಾಳುಗಳು ತಿಳಿದಿದ್ದಾರೆ, ಸರಕಾರವೂ ಅರಿತಿದೆ. ನ್ಯಾಯ ಸಿಗುವಂತೆ ಸ್ವಾರ್ಥವನ್ನು ಮರೆತು ದೇಶದ ಹಿತದೃಷ್ಟಿಯಿಂದ ಉತ್ಪತ್ತಿಯ ಹೆಚ್ಚಳ, ಆರ್ಥಿಕ ಅಭಿವೃದ್ಧಿಗಳಿಗಾಗಿ ದುಡಿಯುವುದೇ ಮುಖ್ಯ. ಈ ಪವಿತ್ರ ಧ್ಯೇಯಕ್ಕಾಗಿ ದುಡಿಯುವ ದೊಡ್ಡ ಮನಸ್ಸಿನ ವಿಶಾಲ ಬುದ್ಧಿ ನಮ್ಮವರಿಗೆ ಬಂದು ಧನಿ-ವಕ್ಕಲುಗಳ ಮಧ್ಯೆ ಹರಡಿಬಿಟ್ಟಿರುವಷ್ಟಿನ ವಿಷವಾಯು ಇನ್ನಾದರೂ ಹಾರಿಹೋಗಲಿ.

—ಜೀ. ಬಾಂ




**ಕುಮಾರಿ ಬಿಸ್ಕೆಗಳು**

**Govt. Regd.**

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ.ಪಿ.ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತಿದೆ!!

**P. DEVEE & Co.** (N. J.) CALCUTTA—40

ಸ್ವಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.



**ಸ್ವಾತಂತ್ರ್ಯ ಮತ್ತು ಸಂಸ್ಕೃತಿ**

ಮೂಲ ಲೇಖಕ: ಜಾನ್ ಡ್ಯೂಯಿ

ಅನುವಾದಕ: ಕು. ಶಿ. ಹರಿದಾಸ ಭಟ್ಟ

'ಸ್ವಾತಂತ್ರ್ಯ ಎಂದರೇನು? ಅದನ್ನು ಜನ ಬೆಲೆಯುಳ್ಳದ್ದೆಂದು ಭಾವಿಸಲೇನು ಕಾರಣ? ಸ್ವಾತಂತ್ರ್ಯದ ಆಪೇಕ್ಷೆ ಮನುಷ್ಯ ಸ್ವಭಾವದಲ್ಲಿಯೆ ಅಡಗಿರುವುದೇ ಅಥವಾ ವಿಶೇಷ ಪರಿಸ್ಥಿತಿಯಿಂದ ಉತ್ಪನ್ನವಾಗುವುದೆ? ಅದು ನಮ್ಮ ಲಕ್ಷ್ಯವೋ ಅಥವಾ ಇತರ ವಿಷಯಗಳ ಸಾಧನೆಗೆ ಉಪಕರಣವೋ? ಸ್ವಾತಂತ್ರ್ಯವನ್ನು ಪಡೆದ ಮೇಲೆ ಜೊಣಗೆಗಾರಿಕೆಯುಂಟೇ ಇಲ್ಲವೆ? .....' ಈ ಮೊದಲಾದ ಪ್ರಶ್ನೆಗಳಿಗೆ ಪ್ರಸಿದ್ಧ ದಾರ್ಶನಿಕರೂ, ಶಿಕ್ಷಣತಜ್ಞರೂ ಆದ ಜಾನ್ ಡ್ಯೂಯಿಯವರ ಉತ್ತರವನ್ನು ಅಮೇರಿಕದ ಈ ಜನಪ್ರಿಯ ಗ್ರಂಥದಲ್ಲಿ ನೋಡಬಹುದು.

ಪುಟ: ೮+೧೮೮. ಬೆಲೆ: ಎರಡು ರುಪಾಯಿ.

ಪ್ರಕಾಶಕರು:

ನವಯುಗ ಎಂಟರ್‌ಪ್ರೈಸ್, ಲಿಮಿಟೆಡ್, ಉಡುಪಿ.


Edited, Printed & Published by K. H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment.

# ನವಯುಗ

ಸಂಪುಟ ೩೬
VOL. 36

13—6—1957

ಸಂಚಿಕೆ ೪೦
NO. 40

## ಆಹಾರದ ಸಮಸ್ಯೆ

### ವಸ್ತು ಸ್ಥಿತಿಯನ್ನರಿತು ತಕ್ಕ ಮದ್ದನ್ನು ನಮ್ಮ ರಾಜಕಾರಣಿಗಳರೆಯಲಿ.

"ಎಲ್ಲರೂ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ" ಎಂದು ನಾಲ್ಕು ಶತಮಾನಗಳ ಹಿಂದೆ ಕನಕದಾಸರು ಹಾಡಿದ್ದರು. "ಹೊಟ್ಟೆಬಟ್ಟೆಗಿಲ್ಲದೆ ಮಾನವನು ಕೆಟ್ಟ" ಎಂದು ಜನರು ಅಂದು ಕೊಳ್ಳುತ್ತಿದ್ದರಿರಿ. ಪ್ರತಿಯೊಬ್ಬನೂ ಕಾಯಕಷ್ಟ ಮಾಡುವುದು ಕೇವಲ ಹೊಟ್ಟೆ ಬಟ್ಟೆಗಳ ಸಲುವಾಗಿ. ಅವನ್ನು ಸಂಪಾದಿಸಿ ಮರ್ಯಾದೆಯಿಂದ ಜೀವಿಸುವಷ್ಟು ದಿನ ಬಾಳಬೆಕು ಎನ್ನುವುದೇ ಸಾಮಾನ್ಯ ಮಾನವನ ಜೀವನೋದ್ದೇಶ. ಎಂದರೆ, ಹೊಟ್ಟೆ ಸಾಡಿಗಾಗಿಯೇ ಜನರು ಮಾಡುವ ಸಕಲ ಕಾರ್ಯಗಳೂ, ಉದ್ಯೋಗವೂ. ಅದೊಂದಿಲ್ಲವಾದರೆ, ಈ ಪ್ರಪಂಚವೇ ಬಾಳುವುದು ದುಸ್ತರ.

ಹೊಟ್ಟೆಯ ಪೆಟ್ಟನ್ನು ಯಾವನೂ ಸಹಿಸಲಾರ. ಒಂದಲ್ಲ ಒಂದು ವಿಧದಿಂದ ಅದನ್ನು ಹೊರೆದುಕೊಳ್ಳಲೇಬೇಕು. ಉದರದೇವನ ಸೇವೆಯನ್ನು ಮಾಡದಿರವ ಈಗಿನ ಕಾಲದಲ್ಲಿರಲಾರ. "ಹುಟ್ಟಿಸಿದ ದೇವನು ಹುಲ್ಲು ಮೇಯಿಸಲಾರ" ಎಂಬ ಮಾತಿನಲ್ಲಿ ಇಂದು ವಿಶ್ವಾಸವಿಲ್ಲ; ತನ್ಮ್ಮ ಮೇಲೆಯೇ ತಮಗೆ ವಿಶ್ವಾಸವಿಲ್ಲದವರು ಯಾರೋ ಯಾವ ಕಾಲದಲ್ಲೋ ಹೇಳಿದರೆಂದು ವರದಿಯಾದ (?) ಮಾತುಗಳನ್ನು ಗ್ರಹ್ಯದೃಷ್ಟಿಯಿಂದ ನೋಡಿದರೆ ಅದಕ್ಕಾಗಿ ಆಶ್ಚರ್ಯಪಡಬೇಕಾಗಿಲ್ಲ. ಆದುದರಿಂದಲೇ "ಹೊಟ್ಟೆಯೇ ದೇವರು" ಎನ್ನುವ ತತ್ವಜ್ಞಾನಿಗಳೂ ಬಹಳ ಹಿಂದೆಯೇ ಹುಟ್ಟಿದ್ದರು. ಅಗ್ನಿಯು, ಪಾರ್ಥನೊಡನೆ ತನ್ನ ಜಠರಾಗ್ನಿಯ ರೋಗವನ್ನು ಕಳೆದುಕೊಳ್ಳಲು ಖಾಂಡವವೆಂಬ ಇಂದ್ರೋದ್ಯಾನವನ್ನೇ ಕಬಳಿಸಲು ಕೇಳಿಕೊಂಡನೆಂದಾಗ ಈ "ಅಗ್ನಿ"ಗೆ ವ್ಯಾಟೀನಕಾಲದಿಂದಲೂ ಒಂದು ಮಹತ್ವವಿದ್ದಿತೆಂದೆ ಯಾರೂ ಹೆದರಬೇಕಾಗಿಲ್ಲ.

ವಿಶ್ವದ ಕೆಲವೊಂದು ರಾಷ್ಟ್ರಗಳಲ್ಲಿ ದ್ದಂತೆ ಇದೀಗ ಭಾರತದಲ್ಲಿ ಸುತಃ ಈ "ಕ್ಷುಧಾಶಾಂತಿ"ಯ ಅಭಾವವುಕಂಡುಬರುತ್ತಿದೆ. ದೇಶದಲ್ಲಿ ಆಹಾರಧಾನ್ಯಗಳ ಕೊರತೆ ಒಂದೇ ಸವನೆ ಪ್ರದರ್ಶನಕ್ಕೆ ಬಂದಿದೆ. ಒಂದೆಡೆ ಅತಿವೃಷ್ಟಿಯಿಂದ ಬೆಳೆಗಳು ನೆರೆನೀರಲ್ಲಿ ಕೊಚ್ಚಿಹೋಗಿ ವಿಶಾಲಸಾಗರದಲ್ಲಿನ ಮೀನುಗಳ ಉದರ ಪೋಷಣೆಯನ್ನು ಮಾಡಿದ್ದರೆ ಇನ್ನೊಂದೆಡೆಯಲ್ಲಿ ಬಿತ್ತಿದ ಬೀಜ ಮೊಳೆತು ಬೆಳೆಯಲು ಸಾಕಷ್ಟು ವೃಷ್ಟಿಯಿಲ್ಲದೆ, ಅನಾವೃಷ್ಟಿಯ ದೆಸೆಯಿಂದಾಗಿ ಸೂರ್ಯ ದೇವನ ಕರತಾಪಕ್ಕೊಳಗಾಯಿತು. ಭಾರತದಂತಹ ವಿಶಾಲ ವಿಸ್ತೀರ್ಣ ದೇಶಕ್ಕೆ, ವಿವಿಧ ಹವಾಮಾನ, ಭೂಸ್ವರೂಪಗಳಿಂದ ಕೀರ್ತಿಪಡೆದ ರಾಷ್ಟ್ರಕ್ಕೆ ಇದೊಂದು ವಿಶೇಷ ನವ್ಯವೆನ್ನಿಸಿ ಬರುವುದಿಲ್ಲ. ದೇಶದ ಒಂದಲ್ಲ ಒಂದೆಡೆಯಲ್ಲಿ ಪ್ರತಿ ವರ್ಷವೂ ಇದೇ ತರದ ಮಳೆ ರಾಯನ ಪ್ರಕೋಪ-ವಿಕೋಪಗಳು ಕಂಡು ಬರುತ್ತಿವೆ.

ಇನ್ನು ದಿನವೊಂದಕ್ಕೆ ೧೩ ಸಾವಿರದಂತೆ ಬೆಳೆಯುತ್ತಿರುವ ಜನಸಂಖ್ಯೆ ನಮ್ಮ ಜನಬಲಗಳಿಸಿದ ದೇಶದ್ದು. ಸಿಡಬಾಂಬಿಯೂ ಭಾರತದ ಶಕ್ತಿಯೆಂದರೆ, ಜನಬಲ. ಈ ಹೆಚ್ಚುತ್ತಿರುವ ಜನಸಂಖ್ಯೆಯು ಸ್ವಯಾಣದಲ್ಲಿ ಆಹಾರಧಾನ್ಯಗಳ ಉತ್ಪಾದನೆಯು ಹೆಚ್ಚುವುದಿಲ್ಲವೆಂಬುದುಸರ್ವಜನಿತವಿದೆ. ಭಾರತದ ವಿಸ್ತೀರ್ಣವು ಹೆಚ್ಚಲಾರದು. ಸರಾಸ್ಟ್ರದ ಮೇಲೆ ಧಾಳಿಯಿಡುವ ಯೋಚನೆ ಶಾಂತಿಪ್ರಿಯ ಭಾರತಕ್ಕಿಲ್ಲ. ಸಮುದ್ರಂತಜನನ್ನ ಹಿಮ್ಮೆಟ್ಟಿಸುವ ಅಧುನಿಕ ಪರಶುರಾಮ ನವ್ಯ ಜನಿಸುವ ನೀರೀಕ್ಷೆಯಿಲ್ಲ. ಹೀಗಾಗಿ "ತೇನತ್ಯಕ್ತೇನ ಭುಂಜೀಥಾಃ" ಎಂಬಂತೆ ಪರಮಾತ್ಮ ಕೊಟ್ಟುದರಲ್ಲೆಯೇ ತೃಪ್ತಿಪಟ್ಟುಕೊಳ್ಳಬೇಕೆಂಬುದು ಸ್ವಯಂ ಸಿದ್ಧ.

ನಮ್ಮ ಇನಪ್ರಿಯ ಸರಕಾರವು ಕಡಿಮೆ ಭೂಮಿಯಲ್ಲಿ ಹೆಚ್ಚು ಆಹಾರ ಧಾನ್ಯಗಳನ್ನು ಬೆಳೆಯಿಸುವ ಗುರಿಯನ್ನಿಟ್ಟುಕೊಳ್ಳಬೇಕಾಗಿ ಬಂತು. ಒಂದು ಬೆಳೆತೆಗೆವಲ್ಲಿ ಎರಡು, ಎರಡರಲ್ಲಿ ಮೂರು ಹೀಗೆ ಅಧಿಕ ಬೆಳೆ ಬೆಳೆಯಲು, ಉತ್ತಮ ಬೀಜದಿಂದ, ಒಳ್ಳೆಯ ಗೊಬ್ಬರದ ಉಪಯೋಗದಿಂದ ಅಧಿಕ ಧಾನ್ಯಗಳನ್ನು ಬೆಳೆಸಲು ನಿರ್ಧರಿಸಿ, ತನ್ನ ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಕೃಷಿಗೆ ಧಾನ್ಯ ಸ್ವಾವಲಂಬನವನ್ನಿತ್ತಿತು. ಆದರಂತೆ ರೈತರಿಗೆ ತಮ್ಮ ಭೂಮಿಯಲ್ಲಿ ಕಬ್ಬು ಬೆಳೆಯಿಸಲು ತಕ್ಕ ನೀರಾವರಿ ಯೋಜನೆಗಳು, ಪಂಪು ಸೆಟ್ಟುಗಳು, ಕೆರೆ ಬಾವಿಗಳ ಸುಧಾರಣೆ, ಆಧುನಿಕ ಯಾಂತ್ರಿಕೋಪಕರಣಗಳು, ಬೀಜಾದಲ್ಲಿ ಹಣದ ಸಾಲ. ಹೀಗೆ ಎಲ್ಲವನ್ನೂ ಒದಗಿಸುವ ಮನಸ್ಸು ಮಾಡಿದರು ಇವೆಲ್ಲವುಗಳ ಪ್ರಯೋಜನವನ್ನು ಆದೆಷ್ಟು ಜನ ಪಡೆದುಕೊಂಡರೋ, ಸರಕಾರವ ಲೆಕ್ಕದಿಂದ ಆಹಾರ ಧಾನ್ಯಗಳ ಉತ್ಪತ್ತಿಯು ಅಧಿಕವಾಗಿದೆಯೆಂದು ತಿಳಿಯುತ್ತದೆ. ಕಲ್ಪಣಾಮಾವಾಗಿ, ದ್ವಿತೀಯ ಲೋಕಯುದ್ಧದ ಕಾಲದಲ್ಲಿ ಅನುಲಿ ಬಂದಿದ್ದ ನಿಯಂತ್ರಣವು ಶಿಥಿಲಗೆಂಡಿತು. ವಿನಿಯಂತ್ರಣದಿಂದಾಗಿ ಆಹಾರ ಧಾನ್ಯಗಳು ಧಾರಾಳವೆಂದರೆ ಇದು ನಿಜವಾದ ಅಭಾವವೆಂದು ಹೇಳಲಾಗುವುದಿಲ್ಲ. ಏಕೆಂದರೆ, ಹೇಳಿದ ಬೆಲೆಯನ್ನಿತ್ತರೆ ಸಾಕೆನಿಸುವಷ್ಟು ಅಕ್ಕಿಯಾಗಲೀ ಇತರ ಆಹಾರ ಧಾನ್ಯಗಳಾಗಲೀ ಪೇಟೆಯಲ್ಲಿ ದೊರೆಯುತ್ತದೆ. ೩೫ ರೂಪಾಯಿ ಕೊಡುವೆವೆಂದರೂ ಅಕ್ಕಿಯೇ ಸಿಗದ ಕಾಲವೊಂದಿತ್ತು. ಆದರೆ ಇಂದಿನ ಪರಿಸ್ಥಿತಿ ಆಹಾರದ ಅಭಾವವಲ್ಲ, ಅದರ ಬೆಲೆಯಲ್ಲಿ ಮಿತಿಮೀರಿದ ಏರಿಳಿತ. ಏರಿದ ಬೆಲೆಯು ಇಳಿಯದೆ ಏಗುತ್ತಲೇ ಹೋಗುತ್ತಿರುವುದು ಈ ವರ್ಷದ ವೈಶಿಷ್ಟ್ಯಗಳಲ್ಲೊಂದು.

ಈ ರೀತಿಯಲ್ಲಿ ಆಹಾರ ಧಾನ್ಯಗಳ ಬೆಲೆಯು ಏರುತ್ತಾ ಹೋದರೆ, ಭಾರತದಂತಹ ಅರೆಹೊಟ್ಟೆಯುಣ್ಣುವ ದರಿದ್ರ ನಾಡಿನಲ್ಲಿ ಬಡ ಜನರು ಹತಾಶರಾಗುವುದು ಸಹಜವೇ. ಜನತೆಯ ಕೂಗು ಸರಕಾರಕ್ಕೂ ಮುಟ್ಟಿತು. ರಾಜ್ಯ ಹಾಗೂ ಕೇಂದ್ರಸರಕಾರಗಳು ಬೆಲೆ ತಗ್ಗಿಸಲು ತಕ್ಕ ಕಾರ್ಯಕ್ರಮ ಕೈಗೊಳ್ಳುವ ಭರವಸೆಯಲ್ಲಿವೆ. ಈ ಸಲುವಾಗಿ ಲೋಕಸಭೆಯಲ್ಲಿ ಅಗತ್ಯಬಿದ್ದಲ್ಲಿ ಆಹಾರಧಾನ್ಯಗಳನ್ನು ಸರಕಾರಕ್ಕೆ ಸ್ವಾಧೀನಪಡಿಸಿಕೊಳ್ಳಲು ವಿಶೇಷ ಅಧಿಕಾರವೀಯುವ ಮಸೂದೆಯೊಂದು ಮಂಜೂರಾಯಿತು. ರಿಸರ್ವ ಬೆಂಕಿನವರು ಆಹಾರಧಾನ್ಯಗಳ ಭದ್ರತೆಯ ಮೇಲೆ ಕೊಡುವ ಸಾಲದ ಮೊಬಲಗಿನ ಕುರಿತಾಗಿ ಕೆಲವೊಂದು ನಿಯಮಗಳನ್ನು ಮಾಡಿದರು. ಇವು ಬೆಲೆತಗ್ಗಿಸುವ ವಿಧಾನಗಳಲ್ಲಿ ಒಂದು ಎಂದು ಆಹಾರ ಮಂತ್ರಿಗಳು ಹೇಳಿದರು. ಇದರ ಪರಿಣಾಮವನ್ನು ಮಾತ್ರ ಕಾದು ನೋಡಬೇಕಾಗಿದೆ.

ಈ ನಡುವೆ ಪಶ್ಚಿಮ ಬಂಗಾಳದ ಮಂತ್ರಿಗಳೊಬ್ಬರು ಭಾರತೀಯರು ಜೆಜ್ಜು ಜುಣ್ಣುತಿದ್ದಾರೆ ಅವರಿಗೆ ಅನಶ್ಯಕವಾಗಿದ್ದದಕ್ಕಿಂತಲೂ ಅಧಿಕ ಪ್ರಮಾಣದಲ್ಲಿ ಮಿತಿಮೀರಿ ತಿನ್ನುತ್ತಾರೆಂಬ ದೂರೊಂದನ್ನು ಹೊರಿಸಿದರು. ಇದು ಸತ್ಯವಿದ್ದರೂ ಇರಬಹುದು. ಆದರೂ ಕಳೆದ ಯುದ್ಧದ ಕಾಲದಿಂದ ಭಾರತೀಯರ ಆಹಾರದ ಪ್ರಮಾಣವು ಬಹಳ ಕಡಿಮೆಯಾಗಿದೆಯೆಂದು ವೈದ್ಯರುಗಳು ಹೇಳಬಹುದು.

ಪ್ರಥಮ ಯೋಜನೆಯಲ್ಲಿ ಕೈಗೊಂಡ ಕೆಲವೊಂದು ಅಭಿವೃದ್ಧಿಯ ಕಾರ್ಯಕ್ರಮಗಳು ಸಾಕಷ್ಟು ಫಲವಿತ್ತಿಲ್ಲ. ಇದರಿಂದಾಗಿ ಆಹಾರದ ಕೊರತೆಯು ಹೆಚ್ಚು ಸುಧಾರಿಸಲಾರದೆ, ನಾವು ತಾನ್ನೂ ಪರಾಂಬಿ

(ಇನ್ನೇ ಪುಟ ನೋಡಿರಿ)

RED CROSS

Needs your help in combating the threatened epidemic of

INFLUENZA

Segragate the patient, avoid congregation, consult the nearest doctor and inform the Health Officer of any 'flu in your house

*Space kindly donated by*

VIJAYA BANK, LIMITED.

## ಆಧ್ಯಾತ್ಮಿಕ ಸಾಧನೆ

# ಯೋಗಸಾಧಕ ಶ್ರೀ ಅರವಿಂದರ ಅಸಾಮಾನ್ಯ ಯೋಗಜೀವನ

ಭಾರತದಲ್ಲಿ ಮಾತ್ರವಲ್ಲ ಬಾಹ್ಯ ರಾಷ್ಟ್ರಗಳಲ್ಲಿ ಸಹ ಇಂದು ಜನರು ಶ್ರೀ ಅರವಿಂದರ ಹೆಸರನ್ನು ತಿಳಿದಿರುವರಲ್ಲದೆ ಅವರ ವಿಶಿಷ್ಟ ಜೀವನದರ್ಶನ ಮತ್ತು ಯೋಗಸಾಧನೆಯ ಪದ್ಧತಿಯನ್ನು ತಿಳಿಯಲು ಅಥವಾ ಸ್ವೀಕರಿಸಲು ಉತ್ಸುಕರಾಗಿದ್ದಾರೆ. ಶ್ರೀ ಅರವಿಂದರೊಬ್ಬರೆ ಯೋಗಿ, ಬಾಹ್ಯದೃಷ್ಟಿಯಿಂದ ಅವರೊಬ್ಬ ವಿರಾಟ್, ಮಾಲಿಕ ಪ್ರತಿಭಾಸಂಪನ್ನ, ದೇಶಪ್ರೇಮಿ, ಮಹಾಪಂಡಿತ, ಪುಣ್ಯ ಚರಿತರಾಗಿರುವ ಮಹರ್ಷಿ. ಆಂತರಿಕವಾಗಿ ಯೋಗೇಶ್ವರ, ಬ್ರಹ್ಮಭೂತ ಬ್ರಹ್ಮದರ್ಶಿ, ಬ್ರಹ್ಮಜ್ಞಾನಿ ಯೋಗಿ. ಅವರ ಯೋಗದರ್ಶನದ ಸ್ವರೂಪವು ಗತಾನುಗತಿಕ ಪಂಥದಿಂದ ವಿಭಿನ್ನವಾಗಿತ್ತು. ಬೇರೆ ಯೋಗಿಗಳಂತೆ ಶ್ರೀ ಅರವಿಂದರು ಜೀವನದ ಸುಖ-ದುಃಖ, ಸಾಮಾಜಿಕ-ರಾಜನೈತಿಕ, ಉತ್ಥಾನ-ಪತನ-ಸಮಗ್ರ ಜಾಗತಿಕ ವ್ಯಾಪಾರವು ತುಚ್ಛವೆಂದು ಅದರಿಂದ ವಿಮುಕ್ತರಾಗಿರಲಿಲ್ಲ; ಅಕಡೆಗೆ ಉದಾಸೀನರಾಗಿರಲಿಲ್ಲ. ಅವರ ಯೋಗದರ್ಶನದಲ್ಲಿ ಸಮಗ್ರ ವಿಶ್ವಚೇತನದ ಸ್ಪಂದನವು ಕಂಡುಬರುತಿತ್ತು. ಅವರ ಯೋಗತ್ವ ಎಲ್ಲವುಗಳ ಸಮನ್ವಯನಾಗಿತ್ತು. ಸಮಗ್ರ ಮಾನವ ಸಮಾಜದ ಸರ್ವಾಂಗೀಣ ಪೂರ್ಣತೆ ಅಥವಾ ವಿಕಾಸ, ಮನುಷ್ಯ-ಪ್ರಕೃತಿಯ ಆಮೂಲ ಪರಿವರ್ತನೆ, ಮನುಷ್ಯ ಜೀವನದಲ್ಲಿ ದಿವ್ಯ ಭಾವ ದಿವ್ಯ ಮೂರ್ತಿಯ ಸ್ಥಿರಾಸ್ಥ, ದಿವ್ಯೋತ್ಸಲಬ್ಧ ಅಥವಾ ಚರಮ ಸಾರ್ಥಕತೆಯ ಲಾಭವೇ ಅವರ ಯೋಗದ ಏಕಮಾತ್ರ ಉದ್ದೇಶವಾಗಿತ್ತು. ತನ್ನ ಆತ್ಮಶಕ್ತಿಯನ್ನು ಉತ್ತೇಯನ್ನು ಒದಗಿಸಿಕೊಳ್ಳಲು ಅವರು ಯೋಗಸಾಧನೆ ನಿರತರಾಗಿರದೆ ದಿವ್ಯಾತ್ಮನ ಅಂಶವಾದ ಮಾನವಾತ್ಮನಲ್ಲಿ ದಿವ್ಯ ಸಂಭಾವನೆಯ ವಿಕಾಸವೇ ಅವರ ಲಕ್ಷ್ಯವಾಗಿತ್ತು. ಅಜ್ಞಾನದ ಆವರಣವನ್ನು ಕಳಚಿಹಾಕಿ ಮಾನವ ಜೀವನದಲ್ಲಿರುವ ದಿವ್ಯ ಜೀವನದಲ್ಲಿ ಮಾನವಾತ್ಮಗಳನ್ನು ಪ್ರತಿಷ್ಠಿಸುವುದೇ ಯೋಗೇಶ್ವರ ಶ್ರೀ ಅರವಿಂದರ ಜೀವನದ ಸಾಧನೆಯಾಗಿತ್ತು.

ಸಾಮೂಹಿಕ ಮಾನವ ಜೀವನದ ಆಧ್ಯಾತ್ಮಿಕ ಕಲ್ಯಾಣ ಅಥವಾ ಆತ್ಮಿಕ ವಿಕಾಸವು ತರವಿಂದರ ಧ್ಯೇಯವಾಗಿತ್ತು. ಶ್ರೀ ಅರವಿಂದರ ದೃಷ್ಟಿ ಸರ್ವಪ್ರಥಮವಾಗಿ ಶೃಂಖಲಿತ, ಪದನತ ಭಾರತ ವರ್ಷದ ದೇಶವಾಸಿಗಳತ್ತ ಹರಿಯಿತು. ಸ್ವಾಧೀನತೆ, ರಾಜನೈತಿಕ ಸ್ವತಂತ್ರತೆಯು ಹೊರತಾಗಿ ಯಾವುದೇ ಜಾತಿಯು ಯಾವ ಕ್ಷೇತ್ರದಲ್ಲಾದರೂ ಉನ್ನತಿ ಹೊಂದುವುದು ಅಸಾಧ್ಯವೆಂದವರು ಕಂಡುಕೊಂಡರು. ಅದುದರಿಂದ ಭಾರತಕ್ಕೆ ಸ್ವಾತಂತ್ರ್ಯ ಪ್ರಾಪ್ತಿಯಾಗಲು, ಸಂಗ್ರಾಮವನ್ನು ಕೈಗೊಳ್ಳುವುದು ತನ್ನ ಧರ್ಮವೆಂದು ತಿಳಿದು, ದೇಶದ ಎಲ್ಲೆಡೆಗಳಲ್ಲಿಯೂ ವಿಪ್ಲವಾಗ್ನಿಯನ್ನು ಜ್ವಲಿಸಿ ದೇಶವಾಸಿಗಳನ್ನು ಪ್ರಬುದ್ಧರನ್ನಾಗಿ ಮಾಡಿದರು. ಭಾರತದ ಜಾತೀಯ ಜಾಗರಣದಿಂದ ವಿಶ್ವಸಂಸಾರದಲ್ಲಿ ನವಚೇತನ, ನವಪ್ರೇರಣೆ ನವಜೀವನದ ದ್ಯೋತನವು ಪ್ರಸಾರಿತವಾಗುವುದು ಮತ್ತು ಈ ಜಾಗೃತಿಯ ಅಂತರಾಳದಲ್ಲಿ ವಿಶ್ವಾಧಾರ, ಪರಮಪುರುಷನ ವಿಶೇಷ ಇಂಗಿತವು ನಿಹಿತವಾಗಿದೆಯೆಂಬ ವಿಶ್ವಾಸವು ಶ್ರೀ ಅರವಿಂದರ ಮನಸ್ಸಿನಲ್ಲಿ ದೃಢವಾಗಿ ಬೇರೂರಿತು. ಜಾತೀಯ ಆಂದೋಲನ, ರಾಜನೈತಿಕ ಸಂಗ್ರಾಮಗಳು ಕೇವಲ ಸಂಗ್ರಾಮಗಳಾಗಿರದೆ ಭಾರತೀಯ ಧರ್ಮವನ್ನು ಪುನಃ ಸ್ಥಾಪನೆಮಾಡುವುದರಲ್ಲಿ ಸಂಘಟಿತವಾಗಿದ್ದುವು ಸ್ವದೇಶ ಮತ್ತು ಸ್ವಧರ್ಮಗಳಲ್ಲಿ ಯಾವ ಭೇದವೂ ಇರಲಿಲ್ಲ. ಸ್ವದೇಶಮಾತೆಯು ದೈವೀ ಶಕ್ತಿಯ ಅನೇಕ ರೂಪಗಳಲ್ಲಿ ಒಂದು. 'ವಂದೇ ಮಾತರಂ' ಎಂಬುದು ಅರವಿಂದರ ಮಹಾಮಂತ್ರವಾಗಿತ್ತು. ಕೇವಲ ರಾಜನೈತಿಕ ಸ್ವಾತಂತ್ರ್ಯವೇ ಭಾರತದ ಏಕಮಾತ್ರ ಪರಮಾರ್ಥನೆಂದು ಅವು ತಿಳಿಯಲಿಲ್ಲ. ಭಾರತೀಯರು ಪರಮ ಪೂರ್ಣತೆಯನ್ನು ಚರಮ ಶ್ರೇಯಸ್ಸನ್ನೆಂದು ಪಡೆದರೋ ಅಂದು ಅವರ ಆಧ್ಯಾತ್ಮಿಕ ವಿಕಾಸವು ಸಾರ್ಥಕವಾಗುವುದು; ರಾಜನೈತಿಕ ಸ್ವಾತಂತ್ರ್ಯವು ಈ ಪಥದ ಪ್ರಥಮ ಸೋಪಾನವೆಂದವರು ಭಾವಿಸಿದ್ದರು

ರಾಜನೀತಿಪಾರಂಗತ ಸ್ವಾತಂತ್ರ್ಯ ಸಮರಗಳಿಗೆ ಆಧ್ಯಾತ್ಮಿಕ ರೂಪವನ್ನೀಯುವುದು ಶ್ರೀ ಅರವಿಂದರ ಯೋಗದರ್ಶನದ ವೈಶಿಷ್ಟ್ಯ. ಇದರಿಂದ ಪ್ರೇರಿತರಾಗಿ ಅವರು ದೇಶವಾಸಿಗಳಲ್ಲಿ ಸ್ವರಾಜ್ಯದಲ್ಲಿ ಆತ್ಮವಿಶ್ವಾಸ, ಆತ್ಮನಿರ್ಭರತೆಯ ಹಾಗೂ ಆತ್ಮೋನ್ನತಿಯನ್ನು ಎತ್ತರಿಸುವುದರಲ್ಲಿ ಪ್ರಯಾಸಪಟ್ಟರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾರತವು ನಿಜವಾಗಿಯೂ ಜಯಶೀಲನಾಗುವುದೆಂಬ ವಿಶ್ವಾಸ ಅವರಲ್ಲಿತ್ತು. ಸ್ವತಂತ್ರ ಭಾರತದಲ್ಲಿ ಸಂಚರಿಸುವ ಯುಗಚೇತನದ ನಿಮಂತ್ರಣಕ್ಕಾಗಿ ಅನನ್ಯ ಸಾಧಾರಣ ಸಾಧನೆ ಮತ್ತು ವ್ಯಕ್ತಿತ್ವದ ವಿಕಾಸದ ಪ್ರಯೋಜನವೊದಗಬೇಕು. ಈ ವೈಯಕ್ತಿಕ ವಿಕಾಸದಲ್ಲಿ ಅಧ್ಯಾತ್ಮ ಚೇತನ, ದಿವ್ಯೋತ್ಸಲಬ್ಧ, ದಿವ್ಯ ಜೀವನದ ಜ್ಞಾನ ದರ್ಶನವು ಸಂಮಿಲಿತವಾಗದ ವರೆಗೆ ಭಾರತದ ಸ್ವಾತಂತ್ರ್ಯವು ಅಪೂರ್ಣ, ಹಾಗೂ ವಿಫಲವಾಗಿಯೇ ಉಳಿಯುವುದು— ಎಂದು ಅವರು ಭಾವಿಸಿದ್ದರು. ಆಗ ಶ್ರೀ ಅರವಿಂದರು ಪ್ರತ್ಯೇಕ ಭಾರತೀಯನಿಗೆ ಮತ್ತು ವಿಶ್ವವಾಸಿಗೆ ದಿವ್ಯ ಜೀವನವನ್ನು ಪ್ರಾಪ್ತಿಮಾಡಿಕೊಳ್ಳಲು ಆಹ್ವಾನವಿತ್ತರು. "ಆತ್ಮಾನಂವಿದ್ಧಿ" ಎಂದು ಪೂರ್ವಕಾಲದ ಮಹರ್ಷಿಗಳು ಹೇಳಿದ್ದರು. ಶ್ರೀ ಅರವಿಂದರು ಸಹ ಆತ್ಮಜ್ಞಾನ, ಆತ್ಮವಿಕಾಸ, ಮತ್ತು ಆತ್ಮನ ಪರಿಪೂರ್ತಿಗಳು ಮಾತ್ರ ಮಾನವನ ಧ್ಯೇಯವೆಂದು ಮಾನಿಸಿದರು. ಭಾರತದ ಆತ್ಮ ಮತ್ತು ಅಧ್ಯಾತ್ಮಿಕ ಸಂಭಾವನೆಯಲ್ಲಿ ಶ್ರೀ ಅರವಿಂದರಿಗೆ ಅಚಲ ವಿಶ್ವಾಸವಿತ್ತು. ಅಧ್ಯಾತ್ಮ ಭಾರತವು ಒಂದು ದಿನ ಸಮಗ್ರ ಮಾನವ ಜಾತಿಯ ದಿವ್ಯ ಜೀವನದ ವಿಕಾಸದಲ್ಲಿ ಅಗ್ರಗಣ್ಯ ಮಾರ್ಗದರ್ಶಕವಾಗುವುದೆಂದವರು ಭವಿಷ್ಯ ನುಡಿದಿದ್ದರು.

ಶ್ರೀ ಅರವಿಂದರು ಜನ್ಮಯೋಗಿ ಯಾಗಿದ್ದರು. ಅವರ ಬಾಲ್ಯಕಾಲದಲ್ಲಿಯೇ ಯೋಗಿಯ ಲಕ್ಷಣಗಳು ಕಂಡುಬರುತಿದ್ದುವು. ವಿಲಾಯತಿಯ ವಿದೇಶೀ ವಾತಾವರಣ ನುತ್ತು ಶಿಕ್ಷಣವು ಅವರ ಆತ್ಮದ ಜಾತೀಯ ಸ್ವರೂಪವನ್ನು ವಿಕೃತ ಆಥವಾ ನಷ್ಟಗೊಳಿಸಲು ಸಮರ್ಥವಾಗಲಿಲ್ಲ. ಬಾಲ್ಯಕಾಲದಿಂದಲೂ ಅವರು ದೇಶಮಾತೆಯ ಏಕನಿಷ್ಠ ಪೂಜಾರಿಯಾಗಿದ್ದರು. ವಿಜಾತೀಯ ಸಂಸ್ಕೃತಿಯ ಪ್ರಾವರಣದಲ್ಲಿ ವಾಸಿಸಿದ್ದರೂ ಆ ಸುಕುಮಾರ ಬಾಲಕನ ಮನಸ್ಸು ಸ್ವದೇಶದ ಅನಾಗತ ಭವಿಷ್ಯದ ಸುವರ್ಣ ಸ್ವಪ್ನಗಳನ್ನು ಕಾಣುತಿತ್ತು. ವಿರಾಟ್ ವಿಶ್ವದ ಕೃಶಯಿಂಕರ ಭೂತಕಂಪದಿಂದ ಭಾರತದ ಜಾತೀಯ ಜೀವನದಲ್ಲಿ ಯಾವ ವಿಧಾನದ ಪರಿವರ್ತನೆಗಳಾಗಬಹುದು— ಯುಗಾಂತಕಾರಿಯಾದ ಈ ಮಹಾ ಪ್ರಯೋಕಾಲದಲ್ಲಿ ತನ್ನ ಕರ್ತವ್ಯನೇನೆಂಬುದಾಗಿ ಬಾಲಕ ಅರವಿಂದರಚಿತ್ತವು ಆಲೋಚಿಸುತಿತ್ತು. ಇದರೊಂದಿಗೆ ಅವರ ಜ್ಞಾನ ಸಾಧನೆ ಹಾಗೂ ಆತ್ಮಪ್ರಸ್ತುತಿಗಳು ನಡೆಯುತ್ತಲೇ ಇದ್ದುವು. ಐ. ಸಿ. ಎಸ್. ಪದತ್ಯಾಗವು ಇದರ ಪ್ರಥಮ ಸೋಪಾನವಾಯಿತು. ರಾಜಕೀಯ ಪದವನ್ನು ಅವಹೇಳನ ಮಾಡಿ ಶ್ರೀ ಅರವಿಂದರು ನೂತನ ಜೀವನದ ನೂತನ ಪಥವನ್ನು ಸ್ವೀಕರಿಸಿದರು. ಭಾರತಮಾತೆಯ ಸುಪುತ್ರನು ಭಾರತದಲ್ಲಿ ಪಾದಾರ್ಪಣ ಮಾಡಿದನು ಶ್ರೀ ಅರವಿಂದರು ಕರ್ಮಯೋಗವನ್ನು ಸಾಧಿಸತೊಡಗಿದರು. ಬರೋಡದ ಮಹಾರಾಜರು ಅವರನ್ನು ತನ್ನ ರಾಜಸ್ವ ವಿಭಾಗದಲ್ಲಿ ನಿಯೋಜಿಸಿದರು. ಆದರೆ, ಮುಂದೆ, ಶ್ರೀ ಅರವಿಂದರ ಮಹಾ ಪಾಂಡಿತ್ಯದಿಂದ ಪ್ರಭಾವಿತರಾಗಿ ಶಿಕ್ಷಣ ವಿಭಾಗದ ಒಂದು ಉಚ್ಚ ಪದವಿಯಲ್ಲಿರಿಸಿದರು. ಆ ಸಮಯದಿಂದಲೇ ಶ್ರೀ ಅರವಿಂದ ಗುರುವ್ರತದ ಆರಂಭವಾಯಿತು.

ಬರೋಡಾ ರಾಜ್ಯದಲ್ಲಿನ ಅರವಿಂದರ ಜೀವನವು ಅವರ ಜ್ಞಾನ ತಪಸ್ಸಿನ ಮಹತ್ವಪೂರ್ಣ ಪರ್ವವಾಗಿತ್ತು. ಆ ಸಮಯದಿಂದಲೇ ಅವರ ಜೀವನವು ತಪಸ್ವಿ ಜೀವನವಾಗಿ ಮಾರ್ಪಟ್ಟಿತು ಅವರ ಆಹಾರ-ವ್ಯವಹಾರ, ಉಡುಗೆ ತೊಡುಗೆಗಳಲ್ಲಿ ಅವರ ಉಗ್ರಜಾತೀಯತಾ ಬೋಧೆಯು ಅವಾಗುತಿತ್ತು. ಸ್ವಾತಂತ್ರ್ಯವಿಲ್ಲದೆ ಯಾವ ಜಾತಿಯೂ ಯಾವ ಸಾಧನೆಯಲ್ಲಿಯೂ ಸಿದ್ಧಿಪಡೆಯುವುದೆಂಬ ದೃಢ ವಿಶ್ವಾಸದಿಂದ ಶ್ರೀ ಅರವಿಂದರು ಕರ್ಮಯೋಗದಲ್ಲಿ ಪ್ರವೃತ್ತರಾಗಿದ್ದರು. ದೇ

(ಐಂನೇ ಪುಟ ನೋಡಿರಿ)

ಯೊಸ

501 ಸ್ಪೆಷಲ್

ನಮ್ಮ ತಯಾರಿಕೆಗಳಲ್ಲಿ ನಿಮಗೆ ಚಿರಪರಿಚಿತವಾದವುಗಳಲ್ಲಿ ಕೂಡ ಕೊಂಚ ಸುಧಾರಣೆಗಳನ್ನು ಮಾಡಲು ನಾವು ಯಾವಾಗಲೂ ಸ್ಪಯತ್ನಿಸುತ್ತೇವೆ. ಈಗ ನಾವು ಒಂದು ಒಳ್ಳೆಯ ಸಾಬೂನನ್ನು ಇನ್ನೂ ಸುಧಾರಿಸಿ ಜಿಡ್ಡು ಉತ್ಕೃಷ್ಟ, ಆರಾಮುಕರ ಮತ್ತು ಉಪಯೋಗಕರವಾಗಿ ಮಾಡುತ್ತೇವೆ.

ಹೆಚ್ಚು ಉತ್ಕೃಷ್ಟ — ಒಗೆಯುವುದು ಸುಲಭ ಮತ್ತು ಜಾಗ್ರತೆ

ಹೆಚ್ಚು ಆದಾಯಕರ — ಪ್ರತಿತುಂಡೂ ಪೂರ್ಣ ದಿವಸ ಬಾಳಿಕೆ ಬರುತ್ತದೆ

ಹೆಚ್ಚು ಉಪಯೋಗಕರ — ನಾಜೂಕಾದ ಬಟ್ಟೆಯನ್ನು ಹಾಗೆಗದಂತೆ ಕಾಪಾಡುವುದು

501 ಸ್ಪೆಷಲ್ ಎಲ್ಲ ಮನೆಯ ಒಗೆಯುವ ಕೆಲಸಕ್ಕೂ ಉಪಯೋಗಕರವಾದ ಸಾಬೂನು

ತಾತಾ ತಯಾರಿಕೆ

ಉತ್ಕೃಷ್ಟತೆ, ಮಿತವ್ಯಯ ಮತ್ತು ಉಪಯೋಗದ ಕುರುಹು

A TATA PRODUCT

ತಾತಾ ಆಯಿಲ್ ಮಿಲ್ಸ್ ಕಂಪೆನಿ, ಲಿಮಿಟೆಡ್

ಭಾರತೀಯರ ಬಂಡವಾಳದಿಂದ, ಭಾರತೀಯರ ಸಂಪಾದಕತ್ವದಲ್ಲಿ, ಇಂಡಿಯಾದಲ್ಲಿಯೇ ತಯಾರಿಸಿದುದು

# ಅಭಿವೃದ್ಧಿಯೋಜನೆ

## ...ತೀಯ ಯೋಜನೆಯಲ್ಲಿ ...ಕ್ಕಿನ ಕೈಗಾರಿಕೆಯು ...ಪ್ರತಿಮ ಸ್ಥಾನ ಪಡೆದಿದೆ!

ಉಕ್ಕಿನ ಕೈಗಾರಿಕೆಯ ಅಭಿವೃದ್ಧಿಯು ಭಾರತದ ದ್ವಿತೀಯ ಪಂಚವಾರ್ಷಿಕ ಯೋಜನೆಯ ಮೂಲೋದ್ದೇಶವಾಗಿದ್ದು ನಮ್ಮ ಮುಂದಿನ ಯೋಜನೆಗಳ ಬೀಗ ಕೈಯಂತಿದೆ. ದ್ವಿತೀಯ ಯೋಜನೆಯಲ್ಲಿ ಈಗ ಸಿಗುತ್ತಿರುವ ನಾಲ್ಕು ಪಾಷ್ಟು ಉಕ್ಕನ್ನು ತಯಾರಿಸಲು ಅವಕಾಶವನ್ನು ಕಲ್ಪಿಸಲಾಗಿದೆ. ಔದ್ಯೋಗಿಕಾಭಿವೃದ್ಧಿ ಕಾರ್ಯದಲ್ಲಿ ಒಂದು ದೇಶಕ್ಕೆ ಅಗತ್ಯವೆನಿಸುವ ಉಕ್ಕಿನ ಪರಿಮಾಣವನ್ನು ಕಡಿಮೆ ಮಾಡಿಕೊಳ್ಳುವುದು ಅಸಾಧ್ಯ. ಕಬ್ಬಿಣ ಮತ್ತು ಉಕ್ಕು ಕೇವಲ ಔದ್ಯೋಗೀಕರಣ ರದ್ಧತಿಯಲ್ಲಿ ಮಾತ್ರವಲ್ಲ, ಆಧುನಿಕ ಗತ್ತಿನಲ್ಲಿ ದಿನನಿತ್ಯದ ಜೀವನ ವಿಧಾನಕ್ಕೂ ಅತ್ಯಾವಶ್ಯಕವೆನಿಸಿದ ಪದಾರ್ಥವಾಗಿ ಪರಿಣಮಿಸಿವೆ. ಉಕ್ಕಿನ ಉತ್ಪಾದನೆಯಲ್ಲಾಂಟಾದ ಹೆಚ್ಚಳವು ದೇಶದ ಣ್ಣ ದೊಡ್ಡ ಕೈಗಾರಿಕೆಗಳಭಿವೃದ್ಧಿಗೆ ೀತವಾಗುವುದು. ಉಕ್ಕಿನ ಅಭಾವವು ಂತ್ರೋತ್ಪಾದನೆಯನ್ನು ತಡೆಗಟ್ಟುವುದು; ಆದರಿಂದಾಗಿ ಅವಶ್ಯಕ ವಸ್ತು ಳ ಕೊರತೆಯುಂಟಾಗಬಹುದು; ಅಭಿವೃದ್ಧಿ ಯೋಜನೆಗಳ ಕಾರ್ಯಗಳನ್ನು ಇದು ಗಿಡಗೊಳಿಸಬಹುದು.

ಒಂದು ದೇಶವು ಉಪಯೋಗಿಸುವ ಉಕ್ಕಿನ ಪರಿಮಾಣವು ಅದರ ಔದ್ಯೋಗಿಕ ಪ್ರಾಮುಖ್ಯದ ಗುರುತಾಗಿದೆ. ಆದುದರಿಂದ ಔದ್ಯೋಗಿಕ ಕಾರ್ಯಗಳಲ್ಲಿ ಮುಂದುವರಿಯುವ ರಾಷ್ಟ್ರಗಳು ತಮ್ಮ ಉಕ್ಕಿನ ಉತ್ಪಾದನೆಯನ್ನು ಹೆಚ್ಚಿಸುವ ಯೋಜನೆಯನ್ನು ಕೈಗೊಳ್ಳುವುದು ಸ್ವಾಭಾವಿಕವಾಗಿದೆ. ಇತಿಹಾಸದ ಪುಟಗಳನ್ನು ಮಗುಚಿ ನೋಡಿದರೆ, ಭಾರತವು ಕಬ್ಬಿಣ ಮತ್ತು ಉಕ್ಕುಗಳನ್ನು ತಯಾರಿಸಿದ ಪ್ರಥಮ ರಾಷ್ಟ್ರವೆಂದು ಕಂಡುಬರುವುದು. ಸ್ಥಿತ್ಯಂತರ ಇತಿಹಾಸವಿರುವ ಕ್ರಿ. ಒಂದು ಅಥವಾ ಎರಡನೆಯ ಶತಮಾನದ ಕಾಲದಲ್ಲಿ ಭಾರತದಲ್ಲಿ ಉತ್ತಮ ರೀತಿಯಲ್ಲಿ ಸ್ಥಾಪಿಸಲ್ಪಟ್ಟ ಉಕ್ಕಿನ ಕೈಗಾರಿಕೆಯಿತ್ತೆಂಬುದು ದಿಲ್ಲಿ ನಗರದ ಸಮೀಪವಿರುವ ಕ್ಯುತಾಬ್ ಎಂಬಲ್ಲಿ ಕಾಣಸಿಗುವ ಉಕ್ಕಿನ ಸ್ತಂಭದಿಂದ ತಿಳಿಯುತ್ತದೆ. ಇಂಥ ಪ್ರಾಚೀನವಾದ ಉಕ್ಕಿನ ಇತಿಹಾಸವಿರುವ ಪ್ರಪಂಚದ ಬೇರೆಡೆಯಲ್ಲಿದುವರೆಗೆ ದೊರೆಯದಿರುವುದು ಒಂದು ಮಹತ್ವದ ಸಂಗತಿಯಾಗಿದೆ.

ಭಾರತದಲ್ಲಿ ಉತ್ತಮ ರೀತಿಯಲ್ಲಿ ಅತ್ಯಧಿಕ ಪ್ರಮಾಣದ ಉಕ್ಕಿನ ಕೈಗಾರಿಕೆಯನ್ನು ಸ್ಥಾಪಿಸಲು ಪ್ರಕೃತಿದತ್ತ ಅನುಕೂಲತೆಗಳಿವೆ. ನಮ್ಮ ಉಕ್ಕಿನ ಉದ್ದುದ್ದಗಳು, ಪ್ರಥಮ್ತವಾಮವುಗಳೆಂದು ಹೆಸರು ಎಂದಿದೆ ಕಲ್ಲಿದ್ದಲು, ಸುಣ್ಣದಕಲ್ಲು, ಡೊಲೊಮೈಟ್, ಮತ್ತು ಮ್ಯಾಂಗನೀಸ್ ನೊದಲಾದ ಲೋಹೆಗಳು ಕಬ್ಬಿಣದ ಅದುರುಗಳ ದೊರೆಯುವ ಮುಖ್ಯ ಎಡೆಗಳ ಸಮೀಪದಲ್ಲೇ ದೊರೆಯುತ್ತವೆ. ಐತಿಹಾಸಿಕ ಕಾರಣಗಳಿದೆಯೆಂದಾಗಿ ಭಾರತದಲ್ಲಿ ಉಕ್ಕಿನ ಉತ್ಪಾದನೆಯ ನವೀನ ಕಾರ್ಖಾನೆಯು ೧೯೫೨ರ ವರೆಗೂ ಪ್ರಾರಂಭಿಸಲ್ಪಡಲಿಲ್ಲ. ಆ ವರ್ಷದಲ್ಲಿ ಜಮ್ಷೆಡ್ಜಿನ ಸ್ವೀಂತ್ಸಾಸ್ಟ್ರೀ ತಾತ ಎಂಬ ಮಹಾಶಯರು ಜಮ್ಷೆಡ್‌ಪುರ ಎಂಬ ಹಟ್ಟಣದಲ್ಲಿ "ಟಾಟಾ ಅಯರ್ನ್ ಎಂಡ್ ಸ್ಟೀಲ್ ವರ್ಕ್ಸ್" ಎಂಬುದೊಂದು ಉಕ್ಕಿನ ಕಾರಖಾನೆಯನ್ನು ಸ್ಥಾಪಿಸಿದರು. ಅದರನಂತರ ಮೈಸೂರಿನ ಭದ್ರಾವತಿಯಲ್ಲೊಂದು ಸಣ್ಣ ಪ್ರಮಾಣದ ಹಾಗೂ ಅಸ್ಸಾನ್ಸೋಲ್‌ನ ಸಮೀಪದಲ್ಲಿ ಬರ್ನ್ಸ್‌ಪುರ ಎಂಬಲ್ಲೊಂದು ದೊಡ್ಡ ಪ್ರಮಾಣದ ಉಕ್ಕಿನ ಕಾರಖಾನೆಗಳು ಸ್ಥಾಪಿಸಲ್ಪಟ್ಟಿವೆ.

ಈ ಮೂರು ಉಕ್ಕಿನ ಕರ್ಮಶಾಲೆಗಳಲ್ಲಿ ಸಿದ್ಧವಾಗುವಉಕ್ಕಿನಒಟ್ಟು ಸಂಪಾದನವು ಸುಮಾರು ೧೫ ಲಕ್ಷ ಟನ್‌ಗಳು ಮಾತ್ರ. ಇದು ದೇಶದ ಹೆಚ್ಚುತ್ತಿರುವ ಉಕ್ಕಿನ ಬೇಡಿಕೆಯಲ್ಲಿ ಅತ್ಯಲ್ಪಾಂಶವಾಗಿದೆ. ಭಾರತದ ಪ್ರಥಮ ಪಂಚವಾರ್ಷಿಕ ಯೋಜನೆಯಕ್ಕೆ ಕೃಷಿಯ ಅಭಿವೃದ್ಧಿಗೆ ಪ್ರಮುಖ ಸ್ಥಾನವನ್ನು ಕೊಟ್ಟಿದ್ದುದರಿಂದ, ಉತ್ಪಕ್ಷಿಯಾಗುತಿದ್ದ ಅಲ್ಪ ಪ್ರಮಾಣದ ಉಕ್ಕಿನಲ್ಲಿಯೇ ಯೋಜಕರು ತೃಪ್ತಿ ಪಟ್ಟುಕೊಂಡಿರಬೇಕಾಯಿತು. ಆದುದರಿಂದ ಅವರು ಹೊಸ ಕಾರಖಾನೆಗೆಳನ್ನು ಸ್ಥಾಪಿಸದೆ, ಆಗ ಕೆಲಸ ಮಾಡುತಿದ್ದ ಕಾರಖಾನೆಗಳಲ್ಲಿಯೇ ಕೆಲಸವನ್ನು ಧಾರಿಸುವುದರಿಂದ ಅವರು ತಮ್ಮ ಮೂಲ ಉದ್ದೇಶಕ್ಕೆ ಬೇಕಾದ ಉಕ್ಕನ್ನು ಪಡೆದುಕೊಳ್ಳಬೇಕಾಯಿತು. ಟಾಟಾ ಮತ್ತು ಇಂಡಿಯನ್ ಆಯರ್ನ್ ಎಂಡ್ ಸ್ಟೀಲ್ ಕಂಪೆನಿಗಳಲ್ಲಿ ಪ್ರತಿಯೊಂದಕ್ಕೆ ಹತ್ತು ಕೋಟಿಯಷ್ಟು ರೂಪಾಯಿಗಳನ್ನು ಮುಂಗಡವಾಗಿ ಕೊಟ್ಟಲ್ಲದೆ, ಎರಡನೆಯದಕ್ಕೆ ಲೋಕಬೇಂಕಿನ ಹಣವೈದು ಕೋಟಿ ರೂಪಾಯಿಯ ಸಾಲಕ್ಕೆ ತಕ್ಕ ಭರವಸೆಯನ್ನಿತ್ತಿತು ಈ ಸಾಲವು ಅ ಕಾರಖಾನೆಯ ವಿಸ್ತರಣೆ ಮತ್ತು ನವೀನೀಕರಣಕ್ಕೆ ಆವಶ್ಯಕತ್ವವಾಗಿತ್ತು.

ಪ್ರಥಮ ಪಂಚವಾರ್ಷಿಕ ಯೋಜನೆಯು ಮುಗಿದು ದ್ವಿತೀಯ ಯೋಜನೆಯ ಮೂಲತತ್ವಗಳಲ್ಲಿ ಆರ್ಥಿಕ ವಿಜಾರವು ಕುರಿತಾಗಿ ಹೆಚ್ಚು ಧ್ಯಾನವೀಯಲಾಯಿತು. ಹಾಗಾಗಿ, ಸ್ವಾಭಾವಿಕವಾಗಿ ಉಕ್ಕಿನ ಬೇಡಿಕೆ ಹೆಚ್ಚಾಯಿತು. ಆಗಿನ ವಾಣಿಜ್ಯ ಮತ್ತು ಕೈಗಾರಿಕೆಗಳ ಮಂತ್ರಿಗಳಾದ ಶ್ರೀ ಟಿ. ಟಿ. ಕೃಷ್ಣಮಾಚಾರಿಯವರು ೧೯೫೪ರ ಬೇಸಿಗೆ ಕಾಲದಲ್ಲಿ ಔದ್ಯೋಗಿಕ ಸಲಹೆಗಾರ ಮಂಡಲವನ್ನು ದ್ದೇಶಿಸಿ ಭಾಷಣ ಮಾಡುತ್ತ ರಾಷ್ಟ್ರಕ್ಕೆ ೬೦ ಲಕ್ಷ ಟನ್‌ಗಳಷ್ಟು ಉಕ್ಕನ್ನು ಉತ್ಪಾದಿಸುವ ಗುರಿಯನ್ನು ಸೂಚಿಸಿದ್ದರು. ಅನುಭವಿಕ ಆರ್ಥಶಾಸ್ತ್ರಜ್ಞರೂ ಔದ್ಯೋಗಿಕಜ್ಞರೂ ಆ ಸಮಯದಲ್ಲಿ ಆ ಗುರಿಯು ಅತ್ಯಧಿಕ ವಾದುದೆಂದು ಆಲೋಚಿಸಿದ್ದರು. ಆದರೆ ಸ್ವಲ್ಪಸಮಯದಲ್ಲಿಯೇ ಈ ಜನರು ಹಾಗೂ ಇತರರು ರಾಷ್ಟ್ರದ ಆಳವಿನಲ್ಲಿ ಸಾಧಿಸಲಾಗುವ ಗುರಿಯೆಂದೂ ಆದರೆ, ಔದ್ಯೋಗಿಕಾಭಿವೃದ್ಧಿಯ ಹೆಜ್ಜೆಯನ್ನು ದೇಶದಲ್ಲಿ ನಿಧಾನವಾಗಿಡದೆ ಹೋದರೆ, ಈ ಪ್ರಮಾಣವು ಕೀಳಾ ಅಲ್ಪವೆಂದೂ ತಿಳಿದು ಕೊಂಡರು.

ಭಾರತ ಸರಕಾರವು ಜರ್ಮನಿಯ ಒಂದು ಕಂಪೆನಿಯೊಡನೆ ಭಾರತದಲ್ಲಿ ೫ ಲಕ್ಷ ಟನ್‌ಗಳಷ್ಟು ಉಕ್ಕನ್ನು ತಯಾರಿಸುವ ಕಾರಖಾನೆಯೊಂದನ್ನು ಸ್ಥಾಪಿಸುವ ವಿಚಾರದಲ್ಲೊಂದು ಒಪ್ಪಂದವನ್ನು ಮಾಡಿಕೊಂಡಿತು. ೧೯೫೫ರ ಕೊನೆಯಲ್ಲಿ ಸೋವಿಯೆಟ್ ರಶ್ಯವೂ ಇನ್ನೊಂದು ಉಕ್ಕಿನ ಕಾರಖಾನೆಯನ್ನು ಸ್ಥಾಪಿಸಲು ತನ್ನ ಸಹಾಯವನ್ನು ಚಾಚಲು ಮುಂದೆ ಬಂತು. ಆ ಕೂಡಲೇ ಸರಕಾರವು ಸೋವಿಯೆಟ್ ಸರಕಾರದೊಂದಿಗೆ ಹತ್ತು ಲಕ್ಷ ಟನ್ ಉಕ್ಕನ್ನುತ್ಪಾದಿಸುವ ಕಾರಖಾನೆಯೊಂದರ ರಚನೆಯ ಬಗ್ಗೆ ಒಪ್ಪಂದಕ್ಕೆ ಬಂದು ಕಾರಖಾನೆ ಮತ್ತದರ ಸಲಕರಣೆಗಳಿಗೆ ದೀರ್ಘಾವಧಿಯ ಸಾಲವನ್ನು ಪಡೆಯಿತು. ಸಾರ್ವಜನಿಕ ವಿಧಾನದಿಂದ ಮೂರನೆಯ ಉಕ್ಕಿನ ಕಾರಖಾನೆಯೊಂದನ್ನು ಸ್ಥಾಪಿಸುವ ವಿಚಾರದಲ್ಲಿ ಶರಕಾರಕ್ಕೆ ಸಲಹೆನೀಡಲು ತಾಂತ್ರಿಕಜ್ಞರ ನಿಯೋಗವೊಂದನ್ನು ಕಳುಹಿಸಲು ಬ್ರಿಟಿಷ ಸರಕಾರವು ಅನುಮೋದಿಸಿತು. ಈ ಕಾರಖಾನೆಯು ಸ್ಥಾಪನೆ ಮತ್ತು ಸಲಕರಣೆಗೆಳ ವೆಚ್ಚದಲ್ಲಿ ಒಂದಂಶವನ್ನು ಬ್ರಿಟಿಷ ಬೇಂಕ್‌ಗಳ ಸಮೂಹವೊಂದು ಸಾಲವಾಗಿಯಲು ಮುಂದೆ ಬಂತು. ಈ ಶರ್ತವನ್ನನುಸರಿಸಿಯೇ ಬ್ರಿಟಿಷ ಸಲಹೆಗಾರ ಮಂಡಲವು ಭಾರತಕ್ಕೆ ಬಂತು. ಇದರಿಂದಾಗಿ ಭಾರತ ಸರಕಾರ ಮತ್ತು ಬ್ರಿಟಿಷ ಬೇಂಕುಗಳ ಸಮೂಹಗಳ ನಡುವೆ ಮೂರನೆಯ ಉಕ್ಕಿನ ಕಾರಖಾನೆಯ ಯೋಜನೆಯ ವಿಚಾರದಲ್ಲೊಂದು ಒಪ್ಪಂದವಾಯಿತು. ಈ ನಡುವೆ ಭಾರತ ಸರಕಾರವು ತಾನು ಸ್ಥಾಪಿಸಿದ ಪ್ರಥಮ ಕಾರಖಾನೆಯ ಉತ್ಪತ್ತಿಯನ್ನು ೫ ಲಕ್ಷ ಟನ್ನಿನಿಂದ ೧೦ ಲಕ್ಷ ಟನ್ನುಗಳಗೇರಿಸಲು ನಿಶ್ಚಯಿಸಿತು.

ಹೀಗೆ ಯೋಜಕರು ೬೦ ಲಕ್ಷ ಟನ್ನುಗಳಷ್ಟು ಉಕ್ಕನ್ನು ತಯಾರಿಸುವ ಗುರಿಯನ್ನು ಚರ್ಚಿಸಿ ಒಪ್ಪಿರುವಾಗ, ಆಡಳಿತದಾರರು ಪರದೇಶ ಮತ್ತು ಸಂಸ್ಥೆಗಳೊಂದಿಗೆ ತಾಂತ್ರಿಕ ಜ್ಞಾನ, ತರಬೇತಿ ಸೌಕರ್ಯ ಮತ್ತು ಗಣ್ಯ ಆರ್ಥಿಕ ಸಹಾಯಗಳ ಕುರಿತಾಗಿ ಒಪ್ಪಂದಗಳನ್ನು ಮಾಡಲು ಪ್ರಯತ್ನಿಸುತ್ತಲಿದ್ದು ಗುರಿಯನ್ನು ಸಾಧಿಸಲು ಬದ್ಧಕಂಕಣರಾಗಿದ್ದಾರೆ. ಅದೇ ಸಮಯದಲ್ಲಿ ಸರಕಾರವು ಭಾರತದ ಎರಡು ದೊಡ್ಡ ಉಕ್ಕಿನ ಕಾರಖಾನೆಗಳಿಗೆ ತಾವು ಬಯಸಿದ ವಿಸ್ತರಣೆಯನ್ನು ಮಾಡಲು, ತನ್ಮೂಲಕ ದೇಶದ ಉಕ್ಕಿನುತ್ಪಾದನೆಯ ಹೆಚ್ಚಳವನ್ನು ಸಾಧಿಸಲಾಂತರಿಕ ಬೇಂಕಿನಿಂದ ಪಡೆಯುವ ಸಾಲಕ್ಕೆ ವಿಶ್ವಸ್ಥವಾಗಿ ನಿಂತು ಪ್ರೋತ್ಸಾಹಿಸಿತು ಹೀಗೆ ದ್ವಿತೀಯ ಯೋಜನಾಂಭದ ಕಾಲದಲ್ಲಿ ಉಕ್ಕಿನ ಅಭಿವೃದ್ಧಿ ಚಿತ್ರವು ಸಾನಾನ್ಯವಾಗಿ ಸಂಪೂರ್ಣವಾಗಿತ್ತು. ಎಲ್ಲಲ್ಲಿ ಕೆಲವೊಂದು ಸ್ಪೆಕ್ಟಿವನ್ನೀಯುವ ಕಾರ್ಯ ಮಾತ್ರ ಬಾಕಿಯುಳಿದಿತ್ತು.

ಹಳೆಯ ಸಂಸ್ಥೆಗಳಾದ ಟಾಟಾ ಆಯರ್ನ್ ಎಂಡ್ ಸ್ಟೀಲ್ ಕಂಪೆನಿಯಲ್ಲಿ ಈಗ ೮ ಲಕ್ಷ ಟನ್, ಇಂಡಿಯನ್ ಆಯರ್ನ್ ಎಂಡ್ ಸ್ಟೀಲ್‌ನಲ್ಲಿ ೩ ಲಕ್ಷ ಟನ್ ಮತ್ತು ಮೈಸೂರು ಆಯರ್ನ್ ಎಂಡ್ ಸ್ಟೀಲ್ ವರ್ಕ್ಸ್‌ನಲ್ಲಿ ೩೫ ಸಾವಿರ ಟನ್‌ಗಳಷ್ಟು ಉಕ್ಕು ಉತ್ಪಾದನೆಯಾಗುವುದು. ಇವುಗಳು ವಿಸ್ತರಣೆಗೊಂಡಾಗ, ಕ್ರಮವಾಗಿ ೧೫ ಲಕ್ಷ ಟನ್ ೮ ಲಕ್ಷ ಟನ್ ಮತ್ತು ೧ ಲಕ್ಷ ಟನ್‌ಗಳಷ್ಟು ಉಕ್ಕು ತಯಾರಾಗುವುದು. ಹೊಸದಾಗಿ ಸ್ಥಾಪಿಸಲಾದ ರೂರ್ಕೇಲಾ ಕಾರಖಾನೆಯಲ್ಲಿ ೭೭೦ ಸಾವಿರ ಟನ್, ಭಿಲ್ಸಿ ಕಾರಖಾನೆಯಲ್ಲಿ ೭೭೦ ಸಾವಿರ ಟನ್ ಮತ್ತು ದುರ್ಗಾಪುರ ಕಾರಖಾನೆಯಲ್ಲಿ ೭೭೦ ಸಾವಿರ ಟನ್ ಉಕ್ಕು ಉತ್ಪಾದನೆಯಾಗುತ್ತದೆ. ಹೀಗೆ ಭಾರತದಲ್ಲಿ ೪೬,೦೦,೦೦೦ ಟನ್‌ಗಳಷ್ಟು ಉಕ್ಕು ಉತ್ಪಾದಿಸಲ್ಪಡುವುದು.

ಒಂದೆರಡು ವರ್ಷಗಳ ಹಿಂದೆ ರೂರ್ಕೇಲಾ, ಭಿಲ್ಸಿ, ಅಥವಾ ದುರ್ಗಾಪುರ ಗಳಂತಹ ಹೆಸರುಗಳು ಅನೇಕ ಜನರ ಮನಸ್ಸನ್ನು ತಡೆಹಿಡಿದಿದ್ದರೂ ಇದೀಗ ಅವು ಸಾಮಾನ್ಯ ಹೆಳಗಳಾಗಿ ಪರಿಣಮಿಸಿವೆ. ಸ್ವಲ್ಪ ಜ್ಞಾನಶೀಲನಾದ ಮನುಷ್ಯನು ಪ್ರಚಲಿತ ಸ್ಥಿತಿಗತಿಗಳ ಮನನದಿಂದೆಯುಳ್ಳವನಾದರೆ, ಒಂದು ಸಮಯದಲ್ಲಿ ವಿಘಾತುಕ ಹೆಳಗಳಾಗಿದ್ದ ಈ ಸ್ಥಳಗಳು ಇದೀಗ ದೇಶದ ಆರ್ಥಿಕ ಭವಿಷ್ಯವನ್ನು ರೂಪಿಸುವ, ದೇಶದ ಜನರನ್ನು ಖ್ಯಾವಲಂಬನೆಯತ್ತ ಸಾಗಿಸುವ ಪುಣ್ಯಕ್ಷೇತ್ರಗಳೆಂಬ ದನ್ನು ಆರಿಯದಿರಲಾರ

(ಗಿನೇ ಸುಟ ನೋಡಿ)


## ಸಮಯ ಇನ್ನೂ ಮಿಂಚಿಹೋಗಿಲ್ಲ

ಜೀವನದಲ್ಲಿ ಒಂದು ರೀತಿಯ ವ್ಯವಸ್ಥೆಯಿರಬೇಕಾದರೆ ಆವಶ್ಯಾಲದಲ್ಲಿ ಸಹಾಯ ಕ್ಕೊದಗುವ ಒಂದು ಆಪದ್ಧನ ಸಂಗ್ರಹದ ಯೋಜನೆಯನ್ನು ಚಿಕ್ಕಂದಿನಿಂದಲೇ ಆರಂಭಿಸಬೇಕೆಂಬುದು ಸಹಜವೇ. ಆದರೆ ಕಾಲ ಕಳೆದು ಹೋಯಿತೆಂದು ಕಣ್ಣೀರು ಕರೆಯುತ್ತಾ ಕುಳಿತುಕೊಳ್ಳುವುದಕ್ಕಿಂತ ಇಂದಿನಿಂದಲೇ ಸ್ವಲ್ಪ ಸ್ವಲ್ಪ ಹಣವನ್ನಾದರೂ ಉಳಿತಾಯಮಾಡಲು ಯತ್ನಿಸುವುದೇ ಮುಖ್ಯ.ಸಮಯವಿನ್ನೂಮಿಂಚಿಹೋಗಿಲ್ಲ ಹಲವಾರು ಆಕರ್ಷಕ ಮತ್ತು ಸುಲಭಸಾಧ್ಯವಾದ ಉಳಿತಾಯದ ಯೋಜನೆಗಳಿಗೆ-

**ಸಿಂಡಿಕೇಟ್ ಬ್ಯಾಂಕಿನಲ್ಲಿ** ವಿಚಾರಿಸಿ.

**96** ಶಾಸೆಗಳು

ರೂ. **10.64** ಕೋಟಿಗೂ ಮಿಕ್ಕಿದ ಚಲಾವಣಾ ನಿಧಿ

ಇವುಗಳಿಂದ ಸಾವಿರಾರು ಜನರ ಆರ್ಥಿಕ ಆವಶ್ಯಕತೆಗಳಲ್ಲಿ ಸಹಕರಿಸಲ್ಪಟ್ಟ ಶೆಡ್ಯೂಲ್ಡ್ ಬೇಂಕು

ಟಿ. ಎ ಪೈ, ಬಿ.ಕಾಂ.(ಜೊಂಬಾಯಿ), ಎಫ್.ಆರ್.ಇ.ಎಸ್.(ಲಂಡನ್), ಎ.ಐ.ಬಿ., ಜನರಲ್ ಮೆನೇಜರ್.

ಡಾ. ಟಿ. ಎಂ. ಎ. ಪೈ, ಎಂ.ಬಿ.ಬಿ.ಎಸ್., ಮೆನೇಜಿಂಗ್ ಡೈರೆಕ್ಟರ್.

**The Canara Industrial & Banking Syndicate, Ltd.,**

Head Office: UDIPI. S India.

# ಶಿಕ್ಷಕರ ಸಮಸ್ಯೆ

## ಜಿಲ್ಲೆಯ ಹಲವಾರು ಶಿಕ್ಷಕರನ್ನು ಮನೆಗೆ ಕಳುಹಿಸುವ ಆಜ್ಞೆ ರದ್ದಾಗಬೇಕು

**ತಾ. 1-6-56ರ ನಂತರ ಕೆಲಸಕ್ಕೆ ಸೇರಿದ ಶಿಕ್ಷಕರನ್ನು ನಿವೃತ್ತಿಗೊಳಿಸುವ ಆಲೋಚನೆ.**

"1-6-56ರಿಂದ ಸೇರಿದ ಶಿಕ್ಷಕರನ್ನು ಸರಾಸರಿ ಹಾಜರಿಯು 30 ಇಲ್ಲದಿದ್ದಲ್ಲಿ ನಿವೃತ್ತಿಗೊಳಿಸಬೇಕು; ಅಂತವರಿಗೆ ಸಹಾಯಧನ (ಸಂಬಳ) ಸಿಗಲಾರದು" ಎಂಬರ್ಥದ ಆಜ್ಞೆಯು ನಮ್ಮ ವಿದ್ಯಾಧಿಕಾರಿಗಳಿಂದ ಹೊರಡಿಸಲ್ಪಟ್ಟಿದೆಯೆಂಬ ವಾರ್ತೆಯು ಬಂದಿದೆ. ಇದು ಹೌದೆಂದಾದರೆ ಸಹನೆಗೆ, ಶಾಂತಿಯುತವಾದ ರೀತಿಯ ಶಿಕ್ಷಕರ ಕೇಳಿಕೆಗಳಿಗೆ, ನಮ್ಮ ಸರಕಾರ ಅಥವಾ ನಮ್ಮ ಅಧಿಕಾರಿಗಳು ಎಂತಹ ಬೆಲೆ ಕೊಡುತಿದ್ದಾರೆ ಎಂಬುದರ ಅರಿವಾದಂತಾಯಿತು.

ಮೈಸೂರು ಸರಕಾರಿ ಹಳೆಯ ಮೈಸೂರಿನ ನೌಕರರಿಗೆ ಸಂಬಳವನ್ನೇರಿಸಿತು. ಮಚ್ರಾಸು ಸರಕಾರವೂ ರಾಜ್ಯಪುನರ್ರಚನೆಯಾದೊಡನೆ ಆಂದ್ರರಿಗೆ ನಮ್ಮ ಜಿಲ್ಲೆಯನ್ನು ಬಿಟ್ಟು ಕೊಟ್ಟೊಡನೆ ತನ್ನ ಶಿಕ್ಷಕರಿಗೆ ಸಂಬಳವನ್ನೇರಿಸಿತು. ಆತ್ತ ಕೊಡಗಿನಲ್ಲಿ ನತ್ತ ಬೊಂಬಾಯಿಯಲ್ಲಿ ಎಲ್ಲಾ ಪ್ರದೇಶಗಳಲ್ಲಿ ಈ ಜಿಲ್ಲೆಗಿಂತ ಕಡಿಮೆ ಸಂಬಳ ಶಿಕ್ಷಕರಿಗೆ ದೊರೆಯುತ್ತಿದೆ. ನೆರೆಯ ಕೇರಳದಲ್ಲಂತೂ ತೀವ್ರಗತಿಯ ಬದಲಾವಣೆ, ಸಂಬಳದ ಹೆಚ್ಚಳ ಉದ್ಯೋಗವಿಲ್ಲದವರಿಗೆ ಉದ್ಯೋಗ ಕೊಡುವ ಕಾರ್ಯಾಚರಣೆಯಾಗುತ್ತಿರುವಾಗ ನಮ್ಮ ಜಿಲ್ಲೆಯಲ್ಲಿ ಯಾವ ಸುಧಾರಣೆಯೂ ಆಗುವ ಬದಲಿಗೆ ಇದ್ದ ಶಿಕ್ಷಕರನ್ನು ಮನೆಗೆ ಕಳುಹಿಸುವ ಆಲೋಚನೆ ನಡೆಯುತ್ತಿದೆ. ಇದು ನಮ್ಮ ಜಿಲ್ಲೆಯ ಶಿಕ್ಷಕರ ದೌರ್ಭಾಗ್ಯ. ನಮ್ಮ ಜಿಲ್ಲೆಯವರೇ ಇದಕ್ಕೆ ಕಾರಣರೆಂದು ಅಲ್ಲಲ್ಲಿ ಕೇಳಬರುತ್ತಾ ಇದೆ. ಹಾಗಾದರೆ ಈ ಜಿಲ್ಲೆಯಲ್ಲಿ ಹುಟ್ಟಿದುದಕ್ಕೆ ಇಲ್ಲಿ ಉದ್ಯೋಗ ನಡೆಸಿದುದಕ್ಕೆ, ಶಿಕ್ಷಕರಾಗಿದ್ದುದಕ್ಕೆ ಪ್ರಾಶಿಕ್ಷಕರು ಅನುಭವಿಸಬೇಕಾದ ತಕ್ಕ ಫಲವಿದೆಂದು ಭಾವಿಸಬೇಕಾಗುತ್ತದೆ (!)

ರಾಜ್ಯ ಪುನರ್ರಚನೆಯ ನಂತರ ಆಯಾ ರಾಜ್ಯಗಳಿಂದ ಬಂದ ಪ್ರದೇಶಗಳು ಆಗ ಅಲ್ಲಿ ರೂಢಿಯಲ್ಲಿದ್ದ ಕ್ರಮಗಳನ್ನು ಮುಂದೆ ಮಹಾಮೈಸೂರಿನ ಶಿಕ್ಷಣದ ಕ್ರೋಡೀಕರಣದ ವರೆಗೆ ಅನುಸರಿಸಬೇಕು ಈಮಧ್ಯೆ ಯಾವುದೇ ಗೊಂದಲಗಳಿಗೆ ಕಾರಣ ಕೊಡಬಾರದೆಂಬ ತತ್ವವನ್ನು ನಮ್ಮ ಮೂಸ ಸರಕಾರ ಒಪ್ಪಿರುವುದಾಗಿಯೂ, ತಜ್ಞರ ಸಮಿತಿಯು ಶಿಫಾರಸಿಗನುಗುಣವಾಗಿ ಪ್ರಾಂತೈದ್ಯಾದ್ಯಂತ ಒಂದೇ ರೀತಿಯ ಶಿಕ್ಷಣವನ್ನು ರೂಢಿಗೆ ತರಲು ಯತ್ನಿಸುವುದಾಗಿಯೂ ನಮ್ಮ ಮಾನ್ಯ ಮುಖ್ಯ ಮಂತ್ರಿಗಳೂ, ಡೈರೆಕ್ಟರೂ ವಿದ್ಯಾಂಗದ ಕಾರ್ಯದರ್ಶಿಯವರೇ ಮೊದಲಾದ ಅಧಿಕಾರಿಗಳೂ, ವಿದ್ಯಾಮಂತ್ರಿಗಳೂ ಅಲ್ಲಲ್ಲಿ ಹೇಳಿರುವುದನ್ನು ಕೇಳಿದ್ದೇವೆ. ಪತ್ರಿಕೆಗಳಲ್ಲಿ ಓದಿದ್ದೇವೆ. ತನ್ನದ್ದೆ ಹಲವಾರು ಮಂದಿಯನ್ನು ಮನೆಗೆ ಕಳುಹಿಸುವ ಈ ಯೋಜನೆ ಇದಕ್ಕೆ ಎಂತೋ ಎಳೆಯಲಾಗುವುದಿಲ್ಲ. ಮದ್ರಾಸು ಸರಕಾರವು ಪ್ರತಿ ಶಿಕ್ಷಕನಿಗೆ ಸರಾಸರಿ ಹಾಜರಿ ಮೂನತ್ತು ಇರಬೇಕೆಂಬ ಕಾನೂನು ಮಾಡಿರುವುದರಿಂದ ಅದೇ ಕಾನೂನನ್ನು ಇಲ್ಲಿಯೂ ಬಳಕೆಗೆ ತರಬೇಕೆಂದು ಯತ್ನಿಸಲಾಗುತ್ತಿದೆ ಹೊಂತು ಮೈಸೂರು ಸರಕಾರ ಈ ಕುರಿತು ಯಾವ ಕಡ್ಡಾಯವನ್ನೂ ಮಾಡಿಲ್ಲಲ್ಲವೆಂದೂ ಕೇಳಿಬರುತ್ತಿದೆ. ಮದ್ರಾಸು ಸರಕಾರ ಶಿಕ್ಷಕರಿಗೆ ಸಂಬಳವೇರಿಸಿದೆ. ಮದ್ರಾಸಿನ ಕಾನೂನನ್ನೇ ಇಲ್ಲಿಗೆ ಅನ್ವಯಿಸಬೇಕೆಂದಿದ್ದರೆ ಮದ್ರಾಸಿನಲ್ಲಿ ಕೊಡುವ ಸಂಬಳದ ದರವನ್ನು ಸಹಾ ಕೊಡಬೇಕು ತಾನೆ? "ಸಂಬಳ ವಿರುವ ದೊಂದನ್ನು ಬಿಟ್ಟು ಉಳಿದುದೆಲ್ಲಾ ನಿಮಗೆ ಜ್ಯಾಂ!" ಎಂಬ ರೀತಿ ಸರಿಯಾದುದೆ?

ನಿರುದ್ಯೋಗ ನಿವಾರಣೆಗಾಗಿ ಸರಕಾರ ಕೋಟಗಟ್ಟಲೆ ವ್ಯಯಿಸಿ ಒಂಟಿ ಶಿಕ್ಷಕರ ಶಾಲೆಗಳನ್ನು ತೆರೆಯುತ್ತಿದೆ. ತರಬೇತಾರ್ಥಿಗಳಿಗೆ ಕೆಲವು ತಿಂಗಳು ತರಬೇತು ಕೊಡಿಸಿ ಏಕೋಪಾಧ್ಯಾಯ ಶಾಲೆಗೆ ಕಳುಹಿಸಿ ನಿರುದ್ಯೋಗ ನಿವಾರಿಸಬೇಕೆಂದು ಜಾತೊರೆಯುತ್ತಿದೆ. ಉದ್ಯೋಗವಿಲ್ಲದವರಿಗೆ ವೆಚ್ಚಮಾಡಿ ಉದ್ಯೋಗ ಕಲ್ಪಿಸಲು ಶಿಕ್ಷಕವೃತ್ತಿಗೆ ಒಂದೆಡೆಯಿಂದ ತರುತ್ತಿರುವಾಗ ಮತ್ತೊಂದೆಡೆಯಿಂದ ತರಬೇತುಗೊಳಿಸಿ, ಕೆಲಸಕ್ಕೆ ಸೇರಿದ್ದ ಶಿಕ್ಷಕರನ್ನು ನಿವೃತ್ತಿಗೊಳಿಸುವ ಇಂತಹ ಕೆಲಸಕ್ಕೆ ಗಾದೆಮಾತಿನಲ್ಲಿ "ಕೆತ್ತುವುದು ಮೆತ್ತುವುದು" "ಮೆತ್ತುವುದು ಕೆತ್ತುವುದು" ಎನ್ನಬೇಕಾಗುತ್ತದೆ. ಇದು ನಮ್ಮ ಸರಕಾರದ ಘೋರನೀತಿಯಾಗಿರಲಾರದು.

ವರುಷಂಪ್ರತಿ 300-400 ಮಂದಿ ಶಿಕ್ಷಕರನ್ನು ವೇತನನಿಶ್ಚಿತ್ತು ಸ್ವಯಂ ವೆಚ್ಚದಿಂದ ಸರಕಾರ ತರಬೇತಿಗೊಳಿಸುತ್ತಿದೆ. ಈಗಾಗಲೇ ಸಾವಿರಾರು ಶಿಕ್ಷಕರು ತರಬೇತಿಗಾಗಿ ಉದ್ಯೋಗವಿಲ್ಲದೆ ಒಳಲುತಿದ್ದಾರೆ. ಸಿಕ್ಕಿದಷ್ಟು ಸಿಗಲಿ ಎಂದು ಕಡಿಮೆ ಸಂಬಳಕ್ಕೆ ಒಪ್ಪಿ ವಿದ್ಯಾಕ್ಷೇತ್ರದ, ಸಂಸ್ಥೆಗಳ, ಆಡಳಿತದಾರರ, ಶಿಕ್ಷಕರ ಎಲ್ಲರ ಮುಖಕ್ಕೂ ಮಂಗಳಾರತಿಯಾಗುವಂತೆ ಮಾಡುತಿದ್ದಾರೆಂದೂ ದೂರು ಬರುತ್ತಿದೆ. ಈ ನಿರುದ್ಯೋಗದ ತಂಡದ ಜೊತೆಗೆ ಸೇರಿಕೊಳ್ಳಲಿಕ್ಕೆ ಎಂಬಂತೆ 1-6-56 ನಂತರ ಕೆಲಸಕ್ಕೆ ಸೇರಿದ ಶಿಕ್ಷಕರನ್ನು ನಿವೃತ್ತಿಗೊಳಿಸಲಾಗುತ್ತಿದೆಯೆ? ಈ ವರುಷವೂ ತರಬೇತಿಗೆ ಆಯ್ಕೆ ಇರುವುದಾಗಿ ಕೇಳಿದ್ದೇವೆ. ಇವರನ್ನೂ ತರಬೇತು ಮಾಡಿ ಎತ್ತ ಕಳುಹಿಸುವುದು? ಇದನ್ನು ಯೋಚಿಸುವಾಗ ಇದು ನಿರುದ್ಯೋಗ ನಿವಾರಣೆಯೇ ಅಥವಾ ನಿರುದ್ಯೋಗ ಬೆಟ್ಟಕ್ಕೆ ಮಣ್ಣು ಹೊರುವುದೆ?

ತಾತ್ವಿಕ ವಿಚಾರಗಳು, ಕಾನೂನಿನ ಸಿಕ್ಕುಗಳು, ಇಂಟರ್‌ಪ್ರಿಟೇಶನುಗಳು ಏನೇ ಇರಲಿ ಇದ್ದವರನ್ನು ಕಡ್ಡಾಯವಾಗಿ ಸರಾಸರಿ ಹಾಜರಿಯ ಹೆಚ್ಚಳದ ನೆವನದಿಂದ ನಿವೃತ್ತಿಗೊಳಿಸುವ ಯೋಚನೆಯನ್ನು, ಆಜ್ಞೆಯನ್ನು ಸಂಬಂಧಪಟ್ಟವರು ತಡೆಹಿಡಿಯಬೇಕು. ಈ ರೀತಿ ಮಾಡುವುದರಿಂದ ನಿವೃತ್ತರಾಗುವ ಪ್ರತಿ ಕಾದ ಶಿಕ್ಷಕರಿಗಷ್ಟು, ಅವರ ಜೀವನೋಪಾಯಕ್ಕೆ ದಾರಿ ಏನು? ಅವರು ಕೊಟ್ಟ ಬೋಂಡಿನ ಅವಸ್ಥೆ ಏನು? ಸರಾಸರಿ ಹಾಜರಿಯನ್ನು ಕೂಡಲೇ ಹೆಚ್ಚಿಸುವುದಕ್ಕೆ ಸುಳ್ಳು ವಾರ್ಗದಿಂದ ಹೊರತು ಸತ್ಯ ರೀತಿಯಲ್ಲಿ ಸಾಧ್ಯವೇ? ಎಂಬ ಕುರಿತು ಒಂದು ವಿಚಾರಗೋಷ್ಠಿಯನ್ನು ನಡೆಸಿ, ಮೈಸೂರು ಸರಕಾರಕ್ಕೆ ವರದಿ ಮಾಡಿ ನುತ್ತೂ ಸುಕಾರ ಒಪ್ಪುವುದಿಲ್ಲ; ನಮ್ಮ ಶಾಸನಸಭಾ ಸದಸ್ಯರು, ಮಂತ್ರಿಗಳು ನಮ್ಮ ಮಾತಿಗೆ ಕಿವಿಗೊಡುವುದಿಲ್ಲ; ಶಿಕ್ಷಕರ ನಿವೃತ್ತಿಯಾಗಲೇಬೇಕು; ಎಂದೆ. ಹತೋಟ್ಟರೆ ಆಗ ನೋಡೋಣ. ಅಷ್ಟರ ವರೆಗೆ ಈ ಆಜ್ಞೆಯನ್ನು ರದ್ದುಗೊಳಿಸಬೇಕು. 31-5-57ರಲ್ಲಿದ್ದಷ್ಟು ಶಿಕ್ಷಕರಿಗೆ ಸರಾಸರಿ ಹಾಜರಿಯ ಹೆಚ್ಚಳದ ಕಾರಣದಿಂದ ನಿವೃತ್ತಿಯಾಗದಂತೆಯೂ, ಹಾಗೆ ಆವವರಿದ್ದರೆ ಸಂಬಂಧಪಟ್ಟವರು ಅವರನ್ನು ಮನಃ ಕೆಲಸಕ್ಕೆ ಸೇರಿಸುವಂತೆಯೂ ಆಜ್ಞೆಯಾಗಬೇಕು.

ಇದಕ್ಕೆ ನಮ್ಮ ಜಿಲ್ಲೆಯ ಎಲ್ಲಾ ಶಾಸನ ಸಭಾ ಸದಸ್ಯರೂ ಬೆಂಬಲ ಕೊಡಬಹುದೆಂಬುದರಲ್ಲಿ ಅನುಮಾನವಿಲ್ಲ. ನಮ್ಮ ಜಿಲ್ಲೆಯ ಮಾನ್ಯ ಮಂತ್ರಿ ಬಾಳಿಗರೂ ನಮ್ಮನ್ನು ಸಹಾನುಭೂತಿಯಿಂದ ಕಾಣುವುದಾಗಿ ಮಾತ್ರವಲ್ಲ ಮಾನ್ಯ ಮುಖ್ಯ ಮಂತ್ರಿಗಳು ಹಿಂದೊಮ್ಮೆ "ಈ ರೀತಿ ನಿವೃತ್ತಿಯಾಗದಂತೆ ನೋಡುತ್ತೇನೆ" ಎಂದು ಹೇಳಿದ ಮಾತನ್ನು ವಾಸ್ತವಿಕವಾಗಿ ನಿಜಕ್ಕೂ ನಂಬಬಹುದು.

ಕೈಯೆತ್ತಿ ಬೇಡುತ್ತಿರುವ ಶಿಕ್ಷಕರ ಮೂಕದ ಕೇಳಿಕೆಗಳನ್ನು ಸಹಾನುಭೂತಿಯಿಂದ ಪರ್ಯಾಲೋಚಿಸುವುದಾಗಿ ಹೇಳುತ್ತಿರುವಾಗಲೇ ಹಾಗೆ ಪ್ರಾರ್ಥಿಸಿ ಎತ್ತಿರುವ ಎಂಟ್ಲಿ ಕೆಲವನ್ನು ಹೊರದಬ್ಬುವುದನ್ನು ನೋಡುವವರಿಗೂ ಬೇಡುವವರಿಗೂ, ನೋಡುವವರಿಗೂ ದೂಡುವವರಿಗೂ ಚೆನ್ನಾಗಿ ಗೊತ್ತಿರಬಾರದು.

ನಮ್ಮ ಜಿಲ್ಲಾ ನಿದ್ಯಾಧಿಕಾರಿಗಳು, ಈ ಕುರಿತು ತನ್ನ ಅಂತಾದ ಸಹಕಾರವನ್ನು ನೀಡಬೇಕು. ನೂರಾರು ಬಡ ಕುಟುಂಬಗಳನ್ನು ಉಪವಾಸ ಹಾಕುವ, ಬಡ ಶಿಕ್ಷಕರನ್ನು ನಿವೃತ್ತಿಗೊಳಿಸುವ ಈ ಪಾಪ ಕಾರ್ಯದಿಂದ ಅವರು ಅದಷ್ಟು ದೂರವಿರಲು, ಸಾಧ್ಯವಿದ್ದಷ್ಟು ಹಾಗಾಗದಂತೆ ನೋಡಲು ಯತ್ನಿಸಿ ಪುಣ್ಯ ಕಟ್ಟಿಕೊಳ್ಳಲಿ. ಜಿಲ್ಲೆಯ ವಿದ್ಯಾಪ್ರೇತ್ರದ, ಶಿಕ್ಷಕರ, ವಿದ್ಯಾರ್ಥಿಗಳ ಮಾತ್ರವಲ್ಲ ನಾಡಿನ ಹಿತದೃಷ್ಟಿಯಿಂದ ಅವರು ಈ ಆಜ್ಞೆಯನ್ನು ರದ್ದುಗೊಳಿಸಬೇಕು. ವಿಷಯವು ಕೈಮೀರಿ ಹೋಗದಂತೆ ಆದಷ್ಟು ಶೀಘ್ರ ಈ ಆಜ್ಞೆ ರದ್ದಾಗಲಿ!

ಶ್ರೀ. ದಾಂತಿ.


ವಿಲಂ ನೋಟೀಸು.

## ದಿ ಕೆಥೋಲಿಕ್ ಬೇಂಕ್ ಲಿಮಿಟೆಡ್ ಶಿರ್ವಾ.

ಈ ಕೆಳಗೆ ಕಾಣಿಸಿದ ಮಹನೀಯರು ಸದ್ರಿ ಬೇಂಕಿನಲ್ಲಿ ಚಿನ್ನಡಿ ನಗದು ಈಡಿನ ಮೇಲೆ ಸಾಲಪಡೆಕೊಂಡು ಕ್ರಮ ವಾಯಿದೆಗೆ ಅಸಲು, ಬಡ್ಡಿ ವಗೈರೆ ಕೊಡದೆ ಬಾಕಿನಿಂತಿರುವುದರಿಂದಲೂ, ಅಲ್ಲದೆ ಕ್ರಮಪ್ರಕಾರ ರಿಜಿಸ್ಟರ್ಡ್ ನೋಟೀಸು ಕೊಟ್ಟಲ್ಲಿ ಸದ್ರಿ ಕೆಲವರಿಗೆ ರಿಜಿಸ್ಟ್ರಿ ನೋಟೀಸು ಸಿಕ್ಕಿದೆ ಹಿಂದೆ ಬಂದಿರುವುದರಿಂದಲೂ, ಸದ್ರಿ ಕೆಲವರಿಗೆ ನೋಟೀಸು ಸಿಕ್ಕಿಯೂ, ಸದ್ರಿಯವ್ಯಕ್ತಿಗಳನ್ನು ಪತ್ತೆಹಚ್ಚಿಕೊಂಡು ಹೋಗುವರೆ ತಪ್ಪಿದ ಕಾರಣ ಸದ್ರಿಯವರ ವಾರೀಸುದಾರರಿಗೆ ಈ ನೂಲಕ ತಿಳಿಯಪಡಿಸುವುದೇನೆಂದರೆ, ಸದ್ರಿಯವರು ಈಡಿಟ್ಟ ನಗದಿನ ಮೇಲೆ ಜೂನ್ 19ನೇ ತಾರೀಕಿನ ಒಳಗೆ ಬ್ಯಾಂಕಿಗೆ ಸಲ್ಲತಕ್ಕ ಅಸಲು, ಬಡ್ಡಿ, ನೋಟೀಸು ಖರ್ಚು ಇತ್ಯಾದಿಗಳನ್ನು ಸಲ್ಲಿಸಿ ಬಿಡಿಸಿಕೊಂಡು ಹೋಗದೆ ಇದ್ದಪಕ್ಷದಲ್ಲಿ, ಇದೇ ತಿಂಗಳ ತಾರೀಕು 22.6.1957 ಶನಿವಾರ ಮಧ್ಯಾಹ್ನ ಗಂಟೆ 12ಕ್ಕೆ ಯಾ ನಮಗೆ ಯುಕ್ತ ಕಂಡ ತಾರೀಕಿನಲ್ಲಿ ಪುನಃ ನೋಟೀಸು ಕೊಡದೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ವಿಲಂ ಮಾಡೋಣಾಗುವುದು.

| ನಾಲದ ನಂಬ್ರ | ಹೆಸರು ಮತ್ತು ವಿಳಾಸ | ಅಸಲು ಮೊಬಲಗು |
|---|---|---|
| 31/318 | ತಿಪ್ಪ ಶೆಟ್ಟಿ N/o ಬಾಬು ಶೆಟ್ಟಿ, ಅಂಡೆಮಾರ್ ಗುತ್ತು ಪಾಡೂರು P. O. | 80/- |
| 517 | ಲಕ್ಷ್ಮೀನಾರಾಯಣ ಭಟ್, S/o ಶ್ರೀನಿವಾಸ ಭಟ್, ಕಟ್ಟಿಂಗೇರಿ, ಎಚ್ಚೆರೆ, ಮೂಡುಬೆಳ್ಳೆ P. O. | 36/- |
| 525 | ತೊಡ ಸುಬ್ಬಾರಿ, S/o ಕೂಕ್ರ ಮುಕಾರಿ, ಪಾಣ್ಯಾರು ಪರ್ಕಾಸ್ತು, ಬಡ P. O | 35/- |
| 858 | ಕಾಂಪರ ಪೂಜಾರಿ, N/o ತಿಮ್ಮ ಪೂಜಾರಿ ಎಲ್ಲೆಡಿಡಿ, ಏಲಾರು P. O. | 220/- |
| 1206 | — Do — | 25/- |
| 32/273 | -- Do -- | 45/- |
| 31/1248 | ಕೆ. ಭೋಜ ಶೆಟ್ಟಿ; N/o ರಾಮಯ್ಯ ಶೆಟ್ಟಿ ಕಂಪನಿ, ಕುತ್ಯಾರು P. O. | 150/- |
| 1797 | ಗಿರಿಯ ಪೂಜಾರಿ, N/o ಮೊಂಟಿ ಪೂಜಾರಿ ತಂಬೆಮೊಟ್ಟು, ಏಲಾರ್ P. O. | 35/- |
| 2443 | ಅಂತೋನಿ ಮಥಾಯಸ್, S/o ಲಾವಿಸ್ ಮಥಾಯಸ್, ಟೀಚರ್ ಕಂಪೌಂಡ್, ಕುತ್ಯಾರು P. O. | 130/- |
| 32/489 | ಪೆಂಕಟಯ್ಯ ಶೆಟ್ಟಿ, S/o ಕಿಟ್ಟಣ್ಣ ಶೆಟ್ಟಿ, ಚಿತ್ರಸೈಲು, ನಂಜಾರು P. O. | 11/- |
| 556 | ಲೂಸಿ ಡಿಸೋಜ, W/o ಗಾಬ್ರೆಲ್ ಫೆರ್ನಾಂಡಿಸ್, ಮಲ್ಯೊಟ್ಟು, ನಂಜಾರು P O. | 45/- |

Office of the Catholic Bank, Ltd, SHIRVA.
10th June, 1957.

E. D. CUNHA,
*Ag. Agent.*


'NAVAYUGA' WEEKLY is in the list of periodicals and Newspapers approved for use in Secondary Schools as per proceedings Roc. No 466 N/50 date 2-12-1950 of the Directors of public Instruction Madras.

# ಹಾಲಿನ ಉಪಯೋಗ

## ಮೊಲೆ ಹಾಲಿಗಿಂತ ಉತ್ತಮ ಹಾಲಿಲ್ಲ---ನಿತಿಯರಿತೇ ಹಾಲನ್ನು ಸೇವಿಸುವುದಗತ್ಯ.

ಈ ಧರಿತ್ರಿಯಲ್ಲಿರುವ ಪ್ರತಿ ಜೀವಿಗೂ ಜೀವನಾಂಶವನ್ನು ಸೃಷ್ಟಿಸಿಯೇ ಇರುತ್ತಾನೆ—ಆ ಪರಮಾತ್ಮ ಆತನ ಆದೇಶವಿಲ್ಲದೆ ಒಂದು ಹುಲ್ಲು ಕಡ್ಡಿಯಾದರೂ ಅತ್ತಿತ್ತ ಅಲುಗಾಡಲಾರದು. ಒಂದೇ ಒಂದು ನಿಮಿಷ ಕೂಡಾ ಆವುದೂ ಜೀವಿಸಲಾರದು-ಎಂದರೆ ಅವೆಲ್ಲ ವಿಧಿಯ ಅಧೀನಕ್ಕೆ ಒಳಪಟ್ಟಿದೆ.

ಮಾತೆಯ ಉದರದಲ್ಲಿ—ಆ ಕತ್ತಲೆಯ ಕೋಣೆಯಲ್ಲಿ—ಕಣ್ಣೆವೆ ಮಚ್ಚಿ ಶಾಂತವಾಗಿ ಮಲಗಿದ ಶಿಶುವಿಗೆ ತಾಯಿಯ ಆಹಾರವೇ ಅದರ ಆಹಾರ. ಮುಂದೆ ಅದು ಈ ಪ್ರಪಂಚಕ್ಕೆ ಬಂದಾಗಿನಿಂದ ಹಲ್ಲು ಬಾದು--ಗಟ್ಟಿಯಾದ ಆಹಾರ ಜೀರ್ಣಿಸಿಕೊಳ್ಳುವ ತನಕ—ಆ ಮಗುವಿಗೋಸುಗವೇ ಮೊಲೆಹಾಲಿನ ತಯಾರಿ ತನ್ನಿಂದ ತಾನೇ ಆಗುತ್ತದೆ. ಇದು ಮನುಷ್ಯನರ್ಗದಲ್ಲಿ ಮಾತ್ರವೆಂದಲ್ಲ—ಸಕಲ ಜೀವ ಕೋಟಿಗಳಲ್ಲೂ ಇದೆ. ಎಂದರೆ ಮಗು ತಾಯ ಮೊಲೆಹಾಲನ್ನುಣ್ಣಲೇ ಬೇಕು-ಅದು ಮಗುವಿನ ಮುಂದಿನ ಬೆಳವಣಿಗೆಗೆ ಸಂಪೂರ್ಣ ಸಹಾಯಮಾಡುತ್ತದೆ ಎಂತಲೇ ಈ ಏರ್ಪಾಡು. ಈಗತಾನೇ ಕರುಹಾಕಿದ ದನವೊಂದರೆಡೆ ದೃಷ್ಟಿಬೀರಿ-ಆ ಪುಟ್ಟಕರು ತಾಯ ಮೊಲೆಯನ್ನರಸುತ್ತಾ ತನ್ನಿಂದ ತಾನಾಗಿ ತಾಯ ಕೆಚ್ಚಲಿಗೆ ಬಾಯನ್ನೊಡ್ಡಿ ಅಮೃತವಾನವನ್ನು ಗೈಯ್ಯುತ್ತದೆ. 'ಅಣ್ಣಾ-ಮೊಲೆಹಾಲನ್ನುಣ್ಣು, ಅದೋ ಅಲ್ಲಿದೆ' ಎಂದು ನೀನಾರಾದರೂ ಆದೇಶವಿತ್ತಿರಾ ಆದಕ್ಕೆ? ಇಲ್ಲ. ಅದಕ್ಕೆ 'ಪ್ರಕೃತಿ'ಯೇ ಪ್ರೇರಣೆಯನ್ನೀಯುತ್ತದೆ ಎಂಬಾಗ ಹಾಲಿನ ಸೃಷ್ಟಿ ಜೀವಿಯ ಸಂತಾನ ಬೆಳವಣಿಗೆಗೋಸುಗ. ಎಂಬುದು ನಮಗೆ ವೇದ್ಯವಾಗುತ್ತದೆ.

'ಹಾಳೆ'ಯಲ್ಲಿ ಪನಡಿಸಿ ಕೈಕಾಲಾಡಿಸುವ, ಅಂಬಿಗಾಲಿಕ್ಕಿ ಹರಿದಾಡುವ-ಮಗು ನೋಡಲು ಅದಷ್ಟು ಸುಂದರವೋ ಆದಕ್ಕಿಂತಲೂ ಮಿಗಿಲಾದ ಸುಂದರ, ಮನಮೋಹಕ ದೃಶ್ಯ—ಅದು ತಾಯ ಮೊಲೆಯನ್ನುಣ್ಣುತ್ತಿರುವಾಗ! ಮಾನವರಲ್ಲೇ ಆಗಲಿ ಪಶು ಪ್ರಾಣಿಗಳಲ್ಲೇ ಆಗಲಿ ಇಂತೋಷದ ಪರಮಾವಧಿಯಿಂದ ಸ್ತನ್ಯಪಾನ ಗೈಯ್ಯುತ್ತಿರುತ್ತವೆ—ಆ 'ಕಂದ'ಗಳು! ಅಂತೆಯೇ ತಾಯಿಯಾದವಳಿಗೂ ಮಗುವಿಗೆ ಮೊಲೆಯುಣಿಸುವುದೆಂದರೆ-ತನ್ನ ಕಂದನು ನೆಗು ಮುನಿಸನ್ನು ತೋರಿಸುತ್ತಾ ತನ್ನ ಸೆರಗನ್ನು ಸೆಳೆಯುತ್ತಿರುವುದನ್ನು ಈಕ್ಷಿಸುವುದೆಂದರೆ-ಅವಳಿಗದೊಂದು ಮೇರೆ ಮೀರಿದ ಸಂತೋಷ ತಾಯಿ—ಮಗುವಿನ ಬಾಂಧವ್ಯವನ್ನು ಧಿಕಗೊಳಿಸಲೆಂದೇ ಪರಮಾತ್ಮನಿತ್ತ ಶಕ್ತಿಯಿದು.

ಹಾಲಿನ ಸೃಷ್ಟಿ ಈರೀತಿಯಾಗಿದ್ದರೂ, ಇಂದಿನಜನತೆಯ ದೃಷ್ಟಿಮಾತ್ರ ಬೇರೆಯೇ ಆಗಿದೆ. ಎಷ್ಟೋ ಬಾಲಕರು ತಾಯ ಮೊಲೆ ಹಾಲು ಸಿಕ್ಕದೆ ಬಡಕಲಾಗಿಪೆ ಎಂದರೂ ಸಲ್ಲುವುದು. ಆದೆಷ್ಟೋ ಬೆಡಗಿನ ತರುಣಿಯರು—ಶ್ರೀಮಂತ ಮಹಿಳೆಯರು —ಮಗುವು ಮೊಲೆಯುಂಡರೆ ಅದೆಲ್ಲಿ ತನ್ನ ಆಂಗಸೌಷ್ಠವ ಕಡಿಮೆಯಾಗುವುದೋ ಎಂಬ (ಮೂಢಃ) ಭಾವನೆಯಿಂದ ತಮ್ಮ ಮಕ್ಕಳಿಗೆ ತಮ್ಮ ಸ್ತನ್ಯಪಾನ ಮಾಡಿಸುತ್ತಿಲ್ಲ. ಹೊರತಾಗಿ ದಾಸಿಯರಿಂದಾಗಲಿ, ಇಲ್ಲವೇ ಕೃತಕ ಮೊಲೆ(ಬಾಟ್ಲಿಗಳ ಮೂಲಕ)ಗಳಿಂದ ಆಕಳ ಹಾಲನ್ನಾಗಲಿ ಕೊಡುತ್ತಾರೆ. ಹಾ, ವಿಧಿಯೇ! ತನ್ನ ಎದೆಯಲ್ಲಿ ಚಿಮ್ಮುವ ಹಾಲಿನ ಸಂಗ್ರಹವಿದ್ದೂ ಮಗುವು ಕೃತಕ ಪ್ಲೆಸಿನಿಂದ ಪ್ರಾಣಿಯ ಹಾಲನ್ನು ಹೀರ ಬೇಕಾಯಿತೇ?

ಈ ರೀತಿ ಮಾಡುವುದರಿಂದ ಒಂದಲ್ಲ ಎರಡಲ್ಲ ಹಲವಾರು ಕೊಂದರೆಗಳವೆ. ಮಗುವಿನ ದೇಹ ಬೆಳವಣಿಗೆಗೆ ಅವಶ್ಯಕವಾದ ಕೆಲವು ಪೋಷಣಾಂಶಗಳು ಹಾಗೂ ರೋಗ ನಿರೋಧಕ ಶಕ್ತಿಗಳು ತಾಯ ಎದೆ ಹಾಲಿನಲ್ಲಿವೆ. ಇತರರ 'ಮೊಲೆ ಹಾಲು' ದನದ ಹಾಲು ಕುಡಿಯುವುದರಿಂದ ಆಂತಹ ಗುಣಗಳು ಅದಕ್ಕೆ ಸಿಕ್ಕಲಾರದು. 'ಮೊಲೆ ಹಾಲಿ'ಲ್ಲದ ಮಕ್ಕಳು ನಿರ್ಬಲರಾಗಿ ರೋಗ ಗ್ರಸ್ಥರಾಗಿಯೂ, ಶರೀಯಾಗಿ 'ಮೊಲೆ ಹಾಲಿ'ನ ಪೂರೈಕೆಯಾಗುವ ಮಕ್ಕಳು ಗುಂದಗೆ ಜೆಂಡಿನಂತೆ ಸೀರೋಗಿಗಳಾಗಿಯೂ ಇರುವುದೇ ಅದಕ್ಕೆ ನಿದರ್ಶನ. ಪ್ರಾಣಿಗಳಲ್ಲೂ ಅಂತೆಯೇ; ತಾಯ ಅಕಾಲ ಮರಣಕ್ಕೆ ತುತ್ತಾಗಿ, ಅಥವಾ ಇನ್ನಿತರ ಕಾರಣಗಳಿಂದ ಕರುವಿಗೆ ತಾಯ ಹಾಲು ದೊರೆಯದಿದ್ದಲ್ಲಿ ಆ ಕರುವು ಬದುಕುವುದೇ ಕಡಮೆ. ಬದುಕಿದರೂ ನಿರ್ಬಲವಾಗಿರುತ್ತದೆ.

ಮೊಲೆಯುಣಿಸುವುದರಿಂದ ಕುಚಿಗಳಲ್ಲಿ ಸರಿಯಾಗಿ ಹಾಲಿನ ಪೂರೈಕೆಯಾಗಿ ಕರುಣಿಯು ಅಂಗಸೌಷ್ಠವ ಹೆಚ್ಚುವುದೇ ಹೊರತು ಕುಂದುವದಿಲ್ಲ. ಅದೊಂದು ಮೂಢ ಭಾವನೆ. ತನ್ನ ಮಗುವಿಗೆ ಹಾಲಿನ ಪೂರೈಕೆಗಾಗಿಯೇ ಪ್ರಕೃತಿ ಸ್ತನಗಳನ್ನು ನಿರ್ಮಿಸಿದುದಾಗಿದೆ. ಹಾಲುಣ್ಣಿಸುವುದನ್ನು ಬಿಟ್ಟರೆ ಕ್ರಮೇಣ ಪುಕ್ರವಾತ್ಸಲ್ಯವೂ ಕಡಮೆಯಾಗಿ ಮಗುವಿಗೂ ತಾಯ ನೈಜಪ್ರೇಮದ ಅರಿವು ಕುಂಠಿತವಾಗಬಲ್ಲುದು. ಇದರಿಂದ ತಾಯಿ ಮಕ್ಕಳ ನಿಕಟ ಸಮ್ಬಂಧವೇ ಕಡಿಮೆಯಾಗುವುದು. ವಾತ್ಸಲ್ಯವಲ್ಲಿ ಮಗುವಿನ 'ಅಡ್ಡದಾರಿ'ಗೆ ತಾಯಿ ಪ್ರೋತ್ಸಾಹವಿತ್ತಂತಾಗುವುದು. ಆದ್ದರಿಂದ ನಮ್ಮ ತಾಯಂದಿರು ಮಕ್ಕಳಿಗೆ ಮೊಲೆಯುಣ್ಣಿಸುವುದೆಂದರೆ ಪವಿತ್ರ ಕಾರ್ಯವೆಂದು ತಿಳಿದು, ಉತ್ತಮ ಜನಾಂಗದ ನಿರ್ಮಾಣಕ್ಕೆ ಕಾರಣರಾಗಬೇಕಾದುದು ಅಗತ್ಯ.

ಇದು ಮಕ್ಕಳ ಕುರಿತಾಗಿಯಾಯಿತು. ಹಿರಿಯರ ಕುರಿತೂ ಹೇಳುವುದಿದ್ದರೆ, ಹಾಲೆಂಬುದು ಬಾಲ್ಯದಲ್ಲಿ ಕುಡಿಯ ತಕ್ಕುದೇ ಹೊರತು ಹರೆಯದಲ್ಲಲ್ಲ. ಪ್ರಕೃತಿಯು ಗೋ ಸಂತತಿಗಾಗಿಯೇ ಅವುಗಳಲ್ಲಾ ಹಾಲನ್ನು ಸೃಷ್ಟಿಸಿದೆಯೇ ಹೊರತು ಮಾನವಸಿಗಾಗಿಯಲ್ಲ. ಜೀನು ನೊಣಗಳು ತಮ್ಮ ಆಹಾರವಾಗಿ ಸಂಗ್ರಹಿಸಿದ ಜೇನನ್ನು ನಾವು ಕ್ರೂರ ರೀತಿಯಿಂದ ಅಪಹರಿಸುವುದು ಅದೆಂತು ಸಲ್ಲದ ಕಾರ್ಯವೋ ಆಂತೆಯೇ ಮೊಲೆ ತಿನ್ನಲೆಂದು ಬಾಯಿ ಹಾಕುತ್ತಿರುವ ಆ ಕರುವನ್ನು ಹಿಡಿದೆಳೆದು ಗೂಟಕ್ಕೆ ಬಿಗಿದು ಹಾಲನ್ನು ಕರೆಯುತ್ತಿರುವುದೂ ಅಷ್ಟೇ ಪಾಪದ ಕೆಲಸ. ಮಾಕ್ರವಲ್ಲ ಆವುಗಳ ಬೆಳವಣಿಗೆಗೆ ನಾವು ಅಡ್ಡಿ ತಂದಂತೆಯೇ ಸರಿ!

ಹಾಲನ್ನಷ್ಟೆ ಪೌಷ್ಟಿಕಾಂಶವಿರಬಹುದು; ಆದರೆ ಅದರಿಂದ ನಾವು ಪುಷ್ಟಿಯಾಗುವೆವು ಎನ್ನುವುದು ತಪ್ಪು. ಅದೇಕೆಂದರೆ, ಸಾಕಷ್ಟು ಹಾಲು, ಬೆಣ್ಣೆ, ತುಪ್ಪ, ಮಜ್ಜಿಗೆ ಪೆಲ್ಲುತ್ತಿದ್ದ ಓರ್ವ ಶ್ರೀಮಂತ ವ್ಯಕ್ತಿಗೂ, ಅವನ್ನೊಂದನ್ನೂ ಸೇವಿಸದೆ ಇರುವ ಇನ್ನೋರ್ವ ಹಳ್ಳಿಯ ರೈತನಿಗೂ ಪುಷ್ಟಿಗುಣ್ಣ ಶಕ್ತಿಯಲ್ಲಿ ಅಜಗಜಾಂತರ ವಿದೆ. ಎಂದರೆ ಹಾಲು ತುಪ್ಪ ತಿಂದರೆ ಶಕ್ತಿ ಬರುವುದಿಲ್ಲ. ತಿನ್ನುವುದು ಸಾದಾ ಆಹಾರವೇ ಸಾಕು; ಆದರೆ ಜೆನ್ನಾಗಿ ಕಾಯಿಕಶ್ರ್ಮ ಮಾಡಬೇಕು. ಹಾಗಿದ್ದರೆ ಶರೀರ ಬಲವೂ, ಸಾಮರ್ಥ್ಯವೂ ಬರುವುದು. ಹಾಲೇ ಆಹಾರವಾಗಿರುವ ಚಿಕ್ಕ ಮಗುವೊಂದು ಕೆಲವು ಕಾರಣಗಳಿಂದ ತಾಯಿಯ ಎದೆಹಾಲು ಪಡೆಯುವ ಪುಣ್ಯ ಪಡೆಯದಿದ್ದಲ್ಲಿ—ಅಥವಾ ಅದು ಕಡಮೆಯಾಗಿದ್ದಲ್ಲಿ— ಮಾತ್ರ ಕುಡಿಯಬಹುದೇ ಹೊರತು ಇತರರು ವಿಪರೀತ ಹಾಲನ್ನು ಕುಡಿಯುವುದು ತಪ್ಪು.

ಹಾಲಿನ ಶಕ್ತಿ ಸರಿಯಾಗಿ ಸಿಕ್ಕಬೇಕಿದ್ದರೆ ಅದಕ್ಕೆ ಗಾಳಿ ಸೇರಕೂಡದು. ಅಂದರೆ ಮಾತ್ರ ಅದು ಇಂಜೆಕ್ಷನಿನಂತೆ ಒಡನೆಯೇ ಶರೀರಕ್ಕೆ ಒಗ್ಗುವುದು. ಆ ರೀತಿ ಪ್ರಕೃತಿ ರಚಿಸಲೂ ರಚಿಸಿದೆ. ಮಗು ತಾಯಿಯ ಸ್ತನ್ಯವನ್ನು ಬಾಯಿಯಿಂದ 'ಚೀಪು'ವಾಗ ಅಲ್ಲಿ ಗಾಳಿ ಸಂಪರ್ಕವಾಗಲು ಎಡೆಯೇ ಇಲ್ಲ- ಆಂತೆಯೇ ಅದು ಮಗುವಿಗೆ ಪಚನಾಮಕಾರಿಯಾಗಿದೆ ಶ್ರೀಕೃಷ್ಣನು ಆಕಳ ಮೊಲೆಗೆ ಬಾಯಿ ಹಾಕಿದ ತುಂಟತನದ ಕಥೆ ನಾವು ಕೇಳಿದ್ದೇವೆ. ಇದು ಈ ತತ್ವವನ್ನು ಇನ್ನಷ್ಟೂ ಬಲಪಡಿಸುತ್ತದೆ. ಶ್ರೀ ಕೃಷ್ಣನು ತಾಯಿಯ ಸ್ತನ್ಯಪಾನ ಮಾಡಲು ಅಸಮರ್ಥನಾಗಿದ್ದ. ಆವನ ತಾಯಿ ದೇವಕಿ. ಸೆರೆಮನೆಯಲ್ಲಿದ್ದಳು. ಆದ್ದರಿಂದಲೇ ಆತ ಆಕಳ ಹಾಲು ಹೀರಿದುದು. ಇವನಿಗೆ ಹಾಲೆಂದರೆ ಪ್ರೀತಿಯಾಗಲು ಕಾರಣವೂ ಇದೇ ಇರಬಹುದು.

ಅಮೃತವಾದರೂ ಹೆಚ್ಚು ಸವಿದರೆ ವಿಷವಾಗುವುದಂತೆ. ಅಂತೆಯೇ ಹಾಲನ್ನು ಅಮೃತವೆಂದು ನಾವು ಹೆಚ್ಚು ಹೀರ ಬಾರದು. ಅದನ್ನು ಅಮೃತದಂತೆಯೇ ಮಿತಪ್ರಮಾಣದಲ್ಲಿ ಕುಡಿಯುವೇಕು. ಮಿತಮಿರಿ ಕುಡಿಯುವ ನಮ್ಮ ಅಭ್ಯಾಸದಿಂದಲೇ ಹಾಲಿನ ಪೂರೈಕೆಯು ದೊಡ್ಡ ಸಮಸ್ಯೆಯಾಗಿ ಒಂದೆಡೆಯಿಂದ ಇನ್ನೊಂದೆಡೆಗೆ "ಪುಡಿ"ಯ ರೂಪದಿಂದ ವರ್ತಾವಣೆಯಾಗಬೇಕಾಗಿ ಬಂದಿದೆ.

—ಕೀ. ವ. ಕೇಶವ, ದೇಲಂಪಾಡಿ.


Approved by the Text Book Committee of Madras, for non-detailed study in higher Forms (vide Page 7, Fort St. George Gazette, Part I—B dated 4—5...1955).

ಬಂಗಾರದಂತಹ ಪುಸ್ತಕವೆಂದು ಸಮಗ್ರ ಕರ್ನಾಟಕದ ಪತ್ರಿಕಾ ಪ್ರಪಂಚದಿಂದ ಪ್ರಶಂಸಿಸಲ್ಪಟ್ಟ ಹೊಸ ಬಗೆಯ ಗ್ರಂಥ

# ಬಿದುಕು ಬಂಗಾರ

(ಬರೆದವರು: ಕುಮಾರಸ್ವಾಮಿ)

ಹೈಸ್ಕೂಲುಗಳ IV ಯಾ Vನೇ ಫಾರ್ಮುಗಳಿಗೆ ಉಪಪಠ್ಯ ಪುಸ್ತಕವಾಗಿ ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯಿಂದ ಮುಂಜೂರಾತಿ ಪಡೆದಿದೆ.

**ಹಲವು ತಾಸಿಗೆ ಮತ್ತು ಜಿಲ್ಲಾ ಬೋರ್ಡಿನ ಎಲ್ಲಾ ಹೈಸ್ಕೂಲುಗಳಲ್ಲಿಯೂ ಉಪಪಠ್ಯ ಪುಸ್ತಕವಾಗಿ ಆರಿಸಲ್ಪಟ್ಟಿದೆ.**

ಪುಟಗಳು ೧೫೫ ಬೆಲೆ: ರೂ. ೧ : ೫೫

ಪ್ರತಿಗಳಿಗೆ ಬರೆಯಿರಿ:

**ನವಯುಗ ಪ್ರೆಸ್, ಉಡುಪಿ.**


## ಕುಂದಾಪುರ ಡಿ. ಮು. ಕೋರ್ಟಿನಲ್ಲಿ

**O. P. 18/57.**

1 ಚಿಣ್ಣಮ್ಮ ಪೆಂಗ್ಸು- ಮುತ್ತಯ್ಯನ ನಿಧವೆ —ಆರ್ಜಿದಾರರು

2 ಮೈನರ ಭವಾನಿ, 3 ಮೈನರ ಮೆಂಕಮ್ಮ 4 ಮೈನರ ಮಹಾಬಲ, 5 ಮೈನರ ದೇವಿ, 6 ಮೈನರ ಅಕ್ಕಣಿ—1ನೇ ಆರ್ಜಿದಾರರ ಮಕ್ಕಳು. ಕೈಮೆಚಿಂತಕಳು ತಾಯಿ 1ನೇ ಆರ್ಜಿದಾರಳು.

ಕುಂದಾಪುರ ತಾಲ್ಲೂ ಬಡಾತೆಕರೆ ಗ್ರಾಮದ ಟ್ಯೂಸರಟೆಟ್ಟು ಸೋಸ್ಯು ನಾವುಂದ.

ವಿದ್ರಿ ಇಲ್ಲ.

1ನೇ ಆರ್ಜಿದಾರರ ಗಂಡ 2ನೇ ಆರಾಮ್ಜಾಕಿನ ಆರ್ಜಿದಾರರ ತಂದೆ ಹಾಲೀ ಮೃತಪಟ್ಟಿರುವ ಮುತ್ತಯ್ಯ ಎಂಬವರಿಗೆ ದಿ. ಬೊಂಬೇ ಲ್ಯಾಕ್ಷ್ ಇನ್ಸೂರೆನ್ಸ್ ಕಂಪನಿ ಲಿಮಿಟೆಡ್ ಇವರ ಪೋಲಿಸಿ ನಂಬ್ರ 39900ನ್ನ ಬಾಬ್ತು ಬರತಕ್ಕ ಅವಜು ಮತ್ತು ವ. ಕೆ. ಜಿಲ್ಲಾ ಬೋರ್ಡಿನಿಂದ ಬರತಕ್ಕ ಸಂಬಳದ ಬಾಬ್ತು ಹಣ ಸಹಾ ವಸೂಲುಮಾಡುವರೆ ಆರ್ಜಿದಾರರು ಹಕ್ಕುದಾರರಿಂತಲೂ ಆ ಕಾರಿತು 1ನೇ ಆರ್ಜಿದಾರಳ ಹೆಸರಿಗೆ ಪಾರೀಕುರ್ಟಿಫಿಕೇಟು ಕೊಡಿಸಬೇಕೆಂತಲೂ ನಮ್ಮೆರೆ ಕಾಜ್ಸು ಪಾಕ್ಸು ಮಾಡಿದ ಮೇರಿನ ಆರ್ಜಿಯು ತಾರೀಕು 15-6-1957ಕ್ಕೆ ಮೇಲ್ಕಾಣಿಸಿದ ಕೋರ್ಟಿನಲ್ಲಿ ತನ್ನಬಗ್ಗೆ ಇಹೋಗಾಗಿಯಿದೆ. ಆ ಕಾರಿತು ಏನಾದರೂ ಆಕ್ಸೇಪವುಳ್ಳವರು ಸದ್ರಿ ದಿನವಸ ಹಗಲು 11 ಗಂಟೆಗೆ ಹಾಜ್ರಾಗಿ ಜ್ಞಾಪೀರು ಮಾಡಿಕೊಳ್ಳತಕ್ಕದ್ದು, ತಪ್ಪಿದ್ರೆ ಯೆಕ್ಸಪಾರ್ಟಿಯಾಗಿ ತೀರ್ಮಾನಿಸಲಾದೀತು ಎಂತ ಕೋರ್ಟು ಹುಕ್ಕುಂಪ್ರಕಾರ ತಿಸಿಯವೆ.

**V. Stinivasa Shetty,**
Advocate for Petitioners.

ತಾ. 4-6-1957 ಕುಂದಾಪುರ.

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

# NAVAYUGA

Popular Kannada Weekly

*Founder:—*

**A. B. SHETTY,**

Former Minister for Public Health, Govt. of Madras & Govt of Mysore

# ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

| ಸಂಪುಟ | ಉಡುಪಿ | ಸಂಚಿಕೆ |
|---|---|---|
| ೩೬ | ೧೬-೬-೧೯೫೭ | ೪೦ |


## ಪ್ರಾಥಮಿಕ ಶಿಕ್ಷಕರ ಕಷ್ಟ

ನಮ್ಮ ಈ ಸಂಚಿಕೆಯು ಬೇರೊಂದೆಡೆಯಲ್ಲಿ ಜಿಲ್ಲೆಯ ಪ್ರಾಥಮಿಕ ಶಿಕ್ಷಕರಲ್ಲಿ ಒಂದು ವರ್ಗದವರಿಗೆ ಬಂದಿರುವ ಆಪತ್ಕಾಲದ ಬಣ್ಣನೆ ಮಾಡುವ ಲೇಖನ ಪ್ರಕಟಿಸಿರುವುದನ್ನು ವಾಚಕರು ಗಮನಿಸಿರಬಹುದು. ಜಿಲ್ಲೆಯ ವಿದ್ಯಾಧಿಕಾರಿಗಳು ಒಂದು ಆಜ್ಞೆಯನ್ನು ಹೊರಡಿಸಿ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರಾಗಿ ೧-೬-೧೯೫೬ನೇ ತಾರೀಕಿನ ಬಳಿಕ ಸೇರಿದವರನ್ನು ಸರಕಾರಿ ಹಾಜರಿಯು ಮೂವತ್ತರಷ್ಟು ಇಲ್ಲವಾದರೆ ಕೆಲಸದಿಂದ ವಜಾಪಡಿಸಬೇಕೆಂದೂ ಹಾಗಲ್ಲದಿದ್ದರೆ ಸರಕಾರಿ ಸಹಾಯಧನವು ದೊರೆಯಲಾರದೆಂದೂ ಸೂಚಿಸಿ ಅನ್ಯಾಯ ಮಾಡಿರುತ್ತಾರೆಂಬುದೇ ಆ ಲೇಖನದ ಸಾರ. ನಾವಾದರೂ ಇದೇ ಅಭಿಪ್ರಾಯವನ್ನು ಅನುಮೋದಿಸುತ್ತೇನೆ. ಅಧ್ಯಾಪಕ ವರ್ಗದವರು ನಮ್ಮ ಜಿಲ್ಲೆಯಲ್ಲಿ ಇಷ್ಟರ ವರೆಗೆ ತೋರಿಸುತ್ತಾ ಬಂದಿರುವ ಸಹನೆಯು ಆಶ್ಚರ್ಯಕರವಾದುದಾಗಿರುತ್ತದೆ. ಕ್ರಮನಿಯಮಗಳ ಹೊರೆಯು ದಿನದಿಂದ ದಿನಕ್ಕೆ ಭಾರವಾಗುತ್ತಾ ಬರುತ್ತಿದ್ದರೂ ಸಿಗುವ ವೇತನವು ಹಾಸ್ಯಾಸ್ಪದವೆನಿಸುವಷ್ಟು ಅಲ್ಪವಾಗಿದ್ದರೂ ಅಧ್ಯಾಪಕರು–ಸಾಮಾನ್ಯ ಕೂಲಿಕಾರರಿಗಿಂತ ಮೇಲಿನ ಮಟ್ಟದ ಬುದ್ಧಿಜೀವಿಗಳಾದ ದೆಸೆಯಿಂದಲೇ ಎಂದು ಕಾಣುತ್ತದೆ— ಶಾಂತ ವಿಧಾನದಿಂದಲೇ ತಮ್ಮ ಹಾಲಹವಾಲೆಗಳನ್ನು ಅಧಿಕಾರಿವರ್ಗದ ಮುಂದೆ ಮಂಡಿಸಿ, ಪರಿಹಾರವನ್ನು ಬೇಡುತ್ತಾ ಬಂದಿದ್ದಾರೆ— ನಿಜವಾಗಿ ಯಾವ ಪರಿಹಾರವು ಸಿಗದಿದ್ದಾಗಲೂ ಪರಿಹಾರದ ಆಶೆಯನ್ನು ಬಿಡದೆ ತುಂಬ ತಾಳ್ಮೆಯನ್ನು ಪ್ರದರ್ಶಿಸಿದ್ದಾರೆ, ಎನ್ನುವುದರಲ್ಲಿ ಪ್ರತಿಮಾತಿರಲಾರದು. ಜನಪ್ರತಿನಿಧಿಗಳಿಂತ ಮೇಲಿನ ಮನೋಮಟ್ಟವನ್ನು ಹೊಂದಿರುವ ಈ ಅಧ್ಯಾಪಕ ವರ್ಗದವರನ್ನು ಇನ್ನೂ ಇನ್ನೂ ನೋಯಿಸುವುದು ಸರಕಾರಕ್ಕೆ ಭೂಷಣಪ್ರಾಯವಾದುದಲ್ಲ ಈಚೆಗೆ ನಾವು ಬರೆದೊಂದು ಅಗ್ರಲೇಖದಲ್ಲಿ ಪ್ರಾಥಮಿಕ ಶಾಲೆಯ ಶಿಕ್ಷಕರ ವೇತನವನ್ನು ಹೆಚ್ಚಿಸುವ ಕುರಿತು ಸಚಿವಾನುಭೂತಿಯ ಮಾತುಗಳನ್ನು ಆಡಿದ್ದುಂಟು: ಸರಕಾರವು ಈ ವಿಷಯದಲ್ಲಿ ಯಾವುದೇ ಪ್ರೋತ್ಸಾಹನಾಯಕ ಪಾಜಿಟ್ಟಿವಂತೆ ಕಂಡುಬರುತ್ತಿಲ್ಲ. ಸುತ್ತಮುತ್ತಲಿನ ಎಲ್ಲ ಕಡೆಯ ಅಧ್ಯಾಪಕರೂ ಹೆಚ್ಚಿನ ಸಂಬಳವನ್ನು ಪಡೆಯುತ್ತಿರುವಾಗ, ಸ್ವತಃ ಮೈಸೂರು ಸರಕಾರದ ಶಾಲೆಗಳವರು ವೃದ್ಧಿಸಿದ ವೇತನಕ್ಕೆ ಭಾಗಿಗಳಾಗಿರುವಾಗ, ಈ ಜಿಲ್ಲೆಯ ಸರಕಾರೇತರ ಶಾಲೆಗಳ ಅಧ್ಯಾಪಕರನ್ನು ಮಾತ್ರ ವಂಚಿಸುವುದು ಸರಕಾರಕ್ಕೆ ಶೋಭೆ ತರುವ ವಿಷಯವಲ್ಲ. ಅದೇ ರೀತಿ, ಶಿಕ್ಷಣ ಸಮಿತಿಗಳ ಸರಕಾರಿ ಹಾಜರಿಯನ್ನು ಗಣನೀಯವಾಗಿ ಏರಿಸುವುದು ಹೇಗೆ ಎಂಬುದನ್ನಾದರೂ ಸರಕಾರಿ ಅಧಿಕಾರಿಗಳು ಗಮನಿಸಿಸಬಹುದಿತ್ತಲ್ಲ. ನಮ್ಮ ಜಿಲ್ಲೆಯಲ್ಲಿ ಶಿಕ್ಷಣ ಮಟ್ಟವು ಉಳಿದ ಕಡೆಗಳಿಗಿಂತ ಹೆಚ್ಚು ಕೃಪ್ರಿಕರವಾದ ಹಂತದಲ್ಲಿದೆ ಎಂಬುದು ಎಲ್ಲರಿಗೂ ಗೊತ್ತಿರಬಹುದಾದ ವಿಷಯ. ಇಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಕಲಿಯುವ ಪ್ರಾಯದ ಬಾಲಕ, ಬಾಲಿಕೆಯರಲ್ಲಿ ಎಲ್ಲೂ ಅಲ್ಲಲ್ಲಿ ಇಷ್ಟಿಷ್ಟು ಮಂದಿ ಮಾತ್ರ ಶಾಲೆಯ ಹೊರಗಿದ್ದಾರೆ. ಅಂಥವರನ್ನು ಸಹ ಏಕೋವಾಧ್ಯಾಯ ಶಾಲೆಗಳ ವರ್ತುಲದೊಳಕ್ಕೆತ್ತರುವ ಸಾಹಸಕಾರ್ಯವೀಗ ಒಂದೆರಡು ವರ್ಷಗಳಿಂದ ನಡೆದಿರುತ್ತದೆ. ಹೀಗಾಗಿ ಶಾಲೆಗಳು ಇರುವಕಡೆಗಳಲ್ಲಿ ಸರಕಾರಿ ಹಾಜರಿಯನ್ನು ಹೆಚ್ಚಿಸುವುದು ಭಗೀರಥ ಪ್ರಯತ್ನ ಮಾಡಿದ ಬಳಿಕವೂ ಫಲ ಬರಲಾಂದ ಕೆಲಸವೆಂದು ಸಾಮಾನ್ಯವಾಗಿ ಎಲ್ಲೆಡೆಯ ಅಧ್ಯಾಪಕರೂ ಅಭಿಪ್ರಾಯ ಪಡುತ್ತಾರೆ. ಆದುದರಿಂದ ವಿದ್ಯಾಧಿಕಾರಿಗಳು ಏಕೆ ಇಂಥ ಆಜ್ಞೆ ಹೊರಡಿಸಿದರೋ ಗೊತ್ತಾಗುವುದಿಲ್ಲ. ಅಧ್ಯಾಪಕರ ಸಂಖ್ಯೆಯನ್ನು ಕಡಿಮೆ ಮಾಡಿ ಸರಕಾರಿ ಖರ್ಚಿನ ನೆಯ ಹೊಣೆಯನ್ನು ಉಳಿಸುವುದು ಅವರ ಉದ್ದೇಶವಿದ್ದರೆ, ನಾವೊಂದು ಮಾತನ್ನು ಇಲ್ಲಿ ಹೇಳಬೇಕಾಗುತ್ತದೆ–ಆಸೇನೆಂದರೆ, ಪ್ರಾಥಮಿಕ ಶಾಲೆಗಳಲ್ಲಿ ಅಧ್ಯಾಪಕರು ವಿದ್ಯಾರ್ಥಿಯ ಕಡೆಗೆ ಎಷ್ಟೆಷ್ಟು ಹೆಚ್ಚಾಗಿ ವೈಯಕ್ತಿಕ ಗಮನವನ್ನು ಕೊಡುತ್ತಾರೋ, ಅಷ್ಟಷ್ಟು ಅವಿದ್ಯಾರ್ಥಿಗೆ ಪ್ರಯೋಜನವಾಗುತ್ತದೆ. ಒಬ್ಬ ಅಧ್ಯಾಪಕನು ಲಕ್ಷ್ಯವನ್ನು ಸೂರೈಸಬೇಕಾದ ವಿದ್ಯಾರ್ಥಿಗಳ ಸಂಖ್ಯೆಯು ಎಷ್ಟು ಕಡಿಮೆಯಾಯಿತೋ ಅಷ್ಟು ಮಟ್ಟಿಗೆ ವಿದ್ಯಾರ್ಥಿಗಳಿಗೆ ಲಾಭವೆಂದು ಇದರ ಅರ್ಥ. ಇದನ್ನು ಹೆತ್ತವರು ಗಮನಿಸಬೇಕು—ಮತ್ತು ಸರಕಾರದ ನೋಲೆ ಒತ್ತಾಯವನ್ನು ಹೇರಿ, ಅಧ್ಯಾಪಕರು, ನೂರಾರು ಕುರಿಗಳನ್ನು ಒಂದೇ ಮಂದೆಯಲ್ಲಿ ಪೇಯಿಸುವ ಕುರುಬನಂತಾಗದೆ, ಹೆತ್ತ ತಾಯ್ತಂದೆಯಿರಬೇಕೋ ಆ ಪೂಜ್ಯ ಸ್ಥಾನದಲ್ಲಿರುವಂತೆ ಆಪೇಕ್ಷೆಯಿಂದ ವಿದ್ಯಾರ್ಥಿಗಳ ಗುಣ ಶೀಲ ನಡತೆಗಳ ಪರಿಮಾರ್ಜನೆಗೈಯಲು ಸಾಧ್ಯವಾಗುವಂತೆ, ಅವರ ನೆಲಕ್ಕೆ ಒಪ್ಪಿಸಿಲಾಗುವ ವಿದ್ಯಾರ್ಥಿಗಳ ಸಂಖ್ಯೆಯನ್ನು ಅದಷ್ಟು ಕೆಳಮಟ್ಟದಲ್ಲಿ ಡಬೇಕಾಗಿ ಸೂಚಿಸಲು ಮುಂದಾಗಬೇಕು ಎಂದು ನಮಗೆ ತೋರುತ್ತದೆ. ಮೂವತ್ತು–ನಲ್ವತ್ತು ಸಮಿಪಗಳ ಜವಾಬ್ದಿಯಲ್ಲಿ ವಾತಾವರಣವನ್ನು ಮಾತ್ರ ಮಾಡುವುದಲ್ಲದೆ, ಜೊತೆಯಲ್ಲಿ ೫೦ ಮಂದಿ ಬಾಲಕ ಬಾಲಿಕೆಯರ ಗುಣ ನಡತೆಗಳನ್ನೂ ತಿದ್ದುವ ಹೊಣೆ ಪಾಠದ ಸಾರವನ್ನು ಅವರು ಜೀರ್ಣಿಸಿಕೊಳ್ಳುವಂತೆ ಮಾಡುವ ಹೊಣೆಗಾರಿಕೆಯನ್ನು ನಿರ್ವಹಿಸುವುದು ಅಧ್ಯಾಪಕರನ್ನು ಇಷ್ಟರಿನರೆಗೆ ಎದುರಿಸುತ್ತಿದ್ದ ಸಮಸ್ಯೆ. ಈಗ ಇಪ್ಪತ್ತರ ಬದಲಿಗೆ, ಮೂವತ್ತು ವಿದ್ಯಾರ್ಥಿಗಳ ಜೊಣ್ಣೆಯನ್ನು ಹೊರಬೇಕೆಂದರೆ ಹೇಗಾದೀತು? ಅಧ್ಯಾಪಕರು ಎಸ್ಟರಮಟ್ಟಿಗೆ ಈ ಹೊಡೆಗ ತುಡುಗಿಯರ ಕಡೆಗೆ ಗಮನಹರಿಸಲು ಅವಕಾಶವಿಡಬೇಕು? ಆಂಥ ಶಿಕ್ಷಣಕ್ಕೆ ಶಿಕ್ಷಣ ಎಂಬ ಪವಿತ್ರ ಶಬ್ದವಾದರೂ ಕೇಗೆ ಒಪ್ಪೀತು? ಎಲ್ಲಕ್ಕಿಂತ ಮೇಲಾಗಿ, ಕಳೆದ ಜೂನಿನಿಂದ ಸೇರಿದ ಅಧ್ಯಾಪಕರಿಲ್ಲರನ್ನು ಅತಿರಿಕ್ತರ (ಸರ್‌ಪ್ಲಸ್) ಶ್ರೇಣಿಗೆ ಸೇರಿಸುವುದೇ ದಾಷ್ಟ್ಯವಲ್ಲವೆ? ಹಾಗೆ ಸೇರಿದವರಲ್ಲಿ ಎಷ್ಟೊ ಮಂದಿ ಹಳಬರ ಬದಲಿಗೆ ಬಂದವರಿರಬಹುದು. ಎಷ್ಟೊ ಮಂದಿ ಕೆಲಸ ಮೊಕಿತ ಆನಂದದಲ್ಲಿ ಇನ್ನೂ ಇದ್ದಿರಬಹುದು. ಇವರಿಗೆ ಕೆಲಸ ಹೋಗುವ ಚಿಂತೆಯನ್ನು ತಂದೊಡ್ಡುವುದು ಚಂದವೆ? ನಿಮ್ಮಿರ್ಯೋಗ ನಿವಾರಣೆಗಾಗಿ ಸರಕಾರದವರು ಪಂಶ್ನವನ್ನು ಪಡುತ್ತಿರುವಾಗ ಇನ್ನೊಂದಿಷ್ಟು ಕೆಲಸದಲ್ಲಿದ್ದವರೂ ಮನೆಗೆ ಹೋಗಬೇಕಾಗಿ ಬರುವಂಥ ಪರಿಸ್ಥಿತಿಯನ್ನು ನ್ಯಾಯವಾದ ಯಾವ ಕಾರಣವೂ ಇಲ್ಲದೆ ಸೃಷ್ಟಿಸುವುದು ಸೂಕ್ತವೇ? ಹೀಗೆಲ್ಲ ಅಧ್ಯಾಪಕರ್ಯ ಕೇಳುವಂತಾಗಿರುವುದು ನಿಜಕ್ಕೂ ಶೋಚನೀಯ. ವಿದ್ಯಾಧಿಕಾರಿಗಳ ಆಜ್ಞೆ ಏನೇ ಹೇಳಲಿ— ರಾಜ್ಯದ ವಿದ್ಯಾಂಗ ಸಚಿವರೂ ಮುಖ್ಯ ಮಂತ್ರಿಗಳೂ ಈ ವಿಷಯದಲ್ಲಿ ಸ್ವತಃ ಪ್ರವೇಶಿಸಿ, ಜಿಲ್ಲೆಯ ಅಧ್ಯಾಪಕರ ರಕ್ಷಣೆಗೆ ಧಾವಿಸಿ ಬರಬೇಕೆಂದು ನಾವು ಆಗ್ರಹಪೂರ್ವಕವಾಗಿ ಸೂಚಿಸಲಿಚ್ಛಿಸುತ್ತೇನೆ. ಅಧ್ಯಾಪಕರ ವಿಷಯದಲ್ಲಿ ಇನ್ನೂ ಕಣ್ಣುಮುಚ್ಚಾಲೆಯಾಟವನ್ನೆ ನಡೆಸುತ್ತಿರುವುದು ಎಷ್ಟಕ್ಕೂ ಯುಕ್ತವಲ್ಲ.

## ಸಂಕ್ಷಿಪ್ತ ಸುದ್ದಿಗಳು

### ಆಹಾರ ಧಾನ್ಯಗಳ ಬೆಲೆಯನ್ನು

ತಗ್ಗಿಸಲು ಕೇಂದ್ರ ಸರಕಾರವು ಪ್ರಾದೇಶಿಕ ನಿರ್ಬಂಧವನ್ನು ಹೇರುವುದು, ವ್ಯೇಂಕುಗಳು ಕೊಡುವ ಮುಂಗಡ ಹಣದ ಮೇಲೆ ಮಿತಿಹಾಕುವುದು ಮತ್ತು ಸಂಗ್ರಾಹಕನು ಹಿಂದಿನ ಮೂರು ತಿಂಗಳ ಸರಾಸರಿ ಬೆಲೆಗೆ ಸರಕಾರಕ್ಕೆ ಮಾರುವಂತೆ ಪತ್ತಾಯ ಹಾಕುವುದು, ಅಧಿಕ ಆಯಾತ ಮಾಡುವುದು, ನ್ಯಾಯ ಬೆಲೆಯ ಅಂಗಡಿಗಳನ್ನು ತೆರೆಯುವುದು ಮೊದಲಾದ ಕ್ರಮಗಳನ್ನು ಕೈಕೊಳ್ಳಲಿದೆಯಲ್ಲದೆ ಮತ್ತೆ ನಿಯಂತ್ರಣವನ್ನು ತರುವ ಯೋಚನೆಯಲಿಲ್ಲವೆಂದು ಮದ್ರಾಸಿನಲ್ಲಿ ಆಹಾರ ಮಂತ್ರಿಗಳು ತಿಳಿಸಿದ್ದಾರೆ.

### ಕೇರಳದ ಮುಂಗಡ ಪತ್ರವು

ಇದೀಗ ಪ್ರಕಟಿಗೊಂಡು ಶಾಸನ ಸಭೆಯಲ್ಲಿ ಚರ್ಚಿಸಲ್ಪಡುತ್ತಿದೆ. ಇದರಲ್ಲಿ ಎರಡು ಕೋಟಿ ರೂಪಾಯಿಗಳ ಕೊರತೆ ತುಂಬಿಕೊಂಡು ಏಳು ಲಕ್ಷ ರೂ. ಗಳ ಉಳಿಕೆಯನ್ನು ತೋರಿಸಲಾಗಿದೆ ಒಕ್ಕಲು ತನದ ಮೇಲೆ ಕರವನ್ನು ಕೆಲವು ಸರಕಾರ್ಜುಗಳನ್ನೂ ಹಾಕಲಾಗಿದೆ. ಕಮ್ಯೂನಿಷ್ಟ ಸರಕಾರದ ಪ್ರಥಮ ಮುಂಗಡ ಪತ್ರವೇ ಜೂಸತನವಿಲ್ಲದೆ ಹಳೆಯ ತತ್ವಗಳನ್ನಾದರೂ ಜಾಣತನದಿಂದ ಬಳಸದೆ ಮುಂದೆ ಎಂದಿದೆ. ಈ ಮುಂಗಡಪತ್ರದ ಕೆಲವೊಂದು ಅಂಕೆ ಸಂಖ್ಯೆಗಳು ನಿಶ್ಚಿತ ದಿನಕ್ಕಿಂತ ಮೊದಲಾಗಿ ಪ್ರಕಟಿಸಿದ ಕೌಮುದಿ ಪತ್ರಿಕೆಯ ಮೇಲೆ ಖಟ್ಲೆ ಹೂಡಿಸಿರುವರಲ್ಲದೆ, ಗೌಪ್ಯ ಸ್ಫೋಟಕ್ಯವಕಾಶವಿತ್ತರೆಂಬ ಕಾರಣದಿಂದ ಇಬ್ಬರು ಮುದ್ರಣಾಲಯದ ಕೆಲಸಗಾರರನ್ನು ಕೆಲಸದಿಂದ ಅನೂಹ್ಯಗೊಳಿಸಲಾಗಿದೆ.

### ಬರೆಬಳಿ ವಿದ್ಯುದ್ಯೋಜನೆಯನ್ನು

ಎರಡನೆ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿಕೊಳ್ಳಬೇಕೆಂದು ಮೈಸೂರು ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ ಮತ್ತು ಕೇರಳದ ಮುಖ್ಯಮಂತ್ರಿ ಸಂಬೂದರಿ ಪಾದರು ರಾಷ್ಟ್ರೀಯ ಅಭಿವೃದ್ಧಿ ಮಂಡಲದಲ್ಲಿ ವಿತ್ತಾಯಿಸಿದರೆಂದು ಸುದ್ದಿಯಿದೆ. ಹಾಗೆಯೇ ತಲ್ಲಜೇರಿ, ಕೊಡಗು, ಮೈಸೂರ ರೈಲ್ವೇನಾರಿಯನ್ನೂ ಈ ಯೋಜನೆಯಲ್ಲಿಯೇ ಸೇರಿಸಲು ಕೇಳಿಕೊಂಡಿದ್ದಾರೆ. ಈ ಎರಡು ಯೋಜನೆಗಳಿಂದ ಮಲೆನಾಡಿನ ಅಭಿವೃದ್ಧಿಯಾಗುವುದೆಂಬ ನಿರೀಕ್ಷೆಯಿದೆ.

### ಇನ್‌ಸ್ಪೆಯೆಂಶ್ಗೂ ಹಾವಳಿಯು

ಇದೀಗ ಭಾರತದ ಹಲವಾರು ನಗರಗಳಲ್ಲಿ ಹಡುಕುತ್ತಲಿದೆ. ಅಲ್ಲಲ್ಲಿ ಕೆಲವೊಂದು ಮರಣಗಳೂ ನರದಿಯಾಗುತ್ತಿವೆ. ಈ ರೋಗವನ್ನು ತಡೆಗಟ್ಟುವ ಪ್ರತಿಬಂಧಕ ಲಸಿಕೆಯನ್ನು ಆಸ್ಟ್ರೇಲಿಯದ ವಿಜ್ಞಾನಿಗಳು ಕಂಡು ಹಿಡಿದಿದ್ದು ಅವು ಶೀಘ್ರದಲ್ಲಿಯೇ ಪ್ರಯೋಗಕ್ಕೆ ಬರುವ ನಿರೀಕ್ಷೆಯಿದೆ. ಭಾರತದಲ್ಲಿ ಮಾತ್ರವಲ್ಲದೆ ಜಪಾನ, ಸಿಂಗಾಪುರ, ಫಿಲಿಪೈನ್ ಮೊದಲಾದೆಡೆಗಳಲ್ಲಿ ಈ ರೋಗದಿಂದ ನರಳುತ್ತಿರುವವರ ಸಂಖ್ಯೆಯು ಅತ್ಯಧಿಕವಾಗಿದೆ.

### ಅಕ್ಕಲಕೋಟೆ ತಾಲೂಕನ್ನು

ಮುಂಬಯಿ ಸರಕಾರವು ಒಡೆಯುವ ಒಳಸಂಚನ್ನು ಮಾಡುತ್ತಿದೆಯೆಂಬುದು ತಿಳಿದು ಸೊಲ್ಲಾಪುರದಲ್ಲಿ ಸಂಯುಕ್ತ ಕರ್ನಾಟಕ ಸಮಿತಿಯ ವಿಶೇಷ ಸಭೆಯು ತನ್ನ ಸ್ಪಬಲ ನಿರೋಧವನ್ನು ಪ್ರದರ್ಶಿಸಿತು. ಸೊಲ್ಲಾಪುರಸನ್ನೊಗೊಂಡ ಅಕ್ಕಲಕೋಟೆ ಮತ್ತು ದಕ್ಷಿಣ ಸೋಲಾಪುರ ತಾಲೂಕುಗಳು ಕರ್ನಾಟಕಕ್ಕೆ ಸೇರಬೇಕೆಂದು ಈ ಸಮಿತಿಯು ಒತ್ತಾಯ ಪಡಿಸಿತು.

### ಸಾಮ್ರಾಜ್ಯವಾದಿಗಳಿಪ್ರತಿಮೆಗಳನ್ನು

ಸಾರ್ವಜನಿಕ ಸ್ಥಳಗಳಿಂದ ಕೆತ್ತು ಹ್ಯಾಕುವ ಯೋಚನೆಯನ್ನು ಭಾರತ ಸರಕಾ


**Navayuga Enterprise Ltd., Udipi.**

**NOTICE**

The register of members and share transfer books of the Company will remain closed from 25th June to 15th July 1957 (both days inclusive).

*(By order of the Board)*

Office of the Company, PALUKOTE, UDIPI. Date 27—5—1957.

K. Honnayya Shetty, *Managing Director.*

ರವು ಪರ್ಯಾಲೋಚಿಸಿ ತ್ತಿದೆ. ಗಲ್ಫಾರ ಜನರಲ್ ಟೇಲರರ ಪ್ರತಿಮೆಯನ್ನು ಬೇರೆ ಕಡೆಗೆ ಸಾಗಿಸಲಾಗಿದೆ. ಸರಕಾರದ ಈ ಯೋಜನೆಯನ್ನು ಅಭಿನಂದಿಸುತ್ತಾ ಡಾ. ರಮ ಮನೋಹರ ಲೋಹಿಯರವರು ಕಲಕತ್ತಾ, ದಿಲ್ಲಿ ಮದ್ರಾಸ, ಮುಂಬಯಿ ಕಾನಪುರ ಮೊದಲಾದೆಡೆಯ ಪ್ರತಿಮೆಗ ಳನ್ನೂ ಬೇಗನೆ ಬೇರೆಡೆಗೆ ಕೊಂಡೊಯ್ಯ ಬೇಕೆಂದೂ ವಸ್ತು ಸಂಗ್ರಹಾಲಯಗಳ ಲ್ಲಿ ಅವನ್ನಿರಿಸಬಹುದೆಂದೂ ಅಭಿಪ್ರಾಯ ಪಟ್ಟರು.

### ಮೈಸೂರು ವಿಧಾನ ಸಭೆಯ

ಅಧ್ಯಕ್ಷರಾಗಿ ಕಾಂಗ್ರೆಸ್ ಪಕ್ಷದ ಶ್ರೀ ಎಸ್. ಆರ್. ಕಂಠಿಯವರು ಸರ್ವಾನು ಮತದಿಂದ ಪುನರಾಯ್ಕೆಗೊಂಡರು. ಇವರ ಹೆಸರನ್ನು ಜನಾಬ್ ಸಯ್ಯದ್ ಈಸರು ಸೂಚಿಸಿ ಶ್ರೀ ವೀರೇಂದ್ರಪಾಟೀಲರು ಅನುಮೋದಿಸಿದರು. ಅನ್ಯ ನಾಮನಿರ್ದೇಶವಾಗದುದರಿಂದ ಅವಿರೋಧ ಆಯ್ಕೆ ನ ಡೆಯಿತು. ವಿಧಾನ ಸಭಾಧ್ಯಕ್ಷ ನೆಲ್ಲಿಂಬೇ ಕಾದ ಧೈರ್ಯ, ನಿಷ್ಪಕ್ಷಪಾತ, ಸಂಯಮ ತೀವ್ರ ಗ್ರಹಣಶಕ್ತಿ ಮತ್ತು ಶೀಘ್ರ ನಿ ರ್ಧಾರವೆಂಬ ಐದು ಗುಣಗಳನ್ನು ಎತ್ತಿ ಹಿಡಿಯು ವ ಭರವಸೆಯನ್ನು ಶ್ರೀ ಕಂಠಿಯ ವರತ್ತರು.

### ಸಾಹುಕಾರ ಚೆನ್ನಯ್ಯನವರು

ಮೈಸೂರು ಪ್ರದೇಶ ಕಾಂಗ್ರೆಸ್ಸಿನ ಅ ಧ್ಯಕ್ಷರಾಗಿ ತನ್ನ ಪ್ರತಿಸ್ಪರ್ಧಿ ಶ್ರೀ ಎಂ. ವಿ. ರಾಮರಾಯರನ್ನು ಅಲ್ಪ-ಅಂತರ ಮತ ಗಳಿಂದ ಸೋಲಿಸಿ ಆರಿಸಿಬಂದರು. ಹಿಂದಿ ನ ಅಧ್ಯಕ್ಷರಾಗಿದ್ದ ಶ್ರೀ ಬಿ. ವೆಂಕಟಪ್ಪ ನವರು ಶ್ರೀ ನಿಜಲಿಂಗಪ್ಪನವರ ಮಂತ್ರಿ ಮಂಡಲದಲ್ಲಿ ಸೇರಿಕೊಂಡಿದ್ದು ರಾಜಿನಾ ಮೆಯನ್ನಿತ್ತಿರುವುದರಿಂದ ಈ ಸ್ಥಾನವು ತೆರವಾಯಿತು. ಶ್ರೀ ವೆಂಕಟಪ್ಪನವರ ರಾಜಿನಾಮೆಯು ಈ ಮೊದಲೇ ಸ್ವೀಕಾ ರವಾಗಿದೆ

### ಕ್ರಿಸ್‌ಮಸ್ ದ್ವೀಪಗಳನ್ನು

ಬ್ರಿಟನ್ನು ಆಸ್ಟ್ರೇಲಿಯಾಕ್ಕೆ ಒಪ್ಪಿಸುವ ನ್ನು ಮಾಡಿದ್ದು ಅದನ್ನು ಸಿಂಗಾಪುರದ ಜನತಾಕ್ರಿಯಾಪಕ್ಷ ಮತ್ತು ಲಿಬರಲ್ ಸೋಶಿಯಲಿಸ್ಟ್ ಪಕ್ಷಗಳ ಮುಖಂಡರು ವಿರೋಧಿಸಿದರು. ಈ ದ್ವೀಪವು ಇದುವರೆಗೆ ಸಿಂಗಾಪುರದ ಆಡಳಿತೆಯಲ್ಲಿದೆ. ಪಾಸ್ಪೋರ್ಟುಗಳ ಉತ್ಪಾದನೆಯು ಇಲ್ಲಿ ಆಗುವುದರಿಂದ ಈ ದ್ವೀಪಕ್ಕೆ ಅಧಿಕ ಪ್ರಾಧಾನ್ಯ ಬಂದಿದೆ. ಇದು ಜಲಜನಕ ಬಾಂಬು ಪ್ರಯೋಗ ಮಾಡುವ ದ್ವೀಪವಾಗಿ ದೆ ಅದೇ ಹೆಸರಿನ ಇನ್ನೊಂದು ನಡುಗುಡ್ಡೆ ಯಾಗಿದೆ.

### ಜಾಗತಿಕ ಶಾಂತಿ ಮಂಡಳಿಯ

ಅಧಿವೇಶನವು ಕೊಲಂಬೋ ನಗರದ ಲ್ಲಿ ದಿನಾಂಕ ೧೦ರಂದು ಆರಂಭವಾಯಿ ತು. ಈ ಸಮ್ಮೇಳನವು ಒಂದು ವಾರದ ವರೆಗೆ ನಡೆಯಲಿರುವುದು. ವಿಶ್ವದಲ್ಲಿ ಶಾ ಶ್ವತ ಶಾಂತಿಯನ್ನು ಸ್ಥಾಪಿಸುವ ಉದ್ದೇ ಶಕ್ಕಾಗಿ ಅಣ್ವಸ್ತ್ರಗಳ ಸ್ಫೋಟ ಪ್ರಯೋ ಗಗಳನ್ನು ನಿಲ್ಲಿಸಿಬಿಡಬೇಕೆಂದು ಈ ಸ ಮ್ಮೇಳನದ ಮೊದಲ ದಿನದಲ್ಲಿ ಪ್ರತಿನಾ ದಿತವಾಯಿತು. ಇದರಲ್ಲಿ ಮೆಕ್ಸಿಕೊ, ಜ ಪಾನ, ಭಾರತ, ಕೆನಡಾ, ಫ್ರಾನ್ಸ್ ಮೊ ದಲಾದ ಕಲ ಸೇಶಗಳ ಪ್ರತಿನಿಧಿಗಳು ಭಾಗವಹಿಸುತಿದ್ದಾರೆ

### ಜೋರ್ಡಾನದ ಅರಸನ ಹುಸೇನರು

ಅನ್ಯಾನ್ನಿನಲ್ಲಿರುವ ಈಜಿಪ್ಷಿಯನ ರಾಯ ಭಾರಿ ಕಛೇರಿಯ ಮಿಲಿಟರಿ ಅಧಿಕಾರಿ ಮತ್ತು ಜೆರೂಸಲೇಮಿನಲ್ಲಿರುವ ಈಜಿಪ್ಷಿ ದ ಪ್ರತಿನಿಧಿಗಳಿಬ್ಬರನ್ನೂ ಜೋರ್ಡಾನಿ ನ್ನು ಬಿಟ್ಟು ಹೋಗಬೇಕೆಂದು ಆಜ್ಞಾಪಿ ಸಿರುವರು. ಜೋರ್ಡಾನಿನ ಒಬ್ಬ ಪ್ರಜೆ ಯನ್ನು ಆಲ್ಲಿನ ಕೆಲವೊಂದು ಪ್ರಸಿದ್ಧ ವ್ಯಕ್ತಿಗಳ ಕೊಲೆಮಾಡುವಂತೆ ಪ್ರಚೋ ದಿಸಿದರೆಂಬ ಅಪವಾದವನ್ನು ಈಜಿಪ್ಷಿನ ಅಧಿಕಾರಿಗಳ ಮೇಲೆ ಹೊರಿಸಿ ಈ ರೀತಿ ಯ ಆಜ್ಞೆಯನ್ನು ವಿಧಿಸಲಾಗಿದೆ. ಈಜಿ ಪ್ಟು ಸಹ ಜೋರ್ಡಾನಿಕ್ಕೆ ತನ್ನ ರಾಯ ಭಾರಿಯನ್ನು ಹಿಂಕರೆಸಿಕೊಳ್ಳಲು ಸೂಚಿ ಸಿ, ತಮ್ಮ ಮೇಲೆ ಹೊರಿಸಿದ ಅಪವಾದ ವುಕೇವಲ ಪಿತೂರಿಮಾತ್ರ ವೆಂದು ಸುರಿದೆ.

### ಗೋವಾಂತಕ ತಂಡವೊಂದು

ಭಾರತದ ಪ್ರಧಾನಿ ಶ್ರೀ ನೆಹರೂರವ ರನ್ನು ಭೇಟ್ಟಿಮಾಡಿ ಗೋವೆಯ ನಿವಾಸಿಗ ಳ ಕುರಿತಾಗಿ ಚರ್ಚಿಸಿದರು. ತತ್ಫ ರಿಣಾಮವಾಗಿ ನೆಹರೂರವರು ಪ್ರ ದೇ ಶ ನಿರ್ಬಂಧವನ್ನು ಸಡಿಲಿ ಸಲು ಮತ್ತು ತನ್ನ ಮುಂದಿನ ವಿದೇಶ ಸಂಚಾರದಲ್ಲಲ್ಲಿನ ಕೈದಿಗಳ ಪರಿಸ್ಥಿತಿ ಗಳನ್ನು ಸುಧಾರಿಸಲು ಪ್ರಯತ್ನಿಸುವರೆಂ ದು ಯೂ ತಿಳಿದು ಬಂದಿದೆ. ಇಂಡೆ ಮೂ ಲಕ ಹಡಗಿನಾನೆ ನಾಡುವ ಸೌಕರ್ಯವ ನ್ನೊದಗಿಸಿದರೂ, ವಾಣಿಜ್ಯ ಸಂಬಂಧದ ಮೇಲಿನ ನಿಬಂಧವು ಹಾಗೆಇಳಿಯುವುದು ಎಂದು ಶ್ರೀ ನೆಹರೂ ಶಾಂತಯುತವಾಗಿ ಯೇ ಗೋವೆಯ ವಿಮೋಚನೆಯಾಗಬೆ ಕೆಂಬ ಭಾರತ ಸರಕಾರದ ನೀತಿಯನ್ನು ಗೋವಾಂತಕರಿಗೆ ವಿವರಿಸಿದರು.

## ಉಡುಪಿ

**ಮಂತ್ರಿ ಶ್ರೀ ಆರ್. ಎಮ್. ಪಾಟೀಲರು**— ಮೈಸೂರು ರಾಜ್ಯದ ಆರೋಗ್ಯ ಮಂತ್ರಿ ಶ್ರೀ ಆರ್. ಎಸ್. ಪಾಟೀಲರು ತಾ. ೨೨ರಂದು ಸಂಧ್ಯಾಷ್ಟ ಮಣಿಪಾಲಕ್ಕೆ ಬಂದಾಗ ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿ ಪ್ರೆಸಿಡೆಂಟ್ ಶ್ರೀ ಬಾರ್ಕೂರು ಪೀಡು ಕೃಷ್ಣಯ್ಯ ಹೆಗ್ಡೆ, ಉಡುಪಿ ಮುನಿಸಿಪಲ್ ಚೇರ್‌ಮೆನ್ ಶ್ರೀ ಕೆ. ಕೆ. ಪೈ, ಎಕಡೆಮಿಷಿಯನ್ ಆಫ್. ಜನರಲ್ ಎಜ್ಯುಕೇಶನ್‌ನ ರಿಜಿಸ್ಟ್ರಾರ್ ಡಾ. ಟಿ. ಮಾಧವ ಪೈಗಳು ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿನಿಯರು, ಮೊದಲಾದವರು ಸ್ವಾಗತಿಸಿದರು. ನಂತರ ಕಾಲೇಜು ಹಾಲಿನಲ್ಲಿ ಭೋಜನ ನಂತ್ಯರ ಸಮಾರಂಭದಲ್ಲಿ ಭಾಗವಹಿಸಿದ್ದರು. ಡಾ. ಟಿ. ಮಾಧವ ಪೈಗಳು ಮಂತ್ರಿಗಳನ್ನು ಸ್ವಾಗತಿಸುತ್ತಾ, ಎಕೆಡೆಮಿಯ ಕಾರ್ಯಕಲಾ ಪಗಳನ್ನು ವಿವರಿಸಿ ಜನಪ್ರಿಯತೆಯನ್ನು ಗಳಿಸಿ ಪ ಮೆಡಿಕಲ್ ಕಾಲೇಜಿಗೆ ಬೇಕಾಗುವ ಸಹಾ ಯ ಸಲಹುತ್ತುಗಳನ್ನು ನೀಡಬೇಕಾಗಿ ಕೇಳಿ ಕೊಂಡರು.

ಬಳಿಕ ಉಡುಪಿ ಮುನಿಸಿಪಲ್ ಚೇರ್‌ಮೆನ್ ಶ್ರೀ ಕೆ. ಕೆ. ಪೈಗಳು ನಗರದ ಕ್ಷೇಮಚಿಂತ ನಾ ದೃಷ್ಟಿಯಿಂದ ಚಿಕ್ಕ ಮನವಿಯೊಂದನ್ನು ಮಂತ್ರಿಗಳಿಗೆ ಒಪ್ಪಿಸಿದರು ಅನೇಕಾಲು ರೋಗ ಪ್ರತಿಬಂಧಕ ಯೋಜನೆಯಲ್ಲಿ ಉಡುಪಿಯ ನ್ನು ಸೇರಿಸಿಕೊಳ್ಳಬೇಕೆನ್ನುವ, ಸೊಳ್ಳೆ ಕಾಟ ವಿರೋಧ ಕಾರ್ಯಕ್ರಮಕ್ಕಾಗಿ ಸರಕಾರದ ಸಹಾಯ ಸಿಕ್ಕಬೇಕೆನ್ನುವ, ಶುದ್ಧ ನೀರಿನ ಸರಬರಾಯಿ ಭೂಗತ ಚರಂಡಿ ಯೋಜನೆಯನ್ನು ಉಡುಪಿ ಯಲ್ಲೂ ಕಾರ್ಯಗತಗೊಳಿಸಬೇಕೆನ್ನುವ, ಹೆರಿ ಗೆ ಮತ್ತು ಶಿಶುಪಾಲನಾ ಕೇಂದ್ರವನ್ನು UNICEF ಯ ಅಂಗವಾಗಿ ತೆರೆಯಬೇ ಕೆನ್ನುವ ಇತ್ಯಾದಿ ಬೇಡಿಕೆಗಳು ಮನವಿಯಲ್ಲಿ ಸೂಚಿಸಿಲ್ಪಟ್ಟಿದ್ದುವು.

ಮಂತ್ರಿಗಳು ಉತ್ತರಿಸುತ್ತಾ, ಹುಬ್ಬಳ್ಳಿ ಯಲ್ಲಿ ಸರಕಾರವು ತೆರೆಯಲಿರುವ ಮೆಡಿಕಲ್ ಕಾಲೇಜಿಗೆ ಬೇಕಾಗುವ ಆಸ್ಪತ್ರೆಯನ್ನು ಪತ್ತೆ ಯಲು ತಾನು ಈ ಜಿಲ್ಲೆಗೆ ಭೇಟಿಯಿತ್ತುದಾಗಿ ಯೂ, ಡಾ. ಟಿ. ಮಾಧವ ಪೈ ನುತ್ತು ಜೊತೆ ದಾಯಿಯ ಡಾ. ಬಾಳಿಗರ ಅಶೀರ್ವಾದ ಪಡೆ ಯು ತಾನು ಹಿಡಿದ ಕಾರ್ಯ ಮುಂದಿರಿಸುತ್ತಿ ದ್ದೇನೆಂದರು ಕಸ್ತೂರ್ಬಾ ಮೆಡಿಕಲ್ ಕಾಲೇಜು ಇನ್ನೂ ಉನ್ನತಾವಸ್ಥೆಗೆ ಬರಲೆಂದು ಶ್ರೀ ದೇವರನ್ನು ಪ್ರಾರ್ಥಿಸಿದರೆಲ್ಲದೆ, ಕಾಲೇಜಿಗೆ ತಕ್ಕ ಕಾಲದಲ್ಲಿ ತಕ್ಕ ಸಹಾಯ ಕೊಡಿಸುವ ಆಶ್ವಾಸನೆಯನ್ನಿತ್ತರು. ನಗರಸಭೆಯ ಬೇಡಿಕೆ ಗಳ ಕುರಿತು ತಾನು ಪರಿಶೀಲಿಸಿ ಸಾಧ್ಯವಿದ್ದು ದನ್ನು ಸಹಾನುಭೂತಿಯಿಂದ ಕಾರ್ಯಗತಗೊ ಳಿಸಲು ಯತ್ನಿಸುವೆನೆಂದರು.

ಮಂತ್ರಿಗಳು ಮಣಿಪಾಲದಿಂದ ಉಡುಪಿಗೆ ಆಗಮಿಸಿ ಶ್ರೀ ಕೃಷ್ಣಮಠಕ್ಕೆ ಸಂದರ್ಶನವಿ ತ್ತು ಪರ್ಯಾಯ ಅದಮಾರು ಮಠದ ಶ್ರೀ ವಿಬುಧೇಶತೀರ್ಥ ಸ್ವಾಮಿಗಳವರಿಂದ ಫಲ ಮಂತ್ರಾಕ್ಷತೆ ಆಶೀರ್ವಾದಗಳನ್ನು ಪಡೆದರು. ಬಳಿಕ ಸ್ಥಳೀಯ ಸರಕಾರಿ ಆಸ್ಪತ್ರೆಯನ್ನು ಸಂ ದರ್ಶಿಸಿದರು. ಮೆಡಿಕಲ್ ಆಫೀಸರ್ ಡಾ. ಬಿ. ಆರ್. ಕಾರ್ನಾಡರವರು ಆಸ್ಪತ್ರೆಯ ಕೆಲವೊಂದು ಕೊರತೆಗಳನ್ನು ಮಂತ್ರಿಗಳ ಗಮನಕ್ಕೆ ತಂದರು. ಆಸ್ಪತ್ರೆಯ ಮಂಡಗಳ ನ್ನು ಏರಿಸುವಿಕೆ, ಹೆರಿಗೆ ವಿಭಾಗಕ್ಕೆ ಇಲೆಕ್ಟ್ರಿ ಕ್ ದೀಪಗಳ ಸೌಕರ್ಯವನ್ನು ಒದಗಿಸುವಿಕೆ ಜಾಸ್ತಿ ಡಾಕ್ಟರರ ನಿಬಂಧಿಯ ಸೂಪ್ರೆಂಟೆ ಎಕ್ಸ್‌ರೇ ಇತ್ಯಾದಿ ವ್ಯವಸ್ಥೆಗಳಾಗಬೇಕೆಂದು ಸೂಚಿಸಿದರು.

**ಮೆಡಿಕಲ್ ಕಾಲೇಜುಗಳನ್ನು ಹೆ ಚ್ಚಿಸುವ ಕುರಿತು ಡಾ. ಪೈಗಳ ಯೋ ಜನೆ**- ಮಣಿಪಾಲದ ಎಕೆಡೆಮಿ ಆಫ್ ಜನರಲ್ ಎಜ್ಯುಕೇಶನ್‌ನ ರಿಜಿಸ್ಟ್ರಾರ್ ಡಾ. ಟಿ. ಮಾಧವ ಪೈಗಳು ತಾ. ೧೯ರಲ್ಲಿ: ಸತ್ಕಾ ರೋಪ್ಯಾಯನ್ನೆಏರ್ಪಡಿಸಿ, ವೈದ್ಯಕೀಯದೀಕ್ಷಿತ ಉಜ್ಜೆಶಿಕ್ಷಣ ಸಂಸ್ಥೆಗಳಿಗೆ ಸಮರ್ಥ ಪ್ರಾಧ್ಯಾಪಕರುಗಳನ್ನು ಹೇಗೆ ತಯಾರಿಸಬಹುದೆಂ ಬುದನ್ನು ವಿವರಿಸಿದರು.

ಡಾ ಪೈಗಳು ಪ್ರಾರಂಭದಲ್ಲಿ ಉಡುಪಿಯ ಎಮ್. ಜಿ. ಎಸ್. ಕಾಲೇಜಿನಲ್ಲಿ ಬಿ. ಕಾಂ. ನುತ್ತು ದಿ ಎಸ್. ಸಿ. ತೆರಗತಿಗಳನ್ನು ತೆರೆಯುವಂತೆ ಕರ್ನಾಟಕ ವಿಶ್ವವಿದ್ಯಾಲಯದ ಪರು ತೋರಿದ ವಿಶಾಲ ಮನೋವೃತ್ತಿಯನ್ನು ಕೊಂಡಾಡಿದರು. ತಜ್ಞ ಪ್ರಾಧ್ಯಾಪಕರನ್ನು ನಿರ್ಮಿಸಲು ಇರುವ ವಿಧಿ. ಈಗ ತನ್ನು ದೇಶದಲ್ಲಿ ಸಾಧಾರಣ ಎರವಾರಿಗೆ ಸಾಮಿರ ಸಮ ರ್ಥ ಡಾಕ್ಟರರಿರುವರು. ಇವರೆ ಸದುಪಯೋ ಗವನ್ನು ಪಡಕೊಂಡರೆ ಎಲ್ಲವೂ ಸುಗಮವಾ ಗುವುದು ಎಂ. ಬಿ. ಬಿ. ಎಸ್. ಡಿಗ್ರಿ ಪಡೆದ ಕೆಲವು ಯುವಾಧಿಯನ್ನು ಆರಿಸಿ ಅವರಿಗೆ ಒಂಡೆ ರಡು ವರ್ಷ ಅಧಿಯು ವಿಶೇಷ ಶಿಕ್ಷಣದ ವ್ಯವಸ್ಥೆ ಮಾಡಬೇಕು. ಶಿಕ್ಷಣ ಅವಧಿಯಲ್ಲಿ ಅವರಿಗೆ ತಿಂಗಳೊಂದರ ಮುನ್ನೂರು ರೂಪಾ ಯಿಗಳ ವೇತನ ಕೊಡಬೇಕು. ನರ್ಸ್‌ರಿಂಪ್ರತಿ ಯೂ ಇಪ್ಪತ್ತು ಯಾ ಮೂವತ್ತು ಮೆಡಿಕಲ್ ಕಾಲೇಜುಗಳನ್ನು ತೆರೆದು ವಿಶೇಷ ಶಿಕ್ಷಣ ಪಡೆದವರನ್ನು ನೇಮಿಸಬೇಕು. ಆಗತಾನ ತಜ್ಞ ಪ್ರಧ್ಯಾಪಕರ ಅಭಾವ ಹೋಗುವುದು ಎಂದು ಹೇಳಿದರು.

ಸರಕಾರಕ್ಕೆ ಹಣವ ಕೊರತೆ ಇದ್ದರೆ ವಿ ದ್ಯಾರ್ಥಿಗಳಿಂದ ಹಣ ಪಡೆದು ಹೊಸ ಮೆಡಿಕ ಲ್ ಕಾಲೇಜುಗಳನ್ನು ತೆರೆಯಬಹುದು; ಸರ ಕಾರವು ಮೆಡಿಕಲ್ ವಿದ್ಯಾರ್ಥಿಗಳಿಗಾಗಿ ತಲಾ ಸುಮಾರು ಹನ್ನೆರಡೂವರೆ ಸಾವಿರ ರೂಪಾಯಿ ವೆಚ್ಚಮಾಡುತ್ತಿದೆ, ತೆರಿಗೆಯ ಧನವನ್ನು ಶ್ರೀ ಮಂತರ ಮಕ್ಕಳಿಗಾಗಿ ಸರಕಾರವೇಕೆ ವ್ಯಯಿ ಸಬೇಕೆಂದರು. ಬಡ ವಿದ್ಯಾರ್ಥಿಗಳಿಗೆ ಈಗಾ ಗಲೇ ತೆರೆದ ಕಾಲೇಜುಗಳಿವೆ. ಇವನ್ನೆಲ್ಲಾ ನ್ನು ಸರಕಾರ ಪರ್ಯಾಲೋಚಿಸಿ ಸೂಕ್ತ ಕಾರ್ಯಕ್ರಮ ಕೈಕೊಳ್ಳುವಂತಾಗಬೇಕೆಂದರು.

ಕುಂದಾಪುರ, ಸೂಳ್ಯ, ಕಾರ್ಕಳ, ಪು ತ್ತೂರುಗಳಲ್ಲಿ ಕಾಲೇಜುಗಳನ್ನು ತೆರೆಯುವ ವಿಷಯವನ್ನು ವಿವರಿಸುತ್ತಾ, ಎಕೆಡೆಮಿ ಕಡೆ ಯಿಂದ ಹೊಸ್ಮಾನವರ್ಷದಿಂದಲೂ ಕಾಲೇಜುಗಳ ನ್ನು ಸ್ಥಾಪಿಸುವ ಸಾಧ್ಯಾಸಾಧ್ಯತೆಯನ್ನು ನಿರ್ಣಯಿಸಲೆಂತಾಗಿ ಹೊಸ್ಮಾನರ ಸಿವಿಲ್ ಜ ಡ್ಜರಾದ ಶ್ರೀ ವಿ. ಕೃಷ್ಣಸ್ವಾಮಿ ಸೆಟ್ಟಿಯವರಿಂದಲೂ ಪತ್ರ ಬಂದಿರುತ್ತಿದೆ. ಇದು ಎತ್ತಿ ಹೇಳತಕ್ಕ ವಿಷಯವೆಂದರು.

**ಇನ್ ಫ್ಲೂಯೆಂಜಾ ಕುರಿತು ಭಾಷಣ** ಮುನಿಸಿಪಲ್ ಹೆಲ್ತ್ ಆಫೀಸರ್ ಡಾ. ವಿ ಎಲ್. ಪಂಡಿತರಿಂದ ತಾ. ೪ರಲ್ಲು ಸ್ಥಳೀಯ ಸರಕಾರಿ ಆಸ್ಪತ್ರೆಯಲ್ಲಿ ಜರಗಿಸಲ್ಪಟ್ಟ ಸ ಭೆಯಲ್ಲಿ ಡಾ! ಪಂಡಿತರೂ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಡಾಕ್ಟರ್ ಸ್ಟರ್ನಾರ್ ಮತ್ತು ಡಾ! ಕೆ. ಮೋಸೆಸ್ ಇವರು ಪೈಗಳು ಮತ್ತು ಇನ್ ಫ್ಲೂಯೆಂಜಾ ರೋಗ ದ ಆಗುಹೋಗುಗಳು, ಅವುಗಳನ್ನು ತಡೆಗ ಟ್ಟುವ ರೀತಿ ನೀತಿಗಳನ್ನು ವಿವರಿಸಿ ಭಾಷಣ ನಿತ್ತರು. ಡಾ! ಪಿ. ಜೆ. ಆಚಾರ್ಯರು ಪಾಠ ಸಾಡುತ್ತಾ ಇನ್‌ಫ್ಲುಯೆಂಜಾ ಕುರಿತು ಜನರು ಗಾಬರಿಗೊಳ್ಳುವ ಆವಶ್ಯಕತೆಯಿಲ್ಲವೆಂದೂ ಹೇಳಿದರು. ಸಭಾಧ್ಯಕ್ಷತೆಯನ್ನು ವಹಿಸಿದ ಡಾ! ಟಿ. ಮಾಧವ ಪೈಗಳು ಭಾಷಣಗಾರರ ಅಭಿಪ್ರಾಯಗಳನ್ನು ಸಮರ್ಥಿಸಿದರಲ್ಲದೆ, ಅದ ರ ಸೋಂಕಿಗೆ ಹಾಗೂ ತಡೆಗಟ್ಟುವಿಕೆಗೆ ಸ್ಥಳೀಯ ಡಾಕ್ಟರರ ಸಲಹೆಗಳನ್ನು ಜನತೆ ಪಡೆಯಬೇಕೆಂದು ಹೇಳಿದರು.

**ಉಡುಪಿ ಬೋರ್ಡು ಹೈಸ್ಕೂಲಿನಿಂದ**. ಕಳದ ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಕುಳಿತ 86 ವಿದ್ಯಾರ್ಥಿಗಳಲ್ಲಿ 73 ಮಂದಿ ಪಾಸಾಗಿದ್ದು ಸೇಕಡಾ 85ರಷ್ಟು ಫಲಿ ತಾಂಶ ಬಂದಿರುವುದು ಅಭಿನಂದನೀಯ.

ಸ್ಥಳೀಯ ಬೋರ್ಡು ಹೈಸ್ಕೂಲಿನಿಂದ ಶ್ರೀ ಟಿ. ವೆಂಕಟ್ರಾಯರು ಅನಸೂರು ಬೋ ರ್ಡು ಹೈಸ್ಕೂಲಿನ ಮುಖ್ಯೋಪಾಧ್ಯಾಯರಾ ಗಿಯೂ, ಶ್ರೀಗಳಾದ ಪಿ. ಸೀತಾರಾಮಯ್ಯ ನವರು ಕಾರ್ಕಳ ಬೋರ್ಡು ಹೈಸ್ಕೂಲಿಗೂ, ಕೆ. ಸದಾಶಿವ ಶ್ಯಾನುಭಾಗರು ಕುಂದಾಪುರ ಬೋರ್ಡು ಹೈಸ್ಕೂಲಿಗೂ, ಕೆ. ಎಲ್. ಎನ್. ಮಲ್ಯರು ಹೆಬ್ರಿಯ ಬೋರ್ಡು ಹೈಸ್ಕೂಲಿ ಗೂ ವರ್ಗಾಯಿಸಲ್ಪಟ್ಟಿ ನಿಮಿತ್ತ ಅವರೆಲ್ಲರ ನ್ನೂ ಬೀಳ್ಕೊಡುವ ಸಮಾರಂಭವು ಇದೇ ತಾ ೪ರಲ್ಲು ಹೈಸ್ಕೂಲಲ್ಲಿ ಜರಗಿತು.

**ಉಡುಪಿ ತಾಲೂಕು ಹಾಸಿಗೆ ಮ ತ್ತು ಬೋರ್ಡು**- ಪ್ರಾಥಮಿಕ ಶಾಲಾ ಶಿಕ್ಷಕರ ಯೂನಿಯನ್ನುಗಳ ಸಂಯುಕ್ತ ಸಭೆ ಯೊಂದು ತಾ. ೨೧ರಲ್ಲು ಶ್ರೀ ಬಿ. ಸುಬ್ಬಣ್ಣ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿ ತಾಲೂ ಕಿನ ಎರಡೂ ಯೂನಿಯನ್ನುಗಳನ್ನು ಜೋಡಿ ಸಿ ಒಂದೇ ಯೂನಿಯನ್ ರಚಿಸಲೆಟೀಕ್ಕಾಗಿ ನಿರ್ಣಯಿಸಲಾಯಿತು. ತಾ. 1.6.58ರ ಸ್ಥಿ ತರ ಸೇರಿದ ಶಿಕ್ಷಕರನ್ನು ಸರಕಾರಿ ಹಾಜರಿ ಯ ಪೆಚ್ಚಿಳಿದ ಕಾರಣಕ್ಕಾಗಿ ಕೆಲಸದಿಂದ ನಿವೃತ್ತಿಗೊಳಿಸಬೇಕಾಗಿ ಆಧಿಕಾರಿಗಳು ಹೊರ ಡಿಸುವ ಆಜ್ಞೆಯ ಕುರಿತು ವಿಷಾದ ಸೂಚಿಸಿ, ಈ ಆಜ್ಞೆಯನ್ನು ಶೀಘ್ರವೇ ರದ್ದುಗೊಳಿಸ ಬೇಕಾಗಿಯೂ, ಹಾಗೆ ನಿವೃತ್ತರಾದ ಅಧ್ಯಾಪ ಕರನ್ನು ಪುನಃ ಕೆಲಸಕ್ಕೆ ನೇಮಿಸಿಕೊಳ್ಳ ಬೇಕೆಂತಲೂ ಕೇಳಿಕೊಳ್ಳುವಂತೆ ಜಿಲ್ಲಾ ವಿದ್ಯಾ ಧಿಕಾರಿಗಳನ್ನು ಭೇಟಿಯಾಗಲು ಒಂದು ಆ ಯೋಗವನ್ನು ನೇಮಿಸಿ, ಆವರು ಇದೇ ತಾ. 17ರಲ್ಲು ವಿದ್ಯಾಧಿಕಾರಿಗಳನ್ನು ಕಾಣಬೇಕಾ ಗಿಯೂ ನಿರ್ಣಯಿಸಲಾಯಿತು. ಶ್ರೀ ಪಾಂತಿ ಯವರು ಧನ್ಯವಾದವಿತ್ತರು.


**ಸೂಚನೆ**

'ನವಯುಗ'ದ ಚಂದಾ ಹಣ ಮತ್ತು ಜಾಹೀರಾತಿನ ಹಣವನ್ನು ಕೆನರಾ ಇಂಡ ಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿ ಕೇಟ್ ಲಿಮಿಟೆಡ್ ಇದರ ಯಾವುದೇ ಶಾಖೆಯಲ್ಲಿ ಯಾವುದೊಂದು ತರಪ ಜಿರ್ಸೂ ಇಲ್ಲದೆ (ನವಯುಗ ವಾರಪತ್ರಿ ಕೆಯ ಖಾತೆಗೆ) ಪಾವತಿ ಮಾಡಬಹುದು.

ಮೆನೇಜರ್.

# ಮಕ್ಕಳ ಮಗ್ಗಿಪುಸ್ತಕ

(ನಯೇ ಪೈಸೆ ಕೋಷ್ಟಕ ಸಹಿತ)

| | | | |
|---|---|---|---|
| ಬೆಲೆ 1ಕ್ಕೆ | 0 | 1 | 0 |
| 100ಕ್ಕೆ | 4 | 0 | 0 |
| 250ಕ್ಕೆ | 9 | 0 | 0 |
| 500ಕ್ಕೆ | 17 | 0 | 0 |

ನವಯುಗ ಪ್ರೆಸ್, ಉಡುಪಿ.

## ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಸುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ನ.)

### ಮಕ್ಕಳ ಮಹಾತ್ಮಾ ಗಾಂಧಿ-

(ಸಚಿತ್ರ ಜೀವನ ಚರಿತ್ರೆ) ಬರೆದವರು: ಶ್ರೀಗಳಾದ ನಾರಾಯಣ ಶರ್ಮ ಮತ್ತು ಶ್ರೀ ಹೊಯ್ಸಳರು. ಪ್ರಕಾಶಕರು: ಸಾಹಿತ್ಯ ಭಂಡಾರ ಹುಬ್ಬಳ್ಳಿ. ಪುಟ ೭೨. ಬೆಲೆ: 0-12-0 ಅಥವಾ 75 ನ. ಪೈ. (ಐದನೆಯ ಮುದ್ರಣ).

ಚಿಕ್ಕ ಮಕ್ಕಳಿಗೂ ಹೊಸತನಿಗಿ ಓದು ಕಲಿತ ವಯಸ್ಕರಿಗೂ ಆಗುಹೋಗುವಂತೆ ಚಿಕ್ಕ ವಾಕ್ಯಗಳಿಂದ, ಅಡಪ್ಪು ಸುಲಭ ಶೈಲಿಯಿಂದ ಮತ್ತು ದೊಡ್ಡ ಅಚ್ಚುಗಳಿಂದ ಮುದ್ರಿಸಿ ಪ್ರಕಟಿಸಿದ ಈ ಪುಸ್ತಕ ನುಡಿತಾಯ ಸೇವೆಯೂ ಹೌದು; ನಾಡ ಸೇವೆಯೂ ಹೌದು. ನಮ್ಮ ಮುಂದಿನ ಜನಾಂಗವಾದ ಇಂದಿನ ಮಕ್ಕಳು ಅವಶ್ಯವಾಗಿ ಓದಲೇಬೇಕಾದ ಉತ್ತಮ ಶಿಶುಸಾಹಿತ್ಯವೂ ಹೌದು.

ಗಾಂಧಿಯವರ ಹಿರಿಯರಾದ ಅವರ ಅಜ್ಜ ಉತ್ತಮಚಂದ ಗಾಂಧಿಯವರಿಂದ ಆರಂಭಿಸಿ, "ಹಾ ರಾಮಾ" ಎಂದು ಕೊನೆಯ ಉದ್ಗಾರವೆಳೆಯುವ ವರೆಗಿನ ಜೀವನ ಚರಿತ್ರೆಯನ್ನೂ, "ಮಕ್ಕಳ ನೇಲಿನ ಮಾತು", "ಗಾಂಧೀ ದೆಂಪತಿಗಳು" "ನಾವು ಇಲ್ಲಿವೆ ನೋಡಿ" ಎಂಬ ಗಾಂಧೀ ವೈಶಿಷ್ಟ್ಯಗಳನ್ನೂ ಕೂಡಿಡಿಸಿ ಚಿಕ್ಕ ಅಧ್ಯಾಯಗಳಿಂದಲೂ, ಕನ್ನಡದ ಸ್ವಹಸ್ತಾಕ್ಷರ ಸಹಿಯೇ ಮೊದಲಾದ ೦೪ ಚಿತ್ರಗಳಿಂದಲೂ ಪುಸ್ತಕವೂ ಸುಂದರವಾಗಿದೆ. ಮುದ್ರಣವು ಮುದ್ದಾಗಿದೆ. ಶ್ರೀ ಹೊಯ್ಸಳರು ಬರೆದ ಶಿಶುಸಾಹಿತ್ಯವೆಂದಮೇಲೆ ಭಾಷೆಯು ಕುರಿತು ಉತ್ತಮವಿವೆಯೆಂದು ಹೇಳಿದರೆ ಅದು ಪೌರ್ಣಕ ಚಿರ್ವಣವಾಗುವುದು.

ಗಾಂಧೀಜಿಯ ಕುರಿತು ದೊಡ್ಡ ದೊಡ್ಡ ಪುಸ್ತಕಗಳನ್ನೋದುತ್ತಾ ಹೋದಂತೆ, ಅಥವಾ ಬೇರೆ ಬೇರೆ ಗ್ರಂಥಕರ್ತರು ಬರೆದ ಗಾಂಧೀಜಿಯ ಜೀವನ ಚಿತ್ರಗಳನ್ನು ಕಾಣುತ್ತಾ ಹೋದಂತೆ ಏನೇ ಒಂದು ವಿಧವಾಗುವ ಮನಸ್ಸು ಈ ಚಿಕ್ಕ ಪುಸ್ತಕದಿಂದ ಎಲ್ಲವನ್ನೂ ಮರೆತು ರಾಷ್ಟ್ರಪಿತನ ಕುರಿತು ಪೂಜ್ಯಭಾವನೆ ತಾಳಲು ಸಹಕಾರಿಯಾಗುತ್ತದೆ. ಅಷ್ಟು ಚಾಕಚಕ್ಯತೆಯಿಂದ ಶ್ರದ್ಧೆಯಿಂದ ಸಿಹಿಯೆನ್ನು ಅಳವಡಿಸಿಕೊಂಡಿದ್ದಾರೆ.

ಬಾಲಕ ಗಾಂಧೀಜಿಯು ಹರಿಶ್ಚಂದ್ರನನ್ನು ಓದಿದಂತೆ ನಮ್ಮ ಕಂದಗಳು ಮಕ್ಕಳ ಮಹಾತ್ಮಾ ಗಾಂಧೀಯನ್ನು ಓದಬೇಕು. ನಮ್ಮ ಶಾಲೆಗಳಲ್ಲಿ, ಏಕಾಪಾಲಯಗಳಲ್ಲಿ ಈ ಸುಸ್ತಕದ ಕೆಲವು ಪ್ರತಿಗಳನ್ನಾದರೂ ಇಡಗಿಸುವ ಏರ್ಪಾಡನ್ನು ಹೊಣವುಳ್ಳ ಗಾಂಧೀ ಭಕ್ತರಾಗಲಿ, ಗಾಂಧೀ, ಕಸ್ತೂರ್ಬಾ ಇತ್ಯಾದಿ ನಿಧಿಗಳ ಅಧಿಕಾರಿಗಳಾಗಲೀ ಮಾಡುವುದು ಅವಶ್ಯಕ.

### ಹೂವು ಚೆಲ್ಲಿದ ಹಾದಿಯಲ್ಲಿ-

(ಉದಯ ಯೌವನದ ಸ್ಮೃತಿ ಸಂಚಯ) ಸಮಿ: ಕೆ. ವಿ. ಸುಬ್ಬಣ್ಣ. ಪ್ರಕಾಶಕರು: ಅಕ್ಷರ ಪ್ರಕಾಶನ, ಸಾಗರ-ಶಿವಮೊಗ್ಗ, ಪುಟ ೬೨ ಬೆಲೆ ಒಂದೂವರೆ ರೂಪಾಯಿ.

ಈ ಕವನ ಸಂಚಿಯನ್ನು ಕವಿ ಕೆ. ವಿ. ಸುಬ್ಬಣ್ಣನವರೇ ಉದಯಯೌವನದ ಸ್ಮೃತಿ ಸಂಚಯವೆಂದು ಕರೆದಿದ್ದಾರೆ.

ಭಾವುಕತೆಯಿಂದ ತಾರುಣ್ಯದ ಆನಂದದಿಂದ ಮತ್ತು ಪ್ರಣಯ ಕತೆಯೊಂದರಿಂದ ರಸ ಪಡೆದು, ಪುಷ್ಟಿಪಡೆದು ಕವಿತೆಗಳಾಗಿ ಹರಿದ, ಕವಿಯು ಹಿಡಿದಿದ್ದರೆತ್ತಿಸಿದ ಕೆಲವು ಮಿಂಚುಗಳು ಕಾವ್ಯಾನಂದವನ್ನು ಸೃಷ್ಟಿಯರಿಗೆ ಉಂಟುಮಾಡಲು ತಕ್ಕವಾಗಿವೆ. ಈ ಸಂಕಲನದಲ್ಲಿ "ಹೂವು ಚೆಲ್ಲಿದ ಹಾದಿಯಲ್ಲಿ"ಯೇ ಮೊದಲಾದ ೨೮ ಕವನಗಳಿವೆ.

"ಹೊಸನಸಿನ ಬಿಸುಸುಯ್ಲಿನ!
ಚಿತ್ರಮಾಲೆ ಮೂಡುತಿರಲು!
ಸಿಲುವೆ ಪ್ರೇಕ್ಷೆಕನೊಲು..."

ಎಂಬ ಭಾವಗರ್ಭಿತವೆನ್ನಿಸುವ ಸಂಸ್ಪೃಷ್ಟಿಗೆ ಳೂ, "ಹಿಂದಿಪಿಂದಲೆ ಬಂದು ಕಣ್ಣೆಗೊತಿದ ದ ಕೈಯಿದೆನ್ನ ಮುದ್ದಿನದಲ್ಲದಿನ್ನಾರೆಯೆ"? ಎಂಬ ಪ್ರೇಮಗೀತೆಗಳೂ ಕವಿಪೃದಯಕ್ಕೆ ಆನಂದವೊದಗಿಸುವಂತಿವೆ.

## ಮಂಗಳೂರು

**ಶೀತಜ್ವರ ಪ್ರತಿಬಂಧಕಸಿದ್ಧತೆ—** ಮಂಗಳೂರಲ್ಲಿ ಶೀತಜ್ವರದ ಬಾಧೆ ಕಾಡಿಸಿಕೊಂಡುದಾದರೆ, ಯಾವ ರೀತಿಯಲ್ಲಿ ಎದುರಿಸಬೇಕು. ಮತ್ತು ಅದರ ಹಾವಳಿಯನ್ನು ತಡೆಗಟ್ಟಲು ಯಾವ ರೀತಿಯ ಮುಂಜಾಗ್ರತೆ ಕೈಕೊಳ್ಳಬೇಕು ಇತ್ಯಾದಿ ವಿಷಯಗಳು ತಾ. 80ರಲ್ಲು ಜಿಲ್ಲಾ ಮೆಡಿಕಲ್ ಅಫೀಸರರಿಂದ ಕರೆಯಲಾಗಿದ್ದ ಸಭೆಯಲ್ಲಿ ಚರ್ಚಿಸಲ್ಪಟ್ಟುವು. ಶೀತ ಜ್ವರವು ಅತಿ ಉಸ್ಸತ ಮಟ್ಟದ ಸಾಂಕ್ರಾಮಿಕ ರೋಗಗಳಲ್ಲೊಂದಾಗಿದೆ. ಆದರೆ ಲಕ್ಷಣವೇನೆಂದರೆ—ಅಕಸ್ಮಾತ್ ಒಬ್ಬನಲ್ಲಿ ವಿಪರೀತ ಶೀತವು ಕಾಣಿಸಿಕೊಳ್ಳುವುದರೊಂದಿಗೆ, ಸ್ನಾಯುಗಳೆಲ್ಲಾ ಸಹಿಸಲಾರದ ನೋವು ಹಾಗೂ ಜ್ವರ ತಲೆಯೆತ್ತುವುದು. ಇವುಗಳು ಸೌಮ್ಯ ವಾಗಿರುವುದೂ ಉಂಟು ಅಥವಾ ವಿಕೆಸಕೀರ್ತ್ರ ಸುಟ್ಟದ್ದಾಗಿರುವುದೂ ಉಂಟು. ದೋಗಿಪೀಡಿತನಾದನಿಗೆ ಯೋಗ್ಯ ಚಿಕಿತ್ಸೆ ಹಾಗೂ ತಕ್ಕ ವಿಶ್ರಾಂತಿಗಳನ್ನು ಒದಗಿಸಿಕೊಡುವುದರಿಂದ ರೋಗದ ಮಟ್ಟವನ್ನು ಪತೋಟಿಗೆ ತರಬಹುದು. ಮತ್ತು ಸುದರ ಸಾಂಕ್ರಾಮಿಕತೆಯನ್ನು ಕೂಡಾ ತಡೆಹಿಡಿಯಬಹುದು. ಶೀತ ಜ್ವರವೆಂದು ಸಂಶಯ ಬಂದೊಡನೆಯೇ ಡಾಕ್ಟರರನ್ನು ಕಂಡು ತಕ್ಕ ಚಿಕಿತ್ಸೆ ಮಾಡಿಕೊಳ್ಳಬಯವಾಗಿದೆ. ಸರಕಾರಿ ಆಸ್ಪತ್ರೆಗಳ ಸಹಾಯವನ್ನು ಪಡಕೊಳ್ಳಬಹುದು.

**ಬೆಲ್ಲಾ ಕಲೆಕ್ಟರ್ ಶ್ರೀ ಎಚ್. ನರಸಿಂಹನವರಿಗೆ ಐ. ಎ. ಎಸ್ ಪದವಿ** — ಮೈಸೂರು ರಾಜ್ಯಸರಕಾರದ ಏಪ್ರಿಲ್ ೧೦ ಅನಿಕಾರಿಗಳನ್ನು ಭಾರತ ಸರಕಾರವು ಐ. ಎ. ಎಸ್, ಪದವಿಗೆ ನರಿಸಿಯದೆ. ಈ ಐದು ಮಂದಿಯಲ್ಲಿ ಡಿ. ಕೆ. ಬೆಲ್ಲಾ ಕಲೆಕ್ಟರ್ ಶ್ರೀ ಎಚ್. ನರಸಿಂಹ, ಆನರೊಬ್ಬರು.

**ಸ್ಟೀಲ್ ರೋಲಿಂಗ್ ಮಿಲ್**— ದ್ವಿತೀಯ ಯೋಜನೆಯ ಅಂಗವಾಗಿ ಮಂಗಳೂರಲ್ಲಿ ಖಾಸಗಿ ಸಂಸ್ಥೆಯಿಂದ ಸ್ಟೀಲ್ ರೋಲಿಂಗ್ ಕಾರ್ಖಾನೆಯೊಂದನ್ನು ಸ್ಥಾಪಿಸಲಾಗುವುದೆಂದು ಮೈಸೂರು ಸರಕಾರ ಪ್ರಕಟಿಸಿಯದೆ.

**ನಿಧನ**— ಮಂಗಳೂರಿನ ರಾಜಲಬಹದೂರ್ ಡಾ. ಎನ್. ಕೇಶವ ಪೈಗಳವರ ಪತ್ನಿ ಶ್ರೀಮತಿ ಸರಸ್ವತಿ ಬಾಯಿಯವರು ತಾ. 8 ರಂದು ರಾತ್ರೆ ತಮ್ಮ 71ನೆ ವಯಸ್ಸಿನಲ್ಲಿ ನಿಧನರಾದರು. ದಿವಂಗತರಮಕ್ಕಳಲ್ಲೊಬ್ಬರಾದ ಶ್ರೀ ಎಸ್. ಪಿ. ಪೈಗಳು ಈಗ ಆಂಧ್ರ ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿಗಳಾಗಿರುವರು

---

ಉದಯೋನ್ಮುಖವಾಗಿ ಸಾಗುತ್ತಿರುವ ಕವಿಗೆ ನನ್ನು ಶುಭಾಶಯಗಳು. ಪುಸ್ತಕದ ಮುಖಚಿತ್ರ, ಹೊದಿಕೆ, ಕಾಗದ, ಮುದ್ರಣ ಚೆನ್ನಾಗಿವೆ.

—ದಾಂತಿ.

### ವರದಿ

**ಕರ್ನಾಟಕ ಫ್ರೀನೈಟ್ ಹ್ಯಾಸ್ಕೂಲ್ ಬೊಂಬಾಯಿ** — ಇದರ ೩೫ನೆ ವರ್ಷದ ವರದಿಯು ನಮ್ಮ ಕೈ ಸೇರಿದೆ. ದ. ಕ. ಜಿಲ್ಲೆಯಿಂದ ಉದ್ಯೋಗಕ್ಕಾಗಿ ಬೊಂಬಾಯಿಗೆ ಹೋದ ಕನ್ನಡಿಗರ ಮಕ್ಕಳ ಕೆಲವು ಸನಾಜ ಸೇವಾ ಕೆಲಸಗಾರರು ೧೯೩೦ರಲ್ಲಿ ವಿದ್ಯಾರ್ಥಿಯನ್ನು ಫ್ರೀನೈಟ್ ಸ್ಕೂಲ್‌ನ್ನು ಸ್ಥಾಪಿಸಿ ೧೯೩೨ರಲ್ಲಿ ಕರ್ನಾಟಕ ಫ್ರೀನೈಟ್ ಸ್ಕೂಲ್ ಎಂಬ ನಾಮಧೇಯದಿಂದ ವಿದ್ಯಾ ಪ್ರಚಾರ ಮಾಡಿದರು. ೧೯೩೨ಲ್ಲಾ ಬಂಟರ ಯಾನೆ ನಾಡವರ ಸಂಘವು ಈ ಶಾಲೆಯ ಆಡಳಿತವನ್ನು ವಹಿಸಿಕೊಂಡು ತನ್ನ ವ್ಯಾಸಕತ್ವವನ್ನು ವಿಶ್ವಸಿಸಿ ಹ್ಯಾಸ್ಕೂಲನ್ನಾಗಿ ಮಾಡಲು ಶಕ್ತಿಯತವಾಯಿತು. ಅಲ್ಲದೆ ಅಂದಿನಿಂದ ಇನರ ರಾತ್ರಿ ಶಾಲೆಗಳನ್ನು ತೆರೆದು ಬಡ ಕನ್ನಡಿಗರಿಗೆ ವಿದ್ಯಾದಾನಮಾಡುತ್ತಿರುವುದು ಸಂತೋಷದ ಸಂಗತಿಯಾಗಿದೆ. ಬಂಟರ ಯಾನೆ ನಾಡವರ ಸಂಘವು ವಿದ್ಯಾದೇಗುಲದಲ್ಲಿ ಇನ್ನೂ ತನ್ನ ಸೇವೆಯನ್ನು ಸಲ್ಲಿಸುವಂತೆ ಶ್ರೀ ಶಾರದಾ ಸರಸ್ವತಿಯು ಅನುಗ್ರಹಿಸಲೆಂದು ಪ್ರಾರ್ಥಿಸುವೆವು.

## ಎಲ್ಲೆಲ್ಲಿ ಏನೇನು?

**ಪುತ್ತೂರು**— ಮೈಸೂರು ಸರಕಾರದ ಆರೋಗ್ಯಮಂತ್ರಿ ಶ್ರೀ ಆರ್. ಎಸ್. ಪಾಟೀಲರು ತಾ. ೯ರಂದು ಆಪರಾಹ್ನ ಸಂದಾಜೆಯಿಂದ ಪುತ್ತೂರಿಗೆ ಆಗಮಿಸಿದರು. ಶ್ರೀ ಕೆ. ವಿ. ಗೌಡ, ಎಸ್. ಎಲ್. ಎ, ಮೊದಲಾದವರು ಸ್ವಾಗತಿಸಿದರು. ಪುತ್ತೂರು ಸರ್ಕಲ್ ಕಾಂಗ್ರೆಸ್ ಕಮಿಟಿ ಕಾರ್ಯದರ್ಶಿ ಶ್ರೀ ಎ. ಥೀವನು ಭಟ್ಟರು ಏರ್ಪಡಿಸಿದ ಅಪಹಾರವನ್ನು ಸ್ವೀಕರಿಸಿ ತಾರದಾಮಣಿ ಆನಾಥಾಲಯಕ್ಕೆ ಸಂದರ್ಶನವಿತ್ತರು. ಪುತ್ತೂರು ರೂಪಾಯಿ ಸಹಾಯಧನವಿತ್ತರು ನಂತರ ಸ್ಥಳೀಯ ಆಸ್ಪತ್ರೆಯನ್ನು ಸಂದರ್ಶಿಸಿ ಅಲ್ಲಿಯ ಅವಶ್ಯಕತೆಗಳ ಪೂರ್ತಿ ಪಡಕೊಂಡರು. ಪುತ್ತೂರು ತಾಲೂಕಿನ ಆರೋಗ್ಯದ ಅವಶ್ಯಕತೆ ಕುರಿತು ಶ್ರೀ ಭೀಮ ಭಟ್ಟರು ಮಂತ್ರಿಗಳಿಗೆ ಮನವಿಯನ್ನು ಸ್ನಿಪ್ಪಿಸಿದರು

**ಭೂಸುಧಾರಣಾ ಸಮಿತಿಗೆ ಪುತ್ತೂರು** ತಾಲೂಕು ಭೂಮ್ಯಾಧಿಕಾರಿ ಪರವಾಗಿ ಮನವಿಯೊಂದು ಆರ್ಸಿಸಲಾಯಿತು ವನವಿಯಲ್ಲಿ ಗೂಬಸಲಾದ ಮುಖ್ಯಾಂಶಗಳಾವುವೆಂದರೆ- ಈಗಿನ ಕಲುಷಿತ ವಾತಾವರಣದಲ್ಲಿ ಭೂಸುಧಾರಣೆಯ ಹೆಸರಿನಿಂದ ಕೈಕೊಳ್ಳಬಹುವಾದ ಶಾಸನಗಳು ಅನಾದಿ ಕಾಲದಿರದ ಲೂ ಭೂಮ್ಲಾಲಿಕರು ಹೊಂದಿಕೊಂಡು ಬಂದ ಭೂಮಿಯ ಮೇಲೂ ಹಕ್ಕು ಸಂಬಂಧಗಳಿಗೆ ಜಾಧಕ ಬಾರದ ರೀತಿಯಲ್ಲಿಯೇ ಕೈಕೊಳ್ಳತಕ್ಕುದ್ದಾಗಿಯೂ, ರಾಜ್ಯ ಭೆಟನೆಯಲ್ಲಿ ಕಾದು ಇರಿಸಲ್ಪಟ್ಟ ಮೂಲಭೂತ ಹಕ್ಕುಗಳಿಗೆ ವಿರೋಧನಾಗದಂತೆಯೂ ನೋಡಿಕೊಳ್ಳುವುದು. ಭೂಮಿಯು ಹಿಡುವಳಿಯ ಮಿತಿ ಆಧಾವಾ ಸ್ಥಂತ ಸಾಗುವಳಿಯ ಮಿತಿಯನ್ನು ಒಂದು ಕುಟುಂಬಕ್ಕೆ ಇಂತಿಷ್ಟು ಭೂಮಿ ಎಂಬುವಾಗಿ ನಿರ್ಣಯಿಸುವ ಸಂದರ್ಭದಲ್ಲಿ ಅಂಥ ಕುಟುಂಬಗಳ ತನರು ಮತ್ತು ಜನಸಂಖ್ಯೆಯನ್ನು ಎಣಿಸಿ ಹಿಡುವಳಿಯ ಮಿತಿಯನ್ನು ನಿರ್ಣಯಿಸತಕ್ಕದ್ದು ಮತ್ತು ಜನಸಂಖ್ಯೆ ಪ್ರಕಾರ ಸಾಸ್ಟ ನಂಜ ತರಗತಿಯ ಭೂಮಿಯನ್ನು ಸ್ವಂತ ಸಾಗುವಳಿಗೆ ಸಿಕ್ಕುವಂತೆಯೂ ಯೋಗ್ಯ ವ್ಯವಸ್ಥೆ ಮಾಡುವುದು ಅತ್ಯಾವಶ್ಯಕವಾಗಿದೆ. ಇಡೀ ಮೈಸೂರು ಸಂಸ್ಥಾನಕ್ಕೆ ಒಂದೇ ಶಾಸನವು ಶಾಸನವನ್ನು ತರಲಿಕ್ಕೆ ನ್ಯಾಯ ಕಾಣುವುದಿಲ್ಲ. ಭೂಮಿಯ ಸ್ಥಿತಿಗತಿ, ಉತ್ಪತ್ತಿ, ಉತ್ಪಾದನೆಯ ಕ್ರಮ, ನೀರಿನ ಪದ್ಧತಿ ರಾಜ್ಯದ ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ರೀತಿಯಾಗಿರುತ್ತದೆ. ನ್ಯಾಯವಾದ ನೀರಿನ ಮಿತಿಯು ಗನಿಷ್ಟ ಪಕ್ಷ ಉತ್ಪಾದನೆಯ ಸೇಕಡಾ ೬೦ರಷ್ಟಾದರೂ ಸಿಕ್ಕತಕ್ಕದ್ದು ನ್ಯಾಯಸಮ್ಮತ. ಆದರೆ ಈ ನೀತಿ ದರವು ಭಾನ್ಯಾಳು ಹಿಡುನಳಿದಾರರಿಗೆ ಅನ್ವಯಿಸತಕ್ಕದ್ದಲ್ಲ.

**ಕಾಸರಗೋಡು**— ಸ್ಥಳೀಯ ಕರ್ನಾಟಕ ಪ್ರಾಂತೀಕರಣ ಸಮಿತಿಯ ಸಭೆಯು ಇದೇ ತಾ. 1 ರಲ್ಲು ಶ್ರೀ ಬಿ. ಎಸ್. ಕಕ್ಕಿಲ್ಲಾಯರ ಅಧ್ಯಕ್ಷತೆಯಲ್ಲಿ ನೆರೆತು. ಕಾಸರಗೋಡು ತಾಲೂಕಿನ್ನು ಮೈಸೂರು ರಾಜ್ಯದಲ್ಲಿ ಸೇರಿಸುವ ಕುರಿತು ಮೈಸೂರು ಕೇರಳ ಮತ್ತು ಕೇಂದ್ರ ಸರಕಾರದ ನರಿಪ್ಪರನ್ನು ಒತ್ತಾಯ ಪಡಿಸಲು ಶ್ರೀಗಳಾದ ಕೆ. ಆರ್. ಕಾರಂತ, ಎಮ್. ಉಮೇಶ ರಾವ್, ಎಸ್. ಎಲ್. ಎ; ಕಳ್ಳಿಗೆ ಮಹಾಬಲ ಭಂಡಾರಿ, ಬಿ ಎಸ್. ಕಕ್ಕಿಲ್ಲಾಯ ಮತ್ತು ಟಿ ನಾರಾಯಣ ಭಟ್ಟರಿರುವ ಶಿಪ್ಪಮಂಡಳಿಯನ್ನು ನೇಮಿಸಲಾಯಿತು.

**ಹಂಗಾರಕಟ್ಟೆ**— ಸ್ಥಳೀಯ ಕರ್ನಾಟಕ ಸಂಘದ ಆಶ್ರಯದಲ್ಲಿ ತಾ. ೩೦ರಂದು ಶ್ರೀ ಬಿ. ವೆಂಕಟಕೃಷ್ಣರಾಯರ ಅಧ್ಯಕ್ಷತೆಯಲ್ಲಿ ನೆರೆದ ಸಾರ್ವಜನಿಕ ಸಭೆಯಲ್ಲಿ ಶ್ರೀ ಕೆ. ಶಿವರಾಮ ಕಾರಂತರು "ಪ್ರಜಾಸ್ವಭುತ್ವ ನುತ್ತು ನಾಗರಿಕರ ಕರ್ತವ್ಯ" ಎಂಬೀ ವಿಷಯದ ಮೇಲೆ ಮನವೀಯ ಭಾಷಣಗೈದರು.

**ಕಟಪಾಡಿ**— ಸ್ಥಳೀಯ ಭುವನೇಂದ್ರ ಪ್ರೌಢಶಾಲಾ ಸಂಸ್ಥೆಯ ಕಟ್ಟಡದಲ್ಲಿ ನೇರಿಗೆ ೦—೭—೪ ಬೆಲೆಯಲ್ಲಿ ಆಕ್ಕಿ ವಿತರಣೆ ಮಾಡುವ ಆರಂಭೋತ್ಸವವನ್ನು ತಾ. ೪ರಲ್ಲಿ ಉಡುಪಿ ಮುನಿಸಿಪಲ್ ಚೆರ್ಮನ್ ಶ್ರೀ ಕೆ. ಕೆ. ಶೈಗಳು ನೆರವೇರಿಸಿದರು.

**ಕಾರ್ಕಳ**— ಮೈಸೂರು ರಾಜ್ಯದ ಪಶು ವೈದ್ಯ ಮತ್ತು ಜಾನುವಾರು ಸಂಗೋಪನ ಇಲಾಖೆಯ ಪ್ರಧಾನ ಆಧಿಕಾರಿಗಳಾದ ಡಾ. ಕೆ. ಎಸ್. ಸೆಟ್ಟರು ತಾ. ೨೮ರಲ್ಲು ಸಂಜೆ ಕಾರ್ಕಳಕ್ಕೆ ಬಂದಾಗ ಅವರಿಗೆ ಡಾ ಅಡ್ಯಂತಾಯರ ಚಿಕಿತ್ಸಾಲಯದಲ್ಲಿ ಸ್ವಾಗತವೀಯಲಾಯಿತು. ಕಾರ್ಕಳದ ಪಶುವೈದ್ಯಾಲಯ ಕಟ್ಟಡವನ್ನು ಈಗ ವೈದ್ಯಾಲಯವಿರುವ ಪೇಟೆಯ ಸಮೀಪದ ಸ್ಥಳಾವಕಾಶ ಸುರಕ್ಷಿತ ಸ್ಥಳದಲ್ಲಿಕಟ್ಟಿಸಬೇಕು. ಜಿಲ್ಲೆಯ ಬತ್ತಿದ ಅಕಳು ಸಾಕಣೆ ಸರಕಾರ ಸಂಘದವರು ದುರ್ಗಾಪ್ರಸಾದಲ್ಲಿ ಕಾಡಿಟ್ಟ ಪ್ರದೇಶಗಳಲ್ಲಿ ತೆರೆಯುವ ಕೇಂದ್ರಕ್ಕೆ ಕೇಂದ್ರ ಸರಕಾರದ ಸಹಾಯ ದೊರೆಯಬೇಕು ಎಂಬ ಕೆಲಿಕೆಗಳನ್ನು ಡಾ. ಸೆಟ್ಟಿ ಮುಂದಿಟ್ಟರು. ಊರ ಶ್ರಮುಖರು ಸೂಚಿಸಿದ ಕೇಂದ್ರ ಸ್ಥಳದಲ್ಲಿಯೇ ಪಶುವೈದ್ಯಾಲಯದ ಕಟ್ಟಡವಾಗುವುದು ಇತರ ವಿಷಯಗಳಲ್ಲಿ ಸಾಧ್ಯವಿದ್ದ ಸಹಾಯ ಕೊಡುವ ಪ್ರಯತ್ನ ನಡೆಸುವೆನೆಂದು ಅಶ್ವಾಸನೆಯನ್ನಿತ್ತರು.

**ಮಣಿಪಾಲ**— ಸ್ಥಳೀಯ ಹಂಚಿನ ಕಾರ್ಖಾನೆಯ ಮಾಜಿ ಮೆನೇಜರ್ ಶ್ರೀ ಪ್ರಸಾದ ಜೆ. ಜತ್ತನ್ನರು ಕಳೆದ ತಾ. ೨೫ರಲ್ಲು ಪರಲೋಕವಾಸಿಗಳಾದ ಪ್ರಯಾಕ್ಕ ಸಂತಾಪ ಸೂಚಿಸುವ ಸಭೆಯು ಡಾ ಟಿ. ಎಮ್ ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀಗಳಾದ ಬಿ. ಶ್ಯಾಮರಾಯ ಸೆಟ್ಟಿ, ಎನ್. ಕೆ. ಕುಡ್ವ, ಪಾಲ್ ಮೋಸ್ತಿ ಮೊದಲಾದವರು ದಿವಂಗತರ ಕುರಿತು ಗುಣಗಾನಮಾಡಿದರು. ಮ್ಹಾಲಕ ಮತ್ತು ನಾಕರರೊಳಗೆ ಯಾವ ರೀತಿಯ ಸಂಬಂಧವಿರಬೇಕೆಂಬುದಕ್ಕೆ ದಿ. ಜತ್ತನ್ನರೆ ಸಾಕ್ಷಿ ಎಂದು ಮುಂತಾಗಿ ಡಾ ಪೈಗಳು ಹೇಳಿದರು.

**ಕುಂದಾಪುರ**— ಮೈಸೂರು ರಾಜ್ಯ ಭೂಸುಧಾರಣಾ ಸಮಿತಿಯು ತಾ. ೩೧ರಲ್ಲು ಕುಂದಾಪುರದಲ್ಲಿ ಮೊಕ್ಕಾಂ ಮಾಡಿದಾಗ ದಕ ಜಿಲ್ಲೆಯ ಪ್ರ. ಸೋ. ಸಲ್ಲ ಮತ್ತು ಲ್ಲಾ ಹಿಂದ್ ಕೆಸಾನ್ ಸಂಘಾಯತಿನ ಕಳಿಂದ ಮನವಿಯೊಂದಿನ್ನ ಅರ್ಪಿಸಲಾಯಿತ. ಮಳ್ಳಲು ರಕ್ಷಣಾ ಕಾನೂನಿನಿಂದ ವಕ್ಕಲಿಗಳಿಗೆ ಪ್ರಯೋಜನ ಸಿಕ್ಕಿ ಜೀಕಾದರೆ ಭೂಡುವಳಿಯು ಖಾಸೇಸುಮಾರಿ ಪ್ರಥಮತ ತೆಯಬೇಕು. ಗೇಣಿ ಬಾಕಿಯಾಳ್ದಿದ್ದಲ್ಲಿ ವಕ್ಕಲಿಗಳು ಅವಕಾಶ ದೊರೆಯ ಕೊಡದು. ಬಾಯಿಂದ ಗೇಣಿ ಹಣವನ್ನು ಸಾಮಾನ್ಯ ಸಾಲಿಳಂತೆ ಭಾಷಿಸಿ ನಮಾಲು ಮಾಡಬೇಕು. ಭಗಳು ಒಕ್ಕಲ್ಗಳಿಗೆನಿಗೆ ಗೇಣಿ ಪಾವತಿ ರಶೀದಿ ಕೊಡದಿದ್ದಲ್ಲಿ ಅಂತಹ ವರ್ತನೆಯುನ್ನು ಕ್ರಿವಿನಲ್ ತಕ್ಷೀರು ಎಂದು ಪರಿಗಣಿಸಿ ದಂಡ ವಿಧಿಸಬೇಕು. ಸ್ವಂತ ಸಾಗುವಳ್ಳಿ ಮಾಡಲಿಚ್ಛಿಸುವ ಭೂಮಾಲಿಳಿಗೆ ಮೂರು ವರ್ಷಗಳ ಅವಧಿಯನ್ನು ಕೊಟ್ಟು ನಂತರ ಉಳುವವನೆ ಧನಿಯಾಗಬೇಕು. ಗೇಣಿ ನಿಯಮಗಳನ್ನು ಉಲ್ಲಂಘನೆ ಮಾಡಿದ ಭೂಮಾಲಿಳ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಗೇಣಿ ನಿಯಂತ್ರಣಗಳನ್ನು ಉಲ್ಲಂಘಿಸಿದ ಭೂಮಾಲಿಳಿಗೆ ಶಿಕ್ಷೆ ವಿಧಿಸಬೇಕು. ಈ ಮನವಿಯ ಮೇಲೆ ಸಮಿತಿಯ ಸದಸ್ಯರು ಪ್ರಶ್ನೆಗಳನ್ನು ಕೇಳಿ ಉತ್ತರಗಳನ್ನು ಪಡೆದರು.

**ಆಲೆವೂರು**— ಇರಾಕ್ ರೆಡ್‌ಕ್ರಾಸ್ ಸಂಸ್ಥೆಯವರು ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯವರಿಗೆ ದಾನವಾಗಿ ಕಳುಹಿಸಿದಂತೆ ಉಡುಪಿ ಶಾಖೆಯವರು ಸ್ಥಳೀಯ ಸನಾಜ ವಿಕಾಸ ಕೇಂದ್ರಕ್ಕೆ ಳುಹಿಸಿದ ಬಟ್ಟೆಗಳನ್ನು ಸ್ಥಳೀಯ ಸುಜೋಧಿನಿ ಹಾ| ಎ| ಶಾಲೆಯ ಮತ್ತು ಮಾಡು ಆಲೆವೂರು ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಶ್ರೀಮತಿ ಪ್ರೇಮಾ, ಎ. ಪೈಯವರ ಸಲಹೆ ಮೇರೆಗೆ ಹಂಚಲಾಯಿತು.

**ಕೊಯಮುತ್ತೂರು**— ಸ್ಥಳೀಯ ಕರ್ನಾಟಕ ಸಂಘದ ತೃತೀಯ ವಾರ್ಷಿಕೋತ್ಸವವು ತಾ. ೩೦ರಂದು ಸಂಜೆ ಉಡ್ಡೈಂಡ್‌ನಲ್ಲಿ ಜರಗಿತು. ಶ್ರೀಮತಿ ರಮಾಜೋಯಿಸರವರ ಸಂಗೀತ ವಾದ ನಂತರ ಶ್ರೀ ರಾಜಯ್ಯಂಗಾರರು ಸಮಯೋಚಿತ ಭಾಷಣಗೈದರು. ಶ್ರೀ ಟಿ. ಉಮೇಶರಾಯರು ಧನ್ಯವಾದಗಳನ್ನಿತ್ತರು.

## ಆಹಾರದ ಸಮಸ್ಯೆ

(೧೪ನೇ ಪುಟದಿಂದ)

ಗಳಾಗಿಯೇ ಇರಬೇಕಾದ ಪರಿಸ್ಥಿತಿ ಬಂದಿದೆ ಎಂದು ಅಧಿಕಾರಿ ವಲಯಗಳು ಹೇಳುತ್ತಿವೆ. ಇದಕ್ಕೆಲ್ಲಾ ಕಾರಣ, ಸರಕಾರದ ಕಾರ್ಯಕಲಾಪದಲ್ಲಿ ಒದಗುವ "ವಿಳಂಬ"ನೇ ನಮ್ಮ ಅಧಿಕಾರಿಗಳು ಬಾಯಿಹಾರಿಸುವುದರಲ್ಲಿ ಪ್ರವೀಣರಾಗುವಷ್ಟು ಕಾರ್ಯಶೀಲತೆಯಲ್ಲಿಲ್ಲ -- ಅಲ್ಲಿ ಉಂಟಾಗುವುದು ಸಾವಕಾಶ. ಇದನ್ನು ವೈಕೂಂಠ ಮುಖ್ಯ ಮಂತ್ರಿ ಪಾಸ್ಸ ನಿಜಲಿಂಗಪ್ಪನವರೂ ಕಂಡುಕೊಂಡಿದ್ದಾರೆ. ಆದರೆ ಯಾವ ವಿಧಾನದಿಂದ ಜಾಗೃತಗೊಳಿಸುವರೆಂಬುದಿನ್ನೂ ತಿಳಿಯಬೇಕಾಗಿದೆ.

ದೇಶ ಕ್ಷಾಮಡಾಮರಗಳು ಸ್ವಾಭಾವಿಕವೇ. ಅವನ್ನು ಒಂದಲ್ಲ ಒಂದು ದಿನ ಕೊನೆಗಾಣಿಸಲೇ ಬೇಕು; ನಮಗೆ ಬೇಕಾದ ಪ್ರಮಾಣದಲ್ಲಿ ನಾವೇ ಆಹಾರವನ್ನು ಬೆಳೆಸಿ ಸ್ವಾವಲಂಬಿಗಳಾಗ ಬೇಕು; ಜನನ ನಿಯಂತ್ರಣದಿಂದ ಬೆಳೆಯುವ ಜನಸಂಖ್ಯೆಗೊಂದು ತಡೆಹಾಕಬೇಕು; ಆದಷ್ಟು ಕಡಿಮೆ ಆಹಾರವನ್ನೇ ಸೇವಿಸಬೇಕು; ಹೆಚ್ಚೆಚ್ಚು ಭೂಮಿಯಲ್ಲಿ ಆಹಾರಧಾನ್ಯಗಳನ್ನು ಬೆಳೆಸಬೇಕು; ನವೀನ ವಿಧಾನದ ಕೃಷಿ ಪದ್ಧತಿಯಿಂದ ಜಲ್ಲ ಭೂಮಿಯಲ್ಲಿ ಅಧಿಕ ಬೆಳೆ ಬೆಳೆಯಬೇಕು -ಇತ್ಯಾದಿ ಉಪದೇಶಗಳು ನಮಗೆ ಧಾರಾಳವಾಗಿ ದೊರೆಯುತ್ತಿವೆ. ಆದರೆ, ಆ ಚರಣೆಗೆ ತರುವುದು ಉಪದೇಶಿಸುವಷ್ಟು ಸುಲಭ ಸಾಧ್ಯವಲ್ಲ. ಯಾರೋ ಒಬ್ಬನು "ಪ್ರಸಂಜವೆಲ್ಲ ಧಾರಾಳವಾಗಿ ಸಿಗುವ ಪಾವ್ದು" ಎಂದು ಕೇಳಿದ ಪ್ರಶ್ನೆಗೆ "ಉಪದೇಶ" ಎಂಬ ಉತ್ತರ ಬಂತಂತೆ! ನಮಗಿಂದು ದೊರೆಯುವುದೂ ಅದೇ.

ಹಳ್ಳಿಗರು ಸರಕಾರದ, ತಜ್ಞರ ಉಪದೇಶಕ್ಕೆ ಕಿವಿಗೊಡಬಹುದು; ಆದರೆ ಆತ ಹಾಗೆ ಮಾಡುತ್ತಾನೆಯೇ? ಊರಿಗೆ ಬಂದ ಮಾರಿಯು ನಮ್ಮನ್ನು ಮುಟ್ಟಬಾರದೆಂದಿರುಗುತ್ತದೆಯೆ? ಎಲ್ಲರಿಗೂ ಕ್ರಯ ಸೇರಿದೆ; ಎಲ್ಲದಕ್ಕೂ ವಿಮೆಯಿದೆ. ಆತನಿಗೂ ಆಸ್ಥೇ ಬಂದ್ದು ಬಂತು. ಆದದ್ದು ಆಯಿತ್ತು; ಆ ಉಪದೇಶಗಳನ್ನು ಅನುಸರಿಸುವುದು ಕಷ್ಟವೇ. ಧನದ ಆಭಾವ-ಪರಾಶ್ರಯ ಇನೇ ಅದರ ಮೂಲ.

ಸರಕಾರ ಕೇವಲ ಸೌಲಭ್ಯಗಳನ್ನು ಒದಗಿಸಿದರೆ ಸಾಲದು; ಅದರ ಉಪಯೋಗವನ್ನು ಮಾಡಿಕೊಳ್ಳಲು ಜನರು ಮುಂದೆ ಬರದಿಲ್ಲವೆಂದು ದೂರಿದರೆ ಪ್ರಯೋಜನವಿಲ್ಲ. ದಿಲ್ಲಿಯಲ್ಲೋ ಬೆಂಗಳೂರಲ್ಲೋ ಕುಳಿತು ಸರಕಾರ ಒಂದು ಕಾನೂನನ್ನು ಮಾಡಿದರೆ, ನಗರ ಅಥವಾ ಪಟ್ಟಣಗಳಲ್ಲಿ ವಾಸಿಸುವ ಕೆಲವೊಂದು ವಿದ್ಯಾವಂತರನ್ನು ಬಿಟ್ಟರೆ, ಆ ಕಾನೂನಿನ ವಿಚಾರ ಯಾರಿಗೆ ತಿಳಿದಿದೆ? ನಮ್ಮ ಬೇಸಾಯಗಾರರಲ್ಲಿ ಹೆಚ್ಚಿನವಾಸಿಗಳಲ್ಲಿ ಅಕ್ಷರಸ್ಥರೇ ಅಧಿಕ. ಅವರಿಗೆ ಸರಕಾರದ ಯೋಜನೆಯನ್ನು ತಿಳಿಸುವವರು ಯಾರು? ಆಧುನಿಕ ವಿಧಾನಗಳಿಂದ ಜನರೂ ದೇಶಕ್ಕೂ ಕ್ಷೇಮವುಂಟಾಗುವುದೆಂದು ಹೇಳುವವರಾರು? ಹಳ್ಳಿಯ ಅಕ್ಷರಸ್ಥನೆಂದರೆ, ಪತ್ರಾಲಕ ಮತ್ತವನ ಕೆಲವು ಅನಲಾಬಿಗಳು ಮಾತ್ರ. ಅವರು ತಮ್ಮ ಲಾಭದ ದೃಷ್ಟಿ ಎನ್ನಲ್ಲನೆ ಒಕ್ಕಲಿನ ಇತರ ರೈತನ ಅಭಿವೃದ್ಧಿಯನ್ನು ದೇಕೆ ಬೇಡುವರು? ಹೀಗಾದಲ್ಲಿ ಸರಕಾರ ಯಾವ ಯೋಜನೆ ಮಾಡಿದರೇನು ಬಂತು?

ಸರಕಾರ ಇದನ್ನು ಗಮನಿಸಬೇಕು. ದೇಶದ ಬೆನ್ನೆ ಮೂಳೆಯಾದ ರೈತನಲ್ಲಿ ಸ್ವಯಂಸ್ಫೂರ್ತಿಯು ಹುಟ್ಟುವಂತೆ ಆತನಿಗೆ ನವಚೇತನಶಕ್ತಿಯನ್ನಿಡಿಯಬೇಕು. ಸರಕಾರದ ನವೀನ ಸುಧಾರಣಾ ಯೋಜನೆಗಳು ಆತನಿಗೂ ತಿಳಿಯುವಂತೆ ಮಾಡಿ, ಅಂತಹ ಯೋಜನೆಗಳು ರೈತನ ಉದ್ಧಾರಕ್ಕೆ ಹೇತುವಾಗುವಂತೆ ಜತೆಗೂಡಿಸುವ ಕಷ್ಟತಮವಾದ ಹೊಣೆಗಾರಿಕೆಯನ್ನು ಅದು ವಹಿಸಿಕೊಳ್ಳಬೇಕು. ತಾನು ಗೇಯುವ ಭೂಮಿಯಲ್ಲಿ ರೈತನಿಗೆ ಅಭಿಮಾನ ಹುಟ್ಟುವಂತೆ, ತನ್ನ ದುಡಿತಕ್ಕೆ, ತಾನು ಸಾಡುವ ಪೆಟ್ಟಿಕ್ಕೆ ತಕ್ಕ ಪ್ರತಿಫಲ ಸಿಗುವಂತೆ ಯೋಜನೆಯನ್ನು ಸರಕಾರ ಮಾಡಲಿ. ಹಾಗೆ ಮಾಡಿ ಉತ್ತಮ ಬೆಳೆ ಬೆಳೆಯಲು ಯೋಗ್ಯ ಪ್ರೋತ್ಸಾಹನೀಡಲಿ ಜಮೀನುದಾರರ ಬಿಗಿ ಹಿಡಿತದಿಂದ ಮುಕ್ತರಾಗಲು ನೆರವು ಈಯಲಿ. ಹಾಗಾದಲ್ಲಿ ಆಹಾರದ ಅಭಾವವೂ ದೂರವಾಗುವುದು; ಬೋಜನೆಯು ಗುಣಯೂ ಮಟ್ಟುವುದು; ಜೀವಕದ ಅಭಿವೃದ್ಧಿಯೂ ಆಗುವುದು. ಜೀವನನಟ್ಟವೂ ಸುಧಾರಿಸುವುದು. ಅದು ಹೊರತು ಕಾಗದದ ಹಾಳೆಗಳಲ್ಲಿ ಮಾತ್ರ ಸೌಲಭ್ಯಗಳು ದೊರೆತರೆ ಪ್ರಯೋಜನವಿಲ್ಲ. ಪ್ರತ್ಯೇಕ ರೈತನಿಗೂ ಅದರ ಜ್ಞಾನವುಂಟಾಗುವಂತೆ ಮಾಡುವುದು ಆದ್ಯಕರ್ತವ್ಯ.

ಇನ್ನೆಲ್ಲವನ್ನೂ ನೋಡುವಾಗ ಇದೊಂದು ಜಗಬ್ಬಾಗಿಯೇ ಪರಿಣಮಿಸುತ್ತದೆ. "ಮದುವೆಯಾಗದೆ ಹುಚ್ಚ ಬಿಡದು; ಹುಚ್ಚು ಬಿಡುವೆ ಮದುವೆಯಾಗದು" ಎಂಗಾದೆಯೆ ಮಾತಿನಂತೆ ಅಭಿವೃದ್ಧಿ ಯೋಜನೆಗಳೂ ರೈತರಿಗೆ ಜ್ಞಾನವೊದಗ ತಕ್ಕ ವಿದ್ಯಾಭ್ಯಾಸವೂ ಪ್ರಚಾರ ಕಾರ್ಯವೂ ಏಕ ಕಾಲದಲ್ಲಿ ಆರಂಭಿಸಬೇಕಾಗಿದೆ. ಇದು ಸಾಧ್ಯವೇ?

ಎನನ್ನೋ ಹುಡುಕುತಿದ್ದ ಒಬ್ಬನನ್ನು ಕುರಿತು ಮತ್ತೊಬ್ಬ ಆತನು ಅದೇನನ್ನು ಅರಸುತಿದ್ದಾನೆಂತ ಕೇಳಿದನಂತೆ. ಅರಸುವಾತ "ನನ್ನ ಕನ್ನಡಕ ಎಲ್ಲಿಯೋ ಇಟ್ಟಿದ್ದೆ; ಅದನ್ನು ಅರಸುತ್ತಿದ್ದೇನೆ. ಆದರೆ, ಅದಿಲ್ಲದೆ ಕನ್ನಡಕವು ದೃಷ್ಟಿಗೋಚರವಾಗುವುದೇ ಇಲ್ಲ" ಎಂದನಂತೆ! ನಮ್ಮ ಸರಕಾರದ ಕಥೆಯೂ ಈಗ ಇಂತಹುದೇ ಆಗಿದೆ ಏನು ಮಾಡುವುದೆಂಬುದೇ ತಿಳಿಯುವುದಿಲ್ಲ. ಮುಕ್ತ ಮಾರ್ಗವೇ ತೋರುತ್ತಿಲ್ಲ. ಈ ಬೃಹತ್ಸಮಸ್ಯೆಗೆ ಬುದ್ಧಿವಂತ ರಾಜಕಾರಣಿಗಳು ತಕ್ಕ ಮಾರ್ಗರೆಯಲಿ.

PHONE 203 ESTD 1926
FOUNDATION STONE
Engraved
MARBLE TABLETS
(GOLD FILLED & LEAD FILLED)
GOAT AT
Canara RUBBER STAMP CO.
BALMATTA ROAD, MANGALORE

## 'ಮೇವಾಡದ ಭಾಗ್ಯಲಕ್ಷ್ಮಿ'

(ಬಲಗಡೆಯ ಚಿತ್ರ)

ಇತ್ತೀಚೆಗೆ ಉಡುಪಿಯಲ್ಲಿ ಕುಂಜಾರು ಗಿರಿಜಾ ಹಾಗೂ ಎ ಶಾಲಾ ವಿದ್ಯಾರ್ಥಿನಿಯರು ಜನಮೆಚ್ಚುವ ರೀತಿಯಲ್ಲಿ ಜಯಶೀಲವಾಗಿ ಅಭಿನಯಿಸಿದ 'ಮೇವಾಡದ ಭಾಗ್ಯಲಕ್ಷ್ಮಿ' ನಾಟಕದ ಕಥಾನಾಯಕಿ ಸುಂದಾ ಪಾತ್ರದಲ್ಲಿ.

* *

ಅದೇ ಶಾಲೆಯ ಅಧ್ಯಾಪಕ ಶ್ರೀ ಕುರ್ಕಾಲು ಭುಜಂಗ ಶೆಟ್ಟರು ಸ್ವತಃ ಬರೆದು ನಿರ್ದೇಶಿಸಿದ ಈ ನಾಟಕಾಭಿನಯದ ಕುರಿತು ಉಡುಪಿ ರಾಷ್ಟ್ರಭಾಷಾ ಪ್ರಚಾರಕ ಶ್ರೀ ಅ. ಲ. ಕಿಣಿಯವರು ನೆಚ್ಚಗೆ ಸೂಚಿಸಿ ಬರೆದ ಪತ್ರದ ಸಾರಾಂಶವನ್ನು ಇಲ್ಲಿ ಕೊಡಲಾಗಿದೆ.

(ಸಂ. ನ.)

ನಿನ್ನೆ ರಾತ್ರಿ ಉಡುಪಿಯ ವರದೇಂದ್ರ ಕಲಾಮಂದಿರದಲ್ಲಿ ನಿಮ್ಮ ಶಾಲಾ ಬಾಲಕ ಬಾಲಕಿಯರು ಅಭಿನಯಿಸಿದ 'ಮೇವಾಡದ ಭಾಗ್ಯಲಕ್ಷ್ಮಿ' ನಾಟಕವನ್ನು ಕಂಡು, ಅತೀವ ಆನಂದವಾಯ್ತು.

ನಾಟಕದ ರಚಯಿತರು ಪ್ರಥಮಾಭಿನಂದನೆಗೆ ಅರ್ಹರು. ಭಕ್ತಿರಸವೇ ಪ್ರಧಾನ್ಯತೆಯನ್ನೊಳಗೊಂಡ ಈ ನಾಟಕದಲ್ಲಿ ಹಾಸ್ಯ, ಶೃಂಗಾರ, ಆಸೂಯೆ, ತಿರಸ್ಕಾರ, ದ್ವೇಷ ಇತ್ಯಾದಿ ಮನೋಭಾವನೆಗಳನ್ನು ಹಿತಮಿತವಾಗಿ ಆಳವಡಿಸಿಕೊಂಡಿರುವುದೂ, ವೀರ, ರೌದ್ರ ರಸಗಳನ್ನು ಅಲ್ಲಲ್ಲಿ ಮೇಳೈಸಿಕೊಂಡಿರುವುದೂ ಭಕ್ತಿಯ ವಿಕಾಸಕ್ಕೆ ಮೆರುಗು ಕೊಟ್ಟಂತಾಗಿದೆ ಹಾಡುಗಳಿಗೆ ಜೋಡಿಸಿದ ರಾಗಗಳೂ ಅಪ್ಪೇ ಸಂದರ್ಭೋಚಿತವಾಗಿದೆ.

ಪಾತ್ರಧಾರಿಗಳ ಅಭಿನಯವನ್ನು ಕುರಿತು ಹೇಳುವದಾದರೆ, ಹೊರೆಯ ಪಾತ್ರದಲ್ಲಿ ಅಭಿನಯಿಸಿದ ಬಾಲಕಿಯ ಮುಗ್ಧ ಭಾವಸ್ಪರ್ದನ, ಸಮಚಾಕ್ಷತೆಯು, ನುಂಬುಳಿ ಕಂಠ,-ಇವೆಲ್ಲಾ ಪ್ರೇಕ್ಷಕರುಗಳನ್ನು ತನ್ನೆಡೆಗೆ ಆಕರ್ಷಿಸಿಕೊಳ್ಳುವಷ್ಟು ತನ್ಮಯತೆಗೆ ಅವಕಾಶವನ್ನು ಸನ್ನಿವೇಶದಲ್ಲಿ ತಲ್ಲೀನ ಗೊಳಿಸುವಷ್ಟು, ಸ್ವಾಭಾವಿಕವಾಗಿದೆ. ಎಲ್ಲಿಯೂ ನೀರನತೆಗೆ ಅಥವಾ ಅತಿರೇಕಾಭಿನಯ (over acting)ಕ್ಕೆ ಎಡೆಕೊಟ್ಟಿಲ್ಲ. ಸಾಕಷ್ಟು ಪ್ರಸಿದ್ಧಿಗಾಗುವಷ್ಟಾತನಿಯೂ ಇದೆ. ಉಳಾಪರಿಹೇಗಾಗಿ ನಾಟಕದ ಮಧ್ಯೆ ಒಂದೆರಡು ಅಭಿನೇತ್ರಿಯ ಅಜಾಗರೂಕತೆಯಿಂದ, ಮೇನಿಕೆಯ ರಂಗಸಂಬಂಧವಸ್ತ್ರ ಸ್ಥಾನಪಲ್ಲಟ್ಟಿದ ಕೃಷ್ಣನ ನುರ್ತಿಯು ಉರುಳಿ ಕೆಳಗೆ ಬಿದ್ದುಬಿಟ್ಟಿತು. ಎಲ್ಲರೂ ಕೈಕಾಲುಗಳಿಲ್ಲದ ಪ್ರಸಂಗ, ಭಾವವು ಕೆಟ್ಟುಹೋಗುವ ಸಂದರ್ಭ ಆದರೆ, ಆಪ್ಪರಲ್ಲೇ ಆ ಬಾಲಕಿಯು (ನಿರೆ) ಯಾವದೇ ಭಾವ ವಿಕಾರವನ್ನು ತೋರಿಸಿ, ತುಂಬಾ ಪ್ರಸಂಗಾವಧಾನದಿಂದ, ನನೂ ಅಗಿಲ್ಲವೆಂಬಂತೆ ಕೆಳಗೆ ಬಿದ್ದ ಮೂರ್ತಿಯನ್ನೆತ್ತಿ ಕೊಂಡು ಪುನಃ ರಂಗಸಮ್ಮೇಲಿಕರಣದಲ್ಲಿ ಸ್ಥಾಪಿಸಿ, ಸನ್ನಿವೇಶವನ್ನು ಬಾತ್ಕಯದಿಂದ ಸುಧಾರಿಸಿಕೊಂಡು ಹೋಗಿರು. ಬಿಂಡಿತವಾಗಿಯೂ ಈ ಬಾಲಕಿಗೆ ಅಭಿನಯ ಕಲೆಯಲ್ಲಿ ಉಜ್ವಲ ಭವಿಷ್ಯವಿದೆ. ಅಕೆಯ ಭಾವಾಭಿವ್ಯಕ್ತಿನೆಯೊ ಅದ್ಭುತವಾದುದು.

ಸಹಾಯಕ ಪಾತ್ರಗಳಲ್ಲಿ ವಿಕ್ರಮ ಪಾತ್ರಧಾರಿಯು ಭಾವಪ್ರವರ್ತನವೂ ಉತ್ತಮವಾಗಿದೆ. ಅಕೆಯಿಸಲಾಪ ಮತ್ತು ಭಂಗಿಗಳು ಸಂಗ್ರಹಯೋಗ್ಯವಾದಭಾವಚಿತ್ರಗಳನ್ನು ತೆಗೆಯುವಷ್ಟು ಆಕರ್ಷಕವಾಗಿವೆ. ಅಕೆಯು ಕೊನೆಯದಾಗಿ ಮೂರೆಯ ಸನಾಥಿಯಲ್ಲಿ ತಲೆಬಿಚ್ಚಿಕೊಂಡು ಶೋಕಿಸುತ್ತಿರುವ ಸನ್ನಿವೇಶವು ಎಷ್ಟು ಸಹಜವಾಗಿತ್ತೆಂದರೆ, ಆಕೆ ನಾಸ್ತ್ರ ಕಂಟ್ರೊಲಿಮಿಯಿಟ್ಟಿದ್ದಾಳೆಯಿಲ್ಲ. ಪ್ರೇಕ್ಷಕರೆಲ್ಲರ ಕಣ್ಣುಗಳೂ ಒದ್ದೆಯಾಗಿದ್ದುವು.

ನಿಕ್ಕಾಮನ ತಂದೆ ಪಾತ್ರವೂ ಅಜ್ಜೇ ಸಮಚಾಭಿನಯದಿಂದ ಕೂಡಿದೆ. ದ್ವೀಪಾಸೂಯೆಯ ಪ್ರತಿಮೂರ್ತಿಯಾಗಿದ್ದವಳು, ಮೊರಾಳಕ್ಕೆಯಾಗಿ ಪರಿವರ್ತನೆಗೊಳ್ಳುವಾಗ, ತನ್ನ ಭಾವಭಂಗಿಗಳನ್ನೂ ತಕ್ಕಂತೆ ಅಳವಡಿಸಿಕೊಳ್ಳುವುದು ಅಸ್ಟು ಸಲಭವಲ್ಲ. ಆದರೆ, ಆ ಬಾಲಕಿಯು ಅಲ್ಲೂ ಯಶಸ್ವಿಯಾಗಿದ್ದಾಳೆ.

ನಿಕ್ಕಿಯ ಸಖ (ಸುನಂದೆ) ಯ ಪಾತ್ರವು ಆಕೆಯ ನಿಷ್ಕಲ್ಮಶ ನಗು, ಮಧುರ ಮಾತು ಗಳಿಂದ, ಸಮಚಾಭಿನಯದಿಂದ ಸರ್ವಾಂಗ ಸುಂದರವಾದ ಹೋಷಪಳವಾತ್ರವಾಗಿದೆ. ರಾಣಾಘೋಷನ ಗಾಂಭೀರ್ಯ, ಸಮಚಾರ್ಯವು, ದುಃಖ, ಕ್ರೋಧ ಯಾವತ್ತೂ ಸಂದರ್ಭಗಳ ಅಭಿನಯವು ರಾಜ ಶೈಲಿಗೆ ಒಪ್ಪುವಂತಹದ್ದಿದೆ. ಈ ದೃಷ್ಟಿಯಿಂದ ಹೇಳುವುದಾದರೆ, ಆ ಬಾಲಕಿಯು ತನ್ನ ಪಾತ್ರವನ್ನು ಚೆನ್ನಾಗಿಯೇ ನಿರ್ವಹಿಸಿದ್ದಾಳೆನ್ನಬೇಕು.

ನಾಟಕದ ಹಿನ್ನೆಲೆಯವು ಸಂಶ್ಲಿಷ್ಟವಾತಾವರಣಕ್ಕೆ ಪೂರಕವಾಗಿದ್ದು ನಾಟಕದ ರೋಚಕತೆ, ಭವ್ಯತೆಗೆ ಹೆಚ್ಚಿನ ಕಳೆಯನ್ನಿತ್ತಿದೆ. ಆದರೆಲ್ಲೂ ದುಃಖದ, ಭಕ್ತಿಯ ಅತಿರೇಕದ ಸನ್ನಿವೇಶಗಳಲ್ಲಿ ಹಿನ್ನೆಲೆಯಾಗಿ, ದೊಡ್ಡ ಕೊಳಲಿನಿಂದ ಹೊಂಟ ಸವಿಯಿಂಚರವು ಶ್ರೋತೃಗಳ ಹೃದಯಕ್ಕೇ ಮುಟ್ಟುವಂತಿತ್ತು.

ಒಟ್ಟಾರೆ ಹೇಳುವುದಾದರೆ, ನಾಟಕವು ಪ್ರಾರಂಭದಿಂದ ಕೊನೆಯವರೆಗೂ ಪ್ರೇಕ್ಷಕರಲ್ಲಿ ಯಾವದೇ ರೀತಿಯಿಂದ ಬೇಸರವನ್ನುಂಟಾರದೆ ಸಾಗಿತ್ತು. ಸನಯವು ಒಂದು ಗಂಟೆ ದಾಟಿದೋದರೂ ಅದು ಯಾರೊಬ್ಬರಿಗೂ ಗಮನಕ್ಕೆ ಬರಲಿಲ್ಲವೆಂಬುದು ನಾಟಕದ ಯಶಸ್ವಿತೆಯನ್ನು ಸಾರುತ್ತಿದೆ ನಿಮ್ಮ ಮುಕ್ತಳು ಈ ನಾಟಕವನ್ನು ಎಲ್ಲಿಯೇ ಅಭಿನಯಿಸಿದರೂ ಜಯಲಕ್ಷ್ಮಿಯನ್ನು ವಾರಿಸಿಕೊಂಡೇ ಬರುವರೆಂಬುದಕ್ಕೆ ಇಂದು ಜನರ ಬಾಯಲ್ಲಿ ಕೇಳಬರುತ್ತಿರುವ ಪ್ರಶಂಸೋದ್ಗಾರಗಳೇ ಸಾಕ್ಷ್ಯವನ್ನು ಕೊಡಬಲ್ಲವು.

ಉಡುಪಿ 26-5-57.

ಕುಮಾರಿ ಶಾಂತಾ ಬಾಯಿ
ಶ್ರೀ ಕುರ್ಕಾಲು ಗಣಪಯ್ಯ ಶೆಟ್ಟರ
೧೧ ವರ್ಷದ ಮೊಮ್ಮಗಳು)

## ಬೆಂಗಳೂರು

**ಅಖಿಲಭಾರತ ಆಯುರ್ವೇದ ಪರಿಷತ್ತು**— ಇದೇ ತಾ. 12ರಿಂದ 17ರ ತನಕ ಬೆಂಗಳೂರಿನ ಯಾದವಾಜಿ ನಗರದ ಜೆಜ್ಜಿ ಜಗನ್ನಾಥಮ್ಮ ಪರಿಷತ್ತಿನ ಆಂಗಣಾಗಿ ಸಸ್ತು ಪ್ರದರ್ಶನವೂ ನಡೆಯಲಿದೆ.

**ಮೈಸೂರು**— ಸ್ಥಳೀಯ ಮೋಡರ್ನ್ ಕೆಫೆ ದಾಸಪ್ರಕಾಶದಲ್ಲಿ ಶ್ರೀ ಕೆ. ಸೀತಾರಾಮರಾಯರು ದಾಸಪ್ರಕಾಶದ ಶ್ರೀರಾಮ ಮಂದಿರದಲ್ಲಿ ತಾ. 6 ಮತ್ತು 7 ರಲ್ಲಿ ಶ್ರೀ ರಾಮಪಟ್ಟಾಭಿಷೇಕ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಿದರು. ಪೂಜಾ, ಪಾರಾಯಣ, ಅನ್ನಸಂತರ್ಪಣೆಗಳಾದಿಯಾಗಿ ಎರಡು ದಿವಸಗಳ ಸಂಗೀತಕಾರ್ಯ ಶ್ರೀ ಟಿ. ಚೌಡಯ್ಯನವರ ಪಿಟೀಲು ವಾದನವು ಹಲ್ಲ ವಾದ್ಯಗಳೊಂದಿಗೆ ನಡೆಯಿತು. ಶ್ರೀ ಸೀತಾರಾಮರಾಯರ ಮಕ್ಕಳಾದ ಕುಮಾರಿ ಗೀತಾ ಮತ್ತು ಕುಮಾರವಿಜಯನವರ ಭರತನಾಟ್ಯ ಪ್ರದರ್ಶನವಾಯಿತು. ಶ್ರೀ ಸೀತಾರಾಮರಾಯರೆ, ಸಹೋದರರು, ಮಕ್ಕಳು ಕೂಡಿ ಭಜನೆ ಕಾರ್ಯಕ್ರಮವಾಯಿತು. ನಂತರ ರಾಮ್ ಬಹದ್ದೂರ್ ಶ್ರೀ ರಾಮಸ್ವಾಮಿಯವರ ಆಭಿನಯಚಿತ್ರವಾಯಿತು. ಶ್ರೀ ಬಿ. ಎಸ್. ಸುಬ್ಬರಾಯರು ಧನ್ಯವಾದಗಳನ್ನರ್ಪಿಸಿದರು. ಎರಡನೆ ದಿವಸ ಬಡಬಗ್ಗರಿಗೆ ಅನ್ನದಾನವಾಯಿತು. ಸಂಜೆ ಶ್ರೀ ರಾಮಭಜನಾ ಸ್ವಾಮಿ ಉತ್ಸವಮೂರ್ತಿಗಳ ಪೆರವಣಿಗೆ ತೆಗೆಯಲಾಯಿತು. ನಂತರ ಮಂಗಲಾಚರಣೆ ಕಾಲವಧಿಸಿ ಶ್ರೀ ಎಚ್. ಎನ್. ರಾಘವೇಂದ್ರಾಚಾರ್ಯರ ಉಪನ್ಯಾಸವಾಯಿತು. ಶ್ರೀ ವಾಸುದೇವರಾಯರು ವಂದನೆಗಳನ್ನರ್ಪಿಸಿದರು

## ಆಧ್ಯಾತ್ಮಿಕ ಜೀವನ

(೨ನೇ ಪುಟದಿಂದ)

ವಾಸಿಗಳ ಆತ್ಮಗಳನ್ನು ಪ್ರಬುದ್ಧಗೊಳಿಸುವದಕ್ಕಾಗಿ ಆ ಸಮಯದಲ್ಲಿ ಅವರು ಜನಜಾಗರಣ, ಜನನೇತೃತ್ವ, ಸಮಾಜ ತಂತ್ರವಾದ ಮೊದಲಾದ ವಿಷಯಗಳಲ್ಲಿ ಗಂಭೀರ ಲೇಖನಗಳನ್ನು ಬರೆಯುತ್ತಿದ್ದರು. ಆ ಕಾಲದಲ್ಲಿ ವಿದೇಶೀ ಸರಕಾರದೊಡನೆ ಅವೇದನ-ನಿವೇದನಗಳನ್ನು ಮಾಡುವ ನೀತಿಯನ್ನು ಭಾರತದ ಕಾಂಗ್ರೆಸ್ ಇಟ್ಟುಕೊಂಡಿತ್ತು. ಶ್ರೀ ಅರವಿಂದರೂ ಈ ತರದ ನೀತಿಗಳನ್ನೇ ಸಮಾಲೋಚಿಸುತ್ತಿದ್ದುದರಿಂದ ದೇಶವಾಸಿಗಳ ಹೃದಯವು ಈ ಲೇಖನಗಳಿಂದ ಉಂಬೋಲಿತವಾದುವು. ವಂಗ ಭಂಗಿ ಚಳವಳಿಯು ತೂರ್ಯನಾದುವು. ವಿಪ್ಲವನನ್ನು ಘೋಷಿಸಿತು. ಶ್ರೀ ಅರವಿಂದರು ಆ ಆಂದೋಲನದ ನೇತೃತ್ವ ವಹಿಸಲು ಅವತೀರ್ಣರಾದರು. 'ವಂದೇ ಮಾತರಂ' ಎಂದು ಘೋಷಿಸುತ್ತಾ ಶ್ರೀ ಅರವಿಂದರು ಸ್ವದೇಶೀ ಆಂದೋಲನದ ಮುಂದಾಳುತನದ ಗುರುತರ ಭಾರವನ್ನು ಧರಿಸಿದರು. ಅವರ ಪಾರ್ಶ್ವಚರರಾಗಿ ಲೋಕಮಾನ್ಯ ತಿಲಕ, ಲಾಲಾಲಜಪತರಾಯ್, ಮತ್ತು ಬಿಪಿನಚಂದ್ರ ಪಾಲರಿದ್ದರು. ಭಾರತಕ್ಕೆ ಸಂಪೂರ್ಣ ಸ್ವಾತಂತ್ರ್ಯವನ್ನೊದಗಿಸುವುದೇ ಅವರ ಮುಖ್ಯೋದ್ದೇಶವಾಗಿತ್ತು. ಅನೇದನ ನಿವೇದನ ಪಂಥವನ್ನನುಸರಿಸಿದ ಕಾಂಗ್ರೆಸ್ ದಳ ಮತ್ತು ಶ್ರೀ ಅರವಿಂದರ ಜರಿಯ ಪಂಥದಳದ ನಡುವೆ ಪ್ರಚಂಡ ಸಂಘರ್ಷಕ್ಕೆ ಮೊದಲಾಯಿತು. ಒಂದೆಡೆ ನಿರೋಧೀ ಕಾಂಗ್ರೆಸ್–ಇನ್ನೊಂದೆಡೆ ಬ್ರಿಟಿಷ ಶಾಸಕರ ಪಂಚಂಡಕೋದ್ಧ! ಇವೆರಡರ ನಡುವೆ ಶ್ರೀ ಅರವಿಂದರು ಧೀರ, ಸ್ಥಿರ, ಶಾಂತ, ಸನ್ನಾಹಿತ ಭಾವದಿಂದ ತಮ್ಮ ಕರ್ತವ್ಯಪಾಲನೆಯಲ್ಲಿಯೇ ತತ್ಪರರಾಗಿದ್ದರು. ಅವರ ಸಾಧನೆಯ ಸಿದ್ಧಿಯ ಪ್ರಥಮ ಜ್ಯೋತಿಯುದಿಸಿತು. ದೇಶದಲ್ಲಿ ನವಯುಗ, ನವಜೀವನದ ಭಾವಧಾರೆಯು ಪ್ರಚಂಡ ವೇಗದಿಂದ ಪ್ರವಹಿಸತೊಡಗಿತು. ದೇಶವಾಸಿಗಳು ಭಾಸ ನುನೋಭಾವದಿಂದ ಮತ್ತರಾಗಿ ಭಾರತಮಾತೆಯ ಸೇವೆಯಲ್ಲಿಯೇ ತಮ್ಮ ಉತ್ಸರ್ಗವನ್ನು ಸಂಪಾದಿಸುವ ಪ್ರೇರಣೆಯಿಂದ ಉನ್ಮತ್ತರಾದರು. ಶ್ರೀ ಅರವಿಂದರ ನಿಭೃತ, ನಿರವ ಸಾಧನೆಯ ಬೀಜವು ಅಂಕುರಿಸಿ ಪಲ್ಲವಿಸತೊಡಗಿತು. ಬ್ರಿಟಿಷ ರಾಜ್ಯದ ಭಿತ್ತಿಗಳನ್ನು ವಿಪ್ಲವ ವಿಕ್ರೋಢವು ಒಡೆದು ದೇಶದ ಮೂಲೆ ಮೂಲೆಗಳಲ್ಲಿಯೂ ಪ್ರತಿಧ್ವನಿಸಿತು. ಕ್ರೋಧಾಂಧ ಬ್ರಿಟಿಷ ಶಾಸಕರು ಶ್ರೀ ಅರವಿಂದರನ್ನೂ ಅವರ ಕೆಲವು ಸಹಚಾರಿಗಳನ್ನೂ ಕಾರಾರುದ್ಧರನ್ನಾಗಿ ಮಾಡಿದರು.

ಕಾರಾಗೃಹದ ನಿರ್ಜನ ನಿಸ್ತಬ್ಧತೆಯು ಶ್ರೀ ಅರವಿಂದರಿಗೆ ವರದಾನ ಸದೃಶವಾಯಿತು. ಅವರ ಅಂತರಾಕಾಶವು ಒಂದು ಉಜ್ವಲ ಜ್ಯೋತಿಯಿಂದ ಉದ್ಭಾಸಿತವಾಯಿತು. ವಿಶ್ವಾತ್ಮ ವಾಸುದೇವನ ಪ್ರತ್ಯಕ್ಷ ಉಪಲಬ್ಧಿಯು ಅವರಿಗೆ ಪ್ರಾಪ್ತಿಸಿತು. ಕುರುಕ್ಷೇತ್ರ ರಣರಂಗದಲ್ಲಿ ಅರ್ಜುನನಿಗೆ ಭಗವಾನ್ ಶ್ರೀ ಕೃಷ್ಣನು ತನ್ನ ವಿಶ್ವರೂಪದರ್ಶನವನ್ನಿತ್ತಂತೆ ಪರಮಾತ್ಮ ವಾಸುದೇವನು ಅರವಿಂದರಿಗೆ ಕಾರಾಗೃಹದಲ್ಲಿ ತನ್ನನ್ನು ತೋರಿಸಿದನು. ಸರ್ವಭೂತ ಸರ್ವನ್ಯಾಪಿ ವಾಸುದೇವನ ವಿಶ್ವರೂಪದ ಪ್ರತ್ಯಕ್ಷಾನುಭವದಿಂದ ಅವರಿಗೆ ಸರ್ವ ನಾನವರಲ್ಲಿಯೂ ವಾಸುದೇವನು ದೈಷ್ಟಿಗೋಚರನಾಗತೊಡಗಿದನು. ವಾಸುದೇವನ ಮಧುರ, ಶ್ಯಾಮಸುಂದರ, ವೇಣುಧಾರಿ, ಆನಂದಮಯರೂಪವು ಶ್ರೀ ಅರವಿಂದರ ನೇತ್ರಸಮ್ಮುಖದಲ್ಲಿ ಆಹೋರಾತ್ರಿ ವಿರಾಜಮಾನವಾಗಿರತೊಡಗಿತು. ಚಿರನವೀನ, ಚಿರಸುಂದರ, ಚಿರಸೋಹನ ನಾರಾಯಣನ ವಿಶ್ವತೋಮುಖಿಸಾಮ್ರಾಜ್ಯದ ಪ್ರತ್ಯಕ್ಷಾನುಭೂತಿಯಿಂದ ಯೋಗಿರಾಜ ಶ್ರೀ ಅರವಿಂದರ ಯೋಗಸಾಧನೆಯು ಸಫಲವಾಯಿತು. ಈ ಅನುಭೂತಿಯಿಂದ ಅವರಲ್ಲಿ ಮಾನವ ಪ್ರೇಮ ಮತ್ತು ಜನಸಾಧಾರಣರ ಕಡೆಗೆ ಅಸೀಮ ಸ್ನೇಹಭಾವವು ಪ್ರಸ್ಫುರಿತವಾಯಿತು. ಯೋಗೀಶ್ವರರಾದನಂತರವೂ ಅವರು ಜನಜೀವನ, ಜನಕಲ್ಯಾಣ ಮತ್ತು ತನ್ನ ಯೋಗಸಾಧನೆಯಿಂದ ದೂರಸರಿಯಲಿಲ್ಲ. ಕಾರಾಗಾರದಲ್ಲಿ ವಾಸುದೇವನ ವಿಶ್ವರೂಪದರ್ಶನಾನಂತರ ಅವರು ರಾಜಕೀಯ ಕ್ಷೇತ್ರದಲ್ಲಿ ಸಕ್ರಿಯಾಶ್ರಯಹಣವನ್ನು ಮಾಡದೆ ನಿರ್ವಿಕಾರರಾಗುಳಿದರು. ಆ ಸಮಯದಲ್ಲಿ ದೇಶವಾಸಿಗಳನ್ನು ಪೂರ್ಣರೂಪದಲ್ಲಿ ಆಧ್ಯಾತ್ಮಿಕ ಉತ್ಕರ್ಷ ಮತ್ತು ದಿವ್ಯಜೀವನಗಳತ್ತ ಉಬ್ಬುದ್ಧರನ್ನಾಗಿಸುವುದೇ ಅವರ ಏಕ ಮಾತ್ರ ಧ್ಯೇಯವಾಗಿಯಿತು.

ಬ್ರಿಟಿಷರ ದಮನನೀತಿಯಿಂದಾಗಿ ದೇಶದ ರಾಜನೈತಿಕ ಪರಿಸ್ಥಿತಿಯು ಉಪ್ಪೀಡಿತವಾಗಿದ್ದಾಗ, ದೇಶದ ಮುಖಂಡರು ಕಾರಾಗೃಹ ಇಲ್ಲವೇ ಆಂಡಮಾನದ ವಾಸನನ್ನು ಪಡೆದಾಗ, ಶ್ರೀ ಅರವಿಂದರೂ ದೂರದ ಪಾಂಡಿಚೆರಿಯಲ್ಲಿ ತನ್ನ ವಾಸ್ತವ್ಯವನ್ನು ಸಾಡಿದರು. ದೇಶವಾಸಿಗಳು ವಿಸ್ಮಿತರಾದರು. ಶ್ರೀ ಅರವಿಂದರ ರಾಜನೀತಿವೃತ್ತವು ಒಂದು ರಹಸ್ಯವಾಗಿಯೇ ಪೋರಿಸಿ. ಒಂದು ದಿನ ಯಾವ ಆಂತರಿಕ ಪ್ರೇರಣೆಯಿಂದ ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಲು ಉತ್ಕಂಠಿತರಾಗಿ ಧುಮಿಸಿದ್ದರೋ ಅದೇ ಆಂತರಿಕ ಪ್ರೇರಣೆಯಿಂದ ಇಂದು ಶ್ರೀ ಅರವಿಂದರು ರಾಜಕೀಯ ಸನ್ಯಾಸವನ್ನವಲಂಬಿಸಲು ಪಾಂಡಿಚೇರಿಯನ್ನು ಪ್ರವೇಶಿಸಿದರು. ಅವರ ಸಾಧನೆ ಹಾಗೂ ಕಾರ್ಯಪ್ರಣಾಲಿಗಳು ನೀರವತೆಯ ಆವರಣದಿಂದ ಆಚ್ಛಾದಿತವಾಗಿದ್ದುವು. ಅಲ್ಲಿ ಸಹಾ ದೇಹಬಂಧುಚಿತ್ತರಂಜನದಾಸರು ರಾಜಕೀಯ ಸಹಾಯವನ್ನು ಯಾಚಿಸಿದರು. ಆದರೆ, ಶ್ರೀ ಅರವಿಂದರು ಆದನ್ನೀಯಲು ನಿರಾಕರಿಸಿದರು.

ಪಾಂಡಿಚೆರಿಯಲ್ಲಿನ ಶ್ರೀ ಅರವಿಂದರ ಆಶ್ರಮವು ಗೀತಾ ಯೋಗಸಾಧನೆಯ ಕೇಂದ್ರವಾಯಿತು. ಕರ್ಮಯೋಗವೇ ಯೋಗವರ ಅರವಿಂದರ ಯೋಗಗಳಲ್ಲಿನ ವೈಶಿಷ್ಟ್ಯ ಈ ಕರ್ಮಯೋಗಕ್ಕೆ ಅವರು ಭಾರತೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯ ರೂಪವನ್ನಿತ್ತಿದ್ದರು. ಯೋಗವೇ ಕರ್ಮ; ಮತ್ತು ಲೋಕಸಂಗ್ರಹಾತ್ಮಕ ಕರ್ಮವೇ ಯೋಗ. ಪರಮ ಜ್ಞಾನ ಅಥವಾ ಭಕ್ತಿಯು ಯೋಗಾಶ್ರಿತ ಕರ್ಮದ ಮೂಲಧಾರೆ ಎಂದು ಶ್ರೀ ಅರವಿಂದರು ತಿಳಿದಿದ್ದರು. ಆಧ್ಯಾತ್ಮಿಕ ಯೋಗಸೊಡನೆ ಮರ್ತ್ಯ ಜೀವನದ-ಜೀವನದ ವಿಭಿನ್ನೆಧಾರೆ, ಸಮಸ್ಯೆ ಮತ್ತು ಅವರ್ತನ--ವಿವರ್ತನದ ಬಲವಾದ ಸಂಬಂಧವೇ ಶ್ರೀ ಅರವಿಂದರ ಯೋಗಾಶ್ರಮ ಜೀವನದ ವಿಭಿನ್ನ ಕರ್ಮಪದ್ಧತಿಯ ಸಾರ್ಥಕ ಪರಿಪಾಕವಾಗಿದೆ. ಈ ಆಶ್ರಮ ಜೀವನದಲ್ಲಿ ಶ್ರೇಷ್ಠಜೀವನ, ಸ್ವತಂತ್ರತೆಯ, ವ್ಯಷ್ಟಿಗತ ಆಥವಾ ಸಮಷ್ಟಿಗತ ಜೀವನದ ವೈಚಿತ್ರ್ಯ ಮತ್ತು ಏಕ್ಯದ ಅಸೂತ್ರ ಸಮನ್ವಯವಿದೆ. ವ್ಯಕ್ತಿ ಸ್ವಾತಂತ್ರ್ಯವನ್ನು ಸುರಕ್ಷಿತವಾಗಿರಿಸಿ ಸಮಷ್ಟಿಗತ ಜೀವನದ ಆದರ್ಶವು ಯಾವುದೆಂಬುದು ಈ ಆಶ್ರಮ ಜೀವನದಿಂದ ತಿಳಿಯುತ್ತದೆ. ಸಂಘವಾಗಿದ್ದರೂ, ಯಾವುದೇ ಗತಾನುಗತಿಕ ಪ್ರಚಾರ ಸಂಘವಿದಲ್ಲ; ಯಾವುದೇ ವಿಶೇಷ ಧರ್ಮದ ಪ್ರಚಾರವು ಆಶ್ರಮದ ಉದ್ದೇಶವಲ್ಲ. ಸಾಧಾರಣ ಮಾನವರನ್ನು ಸ್ವಧರ್ಮದಲ್ಲಿ ಪ್ರವಶ್ತರನ್ನಾಗಿ ಮಾಡಿ ದಿವ್ಯ ಜೀವನದಲ್ಲಿ ಉನ್ನತಿಯನ್ನುಂಟುಮಾಡುವುದು; ಮರ್ತ್ಯಮನುಷ್ಯಕೆಯ ಈ ತನು ದೀಪದಲ್ಲಿ ದಿವ್ಯ ಜ್ಯೋತಿಯನ್ನು ಪ್ರಜ್ವಲಿಸುವುದು, ಕಮ್ಮಂಕರಾಳದಲ್ಲಿ ಬಿಡಗಿರುವ ದಿವ್ಯಾತ್ಮ ಪೂರ್ಣೋಪಲಬ್ಧಿಯನ್ನು ಪಡೆಯುವಂತೆ ಮಾಡುವುದು ಶ್ರೀ ಅರವಿಂದರ ಯೋಗೋಪದೇಶದ ವೈಶಿಷ್ಟ್ಯ. ಶಾಸ್ತ್ರಪಾಠದಿಂದ ಯೋಗಸಾಧನೆಯು ಸುಗಮವಾಗುವುದಿಲ್ಲ. ಯೋಗಸಾಧನೆಯು ಏಕ ಮಾತ್ರ ಸಾಧನವು ಮನುಷ್ಯ ಜೀವನ. ಆದುದರಿಂದ ಈ ಆಶ್ರಮದಲ್ಲಿ ಜ್ಞಾನಿ, ಅಜ್ಞಾನಿ ಎಲ್ಲಸ್ಯಕ್ತಿಗಳಿಗೂ ತನ್ನ ಜೀವನ ವಿಕಾಸದಲ್ಲಿ ಸಹಾಯಕೊಡಲಾಗುವುದು; ಮಾರ್ಗದರ್ಶನೆ ಮಾಡಲಾಗುವುದು. ಅಲ್ಲಿ ಪಂಡಿತ, ಮೂರ್ಖ, ಅಸಾಧಾರಣ ಸಾಧಾರಣರೆಲ್ಲರಿಗೂ ಆತ್ಮಿಕ ವಿಕಾಸದ ಸಮಾನಸ್ವಾತಂತ್ರ್ಯವಿದೆ. ಆಶ್ರಮದ ಪ್ರತಿಯೊಬ್ಬರದ ಜೀವನವೂ ಆನಂದಮಯವಾಗಿದೆ.

ಶ್ರೀ ಅರವಿಂದರ ವೈಶಿಷ್ಟ್ಯಗಳಲ್ಲಿ ಅವರ ಯೋಗವು ಆಶ್ರಮದಲ್ಲಿಯೇ ಸೀಮಿತವಾಗಿರದಿರುವುದು ಒಂದು. ಆಶ್ರಮದ ಬಾಹಿರದೇಶದಲ್ಲಿ, ವಿಶ್ವದ ಬಹುತರ ಮಾನವ ಸಮಾಜದೊಡನೆ ಅವರ ಯೋಗ ಸಂಬಂಧವಿದೆ. ವಿಶ್ವಸಾಮ್ಯ, ವಿಶ್ವಮೈತ್ರಿ, ವಿಶ್ವಶಾಂತಿಗಳೇ ಶ್ರೀ ಅರವಿಂದರ ಪೂರ್ಣೋದ್ದೇಶವಾಗಿತ್ತು. ಪಾಂಡಿಚೆರಿಯ ಶ್ರೀ ರವತಾಸೂರ್ಣ ಆಶ್ರಮದಲ್ಲಿದ್ದುಕೊಂಡೇ ಅವರು ಭಾರತದ ಮುಕ್ತಿಸಂಗ್ರಾಮವನ್ನವಲೋಕಿಸುತ್ತಿದ್ದರು. ಶ್ರೀ ಅರವಿಂದರು ಭಾರತವೆಂದು ಸ್ವತಂತ್ರವಾಗುವುದೆಂದು ಭವಿಷ್ಯನುಡಿದಿದ್ದರು. ಅಗೋಸ್ಟು ೧೫ ಭಾರತದ ಸ್ವಾತಂತ್ರ್ಯದಿನವಾಗಿ ಹೋದುದು; ಅರವಿಂದರ ಹುಟ್ಟುದಿನವೂ ಆಗಿ ಹೋದುದು. ಆ ದಿನ ಶ್ರೀ ಅರವಿಂದರು ತಮ್ಮ ಮನೋಭಿಲಾಷೆಯು ಸೂರ್ತಿಯಾದುದರಿಂದ ಪ್ರಸನ್ನರಾಗಿದ್ದರು.

ಭಾರತದ ಇತಿಹಾಸದಲ್ಲಿ ಆಗಾಗ ಮಹಾತ್ಮರು ಅವತರಿಸುವುದು ಕಂಡುಬರುವದು. ಸಾಮಾನ್ಯ ಮಾನವನ ನಡವಳಿಯೇ ಇದ್ದುಕೊಂಡು, ತನ್ನ ಅಸಾಮಾನ್ಯ ಪ್ರತಿಭೆ, ಶಕ್ತಿ, ಜ್ಞಾನಗಳಿಂದ ಜನಸಾಮಾನ್ಯವನ್ನು ಎತ್ತರಿಸುವ ಸಲುವಾಗಿ ತಮ್ಮ ಜೀವನವನ್ನೇ ನುಡುಪಾಗಿಡುವ ಇಂತಹ ಅವತಾರ ಪುರುಷರ ಧ್ಯೇಯ ಒಂದೇ. ಮಾರ್ಗಗಳು ಮಾತ್ರ ಬೇರೆ ಬೇರೆ. ಶ್ರೀ ಅರವಿಂದರಿಗೆ ಯೋಗ ಸಾಧನೆ, ಆಧ್ಯಾತ್ಮಿಕ ಮನೋವೃತ್ತಿಯು ಹೆಜ್ಜಾಗಿ ರೂಪಿಸಿತು. ಆದರಿಂದ, ಜಗತ್ತಿನ ರಾಷ್ಟ್ರಗಳ ದೃಷ್ಟಿಯನ್ನು ತನ್ನೆಡೆಗೆ ಆಕರ್ಷಿಸಿಯೆಂಬ ಗೀರ್ವಾಣನೆನಿಸಿ, ತನ್ನ ಮಾತೃದೇಶಕ್ಕೆ ಕೀರ್ತಿಯನ್ನು ತಂದ. ಆಚಂದ್ರಾರ್ಕ ಜೀವಿಸ್ವಾಯಿಯಾಗಿ, ಭಾರತೀಯರ ಮನಸ್ಸಿನಲ್ಲಿ ಉಳಿದನು. ಅವರು ತನ್ನ ಜೀವನವರನುವಾವನೆನಿಸಿದ ದಿನಗಳನ್ನು ಕಳೆದ ಆಶ್ರಮವು ಇನ್ನೂ ಪಾಂಡಿಚೆರಿಯ ಯೋಗಸಾಧನೆಯ ಆ ಮಹಾ ಸಂಸ್ಥಾನ ಉಳಿದಿದೆ.

(ಸಾಧಾರ)

–ಎಸ್. ಗೋಪೀಚಂದ ರಾವ್.
ಉತ




ನಿಕಾಂತದಲ್ಲಿ ಓದುವಂತಹುದು ಕೋಕ ಶಾಸ್ತ್ರ

ನೀವು ಎಂದೂ ಓದದಂತಹ ವಶೀಕರಣ ಪುಸ್ತಕ. ಅನೇಕ ಆಶ್ಚರ್ಯಕರವಾದ ಫೋಟೋಗಳುಂಟು.

ಬೆಡ್‌ರೂಂ ಫೋಟೋಸ್

ಅತ್ಯುತ್ತಮ ಭಂಗಿಯಲ್ಲಿ ನೀವು ಹುಡುಗಿಯರ ಫೋಟೋಸನ್ನು ನೋಡಿ ಆನಂದಿಸಬೇಕೆಂದಿದ್ದರೆ ಇಂದೆ ಒಂದು ಸೆಟ್‌ಗೆ ಇಂದೇ ಬರೆಯಿರಿ. ಎರಡಕ್ಕೆ ಒಟ್ಟು ಬೆಲೆ ರೂ. ೬/-

Correspondence in English only.

H. H. STORES (N. U.)
P. B. 51 MEERUT (U. P.)

ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. ೫/- ದೀರ್ಘಕಾಲದ ಬಾಧೆಗೆ ರೂ. ೮/- (ವಿ.ಪಿ.ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA--40

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.



ಮೂಲ್ಕಿ ಬೇಂಕ್ ಲಿಮಿಟೆಡ್
ಮೂಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929 ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುನ್ನಡೆಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ

ನಮ್ಮ ಮೂರು ವರ್ಷದ ಸಬ್ಸಕೇಟುಗಳು 4½% ಬಡ್ಡಿ ಗಳಿಸುತ್ತವೆ

ನಮ್ಮ ಬಡ್ಡಿ ದರಗಳು.

ನಿರಿಖ ಠೇವಣಾತಿ.

| | | |
|---|---|---|
| 24 | ತಿಂಗಳಿಗೆ | 4% |
| 12 | ,, | 3½% |
| 6 | ,, | 3½% |
| 3 | ,, | 3% |

ಸೇವಿಂಗ್ಸ್ ಬೇಂಕ್ ಲೆಕ್ಕ 2½
ಕರೆಂಟ್ ಎಕೌಂಟು ½

THE MOOLKY BANK, LTD. MU

## ವಿಶ್ವಶಾಂತಿ

# ವಸಾಹತುವಾದ ಮತ್ತು ಉಳಿದ 'ಇಸಂ'ಗಳನ್ನು ಕಸದ ಬುಟ್ಟಿಗೆಸೆಯಿರಿ!

ವಸಾಹತು ವಾದವು ಯುದ್ಧಾಣುಗ ನ್ನು ಕೊಂಡೊಯ್ಯುವ ಮೂಲ ಸಾಧನ ವಾಗಿದೆ. ವಸಾಹತುಗಳನ್ನು ಸಂಪಾದಿಸು ರಿಮತ್ತು ಅವನ್ನು ತನ್ನ ಅಂಕಿತದ ಟ್ಟು ಕೊಳ್ಳುವರೆ ಯುದ್ಧಗಳನ್ನು ಮಾ ಲೇ ಬೇಕಾಗುತ್ತದೆ. ಹಾಗೇ ಪ್ರತಿ ಯಿಂದು ಘನ ರಾಷ್ಟ್ರವು ಆದನ್ನು ಕೈ ಗೊಂಡಿದೆಯೆಂದು ಗತ ಚರಿತ್ರೆಯನ್ನು ವಲೋಕಿಸಿದಲ್ಲಿ ಪ್ರತಿ ಯೋರ್ವ ನಿಗೂ ನನವಾಗಿರದು, ಸಾಮ್ರಾಜ್ಯ ಶಕ್ತಿ (Imperialist Powers) ಗಳೊಡನೆ ವಸಾಹತುಗಾರರು ಒಂದಲ್ಲ, ಹಲವು ಬಾ ಜಗಳಗಳನ್ನೆಸಗಲೇ ಬೇಕಾಗುತ್ತದೆ. ಗಿನ ಕಾಲದಲ್ಲಿ ವಸಾಹತುಗಳ ಶಕ್ತಿ ಯನ್ನು ಕುಗ್ಗಿಸಲು—ಯಾ-ತಾತ್ಪರ್ಯಗಳಿಸ ಗಾಗಿ ತಡೆಹಿಡಿಯಲು ಈ ಯುದ್ಧಗಳು ಹಾಯಕವಾಗಿವೆ.

ದ್ವಿತೀಯ ಮಹಾ ಯುದ್ಧಾನಂತರ ವಸಾಹತುಗಾರರಿಗೆ ಕೊಟ್ಟ ವಚನದ ಪ್ರ ರ ಅವರು ಸಂಪೂರ್ಣ ಸ್ವತಂತ್ರ್ಯರಾದ ರಮ ಪ್ರತಿಯನ್ನು ಮುಂದಿಟ್ಟರು. ಈ ಳಿಕೆಗಳಿಗೆ ಸಾಮ್ರಾಜ್ಯವಾದಿಗಳು ಕೊ ಉತ್ತರ—ಕೇನ್ಯಾ, ಗುಂಡು, ಸಿಡಿ ದ್ದುಗಳು. ತತ್ಪರಿಣಾಮವಾಗಿ ಕಳೆದ ನ್ನೊಂದು ವರ್ಷಗಳಿಂದ ವಸಾಹತು ದಿಗಳು ಚಿಕ್ಕ ನುತ್ತ ನಿರ್ಬಾ ರಾಷ್ಟ್ರ ಳ ವಿರುದ್ಧ ಸೈನಿಕ ತರಬೇತಿ ಮತ್ತು ಪ್ಷಣ ಕೊಡುವುದೆಲ್ಲಿ ನಿರತರಾಗಿ ದ್ದಾರೆ.

ಈ ಕಾಲಗಳಲ್ಲಿ ಬ್ರಿಟಿಷ್ ಸಾಮ್ರಾಜ್ಯ ದಿಗಳ ನೀತಿಯನ್ನು ಮುಖ್ಯವಾಗಿ ರ್ಮಾ, ಮಲಯಾ, ಕೊರಿಯಾ, ಕೆನ್ಯ ಲ್ಲಿ ಎಡೆಬಿಡದೆ ನಾಗುತ್ತಿರುವ ಜಗಳ ಳಿಂದ ಗುರುತಿಸಲಾಗಿದೆ. ಫ್ರಾನ್ಸಿನ ಳ ಶಕ್ತಿಗಳು ತಮ್ಮಿಂದ ತಾವಾಗಿ ಂಡೋ ಚೀನ, ಮೆಡಗಾಸ್ಕರ್, ಕೊರಿ ಮತ್ತು ಉತ್ತರ ಆಫ್ರಿಕಗಳಲ್ಲಿನ ುದ್ಧಗಳಲ್ಲಿ ಅಸಮಂಜಸತೆಯನ್ನು ಗಳಿಸಿವೆ. ಕೆನ ವರ್ಷ ಆಂಗ್ಲ-ಫ್ರೆಂಚ್-ಇಸ್ರೇಲಿ ಕ್ತಿಗಳ ವತ್ತು ಐಗುಪ್ತದ ಶಕ್ತಿಗಳ ಂಕಾರವನ್ನು ಪ್ರಪಂಚವು ಕಣ್ಣಾರೆಯಿ ೋಡಿದೆ. ಪ್ರಪಂಚವಲ್ಲಿ ರಾಷ್ಟ್ರಗಳೊ ನ ಚಿಕ್ಕ ಜಗಳಗಳನ್ನು ಶಾಂತ ರೀತಿ ಂದ ತೀರ್ಮಾನಿಸಿ, ಜಗತ್ತಿಗೆ ಶಾಂತಿ ುದೇಶವನ್ನು ಬೀರುತ್ತಿರುವ ಸಂಯುಕ್ತ ಷ್ಟ್ರ ಸಂಘವು ಜನಾಂಗ ಸಂಘದ ರಿಯನ್ನು ಹಿಡಿಯದಿದ್ದರೆ ನಾಕು!

ವಸಾಹತುಗಾರರ ಸ್ವಾತಂತ್ರ್ಯಾ ೋಲನವನ್ನು ದಬ್ಬಾಯಿಸಲು ರಾಜ ಶ ಗಳಿಂದ ಅಧಿಕ ಪ್ರಮಾಣದಲ್ಲಿ ಧನ ಯವಾಗುತ್ತಿವೆ. ಅಧಿಕೃತ ವಲಯಗ ಂದ ತಿಳಿದ ವೇರೆಗೆ ಇಂಡೋ ಚೀ ಲ್ಲಿ ನಡೆದ 'ಕೊಳಸು ಯುದ್ಧ' Dirty war) ದಿಂದಾಗಿ ಫ್ರಾನ್ಸಿಗೆ ೦೦,೦೦೦,೦೦೦,೦೦೦ ಫ್ರಾಂಕುಗಳು ಯವಾಗಿವೆ ಅಲ್ಜೀರಿಯದ ಯುದ್ಧ ಗಿ ೧೯೫೬ರಲ್ಲಿ ಫ್ರಾನ್ಸಿಗೆ ೦,೦೦೦,೦೦೦,೦೦೦ ಫ್ರಾಂಕುಗಳಷ್ಟು ಖರ್ಚಾಗಿದೆ. ಐಗುಪ್ತದಲ್ಲಿ ಕಸ್ತಕ್ಷೇಪ ಮಾಡಿದುದರ ಪರಿಣಾಮವಾಗಿ ಪ್ರತಿ ದಿನಕ್ಕೆ ಫ್ರೆಂಚರು ೧,೦೦೦,೦೦೦,೦೦೦ ಫ್ರಾಂಕುಗಳಷ್ಟು ವ್ಯಯಿಸಿರುತ್ತಾರೆ. ಮ ಲಯದಲ್ಲಿ ನಡೆದ ಇಷ್ಟ ವಾರ್ಷಿಕ ಯು ದ್ಧದಲ್ಲಿ ಬ್ರಿಟನು ೪೦೦,೦೦೦,೦೦೦ ಪೌಂಡು ಸ್ಟರ್ಲಿಂಗ್‌ಗಳಷ್ಟು ಖರ್ಚು ಮಾಡಿದೆ. ಐಗುಪ್ತದ ಮುತ್ತಿಗೆಗೆ ಬ್ರಿಟ ನು ಕಡಿಮೆ ಪಕ್ಷ ೧೦೦,೦೦೦,೦೦೦ ಪೌಂಡ್ ಸ್ಟರ್ಲಿಂಗ್‌ಗಳನ್ನು ಸುರಿದಿದೆ ಯೆಂದು ಅಂದಾಜು ಮಾಡಲಾಗಿದೆ. ಈ ರೀತಿಯ ಯುದ್ಧಗಳಿಂದಾಗಿ ಆದ ಜನ ಹಾನಿ ಎಷ್ಟೆಂದು ಗಣಿಸುವುದು ಅಗಸದ ನೆ ತಾರೆಗಳನ್ನು ಲೆಕ್ಕಿಸಿದಂತೆಯೇ ಸರಿ!

ಆರ್ಥಿಕ ಮತ್ತು ಭೌತಿಕ ನಾಶಗಳನ್ನು ಪ್ರಾಣ ಹಾನಿಯೊಂದಿಗೆ ಜೋಲಿಸುವುದು ಅಸಾಧ್ಯ. ೬೦೦ ದಿಂದ ೧೨ ನಾ ವಿರ ದಷ್ಟು ಜನರು ಐಗುಪ್ತದ ವಿರು ದ್ಧ ನಡೆದ ದಬ್ಬಾಳಿಕೆಯಲ್ಲಿ ಪ್ರೋರ್ಟ್ ಸಯದ್ ಎಂಬೊಂದು ಪ್ರದೇಶದಲ್ಲೇಯೇ ಕೊಲ್ಲಲ್ಪಟ್ಟಿದ್ದಾರೆಂದು ಅಂದಾಜುಮಾ ಡಲಾಗಿದೆ. ಅಲ್ಜೀರಿಯದ ಯುದ್ಧದಲ್ಲಿ ಎರಡು ವರ್ಷಗಳೊಳಗಾಗಿ ೪೮,೦೦೦ ಮಂದಿ ಅರಬರು ಹತರಾಗಿದ್ದಾರೆ.

ಪಾಶ್ಚಾತ್ಯ ರಾಜಕಾರಣಿಗಳು ಆಗಾಗ್ಗೆ ಅಲ್ಲಲ್ಲಿ 'ಆಭಿವೃದ್ಧಿ ಹೊಂದುತ್ತಿರುವ ಪ್ರ ದೇಶಗಳಿಗೆ ಸಹಾಯ' ಎಂದು ಕೂಗುತ್ತಿ ರುವ ಧ್ವನಿ ಕೇಳಿಬರುತ್ತಿದೆ. ಇದೇ ಏನು ವಸಾಹತುಗಳೊಡನೆ ಹೋರಾಡಲು ಕೊ ಡುತ್ತಿರುವ ಸಹಾಯ!—ರಾಷ್ಟ್ರದ ಆಭಿ ವೃದ್ಧಿಗೋಸ್ಕರ ಕೊಟ್ಟ ಆರ್ಥಿಕ ಸಹಾ ಯ! ಇದೇ ಏನು, ಪ್ರಪಂಚದ ಶಾಂತಿಯ ದ್ಯೋತಕ!! ಇದೇ ಏನು, ಸಮಾನತೆಯ ತತ್ವ!!! ಆಂಗ್ಲರು ಫ್ರೆಂಚರು ಕೂಡಿ ಐಗುಪ್ತ ಯುದ್ಧಕ್ಕೆ ವ್ಯಯಿಸಿದ ಹಣವು, ನೈಲ್ ನದಿ ಕಟ್ಟೆಸಲು, ಯೋಜಿತ ಅಸ್ವಾನ್ ಆಣೆಕಟ್ಟಿಗೆ, ಮರುಭೂಮಿಯ ಮಿಲಿಯಗಟ್ಟಲೆ ಎಕ್ರೆ ಭೂಮಿಗಳನ್ನು ಸಾ ಗುವಳಿಗೆ ತಂದು, ಕೈಗಾರಿಕಾಭಿವೃದ್ಧಿ ಗೆಯ್ತವ ಆಣೆಕಟ್ಟಿಗೆ ಖರ್ಚುಮಾಡುವ ಹಣದ ಹಲವು ಪಾಲು ಹೆಚ್ಚು ಮೃದು ಮಧುರ ಮಾತುಗಳಿಂದ ದುಸ್ಕೃತ್ಯಗಳ ನ್ನು ಯಾವಾಗಲೂ ಅಡಗಿಸಲಾಗುತ್ತದೆ. ಇದರಿಂದ ತಿಳಿಯುವುದೇನೆಂದರೆ ಪಾಶ್ಚಾ ತ್ಯ ಶಕ್ತಿಗಳು ಕೊಡುವ ಸಹಾಯ ಬೇರೆ "ಮಿಲಿಟರಿ ಸಹಾಯ"-ಇದನ್ನು ಪಡೆದ ರಾಷ್ಟ್ರಗಳು ಸಹಾಯವಿತ್ತವರ ಕೈಗೊಂ ಬೆಯಾಗಿ, ಅವರ ಆಕ್ರಮಣಕಾರೀ ವಿದೇ ಶ ನೀತಿಗೆ ಪುಟಕೊಡುವಂಥವುಗಳಾಗಿರ ಬೇಕು.

ವಿದೇಶೀ ಸಹಾಯವು ರಕ್ತಸಿಕ್ತವಾಗಿ ಯಿಂದ ಕೂಡಿದುದಾಗಿದೆ. ಇದು ಆ ದೇ ಶದ ಆರ್ಥಿಕೋನ್ನತಿಗಾಗಲೀ, ಜನಜೀವ ನ ಮಟ್ಟದ ಏರಿಕೆಗಾಗಲೀ ಪ್ರಯತ್ನಿಸು ತ್ತಿಲ್ಲವೆಂಬುದು ತಿಳಿಯಬಹುದು. ಇಗೆ ಹೇ ಳಿದುದರಿಂದಾಗಿ ವಿದೇಶೀ ಸಹಾಯವು ಬರೇ ಇದೊಂದು ಉದ್ದೇಶದಿಂದ ಕೂಡಿದೆ ಯೆಂದಂತಾಗದು. ದೇಶದ ಆರ್ಥಿಕೋನ್ನ ತಿಯ ಮೇಲ್ಮೈ ಜೀವನಮಟ್ಟದ ಸುಧಾರ ಣೆ ಮೂಲೋದ್ದೇಶಗಳಾದರೂ, ಪಾಕಿ ಸ್ತಾನಕ್ಕೆ ಅಮೆರಿಕ ಕೊಡುತ್ತಿರುವ ಮಿ ಲಿಟರಿ ಸಹಾಯ, ಭಾರತದ ವಿರುದ್ಧ ಪೆ ಟ್ರೋಲಿಯಂ ಪರವಾಗಿ ಡಲೆಸ್-ಕುಂ ಇರ ಗೋವನ ಜಂಟಿ ಹೇಳಿಕೆ ಇವುಗ ಳಿಂದ ಅವೆಲ್ಲವೂ ರಕ್ತಸಿಕ್ತವಾಗಿವೆ ಯೆಂಬುದು ನೇರ್ಯವಾಗಿರದು. ಇವರ ಮಧ್ಯೆ ಪ್ರಾಚ್ಯದ ಸಹಾಯವು ಆಸ್ಯಾ ಫ್ರಿಕಗಳ ನಡುವೆ 'ರಣರಂಗ' ಸ್ಥಾಪಿ ಸುವ ಉದ್ದೇಶವುಳ್ಳದ್ದು. ತತ್ಪರಿಣಾಮ ವಾಗಿ ಹೆಚ್ಚಿನ ಮಧ್ಯಪ್ರಾಚ್ಯ ರಾಷ್ಟ್ರ ಗಳನ್ನು 'ವಸಾಹತು'ಗಳಾಗಿ ಪರವರ್ತಿ ಸಿ, ಗುಲಾಮಗಿರಿಯಲ್ಲಿಡುವಂತೆ ಪ್ರಯ ತ್ನಿಸುವಂಥಾದ್ದಾಗಿದೆ.

"ವಸಾಹತು ಪ್ರಪಂಚ"— ಅಂದರೆ ೩/೫ ಅಂಶ ವಸಾಹತು ರಾಷ್ಟ್ರಗಳಿರುವ ಪ್ರಪಂಚವು ಈಗ ಸಡಿಲಗೊಳ್ಳುತ್ತಾ ಇದೆ. ಪ್ರಪಂಚದ ಅರ್ಧ ಜನಸಂಖ್ಯೆ ಅಂದರೆ ೧೫೦ ಮಿಲಿಯನ್ ಈಗಾಗಲೆ ಸರ್ವತಂತ್ರ ಸ್ವತಂತ್ರವಾಗಿದೆ. ವಸಾ ಹತು ಸರಪಳಿ-ನ್ನು ಹರಿದು ಭವ್ಯ ಚಾ ರಿತ್ರ್ಯವನ್ನು ಬೆ ರಾಷ್ಟ್ರಗಳು ತಲೆಯೆತ್ತಿ ತಮ್ಮದೇ ಆದ ಮಾದರಿಯುಳ್ಳ ಮುಂದಿರಿ ಯುತ್ತಿವೆ. ಈ ಲೂ ಅಸ್ತಿತ್ವದಲ್ಲಿರುವ ಸಸಾಹತುವಾದವು ಉದ್ಯವಕಾರಿಯಾ ಗಿದೆ. ಶಾಂತಿ ಸಾಧನೆಯ ತತ್ವಕ್ಕೆ ಅವಾ ಯಕಾರಿಯಾಗಿದೆ ಇಲ್ಲ ಇಂಡೋನೇಸ್ಯ ದ ಅಧ್ಯಕ್ಷ ಸೊಕಾರ್ನೋರೇ ಮಾತನ್ನು ಗನುಸಿಕೆ ತರಬೇಕಾಗಿದೆ. "ಎಂದಿನ ವರೆಗೆ ಫೇಸಿಸಂ, ಫ್ಯಾಸಿಸಂ, ಗುಲಾಮ ತನ ಮತ್ತಿತರ "ಇಸಂ"ಗಳೂ ವಸಾ ಹತುವಾದಗಳೂ ಗತ ಚರಿತೆಯ ಕಸದ ಬುಟ್ಟಿಯೆಳಗೆ ಬೀಳುವುದಿಲ್ಲವೋ, ಅಂದಿ ನ ವರೆಗೆ ಪ್ರಪಂಚದಲ್ಲಿ ಶಾಶ್ವತ ಶಾಂತಿ ಮತ್ತು ಭದ್ರತೆ ಎಂಬುದು ನೆಲಸ ಲಾರದು."

(ಸಾಭಾರ)

**ವ್ಯಾ. ಸುಬ್ಬಾರಾಮರಾವ್,**
ಬಸ್ರೂರು.

## ನಮ್ಮ ಕೆಲವು ಪ್ರಕಟಣೆಗಳು

### ಇಂದಿನ ವಿಜ್ಞಾನ ಮತ್ತು ಇಂದಿನ ಮಾನವ

ಮಾನವನ ಮೇಲೆ ಇಂದಿನ ವಿಜ್ಞಾನವು ಬೀರಿದ ಪ್ರಭಾವವನ್ನು ಕೂಲಂಕಷವಾಗಿ ವಿಮರ್ಶಿಸಿ ಮಾನವನನ್ನೂ ವಿಜ್ಞಾನವನ್ನೂ ಸಮರಸವಾಗಿ ಬೆಳೆಯಿಸುವ ಮಾರ್ಗವನ್ನು ಸೂಚಿಸುವ ವಿಚಾರಪೂರ್ಣ ಉದ್ಗ್ರಂಥ. ಬರೆದವರು: ಡಾಕ್ಟರ್ ಜೇಮ್ಸ್ ಬಿ. ಕೊನೆಂಟ್ ಅನುವಾದಕ: ಯು. ಕೃಷ್ಣರಾಯಠಾಕಾಚಾರ್ಯ. ಪುಟ: ೧೪೦ ಬೆಲೆ: ಒಂದೂವರೆ ರುಪಾಯಿ.

### ನಡುಹಗಲಿನ ಕಗ್ಗತ್ತಲೆ

ಇದೊಂದು ರಸಪೂರ್ಣ ರೋಮಾಂಚಕ ಕಾದಂಬರಿ. ಮಾಡಿರದ ಅಪರಾಧ ಗೆಗಾಗಿ ವಿಕಾಂತವಾಸಕ್ಕೆ ಗುರಿಯಾಗಿ ಅತ್ಯಾಧುನಿಕ ಚಿತ್ರಹಿಂಸೆಯ ನರಕಯಾತನೆ ಯಿಂದಾಗಿ ಅಪರಾಧ ಸ್ವೀಕಾರ ಮಾಡಿದ ಒಬ್ಬ ಸೆರೆಯಾಳು ಪಂತರು ಕರೆದೊಯ್ಯುವ ವರೆಗೆ ಸೆರೆಮನೆಯ ತನ್ನ ಕೋಣೆಯಲ್ಲಿ ಅನುಭವಿಸುವ ಮಾನಸಿಕ ಯಾತನೆಯ ಭೀಕರ ಚಿತ್ರಣ. ಪ್ರಖ್ಯಾತ ಲೇಖಕ ಆರ್ಥರ್ ಕೊಸ್ಲರ್ ಅವರ ಮನೋಜ್ಞ ಜರ್ಮನ್ ಕಾದಂಬರಿಯ ಕನ್ನಡವನ್ನು ಅನುವಾದಿಸಿದವರು ಕು.ಶಿ.ಹರಿದಾಸ ಭಟ್ಟರು. ಪುಟ: ೧೮೮ ಬೆಲೆ: ಎರಡೂವರೆ ರುಪಾಯಿ.

### ಶಿಕ್ಷಣದ ಧ್ಯೇಯಗಳು

ಪ್ರಪಂಚದ ಆತ್ಯಂತ ಮೇಧಾವಿ ತತ್ತ್ವಜ್ಞಾನಿ ಆಲ್ಬರ್ಟ್ ನಾರ್ಥ್ ವೈಟ್‌ಹೆಡ್ ಅವರ ನುಡಿತ್ತ್ರಪೂರ್ಣ ಶೈಕ್ಷಣಿಕ ವಿಚಾರಗಳ ಸಂಕಲನ. ಅನುವಾದಕರು: ಕೆ. ಬಿ. ರಾಮಕೃಷ್ಣರಾಯ ಮತ್ತು ಯು. ಕೃಷ್ಣರಾಯಠಾಕಾಚಾರ್ಯ. ಪುಟ: ೨೫೦. ಬೆಲೆ: ೩.೫೫ ರುಪಾಯಿ.

### ಸ್ವಾತಂತ್ರ್ಯ ಮತ್ತು ಸಂಸ್ಕೃತಿ

ಆಮೇರಿಕದ ಹಿರಿಯ ದಾರ್ಶನಿಕ ಜಾನ್ ಡ್ಯೂಯಿಯವರ ವಿಚಾರ ಪ್ರಚೋದಕ ಪ್ರಬಂಧ. ಪ್ರಜಾತಂತ್ರಾತ್ಮಕ ಸರ್ಕಾರ ಪದ್ಧತಿಯಲ್ಲಿ ಸ್ವಾತಂತ್ರ್ಯ ಮತ್ತು ಸಂಸ್ಕೃತಿಯ ನಿಕಾಸವು ಹೇಗೆಂಬುದನ್ನು ವಿವರಿಸುವ ಅಪೂರ್ವ ಗ್ರಂಥ. ಅನುವಾದಕ: ಕು. ಶಿ. ಹರಿದಾಸ ಭಟ್ಟ. ಪುಟ: ೨೫೦. ಬೆಲೆ: ೨ರುಪಾಯಿ.

### ಹಿರೋಶಿಮಾದಿಂದ ಜಿನೇವಾ

'ಅಣುಶಕ್ತಿಯ ಕಲ್ಪನೆಯಿಂದ ಹಿಡಿದು ಅದನ್ನು ಪಳಗಿಸುವ ದಿಶೆಯಲ್ಲಿ ನಡೆದ ಎಲ್ಲ ಸಾಧನೆಗಳನ್ನೂ ಸಿದ್ಧಿಗಳನ್ನೂ ಈ ತೊಂಭತ್ತು ಪುಟದ ಪುಸ್ತಕದಲ್ಲಿ ಬಹು ವಿವರ ವಾಗಿ, ಮನೋಜ್ಞವಾಗಿ, ವಿಜ್ಞಾನಿಯಲ್ಲದವನಿಗೂ ತಿಳಿಯುವಂತೆ, ಸಮರ್ಥವಾಗಿ, ಆಧಾರ ಯುತವಾಗಿ' ವರ್ಣಿಸಲಾಗಿದೆ. ಬರೆದವರು: ಯು. ರಾಘವೇಂದ್ರಾಚಾರ್ಯ. ಪುಟ: ೯೦. ಬೆಲೆ: ಒಂದೂವರೆ ರುಪಾಯಿ.

### ಉಳಿಯದ ಸಂಪತ್ತು

ವಿಶ್ವವ್ಯಾಪಿ ಆರ್ಥಿಕ ಪರಿಸ್ಥಿತಿ ಮತ್ತು ಭವಿಷ್ಯದ ಸರ್ವತೋಮುಖ ವಿವೇಚನೆ, ಒಂದು ಸ್ವತಂತ್ರ ರಚನೆ. ಬರೆದವರು: ಕು ಶಿ ಹರಿದಾಸ ಭಟ್ಟ ವಿ. ಸೀತಾರಾಮಯ್ಯ ನವರ ಮುನ್ನುಡಿ ಇನಿ. ಪುಟ: ೧೫೦. ಬೆಲೆ: ಎರಡು ರುಪಾಯಿ.

### ಘಂಟಮೂರಾ

ಇಗ್ನೇಜಿಯೋ ಸಿಲೋನಿ ಬರೆದ ಇಟಾಲಿಯನ್ ಕಾದಂಬರಿಯ ಅನುವಾದ ಫಾಸಿಸ್ಟ್ ಪದ್ಧತಿಯನ್ನು ಇಟಲಿಯ ಜನತೆಯ ಮೇಲೆ ಮುಸಲಿನಿ ಹೊರಿಸಿದಾಗ ಅಲ್ಲಿನ ಗ್ರಾಮಾಂತರದ ರೈತರು ಅವನ್ನು ನಿರೋಧಿಸಿ ನಿಂತ ಹೃದಯಂಗಮ ಕಥೆ. ಅನು ವಾದಕರು: ಕು ಶಿ. ಹರಿದಾಸ ಭಟ್ಟ. ಪುಟ: ೨೦೦. ಬೆಲೆ: ಎರಡು ರುಪಾಯಿ.

**ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ.**



# ಅಭಿವೃದ್ಧಿ ಯೋಜನೆ

(೩ನೇ ಪುಟದಿಂದ)

ಕಲ್ಕತ್ತ ಮತ್ತು ಬೊಂಬಾಯಿಗಳ ನಡುವಿನ ಪ್ರಧಾನ ರೇಲ್ವೆದಾರಿಯಲ್ಲಿ ಕಲ್ಕತ್ತದಿಂದ ೨೭೫ ಮೈಲುಗಳ ಅಂತರದಲ್ಲಿ ರೂರ್ಕೇಲಾ ಇದೆ. ಭಿಲೈಯು ಅದೇ ದಾರಿಯಲ್ಲಿ ಇನ್ನೂ ಪಶ್ಚಿಮದಲ್ಲಿದ್ದು, ನಾಗಪುರದಿಂದ ೧೫೬ ಮೈಲಿ ದೂರದಲ್ಲಿದೆ. ಕಲ್ಕತ್ತಾ ದೆಹಲಿಯ ಪ್ರಧಾನ ರೇಲ್ವೆ ದಾರಿಯಲ್ಲಿ ಕಲ್ಕತ್ತದಿಂದ ೧೧೦ ಮೈಲು ದೂರದಲ್ಲಿ ದುರ್ಗಾಪುರವಿದೆ. ಬೃಹದಾಕಾರದ ಈ ಸವೀನ ಉಕ್ಕಿನ ಕೈಗಾರಿಕಾ ಸ್ಥಳಗಳನ್ನು ಆರಿಸುವಲ್ಲಿ ಗಣ್ಯವಾದ ಆರ್ಥಿಕಾನುಕೂಲತೆಯನ್ನೆ ವಲಂಬಿಸಲಾಗಿದೆ. ಈ ಸ್ಥಳಗಳು ಕಾರಖಾನೆಗೆ ಅತ್ಯಗತ್ಯವಿರುವ ಕಚ್ಚಾ ವಸ್ತುಗಳ ಆಸಾನಸ್ಥಾನಕ್ಕೆ ಬಹಳ ಸಮೀಪವಾಗಿದ್ದು ಉತ್ಪಾದನೆಯ ಏನಿಯೋಗ ನಿಧಾನಗಳಿಂದ ಜನತಿದೂರದಲ್ಲಿವೆ. ರೂರ್ಕೇಲಾದಿಂದ ೫೦ ಮೈಲುಗಳ ದೂರದಲ್ಲಿ ತಾಲ್ಡಿಯ ಕಬ್ಬಿಣದ ನಿಧಾನಗಳಿವೆ. ಹಾಗೆಯೇ ಅಯನ್ನಿಧಾನದ ದಲ್ಲಿ–ರಾಜ್ ಹೇರಾ ಪಹಾರದಿಂದ ೯೦ ಮೈಲುಗಳ ದೂರದಲ್ಲಿ ಭಿಲೈ ಇದೆ. ಮಧ್ಯಪ್ರದೇಶದ ಕೋರ್ಬ ಇದ್ದಲಗಣಿಗಳಿಂದ ಭಿಲೈಯು ವಿಶೇಷ ದೂರದಲ್ಲಿಲ್ಲ. ಬಂಗಾಳದ ಇದ್ದಲ ಗನಿಗಳ ಮಧ್ಯದಲ್ಲಿಯೇ ದುರ್ಗಾಪುರವಿದೆ. ಈ ಮೂರು ಸ್ಥಳಗಳಲ್ಲಿ ಅತ್ಯಧಿಕ ಪ್ರಮಾಣದಲ್ಲಿ ಬೇಕಾಗುವ ನೀರಿನ ಸೌಕರ್ಯವಿದೆ. ದುರ್ಗಾಪುರವು ತನಗೆ ಬೇಕಾಗುವ ನೀರನ್ನು ದಾಮೋದರ ನದಿಯಿಂದ ಪಡೆಯುತ್ತದೆ. ಶಂಖ್ ಎಂಬ ಹೊಳೆಗೆ ಆಣೆಕಟ್ಟನ್ನು ಕಟ್ಟಿ ರೂರ್ಕೇಲಕ್ಕೆ ನೀರನ್ನೊದಗಿಸಬೇಕಾಗಿದೆ. ತಂಡೂಲಾ ಕಾಲುವೆಯು ಭಿಲೈ ನಗರಕ್ಕೆ ಸಾಕಷ್ಟು ನೀರಿನ ಪೂರೈಕೆಯನ್ನು ಮಾಡುತ್ತದೆ.

ಹೀಗೆ ಆರ್ಥಿಕ ಮತ್ತು ತಾಂತ್ರಿಕ ಕಾರಣಗಳ ದೆಸೆಯಿಂದ ಆರಿಸಲ್ಪಟ್ಟ ರೂರ್ಕೇಲಾ ಮತ್ತು ಭಿಲೈಗಳು ಆರ್ಥಿಕ ದೃಷ್ಟಿಯಿಂದ ಹಿಂದುಳಿದ ಪ್ರದೇಶಗಳಾಗಿದ್ದು ಆ ಪ್ರದೇಶದ ಜನಜೀವನದ ಅಭಿವೃದ್ಧಿಗೂ ಇದೀಗ ನೆರವೀಯುತ್ತಿವೆ. ಅಲ್ಲದೆ, ಈ ನಗರಗಳು ದಿನೇ ದಿನೇ ಬೆಳೆಯುತ್ತಾ ಬರುತ್ತಿವೆ. ಅಲ್ಲಿ ಜನ ಸಂಖ್ಯೆಯು ಹೆಚ್ಚುತ್ತಾ ಬಂದು ಒಂದು ಕಾಲದಲ್ಲಿ ವಿರಳ ಜನ ಸಂಖ್ಯೆಯ ಪ್ರದೇಶವಾದ ಈ ಭಾಗಗಳು ಇದೀಗ ದಟ್ಟಜನ ಸಾಂದ್ರತೆಯಿಂದ ಕೂಡಿಕೊಂಡಿವೆ.

ಉಕ್ಕಿನ ಉತ್ಪಾದನೆಯು ಕೆಲವೊಂದು ಆಂಕೆಸಂಖ್ಯೆಗಳನ್ನನಲೋಕಿಸಿದರೆ, ಆಗ ಉಕ್ಕಿನ ಪ್ರಮುಖತೆ, ರಾಷ್ಟ್ರ ಪುನರ್ನಿರ್ಮಾಣ ಕಾರ್ಯದಲ್ಲಿ ಉಕ್ಕು ವಹಿಸುವ ಪಾತ್ರಗಳು ತಿಳಿದು ಉಕ್ಕಿನಕಡೆಗೆ ವಿಶೇಷ ಆಸಕ್ತಿಯನ್ನು ಉಂಟುಮಾಡಬಹುದು.

ಉಕ್ಕಿನ ಕಾರಖಾನೆಗಳ ನಿರ್ಮಾಣಕ್ಕಾಗಿ ಉಪಯೋಗಿಸಿದ ಒಟ್ಟು ಬಂಡವಾಳವು ೪೦೦ ಕೋಟಿಗೂ ಮಿಕ್ಕಿದೆ. ಪ್ರತ್ಯೇಕ ಕಾರಖಾನೆಗೂ ೨೦ ಲಕ್ಷ ಟನ್‌ಗಳಷ್ಟು ಕಬ್ಬಿಣದ ಅದುರು, ೫ ಲಕ್ಷ ಟನ್ ಸುಣ್ಣದ ಕಲ್ಲು, ೦೦೮ ಲಕ್ಷ ಟನ್ ಮೆಂಗನೀಸ್ ಮತ್ತು ೧೬ ಲಕ್ಷ ಟನ್ ಕಲ್ಲಿದ್ದಲು ಬೇಕಾಗುತ್ತವೆ. ಪ್ರತಿಯೊಂದು ಕಾರಖಾನೆಗೂ ಸುಮಾರು ೬೦೦೦ ದಿಂದ ೭೦ ಲಕ್ಷ ಟನ್‌ಗಳಷ್ಟು ಕಚ್ಚಾ ವಸ್ತುಗಳ ಉಪಯೋಗವಾಗುವುದು. ಪ್ರತ್ಯೇಕ ಕಾರಖಾನೆಗೆ ಪ್ರತಿದಿನ ೬೫೦ ಲಕ್ಷ ಗ್ಯಲನ್ನುಗಳಷ್ಟು ನೀರು ಬೇಕಾಗುವುದು. ಮೂರು ಕಾರಖಾನೆಗಳಿಗೆ ಸುಮಾರು ೧೫೦ ವಿಶೇಷ ಅನುಭವವಿರುವ ಇಂಜಿನಿಯರರೂ ೨೦೦೦ಕ್ಕೂ ಮಿಕ್ಕಿದ ಜೂನಿಯರ್ ಇಂಜಿನಿಯರರೂ, ೧೫೦೦೦ ತರಬೇತಿ ಪಡೆದ ತಾಂತ್ರಿಕಜ್ಞರೂ ೬೫೦೦ ಬುದ್ಧಿವಂತ ಕರ್ಮಚಾರಿಗಳೂ, ಬೇಕಾಗುತ್ತಾರೆ.

ದೇಶದ ವಿಶ್ವವಿದ್ಯಾಲಯಗಳಿಂದ ಹೊರಬೀಳುವ ಪದವೀಧರ ಇಂಜಿನಿಯರರ ಮತ್ತು ಕೆಲಸದಲ್ಲಿ ನುರಿತ ಇಂಜಿನಿಯರರ ತರಬೇತಿಯು ಒಂದು ದೊಡ್ಡ ಸಮಸ್ಯೆಯಾಗಿದೆ. ಈ ಸಮಸ್ಯೆಯನ್ನು ಪರಿಶರಿಸಿಕೊಳ್ಳುವುದಕ್ಕಾಗಿ ಭಾರತ ಸರಕಾರವು ಬೇರೆ ಬೇರೆ ದೇಶ ಮತ್ತು ಸಂಸ್ಥೆಗಳೊಡನೆ ಕೆಲವೊಂದು ವ್ಯವಸ್ಥೆಯನ್ನು ಮಾಡಿಕೊಂಡಿದೆ. ಇಂತಹ ಒಪ್ಪಂದಗಳ ಮೇರೆಗೆ ಪದವೀಧರ ಇಂಜಿನಿಯರರನ್ನು ಸೋವಿಯೆಟ್ ರಶ್ಯ, ಪಶ್ಚಿಮ ಜರ್ಮನಿ ಮತ್ತು ಸಂಯುಕ್ತ ರಾಜ್ಯಗಳಿಗೆ ಉಕ್ಕಿನ ಉತ್ಪಾದನೆಯಲ್ಲಿ ವಿಶೇಷ ರೀತಿಯ ತರಬೇತಿಯನ್ನು ಪಡೆಯುವ ಸಲುವಾಗಿ ಕಳಿಸಲಾಗುತ್ತಿದೆ. ಅಮೇರಿಕನ್ ಉಕ್ಕಿನ ಕರ್ಮಶಾಲೆಯಲ್ಲಿ ತರಬೇತಿಯನ್ನು ಫೋರ್ಡ್ ಫಾಂಡೇಶನ್‌ನವರ್ಯವಾಗಿ ಪಡೆಯಲು ಅಮೇರಿಕದ ಸಂಯುಕ್ತ ರಾಷ್ಟ್ರಗಳಿಗೂ ಕೆಲವೊಂದು ಪದವೀಧರ ಇಂಜಿನಿಯರರನ್ನು ಕಳುಹಿಸುತ್ತಲಿದೆ. ವಿಶೇಷ ತಾಂತ್ರಿಕಜ್ಞ, ಹಾಗೂ ಕೆಳಮಟ್ಟದ ಕರ್ಮಚಾರಿಗಳ ತರಬೇತಿಗಾಗಿ ದೇಶದೊಳಗಿನ ಇಂಜಿನಿಯರಿಂಗ್ ಕರ್ಮಶಾಲೆ ಮತ್ತು ಕಾರಖಾನೆಗಳೊಡನೆ ತಕ್ಕ ವ್ಯವಸ್ಥೆಗಳನ್ನು ಮಾಡಲಾಗುತ್ತಿದೆ. ಮೂಲ ಲೋಹಗಳ ಶೋಧಕರ ಅಭಾವವನ್ನು ನೀಗಿಸಿಕೊಳ್ಳುವುದಕ್ಕಾಗಿ ಒಂದು ವರ್ಷದ ವಿಶೇಷ ವಿಭಾಗವನ್ನು ದೇಶದ ದೊಡ್ಡ ಇಂಜಿನಿಯರಿಂಗ್ ಸಂಸ್ಥೆಗಳಲ್ಲಿ ತೆರೆಯಬೇಕಾಗಿದೆ.

ರೂರ್ಕೇಲಾ ಮತ್ತು ಭಿಲೈಯ ಉಕ್ಕಿನ ಕಾರಖಾನೆಗಳು ಸಾಮಾನ್ಯವಾಗಿ ೧೯೫೮ನೆಯ ಕೊನೆಯೊಳಗೆ ಉತ್ಪಾದನೆಯನ್ನು ಪ್ರಾರಂಭಿಸುವ ನಿರೀಕ್ಷೆಯಿದೆ. ಇದು ತನ್ನ ತುಂಬುಗತಿಯನ್ನು ೧೯೫೯ರ ಅಂತ್ಯದೊಳಗೆ ಹೊಂದಬಹುದು. ದುರ್ಗಾಪುರದ ಕರ್ಮಶಾಲೆಯು ೧೯೫೯ರ ಕೊನೆಯೊಳಗೆ ಕೆಲಸಕ್ಕೆ ಪ್ರಾರಂಭಿಸಿ, ತನ್ನ ಪರಿಪೂರ್ಣ ಶಕ್ತಿಯನ್ನು ಒಂದು ವರ್ಷದ ನಂತರ ಪ್ರದರ್ಶಿಸಬಹುದು. ಉತ್ಪಾದನಾ ಕಾರ್ಯಕ್ರಮವು ಎಲ್ಲ ವಿಧ ಮತ್ತು ವಿಭಾಗಗಳಲ್ಲೂ ಉಕ್ಕಿನ ಹರಿವಿಗೆ ಸಮರ್ಥವಂತೆ ಈ ನಿಯೋಜಿತ ಕಾರಖಾನೆಗಳಲ್ಲಿ ತಯಾರಿಸಲ್ಪಟ್ಟಿದೆ ರೂರ್ಕೇಲಾದ ಕಾರಖಾನೆಯು ಕೇವಲ ಕಟ್ಟಿ ಮತ್ತು ತಗಡುಗಳಂತಹವುಗಳನ್ನೇ ಉತ್ಪಾದಿಸುವುದು. ಭಿಲೈ ಕಾರಖಾನೆಯು ಭಾರವಾದ ರೈಲು, ಭವನ ನಿರ್ಮಾಣ ಸಾಮಗ್ರಿ ಮೊದಲಾದುವುಗಳನ್ನೂ ದುರ್ಗಾಪುರದ ಕಾರಖಾನೆಯು ಮಧ್ಯಮ ನರ್ಗದ ಕಟ್ಟದ ಸಾಮಾಗ್ರಿಗಳು, ಚಕ್ರಗಳು, ಟಯರ್‌ಗಳು, ಅಕ್ಷಗಳು, ರೈಲ್ವೇ ಕಂಬಿಗಳ ಕೆಳಗಿಡುವ ಸರಳ ತುಂಡು ಮೊದಲಾದುವುಗಳನ್ನು ಉತ್ಪಾದಿಸುತ್ತದೆ. ಬೆಳೆಯುತ್ತಿರುವ ಔದ್ಯೋಗಿಕ ಪ್ರಗತಿ ನಿತ್ಯಅತ್ಯವಿರುವ ಉಕ್ಕಿನ ಸಾಮಾನು ಸರಂಜಾಮುಗಳನ್ನೂ ಇದು ಒದಗಿಸುತ್ತದೆ.

ಇನ್ನು ಉಕ್ಕಿನ ಕಾರಖಾನೆಗಳಿಂದ ದೇಶಕ್ಕೆ ಒದಗುವ ಲಾಭವನ್ನು ಕುರಿತು ಎರಡು ಮಾತುಗಳನ್ನು ಹೇಳಬಹುದು. ಈ ಮೂರು ಹೊಸದಾಗಿ ಸ್ಥಾಪಿಸುವ ಕಾರಖಾನೆಗಳಲ್ಲಿ ಉತ್ಪಾದಿಸಲಾಗುವ ಉಕ್ಕಿನ ಮತ್ತು ಹಿಂದಿ ಕಬ್ಬಿಣದ ವ್ಯಾಪಾರದಿಂದಪ್ರತಿಯೊಂದು ಕಾರಖಾನೆಗೆ ಪ್ರತಿವರ್ಷವೂ ೧೫೦ ಕೋಟಿ ರೂಪಾಯಿಗಳು ವೆಚ್ಚವಾಗುತ್ತಿರುವ ವಿವಿಧ ವಸ್ತುಗಳನ್ನು ನಾವು ಈ ಕಾರಖಾನೆಗಳ ಆದಾಯದಿಂದಾಗಿ ಉಳಿಸಿಕೊಳ್ಳಬಹುದು. ಭಾರತದಲ್ಲಿ ತಯಾರಾದ ಉಕ್ಕಿಗಿಂತ ವಿದೇಶಗಳಿಂದ ಆಮದು ಮಾಡಿಕೊಳ್ಳುವ ಉಕ್ಕಿನ ಬೆಲೆಯು ಅಧಿಕತರವಾಗಿದೆ. ಈ ಉಳಿತಾಯದ ಮೊಬಲಗಿನಿಂದ ಪ್ರತಿ ಐದು ವರ್ಷಗಳಲ್ಲಿ ೧೦ ಲಕ್ಷ ಟನ್ ಉಕ್ಕಿನ ಉತ್ಪಾದನೆಯನ್ನು ಮಾಡಬಲ್ಲ ಎರಡು ಕಾರಖಾನೆಗಳನ್ನು ತೆರೆಯಬಹುದು.

ಭಾರತವು ಅಧಿಕ ಉತ್ಪತ್ತಿಯ ಮೂಲ ಯೋಜನೆಯೊಂದಿಗೆ ನಿರುದ್ಯೋಗ ಸಮಸ್ಯೆಯನ್ನೂ ಪರಿಹರಿಸುವ ಧ್ಯೇಯವನ್ನಿಟ್ಟುಕೊಂಡಿದೆ. ಈ ಗುರಿಯು ಈ ಉಕ್ಕಿನ ಕೈಗಾರಿಕಾ ಕೇಂದ್ರಗಳಿಂದ ಅದೆಷ್ಟು ಪೂರೈಸಬಹುದೆಂದು ಸಂಶಯಪಡಬಹುದು. ನಿಜವಾಗಿಯೂ ಈ ಉಕ್ಕಿನ ಯೋಜನೆಯಿಂದ ಸುಮಾರು ೨೫,೦೦೦ ಜನರಿಗೆ ಮಾತ್ರ ಉದ್ಯೋಗ ದೊರೆವುದೆಂದು ಅಂದಾಜುಮಾಡಲಾಗಿದೆ. ಈ ಯೋಜನೆಗೆ ವೆಚ್ಚವಾಗುವ ಬಂಡವಾಳವನ್ನೂ, ಉದ್ಯೋಗಾವಕಾಶಗಳನ್ನೂ ತುಲನೆಮಾಡಿನೋಡಿದರೆ ಹೊಸ ಉದ್ಯೋಗಗಳೇನೂ ಗಣನೀಯ ಸಂಖ್ಯೆಯಲ್ಲವೆಂದು ಹೇಳಬಹುದು. ಆದರೆ, ಈ ರೀತಿಯಲ್ಲಿ ನೋಡುವುದು ಮಾತ್ರ ಸರಿಯಾದುದಲ್ಲ. ಈ ಬಂಡವಾಳದಿಂದ ಕಟ್ಟಲ್ಪಡುವ ಉಕ್ಕಿನ ಕಾರಖಾನೆಗಳಲ್ಲಿ ತಯಾರಾಗುವ ವಿವಿಧ ವಸ್ತುಗಳು ದೇಶದ ನಾನಾ ಅಭಿವೃದ್ಧಿಯೋಜನೆಗಳಲ್ಲಿ ಉಪಯೋಗವಾಗುವುದು. ಹಾಗಾಗಿ ನಾನಾ ವಿಧದ ಕೈಗಾರಿಕೆಗಳಲ್ಲಿ, ದೇಶದ ಪುನಾರಚನೆಯ ಕಾರ್ಯಕ್ರಮಗಳಲ್ಲಿ ಜನರಿಗೆ ಅನೇಕಾನೇಕ ಉದ್ಯೋಗಾವಕಾಶಗಳು ದೊರೆಯುತ್ತವೆ. ಔದ್ಯೋಗಿಕ ಅಭಿವೃದ್ಧಿಯ, ಯೋಜನೆಗಳಲ್ಲಿ ಪ್ರಮುಖ ವಿತ್ತ ವಹಿಸುವ ಈ ಉಕ್ಕಿನಿಂದಾಗಿ ನಿರುದ್ಯೋಗ ಸಮಸ್ಯೆಗೂ ಕೆಲವೊಂದು ಪರಿಹಾರಗಳು ದೊರೆಯುತ್ತವೆ.


'ಇಂಗ್ಲಿಷ್ ಕಲಿಯಲಿಲ್ಲವಲ್ಲಾ' ಎಂದು ಚಿಂತಿಸಬೇಡಿರಿ.

ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಬಹುದಾದ ಅಂಗ್ಲ ಸ್ವಯಂಬೋಧಿನಿ ಇಲ್ಲಿದೆ ನೋಡಿರಿ!

ಸುಲಭದಲ್ಲಿ ಇಂಗ್ಲಿಷ್

ENGLISH MADE EASY

ಸಾವಿರಾರು ಜನರು ಈ ಪುಸ್ತಕದಿಂದ ಸುಲಭವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ.

ಬೇಡಿಕೆ ಹೆಚ್ಚಾಗಿರುವುದೇ ಇದರ ಜನಪ್ರಿಯತೆಯನ್ನು ಸೂಚಿಸುತ್ತದೆ.

ಹೊಸ ಮುದ್ರಣ—ಸಾದಾ ಪ್ರತಿ 1 : 50. ಉತ್ತಮ ಪ್ರತಿ 2 : 00.

ಪುಸ್ತಕದ ಬೆಲೆಯೊಂದಿಗೆ ನಾಲ್ಕಾಣೆ ಸೇರಿಸಿ ಮನಿಯಾರ್ಡರು ಮಾಡಿದರೆ ಪ್ರತಿಯೊಂದನ್ನು ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕನ್ನಡ.


Edited, Printed & Published by K. H. Shetty at the Navayuga press, Udipi S. India

REGD. NO. M. 3818

LICENCE NO. 81
Licensed to Post without Prepayment.

# ನವಯುಗ

ಸಂಪುಟ ೩೬ VOL.36

20—6—1957

ಸಂಚಿಕೆ ೪೧ NO. 41

## ಆಡಳಿತ ಮಿತವ್ಯಯ

## ಅನಾವ್ಯಯವನ್ನು ತಡೆಹಿಡಿದು ಜನತೆಯ ವಿಶ್ವಾಸವನ್ನು ಸಂಪಾದಿಸಬೇಕು

ದೇಶದ ಜನರ ಸರವಾಗಿ ಅವರಿಂದಲೇ ಆರಿಸಲ್ಪಟ್ಟ ಪ್ರತಿನಿಧಿಗಳಿಂದ ದೇಶದ ಆಡಳಿತೆಯು ನಡೆಸಲ್ಪಡುವುದೇ ಪ್ರಜಾಪ್ರಭುತ್ವ ರಾಜ್ಯಭಾರ ಪದ್ಧತಿ ಭಾರತವು ಬ್ರಿಟಿಷರಿಂದ ರಾಜಕೀಯ ಸ್ವರಾಜ್ಯವನ್ನು ಪಡೆದುಕೊಂಡ ಮೇಲೆ ನಮ್ಮ ರಾಜಕೀಯ ಮುಂದಾಳುಗಳು ಭಾರತಕ್ಕೆ ಪ್ರಜಾಪ್ರಭುತ್ವರೀತಿಯ ರಾಜ್ಯಭಾರವೇ ಉತ್ತಮವೆಂದು ಮನಗಂಡು ಲೋಕತಂತ್ರಾತ್ಮಕ ಪಟ್ಟನೆಯೊಂದನ್ನು ಸ್ವೀಕರಿಸಿದರು. ದೇಶವಾಸಿಯಾದ ಪ್ರತ್ಯೇಕ ಪ್ರಜೆಗೂ ನ್ಯಾಯವಾದ ಕೆಲವೊಂದು ಅಧಿಕಾರವನ್ನಿತ್ತು ಪ್ರತಿಯೊಬ್ಬರ ಉನ್ನತಿಯನ್ನೇ ಅಭ್ಯುದಯವನ್ನೇ ಕಲ್ಯಾಣವನ್ನೇ ಹಾರೈಸುವ ಕಲ್ಯಾಣಕಾರೀ ರಾಷ್ಟ್ರದ ರಚನೆಯ ಧ್ಯೇಯವನ್ನು ಅಂದಿನಿಂದ ಭಾರತವು ಇಟ್ಟುಕೊಂಡಿತು. "ದೇಶದ ಅಭಿವೃದ್ಧಿ ಕಾರ್ಯಕ್ರಮಗಳನ್ನು ದೇಶದ ಪ್ರಜಾಜನರ ಹಿತಕ್ಕಾಗಿಅವರ ಆಸಕ್ತಿಕೂಲ್ಯಕ್ಕನುಗುಣವಾಗಿ ಕೈಗೊಳ್ಳಲು ಪ್ರಾರಂಭಿಸುವುದಲ್ಲದೆ, ಈ ಮೇರೆಗೆ ಸಮಾಜದ ಉದ್ಧಾರವನ್ನು ಮಾಡಲು ಬಹಳ ಸಮಯವು ಬೇಕಾಗಬಹುದೆಂಬ ಶಂಕೆಯಿಂದ, ಸರಕಾರೀ ಪಕ್ಷನಾದ ಕಾಂಗ್ರೆಸ್ಸು ತನ್ನ ಅವಧಿ ಅಧಿವೇಶನದಲ್ಲಿ ಸಮಾಜವಾದದ ತತ್ವವನ್ನು ಸ್ವೀಕರಿಸಿ ಇದರ ಬುನಾದಿಯಲ್ಲಿ ಕಲ್ಯಾಣ ರಾಷ್ಟ್ರದ ಪುನಾರಚನೆಯನ್ನು ಮಾಡಲು ತನ್ನದ್ಧವಾಯಿತು

ಪ್ರಜೆಗಳ ಅಭಿಪ್ರಾಯದಂತೆ ರಾಜಕಾರಣವಿರುವುದು ಪ್ರಜಾಪ್ರಭುತ್ವದ ಒಂದು ತತ್ವ. ಯಾರೊಬ್ಬನ ಜುಲುಮೆಯಾಗಲೀ, ಪ್ರಭಾವವಾಗಲೀ ಅಲ್ಲಿ ಮುಖ್ಯವಲ್ಲ ಪ್ರಜೆಗಳಿಂದ ಆರಿಸಿಬಂದ ಬಹುಮತ ಪಡೆದ ಪಕ್ಷವು ಸರಕಾರವನ್ನು ಸ್ಥಾಪಿಸುವ ಹೊಣೆಗಾರಿಕೆಯನ್ನು ಹೊರುವುದು ಆ ಪಕ್ಷವು ತನ್ನ ಧ್ಯೇಯ ಧೋರಣೆಗಳಿಗನುಗುಣವಾಗಿ ತನ್ನ ಕಾಲಾವಧಿಯಲ್ಲಿ ರಾಜ್ಯಭಾರವನ್ನು ನಿರ್ವಹಿಸುವುದು ಪಕ್ಷ ಪದ್ಧತಿಯ ಆಡಳಿತದಲ್ಲಿ ವಿರೋಧಿ ಪಕ್ಷಗಳ ಪ್ರಭಾವ ಬೀಳುವುದು ಅಪರೂಪ.

ಭಾರತದಲ್ಲಿ ದ್ವಿತೀಯ ಮತದಾನ ಸಮಾರಂಭಗಳು ಪೂರ್ತಿಗೊಂಡಾಗ ಕಾಂಗ್ರೆಸ್ಸು ಪಕ್ಷ ಬಹುಮತವನ್ನು ಪಡೆದು ಕೇಂದ್ರೀಯ ಸರಕಾರವನ್ನು ಸ್ಥಾಪಿಸಿತು ಆರ್ಥ ಮಂತ್ರಿಗಳು ಪ್ರಚಲಿತ ವರ್ಷದ ಮುಂಗಡ ಪತ್ರವನ್ನು ಸಂಸತ್ತಿನೆದುರು ಮಂಡಿಸಿದರು. ರಾಷ್ಟ್ರದ ಅಭಿವೃದ್ಧಿ ಯೋಜನೆಯ ಪಲುವಾಗಿ ಕೊರತೆಯನ್ನು ಹೊಸ ಕರಗಳಿಂದ ತುಂಬಿಸುವ ಯೋಜನೆಯನ್ನು ಬಹಿರಂಗ ಪಡಿಸಿದರು. ಈ ಕರಭಾರವು ಅಪ್ರತಿಮ ಹೊರೆಯಾಗಿದೆ ಎಂಬ ದೂರುಗಳು ಕೇವಲ ಪ್ರತಿಪಕ್ಷಗಳಿಂದ ಮಾತ್ರವಲ್ಲ, ಸರಕಾರೀ ಪಕ್ಷದ ಕೆಲ ಸದಸ್ಯರಿಂದಲೇ ಕೇಳಿಬಂತು ಈ ಕರ ಭಾರವನ್ನು ಕಡಿಮೆ ಮಾಡಲು ಆಡಳಿತೆ ವೆಚ್ಚವನ್ನು ಕೆಳಗಿಳಿಸುವುದೇ ಪ್ರಮುಖ ಉಪಾಯವಾಗಿ ಕಂಡು, ಆಡಳಿತೆಯ ಕಡೆಗೆ ಎಲ್ಲರ ದೃಷ್ಟಿಯೂ ಹರಿಯತೊಡಗಿತು

ಬಾರತದಂತಹ ಬಡರಾಷ್ಟ್ರದಲ್ಲಿ ಅತ್ಯುಚ್ಚಮಟ್ಟದ ಅಧಿಕಾರಿಯಸಂಬಳವೆಷ್ಟಿರಬೇಕು ಎಂಬುದೇ ಒಂದು ಪ್ರಶ್ನೆ. ಸರಕಾರಿ ಉದ್ಯೋಗಸ್ಥರ ವೇತನದಲ್ಲಿ ಹೆಚ್ಚಳವಾಗಬೇಕು ಎಂದು ದೇಶದ ಎಲ್ಲ ಕಕ್ಷಿ ಸಂಗಡಗಳೂ ಹೇಳುತ್ತವೆ ಅಂಚೆಕಾಲಾಪೆ, ರೈಲ್ವೆ ಇಲಾಖೆ, ಜೀವವಿಮಾ ಇಲಾಖೆಯ ನೌಕರರು, ಶಿಕ್ಷಕರು ಹೀಗೆ ಎಲ್ಲ ವಿಭಾಗದವರು ಸಾಮಾನ್ಯ ಮಟ್ಟದ ಸರಳ ಜೀವನವನ್ನು ನಡೆಸಲು ಆನರಿಗೆ ಬೆರೆಯುವ ಸಂಬಳದಲ್ಲಿ ಏರಿಕೆಯಾಗುವುದು ಅಗತ್ಯವೆಂದು ಬೇಕಷ್ಟು ಮನವಿಗಳು ನಮ್ಮ ಮಂತ್ರಿಗಳಿಗೆ ಸಲ್ಲುತ್ತಿವೆ ಹಾಗೆ ಸಲ್ಲಿಸಲ್ಪಟ್ಟ ಕೆಲವೊಂದು ಮನವಿಗಳಿಗೆ ಯೋಗ್ಯ ಪುರಸ್ಕಾರವೂ ದೊರೆತಿದೆ. ಸರಕಾರದ ಆಡಳಿತ ನೆಚ್ಚದಲ್ಲಿ ಇಂತಹ ವಿಭಾಗಗಳಲ್ಲಿ ವ್ಯಯವಾಗುತ್ತಿರುವ ಮೊಬಲಗೇನೂ ಕಡಮೆಯದಲ್ಲ ಈ ವೆಚ್ಚವನ್ನು ತಗ್ಗಿಸುವುದು ಸಾಧ್ಯವೆ? ನೌಕರರ ಸಂಖ್ಯೆಯನ್ನು ಕಡಮೆ ಮಾಡಿಕೊಂಡರೆ ಕೆಲಸವು ಸುಸೂತ್ರವಾಗಿ ಸಾಗುವುದೆಂತು? ಅಥವಾ ಮುಂದೊಡಗಿ ಬರುವ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸುವ ಬಗೆಯಾವರೂ ಯಾವುದು?

ಆದುದರಿಂದ ಇವೆಲ್ಲ ಸಾಧ್ಯವಾಗದ ಆಲೋಚನೆಗಳು ಆದರೂ ಅನಾವ್ಯಯವಾಗುವ ಹಣವನ್ನು ಮಾತ್ರ ಉಳಿಸುವುದು ಸಾಧ್ಯವಿದೆ ಇಂತಹ ಅನಾವ್ಯಯಗಳಲ್ಲಿ ಕೇಂದ್ರ ಹಾಗೂ ರಾಜ್ಯ ಮಂತ್ರಿಗಳ ಸಂಚಾರದ ಕಾರ್ಯಕ್ರಮಗಳಿಗಾಗಿ ವೆಚ್ಚವಾಗುವ ಮಾಬಲಗು ಸೇರಿದೆ. ಒಂದು ಕಾಲದಲ್ಲಿ ವಿದೇಶೀಯ ಸತ್ತೆಯ ಕಾಲದಲ್ಲಿ ಮಂತ್ರಿಗಳ ಸಂಚಾರವು ಅಪರೂಪವಾಗಿದ್ದಾಗ, ಅವರಿಗೆ ರಾಜಮನ್ನಣೆ ದೊರೆಯುತ್ತಿತ್ತಂತೆ ಆದರೆ ನಮ್ಮ ಜನಸಾಮಾನ್ಯರ ಸರಕಾರದ ಸ್ಥಾಪನಾನಂತರ ನಮ್ಮ ಮಂತ್ರಿಗಳು ರಾಜ್ಯದ ವಿವಿಧ ನಗರಗಳನ್ನು ಸಂದರ್ಶಿಸಿ, ಅಲ್ಲಿನ ಜನರ ಸುಖ ದುಃಖಗಳನ್ನು ವಿಚಾರಿಸಿ, ಅಭಿವೃದ್ಧಿಯನ್ನುಂಟುಮಾಡುವ ಯೋಜನೆಯನ್ನು ಕೈಗೊಳ್ಳಲು ಸರಿಸ್ಥಿತಿಯನ್ನು ಕಣ್ಣಾರೆ ಕಂಡು ಸರಾಂಬರಿಸಲು ಆಗಾಗ ಸಂಚಾರ ಕಾರ್ಯಕ್ರಮವನ್ನಿಟ್ಟುಕೊಳ್ಳುವ ಪದ್ಧತಿ ಬಂತು ಮಂತ್ರಿವರ್ಯರ ಈ ಸಂದರ್ಶನಕಾಲದಲ್ಲಿ ಅವರನ್ನು ಹಲವಾರು ಕಾರ್ಯಕ್ರಮಗಳು ತಾನು ತಾನೆಂದು ಕಾದಿರುತ್ತವೆ. ಶಾಲೆ ಹಾಗೂ ಕಟ್ಟಡಗಳ ಉದ್ಘಾಟನೆ, ಶಾಲಾದಿನದ ಸಭೆಯ ಅಧ್ಯಕ್ಷಸ್ಥಾನ, ಅಡಿಗಲ್ಲು ಹಾಕುವುದು, ಶಂಕ ತೆರೆಯುವುದು, ವಿದ್ಯುದ್ದೀಪಗಳನ್ನು ಬೆಳಗಿಸುವುದು ಇವೇ ಮೊದಲಾದುವನ್ನು ಮಾಡುವುದರಲ್ಲಿಯೇ ಅವರ ದಿನಗಳು ವೆಚ್ಚವಾಗುತ್ತವೆಯೇ ಹೊರತಾಗಿ, ಜನತೆಯ ಸುಖದುಃಖದತ್ತ ಅವರ ದೃಷ್ಟಿಹರಿಯುವುದು ಅಪರೂಪವೇ ಆಗಿದೆ ಮಾನ್ಯ ಮಂತ್ರಿಗಳು ಪೇಟೆಪಟ್ಟಣಗಳಲ್ಲಿ ಸಂದರ್ಶನವೀಯುವರೇ ಹೊರತಾಗಿ ಒಂದು ಮೈಲು ಒಳನಾಡಿನ ಹಳ್ಳಿಗರ ಯೋಗ ಕ್ಷೇಮವನ್ನು ವಿಚಾರಿಸುವುದಿಲ್ಲ. ಭಾರತದಂತಹ ಹಳ್ಳಿಗರ ದೇಶದಲ್ಲಿ ರಾಷ್ಟ್ರದ ಆಧಾರಸ್ತಂಭವಾದ ರೈತನೊಬ್ಬನ ಮುಖವನ್ನೂ ನೋಡದೆ, ಅಲ್ಲಿಯ ಪರಿಸ್ಥಿತಿಯನ್ನರಿಯುವ ನಮ್ಮ ಪ್ರತಿಭಾಶಾಲಿ ಮಂತ್ರಿಗಳತ್ತ ಸಾಮಾನ್ಯ ಜನರ ದೃಷ್ಟಿ ಹರಿಯಬೇಕಾದರೆ ಇನ್ನು ಸಮಯ ಬೇಕಾಯಿತು! ಇನ್ನತ್ತ ಗಮನವೀಯದೆ ನಿಸ್ಪೃಹರಂತೆ ಇದ್ದುಬಿಟ್ಟರೆ ಮುಂದಿನ ಪರಿಸ್ಥಿತಿ ಬಹಳಷ್ಟು ಕೆಡುವುದೆಂಬ ತಿಳುವಳಿಕೆ ನಮ್ಮ ಸರಕಾರಕ್ಕೂ ಬಂತು.

ಕೇಂದ್ರ ಸರಕಾರವು ಈ ವಿಧಾನದಲ್ಲಿ ರಾಜ್ಯಸರಕಾರಗಳಿಗೆ ಮಾದರಿಯನ್ನು ತೋರಿಸಿಕೊಟ್ಟಿದೆ ಭಾರತದ ಅತ್ಯುಚ್ಚ ಪದದಲ್ಲಿರುವ ರಾಷ್ಟ್ರಾಧ್ಯಕ್ಷರು ಹಿಂದೆಯೇ ಸ್ವೇಚ್ಛೆಯಿಂದ ತನ್ನ ಸಂಬಳದಲ್ಲಿ ಸ್ವಲ್ಪಾಂಶವನ್ನು ಬಿಟ್ಟಿದ್ದಾರೆ ರಾಜ್ಯಗಳ ರಾಜ್ಯಪಾಲರೂ ಈ ರೀತಿ ಮಾಡುವ ನಿರೀಕ್ಷೆಯಿದೆ—ಆದರೆ, ಇದರಿಂದ ದೊಡ್ಡ ಮೊತ್ತವೇನೂ ಕೂಡಿಬರುವ ಲಕ್ಷಣವಿಲ್ಲ ಆದರೂ ಉಳಿದವರಿಗೆ ಮಾರ್ಗದರ್ಶನವೆಂದು ಮಾತ್ರ ಇದನ್ನು ಉಲ್ಲೇಖಿಸಬಹುದು. ರಾಷ್ಟ್ರದ ಅಭಿವೃದ್ಧಿಗಾಗಿ ದೇಶದ ಪ್ರತ್ಯೇಕ ಪ್ರಜೆಯೂ ತನುಮನಧನಗಳಿಂದ ನೆರವೀಯುವುದು ಅಗತ್ಯವಿದೆ ಕೋಟ್ಯಂತರ ಅಧಿಕ ಸಂಬಳವಿರುವವರು ಈ ರೀತಿಯು ಅಲ್ಪಮಟ್ಟಿನ ತ್ಯಾಗವನ್ನು ಮಾಡಲು ಮುಂದಾದರೆ ಮಾತ್ರ ಇದು ಫಲವು ದೊರೆಯಬಹುದು.

ಇತ್ತೀಚೆಗೆ ನಡೆದ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸಭೆಯಲ್ಲಿ ಮಂತ್ರಿಗಳ ಸಂಬಳದ ಕುರಿತು ತುದಿನ ಬಿಸಿ ಚರ್ಚೆ

(೧೨ನೇ ಪುಟ ನೋಡಿರಿ)

ANNOUNCEMENT

BRANCHES

of the Bank

will be opened shortly,

at

MYSORE and BANGALORE

THE VIJAYA BANK, LTD.

H. O. MANGALORE - 3.

Estd 1931